1951

ಅನುವಾದಕನ ನಿವೇದನ

ನನ್ನಿಂದ ಅನುವಾದಿತ ಶರತ್‌ಬಾಬುಗಳ ಅನೇಕ ಕಾದಂಬರಿಗಳಲ್ಲಿ ... ದಾಸ' ಕಾದಂಬರಿಯು ಮೊದಲು ಅಚ್ಚಾದುದು ಸಾಧನ ಮುದ್ರ...ಲಯದಲ್ಲಿ. ಆ ನಂತರ ಅನೇಕ ವರುಷಗಳ ತರವಾಯ ಅಲ್ಲಿಯೆ ...ಚ್ಚಾಗಿ, ಅದರ ಒಡೆಯರಿಂದಲೇ ನನ್ನಿಂದ ಅನುವಾದಿತ ಶರತ್‌ಬಾಬು...ಳ 'ಚರಿತ್ರಹೀನ' ಕಾದಂಬರಿ ಪ್ರಸಿದ್ಧವಾಗುತ್ತಿರುವುದು ಒಂದು ...ಯೋಗಾಯೋಗ. ಇದಕ್ಕೆ ಕಾರಣ ಇಷ್ಟೆ—'ದೇವದಾಸ' ದಲ್ಲಿ ಅನೇಕ ...ಠಿನ ಪ್ರಶ್ನೆಗಳನ್ನು ಎತ್ತಿ, ಸಮಾಜಕ್ಕೇ ಅವುಗಳನ್ನು ಕುರಿತು ವಿಚಾರ ಮಾಡಲು ಹೇಳಿದ ಶರತ್‌ಬಾಬುಗಳು 'ಚರಿತ್ರಹೀನ' ದಲ್ಲಿ ತಾವೇ ಆ ಪ್ರಶ್ನೆಗಳ ಮೀಮಾಂಸೆಯನ್ನು ಮಾಡಿದ್ದಾರೆ. 'ಚರಿತ್ರಹೀನ'ವು 'ದೇವದಾಸ'ದ ಅತಿ ಸುಂದರ ಪೂರ್ತಿ (sequel) ಆಗಿದೆ. 'ದೇವದಾಸ'ದ ಘಟನೆ ಅತಿ ಸರಳ, ವೈಪುಲ್ಯವರ್ಜಿತ; ಆವೇಗ ಅತಿ ತೀವ್ರ, ರುಕ್ಷ; ದುಃಖಾಂತ; ಅತ್ಯಂಗ ಕೇಂದ್ರೀಕೃತ. 'ಚರಿತ್ರಹೀನ'ದ ಘಟನೆ ತುಸು ಜಟಿಲ, ವೈಪುಲ್ಯಪೂರಿತ; ಆವೇಗ ನಿಧಾನ, ರಸಭರಿತ; ದುಃಖಾಂತ; ...ಕೇಂದ್ರೀಕೃತ.

'ಚರಿತ್ರಹೀನ'ದಲ್ಲಿ ವಿಭಿನ್ನ ದೃಷ್ಟಿಯಿಂದ ಪ್ರೇಮದ ಕಠಿನ ಪರೀಕ್ಷೆ ಮತ್ತು ಆ ಪರೀಕ್ಷೆಯ ಫಲಾಫಲ, ಸಮಾಜದಿಂದ ಮತ್ತು ಗೃಹಸ್ಥಧರ್ಮದಿಂದ ಅನುಮೋದಿಸಿದ ವ್ಯಥಿತ ಪ್ರೇಮದ ಹಾಗೂ ಸ್ನೇಹದ ಸೂಕ್ಷ್ಮ ಪರಿಶೀಲನೆ ತೋರಿಸಲಾಗಿದೆ. ಸತೀಶ, ಸಾವಿತ್ರಿ, ಕಿರಣ್ಮಯಿ, ಹಾರಾನ, ದಿವಾಕರ, ಇವರ ಸಮಾಜ ಹಾಗೂ ಗೃಹಸ್ಥ ಧರ್ಮದಿಂದ ಅನುಮೋದಿಸದೆ ವ್ಯಥಿತ ಸ್ನೇಹದ ಮತ್ತು ಪ್ರೇಮದ ಮಧ್ಯದಲ್ಲಿ ಉಪೇಂದ್ರ. ಸುರಬಾಲೆ, ಸರೋಜಿನಿ ಅವರ ನಿಷ್ಪಾಪ, ನಿಷ್ಕಲಂಕ, ಮಧುರ ಪ್ರೇಮದ ಕಾಂತಿ ಮಿನುಗುತ್ತದೆ. ಸಾವಿತ್ರಿ ಮತ್ತು ಬಿಹಾರಿಯ ನಿಸ್ವಾರ್ಥ ಸೇವೆ, ತ್ಯಾಗ ಆದರ್ಶವಾಗಿವೆ. ವಿಧಿ-ನಿಷೇಧಗಳ, ಮತ ಮತಾಂತರಗಳ ವಿರುದ್ಧ ಕ್ರಾಂತಿ ...ನ್ನೆಬ್ಬಿಸಿ, ಆದರಿಂದ ನಿಷ್ಕಲಂಕ ಪ್ರೇಮದ ಸಮಾಜದಿಂದ ಅನುಮೋದಿತ ...ದ್ಧ ಸ್ನೇಹ ಹಾಗೂ ತ್ಯಾಗದ ರಕ್ಷಣೆಯನ್ನು ಮಾಡಿತೋರಿಸುವ ಶರತ್‌

ಬಾಬುಗಳ ಚಮತ್ಕಾರಪೂರ್ಣ ವೈಶಿಷ್ಟ್ಯವೊಂದನ್ನು 'ಚರಿತ್ರಹೀನ' ಕಾಣಬಹುದು.

ಅನುವಾದವನ್ನು ಮಾಡುವಾಗ ನಾನು ಸರಳತೆಯ ಕಡೆಗೆ ಹೆ ಲಕ್ಷ್ಯಗೊಡುತ್ತೇನೆಂದಿಷ್ಟೇ ನನ್ನ ಅನುವಾದವನ್ನು ಕುರಿತು ಹೇಳಬ ಸರಳ ಶೈಲಿಯು ಪ್ರಸಾದಗುಣವೊ ಅಲ್ಲವೊ ಎಂಬುದನ್ನು ಓದುಗ ನಿರ್ಣಯಿಸಿಕೊಳ್ಳಬೇಕು. ಕಥೆಯ ಓಟದೊಡನೆ ಲೇಖಣಿಕೆಯನ್ನು ಓದಿ ವಾಗ ಮತ್ತು ತಾದಾತ್ಮ್ಯಹೊಂದಿದಾಗ ಆದ ಕೆಲ ಭಾಷಾ ದೋಷಗಳ ತಿದ್ದಿ, ಈ ದೊಡ್ಡ ಕಾದಂಬರಿಯನ್ನು ಭಾಗಗಳಲ್ಲಿ ಹೊರಡಿಸಿ ರಸಾಭಾ ಎಡೆಗೊಡಬಾರದೆಂದು ಒಂದೇ ಕಟ್ಟಿನಲ್ಲಿ ಅಂದವಾಗಿ ಮುದ್ರಿಸಿ ಬೆಳ ತಂದ ಗೆಳೆಯ ಶ್ರೀ. ಕುಲಕರ್ಣಿ ಶೇಷಗಿರಿರಾಯರಿಗೆ ಕೃತಜ್ಞತೆಪೂರ ನನ್ನ ಹೃತ್ಪೂರ್ವಕ ವಂದನೆಗಳು. ಈ ಕಾದಂಬರಿಯು ನನ್ನಿಂದ ಅ ವಾದಿತವಾಗಬೇಕೆಂದು ಹಾರೈಸಿ, ಪ್ರೋತ್ಸಾಹನವಿತ್ತ ನನ್ನ ಇತರ ಗೆಳೆ ರಿಗೂ ನನ್ನ ಅಭಿನಂದನೆಗಳು.

ಶರತ್‌ಬಾಬುಗಳ ಇನ್ನೂ ಎರಡು ದೊಡ್ಡ ಕಾದಂಬರಿಗಳು ಕನ್ನಡ ಬರಬೇಕಾದುವು ಬಂದರೆ ಅವರ ಎಲ್ಲ ಕಾದಂಬರಿಗಳು ಮುಗಿದಂತಾಗುವು ನನ್ನ ಈ ಸೇವೆ ಪ್ರಿಯವಾದಲ್ಲಿ ಆ ಎರಡೂ ಕಾದಂಬರಿಗಳನ್ನು ಬೇಗ ಅ ವಾದಿಸಿ ಮುಗಿಸಬೇಕೆಂಬ ಅಪೇಕ್ಷೆಯಿದೆ.

—ಗುರುನಾಥ ಜೋ

ಪ್ರಕಾಶಕರ ಪ್ರೈಟ

ನಾಲ್ಕು ತಿಂಗಳ ಹಿಂದೆಯೇ ಈ ಕಾದಂಬರಿ ನಮ್ಮ ಓದುಗರ ಕೈ ಸೇರ
ೇಕಾಗಿತ್ತು. ಆದರೆ ಅನಿರೀಕ್ಷಿತ ಅಡಚಣೆಗಳಿಂದಾಗಿ ಇದು ಹೊರಬೀಳು
ದು ವಿಶೇಷ ತಡವಾದುದಕ್ಕಾಗಿ ನಾವು ವಿಷಾದಿಸುತ್ತೇವೆ. ಕಾಲಕ್ಕೆ
ರಿಯಾಗಿ ಈ ಪ್ರಕಟನೆ ಹೊರಬೀಳದಿದ್ದರೂ ಸಹ, ನಮ್ಮ ಚಂದಾದಾರರು
ಮ್ಮ ಬಗ್ಗೆ ವ್ಯಕ್ತಗೊಳಿಸಿರುವ ಸಹನೆ ಹಾಗೂ ವಿಶ್ವಾಸಗಳಿಗಾಗಿ ನಾವು
ತಜ್ಞರಾಗಿದ್ದೇವೆ. ನಮ್ಮ ಓದುಗರ ಬಹುದಿನಗಳ ನಿರೀಕ್ಷಣೆಯನ್ನು
ೋಹದ ಬಲೆಯಲ್ಲಿ' ಅಸಾರ್ಥಕಗೊಳಿಸುವುದಿಲ್ಲವೆಂಬ ಭರವಸೆ ನಮಗಿದೆ.

ಈ ಕಾದಂಬರಿಯಲ್ಲಿ ಶ್ರೀ ಕಟ್ಟೀಮನಿಯವರು ಮತ್ತೊಂದು ಹೊಸ
ಾದಿಯನ್ನೇ ತುಳಿದಿದ್ದಾರೆ. ಲೇಖಕರು ಈ ಕಾದಂಬರಿಯಲ್ಲಿ ಬಳಸಿರುವ
ವೀನ ಕಥಾತಂತ್ರ ಹಾಗೂ ಮೋಹಕ ಬರವಣಿಗೆ ಓದುಗರನ್ನು ಮುಗ್ಧ
ಾಳಿಸದಿರಲಾರದು. **'ಜ್ವಾಲಾಮುಖಿಯ ಮೇಲೆ'**ಗೆ ದೊರೆತ ಆದರದ
ಸ್ವಾಗತ ಈ ಕಾದಂಬರಿಗೂ ದೊರೆಯುವುದೆಂದು ಆಶಿಸಲಾಗಿದೆ.

ನಮ್ಮ ಮುಂದಿನ ಪ್ರಕಟನೆ—**ಸಾವಿನೊಂದಿಗೆ ಸರಸ.** ಇದು
ಸಿದ್ಧ ಕನ್ನಡ ಕತೆಗಾರರಾದ ಶ್ರೀ ಹೆಚ್. ವಿ. ಭಟ್ಟ ಬಿ.ಎಸ್.ಸಿ. ಅವರ
ಣ್ಣ ಕತೆಗಳ ಸಂಕಲನ.

'ಸಾವಿನೊಂದಿಗೆ ಸರಸ'ದೊಂದಿಗೆ ನಮ್ಮ ಮಾಲೆಯ ಐದನೆಯ ವರ್ಷ
ಾನೆಗೊಂಡು, ಆರನೆಯ ವರ್ಷ ಆರಂಭವಾಗುವುದು. ಆರನೆಯ ವರ್ಷ
ದ 'ಮಾಲೆ'ಯನ್ನು ಪುನರ್ವ್ಯವಸ್ಥೆಗೊಳಿಸಲಾಗುವುದು. ಈ ಬಗ್ಗೆ
ರ್ಣ ವಿವರಗಳನ್ನು ನಮ್ಮ ಮುಂದಿನ ಪ್ರಕಟನೆಯಲ್ಲಿ ಕೊಡಲಾಗುವುದು.

—ಪ್ರಕಾಶಕರು

ಶಾರದಾ ಸಾಹಿತ್ಯ ಮಾಲೆಯ ೨೩ನೇ ಕಿರಣ

ಸಾವಿನೊಂದಿಗೆ ಸರಸ

ಶ್ರೀ ಹೆಚ್. ಐ. ಭಟ್ಟರ ಕಥಾಸಂಕಲನ

ಬೆಲೆ. ೧ರೂ. ೪ಆ.

★

Mr. K. Srinivasa Rao
Sundar Cafe Boarding
House.

"The revolutionary task of literature to-day is to restore its great tradition, to break the bonds of subjectivism and narrow specialization, to bring the creative writer face to face with his only important task, that of winning the knowledge of truth, of reality. Art is one of the means by which man grapples with and assimilates reality. On the forge of his own inner consciousness the writer takes the white-hot metal of reality and hammers it out, re-fashions it to his own purpose. The whole procession of creation, the whole agony of the artist, is in this violent conflict with reality in the effort to fashion a truthful picture of the world."

—**Ralph Fox**

ಅರ್ಪಣೆ :

ಉಚಿತ ಪ್ರಸಾದನಿಲಯಗಳನ್ನು ನಡಸುತ್ತ
ವಿದ್ಯಾರ್ಥಿಗಳಿಗೆ ನೆರವು ನೀಡುತ್ತಿರುವ

ಆದರ್ಶ ಸ್ವಾಮಿಗಳಿಗೆ

ಮೋಹದ ಬಲೆಯಲ್ಲಿ

ಸೀರೆಯ ಸೆರಗಿನಿಂದ ಮುಖವನ್ನೊರೆಸಿಕೊಳ್ಳುತ್ತ ಸರಸ್ವತಿ ಕುದುರೆ ಗಾಡಿಯಿಂದಿಳಿದು ಬಂದಳು. ಮಳೆಯಲ್ಲಿ ತೋಯಿಸಿಕೊಂಡು ನಡುಗುತ್ತ ಕುಳಿತಿದ್ದ ಪುಟ್ಟ ಗೌರಿಯ ಕೈ ಹಿಡಿದು ಕೆಳಕ್ಕಿಳಿಸಿಕೊಂಡಳು. ಗಾಡಿಯವನಿಗೆ ಹಣ ಕೊಟ್ಟು ಕೊಂಚ ಮುನಿಸಿನಿಂದಲೇ ಹೇಳಿದಳು:

"ನಾಳೆ ಬರುವಾಗ ಗಾಡಿಯ ಮೇಲ್ಕಟ್ಟನ್ನು ಸರಿಪಡಿಸಿಕೊಂಡು ಬರಲು ಮರೆಯಬೇಡ ಮುಹಮ್ಮದ್."

"ಆಗಲಿ ತಾಯಿ," ಎಂದು ನುಡಿದು ಮುಹಮ್ಮದ್ ಕುದುರೆಯನ್ನು ಮುಂದೆ ಸಾಗಿಸಿದ.

"ದಿನವೂ ಹೀಗೇ. ಗಾಡಿಯ ಮೇಲ್ಕಟ್ಟು ಸರಿಮಾಡಿಸು, ದಪ್ಪಗಿನ ಬಟ್ಟೆ ಹೊದಿಸು ಎಂದು ಸಾವಿರ ಸಲವಾದರೂ ಈತನಿಗೆ ಹೇಳಿರಬಹುದು. ಹೂಂ ಎನ್ನುವದೆಷ್ಟೋ, ಅಷ್ಟೆ. ಒಂದು ಸಲವೂ ರಿಪೇರಿ ಮಾಡಿಸಲಿಲ್ಲ. ಈತನ ಗಾಡಿಯಲ್ಲಿ ತೋಯಿಸಿಕೊಳ್ಳುವುದು ತಪ್ಪುವಂತಿಲ್ಲ. ಪಾಪ, ಈ ಮಗುವೂ ಪೂರಾ ನೆನೆದು ಹೋಯಿತು," ಎಂದು ಗೊಣಗಿಕೊಳ್ಳುತ್ತ ಸರಸ್ವತಿ ಮನೆಯ ಮೆಟ್ಟಲುಗಳನ್ನೇರತೊಡಗಿದಳು.

"ನನ್ನ ಲಂಗ ಎಲ್ಲಾ ತೊಯ್ದು ಹೋಯ್ತು...ನನ್ನ ಜರತಾರೀ ಲಂಗ..." ಎಂದು ಗೌರಿ ಅಳುದನಿಯಲ್ಲಿ ಗೊಣಗುತ್ತಿದ್ದಳು. ಅದರೊಂದಿಗೆ ಆಕೆಯ ಪುಟ್ಟ ದೇಹವೆಲ್ಲ ಥರಥರನೆ ನಡುಗುತ್ತಿತ್ತು- ಹನ್ನೊಂದುವರ್ಷ ವಯಸ್ಸಿನ ಆ ಕೋಮಲ ದೇಹ.

"ಹಾಳಾದವ ಎಂಥ ಗಾಡಿಯಿಟ್ಟಿದಾನೊ. ನನ್ನ ಹೊಸಾ ಲಂಗ ಎಲ್ಲಾ...."

ಅಂಥ ಸ್ಥಿತಿಯಲ್ಲೂ ಸರಸ್ವತಿಗೆ ಕೊಂಚ ನಗು ಬರದಿರಲಿಲ್ಲ. ಮೈಯೆಲ್ಲ ಥರಥರ ನಡುಗುತ್ತಿದ್ದರೂ ಅದರ ಯೋಚನೆಯೆ ಇದ್ದಂತಿರಲಿಲ್ಲ ಗೌರಿಗೆ. ತನ್ನ ಹೊಸ ಜರತಾರಿ ಲಂಗ ಕೆಟ್ಟುಹೋಯಿತೇನೋ ಎಂಬ ಚಿಂತೆಯೆ. ಹೆಣ್ಣಿನ ಸ್ವಭಾವವೇ ಹೀಗೆಯೆ ಏನೊ. ವಸ್ತ್ರ ಒಡವೆ, ಬಟ್ಟೆ ಬರೆ ಎಂದರೆ ಪ್ರಾಣಕ್ಕಿಂತ ಹೆಚ್ಚು ಪ್ರೀತಿ....ಸರಸ್ವತಿ ನಗುನಗುತ್ತಾ ಬಾಗಿಲು ತಟ್ಟಿದಳು.

"ಅಜ್ಜೀ, ಓ ಅಜ್ಜೀ...."

ಗೌರಿ ಅಕ್ಕನ ಹತ್ತಿರ ಬಂದು ಆಕೆಯನ್ನು ಬಳಸಿ ನಿಂತುಕೊಂಡು "ಬಹಾಳ ಥಂಡಿ ಸರಸಕ್ಕಾ. ಬಹಾಳ ಥಂಡಿ...." ಎಂದು ರಾಗ ತೆಗೆದಳು.

"ಅಜ್ಜೀ, ಓ ಅಜ್ಜೀ....ಇವಳಿಗೇನಾಯಿತೋ ಕಾಣೆ. ಮಳೆ ಶುರುವಾಗುತ್ತಲೂ ಬೆಚ್ಚಗೆ ಹೊದೆದುಕೊಂಡು ಮಲಗಿಬಿಟ್ಟಳೊ ಏನೊ....ಅಜ್ಜೀ, ಓ ಅಜ್ಜೀ...."

ಪಡಸಾಲೆಯಲ್ಲಿ ಅಡಿಗಳ ಸದ್ದಾಗುವುದು ಕೇಳಬರುತ್ತಿತ್ತು. ಒಂದೆರಡು ಕ್ಷಣಗಳಲ್ಲಿಯೆ ಬಾಗಿಲೂ ತೆರೆಯಲ್ಪಟ್ಟಿತು. ಕೈಯಲ್ಲಿ ಕಂದೀಲು ಹಿಡಿದುಕೊಂಡು ರುದ್ರಪ್ಪಜ್ಜಿ ಅವರಿಬ್ಬರನ್ನೂ ಒಳಕ್ಕೆ ಕರೆದುಕೊಂಡು ಮತ್ತೆ ಬಾಗಿಲು ಹಾಕಿಕೊಂಡಳು.

"ಎಲ್ಲಾ ತೊಯ್ಸಿಕೊಂಡು ಬಂದೀರಲ್ಲೇ ನಮ್ಮಪ್ಪ ! ನಡೆದುಕೊಂಡೇ ಬಂದಿರಾ ?"

"ಇಂಥ ಮಳೆಯಲ್ಲಿ ನಡೆದು ಬರಲು ನಮಗೇನು ಹುಚ್ಚೇ ಅಜ್ಜೀ. ಗಾಡಿಯಲ್ಲೇ ಬಂದೆವು. ಆ ಹಾಳಾದ ಗಾಡಿ....ಮೇಲ್ಕಟ್ಟಿನಿಂದ ನೀರು ತಪ ತಪನೆ ಸುರೀತಿತ್ತು....ಮೊದಲು ಸೀರೆ ಬದಲು ಮಾಡುತ್ತೇನೆ. ಬಾ ಗೌರೀ, ನೀನೂ ಈ ಲಂಗ ತೆಗೆದಿಟ್ಟು ಬೇರೆ ಲಂಗ ಹಾಕಿಕೋ. ಆಮೇಲೆ ಒಲೆಯೆದುರಿಗೆ ಕುಳಿತು ಕಾಸಿಕೊಂಡರಾಯಿತು. ಬೆಂಕಿಯಿದೆಯೇ ಅಜ್ಜೀ, ಒಲೆಯೊಳಗೆ?"

"ಬೇಕಾದಷ್ಟಿದೆಯವ್ವ."

ಹುಡುಗಿಯರಿಬ್ಬರೂ ಧಡಧಡನೆ ಮೆಟ್ಟಲುಗಳನ್ನೇರಿ ಅಟ್ಟದ ಮೇಲಿನ

ತನ್ನ ಕೊಟಡಿಗೆ ಹೋದರು. ಕೈಯಲ್ಲಿದ್ದ ಕಂದೀಲನ್ನು ಮೇಜಿನ ಮೇಲಿರಿಸಿ ಸರಸ್ವತಿ ಸೀರೆಯನ್ನು ಬಿಚ್ಚತೊಡಗಿದಳು. ಎದುರಿನ ಗೋಡೆಗೆ ನೇತು ಹಾಕಿದ್ದ ದೊಡ್ಡ ನಿಲುವುಗನ್ನಡಿಯಲ್ಲಿ ಆಕೆಯ ತರುಣ ದೇಹದ ಪ್ರತಿಬಿಂಬ ಅಸ್ಪಷ್ಟವಾಗಿ ಮೂಡಿತ್ತು.

ಉಟ್ಟಿದ್ದ ರೇಶಿಮೆ ಸೀರೆಯನ್ನು ಬಿಚ್ಚಿ ಬದಿಗಿಟ್ಟು, ಸಾದಾ ವಾಯಲ್ ಸೀರೆಯೊಂದನ್ನು ಉಟ್ಟುಕೊಂಡು ತಲೆಗೂದಲಿನ ಜಡೆಯನ್ನು ಬಿಚ್ಚಿ ಟವಲಿನಿಂದ ಒರೆಸಿ ಮತ್ತೆ ಅವುಗಳನ್ನು ಕಟ್ಟುವ ಗೊಡವೆಗೆ ಹೋಗದೆ ಹಾಗೆಯೇ ಬೆನ್ನಮೇಲೆ ಇಳಿಬಿಟ್ಟಳು. ಕಂದೀಲಿನ ಆ ಮಂದ ಬೆಳಕಿನಲ್ಲಿ ಭವ್ಯವಾಗಿ ಮಿರುಗುತ್ತಿತ್ತು ಆ ಕೇಶರಾಶಿ....ಸೊಂಟದವರೆಗೆ ಇಳಿಬಿದ್ದು ರೇಶಿಮೆಯಂತೆ ನುಣುಪಾಗಿದ್ದ ಆ ಕೇಶರಾಶಿ.

ರವಕೆಯ ಗುಂಡಿಗಳನ್ನು ಹಾಕುತ್ತಿದ್ದ ಹಾಗೆ ಆಕೆಯ ಕೈಗಳು ಒಂದರೆಕ್ಷಣ ವಕ್ಷಸ್ಥಳದ ಮೇಲೆಯೆ ನಿಂತುಕೊಂಡಿದ್ದುವು. ಸೀರೆಯ ಸೆರಗನ್ನು ಇನ್ನೂ ತಲೆಯ ಮೇಲಕ್ಕೆಳೆದುಕೊಂಡಿರಲಿಲ್ಲವಾದುದರಿಂದ ತುಂಬು ಯೌವನದ ಮಾಟವಾದ ಎದೆಕಟ್ಟು ಕನ್ನಡಿಯಲ್ಲಿ ತನ್ನ ವೈಭವವನ್ನು ಪ್ರದರ್ಶಿಸುತ್ತಲಿದ್ದಿತು. ಆ ಮೋಹಕ ಎದೆಕಟ್ಟನ್ನು ಕನ್ನಡಿಯಲ್ಲಿ ಕಂಡಾಗ ಸರಸ್ವತಿಯ ಎದೆ ಝಲ್ಲೆಂದಿತು. ಒಂದು ಕ್ಷಣ ಹಾಗೆಯೆ ಮಂತ್ರಮುಗ್ಧಳಂತೆ ಅದನ್ನೇ ನೋಡುತ್ತ ನಿಂತುಕೊಂಡಿದ್ದಳು. ಎಂಥ ಮಾಟವಾದ ಎದೆ, ಎಂಥ ಬೆಡಗಿನ ವಕ್ರ ವಿನ್ಯಾಸ....!

"ಈ ಲಂಗ ಬರಲೊಲ್ಲದೇ ಅಕ್ಕಾ...."

ಗೌರಿಯ ಕೂಗು ಸರಸ್ವತಿಯನ್ನು ಭಾವಸಮಾಧಿಯಿಂದ ಎಚ್ಚರಗೊಳಿಸಿತು. ಲಗುಬಗೆಯಿಂದ ಸೆರಗನ್ನು ತಲೆಯ ತುಂಬಾ ಹೊದೆದುಕೊಂಡಳು. ಪ್ರತಿಬಿಂಬದ ಮೇಲೆ ಮೂಡಿದ್ದ ದೃಷ್ಟಿಯನ್ನು ಕಿತ್ತು ಗೌರಿಯ ಕಡೆಗೆ ಹೊರಳಿದಳು.

"ಏನಾಯಿತೇ ?"

"ನನ್ನ ಮೈಗೆ ಬರಲೊಲ್ಲದೇ ಈ ಲಂಗ...."

"ಬರುವದಿಲ್ಲವಾದರೆ ಬೇರೆ ಹಾಕಿಕೊಳ್ಳೇ. ಏನು ಇದೊಂದೇ ಲಂಗ ಇದ್ದವರ ಹಾಗೆ ಮಾಡುತ್ತೀಯಲ್ಲಾ ?" ಎನ್ನುತ್ತ ಸರಸ್ವತಿ ಬೀರುವಿನಿಂದ

ಬೇರೊಂದು ಲಂಗ ತೆಗೆದುಕೊಂಡು ತಂಗಿಗೆ ತೊಡಿಸಿದಳು. ಟವಲಿನಿಂದ ಆಕೆಯ ತಲೆಗೂದಲನ್ನು ಚೆನ್ನಾಗಿ ಒರೆಸಿ—"ಬಾ, ಕಾಯಿಸಿಕೊಳ್ಳೋಣ," ಎಂದು ಕೆಳಗಡೆ ಕರೆದು ತಂದಳು.

ಒಲೆಯಲ್ಲಿ ಬೆಂಕಿ ಧಗಧಗನೆ ಉರಿಯುತ್ತಿತ್ತು. ಅದರ ಹತ್ತಿರ ಮಣೆ ಹಾಕಿಕೊಂಡು ಅಕ್ಕತಂಗಿಯರಿಬ್ಬರೂ ಕುಳಿತುಕೊಂಡರು. ತನ್ನ ಪುಟ್ಟ ಕೈಗಳೆರಡನ್ನೂ ನೀಳವಾಗಿ ಚಾಚಿ ಗೌರಿ ನಡುಕವನ್ನು ಹೋಗಲಾಡಿಸಿಕೊಳ್ಳ ತೊಡಗಿದಳು. ಸರಸ್ವತಿ ತನ್ನ ಕೈಗಳನ್ನೂ ಬೆಂಕಿಯ ಕಡೆಗೆ ನೀಡಿದಳು. ಕೆಂಪು ಜ್ವಾಲೆಗಳ ಆ ರಕ್ತಪ್ರಕಾಶದಲ್ಲಿ ಮೋಹಕವಾಗಿ ಮಿರುಗುವ ತನ್ನ ಸುಪುಷ್ಟ ಕೈಗಳನ್ನು ಕಂಡಾಗ ಮತ್ತೆ ಆಕೆಯ ಶರೀರ ರೋಮಾಂಚಿತ ವಾಯಿತು. ಎಂಥದೋ ಒಂದು ಬಗೆಯ ಅನಿರ್ವಚನೀಯ ಭಾವದಿಂದ ಆಕೆಯ ಸಮಸ್ತ ಶರೀರವೂ ಸೂಕ್ಷ್ಮವಾಗಿ ಕಂಪಿಸತೊಡಗಿತು.

"ಅಪ್ಪ ಬರಲಿಲ್ಲವೇ ಸರಸೂ ?"

ಅಜ್ಜಿಯ ಪ್ರಶ್ನೆ ಆಕೆಯ ಗಮನಕ್ಕೆ ಬಂದಂತೆ ತೋರಲಿಲ್ಲ. ಎಂಥ ಮುದ್ದಾದ ತೋಳುಗಳು....ಎಂಥ ಮುದ್ದಾದ ಮುಖ....ಎಂಥ ಮಾಟವಾದ ಎದೆಕಟ್ಟು....ಎಂಥ ಅಂದವಾದ ಶರೀರ....ಆದರೆ....

"ಅಪ್ಪ ಯಾವಾಗ ಬರ್ತಾಳೇ ಸರಸೂ ?"

"ಆ್ಞಂ....ಆ್ಞಂ....ಏನೆಂದೆ ?" ಎಂದು ಬೆಚ್ಚಿಬಿದ್ದು ಕೇಳಿದಳು ಸರಸು.

ಕೈಗಳೆರಡನ್ನೂ ಉಜ್ಜಿಕೊಳ್ಳುತ್ತಲಿದ್ದ ಗೌರಿ ಕಿಲಕಿಲನೆ ನಕ್ಕಳು.

"ಏನು ವಿಚಾರ ಮಾಡುತಿರುವೆ ಅಕ್ಕ ?"

"ವಿಚಾರ ? ಎಂಥ ವಿಚಾರವೇ ತುಂಟ !" ಎಂದು ನುಡಿದು ಸರಸೂ ತಂಗಿಯ ಕೆನ್ನೆಯ ಮೇಲೆ ಒಂದು ಸಲ ಮೆಲ್ಲನೆ ಏಟು ಹಾಕಿ ಅಜ್ಜಿಯ ಕಡೆಗೆ ತಿರುಗಿ—"ಅಪ್ಪ ಈಗಲೇ ಬರುವುದಿಲ್ಲವಷ್ಟೆ ಪ್ರವಚನ ಮುಗಿಸಿ ಕೊಂಡು ಬರ್ತಾಳಂತೆ," ಎಂದಳು.

"ಇನ್ನೂ ಮುಗಿಯಲಿಲ್ಲವೇನು ?"

"ಇಲ್ಲ. ಇನ್ನೂ ಒಂದು ತಾಸಾದರೂ ಆದೀತು. ನನಗೇಕೋ ಅಲ್ಲಿ

ಕೂಡ್ರಲಾಗಲಿಲ್ಲ. ಈ ಗೌರಿಯು ಕಾಟವೂ ಹೆಚ್ಚಾಗಿತ್ತು. ನಿದ್ದೆ ಬರುತ್ತೆ ಅಂತ ಒಂದೆ ಸಮನೆ ಪೀಡಿಸುತ್ತಿದ್ದಳು. ಸರಿ. ಬಂದುಬಿಟ್ಟೆವು...."

"ಏನು ಪ್ರವಚನ ನಡೆದಿತ್ತು ಇವೊತ್ತು ?"

"ಪ್ರಭುಲಿಂಗಲೀಲೆಯ ಬಗ್ಗೆ."

"ಪ್ರಭುಲಿಂಗಲೀಲೆ ? ಯಾವ ದೇವರವ್ವ ಅದು ?"

"ದೊಡ್ಡ ದೇವರು ಅಜ್ಜೀ. ಅಲ್ಲಮ ಅಂತ ಹೆಸರು ಆತನಿಗೆ. ಅಲ್ಲ ವೇನೇ ಅಕ್ಕಾ ? ಶಾಸ್ತ್ರಿಗಳು ಅಲ್ಲಮ ಅಂತ ಹೇಳಲಿಲ್ಲವೆ ?" ಎಂದು ತನ್ನ ಜಾಣತನದ ಪ್ರದರ್ಶನ ಮಾಡಿದಳು ಗೌರಿ.

"ಹೌದೇ ಜಾಣೆ. ಬಹಳ ಚೆನ್ನಾಗಿ ನೆನಪಿಟ್ಟದೀಯ. ಅಲ್ಲಮಪ್ರಭು ಅಂತ ಹಿಂದೆ ಆಗಿಹೋದರು ಅಜ್ಜೀ, ಬಸವಣ್ಣನವರ ಕಾಲದಲ್ಲಿ. ಅವರ ಕತೆ ನಡೆದಿತ್ತು ಇಂದು....ನೀನು ಕೇಳಿದ್ದೀಯಾ ಆ ಕತೆಯನ್ನ ?"

"ಇಲ್ಲ ತಾಯಿ. ನಮಗೆಲ್ಲ ಯಾರು ಹೇಳಬೇಕು ?"

"ನಾನು ಹೇಳ್ತೀನೆ ಅಜ್ಜೀ. ನಾನು ಹೇಳ್ತೀನೆ...." ಎಂದು ಉತ್ಸಾಹ ದಿಂದ ನುಡಿದಳು ಗೌರಿ. ಸರಸೂ ಸುಮ್ಮನಿದ್ದಳು. ಗೌರಿ ಮುಂದುವರಿಸಿದಳು : "ಅಲ್ಲಮ ಅಂತ ಮದ್ದಳೆ ಬಾರಿಸುವಾತನೊಬ್ಬನಿದ್ದ. ಆತನಿಗೆ ಮಾಯೆ ಎಂಬ ರಾಜಕುಮಾರಿ ಮನಸೋತಳು. ನಿನ್ನನ್ನ ಮದುವೆಯಾಗುತ್ತೇನೆ ಅಂದಳು....ಹೀಗೇ ಅಲ್ಲವೇ ಅಕ್ಕಾ ಶಾಸ್ತ್ರಿಗಳು ಹೇಳಿದ್ದು....?"

ಸರಸು ಉತ್ತರವೀಯಲಿಲ್ಲ. ಆಕೆಯ ಕಣ್ಣುಗಳೆರಡೂ ಮುಚ್ಚಿಕೊಂಡಿ ದ್ದುವು. ಕೊಂಚ ಹೊತ್ತಿನ ಹಿಂದೆ ಮಠದಲ್ಲಿ ನಡೆಯುತ್ತಿದ್ದ ಆ ಅಲ್ಲಮ ಮಾಯಾ ಪ್ರಸಂಗವೆಲ್ಲ ಆಕೆಯ ಒಳಗಣ್ಣುಗಳೆದುರಿಗೆ ಮೂಡಿದ್ದಿತು. ಕಂಚಿನ ಗಂಟೆಯ ನಾದದಂಥ ಗಂಡು ಸ್ವರದಲ್ಲಿ ಗಂಗಾಧರಶಾಸ್ತ್ರಿ ಹೇಳುತ್ತಿದ್ದ ಆ ಪದ್ಯ ಆಕೆಯ ಕಿವಿಗಳಲ್ಲಿ ಮೊರೆಯತೊಡಗಿತು.

"ಕೆಳದಿಯರು ತಾವರಿದು ಬಂದಾ
ಗಳೆ ವಿಚಾರಿಸಿ ಹೇಳಿದಡೆ ಕೋ
ಮಳೆ ಮನೋಮುದದಿಂದ ಕರಸಿಯೆ ಕಂಡಳಲ್ಲಮನ
ಮೊಳೆತುವಾಕ್ಷಣ ಕಾಮಬಾಣದ

ಹಿಳುಕುಗಳು ಹಿರಿದಾಗಿ ಚಿತ್ತಜ
ನಳವಿಯಲಿ ಬೆಂಬಿದ್ದು ಮೌನದೊಳಿರ್ದಳಾ ಮಾಯೆ"

"ಅಲ್ಲಮನನ್ನು ಮದುವೆಯಾಗಬೇಕೆಂತ ಮಾಯೆಗೆ ಬಹಳ ಆಸೆಯಾಗಿತ್ತಲ್ಲವೇ ಅಕ್ಕಾ ?" ಗೌರಿ ಕೇಳುತ್ತಿದ್ದಳು. ಆಗಲೂ ಸರಸು ಉತ್ತರವೀಯಲಿಲ್ಲ. ಗಂಗಾಧರಶಾಸ್ತ್ರಿಯ ರಸವತ್ತಾದ ವಾಣಿ ಆಕೆಯನ್ನು ಭಾವ ಸಮಾಧಿಯಲ್ಲಿ ಮುಳುಗಿಸಿದ್ದಿತು. ಅಲ್ಲಮನ ರೂಪವನ್ನು ವರ್ಣಿಸುತ್ತ ಆತ ಹರಿಹರ ಕವಿಯ ರಗಳೆಯಿಂದ ಉದ್ಧರಿಸಿದ ಚರಣಗಳು ಮತ್ತೆ ಪ್ರತಿಧ್ವನಿಸತೊಡಗಿದ್ದುವು :

"ಪಾದರಿಯ ಪೂ ದುರುಂಬಿನ ಪೊಸಬನೊಪ್ಪಿದಂ
ಕೇದಗೆಯ ಮಿಸುಪೆಸಳ ಕಿರು ಮಿಂಡನೊಪ್ಪಿದಂ
ಕತ್ತುರಿಯ ತಿಲಕದ ಕುಮಾರನಿಂತೊಪ್ಪಿದಂ
ಮುತ್ತಿನೇಕಾವಳಿಯ ಮುಗ್ಧನಿಂತೊಪ್ಪಿದಂ
ಹೊಳೆವ ಬೆಳತಿಗೆ ಗಣ್ಗಳೆಳೆಯನೊಪ್ಪುತ್ತಿರಲು
ತೊಳಪ ಕರ್ಣಾಭರಣದರಸನೊಪ್ಪುತ್ತಿರಲು
ಸವಿಗೊಡುವ ಸುಗತಿಗಳ ಸೊಬಗನೊಪ್ಪುತ್ತಿರಲು
ಭವನನೋಲೈಸುತಂ ಹರುಷದಿಂದಿರುತಿರಲು
ನಿಂದಂತೆ ನಿಂದಳಲ್ಲಮನ ನಿಲವಂ ಕಂಡು
ಸಂದಳಾ ಪೊಸ ರೂಪು ರೇಖೆಗೆ ಮನಂಗೊಂಡು...."

ನೆರೆದಿದ್ದ ಜನಸಂದಣಿಯೆಲ್ಲ ಮುಗ್ಧವಾಗಿ ಕುಳಿತು ಪ್ರಸಂಗವನ್ನಾಲಿಸುತ್ತಿತ್ತು. ಗಂಡುಸರು, ಹೆಂಗುಸರು, ಯುವಕರು, ಯುವತಿಯರು, ಚಿಕ್ಕ ಚಿಕ್ಕ ಮಕ್ಕಳು. ಪದ್ಯಗಳನ್ನು ರಾಗವಾಗಿ ಹೇಳಿ ಅನಂತರ ಸುಲಭವಾದ ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಅರ್ಥ ವಿವರಣೆ ಮಾಡುತ್ತಲಿದ್ದ ಗಂಗಾಧರಶಾಸ್ತ್ರಿ. ಶೃಂಗಾರರಸಭರಿತವಾದ ಆ ಪ್ರಸಂಗ ವಿವರಣೆಯಲ್ಲಿ ಆತ ತನ್ನನ್ನು ತಾನೆ ಮರೆತುಬಿಟ್ಟಂತಿದ್ದಿತು. ಎದುರಿಗೆ ಎತ್ತರಿಸಿ ಇರಿಸಿದ ಪೀಠದ ಮೇಲೆ ದಿಂಬಿಗೊರಗಿ ಕುಳಿತಿದ್ದ ಸ್ವಾಮಿಗಳೂ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಆ ರಸ ಸನ್ನಿವೇಶದ ರುಚಿ ಮೆಲ್ಲುತ್ತಿದ್ದ ಹಾಗಿದ್ದಿತು.

"ಕಂಟಕಿತವಾದವೆರಡುಂ ದೃಷ್ಟಿ ಪೈದೋರೆ

ಗಂಟಕ್ಕಿದುವು ನೋಟವೆಯ್ದೆ ಕಾಮುಂ ವಿರಾತೆ...." ಎಂಬ ಚರಣವನ್ನು ಶಾಸ್ತ್ರಿ ಹೇಳುತ್ತಿದ್ದ ಹಾಗೆ ಅರೆಮುಚ್ಚಿದ ಕಣ್ಣುಗಳನ್ನು ಹಠಾತ್ತಾಗಿ ತೆರೆದು ಸ್ವಾಮಿಗಳು ತನ್ನೆಡೆಗೆ ವಿಲಕ್ಷಣವಾಗಿ ನೋಡಿದ ಹಾಗೆ ಭಾಸವಾಗಿದ್ದಿತು ಸರಸೂಗೆ. ಅದೇ ಸಮಯದಲ್ಲಿ ಆಕೆಯೂ ಅವರನ್ನೇ ದೃಷ್ಟಿಸುತ್ತಲಿರಬೇಕೇ! ಮಿಂಚಿಗೆ ಮಿಂಚು ತಾಕಲಾಡಿದ ಹಾಗೆ ತನ್ನ ಹಾಗೂ ಅವರ ದೃಷ್ಟಿ ತಾಕಲಾಡಿದ್ದುವು. "ಕಂಟಕಿತವಾದವೆರಡುಂ ದೃಷ್ಟಿ ಪೈಮೋರೆ....ಗಂಟಕ್ಕಿದುವು ನೋಟವೆಯ್ದೆ ಕಾಮುಂ ವಿರಾತೆ...." ಶಾಸ್ತ್ರಿ ಉಚ್ಚಸ್ವರದಲ್ಲಿ ಹೇಳುತ್ತಲೇ ಇದ್ದ. ತನ್ನ ಎದೆ ಢಡಢಡನೆ ಬಡಿದುಕೊಳ್ಳತೊಡಗಿದ್ದಿತು. ಅಲ್ಲಮ.... ಮಾಯೆ....ಮಾಯೆ....ಅಲ್ಲಮ....ಅತಿಸುಂದರ ಅಲ್ಲಮ....ತುಂಬು ಜವ್ವನೆ ಮಾಯೆ.... "ಸಂದಳಾ ಪೊಸ ರೂಪು ರೇಖೆಗೆ ಮನಂಗೊಂಡು...." ಮಾಯೆಗೆ ಮರುಳಾದ ಅಲ್ಲಮನ ಹಾಗೆಯೆ ಅವರೂ ಆಕೆಯನ್ನು ನೋಡುತ್ತಲಿದ್ದರು. ಮೋಹದಿಂದ ಮತ್ತವಾದಂತಿದ್ದ ಆ ತೇಲುನೋಟ....

ನೆರೆದಿದ್ದ ಆ ನೂರಾರು ಹೆಣ್ಣುಮಕ್ಕಳೆದುರಿಗೆ, ಕುಲೀನ ಮನೆತನದ ಸಭ್ಯಸ್ತ್ರೀಯರೆದುರಿಗೆ ಕೊಂಚವೂ ಲಜ್ಜೆ ಪಟ್ಟುಕೊಳ್ಳದೆ ಉತ್ತಾನ ಶೃಂಗಾರ ಪ್ರಸಂಗವನ್ನು ಪೈಮರೆತು ಬಣ್ಣಿಸುತ್ತಲಿದ್ದ ಆ ನಾಚಿಕೆಗೆಟ್ಟ ಶಾಸ್ತ್ರಿ. ಮಕ್ಕಳೊಂದಿಗರಾದ ಮುತ್ತೈದೆಯರನೇಕರು ನಾಚಿ ತಲೆಬಾಗಿಸಿ, ಸೀರೆಯ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಕುಳಿತಿದ್ದರು. ತನ್ನ ಪಕ್ಕದಲ್ಲಿ ಕುಳಿತಿದ್ದ ತಾಯಿ ಮಾತ್ರ ತಲೆಯನ್ನು ಕೆಳಕ್ಕೆ ಬಾಗಿಸಿರಲಿಲ್ಲ. ಅಲ್ಲಮ ಎಂದರೆ ಪರಮಾತ್ಮ; ಆತನ ಪ್ರಣಯ ಪ್ರಸಂಗವನ್ನು ಕೇಳುವಾಗ ನಾಚಿಕೆಪಡಬೇಕಾದ ಅಗತ್ಯವೇನೂ ಇಲ್ಲ, ಎಂದು ಆಕೆಯ ಭಾವನೆ.

ಸರಸೂಗೆ ಮಾತ್ರ ನಾಚಿಕೆಯೂ ಬಂದಿದ್ದಿತು. ಅದರೊಂದಿಗೆ ಅವರ್ಣನೀಯವಾದ ಉದ್ರೇಕವೂ ಉಂಟಾಗಿದ್ದಿತು. ತಲೆ ತಗ್ಗಿಸಬೇಕೆಂದುಕೊಂಡಿದ್ದಳು. ತಲೆ ಬಾಗಿರಲಿಲ್ಲ. ಸ್ವಾಮಿಗಳ ಕಡೆಗೆ ನೋಡದೆ ದೃಷ್ಟಿಯನ್ನು ನೆಲಕ್ಕೆ ತಿರುಗಿಸಲು ಯತ್ನಿಸಿದಳು. ದೃಷ್ಟಿ ಅವಳ ಆಜ್ಞೆಯನ್ನು ಪಾಲಿಸಿರಲಿಲ್ಲ. "ಬೇಡ, ಅವರನ್ನು ನೋಡಬೇಡ" ಎಂದು ಹೇಳಿದಷ್ಟೂ ಅದರ

ಉತ್ಸಾಹ ಹೆಚ್ಚುತ್ತಿತ್ತು. ಹಟವಾದಿ ಮಗುವಿನಂತೆ ಅದು ಬೇಡವೆಂದ ಕೆಲಸವನ್ನೇ ಮಾಡುತ್ತಿತ್ತು.

ಸ್ವಾಮಿಗಳ ಮುಖವೂ ಎಷ್ಟು ತೇಜಃಪೂರ್ಣವಾದುದು! ತುಂಬಿ ಬೆಳೆದ ಗೌರವರ್ಣದ ಶರೀರ. ಕನ್ನಡಿಯಂತೆ ಹೊಳೆಯುವ ಕೆನ್ನೆಗಳು. ಅಗಲವಾದ ಹಣೆ. ಮುದ್ದಾದ ಮೂಗು. ರಕ್ತರಂಜಿತವಾದ ತುಟಿ. ಕಿವಿಗಳ ವರೆಗೂ ಚಾಚಿದ್ದ ಹುಬ್ಬಿನ ರೇಖೆ. ಅದರ ಕೆಳಗಡೆ ಹುಲಿಯ ಕಣ್ಣುಗಳಂತೆ ಭವ್ಯವಾಗಿ ಕಳಾಪೂರ್ಣವಾಗಿ ಮಿನುಗುತ್ತಿದ್ದ, ಕೊಂಚ ಬಿಳಿಯ ಬಣ್ಣಕ್ಕೆ ತಿರುಗಿದ ದೊಡ್ಡ ದೊಡ್ಡ ಕಣ್ಣುಗೊಂಬೆಗಳು! ಅವರ ದೃಷ್ಟಿ ತನ್ನ ದೃಷ್ಟಿಯನ್ನೆದುರುಗೊಂಡಾಗ ಆ ಕಣ್ಣುಗಳ ಅದ್ಭುತ ಶಕ್ತಿಯ ಆಲಿಂಗನಕ್ಕೊಳಗಾಗಿ ತನ್ನ ವ್ಯಕ್ತಿತ್ವವೆಲ್ಲವೂ ಸೋತು ಬಳಲಿದ ಹಾಗಾಗಿದ್ದಿತು ಸರಸೂಗೆ. ಅಂಥ ಬಳಲಿಕೆಯನ್ನು ಈವೊದಲೆಂದೂ ಆಕೆ ಅನುಭವಿಸಿರಲಿಲ್ಲ. ವಿಚಿತ್ರವಾದ ಬಳಲಿಕೆ.... ದೇಹದ ಸಮಸ್ತ ನರಗಳನ್ನೂ ಹಿಡಿದು ಗಾಸಿಗೊಳಿಸಿ ಹೃದಯದಲ್ಲಿ ಪ್ರಚಂಡ ಬಿರುಗಾಳಿಯನ್ನೆಬ್ಬಿಸಿದ ಬಳಲಿಕೆ......ಅದುವೆ ಮೋಹವೊ ಏನೊ......

"ಗಂಟಿಕ್ಕಿದುವು ನೋಟವೆಯ್ದೆ ಕಾಮಂ ಮಾರೆ....."

ಅದುವೆ ಕಾಮವೊ ಏನೊ ....ಹಾಯ್......ಕಾಮ! ಅವಳ ದೇಹವೆಲ್ಲ ಥರಥರನೆ ಕಂಪಿಸತೊಡಗಿದ್ದಿತು.

"ಮದುವೆ ಅಂದರೆ ನಿನಗೇನು ತಿಳೀತವೆ ಬಿಡೇ....." ಅಜ್ಜಿ ಗೌರಿಯನ್ನ ಣಕಿಸುತ್ತಿದ್ದಳು.

"ಮದುವೆ..... ಮದುವೆ ....." ಎಂದು ಗುಣುಗುಣಿಸುತ್ತ ಸರಸು ಭಾವ ಸಮಾಧಿಯಿಂದ ವ್ಯುತ್ಥಿತಳಾಗಿ ಬಂದಳು.

"ನನಗಲ್ಲ ಮದುವೆ.... ಸರಸಕ್ಕನಿಗೆ.... ಅವಳಿಗೂ ಒಬ್ಬ ಅಲ್ಲಮು ಬೇಕು ......ಆತ ಅಲ್ಲಮು......ಸರಸೂ ಮಾಯೆ ...." ಎಂದು ಕೈತಟ್ಟಿ ನಗತೊಡಗಿದಳು ಗೌರಿ.

"ಪೂ. ಅಂಥ ಮಾತಾಡಬಾರದು ಗೌರೀ," ಅಜ್ಜಿ ನಸುಮುನಿಸಿನಿಂದ ನುಡಿದಳು.

"ನೋಡು ಮತ್ತೆ. ಮಾತೇ ಆಡಲೊಲ್ಲಳಲ್ಲ. ಹ್ಯಾಗೆ ಕುಳಿತಿದ್ದಾಳೆ ಸುಮ್ಮಗೆ. ಮದುವೆಯ ಆಸೆಯಿಲ್ಲವಾದರೆ ಹೀಗೆ ಕೂತಿರುತಾರೆಯೆ ಯಾರಾದರೂ?" ಎಂದು ಗಲ್ಲ ಉಬ್ಬಿಸಿ ನಾಲಗೆಯನ್ನು ಹೊರದೆಗೆದು ಅಕ್ಕನನ್ನು ಕಂಡು ಹಾಸ್ಯಮಾಡಿದಳು ಗೌರಿ.

ಆಕೆಯ ನಗೆಮಾತುಗಳನ್ನು ತಡೆಯಬೇಕೆಂದು ಎನ್ನಿಸಲೇ ಇಲ್ಲ ಸರಸೂಗೆ. ಬೇರಾವುದೊಂದು ಸಂದರ್ಭವಾಗಿದ್ದಲ್ಲಿ ಆಕೆ ಸುಮ್ಮನಿರದೆ ಗೌರಿಗೊಂದು ಏಟು ಬಿಗಿದು ಆಕೆಯ ಬಾಯಿ ಮುಚ್ಚಿಸುತ್ತಿದ್ದಳು. ಆದರೆ ಇಂದು.....

ಗೌರಿಯ ಮಾತು ಕೇಳಿ ಆಕೆಗೆ ನಾಚಿಕೆಯೆನ್ನಿಸಲಿಲ್ಲ. ಸಿಟ್ಟೂ ಬರಲಿಲ್ಲ. ಗೌರಿ ಹಾಗೆಯೆ ಮದುವೆಯ ಬಗೆಗೆ ಮಾತನಾಡುತ್ತಿರಬೇಕು, ತಾನು ಹಾಗೆಯೆ ಕೇಳುತ್ತಿರಬೇಕು ಎನ್ನಿಸುತಿತ್ತು. ಗೌರಿಯ ಒಂದೊಂದು ನುಡಿಯೂ ಒಂದು ಮಲ್ಲಿಗೆ ಹೂವಿನ ಆಕಾರ ತಳೆದು ತನ್ನೆದೆಯ ಮೇಲೆ ಬಿದ್ದು ತನ್ನ ಶರೀರವನ್ನು ಪುಲಕಗೊಳಿಸುತ್ತಿದ್ದ ಹಾಗೆ ಭಾಸವಾಗುತ್ತಿತ್ತು.

"ಅವ್ವ ಇನ್ನೂ ಯಾವಾಗ ಬರುವಳೋ. ಅಡಿಗೆ ಆರಿ ತಣ್ಣಗಾಗುತ್ತ ಬಂತು. ಈ ಮಳೆ ಬೇರೆ ಇನ್ನೂ ಬಿಡಲೊಲ್ಲದು. ದೆವ್ವ ಹಿಡಿದ ಹಾಗೆ ಹಿಡಿದುಕೊಂಡಿದೆ. ಆಕೆ ಬರುವ ಹೊತ್ತಿಗೆ ಎಲ್ಲ ಆರಿ ತಂಗಳಾದರೂ ಆದೀತು. ನೀವಿಬ್ಬರೂ ಈಗಲೇ ಉಂಡುಬಿಡುತ್ತೀರಾ? ನೀವೇಕೆ ಕಾಯಬೇಕು ಸುಮ್ಮನೆ?" ಎಂದಳು ರುದ್ರವ್ವಜ್ಜಿ.

"ಹಾಗಾದರೆ ನಾನು ಉಂಡುಬಿಡ್ತೇನೆ. ಏಳು ಅಕ್ಕ. ಕೈ ಕಾಲು ತೊಳೆಯೋಣ. ನೀನು ಉಣ್ಣುವದಿಲ್ಲವೆ?"

ಊಟ? ಸರಸೂಗೆ ಹಸಿವೆಯಾದಂತೆ ತೋರುತ್ತಿರಲಿಲ್ಲ. ಹಸಿವೆ, ದಾಹ, ನಿದ್ರೆ ಎಲ್ಲವನ್ನೂ ಮರೆಯಿಸುವಂಥ ಮಧುರ ಮಾದಕತೆಯೊಂದು ದೇಹದಲ್ಲೆಲ್ಲ ತೇಲುತ್ತಿರುವಾಗ ಊಟದ ಕಡೆಗೆ ಲಕ್ಷ್ಯವಾದರೂ ಹೇಗೆ ಹೋಗಬೇಕು?

"ನನಗೆ ಹಸಿವಿಲ್ಲ ಗೌರಾ. ನೀ ಊಟಮಾಡು."

"ನೀನು?"

"ಅವ್ವ ಬರುವವರೆಗೂ ಕಾದಿರುತ್ತೇನೆ. ಇನ್ನೇನು, ಬರುವ ಹೊತ್ತಾಗುತ್ತ ಬಂತು."

"ಮಠದಿಂದ ಮನೆಯ ತನಕ ಬರಬೇಕಾದರೆ ಅರ್ಧತಾಸಾದರೂ ಬೇಕಲ್ಲವೆ? ಈಗ ಗಂಟೆಯೆಷ್ಟು ಸರಸೂ?" ಎಂದು ಅಜ್ಜಿ ಕೇಳಿದಳು.

"ಎಂಟು ಹೊಡೆದಿರಬಹುದು."

"ಅವ್ವ ಬರಬೇಕಾದರೆ ಒಂಬತ್ತು ಆದರೂ ಆದೀತು. ಹಸಿದಿರಬೇಕು ನೀನು. ಊಟ ಮಾಡೇಳು ತಾಯಿ."

"ಇಲ್ಲ ಅಜ್ಜೀ, ಹಸಿವೇ ಆಗಿಲ್ಲ ನನಗೆ. ಗೌರಿಯೊಬ್ಬಳೇ ಉಣ್ಣಲಿ. ಅವ್ವ ನಾನು ಕೂಡಿಯೇ ಉಣ್ಣುತ್ತೇವೆ. ಆಕೆಯೂ ಬಂದುಬಿಟ್ಟಾಳು ಬೇಗನೆ. ಮೋಟಾರಿನಲ್ಲಿ ಬರುತ್ತಾಳೆ...."

"ಮೋಟಾರು? ಯಾರದು?"

"ಸ್ವಾಮಿಗಳದು. ನಮ್ಮೆಲ್ಲರ ಬಗ್ಗೆ ಅವರಿಗೆ ಬಹಳ ವಿಶ್ವಾಸ. ಅಪ್ಪನಿಗೂ ಅವರಿಗೂ ಬಹುದಿನಗಳಿಂದ ಪರಿಚಯವಂತೆ. ಅವ್ವನ ಭಾಷಣವೂ ಅವರ ಮನಸ್ಸಿಗೆ ಬಂದಿರಬೇಕು. ಬಹಳ ಮೆಚ್ಚಿಕೊಂಡರು."

"ಅವ್ವ ಭಾಷಣಾ ಮಾಡಿದಳೇ? ಸ್ವಾಮಿಗಳ ಮುಂದೆ? ಯಾವಾಗ?"

"ನಿನ್ನೆ ಅಕ್ಕನ ಬಳಗದ ಸಭೆಯಲ್ಲಿ. ಸ್ವಾಮಿಗಳೇ ಅಧ್ಯಕ್ಷರಾಗಿದ್ದರು. ಅಕ್ಕನ ವೈರಾಗ್ಯಜೀವನದ ಬಗ್ಗೆ ಅವ್ವ ಬಹಳ ಚೆನ್ನಾಗಿ ಮಾತನಾಡಿದಳು. ಅಧ್ಯಕ್ಷ ಭಾಷಣದಲ್ಲಿ ಸ್ವಾಮಿಗಳು ಆಕೆಯನ್ನು ಬಹಳ ಹೊಗಳಿದರು."

ಬಚ್ಚಲಿನಲ್ಲಿ ಕೈಕಾಲು ಮುಖ ತೊಳೆದುಕೊಳ್ಳುತ್ತಲಿದ್ದ ಗೌರಿ ಕಿಲಕಿಲನೆ ನಗುತ್ತ—"ಅವ್ವ ಬಹಾಳ ಮಜಾ ಮಾತನಾಡ್ತಾಳೆ ಅಜ್ಜೀ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು....ಅಂತ ಆಕೆ ಹೇಳುವಾಗ ಎಲ್ಲರೂ ಚಪ್ಪಾಳೆ ಹಾಕಿದ್ದೇ ಹಾಕಿದ್ದು ನೋಡು....ಅದೇ ಅಲ್ಲವೇನೇ ಸರಸಕ್ಕಾ ಆ ಅಕ್ಕನ ವಚನ?" ಎಂದಳು.

ಸರಸೂ ಮೆಲ್ಲನೆ ನಕ್ಕಳು. ಉತ್ತರವೀಯಲಿಲ್ಲ.

"ಮಾತಾಡಿದ ಹಾಗೆ ಅವ್ವ ಮನೆಗೆ ಬಂದು ಅಪ್ಪನ್ನ ಒಲೆಯೊಳಗಿಕ್ಕಿದರೆ ಆತನ ಗತಿಯೇನು ಅಜ್ಜೀ!" ಎಂದು ನುಡಿದು ಬಚ್ಚಲಿನಿಂದ ಚಂಗನೆ ಹಾರಿ ಈಚೆಗೆ ಬಂದು ಲಂಗದಿಂದ ಮುಖವನ್ನೊರೆಸಿಕೊಂಡು, ಮಣೆಯ

ಮೇಲೆ ಬಿಂಕದಿಂದ ಕುಳಿತುಕೊಂಡು ಗೌರಿ ಅಕ್ಕನ ತೋಳು ಚಿವುಟಿ— "ನೀನೂ ಮಹಾದೇವಿಯಕ್ಕನ ಹಾಗೆ ಚೆನ್ನಮಲ್ಲಿಕಾರ್ಜುನನ್ನ ಹುಡುಕಿಕೊಂಡು ಹೋಗುವವಳೇನೇ?" ಎಂದು ಕೇಳಿ ಕಣ್ಣು ಮಿಟುಕಿಸಿ ನಗತೊಡಗಿದಳು.

"ಅಯ್ಯೋ, ರಕ್ತ ತೆಗೆದೆಯಲ್ಲೇ ಬಜಾರಿ!" ಎಂದು ಮುನಿಸಿನಿಂದ ನುಡಿದು ಸರಸು ಮೇಲಕ್ಕೆದ್ದಳು.

"ನಾನು ಊಟ ಮಾಡುವದಿಲ್ಲ ಅಜ್ಜಿ. ನನಗೊಂದು ಕಪ್ ಕಾಫಿ ಮಾಡಿಕೊಡು ಸಾಕು. ಏಕೋ ನನ್ನ ತಲೆ ಸಿಡಿಯತೊಡಗಿದೆ. ಹೋಗಿ ಬಿದ್ದುಕೊಳ್ತೇನೆ. ನೀನು ಉಂಡು ಬಾ ಗೌರಾ," ಎಂದು ನುಡಿದು ಆಕೆ ಅಟ್ಟದ ಕಡೆಗೆ ನಡೆದಳು.

"ಮಳೆಯಲ್ಲಿ ತೋಯಿಸಿಕೊಂಡು ನೆಗಡಿಯಾಯಿತೇನೊ. ನೀಲಗಿರಿ ಎಣ್ಣೆಯನ್ನಾದರೂ ಹಚ್ಚಿಕೊಳ್ಳವ್ವ. ಜ್ವರ ಗಿರ ಬಂದೀತು," ಎಂದು ಕನಿಕರದಿಂದ ನುಡಿದಳು ರುದ್ರವ್ವಜ್ಜಿ.

"ಏನೂ ಬೇಡವ್ವ. ಬರೀ ತಲೆನೋವು ಅಷ್ಟೆ. ಕಾಫಿ ಕುಡಿದು ಮಲಗಿದರೆ ಹೋಗಿಬಿಡಬಹುದು," ಎಂದು ಹೇಳಿ ಸರಸು ಮೆಟ್ಟಲುಗಳನ್ನೇರಿ ಮೇಲೆ ಹೋದಳು.

ಕನಿಕರದಿಂದ ಮಿಡಿಯುವ ಹೃದಯದಿಂದ ಅಜ್ಜಿ ಕಾಫಿಗೆ ನೀರು ಕಾಯಿಸತೊಡಗಿದಳು. ಸರಸು ಎಂದರೆ ಆಕೆಗೆ ತುಂಬ ಮಮತೆ, ಅಕ್ಕರತೆ. ಸ್ವಂತ ಮಕ್ಕಳನ್ನೆಲ್ಲ ಕಳೆದುಕೊಂಡು ಏಕಾಕಿನಿಯಾಗಿದ್ದ ಆಕೆಯ ಬರಡು ಬಾಳಿನಲ್ಲಿ ಹೂ ಅರಳಿದಂತೆ ಅರಳಿದ್ದಳು ಸರಸೂ. ಇಪ್ಪತ್ತು ವರ್ಷಗಳಿಗೆ ಹಿಂದೆ ಅನಾಥೆಯಾಗಿ ಈ ಮನೆಗೆ ಕೆಲಸಗಾರ್ತಿಯಾಗಿ ಅಡಿಯಿರಿಸಿದಂದಿನಿಂದ ಇದೇ ಆಕೆಯ ಮನೆಯಾಗಿದ್ದಿತು. ಎರಡು ವರುಷಗಳ ತರುವಾಯ ಸರಸು ಹುಟ್ಟಿದಾಗ ಆಕೆಯ ಆರೈಕೆಯ ಕೆಲಸವನ್ನೆಲ್ಲ ಸಂತೋಷದಿಂದ ವಹಿಸಿಕೊಂಡಿದ್ದಳು. ಸರಸು ಹುಟ್ಟುತ್ತಲೂ ಆಕೆಯ ತಾಯಿ ಕಣ್ಣು ಮುಚ್ಚಿ ಈ ಲೋಕವನ್ನು ತೊರೆದು ಹೋದಮೇಲೆ ಆ ತಬ್ಬಲಿ ಮಗುವಿನ ಬಗೆಗೆ ರುದ್ರವ್ವಜ್ಜಿಗೆ ಮಮತೆಯಿನ್ನೂ ಹೆಚ್ಚಿದ್ದಿತು. ಅಂದಿನಿಂದ ಆಕೆಯೆ ತಾಯಿ [illegible]ನ್ನು ಅಕ್ಕರೆಯಿಂದ ಬಳೆಯಿಸಿದ್ದಳು. ಎಣ್ಣೆ ನೀರು, [illegible]

ಸಕ್ಕರೆ, ಜೋಗುಳ ಹಾಡು ಯಾವುದಕ್ಕೂ ಕೊರತೆ ಮಾಡದೆ ತನ್ನ ಸ್ವಂತ ಮಗುವಿನಂತೆಯೆ ಆಕೆಯನ್ನು ದೊಡ್ಡವಳನ್ನಾಗಿ ಮಾಡಿದ್ದಳು. ದಿನಕ್ಕೊಂದು ಬಗೆಯಾಗಿ ಸತಸುವಿನ ಚೆಲುವಿಕೆ ಹೆಚ್ಚುತ್ತ ಬಂದ ಹಾಗೆ ಹಿಗ್ಗಿ ಹಿಗ್ಗಿ ನಲಿದಳು. ಆಕೆಗೆ ಶೀತವಾದರೆ ಈಕೆಗೆ ಭಯ. ಕೆಮ್ಮು ಬಂದರೆ ದಿಗಿಲು. ಮೈ ಕೊಂಚ ಬಿಸಿಯಾದರೂ ಸಾಕು, ಈಕೆಯ ಪ್ರಾಣವೇ ಹೋಗುವಂತಾಗುತ್ತಿತ್ತು. ತನ್ನ ಹಸಿವು ನೀರಡಿಕೆ ನಿದ್ರೆಗಳನ್ನೂ ಮರೆತು ಆಕೆಯ ಉಪಚಾರದಲ್ಲಿ ತೊಡಗಿಕೊಂಡಿರುವಳು. ಸರಸೂಗೆ ಎರಡನೆಯ ತಾಯಿ ಬಂದ ಮೇಲೂ ಆ ಉಪಚಾರದಲ್ಲಿ ಕೊಂಚವೂ ವ್ಯತ್ಯಯವುಂಟಾಗಿರಲಿಲ್ಲ. ಬಸಪ್ಪನವರ ಎರಡನೆಯ ಪತ್ನಿ ನಾಗಮ್ಮನೂ ಒಳ್ಳೆಯವಳೇ. ಸವತಿಯ ಮಗಳೆಂದು ಸರಸುವನ್ನು ಅಸಡ್ಡೆ ಮಾಡಿದಾಕೆಯಲ್ಲ—ಆದರೂ ರುದ್ರವ್ವಜ್ಜಿಗೆ ಸಮಾಧಾನವಿರಲಿಲ್ಲ. ಮಲತಾಯಿ ಎಷ್ಟೆಂದರೂ ಮಲತಾಯಿಯೆ, ಹೆಣ್ಣಿನ ಹೃದಯವನ್ನು ನಾನರಿಯೆನೇ—ಎಂದುಕೊಂಡು ಮೊದಲಿಗಿಂತಲೂ ಹೆಚ್ಚು ಆಸಕ್ತಿಯಿಂದ ಸರಸುವನ್ನು ನೋಡಿಕೊಂಡು ಬಂದಿದ್ದಳು. ಸರಸು ಸುಖಪಟ್ಟಾಗ ಆಕೆಯೂ ಸುಖಪಟ್ಟಿದ್ದಳು. ದುಃಖದಿಂದ ಆಕೆ ಕಣ್ಣೀರು ಮಿಡಿದಾಗ ಈಕೆಯೂ ಕಣ್ಣೀರು ಮಿಡಿದಿದ್ದಳು.

"ಹಾಲು ನೀಡು ಅಜ್ಜೀ...." ಗೌರಿಯೆಂದಳು.

"ಅಯ್ಯ! ನನ ಮಂಜಾಳ ಹೋಗಲಿ. ಮರತೇ ಬಿಟ್ಟಿದ್ದೆನಲ್ಲ...." ಎಂದು ಗೊಣಗುತ್ತ ಅಜ್ಜಿ ಹಾಲು ನೀಡಿದಳು.

ಅನ್ನ ಹಾಲು ಕಲಸಿ ಒಂದೊಂದೆ ತುತ್ತನ್ನು ಬಾಯಿಗಿಟ್ಟುಕೊಳ್ಳುತ್ತ ಗೌರಿ ಕೇಳಿದಳು:

"ಹೌದೇ ಅಜ್ಜಿ! ಸರಸಕ್ಕನ ಮದುವೆ ಯಾವಾಗ?"

ಅಜ್ಜಿಯ ಕಣ್ಣುಗಳಿಂದ ಒಂದೆರಡು ಕಂಬನಿಗಳು ಜಾರಿ ಬಿದ್ದುವು. ಆಕೆಯ ಮುಖದಿಂದ ನಿಟ್ಟುಸಿರೊಂದು ಹೊರಹೊರಟಿತು. ಸರಸಕ್ಕನ ಮದುವೆ....!

"ಹೇಳೋದಿಲ್ಲವೇನಜ್ಜಿ? ಅಕ್ಕನ ಮದುವೆ ಯಾವಾಗ ಆಗೋದು?"

"ನಿನ್ನ ಮದುವೆ ಆದ ಮೇಲೆ...." ಎಂದು ಬಾಯಿಗೆ ಬಂದ ಮಾತು ಆಡಿ ಅಜ್ಜಿ ಕಣ್ಣುಗಳನ್ನೊರೆಸಿಕೊಂಡಳು.

ಗೌರಿ ಉಣ್ಣುವುದನ್ನು ನಿಲ್ಲಿಸಿ ಕೆನ್ನೆಗಳನ್ನು ಉಬ್ಬಿಸಿ ಮುನಿಸಿನಿಂದ ನುಡಿದಳು: "ಥೂ ಹೋಗಜ್ಜಿ, ನಾ ಮದುವೆಯಾಗೋಲ್ಲ."

"ಮದುವೆಯಾಗೋಲ್ಲ! ಎಲ್ಲಾ ಸುಳ್ಳು. ಪೂರಾ ಸುಳ್ಳು. ಎಲ್ಲ ಹುಡುಗಿಯರೂ ಮೊದಮೊದಲು ನಿನ್ನ ಹಾಗೇ ಜಂಬ ಮಾಡ್ತಾರೆ. ಆ ಮೇಲೆ ಬೇಡಾ ಬೇಡಾ ಅಂತ ಬಾಯಲ್ಲಿ ಹೇಳಿದರೂ ಒಳಗೊಳಗೇ ಹಿಗ್ಗಿ ಹಿಗ್ಗಿ ಗಂಡನ್ನ ಮಾಡಿಕೊಳ್ತಾರೆ...."

"ಥೂ ಬಿಡಮ್ಮ ಅಜ್ಜಿ. ನಾನಂತೂ ಎಂ–ದೆಂ–ದೂ ಗಂಡನ್ನ ಮಾಡಿ ಕೊಳ್ಳೋಲ್ಲ. ಎಂ-ದೆಂ–ದೂ...." ಎಂದು ಹಟದ ಧ್ವನಿಯಲ್ಲಿ ನುಡಿದಳು ಗೌರಿ.

"ನೀನೇನೋ ಮಾಡಿಕೊಳ್ಳಲಿಕ್ಕಿಲ್ಲ. ಆದರೆ ನಿನ್ನ ಗಂಡ ಕೇಳಬೇಕಲ್ಲ. ಆತನೇ ಬಂದು ಮಾಡಿಕೊಂಡು ಹೋಗ್ತಾನೆ...." ಎಂದು ನಗುತ್ತ ನುಡಿದಳು ಅಜ್ಜಿ.

"ಅವ ಬಂದರೆ ಚಿವುಟ ಕಳಿಸ್ತೀನಿ. ನಾನೇನು ಸುಮ್ಮಗೆ ಬಿಡ್ತೀನೆಯೆ? ಹೀ–ಗೆ– ಚಿವುಟ ರಕ್ತ ಹೀರಿ ಅಯ್ಯಯ್ಯೋ ಅಂತ ಆತ ಅಳುವ ಹಾಗೆ ಮಾಡಿ ಓಡಿಸಿ ಬಿಡ್ತೀನಿ," ಎಂದು ಕೈ ತಿರುವಿ ಸೊಗಸಾಗಿ ಅಭಿನಯಿಸಿದಳು ಗೌರಿ.

"ನೀ ಚಿವುಟದರೂ ಆತ ಬಿಡುವದಿಲ್ಲ. ನಿನ್ನ ಎಳೆದು ಹೊತ್ತುಕೊಂಡು ಹೋಗ್ತಾನೆ...."

"ಹಾಗೆ ಮಾಡಲಿಕ್ಕೆ ಬಂದರೆ ನಾನೇನು ಬಿಡೋಲ್ಲ. ಒಲೆಗೆ ಹಾಕಿ ಬಿಡ್ತೀನಿ ಅವನ್ನ. ಮಹಾದೇವಿಯಕ್ಕ ಹೇಳಿದ ಹಾಗೆ...." ಎಂದು ನುಡಿದು ಗೌರಿ ಕೈ ತೊಳೆದುಕೊಂಡು ಅಟ್ಟಕ್ಕೆ ಧಾವಿಸಿದಳು. ಅಷ್ಟು ಹೊತ್ತಿಗಾಗಲೆ ಆಕೆಗೆ ತೂಕಡಿಕೆ ಬರುತ್ತಿತ್ತು.

ಮೇಜಿನ ಮೇಲೆ ಕಂದೀಲು ಉರಿಯುತ್ತಿತ್ತು. ಅದರ ಬೆಳಕಿಗೆದುರಾಗಿ ಕುಳಿತು ಎರಡು ಕೈಗಳನ್ನೂ ಮೇಜಿನ ಮೇಲೂರಿ ಸರಸು ಪುಸ್ತಕವೊಂದರ ಮೇಲೆ ದೃಷ್ಟಿ ಚೆಲ್ಲಿದ್ದಳು.

"ಇನ್ನೂ ಮಲಗಿಲ್ಲವೇನಕ್ಕಾ?" ಎಂದು ನುಡಿಯುತ್ತ ಗೌರಿ ಕೊಟಡಿ ಯೊಳಕ್ಕೆ ನುಗ್ಗುತ್ತಲೂ ಸರಸು ಬೆಚ್ಚಿಬಿದ್ದು ಲಗುಬಗೆಯಿಂದ ಪುಸ್ತಕವನ್ನು

ಮುಚ್ಚಿ, ಅದರ ಮೇಲೆ ಕೈಯನ್ನಿಟ್ಟು ಕೊಂಚ ದಿಗಿಲುಗೊಂಡಂತಿದ್ದ ದೃಷ್ಟಿಯನ್ನು ತಂಗಿಯ ಕಡೆಗೆ ತಿರುಗಿಸಿದಳು.

ಗೌರಿ ಬಂದು ಅಕ್ಕನ ಭುಜದ ಮೇಲೆ ಕೈ ಹಾಕಿ– "ತಲೆ ನೋಯುತ್ತಿದೆಯಂತಿದ್ದೆಯಲ್ಲಕ್ಕ ? ಈಗ ಹ್ಯಾಗಿದೆ ?" ಎಂದು ಕೇಳಿದಳು.

"ಹಾಗೇ ಇದೆಯಮ್ಮ. ಇನ್ನೂ ಹೋಗಲಿಲ್ಲ."

"ಹಾಗಾದರೆ ಸುಮ್ಮಗೆ ಮಲಗಿಕೊಂಡಿರಬಾರದೇ? ಮತ್ತೇಕೆ ಪುಸ್ತಕ ಓದುತ್ತೀಯ ?"

"ಏನೋ ಬೇಸರು ಗೌರಾ. ಬಲು ಬೇಸರು. ಜೀವಕ್ಕೆ ಸೊಗಸಿಲ್ಲ–ಅದಕ್ಕೇ ಕೊಂಚ ಓದೋಣಾಂತ ಕುಳಿತೆ."

"ಎಂಥ ಪುಸ್ತಕ ಅದು ಅಕ್ಕ? ಯಾವ ಕಾದಂಬರಿ ?" ಎಂದು ಗೌರಿ ಕುತೂಹಲದಿಂದ ಬಾಗಿ ಸರಸುವಿನ ಕೈಯನ್ನು ಆಚೆಗೆತ್ತಿ ಇಟ್ಟು ಪುಸ್ತಕದ ಹೆಸರನ್ನು ಓದಿನೋಡಿದಳು : "ಪ್ರಭುಲಿಂಗಲೀಲೆಯ ಸಂಗ್ರಹ."

"ಏನೇ, ಇವೊತ್ತು ನಿನಗೆ ಈ ಪ್ರಭುಲಿಂಗನ ಹುಚ್ಚೇ ಹಿಡಿದ ಹಾಗೆ ಕಾಣಿಸುತ್ತಲ್ಲ?" ಎಂದು ನಗುತ್ತ ನುಡಿದು ಗೌರಿ ಮಂಚಕ್ಕೆ ನೆಗೆದು ರಗ್ಗನ್ನು ಮೈಮೇಲೆಳೆದುಕೊಂಡು ಮಲಗಿಬಿಟ್ಟಳು. ಒಂದೆರಡು ನಿಮಿಷಗಳಲ್ಲಿಯೇ ಆಕೆ ನಿದ್ರೆಯ ಮೋಡಗಳನ್ನೇರಿ ವಿಶ್ರಾಂತಿಲೋಕದಲ್ಲಿ ವಿಹರಿಸತೊಡಗಿದಳು.

ಸರಸು ಮತ್ತೆ ಪುಸ್ತಕವನ್ನು ತೆರೆದು ಆಗತಾನೆ ಬಿಟ್ಟ ಭಾಗದ ಮೇಲೆ ಆತುರತೆಯಿಂದ ದೃಷ್ಟಿಯನ್ನೋಡಿಸತೊಡಗಿದಳು. ಪ್ರಭುಲಿಂಗಲೀಲೆ ಆಕೆಗೆ ಅಪರಿಚಿತ ಕಾವ್ಯವೇನೂ ಆಗಿರಲಿಲ್ಲ. ಆಕೆಯ ಅತ್ಯಂತ ಪ್ರೀತಿಯ ಕೆಲವೇ ಕನ್ನಡ ಕಾವ್ಯಗಳಲ್ಲಿ ಅದೂ ಒಂದು. ಇಪ್ಪತ್ತು ಮೂವತ್ತು ಸಲವಾದರೂ ಅದನ್ನಾಕೆ ಮತ್ತೆ ಮತ್ತೆ ಓದಿಕೊಂಡಿರಬಹುದು. ಹಲವು ಭಾಗಗಳಂತೂ ಕಂಠಪಾಠವಾದಂತಿದ್ದುವು. ಆದರೂ–ಇದುವರೆಗೆ ಆ ಕಾವ್ಯದಲ್ಲಿ ತನಗೆ ಕಾಣಿಸದೆ ಮರೆಯಾಗಿ ಉಳಿದಿದ್ದ ರಹಸ್ಯವೊಂದು ಈ ದಿನ ಹಠಾತ್ತಾಗಿ ಮೈದೋರಿದಂತೆ ಆಕೆಗೆ ತೋರುತ್ತಿತ್ತು. ಗಂಗಾಧರಶಾಸ್ತ್ರಿಯ ವ್ಯಾಖ್ಯಾನದಿಂದ, ಮಠದ ಆ ವಾತಾವರಣದಿಂದ ಆ ಕಾವ್ಯಕ್ಕೆ ಹೊಸ ಬಣ್ಣವೊಂದು ಬಂದ ಹಾಗೆ ಭಾಸವಾಗುತ್ತಿತ್ತು.

"ಕಾರ ಮುಗಿಲಿನ ಗರ್ಜನೆಯು ಕಿವಿ
ಯಾರೆ ಕೇಳಿದ ಸೋಗೆಯಂತಿರೆ
ಹಾರವಿಸುತಲಿ ಅಲ್ಲಮನ ಮದ್ದಳೆಯ ಧ್ವನಿಗೇಳ್ದು
ನಾರಿ ಮಾಯಾದೇವಿ ನಲಿವುತಿ
ದಾರು ಹೊರಕಡೆಯಲ್ಲಿ ತೂರ್‍ಯೋ
ದ್ಧಾರವನು ಮಾಡುವರೆನುತ ಕೇಳಿದಳು ಕೆಳದಿಯರ."

ಆ ಮಾಯಾದೇವಿಯ ಹಾಗೆಯೆ ಇಂದು ತನ್ನ ಅವಸ್ಥೆಯಾಗಿದೆ. ಹೊರಗೆ ಮಳೆ ಸುರಿಯುತ್ತಲೇ ಇದೆ. ಟಪ ಟಪ ಟಪ ಟಪ! ಕಿಟಕಿಗೆ ಹನಿಗಳು ತಾಕಲಾಡುತ್ತಿವೆ. "ಕಾರ ಮುಗಿಲಿನ ಗರ್ಜನೆಯು ಕಿವಿಯಾರೆ ಕೇಳಿದ ಸೋಗೆಯಂತೆ...." ಸರಸುವಿನ ಶರೀರವೆಲ್ಲವೂ ರೋಮಾಂಚಿತ ವಾಯಿತು.

ಹಠಾತ್ತಾಗಿ ಆಕೆಯ ದೃಷ್ಟಿ ಎದುರಿಗಿನ ಗೋಡೆಯ ಮೇಲಿದ್ದ ಮಹಾ ದೇವಿಯಕ್ಕನ ವರ್ಣಚಿತ್ರದ ಮೇಲೆ ಬಿತ್ತು. ದಿಗಂಬರೆಯಾಗಿ, ಚೆನ್ನಮಲ್ಲಿ ಕಾರ್ಜುನನ ಆರಾಧನೆಯಲ್ಲಿ ತನ್ನನ್ನು ಸಂಪೂರ್ಣವಾಗಿ ಮರೆತು ದಿವ್ಯಭಾವ ದಲ್ಲಿ ತಲ್ಲೀನೆಯಾಗಿದ್ದ ಆ ದೇವಿ....ಆ ಮಹಾ ವಿರಾಗಿ ?....ಆಕೆಯ ಶಾಂತ ದಿವ್ಯ ತೇಜಃಪೂರ್ಣವಾದ ಮುಖವನ್ನು ನಿರುಕಿಸಿದೊಡನೆ ಸರಸುವಿನ ದೇಹ ಥರಥರ ಕಂಪಿಸಿತು. ಅದೃಶ್ಯ ಹಸ್ತವೊಂದು ಹಠಾತ್ತಾಗಿ ನುಗ್ಗಿ ಬಂದು ತನ್ನ ಶರೀರದ ಮೇಲೆಲ್ಲ ಚಬಕದೇಟು ಹಾಕುವ ಹಾಗೆ ತೋರಿತು.

"ಅಕ್ಕ, ನನ್ನ ಅಕ್ಕ, ದೇವಿ....ಮಹಾದೇವಿ....ಎಷ್ಟು ದುರ್ಬಲ ವಾಗಿದೆಯಲ್ಲ ನಿನ್ನ ಈ ತಂಗಿಯ ಮನಸು....ಅಕ್ಕಾ...." ಎಂದು ಹಲುಬುತ್ತ ಸರಸು ಮೇಜಿನ ಮೇಲೆ ಹಣೆಯನ್ನೊರಗಿಸಿ ಹಸುಮಗುವಿನ ಹಾಗೆ ಬಿಕ್ಕ ತೊಡಗಿದಳು.

ಟಪ ಟಪ ಟಪ ಟಪ....

ಮಳೆ ಹನಿಗಳುದುರುತ್ತಲೇ ಇದ್ದುವು.

ಆ ಮಳೆಯ ಸದ್ದನ್ನು ಮರೆಮಾಡುವಂತೆ ಆರ್ತನಾದವೊಂದು ಚಿಮ್ಮಿ ಬರತೊಡಗಿತು. ಆ ಕೊಟಡಿ, ಆ ಮನೆ, ಹೊರಗಿನ ಚಂದ್ರಶಾಲೆ, ಕೆಳಗಿನ ತೋಟ, ಎದುರಿನ ರಸ್ತೆ, ಮೇಲಿನ ಮುಗಿಲು ಎಲ್ಲವನ್ನೂ ತಬ್ಬಿಕೊಂಡು

ಒಮ್ಮೆ ಅತ್ತ ಹೊರಳಿ, ಒಮ್ಮೆ ಇತ್ತ ಹೊರಳಿ, ಎತ್ತೆತ್ತಲೂ ಕರುಣೆಯನ್ನು ಕೆರಳಿಸುತ್ತ ಕನಿಕರವನ್ನುಕ್ಕಿಸುತ್ತ, ವರ್ಣಿಸಲಾಗದ ವಿಷಾದದ ಮಂಜು ಹೊಗೆಯನ್ನು ಹುಟ್ಟಿಸುತ್ತ ದುಮುದುಮಿಸತೊಡಗಿತು ಆ ನಾದ.

ಸರಸು ತಲೆಯೆತ್ತಿ ಕಿಟಕಿಯಲ್ಲಿ ಇಣುಕಿ ಕೆಳಗಡೆ ದೃಷ್ಟಿ ತೂರಿದಳು. ಎದುರುಮನೆಯಲ್ಲಿ ಬೆಳಕು ಕಾಣುತ್ತಿತ್ತು. ಗೋಡೆಗೊರಗಿ ಕುಳಿತುಕೊಂಡು ಆ ಯುವಕ ಪಿಟೀಲು ಬಾರಿಸುತ್ತಲಿದ್ದ. ಸಣ್ಣ ದೀಪದ ಮಂದ ಪ್ರಕಾಶದಲ್ಲಿ ವ್ಯಥೆಯೇ ಮೂರ್ತಿವೆತ್ತು ಬಂದಂತಿದ್ದ ಆತನ ಆಕೃತಿ ಬಲು ವಿಲಕ್ಷಣವಾಗಿ ಕಾಣಿಸುತ್ತಿತ್ತು. ಕಣ್ಣುಗಳನ್ನು ಮುಚ್ಚಿ ಪಿಟೀಲನ್ನು ಬಾಚಿ ತಬ್ಬಿಕೊಂಡು ನಾದತರಂಗಗಳನ್ನೆಬ್ಬಿಸುತ್ತ ಜಗತ್ತೆಲ್ಲವನ್ನೂ ಮರೆತ ಹಾಗಿತ್ತು ಆತ.

ಇದ್ದುದಿದ್ದ ಹಾಗೆ ಮಳೆ ವೇಗವಾಗಿ ಸುರಿಯತೊಡಗಿತು. ಅದರೊಂದಿಗೆ ಭೀಕರವಾದ ಗಾಳಿ. ಆತನ ಕೊಟಡಿಯ ಗಾಜಿನ ಕಿಟಕಿ ಅತ್ತ ಇತ್ತ ತೂರಾಡಿ ಸದ್ದು ಮಾಡತೊಡಗಿತು. ಗೂಟಕ್ಕೆ ನೇತುಹಾಕಿದ್ದ ಬಟ್ಟೆಬರೆಗಳು ಅತ್ತ ಇತ್ತ ಹಾರಾಡತೊಡಗಿದುವು. ಕಿಟಕಿಯ ಗೋಡೆಯ ಮೇಲಿದ್ದ ಕಾಗದಗಳು ಗಾಳಿಗೆ ಚೆಲ್ಲಾಪಿಲ್ಲಿಯಾಗತೊಡಗಿದವು. ಯಾವುದರ ಕಡೆಗೂ ಆತನಿಗೆ ಲಕ್ಷ್ಯವಿರಲಿಲ್ಲ.

ಮಳೆ ಗಾಳಿಗಳ ರಭಸದೊಂದಿಗೆ ಆತನ ಕೈಯ ರಭಸವೂ ಹೆಚ್ಚುತ್ತ ಬಂದಿತು. ಮದೋನ್ಮತ್ತನಾದವನಂತೆ ಆತ ಹುಚ್ಚು ಹುಚ್ಚಾಗಿ ಕಮಾನು ಎಳೆಯತೊಡಗಿದ. ನಾದತರಂಗ ಭೀಮಾಕಾರ ತಳೆದು ಮಹಾಪೂರದ ಹೊಳೆಯಂತೆ ಕನಲಿ ರೌದ್ರವಾಗಿ ಗರ್ಜಿಸತೊಡಗಿತು.

ಸರಸು ನಿಂತು ನೋಡುತ್ತಲೇ ಇದ್ದಳು; ಕೇಳುತ್ತಲೇ ಇದ್ದಳು. ಗಾರುಡಿಗನ ಪುಂಗಿಯ ನಾದಕ್ಕೆ ಮನಸೋತು ಹೆಡೆ ಹಾಕುವ ನಾಗಿಣಿಯಂತೆ ಆಕೆಯ ದೇಹ ಸೂಕ್ಷ್ಮವಾಗಿ ಕಂಪಿಸುತ್ತಲಿತ್ತು.

[೨]

ಸರಸುವಿನ ಶರೀರ ಕಂಪಿಸುತ್ತಲಿತ್ತು, ನಿಜ.

ಅದರೊಂದಿಗೆ ಆಕೆಯ ಹೃದಯದಲ್ಲಿ ಒಂದು ಬಗೆಯ ವಿಚಿತ್ರ ಶಾಂತತೆಯೂ ಒಡಮೂಡಿದಂತಿದ್ದಿತು.

ನಾಲ್ಕೈದು ನಿಮಿಷಗಳ ಹಿಂದೆ ಆಕೆಯ ಮನಸ್ಸಿನಲ್ಲಿ ತೊತ್ತಳದುಳಿಯುತ್ತಿದ್ದ ವಿಕಾರಭಾವವೆಲ್ಲ ಗಾಳಿಗೆ ಸಿಕ್ಕ ಅರಳೆಯಂತೆ ಹಾರಿಹೋದ ಹಾಗಾಗಿದ್ದಿತು. ಅಲ್ಲಮ....ಮಾಯಾದೇವಿ....ಸ್ವಾಮಿ....ಅವರ ಆ ಹುಲಿಯಂಥ ಕಣ್ಣಗೊಂಬೆ....ಆ ವಿಲಕ್ಷಣ ಶಕ್ತಿ ಬೆರೆತ ದೃಷ್ಟಿ....ಆ ಮೋಹದ ಮಹಾಪೂರ....ಕಾಮದ ಕೋಲಾಹಲ, ಎಲ್ಲವೂ ಮರೆಯಾಗಿ ಆಕೆಯ ಮನಸ್ಸು ಸ್ವಚ್ಛವಾದ ಸರೋವರದಂತೆ ಶುಚಿಯಾಗಿದ್ದಿತು. ಎಂಥ ದಿವ್ಯ ಶಕ್ತಿಯಿದ್ದಿತೋ ಆ ಪಿಟೀಲಿನ ರಾಗದಲ್ಲಿ! ಅದರ ಒಂದೊಂದು ತಾನವೂ, ಒಂದೊಂದು ಅಲೆಯಂತೆ ಆಕೆಯ ಹೃದಯಕ್ಕೆ ಬಡಿದು ವಿಕಾರದ ಕೊಳೆಯನ್ನೆಲ್ಲ ತೊಳೆದು ನಿರ್ಮಲಗೊಳಿಸಿದಂತಿದ್ದಿತು.

ಆ ಯುವಕ ಇನ್ನೂ ಬಾರಿಸುತ್ತಲೇ ಇದ್ದ. ಆಕೆ ಹಾಗೇ ನೋಡುತ್ತಲೇ ಇದ್ದಳು. ಎಷ್ಟು ಸಲ ಹೀಗೇ ಆಕೆ ಕಿಟಕಿಯಲ್ಲಿ ನಿಂತುಕೊಂಡಿರಲಿಲ್ಲ.... ಎಷ್ಟು ಸಲ ಅದೇ ರಾಗವನ್ನಾಲಿಸಿರಲಿಲ್ಲ....ಜೀವನದಿಂದ ನಿರ್ಲಿಪ್ತವಾದಂತಿದ್ದರೂ ಜೀವವನ್ನು ಚೇತರಿಸುವ ಆ ರಾಗ..ಅದು ಕಿವಿಗೆ ಬಿದ್ದಾಗಲೆಲ್ಲ ಸರಸು ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದಳು. ಆ ಲೋಕದಲ್ಲಿ ಕಸವಿರಲಿಲ್ಲ, ಕೊಳೆಯಿರಲಿಲ್ಲ, ವಿಕಾರವಿರಲಿಲ್ಲ, ಉದ್ರೇಕವಿರಲಿಲ್ಲ. ಸುಖವಿದ್ದಿತೆ? ಸಂತೋಷವಿದ್ದಿತೇ? ಇತ್ತು ಎನ್ನಲೂ ಸಾಧ್ಯವಿರಲಿಲ್ಲ. ಒಂದು ಬಗೆಯ ಅನುಪಮ ಶಾಂತಿಯು ಅನುಭವವಾಗುತ್ತಿದ್ದಿತಾದರೂ ಆ ಶಾಂತಿಯೊಂದಿಗೆ ವಿಚಿತ್ರವೂ ದಾರುಣವೂ ಆದ ವೇದನೆಯೊಂದು ಕರುಳನ್ನು ಕಲಮಲಗೊಳಿಸಿದಂತಾಗುತ್ತಿತ್ತು. ಕೇಳುವವರನ್ನು ಮುದಗೊಳಿಸುವ ಹಾಗೆ ಪಿಟೀಲು ನುಡಿಸುವುದು ತಿಳಿದಿದ್ದಿತೊ ಇಲ್ಲವೊ ಆ ಯುವಕನಿಗೆ. ತಿಳಿದಿದ್ದರೂ ತಿಳಿದಿರಬಹುದು—ಆದರೆ ಅಂಥ ಉಲ್ಲಸದ ರಾಗವನ್ನು ಬಾರಿಸಲು ಆತನಿಗೆ

ಮನಸ್ಸೇ ಇದ್ದಿರಲಾರದು. ಆತನಿರುವ ಹಾಗೆ ಆತನ ರಾಗ. ವ್ಯಕ್ತಿಯೂ ಉದಾಸೀನ. ಆತನ ಕಲೆಯೂ ಉದಾಸೀನ....

ಆತನ ಈ ಉದಾಸೀನತೆಗೆ, ಈ ದಾರುಣವ್ಯಥೆಗೆ ಏನು ಕಾರಣವೊ, ಎಂದು ಸರಸು ಯೋಚಿಸಿದ ದಿನಗಳೆಷ್ಟೊ. ತಿಂಗಳಿಗೆ ಹಿಂದೆ ಆತ ತಮ್ಮ ಮನೆಯ ಎದುರಿನ ಮನೆಯನ್ನು ಬಾಡಿಗೆ ಹಿಡಿದು ಅದರಲ್ಲಿರಲು ಬಂದಂದಿನಿಂದ ಆಕೆ ಯೋಚಿಸಿ ಯೋಚಿಸಿ ಯಾವುದೂ ಬಗೆಹರಿಯದೆ ಹತಾಶಳಾಗಿ ಕೈ ಚೆಲ್ಲಿದ್ದುಂಟು. ಎದುರಿನ ಆ ಮನೆಯಲ್ಲಿ ಅನೇಕ ದಿನಗಳವರೆಗೆ ಜನವಸತಿ ಯಿರಲಿಲ್ಲ. ವ್ಯಾಪಾರಿಯೊಬ್ಬ ಅದನ್ನು ಉಗ್ರಾಣವನ್ನಾಗಿ ಮಾಡಿಕೊಂಡಿದ್ದ. ಹೊರಗಿನ ಕೊಟಡಿ ಬಹುದಿನ ಹಾಗೆಯೆ ತೆರವಾಗಿ ಬಿದ್ದಿತ್ತು. ಅಷ್ಟು ದಿನ ಭಣ ಭಣ ಎನ್ನುತ್ತಿದ್ದ ಆ ಮನೆಯಲ್ಲಿ ಆತ ಅಡಿಯಿರಿಸಿದಂದಿನಿಂದ ಅಲ್ಲಿ ದೀಪ ಉರಿಯುತ್ತಿತ್ತು. ಅದರೊಂದಿಗೆ ಆ ಪಿಟೀಲಿನ ವಿಲಕ್ಷಣ ರಾಗಾಲಾಪ ನೆಗೂ ಪ್ರಾರಂಭವಾಗಿತ್ತು. ರಾತ್ರಿಕಾಲದಲ್ಲಿ ಹಾಳು ಹಾಳು ಸುರಿಯುತ್ತಿದ್ದ ಆ ಮನೆಗೆ ಈ ಯುವಕ ಬಂದಂದಿನಿಂದ ಸಹಜವಾಗಿಯೆ ಸರಸುವಿಗೆ ಸಂತೋಷವಾಗಿತ್ತು. ರಾತ್ರಿಯ ಊಟ ಮುಗಿಯುತ್ತಲೂ ಅಟ್ಟದ ಮೇಲಿನ ಕೊಟಡಿಗೆ ಬಂದು ಕೈಯಲ್ಲಿ ಪುಸ್ತಕವೊಂದನ್ನು ಹಿಡಿದುಕೊಂಡು ಮಂಚದ ಮೇಲೆ ಉರುಳಿಕೊಳ್ಳುತ್ತಿದ್ದಳು. ಇತ್ತ ಆಕೆಯ ವಾಚನ ಸಾಗುತ್ತಿತ್ತು. ಅತ್ತಲಿಂದ ಪಿಟೀಲಿನ ರಾಗ ಕೇಳಬರುತ್ತಿತ್ತು. ಮೊದಲು ಮೊದಲು ಆತ ಸಂಕೋಚದಿಂದ, ಕೊಂಚ ಭೀತಿಯಿಂದ ಬಾರಿಸುತ್ತಿದ್ದ. ನೆರೆಹೊರೆಯವರು ಈ ರಾಗವನ್ನು ಕೇಳಿ ಎಲ್ಲಿ ಮುನಿದುಕೊಳ್ಳುವರೊ ಎಂಬ ಆಶಂಕೆಯಿದ್ದಿರ ಬಹುದು. ಅವರು ಮುನಿದುಕೊಳ್ಳುವುದೂ ಅಸಹಜವಾಗಿರಲಿಲ್ಲ. ರಾತ್ರಿ ಅಪರಾತ್ರಿಯಲ್ಲಿ ಆತ ಹಠಾತ್ತಾಗಿ ಎದ್ದು ಹುಚ್ಚು ಹುಚ್ಚಾಗಿ ಬಾರಿಸುತ್ತಿ ದ್ದುದೂ ಇತ್ತು. ಬಸಪ್ಪ ಸೆಟ್ಟರು, ನಾಗಮ್ಮನವರು ಇಬ್ಬರೂ ಒಂದು ಸಲ ಆ ಬಗೆಗೆ ಬೇಸರಪಟ್ಟುಕೊಂಡುದನ್ನಾಕೆ ಕೇಳಿದ್ದಳು.

"ಅದೇನು ಇಂಥ ರಾತ್ರಿಯಲ್ಲಿ ನಾಯಿ ಬಗುಳಿದ ಹಾಗೆ ಗದ್ದಲ ಮಾಡುತಾನಲ್ಲ ಆತನಿಗೇನು ಹುಚ್ಚೋ ಕಾಣೆ!" ಎಂದಿದ್ದಳು ನಾಗಮ್ಮ.

"ಈಗಿನ ಕಾಲದ ಹುಡುಗರು. ಅವರಿಗೆ ಹೇಳಿ ಉಪಯೋಗವಿಲ್ಲ," ಎಂದು ನುಡಿದು ಸುಮ್ಮನಾಗಿದ್ದರು ತಂದೆ.

ತಂದೆ ತಾಯಿಗಳಿಗೆ ಬೇಸರು ಬಂದಿದ್ದರೂ ಆ ಪಿಟೀಲಿನ ರಾಗದಿಂದ ತನಗೆ ಮಾತ್ರ ಎಂದೂ ಬೇಸರವಾಗಿರಲಿಲ್ಲ. ಒಂದೊಂದು ರಾತ್ರಿ ಬೆಳಗಿನ ಜಾವದಲ್ಲೆದ್ದು ಆತ ಬಾರಿಸುತ್ತ ಕುಳಿತುಕೊಳ್ಳುತ್ತಿದ್ದ. ಕೊಟಡಿಯಲ್ಲಿ ದೀಪವೂ ಇರುತ್ತಿರಲಿಲ್ಲ. ಕತ್ತಲೆಯಲ್ಲೇ ಕುಳಿತುಕೊಂಡು ಆತ ಪಿಟೀಲು ನುಡಿಸುತ್ತಿದ್ದ ಹಾಗೆ ವಿಲಕ್ಷಣವಾದ ಬೆಳಕೊಂದು ಸುತ್ತಲಿನ ಸೀಮೆಯನ್ನೆಲ್ಲ ಬೆಳಗಿಸಿದ್ದಂತೆ ಭಾಸವಾಗುತ್ತಿತ್ತು ಸರಸೂಗೆ. ಆತನ ಕೊಟಡಿಯಲ್ಲಿ ದೀಪದ ಬೆಳಕಿಲ್ಲದಿದ್ದಾಗಲೂ ಆಕೆಯ ಕಣ್ಣು ಆತನನ್ನು ಗುರುತಿಸುತ್ತಿದ್ದುವು. ಗೋಡೆಗೊರಗಿ ಕಣ್ಣು ಮುಚ್ಚಿ ಕುಳಿತ ಭಂಗಿ....ನಸು ಬಾಗಿ ಗಂಟಿಕ್ಕಿಕೊಂಡ ಹುಬ್ಬು....ಹಣೆಯ ಮೇಲೆ ಸ್ವಚ್ಛಂದವಾಗಿ ಹರಡಿದ ಮುಂಗೂದಲು.... ಪಿಟೀಲನ್ನು ಬಾಚಿ ಹಿಡಿದ ಎಡಗೈ....ಅದರ ಮೇಲೆ ಓಡಿಯಾಡುವ ಬಲಗೈಯ ರಭಸ....ಅದೆಲ್ಲವೂ ಆಕೆಯ ಚಿತ್ತ ಫಲಕದ ಮೇಲೆ ಗೆರೆಗೆರೆಯಾಗಿ ಮೂಡಿ ಚಿತ್ರದ ರೂಪು ತಳೆದು ಜೀವವನ್ನು ಪಡೆದಂತಾಗಿದ್ದಿತು. ಹಾಸಿಗೆಯಲ್ಲಿ ಹೊರಳಾಡಿ ನಿದ್ರೆ ಬರದಂತಾದಾಗ ಆಕೆ ಎದ್ದು ಬಂದು ಕಿಟಕಿಯಲ್ಲಿ ಕುಳಿತು ಆ ರಾಗವನ್ನಾಲಿಸುವಳು. ಮೇಲೆ ಗಗನದಲ್ಲಿ ಲಕ್ಷೋಪಲಕ್ಷ ತಾರೆಗಳ ಸ್ವೇಚ್ಛಾವಿಹಾರ....ಪೂರ್ವದಿಂದ ಬೀಸಿಬರುವ ತಂಗಾಳಿಯಲ್ಲಿ ತೇಲಿಬರುವ ಇರುಳ ರಾಣಿಯ ಹೂವಿನ ಮೋಹಕ ಪರಿಮಳ....ಆ ಪಿಟೀಲಿನ ಕರುಣಾ ಕ್ರಂದನ....ಕೇಳುತ್ತ ಕೇಳುತ್ತ ಹಾಗೆಯೆ ಮೇಜಿನ ಮೇಲೆ ತಲೆಯನ್ನಿರಿಸಿ ಆಕೆ ನಿದ್ರೆಹೋದ ದಿನಗಳೂ ಇದ್ದುವು....

ಇಂದೂ ಹಾಗೆಯೆ ಆಯಿತು.

ಪಿಟೀಲಿನ ರಾಗವನ್ನಾಲಿಸುತ್ತಿದ್ದ ಹಾಗೆ ಆಕೆಗೆ ನಿದ್ರೆ ಬರುವ ಹಾಗೆ ತೋರತೊಡಗಿತು. ಎದ್ದು ಮಂಚದ ಮೇಲೆ ಪವಡಿಸಬೇಕೆಂಬ ವಿಚಾರವೂ ಆಕೆಗೆ ಬರಲಿಲ್ಲ. ತೋಳುಗಳೆರಡನ್ನೂ ಮೇಜಿನ ಮೇಲೆ ಹರಡಿ ಅವುಗಳ ಮೇಲೆ ತಲೆಯನ್ನಿರಿಸಿದಳು.

"ಇನ್ನೂ ನೋವು ಹೋಗಿಲ್ಲವೇನೇ ತಾಯಿ?"

ಮಾತನಾಡಿದವಳು ರುದ್ರಪ್ಪಜ್ಜಿ. ಕೊಂಚವೂ ಸದ್ದಾಗದಂತೆ ಯಾವಾಗ ಬಂದಿದ್ದಳೊ. ಕೈಯಲ್ಲಿದ್ದ ಕಾಫಿಯ ಕಪ್ಪನ್ನು ಮೆಲ್ಲಗೆ ಕೆಳಕ್ಕಿಟ್ಟು ಸರಸುವಿನ ತಲೆಯ ಮೇಲೆ ಕೈಯಿಟ್ಟಳು. ಯಾವಾಗಲೂ

ಹಾಗೆಯೆ ಆಕೆ. ತಾನು ಬರುತ್ತಿರುವುದರ ಸುಳಿವೂ ತಿಳಿಯದಂತೆ, ಹನಿ ಬಂದ ಹಾಗೆ ಬರುತ್ತಾಳೆ. ಮೆಟ್ಟಲುಗಳನ್ನೇರಬೇಕಾದರೆ ಎಂಥವರಾದರೂ ಸರಿಯೆ, ಅಷ್ಟಿಲ್ಲ ಇಷ್ಟು ಸದ್ದು ಆಗಿಯೆ ಆಗುತ್ತದೆ. ಅದಿಲ್ಲವಾದರೂ ಬಳೆಗಳ ಸದ್ದು, ಸೀರೆಯ ನಿರಿಗಳ ಮರ್ಮರರವವಾದರೂ ಇದ್ದೇ ಇರುತ್ತದೆ. ಆದರೆ ಅದ್ಭುತ ವ್ಯಕ್ತಿ ಈ ರುದ್ರಪ್ಪಜ್ಜಿ! ಕೊಂಚವೂ ಸದ್ದಾಗದಂತೆ ಬರುತ್ತಾಳೆ—ನೆರಳು ಬಂದ ಹಾಗೆ. ಆಕೆ ಬರುವುದೂ ಗೊತ್ತಾಗುವುದಿಲ್ಲ, ಹೋಗುವುದೂ ಗೊತ್ತಾಗುವುದಿಲ್ಲ; ಹತ್ತಿರ ಇದ್ದಾಗ ಮಾತ್ರ ತನ್ನ ಪ್ರೀತಿಯಿಂದ, ವಾತ್ಸಲ್ಯದಿಂದ, ಅಕ್ಕರತೆಯಿಂದ, ಕರುಣೆಯಿಂದ ಆಕೆ ಎಲ್ಲರನ್ನೂ ಬಳಸಿ ನಿಲ್ಲುತ್ತಾಳೆ. ಆಕೆ ಸನಿಯದಲ್ಲಿದ್ದಾಗ ಇತರರಿಗೆಲ್ಲ ತಾವು ತೀರ ಸಣ್ಣವರೆಂಬ ಭಾವನೆ ಬರುತ್ತದೆ. ಬಸಪ್ಪ ಸೆಟ್ಟರು, ನಾಗಮ್ಮನವರು ಸಹ ರುದ್ರಪ್ಪಜ್ಜಿಯನ್ನು ಗೌರವದಿಂದಲೂ ಆದರದಿಂದಲೂ ಕಾಣುತ್ತಾರೆ. ಸರಸು ಗೌರಿಯರಿಗಂತೂ ತಾಯಿಯ ಹಾಗಿದ್ದಾಳೆ ಆಕೆ.

"ಕಾಫಿ ತಂದಿದ್ದೀನಿ ಸರಸೂ."

ಸರಸೂ ತಲೆಯನ್ನು ಮೇಲಕ್ಕೆತ್ತಿ ಅಜ್ಜಿಯ ಮುಖದ ಕಡೆಗೆ ದೃಷ್ಟಿ ತಿರುಗಿಸಿದಳು. ಏಕೊ ಏನೊ ಹಠಾತ್ತಾಗಿ ಆಕೆಯ ಕತ್ತು ಬಿಗಿದು ಬಂದಿತು. ಕಣ್ಣುಗಳಲ್ಲಿ ಒಂದೆರಡು ಹನಿಗಳೂ ಕಾಣಿಸಿಕೊಂಡುವು.

ಪ್ರೀತಿಯಿಂದ ಸರಸುವಿನ ಬೆನ್ನಮೇಲೆ ಕೈಯನ್ನಾಡಿಸುತ್ತ ಅಜ್ಜಿ ಕೇಳಿದಳು:

"ಯಾಕೆ ಸರಸೂ, ಮೈಯಲ್ಲಿ ನೆಟ್ಟಗಿಲ್ಲವೆ? ನಿನಗಾದುದಾದರೂ ಏನು ಇವೊತ್ತು? ಏಕೆ ಹೀಗಿರುವೆ?"

ತನಗಾದುದಾದರೂ ಏನು? ಏಕೆ ಹೀಗಾಗಿದೆ? ಈ ಪ್ರಶ್ನೆಗೆ ಸರಸುವಿನಲ್ಲಿ ಉತ್ತರವಿರಲಿಲ್ಲ. ತನಗೆ ಏನೊ ಆಗಿದೆಯೆಂಬುದು ಮಾತ್ರ ನಿಜ.... ಏನೊ ಆಗಿದೆ. ಏನೊ ಬದಲಾವಣೆಯಾಗಿದೆ ತನ್ನ ಅಂತರಾಳದಲ್ಲಿ. ವಿಚಿತ್ರವಾದ, ವಿಲಕ್ಷಣವಾದ ಭಾವಗಳ ರಂಗಶಾಲೆಯಾಗಿದೆ ತನ್ನ ಹೃದಯ. ಆ ಅಲ್ಲಮ ಮಾಯಾ ಪ್ರಸಂಗ....ಈ ಪಿಟೀಲಿನ ಆಕ್ರಂದನ....ತನಗೆ ಅಳುವುಕ್ಕಿ ಬರುತ್ತಿದೆ. ವಿಚಿತ್ರವಾದ ಅಳು....

"ಕಾಫಿ ಕುಡಿದು ಮಲಕ್ಕೊಂಡುಬಿಡು ತಾಯಿ. ಮಳೆಗಾಲದ ದಿನ. ಹರಯದ ಹೆಣ್ಣುಮಗಳು ಹೀಗೆ ಹೊರಗೆ ತಿರುಗಾಡಬಾರದು. ಗಾಳಿ ಬಡಿದು ಹೀಗಾಗುತ್ತದೆ," ಎಂದು ನುಡಿದು ರುದ್ರಪ್ಪಜ್ಜಿ ಕೊಂಚ ಬಲವಂತ ದಿಂದಲೇ ಆಕೆಗೆ ಕಾಫಿ ಕುಡಿಸಿದಳು. ಮಂಚದ ಕಡೆಗೆ ತಿರುಗಿನೋಡಿ ಗೌರಿಯನ್ನು ಕಂಡು ತುಟಿಗಳಲ್ಲಿಯೆ ನಕ್ಕು—"ಹ್ಯಾಗೆ ರಾಜಕುಮಾರಿಯು ಹಾಗೆ ಮಲಗಿದಾಳೆ ನೋಡು ತುಂಟೆ!" ಎಂದು ನುಡಿದು ಸರಸುವನ್ನು ಕರೆದುತಂದು ಹಾಸಿಗೆಯ ಮೇಲೆ ಮಲಗಿಸಿದಳು.

ಮಳೆಯ ರಭಸ ಕೊಂಚ ಕಡಿಮೆಯಾಗಿತ್ತು. ಆ ಯುವಕನ ಪಿಟೀಲು ಮಾತ್ರ ತನ್ನ ಆವೇಶವನ್ನು ತ್ಯಜಿಸಿರಲಿಲ್ಲ. ರಾತ್ರಿಯ ನೀರವತೆಯನ್ನು ಭೇದಿಸಿಕೊಂಡು ಅಲೆ ಅಲೆಯಾಗಿ ಹರಿದು ಬರುತ್ತಿತ್ತು ಆ ವಿಲಕ್ಷಣ ನಾದ.

"ಈತನಿಗೇನು ಹುಚ್ಚೊ ತಿಳಿಯದವ್ವ. ಹಗಲು ಅನ್ನುವಂತಿಲ್ಲ, ರಾತ್ರಿ ಅನ್ನುವಂತಿಲ್ಲ—ಒಂದೇ ಸಮನೆ ಬಾರಿಸುತ್ತಲೇ ಇರುತಾನೆ. ಸದಾಶಿವ ನಿಗೆ ಅದೇ ಧ್ಯಾನ ಅಂದ ಹಾಗೆ ಇವನಿಗೆ ಬರೀ ಪಿಟೀಲಿಂದೇ ಧ್ಯಾನ. ಹುಚ್ಚು ಹುಡುಗ!" ಎಂದು ನಕ್ಕಳು ರುದ್ರಪ್ಪಜ್ಜಿ.

"ಯಾರವ್ವಾ ಆತ? ನಿನಗೆ ಗೊತ್ತೇ?" ಎಂದು ಹೆದರುತ್ತ ಹೆದರುತ್ತ ಕೇಳಿದಳು ಸರಸು.

"ಪಾಪ, ಯಾರೋ ಪರದೇಶಿಯಿದ್ದ ಹಾಗೆ ಇದಾನೆ. ಯಾವಾಗ ನೋಡಿದರೂ ತಲೆ ಕೆಳಕ್ಕೆ ಬಾಗಿಸಿಕೊಂಡು ಬಾಡಿದ ಮುಖದಿಂದಲೇ ಇರುತ್ತಾನೆ. ತಿಂಗಳಾಗಿರಬೇಕು ಆತ ಆ ಮನೆಗೆ ಬಂದು. ಒಂದು ದಿನವೂ ಆತ ನಗುತ್ತ ಇದ್ದುದನ್ನು ನಾ ನೋಡಲಿಲ್ಲ."

"ಏನಾಗಿರಬಹುದು ಅಜ್ಜೀ ಆತನಿಗೆ?"

"ಏನಾಗಿದೆಯೊ ಏನು ಮಣ್ಣೊ. ನೋಡಿದರೆ ಕಲಿತವನ ಹಾಗೆ ಕಾಣುತ್ತಾನೆ. ಕೋಣೆಯ ತುಂಬ ಪುಸ್ತಕಗಳ ರಾಶಿಯೆ ರಾಶಿ. ಆಗಾಗ ಪುಸ್ತಕ ಹಿಡಿದುಕೊಂಡು ತಾಸು ತಾಸು ಗಟ್ಟಲೆ ಓದುತ್ತಲಿರುತ್ತಾನೆ—ಒಂದೊಂದು ದಿನ ಪುಸ್ತಕ ಹಿಡಿಯುವದೇ ಇಲ್ಲ. ಬರೀ ಪಿಟೀಲು. ಅದರ ಕಿರಿಕಿರಿಯಿಂದಾಗಿ ರಾತ್ರಿಯೆಲ್ಲಾ ನಿದ್ರೆಯೆ ಹತ್ತುವದಿಲ್ಲ ಒಮ್ಮೊಮ್ಮೆ."

"ಹೀಗ್ಯಾಕೆ ಮಾಡುತ್ತಾನೆ ಅಜ್ಜೀ ಆತ?"

"ಏನೊ, ಯಾರಿಗೆ ಗೊತ್ತವ್ವ."

"ವಿಚಿತ್ರ ಮನುಷ್ಯ! ತಂದೆ ತಾಯಿ ಯಾರೂ ಇದ್ದ ಹಾಗೆ ಕಾಣುವದಿಲ್ಲ ಆತನಿಗೆ ಅಲ್ಲವೇ ಅಜ್ಜಿ?"

"ಇದ್ದ ಹಾಗಿಲ್ಲ. ಯಾರಾದರೂ ಇದ್ದರೆ ಈತ ಹೀಗೆ ಹುಚ್ಚನ ಹಾಗೆ ಮಾಡಲು ಬಿಡುತ್ತಿದ್ದರೇ? ಪಾಪ, ಒಬ್ಬೊಂಟಿಯಾಗಿರಬೇಕು. ಏನು ದುಃಖವೊ, ಏನು ನೋವೊ ಬಲ್ಲವರಾರವ್ವ? ಈ ಪ್ರಪಂಚದಲ್ಲಿ ಇದೆಲ್ಲ ಇದ್ದೇ ಇರುತ್ತದಲ್ಲ...." ಎಂದು ನುಡಿದು ಸರಸುವಿನ ಎದೆಯುವರೆಗೂ ರಗ್ಗು ಹೊದಿಸಿ ಅಜ್ಜಿ ಮೇಲಕ್ಕೆದ್ದಳು.

"ತಲೆಗೆ ಮಫ್ಲರ್ ಕಟ್ಟಲಾ ಸರಸೂ?"

"ಏನೂ ಬೇಡ ಅಜ್ಜಿ."

"ನೀಲಗಿರಿ ಎಣ್ಣೆ ಹಚ್ಚಿ ತಿಕ್ಕಲಾ?"

"ಬೇಡ ಅಜ್ಜಿ. ನನಗೆ ನಿದ್ರೆ ಬರುತ್ತಿದೆ. ಮಲಗಿಕೊಳ್ಳುತ್ತೇನೆ," ಎಂದು ನುಡಿದು ಸರಸೂ ಕಣ್ಣು ಮುಚ್ಚಿಕೊಂಡಳು.

ಮತ್ತೊಂದು ಸಲ ಸರಸುವನ್ನೂ ಗೌರಿಯನ್ನೂ ಕಣ್ಣುತುಂಬ ನೋಡಿ ಮೇಜಿನ ಮೇಲಿದ್ದ ದೀಪವನ್ನು ಸಣ್ಣಗೆ ಮಾಡಿ ರುದ್ರವ್ವಜ್ಜಿ ಹೊರಟುಹೋದಳು. ಆಕೆ ಕೊಟಡಿಯಿಂದ ಹೊರಡುವತನಕ ಕಣ್ಣು ಮುಚ್ಚಿಕೊಂಡಿದ್ದ ಸರಸು ಪುನಃ ಅವುಗಳನ್ನು ತೆರೆದಳು. ಅಂದು ಆಕೆಗೆ ನಿದ್ರೆ ಬರುವ ಯೋಗವಿರಲಿಲ್ಲ.

ಹೊರಗಡೆ ಮಳೆ ಪೂರ್ಣವಾಗಿ ನಿಂತುಹೋಗಿತ್ತು.

ಪಿಟೀಲಿನ ಆವೇಶವೂ ನಿಧಾನವಾಗಿ ಕುಗ್ಗುತ್ತ ಬಂದು ಕೊನೆಗೆ ಸ್ವರವೂ ನಿಂತುಹೋಯಿತು.

ಕುತೂಹಲದಿಂದ ಸರಸು ಮಂಚವನ್ನಿಳಿದು ಕಿಟಕಿಯ ಬಳಿ ಬಂದು ಆ ಕೊಟಡಿಯ ಕಡೆಗೆ ದೃಷ್ಟಿ ತಿರುಗಿಸಿದಳು.

ಪಿಟೀಲಿನ ಧ್ವನಿಯೊಂದಿಗೆ ದೀಪದ ಬೆಳಕೂ ಮಾಯವಾಗಿದ್ದಿತೇನೊ.

ಕಣ್ಣೊರಿಯುವ ಆ ಕತ್ತಲಲ್ಲಿ ಆಗಾಗ ಬೆಂಕಿಯ ತುಂಡೊಂದು ಹಾಗೆ ಹೀಗೆ ಅಲೆದಾಡುತಿತ್ತು.

ಆ ಯುವಕ ಸಿಗರೇಟು ಸೇದುತ್ತ ಕುಳಿತಿದ್ದ. ಸಿಗರೇಟು—ಪಿಟೀಲು ಪಿಟೀಲು—ಸಿಗರೇಟು !

ಒಂದೆರಡು ನಿಮಿಷ ಸರಸು ಅಲ್ಲಿಯೆ ನಿಂತುಕೊಂಡು ಆ ಸಿಗರೇಟಿನ ಚಲನವಲನಗಳನ್ನು ನಿರುಕಿಸುತ್ತಲಿದ್ದಳು. ಅನಂತರ ಮತ್ತೆ ಮಂಚದ ಮೇಲೇರಿ ತಲೆತುಂಬಾ ಹೊದೆದುಕೊಂಡು ಗೌರಿಯ ಕಡೆಗೆ ಮಗ್ಗುಲಾಗಿ ಮಲಗಿಕೊಂಡಳು.

ಗೌರಿ ಕನಸು ಕಾಣುತ್ತಿದ್ದಳೊ ಏನೊ. ನಿದ್ದೆಗಣ್ಣಿನಲ್ಲಿಯೆ ಅಕ್ಕನನ್ನು ತಬ್ಬಿಕೊಂಡು ಬಡಬಡಿಸಿದಳು :

"ನಾ ಮದುವೆಯಾಗೋಲ್ಲ ಅಕ್ಕ. ಎಂ—ದೆಂ—ದೂ ಮದುವೆಯಾಗೋಲ್ಲ....ಎಂ—ದೆಂ—ದೂ...."

ಸರಸು ಮೆಲ್ಲನೆ ನಕ್ಕು, ತಂಗಿಯ ಕೆನ್ನೆಗಳನ್ನು ಮೃದುವಾಗಿ ತೀಡ ತೊಡಗಿದಳು.

[೩]

"ನಾ ಮದುವೆಯಾಗೋಲ್ಲ ಅಪ್ಪ. ಎಂ—ದೆಂ—ದೂ ಮದುವೆಯಾಗೋಲ್ಲ....ಎಂ—ದೆಂ—ದೂ !" ತಾಯಿಯನ್ನು ತಬ್ಬಿಕೊಂಡು ತಾನು ಕಂಬನಿಗರೆಯುತ್ತಿದ್ದಳು.

"ಹುಚ್ಚಿಯೇ ಹುಚ್ಚಿ ! ಹುಚ್ಚ ನನ್ನ ಮಗಳೆ! ಅಂತೆ, ಮದುವೆಯಾಗೋಲ್ಲವಂತೆ ! ಹೆಣ್ಣಾಗಿ ಹುಟ್ಟಿದ ಮೇಲೆ ಮದುವೆಯಾಗದಿರಲಾಗುತ್ತೆಯೆ ? ಹೆಣ್ಣಿನ ಬಾಳೆಂದರೆ ಹೀಗೇ ತಾಯಿ. ಮದುವೆಯಾಗಬೇಕು. ಗಂಡನ ಮನೆಗೆ ಹೋಗಬೇಕು. ಬಾಳ್ವೆಮಾಡಬೇಕು," ಎನ್ನುತ್ತಿದ್ದಳು ತಾಯಿ.

ಆಗ ತನಗಿನ್ನೂ ಹದಿಮೂರು ವರುಷ. ಮುಗ್ಧ ಬಾಲೆ. ಮದುವೆಯೆಂದರೇನೆಂಬುದು ಸರಿಯಾಗಿ ತಿಳಿಯದು. ಆ ವರುಷ ಮುಲ್ಕೀ ಪರೀಕ್ಷೆಗೆ ಕಟ್ಟಿದ್ದಳು. ಆ ಪರೀಕ್ಷೆ ದಾಟಿ ಇಂಗ್ಲಿಷು ಶಾಲೆಗೆ ಹೋಗಿ ಮ್ಯಾಟ್ರಿಕ್ ಆದರೂ ಮುಗಿಸಬೇಕೆಂದು ಯೋಚಿಸಿಕೊಂಡಿದ್ದಳು. ಮದುವೆಯಾಗುವುದೆಂದರೆ ಅಭ್ಯಾಸ ಅಲ್ಲಿಗೇ ನಿಂತ ಹಾಗೆ. ಮುಂದೆ ಇಂಗ್ಲಿಷು ಓದಲು ಸಾಧ್ಯ

ವಾಗಲಾರದು. ಮ್ಯಾಟ್ರಿಕ್‌ನ ಕನಸು ಕೇವಲ ಕನಸಾಗಿಯೆ ಉಳಿಯುವುದು ಮದುವೆ....! ವಿದ್ಯಾಭ್ಯಾಸಕ್ಕೆ ಕಲ್ಲು ಹಾಕುವ ಆ ಮದುವೆ ತನಗೆ ಬೇಡವಾಗಿತ್ತು.

ತನಗೆ ಬೇಡವಾಗಿದ್ದಿತಾದರೂ ತನ್ನ ತಂದೆ ತಾಯಿಗಳು ಕೇಳಬೇಕಲ್ಲ! "ಕುಲೀನ ಮನೆತನದ ಹೆಣ್ಣು ಮಕ್ಕಳು ಹದಿಮೂರು ವರುಷಗಳ ತರುವಾಯ ಮದುವೆಯಾಗದೆ ಹಾಗೆಯೆ ಇರುವಂತಿಲ್ಲ." ತಮ್ಮ ಮನೆತನದ ಪ್ರತಿಷ್ಠೆಗೆ ಅದರಿಂದ ಕುಂದು ಬರುವುದು. ನೆರೆಹೊರೆಯುವರು ನಗದಿರರೇ? ಬಂಧು ಬಳಗದವರು ಆಡಿಕೊಳ್ಳದಿರರೇ?—

ಅಂತೆಯೆ ತನಗೆ ಇಷ್ಟವಿರದಿದ್ದರೂ ಎಲ್ಲವೂ ನಡೆದು ಹೋಗಿತ್ತು. ತನ್ನನ್ನು ನೋಡಲೆಂದು ವರನೂ ಆತನ ಹಿರಿಯರೂ ಬಂದ ಆ ದಿನ....

ಅಂದು ಸಾಲೆಗೆ ಹೋಗದೆ ತಾನು ಮನೆಯಲ್ಲಿಯೆ ಇರಬೇಕಾಗಿದ್ದಿತು. ವಿನಾಕಾರಣವಾಗಿ ಒಂದು ದಿನವೂ ಸಾಲೆ ತಪ್ಪಿಸಿದಾಕೆಯಲ್ಲ ತಾನು. ಅಂದು ಮನೆಯಲ್ಲಿ ಕೂತಿರಬೇಕಾದರೆ ತನಗೆ ವಿಪರೀತ ಸಿಟ್ಟು ಬಂದಿತ್ತು.

ಅಟ್ಟದ ಮೇಲಿನ ಇದೇ ಕೊಟಡಿಯಲ್ಲಿ ಇದೇ ಮಂಚದ ಮೇಲೆ ವರ ಮಹಾಶಯ ಕುಳಿತುಕೊಂಡಿದ್ದ. ಆತನಿಗೆ ಮೂವತ್ತು ವರ್ಷ ವಯಸ್ಸಾಗಿರಬಹುದು. ವಯಸ್ಸಿಗೆ ತಕ್ಕ ಶರೀರದಾರ್ಢ್ಯ ಆತನಿಗಿದ್ದಂತೆ ತೋರುತ್ತಿರಲಿಲ್ಲ. ವ್ಯಕ್ತಿ ಕುಳ್ಳಗೆ, ತೆಳ್ಳಗೆ. ಕಪ್ಪುಬಣ್ಣ. ಪುಟ್ಟ ಪುಟ್ಟ ಕಣ್ಣ ಗೊಂಬೆಗಳ ಮೇಲೆ ದಪ್ಪಗಿನ ಕನ್ನಡಕ. ನರೆತ ತಲೆಗೂದಲು.

ಪೀತಾಂಬರವನ್ನುಟ್ಟು, ಕಾಲುಗಳಲ್ಲಿ ಅಂದುಗೆ ಹಾಕಿಕೊಂಡು ತಾನು ಕೊಟಡಿಯಲ್ಲಿ ಅಡಿಯಿರಿಸಿದಾಗ ಆತನ ಆ ಕಳಾಹೀನ ದೃಷ್ಟಿ ತನ್ನನ್ನು ಕುತೂಹಲದಿಂದ ನಿರುಕಿಸಿದ್ದಿತು. ಆತನ ರೂಪವನ್ನೊಂದು ಸಲ ನೋಡಿದ ಬಳಿಕ ಮತ್ತೊಮ್ಮೆ ನೋಡಬೇಕೆನ್ನಿಸಲಿಲ್ಲ ತನಗೆ. ಆತ ಮಾತ್ರ ತನ್ನನ್ನೇ ರೆಪ್ಪೆ ಹೊಡೆಯದೆ ನೋಡುತ್ತಿದ್ದ ಹಾಗಿತ್ತು.

ಪ್ರಶ್ನೆಗಳನ್ನು ಕೇಳಿದರು. ಪುಸ್ತಕ ಓದಿಸಿಕೊಂಡರು. ಒಂದು ಹಾಡು ಹೇಳಿಸಿಕೊಂಡರು. ಯಂತ್ರವತ್ತಾಗಿ ಎಲ್ಲವನ್ನೂ ಮುಗಿಸಿ ತಾನು ಕೊಟಡಿಯಿಂದ ಹೊರಟು ಬಂದಿದ್ದಳು. ತನ್ನನ್ನು ಕಂಡು ಅವರೆಲ್ಲರೂ ಸಂತೋಷದಿಂದ ಒಪ್ಪಿಕೊಂಡಿದ್ದರು. ಆ ವರ ಮಹಾಶಯನಂತೂ ಸ್ವರ್ಗದಲ್ಲೇ

ವಿಹರಿಸುತ್ತಿದ್ದ ಹಾಗಿತ್ತು. ಊಟದ ಕಡೆಗೂ ಆತನಿಗೆ ಗಮನವಿರಲಿಲ್ಲ. ಅಂದು ಬೀಗರಿಗಾಗಿ ಅವ್ವ ಸೊಗಸಾದ ಸೇವಿಗೆ ಪಾಯಸ ಮಾಡಿದ್ದಳು. ವರನ ಜೊತೆಗೆ ಬಂದವರೆಲ್ಲ ನಾಲಗೆ ಚಪ್ಪರಿಸುತ್ತ ಪಾಯಸ ಕುಡಿದದ್ದೇ ಕುಡಿದದ್ದು. ಪಾಪ, ಆತನಿಗೆ ಮಾತ್ರ ಅದು ರುಚಿಸಿದಂತೆ ತೋರಲಿಲ್ಲ. ಆತನ ಮನಸ್ಸೆಲ್ಲ ತನ್ನ ಮೇಲೆಯೆ ಇದ್ದುದು ಸ್ಪಷ್ಟವಾಗಿತ್ತು. ಅವ್ವ ಒಳಗೊಳಗೇ ನಗುತ್ತಿದ್ದಳು. ತನಗೂ ನಗು ಬರುತ್ತಿತ್ತು. ಅದರೊಂದಿಗೆ ಕೊಂಚ ಕನಿಕರ. ಆತನ ಆ ವಿಕಾರ ರೂಪದ ಬಗೆಗೆ ಕನಿಕರ....

ಬೀಗರು ಹೊರಟುಹೋದ ಬಳಿಕ ರಾತ್ರಿ ತಂದೆತಾಯಿ ಮಾತನಾಡಿಕೊಳ್ಳುವುದು ತನ್ನ ಕಿವಿಗೆ ಬಿದ್ದಿತ್ತು. ತನ್ನ ತಾಯಿಗೂ ಆ ವರ ಸರಿಬಂದಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು.

"ಚೆನ್ನಾಗಿದ್ದಾನೆ ಅಂತ ಹೇಳುತ್ತಿದ್ದಿರಿ. ಇದೇನೇ ವರ? ರಂಭೆಯ ಹಾಗಿರುವ ನಮ್ಮ ಸರಸೂಗೆ ಇಂಥ ಕಾಮಣ್ಣನನ್ನು ಕಟ್ಟಬಿಡೋದೇ? ನಾನೊಲ್ಲೆ ತಾಯಿಾ. ನೋಡಿದವರು ಏನೆಂದಾರು!"

"ಅನ್ನುವವರ ಗಂಟೇನು ಹೋಗುತ್ತದೆ? ಬಣ್ಣ ಸ್ವಲ್ಪ ಕಪ್ಪಿದ್ದರೇನಾಯಿತು? ಬೇರೆ ಯಾವುದರಲ್ಲಿ ತೆಗೆದುಹಾಕುತ್ತೀ ಹುಡುಗನನ್ನ?"

ತನ್ನ ತಾಯಿ ನಕ್ಕು ನುಡಿದಿದ್ದಳು:

"ಹುಡುಗ! ಒಳ್ಳೆ ಮಾತೇ ಹೇಳ್ತೀರಲ್ಲ. ಆತನಿಗೆ ಹುಡುಗ ಅನ್ನೋದು ಸಾಹಸದ ಮಾತೇ. ಏನಿಲ್ಲ ಅಂದರೂ ಮೂವತ್ತು ವರ್ಷವಾದರೂ ಆಗಿವೆ ಆತನಿಗೆ. ಈ ರೂಪವನ್ನು ನೋಡಿ ಯಾರು ಹೆಣ್ಣು ಕೊಡಬೇಕು? ಅಂತೆಯೆ ಮದುವೆಯಾಗಿರಲಿಕ್ಕಿಲ್ಲ ಇನ್ನೂ...."

"ಹಾಗೆಲ್ಲ ತಿಳಿದುಕೊಳ್ಳಬೇಡ ನಾಗೂ. ಭಾರಿ ಶ್ರೀಮಂತರ ಮಗ. ದೊಡ್ಡ ವ್ಯಾಪಾರ. ದೊಡ್ಡ ಮನೆತನ. ಅಂಥವರ ಮನೆಗೆ ಹೆಣ್ಣು ಕೊಡಲು ಯಾರು ಸಿದ್ಧರಾಗಿರಲಿಕ್ಕಿಲ್ಲ? ನಮ್ಮ ಸರಸುವನ್ನು ಅವರು ಕೇಳಲು ಬಂದದ್ದು, ಒಪ್ಪಿಕೊಂಡದ್ದು ನಮ್ಮ ಭಾಗ್ಯ ಅಂತಲೇ ಹೇಳಬೇಕು. ಅಂಥ ಮನೆಯಲ್ಲಿ ಈಕೆ ರಾಣಿಯ ಹಾಗೆ ಇರಬಹುದು. ಕೆಲಸಕ್ಕೆಲ್ಲ ಆಳುಕಾಳುಗಳು. ಪಾತ್ರೆ ತೊಳೆಯುವ ತೊಂದರೆಯೂ ಇಲ್ಲ ಈಕೆಗೆ...."

"ಏನಿದರೇನು? ಸರಿಯಾದ ಗಂಡನೇ ಇರದಿದ್ದರೆ ಈ ಎಲ್ಲ ಭಾಗ್ಯ

ದಿಂದ ಉಪಯೋಗವೇನು ಹೇಳಿ. ನನಗೇಕೋ ಈ ಸಂಬಂಧ ಮನಸ್ಸಿಗೆ ಬರಲೊಲ್ಲದು. ನಮ್ಮ ಮಗಳನ್ನೊಯ್ದು ಚಿನ್ನದ ಸಿಲುಬೆಗೆ ನೇತುಹಾಕಿದಂತಾಗಬಾರದು...." ಎಂದು ನೊಂದು ನುಡಿದಿದ್ದಳು ತಾಯಿ. ಹೆಣ್ಣಿನ ಮನಸ್ಸು ಹೆಣ್ಣಿಗೆ ಗೊತ್ತು. ತಂದೆಗೆ ಅಸೆಲ್ಲ ಅರ್ಥವಾಗುವಂತಿರಲಿಲ್ಲ. ಅವರ ಕಣ್ಣು ಆ ಸಂಪತ್ತಿನ ಮೇಲೆ. ಇರುವುದು ಇಬ್ಬರು ಗಂಡು ಮಕ್ಕಳು. ಈತನೇ ಹಿರಿಯವ. ಆತನ ತಂದೆಗೆ ವಯಸ್ಸಾಗಿದೆ. ಬಹಳ ದಿನ ಬದುಕುವಂತಿಲ್ಲ. ಆತನ ನಂತರ ಎಲ್ಲ ಅಧಿಕಾರವೂ ಈತನ ಕೈಗೇ ಬರುವುದು. ಅರ್ಥಾತ್ ತಮ್ಮ ಸರಸೂ ಆ ಮನೆಯ ಮಹಾರಾಣಿಯಾಗಿ ಮೆರೆಯುವಳು—ಎಂದು ಅವರ ಯೋಚನೆ. ಅವರು ಹಾಗೆ ಯೋಚಿಸುವುದೂ ಅವರ ಸ್ವಭಾವಕ್ಕೆ ಸರಿಯಾಗಿಯೇ ಇತ್ತು. ವ್ಯಾಪಾರಸ್ಥರಾಗಿರುವವರಿಗೆ ಯಾವಾಗಲೂ ಹಣವೇ ದೊಡ್ಡದು....

ತನಗೆ, ತಾಯಿಗೆ, ರುದ್ರಪ್ಪಜ್ಜಿಗೆ ಯಾರಿಗೂ ಮನಸ್ಸಿರಲಿಲ್ಲವಾದರೂ ಮದುವೆ ನಿಶ್ಚಯವಾಗಿತ್ತು. ಅತ್ಯಂತ ವೈಭವದಿಂದ ಮದುವೆಯೂ ನಡೆದು ಹೋಗಿತ್ತು. ಅದೊಂದು ಮದುವೆಗಾಗಿಯೆ ಎಂಟು ಹತ್ತು ಸಾವಿರ ರೂಪಾಯಿ ವೆಚ್ಚ ಮಾಡಿದ ಹಾಗಿತ್ತು ವರನ ತಂದೆ. ತನ್ನ ಮೈಮೇಲೆ ಚಿನ್ನ ರನ್ನ ಒಡವೆಗಳು ಭಾರವಾಗುವಷ್ಟು ಬಿದ್ದಿದ್ದುವು. ಜರತಾರಿ ಸೀರೆಗಳು, ಪೀತಾಂಬರಗಳು ಯಾವುದಕ್ಕೂ ಕೊರತೆಯಿರಲಿಲ್ಲ....

ಏನಾದರೇನು....

ತನಗೆ ಆ ಮದುವೆ ಇಷ್ಟವಿರಲಿಲ್ಲ. ಅಕಸ್ಮಾತ್ತಾಗಿ ಏನಾದರೊಂದು ಅನಾಹುತ ಸಂಭವಿಸಿ ಈ ಮದುವೆ ನಿಂತುಹೋಗಬಾರದೇ ಎಂದು ತಾನು ಹಾರೈಸುತ್ತಿದ್ದಳು. ಎಲ್ಲವೂ ವ್ಯರ್ಥವಾಗಿತ್ತು. 'ಸುಮಂಗಲ ಸಾವಧಾನ' ನಡೆದುಹೋಗಿತ್ತು.

ಎಂಟು ದಿನಗಳ ಆ ಮಹಾ ಗದ್ದಲ ಮುಗಿದ ಮೇಲೆ ತಾವು ಊರಿಗೆ ಹಿಂದಿರುಗಿದ ಬಳಿಕ ತಾಯಿಯನ್ನು ತಬ್ಬಿಕೊಂಡು ತಾನು ಬಿಕ್ಕಿ ಬಿಕ್ಕಿ ಅತ್ತುಬಿಟ್ಟಿದ್ದಳು.

"ಈ ಮದುವೆ ನನಗೆ ಬೇಡಾ ಅಂದರೂ ಮಾಡಿಬಿಟ್ಟಿರಿ. ನನಗಿದು

ಬೇಕಿರಲಿಲ್ಲ. ನಾನಿನ್ನೂ ಕಲಿಯಬೇಕೆಂದಿದ್ದೆ. ಮ್ಯಾಟ್ರಿಕ್ ಆದರೂ ಮುಗಿಸಬೇಕೆಂದಿದ್ದೆ. ನೀವು ಕೇಳಲಿಲ್ಲ...." ಎಂದು ಗೋಗರೆದಿದ್ದಳು.

ತಾಯಿಯೂ ಕಂಬನಿ ಮಿಡಿಯುತ್ತ—"ನಾನೇನು ಮಾಡಲಿ ತಾಯಿ! ನಿಮ್ಮ ತಂದೆ ನನ್ನ ಮಾತು ಕೇಳಬೇಕಲ್ಲ. ನಾನೆಷ್ಟೋ ಬೇಡವೆಂದರೂ ಅವರು ಕಿವಿಗೊಡಲಿಲ್ಲ. ನಿನ್ನನ್ನು ಆ ಕರಿ ಕಾಮಣ್ಣನಿಗೆ ಕಟ್ಟಲು ನನಗೂ ಮನಸ್ಸಿರಲಿಲ್ಲ...." ಎಂದು ಹೇಳಿದ್ದಳು.

ಕರಿ ಕಾಮಣ್ಣ....!

"ಅಪ್ಪ ಏನೇ ಹೇಳಲಿ. ನಾನಂತೂ ಅವರ ಮನೆಗೆ ಹೋಗುವುದಿಲ್ಲ. ನಾನಿನ್ನೂ ಕಲಿಯುವಾಕೆ. ಮ್ಯಾಟ್ರಿಕ್ ಆಗದೆ ಬಿಡುವದಿಲ್ಲ ನಾನು...." ಎಂದು ತಾನು ಹಟದ ದನಿಯಲ್ಲಿ ಹೇಳಿದ್ದಳು.

ತನ್ನ ಮನೋಗತವೇನೆಂಬುದನ್ನು ತಿಳಿದಾಗ ತಂದೆ ನಕ್ಕುಬಿಟ್ಟಿದ್ದರು. "ಹುಚ್ಚು ಹುಡುಗಿ ನಮ್ಮ ಸರಸೂ. ಈ ಪ್ರಪಂಚವೆಂದರೆ ಎಂಥದೆಂಬುದು ಇನ್ನೂ ಈಕೆಗೆ ತಿಳಿಯದು. ಅನುಭವವಿಲ್ಲ. ಅಂತೇ ಹೀಗೆಲ್ಲ ಬಡಬಡಿಸುತ್ತಾಳೆ. ಒಂದೆರಡು ವರ್ಷ ಹೋದ ಮೇಲೆ ಎಲ್ಲವೂ ತಾನೇ ತಿಳಿಯುತ್ತದೆ. ಗಂಡನ ಮನೆಗೆ ಒಮ್ಮೆ ಹೋಗಿಬಂದರೆ ಸಾಕು. ಅಲ್ಲಿನ ಐಶ್ವರ್ಯವನ್ನೆಲ್ಲ ಕಣ್ಣಾರೆ ಕಂಡಾಗ ಸಂಸಾರದಲ್ಲಿ ಮೋಹ ಹುಟ್ಟೀತು," ಎಂದು ನುಡಿದು ಸುಮ್ಮನಾಗಿದ್ದರು.

ಮುಲ್ಕೀ ಪರೀಕ್ಷೆಯಾದುದೆಷ್ಟೋ ಅಷ್ಟೆ. ಮುಂದೆ ತನ್ನನ್ನು ಅವರು ಇಂಗ್ಲಿಷು ಶಾಲೆಗೆ ಕಳುಹಿಸಲಿಲ್ಲ. ತಾನುಅತ್ತುಕರೆದು ರಂಬಾಟ ಮಾಡಿದ್ದಳು. ಒಂದೆರಡು ದಿನ ಊಟವನ್ನೂ ಬಿಟ್ಟಿದ್ದಳು. ಯಾವುದಕ್ಕೂ ತಂದೆ ಸೋತಿರಲಿಲ್ಲ. "ಹುಡುಗಿಯರಿಗೆಲ್ಲ ಯಾಕೆ ಈ ಇಂಗ್ಲೀಷು? ಅದರಲ್ಲೂ ನಮ್ಮಂಥ ದೊಡ್ಡ ಮನೆತನದವರಿಗೆ ಈ ಹುಚ್ಚೇ? ನಮ್ಮಲ್ಲಿ ಯಾರು ಇದುವರೆಗೆ ಇಂಗ್ಲೀಷು ಕಲಿತಿದ್ದಾರೆ? ನಾನೇ ಕಲಿಯಲಿಲ್ಲವಂತೆ! ಇನ್ನು ಈಕೆಗೆ!" ಎಂದು ನುಡಿದು ಆ ವಿಷಯವನ್ನೇ ತಳ್ಳಿಬಿಡಲು ಪ್ರಯತ್ನಿಸಿದ್ದರು.

ತಾನು ಮಾತ್ರ ಅಷ್ಟಕ್ಕೇ ನಿರಾಶಳಾಗಿರಲಿಲ್ಲ. ತಾಯಿಯ ಮೂಲಕ ಹೇಳಿಸಿದ್ದಳು. "ಕಲಿಯಬೇಕೆಂಬ ಆಸೆಯಿದೆ ಹುಡುಗಿಗೆ. ಕಲಿಯಲಿ ಪಾಪ. ಈಗ ಎಷ್ಟು ಜನ ಶ್ರೀಮಂತರು ತಮ್ಮ ಹೆಣ್ಣು ಮಕ್ಕಳನ್ನೇ ಇಂಗ್ಲೀಷು

ಶಾಲೆಗೆ ಕಳುಹಿಸುವದಿಲ್ಲ ? ಸರಸೂ ಮಾತ್ರ ಯಾಕೆ ಹೋಗಬಾರದು ? ಒಂದೆರಡು ವರ್ಷ ಕಲಿಯಲೇಳಿ. ಏನಾಗುತ್ತದೆ ?" ಎಂದು ತಾಯಿ ವಾದಿಸಿದಾಗ ತಂದೆ ಕನಲಿ ಉತ್ತರವಿತ್ತಿದ್ದರು: "ಇಂಗ್ಲೀಷು ಶಾಲೆ ಅಂದರೆ ನಿನಗೇನು ಗೊತ್ತು ? ಅಲ್ಲಿರುವವರೆಲ್ಲ ಲಫಂಗ ಹುಡುಗರು. ಸರಸೂನಂಥ ಚೆಲುವೆಯರು ಕಲಿಯಲು ಹೋದರಾಯಿತು, ಇಂಗ್ಲೀಷು ಕಲಿಯುವದನ್ನು ಬಿಟ್ಟು ಏನೇನನ್ನೊ ಕಲಿತು ಬರುತ್ತಾರೆ. ಇನ್ನೊಮ್ಮೆ ನನ್ನೆದುರಿಗೆ ಈ ವಿಷಯ ವೆತ್ತಬೇಡ."

ತಾಯಿ ಹೆದರಿ ಸುಮ್ಮನಾಗಿದ್ದಳು. ತನ್ನ ಮಾವ, ಗಂಡ ಮೊದಲಾದವರಿಗೂ ತಾನು ಇಂಗ್ಲಿಷು ಶಾಲೆಗೆ ಹೋಗುವುದು ಒಪ್ಪಿಗೆಯಿರಲಿಲ್ಲ. ಅಂತೂ ಆ ವಿಷಯ ಅಲ್ಲಿಗೇ ನಿಂತಿದ್ದಿತು. ಅತ್ತು ಅತ್ತು ಹತಾಶಳಾಗಿ ಕೈಚೆಲ್ಲಿ ಕುಳಿತಿದ್ದಳು.

ಈ ದಿನಗಳಲ್ಲಿ ತನ್ನ ನೊಂದ ಜೀವಕ್ಕೆ ನೆರಳಾಗಿ ನಿಂತವಳು ಸೂಶಿ. ತಾನು ಸೂಶಿ ಇಬ್ಬರೂ ಚಿಕ್ಕತನದಿಂದಲೂ ಗೆಳತಿಯರು. ಕನ್ನಡ ಶಾಲೆಯಲ್ಲಿ ಸಹಪಾಠಿಗಳು. ಇಬ್ಬರೂ ಒಂದೇ ಸಲ ಮುಲ್ಕೀ ಪರೀಕ್ಷೆಗೆ ಕಟ್ಟಿದ್ದರು. ಇಬ್ಬರೂ ತೇರ್ಗಡೆ ಹೊಂದಿದ್ದರು. ಸೂಶಿ ಇಂಗ್ಲಿಷು ಶಾಲೆಗೆ ಅಡಿಯಿರಿಸಿದ್ದಳು. ತನ್ನೊಂದಿಗೆ ತನ್ನ ಗೆಳತಿಯೂ ಇಂಗ್ಲಿಷು ಕಲಿಯಲೆಂಬ ಆಸೆ ಸೂಶಿಗೆ ಬಲವಾಗಿದ್ದಿತಾದರೂ ತನ್ನ ತಂದೆಯ ಕೆಟ್ಟ ಹಟದ ಮುಂದೆ ಯಾರ ಆಟವೂ ನಡೆಯುವಂತಿಲ್ಲವೆಂಬುದು ಮನವರಿಕೆಯಾಗುತ್ತಲೂ ಆಕೆ ತನ್ನನ್ನು ಬಗೆಬಗೆಯಾಗಿ ಸಂತವಿಸತೊಡಗಿದ್ದಳು.

"ಹೆಣ್ಣು ಅಂದರೆ ನಮ್ಮ ದೇಶದಲ್ಲಿ ಯಾವಾಗಲೂ ಪರತಂತ್ರ ಸರಸೂ. ಏನು ಮಾಡುವದು, ಸದ್ಯ ಬೇರೆ ಉಪಾಯವಿಲ್ಲ. ತಂದೆ ಹೇಳಿದ ಹಾಗೆ ಕೇಳಲೇಬೇಕಲ್ಲವೆ ? ನೀನು ಏನು ಮಾಡಿದರೂ ಇಂಗ್ಲೀಷು ಶಾಲೆಗೆ ಬರುವದು ಸಾಧ್ಯವಿಲ್ಲ. ಸುಮ್ಮನೆ ಕೊರಗುವದರಿಂದ ಏನು ಸಾಧಿಸುತ್ತದೆ ?"

"ಏನೂ ಇಲ್ಲ ನಿಜ. ಆದರೆ ಸೂಶಿ, ಎಂಥೆಂಥ ಕನಸು ಕಟ್ಟಿದ್ದೆ ನಾನು. ಎಂಥೆಂಥ ಚೆಲುವಾದ ಕನಸು. ಒಂದೊಂದೇ ಹೀಗೆ ಮಣ್ಣುಗೂಡಿಹೋದುವಲ್ಲ....ಎಂಥ ದುರ್ದೈವಿ ನಾನು...."

"ದೈವ ಏನು ಮಾಡೀತು ಸರಸೂ. ಎಲ್ಲವನ್ನೂ ಮನುಷ್ಯನೇ ಮಾಡುತ್ತಾನೆ...."

"ನಿಜ ನೀ ಹೇಳೋದು ಸೂಶಿ. ಎಲ್ಲ ಮಾಡಿದ್ದು ನಮ್ಮ ತಂದೆಯೇ. ನನ್ನ ಮನಸ್ಸಿರದಿದ್ದರೂ ಆ ದುಡ್ಡಿನ ಗೊಂಬೆಗೆ ನನ್ನ ಕಟ್ಟಿದರು. ನನ್ನ ಆಯುಷ್ಯವನ್ನೆಲ್ಲ ಹಾಳು ಮಾಡಿದರು...."

ತನಗೆ ಬಂದೊದಗಿದ ದುರವಸ್ಥೆಯನ್ನು ಕಂಡು ಸುಶೀಲೆಯ ಕರುಳು ಮರುಗುತ್ತಿತ್ತು. ವರ್ಗದಲ್ಲೆಲ್ಲ ರೂಪರಾಣಿಯೆಂದರೆ ತಾನೇ. ಹುಡುಗಿಯರಲ್ಲಿ ಅನೇಕರು ತನ್ನ ಸೌಂದರ್ಯವನ್ನು ಕಂಡು ಈರ್ಷೆಯಿಂದ ತಳಮಳಿಸುವುದನ್ನು ಸೂಶಿ ಗುರುತಿಸಿದ್ದಳು. ತನ್ನಂಥ ಚೆಲುವೆಗೆ ಇಂಥ ಗಂಡ....

ಆದರೇನು ಮಾಡುವುದು....ಬೇರೆ ದಾರಿಯಿರಲಿಲ್ಲ. ಪಾಲಿಗೆ ಬಂದದ್ದನ್ನು ಅನುಭವಿಸುವುದೇ ಹಿಂದೂ ಹೆಣ್ಣಿನ ಕರ್ತವ್ಯ. ಅದು "ಕರ್ತವ್ಯ" ಎಂದು ಶಾಸ್ತ್ರಗಳು ಸಾರಿವೆ. ಪುರಾಣಗಳು ಘೋಷಿಸಿವೆ. ಸಮಾಜದ ರಕ್ತದಲ್ಲೇ ಆ ಭಾವನೆ ಬೇರೂರಿಬಿಟ್ಟದೆ....ಬೇರೆ ದಾರಿಯಿಲ್ಲ....

ಬೇರೆ ದಾರಿಯಿರಲಿಲ್ಲ.

ಎರಡು ವರ್ಷಗಳ ಕಾಲ ಮನೆಯಲ್ಲೇ ಕಾಲಕಳೆದುದಾಯಿತು. ಅದೇ ಕಾಲಕ್ಕೆ ವಾಚನಾಭಿರುಚಿಯೂ ಬೆಳೆಯಿತು. ಸೂಶಿ ಪುಸ್ತಕ ತಂದುಕೊಡುತ್ತಿದ್ದಳು. ಕತೆ, ಕಾದಂಬರಿ, ನಾಟಕ, ಕಾವ್ಯ, ಚರಿತ್ರೆ....ಅವುಗಳನ್ನೆಲ್ಲ ಓದುತ್ತ ಹೋದ ಹಾಗೆ ಹೊಸದೊಂದು ಪ್ರಪಂಚವೇ ತನ್ನ ಮುಂದೆ ಮೂಡಿದ್ದಿತು. ಅದುವರೆಗೆ ತನಗೆ ತೀರ ಅಪರಿಚಿತವಾಗಿದ್ದ ಪ್ರಪಂಚ. ಪ್ರೇಮ, ಪ್ರಣಯ, ಕಾಮ, ಮೋಹ, ರಾಗ,ವಿರಾಗ ; ಗಂಡು ಹೆಣ್ಣು, ಹೆಣ್ಣು ಗಂಡು, ಉನ್ಮಾದ ; ಒಬ್ಬ ಚೆಲುವೆಯ ಕಟಾಕ್ಷಕ್ಕೆ ಮನಸೋತು ಪ್ರಾಣತ್ಯಾಗ ಮಾಡಿದ ಯುವಕರು ; ಒಬ್ಬ ಯುವಕನ ಶೌರ್ಯಕ್ಕೆ ಮಾರುಹೋಗಿ ಬಂಧು ಬಳಗವನ್ನೆಲ್ಲ ತ್ಯಜಿಸಿ ಆತನ ಬೆನ್ನು ಹತ್ತಿ ತಿರುಗಿದ ಯುವತಿಯರು ; ಸಾವಿತ್ರಿ–ಸತ್ಯವಾನ್ ; ಪುಂಡರೀಕ–ಮಹಾಶ್ವೇತಾ ; ಚಂದ್ರಾಪೀಡ–ಕಾದಂಬರೀ ; ಮಜನೂ–ಲೈಲಾ ; ದೇವದಾಸ್–ಪಾರ್ವತೀ ; ಎಂಥ ಸುಂದರ ಪ್ರಣಯ....ಎಂಥ ಸುಂದರ ಪ್ರಣಯಿಗಳು....ಆಧುನಿಕ ಕತೆ

ಕಾದಂಬರಿಗಳಲ್ಲಿ ಬರುವ ಆ ನೂರಾರು ಪ್ರಣಯಿಗಳ ಜೊತೆಗಳು....ಎಂಥ ಚೆಲುವಾದ ರಸವತ್ತಾದ ಬಾಳು ಅವರದು....ತನ್ನದು ?

ಕತೆ ಕಾದಂಬರಿ ಕಾವ್ಯಗಳ ಆ ಮನೋಹರ ಪ್ರಪಂಚ....

ವಾಸ್ತವ ಜೀವನದ ತನ್ನ ಹಾಳು ಪ್ರಪಂಚ....

ಓದುತ್ತ ಹೋದಹಾಗೆಲ್ಲ ತನ್ನ ಮನೋಭೂಮಿಕೆಯಲ್ಲಿ ಅದ್ಭುತವಾದ ಬದಲಾವಣೆಯಾಗುತ್ತ ಬಂದಿದ್ದಿತು. ಜ್ಞಾನ ಹೆಚ್ಚಿದ ಹಾಗೆ ತೃಷೆಯೂ ಹೆಚ್ಚುತ್ತಿತ್ತು. ಸೌಂದರ್ಯದೃಷ್ಟಿ ಬೆಳೆಯುತ್ತಿತ್ತು. ಪ್ರತಿಯೊಂದು ವಸ್ತುವಿನಲ್ಲಿಯೂ ಸೌಂದರ್ಯವನ್ನೇ ಅರಸುವ ದೃಷ್ಟಿ. ತಾನು ಕನಸುಣಿಯಾಗತೊಡಗಿದ್ದಳು. ವಾಸ್ತವ ಜೀವನವನ್ನು ಸಂಪೂರ್ಣವಾಗಿ ಕಡೆಗಣಿಸಿ ಕೇವಲ ಸ್ವಪ್ನಲೋಕದಲ್ಲಿ ವಿಹರಿಸತೊಡಗಿದ್ದಳು. ಆ ವಿಹಾರಕಾಲದಲ್ಲಿ ತಾನೇ ಕಾದಂಬರಿ, ತಾನೇ ಮಹಾಶ್ವೇತೆ, ತಾನೇ ಲೈಲಾ, ತಾನೇ ಸಾವಿತ್ರಿ. ಒಂದೊಂದು ಸಮಯದಲ್ಲಿ ಒಬ್ಬೊಬ್ಬ ನಾಯಕನನ್ನು ಕಲ್ಪಿಸಿಕೊಂಡು ಪ್ರಣಯಕೇಳಿಯಲ್ಲಿ ನಿರತಳಾಗುವುದು ತನ್ನ ನಿತ್ಯ ಕ್ರಮವಾಯಿತು. ಸುಂದರ ಮುಖದ, ಅಂದವಾದ ಮೈಕಟ್ಟಿನ ಶೂರ ವೀರ ಪುರುಷರು ತನ್ನ ಆದರ್ಶ ನಾಯಕರಾದರು.

ಇಂಥ ಮನಃಸ್ಥಿತಿಯಲ್ಲಿದ್ದಾಗ ತಾನು ಋತುಮತಿಯಾದಳು. ಶಾಸ್ತ್ರದ ಪ್ರಕಾರ ಮನೆಯಲ್ಲಿ ಹಬ್ಬ ನಡೆಯಿತು. ಕೆಲದಿನಗಳಲ್ಲೇ ಆ ಗಳಿಗೆಯೂ ಬಂದಿತು–ಗಂಡನೊಡನೆ ಕೂಡುವ ಪ್ರಥಮ ಗಳಿಗೆ....

ಶೋಭನ ಪ್ರಸ್ತದ ದಿನ ತಾನು ಸುರಿಸಿದ ಕಣ್ಣೀರು....ಹಾಕಿದ ನಿಟ್ಟುಸಿರು....ಯಾವುದರಲ್ಲೂ ಮನಸ್ಸಿರಲಿಲ್ಲ. ಒಂದು ಬಗೆಯ ವಿಲಕ್ಷಣ ಮಂಕು ಕವಿದುಕೊಂಡಿತ್ತು. ಆ ರಾತ್ರಿ....ಆ ಪ್ರಥಮ ರಾತ್ರಿ....ಆ ಕುರೂಪಿ ಗಂಡನೊಂದಿಗೆ ಮೊದಲ ಬಾರಿಗೆ ಸಮಾಗಮ.... ತನ್ನ ಕನಸಿನ ಭವ್ಯ ನಾಯಕರೆಲ್ಲಿ–ಈ ಕುಳ್ಳಗಿನ ತೆಳ್ಳಗಿನ ಕುರೂಪಿ ಗಂಡನೆಲ್ಲಿ....ಆತನ ಬಗೆಗೆ ತನ್ನಲ್ಲಿ ಹುಟ್ಟಿದ್ದ ಕನಿಕರ ಈಗ ತಿರಸ್ಕಾರವಾಗಿ ಪರಿಣಮಿಸಿತ್ತು; ದ್ವೇಷವಾಗಿ ಪರಿಣಮಿಸಿತ್ತು. ಸಂಪತ್ತಿನ ಬಲದ ಮೇಲೆ ತನ್ನನ್ನೇ ಕೊಂಡುಕೊಂಡು ತನ್ನ ಬಾಳೆಲ್ಲವನ್ನು ಹಾಳು ಮಾಡಿದ ಆ ನರಕೀಟ....ಆ ರಾತ್ರಿಯೆಲ್ಲ ಆತನನ್ನು ಶಪಿಸಿ ಕಣ್ಣೀರು ಸುರಿಸಿದ್ದೇ ಆಗಿತ್ತು. [illegible]

ತೊಯ್ದು ತಪ್ಪಡಿಯಾಗಿತ್ತು....ಈ ಬದುಕು....ಈ ಹಾಳು ಬದುಕು....ಎಂದು ಗೋಗರೆದಿದ್ದಳು. ಆತ್ಮಹತ್ಯ ಮಾಡಿಕೊಳ್ಳುವವರೆಗೂ ಉದ್ರೇಕ ಬೆಳೆದಿತ್ತು. ಆದರೆ....ಆ ಧೈರ್ಯವೂ ಇರಲಿಲ್ಲ. ಕನ್ನಡಿಯ ಮುಂದೆ ನಿಂತು ತನ್ನ ಆ ಸುಂದರ ದೇಹವನ್ನು ನೋಡಿಕೊಂಡಾಗ ಇಂಥ ಬಂಗಾರದಂಥ ಶರೀರವನ್ನು ಕೆರೆ ಬಾವಿಗಳಿಗೆ ದೂಡುವುದುಂಟೇ ಎಂದುಕೊಂಡು ಆ ಭೀಕರ ವಿಚಾರವನ್ನು ದೂರಗೊಳಿಸಿದ್ದಳು....

ಮುಂದೆ ಗಂಡನ ಮನೆ....ಅಲ್ಲಿನ ಆ ಆರು ತಿಂಗಳ ಬದುಕು....ತನ್ನ ಪಾಲಿಗೆ ಆ ಅವಧಿ ಘೋರ ನರಕವಾಗಿ ಪರಿಣಮಿಸಿದ್ದಿತು. ಆ ಮನೆಯ ಐಶ್ವರ್ಯವಾವುದೂ ತನ್ನ ಮನಸ್ಸನ್ನು ಒಲಿಸಿಕೊಳ್ಳಲು ಸಮರ್ಥವಾಗಿರಲಿಲ್ಲ. ಗಂಡನೆಂಬ ಆ ಪ್ರಾಣಿಯೇನೋ ಸಾಧು ಮನುಷ್ಯನಾಗಿದ್ದ. ಒಂದು ದಿನವೂ ತನ್ನನ್ನು ಗದರಿಸುತ್ತಿರಲಿಲ್ಲ. ಅತ್ತೆ ಮಾವಂದಿರೂ ತನ್ನನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. ಯಾವುದಕ್ಕೂ ಕೊರತೆಯಿರಲಿಲ್ಲ ತನಗೆ. ಕೈಗೊಂದು ಆಳು; ಕಾಲಿಗೊಂದು ಆಳು. ತನ್ನ ತಂದೆ ಊಹಿಸಿದ ಹಾಗೆ ತಾನು ಅಲ್ಲಿ ನಿಜಕ್ಕೂ ರಾಣಿಯಂತೆಯೆ ಇರಬಹುದಾಗಿತ್ತು. ಆದರೆ —ರಾಣಿಗೊಬ್ಬ ರಾಜ ಬೇಕು. ಆ ರಾಜನೇ ರಾಜನಾಗಿರಲಿಲ್ಲ. ಆ ಮನೆಯಲ್ಲಿ ಅಡುಗೆಗಿದ್ದ ಆಳುಗಳೂ ಆತನಿಗಿಂತ ಚೆನ್ನಾಗಿದ್ದರು, ಗಟ್ಟಿಮುಟ್ಟಾಗಿದ್ದರು, ಲಕ್ಷಣವಾಗಿದ್ದರು....

ದಿನವಿಡೀ ಅಂಗಡಿಯಲ್ಲಿ ಕುಳಿತು ಸೋತು ಬಂದ ಗಂಡ ರಾತ್ರಿ ಊಟವಾದೊಡನೆ ಮಲಗಿ ನಿದ್ರೆಹೋಗುತ್ತಿದ್ದ. ಆತನ ಪಕ್ಕದಲ್ಲಿ ಒರಗಿದ್ದ ಹಾಗೆ ತಾನು ಕಣ್ಣೀರು ಸುರಿಸುವಳು. ತಾನು ಹುಟ್ಟಿದೊಡನೆಯೆ, ತನ್ನನ್ನು ಬಿಟ್ಟು ಕಣ್ಣುಮುಚ್ಚಿದ ತನ್ನ ತಾಯಿಯನ್ನು ನೆನೆದು ನೆನೆದು ಹಲುಬುವಳು. "ಈ ನರಕದಿಂದ ನನ್ನನ್ನು ಬಿಡುಗಡೆ ಮಾಡು ತಾಯಿ!" ಎಂದು ರೋದಿಸುವಳು. ಆರು ತಿಂಗಳುಗಳ ಕಾಲ....ಕೇವಲ ಕಂಬನಿ....ಕೇವಲ ನಿಟುಸಿರು....ಕೇವಲ ಯಾತನೆ....

"ನೀನಿದ್ದರೆ ಹೀಗಾಗುತ್ತಿರಲಿಲ್ಲ ಅವ್ವ. ಖಂಡಿತವಾಗಿಯೂ ನೀನು ನನ್ನನ್ನು ಇಂಥ ಗಂಡನಿಗೆ ಕಟ್ಟುತ್ತಿರಲಿಲ್ಲ. ನೀನು ನನ್ನನ್ನು ಬಿಟ್ಟುಹೋದೆ— ನಿನ್ನ ಮಗಳ ಗತಿ ಹೀಗಾಯಿತು....ಅಯ್ಯೋ ನನ್ನ ಅವ್ವ...."

ಆರ್ತನಾದ....ಕೊರಗು....ಅಳು....

ಆರು ತಿಂಗಳುಗಳ ಆ ಬಾಳು! ಅದೊಂದು ಕೆಟ್ಟ ಕನಸಿನ ಕಾಲ ತನ್ನ ಆಯುಷ್ಯದಲ್ಲಿ. ಹಾಳು ಕನಸು........

"ನಾ ಮದುವೆಯಾಗೋಲ್ಲ ಅಕ್ಕ. ಎಂ—ದೆಂ—ದೂ ಮದುವೆಯಾಗೋಲ್ಲ. ಎಂ—ದೆಂ—ದೂ!"

ಮತ್ತೆ ಬಡಬಡಿಸತೊಡಗಿದಳು, ಗೌರಿ.

ನೆನಪಿನ ಲೋಕದಿಂದ ಎದ್ದು, ಮತ್ತೆ ಈಚೆಗೆ ಬಂದಳು ಸರಸು.

ಮೂರು ವರ್ಷಗಳಿಗೆ ಹಿಂದಿನ ಆ ಆರು ತಿಂಗಳಿನ ಕಾಲ ಮತ್ತೆ ತನಗಾಗಿ ಕಾದಿದೆಯೇನೊ ಎನ್ನಿಸಿತು ಆಕೆಗೆ.

ತಂಗಿಯನ್ನು ಬಿಗಿಯಾಗಿ ತಬ್ಬಿಕೊಂಡು ರಗ್ಗನ್ನು ತಲೆಯವರೆಗೂ ಹೊದೆದುಕೊಂಡಳು.

ಕಂಬನಿಗಳಿಂದಾಗಿ ಆಕೆಯ ತಲೆದಿಂಬೆಲ್ಲವೂ ಒದ್ದೆಯಾಗಿದ್ದಿತು.

[೪]

"ಕಣ್ಣಲ್ಲೇಕೆ ನೀರು ಚಿನ್ನಾ?" ಎಂದು ಆತ ಆಕೆಯ ಗದ್ದವನ್ನು ಹಿಡಿದು ಕೇಳಿದ.

ಆಕೆಗೆ ಮತ್ತೆ ಕಣ್ಣೀರು ಚಿಮ್ಮಿತು. ಆತನ ಮುಖದ ಮೇಲೆ ಮೂಡಿದ್ದ ಸಹಾನುಭೂತಿಯನ್ನೂ ಪ್ರೀತಿಯನ್ನೂ ಗುರುತಿಸಿದಾಗ ಕತ್ತು ಬಿಗಿದು ಬಂದು ಅಳುವುಕ್ಕಿತು.

"ಸಾಕು, ಸಾಕು. ಎಂಥ ಹುಚ್ಚು ಇದು? ಇನ್ನೇಕೆ ಅಳು ನಾನಿರುವಾಗ?" ಎನ್ನುತ್ತ ಆತ ಆಕೆಯ ಕಣ್ಣುಗಳನ್ನೊರೆಸತೊಡಗಿದ.

"ನನ್ನ ಬಾಳೆಲ್ಲವೂ ಅಳುವಿನಿಂದ ತುಂಬಿದೆ. ಅಳದೆ ಇನ್ನೇನು ಮಾಡಲಿ?" ಎನ್ನುತ್ತ ಆಕೆ ಆತನ ಹರವಾದ ಎದೆಯ ಮೇಲೆ ತಲೆಯನ್ನೊರಗಿಸಿದಳು.

"ಇದುವರೆಗೆ ಆದದ್ದು ಆಗಿಹೋಯಿತು. ಇನ್ನು ಮೇಲೆ [illegible]

ಚಿಂತೆಯೂ ಬರದಂತೆ ನೋಡಿಕೊಳ್ಳುತ್ತೇನೆ. ಎಲ್ಲಿ—ಕೊಂಚ ನಗು ನೋಡೋಣ...."

ಆಕೆ ನಕ್ಕಳು. ಎಂಥ ವಿಚಿತ್ರವಾದ ನಗೆ!

"ಇನ್ನು ನೀನು ನನ್ನವಳು. ನನ್ನ ರಾಣಿ. ಹೌದಲ್ಲವೆ ?"

ರಾಣಿ! ಆಕೆಯ ಶರೀರವೆಲ್ಲವೂ ರೋಮಾಂಚಿತವಾಯಿತು.

"ತವರುಮನೆಯ ಈ ಮರುಭೂಮಿಯಿಂದ ನಿನ್ನನ್ನು ಮುಕ್ತಗೊಳಿಸಿ ಪ್ರಣಯದ ನಂದನವನಕ್ಕೆ ಕರೆದೊಯ್ಯುತ್ತೇನೆ. ಬರುವೆಯಲ್ಲವೆ ನನ್ನ ಜೊತೆಗೆ?"

ಆತನ ಧ್ವನಿಯಲ್ಲಿ ಎಂಥ ಆಕರ್ಷಣ ಶಕ್ತಿಯಿದ್ದಿತೊ! ಆ ಕಣ್ಣುಗಳಲ್ಲಿ ಎಂಥ ಮಾಟಗಾರಿಕೆ ಅವಿತಿದ್ದಿತೊ! ಉತ್ತರವೀಯಬೇಕೆಂದರೆ ಬಾಯಿ ಬರಲಿಲ್ಲ. ನಾಲಗೆ ಏಳಲಿಲ್ಲ. ಆತನ ಬಾಹುಗಳ ಆಲಿಂಗನಕ್ಕೊಳಗಾಗಿ ಆತನ ಮುಖವನ್ನೇ ದಿಟ್ಟಿಸುತ್ತ ಒರಗಿದ್ದಳಾಕೆ.

ಪ್ರಶಾಂತವಾಗಿ ಹರಿಯುತ್ತಲಿದ್ದ ಹೊಳೆಯ ನೀರಿನಲ್ಲಿ ನಾವೆ ನಿಧಾನವಾಗಿ ತೇಲುತ್ತ ಹೊರಟದ್ದಿತು. ಬಗೆ ಬಗೆಯ ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿದ ನಾವೆ. ಅದರ ನಟ್ಟನಡುವೆ ರೇಶಿಮೆಯ ಬಟ್ಟೆಗಳಿಂದ ಅಲಂಕೃತವಾದ ಹಾಸಿಗೆಯ ಮೇಲೆ ಅವರಿಬ್ಬರೂ ಒರಗಿಕೊಂಡಿದ್ದರು. ಮೇಲೆ ಶುಕ್ಲ ಪಕ್ಷದ ಚಂದ್ರ ಆಹ್ಲಾದಕರವಾಗಿ ಬೆಳಗುತ್ತಲಿದ್ದ. ಮೆಲ್ಲನೆ ತಂಗಾಳಿ ಸುಳಿಯುತ್ತಿತ್ತು. ಹೊಳೆಯ ಆಚೆ ದಡದ ಮೇಲೆ ಕುಳಿತುಕೊಂಡು ಯಾರೋ ಹಾಡು ಹೇಳುತ್ತಿದ್ದ ಹಾಗಿದ್ದಿತು. ಮಧುರವಾದ ಕಂಠ. ಚೆಲುವಾದ ಹಾಡು. ಆ ಹಾಡಿನ ಅರ್ಥವೇನೆಂಬುದು ಆಕೆಗೆ ಹೊಳೆಯಲಿಲ್ಲ. ಅದನ್ನರಿತುಕೊಳ್ಳುವ ಅಪೇಕ್ಷೆಯೂ ಆಕೆಗಿರಲಿಲ್ಲ.

ಹಠಾತ್ತಾಗಿ ಗಾಳಿ ಬಲವಾಗಿ ಬೀಸತೊಡಗಿತು. ಹೊಳೆಯ ನೀರು ರಭಸದಿಂದ ಹರಿಯತೊಡಗಿತು. ಶಾಂತವಾಗಿ ತೇಲುತ್ತಿದ್ದ ನಾವೆ ಅತ್ತ ಇತ್ತ ಹೊಯ್ದಾಡತೊಡಗಿತು. ಗಾಳಿ, ಬಿರುಗಾಳಿಯಾಯಿತು. ನಾವೆ ಇನ್ನೂ ಜೋರಾಗಿ ಹೊಯ್ದಾಡತೊಡಗಿತು. ಕಿವಿಗಳನ್ನು ಕಿವುಡುಗೊಳಿಸುವಂಥ ಗುಡುಗಿನ ಧ್ವನಿ ಕೇಳಬಂದಿತು. ಕಾರ್ಮೋಡಗಳು ಚಂದ್ರನನ್ನು ತಮ್ಮ ಉದರದಲ್ಲಿ ಬಚ್ಚಿಟ್ಟುಕೊಂಡುವು. ಸೆಳೆಮಿಂಚು ಮಿನುಗತೊಡಗಿತು.

"ಮಳೆ ಬರುವ ಲಕ್ಷಣ ಕಾಣುತ್ತಿದೆ. ದಂಡೆಗೆ ಹೋಗೋಣ," ಎಂದು ಭೀತಿಯಿಂದ ನುಡಿದಳಾಕೆ.

"ನಾನಿರುವಾಗ ನಿನಗೇಕೆ ಭೀತಿ?" ಎನ್ನುತ್ತ ಆತ ಆಕೆಯನ್ನು ಬಿಗಿಯಾಗಿ ತಬ್ಬಿಕೊಂಡ. ಆತನ ಭೀಕರ ಶಕ್ತಿಯು ಹಿಡಿತಕ್ಕೊಳಗಾಗಿ ಆಕೆ ನರಳತೊಡಗಿದಳು.

"ಬಿಡಿ ನನ್ನನ್ನು. ಬಿಟ್ಟುಬಿಡಿ. ನಾ ಮನೆಗೆ ಹೋಗಬೇಕು."

"ಇನ್ನೆಲ್ಲಿಯ ಮನೆ? ಈ ನಾವೆಯೆ ನಮ್ಮ ಮನೆ ಇನ್ನು ಮೇಲೆ. ನಾವಿಬ್ಬರೂ ಇಲ್ಲಿಯೆ ಬದುಕುವವರು...." ಎಂದು ಹೇಳುತ್ತ ಆತ ಆಕೆಯನ್ನು ಇನ್ನೂ ಬಿಗಿಯಾಗಿ ತಬ್ಬಿಕೊಂಡ.

"ಬಿಡಿ ನಿಮ್ಮ ದಮ್ಮಯ್ಯ. ಬಿಟ್ಟುಬಿಡಿ. ನನಗೆ ಉಸಿರು ಕಟ್ಟಿ ಹೋಯಿತು. ಹೀಗೆಲ್ಲ ಹುಚ್ಚು ಹುಚ್ಚಾಗಿ ತಬ್ಬಿಕೊಳ್ಳಬೇಡಿ. ನನ್ನ ಎದೆ ಒಡೆದುಹೋದೀತು. ಕೋಮಲ ಬಾಲೆ ನಾನು. ನನ್ನ ಬಿಟ್ಟುಬಿಡಿ. ನಾವೆಯನ್ನು ತಿರುಗಿಸಿ...."

ಮಳೆಯ ಹನಿಗಳೂ ಬೀಳತೊಡಗಿದ್ದುವು. ದೊಡ್ಡ ದೊಡ್ಡ ಹನಿಗಳು. ಒಂದೊಂದು ಹನಿಯೂ ಒಂದೊಂದು ಕಲ್ಲಿನಂತೆ ಆಕೆಯ ತಲೆಯ ಮೇಲೆ ಏಟು ಹಾಕುತ್ತಲಿದ್ದಿತು. ನಾವೆ ಗರಗರನೆ ತಿರುಗತೊಡಗಿದ್ದಿತು. ಮಡುವಿನಲ್ಲಿ ಪ್ರವೇಶ ಮಾಡಿದ್ದಿತೋ ಏನೊ. ಗರಗರ....ಗರಗರ....ಸುಳಿಗೆ ಸಿಲುಕಿ ಸುತ್ತುತ್ತಲಿದೆ....ಇನ್ನು ಅದು ಮುಳುಗುವುದು ಖಂಡಿತ....ಸಾವು ಖಂಡಿತ. ಆಕೆ ಹೌಹಾರಿ ಚೀರತೊಡಗಿದಳು.... "ಬಿಡಿ ನನ್ನ. ಬಿಟ್ಟುಬಿಡಿ...." ಆತ ಬಿಡಲೊಲ್ಲ. ಆ ಭೀಕರ ಮಳೆ, ಆ ಗುಡುಗು ಸಿಡಿಲು ಮಿಂಚುಗಳ ಅಬ್ಬರ, ಹೊಳೆಯ ಕೋಪಾಟೋಪ, ನಾವೆಯ ದುರವಸ್ಥೆ, ಆಕೆಯ ಶೋಚನೀಯ ಸ್ಥಿತಿ ಯಾವುದರ ಕಡೆಗೂ ಆತನಿಗೆ ಗಮನವಿಲ್ಲ. "ಬಿಡಿ" ಎಂದಾಕೆ ಗೋಗರೆದಷ್ಟೂ ಆತ ಆಕೆಯನ್ನು ಬಿಗಿಯರಾಗಿ, ಇನ್ನೂ ಬಿಗಿಯಾಗಿ ತಬ್ಬಿಕೊಳ್ಳುತ್ತಿದಾನೆ. ತನ್ನ ಅಪ್ಪುಗೆಯಿಂದ ಆಕೆಯ ದೇಹವನ್ನೇ ಕರಗಿಸಿಬಿಟ್ಟು ತನ್ನ ದೇಹದಲ್ಲಿ ಆಕೆಯನ್ನು ಅಳವಡಿಸಿಕೊಳ್ಳಲು ಹಾತೊರೆಯುತ್ತಿದಾನೆ.

ನಾವೆ ರಭಸದಿಂದ ತಿರುಗುತ್ತಿದೆ....ತಿರುಗಿ ತಿರುಗಿ ಬುಡ ಮೇಲಾಗುತ್ತಿದೆ....ಮುಳುಗಿತು....ಇನ್ನೇನು ಮುಳುಗುವುದರಲ್ಲೇ ಇತ್ತು....ಆತ ತನ್ನ

ಅಪ್ಪುಗೆಯನ್ನಿನ್ನೂ ಸಡಿಲಿಸಿಲ್ಲ. ಮುಳುಗಿದರೆ ಇಬ್ಬರೂ ಕೂಡಿಯೆ ಮುಳುಗಬೇಕು ಎಂಬ ಯೋಚನೆಯೇನೊ ಆತನಿಗೆ...."ಹಾಯ್ ! ಯಾರಾದರೂ ಬನ್ನಿ, ಬಿಡಿಸಿಕೊಳ್ಳಿ....ಅಪ್ಪಾ....ಅಪ್ಪಾ...."

ಅಕಸ್ಮಾತ್ತಾಗಿ ಹೊಳೆಯ ತೀರದಿಂದ ಪಿಟೀಲಿನ ರಾಗ ಕೇಳಿಬರುತ್ತದೆ. ಮಾವಿನ ಮರದ ಬುಡದಲ್ಲಿ ಕುಳಿತುಕೊಂಡು ಪಿಟೀಲು ನುಡಿಸುತ್ತಲಿದಾನೆ ಆ ಯುವಕ. ಕಣ್ಣುಗಳೆರಡೂ ಮುಚ್ಚಿಕೊಂಡಿವೆ. ಎಡಗೈ ಪಿಟೀಲನ್ನು ಬಿಗಿಯಾಗಿ ತಬ್ಬಿ ಹಿಡಿದುಕೊಂಡಿದೆ. ಬಲಗೈ ನಿಧಾನವಾಗಿ ಪಿಟೀಲಿನ ಮೇಲಾಡುತ್ತಿದೆ. ಮುಂಗುರುಳಿನ ತುಂಡೊಂದು ಹಣೆಯ ಮೇಲಿಳಿದು ಬಂದಿದೆ. ಆತ ಬಾರಿಸುತ್ತಿದಾನೆ. ತನ್ನನ್ನು ತಾನು ಮರೆತು ತನ್ನ ಪಿಟೀಲಿನಲ್ಲಿ ತನ್ಮಯನಾಗಿದಾನೆ....

ನಾವೆಯ ಹೊಯ್ದಾಟ ನಿಂತುಹೋಗುತ್ತಿದೆ. ಹೊಳೆಯ ಅಬ್ಬರವೂ ಕಡಿಮೆಯಾಗುತ್ತಿದೆ. ನಿಂತುಹೋಯಿತು ಮಳೆ. ಆಕಾಶ ಮತ್ತೆ ನಿರಭ್ರವಾಯಿತು. ಹಾಲುಗಲ್ಲದ ಚಂದ್ರಮ ಮತ್ತೆ ಕುಲುಕುಲು ನಗುತ್ತ ನಿಂತಿದಾನೆ.

ನಾವೆ ನಿಧಾನವಾಗಿ ತೇಲುತ್ತ ನಡೆದಿದೆ.

ಆಕೆಯನ್ನು ತನ್ನ ಆಲಿಂಗನದಿಂದ ಗಾಸಿಗೊಳಿಸಿದ ವ್ಯಕ್ತಿಯೆಲ್ಲಿ? ಎಲ್ಲಿ ಅದೃಶ್ಯವಾದನೊ ! ಈಗ ಆಕೆಯೊಬ್ಬಳೇ ನಾವೆಯಲ್ಲಿ.

ನಾವೆಯ ಭಾಗಗಳೆಲ್ಲವನ್ನೂ ತುಂಬಿಕೊಂಡ ಆ ಬಣ್ಣ ಬಣ್ಣದ ಹೂಗಳು ಹಾಗೆಯೆ ಇವೆ. ಅಲಂಕೃತವಾದ ಹಾಸುಗೆಯೂ ಹಾಗೆಯೆ ಇದೆ—ಶುಭ್ರವಾಗಿ—ನಿರ್ಮಲವಾಗಿ. ಅದರ ಮೇಲೆ ಹಾಯಾಗಿ ಒರಗಿಕೊಂಡು ಆಕೆ ಕಣ್ಣುಗಳನ್ನು ಅರ್ಧ ಮುಚ್ಚಿ ಆ ಗಿಡದ ಕಡೆಗೆ ದಿಟ್ಟಿಸುತ್ತಲಿದಾಳೆ—ಆ ಯುವಕ ಕುಳಿತ ಮಾವಿನ ಗಿಡದ ಕಡೆಗೆ.

ಪಿಟೀಲು ನುಡಿಯುತ್ತಲಿದೆ. ಎಂಥ ಮೋಹಕ ರಾಗ ಅದರದು.... ಹೃದಯವನ್ನೆಲ್ಲ ಮರುಳುಗೊಳಿಸುವ, ಕರುಳನ್ನು ಕಲಮಲಗೊಳಿಸುವ ವೇದನಾಪೂರ್ಣ ರಾಗ....

"ಇಂಥ ದುಃಖಭರಿತ ರಾಗವನ್ನೇಕೆ ನುಡಿಸುತ್ತೀಯಾ ಯುವಕ ?" ಎಂದಾಕೆ ಪ್ರಶ್ನಿಸುತ್ತಾಳೆ.

"ಏಕೆಂಬುದು ನನಗೇ ತಿಳಿಯದು," ಎಂದು ಆತ ಉತ್ತರವೀಯು ತ್ತಾನೆ.

"ಏನು ದುಃಖ ನಿನಗೆ ? ಏನು ವ್ಯಥೆ ? ನನ್ನಲ್ಲಿ ಹೇಳಬಾರದೇ ?"

"ನನ್ನ ಪಿಟೀಲೇ ಹೇಳುತ್ತಿದೆಯಲ್ಲ....?"

"ಜಗತ್ತಿನಲ್ಲಿ ನಿನ್ನವರಾರೂ ಇಲ್ಲವೇ ಯುವಕ ? ನೀನು ಏಕಾಕಿಯೆ ?"

"ಏಕಾಕಿಯೆ. ಈ ಪಿಟೀಲು ಬಿಟ್ಟರೆ ಬೇರಾರೂ ನನಗಿಲ್ಲ...."

"ನಿನ್ನ ಧ್ವನಿ ಎಷ್ಟು ದುಃಖಪೂರ್ಣವಾಗಿದೆಯಲ್ಲ ಯುವಕ ! ವೇದನೆ ಯಿಂದ ಹೇಗೆ ಭಾರವಾಗಿದೆ ! ಏನಾಗಿದೆ ನಿನಗೆ, ಹೇಳಲಾರೆಯಾ ? ನಾನು ಹೋಗಲಾಡಿಸಬಲ್ಲೆ ನಿನ್ನ ವ್ಯಥೆಯನ್ನು...."

"ಅದು ಸಾಧ್ಯವಿಲ್ಲ ನಿನ್ನಿಂದ. ವ್ಯರ್ಥ ಶ್ರಮಪಡಬೇಡ. ನಿನ್ನ ದಾರಿ ಹಿಡಿದುಕೊಂಡು ಹೋಗು...."

"ಯುವಕಾ...."

ಆತನಿಂದ ಉತ್ತರವಿಲ್ಲ. ಪಿಟೀಲಿನ ಕರುಣಾಕ್ರಂದನ ಮತ್ತೆ ಆರಂಭ ವಾಗುತ್ತದೆ. ಸುತ್ತುಮುತ್ತಲಿನ ನಿಸರ್ಗವೆಲ್ಲವೂ ಅದರೊಂದಿಗೆ ಮೂಕ ರೋದನ ಮಾಡಿದಂತೆ ತೋರುತ್ತದೆ ಆಕೆಗೂ ಅಳುವುಕ್ಕಿ ಬರುತ್ತದೆ. ಕಂಬನಿಗಳಿಂದಾಗಿ ಆಕೆಯ ತಲೆದಿಂಬೆಲ್ಲವೂ ತೊಯ್ದು ಹೋಗುತ್ತದೆ.

* * * *

"ಯಾಕೆ ಅಳುತ್ತೀಯಾ ಅಕ್ಕ ? ಏನಾಯ್ತು ನಿನಗೆ ?"

ಗೌರಿಯ ಧ್ವನಿ ಕೇಳಿಸುತ್ತದೆ.

ಸರಸೂ ಕಣ್ದೆರೆದು ಸುತ್ತಲೂ ದೃಷ್ಟಿ ಹೊರಳಿಸುತ್ತಾಳೆ.

ಹೊಳೆಯಿಲ್ಲ....ನಾವೆಯಿಲ್ಲ....ಚಂದ್ರನಿಲ್ಲ....ತಾರೆಗಳಿಲ್ಲ....ದಂಡೆಯ ಮೇಲಿನ ಆ ಮಾವಿನಗಿಡವಿಲ್ಲ....ಯುವಕನಿಲ್ಲ....ಪಿಟೀಲಿನ ರಾಗವೂ ಇಲ್ಲ...

ಬೆಳ್ಳಗೆ ಬೆಳಕಾಗಿದೆ. ಬಾಲಸೂರ್ಯನ ಬಂಗಾರದ ಕಿರಣಗಳಲ್ಲಿ ಹಲವು ಕಿಟಕಿಯೊಳಗಿನಿಂದ ಇಳಿದು ಬಂದು ತನ್ನ ಕೆನ್ನೆಗಳ ಮೇಲೆ ಚಿನ್ನಾಟವಾಡತೊಡಗಿವೆ.

"ಆಹಾ, ಕನಸು ! ಎಂಥಾ ವಿಚಿತ್ರ ಕನಸು....!" ಎಂದುಕೊಳ್ಳುತ್ತ ಸರಸು ರಗ್ಗನ್ನು ಆಚೆ ಸರಿಸಿ ಮೇಲಕ್ಕೆದ್ದಳು. ತೋಳುಗಳೆರಡನ್ನೂ ತಲೆಯ

ಮೇಲೆ ಹಾಯಿಸಿ ಎರಡು ಕೈಗಳನ್ನೂ ಸೇರಿಸಿ ಮೈಮುರಿದುಕೊಂಡಳು. ಮಂಚದಿಂದ ಕೆಳಕ್ಕಿಳಿದು ಬಂದು ನಿಲುವುಗನ್ನಡಿಯೆದುರಿಗೆ ನಿಂತು ತಲೆಗೂದಲನ್ನು ಸರಿಪಡಿಸಿಕೊಂಡಳು. ಕಿಟಕಿಯಲ್ಲಿ ಇಣುಕಿ ಎದುರು ಮನೆಯ ಕಡೆಗೆ ದೃಷ್ಟಿ ತೂರಿದಳು.

ಆ ಕೊಟಡಿಯ ಕಿಟಕಿ ತೆರೆದ ಹಾಗೇ ಇತ್ತು. ಆ ಯುವಕ ಹಾಸಿಗೆಯ ಮೇಲೆ ಒರಗಿಕೊಂಡಿದ್ದ ಹಾಗೆ ಸಿಗರೇಟು ಸೇದುತ್ತಲಿದ್ದ. ಬೆಳಗಿನ ಸ್ವರ್ಣಕಿರಣಗಳಲ್ಲಿ ಆ ಸಿಗರೇಟಿನ ಹೊಗೆ ಉಂಗುರಗಳನ್ನು ರಚಿಸುತ್ತ ಒಯ್ಯನೊಯ್ಯನೆ ಮೇಲಕ್ಕೇರಿ ಹವೆಯಲ್ಲಿ ಕರಗಿಹೋಗುತ್ತಿತ್ತು.

[೫]

"ಯಾಕೆ ಅಳುತ್ತಿದ್ದೆ ಅಕ್ಕ ?" ಮತ್ತೆ ಕೇಳಿದಳು ಗೌರಿ.

"ಅಳುತ್ತಿದ್ದೆನೇ ? ಯಾವಾಗ ?"

"ಇದೇ ಈಗ. ನಿದ್ದೆಗಣ್ಣಿನಲ್ಲೇ ಅಳುತ್ತಿದ್ದೆ ನೀನು. ಕನಸು ಗಿನಸು ಬಿದ್ದಿತ್ತೇನು ?"

"ಹೌದು. ವಿಚಿತ್ರ ಕನಸು !"

"ಏನದು ? ಎಂಥಾ ಕನಸು ? ನನಗೆ ಹೇಳೋಲ್ಲವೇ ಅಕ್ಕ ? ಯಾರು ಬಂದಿದ್ದರು ಕನಸಿನೊಳಗೆ ?"

"ಯಾರೋ ಏನೊ. ಯಾವುದೂ ನೆನಪಾಗಲೊಲ್ಲದು."

"ಇದೇ ಈಗ ಕನಸು ಬಿದ್ದಿತ್ತು ಅಂತ ಹೇಳುತ್ತೀಯ. ಇಷ್ಟು ಬೇಗ ಮರೆತುಹೋಯಿತೇ ? ಅದು ಹ್ಯಾಗೆ ಮರೆಯುತ್ತವ್ವ ಇಷ್ಟು ಬೇಗ ? ನಂಗೆಲ್ಲ ಗೊತ್ತು. ನೀ ನನಗೆ ಹೇಳುವದಿಲ್ಲ ಹೌದಲ್ಲೋ....ಹೇಳಲೇಬೇಕು ಅಕ್ಕ...." ಎಂದು ಗೌರಿ ಸರಸುವನ್ನು ಬಳಸಿ ನಿಂತು ಪೀಡಿಸತೊಡಗಿದಳು.

"ನೆನಪಿರದಿದ್ದರೆ ಏನು ಹೇಳಲೇ ? ನಿಂದೊಂದು ಕಾಟ. ಬಿಡು. ಬಿಡು."

"ಊ ಹೂಂ....ಹೇಳಲೇಬೇಕು ಅಕ್ಕ. ನೀ ಹೇಳುವ ತನಕ ಬಿಡೋಲ್ಲ ನಿನ್ನ. ಯಾರು ಬಂದಿದ್ದರೇ ಕನಸಿನಲ್ಲಿ ? ಆ ಅಲ್ಲಮ ಪ್ರಭುವೋ ಏನು ?"

ಅಲ್ಲಮ ಪ್ರಭು....!

ಸರಸೂ ಬೆಚ್ಚಿ ಬಿದ್ದಳು. ಅಲ್ಲಮ ಪ್ರಭು....ಸ್ವಾಮಿ....ಆ ಪೈಶಾಚ್ಯ ಶಕ್ತಿ....ಆ ಬಲವಾದ ಆಲಿಂಗನ....ಆ ನೋವು....ಆ ಒದ್ದಾಟ....ಕನಸಿನಲ್ಲಿ ತನ್ನನ್ನು ತಬ್ಬಿಕೊಂಡ ವ್ಯಕ್ತಿಯ ಕಣ್ಣುಗಳೆರಡೂ ಮತ್ತೆ ಆಕೆಯೆದುರಿಗೆ ಮೂಡಿದಂತಾಯಿತು. ಸ್ವಾಮಿಯ ಕಣ್ಣುಗಳ ಹಾಗೆಯೆ ಇರಲಿಲ್ಲವೆ ಅವು? ಹುಲಿಯ ಕಣ್ಣುಗಳಂತಿದ್ದ ಆ ಕಣ್ಣು....ಕನಸಿನಲ್ಲಿ ಬಂದು ತನ್ನನ್ನು ಪೀಡಿಸುವವರೆಗೂ ಅವುಗಳ ಪ್ರಭಾವ ಬಿದ್ದಿದೆಯೇ ತನ್ನ ಹೃದಯದ ಮೇಲೆ!

"ಇಷ್ಟು ಹೊತ್ತೂ ಮಲಗಿಕೊಂಡಿದ್ದಿರಾ?"

ಮಾತನಾಡಿದವಳು ನಾಗಮ್ಮ. ಬೆಳಗಿನ ಆರುಗಂಟೆಗೇ ಎದ್ದು ಕೆಳಕ್ಕಿಳಿದು ಬರುವ ಸರಸು, ಇಂದು ಏಳೂವರೆ ಗಂಟೆಯಾದರೂ ಇನ್ನೂ ಏಕೆ ಬರಲಿಲ್ಲವೊ ಎಂದು ಯೋಚಿಸುತ್ತ ಆಕೆ ಅಟ್ಟದ ಮೇಲೆ ಬಂದಿದ್ದಳು.

"ಹೌದು ಅವ್ವ. ಸರಸಕ್ಕ ಇದೇ ಈಗ ಎದ್ದಳು. ನಾನು ಮೊದಲೇ ಎದ್ದಿದ್ದೆ," ಎಂದಳು ಗೌರಿ.

"ಮೊದಲೇ ಎದ್ದ ಹಿರಿಯ ಮನುಷ್ಯಳು ನೀನು ನಿನ್ನಕ್ಕನನ್ನೇಕೆ ಎಬ್ಬಿಸಲಿಲ್ಲ? ಎದ್ದು ಏನು ಮಾಡುತ್ತಿದ್ದೆ? ತಪಸ್ಸು ಮಾಡುತ್ತ ಕುಳಿತಿದ್ದೆಯಾ ಶಿವನನ್ನು ಕುರಿತು?" ಎಂದು ನಗುತ್ತ ಕೇಳಿದಳು ನಾಗಮ್ಮ.

"ಥೂ ಹೋಗವ್ವ. ನಾನೇಕೆ ತಪಸ್ಸು ಮಾಡಲಿ?"

"ಏಕೆ ಅಂದರೆ....ಶಿವನನ್ನು ಒಲಿಸುವುದಕ್ಕೆ....ಗೌರೀದೇವಿ ಹೀಗೆಯೆ ತಪಸ್ಸು ಮಾಡಿ ಶಿವನನ್ನೊಲಿಸಿ ಮದುವೆಯಾದಳು. ಆ ಕತೆಯನ್ನು ಕೇಳಿಲ್ಲವೆ ನೀನು? ಮೊನ್ನೆ ಗಂಗಾಧರಶಾಸ್ತ್ರಿಗಳು ಹೇಳುತ್ತಿದ್ದರಲ್ಲ....?"

"ಎಲ್ಲಿ?"

"ಮಠದೊಳಗೆ....ಸ್ವಾಮಿಗಳ ಎದುರಿಗೆ...."

ಸ್ವಾಮಿಗಳು ಎಂಬ ಶಬ್ದ ಕಿವಿಗೆ ಬಿದ್ದೊಡನೆ ಸರಸೂ ಮುಖ ಬಣ್ಣಗೆಟ್ಟಿತು. ಅದನ್ನಾರೂ ಗಮನಿಸಲಿಲ್ಲ. ಗೌರಿ ಹೇಳುತ್ತಿದ್ದಳು.

"ನಾ ಕೇಳಲಿಲ್ಲ ಬಿಡು. ನಿದ್ದೆ ಬಂದಿತ್ತು ನನಗೆ."

"ಯಾವಾಗ ನೋಡಿದರೂ ನಿದ್ದೆ ನಿದ್ದೆ ಅನ್ನುತ್ತೀ. ಪುರಾಣ ಪುಣ್ಯಕಥೆ ಎಲ್ಲಾ ಕೇಳಬೇಕವ್ವ. ಹೆಣ್ಣಿನ ಜನ್ಮಕ್ಕೆ ಅವೆಲ್ಲ ಬೇಕೇ ಬೇಕು. ನೀನೂ ಸಹ ಹೀಗೇ ಮಾಡುವೆಯಲ್ಲ ಸರಸೂ. ಪುರಾಣ ಅಂದರೆ ಬೇಸರ.

ನೀನ್ನೆ ಹಾಗೇ ಅರ್ಧಕ್ಕೇ ಬಂದುಬಿಟ್ಟೆಯಲ್ಲ....ಸ್ವಾಮಿಗಳು ಬಹಳ ನೊಂದು ಕೊಂಡರು...."

"ಏನೋ ಅಮ್ಮ. ತಲೆನೋವು ಬಂದಿತ್ತು. ಬಂದುಬಿಟ್ಟೆ."

"ಹಾಗೆಲ್ಲ ಮಧ್ಯದಲ್ಲೇ ಎದ್ದು ಬರಬಾರದು. ಆರತಿಯಾಗುವ ವರೆಗೂ ಕುಳಿತಿರಬೇಕು. ಇಲ್ಲವಾದರೆ ಪೀಠಕ್ಕೆ ಅವಮಾನವಾಗುತ್ತದೆ. ಸ್ವಾಮಿಗಳಿಗೆ ಅಗೌರವವಾದಂತಾಗುತ್ತದೆ. ಏಕೆ ಎದ್ದು ಹೋದಳು ನಿಮ್ಮ ಮಗಳು, ಬೇಸರ ಬಂದಿತೇನೋ ಆಕೆಗೆ—ಎಂದು ಕೇಳಿದರು ಸ್ವಾಮಿಗಳು...."

"ಹಾಗೆಂದರೇ ?"

"ಹೌದು ನಿನ್ನ ಬಗ್ಗೆ ಅವರಲ್ಲಿ ಬಹಳ ವಿಶ್ವಾಸ. ನಮ್ಮೆಲ್ಲರ ಬಗೆಗೂ ಹಾಗೇ. ನಿನ್ನ ತಂದೆಯವರಿಗೂ ಅವರಿಗೂ ಬಲುದಿನಗಳ ಪರಿಚಯವಂತೆ. ಸೋಮವಾರ ನಮ್ಮ ಮನೆಗೆ ಬರಲು ಒಪ್ಪಿಕೊಂಡಿದ್ದಾರೆ."

"ಮನೆಗೆ ಬರುವರೇ ?" ಸರಸುವಿನ ಎದೆ ಢಡಢಡಿಸತೊಡಗಿದ್ದಿತು.

"ಹೌದು ಅವರು ಹಾಗೆಲ್ಲ ಅವರಿವರ ಮನೆಗಳಿಗೆ ಊಟಕ್ಕೆ ಬರುವವರಲ್ಲ. ನಮ್ಮ ಪೂರ್ವಜನ್ಮದ ಪುಣ್ಯ. ನಮ್ಮಲ್ಲಿಗೆ ಬರಲು ಒಪ್ಪಿಕೊಂಡಿದ್ದಾರೆ. ನನ್ನನ್ನು ಕಂಡು ಹೇಗೆ ಆದರದಿಂದ ಮಾತನಾಡಿಸಿದರೆನ್ನುತ್ತೀ ! ಆಗ ನೀನಲ್ಲಿ ಇದ್ದಿದ್ದರೆ ದಂಗಾಗಿ ಹೋಗುತ್ತಿದ್ದೆ. ನಾನು ಬರುವಾಗ ಬೇಡ ಬೇಡವೆಂದರೂ ಕೇಳದೆ ತಮ್ಮ ಮೋಟಾರನ್ನು ಕಳಿಸಿದರು. ಎಷ್ಟು ಒಳ್ಳೆಯ ಸ್ವಾಮಿಗಳಮ್ಮ ಅವರು. ಇಂಥವರನ್ನು ಇದುವರೆಗೆ ಕಂಡೇ ಇರಲಿಲ್ಲ ನಾನು. ಅವರು ಈ ಪೀಠಕ್ಕೆ ಬಂದದ್ದೂ ಒಳ್ಳೆಯದೇ ಆಯಿತು. ಆ ಮುದುಕ ಸ್ವಾಮಿ ನಮ್ಮನ್ನಾರನ್ನೂ ಮಾತನಾಡಿಸುತ್ತಲೇ ಇರಲಿಲ್ಲ. ತಾನಾಯಿತು. ತನ್ನ ಪುರಾಣವಾಯಿತು. ಯಾರನ್ನೂ ಕಣ್ಣೆತ್ತಿ ನೋಡುತ್ತಿರಲಿಲ್ಲ. ಅಂಥ ಜಂಬ ಆತನಿಗೆ. ಪೀಠದಿಂದ ಆತನನ್ನೋಡಿಸಿ ಇವರಿಗೆ ಅಧಿಕಾರ ಕೊಟ್ಟಿದ್ದು ಉಚಿತವೇ ಆಯಿತು. ಇಷ್ಟು ಸಣ್ಣ ವಯಸ್ಸಿನಲ್ಲೇ ಎಂಥ ಪಾಂಡಿತ್ಯ, ಎಂಥ ವಿದ್ವತ್ತು. ಆದರೂ ಎಂಥ ವಿನಯ. ನಿಜಕ್ಕೂ ದೇವರಂಥ ಸ್ವಾಮಿಗಳಿವರು...."

ದೇವರಂಥ ಸ್ವಾಮಿಗಳು !

ತಾಯಿಯ ಸರಲತನದ ಬಗೆಗೆ ಕನಿಕರ ಬರದಿರಲಿಲ್ಲ ಸರಸೂಗೆ. ಯಾವಾಗಲೂ ಹಾಗೆಯೆ ತನ್ನ ತಾಯಿ. ತುಂಬ ಭಾವುಕ ಮನಸ್ಸು. ದೇವರು ದಿಂಡರು, ಜಂಗಮರು, ಸ್ವಾಮಿಗಳು ಎಂದರೆ ಅಂಥ ಭಕ್ತಿ. ಬೆಳ್ಳಗಿರುವುದೆಲ್ಲವೂ ಹಾಲೇ ಎಂದು ಭ್ರಮಿಸುವ ಸ್ವಭಾವ. ಆ ಬೆಳ್ಳಗಿನ ವಸ್ತುವಿನ ಮರೆಯಲ್ಲಿ ಎಂಥ ಕಪ್ಪು ಅಡಗಿದೆಯೆಂಬುದು ಆಕೆಗೆ ತಿಳಿಯದು. ಸ್ವಾಮಿಗಳ ಆ ತೇಲುನೋಟ....ಅದರಲ್ಲಿ ತುಂಬಿ ಬಂದಿದ್ದ ಮಾದಕತೆ....ಈ ವಿಷಯ ತಾಯಿಗೇನು ಗೊತ್ತು !

ಕೆಳಗಿನಿಂದ ಗಂಟೆಯ ಸದ್ದು ಕೇಳಬರುತ್ತಿತ್ತು. ಬಸಪ್ಪ ಸೆಟ್ಟರ ಲಿಂಗ ಪೂಜೆ ಮುಗಿಯುತ್ತ ಬಂದಿತ್ತು ; ಒಂದು ಗಂಟೆಯ ವರೆಗೆ ನಡೆಯುವ ಪೂಜೆ! ಬೆಳಿಗ್ಗೆ, ಹೊತ್ತಿಗೆ ಮುಂಚೆಯೆ ಎದ್ದು ಹೊಳೆಗೆ ಹೋಗಿ ಸ್ನಾನ ತೀರಿಸಿಕೊಂಡು ಮಡಿಯಲ್ಲಿ ಬಂದು ಪೂಜೆ ಮಾಡುತ್ತ ಕುಳಿತರೆಂದರೆ ನಡುವೆ ಯಾರೂ ಅವರನ್ನು ಮಾತನಾಡಿಸುವಂತಿಲ್ಲ. ನಿಧಾನವಾಗಿ ಒಂದೊಂದೇ ವಸ್ತುವನ್ನರ್ಪಿಸುತ್ತ ಲಿಂಗದೇವರನ್ನು ಪೂಜಿಸುತ್ತಾರೆ. ಕೊನೆಗೆ ಗಂಟೆ ಬಾರಿಸಿದಾಗ ಗೊತ್ತಾಗುತ್ತದೆ—ನೈವೇದ್ಯದ ಸಮಯವಾಯಿತೆಂದು. ಆಗ ನಾಗಮ್ಮ ಧಾವಿಸುತ್ತಾಳೆ. ಬಿಸಿ ಬಿಸಿ ರೊಟ್ಟಿ, ಪಲ್ಯ, ಮೊಸರು, ಚಟ್ನಿ. ದೇವರಿಗೆ ಕೈ ತೋರಿಸಿ ಸೆಟ್ಟರು ಪ್ರಸಾದ ಸ್ವೀಕರಿಸಲಾರಂಭಿಸುತ್ತಾರೆ. ಒಂದು ದಿನವೂ ಈ ಪದ್ಧತಿ ತಪ್ಪುವಂತಿಲ್ಲ. ದೇವರನ್ನು ಪೂಜಿಸದೆ ಎಂದೂ ಬಾಯಲ್ಲಿ ನೀರು ಸಹ ಹಾಕುವುದಿಲ್ಲ ಅವರು. ಎಷ್ಟೋ ವರ್ಷಗಳಿಂದ ಹೀಗೆಯೆ ನಡೆದುಬಂದಿದೆ. ಪ್ರಾಯಶಃ ಅವರು ಕೊನೆಯುಸಿರು ಹಾಕುವ ವರೆಗೂ ನಡೆಯುತ್ತದೆ.

"ಪ್ರಸಾದದ ವೇಳೆಯಾಯಿತು," ಎಂದು ನಾಗಮ್ಮ ಲಗುಬಗೆಯಿಂದ ಕೆಳಕ್ಕಿಳಿದು ಹೋದಳು. ಅಕ್ಕ ತಂಗಿಯರೂ ಇಳಿದು ಬಂದರು. ಸದ್ದಾಗದಂತೆ ಬಚ್ಚಲಿಗಿಳಿದು ಮುಖ ತೊಳೆಯತೊಡಗಿದರು. ತಂದೆ ಪೂಜಾಗೃಹದಿಂದ ಹೊರ ಬರುವ ತನಕ ಯಾರೂ ಸದ್ದು ಮಾಡುವಂತಿಲ್ಲ. ಪೂಜೆಯನ್ನು ಮುಗಿಸಿ ಸೆಟ್ಟರು ಪ್ರಸಾದ ಸ್ವೀಕರಿಸುವಾಗಲೂ ಸಹ ಯಾವ ಗದ್ದಲವೂ ಆಗಕೂಡದು. ಪ್ರಸಾದವೂ ಪೂಜೆಯದೊಂದು ಭಾಗವೇ ಎಂದು ಅವರ ನಂಬಿಕೆ. ಆಗ ಆಹಾರ ಸ್ವೀಕರಿಸುತ್ತಿರುವುದು ಕೇವಲ ತಾನೊಬ್ಬನೇ ಅಲ್ಲ—

ತಾನು ಕೇವಲ ನಿಮಿತ್ತ ಮಾತ್ರ. ತನ್ನ ರೂಪದಲ್ಲಿ ಲಿಂಗದೇವರೇ ಆಹಾರ ಸ್ವೀಕರಿಸುತ್ತಿರುವನೆಂದು ಅವರ ತಿಳಿವಳಿಕೆ. ಅಂತೆಯೆ ಪ್ರಸಾದ ವಿನಿಯೋಗ ಸಮಯದಲ್ಲಿ ಮನೆಯಲ್ಲಿ ಯಾರೂ ಗಟ್ಟಿಯಾಗಿ ಮಾತನಾಡುವಂತಿಲ್ಲ. ನಾಗಮ್ಮ ರುದ್ರವ್ವಜ್ಜಿ ಸಹ ಪಿಸುದನಿಯಲ್ಲಿ ಮಾತನಾಡಿಕೊಳ್ಳುತ್ತಾರೆ. ಒಂದು ದಿನ ಗೌರಿ ತುಂಟತನ ಮಾಡಿ ದನಿ ತೆಗೆದು ಆಕ್ರೋಶ ಮಾಡಿದ್ದಳು. ಉಪಾಹಾರ ಮುಗಿಯುವವರೆಗೂ ಸುಮ್ಮನಿದ್ದು ಸೆಟ್ಟರು ಶಾಂತ ಮುದ್ರೆಯಿಂದಲೇ ಹೊರಗೆ ಬಂದು ಕೈಗೆ ಸಿಕ್ಕಿದ ಕಟ್ಟಿಗೆಯನ್ನೆತ್ತಿಕೊಂಡು ಹುಡುಗಿಯನ್ನು ಮನಸ್ವಿಯಾಗಿ ಥಳಿಸಿದ್ದರು. ಅಂದಿನಿಂದ ಗೌರಿಯ ತುಂಟತನ ಅರ್ಧಕ್ಕರ್ಧ ಕಡಿಮೆಯಾಗಿತ್ತು. ಸೆಟ್ಟರು ಮನೆಯಲ್ಲಿರುವಷ್ಟು ಹೊತ್ತು ಆಕೆ ಬಾಯಿ ತೆರೆಯಲು ಸಹ ಭಯಪಡುತ್ತಿದ್ದಳು. ಸರಸುವಿಗೆ ತಂದೆಯ ಸ್ವಭಾವ ಚೆನ್ನಾಗಿ ಗೊತ್ತು. ಆಕೆಯೂ ಅವರನ್ನು ಕನಲಿಸುವ ಗೊಡವೆಗೆ ಹೋಗುತ್ತಿರಲಿಲ್ಲ.

ಮುಖ ತೊಳೆದುಕೊಂಡು ಅಕ್ಕತಂಗಿಯರಿಬ್ಬರೂ ಒಲೆಯ ಮುಂದಿನ ಮಣೆಗಳ ಮೇಲೆ ಕುಳಿತುಕೊಂಡರು. ಹಣೆಗೆ ವಿಭೂತಿ ಹಚ್ಚಿಕೊಂಡು ರೊಟ್ಟಿ ತಿನ್ನತೊಡಗಿದರು. ಕೊಂಚ ಹೊತ್ತು ಕಳೆಯಿತು. ಉಪಾಹಾರ ಮುಗಿಸಿ ಸೆಟ್ಟರು ತಮ್ಮ ಕೊಟಡಿಗೆ ಹೋಗುತ್ತಲಿದ್ದ ಹಾಗೆ ರೊಟ್ಟಿ ತಿನ್ನುತ್ತಲಿದ್ದ ಮಕ್ಕಳನ್ನು ಕಂಡು ಹತ್ತಿರ ಬಂದು—"ಗೌರಾ ಈಗ ಎಷ್ಟನೆಯ ವರ್ಗ ಸರಸೂ ?" ಎಂದು ಕೇಳಿದರು.

ಸರಸೂಗೆ ಕೊಂಚ ನಗು ಬರದಿರಲಿಲ್ಲ. ತನ್ನ ಸ್ವಂತ ಮಗಳು ಯಾವ ವರ್ಗದಲ್ಲಿ ಓದುತ್ತಿರುವಳೆಂಬುದು ಸಹ ನೆನಪಿಲ್ಲ ತಂದೆಗೆ. ಅವರ ಚಿತ್ತವೆಲ್ಲ ವ್ಯಾಪಾರದಲ್ಲಿ. ರೂಪಾಯಿ ಆಣೆ ಕಾಸುಗಳಲ್ಲಿ. ಬೆಲ್ಲದ ಪೆಂಟಿ, ಮೆಣಸಿನ ಕಾಯಿ, ಸೇಂಗಾ ಧಾರಣೆಗಳಲ್ಲಿ. ಬೆಳಗಿನಿಂದ ರಾತ್ರಿಯವರೆಗೆ ವ್ಯಾಪಾರೀ ಪ್ರಪಂಚದಲ್ಲಿಯೇ ಮುಳುಗೇಳುವವರಿಗೆ ಇತರ ವಿಷಯಗಳ ನೆನಪಿರುವುದೂ ಕಷ್ಟವೇ ಸರಿ....

ಅವರ ಪ್ರಶ್ನೆಗೆ ಸರಸು ಉತ್ತರವೀಯುವುದಕ್ಕೆ ಮುನ್ನವೇ ಗೌರಿ ಉತ್ಸಾಹದಿಂದ ನುಡಿದಳು: "ಐದನೆಯ ಯತ್ತೇ ಅಪ್ಪ!"

"ಹನ್ನೊಂದು ವರ್ಷವಾಯ್ತು. ಇನ್ನೂ ಐದನೇ ಯತ್ತೆಯಲ್ಲೇ

ಇದ್ದೀಯಾ ದಡ್ಡೀ! ನಿನಗೊಬ್ಬ ಮಾಸ್ತರರನ್ನು ನೋಡಬೇ ವಿಧಿಯಿಲ್ಲ. ಮನೆಗೇ ಬಂದು ಪಾಠ ಹೇಳುತ್ತಾರೆ. ಆಗಬಹುದೋ ?"

"ಎಂಥ ಮಾಸ್ತರು ಅಪ್ಪ ?"

"ಮಾಸ್ತರರೆಂದರೆ ಇನ್ನು ಎಂಥವರಿರುತ್ತಾರೆ ? ಕಿವಿ ಹಿಂಡಿ ಪಾಠ ಕಲಿಸುವವರು. ಎದುರು ಮನೆಯ ಶಿವಮೂರ್ತಿಸ್ವಾಮಿಗಳನ್ನು ನೋಡಿದ್ದೀಯಾ ?"

"ಯಾರು, ಆ ಪಿಟೀಲು ಬಾರಿಸುವವರೇ ?"

ಬಸಪ್ಪಸೆಟ್ಟರು ಕೊಂಚ ನಕ್ಕು—"ಹೌದು, ಅವರೇ. ಪಿಟೀಲಿನವರೇ. ನಿನಗೂ ಪಿಟೀಲು ಕಲಿಯುವ ಆಸೆಯಿದೆಯೆ ?" ಎಂದು ಕೇಳಿದರು.

"ಕಲೀತೇನೆ ಅಪ್ಪ."

ಸರಸು ಕುತೂಹಲದಿಂದ ತಂದೆಯ ಮಾತನ್ನಾಲಿಸುತ್ತಿದ್ದಳು. ಆ ವಿಚಿತ್ರ ಯುವಕನ ಹೆಸರನ್ನಾಕೆ ಕೇಳಿದ್ದು ಇದೇ ಮೊದಲು. ಶಿವಮೂರ್ತಿ ಸ್ವಾಮಿ !

"ಅವರೇನು ಕಲಿಸಿಯಾರು ಬಿಡಿರಿ. ನೂರು ಹೊತ್ತೂ ಹುಚ್ಚು ಹುಚ್ಚಾಗಿ ಪಿಟೀಲು ಬಾರಿಸುತ್ತಿರುವವರು !" ಎಂದಳು ನಾಗಮ್ಮ.

"ಛೆ, ಹಾಗೆಲ್ಲ ಹಗುರಾಗಿ ಮಾತಾಡುವಂತಿಲ್ಲ ಅವರ ಬಗ್ಗೆ. ಹುಡುಗ ಬಹಳ ಬುದ್ಧಿವಂತನಂತೆ. ಮ್ಯಾಟ್ರಿಕ್‌ನಲ್ಲಿ ಈ ಜಿಲ್ಲೆಗೆಲ್ಲ ಮೊದಲನೆಯ ನಂಬರು ಬಂದವರಂತೆ. ಅವರಿಗೆ ಓದು ಹೇಳಿದ ಹಿರೇಮಠ ಮಾಸ್ತರರು ಮೊನ್ನೆ ಹೇಳುತ್ತಿದ್ದರು. ಅವರೇ ಶಿವಮೂರ್ತಿಯನ್ನು ನನಗೆ ಪರಿಚಯ ಮಾಡಿಕೊಟ್ಟದ್ದು."

"ಹಿರೇಮಠ ಮಾಸ್ತರರ ಶಿಷ್ಯನೇ ? ಹಾಗಾದರೆ ಚಿಂತೆಯಿಲ್ಲ," ಎಂದಳು ನಾಗಮ್ಮ. "ಗೌರಿಗೂ ಮನೆಯಲ್ಲಿ ಪಾಠ ಹೇಳಲು ಒಬ್ಬರು ಬೇಕೇ ಬೇಕು. ಈಕೆಯ ಧ್ಯಾನವೆಲ್ಲ ಆಟದ ಕಡೆಗೇ ಇರುತ್ತದೆ. ತುಂಟ ಹುಡುಗಿ ಈ ವರ್ಷ ಪರೀಕ್ಷೆಯಲ್ಲಿ ಹ್ಯಾಗಾದರೂ ಪಾಸಾಗುವಳೊ !"

"ಅದಕ್ಕೇ ನಾನು ಇವರನ್ನು ನಿಯಮಿಸಿದೆ. ಇಂದಿನಿಂದ ಅವರು ಪಾಠ ಹೇಳಲು ಬರುತ್ತಾರೆ. ಬೆಳಿಗ್ಗೆ ಎರಡು ತಾಸುಗಳವರೆಗೆ ಹೇಳಲು ಒಪ್ಪಿಕೊಂಡಿದ್ದಾರೆ."

"ಈಗ ಬರ್ತಾರೇನಪ್ಪ ಹಾಗಾದರೆ?" ಎಂದು ಕೇಳಿದಳು ಗೌರಿ.

"ಎಂಟು ಗಂಟೆಗೆ ಬರುತ್ತಾರೆ. ನಿನ್ನ ಪುಸ್ತಕ ಎಲ್ಲಾ ಅಣಿಯಾಗಿಟ್ಟುಕೋ," ಎಂದು ನುಡಿದು ಸೆಟ್ಟರು ತಮ್ಮ ಕೊಟಡಿಗೆ ತೆರಳಿದರು.

ಬಟ್ಟೆ ಹಾಕಿಕೊಂಡು ಅಂಗಡಿಗೆ ಹೊರಟು-ನಿಂತಾಗ ಶಿವಮೂರ್ತಿ ಮನೆಯಲ್ಲಿ ಅಡಿಯಿರಿಸಿದ. ಸೆಟ್ಟರನ್ನು ಕಂಡು ನಮಸ್ಕಾರ ಮಾಡಿ ಕೊಂಚ ಸಂಕೋಚದಿಂದಲೇ ಒಳಕ್ಕೆ ಬಂದ.

ಅಡುಗೆಯ ಮನೆಯ ಬಾಗಿಲಲ್ಲಿ ನಿಂತುಕೊಂಡು ನಾಗಮ್ಮ, ಸರಸು, ರುದ್ರವ್ವಜ್ಜಿ ಆತನನ್ನು ಕುತೂಹಲದಿಂದ ನಿರುಕಿಸುತ್ತಲಿದ್ದರು. ಶಿವಮೂರ್ತಿ ಇಪ್ಪತ್ತೈದು ಇಪ್ಪತ್ತಾರು ವರ್ಷ ವಯಸ್ಸಿನ ಯುವಕ. ಸಾಕಷ್ಟು ಎತ್ತರವಾದ ನಿಲುವು—ತಕ್ಕಮಟ್ಟಿಗೆ ತುಂಬಿಕೊಂಡು ಬಳೆದಿದ್ದ ಶರೀರ. ಬಿಳಿಯ ಖಾದಿ ಬಟ್ಟೆಯ ನೆಹರೂ ಬನೀನು ತೊಟ್ಟು ಖಾದಿಯ ಪಾಯಿಜಾಮು ಧರಿಸಿದ್ದ. ಭುಜಗಳ ಬಳಿ ಅಂಗಿ ಕೊಂಚ ಹರಿದು ಹೋದುದೂ ಕಾಣುತ್ತಿತ್ತು. ಯುವಕ ನೋಡಲು ಲಕ್ಷಣವಾಗಿದ್ದ. ಮೊದಲ ನೋಟಕ್ಕೇ ಆತನ ಬಗ್ಗೆ ಯಾರಿಗಾದರೂ ಒಳ್ಳೆಯ ಅಭಿಪ್ರಾಯ ಹುಟ್ಟುವಂತಿದ್ದಿತು.

"ಪರವಾಯಿಲ್ಲ. ಒಳ್ಳೆಯ ಹುಡುಗ," ಎಂದುಕೊಂಡಳು ನಾಗಮ್ಮ.

"ಎಷ್ಟು ಚೆಂದ ಇದಾನೆ ತಾಯಿ !" ಎಂದುಕೊಂಡಳು ಸರಸು.

"ಹುಡುಗ ಸಂಭಾವಿತನ ಹಾಗೆ ಕಾಣುತ್ತಾನೆ. ನಿರುಪದ್ರವ ಪ್ರಾಣಿ," ಎಂದುಕೊಂಡಳು ರುದ್ರವ್ವಜ್ಜಿ.

"ಕಿವಿ ಹಿಂಡುವ ಮಾಸ್ತರರ ಹಾಗಂತೂ ಇಲ್ಲ ಇವರು," ಎಂದುಕೊಂಡಳು ಗೌರಿ.

ಸೆಟ್ಟರು ಆತನನ್ನು ಸ್ವಾಗತಿಸಿ ಪಡಸಾಲೆಯಲ್ಲಿದ್ದ ಜಮಖಾನದ ಮೇಲೆ ಕುಳ್ಳಿರಿಸಿದರು. ಗೌರಿಯನ್ನು ಹತ್ತಿರ ಕರೆದು ಆತನಿಗೆ ಪರಿಚಯ ಮಾಡಿಕೊಟ್ಟು—"ಇನ್ನು ಮೇಲೆ ಇವರು ನಿನ್ನ ಗುರುಗಳು ಗೌರೀ. ನಮಸ್ಕಾರ ಮಾಡು ಇವರಿಗೆ," ಎಂದರು.

ಗೌರಿ ತನ್ನೆರಡೂ ಕೈಗಳನ್ನು ಜೋಡಿಸಿ, ತುಟಿಗಳಲ್ಲಿಯೇ ನಗುತ್ತ—"ನಮಸ್ಕಾರರೀ ಮಾಸ್ತರರೇ!" ಎಂದಳು.

"ಬಹಳ ತುಂಟ ಹುಡುಗಿ ನಮ್ಮ ಗೌರಿ. ಮಗುವಾಗಿದ್ದಾಗಿನಿಂದ

ಹೀಗೇ. ಈಕೆಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದರೆ ಸಾಕು ಸಾಕಾಗಿ ಹೋಗುತ್ತದೆ ಮನೆಯವರಿಗೆಲ್ಲಾ. ನೀವಾದರೂ ಈ ಕುದುರೆಯನ್ನು ಪಳಗಿಸಬೇಕು," ಎಂದರು ಸೆಟ್ಟರು.

ಶಿವಮೂರ್ತಿ ನಕ್ಕ. ಆತನ ಅಂದವಾದ ದಂತಪಂಕ್ತಿ ಪಳಕ್ಕನೆ ಹೊಳೆದು ಪಡಸಾಲೆಯಲ್ಲಿ ಒಂದು ಬಗೆಯ ಲಾವಣ್ಯ ಪಸರಿಸಿದಂತಾಯಿತು. ಬಾಗಿಲ ಮರೆಯಲ್ಲಿ ನಿಂತು ನೋಡುತ್ತಿದ್ದ ಸರಸು—ಎಷ್ಟು ಮೋಹಕವಾಗಿ ನಗುತ್ತಾನೆ !—ಎಂದುಕೊಂಡಳು. ಹಾಲುಗಲ್ಲದ ಹಸುಳೆಯಂಥ ಮುಗ್ಧ ನಗೆ ಅದು.

"ನಿನ್ನ ಹೆಸರೇನು ತಂಗೀ ?"

ತುಟಿಗಳೆರಡನ್ನೂ ವಿಚಿತ್ರವಾಗಿ ಬಳುಕಿಸುತ್ತ ಗೌರಿ ಒಯ್ಯಾರದಿಂದ ಉತ್ತರವಿತ್ತಳು ;

"ಗೌ—ರಾಂ—ಬಿ—ಕಾ."

"ಓ ಹೊ ಹೊ ಹೊ ಹೊ ! ಗೌರಾಂಬಿಕಾ ! ಮಾತಿನಲ್ಲಿ ಮಾತ್ರ ಯಾರಿಗೂ ಕಡಿಮೆಯಿಲ್ಲ. ಸುಮ್ಮನೆ ಗೌರವ್ವ ಎಂದು ಹೇಳಿಬಿಡಬಾರದೆ ? ಗೌ-ರಾಂ-ಬಿ-ಕಾ ಎಂದು ದೊಡ್ಡದು ಮಾಡಿ ಹೇಳುತ್ತಾಳೆ. ಯಾರು ಕಲಿಸಿದರೇ ನಿನಗೆ ಹೀಗೆ ಹೇಳಲು ?" ಎಂದರು ಬಸಪ್ಪಸೆಟ್ಟರು.

"ಅಕ್ಕಾ ಅವರು."

ಬಸಪ್ಪ ಸೆಟ್ಟರು ನಕ್ಕು ಮೇಲಕ್ಕೆದ್ದರು. "ಅಂಗಡಿಗೆ ಹೊತ್ತಾಯಿತು. ನಾನು ಹೋಗುತ್ತೇನೆ. ನಿಮ್ಮ ಪಾಠ ಸಾಗಲಿ. ಇವೊತ್ತು ನಿನ್ನ ಕೋಣೆಯಲ್ಲೇ ಆಗಲಿ ಸರಸೂ. ಸಾಯಂಕಾಲ ಅವರ ಪಕ್ಕದ ಕೊಟಡಿಯಲ್ಲಿನ ಸಾಮಾನು ತೆಗೆಯಿಸಿ ಖಾಲಿ ಮಾಡಿಸಿಬಿಡಿರಿ. ಪಾಠಕ್ಕೆ ಅನುಕೂಲವಾಗುತ್ತದೆ," ಎಂದು ಹೇಳಿ ಅವರು ಹೊರಟುಹೋದರು.

"ಬರ್ರಿ ಮಾಸ್ತರರೇ, ಅಟ್ಟದ ಮೇಲೆ ಹೋಗೋಣ," ಎಂದು ಗೌರಿಯೂ ಮೇಲಕ್ಕೆದ್ದಳು. ಶಿವಮೂರ್ತಿ ಆಕೆಯನ್ನು ಹಿಂಬಾಲಿಸಿಕೊಂಡು ನಡೆದ.

ಮೇಜಿನ ಬಳಿಯಿದ್ದ ಕುರ್ಚಿಯನ್ನು ಜಾಡಿಸಿ ಧೂಳು ಒರೆಸಿ "ಕೂಡ್ರಿ ಮಾಸ್ತರರೇ," ಎಂದಳು ಗೌರಿ. ಆತ ಕುಳಿತುಕೊಂಡ. ಸಹಜ

ವಾಗಿಯೇ ಆತನ ದೃಷ್ಟಿ ಮೇಲಿನ ಗೋಡೆಗೆ ನೇತಾಡುತ್ತಿದ್ದ ಮಹಾದೇವಿ ಯಕ್ಕನ ವರ್ಣಚಿತ್ರದ ಕಡೆಗೆ ಹೊರಳಿತು. ಮೂಲೆಯಲ್ಲಿದ್ದ ಮಂಚ.... ತೆಳುವಾದ ಸೊಳ್ಳೆಯ ಪರದೆ....ಮಾಟವಾದ ಹಾಸಿಗೆ....ಶುಭ್ರವಾದ ಮೇಲು ಹೊದಿಕೆ....ಬೆಲೆ ಬಾಳುವ ದಪ್ಪಗಿನ ರಗ್ಗು....ಮಂಚದ ಮೇಲೆ ತೂಗಾಡುತ್ತಿದ್ದ ಬಿಳಿಯ ರವಕೆಗಳೆರಡು....ಆತ ಕೊಂಚ ತಬ್ಬಿಬ್ಬಾದ. ವಿದ್ಯಾರ್ಥಿನಿಯರ ವಸತಿಗೃಹದಲ್ಲಿ ಅಡಿಯಿರಿಸಿದ ಬ್ರಹ್ಮಚಾರಿಯಂತೆ ಆತನ ಸ್ಥಿತಿಯಾಗಿತ್ತು.

"ಇಲ್ಲಿ ಯಾರು ಇರುತ್ತಾರೆ ಗೌರಮ್ಮ?"

ಗೌರಿ ತನ್ನ ತುಟಿಗಳ ಮೇಲೆ ಬೆರಳಿಟ್ಟುಕೊಂಡು—"ನನ್ನ ಹಾಗೆಲ್ಲ ಕರೆಯಬೇಡಿ ಮಾಸ್ತರರೇ," ಎಂದಳು.

"ಮತ್ತೆ ಹೇಗಮ್ಮ ಕರೆಯುವದು ?" ಎಂದು ನಗುತ್ತ ಕೇಳಿದನಾತ.

"ಇದೇ ಈಗ ನೀವು ಹೆಸರೇನೆಂದು ಕೇಳಿದಾಗ ನಾನೇನು ಹೇಳಿದೆ, ನೆನಪಿಲ್ಲವೆ ?"

"ಓಹ್ಹೊ ! ಗೌರಾಂಬಿಕಾ, ಅಂತಲೇ ? ಆಗಲಮ್ಮ. ಇನ್ನು ಮೇಲೆ ನಿನ್ನನ್ನು ಗೌರಾಂಬಿಕಾ ಎಂದೇ ಕರೆಯುತ್ತೇನೆ."

"ಹೌದು ಮತ್ತೆ. ನಮ್ಮ ಅಕ್ಕಾವರು ಸಹ ನನ್ನ ಹಾಗೇ ಕರೆಯುತ್ತಾರೆ. ಅವರೂ ಮಾಸ್ತರು. ನೀವೂ ಮಾಸ್ತರು. ಅಂದ ಮೇಲೆ ನೀವೂ ಗೌರಾಂಬಿಕಾ ಅಂತಲೇ ಕರಿಯಬೇಕಲ್ಲವೆ?"

"ಹೌದವ್ವ. ಹಾಗೇ ಕರೆಯೋಣ. ಎಲ್ಲಿ ಗೌರಾಂಬಿಕಾ, ಈ ಕೋಣೆಯಲ್ಲಿ ನೀನೊಬ್ಬಾಕೆಯೆ ಇರುತ್ತೀಯಾ ?"

"ನಾನು–ನಮ್ಮ ಅಕ್ಕ ಸರಸೂ."

"ಸರಸೂ ?"

"ಸರಸ್ವತೀ ಅಂತ. ನಾವೆಲ್ಲ ಸರಸೂ ಅನ್ನುತ್ತೇವೆ. ಅಂದ ಮಾತ್ರಕ್ಕೆ ನೀವೂ ಸರಸೂ ಅನ್ನಬಾರದು ಮತ್ತೆ."

"ಇನ್ನೇನೆನ್ನಬೇಕು ?"

"ಸರಸ್ವತೀದೇವಿ ಅನ್ನಬೇಕು."

"ಆಗಲಿ ಹಾಗೇ ಅನ್ನೋಣ. ನಿಮ್ಮ ಅಕ್ಕನೂ ಓದುತ್ತಿದಾಳೆಯೆ ?"

"ಇಲ್ಲ. ಆಕೆ ಶಾಲೆ ಬಿಟ್ಟುಬಿಟ್ಟಳು. ಈಗ ಬರೀ ಪುಸ್ತಕ ಓದು ತ್ತಾಳೆ. ಕತೆ ಕಾದಂಬರಿ ಕವಿತಾ."

"ಕವಿತೆ ಓದುತ್ತಾಳೆಯೆ ? ಎಂಥ ಕವಿತೆ ?"

"ಎಂಥದೆಂದರೆ ? ಇಲ್ಲಿ ನೋಡಿ. ಇಲ್ಲೇ ಒಂದು ಪುಸ್ತಕವಿದೆ. ಇದರ ಮೇಲೆ ಬಹಳ ಪ್ರೀತಿ ಸರಸಕ್ಕನಿಗೆ–ಯಾವಾಗಲೂ ಇದನ್ನೇ ಓದುತ್ತ ಕೂತಿರುತ್ತಾಳೆ," ಎಂದು ಹೇಳುತ್ತ ಗೌರಿ ಮೇಜಿನ ಮೇಲಿದ್ದ "ಪ್ರಭುಲಿಂಗ ಲೀಲೆಯ ಸಂಗ್ರಹ"ವನ್ನೆತ್ತಿ ಆತನ ಎದುರಿಗೆ ಹಿಡಿದಳು.

ಶಿವಮೂರ್ತಿ ಕುತೂಹಲದಿಂದ ಪುಸ್ತಕವನ್ನು ಕೈಗೆತ್ತಿಕೊಂಡ. ಮೊದಲ ಹಾಳೆಯ ಮೇಲೆ ದುಂಡಗಿನ ಮುದ್ದಾದ ಅಕ್ಷರಗಳಲ್ಲಿ ಬರೆಯಲ್ಪ ಟ್ಟಿದ್ದ ಹೆಸರು : "ಸರಸ್ವತೀದೇವಿ ಸೆಟ್ಟರ." ಹಲವು ಪುಟಗಳನ್ನು ಮಗುಚಿ ಹಾಕಿದ. ಒಂದು ಪುಟದ ಮೇಲೆ ಕೊಂಚ ಕಂದುಬಣ್ಣಕ್ಕೆ ತಿರುಗಿದ ದಪ್ಪ ಗಿನ ಕಲೆಗಳಿದ್ದುದು ಕಂಡು ಬಂದಿತು. ಶಿವಮೂರ್ತಿ ಸಹಜವಾಗಿಯೆ ಆ ಕಲೆಗಳ ಮೇಲೆ ಬೆರಳಾಡಿಸಿದ. ಆ ಭಾಗವಿನ್ನೂ ಬಿಸಿಯಾಗಿದ್ದ ಹಾಗಿದ್ದಿತು. ಆತನ ಕುತೂಹಲ ಜಾಗೃತವಾಯಿತು. ಆ ಪುಟದಲ್ಲಿನ ಪದ್ಯವೊಂದು ಸರಸರನೆ ಆತನ ದೃಷ್ಟಿಯೆದುರು ಮೂಡಿತು.

"ಕಾರ ಮುಗಿಲಿನ ಗರ್ಜನೆಯ ಕಿವಿ
ಯಾರೆ ಕೇಳಿದ ಸೋಗೆಯಂತಿರೆ
ಹಾರವಿಸುತಲಿ ಅಲ್ಲಮನ ಮದ್ದಳೆಯ ಧ್ವನಿಗೇಳ್ದು
ನಾರಿ ಮಾಯಾದೇವಿ ನಲಿವುತಿ
ದಾರು ಹೊರಕಡೆಯಲ್ಲಿ ತೂರ್ಯೋ
ದ್ಧಾರವನು ಮಾಡುವರೆನುತ ಕೇಳಿದಳು ಕೆಳದಿಯರ...."

ಈ ಚರಣದ ಮೇಲೂ ಒಂದೆರಡು ಕಲೆಗಳು ಮೂಡಿದ್ದುವು. ಅವು ಕಣ್ಣೀರಿನಿಂದಾದ ಕಲೆಗಳೆನ್ನುವಲ್ಲಿ ಶಿವಮೂರ್ತಿಗೆ ಯಾವ ಸಂದೇಹವೂ ಇರಲಿಲ್ಲ. ಆ ಕಣ್ಣೀರೂ ಬಹು ಹಿಂದಿನದಲ್ಲ. ನಿನ್ನೆ ಮೊನ್ನೆಯದು. ಈ ಪದ್ಯಗಳನ್ನೋದುತ್ತ ಓದುತ್ತ ಸರಸು ಕಣ್ಣೀರು ಮಿಡಿದಿರುವಳೋ ಏನೋ....

"ನಿಮ್ಮ ಸರಸಕ್ಕನ ವಯಸ್ಸೆಷ್ಟು, ಗೌರಾಂಬಿಕಾ?" ಎಂಬ ಪ್ರಶ್ನೆ

ತುದಿನಾಲಿಗೆಯ ಮೇಲೇ ಬಂದಿದ್ದಿತು. ಆದರಾತ ಅದನ್ನು ಹೊರದೂಡಲಿಲ್ಲ. ತನ್ನ ಕುತೂಹಲವೆಲ್ಲವನ್ನೂ ಅಡಗಿಸಿಕೊಂಡು ಗೌರಿಗೆ ಪಾಠ ಹೇಳುವ ಕೆಲಸಕ್ಕಣಿಯಾದ.

[೬]

ಆತ ಬರುತ್ತಿದ್ದ.

ಎರಡು ಗಂಟೆಗಳ ವರೆಗೆ ಗೌರಿಗೆ ಪಾಠ ಹೇಳುತ್ತಿದ್ದ.

ಹೊರಟು ಹೋಗುತ್ತಿದ್ದ.

ಪಡಸಾಲೆಯ ಗೋಡೆಗೆ ನೇತುಹಾಕಿದ್ದ ಗಡಿಯಾರ ಎಂಟು ಗಂಟೆಯನ್ನು ಬಾರಿಸತೊಡಗುತ್ತಲೂ ಸರಸುವಿನ ಹೃದಯದಲ್ಲೂ ಅದರ ಪ್ರತಿಧ್ವನಿಯೆದ್ದ ಹಾಗಾಗುವುದು. ಒಂದು—ಎರಡು—ಮೂರು—ನಾಲ್ಕು—ಎಂಟು! ಗಂಟೆ ಎಂಟಾಯಿತು. ಆತ ಬರುವ ಹೊತ್ತಾಯಿತು. ಬಂದ. ಕಾಲುಗಳಲ್ಲಿನ ಚಪ್ಪಲಿಗಳು ಸದ್ದಾಗದಂತೆ ಹೇಗೆ ನಯವಾಗಿ ನಡೆದು ಬರುತ್ತಾನೆ ಆತ....ನಸು ಬಾಗಿದ ತಲೆ....ಬಾಗಿದ ದೃಷ್ಟಿ....ಬಾಗಿಲಿನೊಳಕ್ಕೆ ಬಂದವನು ಅತ್ತ ಇತ್ತ ದೃಷ್ಟಿ ತಿರುಗಿಸುವ ಗೊಡವೆಗೆ ಹೋಗದೆ ಮೆಟ್ಟಲುಗಳನ್ನೇರಿ ನೇರವಾಗಿ ಮೇಲಕ್ಕೆ ಹೋಗುತ್ತಾನೆ. ತನ್ನ ಕೊಟಡಿಯ ಪಕ್ಕದ ಕೊಟಡಿ ತೆರವು ಮಾಡಿಸಲ್ಪಟ್ಟಿದೆ. ಮೆಟ್ಟಲು ಏರಿ ಆತ ಅದರಲ್ಲಿ ಅಡಿಯಿರಿಸಿದಾಗ ಕೆಳಗಡೆ ಪಡಸಾಲೆಯಲ್ಲಿ ಕುಳಿತ ತನಗೆ ಅಡಿಗಳ ಸದ್ದು ಕೇಳಿಸುತ್ತದೆ. ಆತನ ನಡಿಗೆಯೂ ಎಷ್ಟು ಚೆಂದ! ಬಿಂಕವಿಲ್ಲ. ಬಡಿವಾರವಿಲ್ಲ. ನಯ, ನಾಜೂಕು! ಆತನ ಉಡುಗೆಯ ಹಾಗೆಯೆ ನಡಿಗೆ. ತೀರ ಸಾದಾ. ತೀರ ಸರಲ. ದಿನವೂ ಅದೇ ಉಡುಗೆ-ಅದೇ ಬಿಳಿಯ ಖಾದಿಯ ಅಂಗಿ, ಖಾದಿಯ ಪಾಯಿಜಾಮಾ. ಆತನ ನಸು ನೀಳವಾದ ದೇಹಕ್ಕೆ ಎಷ್ಟು ಸೊಗಸಾಗಿ ಒಪ್ಪುತ್ತದೆ ಈ ಸಾದಾ ಉಡುಗೆ. ಎಣ್ಣೆ ಹಚ್ಚಿ ಬಾಚಿಕೊಂಡಿದ್ದರೂ ನೆಟ್ಟಗೆ ಕುಳಿತುಕೊಳ್ಳದೆ ಹಣೆಯ ಮೇಲೆ ಉರುಳಿರುವ ಆ ಮುಂಗುರುಳು! ಆ ವಿಶಾಲವಾದ ಹಣೆಗೆ ಎಂಥ ಶೋಭೆ ಬರುತ್ತದೆ ಆ ಮುಂಗುರುಳುಗಳಿಂದ..

ಎಂಟು ಗಂಟೆಯಾಗುತ್ತದೆ. ಆತ ಬರುತ್ತಾನೆ.

ಹತ್ತು ಗಂಟೆಯಾಗುತ್ತದೆ. ಆತ ಹೋಗುತ್ತಾನೆ.

ಆತ ಮನೆಗೆ ಬರತೊಡಗಿದುದಕ್ಕೆ ಇನ್ನೂ ಮೂರು ದಿನ ಕಳೆದಿಲ್ಲ–ಆಗಲೇ ಆತನ ಪಾದಧ್ವನಿ ತೀರ ಪರಿಚಿತವಾಗಿ ಹೋಗಿದೆ ಸರಸೂಗೆ. ಸಾವಿರಾರು ದಿನಗಳಿಂದ ಆ ಧ್ವನಿಯನ್ನು ತಾನು ಕೇಳಿರಬೇಕೆಂದು ಭಾಸವಾಗುತ್ತದೆ. ಆತ ಅಪರಿಚಿತನೆಂದು ಎನ್ನಿಸುತ್ತಲೇ ಇಲ್ಲ. ಆತನಿಗೂ ತನಗೂ ಪೂರ್ವಜನ್ಮದಿಂದಲೂ ಋಣಾನುಬಂಧವಿರಬೇಕೆಂದು ಆಕೆಗೆನ್ನಿಸುತ್ತಿದೆ.

ಆತ ಬರುತ್ತಾನೆ. ಹೋಗುತ್ತಾನೆ. ಒಂದು ಸಲವೂ ಆಕೆಯನ್ನು ಕಣ್ಣೆತ್ತಿ ನೋಡಿಲ್ಲ. ಆತ ಪಾಠ ಹೇಳುತ್ತಿರಬೇಕಾದರೆ ಆಕೆ ಪಕ್ಕದಲ್ಲಿನ ತನ್ನ ಕೊಟಡಿಯಲ್ಲಿ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿರುತ್ತಾಳೆ. ಪುಸ್ತಕ ಕೈಯಲ್ಲೇ ಉಳಿಯುತ್ತದೆ. ಅದರ ಪುಟಗಳ ಮೇಲೆ ದೃಷ್ಟಿ ಓಡುವುದಿಲ್ಲ. ಅದು ಅಂತರ್ಮುಖಿಯಾಗಿ ಯಾವುಯಾವುದೋ ಸುಂದರ ಕನಸುಗಳನ್ನು ಕಾಣುತ್ತಿರುತ್ತದೆ. ಪಕ್ಕದ ಕೊಟಡಿಯಿಂದ ಆತನ ಧ್ವನಿ ಕೇಳಬರುತ್ತಿರುತ್ತದೆ. ಮಧುರವಾದ ಧ್ವನಿ ದುಂಬಿಯ ಝೇಂಕಾರದಂಥ ಧ್ವನಿ. ಆತನ ಪಿಟೀಲಿನ ರಾಗದ ಹಾಗೆಯೆ ಆ ಧ್ವನಿಗೂ ಒಂದು ಬಗೆಯ ವೇದನೆಯ ಬಣ್ಣ ಬಂದಂತಿದೆ. ಆತ ಮಾತನಾಡಿದಾಗ ಆತನ ಹೃದಯವೇ ಎದ್ದು ಬಂದು ತನ್ನ ವ್ಯಥೆಯನ್ನೆಲ್ಲ ತೋಡಿಕೊಂಡಂತಾಗುತ್ತದೆ.

ಕವಿತೆಯೆಂದರೆ ಆತನಿಗೆ ತುಂಬ ಪ್ರೀತಿ. ಆತ ಪಾಠಕ್ಕಾರಂಭಿಸಿದ ಎರಡನೆಯ ದಿನವೇ ಆತನ ಕಾವ್ಯಪ್ರೀತಿ ಆಕೆಯ ಅನುಭವಕ್ಕೆ ಬಂದಿತು. ಗದ್ಯಪಾಠಗಳನ್ನು ಬದಿಗಿರಿಸಿ ಆತ ಪದ್ಯಗಳನ್ನೇ ಎತ್ತಿಕೊಂಡು ಹೇಳಲಾರಂಭಿಸುತ್ತಿದ್ದ. ಮೊದಲೊಂದು ಸಲ ಆ ಪದ್ಯವನ್ನು ಭಾವಪೂರ್ಣವಾಗಿ ಹಾಡುವುದು....ಅನಂತರ ಅರ್ಥವಿವರಣೆ. ಪಠ್ಯಪುಸ್ತಕದಲ್ಲಿನ ಆ ಸಾಮಾನ್ಯ ಪದ್ಯವೂ ಆತನ ಮುಖದಿಂದ ಬಂದಾಗ ಅದ್ಭುತ ಪ್ರತಿಭೆಯೊಂದನ್ನು ಪಡೆದ ಹಾಗಿರುತ್ತಿತ್ತು. ಆತನ ವಿವರಣೆಯ ಪದ್ಧತಿಯೂ ಬಲು ಮೋಹಕವಾಗಿತ್ತು. ಅರ್ಥ ಹೇಳುವಾಗ ಬಗೆಬಗೆಯ ಉದಾಹರಣೆಗಳನ್ನು ಕೊಟ್ಟು ರಸವತ್ತಾಗಿ ಮಾಡಿ ಹೇಳುತ್ತಿದ್ದ.

ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಕೇಳುತ್ತ ಕುಳಿತಿರುತ್ತಿದ್ದವಳು

ಸರಸು. ಯಾವುದಾದರೊಂದು ನೆಪ ಮುಂದೆ ಮಾಡಿಕೊಂಡು ಆ ಕೊಟಡಿಗೆ ಹೋಗಿ ಆತನೆದುರಿಗೆ ಕಾಣಿಸಿಕೊಳ್ಳಬೇಕು, ಆತನನ್ನೊಮ್ಮೆ ತೀರ ಸಮೀಪದಿಂದ ಕಣ್ಣು ತುಂಬ ನೋಡಬೇಕು, ಆತನೊಂದಿಗೆ ಒಂದೆರಡು ಮಾತನಾಡಬೇಕು ಎಂಬ ಅಪೇಕ್ಷೆ ಅವಳನ್ನು ಹುಚ್ಚಿಯನ್ನಾಗಿಸುತ್ತಿತ್ತು. ಆದರೆ, ಕುರ್ಚಿಯನ್ನು ಬಿಟ್ಟು ಏಳಲು ಧೈರ್ಯವಾಗುತ್ತಿರಲಿಲ್ಲ. ಕುಳಿತಲ್ಲಿಯೇ ಕಣ್ಣು ಮುಚ್ಚಿಕೊಂಡು ಒರಗಿ ಆತನ ಮೋಹಕ ಧ್ವನಿಯಲ್ಲಿ ತನ್ನ ವ್ಯಕ್ತಿತ್ವವನ್ನೆಲ್ಲ ಮುಳುಗಿಸಿ ಬಿಡುವಳು.

ಎಂದಿನಂತೆಯೆ ಆತ ರಾತ್ರಿಕಾಲದಲ್ಲಿ ಪಿಟೀಲು ನುಡಿಸುತ್ತ ತನ್ನ ಕೊಟಡಿಯಲ್ಲಿ ಕುಳಿತುಕೊಳ್ಳುತ್ತಿದ್ದ. ಆ ಸಮಯಕ್ಕೆ ಸರಿಯಾಗಿ ಸರಸು ತನ್ನ ಕೊಟಡಿಯಲ್ಲಿ ಕಿಟಕಿಯ ಹತ್ತಿರ ಕುಳಿತು ಆತನನ್ನೇ ದಿಟ್ಟಿಸುವಳು. ಆತ ಮೇಲುಗಡೆ ದೃಷ್ಟಿ ಹೊರಳಿಸಿದ್ದರೆ ಅಲ್ಲಿ ತದೇಕಚಿತ್ತದಿಂದ ಕುಳಿತು ಕೇಳುವ ಆಕೆಯನ್ನು ಕಾಣಬಹುದಾಗಿತ್ತು. ಆದರೆ, ಆತ ಒಂದು ಸಲವೂ ದೃಷ್ಟಿಯನ್ನು ಆ ಕಡೆಗೆ ಹೊರಳಿಸುತ್ತಿರಲಿಲ್ಲ. ತಾನಾಯಿತು, ತನ್ನ ಪಿಟೀಲು ಆಯಿತು, ತನ್ನ ವಾದನವಾಯಿತು. ಎಂದಿನಂತೆಯೆ ಮುಚ್ಚಿದ ಕಣ್ಣು, ರಾಗದಲ್ಲಿ ತನ್ಮಯವಾದ ಚಿತ್ತ. ಸರಸು ಅಲ್ಲಿ ದಿನವೂ ಕುಳಿತು ತನ್ನನ್ನೇ ದಿಟ್ಟಿಸಿ ನೋಡುತ್ತಿರಬಹುದೆಂಬುದರ ಕಲ್ಪನೆಯೂ ಆತನಿಗಿರಲಿಲ್ಲ.

ಆತ ಒಂದು ಸಲವಾದರೂ ಮಹಡಿಯ ಕಿಟಕಿಯ ಕಡೆಗೆ ದೃಷ್ಟಿ ಹೊರಳಿಸಬೇಕು, ಒಂದು ಸಲವಾದರೂ ತನ್ನ ದೃಷ್ಟಿಯೊಂದಿಗೆ ಆತನ ದೃಷ್ಟಿ ಕೂಡಬೇಕು ಎಂದು ಸರಸು ಹಾರೈಸಿದ್ದೇ ಹಾರೈಸಿದ್ದು. ಆದರೆ....ವಿಚಿತ್ರ ಯುವಕ....ವಿಚಿತ್ರ ಸ್ವಭಾವ....ತನ್ನ ಪಿಟೀಲನ್ನುಳಿದು ಬೇರೆ ವಸ್ತುಗಳೇ ಪ್ರಪಂಚದಲ್ಲಿಲ್ಲವೆಂದು ಆತ ಭಾವಿಸಿದ್ದನೇನೊ !

ಆತನ ಈ ವಿಲಕ್ಷಣ ಸ್ವಭಾವವನ್ನು ಕುರಿತು ಯೋಚಿಸುತ್ತ ಸರಸು ಅಚ್ಚರಿಗೊಳ್ಳುತ್ತಿದ್ದಳು. ಇಂಥ ವಯಸ್ಸಿನಲ್ಲಿ ಇಂಥ ನಿರ್ಲಿಪ್ತ ವೃತ್ತಿಯೂ ಇರುವುದುಂಟೇ? ಆತನಿಗೀಗ ತುಂಬು ಹರೆಯ. ಪ್ರಣಯ ವಿಚಾರಗಳಲ್ಲಿ ಆತುರದಿಂದ ತೊಡಕಿಕೊಳ್ಳುವ ವಯಸ್ಸು. ತಾನು ಈ ಮನೆಯಲ್ಲಿರುವುದು, ಅಟ್ಟದ ಮೇಲಿನ ಈ ಕೊಟಡಿಯಲ್ಲಿ ಕಾಲ ಕಳೆಯುವುದು ಆತನಿಗೆ ತಿಳಿಯದೇ? ಖಂಡಿತ ತಿಳಿದಿರಲೇಬೇಕು. ತನ್ನನ್ನಾತ ನೋಡಿರಬಹುದೇ

ಇಲ್ಲವೆ? ಪಡಸಾಲೆಯಲ್ಲಿ ತಾನು ಕುಳಿತಿದ್ದಾಗ ಒಂದು ಸಲವೂ ನೋಡಿರಲಾರನೇ? ಯಾರಿಗೆ ಗೊತ್ತು....ದೃಷ್ಟಿಯನ್ನು ಅತ್ತ ಇತ್ತ ಹರಿಬಿಡುವ ಸ್ವಭಾವವೇ ಆತನದಲ್ಲವೆಂದು ತೋರುತ್ತದೆ. ತಿಂಗಳಿನಿಂದ ತಮ್ಮ ಎದುರಿಗಿನ ಮನೆಯಲ್ಲಿಯೆ ನೆಲಸಿದ್ದರೂ ಇದುವರೆಗೆ ಹೀಗೆ ಅಪರಿಚಿತನಾಗಿಯೇ ಉಳಿದಿರುವುದು ಆತನ ನಿರ್ಲಿಪ್ತ ವೃತ್ತಿಯನ್ನು ಸ್ಪಷ್ಟವಾಗಿಸುವುದಿಲ್ಲವೆ?—ಆತನಿಗೆ ಪ್ರತಿಯಾಗಿ ಬೇರಾವ ಯುವಕರಾರಾದರೂ ಆ ಕೊಟಡಿಗೆ ಬಂದಿದ್ದಲ್ಲಿ ಸುಮ್ಮನಿರುತ್ತಿದ್ದರೇ? ಛೆ! ಸುಮ್ಮನಿರುವುದೆಲ್ಲಿ ಬಂತು? ಬಂದ ದಿನವೇ ತನ್ನನ್ನು ಪತ್ತೆಮಾಡಿ ಅಂದಿನಿಂದಲೇ ತನ್ನ ಕಣ್ಣು ಸೆಳೆಯಲು ನಾನಾ ಬಗೆಯಾಗಿ ಪ್ರಯತ್ನಿಸುತ್ತಿದ್ದರು....

ತಾನೋದಿದ ಹಲವು ಕತೆ ಕಾದಂಬರಿಗಳಲ್ಲಿ ಈ ಬಗೆಯ ಪ್ರಣಯ ಸನ್ನಿವೇಶಗಳೆಷ್ಟೊ ನಡೆದಿದ್ದುದು ಆಕೆಗೆ ಚೆನ್ನಾಗಿ ಜ್ಞಾಪಕವಿತ್ತು. ಅಂಥ ಸನ್ನಿವೇಶಗಳು ಬಂದಾಗಲೆಲ್ಲ ತಮ್ಮ ಮನೆಯೆದುರಿಗಿನ ಆ ಮನೆಗೂ ಯಾವನೊಬ್ಬ ಸುಂದರ ಯುವಕ ಬಂದು ನೆಲಸಿದರೆ ಎಷ್ಟು ಚೆನ್ನಾದೀತು—ಎಂದಾಕೆ ಯೋಚಿಸಿದ್ದೂ ಇತ್ತು. ಎಷ್ಟೋ ಸಲ ಆ ಯೋಚನೆ ಬಲುದೂರ ಹೋಗಿ ಆಕೆ ಕನಸಿನ ಲೋಕದಲ್ಲಿ ಅಲೆದು ಬರುತ್ತಿದ್ದಳು. ಎದುರು ಮನೆಗೆ ಯುವಕನೊಬ್ಬ ಬಂದುದೂ ಆಗಿದೆ, ಆತ ಸುಂದರನೂ ಆಗಿದಾನೆ, ಕಾವ್ಯ ಪ್ರೇಮಿಯೂ ಕಲಾಪ್ರೇಮಿಯೂ ಹೌದು. ಆದರೆ—ಪ್ರಣಯವಿಚಾರಗಳಲ್ಲಿ ತೀರ ನಿರಾಸಕ್ತ. ಸರಸು ನಿರಾಶಳಾಗಿ ನಿಟ್ಟುಸಿರಿಡುವಳು. ಇಂಥ ಯುವಕರೂ ಇರುವುದುಂಟೇ ಎಂದು ಅಚ್ಚರಿಗೊಳ್ಳುವಳು.

ವಿಶ್ವಪ್ರಯತ್ನ ಪಟ್ಟು ಆತನ ಲಕ್ಷ್ಯವನ್ನು ತನ್ನೆಡೆಗೆಳೆದೇ ತೀರುವುದೆಂದು ಸರಸು ಒಂದು ಸಾಯಂಕಾಲ ನಿರ್ಧರಿಸಿದಳು. ಆಗತಾನೆ ಆತ ಹೊರಗಿನಿಂದ ಬಂದು ಅಂಗಿ ತೆಗೆದಿಟ್ಟು, ಟವಲಿನಿಂದ ಮುಖವನ್ನೊರೆಸಿಕೊಳ್ಳುತ್ತ ಕಿಟಕಿಯಲ್ಲಿ ನಿಂತುಕೊಂಡಿದ್ದ. ನಾಗಮ್ಮ ಮನೆಯಲ್ಲಿರಲಿಲ್ಲ. ಗೌರಿಯೊಂದಿಗೆ ಮಠಕ್ಕೆ ಹೋಗಿದ್ದಳು. ಸರಸು ಮಾತ್ರ ಯಾವುದೊ ನೆಪ ಹೇಳಿ ಮನೆಯಲ್ಲಿಯೆ ಉಳಿದುಕೊಂಡಿದ್ದಳು.

ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಆತ ಕೊಟಡಿಗೆ ಬರುವನೆಂಬುದು ಆಕೆಗೆ ಗೊತ್ತು. ಅಂತೆಯೆ ಆ ಸಮಯಕ್ಕೆ ಸರಿಯಾಗಿ ಅಟ್ಟದ

ಮೇಲಿನ ಕಿಟಕಿಯಲ್ಲಿ ಅವನಿಗಾಗಿ ಕಾಯುತ್ತ ನಿಂತಿದ್ದಳು. ಆತ ಬಂದು ಕಿಟಕಿಯಲ್ಲಿ ನಿಲ್ಲುತ್ತಲೂ ತನ್ನ ಕೈಯಲ್ಲಿ ಹಿಡಿದಿಟ್ಟುಕೊಂಡಿದ್ದ ಗುಲಾಬಿ ಹೂವಿನ ಕಡೆಗೆ ಸರಸು ಒಂದು ಸಲ ದಿಟ್ಟಿಸಿನೋಡಿದಳು. ಆತನೆದುರಿಗೇ ಬೀಳುವ ಹಾಗೆ ಅದನ್ನೊಗೆಯಬೇಕು, ತಾನು ಬೇಕೆಂತಲೇ ಅದನ್ನು ಒಗೆದಿರಬೇಕೆಂಬುದು ಆತನಿಗೆ ತಿಳಿಯದಂತಿರಬೇಕು, ಗಾಳಿಗೆ ಹಾರಿ ಸಹಜ ವಾಗಿಯೇ ಬಿದ್ದಿರಬಹುದೆಂದು ಆತನಿಗೆನ್ನಿಸುವಂತಾಗಬೇಕು, ಅಂತೂ ಆತನ ದೃಷ್ಟಿ ತಾನು ನಿಂತಲ್ಲಿಗೆ ಹೊರಳುವಂತಾಗಬೇಕು ಎಂಬ ಯೋಚನೆ ಆಕೆ ಯದು. ಕೈಯನ್ನು ಕೊಂಚ ಮೇಲಕ್ಕೆತ್ತಿದಳು. ಹೆಣ್ಣಿನ ಸ್ವಾಭಾವಿಕವಾದ ಸಂಕೋಚ ಬಂದು ಆ ಕೈಯನ್ನು ಬಿಗಿಯಾಗಿ ಹಿಡಿದು ತಡೆದಂತಾಯಿತು. ಲಜ್ಜೆಯೆಲ್ಲ ನುಗ್ಗಿ ಬಂದು ಆಕೆಯ ಮುಖದಲ್ಲೆಲ್ಲ ನೆತ್ತರು ಚಿಮ್ಮಿಸಿತು. ಆತನ ಚಲನವಲನಗಳನ್ನೆಲ್ಲ ನಿರುಕಿಸುತ್ತಲಿದ್ದ ಆಕೆಯ ದೃಷ್ಟಿ ತಾನಾಗಿಯೆ ಕೆಳಕ್ಕೆ ಬಾಗಿತು. ಎದೆ ಡವಡವನೆ ಬಡಿದುಕೊಳ್ಳತೊಡಗಿತು. ಆತ ತೀರ ಸಂಭಾ ವಿತನಂತೆ ಕಾಣಿಸುತ್ತಾನೆ. ಹೆಣ್ಣನ್ನು ಕಣ್ಣೆತ್ತಿ ಸಹ ನೋಡುವಾತನಲ್ಲ. ವಿವೇಕಾನಂದರ ಹಾಗೆ ನೈಷ್ಠಿಕ ಬ್ರಹ್ಮಚಾರಿಯಾಗಿದ್ದರೂ ಆಗಿರಬಹುದು ಆತ. ಇಲ್ಲವೆ ಶ್ರೀರಾಮಚಂದ್ರನ ಹಾಗೆ ಏಕಪತ್ನೀವ್ರತಸ್ಥನಾಗಿದ್ದರೂ ಆಗಿರಬಹುದು. ಹೌದು! ಆತನಿಗೆ ಮದುವೆಯಾಗಿದ್ದರೂ ಆಗಿರಬಹುದು. ಏಕಾಗಿರಬಾರದು? ಮದುವೆಯಾಗುವ ವಯಸ್ಸೇ ಅಲ್ಲವೆ ಆತನದು? ಖಂಡಿತ ಮದುವೆಯಾದವನೇ ಇರಬೇಕು ಆತ. ಚೆಲುವೆಯೂ ಸುಶಿಕ್ಷಿತೆಯೂ ಆದ ಹೆಂಡತಿಯಿರಬಹುದು ಆತನಿಗೆ. ಇಬ್ಬರಿಗೂ ಪರಸ್ಪರರಲ್ಲಿ ಗಾಢವಾದ ಪ್ರೇಮ ವಿರಬಹುದು. ಯಾವುದೋ ತೊಂದರೆಯಿಂದಾಗಿ ಆತ ಇನ್ನೂ ಆಕೆಯೊಂ ದಿಗೆ ಸಂಸಾರ ಹೂಡಿರಲಿಕ್ಕಿಲ್ಲ. ಇಷ್ಟರಲ್ಲಿಯೇ ಹೂಡುವ ವಿಚಾರವೂ ಇರಬಹುದು. ಯಾರಿಗೆ ಗೊತ್ತು! ಅಂತೆಯೆ ಆತ ಬೇರಾವ ಹುಡುಗಿಯರ ಕಡೆಗೂ ದೃಷ್ಟಿ ಹೊರಳಿಸುತ್ತಿರಲಿಕ್ಕಿಲ್ಲ. ಅಂಥವನೆದುರಿಗೆ ತಾನು ಹೂವು ಚೆಲ್ಲಿ ಹುಡುಗಾಟಕ್ಕಾರಂಭಿಸಿದರೆ ಆತ ತನ್ನ ಬಗೆಗೆ ಏನು ತಿಳಿದುಕೊಳ್ಳಬಹುದು? ತನ್ನ ಬಗೆಗೆ ಆತನಿಗೆ ತಿರಸ್ಕಾರ ಬಂದರೂ ಬಂದೀತು....ಹೂವು ಗಾಳಿಗೆ ಹಾರಿ ಬಿದ್ದಿರಬಹುದೆಂದೇ ಆತ ತಿಳಿದುಕೊಂಡಾನೆಂಬ ಭರವಸೆಯೇನು? ಕಿಟಕಿಯಲ್ಲಿ ತಾನು ನಿಂತುಕೊಂಡುದನ್ನು ಬೇರೆ ಆತ ನೋಡುತ್ತಾನೆ.

ತಾನು ಬೇಕೆಂತಲೇ ಹೂವು ಎಸೆದುದು ಆತನ ಬುದ್ಧಿಗೆ ಹೊಳೆಯದಿರಲಾರದು....

ಸಂಕೋಚದಿಂದಲೂ ಒಂದು ವಿಧವಾದ ಭೀತಿಯಿಂದಲೂ ಸರಸುವಿನ ಶರೀರವಲ್ಲೆಲ್ಲ ಬೆವರು ಹುಟ್ಟಿತು. ಕೈಯಲ್ಲಿ ಹಿಡಿದಿದ್ದ ಗುಲಾಬಿ ಹೂವನ್ನು ಮತ್ತೆ ಮೇಜಿನ ಮೇಲಿಟ್ಟು ಕುರ್ಚಿಯ ಮೇಲೆ ಕುಸಿದು ಕುಳಿತಳು.

ಸಹಜವಾಗಿಯೇ ಆಕೆಯ ದೃಷ್ಟಿ ಗೋಡೆಯ ಮೇಲಿದ್ದ ಮಹಾದೇವಿಯಕ್ಕನ ಭಾವಚಿತ್ರದ ಕಡೆಗೆ ಹೊರಳಿತು. ಪ್ರಪಂಚದ ಸಕಲ ವಿಕಾರಗಳನ್ನೂ ಜಯಿಸಿ, ಚೆನ್ನಮಲ್ಲಿಕಾರ್ಜುನನೊಂದಿಗೆ ಒಂದಾಗಿ ಬೆರೆತ ಅಕ್ಕ ತನ್ನನ್ನು ಕಂಡು, ತನ್ನ ವಿಕಾರಪೂರ್ಣ ಮನಸ್ಸನ್ನು ಗುರುತಿಸಿ ಕನಿಕರದಿಂದ ನಕ್ಕಂತಾಯಿತು. ತನ್ನ ಎರಡು ಕೆನ್ನೆಗಳನ್ನು ಹಿಡಿದು ಆ ನಗೆ ರಪರಪನೆ ಏಟು ಹಾಕಿದಂತಾಯಿತು ಸರಸೂಗೆ. ತೋಳುಗಳೆರಡನ್ನೂ ಮೇಜಿನ ಮೇಲೆ ಚೆಲ್ಲಿ ಅವುಗಳ ನಡುವೆ ತಲೆಯನ್ನೊರಗಿಸಿ ಮೂಕವಾಗಿ ರೋದಿಸತೊಡಗಿದಳು.

ಮತ್ತೆ ಆಕೆ ತಲೆಯೆತ್ತಿದಾಗ ಕತ್ತಲಾಗುತ್ತ ಬಂದಿತ್ತು. ಕುರ್ಚಿಯನ್ನು ಬಿಟ್ಟೆದ್ದು ಕಿಟಕಿಯಾಚೆ ದೃಷ್ಟಿಯನ್ನೋಡಿಸಿದಳು. ಆಕಾಶದಲ್ಲಿ ಕಾರ್ಮುಗಿಲು ಕವಿಯುತ್ತಿತ್ತು. ತಂಪುಗಾಳಿ ಬೀಸತೊಡಗಿತ್ತು.

ಎದುರಿನ ಕೋಣೆಯ ಬಾಗಿಲಿಗೆ ಬೀಗ ಬಿದ್ದಿತ್ತು. ಶಿವಮೂರ್ತಿಯಾವಾಗಲೋ ಹೊರಟುಹೋಗಿದ್ದ.

ಬೀದಿಯಲ್ಲಿ ಜನಗಳ ಸುಳಿವಿರಲಿಲ್ಲ. ಮಳೆ ಬರುವ ಲಕ್ಷಣ ಕಂಡುಬರುತ್ತಿದ್ದುವು. ತಣ್ಣನೆಯ ಗಾಳಿ ಬೀಸಿಬರುತ್ತಿದ್ದಿತಾದರೂ ಸರಸೂಗೆ ಆ ಕೊಟಡಿಯಲ್ಲಿ ವಿಪರೀತ ಸೆಖೆಯಾಗುತ್ತಿದ್ದ ಹಾಗೆ ತೋರಿತು. ಸಂಜೆಗತ್ತಲಿನ ಆ ಸಮಯದಲ್ಲಿ ಪ್ರಪಂಚವೆಲ್ಲ ಬರಿದಾಗಿ ಭಣಭಣಗುಡುತ್ತಿದ್ದ ಹಾಗೆ ಭಾಸವಾಯಿತು. ಆಕೆಯ ಹೃದಯವಂತೂ ಬಿಕೋ ಎನ್ನುತ್ತಿತ್ತು. ಯಾರೂ ಇಲ್ಲ ತನಗೆ ಈ ಪ್ರಪಂಚದಲ್ಲಿ! ತನ್ನವರೆನ್ನುವವರಾರೂ ಇಲ್ಲ.... ಈ ವಿಶಾಲವಾದ ವಿಶ್ವದಲ್ಲಿ ತಾನೊಬ್ಬಳೇ ಒಬ್ಬಳು.....ತೀರ ಏಕಾಕಿನಿ.... ಬದುಕು ಅಸಹನೀಯವಾಗಿತ್ತು. ಒಂದೊಂದು ಕ್ಷಣವೂ ಒಂದೊಂದು ಗಂಟೆಯಂತೆ ತೋರುತ್ತಿತ್ತು. ಆ ಕೊಟಡಿಯಲ್ಲಿ ಕುಳಿತಿರಲು ಮನಸ್ಸಾಗಲಿಲ್ಲ.

ಏನನ್ನೋ ನಿರ್ಧರಿಸಿ ಅಟ್ಟವನ್ನು ಬಿಟ್ಟು ಕೆಳಗೆ ಬಂದಳು. ಪಡಸಾಲೆಯ ಗೂಟವೊಂದಕ್ಕೆ ನೇತಾಡುತ್ತಿದ್ದ ಕೊಡೆಯನ್ನು ತೆಗೆದುಕೊಂಡು ಹೊರಕ್ಕೆ ಹೊರಟಳು.

"ಮಳೆ ಬರೋಹಾಗಿದೆ ಸರಸೂ. ಎಲ್ಲಿಗೆ ಹೊರಟೆ ಇಂಥ ವೇಳೆಯಲ್ಲಿ ?" ರುದ್ರಪ್ಪಜ್ಜಿ ಗಾಬರಿಯಿಂದ ಕೇಳಿದಳು.

"ಮಠಕ್ಕೆ ಹೋಗಿ ಬರುತ್ತೇನಜ್ಜಿ. ಕುಳಿತು ಕುಳಿತು ಬೇಸರವಾಯಿತು. ಬರುವಾಗ ಅಪ್ಪನ ಜೊತೆಗೇ ಬರುತ್ತೇನೆ."

"ಮಠಕ್ಕೆ ಹೋಗುವದರೊಳಗಾಗಿ ಮಳೆ ಬಂದರೂ ಬಂದೀತು. ತೋಯಿಸಿಕೊಂಡೀಯೆ. ಮೊನ್ನೆ ಬೇರೆ ಹೀಗೇ ತೊಯ್ದು ಬಂದು ತಲೆ ನೋವು ಅಂತ ಮಲಗಿದ್ದೆಯಲ್ಲ!"

"ಈಗಲೇ ಮಳೆ ಬರಲಿಕ್ಕಿಲ್ಲ ಅಜ್ಜೀ. ಕೊಡೆಯನ್ನು ಬೇರೆ ಒಯ್ಯುತ್ತೇನಲ್ಲ ಜೊತೆಗೆ ?"

"ಶ್ರಾವಣದ ಈ ಕೆಟ್ಟ ಮಳೆಯೆದುರಿಗೆ ನಿನ್ನ ಈ ಸೊಟ್ಟ ಕೊಡೆಯೆಲ್ಲಿ ತಡೆದೀತು ? ಹೋಗಬೇಡ ನಮ್ಮಪ್ಪ. ಶೀತ ಗೀತ ಬಂದೀತು."

"ಏನೂ ಧಾಡಿಯಾಗುವದಿಲ್ಲ ಬಿಡಜ್ಜಿ. ಈಗ ಬಂದುಬಿಟ್ಟೆ," ಎಂದು ನುಡಿಯುತ್ತ ಸರಸು ಹೊಸಲು ದಾಟಿ ಮೆಟ್ಟಲುಗಳನ್ನಿಳಿದು ಬೀದಿಗೆ ಬಂದಳು. "ಧಾಡಿಯಾದರೂ ಏನಾಯಿತು ? ಈ ಹಾಳು ಜೀವದಿಂದ ಏನಾಗಬೇಕಾಗಿದೆ ?" ಎಂಬ ಮಾತೂ ಆಕೆಯ ನಾಲಗೆಯ ತುದಿಯ ಮೇಲೆಯೇ ಬಂದಿದ್ದಿತು ; ಆದರೆ ಹೊರಕ್ಕೆ ಬರಲಿಲ್ಲ.

ಪಶ್ಚಿಮ ದಿಕ್ಕಿನಿಂದ ಶೀತಲ ಗಾಳಿ ಬೀಸತೊಡಗಿದ್ದಿತು. ಅದರೊಂದಿಗೆ ಧೂಳಿಯ ಕಣಗಳೂ ಹಾರಿಬರುತ್ತಿದ್ದುವು. ಬೀದಿಯ ಕೊನೆಯಲ್ಲಿ ನಿಂತಿದ್ದ ನಗರಸಭೆಯ ದೀಪ ಗಾಳಿಗೆ ಹಾಗೆ ಹೀಗೆ ಹೊಯ್ದಾಡುತ್ತಲಿದ್ದಿತು. ಮಳೆ ಇನ್ನೇನು ಬಂದುಬಿಡುವುದರಲ್ಲಿತ್ತು. ಸರಸೂ ವೇಗವಾಗಿ ಹೆಜ್ಜೆ ಹಾಕ ತೊಡಗಿದಳು.

ಆ ಬೀದಿಯನ್ನು ಹಿಂದೆ ಹಾಕಿ ಆಕೆ ಪೇಟೆಯ ಚೌಕಕ್ಕೆ ಬರುವ ಹೊತ್ತಿಗೆ ಮಳೆಹನಿಗಳುದುರತೊಡಗಿದವು. ಕೊಡೆಯನ್ನು ಬಿಚ್ಚಿ ಹಿಡಿದು ಕೊಂಡು ಸರಸು ಲಗುಬಗೆಯಿಂದ ಹೆಜ್ಜೆ ಹಾಕತೊಡಗಿದಳು.

ಅಂಗಡಿಗಳಲ್ಲಿ ಆಗತಾನೆ ದೀಪಗಳನ್ನು ಹೊತ್ತಿಸುತ್ತಿದ್ದರು. ಚಹದಂಗಡಿಯೊಂದರಿಂದ ಗ್ರಾಮಫೋನಿನ ಕರ್ಕಶ ಧ್ವನಿ ಕೇಳಿಬರುತ್ತಿತ್ತು. ದಿಂಬುಗಳಿಗೊರಗಿ ಕುಳಿತುಕೊಂಡು ಬೀಡಿ ಸೇದುತ್ತಲಿದ್ದ ಅಂಗಡಿಕಾರರು ಕೆಲವರು ಕೊಡೆ ಹಿಡಿದುಕೊಂಡು ಹೊರಟಿದ್ದ ಈ ಯುವತಿಯನ್ನು ಕಂಡು ತುಟಿಗಳಲ್ಲಿಯೆ ನಗೆ ಬೀರಿದರು. ನಿಮಿಷ ನಿಮಿಷಕ್ಕೂ ಮಳೆಯ ಶಕ್ತಿ ಹೆಚ್ಚುತ್ತಲಿತ್ತು. ಪೇಟೆಯನ್ನು ಹಿಂದೆ ಹಾಕಿ ಸರಸು ಮಠದ ಕಡೆಗೆ ಹೋಗುವ ಬೀದಿಯಲ್ಲಿ ಅಡಿಯಿರಿಸಿದಾಗ ಎದುರಿನಿಂದ ಮಳೆ ಬಿರುಸಾಗಿ ಹೊಡೆಯತೊಡಗಿತು. ಆ ರಭಸಕ್ಕೆ ಕೊಡೆಯ ಆಟ ನಡೆಯುವಂತಿರಲಿಲ್ಲ. ಸರಸುವಿನ ಮುಖ, ತಲೆ, ಕಾಲು, ತೋಳುಗಳಿಗೆಲ್ಲ ನೀರು ಬಡಿಯತೊಡಗಿತು. ಬೀದಿಯಲ್ಲೆಲ್ಲ ಕೆಸರೇ ಕೆಸರು. ಆ ಕೆಸರಿನಲ್ಲಿ ಸರಸುವಿನ ನಯವಾದ ಚಪ್ಪಲಿಗಳು ಗಾಸಿಗೊಳ್ಳತೊಡಗಿದವು. ಸೀರೆಯ ಕೆಳಭಾಗವೆಲ್ಲವೂ ರಾಡಿರಾಡಿಯಾಯಿತು.

ಮಳೆಯ ರಭಸದೊಂದಿಗೆ ಬಲವಾದ ಗಾಳಿಯೂ ಬೀಸತೊಡಗಿತು. ಸರಸುವಿನ ಕೈಯಲ್ಲಿನ ಕೊಡೆ ಅತ್ತ ಇತ್ತ ತೂರಾಡಿ, ಈಗಲೋ ಇನ್ನೊಂದು ಗಳಿಗೆಗೊ ಆಕೆಯ ಕೈತಪ್ಪಿ ಗಾಳಿಯೊಂದಿಗೆ ಹಾರಿಹೋಗುವ ಹಾಗೆ ಕಾಣಿಸತೊಡಗಿತು. ಸರಸು ಕೊಂಚ ಗಾಬರಿಯಿಂದ ಅತ್ತ ಇತ್ತ ಹೊರಳಿನೋಡಿದಳು. ಬೀದಿಯ ಮೇಲೆ ಜನಗಳ ಸುಳಿವಿರಲಿಲ್ಲ. ಮನೆಗಳ ಬಾಗಿಲು ಕಿಟಕಿಗಳೆಲ್ಲ ಮುಚ್ಚಿದ್ದುವು. ಕೊಂಚ ದೂರದಲ್ಲಿ ಪರದೇಶಿ ಕತ್ತೆಯೊಂದು ನೀರಿನಲ್ಲಿ ತೋಯಿಸಿಕೊಳ್ಳುತ್ತ, ಕಿವಿಗಳನ್ನು ಕೊಡಹುತ್ತ ನಿಂತುಕೊಂಡಿದ್ದಿತು.

ಮಠ ಹತ್ತಿರ ಬಂದುಬಿಟ್ಟಿದೆ. ಒಂದು ಫರ್ಲಾಂಗ್ ದೂರವಿರಬಹುದು ಅಷ್ಟೆ. ಪಕ್ಕದಲ್ಲಿಯೇ ತುಂಬಿ ಹರಿಯುತ್ತಲಿರುವ ಹೊಳೆ. ಮಳೆಯ ಸದ್ದಿನ ಜೊತೆಗೆ ಹೊಳೆಯ ಪ್ರವಾಹದ ಸದ್ದೂ ಬೆರೆತು ಸುತ್ತಲಿನ ಪ್ರದೇಶವನ್ನೆಲ್ಲ ನಡುಗಿಸುತ್ತಿದೆ.

ಹೊಳೆಯ ಪಕ್ಕದಲ್ಲಿನ ಆ ಬೀದಿಯಲ್ಲಿ ಹಾಯ್ದು ಮಠದ ಕಡೆಗೆ ಧಾವಿಸುತ್ತಲಿದ್ದ ಹಾಗೆ ಸರಸುವಿನ ದೃಷ್ಟಿ ಸಹಜವಾಗಿಯೆ ಹೊಳೆಯ ಕಡೆಗೆ ತಿರುಗಿತು. ಹೊಳೆಯ ದಂಡೆಯ ಮೇಲೆ ಕಟ್ಟಿದ್ದ ಭದ್ರವಾದ ಕಟ್ಟೆಯ

ಮೇಲೆ ಬೆಳೆದು ನಿಂತಿದ್ದ ಬೇವಿನ ಮರಕ್ಕೆ ಆತು ಕುಳಿತುಕೊಂಡ ಪುರುಷಾಕೃತಿಯೊಂದು ಗೋಚರವಾಯಿತು. ಸೆಳೆಮಿಂಚಿನ ಬೆಳಕಿನಲ್ಲಿ ಆ ಆಕೃತಿಯೂ, ಅದರ ಕೈಯಲ್ಲಿದ್ದ ಪಿಟೀಲೂ ಸ್ಪಷ್ಟವಾಗಿ ಕಾಣಿಸಿದುವು.

ನಡೆಯುವುದನ್ನು ನಿಲ್ಲಿಸಿ ಸರಸು ಆ ವ್ಯಕ್ತಿಯನ್ನು ವಿಸ್ಮಯದಿಂದ ದಿಟ್ಟಿಸತೊಡಗಿದಳು. ಆತ ಶಿವಮೂರ್ತಿಯೆನ್ನುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಕೊಟಡಿಯಲ್ಲಿ ಗೋಡೆಗೊರಗಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತು ಪಿಟೀಲು ನುಡಿಸುವ ಹಾಗೆಯೆ, ಈ ನದೀತೀರದ ಕಟ್ಟೆಯ ಮೇಲಿನ ಬೇವಿನ ಗಿಡದಡಿಯಲ್ಲಿ ಕುಳಿತು ಪಿಟೀಲು ನುಡಿಸುತ್ತಲಿದ್ದಾನೆ. ಎಂದಿನಂತೆಯೆ ಆತನ ಎಡಗೈ ಪಿಟೀಲನ್ನು ಗಟ್ಟಿಯಾಗಿ ಹಿಡಿದುಕೊಂಡಿದೆ. ಕಮಾನು ಹಿಡಿದ ಬಲಗೈ ವಿದ್ಯುದ್ವೇಗದಿಂದ ಪಿಟೀಲಿನ ಮೇಲೆ ಓಡಿಯಾಡುತ್ತಿದೆ. ಸುರಿಯುತ್ತಿರುವ ಭೀಕರ ಮಳೆ, ಬೀಸುತ್ತಿರುವ ಪ್ರಚಂಡ ಗಾಳಿ, ಕೆಳಗಡೆ ಸೊಕ್ಕಿ ಹರಿಯುತ್ತಿರುವ ಹೊಳೆ ಯಾವುದನ್ನೂ ಗಮನಿಸದೆ ಆತ ತನ್ನ ಪಿಟೀಲಿನಲ್ಲಿ ತನ್ಮಯನಾಗಿ ಮಗ್ನನಾಗಿದ್ದ. ಮಳೆಯ ಹೊಡೆತದಿಂದಾಗಿ ಆತನ ಬಟ್ಟೆಗಳೆಲ್ಲ ತೊಯ್ದು ಹೋಗಿವೆ. ತಲೆಗೂದಲುಗಳಿಂದಲೂ, ಮೂಗಿನಿಂದಲೂ ನೀರು ಸುರಿಯತೊಡಗಿದೆ. ಯಾವುದನ್ನೂ ಲೆಕ್ಕಿಸದೆ ಆತ ಪಿಟೀಲು ನುಡಿಸುತ್ತಲಿದಾನೆ!

ಆಶ್ಚರ್ಯ ವಿಸ್ಮಯಗಳ ಹಿಂದೆ ಹಿಂದೆಯೆ ಸರಸುವಿನ ಎದೆಯಲ್ಲಿ ಆತನ ಬಗೆಗೆ ಅಪಾರವಾದ ಕನಿಕರ ತುಂಬಿ ಬಂದಿತು. ಮಠಕ್ಕೆ ಹೋಗಬೇಕೆಂಬ ವಿಚಾರ ಮಾಯವಾಯಿತು. ಆತನನ್ನು ಈ ಸ್ಥಿತಿಯಲ್ಲಿ ಹೀಗೆಯೆ ಬಿಟ್ಟು ಹೋಗಲು ಮನಸ್ಸು ಒಪ್ಪಲಿಲ್ಲ.

ಹೆಜ್ಜೆಗಳನ್ನು ಹಿಂದಿರುಗಿಸಿ ಕಟ್ಟೆಯ ಬಳಿ ಬಂದು ಸರಸು ಶಿವಮೂರ್ತಿಯ ಎದುರಿಗೆ ನಿಂತುಕೊಂಡಳು. ತನ್ನ ಚಪ್ಪಲಿಗಳ ಚಟಪಟ ಎಂಬ ಸದ್ದಿನಿಂದಾದರೂ ಆತನ ಲಕ್ಷ್ಯ ತನ್ನ ಕಡೆಗೆ ಹೊರಳಿಸಬಹುದೇನೋ ಎಂದುಕೊಂಡಿದ್ದಳಾಕೆ. ಆದರೂ ಆತ ದೃಷ್ಟಿಯನ್ನೆತ್ತಲಿಲ್ಲ. ತಲೆ ತಗ್ಗಿಸಿಕೊಂಡು ಕುಳಿತಿದ್ದ ಹಾಗೇ ಪಿಟೀಲು ಬಾರಿಸುತ್ತಲಿದ್ದ.

ಸರಸು ಇನ್ನೂ ಕೊಂಚ ಹತ್ತಿರ ಬಂದು ಆತನ ಭುಜದ ಮೇಲೆ ಕೈಯಿರಿಸಿದಳು. ಆಗಲೂ ಆತ ಅಲುಗಾಡಲಿಲ್ಲ. ಆತನ ಭುಜಗಳೆರಡನ್ನೂ

ಹಿಡಿದು ಸರಸು ಆತನನ್ನೊಂದು ಸಲ ಹಾಗೆ ಹೀಗೆ ಹೊರಳಿಸಿದಳು. ಆಗ ಮಾತ್ರ ಆತ ತನ್ನ ವಿಚಿತ್ರ ಸಮಾಧಿಯಿಂದ ಎಚ್ಚರಗೊಂಡ. ಪಿಟೀಲಿನ ಮೇಲಾಡುತ್ತಿದ್ದ ಕಮಾನು ಸ್ತಬ್ಧವಾಯಿತು. ಆತ ನಿದ್ರೆಯಿಂದ ಎದ್ದವರ ಹಾಗೆ ಕಣ್ಣು ಬಿಟ್ಟು ಕುತೂಹಲ ತುಂಬಿದ ದೃಷ್ಟಿಯನ್ನು ಆಕೆಯ ಕಡೆಗೆ ತಿರುಗಿಸಿದ.

"ಏಳಿರಿ, ಮೇಲಕ್ಕೇಳಿರಿ. ಹೀಗೆ ಮಳೆಯಲ್ಲಿ ದೆವ್ವದ ಹಾಗೆ ಕುಳಿತಿದ್ದರೆ ಹೇಗೆ? ಮೈಮೇಲೆ ಅರಿವಿದೆಯೊ ಇಲ್ಲವೊ ?" ಎಂದಳು ಸರಸು.

ಹಿರಿಯರ ಬೆದರಿಕೆಯ ನುಡಿಯನ್ನು ಕೇಳಿ ಮೌನವಾಗಿ ಅವರ ಆಜ್ಞೆ ಪಾಲಿಸುವ ಮಗುವಿನಂತೆ ಶಿವಮೂರ್ತಿ ಮೇಲಕ್ಕೆದ್ದ. ಎದ್ದುದೆಷ್ಟೊ ಅಷ್ಟೆ. ಆತನಿಂದ ನಿಂತುಕೊಳ್ಳಲಾಗಲಿಲ್ಲ. ಕಾಲುಗಳೆರಡೂ ಥರಥರ ನಡುಗುತ್ತಿದ್ದುವು. ತನ್ನ ಶರೀರದಲ್ಲಿನ ಶಕ್ತಿಯೆಲ್ಲವೂ ಎಲ್ಲಿಯೋ ಅದೃಶ್ಯವಾಗಿ ತಾನು ತೀರ ಅಸಹಾಯಕನಾಗಿದ್ದ ಹಾಗೆ ತೋರುತ್ತಿತ್ತು. ಒಂದು ಕ್ಷಣ ನಿಂತುಕೊಂಡಿದ್ದವನು ಮತ್ತೆ ಕೆಳಕ್ಕೆ ಕುಸಿಬಿದ್ದ.

ಸರಸೂ ಗಾಬರಿಗೊಂಡಳು. ಕರುಣೆಯಿಂದಲೂ ಕನಿಕರದಿಂದಲೂ ತೀವಗೊಂಡಿದ್ದ ಧ್ವನಿಯಲ್ಲಿ—"ಏನಾಯಿತು ನಿಮಗೆ? ಹೀಗೇಕೆ ಮಾಡುತ್ತೀರಿ ?" ಎಂದಳು. ಆಕೆಯ ಎದೆ ಡವಡವನೆ ಹೊಡೆದುಕೊಳ್ಳತೊಡಗಿತು.

ಒಂದೆರಡು ನಿಮಿಷಗಳವರೆಗೆ ಶಿವಮೂರ್ತಿ ಕುಳಿತ ಹಾಗೆಯೆ ಕುಳಿತಿದ್ದ. ಆತನಿಂದ ಯಾವ ಉತ್ತರವೂ ಬರಲಿಲ್ಲ. ಆಗಾಗ ಹೊಳೆಯುತ್ತಿದ್ದ ಮಿಂಚಿನ ಬೆಳಕಿನಲ್ಲಿ ಆತನ ದೇಹವೆಲ್ಲವೂ ಕಂಪಿಸುವುದು ಸರಸೂಗೆ ಕಾಣಿಸದಿರಲಿಲ್ಲ. ಮಳೆ ಗಾಳಿಗಳ ರಭಸವೂ ಹೆಚ್ಚುತ್ತಿದ್ದಿತೇ ವಿನಾ ಕಡಿಮೆಯಾಗುತ್ತಿರಲಿಲ್ಲ. ಆಕೆ ಗಾಬರಿಗೊಂಡು ಬೀದಿಯ ಕಡೆಗೆ ದೃಷ್ಟಿ ಹೊರಳಿಸಿದಳು. ಅಲ್ಲಿ ಯಾರ ಸುಳಿವೂ ಇರಲಿಲ್ಲ.

ಸರಸು ಕೊಡೆಯನ್ನು ಮಡಿಚಿ ಕಂಕುಳಲ್ಲಿಟ್ಟುಕೊಂಡು ಕೆಳಕ್ಕೆ ಬಾಗಿ ಆತನನ್ನು ಮೇಲಕ್ಕೆಬ್ಬಿಸುವ ಪ್ರಯತ್ನ ಮಾಡತೊಡಗಿದಳು. "ಏಳಲಾಗುವುದಿಲ್ಲವೇ ನಿಮಗೆ ? ಏಳಿರಿ, ಹೇಗಾದರೂ ಮಾಡಿ ಎದ್ದು ನಿಂತುಕೊಳ್ಳಿರಿ. ಅನಂತರ ನನ್ನ ಆಧಾರದಿಂದ ನಡೆದು ಬಂದೀರಂತೆ. ಏಳಿರಿ," ಎಂದಳು.

ತನ್ನ ಶರೀರದಲ್ಲಿ ಉಳಿದಿದ್ದ ಎಲ್ಲ ಶಕ್ತಿಯನ್ನೂ ಉಪಯೋಗಿಸಿ

ಶಿವಮೂರ್ತಿ ಆಕೆಯ ಕೈ ಹಿಡಿದುಕೊಂಡು ಮೇಲಕ್ಕೆದ್ದ. ಆತನ ಹೃದಯದಲ್ಲಿ ಆಕೆಯ ಬಗೆಗೆ ಕೃತಜ್ಞತೆ, ಆದರ ತುಂಬಿ ಬಂದಿದ್ದುವು.

ಆತನ ಬೆನ್ನಿನ ಸುತ್ತ ತನ್ನ ಬಲಗೈ ಸೇರಿಸಿ, ಆತನ ಪಿಟೀಲನ್ನು ಎಡಗೈಯಲ್ಲಿ ಹಿಡಿದುಕೊಂಡು ಸರಸು ಮೆಲ್ಲ ಮೆಲ್ಲನೆ ಕಟ್ಟೆಯನ್ನಿಳಿದು ಬೀದಿಗೆ ಬಂದಳು. ಇಂಥ ಸ್ಥಿತಿಯಲ್ಲಿ ಆತನನ್ನು ಕೊಟಡಿಯ ವರೆಗೆ ಹೇಗೆ ಕರೆದೊಯ್ಯುವುದೆಂಬುದೇ ಆಕೆಗೊಂದು ಸಮಸ್ಯೆಯಾಗಿದ್ದಿತು. ಹುಡುಗಿಯಾದ ತಾನೊಬ್ಬಳೇ ಆತನನ್ನು ಸಾಗಿಸಿಕೊಂಡೊಯ್ಯುವುದು ಹೇಗೆ ಸಾಧ್ಯ? ಸಾಲದ್ದಕ್ಕೆ ಈ ಮಳೆ ಬೇರೆ, ಈ ಗಾಳಿ ಬೇರೆ, ಈ ಕೆಸರು ಬೇರೆ, ಈ ಕತ್ತಲು ಬೇರೆ. ಕುದುರೆಗಾಡಿಗಳೂ ಸಿಕ್ಕುವಂತಿಲ್ಲ. ಇಂಥ ಮಳೆಯಲ್ಲಿ ಗಾಡಿಯವರಾದರೂ ಏತಕ್ಕಾಗಿ ಬೀದಿಗಿಳಿದಾರು ?

ಆಕೆಯ ಭುಜದ ಮೇಲೆ ತಲೆಯನ್ನೊರಗಿಸಿ ಆತ ನಿಧಾನವಾಗಿ ನಡೆದು ಬರುತ್ತಲಿದ್ದ. ಈಕೆ ಯಾರು, ಎಲ್ಲಿಂದ ಬಂದಳು ? ಹೊಳೆಯ ದಂಡೆಯ ಮೇಲೆ ತಾನು ಮೈಮರೆತು ಕುಳಿತಿದ್ದ ಹಾಗೆ ಎಲ್ಲಿಂದ ಬಂದಳೀ ಕರುಣಾಹೃದಯಿ ? ಹೊಳೆಯಿಂದ ಚಿಮ್ಮಿ ಬಂದಳೇ ? ಮಳೆಯಿಂದ ಇಳಿದು ಬಂದಳೇ ? ಗಾಳಿಯಿಂದ ತೇಲಿ ಬಂದಳೇ ? ಮಿಂಚಿನಿಂದ ಮಿಂಚಿ ಬಂದಳೇ ? ಮುಗಿಲಿನಿಂದ ಮೈದಳೆದು ಬಂದಳೇ ? ತಾನು ಬವಳಿಬಂದು ಬೀಳುವುದರಲ್ಲಿದ್ದಾಗಲೇ ತನ್ನನ್ನು ರಕ್ಷಿಸಲೆಂದು ಹಠಾತ್ತಾಗಿ ಬಂದಳೇನೋ ಈ ದೇವಕನ್ಯೆ....

"ಯಾರ್ರೀ ನೀವು ? ಹೀಗೆ ಅಕಸ್ಮಾತ್ತಾಗಿ ಬಂದುಬಿಟ್ಟಿರಿ ?" ಎಂದು ನಡುಗುತ್ತಿರುವ ಧ್ವನಿಯಿಂದ ಕೇಳಿದನಾತ.

ಆತನ ಧ್ವನಿ ಕಿವಿಗೆ ಬೀಳುತ್ತಲೂ ಸರಸುವಿನ ಶರೀರವೆಲ್ಲ ರೋಮಾಂಚಿತವಾಯಿತು. "ಯಾರ್ರೀ ನೀವು ?" ಏನು ಉತ್ತರವೀಯುವುದು ಆ ಪ್ರಶ್ನೆಗೆ ?

"ಯಾರಾದರೇನಂತೆ. ಮೊದಲು ನಿಮ್ಮನ್ನು ನಿಮ್ಮ ಕೊಟಡಿಗೆ ಮುಟ್ಟಿಸಬೇಕು. ನೀವು ನಡೆಯಲು ಸಾಧ್ಯವೋ ಇಲ್ಲವೋ ?"

"ಎಷ್ಟು ಹೊತ್ತು ನಡೆಯುವೆನೊ ಹೇಳಲಾರೆ. ನನ್ನ ಕೊಟಡಿ ನೋಡಿದ್ದೀರಾ ನೀವು ?"

"ಹೌದು. ನೋಡಿದ್ದೇನೆ."

"ಓ! ನೋಡಿದ್ದೀರಾ? ಯಾವಾಗ ನೋಡಿದ್ದಿರಿ? ನನಗಂತೂ ನಿಮ್ಮ ಗುರುತಿದ್ದ ಹಾಗೆ ತೋರುವುದಿಲ್ಲ."

"ನಿಮಗಿರದಿದ್ದರೂ ನನಗಿದೆ."

"ಆಹಾ! ನನ್ನ ಗುರುತೂ ಇದೆಯೆ? ಇರಲೇ ಬೇಕು. ನನಗೊಂದು ಕಲ್ಪನೆ ಬಂದಿದೆ. ಹೇಳಲಾ?"

"ಏನದು?"

"ನೀವು ಈ ಲೋಕದವರೆಂದು ನನಗನ್ನಿಸುತ್ತಲೇ ಇಲ್ಲ. ಇಲ್ಲಿನ ಮನುಷ್ಯರಲ್ಲಿ ಇಂಥ ಕರುಣೆ, ಇಂಥ ವಾತ್ಸಲ್ಯ, ಇಂಥ ದಯೆ ಇರುವುದುಂಟೇ? ನೀವು ದೇವಲೋಕದಿಂದಲೇ ಇಳಿದು ಬಂದಿರಬೇಕು."

ಸರಸು ಕಿಲಕಿಲನೆ ನಕ್ಕಳು. ಆಕೆ ನಗುವಾಗಲೇ ಮಿಂಚಿನ ಗೆರೆಯೊಂದು ಆಗಸದಲ್ಲಿ ಮಿನುಗಿ ಆಕೆಯ ಮುಖಮಂಡಲವನ್ನು ಬೆಳಗಿಸಿತು. ಶಿವಮೂರ್ತಿ ದೃಷ್ಟಿಯನ್ನು ಹೊರಳಿಸಿ ಆಕೆಯ ಮುಖವನ್ನು ನಿಟ್ಟಿಸಿನೋಡಿದ. ಪ್ರಮಾಣ ಬದ್ಧವೂ ಸುಂದರವೂ ಕಾಂತಿಯುತವೂ ಆದ ಮುಖ. ಮಿಂಚಿನ ಪ್ರಖರ ಬೆಳಕಿಗೆ ರತ್ನಗಳಂತೆ ಥಳಥಳಿಸಿದ ಕಣ್ಣುಗೊಂಬೆಗಳು. ಚೆಲುವಾದ ಮೂಗು, ಅಂದವಾದ ದಂತಪಂಕ್ತಿ. ನಸುವಿಶಾಲವಾದ ಹಣೆಯ ಮೇಲೆ ಹೊಳೆ ಹೊಳೆವ ಕೇಶರಾಶಿ. ಮಳೆಯ ನೀರಿನಿಂದಾಗಿ ತೊಯ್ದು ಮಿರುಗುವ ಕೆನ್ನೆ. ಬಿಳಿಯ ಸೀರೆ, ಬಿಳಿಯ ರವಕೆಗಳನ್ನು ಧರಿಸಿದ್ದ ಸರಸು ಆ ಮಿಂಚಿನ ಬೆಳಕಿನಲ್ಲಿ ಆತನಿಗೆ ಕನಸಿನ ಕನ್ಯೆಯಂತೆಯೆ ಕಾಣಿಸಿಕೊಂಡಳು.

"ನಿಜಕ್ಕೂ ನೀವು ದೇವಲೋಕದವರೇ ಇರಬೇಕು. ನನ್ನನ್ನು ಅಲ್ಲಿಗೇ ಕರೆದೊಯ್ಯಲು ಬಂದಿದ್ದೀರಾ?"

ಎಂಥ ಪ್ರಶ್ನೆ! ಸರಸು ಥರಥರನೆ ನಡುಗಿದಳು. ದೇವಲೋಕಕ್ಕೆ ಕರೆದೊಯ್ಯುವುದು ಯಮದೂತರ ಕೆಲಸವಂತೆ. ತನ್ನನ್ನೂ ಒಬ್ಬ ಯಮದೂತಳಂತೆ ಭಾವಿಸಿದನೇನೊ ಈತ. ಎಂಥ ವಿಚಿತ್ರ ಯುವಕ!

"ಹೇಳುವುದಿಲ್ಲವೇ, ನೀವು ಯಾರು?" ಎಂದು ಆತ ಮತ್ತೆ ಪ್ರಶ್ನೆ ಮಾಡಿದ–ಮಗುವಿನಂತೆ.

ಆತನಿಗೆ ಉತ್ತರವೀಯುವುದೇ ಬೇಡವೇ ಎಂದು ಆಕೆ ಯೋಚಿಸುತ್ತಿದ್ದ ಹಾಗೆಯೆ ಹಿಂದಿನಿಂದ "ಹೇ! ಹೇ!" ಎಂಬ ಕೂಗು ಕೇಳಬಂದಿತು.

ಆ ಧ್ವನಿಯೂ ಪರಿಚಿತವಾದುದೇ ಸರಸೂಗೆ. ಕದುರೆಗಾಡಿಯ ಮುಹಮ್ಮ ದನ ಧ್ವನಿ ಅದು; ಎಂದೆಂದೂ ರಿಪೇರಿಯನ್ನು ಕಾಣದ ಗಾಡಿಯ ಮುಹ ಮ್ಮದ....

"ಬಾಜೂ....ಬಾಜೂ....ಏ ತಾಯಿಾ, ಏ ಅಪ್ಪ....ಬಾಜೂ ಬಾಜೂ.."

ಶಿವಮೂರ್ತಿಯನ್ನು ಹಿಡಿದುಕೊಂಡಿದ್ದ ಹಾಗೆ ಸರಸು ಕೊಂಚ ಬದಿಗೆ ಸರಿದು—"ಮುಹಮ್ಮದ್ !" ಎಂದು ಕರೆ ಕೊಟ್ಟಳು.

ಆತ ಕುದುರೆಯನ್ನು ನಿಲ್ಲಿಸಿ ಆಶ್ಚರ್ಯದಿಂದ ಉದ್ಗಾರ ತೆಗೆದ: "ಯಾರು ತಾಯಿಾ ? ನೀವೇ ? ಇಂಥ ಮಳೆಯೊಳಗೆ ? ಯಾರು ಈ ಅಪ್ಪ ?"

"ಹುಶ್, ಹುಶ್. ಗದ್ದಲ ಮಾಡಬೇಡ. ಎಲ್ಲಾ ಆಮೇಲೆ ಹೇಳು ತ್ತೇನೆ. ಮೊದಲು ಇವರನ್ನು ಗಾಡಿಗೆ ಹತ್ತಿಸಬೇಕು. ಕೊಂಚ ಕೆಳಕ್ಕಿಳಿದು ಬಾ."

ಮುಹಮ್ಮದನ ಸಹಾಯದಿಂದ ಗಾಡಿಯನ್ನು ಹತ್ತಿ ಕುಳಿತ ಶಿವಮೂರ್ತಿ. ಸರಸುವೂ ಆತನನ್ನು ಹಿಡಿದುಕೊಂಡು ಹತ್ತಿರವೇ ಕುಳಿತುಕೊಂಡಳು. ಗಾಡಿ ಮುಂದಕ್ಕೆ ಹೊರಟಿತು.

"ಎಲ್ಲಿಗೆ ಹೋಗಬೇಕು ತಾಯಿಾ ?"

"ಮನೆಯವರೆಗೆ ಹೊಡೆ," ಎಂದು ಹೇಳಿ ಸರಸು ಕೊಂಚ ನಕ್ಕು ನುಡಿ ದಳು: "ಈಗಲೂ ಸೋರುತ್ತಲೇ ಇದೆಯಲ್ಲ ನಿನ್ನ ಗಾಡಿ ? ನೊನ್ನೆ ರಿಪೇರಿ ಮಾಡಿಸಿಕೊಂಡೇ ಬರುತ್ತೇನೆಂದು ಒಪ್ಪಿದ್ದೆಯಲ್ಲ ?"

"ಏನು ಮಾಡಲಿ ತಾಯಿಾ ? ಕೈಯಲ್ಲಿ ರೊಕ್ಕ ಉಳಿಯೋದೇ ಇಲ್ಲ— ರಿಪೇರಿ ಮಾಡಿಸಬೇಕೆಂದರೆ. ದುಡಿಯುವುದು ಹೊಟ್ಟೆಗೇ ಆಗುವದಿಲ್ಲ...."

ಆ ಮಾತು ಕೇಳಿ ಶಿವಮೂರ್ತಿ ಮೆಲ್ಲನೆ ನರಳಿದಂತಾಯಿತು. ದುಡಿ ಯುವುದು ಹೊಟ್ಟೆಗೇ ಆಗುವುದಿಲ್ಲ....ಎತ್ತ ಹೊರಳಿದರೂ ಹೊಟ್ಟೆಯ ಮಾತು....ಈ ಹಾಳು ಹೊಟ್ಟೆ....

"ಏಕೆ ನರಳಿದಿರಿ ? ಏನಾಯಿತು ?" ಎಂದಳು ಸರಸು.

"ಏನೂ ಇಲ್ಲ. ಈ ಹೊಟ್ಟೆಯೆನ್ನುವುದು ಎಷ್ಟು ಜನರನ್ನು ಗಾಸಿ ಗೊಳಿಸುತ್ತಿದೆಯಲ್ಲ ಪ್ರಪಂಚದಲ್ಲಿ !"

"ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ—ಅಂತ

ಗಾದೆಯೇ ಇದೆಯಲ್ಲ ರಾಯರೆ!" ಎಂದ ಮಹಮ್ಮದ್. "ಹುಟ್ಟಿ ಬಂದಿದ್ದೇವೆ ಪ್ರಪಂಚದೊಳಗೆ. ದುಡಿಯಬೇಕು, ಹೊಟ್ಟೆ ಹೊರೆಯಬೇಕು. ಅಲ್ಲಾನ ಇಚ್ಛೆಗೆ ನಾವೇನು ಮಾಡಲಿಕ್ಕಾದೀತು ?"

ಶಿವಮೂರ್ತಿ ಮೊಳಕಾಲುಗಳ ನಡುವೆ ತಲೆಯನ್ನಿರಿಸಿ ಮತ್ತೊಂದು ಸಲ ನರಳಿದ. ಮತ್ತೆ ಆತನ ಶರೀರದಲ್ಲೆಲ್ಲ ನಡುಕವೆದ್ದಂತಾಯಿತು. ಕುಳಿತುಕೊಂಡಿರುವುದೂ ಸಾಧ್ಯವಾಗಲಿಲ್ಲ. ಮುಷ್ಟಿಗಳೆರಡನ್ನೂ ಮುಂದೆ ಮಾಡಿ, ಹಲ್ಲುಗಳನ್ನು ಬಿಗಿಯಾಗಿಸಿ ನಡುಕವನ್ನು ಹೊಡೆದೋಡಿಸಲು ಪ್ರಯತ್ನಿಸತೊಡಗಿದ. ಆತನ ಪ್ರಯತ್ನ ಫಲಕಾರಿಯಾಗಲಿಲ್ಲ. ಒಂದೆರಡು ಕ್ಷಣಗಳಲ್ಲಿಯೇ ಆತನ ದೇಹ ಗಾಡಿಯಲ್ಲಿಯೇ ಉರುಳಿಬಿದ್ದಿತು. ಆತುರದಿಂದ ಸರಸು ಆತನ ತಲೆಯನ್ನೆತ್ತಿ ತನ್ನ ತೊಡೆಯಮೇಲಿಟ್ಟುಕೊಂಡಳು.

"ಬೇಗ ಬೇಗ ಗಾಡಿ ಹೊಡೆ ಮಹಮ್ಮದ್. ಇವರಿಗೆ ಬವಳಿ ಬಂದು ಬಿಟ್ಟಿದೆ...." ಎಂದು ಗಾಬರಿಯಿಂದ ನುಡಿದಳು ಸರಸು.

ಹತ್ತು ಹದಿನೈದು ನಿಮಿಷಗಳಲ್ಲಿ ಗಾಡಿ ಅವರ ಮನೆಯೆದುರಿಗೆ ಬಂದು ನಿಂತಿತು. ನರಳುತ್ತಿದ್ದ ಶಿವಮೂರ್ತಿಯನ್ನು ಕೆಳಕ್ಕಿಳಿಸಿ ಮನೆಯೊಳಗಡೆ ತಂದು ಒಲೆಯೆದುರಿಗೆ ಕೂಡ್ರಿಸಿದ್ದಾಯಿತು. ಕೊಂಚ ಹೊತ್ತಿನಲ್ಲಿಯೇ ಆತನ ಮೈ ನಡುಕ ಮಾಯವಾಯಿತು.

ಅಷ್ಟರಲ್ಲಿ ರುದ್ರವ್ವಜ್ಜಿ ಹಾಲು ಕಾಯಿಸಿ, ಲೋಟವನ್ನು ಆತನ ಕೈಗೆ ಕೊಡುತ್ತ—"ಕುಡಿಯಪ್ಪಾ ತಮ್ಮ. ಸ್ವಲ್ಪ ಹುಷಾರಾದೀತು," ಎಂದಳು.

ಆತ ಸಂಕೋಚದಿಂದ ಅವರಿಬ್ಬರನ್ನೂ ದಿಟ್ಟಿಸಿ ನೋಡುತ್ತಲಿದ್ದ. ನಿಧಾನವಾಗಿ ಆತನಿಗೆ ನಡೆದುದೆಲ್ಲವೂ ನೆನಪಿಗೆ ಬರುತ್ತಲಿದ್ದಿತು. ಹೊಳೆಯ ಕಟ್ಟೆಯ ಮೇಲೆ ತಾನು ಮೈಮರೆತು ಕುಳಿತಾಗ ಈ ತರುಣಿ ಬಂದು ತನ್ನನ್ನು ಎಚ್ಚರಿಸಿ ಗಾಡಿಯಲ್ಲಿ ಕರೆದು ತರುತ್ತಿದ್ದ ಹಾಗೆ ತಾನು ಮೂರ್ಛೆ ಹೋದುದರ ಜ್ಞಾಪಕ ಬಂದಿತು. ಆಕೆಯ ಮನೆಯೋ ಏನೊ ಇದು! ಆತ ಸುತ್ತುಮುತ್ತು ದೃಷ್ಟಿ ಹೊರಳಿಸಿದ. ಗೋಡೆಯ ಮೇಲಿದ್ದ ದೊಡ್ಡ ಗಡಿಯಾರ.. ಮಹಡಿಗೆ ಹೋಗುವ ಮೆಟ್ಟಲು.... ಪಡಸಾಲೆಯ ನಡುವೆ ನೇತಾಡುತ್ತಲಿದ್ದ ತೂಗುಮಣೆ.... ಓ! ಬಸಪ್ಪಸೆಟ್ಟರ ಮನೆಯಲ್ಲವೇ ಇದು.... ಗೌರಿ.... ಅಲ್ಲ—

ಅಲ್ಲ—ಗೌರಾಂಬಿಕಾ ಮನೆ....ಹಾಗಾದರೆ ಈ ಯುವತಿ ಯಾರು ? ದೇವಕನ್ಯೆ ಯಂತೆ ಕಾಣಿಸುವ ಈ ಸುಂದರ ಯುವತಿ ?

ಹಠಾತ್ತಾಗಿ ಆತನ ದೃಷ್ಟಿಯೆದುರಿಗೆ, ಅಂದು ತಾನು ನೋಡಿದ ಆ ಪುಸ್ತಕ ಬಂದು ನಿಂತಂತಾಯಿತು ; ಪ್ರಭುಲಿಂಗಲೀಲೆಯ ಸಂಗ್ರಹ. ಅದರ ಮೊದಲ ಪುಟದ ಮೇಲೆ ದುಂಡಗಿನ ಮುದ್ದಾದ ಅಕ್ಷರಗಳಲ್ಲಿ ಬರೆಯಲ್ಪಟ್ಟಿದ್ದ ಆ ಹೆಸರೂ ನೆನಪಿಗೆ ಬಂದಿತು : ಸರಸ್ವತೀದೇವಿ ಸೆಟ್ಟರ. ಅಂದು ಗೌರಿ—ಅಲ್ಲಲ್ಲ—ಗೌರಾಂಬಿಕಾ ಆಡಿದ ಆ ಮುದ್ದು ಮಾತುಗಳೂ ಆತನ ಕಿವಿಯಲ್ಲಿ ದುಮುದುಮಿಸಿದುವು. ಸರಸಕ್ಕನಿಗೆ ಕವಿತೆಯೆಂದರೆ ಬಹಳ ಪ್ರೀತಿ ಎಂದಾಕೆ ಹೇಳಿ ಆ ಪುಸ್ತಕವನ್ನು ತೋರಿಸಿದ್ದಳು. ಕುತೂಹಲದಿಂದ ತಾನು ಅದನ್ನೆತ್ತಿಕೊಂಡು ಪುಟಗಳನ್ನು ಮಗುಚಿಹಾಕಿದ್ದ. ಅಲ್ಲಲ್ಲಿ ಕಾಣಿಸಿದ ಕಂಬನಿಯ ಕಪ್ಪು ಕಲೆಗಳು....ಕಾರಮುಗಿಲಿನ ಗರ್ಜನೆಯ ಕಿವಿಯಾರೆ ಕೇಳಿದ ಸೋಗೆಯಂತಿರೆ—ಎಂಬ ಆ ಚರಣ....

ಹಾಲಿನ ಲೋಟವನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಶಿವಮೂರ್ತಿ ತನ್ನೆದುರಿಗೆ ಕುಳಿತ ಆ ಲಾವಣ್ಯವತಿಯನ್ನು ದಿಟ್ಟಿಸಿ ನೋಡಿದ. ಈಕೆಯೆ ಆ ಸರಸುವೊ ಏನೊ. ಇರಬೇಕು. ಆಕೆಯೆ ಇರಬೇಕು. ಕಾವ್ಯಪ್ರೇಮಿ, ಭಾವನಾಮಯ ಹೃದಯಿ ಸರಸೂ....

ಸರಸು ದೃಷ್ಟಿಯನ್ನು ನೆಲದ ಕಡೆಗೆ ತಿರುಗಿಸಿ ಮೌನವಾಗಿ ಕುಳಿತುಕೊಂಡಿದ್ದಳು. ಆತನ ದೃಷ್ಟಿಯೊಂದಿಗೆ ತನ್ನ ದೃಷ್ಟಿಯನ್ನು ಕೂಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಇಷ್ಟು ಹೊತ್ತಿನ ವರೆಗೆ ಹೊರಗಡೆ ಕತ್ತಲೆಯಲ್ಲಿದ್ದಾಗ ಎಲ್ಲಿಯೋ ಮಾಯವಾಗಿದ್ದ ಆ ತುಂಟ ನಾಚಿಕೆ ಈಗ, ದೀಪದ ಬೆಳಕಿನಲ್ಲಿ, ಮತ್ತೆ ನುಗ್ಗಿ ಬಂದು ಆಕೆಯ ಮುಖದಲ್ಲೆಲ್ಲ ಸೂರೆಯಾಗಿದ್ದಿತು. ಆತ ತನ್ನೆಡೆಗೆ ಒಮ್ಮೆ ದೃಷ್ಟಿ ತಿರುಗಿಸಲೆಂದು ಅಂದು ಸಾಯಂಕಾಲ ತಾನೆಷ್ಟು ಶ್ರಮಪಟ್ಟಿದ್ದಳು....ಗುಲಾಬಿ ಹೂವನ್ನು ಕೆಳಕ್ಕೆಸೆದರಾದರೂ ಆತ ತನ್ನೆಡೆಗೆ ಹೊರಳಿಯಾನೇನೋ ಎಂದು ಹೇಗೆ ಹಾರಯಿಸಿದ್ದಳು....ಈಗ ಅದೇ ಶಿವಮೂರ್ತಿ, ತಮ್ಮ ಮನೆಯಲ್ಲಿಯೆ, ತನಗೆ ತೀರ ಹತ್ತಿರದಲ್ಲಿಯೆ ಕುಳಿತು ತನ್ನ ಮುಖ, ಮೈಗಳ ಮೇಲೆಲ್ಲ ದೃಷ್ಟಿಯನ್ನು ಚೆಲ್ಲಿಬಿಟ್ಟಿದ್ದಾನೆ. ಇಂಥ ಸಂದರ್ಭದಲ್ಲಿ ಈ ಹಾಳು ನಾಚಿಕೆ ಅಡ್ಡ ಬಂದಿದೆ. ತಾನು ನೋಡ

ಲಾರಳು ಆತನ ಮುಖವನ್ನು. ತನ್ನ ರೂಪವನ್ನು ಕಂಡು ಆತನ ಮುಖದಲ್ಲಿ ಮೂಡಿರಬಹುದಾದ ಭಾವನೆಗಳನ್ನು ತಾನು ಕಂಡುಕೊಳ್ಳಲಾರಳು. ಹಾಯ್, ಹೆಣ್ಣು ಜೀವಕ್ಕೇ ಈ ಹಾಳು ನಾಚಿಕೆಯನ್ನು ಏತಕ್ಕಾಗಿ ಗಂಟುಹಾಕಿದೆಯೊ ಈ ನಿಸರ್ಗ....

"ಕುಡಿಯಪ್ಪಾ ತಮ್ಮ. ಹಾಲು ಕುಡಿ...." ಅದು ರುದ್ರಪ್ಪಜ್ಜಿಯ ವಾತ್ಸಲ್ಯದ ನುಡಿ.

"ಹಾಲು....ಹಂ....ಹಾಲು...." ಎನ್ನುತ್ತ ಶಿವಮೂರ್ತಿ ಒಂದು ಗುಟುಕಿಗೇ ಲೋಟವನ್ನೆಲ್ಲ ಬರಿದು ಮಾಡಿ ಮೇಲಕ್ಕೆದ್ದ. ಮಳೆಯಲ್ಲಿ ತೊಯ್ದು ತಪ್ಪಡಿಯಾಗಿದ್ದ ತನ್ನ ಬಟ್ಟೆಗಳ ಕಡೆಗೆ ಆಗ ಆತನ ಲಕ್ಷ್ಯ ಹೊರಳಿತು. ತನ್ನ ಹಾಗೇ ಸರಸುವಿನ ಸೀರೆ ರವಕೆಗಳೂ ತೊಯ್ದು ಹೋಗಿವೆ. ತನ್ನನ್ನು ಮಳೆಯಿಂದ ಉಳಿಸಿಕೊಂಡು ಬರುವಾಗ ಆಕೆಯೂ ತೋಯಿಸಿಕೊಂಡಿದ್ದಾಳೆ. ಮತ್ತೆ ಆತನ ಎದೆ ಕೃತಜ್ಞತೆಯಿಂದ ತುಂಬಿ ಬಂದಿತು.

"ನನಗಾಗಿ ನಿಮಗೆ ಬಹಳ ತೊಂದರೆಯಾಯಿತು...." ಎಂದೇನೋ ಆತನ ನಾಲಿಗೆ ನುಡಿಯಿತು. ಆ ನುಡಿಗಳು ವ್ಯಕ್ತಗೊಳಿಸಲಾರದ ಕೃತಜ್ಞತೆಯನ್ನು ಆತನ ದೃಷ್ಟಿ ವ್ಯಕ್ತಗೊಳಿಸುತ್ತಿತ್ತು. "ನಾನೀಗ ಕೊಟಡಿಗೆ ಹೋಗುತ್ತೇನೆ. ಈ ಬಟ್ಟೆ ತೆಗೆದಿರಿಸಬೇಕಲ್ಲ...." ಎಂದು ಹೇಳುತ್ತ ಆತ ಹೊರಟು ನಿಂತ.

ತನ್ನ ಕೊಟಡಿಗೆ ಹೋಗಿ ಸರಸು ಸೀರೆ ರವಕೆಗಳನ್ನು ಬದಲಿಸತೊಡಗಿದಳು. ಎದುರಿಗಿನ ಕೊಟಡಿಯಲ್ಲಿ ದೀಪವುರಿಯತೊಡಗಿದ್ದಿತು. ಶಿವಮೂರ್ತಿ ಬಟ್ಟೆಗಳನ್ನು ತೆಗೆದಿರಿಸಿ ಬೇರೆಯವುಗಳನ್ನು ಧರಿಸಿಕೊಳ್ಳುತ್ತಲಿದ್ದ. ಒದ್ದೆಯಾಗಿದ್ದ ತಲೆಗೂದಲನ್ನು ಟವಲಿನಿಂದ ಒರೆಸಿಕೊಳ್ಳುತ್ತಿದ್ದ ಹಾಗೆ ಸರಸು ನಿಲುವುಗನ್ನಡಿಯಲ್ಲಿ ಮುಖ ನೋಡಿಕೊಂಡಳು. ಈ ಮೊದಲೆಂದೂ ಕಾಣಿಸದಿದ್ದ ಅವರ್ಣನೀಯ ಆನಂದವೊಂದು ತನ್ನ ಮುಖದ ಎಲ್ಲ ಭಾಗಗಳಲ್ಲೂ ತುಂಬಿ ಬಂದಿದ್ದಂತೆ ಭಾಸವಾಯಿತು. ತುಟಿಗಳೆರಡೂ ನಿಧಾನವಾಗಿ ಕಂಪಿಸುತ್ತಲಿದ್ದುವು.

ಒಂದೆರಡು ಕ್ಷಣ ನಿಂತ ಹಾಗೆಯೆ ನಿಂತುಕೊಂಡಿದ್ದು ಸರಸು ತನ್ನ

ಪ್ರತಿಬಿಂಬವನ್ನೇ ದಿಟ್ಟಿಸುತ್ತಲಿದ್ದಳು. ತನ್ನ ಈ ಸುಂದರ ರೂಪವನ್ನಾತ ನೋಡಬೇಕು, ತನ್ನ ದೃಷ್ಟಿಗೆ ದೃಷ್ಟಿ ಕೂಡಿಸಬೇಕೆಂಬ ಆಕೆಯ ಹಾರೈಕೆ ಅಂದು ಫಲಿಸಿದ್ದಿತು. ನೋಡಿದುದು ಮಾತ್ರವಲ್ಲ, ಆತ ಆಕೆಯ ಭುಜದ ಮೇಲೆ ಕೈ ಹಾಕಿಕೊಂಡು, ಆಕೆಯ ದೇಹವನ್ನು ಬಳಸಿಕೊಂಡು ನಡೆದು ಬಂದಿದ್ದ. ಆತನ ಬೆನ್ನಿನ ಸುತ್ತು ಕೈ ತೊಡಗಿಸಿ ಆತನನ್ನು ಹಿಡಿದುಕೊಂಡು ಬಂದಿದ್ದಳಾಕೆ. ಕುದುರೆ ಗಾಡಿಯಲ್ಲಾದರೋ ಆತನ ತಲೆಯೇ ಆಕೆಯ ತೊಡೆಯ ಮೇಲೊರಗಿಕೊಂಡಿದ್ದಿತು; ಆ ಸುಂದರ ಮುಂಗುರುಳಿನ ಮೋಹಕವಾದ ತಲೆ....ತನ್ನೊಂದಿಗೆ ಆತ ಮಾತೂ ಆಡಿದ್ದ. ಎಂಥ ಮಾತು ಅವು! ತನ್ನನ್ನು ಕನಸಿನ ಲೋಕದ ದೇವಕನ್ಯೆಯೆಂದು ಸಂಬೋಧಿಸಿದ್ದ. ದೇವ ಕನ್ಯೆ....! ಆಕೆಯ ಸಮಸ್ತ ಶರೀರವೂ ಸಂತಸದಿಂದ ಸೂಕ್ಷ್ಮವಾಗಿ ಕಂಪಿಸ ತೊಡಗಿತು.

ಒಂದೆರಡು ಬಾರಿ ತಲೆಗೂದಲಿನ ಮೇಲೆ ಬಾಚಣಿಗೆಯನ್ನಾಡಿಸಿ ಮುಂಗುರುಳು ತಿದ್ದಿಕೊಂಡು ಸರಸು ಕೆಳಕ್ಕಿಳಿದು ಬಂದಳು. ಪಡಸಾಲೆಯಲ್ಲಿ ಯಾರ ಸುಳಿವೂ ಇರಲಿಲ್ಲ. ಶಿವಮೂರ್ತಿಯನ್ನು ಒಳಗಡೆ ಸಾಗಿಸಿಕೊಂಡು ಬಂದಾಗ ತನ್ನ ಕಂಕುಳಲ್ಲಿದ್ದ ಪಿಟೀಲನ್ನು ಅವಸರದಲ್ಲಿ ಒಂದು ಮೂಲೆಯಲ್ಲಿಟ್ಟ ವಿಷಯ ಸರಸೂಗೆ ನೆನಪಾಯಿತು. ಆತ ಅದನ್ನು ಇಲ್ಲಿಯೇ ಬಿಟ್ಟು ಹೋದನಲ್ಲ! ಮಳೆಯ ನೀರಿಗೆ ಸಿಕ್ಕಿ ಆ ಪಿಟೀಲೂ ತೊಯ್ದು ಹೋಗಿರಲು ಸಾಕು.

ಸರಸು ಅದನ್ನೆತ್ತಿಕೊಂಡು ಪರೀಕ್ಷಿಸಿ ನೋಡಿದಳು. ಮಳೆಯ ನೀರಿಗೆ ಪಿಟೀಲು ಸಿಲುಕಿದ್ದರೂ ಕೆಡದೆ ಉಳಿದುದು ಆಶ್ಚರ್ಯದ ಮಾತೇ ಆಗಿದ್ದಿತು. ಮಗುವಿನ ಮುಖವನ್ನೊರೆಸುವ ತಾಯಿಯಂತೆ ಸರಸು ತನ್ನ ಸೀರೆಯ ಸೆರಗಿನಿಂದ ಅದನ್ನೊರೆಸಿದಳು. ಕಮಾನನ್ನು ಬಲಗೈಯಲ್ಲಿ ಹಿಡಿದುಕೊಂಡು ಪಿಟೀಲು ನುಡಿಸುವ ಭಂಗಿಯಲ್ಲಿ ನಿಂತಳು. ಆದರೆ ಏಕೊ ಏನೊ, ಆಕೆಯ ಕೈ ಓಡಲಿಲ್ಲ.

"ಪಿಟೀಲು ಬಿಟ್ಟು ಹೋಗಿದ್ದಾರೆ. ಕೊಟ್ಟು ಬರುತ್ತೇನೆ ಅಜ್ಜಿ," ಎಂದು ಕೂಗಿ ಕೇಳಿದಳು.

"ಆಗಲಿ, ಕೊಟ್ಟು ಬಾರಪ್ಪ. ಬೇಗ ಬಾ. ಅಪ್ಪ ಬರುವ ಹೊತ್ತಾಯಿತು." ಎಂದು ಒಳಗಿನಿಂದ ಅಜ್ಜಿಯು ಉತ್ತರ ಬಂದಿತು.

ಮುಂದಿನ ಬಾಗಿಲನ್ನು ಮುಚ್ಚಿಕೊಂಡು ಸರಸು ಮತ್ತೆ ಬೀದಿಗಿಳಿದಳು. ಹತ್ತಿಪ್ಪತ್ತು ಹೆಜ್ಜೆ ನಡೆದರೆ ಆತನ ಕೊಟಡಿ. ಕಟ್ಟೆಯನ್ನೇರಿ ನಾಲ್ಕು ಅಡಿ ನಡೆದು ಹೋದರೆ ಬಾಗಿಲು. ಅದೂ ತೆರೆದುಕೊಂಡೇ ಇದೆ. ಸರಸು ಕಟ್ಟೆಯನ್ನೇರಿ ಬಾಗಿಲ ಬಳಿ ಬಂದಳು. ಒಳಕ್ಕೆ ಅಡಿಯಿರಿಸಬೇಕಾದರೆ ಆಕೆಯ ಎದೆ ಮತ್ತೆ ಧಡಧಡಿಸತೊಡಗಿತು. ಅಲ್ಲಿರುವುದು ಆತನೊಬ್ಬನೇ ಒಬ್ಬ. ಇನ್ನೂ ಹರಯದ ಹುಡುಗ. ಆತನನ್ನು ಬಿಟ್ಟರೆ ಇನ್ನಾರೂ ಇಲ್ಲ ಆ ಮನೆಯಲ್ಲಿ. ಬೀದಿಯಲ್ಲಿ ಅದೇ ಕೊನೆಯ ಮನೆಯಾದುದರಿಂದ ಅಕ್ಕಪಕ್ಕದಲ್ಲಿ ಜನವಸತಿಯಿಲ್ಲ. ಎದುರಿಗಿರುವ ತಮ್ಮ ಮನೆಯೊಂದನ್ನು ಬಿಟ್ಟರೆ ಹತ್ತಿರ ಬೇರೆ ಮನೆಗಳೂ ಇಲ್ಲ. ಇಂಥ ರಾತ್ರಿಯಲ್ಲಿ, ತನ್ನಂಥ ಯುವತಿಯೊಬ್ಬಳೇ ಇಂಥ ಯುವಕನ ಕೊಟಡಿಗೆ ಅಡಿಯಿರಿಸುವುದನ್ನು ಅಕಸ್ಮಾತ್ತಾಗಿ ಯಾರಾದರೂ ಕಂಡರೇನು ಗತಿ ? ಯಾರಾದರೂ ಎಂದೇಕೆ, ಮಠದಿಂದ ಹಿಂದಿರುಗಿದ ತನ್ನ ತಾಯಿಯೆ ಕಂಡುಬಿಟ್ಟರೆ ? ತಂದೆಯಂತೂ ಇನ್ನೂ ಒಂದೂವರೆ ಗಂಟೆಯ ಕಾಲ ಈ ಕಡೆಗೆ ಬರುವಂತಿಲ್ಲ. ಆ ಬಗೆಗೆ ಯಾವ ಆಶಂಕೆಯೂ ಇಲ್ಲ. ಆದರೆ ತನ್ನ ತಾಯಿ....

ಒಳಗೆ ಹೋಗುವುದೇ, ಬೇಡವೇ ಎಂದು ಯೋಚಿಸುತ್ತ ಸರಸು ಒಂದು ಕ್ಷಣ ಕಟ್ಟೆಯ ಮೇಲೆಯೇ ನಿಂತುಕೊಂಡಿದ್ದಳು. ಆಕೆ ಕಟ್ಟೆಯನ್ನೇರಿ ಬರುವಾಗ ಕೈಬಳೆಗಳು ಸದ್ದು ಮಾಡಿದ್ದವೊ ಏನೊ....ಶಿವಮೂರ್ತಿ ಬಾಗಿಲಿನಿಂದ ಇಣುಕಿ ನೋಡಿ ಆಕೆಯನ್ನು ಕಂಡು—

"ಓ ! ನೀವು ! ಬನ್ನಿರಲ್ಲ ಒಳಕ್ಕೆ. ಬನ್ನಿ," ಎಂದ.

ಸಂಕೋಚದಿಂದಲೇ ಸರಸು ಒಳಕ್ಕೆ ಬಂದಳು.

"ನೀವು ಬರುವಾಗ ಈ ಪಿಟೀಲನ್ನು ಅಲ್ಲೇ ಬಿಟ್ಟುಬಂದಿದ್ದಿರಿ. ಕೊಟ್ಟು ಹೋಗೋಣಾಂತ ಬಂದೆ." ಎನ್ನುತ್ತ ಆತನ ಕೈಗೆ ಪಿಟೀಲು ಕೊಟ್ಟು ಆಕೆ ಬಂದ ಹಾಗೆ ಹಿಂದಿರುಗತೊಡಗಿದಳು.

"ಏನವಸರ ? ಕೊಂಚ ಕೂತುಕೊಂಡಿರಬಾರದೇ ?" ಎಂದು ನುಡಿದು ಆತ ಅಲ್ಲಿದ್ದ ಒಂದೇ ಒಂದು ಕುರ್ಚಿಯನ್ನು ಆಕೆಯ ಬಳಿ ಸರಿಸಿದ.

ಇನ್ನು ಹಾಗೆಯೆ ಹೊರಟುಬಿಡುವುದು ಸಾಧ್ಯವಿರಲಿಲ್ಲ. ಸರಸು ಕುಳಿತುಕೊಂಡು ಕೊಟಡಿಯಲ್ಲೆಲ್ಲ ದೃಷ್ಟಿ ತಿರುಗಿಸಿದಳು. ಕಂದೀಲಿನ ಅಸ್ಪಷ್ಟ ಬೆಳಕಿನಲ್ಲಿ ಅಲ್ಲಿನ ಅವ್ಯವಸ್ಥೆಯನ್ನೆಲ್ಲ ಗುರುತಿಸಿದಾಗ ಆಕೆಗೆ ಒಳಗೊಳಗೆ ನಗೆ ಬರದಿರಲಿಲ್ಲ. ಕೊಟಡಿಯಲ್ಲಿನ ಕಸವನ್ನೆಂದು ಗುಡಿಸಲಾಗಿದ್ದಿತೊ—ನೆಲದ ಮೇಲೆಲ್ಲ ಕಸವೇ ಕಸವಾಗಿತ್ತು. ಹಾಸಿದ್ದ ಚಾಪೆಯ ಮೇಲೂ ಧೂಳು ಮುತ್ತಿಕೊಂಡಿದ್ದಿತು. ಗೋಡೆಯ ಒಂದು ಬದಿಗೆ ಹಾಸಿಗೆಯ ಸುರುಳಿಯೊಂದು ಅಸ್ತವ್ಯಸ್ತವಾಗಿ ಬಿದ್ದಿತ್ತು. ಅದರ ಹತ್ತಿರ, ಎಡಕ್ಕೆ ಬಲಕ್ಕೆ, ಮೇಲೆ ಕೆಳಗೆ ಸೂರೆಯಾಗಿದ್ದ ಪುಸ್ತಕಗಳು. ಕಿಟಕಿಯ ಗೋಡೆಯ ಮೇಲೆ ಹಲವಾರು ಬಗೆಯ ಕಾಗದ ಪತ್ರಗಳು, ಕನ್ನಡಿ ಬಾಚಣಿಗೆ, ಹಲ್ಲುಜ್ಜುವ ಪುಡಿ, ಎಣ್ಣೆಯ ಸೀಸೆ ಇತ್ಯಾದಿ ವಸ್ತುಗಳ ಪ್ರದರ್ಶನವೇ ನಡೆದ ಹಾಗಿದ್ದಿತು. ಸಿಗರೇಟಿನ ಖಾಲಿ ಡಬ್ಬಗಳು, ಸೇದಿ ಬಿಸುಟಿದ ಸಿಗರೇಟಿನ ತುಂಡುಗಳು, ಬರಿಯವಾದ ಬೆಂಕಿಪೆಟ್ಟಿಗೆಗಳಂತೂ ಕೊಟಡಿಯ ನಾಲ್ಕು ಮೂಲೆಗಳಲ್ಲೂ ತಮ್ಮ ರಾಜ್ಯ ಹೂಡಿದ್ದುವು. ಸಿಗರೇಟಿನ ಬೂದಿಯಂತೂ ಎಲ್ಲ ವಸ್ತುಗಳನ್ನೂ ಆವರಿಸಿಕೊಂಡು ಕೊಟಡಿಯ ರಾಜನಂತೆ ಮೆರೆಯುತ್ತಲಿತ್ತು!

ಆಕೆಯ ತುಟಿಯ ಮೇಲೆ ಸುಳಿದೂ ಸುಳಿಯದಂತಿದ್ದ ಮೆಲುನಗೆಯನ್ನಾತ ಗುರುತಿಸಿಕೊಂಡಿರಬೇಕು. ಸಂಕೋಚದಿಂದ ತಬ್ಬಿಬ್ಬಾದ ಸ್ವರದಲ್ಲಿ ನುಡಿದ :

"ಕೊಟಡಿ ಬಲು ಕೊಳೆಯಾಗಿದೆ. ಏನೂ ತಿಳಿದುಕೊಳ್ಳಬೇಡಿರಿ."

ಆತ ಅಲ್ಲಿ ಒಬ್ಬನೇ ಇರುವುದನ್ನು ಚೆನ್ನಾಗಿ ಅರಿತಿದ್ದರೂ ಸರಸು ಸುಮ್ಮನೆ ಪ್ರಶ್ನೆ ಮಾಡಿದಳು :

"ನೀವೊಬ್ಬರೇ ಇರುತ್ತೀರಾ ಇಲ್ಲಿ ?"

"ಹೌದು, ನಾನೊಬ್ಬನೇ. ಬೇರೆ ಯಾರು ಬರಬೇಕು ?"

"ಸ್ನೇಹಿತರು ?"

"ನನ್ನಂಥವನೊಂದಿಗೆ ಯಾರು ತಾನೆ ಸ್ನೇಹ ಬೆಳಸಿಯಾರು ? ನನ್ನ ಸ್ನೇಹಿತ ಅಂದರೆ ಇದೊಂದೇ ನೋಡಿರಿ, ಈ ನನ್ನ ಪಿಟೀಲು !" ಎಂದು ಆತ ನಗುತ್ತ ನುಡಿದ. ಸರಸುವೂ ನಕ್ಕಳು.

"ಪಿಟೀಲು ಕೆಟ್ಟುಹೋಯಿತೊ ಏನೊ. ತುಂಬ ಮಳೆ ಬಡಿಯಿತಲ್ಲ ಅದಕ್ಕೂ!"

ತೊಟ್ಟುಕೊಂಡಿದ್ದ ಅಂಗಿಯ ಕೊನೆಯಿಂದ ಅದನ್ನೊರೆಸುತ್ತಲಿದ್ದ ಶಿವಮೂರ್ತಿ—"ಅಷ್ಟೇನೂ ಬಡಿದಿಲ್ಲ. ಪುಣ್ಯಕ್ಕೆ ಅದು ಹಾಳಾಗಲಿಲ್ಲ. ಉಳಿದು ಕೊಂಡಿತು," ಎಂದ.

"ಇಂಥ ಮಳೆಯಲ್ಲಿ ಹಾಗೇಕೆ ಅಲ್ಲಿ ಕುಳಿತಿದ್ದಿರಿ?"

"ಏಕೆ ಎಂದು ಏನು ಹೇಳಲಿ? ಹೇಳಿದರೂ ನಿಮಗರ್ಥವಾಗುವದೊ ಇಲ್ಲವೊ. ನಾನೊಬ್ಬ ವಿಚಿತ್ರ ಮನುಷ್ಯ ಅಂತ ತಿಳಿದುಕೊಂಡು ನಡೆದು ದನ್ನೆಲ್ಲ ಮರೆತುಬಿಡಿರಿ."

"ವಿಚಿತ್ರ ಮನುಷ್ಯ? ಅದೇನು, ಹೀಗೆ ಮಾತಾಡುತೀರಿ? ನಿಮಗಾದು ದಾದರೂ ಏನು?" ಎಂದು ಕಳವಳದಿಂದ ಕೇಳಿದಳು ಸರಸು.

ಶಿವಮೂರ್ತಿ ಆಕೆಗೆದುರಾಗಿ ಹಾಸಿಗೆಯ ಸುರುಳಿಯ ಮೇಲೆ ಕುಳಿತು ಕೊಂಡ. ಕಮಾನನ್ನು ಹಿಡಿದುಕೊಂಡಿದ್ದ ಬಲಗೈ ಮೆಲುಮೆಲನೆ ಪಿಟೀಲಿನ ಮೇಲಾಡತೊಡಗಿದ್ದಿತು. ದೃಷ್ಟಿಯನ್ನು ಕೆಳಕ್ಕೆ ಬಾಗಿಸಿ ಆತ ಹೇಳಿದ:

"ನನಗೇನಾಗಿದೆ ಎಂಬುದು ನನಗೇ ತಿಳಿಯದು. ಅಂತೂ ಏನೋ ಆಗಿದೆಯೆಂಬುದು ಮಾತ್ರ ನಿಜ. ಆಗಾಗ ಮೈ ಮರೆತುಹೋಗುತ್ತದೆ. ಇದೊಂದು ರೋಗವಾಗಿದ್ದರೂ ಇದ್ದೀತು."

"ಬಹುದಿನಗಳಿಂದ ಈ ತೊಂದರೆಯಿದೆಯೆ?"

"ಹೌದು. ಚಿಕ್ಕವಯಸ್ಸಿನಿಂದ ಹೀಗೇ."

ಒಂದು ಕ್ಷಣ ಮೌನವಾಗಿದ್ದು ಸರಸು ಮತ್ತೆ ಪ್ರಶ್ನಿಸಿದಳು.

"ನಿಮ್ಮ ತಂದೆ ತಾಯಿ ಎಲ್ಲಿದ್ದಾರೆ ಈಗ?"

"ತಂದೆ ತೀರಿಕೊಂಡು ಹತ್ತು ವರ್ಷವಾಯಿತು. ತಾಯಿಯೊಬ್ಬಾಕೆ ಇದ್ದಳು. ಹೋದವರ್ಷ ಆಕೆಯೂ ತೀರಿಕೊಂಡಳು."

"ಅಣ್ಣ ತಮ್ಮಂದಿರು? ಅಕ್ಕತಂಗಿಯರು?"

"ಬೇರಾರೂ ಇಲ್ಲ. ನಾನೊಬ್ಬನೇ ಒಬ್ಬ ಈ ಪ್ರಪಂಚದಲ್ಲಿ...." ಎಂದು ಆತ ಉತ್ತರವೀಯುವಾಗ ಆತನ ಕಂಠ ಭಾರವಾಗಿದ್ದುದರ ಅರಿವಾಗದಿರಲಿಲ್ಲ ಸರಸೂಗೆ. ಒಬ್ಬನೇ ಒಬ್ಬ ಈ ಪ್ರಪಂಚದಲ್ಲಿ....ಬೇರಾರೂ ಇಲ್ಲ....ಬೇರಾರೂ

....ಅರ್ಥಾತ್ ಇಂಥ ಮಾತು ಬರಬೇಕಾದರೆ ಆತನಿಗಿನ್ನೂ ಮದುವೆಯಾಗಿರಲಾರದು. ಮದುವೆಯಾಗಿದ್ದಲ್ಲಿ, ಹೆಣ್ಣು ಜೀವವೊಂದರ ಜೊತೆ ದೊರಕಿದ್ದಲ್ಲಿ ಆತ ಈ ರೀತಿ ಮಾತನಾಡಲು ಸಾಧ್ಯವಿರಲಿಲ್ಲ. "ತಾನೊಬ್ಬನೇ ಒಬ್ಬ" ಎಂದು ಹೇಳಲು ಸಾಧ್ಯವಿರಲಿಲ್ಲ...."ಮದುವೆಯಾಗಿದೆಯೆ ಇಲ್ಲವೇ ?" ಎಂಬ ಪ್ರಶ್ನೆ ಆಕೆಯ ತುದಿನಾಲಗೆಯ ಮೇಲೆಯೆ ಬಂದಿದ್ದಿತು. ಆದರೆ ಅದನ್ನು ಕೇಳುವ ಅಗತ್ಯವಿದೆಯೆಂದು ಆಕೆಗೆನ್ನಿಸಲಿಲ್ಲ. ಅಲ್ಲದೆ, ಅಂಥ ಪ್ರಶ್ನೆ ಕೇಳುವುದಾದರೂ ಹೇಗೆ, ಬಾಯಿಬಿಟ್ಟು ?

"ಏನಾದರೂ ನೌಕರಿ ಮಾಡುತ್ತಿದ್ದೀರಾ ?"

ನೌಕರಿ–ಎಂಬ ಶಬ್ದ ಕಿವಿಗೆ ಬಿದ್ದೊಡನೆ ಆತನ ತಲೆಯಿನ್ನೂ ಕೆಳಕ್ಕೆ ಬಾಗಿತು. ವಿಷಾದದಿಂದ ನಡುಗುವ ಸ್ವರದಲ್ಲಿ ಉತ್ತರವಿತ್ತ :

"ಹೌದು. ಮಾಡುತ್ತಿದ್ದೇನೆ. ಹೊಟ್ಟೆಗಾಗಿ ಏನನ್ನಾದರೂ ಮಾಡಲೇಬೇಕಲ್ಲವೆ ?

"ಎಂಥ ನೌಕರಿ ?"

"ಮಾಮಲೇದಾರ ಕಚೇರಿಯಲ್ಲಿ ಕಾರಕೂನೀ...."

ಒಂದೆರಡು ಕ್ಷಣ ಸರಸು ಸುಮ್ಮನೆ ಕುಳಿತಿದ್ದಳು. ಅನಂತರ ಮತ್ತೆ ಧ್ವನಿಯೆತ್ತಿ–"ಜಿಲ್ಲೆಗೆಲ್ಲ ನೀವು ಮ್ಯಾಟ್ರಿಕ್ಕಿನಲ್ಲಿ ಮೊದಲನೆಯ ನಂಬರು ಬಂದಿರೆಂದು ಅಪ್ಪ ಹೇಳುತ್ತಿದ್ದ. ನಿಮ್ಮಂಥವರು ಇಂಥ ನೌಕರಿಗೆ ಸಿಕ್ಕಿಬೀಳಬಾರದಾಗಿತ್ತು. ಮುಂದೆ ಕಾಲೇಜಿಗೆ ಹೋಗಬಹುದಾಗಿದ್ದಿತಲ್ಲ....?" ಎಂದು ಕೇಳಿದಳು.

"ಹೋಗಬಹುದಿತ್ತು. ಹೋಗಬೇಕೆಂಬ ಆಸೆಯೂ ಬಹಳ ಇತ್ತು. ಎಲ್ಲ ನಿಜ. ಆದರೆ....ಆ ಯೋಗವೊಂದು ಬರಬೇಕಲ್ಲ....ಕಾಲೇಜಿಗೆ ಹೋಗಬೇಕು, ಎಂ. ಎ. ವರೆಗೆ ಓದಬೇಕು ಎಂದು ಕನಸು ಕಟ್ಟಿದ್ದೆ. ಎಲ್ಲವೂ ಕನಸೇ ಆಯಿತು. ನನ್ನ ಪಾಲಿಗೆ ಬಂದುದೆಂದರೆ ಈ ಕಾರಕೂನೀ.... ಹೋಗಲಿ ಬಿಡಿರಿ. ನನ್ನ ಈ ಕರ್ಮಕತೆ ಕೇಳಿ ಏನುಮಾಡುತ್ತೀರಿ ? ಆಗಲೆ ಆ ಕುದುರೆ ಗಾಡಿಯವ ಹೇಳಲಿಲ್ಲವೆ, ಎಲ್ಲರೂ ಮಾಡುವದು ಹೊಟ್ಟೆಗಾಗಿ ....ಗೇಣು ಬಟ್ಟೆಗಾಗಿ–ಎಂದು !" ಎನ್ನುತ್ತ ಶಿವಮೂರ್ತಿ ವಿಲಕ್ಷಣವಾಗಿ ನಗತೊಡಗಿದ.

ನಗೆ ಬರಲಿಲ್ಲ ಸರಸೂಗೆ. ತನ್ನದೊಂದು ಬಗೆಯ ಬದುಕು....ಈತನ ದೊಂದು ಬಗೆಯ ಬದುಕು ! ತಾನು ಎಣಿಸಿಕೊಂಡಿದ್ದ ಹಾಗೆ ತನ್ನ ಬದುಕು ಸಾಗಲಿಲ್ಲ. ಎಷ್ಟೋ ಕನಸುಗಳು ಕೇವಲ ಕನಸುಗಳಾಗಿ ಉಳಿದುವು. ಈತನೂ ಕನಸು ಕಟ್ಟಿಕೊಂಡಿದ್ದ. ಆಸೆ ಆಕಾಂಕ್ಷೆಗಳನ್ನಿಟ್ಟುಕೊಂಡಿದ್ದ. ಯಾವುದೂ ಕೈಗೂಡಲಿಲ್ಲ. ಮನಸ್ಸಿನಲ್ಲಿರದಿದ್ದರೂ ಈತ ಕಾರಕೂನಿಕೆ ಮಾಡಬೇಕಾಗಿದೆ. ಮನಸ್ಸಿನಲ್ಲಿರದಿದ್ದರೂ ತಾನು ತವರುಮನೆಯಲ್ಲಿ ಒಂಟಿ ಬದುಕು ಸಾಗಿಸಬೇಕಾಗಿದೆ....ಈ ಬದುಕು ! ಈ ವಿಚಿತ್ರ ಬದುಕು ! ಒಬ್ಬೊಬ್ಬರ ಪಾಲಿಗೆ ಒಂದೊಂದು ರೀತಿಯ ವ್ಯಥೆ....ಒಂದೊಂದು ರೀತಿಯ ದುಃಖ ....ವೇದನೆ....ನಿಟ್ಟುಸಿರು....

ಆಕೆಗೆ ತಿಳಿಯದಂತೆಯೆ ಆಕೆಯ ಕಣ್ಣುಗಳಿಂದ ಒಂದೆರಡು ಕಂಬನಿಗಳುರುಳಿ ಕೆನ್ನೆಗಳ ಮೇಲೆ ಇಳಿದುವು. ಶಿವಮೂರ್ತಿ ಅವುಗಳನ್ನು ಕಂಡನೇನೊ. ತನ್ನ ಅತೃಪ್ತ ಜೀವನವನ್ನು ಕಂಡು ಮರುಗುವ ಈ ಹೆಣ್ಣುಜೀವ ಆತನಲ್ಲಿ ಆತ್ಮೀಯತೆಯನ್ನು ಕೆರಳಿಸದಿರಲಿಲ್ಲ. ಹಾಸಿಗೆಯ ಮೇಲೆ ಕುಳಿತ್ತಿದ್ದ ಹಾಗೆಯೆ ಬಲಗೈಯನ್ನು ಮುಂದೆ ಚಾಚಿ ಆಕೆಯ ಕೈಗಳೆರಡನ್ನೂ ಹಿಡಿದುಕೊಂಡು ಭಾವನೆಗಳಿಂದ ಬಳುಕುವ ಧ್ವನಿಯಲ್ಲಿ ನುಡಿದ :

"ಸರಸೂ...."

[೭]

"ಸರಸೂ !"

ಕೆಳಗಿನಿಂದ ನಾಗಮ್ಮ ಕೂಗುವುದು ಕೇಳಬಂದಿತು.

ಶಿವಮೂರ್ತಿಯನ್ನು ಬೀಳ್ಕೊಂಡು ಬಂದು ಮಂಚದ ಮೇಲೊರಗಿ "ಪ್ರಭುಲಿಂಗಲೀಲೆ"ಯನ್ನೋದುತ್ತಲಿದ್ದ ಸರಸು ಅಲ್ಲಿಂದಲೇ "ಓ" ಕೊಟ್ಟಳು.

"ಇಷ್ಟುಬೇಗ ಮಲಗಿಕೊಂಡೆಯೇನೇ ?" ಎನ್ನುತ್ತ ನಾಗಮ್ಮ ಮೆಟ್ಟಲುಗಳನ್ನೇರಿ ಮೇಲೆ ಬಂದು, ಮಂಚದ ಮೇಲೆ ಕುಳಿತುಕೊಂಡು, ಮಗಳ ತಲೆಯನ್ನು ವಾತ್ಸಲ್ಯದಿಂದ ನೇವರಿಸತೊಡಗಿದಳು:

"ತಲೆನೋವು ಹೋಯಿತೋ, ಇನ್ನೂ ಇವೆಯೋ ?"

"ಸ್ವಲ್ಪ ಸ್ವಲ್ಪ ಇದೆಯಮ್ಮ."

"ಮತ್ತೇಕೆ ಪುಸ್ತಕ ಓದುತ್ತೀ ಹಾಗಾದರೆ? ಸುಮ್ಮನೆ ಮಲಗಿಕೊಂಡು ವಿಶ್ರಾಂತಿ ತೆಗೆದುಕೊಳ್ಳಬಾರದೇ ?"

"ಮಲಗಿದ್ದೆ. ನಿದ್ದೆ ಬರಲಿಲ್ಲ."

"ಬರುತ್ತೆ ಬರುತ್ತೆ ಅಂತ ಯೋಚಿಸುತ್ತಾ ಮಲಗಿದರೆ ಬರುತ್ತದೆಯೇ ಅದು? ತಣ್ಣಗೆ ಮಲಗಿಬಿಡಬೇಕು. ತಾನೇ ಬರುತ್ತದೆ–ಸದ್ದಿಲ್ಲದಂತೆ. ಹೂಂ. ನಾಳೆ ನಮ್ಮಲ್ಲಿಗೆ ಸ್ವಾಮಿಗಳು ಬರುತ್ತಾರೆ. ಬೆಳಗಿನ ಜಾವದಿಂದ ಕೆಲಸಕ್ಕೆ ಪ್ರಾರಂಭ. ನೀನೂ ಬಂದು ನೆರವಾಗಬೇಕು. ರಾಜಕುಮಾರಿಯ ಹಾಗೆ ಮಲಗಿರಬೇಡ ಎಂಟು ಗಂಟೆಯ ವರೆಗೆ. ತಿಳಿಯಿತೇ ?"

"ಹೂಂ ಅಮ್ಮ."

"ಐದು ಗಂಟೆಗೇ ಎದ್ದು ಸ್ನಾನ ಮಾಡಿ ಅಡಿಗೆಗೆ ತೊಡಗಬೇಕು. ಹೋಳಿಗೆ, ಖೀರು, ಮೂರು ನಾಲ್ಕು ಪಲ್ಯ, ಸಾರು, ಚಟ್ನಿ–ಒಂದೇ ಎರಡೇ ತುಂಬ ಪದಾರ್ಥ ಆಗಬೇಕು. ನಮ್ಮ ಮನೆಯಲ್ಲಿ ಆದ ಹಾಗೆ ಈ ಊರಲ್ಲಿ ಇನ್ನಾರ ಮನೆಯಲ್ಲೂ ಆಗಿರಬಾರದು ನೋಡು ಅಡಿಗೆ. ಸ್ವಾಮಿಗಳು ಮೆಚ್ಚಿ ಹೊಗಳಬೇಕು–ಹಾಗೆ ಮಾಡಬೇಕು...."

ಸರಸು ಸುಮ್ಮನೆ ಹೂಂಗುಡುತ್ತಿದ್ದಳು. ನಾಗಮ್ಮ ಮಾತನಾಡುತ್ತಲೇ ಇದ್ದಳು :

"ನಮ್ಮ ಮಠಕ್ಕೆ ಇದುವರೆಗೆ ಇಂಥ ಸ್ವಾಮಿಗಳೇ ಬಂದಿಲ್ಲ ನೋಡು ಸರಸೂ. ನಮ್ಮೂರಿನ ಭಾಗ್ಯ ಕಣಮ್ಮ. ನಮ್ಮ ಭಾಗ್ಯ...."

"ಮೊದಲಿದ್ದ ಮುದುಕ ಸ್ವಾಮಿಗಳೂ ಒಳ್ಳೆಯವರೇ ಆಗಿದ್ದರಲ್ಲ ಅಮ್ಮ ?"

"ಏನು ಒಳ್ಳೆಯವರೋ ಬಿಡು ತಾಯಿ. ತನ್ನಷ್ಟಕ್ಕೆ ತಾನಿದ್ದರಾಯಿತೇ? ಜನರ ಕಡೆಗೂ ಸ್ವಲ್ಪ ಲಕ್ಷ್ಯ ಕೊಡಬೇಡವೆ? ಇಷ್ಟು ದೊಡ್ಡ ಮಠ, ಇಷ್ಟು ದೊಡ್ಡ ಆಸ್ತಿಯಿದ್ದರೂ ಇದರ ಅಂತಸ್ತಿಗೆ ತಕ್ಕ ಹಾಗೆ ಸ್ವಾಮಿಯಾದವ ವರ್ತಿಸಬೇಡವೆ? ಒಂದು ಉತ್ಸವ ಮಾಡುವಂತಿಲ್ಲ, ಒಂದು ಜಾತ್ರೆ ನಡಸುವಂತಿಲ್ಲ. ಆತನಿಗೊಂದು ಹುಚ್ಚು–ಹಳ್ಳಿ ಹಳ್ಳಿ ತಿರುಗುವುದು.

ಯಾರು ಊಟಕ್ಕೆ ಕರೆದರೂ ಹೋಗುವಂತಿಲ್ಲ. ಯಾರೊಂದಿಗೂ ಮಾತ ನಾಡುವಂತಿಲ್ಲ. ಯಾವಾಗಲೂ ತನ್ನದೇ ಧ್ಯಾನ. ಇಂಥ ಸ್ವಾಮಿಯಿಂದ ಮಠ ಹೇಗೆ ಉದ್ಧಾರವಾಗಬೇಕು ? ಪುಣ್ಯಾತ್ಮ—ಹೊರಟು ಹೋದ. ಊರಿ ಗೆಲ್ಲ ಬಹಳ ಉಪಕಾರವಾಯಿತು."

"ಅವರ ಮೇಲೆ ನಿನಗೇಕೆ ಇಷ್ಟು ಸಿಟ್ಟೋ ನನಗೆ ತಿಳಿಯದವ್ವ !"

"ಸಿಟ್ಟು ಬರದೆ ಬಿಟ್ಟೀತೇ ಸರಸೂ ? ನಮ್ಮ ಅಕ್ಕನ ಬಳಗದ ಸಭೆಗಳಿಗೆ ಸಹ ಬರುತ್ತಿದ್ದಿಲ್ಲವಲ್ಲ ಆ ಮುದುಕ ಸ್ವಾಮಿ ! ಊರಲ್ಲಿ ಯಾರು ಆತನನ್ನು ಸೇರುತ್ತಿದ್ದರು ? ಎಲ್ಲರಿಗೂ ಅವನ ಬಗ್ಗೆ ಬೇಸರವೇ. ಈ ಸ್ವಾಮಿಗಳು ಹಾಗಲ್ಲ. ಇಲ್ಲಿಗೆ ಬಂದು ಇನ್ನೂ ಬಹುಕಾಲವಾಗಿಲ್ಲ. ಆಗಲೇ ಎಲ್ಲರೂ ಹೊಗಳತೊಡಗಿದ್ದಾರೆ. ಊಟಕ್ಕೆ ಕರೆದೊಯ್ಯುವುದರಲ್ಲಂತೂ ಸ್ಪರ್ಧೆಯೇ ನಡೆದಂತಿದೆ ನೋಡು. ನಾ ಮುಂದೆ ನೀ ಮುಂದೆ ಅಂತ ಮುಗಿಬೀಳುತ್ತಿ ದ್ದಾರೆ. ಇಂಥ ಪ್ರೀತಿ ಸುಮ್ಮನೆ ಬರುತ್ತದೆಯೇ ಸರಸೂ ! ಅದಕ್ಕೂ ಯೋಗ್ಯತೆ ಬೇಕು. ಬಂಗಾರದಂಥ ಸ್ವಾಮಿಗಳು ನೋಡವ್ವ ಇವರು !"

ಸರಸು ಮನಸ್ಸಿನಲ್ಲಿಯೇ ನಕ್ಕು ತನ್ನಷ್ಟಕ್ಕೆ ತಾನೆ ಹೇಳಿಕೊಂಡಳು : "ಬಂಗಾರದಂಥ ಸ್ವಾಮಿಗಳು ! ಜನ ಮರುಳೋ, ಜಾತ್ರೆ ಮರುಳೋ ! ಅವ್ವ ನಿಗಂತೂ ಹುಚ್ಚೇ ಹಿಡಿಸಿದ ಹಾಗಿದೆ ಈ ಸ್ವಾಮಿ. ಇನ್ನೂ ಎಷ್ಟು ಜನಕ್ಕೆ ಹೀಗೇ ಹುಚ್ಚು ಹಿಡಿಸಿರುವನೊ ?"

"ನಾಳೆ ಬೇಗನೆ ಏಳಬೇಕವ್ವ. ಮರೆಯಬೇಡ," ಎಂದು ಹೇಳಿ ನಾಗಮ್ಮ ಕೆಳಕ್ಕಿಳಿದು ಹೋದಳು. ಅಷ್ಟರಲ್ಲಿ ಊಟ ಮುಗಿಸಿಕೊಂಡು ಮೇಲೆ ಬಂದ ಗೌರಿ ಅಕ್ಕನ ಮಗ್ಗುಲಲ್ಲಿ ಒರಗಿಕೊಂಡು ಆಕೆಯ ಎದೆಯ ಮೇಲೆ ಕೈ ಹಾಕಿ—"ಊಟ ಮಾಡಿದೆಯಾ ಅಕ್ಕ ?" ಎಂದಳು.

"ಹೂಂನವ್ವ. ನೀನು ?"

"ಈಗ ಮಾಡಿ ಬಂದೆ. ತಲೆನೋವು ಹೋಯಿತೇ ಅಕ್ಕ ?"

"ಇನ್ನೂ ಸ್ವಲ್ಪ ಇದೆಯವ್ವ."

ಸರಸುವಿನ ಹಣೆಯನ್ನು ಮೆಲ್ಲನೆ ತಟ್ಟುತ್ತ ಗೌರಿಯೆಂದಳು :

"ಇಂದು ನೀನು ಮಠಕ್ಕೆ ಬರಬೇಕಾಗಿತ್ತು ಸರಸಕ್ಕ. ಬಹಳ ಮಜಾ ಆಯಿತು. !"

"ಏನೇ, ಏನದು ಮಜಾ ?"

"ಶಾಸ್ತ್ರಿಗಳು ಮಹಾದೇವಿಯಕ್ಕನ ಕಥೆ ಹೇಳುತ್ತಿದ್ದರು. ಅಕೆ ದೇವರೇ ಗಂಡನೆಂದು ತಿಳಿದು ಶ್ರೀಶೈಲಕ್ಕೆ ಹೋದಳಲ್ಲ–ಅದನ್ನು ಹೇಳು ಹೇಳುತ್ತ ಶಾಸ್ತ್ರಿಗಳು ಒಂದು ಮಾತು ಬಿಟ್ಟರು. ನಾವು ಹೆಂಗಸರು ಗಂಡನೇ ದೇವರೆಂದು ತಿಳಿದು ಮನೆಯಲ್ಲಿ ಕೊಳೆಯುತ್ತೇವಂತೆ. ಮಹಾದೇವಿಯಕ್ಕ ನಾದರೊ ದೇವರೇ ಗಂಡನೆಂದು ನಂಬಿ ಶ್ರೀಶೈಲಕ್ಕೆ ಹೋದಳಂತೆ. ದೇವ ರೆಂದರೆ ಜಂಗಮ ಸ್ವರೂಪಿ. ಸ್ವಾಮಿಗಳೂ ದೇವರೇ–ಅಂತ ಹೇಳಿದರು...."

ಸರಸು ಬೆಚ್ಚಿ ಬಿದ್ದು–"ಆ್ಞಂ ! ಹೀಗೆ ಹೇಳಿದರೇ ! ಎಲಾ, ಧೂರ್ತ ಶಾಸ್ತ್ರಿ !" ಎಂದಳು.

"ಧೂರ್ತನೇ ಆತ. ಪಕ್ಕಾ ಧೂರ್ತ. ಸ್ವಾಮಿಗಳೇ ದೇವರಂತ ಆತ ಹೇಳಿದಾಗ ನಾ ಸ್ವಾಮಿಗಳ ಕಡೆ ನೋಡಿದೆ. ಅವರು ನಗುತ್ತಲಿದ್ದರು ಅಕ್ಕ. ಈ ಸ್ವಾಮಿಯೂ ಧೂರ್ತ ಇದ್ದ ಹಾಗಿದೆ ಸರಸಕ್ಕ...."

"ನಿನಗೆ ಹೇಗೆ ಗೊತ್ತಾಯಿತೇ ಅದು ?"

"ಅಷ್ಟು ಗೊತ್ತಾಗೋದಿಲ್ಲವೇ ? ಆ ಮಿರಿ ಮಿರಿ ಮಿರುಗುವ ರೇಶಿಮೆ ಬಟ್ಟೆಯೇನು, ಜರತಾರಿ ರುಮಾಲೇನು, ಶಾಲೇನು ! ಸ್ವಾಮಿಗಳೆಂದರೆ ಸನ್ಯಾಸಿಗಳಲ್ಲವೇನವ್ವ ? ಇವರಿಗೆ ಇಂಥ ಆಡಂಬರವೆಲ್ಲ ಯಾತಕ್ಕೆ ಬೇಕು ? ನನಗೇನೂ ಮನಸಿಗೆ ಬರಲಿಲ್ಲ ಬಿಡು ಈ ಸ್ವಾಮಿ...."

ಸರಸು ಕೌತುಕದಿಂದ ತಂಗಿಯ ಮುಖವನ್ನು ದಿಟ್ಟಿಸುತ್ತಲಿದ್ದಳು. ಗೌರಿ ಮುಂದುವರಿಸಿದಳು :

"ಇವೊತ್ತು ನಾವು ಮಠಕ್ಕೆ ಹೋದಾಗ ಇನ್ನೂ ಸಭೆ ಕೂಡಿರಲಿಲ್ಲ. ತಮ್ಮ ಕೋಣೆಯಲ್ಲಿ ಸ್ವಾಮಿಗಳೊಬ್ಬರೇ ಕೂತಿದ್ದರು. ಅವ್ವ, ನಾನು ಇಬ್ಬರೂ ಹೋಗಿ ಅವರಿಗೆ ನಮಸ್ಕಾರ ಮಾಡಿದೆವು. ಆಗ ಆ ಸ್ವಾಮಿ ಏನು ಮಾಡಿದ ಗೊತ್ತೇ ಸರಸಕ್ಕ ?"

"ಏನು ?"

"ನನ್ನ ಗಲ್ಲ ಹಿಡಿದು ತೀಡುತ್ತಾ–ಏನಮ್ಮಾ ಗೌರಮ್ಮ, ನಿಮ್ಮಕ್ಕ ಸರಸು ಯಾಕೆ ಬರಲಿಲ್ಲ ಇವೊತ್ತು ಅಂತ ಕೇಳಿದ."

"ನನ್ನ ಹೆಸರು ಹ್ಯಾಗೆ ಗೊತ್ತು ಅವರಿಗೆ ?"

"ಹ್ಯಾಗೆ ಗೊತ್ತೋ ಏನೊ. ಅಂತೂ ಬಹಳ ಧೂರ್ತ ಸ್ವಾಮಿ ಅವ. ಸನ್ಯಾಸಿಗಳಿಗೇಕವ್ವ ಹೆಣ್ಣು ಮಕ್ಕಳ ವಿಚಾರ? ಆತ ನಿನ್ನ ಹೆಸರು ತೆಗೆದುಕೊಂಡು ಹಾಗೆ ಕೇಳಿದಾಗ ನನಗೆಂಥ ಸಿಟ್ಟು ಬಂದಿತ್ತು ಅನ್ನುತ್ತೀಯೆ? ನನ್ನನ್ನು ಗೌರಮ್ಮ ಅಂತ ಕರೆದದ್ದೂ ಅಲ್ಲದೆ ಗಲ್ಲ ತೀಡಿದನಲ್ಲ....ಎಷ್ಟು ಸೊಕ್ಕು ಅವನಿಗೆ....ಮರ್ಯಾದೆಯಾಗಿ ಗೌರಾಂಬಿಕಾ ಅಂತ ಕರೆಯಬೇಡವೆ? ಸರಸ್ವತೀದೇವಿ ಅನ್ನಬೇಡವೆ? ಸರಸೂ ಅಂತೆ! ಗೌರಮ್ಮ ಅಂತೆ.... ಎಂಥ ಸ್ವಾಮಿಯವ್ವ ಈತ...."

"ಮೆಲ್ಲಗೆ....ಮೆಲ್ಲಗೆ....ಗೌರಾ. ಅಪ್ಪನಿಗೆ ಕೇಳಿಸೀತು. ಈ ಸ್ವಾಮಿ ಅಂದರೆ ಬಹಳ ಮೆಚ್ಚಿಕೆ ಅಪ್ಪನಿಗೆ. ನಿನ್ನ ಮಾತು ಕೇಳಿ ಸಿಟ್ಟಾದಾಳು. ಅಪ್ಪನಿಗೂ ಇವರ ಮೇಲೆ ಬಹಳ ಭಕ್ತಿಯಂತೆ....ನಾಳೆ ಊಟಕ್ಕೆ ಬೇರೆ ಬರುವರಲ್ಲ ಮನೆಗೆ...."

"ಬಂದರೆ ಬರಲಿ. ನಾನಂತೂ ಆತನ ಮುಖವನ್ನೇ ನೋಡುವದಿಲ್ಲ. ಆತ ಊಟಮಾಡಿ ಹೋಗುವ ತನಕ ಮನೆಯಲ್ಲಿಯೇ ಇರುವದಿಲ್ಲ. ಎಲ್ಲಿಗಾದರೂ ಹೋಗಿಬಿಡುತ್ತೇನೆ."

"ಹಾಗೆಲ್ಲ ಮಾಡಬೇಡ ಗೌರಾ. ಅವ್ವ ಅಪ್ಪ ಇಬ್ಬರೂ ಸಿಟ್ಟಾದಾರು.."

"ಸಿಟ್ಟಾದರೆ ಆಗಲಿ. ಬಹಳವಾದರೆ ಒಂದೆರಡು ಬಡಿದಾರು. ಅಷ್ಟೇ ಅಲ್ಲವೇ? ನಾನಂತೂ ನಾಳೆ ಮನೆಯಲ್ಲೇ ಇರುವದಿಲ್ಲ. ಪಾರ್ವತಿಯ ಮನೆಗೆ ಹೋಗಿಬಿಡುತ್ತೇನೆ. ಆ ಸುಟ್ಟ ಮೋರೆಯ ಗಂಗಾಧರ ಶಾಸ್ತ್ರಿಯೂ ಬರುತ್ತಾನಂತೆ ಸ್ವಾಮಿಯ ಸಂಗಡ....ಅವನಂತೂ ಒಂದು ಕಪಿ ಇದ್ದ ಹಾಗಿದಾನೆ...."

"ಅವನ ಮೇಲೇಕೆ ಸಿಟ್ಟೇ ನಿನಗೆ? ಹೊಟ್ಟೆಗಾಗಿ ಏನೆಲ್ಲಾ ಪುರಾಣ ಹೇಳುತ್ತಿದ್ದಾನಾದೀತು."

"ಹೇಳಿದರೆ ಹೇಳಿಕೊಳ್ಳಲಿ. ಆದರೆ ಹುಡುಗಿಯರ ಸಹವಾಸ ಯಾಕೆ ಈತನಿಗೆ? ಇವೊತ್ತು ನನ್ನ ನೋಡುತ್ತಲೂ ಏನೆಂದ ಅನ್ನುತ್ತೀಯಾ?"

"ಏನವ್ವ?"

"ಹಾಳು ಮೋರೆಯವ! ಐವತ್ತು ವರ್ಷದ ಮುದುಕನಾಗ್ತಾ ಬಂದರೂ ಬುದ್ಧಿಯಿಲ್ಲ. ಏನು ಗೌರವ್ವ, ಮದುವೆಯ ವಯಸ್ಸಾಯಿತಲ್ಲ ನಿನಗೆ,

ಯಾರನ್ನು ಮಾಡಿಕೊಳ್ಳುವಾಕೆ–ಅನ್ನಬೇಕೇ! ನಾನು ಸಿಟ್ಟಿನಿಂದ ಮುಖ ತಿರುವಿದರೂ ಸುಮ್ಮನಾಗಲಿಲ್ಲ–ನಾನು ಇನ್ನೊಂದು ಮದುವೆಯಾಗ ಬೇಕೆಂದಿದ್ದೇನೆ. ನನ್ನನ್ನೇ ಮಾಡಿಕೊಳ್ಳುತೀಯಾ–ಅಂತ ಕೇಳಬೇಕೇ ನಾಚಿಕೆಗೆಟ್ಟವ...."

ತಂಗಿಯ ಈ ಮಾತಿನಿಂದಾಗಿ ಸರಸೂಗೆ ನಗೆ ಬರದಿರಲಿಲ್ಲ. ಆಕೆ ನಗುವುದನ್ನು ಕಂಡಾಗ ಗೌರಿಗೆ ಮುಖಭಂಗವಾದಂತಾಯಿತೇನೊ, ಆಕೆ ಕೆನ್ನೆ ಉಬ್ಬಿಸಿ ನಸುಮುನಿಸುಗೊಂಡ ಧ್ವನಿಯಲ್ಲಿ–"ಏನಕ್ಕ, ನಿನಗೂ ತಮಾಷೆಯಾಯಿತಲ್ಲ ಇದು. ಆತ ಹೀಗೆ ಹೇಳಿದ ಅಂದರೆ ನಗಬೇಕೇ ನೀನೂ ?" ಎಂದಳು.

"ಮತ್ತೇನು ಮಾಡಬೇಕು ?" ಎಂದು ನುಡಿದು ಸರಸು ಇನ್ನಿಷ್ಟು ಗಟ್ಟಿಯಾಗಿ ನಗತೊಡಗಿದಳು.

ಅಕ್ಕನ ಬೆನ್ನಿಗೆ ಒಂದೆರಡು ಗುದ್ದು ಹಾಕಿ ಗೌರಿ ಸಿಟ್ಟಿನಿಂದ ನುಡಿದಳು : "ನನಗೆ ಕೇಳಿದ ಅಂದರೆ ನಗುತ್ತೀಯ. ನಾಳೆ ಬಂದು ನನ್ನನ್ನು ಮದುವೆಯಾಗ್ತೀಯಾ ಅಂತ ಶಾಸ್ತ್ರಿ ನಿನ್ನನ್ನೆ ಕೇಳಿದರೆ ಏನು ಮಾಡುವೆ ?"

ಸರಸುವಿನ ನಗೆ ಮಾಯವಾಯಿತು. ಆಕೆ ಗಂಭೀರ ಸ್ವರದಲ್ಲಿ ನುಡಿದಳು : "ನನ್ನನ್ನೇನು ಕೇಳುತಾನೆ ಆತ? ಅಂಥ ಧೈರ್ಯವೆಲ್ಲಿಂದ ಬಂದೀತು ಅವನಿಗೆ ?"

"ಧೈರ್ಯ ? ಮಹಾ ಅಧಿಕಪ್ರಸಂಗಿ ಅಕ್ಕಾ ಆತ. ಯಾವಾಗ ಯಾರನ್ನು ಏನು ಕೇಳಿಯಾನು ಎಂಬ ಭರವಸೆಯಿರುವುದಿಲ್ಲ. ಈ ಶಾಸ್ತ್ರಿಗಳೆಲ್ಲ ಹೀಗೇ ಅಂತೆ–ಒಡಕು ಬಾಯಿಯವರು !"

"ಯಾರೇ ಅದು ಒಡಕು ಬಾಯಿಯವರು ?" ಎನ್ನುತ್ತ ರುದ್ರವ್ವಜ್ಜಿ ಮೇಲೆ ಬಂದಳು. ಕೈಯಲ್ಲಿ ಹಿಡಿದಿದ್ದ ಹಾಲಿನ ಲೋಟವನ್ನು ಮೇಜಿನ ಮೇಲಿರಿಸಿ ಸರಸುವಿನ ಬಳಿ ಬಂದು ಆಕೆಯ ಹಣೆಯ ಮೇಲೆ ಕೈಯನ್ನಿರಿಸಿ –"ಏಳುತ್ತೀಯಾ ಸರಸೂ ? ಸ್ವಲ್ಪ ಹಾಲು ಕುಡಿದು ಮಲಗಿಕೋ," ಎಂದಳು.

"ಏನೂ ಬೇಡ ಅಜ್ಜಿ. ಹಸಿವೇ ಇಲ್ಲ."

"ಹರಯದ ಹೆಣ್ಣುಮಗಳು ಹೀಗೆಲ್ಲ ಉಪವಾಸ ಮಲಗಬಾರದು ತಾಯಿ. ಏಳು, ಇಷ್ಟು ಹಾಲು ಕುಡಿ."

ಹರಯದ ಹೆಣ್ಣುಮಗಳು !

ಅಜ್ಜಿಯ ಆ ಮಾತಿನೊಂದಿಗೆ ಸರಸುವಿನ ಕಣ್ಣುಗಳಲ್ಲಿ ನೀರೂರಿತು. "ಏನಾಗಬೇಕಾಗಿದೆ ಈ ಹರಯದಿಂದ ? ಈ ದೇಹದಿಂದ ? ಎಲ್ಲವೂ ವ್ಯರ್ಥ, ಎಲ್ಲವೂ ವ್ಯರ್ಥ...." ಎಂದುಕೊಳ್ಳುತ್ತ ಮೇಲಕ್ಕೆದ್ದಳು. ಸರಸುವಿನ ಕಣ್ಣುಗಳಲ್ಲಿ ಹೊಳೆಯುವ ಕಂಬನಿಗಳನ್ನು ಗುರುತಿಸಿದಾಗ ರುದ್ರವ್ವಜ್ಜಿಗೂ ದುಃಖವುಕ್ಕಿ ಬರದಿರಲಿಲ್ಲ. "ರಾಜಕುಮಾರಿಯರನ್ನು ನಾಚಿಸುವ ಹಾಗೆ ಬೆಳೆದ ಈ ಸುಂದರ ಹುಡುಗಿಯ ಬಾಳೆಲ್ಲವೂ ಬರಡಾಗಬೇಕೇ ! ವಿಧಿಯೆ, ನಿನ್ನ ಆಟ ವಿಚಿತ್ರ !"—ಎಂದು ನಿಟ್ಟುಸಿರು ಬಿಟ್ಟಳು ರುದ್ರವ್ವಜ್ಜಿ.

"ಶಿವಮೂರ್ತಿಯೂ ಇಂದು ಊಟಕ್ಕೆ ಹೋಗಲಿಲ್ಲವೆಂದು ತೋರುತ್ತದೆ. ಅವನೂ ಹಾಗೇ ಮಲಗಿದನೋ ಏನೊ !" ಎಂದು ಮರುಕದಿಂದ ನುಡಿದಳಾಕೆ.

"ಮತ್ತೆ ಈ ಮಳೆಯಲ್ಲಿ ಎಲ್ಲಿ ಹೋದಾರು ? ಪಾಪ, ತುಂಬ ಆಯಾಸಗೊಂಡಿದ್ದರಲ್ಲ ಆಗಲೆ."

"ಏನು ಕರ್ಮ ಗಂಟುಬಿದ್ದಿದೆಯೊ ಆ ತಮ್ಮನಿಗೆ. ಎಲ್ಲ ಚೆನ್ನಾಗಿದಾನೆ. ಬುದ್ಧಿವಂತ. ರೂಪವಂತ. ತುಂಬು ಪ್ರಾಯ. ಆದರೂ ಇಂಥ ವಿಚಿತ್ರ. ಒಬ್ಬೊಬ್ಬರಿಗೆ ಒಂದೊಂದು ಕಷ್ಟ. ಎಲ್ಲಾ ಅವರವರ ಹಣೇಬರಹ ತಾಯಿ. ಬ್ರಹ್ಮ ಬರೆದದ್ದನ್ನು ಅಳಿಸುವ ಶಕ್ತಿ ಮನುಷ್ಯಪ್ರಾಣಿಗೆಲ್ಲಿಂದ ಬಂದೀತು...."

"ನಾಳೆ ಮಾಸ್ತರರೂ ಊಟಕ್ಕೆ ಬರುವರೇ ಅಜ್ಜಿ ?" ಎಂದು ಗೌರಿ ಕೇಳಿದಳು.

"ಹೌದವ್ವ. ಅವರಿಗೂ ಆಮಂತ್ರಣ ಕೊಡುವರಂತೆ. ನಿನ್ನ ಮಾಸ್ತರರಿಗೆ ಹೇಳದಿದ್ದರೆ ನಡೆದೀತೇ ?"

"ನಮ್ಮ ಅಕ್ಕಾ ಅವರು ?"

"ಅವರೂ ಬರುವರಂತೆ. ಅವ್ವ ಹೇಳಿ ಬಂದಿರುವಳಂತೆ."

"ಅಂತೂ ನಾಳೆ ಮನೆಯಲ್ಲೊಂದು ಸಣ್ಣ ಜಾತ್ರೆಯೆ ನಡೆದೀತು ಅಲ್ಲವೆ ?"

"ಸ್ವಾಮಿಗಳು ಬರುವರೆಂದ ಮೇಲೆ ನಡೆಯಲೇಬೇಕಲ್ಲ ಗೌರಾ ?

ಪದ್ಧತಿಯ ಪ್ರಕಾರ ಎಲ್ಲ ಆಗಲೇಬೇಕು," ಎಂದು ನುಡಿದು ಅಜ್ಜಿ ಕೆಳಕ್ಕಿಳಿದು ಹೋದಳು.

ಅಂದು ರಾತ್ರಿ ಸರಸುವಿಗೆ ನಿದ್ರೆ ಬರಲಿಲ್ಲ. ಆ ಮಗ್ಗುಲಿನಿಂದ ಈ ಮಗ್ಗುಲಿಗೆ ಹೊರಳಾಡಿದ್ದೇ ಹೊರಳಾಡಿದ್ದು. ಗೌರಿ ಯಾವಾಗಲೋ ನಿದ್ರೆ ಹೋಗಿದ್ದಳು. ಮನೆಯೆಲ್ಲವೂ ಶಾಂತವಾಗಿತ್ತು. ಹೊರಗಡೆ ಮಳೆಯೂ ಇರಲಿಲ್ಲ.

ಮಧ್ಯರಾತ್ರಿಯಾಗಿರಬಹುದು. ಮಂಚದ ಮೇಲೆ ಹೊರಳಾಡಿ ಹೊರಳಾಡಿ ಬೇಸರುಗೊಂಡಿದ್ದ ಸರಸು ಎದ್ದುಬಿಟ್ಟಳು. ದೀಪವನ್ನಂಟಿಸುವ ಗೊಡವೆಗೆ ಹೋಗದೆ ಹಾಗೆಯೆ ಕಿಟಕಿಯ ಹತ್ತಿರ ನಿಂತುಕೊಂಡಳು. ಶಿವಮೂರ್ತಿಯ ಕೊಟಡಿಯಲ್ಲಿ ಇನ್ನೂ ದೀಪ ಉರಿಯುತ್ತಿತ್ತು. ಹಾಸುಗೆಯ ಮೇಲೊರಗಿಕೊಂಡಿದ್ದ ಹಾಗೆ ಆತ ಏನನ್ನೊ ಬರೆಯುತ್ತಲಿದ್ದುದು ಕಾಣಿಸಿತು.

ಸದ್ದಾಗದಂತೆ ಕೊಟಡಿಯ ಬಾಗಿಲನ್ನು ತೆರೆದು ಸರಸು ಬಿಸಿಲುಮಚ್ಚಿನ ಮೇಲೆ ಬಂದು ನಿಂತಳು. ಬಾನಂಗಣದಲ್ಲಿ ಪುಟ್ಟ ಚಂದ್ರ ಬೆಳಗುತ್ತಲಿದ್ದ. ಕಪ್ಪುಮೋಡಗಳ ಮರೆಯಿಂದ ಅಲ್ಲೊಂದು ಇಲ್ಲೊಂದು ನಕ್ಷತ್ರ ಇಣುಕಿ ನೋಡುತ್ತಲಿದ್ದುವು. ಮಳೆಯಲ್ಲಿ ನೆನೆದ ಮಣ್ಣಿನ ಗಂಧವನ್ನು ಹೊತ್ತು ಬೀಸುತ್ತಲಿತ್ತು ಗಾಳಿ. ಬಲಗಡೆಗಿದ್ದ ತೋಟದಿಂದ ಹೂಗಳ ವಾಸನೆಯೂ ಬರುತ್ತಲಿತ್ತು. ಬೀದಿಯ ಕೊನೆಯಲ್ಲಿ ನಿಂತಿದ್ದ ಕಂಬದಲ್ಲಿನ ಮಂದದೀಪ ಗಾಳಿಗೆ ಅತ್ತ ಇತ್ತ ತೂಗಾಡುತ್ತಿತ್ತು. ತಿಂಗಳ ಬೆಳಕಿನಲ್ಲಿ ಆ ಕಂಬದ ಕರಿನೆರಳು ಮಲಗಿದ ಮನುಷ್ಯಾಕೃತಿಯ ಹಾಗೆ ಕಾಣಿಸುತ್ತಲಿತ್ತು.

ಹತ್ತು ಹದಿನೈದು ನಿಮಿಷಗಳ ವರೆಗೆ ಸರಸು ಹಾಗೆಯೆ ಅಲ್ಲಿಯೆ ನಿಂತುಕೊಂಡಿದ್ದಳು. ಬರೆಯುತ್ತಲಿದ್ದ ಶಿವಮೂರ್ತಿ ತಲೆಯೆತ್ತಿ ತನ್ನ ಕಡೆಗೆ ನೋಡಬಹುದೇನೊ ಎಂದು ಆಕೆಯ ಮನಸ್ಸು ಎಣಿಕೆಹಾಕುತ್ತಿತ್ತು. ಆದರೆ ಆತನ ಲಕ್ಷ್ಯ ಇತ್ತ ಹೊರಳಲಿಲ್ಲ. ಆತ ತನ್ನ ಬರವಣಿಗೆಯಲ್ಲಿ ತಲ್ಲೀನನಾಗಿದ್ದ.

"ಏನು ಬರೆಯುತ್ತಿರಬಹುದು ಆತ ಇಂಥ ಹೊತ್ತಿನಲ್ಲಿ ?" ಎಂದು ಯೋಚಿಸಿದಳು ಸರಸು. ಪ್ರಣಯಪತ್ರವನ್ನೇನಾದರೂ ಬರೆಯುತ್ತಿರ

ಬಹುದೇ, ಎಂಬ ವಿಚಾರ ಬಂದೊಡನೆ ಆಕೆಯ ಶರೀರದಲ್ಲಿ ನವಿರೆದ್ದಿತು. ಪ್ರಣಯಪತ್ರ ! ನಿಜಕ್ಕೂ ಅದೇ ಕೆಲಸದಲ್ಲಿ ತೊಡಗಿರಬೇಕು ಆತ.... ಪ್ರಣಯಪತ್ರ.... ತನ್ನನ್ನು ಉದ್ದೇಶಿಸಿಯೆ ಅಲ್ಲವೆ ಅದು ?—ಹೌದು.... ಇನ್ನಾರಿಗೆ ತಾನೆ ಬರೆದಾನು ಆತ ? ಸಾಯಂಕಾಲ ತನ್ನನ್ನು ಕಂಡಾಗ, ತನ್ನ ಸಹವಾಸದಲ್ಲಿ ಅರ್ಧಗಂಟೆ ಕಳೆದಾಗ ಆತನಲ್ಲಿ ತನ್ನ ಬಗ್ಗೆ ಪ್ರಣಯಭಾವ ಹುಟ್ಟಿಕೊಂಡಿರಬಹುದೇ ? ಅಂತೆಯೆ, ತನ್ನ ಕೈಗಳೆರಡನ್ನೂ ಬಿಗಿಯಾಗಿ ಹಿಡಿದುಕೊಂಡು ಭಾವನೆಗಳಿಂದ ಕಂಪಿಸುವ ಸ್ವರದಲ್ಲಿ ಆತ ಉದ್ಗಾರ ತೆಗೆದಿದ್ದ—ಸರಸೂ—ಎಂದು. ಆ ಧ್ವನಿಯಲ್ಲಿನ ಅನುರಾಗವನ್ನು ಗುರುತಿಸದಷ್ಟು ಅನನುಭವಿಕಳಲ್ಲವಲ್ಲ ತಾನು? ಹೌದು.... ತನ್ನಂತೆಯೆ ಆತನೂ ಪ್ರಣಯಪಾಶದಲ್ಲಿ ಸಿಲುಕಿರಬೇಕು. ತನ್ನಂತೆಯೆ ಆತನಿಗೂ ನಿದ್ರೆ ಬಂದಿರಲಿಕ್ಕಿಲ್ಲ. ಅಂತೆಯೆ ಎದ್ದು ಪತ್ರ ಬರೆಯುತ್ತಿದ್ದಾನು.... ಎಂಥ ಪತ್ರವಿರಬಹುದು ಅದು ? ಎಷ್ಟು ಸುಂದರವಾಗಿರಬಹುದು ? ಆತನ ಪಿಟೀಲಿನ ರಾಗದಂತೆಯೆ ಮನಮೋಹಕವಾಗಿರಬಹುದಲ್ಲವೆ ? ತನ್ನನ್ನಾತ ಏನೆಂದು ಕರೆದಿರಬಹುದು ? ಕನಸಿನ ದೇವಕನ್ಯೆ ಎಂದಿರಬಹುದೇ ? ಹೃದಯ ಸರಸ್ಸಿನ ಕಮಲ ಎಂದಿರಬಹುದೇ ? ಎಂಥ ವಿಶೇಷಣಗಳನ್ನು ಪ್ರಯೋಗಿಸಿರಬಹುದು ? ಎಂಥ ಲಲಿತ ಭಾಷೆಯನ್ನು ಉಪಯೋಗಿಸಿರಬಹುದು ?

ಬಿಸಿಲು ಮಚ್ಚಿನ ಮೇಲೆ ನಿಂತುಕೊಂಡಿದ್ದ ಹಾಗೆ ಸರಸು ಕೆಳಗಡೆ ದೃಷ್ಟಿ ತಿರುಗಿಸಿ ಬರೆಯುವುದರಲ್ಲಿ ತೊಡಗಿದ್ದ ಶಿವಮೂರ್ತಿಯನ್ನೇ ಸೂಕ್ಷ್ಮವಾಗಿ ನಿರುಕಿಸುತ್ತಲಿದ್ದಳು.—ಐದು ನಿಮಿಷವಾಯಿತು, ಹತ್ತು ನಿಮಿಷವಾಯಿತು, ಇನ್ನೂ ಮುಗಿಯಲಿಲ್ಲವಲ್ಲ ಆತನ ಬರವಣಿಗೆ.... ಬರೆಯುತ್ತಲಿದ್ದಾನೆ ಹಾಗೇ.... ಪುಟಗಳ ಮೇಲೆ ಪುಟಗಳು.... ಈಗಾಗಲೇ ಹತ್ತು ಹದಿನೈದು ಪುಟಗಳಷ್ಟಾದರೂ ಬರೆದಾಗಿರಬಹುದು—ಇನ್ನೂ ಬರೆಯುತ್ತಲೇ ಇರುವನಲ್ಲ .... ಅಮ್ಮಯ್ಯ.... ಪ್ರಣಯಪತ್ರವೆಂದರೆ ಇಷ್ಟು ದೊಡ್ಡದೂ ಆಗುವುದುಂಟೇ ?—ಹುಚ್ಚು ಯುವಕ! ಎಂಥೆಂಥ ವಿಚಿತ್ರ ಮಾತು ಬರೆಯುತ್ತಿರುವನೊ ಏನೋ !

ಆತ ಬರೆಯುವುದನ್ನು ನಿರುಕಿಸುತ್ತಲಿದ್ದ ಹಾಗೆ—ತಾನೂ ಆತನಿಗೊಂದು ಪತ್ರವನ್ನೇಕೆ ಬರೆಯಬಾರದು ?—ಎನ್ನಿಸಿತು ಸರಸೂಗೆ. ಆ

ವಿಚಾರದೊಂದಿಗೆ ಆಕೆಯ ಹೃದಯವೆಲ್ಲ ಹರ್ಷದಿಂದ ನರ್ತಿಸತೊಡಗಿತು. ಪ್ರಣಯಪತ್ರ ಬರೆಯುವ ಸಂದರ್ಭ ತನಗೆ ಇದುವರೆಗೂ ಬಂದಿರಲಿಲ್ಲ. ತನ್ನ ಹೃದಯವನ್ನು ಗೆದ್ದುಕೊಂಡ ಪ್ರಣಯಿಯೆ ಇಲ್ಲದಿರುವಾಗ ಓಲೆ ಬರೆಯುವುದಾದರೂ ಯಾರಿಗೆ? ಈಗ ಬಂದಿದೆ ಆ ಸಂದರ್ಭ. ಆತನೂ ತನಗೆ ಬರೆಯುತ್ತಿದಾನೆ. ತಾನೂ ಆತನಿಗೆ ಬರೆಯಬೇಕು....

ಉಲ್ಲಸದಿಂದ ಅರಳಿದ ಹೃದಯದೊಂದಿಗೆ ಕೊಟಡಿಗೆ ಬಂದು ದೀಪವನ್ನಂಟಿಸಿದಳು ಸರಸು. ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಿ ಭದ್ರಗೊಳಿಸಿ, ಕುರ್ಚಿಯ ಮೇಲೆ ಕುಳಿತುಕೊಂಡು ಡ್ರಾಯರನ್ನೆಳೆದು ಅದರೊಳಗಿನಿಂದ ಲೇಖನಿಯನ್ನೂ ಕಾಗದವನ್ನೂ ಹೊರತೆಗೆದಳು. ಪರಿಮಳಯುಕ್ತವಾದ ಗುಲಾಬಿ ಬಣ್ಣದ ಕಾಗದ! ಲೇಖನಿಯನ್ನು ತುಟಿಗಳ ಹತ್ತಿರ ಕುಣಿಸುತ್ತ ಮಂಚದ ಕಡೆಗೊಮ್ಮೆ ಕಟಾಕ್ಷ ತೂರಿ, ಗೌರಿ ನಿದ್ರೆಮಾಡುತ್ತಿರುವಳೇ ಇಲ್ಲವೇ ಎಂದು ನಿರೀಕ್ಷಿಸಿ, ಮತ್ತೆ ಕಾಗದದ ಕಡೆಗೆ ದೃಷ್ಟಿ ಹೊರಳಿಸಿ ಯೋಚಿಸತೊಡಗಿದಳು: ಪತ್ರ ಬರೆಯಲು ಕುಳಿತುದಾಯಿತು. ಆದರೆ ಏನೆಂದು ಬರೆಯುವುದು? ಹೇಗೆ ಪ್ರಾರಂಭಿಸುವುದು? ಶಿವಮೂರ್ತಿಯನ್ನು ಹೇಗೆ ಸಂಬೋಧಿಸುವುದು?

ಪ್ರಣಯಪತ್ರದ ಮಾತು ಹಾಗಿರಲಿ; ಪತ್ರ ಬರೆಯುವುದೂ ಆಕೆಗೆ ಹೊಸ ವಿಷಯವೇ. ಹದಿನೆಂಟು ವರುಷಗಳ ತನ್ನ ಬಾಳಿನಲ್ಲಿ ಪತ್ರ ಬರೆಯುವ ಸಂದರ್ಭಗಳು ಬಂದುದೂ ವಿರಳವೆ. ಊರು ಬಿಟ್ಟು ಬೇರೆ ಕಡೆಗೆ ಹೋದವಳಲ್ಲ. ತಂದೆ ತಾಯಿಗಳಿಗೆ ಪತ್ರ ಬರೆಯುವ ಅಗತ್ಯವಿರಲಿಲ್ಲ. ಗೆಳತಿಯರಿಗೆ ಬರೆಯಬೇಕೆಂದರೆ, ಆಕೆಗಿದ್ದ ಗೆಳತಿಯರೂ ತೀರ ಕಡಿಮೆ. ಪತ್ರವ್ಯವಹಾರ ಮಾಡುವಷ್ಟು ಸಲುಗೆಯ ಗೆಳೆತನ ಬೆಳೆದುದೆಂದರೆ ಸೂಶಿಯೊಬ್ಬಳ ಜೊತೆಗೇ. ಆಕೆಯೂ ಇಲ್ಲಿರುವಷ್ಟುದಿನ ಪತ್ರವ್ಯವಹಾರದ ಅಗತ್ಯವಿರಲಿಲ್ಲ. ಈ ಊರು ಬಿಟ್ಟು ನರ್ಸಿಂಗ್ ಶಿಕ್ಷಣ ಪಡೆಯಲು ಆಕೆ ಹೊರಟು ಹೋದ ಬಳಿಕ ಆಕೆಗೆ ಮೂರು ನಾಲ್ಕು ಪತ್ರ ಬರೆದಿರಬಹುದು, ಅಷ್ಟೆ. ಆ ಪತ್ರಗಳಲ್ಲಿ ಅಂಥ ಮಹತ್ವದ ವಿಷಯಗಳೇನೂ ಇರುತ್ತಿರಲಿಲ್ಲ. "ನಾನು ಕ್ಷೇಮ, ನೀನು ಕ್ಷೇಮವಷ್ಟೆ? ನಿಮ್ಮ ತಾಯಿ ಸುಖವಾಗಿರುವಳೇ?" ಎಂಬ ನಾಲ್ಕು ನುಡಿಗಳಲ್ಲಿ ಪ್ರತಿಯೊಂದು ಪತ್ರವೂ ಮುಗಿಯುತ್ತಿತ್ತು. ತನ್ನ

ಎದೆಯಲ್ಲಿ ಕುದಿಯುತ್ತಿದ್ದ ಹಲವಾರು ವಿಚಾರಗಳನ್ನು ತನ್ನ ಪ್ರಿಯ ಗೆಳತಿಗೆ ತಿಳಿಸುವ ಮನಸ್ಸಿದ್ದರೂ, ಅವುಗಳನ್ನು ಕಾಗದದಲ್ಲಿ ವ್ಯಕ್ತಗೊಳಿಸಲು ಆಕೆ ಸಮರ್ಥಳಾಗಿರಲಿಲ್ಲ. ಆ ವಿಚಾರಗಳ ಮಾತನ್ನೆತ್ತದಿರಲು ಇನ್ನೂ ಒಂದು ಬಲವಾದ ಕಾರಣವಿತ್ತು. ತನ್ನ ಎದೆಯ ದುಃಖವನ್ನು ದೂರಗೊಳಿಸಲು ಸೂಶಿಯೇನಾದರೂ ಸಮಾಧಾನದ ಮಾತು ಬರೆದಲ್ಲಿ—ಆ ಕಾಗದ ಅಕಸ್ಮಾತ್ತಾಗಿ ತಂದೆ ತಾಯಿಗಳ ಕೈಗೆ ಸಿಕ್ಕಿದಲ್ಲಿ ಅವರಿಂದ ಎಂಥ ಮಾತು ಕೇಳಬೇಕಾಗಿ ಬಂದೀತೊ ಎಂಬ ಭೀತಿಯಿತ್ತು ಸರಸೂಗೆ. ಅಂತೆಯೆ ಆಕೆ ಅಂಥ ಪ್ರಸಂಗದಿಂದ ದೂರವಿದ್ದು ಬಿಟ್ಟಳು. ಕೇವಲ ಕ್ಷೇಮ ಸಮಾಚಾರವಲ್ಲಿಯೆ ತೃಪ್ತಿಗೊಳ್ಳುತ್ತಿದ್ದಳು.

ಸೂಶಿಗೆ ಬರೆಯುತ್ತಿದ್ದ ಪತ್ರಗಳನ್ನೆಲ್ಲ "ಪ್ರಿಯ ಗೆಳತಿ ಸೂಶಿಗೆ" ಎಂದಾಕೆ ಪ್ರಾರಂಭಿಸುತ್ತಿದ್ದಳು. ಪ್ರಣಯಪತ್ರವನ್ನು ಹೇಗೆ ಪ್ರಾರಂಭಿಸಬೇಕು ? "ಪ್ರಿಯ ಶಿವಮೂರ್ತಿಗೆ" ಎಂದೇ ? ಪ್ರಿಯ ?—ಅದೇನೊ ಸರಿಯಾದ ಮಾತೇ. ತಾನೋದಿದ ಹಲವು ಕತೆ ಕಾದಂಬರಿಗಳಲ್ಲಿ ಪ್ರಣಯ ಪತ್ರಗಳು ಹೀಗೆಯೆ ಆರಂಭವಾಗುವುದನ್ನಾಕೆ ಅರಿತಿದ್ದಳು. "ಹೃದಯೇಶ್ವರಾ," "ನನ್ನ ಪ್ರೀತಿಯ ಮೂರ್ತಿ," "ನನ್ನ ದೇವರೆ," ಎಂದೂ ಹಲವು ಪತ್ರಗಳಲ್ಲಿ ಉಲ್ಲೇಖಿಸಲಾಗಿದ್ದಿತು. ಶಿವಮೂರ್ತಿಗೆ ತಾನೆಂತು ಬರೆಯಬೇಕು ? ಆತನ ಹೆಸರು ಎತ್ತಿ ಕರೆಯಬೇಕೇ ? ಇಲ್ಲವೆ, ಹಾಗೇ "ಪ್ರಿಯಕರಾ," ಎನ್ನಬೇಕೇ ? ಸರಸು ಲೇಖನಿಯನ್ನು ಮತ್ತೆ ತುಟಿಗಳ ಮೇಲೆ ಓಡಿಯಾಡಿಸಿದಳು. ಯಾವುದೂ ಬಗೆಹರಿಯಲಿಲ್ಲ.

ನಾಲ್ಕೈದು ನಿಮಿಷಗಳ ವರೆಗೆ ಯೋಚಿಸಿದ ತರುವಾಯ ಹೇಗಾದರೂ ಪ್ರಾರಂಭಿಸಿದಳಾಯಿತು, ಪ್ರಾರಂಭಕ್ಕೇ ಏಕೆ ಅಷ್ಟೊಂದು ಮಹತ್ವ—ಎಂದುಕೊಂಡು ಬರೆಯತೊಡಗಿದಳು :

"ಪ್ರಾಣಪ್ರಿಯ ಮೂರ್ತಿ,"

ಮುಂದೆ ಲೇಖನಿ ಓಡಲಿಲ್ಲ. ಪ್ರಾರಂಭವಂತೂ ಆಯಿತು. ಒಂದು ಸಮಸ್ಯೆ ಬಗೆಹರಿಯಿತು. ಮುಂದೆ ಏನೆಂದು ಬರೆಯುವುದು ? "ರಾತ್ರಿ ನಿದ್ರೆ ಬರಲಿಲ್ಲ. ಸಾಯಂಕಾಲದಿಂದಲೂ ನಿಮ್ಮ ಧ್ಯಾನವೇ ಆಗಿದೆ. ಹಾಸಿಗೆಯ ಮೇಲೆ ಹೊರಳಿ ಹೊರಳಿ ಬೇಸರವಾಗಿ ಬರೆಯುತ್ತಿದ್ದೇನೆ. ನನ್ನ ಮನದನ್ನ,

ಎಂಥ ಹುಚ್ಚು ಹಿಡಿಸಿದಿರಲ್ಲ ನನಗೆ !" ಎಂದು ಬರೆಯುವುದೇ ? "ನೀವು ನಮ್ಮ ಮನೆಯೆದುರಿನ ಕೊಟಡಿಗೆ ಬಂದಂದಿನಿಂದ ನನ್ನ ಕಣ್ಣೂ ಮನಸೂ ನಿಮಗೆ ಸೋತಿವೆ. ನಿಮ್ಮ ಸುಂದರ ರೂಪು, ನಿಮ್ಮ ಪಿಟೀಲಿನ ಮಧುರ ರಾಗ, ನಿಮ್ಮ ವಿಲಕ್ಷಣ ಔದಾಸೀನ್ಯ, ನಿಮ್ಮ ಗಂಭೀರ ನಡಿಗೆ, ಇನಿದಾದ ಕಂಠಗಳನ್ನು ನೆನೆದು ನೆನೆದು ಮರುಳಾಗಿದೆ ನನ್ನ ಹೃದಯ. ನೀವು ನಮ್ಮ ಮನೆಗೆ ಬರತೊಡಗಿದಂದಿನಿಂದ ನಿಮ್ಮೊಂದಿಗೆ ಮಾತನಾಡಲು ಆತುರಳಾಗಿದ್ದೆ. ಇಂದು ಆ ಸುವರ್ಣ ಸಂದರ್ಭ ಬಂದಿತು. ನಾವಿಬ್ಬರೂ ಪರಸ್ಪರರನ್ನು ಬಳಸಿಕೊಂಡು ಆ ಪ್ರಚಂಡ ಮಳೆಯಲ್ಲಿ ನೆನೆಯುತ್ತ ಬಂದ ಆ ದೃಶ್ಯ ಎಷ್ಟು ಮೋಹಕವಾಗಿತ್ತು ! ಪಿಟೀಲು ಕೊಡಲೆಂದು ನಾನು ನಿಮ್ಮ ಕೊಟಡಿಗೆ ಬಂದಾಗ ನೀವು ಪ್ರೀತಿಯಿಂದ ನನ್ನ ಕೈ ಹಿಡಿದು 'ಸರಸೂ' ಎಂದು ಕರೆದುದು ಎಷ್ಟು ಮೋಹಕವಾಗಿತ್ತು—ಆಗಿನ ನಿಮ್ಮ ಭಾವಪೂರ್ಣ ಮುಖ, ನಸು ಕಂಪಿಸುವ ದೇಹ, ಆನಂದ ಉಲ್ಲಾಸಗಳಿಂದ ಅರಳಿ ನಳನಳಿಸುವ ಕಣ್ಣು ಈಗಲೂ ನನ್ನ ದೃಷ್ಟಿಯೆದುರಿಗೆ ನಿಂತ ಹಾಗಿದೆ. ಹೃದಯುದರಸ, ನಿದ್ರೆ ಬರಲೊಲ್ಲದು ನನಗೆ....ನಿದ್ರೆಯೆ ಬರಲೊಲ್ಲದು...." ಎಂದು ಬರೆಯಬೇಕೇ ? ಹಾಗೆ ಬರೆದು ಆತನೆದುರಿಗೆ ತನ್ನೆದೆಯನ್ನೆಲ್ಲ ಬಿಚ್ಚಿ ಇಡಬೇಕೆಂಬ ಆತುರ ಬಲವಾಗಿದೆ. ಆದರೆ– ಹೇಗೆ ತಾನೆ ಬರೆಯುವುದು ತಾಯಿ, ಇಂಥ ಮಾತುಗಳನ್ನೆಲ್ಲ ?–ಅದನ್ನೋದಿದ ಮೇಲೆ ಆತ ತನ್ನ ಬಗ್ಗೆ ಏನು ತಿಳಿದುಕೊಂಡಾನು ?

"ಪ್ರಾಣಪ್ರಿಯ ಮೂರ್ತಿ," ಎಂದು ಬರೆದುದೆಷ್ಟೊ ಅಷ್ಟೆ. ಮುಂದೆ ಒಂದು ಶಬ್ದವನ್ನೂ ಬರೆಯಲಾಗಲಿಲ್ಲ. ಮನಸ್ಸಿನಲ್ಲಿ ಬಂದುದೆಲ್ಲವೂ ಅಲ್ಲಿಯೆ ಉಳಿಯಿತು ; ಕಾಗದಕ್ಕಿಳಿಯಲಿಲ್ಲ. ಅರ್ಧಗಂಟೆಯ ವರೆಗೆ ಇದೇ ಹೊಯ್ದಾಟದಲ್ಲಿ ಕಳೆದು ಬೇಸರುಗೊಂಡು ಆ ಕಾಗದವನ್ನು ಹರಿದೆಸೆದು ಸರಸು ಮೇಲಕ್ಕೆದ್ದು ನೋಡಿದಳು. ಶಿವಮೂರ್ತಿಯ ಕೊಟಡಿಯಲ್ಲಿನ ದೀಪ ಆರಿಹೋಗಿದ್ದಿತು. ಆತ ನಿದ್ರೆಹೋಗಿದ್ದನೇನೊ....

ಮೇಜಿನ ಮೇಲಿದ್ದ ದೀಪವನ್ನಾರಿಸಿ ಸರಸುವೂ ಮತ್ತೆ ಮಂಚದ ಮೇಲೊರಗಿದಳು. ಎಂಥ ಹುಚ್ಚಿ ತಾನು ! ಆತ ಬರೆಯುತ್ತಿದ್ದುದು ಪ್ರಣಯ ಪತ್ರವನ್ನೇ, ಎಂದು ಯಾವ ಆಧಾರದಿಂದ ಹೇಳಬೇಕು ? ಇನ್ನೇನಾದರೂ

ಬರೆಯುತ್ತಿದ್ದಿರಬಾರದೇಕೆ? ತನ್ನ ಬಗೆಗೆ ಆತನಲ್ಲಿ ಪ್ರಣಯ ಭಾವ ಮೊಳೆತಿದೆಯೆಂದಾದರೂ ಹೇಗೆ ನಂಬಬೇಕು? ತಾನು ತೋರಿಸಿದ ಸಹಾನುಭೂತಿಗಾಗಿ ಆತ ಕೃತಜ್ಞತೆ ವ್ಯಕ್ತಗೊಳಿಸಿರಬಹುದು. ಅದಕ್ಕಿಂತ ಹೆಚ್ಚು ಇನ್ನೇನೂ ಇರಲಿಕ್ಕಿಲ್ಲ....ಏನೇನನೊ ಯೋಚಿಸಿ ಪ್ರಣಯಪತ್ರ ಬರೆಯಲು ಕೂತಿದ್ದಳಲ್ಲ ತಾನು! ಬರೆಯದೆ ಬಿಟ್ಟುದೇ ಒಳ್ಳೆಯದಾಯ್ತು. ಬರೆದು ಮುಗಿಸಿದ್ದರೆ...ಆತನಿಗೆ ಅದನ್ನು ಮುಟ್ಟಿಸುವ ಬಗೆಯಾದರೂ ಯಾವುದಿತ್ತು? ನಾಚಿಕೆಗೇಡು!....ಎಂದುಕೊಂಡು ತಲೆ ತುಂಬಾ ರಗ್ಗನ್ನೆಳೆದುಕೊಂಡು ಗೌರಿಯ ಕಡೆಗೆ ಹೊರಳಿ ಮಲಗಿದಳು.

[೮]

ಬೆಳಗಿನ ಸೂರ್ಯನ ಬಂಗಾರದ ಕೈಗಳು ಕಿಟಕಿಯೊಳಗಿನಿಂದ ಇಳಿದು ಬಂದು ತನ್ನ ಕೆನ್ನೆಗಳ ಮೇಲಾಡಿದಾಗ ಎಚ್ಚರವಾಯಿತು ಗೌರಿಗೆ. ಕಣ್ಣುಜ್ಜಿಕೊಳ್ಳುತ್ತ ಎದ್ದು ಕುಳಿತು ಕೊಟಡಿಯಲ್ಲೆಲ್ಲ ದೃಷ್ಟಿಯನ್ನು ಚೆಲ್ಲಿದಳು. ಪಕ್ಕದಲ್ಲಿ ಸರಸು ಹಸುಮಗುವಿನಂತೆ ಬೆಳಗಿನ ಸವಿನಿದ್ರೆಯಲ್ಲಿ ಮೈಮರೆತಿದ್ದಳು. ತಲೆದಿಂಬಿನ ಮೇಲೊರಗಿದ್ದ ಆಕೆಯ ತಲೆ ಕೊಂಚ ಎಡಗಡೆಗೆ ಬಾಗಿತ್ತು. ಏಕೊ ಏನೊ, ಹುಬ್ಬು ಆಗಾಗ ಸೂಕ್ಷ್ಮವಾಗಿ ಕಂಪಿಸುತ್ತಿತ್ತು. ತುಟಿಗಳ ಮೂಲೆಗಳಲ್ಲಿ ಮೋಹಕವಾದ ನಗೆಯ ಲಹರಿ ಸುಳಿಯುತ್ತಿತ್ತು. ಎಡಗೈಯ ತರ್ಜನಿ ಬೆರಳು ಮುಖದ ಬಳಿ ಬಂದು ಗಲ್ಲದ ಮೇಲೆ ಪವಡಿಸಿತ್ತು.

ಆಕೆಯ ಸೀರೆಯ ಸೆರಗನ್ನು ಸುರುಳಿ ಮಾಡಿ ಕಿವಿಯಲ್ಲಿ ತಿರುಗಿಸಿ ಎಚ್ಚರಿಸಲಾ—ಎಂಬ ಯೋಚನೆ ಬಂದು ಗೌರಿಯ ಮುಖದಲ್ಲಿ ತುಂಟ ನಗೆಯನ್ನು ಚಿಮ್ಮಿಸಿತು. ಈ ಬಗೆಯಾಗಿ ಆಕೆ ಅಕ್ಕನನ್ನು ಎಚ್ಚರಗೊಳಿಸಿದ್ದುದು ಎಷ್ಟೋ ಬಾರಿ. ಅನೇಕ ಸಲ ಬಳಸಿದ್ದುದರಿಂದ ಆ ಉಪಾಯಕ್ಕೆ ಮೊದಲಿನ ಹೊಸತನವುಳಿದಿರಲಿಲ್ಲ. ಅಂತೆಯೆ, ಇಂದು ಮತ್ತೆ ಅದೇ ತುಂಟಾಟ ಹೂಡಲು ಗೌರಿಗೆ ಉತ್ಸಾಹವಿರಲಿಲ್ಲ. "ಇನ್ನೂ ಸ್ವಲ್ಪ ಹೊತ್ತು ಮಲಗಿರಲಿ ಪಾಪ. ಎದ್ದು ಮಾಡಬೇಕಾದ ಮಹಾ ಕೆಲಸವಾದರೂ ಏನಿದೆ?" ಎಂದುಕೊಂಡು ಅಡಿಗಳ ಸಪ್ಪಳಾಗದಂತೆ ಇಳಿದುಬಂದಳು.

ಮೇಜಿನ ಮೇಲೆ ಬಿದ್ದುಕೊಂಡಿದ್ದ ಲೇಖನಿ ತನ್ನ ದೃಷ್ಟಿಯನ್ನು ಸೆಳೆದಾಗ ಗೌರಿಗೆ ಕೊಂಚ ಅಚ್ಚರಿಯೆನ್ನಿಸದಿರಲಿಲ್ಲ. ಕಂದೀಲು ಬೇರೆ ಅದರ ಪಕ್ಕದಲ್ಲಿಯೇ ಇದೆ. ರಾತ್ರಿ ಅಕ್ಕ ಎದ್ದು ಏನನ್ನಾದರೂ ಬರೆಯುತ್ತಲಿದ್ದಳೋ ಏನೋ–ಎಂಬ ವಿಚಾರ ಬರುತ್ತಲೂ ಆಕೆ ಕುತೂಹಲದಿಂದ ಡ್ರಾಯರನ್ನು ತೆರೆದು ಹುಡುಕಾಡಿ ನೋಡಿದಳು. ಬರೆದ ಕಾಗದವಾವುದೂ ಕಾಣಿಸಲಿಲ್ಲ. ಅಕ್ಕ ಏನನ್ನೋ ಬರೆದಿರಲೇಬೇಕೆಂಬುದಂತೂ ಖಚಿತವಾದಂತಿದ್ದಿತು. ಬರೆದು ಎಲ್ಲಾದರೂ ಅಡಗಿಸಿಟ್ಟಿರಬಹುದೇ ?–ಎಂದುಕೊಳ್ಳುತ್ತ ಮೇಜಿನ ಕೆಳಗಡೆ ದೃಷ್ಟಿ ತೂರಿದಳು. ಅಲ್ಲಿ ಸೂರೆಯಾಗಿದ್ದ ಕಾಗದದ ತುಂಡುಗಳನ್ನು ಕಾಣುತ್ತಲೂ ಆತುರದಿಂದ ಕೆಳಕ್ಕೆ ಬಾಗಿ ಅವುಗಳನ್ನು ಕೈಗೆತ್ತಿಕೊಂಡು ಒಂದೊಂದೇ ಚೂರನ್ನು ಉತ್ಸುಕತೆಯಿಂದ ನಿರುಕಿಸತೊಡಗಿದಳು. ಎರಡು ಚೂರುಗಳನ್ನು ಬಿಟ್ಟರೆ ಇನ್ನುಳಿದುವುಗಳಲ್ಲಿ ಒಂದು ಅಕ್ಷರವೂ ಕಾಣಿಸಲಿಲ್ಲ. ಕುತೂಹಲದಿಂದ ಆ ಚೂರುಗಳೆರಡನ್ನೂ ಜೋಡಿಸಿ ಓದಿಕೊಂಡಳು: "ಪ್ರಾಣಪ್ರಿಯ ಮೂರ್ತಿ,"

ಗೌರಿಗೆ ಯಾವುದೂ ಅರ್ಥವಾಗಲಿಲ್ಲ. ಪ್ರಾಣಪ್ರಿಯ ಎಂದರೆ ಯಾರು, ಮೂರ್ತಿ ಎಂದರೆ ಯಾರು, ಯಾರನ್ನು ಕುರಿತು ಬರೆದಿದ್ದಾಳೆ ಸರಸೂ ? ಬರೆದು ಅಷ್ಟಕ್ಕೇ ನಿಲ್ಲಿಸಿ ಏಕೆ ಹರಿದುಹಾಕಿದ್ದಾಳೆ ? ಅವಳ ಉದ್ದೇಶವೇನಿರಬಹುದು ?

ಪುಸ್ತಕವನ್ನು ಮರೆಯಾಗಿಸಿಟ್ಟುಕೊಂಡು, ಕಡಲೆಪುರಿ ತಿನ್ನುವ ವಿದ್ಯಾರ್ಥಿಗಳನ್ನು ಕಂಡುಹಿಡಿದ ಶಿಕ್ಷಕರಂತೆ ಗೌರಿಯ ಸ್ಥಿತಿಯಾಗಿದ್ದಿತು. ಸರಸಕ್ಕ ಏಳಲಿ ಮೊದಲು–ಅನಂತರ ಮಜಾ ಮಾಡಿದರಾಯಿತು, ಎಂದುಕೊಂಡು ಆ ಚೂರುಗಳನ್ನು ತನ್ನ ಲಂಗದ ಜೇಬಿನಲ್ಲಿ ಭದ್ರವಾಗಿರಿಸಿಕೊಂಡು ಕೆಳಗಡೆ ನಡೆದಳು.

ಆಕೆ ಮೆಟ್ಟಲುಗಳನ್ನಿಳಿಯುವುದಕ್ಕೂ ಕೆಳಗಿನಿಂದ ನಾಗಮ್ಮ ಮೇಲೆ ಬರುವುದಕ್ಕೂ ಗಂಟುಬಿತ್ತು.

"ಏನೇ, ಈಗ ಎದ್ದೆಯಾ ? ಸರಸು ಇನ್ನೂ ಎದ್ದಿಲ್ಲವೆ ?"

"ಇಲ್ಲ. ಇನ್ನೂ ಮಲಗಿದ್ದಾಳೆ."

"ಐದು ಗಂಟೆಗೇ ಏಳಬೇಕೆಂದು ಹೇಳಿದ್ದೆ. ಇನ್ನೂ ಬಿದ್ದುಕೊಂಡೇ ಇರುವಳೇ?"

"ರಾತ್ರಿ ಬೇಗ ಮಲಗಿದ ಹಾಗೆ ಕಾಣಲಿಲ್ಲ. ಪುಸ್ತಕ ಓದುತ್ತ ಕುಳಿತಿದ್ದಳು."

"ಹೂಂ. ಅದೊಂದು ನೆಪವಾಗಿದೆ ಆಕೆಗೆ. ಓದಿ ಓದಿ ಆಕೆ ಕವಯಿತ್ರಿಯಾಗುವದೊಂದು ಉಳಿದಿದೆ, ಅಷ್ಟೆ!" ಎಂದು ಅಣಕವಾಡುತ್ತ ನಾಗಮ್ಮ ಮೆಟ್ಟಲುಗಳನ್ನೇರುತ್ತ ಹೊರಟವಳು ಮತ್ತೆ ನಿಂತುಕೊಂಡು ಗೌರಿಯನ್ನು ಉದ್ದೇಶಿಸಿ ನುಡಿದಳು: "ಈ ದಿನ ಪಾಠ ಬೇಡ ಅಂತ ಹೇಳಿ ಬಾ ನಿನ್ನ ಮಾಸ್ತರರಿಗೆ. ಹಾಗೇ ಮಧ್ಯಾಹ್ನ ಇಲ್ಲಿಗೇ ಊಟಕ್ಕೆ ಬರಬೇಕೆಂದು ತಿಳಿಸು."

ಗೌರಿ ಸಂಭ್ರಮದಿಂದ ಮೆಟ್ಟಲುಗಳ ಮೇಲೆ ಹಾರುತ್ತ ಕೆಳಕ್ಕಿಳಿದು ಹೋದಳು. ಮುಖ ತೊಳೆದುಕೊಂಡ ಶಾಸ್ತ್ರ ಮಾಡಿದವಳೆ ಅಡುಗೆಮನೆಯಲ್ಲಿ ನಿಲ್ಲದೆ ಶಿವಮೂರ್ತಿಯ ಕೊಟಡಿಯ ಕಡೆಗೆ ಓಟಬಿಟ್ಟಳು. ಆಕೆ ಬಾಗಿಲು ದಾಟಿ ಬರುವಷ್ಟರಲ್ಲಿಯೆ ಮೆಟ್ಟಲುಗಳನ್ನೇರಿ ಬರುತ್ತಿದ್ದ ಉಪಾಧ್ಯಾಯಿನಿ ಗದಿಗೆಮ್ಮ ಕಾಣಿಸಿದಳು.

"ಏನು ಗೌರಾಂಬಿಕಾ, ಇಷ್ಟು ಅವಸರದಿಂದ ಎಲ್ಲಿಗೋಡುತ್ತಿರುವೆ?"

"ಮಾಸ್ತರ ಕೋಣೆಗೆ ಹೋಗಿ ಬರ್ತೇನೆ ಅಕ್ಕಾವರೆ!"

"ಯಾರವ್ವ ಅವರು ನಿನ್ನ ಮಾಸ್ತರು?"

"ಇಲ್ಲೇ ಇದಾರೆ ಎದುರಿಗಿನ ಕೋಣೆಯಲ್ಲಿ. ಶಿವಮೂರ್ತಿಸ್ವಾಮಿಗಳು ಅಂತ ಹೆಸರು ಅವರಿಗೆ. ಮ್ಯಾಟ್ರಿಕ್ಕಿನಲ್ಲಿ ಈ ಜಿಲ್ಲೆಗೆಲ್ಲ ಮೊದಲನೆಯ ನಂಬರು ಬಂದವರಂತೆ. ಅಪ್ಪನಿಗೆ ಹಿರೇಮಠ ಮಾಸ್ತರರು ಹೇಳುತ್ತಿದ್ದರಂತೆ. ಬಹಳ ಹುಷಾರಿದ್ದಾರ್ರೀ ಅಕ್ಕಾವರೆ ಈ ಮಾಸ್ತರರು. ಪಿಟೀಲನ್ನೂ ಚೆನ್ನಾಗಿ ಬಾರಿಸುತ್ತಾರೆ," ಎಂದು ಮಾತಿನ ಮಳೆಗಾರಂಭಿಸಿದಳು ಗೌರಿ.

"ಅಕ್ಕಾ ಅವರು" ನಕ್ಕು, ಗೌರಿಯ ಗದ್ದವನ್ನು ತೀಡಿ, ಒಳಗಡೆ ನಡೆದರು. ಗೌರಿ ಮೆಟ್ಟಲುಗಳನ್ನು ಧಡಧಡನೆ ಇಳಿದು ಶಿವಮೂರ್ತಿಯ ಕೊಟಡಿಗೆ ನುಗ್ಗಿದಳು.

ಕೊಟಡಿಯ ಬಾಗಿಲು ತೆರೆದ ಹಾಗೇ ಇದ್ದಿತಾದರೂ ಶಿವಮೂರ್ತಿ ಇನ್ನೂ ಹಾಸುಗೆಯಿಂದ ಮೇಲಕ್ಕೆದ್ದಿರಲಿಲ್ಲ. ಕಂಬಳಿ ಹೊದೆದು ಮಲಗಿದ್ದ

ವನು ಹಾಗೆಯೆ ಕಣ್ಣು ತೆರೆದು ಪವಡಿಸಿದ್ದ. ಎಡಗೈಯಲ್ಲಿ ಸಿಗರೇಟು ಹೊಗೆಯಾಡುತ್ತಲಿತ್ತು. ರಾತ್ರಿ ಬರೆದು ಮುಗಿಸಿದ ಹಾಳೆಗಳು ಹಾಸುಗೆಯ ಎಡಕ್ಕೂ ಬಲಕ್ಕೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು.

ಕೊಟಡಿಯಲ್ಲಿ ಗಾಳಿಯಂತೆ ನುಗ್ಗಿ ಬಂದ ಗೌರಿ, ಆತನಿನ್ನೂ ಮಲಗಿಕೊಂಡಿದ್ದುದನ್ನು ಕಂಡೊಡನೆಯೆ ಕೊಂಚ ಸಂಕೋಚದಿಂದ ಬಾಗಿಲಹತ್ತಿರವೆ ನಿಂತುಕೊಂಡಳು. ಶಿವಮೂರ್ತಿಯ ದೃಷ್ಟಿ ಆಕೆಯ ಕಡೆಗೆ ತಿರುಗಿತು. ಕಂಬಳಿಯನ್ನು ದೂರ ಸರಿಸಿ ಮೇಲಕ್ಕೆದ್ದು—"ಬಾ ಗೌರಮ್ಮ....ಅಂ....ಗೌರಾಂಬಿಕಾ," ಎಂದ.

ಆಕೆ ಹತ್ತಿರ ಬಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ...."ಇಲ್ಲಿ ಕೂಡ್ರಬಹುದಲ್ಲ ಮಾಸ್ತರರೆ ?" ಎಂದಳು.

ಆತ ನಕ್ಕು—"ಓ, ಯಾಕಾಗಲೊಲ್ಲದು ? ಕೂಡ್ರು," ಎಂದ.

"ಇನ್ನೂ ಮಲಗಿಕೊಂಡೇ ಇದ್ದೀರಲ್ಲ ಮಾಸ್ತರರೆ! ನಾನು ಎದ್ದು ಅರ್ಧ ತಾಸಾಯಿತು."

"ಬಹಳ ಚುರುಕು ಹುಡುಗಿಯವ್ವ ನೀನು. ನಿನ್ನಷ್ಟು ಚುರುಕುತನ ನನಗಿನ್ನೂ ಬಂದಿಲ್ಲ."

"ನೀವಷ್ಟೇ ಅಲ್ಲ ಮಾಸ್ತರರೆ, ನಮ್ಮಕ್ಕನೂ ಸಹ ಇನ್ನೂ ಎದ್ದಿಲ್ಲ. ಮಲಗಿಕೊಂಡೇ ಇದ್ದಾಳೆ".

"ಹೀಗೇನು ? ಹಾಗಾದರೆ ಬೇಗ ಏಳುವದರಲ್ಲಿ ನಮ್ಮಿಬ್ಬರನ್ನೂ ನೀನು ಸೋಲಿಸಿದ ಹಾಗಾಯಿತು."

"ನಾನು ಎಂದೂ ತಡ ಮಾಡಿ ಏಳುವದಿಲ್ಲ ಮಾಸ್ತರರೆ. ಏಳು ಗಂಟೆಯೊಳಗಾಗಿ ಎದ್ದುಬಿಟ್ಟಿರುತ್ತೇನೆ," ಎಂದು ಹೇಳಿ ಗೌರಿ ಕೆಳಗೆ ಬಿದ್ದಿದ್ದ ಹಾಳೆಗಳನ್ನು ನಿರುಕಿಸುತ್ತ—"ಏನು ಬರೆದಿದ್ದೀರಿ ಮಾಸ್ತರರೆ ?" ಎಂದಳು.

"ಓ, ಅದೇ! ಡೈರಿ ಬರೆದಿದ್ದೇನಮ್ಮ."

"ಡೈರಿ ಅಂದರೆ ?"

"ದಿನಚರಿ."

"ಎಂಥ ವಿಚಿತ್ರ ಹೆಸರು ಹೇಳ್ತೀರಲ್ಲ ಮಾಸ್ತರರೆ! ದಿನಚರಿ ಅಂದರೇನು ?"

"ದಿನವೂ ನಡೆದ ವಿಷಯ ಬರೆದಿಡುವದು."

"ಓಹ್ಹೊ. ಈಗ ತಿಳಿಯಿತು ಬಿಡಿರಿ. ದಿನಾಲೂ ಬರೆಯುತ್ತೀರಾ?"

"ಇಲ್ಲ. ಮನಸ್ಸು ಬಂದಾಗ ಎಂದಾದರೊಮ್ಮೆ ಬರೆದುಹಾಕುತ್ತೇನೆ."

"ನಾ ನೋಡಲಾ ಅದನ್ನು ಮಾಸ್ತರರೆ?" ಎನ್ನುತ್ತ ಗೌರಿ ಕುರ್ಚಿಯಿಂದ ಇಳಿಯತೊಡಗಿದಳು.

ಶಿವಮೂರ್ತಿ ಅವಸರದಿಂದ ಆ ಹಾಳೆಗಳನ್ನು ಒಂದುಗೂಡಿಸುತ್ತ "ನಿನಗೆ ಅದೆಲ್ಲ ತಿಳಿಯುವದಿಲ್ಲವಮ್ಮ," ಎಂದ.

ಗೌರಿಯ ಅಭಿಮಾನ ಕೆರಳಿದಂತಾಯಿತು. "ತಿಳಿಯುವದಿಲ್ಲ ಅಂದರೇನು ಮಾಸ್ತರರೆ! ಎಲ್ಲಾ ತಿಳೀತದೆ. ಕನ್ನಡದಲ್ಲಿ ಹೌದಲ್ಲೋ ನೀವು ಬರೆದಿರೋದು?"

"ಹೌದು. ಆದರೆ ನನ್ನ ಅಕ್ಷರ ಚೆನ್ನಾಗಿರುವದಿಲ್ಲ. ಎಲ್ಲಾ ಅಂಕುಡೊಂಕು. ನಾ ಬರೆದದ್ದು ನನಗೊಬ್ಬನಿಗೇ ತಿಳಿಯಬೇಕೇ ಹೊರತು ಇನ್ನಾರಿಗೂ ತಿಳಿಯಲಾರದು."

"ನೋಡಿಯಾದರೂ ನೋಡೋಣ ಕೊಡಿರಿ," ಎಂದು ಹಟದ ಧ್ವನಿಯಲ್ಲಿ ಕೇಳಿದಳು ಗೌರಿ.

ಆ ಮುದ್ದು ಹುಡುಗಿಗೇಕೆ ಅಸಮಾಧಾನವನ್ನುಂಟುಮಾಡಬೇಕು–ಎಂದುಕೊಂಡು ಶಿವಮೂರ್ತಿ ಮನಸ್ಸಿನಲ್ಲಿರದಿದ್ದರೂ ಹಾಳೆಗಳನ್ನು ಆಕೆಯ ಕೈಗೆ ಕೊಟ್ಟ. ಆತನೆಂದ ಹಾಗೆ ಆ ಬರವಣಿಗೆ ಬೇರಾರಿಗೂ ಅರ್ಥವಾಗುವಂತಿರಲಿಲ್ಲ. ಅಲ್ಲದೆ ಗೌರಿ ಇನ್ನೂ ಪುಟ್ಟ ಹುಡುಗಿ. ಕೈ ಬರಹದ ಅಕ್ಷರಗಳನ್ನು ಓದುವುದರಲ್ಲಿ ನುರಿತವಳಲ್ಲ. ತುಂಬ ಕಷ್ಟದಿಂದ ಅಲ್ಲಲ್ಲಿ ಒಂದೊಂದು ಶಬ್ದವನ್ನು ಅರ್ಥಮಾಡಿಕೊಂಡಳು. ಒಂದೆರಡು ವಾಕ್ಯಗಳನ್ನೂ ಸಲೀಲವಾಗಿ ಓದಿಕೊಂಡಳು.

"ಸರಸೂ ಎಂದು ಕರೆದೆ ನಾನಾಕೆಯನ್ನು, ಆಕೆ ಸುಮ್ಮನಿದ್ದಳು. ಆ ಮೌನಕ್ಕೆ ಏನೆಂದು ಅರ್ಥಮಾಡಿಕೊಳ್ಳಬೇಕು? ಸರಸೂ ನನ್ನನ್ನು ಪ್ರೀತಿಸುತ್ತಿರಬಹುದೇ?"

ಅಕ್ಕನ ಹೆಸರನ್ನು ದಿನಚರಿಯಲ್ಲಿ ಕಂಡಾಗ ಹೇಗೆ ಹೇಗೊ ಆಯಿತು

ಗೌರಿಗೆ. ಶಿವಮೂರ್ತಿ ಅಕ್ಕನನ್ನು ಸರಸೂ ಎಂದು ಕರೆದನಂತೆ. ಆಕೆ ಸುಮ್ಮನಿದ್ದಳಂತೆ. ಅಕ್ಕ ಶಿವಮೂರ್ತಿಯನ್ನು ಪ್ರೀತಿಸುತ್ತಿರುವಳೇ ?

ತನ್ನ ಲಂಗದ ಜೇಬಿನಲ್ಲಿದ್ದ ಆ ಕಾಗದದ ಚೂರುಗಳ ಕಡೆಗೆ ಗೌರಿಯು ಕೈ ಹೊರಳಿತು. ಅಕ್ಕ ಬರೆದಿದ್ದ ಆ ಶಬ್ದವೂ ಆಕೆಯ ನಾಲಗೆಯ ಮೇಲೆ ಮೂಡಿತು: ಪ್ರಾಣಪ್ರಿಯ ಮೂರ್ತಿ ! ಆ ಚೂರುಗಳನ್ನು ಹೊರಕ್ಕೆ ತೆಗೆದು ಶಿವಮೂರ್ತಿಗೆ ತೋರಿಸಿಬಿಡಲಾ ಎಂದುಕೊಂಡಳು. ಆದರೆ ಹಾಗೆ ತೋರಿಸುವುದು ಜಾಣತನದ ಕೆಲಸವಾಗಲಾರದು, ಇನ್ನೂ ಕೆಲದಿನ ಹೀಗೆಯೆ ಇವರ ಆಟವನ್ನೆಲ್ಲ ನಿರೀಕ್ಷಿಸುತ್ತಿದ್ದರೇ ಮೋಜು—ಎಂದು ಯೋಚಿಸಿ ಆ ವಿಚಾರವನ್ನು ಅಷ್ಟಕ್ಕೇ ತ್ಯಜಿಸಿದಳು.

"ಏನು ವಿಚಾರ ಮಾಡುತ್ತಿರುವೆ ಗೌರಾಂಬಿಕಾ ?" ಎಂದು ನಗುತ್ತ ಪ್ರಶ್ನಿಸಿದ ಶಿವಮೂರ್ತಿ.

"ಏನೂ ಇಲ್ಲ ಮಾಸ್ತರರೆ. ನೀವು ಹೇಳಿದ ಹಾಗೆ ನಿಮ್ಮ ಅಕ್ಷರವೊಂದೂ ತಿಳಿಯದಾಗಿದೆ ನನಗೆ," ಎಂದು ನುಡಿದು ಆ ಹಾಳೆಗಳನ್ನು ಕೆಳಕ್ಕಿರಿಸಿದಳು.

ಶಿವಮೂರ್ತಿ ಹಾಸುಗೆಯಿಂದ ಮೇಲಕ್ಕೇಳುತ್ತ—"ಈಗ ವೇಳೆಯೆಷ್ಟು ಗೌರಾ....ಅಂ....ಗೌರಾಂಬಿಕಾ ?" ಎಂದ.

"ಏಳೂವರೆಯಾಗಿರಬೇಕು."

"ಪಾಠದ ಸಮಯವಾಯಿತಲ್ಲ. ಮುಖ ತೊಳೆದುಕೊಂಡು ಬರ್ತೇನೆ."

"ಏನೂ ಅವಸರ ಬೇಡ ಮಾಸ್ತರರೆ. ಇವೊತ್ತು ಪಾಠವಿಲ್ಲ."

"ಏಕೆ ?"

"ಇಂದು ನಮ್ಮ ಮನೆಗೆ ಸ್ವಾಮಿಗಳು ಬರುವವರಿದ್ದಾರೆ—ಊಟಕ್ಕೆ. ಅದಕ್ಕೆ ಅಪ್ಪ ನಿಮಗೂ ಊಟಕ್ಕೆ ಬರಲು ಹೇಳಿದ್ದಾಳೆ."

"ಹೀಗೋ ? ಹನ್ನೊಂದು ಗಂಟೆಗೆ ನಾನು ಆಫೀಸಿಗೆ ಹೋಗಬೇಕಲ್ಲ ?"

"ಇವೊತ್ತು ರಜಾ ತೆಗೆದುಕೊಂಡುಬಿಟ್ಟರಾಯಿತಲ್ಲ ? ಸ್ವಾಮಿಗಳು, ಶಾಸ್ತ್ರಿಗಳು ಇನ್ನೂ ಕೆಲವರು ಬರುತ್ತಾರೆ. ನಮ್ಮ ಅಕ್ಕಾ ಅವರೂ ಬಂದಿ

ದ್ದಾರೆ. ಬಹಳ ಮಜಾ ಆದೀತು ಇನ್ನೊತ್ತು. ನೀವೂ ಇರಲೇಬೇಕು ಮಾಸ್ತರರೆ!"

"ಅದು ಸರಿಯವ್ವ. ಆದರೆ ರಜ ಸಿಕ್ಕಬೇಕಲ್ಲ ನಮ್ಮ ಆಫೀಸಿನಲ್ಲಿ?"

"ಒಂದು ದಿನವೂ ಸಿಗಲಾರದೇ?"

"ಊಹೂಂ. ನಮ್ಮ ಆಫೀಸು ಅಂದರೆ ಜೇಲು ಇದ್ದ ಹಾಗೆ. ಹನ್ನೊಂದ ರಿಂದ ಐದರವರೆಗೆ ದಿನವೂ ಅಲ್ಲಿರಲೇಬೇಕು ನಾವು."

"ಜೇಲು? ಜೇಲು ನೋಡಿದ್ದೀರಾ ನೀವು ಮಾಸ್ತರರೆ?"

"ನೋಡಿದ್ದೇನವ್ವ. ಆರು ತಿಂಗಳವರೆಗೆ ಅಲ್ಲಿಯೆ ಇದ್ದೆ."

"ಯಾಕೆ ಮಾಸ್ತರರೆ, ನಿಮ್ಮನ್ನೇಕೆ ಹಾಕಿದ್ದರು ಜೇಲಿಗೆ? ಏನು ಮಾಡಿದ್ದಿರಿ?"

"ಏನೂ ಇಲ್ಲವ್ವ. ಎಷ್ಟೋ ಜನರನ್ನು ಹಾಕಿದ್ದರಲ್ಲ ಚಳವಳಿಯ ಕಾಲಕ್ಕೆ. ಆಗ ನನ್ನನ್ನೂ ಹಾಕಿದ್ದರು".

"ಜೇಲು ಅಂದರೆ ಹ್ಯಾಗಿರುತ್ತದೆ ಮಾಸ್ತರರೆ?"

"ನಮ್ಮ ಆಫೀಸನ್ನೊಂದು ದಿನ ತೋರಿಸುತ್ತೇನೆ ನಿನಗೆ. ಅವನ್ನು ನೋಡಿದರೆ ಜೇಲಿನ ಕಲ್ಪನೆ ಬಂದೀತು."

"ಆಫೀಸಿನಲ್ಲಿ ನೀವು ಏನು ಮಾಡುತ್ತೀರಿ ಮಾಸ್ತರರೆ?"

"ಕತ್ತೆ ಚಾಕರಿ ಕಣವ್ವ."

"ಕತ್ತೆ ಚಾಕರಿ?"

"ಅಂದರೆ ಕತ್ತೆಯ ಹಾಗೆ ದುಡಿಯೋದು. ಮೇಲಿನ ಅಧಿಕಾರಿಗಳು ಹೇಳಿದ ಹಾಗೆ ಕೆಲಸ ಮಾಡೋದು."

"ಭಾರ ಹೊರಬೇಕಾಗುವುದೇನು ಮಾಸ್ತರರೇ?"

"ಬೆನ್ನ ಮೇಲೇನೂ ಹೊರಬೇಕಾಗುವದಿಲ್ಲವ್ವ. ಮೆದುಳಿನ ಮೇಲೆ ಹೊರಬೇಕಾಗುತ್ತೆ. ದೊಡ್ಡ ಭಾರ....".

ಗೌರಿಗೆ ಯಾವುದೂ ಅರ್ಥವಾಗಲಿಲ್ಲ. ಆಕೆ ಎದುರಿನ ಗೋಡೆಯ ಮೇಲಿದ್ದ ಚಿತ್ರವೊಂದನ್ನು ನಿಟ್ಟಿಸುತ್ತ ಕೇಳಿದಳು: "ಇದಾರ ಚಿತ್ರ ಮಾಸ್ತ ರರೆ?"

"ಅದೇ? ಸ್ವಾಮಿ ವಿವೇಕಾನಂದರದು".

ಗೌರಿ ಮೂಗಿನ ಮೇಲೆ ಬೆರಳಿಟ್ಟುಕೊಂಡು—"ಯಾವೂರ ಸ್ವಾಮಿಗಳಿವರು ಮಾಸ್ತರರೆ ?" ಎಂದಳು.

"ಆ ಊರು ಈ ಊರು ಅಂತ ಇಲ್ಲವ್ವ ಇವರಿಗೆ. ಇಡೀ ಹಿಂದುಸ್ಥಾನದ ಸ್ವಾಮಿಗಳಿವರು."

ಗೌರಿಗೆ ಈ ಮಾತು ಅರ್ಥವಾಗುವಂತಿಲ್ಲ. ಆಕೆ ಬೆರಗುಗೊಂಡ ಧ್ವನಿಯಲ್ಲಿ ಕೇಳಿದಳು. "ಈಗ ಎಲ್ಲಿ ಇರುತ್ತಾರೆ ಈ ಸ್ವಾಮಿಗಳು ? ಯಾವ ಮಠದಲ್ಲಿ ?"

"ಈಗ ಅವರು ಬದುಕಿಲ್ಲ ಗೌರಾಂಬಿಕಾ. ತೀರಿಹೋಗಿ ಬಹುಕಾಲವಾಯಿತು."

ಒಂದು ಕ್ಷಣ ಸುಮ್ಮನಿದ್ದು ಗೌರಿ ಮತ್ತೆ ಪ್ರಶ್ನಿಸಿದಳು :

"ಅವರ ಫೋಟೋ ಇಲ್ಲೇಕೆ ಹಾಕಿದ್ದೀರಿ ಮಾಸ್ತರರೆ ? ಅವರು ನಿಮಗೇನಾಗಬೇಕು ? ಗುರುಗಳೋ ಏನು ?"

"ಒಂದು ಕಾಲದಲ್ಲಿ ಗುರುಗಳಾಗಿದ್ದರವ್ವ. ಈಗ...."ಎಂದು ಆತ ನಡುವೆಯೆ ಮಾತು ನಿಲ್ಲಿಸಿದ.

"ಈಗ ಯಾರು ನಿಮ್ಮ ಗುರುಗಳು ಮಾಸ್ತರರೆ ? ನಮ್ಮ ಸ್ವಾಮಿಗಳೋ ಏನು ?"

"ಯಾವ ಸ್ವಾಮಿಗಳವ್ವ ?"

"ಇಂದು ನಮ್ಮ ಮನೆಗೆ ಊಟಕ್ಕೆ ಬರುತ್ತಾರಲ್ಲ—ಅವರೇ. ರೇಶಿಮೆಯ ಅಂಗಿ ಹಾಕಿ ಜರತಾರಿ ರುಮಾಲು ಸುತ್ತುತಾರಲ್ಲ ? ಅವರನ್ನು ನೋಡಿಲ್ಲವೆ ನೀವು ?"

"ಇಲ್ಲವ್ವ. ಮೊದಲು ಇದ್ದರಲ್ಲ—ಆ ಸ್ವಾಮಿಗಳನ್ನು ನೋಡಿದ್ದೆ."

"ಯಾರು ? ಆ ಮುದುಕ ಸ್ವಾಮಿಗಳೇ ?"

"ಹೌದು. ಅವರೇ. ಬೈರಾಗಿ ಸ್ವಾಮಿ ಅಂತಿದ್ದರಲ್ಲ ಅವರಿಗೆ".

"ಅವರನ್ನೇಕೆ ಇಲ್ಲಿಂದ ಓಡಿಸಿದರು ಮಾಸ್ತರರೇ ?"

"ಯಾಕೋ ಯಾರಿಗೆ ಗೊತ್ತವ್ವ. ಪ್ರಪಂಚದ ರೀತಿ ಅಂದರೆ ಹೀಗೇ. ಎಲ್ಲಾ ವಿಚಿತ್ರ."

"ಅವರೀಗ ಎಲ್ಲಿದ್ದಾರೆ ಮಾಸ್ತರರೆ ?"

"ಎಲ್ಲೋ ಒಂದು ಹಳ್ಳಿಯಲ್ಲಿ ಆಶ್ರಮ ಕಟ್ಟಿಕೊಂಡು ಇರುವರಂತೆ."

"ಆಶ್ರಮ ?"

"ಪೂರ್ವಕಾಲದಲ್ಲಿ ಋಷಿಗಳು ಆಶ್ರಮ ಕಟ್ಟಿಕೊಂಡು ಇರುತ್ತಿದ್ದರಂತೆ. ಪುರಾಣಗಳಲ್ಲಿ ಕೇಳಿಲ್ಲವೆ ನೀನು ? ಅಂಥ ಆಶ್ರಮ."

"ಪಾಪ! ಎಷ್ಟು ಕಷ್ಟಪಡುತ್ತಿರುವರೊ ಆ ಮುದುಕ ಸ್ವಾಮಿ !"

"ಕಷ್ಟವೇನು ಬಂತು ಬಿಡಮ್ಮ. ನಿಜ ಹೇಳಬೇಕಾದರೆ ಇಲ್ಲೇ ತುಂಬ ತೊಂದರೆಯಿತ್ತು ಅವರಿಗೆ. ಪಂಜರದಲ್ಲಿದ್ದ ಹಕ್ಕಿಯ ಹಾಗೆ...."ಎಂದು ಆತ ಹೇಳುತ್ತಿರುವಾಗ ಹೊರಗಿನಿಂದ ಕೂಗು ಕೇಳಿಸಿತು. "ಗೌರೀ, ಏ ಗೌರಾ....".

"ಅವ್ವ ಕರೆಯುತ್ತಿದಾಳೆ. ನಾ ಹೋಗುತ್ತೇನೆ ಮಾಸ್ತರರೆ. ನೀವು ಊಟಕ್ಕೆ ಬರಲು ಮರೀಬಾರದು ಹಂ !" ಎಂದು ನುಡಿದು ಗೌರಿ ಹೊರಕ್ಕೆ ಧಾವಿಸಿದಳು.

ಮನೆಯ ಬಾಗಿಲಲ್ಲಿ ನಿಂತುಕೊಂಡು ನಾಗಮ್ಮ ಮಗಳನ್ನು ಕೂಗುತ್ತಿದ್ದಳು. ಗೌರಿಯನ್ನು ಕಾಣುತ್ತಲೂ ಹುಸಿಮುನಿಸಿನಿಂದ—"ಏನೇ ಮಾತಿನ ಮಲ್ಲಿ, ಇಷ್ಟೊತ್ತು ಏನು ನಡಸಿದ್ದೆ ಅಲ್ಲಿ? ಹರಟೆ ಹೊಡೀತಾ ಕೂತಿದ್ದೆಯಾ?" ಎಂದಳು.

"ಊಟಕ್ಕೆ ಹೇಳಿ ಬಾ ಅಂದಿದ್ದೆಯಲ್ಲವ್ವ ? ರಜ ಸಿಗುವದಿಲ್ಲ ಅಂದರು. ಹ್ಯಾಗೆ ಸಿಗುವದಿಲ್ಲ—ತಗೊಂಡು ಬರ್‍ರಿ. ಬರಲೇಬೇಕು ಅಂತ ಹೇಳಿ ಬಂದೆ," ಎನ್ನುತ್ತ ಗೌರಿ ಒಳಕ್ಕೋಡಿದಳು.

ಪಡಸಾಲೆಯಲ್ಲಿನ ತೂಗುಮಣೆಯ ಮೇಲೆ ಕುಳಿತು ಗದಿಗೆಮ್ಮ ಮೆಲ್ಲನೆ ತೂಗಿಕೊಳ್ಳುತ್ತಿದ್ದಳು. ಗೌರಿಯನ್ನು ಕಂಡು ನಗುತ್ತಾ ಕೇಳಿದಳು: "ಕರೆದು ಕೊಂಡು ಬಂದೆಯಾ ನಿಮ್ಮ ಸಿಟೀಲಿನ ಮಾಸ್ತರರನ್ನು ?"

"ರಜಾ ತಗೊಂಡು ಬರ್‍ತಾರಂತೆ ಅಕ್ಕಾವರೆ !" ಎಂದು ಉತ್ತರವಿತ್ತು ಗೌರಿ ಅಡುಗೆಯ ಮನೆಗೆ ನುಗ್ಗಿದಳು.

ಬಚ್ಚಲು ಮನೆಯಲ್ಲಿ ಸರಸು ಸ್ನಾನ ಮಾಡುತ್ತಲಿದ್ದಳು. ಗೌರಿ ಅಲ್ಲಿಗೇ ನುಗ್ಗಿ ಲಂಗವನ್ನು ಕಳಚಿ ಬಿಸುಟು ತಾನೂ ಸ್ನಾನಕ್ಕೆ ನಿಂತಳು.

ಬಿಸಿ ಬಿಸಿ ನೀರನ್ನು ಮೈಮೇಲೆ ಸುರಿದುಕೊಳ್ಳುತ್ತ ಗೌರಿ ತುಂಟ ನಗೆ

ಯೊಂದಿಗೆ ತನ್ನಷ್ಟಕ್ಕೆ ತಾನೆ ಗುಣುಗುಣಿಸತೊಡಗಿದಳು: "ಗುಟ್ಟು ಸಿಕ್ಕಿತರೀ! ಒಂದು ಗುಟ್ಟು ಸಿಕ್ಕಿತರೀ!"

ಮೊದಲು ಮೊದಲು ಸರಸು ಆಕೆಯ ಕಡೆಗೆ ಲಕ್ಷ್ಯ ಹೊರಳಿಸಲಿಲ್ಲ. ಗೌರಿಯ ತುಂಟತನ ಆಕೆಗೆ ಹೊಸಸೇನೂ ಅಲ್ಲ. ದಿನವೂ ಇಂಥದೇನಾದರೂ ಒಂದು ಇದ್ದೇ ಇರುತ್ತಿತ್ತು. ಅಂತೆಯೆ ಗೌರಿಯ ಹಾಡಿನಲ್ಲಿ ವಿಶೇಷ ಅರ್ಥವೇನಾದರೂ ಇದ್ದೀತೆಂದು ಆಕೆಗೆನ್ನಿಸಲಿಲ್ಲ. ಆದರೆ ಗೌರಿ ಮತ್ತೆ ಮತ್ತೆ ತನ್ನ ಕಡೆಗೆ ಓರೆನೋಟ ಬೀರಿ ಕಳ್ಳಧ್ವನಿಯಲ್ಲಿ ಅದೇ ಪಲ್ಲವಿಯನ್ನೆ ಮತ್ತೆ ಮತ್ತೆ ಹಾಡಿದಾಗ ಆಕೆಯ ಮನಸ್ಸಿನಲ್ಲಿ ಏನೋ ಇರಬೇಕೆಂಬ ಸಂದೇಹ ಬಂದಿತು ಸರಸುವಿಗೆ. ಕೊಂಚ ಭೀತಿಯಿಂದಲೇ ಆಕೆ ತಂಗಿಯನ್ನು ದಿಟ್ಟಿಸತೊಡಗಿದಳು.

ಅಕ್ಕನ ಮುಖಕ್ಕೆ ನೀರು ಸಿಂಪಡಿಸುತ್ತ ಗೌರಿ ಬಚ್ಚಲಿನಲ್ಲಿ ಕುಣಿಯುತ್ತ ರಾಗ ತೆಗೆಯತೊಡಗಿದಳು:

"ಗುಟ್ಟು ಸಿಕ್ಕಿತರೀ! ಅಕ್ಕನ ಗುಟ್ಟು ಸಿಕ್ಕಿತರೀ!"

ಈಗ ಮಾತ್ರ ಸರಸುವಿಗೆ ಕೈ ಕಾಲೇ ಹೋದಂತಾಯಿತು. ಕಣ್ಣುಗಳನ್ನುಬ್ಬಿಸಿ, ದೃಷ್ಟಿಯನ್ನು ತೀಕ್ಷ್ಣವಾಗಿಸಿ ಗೌರಿಯ ಕೆನ್ನೆಗಳನ್ನು ಚಿವುಟುತ್ತ ಗದರಿಸಿದಳು.

"ಏನು ಗುಟ್ಟೇ ಅದು ಬಜಾರಿ? ಯಾಕೆ ಶಂಖ ಹೊಡೆಯುತ್ತೀ? ಅಪ್ಪನಿಗೆ ಕೇಳಿಸೀತು!"

ಗೌರಿ ಆ ಮಾತಿಗೆ ಉತ್ತರವೀಯುವ ಗೊಡವೆಗೆ ಹೋಗದೆ ಮತ್ತೆ ಅದೇ ಪಲ್ಲವಿಯನ್ನು ಹೇಳುತ್ತ ಕುಣಿಯತೊಡಗಿದಳು. ದಮ್ಮಯ್ಯ ಎಂದು ಬಿನ್ನವಿಸಿಕೊಂಡು ಆ ಹಾಡು ನಿಲ್ಲಿಸಬೇಕಾದರೆ ಸಾಕುಸಾಕಾಗಿಹೋಯಿತು ಸರಸೂಗೆ.

ಸ್ನಾನ ಮುಗಿಸಿ ಅಕ್ಕತಂಗಿಯರಿಬ್ಬರೂ ಅಡುಗೆಮನೆಗೆ ಬಂದು ತಿಂಡಿ ತಿನ್ನತೊಡಗಿದರು. ಅಷ್ಟರಲ್ಲಿ ಗದಿಗೆಮ್ಮನೂ ಒಳಗೆ ಬಂದು ದೊಡ್ಡ ಮಣೆಯೊಂದರ ಮೇಲೆ ಕುಳಿತುಕೊಂಡಿದ್ದಳು.

ಗದಿಗೆಮ್ಮನಿಗೆ ಮೂವತ್ತೈದು ನಲವತ್ತು ವರ್ಷ ವಯಸ್ಸಾಗಿರಬಹುದು. ಎಣ್ಣೆಗೆಂಪು ಬಣ್ಣದ ಕೊಂಚ ಸ್ಥೂಲವಾದ ಆ ದೇಹದಲ್ಲಿ ಸೌಂದ

ರ್ಯದ ಲಕ್ಷಣಗಳಾವುವೂ ಕಾಣಿಸುತ್ತಿರಲಿಲ್ಲವಾದರೂ ಆಕೆಯ ಬೆಡಗು ಬಿನ್ನಾಣಗಳು ಆ ಕೊರತೆಯನ್ನು ತುಂಬಿಕೊಡುವಂತಿದ್ದುವು. ಗದಿಗೆಮ್ಮ ಯಾವಾಗಲೂ ಉಡುವುದು ರೇಶಿಮೆಯ ಸೀರೆಗಳನ್ನೆ. ಸಾದಾ ವಾಯಲ್ ಸೀರೆಗಳನ್ನಾಕೆ ಉಟ್ಟುದನ್ನು ಆ ಊರಿನಲ್ಲಿ ಯಾರೂ ನೋಡಿರಲಿಲ್ಲ. ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ಗದಿಗೆಮ್ಮ ಆ ಊರಿನಲ್ಲಿಯೆ ಹದಿನೈದು ವರ್ಷಗಳನ್ನು ಕಳೆದಿದ್ದಳಾದುದರಿಂದ ಊರಿನವರಿಗೆಲ್ಲ ಪರಿಚಿತಳಾಗಿದ್ದಳು. ಒಂದಿಲ್ಲೊಂದು ಕಾರಣದಿಂದ ಎಲ್ಲರ ಮನೆಗಳಿಗೂ ಆಕೆ ಹೋಗಿ ಬರುತ್ತಿದ್ದಳು. ನಾಲ್ಕೈದು ವರ್ಷಗಳಿಗೆ ಹಿಂದೆ ಆಕೆಯ ಉತ್ಸಾಹದಿಂದಾಗಿಯೆ ಅಲ್ಲಿ "ಅಕ್ಕನ ಬಳಗ" ಸ್ಥಾಪಿತವಾಗಿದ್ದಿತು. ಅಂದಿನಿಂದ ಇಂದಿನವರೆಗೆ ಆಕೆಯೇ ಅದರ ಮುಖ್ಯ ಕಾರ್ಯದರ್ಶಿನಿಯಾಗಿ ಕೆಲಸ ಮಾಡುತ್ತ ಬಂದಿದ್ದಳು. ವಾರಕ್ಕೊಂದು ಬಾರಿ, ಪ್ರತಿ ಸೋಮವಾರ ಸಾಯಂಕಾಲ ಮಠದಲ್ಲಿ ಬಳಗದ ಸಭೆ ಸೇರಿ ಭಾಷಣಗಳು ಜರಗುತ್ತಿದ್ದುವು. ವರ್ಷಕ್ಕೊಂದು ಸಲ "ಅಕ್ಕನ ಜಯಂತಿ"ಯೂ ತುಂಬ ವೈಭವದಿಂದ ಆಚರಿಸಲ್ಪಡುತ್ತಿದ್ದಿತು. ಬಸವ ಜಯಂತಿ ಉತ್ಸವದಲ್ಲೂ ಆಕೆ ಭಾಗವಹಿಸುತ್ತಿದ್ದಳು. ಅಕ್ಕನ ಹಾಗು ಬಸವಣ್ಣನ ವಚನಗಳನ್ನು ತನ್ನ ವಿದ್ಯಾರ್ಥಿನಿಯರಿಗೆ ಕಂಠಪಾಠ ಮಾಡಿಸುವುದರಲ್ಲೂ, ಅವರ ಜೀವನವನ್ನು ಕುರಿತು ಭಾಷಣ ಮಾಡಲು ಕಲಿಸುವುದರಲ್ಲೂ ಆಕೆ ತುಂಬ ಉತ್ಸಾಹದಿಂದ ತೊಡಗಿರುತ್ತಿದ್ದಳು. ಕರ್ನಾಟಕಕ್ಕೆಲ್ಲ ತಮ್ಮ ಊರಿನ ಅಕ್ಕನ ಬಳಗ ಆದರ್ಶವಾಗಬೇಕು, ಮಾರ್ಗದರ್ಶಕವಾಗಬೇಕು ಎಂಬ ಮಹತ್ವಾಕಾಂಕ್ಷೆ ಆಕೆಯದು. ಬಳಗಕ್ಕೊಂದು ಸ್ವಂತ ಕಟ್ಟಡ ಕಟ್ಟಿಸಲು ನಿಧಿಯೊಂದನ್ನು ಶೇಖರಿಸುವ ಕಾರ್ಯಕ್ಕೂ ಆಕೆ ಕೈಹಾಕಿದ್ದಳು. ಆಕೆಯ ಉತ್ಸಾಹ, ಸತತ ದುಡಿತಗಳನ್ನು ಕಂಡು ಎಲ್ಲರೂ ಬೆರಗಾಗುವವರೇ. "ಗದಿಗೆಮ್ಮ ಅಂದರೆ ನಮ್ಮೂರಿನ ಸ್ತ್ರೀರತ್ನ ಇದ್ದ ಹಾಗೆ. ಅಕ್ಕನ ಬಳಗಕ್ಕಂತೂ ಆಕೆಯೇ ಪ್ರಾಣಸ್ವರೂಪಿ," ಎಂದು ಹೊಗಳುತ್ತಿದ್ದಳು ನಾಗಮ್ಮ.

"ಅಕ್ಕನ ಬಳಗ"ದ ಕಾರ್ಯದರ್ಶಿನಿಯಾದರೂ, ಗದಿಗೆಮ್ಮನ ಆಡಂಬರಕ್ಕೇನೂ ಕೊರತೆಯಿರಲಿಲ್ಲ. ಆಕೆಯ ರೇಶಿಮೆಯ ಸೀರೆ, ಜಾರ್ಜೆಟ್, ಬಗೆಬಗೆಯ ಫ್ಯಾಶನ್ನಿನ ರವಕೆಗಳನ್ನು ಕಂಡು ಊರಿನ ಹೆಣ್ಣುಮಕ್ಕಳಲ್ಲಿ ಅನೇ

ಕರು ಅಸೂಯೆಪಟ್ಟುಕೊಳ್ಳುತ್ತಿದ್ದುದೂ ಉಂಟು. "ಪ್ರಾಥಮಿಕ ಸಾಲೆಯ ಶಿಕ್ಷಕಿಗೆ ಬರುವ ಸಂಬಳವೆಷ್ಟು ? ಈ ಅಲ್ಪ ಸಂಬಳದಲ್ಲಿ ಸಂಸಾರ ಸಾಗಿಸು ವದಲ್ಲದೆ ಈಕೆ ಇಷ್ಟೆಲ್ಲ ಬಟ್ಟೆಬರೆ ಹೇಗೆ ಕೊಳ್ಳುತ್ತಾಳೆ ?" ಎಂದು ಪ್ರಶ್ನಿಸು ವವರಿಗೂ ಕೊರತೆಯಿರಲಿಲ್ಲ. ಆಕೆಯ ಶೀಲವನ್ನು ಶಂಕಿಸಿ ಪಿಸುದನಿ ಯಲ್ಲಿ ಮಾತನಾಡಿಕೊಳ್ಳುವವರೂ ಅನೇಕರಿದ್ದರು. ಗದಿಗೆಮ್ಮನಿಗೆ ಹೆಸರಿಗೆ ಮಾತ್ರ ಒಬ್ಬ ಗಂಡನಿದ್ದನಾದರೂ ಆತ ತೀರ ಸಾಧು ಪ್ರಾಣಿ. ಹೆಂಡತಿ ಉಪಾಧ್ಯಾಯಿನಿಯ ಕೆಲಸ ಮಾಡುತ್ತಿದ್ದಳಾದುದರಿಂದ ಮನೆಗೆಲಸವೆಲ್ಲ ಆತನ ಪಾಲಿಗೆ ಬಂದಿದ್ದಿತು. ಅದೇ ಆತನ ಉದ್ಯೋಗವೂ ಆಗಿದ್ದಿತು. ಬೇರೆಯವರ ಮನೆಯಲ್ಲಿ ಹೆಂಡತಿಯಾದವಳು ದುಡಿಯುವ ಹಾಗೆ ಆಕೆಯ ಮನೆಯಲ್ಲಿ ಆತ ಬೆಳಗಿನಿಂದ ರಾತ್ರಿಯವರೆಗೆ ದುಡಿಯುತ್ತಿದ್ದ. ಗದಿಗೆಮ್ಮ ನಿಗೆ ಮಕ್ಕಳಾಗಿರಲಿಲ್ಲವಾದುದರಿಂದ ಅವುಗಳನ್ನು ನೋಡಿಕೊಳ್ಳುವ ತಾಪ ತ್ರಯ ಮಾತ್ರ ಆತನಿಗೊದಗಿರಲಿಲ್ಲ, ಅಷ್ಟೆ.

ಹೆಂಡತಿಯ ಹಾಗಿದ್ದ ಇಂಥ ಗಂಡನನ್ನು ಮದುವೆಯಾದ ಗದಿಗೆಮ್ಮ ಊರಿನ ಶ್ರೀಮಂತರನೇಕರೊಂದಿಗೆ ಗುಪ್ತ ಸಂಬಂಧವನ್ನಿಟ್ಟುಕೊಂಡಿರುವ ಳೆಂದೂ, ಅದರಿಂದಾಗಿ ಸಾಕಷ್ಟು ಹಣ ಮಾಡಿಕೊಂಡಿರುವಳೆಂದೂ, ಆಕೆಯ ರೇಶಿಮೆಯ ಸೀರೆ, ಜಾರ್ಜೆಟ್, ಬಂಗಾರದ ಬಳೆ, ಚಿನ್ನದ ಹಾರಗಳ ವೈಭವ ಗಳಿಗೆ ಅದೇ ಕಾರಣವೆಂದೂ ಜನ ಆಡಿಕೊಳ್ಳುತ್ತಿದ್ದರು. ನಗರ ಸಭಾಧ್ಯಕ್ಷರೂ ಪ್ರಮುಖ ವರ್ತಕರೂ ಆದ ಮಲ್ಲಪ್ಪಸೆಟ್ಟರಿಗಂತೂ ಆಕೆ ಬಲು ಪ್ರೀತಿಪಾತ್ರ ಳೆಂದು ಊರಲ್ಲೆಲ್ಲ ವದಂತಿ ಹರಡಿದ್ದಿತು. ಸೆಟ್ಟರ ಚಿಕ್ಕಮಕ್ಕಳಿಗೆ ಪಾಠ ಹೇಳಲು ಸಾಯಂಕಾಲದ ಸಮಯದಲ್ಲಿ ಅವರ ಮನೆಗೆ ಹೋಗುತ್ತಿದ್ದುದೂ ಇಂಥ ವದಂತಿಯೇಳಲು ಕಾರಣವಾಗಿರಬಹುದು.

ತನ್ನ ಬೆನ್ನ ಹಿಂದೆ ಜನ ಈ ರೀತಿ ಆಡಿಕೊಳ್ಳುವರೆಂಬುದು ಗದಿಗೆಮ್ಮ ನಿಗೆ ಚೆನ್ನಾಗಿಯೆ ತಿಳಿದಿದ್ದಿತು. ಅಂಥ ಮಾತುಗಳನ್ನಾಕೆ ಎಂದೂ ಗಮನಿಸಿದ ವಳಲ್ಲ. "ಸಂತೆಯಲೊಂದು ಮನೆಯ ಮಾಡಿ...." ಎಂದು ಹೇಳಿಕೊಂಡು ತನ್ನಷ್ಟಕ್ಕೆ ತಾನು ತನ್ನ ಕೆಲಸದಲ್ಲಿ ತೊಡಗಿರುವಳು. ಆಕೆ ಎದುರಿಗಿಲ್ಲದಾಗ ಆಕೆಯ ಬಗೆಗೆ ನಾನಾ ರೀತಿಯಾಗಿ ಆಡಿಕೊಳ್ಳುತ್ತಿದ್ದ ಸ್ತ್ರೀಯರೇ ಆಕೆ ಎದುರಿಗೆ ಬಂದಾಗ ತುಂಬ ಗೌರವದಿಂದ ಮಾತನಾಡುತ್ತಿದ್ದರು. ಆಕೆಯ

"ಅಕ್ಕನ ಬಳಗ"ಕ್ಕೆ ಸದಸ್ಯರಾಗುವುದೂ ಅಲ್ಲದೆ ಸಭೆಗಳಿಗೂ ಬರುತ್ತಿದ್ದರು. ಆಕೆಯ ಭಾಷಣವನ್ನಾಲಿಸಿ—"ಎಷ್ಟು ಚೆನ್ನಾಗಿ ಮಾತನಾಡುತ್ತಾಳಲ್ಲಪ್ಪ !" ಎಂದು ಮೆಚ್ಚಿಕೊಳ್ಳುತ್ತಿದ್ದರು. ಸಭೆ ಮುಗಿದ ಮೇಲೆ ಜೊಳ್ಳು ಹರಟೆಗಾರಂಭವಾದಾಗ ಮತ್ತೆ ಮೊದಲಿನ ಮಾತುಗಳೇ ಹೊರಡುತ್ತಿದ್ದುವು. "ಮಾತೇನೋ ಕಲಿತಿದಾಳೆ ಬಜಾರಿ. ಅಂಥ ನಡತೆಗೆ ಇಂಥ ಮಾತೇ ಸರಿ!" ಎನ್ನುತ್ತಿದ್ದರು. ಹೊಗಳಿಕೆ ತೆಗಳಿಕೆ ಯಾವುದಕ್ಕೂ ಹಿಗ್ಗದೆ ತಗ್ಗದೆ ತನ್ನ ದಾರಿಯಲ್ಲಿ ತಾನು ಹೋಗುತ್ತಿದ್ದಳು ಗದಿಗೆಮ್ಮ.

ನಾಗಮ್ಮನಿಗೂ ಆಕೆಗೂ ಬಹಳ ಸ್ನೇಹ. ಯಾವ ಕೆಲಸಕ್ಕೆ ಕೈಹಾಕಬೇಕಾದರೂ ಸರಿಯೆ, ಗದಿಗೆಮ್ಮ ಮೊದಲು ನಾಗಮ್ಮನ ಸಲಹೆ ಕೇಳದಿರುತ್ತಿರಲಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಅಕ್ಕನ ಬಳಗಕ್ಕೆ ನಾಗಮ್ಮನನ್ನೆ ಅಧ್ಯಕ್ಷಳನ್ನಾಗಿ ಮಾಡಿದ್ದುದೂ ಅಲ್ಲದೆ, ಆಕೆಗೆ ಕೊಂಚವೂ ಶ್ರಮವಾಗದಂತೆ ತಾನೇ ಎಲ್ಲ ಕೆಲಸ ಕಾರ್ಯಗಳನ್ನೂ ನಿರ್ವಹಿಸುತ್ತ ಬಂದಿದ್ದಳು. ಸಭೆಯಲ್ಲಿ ಕುರ್ಚಿಯ ಮೇಲೆ ಕೂತಿರುವಾಕೆ ಮಾತ್ರ ನಾಗಮ್ಮ. ಊರಿನ ಸ್ತ್ರೀಯರ ದೃಷ್ಟಿಯಲ್ಲಿ ಆಕೆಯ ಮಾನ ಮರ್ಯಾದೆ ದೊಡ್ಡದಾಗಿದ್ದಿತು. ಸತತವಾಗಿ ನಾಲ್ಕು ವರ್ಷಗಳ ವರೆಗೆ ಬಳಗದ ಅಧ್ಯಕ್ಷಳಾಗಬೇಕಾದರೆ ಅಂಥ ಯೋಗ್ಯತೆಯಿರಲೇಬೇಕಲ್ಲವೆ? ನಾಗಮ್ಮನಿಗೆ ಆ ಯೋಗ್ಯತೆಯಿದ್ದಿತೊ ಇಲ್ಲವೊ ಎಂಬುದು ಬೇರೆ ವಿಷಯ. ಆದರೆ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧೆಯೆ ನಡೆಯದಂತೆ, ಪ್ರತಿವರ್ಷವೂ ಸರ್ವಾನುಮತದಿಂದ ನಾಗಮ್ಮನೇ ಅಧ್ಯಕ್ಷಳಾಗಿ ಆರಿಸಲ್ಪಡುವಂತೆ ನೋಡಿಕೊಂಡು ಬರುತ್ತಿದ್ದವಳು ಗದಿಗೆಮ್ಮ. ಅಂತೆಯೆ ಆಕೆಯೆಂದರೆ ನಾಗಮ್ಮನಿಗೆ ಪ್ರಾಣ. ಮನೆಯಲ್ಲಿ ಸಿಹಿ ಅಡುಗೆಯಾದಾಗಲೆಲ್ಲ ಗದಿಗೆಮ್ಮನಿಗೆ ಕರೆ ಹೋಗಲೇಬೇಕು. ಹಬ್ಬ, ಹುಣ್ಣಿಮೆ, ಅಮಾವಾಸ್ಯೆ ಯಾವುದಿದ್ದರೂ ಸರಿಯೆ, ಗದಿಗೆಮ್ಮ ಊಟಕ್ಕೆ ಬರಲೇಬೇಕು. ಸ್ವಾಮಿಗಳೋ ಜಗದ್ಗುರುಗಳೋ ಆಗಮಿಸುವವರಿದ್ದರಂತೂ ಗದಿಗೆಮ್ಮ ಬೆಳಗಿನಲ್ಲೇ ಅಡುಗೆಯಲ್ಲೂ ನೆರವಾಗುತ್ತಾಳೆ.

ಅಂತೆಯೆ, ಈ ದಿನವೂ ಆಕೆ ಬೆಳಗಿನಲ್ಲೇ ಬಂದಿದ್ದಾಳೆ.

ಆಲೂಗಡ್ಡೆ ಹೆರಚುತ್ತಲಿದ್ದ ಹಾಗೆ ಗದಿಗೆಮ್ಮ ಸರಸುವಿನ ಕಡೆಗೆ

ತಿರುಗಿ—"ಏನು ಸರಸೂ, ಈಚೆಗೆ ಕಾಣಿಸುತ್ತಲೇ ಇಲ್ಲವಲ್ಲ ನೀನು?" ಎಂದಳು.

ಮೊದಲಿನಿಂದಲೂ ಸರಸುವಿಗೆ ಗದಿಗೆಮ್ಮ ಎಂದರೆ ಅಷ್ಟಕ್ಕಷ್ಟೆ. ಆಕೆಯ ಬಗೆಗೆ ಒಂದು ಬಗೆಯ ವಿರೋಧ ಭಾವನೆಯೆ ಬೇರೂರಿದ್ದಿತು ಸರಸುವಿನ ಮನಸ್ಸಿನಲ್ಲಿ. ಗದಿಗೆಮ್ಮನ ಕೈಯಲ್ಲಿಯೆ ಆಕೆ ಪಾಠ ಕಲಿತು ಅದೇ ಸಾಲೆಯಿಂದ ಮುಲ್ಕೀ ಪರೀಕ್ಷೆ ಕೊಟ್ಟದ್ದಳಾದರೂ ಶಿಕ್ಷಕಿಯರ ಬಗೆಗೆ ವಿದ್ಯಾರ್ಥಿನಿಯಲ್ಲಿರುವ ಪೂಜ್ಯ ಭಾವನೆಯ ಲವಲೇಶವೂ ಸರಸುವಿನಲ್ಲಿರಲಿಲ್ಲ. ಗದಿಗೆಮ್ಮನ ಉಡುಗೆ ತೊಡುಗೆಗಳ ಆಡಂಬರವನ್ನು, ನಡು ವಯಸ್ಸಿನಲ್ಲಿಯೂ ಆಕೆ ವ್ಯಕ್ತಗೊಳಿಸುವ ಬಿಂಕ ಬಡಿವಾರಗಳನ್ನು ಕಂಡು ಸರಸುವಿಗೆ ಅಸಹ್ಯವಾಗಿದ್ದಿತು. ಅಂತೆಯೆ ಗದಿಗೆಮ್ಮ ಮಾತನಾಡಿಸಿದಾಗಲೆಲ್ಲ ಆಕೆ ಸರಿಯಾಗಿ ಉತ್ತರವೀಯುತ್ತಿರಲಿಲ್ಲ. ಈಗಲೂ ಹಾಗೆಯೆ ಆಯಿತು.

"ಏನೋ, ಮೈಯಲ್ಲಿ ನೆಟ್ಟಗಿರಲಿಲ್ಲ," ಎಂದಳು ಸರಸು.

"ಯಾಕವ್ವ ? ಏನಾಯಿತು ?"

"ಏನೋ ತಲೆನೋವು".

"ಈ ವಯಸ್ಸಿನಲ್ಲಿ ತಲೆನೋವು ಬರಬಾರದವ್ವ. ಡಾಕ್ಟರಿಂದ ಔಷಧ ತೆಗೆದುಕೋ. ಅಲಕ್ಷ್ಯ ಮಾಡಬೇಡ".

ಹೋಳಿಗೆಯ ಹೂರಣವನ್ನು ಸಿದ್ಧಗೊಳಿಸುತ್ತಲಿದ್ದ ರುದ್ರವ್ವಜ್ಜಿ ನಡುವೆ ಬಾಯಿಹಾಕಿ ನುಡಿದಳು: "ನಾನೂ ಅದನ್ನೇ ಹೇಳುತ್ತಿದೇನೆ. ಒಂದು ವಾರವಾಯಿತು. ಈಕೆಗೆ ನೆಗಡಿ, ತಲೆಶೂಲೆ. ರಾತ್ರಿ ಊಟವನ್ನೂ ಬಿಟ್ಟುಬಿಟ್ಟಿದಾಳೆ. ಒಂದು ಕಪ್ಪು ಹಾಲು ಕುಡಿದರೆ ಬಹಳವಾಯಿತು. ಪಾಪ, ನನ್ನ ಕಂದ ಸೊರಗಿ ಸೊರಗಿ ಕಡ್ಡಿಯಂತಾಗಿದಾಳೆ!"

ಸಾರಿಗೆ ಒಗ್ಗರಣೆ ಹಾಕುತ್ತಲಿದ್ದ ನಾಗಮ್ಮ ದುಃಖಭರಿತ ಧ್ವನಿಯಲ್ಲಿ ನುಡಿದಳು :

"ಏನು ಮಾಡೋದವ್ವ. ಉಪಾಯವಿಲ್ಲ. ಇವಳ ಹಣೆಬರಹವೇ ಹೀಗಿದ್ದರೆ ಯಾರೇನು ಮಾಡಲಿಕ್ಕಾದೀತು ? ಇವಳ ಬಾಳು ಹೀಗಾದೀತೆಂದು ಯಾರು ತಿಳಿದಿದ್ದರು ? ಎಂಥ ಮುತ್ತಿನಂಥ ಹುಡುಗಿ—ಹೀಗಾಗಿ ಹೋಯಿತಲ್ಲಾ....".

ಹೂರಣ ಅರೆಯುವುದನ್ನು ನಿಲ್ಲಿಸಿ ರುದ್ರಪ್ಪಜ್ಜಿ ಕಣ್ಣೊರೆಸಿಕೊಂಡಳು. ಗದಿಗೆವ್ವನೂ "ಪಾಪ! ಪಾಪ!" ಎಂದಳು. ಸರಸುವಿಗೆ ಇನ್ನು ಅಲ್ಲಿ ಕುಳಿತುಕೊಳ್ಳಲಾಗಲಿಲ್ಲ. ಅವಳಿಗೂ ಕತ್ತು ಬಿಗಿದು ಬಂದಿದ್ದಿತು. ತಿಂಡಿ ತಿನ್ನುವುದನ್ನು ಅರ್ಧಕ್ಕೇ ನಿಲ್ಲಿಸಿ ಕೈತೊಳೆದುಕೊಂಡು ಮಹಡಿಗೆ ಧಾವಿಸಿದಳು. ಕೊಟಡಿಗೆ ನುಗ್ಗಿ ಕುರ್ಚಿಯ ಮೇಲೆ ಕುಸಿದುಬಿದ್ದು ಮಹಾದೇವಿಯಕ್ಕನ ಭಾವಚಿತ್ರವನ್ನು ಕಂಬನಿದುಂಬಿದ ಕಂಗಳಿಂದ ದಿಟ್ಟಿಸುತ್ತ ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು.

"ಆಕೆಯೆದುರಿಗೆ ನಾವು ಹೀಗೆ ಮಾತಾಡಬಾರದಿತ್ತು. ಇನ್ನು ಇಡೀ ದಿನವೆಲ್ಲ ಆಕೆ ಕಣ್ಣೀರು ಹಾಕುತ್ತಲೇ ಇರುತ್ತಾಳೆ. ಸ್ವಾಮಿಗಳು ಬರುವ ದಿನ. ಹೀಗಾಗಬಾರದಿತ್ತು," ಎಂದಳು ನಾಗಮ್ಮ.

"ಹೌದು, ಪಾಪ. ಇಂದಾದರೂ ಸ್ವಲ್ಪ ಸಂತೋಷದಿಂದಿದ್ದು ಹೋಳಿಗೆ ಖೀರು ತಿಂದು ನಲಿದಾಳು ಅಂತ ಮಾಡಿದ್ದೆ. ಎಲ್ಲ ಕೆಟ್ಟುಹೋಯಿತು," ಎಂದು ರುದ್ರಪ್ಪಜ್ಜಿಯೂ ಧ್ವನಿಗೂಡಿಸಿದಳು.

"ನೀವೆಲ್ಲ ಇಷ್ಟೇಕೆ ದುಃಖಿಸಬೇಕಾಗಿದೆಯೊ ತಿಳಿಯದವ್ವ. ಆಕೆಯ ಬಾಳುವೆ ಆಕೆಯ ಕೈಯೊಳಗಿದೆ. ಮನಸು ಮಾಡಿದರೆ ಮತ್ತೆ ಸುಖಿಯಾದಾಳು ಸರಸೂ," ಎಂದಳು ಗದಿಗೆವ್ವ.

"ಛೆ! ಅದೆಲ್ಲ ಸಾಧ್ಯವಿಲ್ಲ ತಾಯಿ. ನಮ್ಮವರಿಗೆ ಅಂಥವೆಲ್ಲ ಮನಸ್ಸಿಗೆ ಬರುವದಿಲ್ಲ. ಮನೆತನದ ಮರ್ಯಾದೆಗೆ ಕುಂದನ್ನುಂಟುಮಾಡುವಂಥ ಕೆಲಸವಾವುದನ್ನೂ ಅವರು ನಡೆಯಗೊಡಲಾರರು."

"ಕಾಲ ಬದಲಾಯಿಸಿದೆ ನಾಗಮ್ಮನವರೆ. ಹಳೆಯ ಕಂದಾಚಾರಗಳನ್ನೆಲ್ಲ ಬದಿಗಿರಿಸಲೇಬೇಕು. ಈಗ ಯಾವುದು ನಮಗೆ ಒಳ್ಳೆಯದೋ ಅದನ್ನು ಮಾತ್ರ ಸ್ವೀಕರಿಸಬೇಕು. ಹಳೆಯ ಪದ್ಧತಿ ಎಂದುಕೊಂಡು ಬಾಳು ಹಾಳು ಮಾಡಿಕೊಂಡರೇನು ಬಂತು? ಪಾಪ, ಆ ಹುಡುಗಿಯನ್ನು ಕಂಡರೆ ನನ್ನ ಕರುಳು ಕೊರೆಯುತ್ತದೆ. ತುಂಬಿದ ಪ್ರಾಯ, ತುಂಬಿದ ಚೆಲುವು. ಏನಿದ್ದರೇನು, ಸುಖವಿಲ್ಲವಲ್ಲಾ...."

"ನಾನೂ ಅದನ್ನೇ ಹೇಳುತ್ತಿದ್ದೇನೆ ಗದಿಗೆವ್ವನವರೆ. ಪದ್ಧತಿ ಗಿದ್ಧತಿ ಅಂದು ಬಿಟ್ಟ ನಾವೇ ಕೈಯಾರ ನಮ್ಮ ಮಗಳನ್ನು ದಿನವೂ ಕತ್ತಲಲ್ಲೇ

ಇಟ್ಟಿರಬೇಕೇ ? ಧೈರ್ಯವಾಡಿ ಆಕೆಗೊಂದು ದಾರಿ ತೋರಿಸಿದರಾಗದೇ?" ಎಂದಳು ರುದ್ರವ್ವಜ್ಜಿ.

ನಾಗಮ್ಮ ನೊಂದ ಧ್ವನಿಯಲ್ಲಿ ನುಡಿದಳು: "ನನ್ನ ಮನಸ್ಸಿನಲ್ಲೂ ಈ ವಿಚಾರ ಇರಲಿಕ್ಕಿಲ್ಲ ಅಂತ ತಿಳೀಬೇಡ ಅಜ್ಜಿ. ನನ್ನ ಗೌರೂ ಬೇರೆ, ಆಕೆ ಬೇರೆ ಅಂತ ನಾನೆಂದೂ ತಿಳಿದವಳಲ್ಲ. ನಿನಗೆ ಗೊತ್ತೇ ಇದೆಯಲ್ಲ. ಆಕೆ ಕಣ್ಣೀರು ಸುರಿಸುವಾಗ ನನ್ನ ಕೊರಳೂ ತುಂಬಿ ಬರುತ್ತದೆ. ಆದರೇನು ಮಾಡುವದು? ಅವರ ಹಟದ ಮುಂದೆ ನನ್ನ ನಿನ್ನ ಆಟ ಏನು ನಡೆದೀತು?"

"ಏನು, ಅಷ್ಟು ಸನಾತನಿಗಳೇ ಬಸಪ್ಪಸೆಟ್ಟರು ?" ಎಂದು ಕೇಳಿದಳು ಗದಿಗೆಮ್ಮ.

"ನಿಮಗೆ ಅವರ ಪರಿಚಯು ಹೆಚ್ಚಿಗಿಲ್ಲ. ಅಂತೇ ಹೀಗೆ ಕೇಳುತ್ತೀರಿ. ಈಚೀಚೆಗಂತೂ ಅವರು ದಿನಕ್ಕೊಂದು ಬಗೆಯಾಗಿ ಕರ್ಮಠರಾಗುತ್ತಿದ್ದಾರೆ. ನಾವು ಮುಟ್ಟಿದ ವಿಭೂತಿಯೂ ನಡೆಯುವಂತಿಲ್ಲವ್ವ ಅವರಿಗೆ. ಪೂಜೆಯ ಕಾಲಕ್ಕೆ ಅವರ ಸಾಮಾನು ಅವರಿಗೇ ಮೀಸಲಾಗಿರಬೇಕು. ಬೇರೆ ಯಾರೂ ಅವುಗಳನ್ನು ಮುಟ್ಟುವಂತಿಲ್ಲ."

"ಓಹ್ಹೊ ! ಇಷ್ಟು ಕಠೋರ ನಿಯಮ ಬೆಳೆದಿದೆಯೆ ? ಹಾಗಿದ್ದರೆ ಸರಸೂಗೆ ಬೇರೆ ದಾರಿಯಿಲ್ಲ ಬಿಡಿರಿ. ಹೀಗೇ ನರಳಬೇಕಾಗುತ್ತದೆ ಆಕೆ ಕೊನೆಯವರೆಗೆ !"

"ಏನು ಮಾಡೋದಮ್ಮ ! ನನ್ನ ಕೈಯಲ್ಲೇನೂ ಇಲ್ಲ. ಆಕೆಯ ಹಣೆಯಲ್ಲಿ ಬರೆದದ್ದು ಆಗುತ್ತದೆ."

ಇದುವರೆಗೆ ಮೌನವಾಗಿ ಕುಳಿತಿದ್ದ ಗೌರಿ ಹಠಾತ್ತಾಗಿ ಧ್ವನಿಯೆತ್ತಿ, "ಏನು ಬರೆದಿದೆಯವ್ವಾ ಆಕೆಯ ಹಣೆಯಲ್ಲಿ ?" ಎಂದು ಕೇಳಿದಳು.

ಗದಿಗೆಮ್ಮ ನಕ್ಕಳು. "ಓಹ್ಹೊ ! ನಮ್ಮ ಗೌರಾಂಬಿಕಾ ದೇವಿಯರು ಎದ್ದರೇನು ಚರ್ಚೆಗೆ !"

"ನೀ ಬಾಯಿಹಾಕಬೇಡ ಸುಮ್ಮನಿರೇ. ಇದರಲ್ಲೆಲ್ಲ ಏನು ತಿಳಿಯುತ್ತೆ ನಿನಗೆ !" ಎಂದು ನಾಗಮ್ಮ ಗದರಿಸಿದಳು. ಗೌರಿಗೆ ಮುಖಭಂಗವಾದಂತಾಯಿತು. ಆಕೆ ಸಿಟ್ಟಿನಿಂದ ಕೆನ್ನೆಗಳನ್ನುಬ್ಬಿಸಿಕೊಂಡು ಅಕ್ಕನಿಗೆ ದೂರು ಹೇಳಲು ಹೊರಟಳು.

ಮೇಜಿನ ಮೇಲೆ ತಲೆಯನ್ನೊರಗಿಸಿ ಸರಸೂ ಅತ್ತು ಅತ್ತು ಸುಮ್ಮ ನಾಗಿದ್ದಳು. ಗೌರಿಯ ಕಾಲು ಸಪ್ಪಳು ಕಿವಿಗೆ ಬೀಳುತ್ತಲೂ ತಲೆಯೆತ್ತಿ ಸೀರೆಯ ಸೆರಗಿನಿಂದ ಕಣ್ಣುಗಳನ್ನೊರೆಸಿಕೊಂಡು ಮುಖದಲ್ಲಿ ನಗೆಯನ್ನೆ ಳೆದು ತರುವ ವ್ಯರ್ಥ ಪ್ರಯತ್ನ ಮಾಡತೊಡಗಿದಳು.

ಗೌರಿ ಕೊಟಡಿಯಲ್ಲಿ ಬಂದವಳೆ ಮೇಜಿನ ಮೇಲೆ ನೆಗೆದು ಕುಳಿತು ಅಕ್ಕನ ಮುಖವನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದುಕೊಂಡು—"ಅಳುತ್ತಿ ದ್ದೆಯಾ ಅಕ್ಕ ?" ಎಂದಳು.

"ಇಲ್ಲ ಗೌರೂ. ಅಳಲಿಕ್ಕೇನಾಯಿತು ?" ಎಂದು ನುಡಿದು ನಗಲು ಯತ್ನಿಸಿದಳು ಸರಸು. ಆದರೆ ಆ ಪ್ರಯತ್ನಕ್ಕೆ ಯಶ ದೊರೆಯಲಿಲ್ಲ. ಆಕೆಯ ವಿಶಾಲ ನೇತ್ರಗಳಲ್ಲಿ ಮತ್ತೆ ನೀರು ಚಿಮ್ಮಿ ಬಂದಿತು. ತಂಗಿಯ ಕೊರಳಿ ನಲ್ಲಿ ಮುಖ ಹುದುಗಿಸಿ ಮನಸೋಕ್ತವಾಗಿ ಅಳತೊಡಗಿದಳು.

ಗೌರಿಗೂ ಅಳು ಬರದಿರಲಿಲ್ಲ. ಆಕೆ ಬಿಕ್ಕುತ್ತ ನುಡಿದಳು: "ಯಾಕೆ ಅಳುತ್ತೀಯಾ ಅಕ್ಕ ?"

"ಯಾಕೆಂದು ಏನು ಹೇಳಲಿ ಗೌರೂ. ನನ್ನ ಬಾಳು........" ಎಂದು ಸರಸು ಮತ್ತೆ ಬಿಕ್ಕತೊಡಗಿದಳು.

"ನಿನ್ನ ಹಣೆಯಲ್ಲಿ ಯಾರೋ ಏನೋ ಬರೆದಿದ್ದಾರಂತಲ್ಲ ಅಕ್ಕ ?"

"ಹೌದವ್ವ ಬರೆದಿದ್ದಾರೆ. ಆ ಪಾಪಿ ಬ್ರಹ್ಮ ಬರೆದಿದ್ದಾನೆ."

"ಏನು ಬರೆದಿದ್ದಾನೆ ಅಕ್ಕ ?"

"ಹೀಗೇ ಕೊನೆಯವರೆಗೂ ನಾನು ಒಂಟಿಯಾಗಿರಬೇಕು ಅಂತ!"

ಹಠಾತ್ತಾಗಿ ಗೌರಿಗೆ ಶಿವಮೂರ್ತಿಯ ಆ ದಿನಚರಿಯ ನೆನಪಾಯಿತು. ತುಂಬ ಕಷ್ಟಪಟ್ಟು ತಾನು ಅರ್ಥಮಾಡಿಕೊಂಡ ಆ ಸಾಲುಗಳ ಜ್ಞಾಪಕ ಬಂತು. 'ಸರಸೂ ನನ್ನನ್ನು ಪ್ರೀತಿಸುತ್ತಿರಬಹುದೇ ?'

"ಮಾಸ್ತರರನ್ನು ನೀನು ಪ್ರೀತಿಸುತ್ತೀಯಾ ಅಕ್ಕ ?" ಎಂದು ಗೌರಿ ಸಹಜ ಸ್ವರದಲ್ಲಿ ಪ್ರಶ್ನೆ ಮಾಡಿದಳು.

ಸರಸು ಬೆಚ್ಚಿಬಿದ್ದು ಕುರ್ಚಿಯಲ್ಲಿ ಸರಿಯಾಗಿ ಕುಳಿತುಕೊಂಡಳು. ಅಂಥ ಪ್ರಶ್ನೆ ಗೌರಿಯ ಮುಖದಿಂದ ಬರಬಹುದೆಂದು ಆಕೆ ಕನಸು ಮನಸಿ ನಲ್ಲೂ ಎಣಿಸಿಕೊಂಡಿರಲಿಲ್ಲ. ತಮ್ಮ ಮಾತುಗಳು ಯಾರ ಕಿವಿಗಾದರೂ

ಬಿದ್ದವೇನೊ ಎಂದು ಭೀತಿಯಿಂದ ಬಾಗಿಲ ಕಡೆಗೆ ನೋಡಿದಳು. ಅಲ್ಲಿ ಯಾರ ಸುಳಿವೂ ಇರಲಿಲ್ಲ. ಅಂಥ ಸ್ಥಿತಿಯಲ್ಲೂ ಕೊಂಚ ಸಮಾಧಾನವಾದಂತಾಯಿತು. ಸೆರಗಿನಿಂದ ಮುಖವನ್ನೆಲ್ಲ ಸರಿಯಾಗಿ ಒರೆಸಿಕೊಂಡು ತಂಗಿಯ ಕಡೆಗೆ ದೃಷ್ಟಿ ತಿರುಗಿಸಿದಳು. ಆಕೆಯ ಎದೆ ವೇಗವಾಗಿ ಬಡಿದುಕೊಳ್ಳುತ್ತಲಿದ್ದಿತು. "ಮಾಸ್ತರರನ್ನು ಪ್ರೀತಿಸುತ್ತೀಯಾ?" ಎಂಥ ಪ್ರಶ್ನೆ ಅದು ಗೌರಿಯದು! ತನ್ನ ಹೃದಯದಲ್ಲಿ ಅವಿತುಕೊಂಡಿದ್ದ ಆ ವಿಚಾರ ಈ ತುಂಟ ಹುಡುಗಿಗೆ ಹೇಗೆ ತಾನೆ ಗೊತ್ತಾಯಿತೊ? ಇನ್ನೂ ಏನೇನು ಗೊತ್ತಾಗಿದೆಯೊ? ಆಗಲೆ ಬಚ್ಚಲು ಮನೆಯಲ್ಲಿ ಗೌರಿ ಕುಣಿಯುತ್ತ ಹೇಳುತ್ತಲಿದ್ದ ಆ ಪಲ್ಲವಿಯು ಸರಸೂಗೆ ನೆನಪಾಯಿತು. "ಗುಟ್ಟು ಸಿಕ್ಕಿತರೀ! ಅಕ್ಕನ ಗುಟ್ಟು ಸಿಕ್ಕಿತರೀ!" ಆಕೆಗೆ ಸಿಕ್ಕ ಗುಟ್ಟು ಇದೇ ಇರಬಹುದೊ ಏನೊ. ಇನ್ನಾವ ಗುಟ್ಟಿದೆ ತನ್ನದು!

"ಶಿವಮೂರ್ತಿ ಸ್ವಾಮಿಗಳನ್ನು ಪ್ರೀತಿಸುತ್ತೀಯಾ ಅಕ್ಕ?" ಮತ್ತೆ ಕೇಳಿದಳು ಗೌರಿ.

ಪ್ರೀತಿ! ಸರಸೂಗೆ ಕೊಂಚ ನಗೆ ಬರದಿರಲಿಲ್ಲ. ಈ ಚೋಟುದ್ದದ ಹುಡುಗಿಗೆ "ಪ್ರೀತಿ" ಎಂಬ ಶಬ್ದದ ಅರ್ಥವಾದರೂ ಆಗಿರಬಹುದೇ? ಎಂಥ ಸ್ಪಷ್ಟ ವಾಣಿಯಲ್ಲಿ ಪ್ರಶ್ನೆ ಕೇಳುತ್ತಿರುವಳಲ್ಲ! ಏನು ಉತ್ತರವೀಯುವುದು ಆಕೆಗೆ? ಈ ಒಡಕು ಬಾಯಿಯನ್ನು ಹೇಗೆ ಮುಚ್ಚುವುದು?

"ಸುಮ್ಮನೆ ಏನಾದರೊಂದು ತೆಗೆದು ಪೀಡಿಸಬೇಡ ಗೌರೂ. ನನ್ನ ಸಂಕಟವೇ ನನಗೆ ಸಾಕಷ್ಟಿದೆ. ಅದನ್ನಿನ್ನೂ ಬೆಳೆಸಬೇಡ."

"ಪ್ರೀತಿಯ ಮಾತು ತೆಗೆದರೆ ಪೀಡಿಸಿದ ಹಾಗಾಯಿತೇನೇ? ನನ್ನ ಮುಂದೆ ಏಕೆ ಬಚ್ಚಿಡುತ್ತೀ? ಎಲ್ಲಾ ಒಪ್ಪಿಕೊಂಡು ಬಿಡಬಾರದೇ?"

ಸರಸೂ ತಬ್ಬಿಬ್ಬಾಗಿ ನುಡಿದಳು: "ಒಪ್ಪಿಕೊಳ್ಳುವದು? ನಾನೇನು ಮಾಡಿದ್ದೇನೆ ಒಪ್ಪಿಕೊಳ್ಳಲಿಕ್ಕೆ?"

"ಏನು ಮಾಡಿದ್ದೀಯಾ? ಯಾಕೆ ಸುಮ್ಮನೆ ಹಾರಿಸಿ ಮಾತಾಡುತ್ತೀ? ನಾ ಬಲ್ಲೆ ನಿಮ್ಮಂಥವರನ್ನೆಲ್ಲ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಹೊಕ್ಕವರಿಗೆ ಕಾಣುವುದಿಲ್ಲವೆ?" ಎಂದು ನುಡಿದು ಗೌರಿ ನಗತೊಡಗಿದಳು.

"ಏನೇ ಅದು ನಾ ಬಚ್ಚಿಟ್ಟದ್ದು ?"

ಗೌರಿ ಮೇಜಿನಿಂದಿಳಿದು ಮಂಚದ ಮೇಲಕ್ಕೆ ನೆಗೆದು ತಲೆದಿಂಬು ಗಳನ್ನು ಕೈಯಲ್ಲಿ ಹಿಡಿದುಕೊಂಡು ಅವುಗಳನ್ನುದ್ದೇಶಿಸಿ ಮಾತನಾಡುವ ಹಾಗೆ ರಾಗ ತೆಗೆದಳು : "ಪ್ರಾ–ಣ–ಪ್ರಿ–ಯಾ ! ಮೂ–ರ್ತಿ !"

ಈಗ ಮಾತ್ರ ಸರಸುವಿನ ಪ್ರಾಣವೇ ಹೋದ ಹಾಗಾಯಿತು. ಮುನ್ನಾ ದಿನದ ರಾತ್ರಿ ತಾನು ತೊಡಗಿದ ಪ್ರಣಯಪತ್ರದ ಪರಿಶ್ರಮವೆಲ್ಲ ಕಣ್ಣೆದುರು ಕಟ್ಟಿತು. ಆ ಪತ್ರದಲ್ಲಿ ತಾನು ಬರೆದುದೂ ಅವೆರಡೇ ಶಬ್ದಗಳನ್ನು........ ಬರೆದು ಹರಿದು ಹಾಕಿಯೂ ಆಗಿತ್ತು. ಆದರೂ ಗೌರಿಯ ಕಣ್ಣಿಗೆ ಅದು ಕಾಣಿಸಿದ ಬಗೆಯೆಂತು ? ನಿದ್ರೆ ಹೋದವಳಂತೆ ನಟಿಸಿ ಕಳ್ಳಿಯಂತೆ ಎದ್ದು ಬಂದು ತನಗೆ ತಿಳಿಯದಂತೆ ಬೆನ್ನ ಹಿಂದೆ ನಿಂತು ತಾನು ಬರೆದುದನ್ನು ಓದಿ ಕೊಂಡಳೋ ಹೇಗೆ ? ಯಾರಿಗೆ ಗೊತ್ತು ? ಈ ತುಂಟೆಗೆ ಅಸಾಧ್ಯವಾದುದೇ ನುಂಟು? ಇಂದು ತನ್ನೆದುರಿಗೆ ಆ ಮಾತು ತೆಗೆದು ಗೋಳಾಡಿಸುತ್ತಿದಾಳೆ. ನಾಳೆ ತಾಯಿಯೆದುರಿಗೂ ಹೇಳಿ ನಗಲಿಕ್ಕಿಲ್ಲವೆಂಬ ಭರವಸೆಯೇನು ? ಸರಸು ಭೀತಿಯಿಂದ ನಡುಗಿದಳು. ಮಂಚದ ಮೇಲೆ ಕುಳಿತು ತಂಗಿಯ ಕೆನ್ನೆ ಗಳನ್ನು ತೀಡುತ್ತ ದೈನ್ಯದಿಂದ ಹೇಳಿಕೊಂಡಳು :

"ನನ್ನಾಣೆ ಗೌರೂ ನಿನಗೆ. ಈ ಮಾತು ಯಾರ ಮುಂದೆಯೂ ಆಡ ಬೇಡವ್ವ."

ಅಕ್ಕನ ದೀನವಾಣಿಯನ್ನು ಗಮನಿಸದೆ ಗೌರಿ ಹಾಗೆಯೆ ನಗುತ್ತಲಿ ದ್ದಳು. "ಏನೂ ಮಾಡಲಿಲ್ಲ ಅಂತ ಹೇಗೆ ಬಡಿವಾರ ಕೊಚ್ಚುತಿದ್ದೆಯಲ್ಲ. ಕಡೆಗೂ ಸಿಕ್ಕು ಬಿದ್ದೆಯೊ ಇಲ್ಲವೊ ! ಗುಟ್ಟು ರಟ್ಟಾಽಯ್ತರೀ ! ಗುಟ್ಟು ರಟ್ಟಾಽಯ್ತರೀ !" ಎಂದು ನುಡಿದು ಕೇಕೆ ಹಾಕತೊಡಗಿದಳು.

ತಂಗಿಯನ್ನು ತನ್ನ ತೋಳುಗಳಲ್ಲಿ ಹಿಡಿದು ತಬ್ಬಿಕೊಂಡು ಸರಸು ಅಳುಮೊಗದಿಂದ ಹೇಳಿದಳು : "ಕೂಗಬೇಡ ನಿನ್ನ ದಮ್ಮಯ್ಯ. ನಿನ್ನ ಕಾಲಿಗೆ ಬೀಳುತೇನೆ. ನೀ ಹೇಳಿದ ಹಾಗೆ ಕೇಳುತೇನೆ. ಕೂಗಿ ಗದ್ದಲ ಮಾಡಬೇಡ. ಅಪ್ಪ ಅವ್ವಗೆ ಗೊತ್ತಾದರೆ ನನ್ನ ತಲೆಯನ್ನೇ ತೆಗೆದಾರು...." ಹೇಳುತ್ತಿದ್ದ ಹಾಗೆಯೆ ಮತ್ತೆ ಆಕೆಯ ಕಣ್ಣುಗಳಲ್ಲಿ ನೀರು ಬಂದಿತು.

ಅಕ್ಕನ ಕಂಬನಿಗಳನ್ನು ಕಂಡು ಗೌರಿಗೆ ಮರುಕ ಬರದಿರಲಿಲ್ಲ. "ಇಲ್ಲ ಬಿಡಕ್ಕ. ಯಾರಿಗೂ ಹೇಳೋದಿಲ್ಲ. ಸುಮ್ಮನಾಗು. ಅಳಬೇಡ," ಎಂದಳು.

"ಇಲ್ಲವೆ? ಯಾರಿಗೂ ಹೇಳೋದಿಲ್ಲವೆ?"

"ಇಲ್ಲವ್ವ. ಯಾ-ರ್‍ಯಾ-ರಿ-ಗೂ ಹೇಳೋದಿಲ್ಲ...."

"ನನ್ನ ಗೌರೂ........ನನ್ನ ಗೌರಾ...." ಎಂದು ನುಡಿಯುತ್ತ ಸರಸು ಹರ್ಷಾಶ್ರುಗಳನ್ನು ದುರಿಸತೊಡಗಿದಳು.

ಒಂದೆರಡು ಕ್ಷಣ ಮೌನವಾಗಿದ್ದು ಸರಸು ಪ್ರಶ್ನೆ ಮಾಡಿದಳು:

"ನಿನಗಿದೆಲ್ಲ ಹ್ಯಾಗೆ ಗೊತ್ತಾಯಿತೇ ಗೌರೂ?"

"ನಾನೆಂದರೆ ಇನ್ನೂ ಮೊಲೆಗೂಸು ಅಂತ ತಿಳಿದಿದ್ದೆಯಾ ನೀನು? ಇಷ್ಟೂ ತಿಳಿಯುವುದಿಲ್ಲವೇ ನನಗೆ? ಬೆಳಿಗ್ಗೆ ಎದ್ದು ನೋಡಿದಾಗ ನೀ ಬರೆದದ್ದು ಮೇಜಿನ ಮೇಲೇ ಇದ್ದಿತಲ್ಲ!"

"ಮೇಜಿನ ಮೇಲೆ?" ಸರಸು ವಿಸ್ಮಯದಿಂದ ಕೇಳಿದಳು. ಖಂಡಿತವಾಗಿಯೂ ತಾನು ಅದನ್ನು ರಾತ್ರಿಯಲ್ಲೇ ಹರಿದು ಹಾಕಿದ ಹಾಗೆ ಜ್ಞಾಪಕ. "ಮೇಜಿನ ಮೇಲಿತ್ತೇ? ಛೆ! ಸಾಧ್ಯವಿಲ್ಲ. ಮತ್ತೊಂದು ಬಂಡಿ ಉರುಳಿಸಬೇಡ ಗೌರೀ!" ಎಂದಳು.

"ಮೇಜಿನ ಮೇಲಲ್ಲದಿದ್ದರೆ ಅದರ ಕೆಳಗಿತ್ತು ಅನ್ನೋಣ. ಅಂತೂ ನನಗೆ ಸಿಕ್ಕಿತಲ್ಲ!"

"ಏನು ಸಿಕ್ಕಿತು?"

"ಅದೇ. ನೀನು ರಾತ್ರಿ ಬರೆದ ಪತ್ರ."

"ಎಲ್ಲಾ ಹರಿದು ಹಾಕಿದ್ದೆನಲ್ಲವೆ!"

"ಹರಿದರೂ ಇಷ್ಟು ಶಬ್ದ ಮಾತ್ರ ಕಾಣಿಸುವಂತಿತ್ತು."

"ಏನು ಮಾಡಿದೆ ಆ ಚೂರುಗಳನ್ನು ಗೌರೂ?"

"ಏನೂ ಇಲ್ಲ. ನನ್ನ ಹತ್ತಿರವೇ ಇವೆ."

"ಇವೆಯೇ? ಎಲ್ಲಿ?"

"ಇಲ್ಲಿ...." ಎಂದು ನುಡಿಯುತ್ತಾ ಗೌರಿ ಮತ್ತೆ ಮಂಚದಿಂದ ಜಿಗಿದು ಬಿಟ್ಟಳು. ಸರಸು ಆಕೆಯನ್ನು ಹಿಡಿಯಲೆಂದು ಧಾವಿಸಿದಳು. ಇಬ್ಬರೂ ಕೊಟಡಿಯಲ್ಲಿ ಓಡಾಡತೊಡಗಿದರು.

"ಕೊಡು ಅದನ್ನಿಲ್ಲಿ ಗೌರೀ...."

"ಊ-ಹೂಂ...."

"ಕೊಡು ನಿನ್ನ ದಮ್ಮಯ್ಯ! ಕೊಡು ಅಂದರೆ!"

"ಮಾಸ್ತರು ಬಂದು ಹೇಳಿದರೆ ಮಾತ್ರ ಕೊಟ್ಟೇನು."

"ಅವರಿಗೆಲ್ಲಾದರೂ ತೋರಿಸಿ ಬಿಟ್ಟೇಯೋ ಬಜಾರಿ!" ಎಂದು ಗಾಬರಿಯಿಂದ ನುಡಿದಳು ಸರಸು.

ಗೌರಿ ಕೈ ತಟ್ಟುತ್ತ ಹೇಳಿದಳು: "ಆಗಲೆ ತೋರಿಸಿಯೂ ಬಿಟ್ಟಿದ್ದೇನೆ ಕಣೇ"

ಸರಸು ಕಂಗೆಟ್ಟು ಕುರ್ಚಿಯ ಮೇಲೆ ಕುಸಿದುಬಿದ್ದಳು. "ತೋರಿಸಿದೆಯಾ? ಅಯ್ಯೋ ಕಿಡಿಗೇಡೀ, ಎಂಥ ಕೆಲಸ ಮಾಡಿಬಿಟ್ಟೆ? ಅವರಿಗೆ ತೋರಿಸುವುದೇ ಇದ್ದರೆ ನಾನೇಕೆ ಅದನ್ನು ಹರಿದು ಹಾಕುತ್ತಿದ್ದೆ? ಇನ್ನು ನಾನವರಿಗೆ ಹೇಗೆ ಮುಖ ತೋರಿಸಲಿ?"

"ಹೇಗೆ ಅಂದರೆ ಹೀಽಗೆ-" ಎಂದು ತುಟಿ ಕುಣಿಸಿ ಹುಬ್ಬು ಹಾರಿಸಿದಳು ಗೌರಿ.

ಸರಸು ತಲೆ ತಗ್ಗಿಸಿ ಯೋಚನೆಗಳಲ್ಲಿ ಮುಳುಗಿದಳು. ಗೌರಿ ಹೇಳುತ್ತಲೇ ಇದ್ದಳು: "ನಿನ್ನ ಪತ್ರದ ತುಂಡನ್ನು ಅವರಿಗೆ ತೋರಿಸಿದ್ದಷ್ಟೇ ಅಲ್ಲ-ಅವರು ಬರೆದುದನ್ನೂ ನೋಡಿ ಬಂದೆ. ನಿನ್ನ ಬಗ್ಗೆ ಅವರೇನು ಬರೆದಿದ್ದಾರೆ ಗೊತ್ತೇ ಸರಸಕ್ಕ?"

ಸರಸು ಕುತೂಹಲದಿಂದ ತಲೆಯೆತ್ತಿ—"ನನ್ನ ಬಗ್ಗೆ ಬರೆದಿದಾರೆಯೆ? ಯಾವುದರಲ್ಲಿ?" ಎಂದು ಕೇಳಿದಳು. ಶಿವಮೂರ್ತಿ ಈಕೆಯ ಮೂಲಕ ತನಗೆ ಪ್ರಣಯಪತ್ರ ಕಳುಹಿಸಿರುವನೊ ಏನೊ, ಅದನ್ನೀಕೆ ಓದಿಕೊಂಡು ತನಗೆ ಕೊಡದೆ ಬಚ್ಚಿಟ್ಟುಕೊಂಡಿರುವಳೊ ಏನೊ-ಎಂದೂ ಆಕೆಗೆನ್ನಿಸದಿರಲಿಲ್ಲ.

"ಅದೇನೋ ಡಯರಿ ಅಂತೆ. ಅದರಲ್ಲಿ ಬರೆದು ಒಗೆದಿದ್ದರು. ಕೋಣೆಯ ತುಂಬಾ ಕಾಗದಗಳೇ ಕಾಗದಗಳು. ಅವರ ಅಕ್ಷರ ತಿಳಿದುಕೊಳ್ಳಬೇಕಾದರೆ ಬೃಹಸ್ಪತಿಯೇ ಬರಬೇಕು ನೋಡಕ್ಕ. ಆದರೂ ಕಷ್ಟಪಟ್ಟು ಓದಿದೆ. ನಿನ್ನೆ ನೀನೂ ಅವರೂ ಮಾತನಾಡಿದಿರಂತಲ್ಲ. ಹೌದೇ?"

ಸರಸು ಉತ್ತರವೀಯದೆ ಮೌನವಾಗಿದ್ದಳು. ಗೌರಿ ಮುಂದೆ ಹೇಳು ತ್ತಿದ್ದಳು :

"ನಿನ್ನನ್ನವರು ಸರಸೂ ಅಂತ ಕರೆದಿರಂತಲ್ಲ ? ನೀನು ಸುಮ್ಮನಿದ್ದೆ ಯಂತೆ. ಅದಕ್ಕೆ ಅವರು ಸರಸೂ ನನ್ನನ್ನು ಪ್ರೀತಿಸುತ್ತಿರಬಹುದೇ ಅಂತ ಬರೆದಿದ್ದರು."

ಅಕಸ್ಮಾತ್ತಾಗಿ ಬಿಸಿನೀರಿನ ಬುಗ್ಗೆಯಲ್ಲಿ ದೇಹವನ್ನೊರಗಿಸಿದಂತಾ ಯಿತು ಸರಸೂಗೆ. ತನ್ನೆದೆಯ ಮಿಡಿತದೊಂದಿಗೆ ಆತನ ಎದೆಯೂ ಮಿಡಿ ಯುತ್ತಿದೆಯೆ ? ಆಹ ! ಎಂಥ ಸೊಗಸು ಈ ಪ್ರಣಯದಲ್ಲಿ ! ಪ್ರೀತಿ ಎಂಬ ಈ ವಸ್ತು ಎಷ್ಟು ಮೋಹಕವೂ ಎಷ್ಟು ರೋಮಾಂಚಕಾರಕವೂ ಆಗಿದೆ ಯಲ್ಲ....

ತೇಲುನೋಟವನ್ನು ತಂಗಿಯ ಮೇಲೆ ಹರಿಬಿಟ್ಟು ಸರಸು ನಾಲ್ಕೈದು ನಿಮಿಷ ಭಾವಸಮಾಧಿಯಲ್ಲಿ ಮುಳುಗಿ ಹಾಗೆಯೆ ಕುಳಿತಿದ್ದಳು. ಬಿಳಿಯ ಖಾದಿಯ ಅಂಗಿ, ಪೈಜಾಮಾಗಳಲ್ಲಿ ಎದ್ದು ಕಾಣಿಸುವ ಶಿವಮೂರ್ತಿಯ ಸುಂದರಾಕಾರ ಆಕೆಯ ಬಗೆಗಣ್ಣುಗಳೆದುರಿಗೆ ಕಟ್ಟಿದಂತಿದ್ದಿತು. ಎಣ್ಣೆ ಹಚ್ಚಿ ಬಾಚಿದ್ದರೂ ತನ್ನ ಸ್ಥಳದಲ್ಲಿ ಕುಳಿತಿರದೆ ಹಟಮಾರಿ ಹುಡುಗನಂತೆ ಹಣೆಯ ಮೇಲುರುಳಿ ಹುಡುಗಾಟವಾಡುವ ಆತನ ಆ ಮುಂಗುರುಳು ಆಕೆ ಯನ್ನು ಹುಚ್ಚಿಯನ್ನಾಗಿಸುತ್ತಿತ್ತು. ಆತನ ಆ ತಿಳಿಯಾದ ಬೊಗಸೆಗಣ್ಣು, ಮುಗ್ಧ ಮೋಹಕ ನಗೆ, ಸರಳವಾದ ವರ್ತನೆ, ಮನಸೆಳೆವ ನಡಿಗೆ....! ಗೌರಿ ಎದುರಿಗೆ ಕುಳಿತಿರುವಳೆಂಬುದನ್ನೂ ಮರೆತು ಸರಸು ಶಿವಮೂರ್ತಿಯ ಧ್ಯಾನ ದಲ್ಲಿ ಮೈಮರೆತು ಹೋಗಿದ್ದಳು. "ಪ್ರಾಣಪ್ರಿಯ ಮೂರ್ತಿ," ಎಂದು ತಾನು ಬರೆದುದು ಆತನ ದೃಷ್ಟಿಗೆ ಬಿದ್ದಿದ್ದಿತು. ಆತನೂ ತನ್ನ ಬಗೆಗೆ ಪ್ರಣಯಭಾವ ತಳೆದಿದ್ದ...."ಸರಸೂ ನನ್ನನ್ನು ಪ್ರೀತಿಸುತ್ತಿರಬಹುದೇ ?" ಎಂಬ ಆ ಮಾತು ! ಅಯ್ಯೋ, ಇನ್ನೂ ಸಂಶಯವೇ ? ಪ್ರೀತಿಸುವುದೇನು ಬಂತು ! ಆತನಿಗಾಗಿ ತನಗೆ ಹುಚ್ಚೇ ಹಿಡಿಯುವ ಪ್ರಸಂಗ ಬಂದಿದೆ.... ಹೌದು....ಹುಚ್ಚು !

"ಅವರನ್ನು ನೀನು ಪ್ರೀತಿಸುತ್ತೀಯಾ ಅಕ್ಕಾ ?" ಮತ್ತೆ ಕೇಳಿಸಿತು ಗೌರಿಯ ಪ್ರಶ್ನೆ.

ಅದಕ್ಕೆ ಉತ್ತರವಾಗಿ ಸರಸು ತಂಗಿಯ ಕೆನ್ನೆಗೆ ತನ್ನ ಕೆನ್ನೆಯನ್ನಿಟ್ಟು ಅರ್ಥಪೂರ್ಣವಾಗಿ ನಗತೊಡಗಿದಳು.

[೯]

"ಸ್ವಾಮಿಗಳು ಬಂದರು.... ಸ್ವಾಮಿಗಳು ಬಂದರು...." ಎಂಬ ಕೂಗು ಕೇಳಿಸಿದಾಗ ಅಕ್ಕತಂಗಿಯರಿಬ್ಬರೂ ಕಿಟಕಿಯಲ್ಲಿ ನಿಂತುಕೊಂಡು ಕೆಳಗಡೆಗೆ ದೃಷ್ಟಿ ಹೊರಳಿಸಿದರು.

ಸ್ವಾಮಿಗಳ ಮೋಟಾರುಕಾರು ಮನೆಯೆದುರಿಗೆ ಬಂದು ನಿಂತುಕೊಂಡಿದ್ದಿತು; ಸೂರ್ಯ ಕಿರಣಗಳಲ್ಲಿ ಮಿರಿ ಮಿರಿ ಮಿನುಗುವ 'ಪಾಂಟಿಯಾಕ್' ಕಾರು. ಅವರನ್ನು ಕರೆದು ತರಲು ಮಠಕ್ಕೆ ಹೋಗಿ ಆ ಕಾರಿನಲ್ಲಿಯೆ ಕುಳಿತು ಬಂದಿದ್ದ ಬಸಪ್ಪಸೆಟ್ಟರು ಎಲ್ಲರಿಗೂ ಮೊದಲು ತಾವೇ ಅವಸರದಿಂದ ಇಳಿದು ಬಂದು, ಸ್ವಾಮಿಗಳ ಸನಿಯದಲ್ಲಿನ ಬಾಗಿಲನ್ನು ತೆರೆದು, ನಯಭಯಗಳಿಂದ ಅದನ್ನು ಹಿಡಿದುಕೊಂಡಿದ್ದು ಸ್ವಾಮಿಗಳು ಇಳಿಯುವುದನ್ನೇ ಕಾಯುತ್ತಲಿದ್ದರು.

ಮೋಟಾರಿನ ಮುಂಭಾಗದಲ್ಲಿ ಡ್ರೈವರನ ಹತ್ತಿರ ಕುಳಿತಿದ್ದ ಗಂಗಾಧರ ಶಾಸ್ತ್ರಿಯೂ ಲಗುಬಗೆಯಿಂದ ಇಳಿದು ಧಾವಿಸಿ ಬಂದು ಸ್ವಾಮಿಗಳ ಪಾದುಕೆಗಳನ್ನು ಕೈಯಲ್ಲಿ ಹಿಡಿದುಕೊಂಡು, ಅವರು ಕೆಳಕ್ಕಿಳಿದು ಬರುತ್ತಿದ್ದ ಹಾಗೆ ಅವರ ಪಾದಗಳಿಗೆ ಅವುಗಳನ್ನಿಟ್ಟು ದೇಶಾವರಿ ನಗೆ ಬೀರಿ-"ಹೀಗೆ ಬಿಜಯ ಮಾಡಿಸಬೇಕು ಬುದ್ಧಿಗಳು, ಹೀಗೆ ಬಿಜಯಮಾಡಿಸಬೇಕು...." ಎಂದು ನುಡಿಯುತ್ತ ತನ್ನ ಮನೆಗೇ ಅವರನ್ನು ಕರೆದೊಯ್ಯುವಂಥ ರೀತಿಯಿಂದ ಸೆಟ್ಟರ ಮನೆಗೆ ಅವರನ್ನು ಕರೆದೊಯ್ಯತೊಡಗಿದ.

ಮೇಲಿನ ಕಿಟಕಿಯಲ್ಲಿ ನೋಡುತ್ತ ನಿಂತಿದ್ದ ಗೌರಿಗೆ ಶಾಸ್ತ್ರಿಯ ದೇಶಾವರಿ ನಗೆಯನ್ನು ಕಂಡಾಗ ನಗೆ ತಡೆಯಲಾಗಲಿಲ್ಲ. ಆಕೆ 'ಕಿಸಿಕ್' ಎಂದು ನಗುತ್ತಲೂ ಸ್ವಾಮಿಗಳ ದೃಷ್ಟಿ ಅತ್ತ ಹೊರಳಿತು. ಎರಡೂ ಕೈಗಳನ್ನು ಬಾಯಿಗಿಟ್ಟುಕೊಂಡು ನಗುತ್ತಲಿದ್ದ ಗೌರಿ, ಆಕೆಯ ಭುಜದ ಮೇಲೆ ತೋಳನ್ನೂರಿ ಹಾಸ್ಯವದನದಿಂದ ನಿಂತಿದ್ದ ಸರಸು ದೃಷ್ಟಿಗೆ ಬೀಳುತ್ತಲೂ ಸ್ವಾಮಿಗಳ ಕಣ್ಣಾಗೊಂಚೆಗಳಲ್ಲಿ ವಿಲಕ್ಷಣ ಭಾವವೊಂದು ಮಿಂಚಿದಂತಾಯಿತು. ಅವರ

ಮುಖವನ್ನೇ ನಿರುಕಿಸುತ್ತಲಿದ್ದ ಚಾಣಾಕ್ಷ ಶಾಸ್ತ್ರಿ ಅದನ್ನು ಕಂಡುಕೊಳ್ಳದಿರಲಿಲ್ಲ.

ಸ್ವಾಮಿಗಳ ಹಿಂದೆಯೆ ಮೋಟಾರಿನಿಂದಿಳಿದು ಬಂದ ಇನ್ನೊಂದು ವ್ಯಕ್ತಿಯೂ ಗೌರಿಯ ಕಡೆಗೆ ದೃಷ್ಟಿ ತಿರುಗಿಸಿತು. ಅವರು ಮಲ್ಲಪ್ಪಸೆಟ್ಟರು. ಹತ್ತು ವರ್ಷಗಳಿಂದ ಆ ಊರಿನ ನಗರ ಸಭೆಗೆ ಅಧ್ಯಕ್ಷರಾಗಿದ್ದವರು. ಊರಿನಲ್ಲಿದ್ದ ಎರಡು ಪ್ರಮುಖ ಪಕ್ಷಗಳಲ್ಲಿ ಒಂದರ ಮುಖಂಡರು. ಧನಿಕ ವರ್ತಕರು, ಹೊಲದೊಡೆಯರು, ಮನೆಗಳೊಡೆಯರು. ಎಣ್ಣೆಯ ಗಿರಣಿಯ ಮಾಲೀಕರು. ಸೆಟ್ಟರಿಗೆ ಸುಮಾರು ನಲವತ್ತೈದು ವರ್ಷ ವಯಸ್ಸಿರಬಹುದು. ಸಾಕಷ್ಟು ದೇಹದಾರ್ಢ್ಯ, ದೇಹಕ್ಕೆ ಹಾಗು ಅವರ ಅಂತಸ್ತಿಗೆ ಒಪ್ಪುವಂಥ ಬಟ್ಟೆಬರೆ. ಜರಿ ಕಟ್ಟಿದ ರುಮಾಲು. ಹೊಳೆ ಹೊಳೆವ ಪಂಪ್ ಷೂಸು. ಸೊಗಸಾಗಿ ಕತ್ತರಿಸಿದ ಮೀಸೆ. ಅವರ ರಸಿಕತನವಂತೂ ಆ ತಾಲ್ಲೂಕಿಗೆಲ್ಲ ಪ್ರಸಿದ್ಧವಾದುದು.

ಪಡಸಾಲೆಯಲ್ಲಿ ರತ್ನಗಂಬಳಿಗಳನ್ನೂ, ಜಮಖಾನಗಳನ್ನೂ ಹಾಸಿ ಪಶ್ಚಿಮ ದಿಕ್ಕಿನ ಗೋಡೆಗೆ ಹೊಂದಿಕೊಂಡು ದೊಡ್ಡ ಕುರ್ಚಿಯೊಂದನ್ನಿರಿಸಲಾಗಿದ್ದಿತು. ಸ್ವಾಮಿಗಳೊಂದಿಗೆ ಬಂದಿದ್ದ ಆಸನವಸ್ತ್ರವನ್ನು ತಂದು ಮರಿಸ್ವಾಮಿ ಆ ಕುರ್ಚಿಯ ಮೇಲೆ ಹಾಸಿದ ಬಳಿಕ ಸ್ವಾಮಿಗಳು ಅತ್ತ ಇತ್ತ ಕಣ್ಣು ತಿರುಗಿಸುತ್ತ ಆಸನದಲ್ಲಿ ಮಂಡಿಸಿದರು. ಕುರ್ಚಿಯಲ್ಲಿ ಸರಿಯಾಗಿ ಹೊಂದಿಕೊಳ್ಳದೆ ಕೆಳಗಡೆ ನೇತಾಡುತ್ತಿದ್ದ ಆಸನವಸ್ತ್ರವನ್ನು ಮೇಲಕ್ಕೆಳೆದುಕೊಂಡು ಒಂದು ಸಲ ದೇಹವನ್ನು ಎಡಕ್ಕೂ ಬಲಕ್ಕೂ ತಿರುಗಿಸಿದರು. ಆ ಆಸನವಸ್ತ್ರದ್ದೂ ಒಂದು ವೈಶಿಷ್ಟ್ಯವೆ. ಮಖಮಲ್ ಬಟ್ಟೆಯಿಂದ ಹೆಣೆಯಲ್ಪಟ್ಟು ಮೇಲೆ ಕಸೂತಿ ಚಿತ್ರಗಳಿಂದ ಅಲಂಕೃತವಾದ ಆ ವಸ್ತ್ರ ಸ್ವಾಮಿಗಳು ಹೋದಲ್ಲೆಲ್ಲ ಅವರನ್ನು ಹಿಂಬಾಲಿಸುತ್ತದೆ. ಬಸವನ ಹಿಂದೆ ಬಾಲ ಹೋದ ಹಾಗೆ. ಅದನ್ನು ಜೊತೆಯಲ್ಲಿ ತೆಗೆದುಕೊಳ್ಳದೆ ಅವರು ಎಲ್ಲಿಗೂ ಹೊರಡುವುದಿಲ್ಲ. ಎಲ್ಲಿ ಕುಳಿತರೂ ಮೊದಲು ಅದನ್ನು ಹಾಸಿ ಅದರ ಮೇಲೆಯೆ ಕುಳಿತುಕೊಳ್ಳುತ್ತಾರೆ. ಸಾಮಾನ್ಯ ಜನರು ಕುಳಿತು ಮಲಿನಗೊಳಿಸಿದ ಆಸನಗಳ ಮೇಲೆ ಪೂಜ್ಯರಾದ ಸ್ವಾಮಿಗಳು ವಸ್ತ್ರವಿಲ್ಲದೆ ಕುಳಿತಿರಬಾರದೆಂಬ ನಿಯಮವಿದೆಯೊ ಏನೊ. ಹಲವು ವರ್ಷಗಳಿಂದ ನೀರಿನ

ಮುಖ ಕಾಣದಿರುವ ಆ ಮಲಿನ ಮಖಮಲ್ ವಸ್ತ್ರದ ಮೇಲೆಯೆ ಅವರು ಮಂಡಿಸುವುದು. ಕೆಲವರು "ಅತಿ ಪೂಜ್ಯರಾದ" ಸ್ವಾಮಿಗಳಿಗೆ ಈ ವಸ್ತ್ರವೊಂದೇ ಸಾಲುವುದಿಲ್ಲ. ಬೇರೆಯವರ ಕುರ್ಚಿಗಳ ಮೇಲೆ ಸಹ ಅವರು ಕುಳಿತುಕೊಳ್ಳುವುದಿಲ್ಲ. ಆಸನವಸ್ತ್ರದ ಜೊತೆಗೆ ಅವರದೇ ಆದ ಒಂದು ಕುರ್ಚಿಯೂ ಅವರನ್ನು ಹಿಂಬಾಲಿಸುತ್ತಿರುತ್ತದೆ. ಸೆಟ್ಟರ ಮನೆಗೆ ಬಿಜಯ ಮಾಡಿಸಿದ ಈ ಸಿದ್ಧವೀರಸ್ವಾಮಿಗಳು ಅಂಥ "ಅತಿ ಪೂಜ್ಯ"ರ ಸಾಲಿನಲ್ಲಿ ತಮ್ಮನ್ನು ಸೇರಿಸಿಕೊಂಡಿರಲಿಲ್ಲವಾದುದರಿಂದ ಆಸನವಸ್ತ್ರವೊಂದರಲ್ಲೇ ಸಮಾಧಾನಪಟ್ಟುಕೊಳ್ಳುತ್ತಿದ್ದರು.

ಸ್ವಾಮಿಗಳು ಕುಳಿತುಕೊಂಡ ತರುವಾಯ, ಅವರೊಂದಿಗೆ ಬಂದ ಮಲ್ಲಪ್ಪಸೆಟ್ಟರು ಗೋಡೆಗೊರಗಿಸಿಟ್ಟಿದ್ದ ಲೋಡಿಗೊರಗಿ ಕುಳಿತುಕೊಂಡರು. ಗಂಗಾಧರಶಾಸ್ತ್ರಿ ಮಾತ್ರ ಕುಳಿತುಕೊಳ್ಳುವ ಅವಸರ ಮಾಡದೆ ಪಡಸಾಲೆಯಲ್ಲಿ ಹಾಗೆ ಹೀಗೆ ಓಡಿಯಾಡುತ್ತಿದ್ದ. ಆಗಾಗ ಸ್ವಾಮಿಗಳ ಕಡೆಗೆ ತಿರುಗಿ ಸುಮ್ಮಸುಮ್ಮನೆ ನಗುತ್ತಿದ್ದ. ಸ್ವಾಮಿಗಳ ಮುಖವಂತೂ ಮೃದುಹಾಸ್ಯದ ಬುಗ್ಗೆಯಂತೆ ಕಾಣಿಸುತ್ತಿತ್ತು.

ಸಾಷ್ಟಾಂಗ ನಮಸ್ಕಾರಗಳಿಗಾರಂಭವಾಯಿತು. ಎಲ್ಲರಿಗೂ ಮೊದಲು ಬಸಪ್ಪಸೆಟ್ಟರು ಅಡ್ಡಬಿದ್ದು ಸ್ವಾಮಿಗಳ ಪಾದಗಳಿಗೆ ಹಣೆಮುಟ್ಟಿಸಿ, ಕೊಂಚ ಮೇಲಕ್ಕೆದ್ದು ಮತ್ತೆ ಕೈಮುಗಿದು ದೂರವಾದರು. ಅವರ ತರುವಾಯ ನಾಗಮ್ಮ ಮುಂದೆ ಬಂದು ಸೀರೆಯ ಸೆರಗನ್ನು ತಲೆಯ ಮೇಲಕ್ಕೆಳೆದುಕೊಂಡು ವಂದಿಸಿದಳು. ಆಕೆಯ ಹಿಂದೆ ಬಂದ ಗದಿಗೆಮ್ಮನನ್ನು ಕಂಡೊಡನೆ ಸ್ವಾಮಿಗಳು ನಕ್ಕು—"ಓಹ್ಹೊ, ನೀನೂ ಬಂದಿರುವೆಯೇನಮ್ಮ? ಎಲ್ಲಾ ಸೌಖ್ಯವೆ?" ಎಂದು ಕೇಳಿದರು.

"ತಮ್ಮ ದಯದಿಂದ ಎಲ್ಲಾ ಸೌಖ್ಯ ಬುದ್ಧೀ," ಎಂದು ಹೇಳುತ್ತ ಗದಿಗೆಮ್ಮ ಅವರಿಗೆ ಮಣಿದು ಮೇಲಕ್ಕೇಳುವಾಗ ಆಕೆಯುಟ್ಟಿದ್ದ ರೇಶಿಮೆ ಸೀರೆಯ ಸೆರಗು ಜಾರಿ, ಮುಗಿಲ ವರ್ಣದ ರವಕೆಯೊಳಗಿನಿಂದ ಎದ್ದು ಕಾಣುವ ಆಕೆಯ ಪುಷ್ಟ ಎದೆಕಟ್ಟನ್ನು ತೆರೆದು ತೋರಿಸಿತು. ರೆಪ್ಪೆ ಹೊಡೆಯದೆ ಅದನ್ನೇ ದೃಷ್ಟಿಸುತ್ತಲಿದ್ದ ಸ್ವಾಮಿಗಳು, ಆಕೆ ಮೇಲಕ್ಕೆದ್ದು ಸೆರಗು ಸರಿಪಡಿಸಿಕೊಳ್ಳುವಾಗ ಆಕೆಯ ಮುಖವನ್ನು ನಿರುಕಿಸುತ್ತ ತುಟಿಗಳಲ್ಲಿಯೆ

ನಕ್ಕರು. ರುಮಾಲನ್ನು ತೆಗೆದು ಗೋಡೆಗಿದ್ದ ಗೂಟಕ್ಕೆ ಹಾಕುವುದರಲ್ಲಿ ತೊಡಗಿದ್ದ ಮಲ್ಲಪ್ಪಸೆಟ್ಟರಿಗೆ ಈ ದೃಶ್ಯ ಕಾಣಿಸಲಿಲ್ಲವಾದರೂ ಸ್ವಾಮಿಗಳ ಎದುರಿನಲ್ಲಿ ಕೈ ಕಟ್ಟಿಕೊಂಡು ಹನುಮಂತನಂತೆ ನಿಂತುಕೊಂಡಿದ್ದ ಧೂರ್ತ ಶಾಸ್ತ್ರಿಗೆ ಎಲ್ಲವೂ ಕಾಣಿಸದಿರಲಿಲ್ಲ. ಗದಿಗೆಮ್ಮನ ಸೆರಗು ಜಾರುತ್ತಲಿದ್ದಾಗ ಆತನ ದೃಷ್ಟಿಯೂ ಆಕೆಯ ಎದೆಕಟ್ಟನ್ನೇ ಆಸೆಯಿಂದ ನಿರುಕಿಸುತ್ತಲಿತ್ತು. ಅತ್ಯಂತ ಕಷ್ಟದಿಂದ ದೃಷ್ಟಿಯನ್ನು ಕಿತ್ತು ಆತ ಸ್ವಾಮಿಗಳ ಮುಖದ ಕಡೆಗೆ ಹೊರಳಿಸಿದಾಗ ಅವರ ದೃಷ್ಟಿಯೂ ಅದೇ ಕೆಲಸ ಮಾಡುತ್ತಿದ್ದುದನ್ನು ಕಂಡು ಆತನಿಗೆ ಮೋಜೆನ್ನಿಸದಿರಲಿಲ್ಲ.

"ಮೊನ್ನೆ ನೀವು ಮಾಡಿದ ಭಾಷಣ ಬಹಳ ಚೆನ್ನಾಗಿತ್ತು. ಅಕ್ಕನ ವಿಚಾರವಾಗಿ ತುಂಬ ಓದಿಕೊಂಡಿದ್ದೀರಿ !" ಎಂದು ಸ್ವಾಮಿಗಳು ಗದಿಗೆಮ್ಮನನ್ನುದ್ದೇಶಿಸಿ ನುಡಿದರು.

"ಸರಿಯಾದ ಮಾತು ಅಪ್ಪಣೆ ಕೊಡಿಸಿದಿರಿ ಬುದ್ಧೀ. ಗದಿಗೆಮ್ಮನವರು ಈ ಊರಿನ–ಅದೇಕೆ–ಆಧುನಿಕ ಕರ್ನಾಟಕದ ಹೊನ್ನಮ್ಮ ಇದ್ದ ಹಾಗೆ ಇದಾರೆ. ಅವರಷ್ಟು ವ್ಯಾಸಂಗ ಮಾಡಿದವರನ್ನು, ಅವರಷ್ಟು ಅಮೋಘವಾಗಿ ಉಪನ್ಯಾಸ ಮಾಡುವವರನ್ನು ಇದುವರೆಗೆ ಕಂಡೇ ಇರಲಿಲ್ಲ ನಾನು. ಶ್ರೋತೃಗಳ ಎದೆಯಲ್ಲಿ ನಾಟುವ ಹಾಗೆ ಮಾತನಾಡಬಲ್ಲ ಕಲೆ ಅವರಿಗೆ ಚೆನ್ನಾಗಿ ಸಾಧಿಸಿದೆ. ನನಗಂತೂ ಅಂದು ಇವರ ಭಾಷಣ ಕೇಳಿದ ಮೇಲೆ ಕೆಳಗಡೆ ಕುಳಿತಿರಲಾಗಲಿಲ್ಲ. ಎದ್ದು ಕುಣಿದಾಡಬೇಕೆನ್ನಿಸಿತು. ಅಷ್ಟು ಸಂತೋಷವಾಗಿತ್ತು," ಎಂದ ಗಂಗಾಧರಶಾಸ್ತ್ರಿ. ಸ್ವಾಮಿಗಳು ನಕ್ಕರು. ಉಳಿದವರೂ ನಕ್ಕರು.

"ಏನು ಬುದ್ಧೀ, ತಮಗೆ ನಗೆ ಬಂದಿತಲ್ಲ. ನನ್ನ ಮಾತಿನಲ್ಲಿ ಅತಿಶಯೋಕ್ತಿಯೇನೂ ಇಲ್ಲವಲ್ಲಾ ? ನಿಜವಾಗಿಯೂ ಗದಿಗೆಮ್ಮನವರು ಕರ್ನಾಟಕಕ್ಕೇ ರತ್ನಪ್ರಾಯರು. ಮಹಿಳಾ ಮುಖಂಡರ ಅಭಾವದಿಂದ ನಮ್ಮ ಸ್ತ್ರೀವರ್ಗ ಹಿಂದಾಗಿರುವಾಗ ಇಂಥವರು ಮುಂದೆ ಬಂದು ಉತ್ಸಾಹದಿಂದ ಕೆಲಸಮಾಡುತ್ತಿರುವುದು ಎಷ್ಟು ಸಂತೋಷದ ವಿಷಯ. ಮುಂದಿನ ವಾರದ ನನ್ನ 'ಲಿಂಗ ವೀರ'ದಲ್ಲಿ ಇವರ ಚರಿತ್ರೆ ಬರೆಯಬೇಕೆಂದಿದ್ದೇನೆ. ಇಂಥ

ವರನ್ನೆತ್ತಿ ಹಿಡಿದು ಬೆಳಕಿಗೆ ತರಬೇಕಾದುದು ನಮ್ಮ ಕರ್ತವ್ಯವಲ್ಲವೆ?" ಎಂದು ಶಾಸ್ತ್ರಿ ಒಂದು ಉಪನ್ಯಾಸವನ್ನೇ ಬಿಚ್ಚಿದ.

"ಹೌದು, ಹೌದು. ಅಗತ್ಯವಾಗಿಯೂ ಪ್ರೋತ್ಸಾಹಿಸಬೇಕು. ಅವಶ್ಯವಾಗಿ ಬರೆಯಿರಿ. ಇವರ ಫೋಟೋ ಸಹ ಬರಬೇಕು ಮತ್ತೆ. ಬ್ಲಾಕಿನ ಖರ್ಚು ಬೇಕಾದರೆ ನಾವೇ ವಹಿಸುತ್ತೇವೆ," ಎಂದು ಹೇಳುತ್ತ ಸ್ವಾಮಿಗಳು ಗದಿಗೆವ್ವನ ದುಂಡು ಮುಖವನ್ನು ನಗುವ ಕಂಗಳಿಂದ ನಿಟ್ಟಿಸತೊಡಗಿದರು.

"ತಮಗೇಕೆ ವೃಥಾ ಖರ್ಚು ಬುದ್ಧೀ! ಆ ಬ್ಲಾಕಿನ ವೆಚ್ಚವನ್ನು ನಾನು ವಹಿಸುತ್ತೇನೆ. ಎಷ್ಟಾಗುತ್ತದೆ ಶಾಸ್ತ್ರಿಗಳೇ ಅದು?" ಎಂದರು ಮಲ್ಲಪ್ಪಸೆಟ್ಟರು.

"ಅದೇನು ಮಹಾ ಬಿಡಿರಿ ಸೆಟ್ಟರೆ. ದಿನವೂ ಸಾವಿರಾರು ರೂಪಾಯಿ ಖರ್ಚು ಮಾಡುವ ತಮ್ಮಂಥ ಶ್ರೀಮಂತರಿಗೆ ಇದೆಲ್ಲ ಏನು ದೊಡ್ಡದು? ಅಬ್ಬಾ ಅಂದರೆ ಇಪ್ಪತ್ತು ರೂಪಾಯಿ ಆದೀತು!"

ಹೊಗಳಿಕೆಯ ನುಡಿ ಕಿವಿಗೆ ಬಿದ್ದೊಡನೆ ಮಲ್ಲಪ್ಪಸೆಟ್ಟರ ಮುಖ ಹೆಮ್ಮೆಯಿಂದ ಅಗಲವಾಯಿತು. 'ಲಿಂಗವೀರ' ಪತ್ರಿಕೆಯಲ್ಲಿ ತನ್ನ ಚರಿತ್ರೆಯೂ ಭಾವಚಿತ್ರವೂ ಬರುವ ವಿಚಾರ ಗದಿಗೆವ್ವನ ಮುಖವನ್ನೂ ಅರಳಿಸಿದ್ದಿತು. ಬಸಪ್ಪಸೆಟ್ಟರಿಗೆ ಮಾತ್ರ ಈ ಮಾತುಕತೆಗಳಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಸ್ವಾಮಿಗಳಿಂದ ಒಂದೆರಡು ಅಡಿ ಅಂತರದಲ್ಲಿ ಅವರು ತಲೆ ತಗ್ಗಿಸಿಕೊಂಡು ಕುಳಿತಿದ್ದರು. ನಾಗವ್ವ ಕಂಬಕ್ಕೊರಗಿ ನಿಂತುಕೊಂಡಿದ್ದಳು.

"ಏನು ನಾಗವ್ವನವರೆ, ನಿಮ್ಮ ಮಕ್ಕಳಿಬ್ಬರೂ ಎಲ್ಲಿ ಮಾಯವಾಗಿದಾರೆ? ಕಾಣಿಸುವುದೇ ಇಲ್ಲವಲ್ಲಾ?" ಎಂದ ಶಾಸ್ತ್ರಿ.

ಸ್ವಾಮಿಗಳೂ ಆ ಮಾತು ಹೊರಡುವುದನ್ನೆ ನಿರೀಕ್ಷಿಸಿದ್ದ ಹಾಗೆ ತೋರಿತು. ಅವರೂ ಧ್ವನಿಗೂಡಿಸಿದರು: "ಹೌದು, ಹೌದು. ನಾವು ಮರೆತೇ ಬಿಟ್ಟಿದ್ದೆವಲ್ಲ? ಎಲ್ಲಿ ನಿಮ್ಮ ಸರಸೂ? ಆಕೆಯ ತಂಗಿ ಗೌರೂ? ಎಂಥ ಮುದ್ದು ಹುಡುಗಿ ಆಕೆ!"

"ಮುದ್ದು ಹುಡುಗಿ! ಯಾರು? ಗೌರುವೋ, ಸರಸುವೋ? ಯಾರನ್ನು ಕುರಿತು ಆಡಿದರು ಸ್ವಾಮಿಗಳು ಈ ಮಾತನ್ನು?" ಎಂದು ಮನಸ್ಸಿನಲ್ಲಿಯೆ

ಕೇಳಿಕೊಂಡ ಗಂಗಾಧರಶಾಸ್ತ್ರಿ. ಅದಕ್ಕೆ ಉತ್ತರವನ್ನೂ ಮನಸ್ಸಿನಲ್ಲಿಯೆ ಹೇಳಿಕೊಂಡ.

"ಮರೆತಿದ್ದೆವು," ಎಂದು ಸ್ವಾಮಿಗಳು ಹೇಳಿದರಷ್ಟೆ; ಆದರೆ ನಿಜಕ್ಕೂ ಅವರು ಮರೆತಿರಲಿಲ್ಲ. ಮಠದಿಂದ ಹೊರಟು ಬಸಪ್ಪಸೆಟ್ಟರ ಮನೆಗೆ ಬರುವಾಗ ದಾರಿಯಲ್ಲೆಲ್ಲ ಅವರ ಒಳಗಣ್ಣಿನೆದುರಿಗೆ ಸರಸುವಿನ ಪ್ರಾಯದ ಮೂರ್ತಿಯೆ ಕುಣಿಯುತ್ತಿದ್ದಿತು. ಅಷ್ಟು ಮಾತ್ರವಲ್ಲ, ಅಂದು ಬೆಳಗಿನಲ್ಲಿ ಹಾಸುಗೆ ಬಿಟ್ಟು ಎದ್ದೊಡನೆ ಅವರ ನೆನಪಿನಲ್ಲಿ ಸುಳಿದ ವ್ಯಕ್ತಿ ಸರಸುವೆ. ಒಂದೆರಡು ಬಾರಿ ಆಕೆಯನ್ನು ಜನಸಮೂಹದಲ್ಲಿ ಕಂಡದ್ದೆಷ್ಟೋ ಅಷ್ಟೆ. ಮೊದಲನೆಯ ಸಲವೇ ಸರಸುವಿನ ಯೌವನ, ಸುಂದರ ರೂಪು ಅವರ ಬಗೆಯನ್ನು ಸೆಳೆದುಕೊಂಡಿದ್ದುವು, 'ಪ್ರಭುಲಿಂಗಲೀಲೆ'ಯ ಪ್ರವಚನದ ಕಾಲಕ್ಕೆ ಆಕೆಯ ದೃಷ್ಟಿ ತಮ್ಮ ದೃಷ್ಟಿಯನ್ನು ಸೇರಿದಾಗ ಆಕೆಯ ಮುಖದಲ್ಲಿ ಮೂಡಿದ ಚಿತ್ತ ಚಾಂಚಲ್ಯವನ್ನೂ, ಕೋಲಾಹಲವನ್ನೂ ಅವರು ಗುರುತಿಸಿಕೊಂಡಿದ್ದರು. ತಮ್ಮ ಸುಪುಷ್ಟ ದೇಹವನ್ನೂ, ಸುಂದರ ರೂಪವನ್ನೂ, ರೇಶಿಮೆ ಜರತಾರಿಗಳ ಬೆಡಗನ್ನೂ ಕಂಡು ಆಕೆ ಮೋಹಿತಳಾದಳೆಂದೇ ಅವರು ಭಾವಿಸಿದ್ದರು. ಆಗ ಹೆಚ್ಚಿನ ಸಹವಾಸಕ್ಕೆ ಅವಕಾಶವಿರಲಿಲ್ಲ. ಇಂದು ಅವರ ಮನೆಯಲ್ಲೇ ಆಕೆಯನ್ನು ಕಾಣುವುದಿದೆ....ಆಕೆ ಬಂದು ತಮ್ಮ ಅಡಿಗೆರಗುವಳು....ಆಗ ತಾವು ಆಶೀರ್ವದಿಸುವ ನೆವದಿಂದ ಆಕೆಯ ಆಕರ್ಷಕ ತಲೆಯ ಮೇಲೆ ಕೈಯಾಡಿಸಬಹುದು....ಗುಲಾಬಿ ಹೂವಿನಂಥ ಆ ಸುಂದರ ಮುಖ ತಮ್ಮ ಮುಖಕ್ಕೆ ತೀರ ಹತ್ತಿರ ಬಂದಾಗ ಒಂದು ಕಣ್ಣ ನೋಟದಿಂದಲೆ ತಮ್ಮ ಭಾವವನ್ನಾಕೆಗೆ ತಿಳಿಸಬಹುದು........ಪ್ರಾಯದ ಹೆಣ್ಣಿನ ಮೇಲೆ ಪ್ರಭಾವ ಬೀರುವುದು ತಮಗೇನೂ ಕಷ್ಟದ ಕೆಲಸವಲ್ಲ....ಇಂಥ ಎಷ್ಟೋ ಹೆಣ್ಣುಗಳನ್ನು ಮರುಳುಗೊಳಿಸಿ ಗೆದ್ದುಕೊಂಡ ಸಿದ್ಧವೀರರು ತಾವು....ಇನ್ನು ಈ ಸರಸೂ ಒಬ್ಬಳು ಹೆಚ್ಚಿನವಳೆ? ಹಾ ಹಾ ಎನ್ನುವುದರಲ್ಲಿ ಆಕೆಯನ್ನೂ ಪ್ರೇಯಸಿಯನ್ನಾಗಿ ಮಾಡಿಕೊಳ್ಳಬಹುದು........ಅಲ್ಲದೆ ಆಕೆಯೂ ಈ ವಿಷಯದಲ್ಲಿ ಆತುರಳೇ ಇರಬಹುದು. ಈ ತುಂಬು ಹರಯದಲ್ಲಿ ಏಕಾಕಿನಿಯಾಗಿ ದಿನಗಳೆಯುತ್ತಿದ್ದಾಳೆ....

ಈ ಬಗೆಯಾಗಿ ಯೋಚಿಸುತ್ತ ಅಲ್ಲಿಗೆ ಬಂದಿದ್ದ ಸ್ವಾಮಿಗಳಿಗೆ ಇಷ್ಟು

ಹೊತ್ತಾದರೂ ಸರಸು ಬಂದು ತಮ್ಮ ಅಡಿಗಳಿಗೆರಗದಿದ್ದುದು ಕಳವಳವ ನ್ನುಂಟುಮಾಡದಿರಲಿಲ್ಲ. ಸೆಟ್ಟರ ಮನೆಯ ಮೆಟ್ಟಲು ಹತ್ತಿ ಬರುತ್ತಿದ್ದಾಗ ಮೇಲೆ ಕಿಟಕಿಯಲ್ಲಿ ತಂಗಿಯ ಭುಜದ ಮೇಲೆ ತೋಳು ಹಾಕಿ ನಿಂತ ಸರಸು ವಿನ ವಿಲಾಸಭಂಗಿ ಅವರ ಕಣ್ಣುಗಳೆದುರಿಗೆ ಕಟ್ಟಿದಂತಿದ್ದಿತು. ಗದಿಗೆಮ್ಮನ ಎದೆಕಟ್ಟನ್ನು ಕಂಡಾಗ ಅವರ ಚಿತ್ತ ಚಂಚಲವಾಗಿದ್ದುದೇನೊ ನಿಜವೆ. ಆದರೆ ಆ ಸಂದರ್ಭದಲ್ಲಿ ಅವರ ರಸಿಕ ಮನಸ್ಸು ಸರಸುವಿನ ಎಳೆಪ್ರಾಯದ ದೇಹವನ್ನು ನೆನೆದುಕೊಳ್ಳದಿರಲಿಲ್ಲ. ಮಧ್ಯ ವಯಸ್ಸಿನ ಗದಿಗೆಮ್ಮನನ್ನೂ, ನವಯುವತಿ ಸರಸುವನ್ನೂ ಅಕ್ಕಪಕ್ಕದಲ್ಲಿ ನಿಲ್ಲಿಸಿ ಅವರಿಬ್ಬರ ರೂಪ ಲಾವಣ್ಯಗಳನ್ನು ತುಲನೆಮಾಡಿ ನೋಡಿದಾಗ ಸರಸುವಿನ ಮುಂದೆ ಗದಿಗೆಮ್ಮ ನನ್ನು ನಿವಾಳಿಸಿ ಒಗೆಯಬೇಕೆಂದು ಅನ್ನಿಸದಿರಲಿಲ್ಲ ಅವರ ಮನಸ್ಸಿಗೆ. ಅಂತೆಯೆ, ಸರಸುವನ್ನು ಕಾಣಲು ಅವರು ಆತುರರಾಗಿದ್ದರು.

ಸ್ವಾಮಿಗಳ ಮನಸ್ಸಿನಲ್ಲಿದ್ದ ಈ ಬಯಕೆಯನ್ನು ಗಂಗಾಧರಶಾಸ್ತ್ರಿ ಯಾವಾಗಲೋ ಗುರುತಿಸಿಕೊಂಡಿದ್ದ. ರಸಿಕತನದಲ್ಲಿ ಶಾಸ್ತ್ರಿ ಯಾರಿಗೂ ಹಿಂದೆ ಬಿದ್ದವನಲ್ಲ. ಇಂಥ ವಿಷಯಗಳಲ್ಲೆಲ್ಲ ಆತನ ದೃಷ್ಟಿ ಬಲು ಸೂಕ್ಷ್ಮ ವಾದುದು. 'ಪ್ರಭುಲಿಂಗಲೀಲೆ'ಯ ಪ್ರವಚನಕ್ಕಾರಂಭವಾದಾಗಲೆ ಸ್ವಾಮಿ ಗಳು ಸರಸುವಿನ ಮೇಲೆ ಕಣ್ಣು ಹಾಕಿದ್ದನ್ನು ಆತ ಕಂಡುಕೊಂಡಿದ್ದ. ಹೆಣ್ಣಿನ ವಿಷಯವಾಗಿ ಈ ಸ್ವಾಮಿಗಳು ಯಾವ ಕಟ್ಟುನಿಟ್ಟುಗಳನ್ನೂ ಇಟ್ಟು ಕೊಂಡಿರಲಿಲ್ಲವೆಂಬುದಂತೂ ಎಂದೋ ಆತನಿಗೆ ಮನವರಿಕೆಯಾಗಿದ್ದಿತು. ಸಿದ್ಧವೀರಸ್ವಾಮಿಗಳಿಗೂ ಶಾಸ್ತ್ರಿಗಳಿಗೂ ಎಂಟು ಹತ್ತು ವರ್ಷಗಳಿಂದ ಗಾಢ ಪರಿಚಯ. ಅವರ ಸ್ವಭಾವದ ಸಕಲ ವೈಶಿಷ್ಟ್ಯಗಳೂ ಆತನಿಗೆ ಚೆನ್ನಾಗಿ ಗೊತ್ತು. ಅನೇಕ ಸಲ ಅವರ ಬಯಕೆಯ ವ್ಯಕ್ತಿಯನ್ನು ದೊರ ಕಿಸಿ ಕೊಡುವುದರಲ್ಲೂ ಆತ ನೆರವಾಗಿದ್ದ. ಅಂತೆಯೆ, ಬಸಪ್ಪ ಸೆಟ್ಟರ ಹರ ಯದ ಕನ್ಯೆಯ ಮೇಲೆ ಸ್ವಾಮಿಗಳು ಕಣ್ಣು ಹಾಕಿದಾಗ ಆತ ಕುತೂಹಲ ದಿಂದ ಆ ಪ್ರಕರಣವನ್ನು ನಿರುಕಿಸುತ್ತ ಬಂದಿದ್ದ. ತನಗೆ ಲಾಭವಾಗುವ ಲಕ್ಷಣ ಕಂಡು ಬಂದಲ್ಲಿ ಈ ವಿಷಯದಲ್ಲಿ ತಾನೂ ನೆರವಾಗಲು ಸಿದ್ಧನಾಗಿದ್ದ.

ಮಲ್ಲಪ್ಪ ಸೆಟ್ಟರಿಗೆ ಮಾತ್ರ ಸ್ವಾಮಿಗಳ ಸ್ವಭಾವದ ಈ ಭಾಗ ಅಪರಿ ಚಿತವಾಗಿದ್ದಿತು. ಸ್ವಾಮಿಗಳಿಗೂ ಅವರಿಗೂ ವಿಶೇಷ ಪರಿಚಯವೇನೂ

ಇರಲಿಲ್ಲ. ಒಂದು ತಿಂಗಳಿಗೆ ಹಿಂದೆಯೆ ಸೆಟ್ಟರು ಅವರನ್ನು ಮೊದಲಬಾರಿಗೆ
ಕಂಡದ್ದು. ತಮ್ಮೂರಿನ ಮಠಕ್ಕೆ ಯೋಗ್ಯ ಸ್ವಾಮಿಗಳೊಬ್ಬರನ್ನು ಶೋಧಿ
ಸುತ್ತ ಅವರು ಅಲೆಯುತ್ತಿದ್ದಾಗ ಮಿತ್ರರೊಬ್ಬರ ಮೂಲಕ ಸಿದ್ಧವೀರ ಸ್ವಾಮಿ
ಗಳ ಪರಿಚಯವಾಗಿದ್ದಿತು. ತಮ್ಮ ಆಡಂಬರಪೂರ್ಣ ವ್ಯಕ್ತಿತ್ವದಿಂದಲೂ
ಧೂರ್ತ ಮಾತುಗಾರಿಕೆಯಿಂದಲೂ ಸ್ವಾಮಿಗಳು ಸೆಟ್ಟರನ್ನು ಮರುಳುಗೊಳಿ
ಸಿದ್ದರು. ಎಲ್ಲ ದೃಷ್ಟಿಗಳಿಂದಲೂ ಈ ಸ್ವಾಮಿಗಳೇ ತಮ್ಮೂರಿನ ಮಠಕ್ಕೆ
ಅಧಿಕಾರಿಗಳಾಗಲು ಅರ್ಹರೆಂದು ಸೆಟ್ಟರಿಗೆನ್ನಿಸಲು ಬಹಳ ಹೊತ್ತು ಬೇಕಿರ
ಲಿಲ್ಲ. ಊರಿಗೆ ಬಂದವರೆ ಅವರು ಮಠದ ವಿಶ್ವಸ್ತ ಸಮಿತಿಯ ಸಭೆ ಕರೆದು
ತಮ್ಮ ವಿಚಾರ ಮಂಡಿಸಿದ್ದರು. ಆ ಸಮಿತಿಯ ಅಧ್ಯಕ್ಷರೂ ಅವರೇ ಆಗಿ
ದ್ದುದರಿಂದ ಆ ವಿಚಾರ ಒಂದು ತೀರ್ಮಾನಕ್ಕೆ ಬರುವುದೂ ಕಷ್ಟದಾಯಕ
ವಾಗಿರಲಿಲ್ಲ. ಗೌಡರ ಚೆನ್ನಪ್ಪನವರು, ಅವರ ಇಬ್ಬರು ಹಿಂಬಾಲಕರನ್ನು
ಬಿಟ್ಟರೆ ಇನ್ನಿತರರೆಲ್ಲ ಮಲ್ಲಪ್ಪಸೆಟ್ಟರ ಮಾತನ್ನು ಎತ್ತಿ ಹಿಡಿದಿದ್ದರು. ಮೊದ
ಲಿನ ಸ್ವಾಮಿಗಳನ್ನು ತೆಗೆದುಹಾಕುವುದು ಅನ್ಯಾಯದ ಕೆಲಸವೆಂದು ಚೆನ್ನ
ಪ್ಪನವರು ವಾದಿಸಿದ್ದರು. ಅಂಥ ಯೋಗ್ಯರಾದ ಸ್ವಾಮಿಗಳು ಕನ್ನಡ ನಾಡಿ
ನಲ್ಲೇ ತೀರ ವಿರಳ ಎಂದು ಅವರು ಅಭಿಪ್ರಾಯಪಟ್ಟಿದ್ದರು. ಆದರೆ ಅವರ
ಅಭಿಪ್ರಾಯಕ್ಕೆ ಸಮಿತಿಯಲ್ಲಿ ಬೆಲೆಯಿರಲಿಲ್ಲ. ಹತ್ತು ಜನ ಸದಸ್ಯರಲ್ಲಿ ಏಳು
ಜನರು ಸೆಟ್ಟರ ಪಕ್ಷದವರಾದುದರಿಂದ ಚೆನ್ನಪ್ಪನವರ ಮಾತು ನಡೆಯದೆ,
ಸಿದ್ಧವೀರಸ್ವಾಮಿಗಳನ್ನು ಕರೆಯಿಸಿ ಪಟ್ಟಕ್ಕೇರಿಸಬೇಕೆಂಬ ಸೆಟ್ಟರ ಗೊತ್ತು
ವಳಿ ಬಹುಮತದಿಂದ ಸ್ವೀಕೃತವಾಗಿದ್ದಿತು. ಮೊದಲಿನವರನ್ನು ಹೀಗೆ
ವಿನಾಕಾರಣವಾಗಿ ತೆಗೆದುಹಾಕುವುದು ಕಾನೂನಿಗೆ ವಿರುದ್ಧವಾದುದೆಂದೂ,
ಈ ಅಕ್ರಮ ಮತ್ತು ಅನ್ಯಾಯದ ಕೃತ್ಯವನ್ನು ತಾವು ಸಹಿಸುವುದು ಸಾಧ್ಯ
ವಿಲ್ಲವೆಂದೂ ನುಡಿದು ಗೌಡರು ಸಭೆಯಿಂದ ಹೊರಟು ಹೋಗಿದ್ದರು.
ಸೆಟ್ಟರು ಉಪಹಾಸದಿಂದ ನಕ್ಕು ಸುಮ್ಮನಾಗಿದ್ದರಷ್ಟೆ. ಗೌಡರಿಗೂ ಅವರಿಗೂ
ಇಂಥ ಚಕಮಕಿ ನಡೆದುದು ಅದೇ ಮೊದಲ ಸಲವೇನೂ ಆಗಿರಲಿಲ್ಲ.
ಹತ್ತಿಪ್ಪತ್ತು ವರ್ಷಗಳಲ್ಲಿ ನೂರಾರು ಬಾರಿ ಅವರಿಬ್ಬರಲ್ಲಿ ಈ ಬಗೆಯ ಮಾತಿನ
ಯುದ್ಧ ನಡೆದಿದ್ದಿತು. ನಗರಸಭೆ, ಅರ್ಬನ್ ಬ್ಯಾಂಕು, ಡಿಸ್ಟ್ರಿಕ್ಟ್ ಬೋರ್ಡು
ಗಳ ಆಯ್ಕೆಗಳ ಕಾಲದಲ್ಲಿ ಈ ತಿಕ್ಕಾಟ ವಿಕೋಪಕ್ಕೆ ಹೋಗಿ ಕೈಗೆ ಕೈ

ಪತ್ತುವ ಸನ್ನಿವೇಶಗಳೂ ಒದಗಿ ಬಂದಿದ್ದುವು. ಊರಿನಲ್ಲಿ ಎರಡು ಪಕ್ಷಗಳು ನಿರ್ಮಾಣವಾದುದಂತೂ ಹಳೆಯ ಮಾತಾಗಿ ಪರಿಣಮಿಸಿದ್ದಿತು. ಸೆಟ್ಟರದೊಂದು ಪಕ್ಷ, ಗೌಡರದೊಂದು ಪಕ್ಷ. ಸಾರ್ವಜನಿಕ ಸ್ವರೂಪದ ಪ್ರತಿಯೊಂದು ವಿಷಯದಲ್ಲೂ ಈ ಪಕ್ಷಗಳ ಮನೋಭಾವ ತಲೆಹಾಕದಿರುತ್ತಿರಲಿಲ್ಲ. ಅರ್ಥಾತ್–ಮಠದ ಸ್ವಾಮಿಗಳಿಗೆ ಸಂಬಂಧಪಟ್ಟ ಈ ವಿಷಯದಲ್ಲೂ ಆ ಭಾವನೆ ಬರದಿರಲಿಲ್ಲ. ತಮ್ಮ ಮಾತಿಗೆ ಯಾವ ಬೆಲೆಯನ್ನೂ ಕೊಡದೆ ಸೆಟ್ಟರು ಸಿದ್ಧವೀರಸ್ವಾಮಿಗಳನ್ನು ಕರೆದು ತಂದು ಅಧಿಕಾರಕ್ಕೇರಿಸಿದಾಗ ಗೌಡರು ಹಟತೊಟ್ಟು ನಿಂತು, ಏನನ್ನಾದರೂ ಮಾಡಿ ಈ ಸ್ವಾಮಿಯನ್ನೋಡಿಸಿ ಮೊದಲಿನ ಸ್ವಾಮಿಗಳನ್ನು ಮತ್ತೆ ಕರೆದು ತಂದು ಕೂಡಿಸದಿದ್ದರೆ ನನ್ನ ಹೆಸರು ಚೆನ್ನಪ್ಪ ಗೌಡನಲ್ಲ–ಎಂದು ಪಣಮಾಡಿ ಮೀಸೆ ತಿರುವಿದ್ದರು. ಈ ಪಣದ ವಿಷಯ ಸೆಟ್ಟರಿಗೆ ತಿಳಿದಾಗ ಅವರೂ ಮೀಸೆ ಹುರಿಮಾಡಿ–ಏನು ಬೇಕಾದ್ದು ಮಾಡಲಿ ಆತ, ನಾನು ಸಿದ್ಧನಿದ್ದೇನೆ. ತಲೆ ಬೀಳುವ ಪ್ರಸಂಗ ಬಂದರೂ ಈ ಸ್ವಾಮಿಗಳನ್ನು ಬಿಟ್ಟುಕೊಡಲಿಕ್ಕಿಲ್ಲ-ಎಂದು ನಿರ್ಧಾರ ಮಾಡಿದ್ದರು. ಅದಕ್ಕೆ ಸಿದ್ಧವೀರ ಸ್ವಾಮಿಗಳ ಬಗೆಗಿದ್ದ ಆದರಕ್ಕಿಂತ ಹೆಚ್ಚಾಗಿ ಸೆಟ್ಟರಿಗೆ ಚೆನ್ನಪ್ಪಗೌಡರ ವಿರುದ್ಧವಾದ ಹಟವೇ ಮುಖ್ಯವಾಗಿದ್ದಿತು. ತಮ್ಮ ಪ್ರತಿಷ್ಠೆ, ತಮ್ಮ ಪಕ್ಷದ ಅಭಿಮಾನ, ತಮ್ಮ ಶ್ರೀಮಂತಿಕೆಯ ದೊಡ್ಡಸ್ತಿಕೆಗಳೇ ಸ್ವಾಮಿಗಳ ರೂಪದಲ್ಲಿ ಪಣಕ್ಕೆ ಹಚ್ಚಲ್ಪಟ್ಟ ಹಾಗೆ ಅವರಿಗೆ ತೋರುತ್ತಿದ್ದಿತು. ಸ್ವಾಮಿಗಳು ಎಂಥವರಿದ್ದರೂ ಸರಿಯೆ, ಆ ಬಗೆಗೆ ಸೆಟ್ಟರಿಗೆ ಯಾವ ಆಸಕ್ತಿಯೂ ಇರಲಿಲ್ಲ. ಅವರು ತಮ್ಮ ಮಾತು ಕೇಳುತ್ತ, ತಮ್ಮ ಪಕ್ಷಕ್ಕೆ ಅಂಟಿಕೊಂಡಿದ್ದರೆ ಸಾಕು, ಸೆಟ್ಟರಿಗೆ ಸಮಾಧಾನ. ಸ್ವಭಾವತಃ ಕುಶಾಗ್ರಮತಿಗಳಾದ ಸಿದ್ಧವೀರಸ್ವಾಮಿಗಳು ಸೆಟ್ಟರ ಈ ವೈಶಿಷ್ಟ್ಯವನ್ನು ಎಂದೋ ಅರಿತುಕೊಂಡು ಅವರಿಗೆ ಕೊಂಚವೂ ಅಸಮಾಧಾನವಾಗದಂತೆ ತುಂಬ ಜಾಗರೂಕತೆಯಿಂದ ವರ್ತಿಸುತ್ತಿದ್ದರು.

ಬಸಪ್ಪಸೆಟ್ಟರ ಬಗೆಗೆ ಹೇಳಬೇಕಾದರೆ ಅವರಿಗೆ ಸ್ವಾಮಿಗಳ ವಿಷಯವಾಗಿ ಭಕ್ತಿ, ಆದರ, ಶ್ರದ್ಧೆಗಳನ್ನುಳಿದು ಬೇರಾವ ಭಾವನೆಗಳೂ ಇರಲಿಲ್ಲ. ಸ್ವಾಮಿಗಳೆಂದರೆ ದೇವರ ಸಮಾನರು, ಅವರ ವಿಚಾರವಾಗಿ ಹೆಚ್ಚು ಯೋಚಿಸುವುದೂ ಪಾಪಕರವೆಂದು ಅವರ ತಿಳಿವಳಿಕೆ. ಕಾವಿ ಬಟ್ಟೆ ಧರಿಸಿದವರೆಲ್ಲ

ಅವರ ದೃಷ್ಟಿಯಲ್ಲಿ ಪೂಜ್ಯರು. ಅವರನ್ನು ಕಂಡೊಡನೆ ಅವರ ಅಡಿಗೆರಗುವುದು, ಮನೆಗೆ ಕರೆದುತಂದು ಮೃಷ್ಟಾನ್ನ ಭೋಜನದಿಂದ ಅವರನ್ನು ಸಂತುಷ್ಟಗೊಳಿಸುವುದು, ಅವರಿಗೆ ಕಾಣಿಕೆಯನ್ನರ್ಪಿಸುವುದು-ಇಷ್ಟೆ, ತಮ್ಮ ಕರ್ತವ್ಯವೆಂದು ಅವರ ಕಲ್ಪನೆ. ಅಂತೆಯೆ, ಸಿದ್ಧವೀರಸ್ವಾಮಿಗಳನ್ನು ಹತ್ತು ವರ್ಷಗಳಿಂದ ಬಲ್ಲವರಾಗಿದ್ದರೂ ಸೆಟ್ಟರು ಅವರ ರೀತಿ ನಡತೆಗಳನ್ನು ವಿಮರ್ಶಕ ದೃಷ್ಟಿಯಿಂದ ನಿರುಕಿಸುವ ಗೊಡವೆಗೇ ಬಿದ್ದಿರಲಿಲ್ಲ. ಸಿದ್ಧವೀರಸ್ವಾಮಿಗಳು ಇನ್ನೂ ಮರಿಸ್ವಾಮಿಗಳಾಗಿದ್ದಾಗ ಜಾತ್ರೆಯೊಂದರಲ್ಲಿ ಸೆಟ್ಟರು ಅವರನ್ನು ಕಂಡಿದ್ದರು. ಆಗ ಬಸವಣ್ಣನವರನ್ನು ಕುರಿತು ಅವರು ಮಾಡಿದ ಭಾಷಣಗಳನ್ನು ಮೆಚ್ಚಿ ಅವರ ಭಕ್ತರಾಗಿದ್ದರು. ಅಂದಿನಿಂದ ಇಂದಿನವರೆಗೂ ಆ ಭಕ್ತಿ ಹಾಗೆಯೆ ಬೆಳೆದು ಬಂದಿತ್ತು. ಹೆಣ್ಣಿನ ವಿಷಯದಲ್ಲಿ ಸ್ವಾಮಿಗಳಿಗಿದ್ದ ಚಾಪಲ್ಯದ ವಿಚಾರ ಬಸಪ್ಪಸೆಟ್ಟರ ಕನಸುಮನಸಿನಲ್ಲೂ ಸುಳಿದಿರಲಿಲ್ಲ. “ನಂಬಿ ಕರೆದರೆ ಓ ಎನ್ನನೇ ಶಿವನು !” ಎಂಬ ಬಸವಣ್ಣನವರ ವಚನದಲ್ಲಿ ಸೆಟ್ಟರಿಗೆ ಪೂರ್ಣ ನಂಬುಗೆಯಿದ್ದಿತು. ಅಂತೆಯೆ, ಸ್ವಾಮಿಗಳೆಲ್ಲರನ್ನೂ ಶಿವನ ಅವತಾರ ಸ್ವರೂಪಿಗಳೆಂದು ನಂಬಿ ಅವರನ್ನು ಪೂಜ್ಯಭಾವದಿಂದ ನೋಡುತ್ತ ಬಂದವರು ಸೆಟ್ಟರು.

ಇನ್ನು ನಾಗಮ್ಮ. ಆಕೆಯದೂ ಸ್ವಲ್ಪಮಟ್ಟಿಗೆ ಗಂಡನಂಥ ಸರಳ ಮನಸ್ಸೇ. ಸ್ವಾಮಿಗಳೆಂದರೆ ಭಯ-ಭಕ್ತಿ ತುಂಬಿದ ಹೃದಯ. ಹಿಂದೆ ಆ ಮಠದ ಅಧಿಕಾರಿಗಳಾಗಿದ್ದ ಪ್ರಭುಸ್ವಾಮಿಗಳ ಬಗೆಗೂ ಆಕೆಗೆ ಭಕ್ತಿಯಿದ್ದಿತು. ಆದರೆ ಅವರು ಲೌಕಿಕ ವ್ಯವಹಾರಕ್ಕೆ ಕೊಂಚವೂ ಹೊಂದಿಕೊಳ್ಳದೆ ನಿರ್ಲಿಪ್ತರಾಗಿರುತ್ತಿದ್ದುದರಿಂದ ಊರಿನ ಅನೇಕರಿಗೆ ಅಸಮಾಧಾನವಾದ ಹಾಗೆ ನಾಗಮ್ಮನಿಗೂ ಬೇಸರವಾಗಿದ್ದಿತು. ಗವಿಗೆಮ್ಮನ ಉತ್ಸಾಹದಿಂದ ಅಲ್ಲಿ ‘ಅಕ್ಕನ ಬಳಗ’ ಸ್ಥಾಪಿಸಲ್ಪಟ್ಟಾಗ ಸ್ವಾಮಿಗಳು ಆ ವಿಷಯದಲ್ಲಿ ಮಾರ್ಗದರ್ಶನ ಮಾಡಬಹುದೆಂದು ನಾಗಮ್ಮ ಆಶಿಸಿದ್ದುದು ವ್ಯರ್ಥವಾಗಿದ್ದಿತು. ಬಳಗದ ಮೊದಲನೆಯ ಸಭೆಗೆ ಬಂದುದೆಷ್ಟೊ ಅಷ್ಟೆ, ಅನಂತರದ ಒಂದು ಸಭೆಗೂ ಪ್ರಭುಸ್ವಾಮಿಗಳು ಬಂದಿರಲಿಲ್ಲ. ಬಳಗದ ಕಾರ್ಯಕಲಾಪಗಳ ಬಗೆಗೆ ಸಲಹೆ ಕೇಳುವುದಕ್ಕಾಗಿ ನಾಗಮ್ಮ ಅವರ ಹತ್ತಿರ ಹೋದಾಗ ಸ್ವಾಮಿಗಳು ಆ ವಿಷಯವಾಗಿ ಪೂರಾ ಉದಾಸೀನತೆಯನ್ನು ವ್ಯಕ್ತಗೊಳಿ

ಸಿದುದು ಆಕೆಯ ಜೀಸರವನ್ನಿನ್ನೂ ಹೆಚ್ಚಿಸಿದ್ದಿತು. ಅನುಭವಮಂಟಪ ದಲ್ಲಿ ಮಹಾದೇವಿಯಕ್ಕನನ್ನೂ ಇನ್ನಿತರ ಶರಣೆಯರನ್ನೂ ಸ್ವಾಗತಿಸಿ ಅವರಿಗೆ ಮುಕ್ತಿಯ ದಾರಿ ತೋರಿಸಿದ ಅಲ್ಲಮಪ್ರಭುವೆಲ್ಲಿ, ಅನುಭವ ಮಂಟಪದ ಆ ದಿವ್ಯ ಕಾಲವನ್ನು ಮತ್ತೆ ನೆಲೆಗೊಳಿಸಲು ದುಡಿಯಲೆಳಸುವ ತಮ್ಮ ಬಳಗದ ಬಗೆಗೆ ಉದಾಸೀನವಾಗಿರುವ ಈ ಸ್ವಾಮಿಯೆಲ್ಲಿ—ಎಂದು ಕೊಂಡಾಗ ಆಕೆಗೆ ಕೊಂಚ ಕೋಪವೂ ಬಂದಿದ್ದಿತು. ಅಂತೆಯೆ, ಅವರನ್ನು ಮಠದಿಂದ ದೂರಗೊಳಿಸಿ ತರುಣರೂ ಉತ್ಸಾಹಿಗಳೂ ತೇಜಸ್ವಿಗಳೂ ಆದ ಸಿದ್ಧವೀರ ಸ್ವಾಮಿಗಳನ್ನು ಪೀಠಕ್ಕೇರಿಸಿದಾಗ ನಾಗಮ್ಮನಿಗೆ ಸ್ವಾಭಾವಿಕವಾಗಿಯೆ ಸಂತೋಷವಾಗಿದ್ದಿತು. ಮೊದಲಿನ ಮುದುಕ ಸ್ವಾಮಿಯಂತಲ್ಲವಲ್ಲ ಈ ಸ್ವಾಮಿಗಳು! ಅಧಿಕಾರಕ್ಕೇರಿದೊಡನೆಯೆ ತಮ್ಮ 'ಅಕ್ಕನ ಬಳಗ'ದ ಬಗೆಗೆ ಹೇಗೆ ಆಸಕ್ತಿವಹಿಸಿ ಮಾತನಾಡಿದ್ದರು! ತನಗೂ, ಗದಿಗೆವ್ವನಿಗೂ ಪ್ರೋತ್ಸಾಹವಿತ್ತು ತುಂಬಿದ ಸಭೆಯಲ್ಲಿ ತಮ್ಮಿಂದ ಭಾಷಣ ಮಾಡಿಸಿ ಕೇಳಿ ಮೆಚ್ಚುಗೆಯನ್ನೂ ಘೋಷಿಸಿದ್ದರು. ಅವರು ಬಂದ ಬಳಿಕ ಮಠದ ವಾತಾವರಣವೆಲ್ಲವೂ ಹೊಸದೊಂದು ಕಳೆಯಿಂದ ಬೆಳಗುತ್ತಿದ್ದ ಹಾಗೆ ತೋರುತ್ತಿದ್ದಿತು....ಈ ವರ್ಷ ನಡೆಯುತ್ತಿರುವಂಥ ಶ್ರಾವಣದ ಉತ್ಸವ ಇಪ್ಪತ್ತು ವರ್ಷಗಳಲ್ಲಿ ಒಂದು ಸಲವಾದರೂ ನಡೆದಿದ್ದಿತೇ? ದಿನವೂ ಪುರಾಣ, ಪ್ರವಚನ, ಭಾಷಣ, ಕೀರ್ತನೆ, ಕಾವ್ಯಗಾಯನ-ತಮ್ಮ ಊರು ಆಧುನಿಕ ಕಲ್ಯಾಣ ಪಟ್ಟಣವಾದಂತೆ ತೋರುತ್ತಿತ್ತು ನಾಗಮ್ಮನಿಗೆ......... ಸ್ವಾಮಿಗಳ ಮಠವೇ ಅನುಭವ ಮಂಟಪ....ಸ್ವಾಮಿಗಳೇ ಅಲ್ಲಮಪ್ರಭು.... ತನ್ನ ಪತಿಯೇ ಬಸವಣ್ಣ....ತಾನೇ ನೀಲಾಂಬಿಕೆ....ಗದಿಗೆವ್ವನೇ ಮಹಾದೇವಿಯಕ್ಕ ಎಂದೆಲ್ಲ ಆಕೆ ಯೋಚಿಸುತ್ತಿದ್ದಳು. ಈ ಅಲ್ಲಮಪ್ರಭುವಿನ ಮಾಯಾ ಕೋಲಾಹಲದ ಬಗೆಗೆ ನಾಗಮ್ಮ ಸಂಪೂರ್ಣ ಅಜ್ಞಾನದಲ್ಲಿದ್ದಳು.

ಆಕೆಯ ದೃಷ್ಟಿಯಲ್ಲಿ 'ಮಹಾದೇವಿಯಕ್ಕ'ನಾಗಿದ್ದ ಗದಿಗೆವ್ವನಿಗೆ ಮಾತ್ರ ಈ ನೂತನ 'ಅಲ್ಲಮಪ್ರಭು'ವಿನ ವಿಚಾರವಾಗಿ ಅಂಥ ಅಜ್ಞಾನವೇನೂ ಇರಲಿಲ್ಲ. ನಾಗಮ್ಮನಂಥ ಮರುಳ ಸ್ವಭಾವವಲ್ಲ ಆಕೆಯದು. ಬೆಳ್ಳಗಿರುವುದೆಲ್ಲ ಹಾಲಲ್ಲ ಎಂಬುದನ್ನಾಕೆ ಚೆನ್ನಾಗಿ ಬಲ್ಲಳು. ಹತ್ತು ಊರುಗಳನ್ನು ತಿರುಗಿ ನೂರಾರು ಜನರನ್ನು ಅರಿತವಳಾದುದರಿಂದ, ಹಲವು

ದಿನಗಳ ಸಹವಾಸದಲ್ಲಿಯೆ ವ್ಯಕ್ತಿಗಳ ಸ್ವಭಾವವನ್ನೂ ಅಂತರಂಗವನ್ನೂ ಕಂಡುಕೊಳ್ಳುವ ಕೌಶಲ ಆಕೆಗೆ ಹಸ್ತಗತವಾಗಿದ್ದಿತು. ಪ್ರಣಯ ವಿಚಾರಗಳಲ್ಲಿ ಆಕೆ ಅನನುಭವಿಕಳೇನೂ ಅಲ್ಲ. ಅಂತೆಯೆ ಮೊದಲ ಸಲ ಈ ಸ್ವಾಮಿಗಳನ್ನು ಕಂಡಾಗಲೇ ಅವರ ಯೋಗ್ಯತೆಯೆಂಥದೆಂಬುದನ್ನಾಕೆ ಅರಿತುಕೊಂಡಿದ್ದಳು. ಅವರು ತನ್ನೆಡೆಗೆಸೆಯುತ್ತಿದ್ದ ಕಟಾಕ್ಷಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಳು.

"ಸರಸೂ ಗೌರಿ ಎಲ್ಲಿದ್ದಾರೆ? ಕರೆಯಲ್ಲ ಅವರನ್ನು," ಎಂದು ಬಸಪ್ಪ ಸೆಟ್ಟರು ಪಿಸುದನಿಯಲ್ಲಿ ಹೇಳಿದಾಗ ನಾಗಮ್ಮ ನಿಂತ ಸ್ಥಳವನ್ನು ಬಿಟ್ಟು ಅಟ್ಟಕ್ಕೆ ನಡೆದಳು. ಕೊಟಡಿಯ ಬಾಗಿಲಲ್ಲಿ ನಿಂತುಕೊಂಡು ಕೆಳಗೆ ನಡೆದಿದ್ದ ಮಾತುಗಳೆಲ್ಲವನ್ನೂ ಕೇಳುತ್ತಲಿದ್ದ ಅಕ್ಕತಂಗಿಯರಿಬ್ಬರೂ ತಾಯಿಯನ್ನು ಕಂಡೊಡನೆ ಸಂಕೋಚದಿಂದ ಕೊಟಡಿಯೊಳಕ್ಕೆ ಸೇರಿದರು.

"ಇಲ್ಲೇ ನಿಂತರಾಯಿತೇ ಸರಸೂ? ಕೆಳಗೆ ಬಂದು ನಮಸ್ಕಾರ ಮಾಡಬಾರದೇ ಸ್ವಾಮಿಗಳಿಗೆ? ಅವರೇನು ತಿಳಿದುಕೊಂಡಾರು?"

ಸರಸು ಉತ್ತರವೀಯದೆ ಮೌನವಾಗಿದ್ದಳು. ನಾಗಮ್ಮ ಮತ್ತೆ ನುಡಿದಳು: "ಬಾ, ಸರಸೂ. ಬಾ ಗೌರೂ. ಮನೆಗೆ ಕರೆದುಕೊಂಡು ಬಂದ ಮೇಲೆ ನಮಸ್ಕಾರ ಮಾಡದಿದ್ದರೆ ಅಪಮಾನ ಮಾಡಿದಂತಾಗುವದಿಲ್ಲವೆ?"

"ಏನೋ ನನಗೆ ಮನಸ್ಸಿಲ್ಲ ಅವ್ವ. ಅಷ್ಟು ಜನರೆದುರಿಗೆ ಹೇಗೆತಾನೆ ಬಂದು ನಮಸ್ಕಾರ ಮಾಡೋದು?" ಎಂದಳು ಸರಸು.

"ಜನರಿದ್ದರೇನಾಯಿತು? ಅವರೇನು ತಿನ್ನುತಾರೆಯೆ ನಿನ್ನ? ಹೀಗ್ಯಾಕೆ ಮಾಡುತ್ತೀ ಹುಚ್ಚಿಯ ಹಾಗೆ? ಎಂದೂ ಮನೆ ಬಿಟ್ಟು ಹೊರಗೆ ಹೋಗದವರ ಹಾಗೆ ಮಾತಾಡುತೀಯಲ್ಲ?"

"ಅಂತೂ ಇವೊತ್ತು ಮಾತ್ರ ನಾ ಬರಲಾರೆ ಅವ್ವ."

ನಾಗಮ್ಮ ಒಂದೆರಡು ಕ್ಷಣ ಸುಮ್ಮನಿದ್ದಳು. ಕೆಳಗಡೆ ಸ್ವಾಮಿಗಳಿದ್ದಾರೆ, ಮಲ್ಲಪ್ಪಸೆಟ್ಟರಿದ್ದಾರೆ, ಶಾಸ್ತ್ರಿಗಳಿದ್ದಾರೆ. ತಾನು ಧ್ವನಿಯೆತ್ತಿ ಕೂಗಿ ಗದರಿಸಿದಲ್ಲಿ ಅವರೆಲ್ಲರಿಗೂ ಸಹಜವಾಗಿಯೆ ಕೇಳಿಸುತ್ತದೆ. ಕೂಗುವಂತಿಲ್ಲ. ಸರಸುವಿನ ಮೇಲೆ ಒತ್ತಾಯ ಮಾಡುವಂತೆಯೂ ಇಲ್ಲ. ಮತ್ತೆ ಆಕೆ ಕಣ್ಣೀರು ಸುರಿಸುತ್ತ ಕುಳಿತಳೆಂದರೆ ಸಂಜೆಯವರೆಗೂ ಅದರಲ್ಲೇ

ಕಳೆದುಹೋದೀತು. ಕೊಂಚ ಉಪಾಯವಾಗಿ ಕೆಲಸ ಸಾಧಿಸಬೇಕೆಂದು ಯೋಚಿಸಿ ನಾಗಮ್ಮ ಸರಸುವಿನ ವಿಚಾರ ಬದಿಗಿರಿಸಿ ಗೌರಿಯನ್ನು ಕುರಿತು– "ನೀನಾದರೂ ನಡೆ ಗೌರೂ. ಸ್ವಾಮಿಗಳಿಗೆ ನಮಸ್ಕಾರ ಮಾಡಿ ಬಂದು ಮತ್ತೆ ಹರಟೆ ಹೊಡೆ ಬೇಕಾದರೆ!" ಎಂದಳು.

"ಆ ಸ್ವಾಮಿಗೆ ನಾ ನಮಸ್ಕಾರ ಮಾಡೋಲ್ಲ ಅಮ್ಮ?" ಎಂದಳು ಗೌರಿ.

"ಯಾಕೇ? ಇಂಥ ಮಾತಾಡುತ್ತೀಯು?"

"ನೀ ಏನೇ ಹೇಳು. ಆ ಸ್ವಾಮಿ ಒಳ್ಳೆಯವನಲ್ಲ. ಅಂಥವನಿಗೆ ಯಾರು ನಮಸ್ಕಾರ ಮಾಡಿಯಾರು?"

"ಮೆಲ್ಲಗೆ–ಕೊಂಚ ಮೆಲ್ಲಗಾದರೂ ಮಾತನಾಡೇ. ಏನು ಮಾಡಿದರು ನಿನಗವರು? ಯಾಕೆ ಸಿಟ್ಟು ಅವರ ಮೇಲೆ?"

"ಸಿಟ್ಟು ಬರದೇ ಇರುತ್ತದೆಯೇನೇ ಅಮ್ಮ? ನಿನ್ನೆ ನಾನವರಿಗೆ ನಮಸ್ಕಾರ ಮಾಡಿದಾಗ ನನಗೇನು ಕೇಳಿದ ಆತ ನೆನಪಿಲ್ಲವೇ ನಿನಗೆ?"

ನಾಗಮ್ಮ ನಗುತ್ತಾ–"ಏನು ಕೇಳಿದರಮ್ಮ?" ಎಂದಳು.

"ಯಾರೋ ಪೋಲಿಗಳು ಕೇಳಿದ ಹಾಗೆ ಕೇಳಬೇಕೇ ಆತ ನನಗೆ? ಗೌರಾಂಬಿಕಾ ಅಂತ ಅನ್ನದೆ ಗೌರಮ್ಮ ಅಂತ ಸಣ್ಣದಾಗಿ ಕರೆಯಬೇಕೇ ನನ್ನ? ಅಷ್ಟಕ್ಕೇ ಸುಮ್ಮನಾದನೇ ಅಂದರೆ ಅದೂ ಇಲ್ಲ. ನಿಮ್ಮಕ್ಕ ಸರಸೂ ಇವೊತ್ತು ಯಾಕೆ ಬರಲಿಲ್ಲ–ಅಂತ ಪಟಕ್ಕನೆ ಕೇಳಿಬಿಟ್ಟನಲ್ಲ....ಇದೆಂಥ ಸ್ವಾಮಿಯೇ ಅಮ್ಮ? ಹುಡುಗಿಯರ ಸುದ್ದಿಯೆಲ್ಲ ಯಾಕೆ ಇವನಿಗೆ?"

"ಅವರು ಸ್ವಾಮಿಗಳು ಗೌರೂ. ಹುಡುಗಿಯರಾದರೇನು, ಹುಡುಗರಾದರೇನು. ಅವರ ದೃಷ್ಟಿಯಲ್ಲಿ ಎಲ್ಲರೂ ಒಂದೇ. ನಾವೆಲ್ಲ ನೀವೆಲ್ಲ ಅವರಿಗೆ ಮಕ್ಕಳಿದ್ದ ಹಾಗೆ. ಅವರೇನು ಕೇಳಿದರೂ ತಪ್ಪಿಲ್ಲ."

"ಒಳ್ಳೆಯ ತಂದೆ!" ಎಂದು ಉಪಹಾಸದಿಂದ ನಗತೊಡಗಿದಳು ಗೌರಿ. "ನಾನೇನೂ ಅವನಿಗೆ ನಮಸ್ಕಾರ ಮಾಡೋಲ್ಲ."

"ಬರುತ್ತೀಯೋ ಇಲ್ಲವೋ, ಇಲ್ಲಾ ಅವರನ್ನು ಕಳಿಸಲೋ?" ಎಂದು ನಾಗಮ್ಮ ಕೊನೆಯ ಬಾಣ ಬಿಟ್ಟಳು. ಅದಕ್ಕೆ ಮಾತ್ರ ಗೌರಿ ಸರಸು ಇಬ್ಬರೂ ಬಾಗಲೇ ಬೇಕಾಯಿತು. ತಂದೆ ಎಂದರೆ ಇಬ್ಬರಿಗೂ ತುಂಬಾ

ಭಯ. ಅವರ ತೀಕ್ಷ್ಣನೋಟಕ್ಕೆ, ಹರಿತ ಮಾತಿಗೆ, ಸಿಡಿಲಿನಂಥ ಸಿಟ್ಟಿಗೆ ಇಬ್ಬರೂ ಹೆದರುತ್ತಿದ್ದರು. ಸ್ವಾಮಿಗಳಿಗೆ ನಮಸ್ಕಾರ ಮಾಡುವುದಿಲ್ಲವಾಗಿ ತಾವಿಬ್ಬರೂ ಹಟ ಹಿಡಿದುದು ತಂದೆಗೆ ತಿಳಿದಲ್ಲಿ ಅವರೆಷ್ಟು ಮುನಿದುಕೊಳ್ಳುವರೋ ಎಂಬ ಯೋಚನೆ ಬರುತ್ತಲೂ ಅಕ್ಕತಂಗಿಯರು ತಾವಾಗಿಯೆ ಎದ್ದು ಹೊರಟರು.

ಮೆಟ್ಟಲುಗಳನ್ನಿಳಿದು ಅವರು ಪಡಸಾಲೆಗೆ ಬಂದಾಗ ಶಾಸ್ತ್ರಿ ಎರಡೂ ಕೈಗಳನ್ನೂ ಮುಂದೆ ಚಾಚಿ ಅವರನ್ನು ಸ್ವಾಗತಿಸುವ ಭಂಗಿಯಲ್ಲಿ ನಿಂತು— “ಬಾ ತಾಯಿ, ಹೀಗೆ ಬಾ. ಬಾ ಮಗೂ, ಹೀಗೆ ಬಾ,” ಎಂದು ಹೇಳುತ್ತ ಸ್ವಾಮಿಗಳ ಪಾದಗಳ ಕಡೆಗೆ ಕೈ ತೋರಿಸಿದ.

ಅಕ್ಕತಂಗಿಯರಿಬ್ಬರೂ ಒಂದೇ ಬಾರಿಗೆ ಸ್ವಾಮಿಗಳಿಗೆ ಮಣಿದು ದೂರ ಸರಿದು ಅಡುಗೆಯ ಮನೆಯನ್ನು ಸೇರಿದರು. ಸರಸು ಒಂದೆರಡು ಕ್ಷಣವಾದರೂ ತಮ್ಮೆದುರಿಗೆ ನಿಂತುಕೊಂಡಾಳು, ಆಕೆಯೊಂದಿಗೆ ಒಂದೆರಡು ಮಾತನಾಡಬಹುದು ಎಂದು ಎಣಿಕೆ ಹಾಕಿಕೊಂಡಿದ್ದ ಸ್ವಾಮಿಗಳಿಗೆ ನಿರಾಶೆಯಾಗದಿರಲಿಲ್ಲ. ಆಕೆಯ ಮುಖವನ್ನು ಸಹ ಸರಿಯಾಗಿ ನೋಡಲಾಗಲಿಲ್ಲ. ಮಿಂಚಿನಂತೆ ಬಂದು ಮಿಂಚಿನಂತೆ ಹೊರಟುಹೋದಳು. ಇರಲಿ, ಇರಲಿ. ಎಲ್ಲಿ ಹೋಗುತ್ತಾಳೆ? ಮನೆಯಲ್ಲೇ ಇದ್ದವಳು ಮುಖ ತೋರಿಸದಿರುತ್ತಾಳೆಯೆ? ತಾವು ಊಟಕ್ಕೆ ಕುಳಿತಾಗ ತುಪ್ಪ ಬಡಿಸುವುದಕ್ಕಾದರೂ ಬಂದೇ ಬರುವಳಲ್ಲ—ಎಂದು ಯೋಚಿಸಿ ಸಮಾಧಾನ ತಂದುಕೊಂಡರು.

ಅಡುಗೆಯ ಮನೆಗೆ ಬಂದು ಅಜ್ಜಿಯ ಹತ್ತಿರ ಕುಳಿತುಕೊಂಡು ಸೆರಗಿನಿಂದ ಗಾಳಿ ಹಾಕಿಕೊಳ್ಳತೊಡಗಿದಳು ಸರಸು. ಮಳೆಗಾಲದ ಆ ತಂಪು ಹವೆಯಲ್ಲಿ ಆಕೆಯ ಮೈಯೆಲ್ಲ ಬೆವರಿದ್ದಿತು. ಮುಖ ಆರಕ್ತವಾಗಿದ್ದಿತು. ನಮಸ್ಕಾರ ಮಾಡುವಾಗ ಆಕೆಯ ಎದೆ ಡಬಡಬನೆ ಬಡಿದುಕೊಂಡಿದ್ದಿತು. ಸ್ವಾಮಿಗಳ ಮುಖದ ಕಡೆಗೆ ಕಣ್ಣೆತ್ತಿ ನೋಡುವ ಧೈರ್ಯವಾಗಿರಲಿಲ್ಲ. ದೃಷ್ಟಿಯನ್ನು ನೆಲದ ಕಡೆಗೆ ಹೊರಳಿಸಿದ್ದಳಾದರೂ ಆ ನೆಲದ ಮೇಲೂ ಸ್ವಾಮಿಗಳ ಆ ವಿಲಕ್ಷಣ ಶಕ್ತಿಪೂರ್ಣ ಕಣ್ಣು ಮೂಡಿದ್ದ ಹಾಗೆ ಭಾಸವಾಗಿದ್ದಿತು. ಪಡಸಾಲೆಯನ್ನು ಬಿಟ್ಟು ಅಡುಗೆಯ ಮನೆಗೆ ಬಂದ ಮೇಲೂ ಆಕೆಯ ದೃಷ್ಟಿಪಥದಿಂದ ಮಾಯವಾಗಲಿಲ್ಲ ಅವರ ಕಣ್ಣು. ಗಾಳಿ ಹಾಕಿ

ಕೊಂಡಳು. ಮುಖ ಒರೆಸಿಕೊಂಡಳು. ಹೃದಯದಲ್ಲಿ ವಿಚಿತ್ರವಾದ ಕೋಲಾಹಲ. ಎದೆಯಲ್ಲಿ ತೀವ್ರ ತಳಮಳ. ಸ್ವಾಮಿಯ ಸಮೀಪಕ್ಕೆ ಹೋಗುತ್ತಲೂ ವಿದ್ಯುತ್ ಶಕ್ತಿಯಂಥ ವಿಚಿತ್ರ ಶಕ್ತಿಯೊಂದು ತನ್ನನ್ನು ಅವರೆಡೆಗೆ ಸೆಳೆಯುತ್ತಿದ್ದ ಹಾಗೆ ಭಾಸವಾಗಿದ್ದಿತು. ಅದಾವ ಶಕ್ತಿಯೊ, ಅದೆಂಥ ರಹಸ್ಯವೊ, ಅದೇನು ಮಾಯೆಯೊ, ಸರಸುವಿಗೆ ತಿಳಿಯದು. ಹೋಳಿಗೆಗಳನ್ನು ಬೇಯಿಸುತ್ತಲಿದ್ದ ರುದ್ರಪ್ಪಜ್ಜಿಯ ಕೈಗಳ ಚಲನವಲನವನ್ನು ಶೂನ್ಯವಾಗಿ ದಿಟ್ಟಿಸುತ್ತ ಸರಸು ಹತ್ತು ಹದಿನೈದು ನಿಮಿಷಗಳ ವರೆಗೆ ಶಿಲಾಮೂರ್ತಿಯಂತೆ ಕುಳಿತುಕೊಂಡಿದ್ದಳು. ಅಜ್ಜಿ ಏನೇನನೊ ಕೇಳುತ್ತಲಿದ್ದಳು. ಆ ಕಡೆಗೆ ಸರಸುವಿಗೆ ಗಮನವಿರಲಿಲ್ಲ. ಪಕ್ಕದಲ್ಲಿ ಕುಳಿತುಕೊಂಡು ಹೂರಣವನ್ನು ಬಾಯಿಗಿಟ್ಟುಕೊಂಡು ಕತ್ತಿಗಿಳಿಸುತ್ತಲಿದ್ದ ಗೌರಿ— "ನೀನೂ ಸ್ವಲ್ಪ ತಿನ್ನಬಾರದೇ ಅಕ್ಕ? ಎಷ್ಟು ಸವಿಯಾಗಿದೆ!" ಎನ್ನುತ್ತಲಿದ್ದುದೂ ಆಕೆಯ ಲಕ್ಷ್ಯಕ್ಕೆ ಬರಲಿಲ್ಲ.

ಹೊರಗಡೆ ಮಾತು ರಭಸದಿಂದ ಸಾಗಿದ್ದಿತು. ಹಿಂದಿನ ಸ್ವಾಮಿಗಳ ವಿಷಯ ತೆಗೆದು ಮಲ್ಲಪ್ಪಸೆಟ್ಟರು ತಮ್ಮ ಬಾಯತಿಂಡಿ ತೀರಿಸಿಕೊಳ್ಳತೊಡಗಿದ್ದರು:

"ವಿಚಿತ್ರ ಅಂದರೆ ಭಾರಿ ವಿಚಿತ್ರ ಮುದುಕ ಆತ. ತಾನು ದೊಡ್ಡ ಮಠವೊಂದರ ಸ್ವಾಮಿ, ಅದರ ಯೋಗ್ಯತೆಗೆ ತಕ್ಕ ಹಾಗೆ ನಡೆದುಕೊಳ್ಳಬೇಕು ಎಂಬ ಅರಿವೇ ಇರಲಿಲ್ಲ ಆತನಿಗೆ. ತಿಂಗಳಲ್ಲಿ ಇಪ್ಪತ್ತೆಂಟು ದಿನ ಮಠದಲ್ಲೂ ಇರುತ್ತಿರಲಿಲ್ಲ. ಯಾವಾಗಲೂ ಹೊರಗೇ!"

ಹತ್ತಿಪ್ಪತ್ತು ಸಲವಾದರೂ ಈ ವಿಷಯವಾಗಿ ಸೆಟ್ಟರು ಮಾತನಾಡಿದ್ದರು; ಸಿದ್ಧವೀರಸ್ವಾಮಿಗಳು ಕುಳಿತು ಕೇಳಿದ್ದರು. ಆದರೂ ಇಬ್ಬರಿಗೂ ಬೇಸರವೆಂಬುದಿರಲಿಲ್ಲ. ಅದೇ ವಿಷಯ ಮತ್ತೆ ತೆಗೆದಿದ್ದರು ಸೆಟ್ಟರು; ಮೊದಲನೆಯ ಸಲವೇ ಅದನ್ನು ಕೇಳುವವರಷ್ಟು ಕುತೂಹಲದಿಂದ ಸ್ವಾಮಿಗಳೂ ಕೇಳುತ್ತಲಿದ್ದರು.

"ಇಪ್ಪತ್ತೆಂಟು ದಿನವೂ ಹೊರಗೇ ಇರುತ್ತಿದ್ದರೇ? ನಿಜಕ್ಕೂ ವಿಲಕ್ಷಣವೇ ಸರಿ. ಎಲ್ಲಿಗೆ ಹೋಗುತ್ತಿದ್ದರು ನಿಮಗೆ ಗೊತ್ತೇ?" ಎಂದು ಪ್ರಶ್ನಿ

ಸಿದರು ಸ್ವಾಮಿಗಳು. ಇಪ್ಪತ್ತು ಸಲವಾದರೂ ಇದೇ ಪ್ರಶ್ನೆ ಅವರ ಬಾಯಿಂದ ಬಂದಿರಬಹುದು.

"ಗೊತ್ತಿಲ್ಲದಿರುವುದೇ ಬುದ್ಧಿ? ಎಲ್ಲ ಗೊತ್ತಿತ್ತು. ಆ ಸ್ವಾಮಿಗೊಂದು ಹುಚ್ಚು. ಹಳ್ಳಿ ಹಳ್ಳಿ ತಿರುಗುವುದು. ಕೈಯಲ್ಲೊಂದು ಕೋಲು ಹಿಡಿದು ಕೊಂಡು ಹೆಗಲ ಮೇಲೊಂದು ಕಂಬಳಿ ಹಾಕಿಕೊಂಡು ಹಳ್ಳಿಯಿಂದ ಹಳ್ಳಿಗೆ ತಿರುಗುತ್ತಿದ್ದರು. ಜೊತೆಗೆ ಯಾರೂ ಇಲ್ಲ. ಒಬ್ಬ ಮರಿಯೂ ಇರುತ್ತಿರ ಲಿಲ್ಲ. ಒಂದು ಆಸನವಿಲ್ಲ, ಆಸನವಸ್ತ್ರವಿಲ್ಲ. ಇಷ್ಟು ದೊಡ್ಡ ಮಠದ ಸ್ವಾಮಿಗಳು ಹೀಗೆ ಭಿಕಾರಿಯಂತೆ ತಿರುಗಿದರೆ ಮಠದ ಮರ್ಯಾದೆ ಏನುಳಿ ದಂತಾಯಿತು? ನಾವೆಷ್ಟೋ ಬಾರಿ ಹೇಳಿ ನೋಡಿದೆವು. ಯಾವುದಕ್ಕೂ ಕಿವಿಗೊಡಲಿಲ್ಲ."

"ಛೆ, ಛೆ! ಹೀಗೆಲ್ಲ ಮಾಡುವುದುಂಟೇ? ತಮ್ಮಂಥ ಶ್ರೀಮಂತರ ಮಾತನ್ನು ಈ ರೀತಿ ನಿರ್ಲಕ್ಷಿಸಬೇಕೇ!" ಎಂದ ಶಾಸ್ತ್ರಿ.

"ಯಾರ ಮಾತೇನು ಆ ಮುದುಕನಿಗೆ! ತಾನಾಯಿತು, ತನ್ನ ಕಂಬ ಳಿಯ ಭಕ್ತರಾಯಿತು. ನಮ್ಮ ಮಠದಲ್ಲಿ ಕುಳಿತು ಪ್ರವಚನ ಮಾಡುವ ದನ್ನು ಬಿಟ್ಟು ಹಳ್ಳಿಗಳಿಗೆ ಹೋಗಿ ರೈತರ ಮುಂದೆ ಪುರಾಣ ಹೇಳಬೇಕೇ?"

"ನಮಗಿಂತ ಅವರಿಗೆ ಹಳ್ಳಿಯವರೇ ಹೆಚ್ಚು. ನಮ್ಮ ಅಕ್ಕನ ಬಳಗ ಕ್ಕಂತೂ ಒಂದು ಸಲವೂ ಬಂದು ಪ್ರವಚನ ಮಾಡಲಿಲ್ಲ. ನಮ್ಮನ್ನು ಕಂಡರೇನೇ ಆಗುತ್ತಿರಲಿಲ್ಲ ಅವರಿಗೆ," ಎಂದಳು ಗದಿಗೆಮ್ಮ.

"ನಾನೊಂದು ಸಲ ಬಹಳ ಒತ್ತಾಯಪಡಿಸಿ ಬಳಗದ ಸಭೆಗೆ ಅವರನ್ನು ಕರೆತರಲು ಪ್ರಯತ್ನಿಸಿದ್ದೆ. ಅವರೇನೆನ್ನಬೇಕು! ಈಗಿನ ಕಾಲದಲ್ಲಿ ಅಕ್ಕ ಮಹಾದೇವಿಯಂತಾಗುವುದು ಬಹಳ ಕಷ್ಟವಮ್ಮ, ಸುಮ್ಮನೆ ಯಾಕೆ ವೇಳೆ ಹಾಳುಮಾಡುತ್ತೀರಿ–ಎನ್ನಬೇಕೇ!" ಎಂದಳು ನಾಗಮ್ಮ.

"ಹೀಗೆ ಹೇಳಿದರೇ? ಆಶ್ಚರ್ಯ!" ಎಂದರು ಸ್ವಾಮಿಗಳು.

"ಅವರ ಸ್ವಭಾವವೇ ಹಾಗಿತ್ತೋ ಏನೊ. ಗುಂಡು ಹೊಡೆದ ಹಾಗೆ ಚಟ್‌ಪಟ್ ಅಂತ ನಿಷ್ಠುರವಾಗಿ ಆಡಿಬಿಡುತ್ತಿದ್ದರು. ಅಲ್ಲ! ನಾವು ಅಷ್ಟೊಂದು ಕಷ್ಟಪಟ್ಟು ಬಳಗವನ್ನು ಸ್ಥಾಪಿಸಿದ್ದಕ್ಕಾಗಿ ಮೆಚ್ಚಿ ಪ್ರೋತ್ಸಾ

ಹಿಸಬೇಕೋ, ಈ ರೀತಿ ನಿರುತ್ಸಾಹದ ಮಾತುಗಳನ್ನಾಡಿ ತಣ್ಣೀರೆರಚ ಬೇಕೋ? ನೀವೇ ಹೇಳಿ ಬುದ್ಧೀ!"

"ಛೆ, ಛೆ! ಎಲ್ಲಾದರೂ ಉಂಟೇನಮ್ಮ? ಎಲ್ಲಾದರೂ ಉಂಟೇ? ನಮ್ಮ ಸಮಾಜದಲ್ಲಿ ನಿಮ್ಮ ಹಾಗೆ ಮುಂದೆ ಬಂದು ಕೆಲಸ ಮಾಡುವ ಮಹಿಳೆಯರೇ ಕಡಿಮೆ. ನಿಮ್ಮಂಥವರಿಗೆ ಪ್ರೋತ್ಸಾಹವೀಯದಿದ್ದರೆ ಸ್ವಾಮಿಗಳಿದ್ದರೇನು, ಬಿಟ್ಟರೇನು!" ಎಂದ ಗಂಗಾಧರಶಾಸ್ತ್ರಿ.

"ಆ ಚೆನ್ನಪ್ಪಗೌಡನೊಬ್ಬ ಇವರು ಹೇಳಿದ್ದಕ್ಕೆಲ್ಲ ಹೂಂಗುಟ್ಟುತ್ತಿದ್ದ. ಆತನನ್ನೂ ಆತನ ಏಳೆಂಟು ಜನ ಹಿಂಬಾಲಕರನ್ನೂ ಬಿಟ್ಟರೆ ಬೇರಾರೂ ಇವರ ಹತ್ತಿರ ಸುಳಿಯುತ್ತಿರಲಿಲ್ಲ. ಬಣಜಿಗರೆಂದರೆ ಅಷ್ಟು ತಾತ್ಸಾರ ಅವರಿಗೆ. ನಮ್ಮನ್ನೆಲ್ಲ ಬಲು ದೂರವಿಡುತ್ತಿದ್ದರು," ಎಂದರು ಮಲ್ಲಪ್ಪಸೆಟ್ಟರು.

"ಇಂಥ ಭೇದ ಭಾವವನ್ನೂ ಮಾಡುತ್ತಿದ್ದರೇ?" ಎಂದು ವಿಸ್ಮಯ ಬೆರೆತ ಧ್ವನಿಯಲ್ಲಿ ಕೇಳಿದ ಶಾಸ್ತ್ರಿ.

"ಆ ಗೌಡ ಅವರಿಗೆ ಏನು ಮಾಟ ಮಾಡಿದ್ದನೊ ತಿಳಿಯದು. ಯಾವಾಗಲೂ ಅವನೊಂದಿಗೇ ಇರುತ್ತಿದ್ದರು. ಊಟಕ್ಕೆ ಹೋದರೆ ಅವರ ಮನೆಗೇ ಹೋಗುವುದು. ನಾವು ಹೋಗಿ ಕರೆದರೂ ಬರುತ್ತಿರಲಿಲ್ಲ."

"ಗೌಡರು ಯಾತರವರು? ಪಂಚಮಸಾಲಿಯವರೇನು?" ಎಂದು ಕೇಳಿದ ಶಾಸ್ತ್ರಿ.

"ಗೌಡರೆಲ್ಲ ಪಂಚಮಸಾಲಿಯವರೇ ಅಲ್ಲವೆ? ಬಣಜಿಗರಲ್ಲಿ ಯಾರು ಗೌಡರಾಗಿದ್ದುಂಟು? ಹೊಲ ಉಳುವ ಜನವೆಲ್ಲಾ ಪಂಚಮಸಾಲಿಯದೇ."

"ಹೇಳಿ ಕೇಳಿ ಕುಡುಗೋಲು ಹಿಡಿಯುವ ಮಂದಿ ಅದು. ಅದಕ್ಕೊಂದು ಸಂಸ್ಕೃತಿಯಿದೆಯೆ? ಸಂಪತ್ತಿದೆಯೆ? ಸಮಾಜದ ಆಧಾರಸ್ತಂಭರೆಂದರೆ ಬಣಜಿಗ ಜನಾಂಗವೇ ಸರಿ. ವ್ಯಾಪಾರ ವ್ಯವಹಾರ ವಾಣಿಜ್ಯಗಳೆಲ್ಲ ಇವರವು. ದೇಶದ ಸಂಪತ್ತನ್ನು ಹೆಚ್ಚಿಸುವವರು ಇವರು. ಪಂಚಮಸಾಲಿಯವರಲ್ಲೇನಿದೆ ಮಣ್ಣು!" ಎಂದರು ಸ್ವಾಮಿಗಳು.

ಸಿದ್ಧವೀರಸ್ವಾಮಿಗಳ ಮುಖದಿಂದ ಇಂಥ ಮಾತು ಬರಬಹುದೆಂಬ ಕಲ್ಪನೆ ಗವಿಗೆಮ್ಮನಿಗಿರಲಿಲ್ಲ. ನಾಗಮ್ಮನಿಗೂ ಆಶ್ಚರ್ಯವಾಯಿತು. ಸಮಾಜದಲ್ಲಿ ಎಲ್ಲ ಒಳಪಂಗಡಗಳನ್ನು ಮುರಿದು ಐಕ್ಯತೆಯನ್ನು ನೆಲೆಗೊಳಿಸು

ವುದೇ ಸ್ವಾಮಿಗಳಾದವರ ಕರ್ತವ್ಯವಾಗಿರುವಾಗ ಅವರೇ ಈ ಬಗೆಯಾಗಿ ಬಣಜಿಗ ಪಂಚಮಸಾಲಿ ಎಂಬ ಕೃತ್ರಿಮ ಭೇದಭಾವಗಳಿಗೆ ಪ್ರೋತ್ಸಾಹ ಕೊಡುವುದನ್ನು ಕಂಡು ಕೊಂಚ ಕಳವಳವೂ ಉಂಟಾಯಿತು. ಆದರೇನು ಮಾಡುವುದು ? ಅವರು ಸ್ವಾಮಿಗಳು. ಅವರ ಅಭಿಪ್ರಾಯದ ವಿರುದ್ಧ ಧ್ವನಿಯೆತ್ತುವ ಧೈರ್ಯವಿಲ್ಲ ನಾಗಮ್ಮನಿಗೆ. ಆಕೆ ಮೌನವಾಗಿದ್ದಳು.

ಗಂಗಾಧರಶಾಸ್ತ್ರಿ ಉತ್ತೇಜಿತ ಸ್ವರದಲ್ಲಿ ಹೇಳುತ್ತಿದ್ದ :

"ಬುದ್ಧಿಗಳು ಎಷ್ಟು ಚೆನ್ನಾಗಿ ಅಪ್ಪಣೆ ಕೊಡಿಸಿದರು ! ಬಣಜಿಗರೆಂದರೆ ಕರ್ನಾಟಕದ ಬಂಡವಾಳಗಾರರಿದ್ದ ಹಾಗೆ. ನಾಶಿನ ನಾಶಿ ಎಂದರೆ ಬಣಜಿಗ ಸಮಾಜನೆ. ಹಿಂದಿನ ಕಾಲದಲ್ಲೂ ಅಷ್ಟೆ, ಇಂದಿನ ಕಾಲದಲ್ಲೂ ಅಷ್ಟೆ, ಮುಂದಿನ ಕಾಲದಲ್ಲೂ ಅಷ್ಟೆ. ಬಣಜಿಗರೇ ವೀರಶೈವ ಸಮಾಜದ ಜೀವ, ಇದ್ದ ಹಾಗೆ. ಬಣಜಿಗರಿರಲಿಲ್ಲವಾದರೆ ನಮ್ಮ ಸಮಾಜ ಕೇವಲ ಕೂಲೀ ಸಮಾಜವಾಗುತ್ತಿತ್ತು. ಇವರು ವ್ಯಾಪಾರ ವ್ಯವಹಾರ ಹಿಡಿದುಕೊಂಡು ಕೂತಿರದಿದ್ದರೆ ಬೇರೆ ಸಮಾಜದವರು ಮುಂದೆ ಬಂದು ಸಂಪತ್ತಿನ ಸೂತ್ರ ಧಾರಿಗಳಾಗುತ್ತಿದ್ದರು. ಎಲ್ಲದರಲ್ಲೂ ತಮ್ಮ ಸರ್ವಾಧಿಕಾರ ಸ್ಥಾಪಿಸಲು ಹಾತೊರೆಯುವ ಆ ಬ್ರಾಹ್ಮಣರು ಸುಮ್ಮನಿರುತ್ತಿದ್ದರೇ ? ಈ ಕ್ಷೇತ್ರವನ್ನು ಗುತ್ತಿಗೆ ಹಿಡಿಯದೆ ಬಿಡುತ್ತಿರಲಿಲ್ಲ ಆ ಜನ !" ಎಂದ ಗಂಗಾಧರಶಾಸ್ತ್ರಿ.

"ಅವರಿಗೇನಪ್ಪ ! ಮೂರುಲೋಕಗಳ ಅಧಿಪತ್ಯ ದೊರೆತರೂ ತೃಪ್ತಿ ಯಾಗದು ಅವರಿಗೆ !" ಎಂದು ಸ್ವಾಮಿಗಳು ಹಾಸ್ಯಮಾಡಿ ನಕ್ಕರು.

"ಈ ಬ್ರಾಹ್ಮಣರನ್ನು ಬಗ್ಗು ಬಡಿಯಬೇಕಾದರೆ ನಮ್ಮ ಬಣಜಿಗರೇ ಸರಿ. ಪಂಚಮಸಾಲಿಯವರಿಂದ ಈ ಕೆಲಸವಾಗಲು ಸಾಧ್ಯವೆ ? ಉಳ್ಳೀ ಗಡ್ಡಿ ಮೆಣಸಿನಕಾಯಿ ತಿನ್ನುವ ಹುಂಬರಿಗೆ ಇಂಥ ಚಾಲಾಕು ಬುದ್ಧಿ ಎಲ್ಲಿಂದ ಬಂದೀತು ?" ಎಂದ ಶಾಸ್ತ್ರಿ.

ಪಂಚಮಸಾಲಿಯವರನ್ನೂ ಬ್ರಾಹ್ಮಣರನ್ನೂ ಕುರಿತು ಶಾಸ್ತ್ರಿಗಳೂ ಸ್ವಾಮಿಗಳೂ ಆಡಿದ ಹೀಯಾಳಿಕೆಯ ಮಾತುಗಳು ನಾಗಮ್ಮನಿಗೆ ಎಷ್ಟು ಮಾತ್ರಕ್ಕೂ ಸರಿಬರಲಿಲ್ಲ. "ಬ್ರಾಹ್ಮಣರ ಸಂಬಂಧ ಎಲ್ಲಿ ಬಂತೋ ಈ ವಿಷಯದಲ್ಲಿ ? ಪಾಪ, ಅವರನ್ನೇಕೆ ಸುಮ್ಮನೆ ನಿಂದಿಸುತ್ತಿದಾರೆ ಇವರು ?" ಎಂದು ತನ್ನಷ್ಟಕ್ಕೆ ತಾನೇ ಕೇಳಿಕೊಂಡಳು. ಉತ್ತರ ದೊರೆಯಲಿಲ್ಲ.

ನಡೆದಿದ್ದ ಮಾತುಕತೆಗಳನ್ನೆಲ್ಲ ಆಲಿಸುತ್ತ ಬಸಪ್ಪಸೆಟ್ಟರು ಮೌನ ವಾಗಿ ಕುಳಿತಿದ್ದರು. ಅವರಿಗೆ ಇದಾವುದರಲ್ಲೂ ಆಸಕ್ತಿಯಿರಲಿಲ್ಲ.

ಸ್ವಾಮಿಗಳ ಸ್ನಾನ, ಪೂಜೆ, ಊಟ ನಡೆದಿದ್ದಾಗಲೂ ಈ ಮಾತುಗಳು ಹಾಗೆಯೆ ಸಾಗಿದ್ದುವು. ಗಂಗಾಧರಶಾಸ್ತ್ರಿಯ ಬಾಯಿಗೆ ವಿರಾಮದ ಆವಶ್ಯ ಕತೆಯೇ ಇದ್ದಂತಿರಲಿಲ್ಲ. ಸಂಭಾಷಣೆ ನಿಂತುಹೋಗುವ ಲಕ್ಷಣ ಕಾಣಿಸಿ ದಾಗಲೆಲ್ಲ ಆತ ಎಳೆ ಹಿಡಿದುಕೊಂಡು ಅದನ್ನು ನಿಲ್ಲಿಸದೆ ಮುಂದುವರಿಸು ತ್ತಿದ್ದ. ಲಿಂಗಪೂಜೆಯಲ್ಲಿ ನಿರತರಾದಾಗಲೂ ಸ್ವಾಮಿಗಳು ಹಾಗೆಯೇ ಮಾತ ನಾಡುತ್ತಲೇ ಇದ್ದರು.

ಊಟಕ್ಕಾರಂಭವಾಯಿತು. ತಮಗಾಗಿ ಏರ್ಪಡಿಸಲ್ಪಟ್ಟಿದ್ದ ಗದ್ದು ಗೆಯ ಮೇಲೆ ಸ್ವಾಮಿಗಳು ಮಂಡಿಸಿದರು. ಅವರಿಗೆದುರಾಗಿ ಶಾಸ್ತ್ರಿ, ಮಲ್ಲಪ್ಪಸೆಟ್ಟರು, ಬಸಪ್ಪಸೆಟ್ಟರು ಕುಳಿತಿದ್ದರು. ನಾಗಮ್ಮ, ಗದಿಗೆಮ್ಮ, ಮರಿಸ್ವಾಮಿ ಬಡಿಸುವ ಕೆಲಸಕ್ಕೆ ನಿಂತಿದ್ದರು. ತುಪ್ಪ ನೀಡುವುದಕ್ಕಾದರೂ ಸರಸು ಬರಬಹುದೇನೊ, ಎಂದು ಆಶಿಸಿದ್ದ ಸ್ವಾಮಿಗಳಿಗೆ ನಿರಾಶೆಯಾಗದಿರ ಲಿಲ್ಲ. ಆಕೆ ಯಾವಾಗಲೋ ಮಹಡಿಗೆ ಹೊರಟು ಹೋಗಿದ್ದಳು. ಸ್ವಾಮಿ ಗಳು ತಮ್ಮ ಮನೆಯಿಂದ ಹೊರಡುವ ವರೆಗೂ ಆಕೆ ಕೆಳಕ್ಕೆ ಬರಲಿಲ್ಲ.

[೧೦]

ಶಿವಮೂರ್ತಿ ತಲೆ ತಗ್ಗಿಸಿಕೊಂಡು ಕಚೇರಿಯ ಕಡೆಗೆ ಹೊರಟಿದ್ದ.

ದಿನವೂ ಆತ ಭೋಜನಾಲಯದಲ್ಲಿ ಊಟ ತೀರಿಸಿಕೊಂಡು ಕಚೇರಿಗೆ ಹೋಗುತ್ತಾನೆ. ಇಂದು ಮಾತ್ರ ಊಟ ಮಾಡದೆ ಹಾಗೆಯೆ ಹೊರಟಿದ್ದಾನೆ. ಬೆಳಗಿನಲ್ಲಿ ನಾರಾಯಣಪ್ಪನ ಚಹದಂಗಡಿಯಲ್ಲಿ ಒಂದು ಇಡ್ಲಿ ತಿಂದು ಚಹ ಕುಡಿದುದೆಷ್ಟೋ ಅಷ್ಟೆ. ದಿನದ ರೂಢಿಯಂತೆ ಇಷ್ಟು ಹೊತ್ತಿಗೆ ಊಟವಾಗಬೇಕಿದ್ದಿತು. ಆಗಿರಲಿಲ್ಲ. ಶಿವಮೂರ್ತಿಗೆ ಹಸಿವೆಯಾಗಿತ್ತು. ಆದರೆ ಅದರ ಕಡೆಗೆ ಆತನಿಗೆ ಲಕ್ಷ್ಯವಿರಲಿಲ್ಲ. ಆತನ ಚಿತ್ತವನ್ನೆಲ್ಲ ಸರಸು ಆಕ್ರಮಿಸಿಕೊಂಡಿದ್ದಾಳೆ. ಬೇರಾವ ಯೋಚನೆಗಳಿಗೂ ಅಲ್ಲಿ ಸ್ಥಳವಿಲ್ಲ. ಇಂದು ಅವರ ಮನೆಗೆ ಊಟಕ್ಕೆ ಹೋಗಬೇಕು, ಮನೆಯವರು ತುಂಬ ಪ್ರೀತಿಯಿಂದ ಬರಹೇಳಿದ್ದಾರೆ. ಗೌರಿ ಬಂದು ಆಮಂತ್ರಣ ಕೊಟ್ಟು

ಹೋಗಿದ್ದಾಳೆ. ಎಲ್ಲರೂ ತನ್ನ ದಾರಿ ಕಾಯುತ್ತಿರಬಹುದು. ಸರಸುವೂ ತನ್ನ ಪ್ರತೀಕ್ಷೆ ಮಾಡುತ್ತಿರಬಹುದಲ್ಲವೆ? ಬೇಗನೆ ಕಚೇರಿಗೆ ಹೋಗಿ ಮುಖ್ಯ ಕಾರಕೂನನನ್ನು ಕಂಡು ರಜೆ ಪಡೆದುಕೊಳ್ಳಬೇಕು, ಸೆಟ್ಟರ ಮನೆಗೆ ಧಾವಿಸಬೇಕು. ಇಷ್ಟು ಹೊತ್ತಿಗೆ ಸ್ವಾಮಿಗಳೂ ಬಂದಿರಬಹುದು. ಊಟದ ಸಿದ್ಧತೆಯಾಗಿರಬಹುದು. ತನಗಾಗಿ ಅವರೆಲ್ಲ ಕಾಯುವಂತಾಗಬಾರದು. ಹೊತ್ತಿಗೆ ಸರಿಯಾಗಿ ಹೋಗಬೇಕು....

ಪ್ರತಿದಿನವೂ ಶಿವಮೂರ್ತಿಯ ಮುಖದ ಮೇಲೆ ತುಂಬಿಕೊಂಡಿರುತ್ತಿದ್ದ ಔದಾಸೀನ್ಯ ಇಂದು ಮಾಯವಾಗಿದ್ದಿತು. ಇಷ್ಟು ದಿನಗಳ ವರೆಗೆ ಈ ಊರಿನಲ್ಲಿ ಆತನಿಗೆ ಆತ್ಮೀಯರಾರೂ ಇರಲಿಲ್ಲ. ಭೋಜನಾಲಯದಲ್ಲಿ ದಿನವೂ ಒಂದೇ ಬಗೆಯ ಊಟ ಮಾಡಿ ಮಾಡಿ ಬೇಸರುಗೊಂಡಿದ್ದ ಆ ಜೀವಕ್ಕೆ ಇಂದಿನ ಈ ಆತ್ಮೀಯತೆಯ ಔತಣ ತುಂಬ ಸಂತೋಷವನ್ನುಂಟು ಮಾಡಿದ್ದಿತು.

"ಸ್ವಾಮಿಯವರss"

ತನ್ನ ಸಂತೋಷದಲ್ಲಿ ತಲ್ಲೀನನಾಗಿ ಹೊರಟಿದ್ದ ಶಿವಮೂರ್ತಿ, ಕರೆಯನ್ನು ಕೇಳಿದೊಡನೆ ತಲೆಯೆತ್ತಿ ನೋಡಿದ.

"ಸ್ವಾಮಿಯವರss"

ಹಳ್ಳಿಯ ರೈತನೊಬ್ಬ ಕೈಕಟ್ಟಿ ನಿಂತುಕೊಂಡು ಶಿವಮೂರ್ತಿಯ ಮುಖವನ್ನೇ ದೀನಮುದ್ರೆಯಿಂದ ನಿಟ್ಟಿಸುತ್ತಲಿದ್ದ. ಬಡಕಲು ಶರೀರದವ. ಮಣ್ಣಿನ ಬಣ್ಣದ ಹರಕು ಅಂಗಿ ತೊಟ್ಟು, ಮೊಳಕಾಲಿನ ಕೆಳಗಿನ ಭಾಗವೆಲ್ಲ ಕಾಣುವಂಥ ಮಲಿನ ಧೋತರವನ್ನುಟ್ಟುಕೊಂಡಿದ್ದ. ಕರಿಯ ಕಂಬಳಿಯೊಂದನ್ನು ಭುಜದ ಸುತ್ತು ಹಾಯಿಸಿ ಬೆನ್ನಹಿಂದೆ ರೊಟ್ಟಿ ಬುತ್ತಿಯ ಗಂಟು ಕಟ್ಟಿಕೊಂಡಿದ್ದ. ತಲೆಗೊಂದು ಕಂದು ಬಣ್ಣದ ಚಿಂದಿ ರುಮಾಲು. ಆ ರುಮಾಲಿನ ಛಿದ್ರಗಳೊಳಗಿನಿಂದ ನರೆತ ಕೂದಲು ಇಣುಕಿ ಹಾಕುತ್ತಿವೆ. ಕರಿಯ ಬಿಳಿಯ ಕೂದಲುಗಳಿಂದೊಡಗೂಡಿದ ಮೀಸೆಯೂ ಗಡ್ಡವೂ ಹುಲುಸಾಗಿ ಬೆಳೆದಿವೆ. ಕಳಾಹೀನವಾದ ಆತನ ಕಣ್ಣುಗಳ ಸುತ್ತಲೂ ಕಪ್ಪು ಬಣ್ಣ ಕರೆ ಕಟ್ಟಿದೆ. ಬಲಗಾಲಿನ ಪಾದಕ್ಕೊಂದು ಹೊಲಸು ಅರಿವೆ ಕಟ್ಟಿದಾನೆ. ಅದರೊಳಗಿನಿಂದ ಕೀವು, ನೆತ್ತರು ಕಾಣಿಸುತ್ತಿವೆ.

"ಯಾರಯ್ಯಾ ನೀನು ?"

"ಸಾನ್ರೀ ? ನಾ ಕಣಿಕೊಪ್ಪದವರಿ. ಮೊನ್ನೆ ಕಚೇರಿಗೆ ಬಂದಿದ್ದಿನಲ್ಲರಿ."

"ನನ್ನ ಹತ್ತಿರ ಏನಪ್ಪಾ ಕೆಲಸ ?"

"ಅದs ಅಲ್ಲರಿ. ನನ್ನ ಖಟ್ಲೇದ ಕೆಲಸ. ಬರೀ ಮುದತ್ತು ಹಾಕುತಾ ಇದಾರ. ಖಟ್ಲೇ ನಿಕಾಲಿ ಮಾಡಲೊಲ್ಲರು. ನಾ ಬಡವ. ತಿರುಗಿ ತಿರುಗಿ ಸಾಕಾಗೇತಿ. ದೊಡ್ಡ ಕಾರಕೂನ ಸಾಹೇಬರಿಗೆ ಹೇಳಿಕೊಂಡಿನಿ. ದಾದು ಹತ್ತಲಿಲ್ಲ."

"ನಾನಾದರೂ ಏನು ಮಾಡಲಪ್ಪ ? ನನ್ನ ಕೈಯಲ್ಲಾದರೂ ಏನಿದೆ ?"

"ಇದು ನಿಮ್ಮ ಕೈಯಾಗs ಐತಿ ಅಂತ ದೊಡ್ಡ ಕಾರಕೂನ ಸಾಹೇಬರೇ ಹೇಳಿದರಲ್ರಿ ?"

"ನನ್ನ ಕೈಯಲ್ಲಿ ? ದೊಡ್ಡ ಕಾರಕೂನರು ಹೇಳಿದರೇ ?"

"ಹೌದ್ರೀ ಯಪ್ಪಾ. ಹ್ಯಾಂಗಾದರೂ ಮಾಡ್ರಿ. ಲಗೂ ಮುದತ್ತು ತಗೊಳ್ಳೋ ಹಾಂಗ ಮಾಡ್ರಿ. ತಿರುಗಿ ತಿರುಗಿ ಸಾಕಾಗ್ಯೈತಿ ನನಗ."

"ಕೋರ್ಟಿನ ಕೆಲಸ ಅಂದರೆ ಹೀಗೇ ಅಪ್ಪ. ತಿರುಗಾಡದಿದ್ದರೆ ಹೇಗೆ ನಡೆದೀತು ?"

"ಎಷ್ಟು ಅಂತ ತಿರುಗಲಿ ಹೇಳ್ರಿ. ಖಟ್ಲಿ ಸುರುವಾಗಿ ವರ್ಷ ಎರಡು ವರ್ಷ ಆಗ್ತಾ ಬಂತು. ಮನೀ ಕೆಲಸ ಹೊಲದ ಕೆಲಸ ಎಲ್ಲಾ ಬಿಟ್ಟು ಕೋರ್ಟಿಗೆ ಎಡತಾಕೂದು ನಡದೈತಿ. ತಿಂಗಳಿನೊಳಗ ಮೂರು ಸರತಿ ಆದರೂ ಮುದತ್ತು ಬೀಳುತಾವ. ಗಾಡಿಗೆ ರೊಕ್ಕಾ ಹಾಕಿ ಹಾಕಿ ಎಲ್ಲಾ ತೀರಿ ಹೋದವು ಯಪ್ಪಾ."

"ನಿಮ್ಮೂರು ಎಲ್ಲಿದೆಯಪ್ಪ ?"

"ಇಲ್ಲಿಂದ ಹತ್ತು ಹರದಾರಿ ಆಗುತೈತ್ರಿ. ಸ್ಟೇಶನ್ನಿಗೆ ಹತ್ತಿ ಇಳಿದು ಮತ್ತ ಮೋಟಾರಿಗೆ ಕೂತು ಬರಬೇಕು ನೋಡ್ರಿ. ಗಾಡಿಗೆ ಹತ್ತು ಆಣೆ ಆಗತೈತಿ. ಮೋಟಾರಿಗೆ ಎಂಟು ಆಣೆ. ಬರಬೇಕಾದರೆ ರೂಪಾಯಿ ಎರಡಾಣೆ. ಹೋಗಬೇಕಾದರ ರೂಪಾಯಿ ಎರಡಾಣೆ. ಒಂದಾಳಿಗೆ ಎರಡು ರೂಪಾಯಿ ನಾಲ್ಕಾಣೆ ಖರ್ಚು ಬರುತೈತಿ. ನಾನೊಬ್ಬನs ಬಂದೇನೇ

ಅಂದರೆ ಸಾಕ್ಷಿ ಬ್ಯಾರೆ ತರಾಕ ಬೇಕು. ಅವರು ಮೂರು ಮಂದಿ. ಎಲ್ಲಾರಿಗೂ ಕೂಡಿ ಒಂದು ಸರತಿಗೆ ಒಂಭತ್ತು ರೂಪಾಯಿ ಆಗುತೈತ್ರಿ. ಆ ಸಾಕ್ಷಿಗಳ ಚಹಾ, ಊಟದ ಖರ್ಚು ಬ್ಯಾರೆ. ಎಲ್ಲಾ ಸೇರಿದರ ಏನಿಲ್ಲ ಅಂದರೂ ಹತ್ತು ಹನ್ನೆರಡು ರೂಪಾಯಿ ಖರ್ಚಾಗತಾವ. ನಾವು ಬಡವರು. ಮನೆಯೊಳಗ ತಿನ್ನುವವರು ಹತ್ತು ಮಂದಿ. ಹೊಲಾ ಆದರೂ ಸಾಕಷ್ಟು ಐತೀ ಅಂದರೆ ಅದೂ ಇಲ್ಲರಿ."

ಶಿವಮೂರ್ತಿಯ ಸಂತೋಷವೆಲ್ಲ ಗಾಳಿಗೆ ಸಿಕ್ಕ ಗರಿಯಂತೆ ಹಾರಿ ಹೋಯಿತು. ವ್ಯಥಿತ ಮನಸ್ಸಿನಿಂದ ಹೆಜ್ಜೆ ಹಾಕತೊಡಗಿದ. ಆತನ ಪಕ್ಕದಲ್ಲಿಯೇ ಮೆಲ್ಲಮೆಲ್ಲನೆ ನಡೆದು ಬರುತ್ತಿದ್ದ ಆ ರೈತ ಕಳವಳದಿಂದ ಭಾರವಾದ ಧ್ವನಿಯಲ್ಲಿ ಹೇಳುತ್ತಲಿದ್ದ :

"ಇರೂದು ಒಂದು ತುಂಡು ಹೊಲಾ. ಅದರಾಗ ಎಷ್ಟು ಮಂದಿ ಹೊಟ್ಟೀ ತುಂಬಿಸಿಕೊಳ್ಳಲಿಕ್ಯಾದೀತು ನೀವೇ ಹೇಳ್ರಿ. ಹೊಟ್ಟೆಗೇ ಸಾಕಾಗುವುದಿಲ್ಲಂದ ಮ್ಯಾಲ ಈ ಖಟ್ಲೇಕ್ಕ ರೊಕ್ಕಾ ಎಲ್ಲಿಂದ ತರೂಣ್ರಿ?"

"ಎಷ್ಟಿದೆಯಪ್ಪ ನಿನ್ನ ಹೊಲ?"

"ನನ್ನ ಹೊಲ! ಅದೂ ನನ್ನದಲ್ಲ ಸ್ವಾಮಿಯವರs. ಸಾವುಕಾರಂದು. ಆರು ಎಕರೆ ಐತಿ."

"ಖಟ್ಲೇ ಮಾಡುವ ಪ್ರಸಂಗ ಯಾಕೆ ಬಂತು?"

"ಯಾಕೋ ಏನೋ ಎಲ್ಲಾ ಆ ದೇವರಿಗೆ ಗೊತ್ತರಿ. ಎರಡು ವರ್ಷದ ಹಿಂದೆ ಕುಳಕಾಯಿದೆ ಅಂತ ಮಾಡ್ಯಾರಲ್ಲ ನಮ್ಮ ಗಾಂಧೀ ಸರಕಾರದವರು. ಆ ಕಾಯಿದೇ ಬರೂತನಕ ನಾವು ಹ್ಯಾಗೋ ಏನೋ ಸುಖದಿಂದಲೇ ಇದ್ದೆವು. ಅದು ಬಂದ ಮ್ಯಾಲ ಲಾವಣೀ ಹೆಚ್ಚು ಕೊಡಬೇಕಂತ ಕೇಳಿದ ಸಾವುಕಾರ. ಆಗಲೇ ನಮಗ ಲಾವಣಿ ಕೊಡಬೇಕಾದರೆ ಸಾಕುಬೇಕಾಗಿ ಹೋಗುತಿತ್ತು. ಇಂಥಾದರಾಗ ಹೆಚ್ಚು ಕೊಡಬೇಕಂದರ ಎಲ್ಲಿಂದ ಕೊಡೂದ್ರೀ?"

"ಎಷ್ಟು ಕೊಡುತಿದ್ದಿರಿ ಮೊದಲು?"

"ಎರಡು ನೂರಾ ಐವತ್ತು ಕೊಡುತಿದ್ದಿವಿ."

"ಆರು ಎಕರೆಗೆ ಎರಡುನೂರಾ ಐವತ್ತು ಅಂದರೆ ವಿಪರೀತವಾಯಿತಲ್ಲಪ್ಪ !"

"ಆದರೇನ್ರಿ ? ನಮ್ಮಂಥ ಬಡವರನ್ಯಾರು ಕೇಳುತಾರೆ ? ಹ್ಯಾಗೋ ಬದುಕಿದರಾಯ್ತು ಅಂತ ಕೊಡುತಾನೇ ಬಂದಿದ್ದೆವು. ಅಷ್ಟೂ ಸಾಕಾಗಲಿಲ್ಲ ಆ ಸಾವುಕಾರಗ. ಮೂರೂವರೆನೂರು ಕೊಡಬೇಕು ಅಂತ ಗಂಟುಬಿದ್ದ. ಆಗ ಮಾತ್ರ ನಮ್ಮ ಮ್ಯಾಲ ಗುಡ್ಡ ಕಡಿದುಕೊಂಡು ಬಿದ್ದಂಗಾಯ್ತು...."

"ಮೂರೂವರೆನೂರು ?" ಎಂದು ಆಶ್ಚರ್ಯದಿಂದ ಕೇಳಿದ ಶಿವಮೂರ್ತಿ.

"ಹೌದ್ರೀ. ಮೂರೂವರೆನೂರು ಕೊಡುವ ಹಾಗಿದ್ದರೆ ಹೊಲಾ ಮಾಡಬೇಕು, ಇಲ್ಲಾಂದರ ಬಿಟ್ಟು ಬಿಡಬೇಕು ಅಂದ ಸಾವುಕಾರ. ಎಲ್ಲಿಂದ ಕೊಡಲಿ ಸಾವುಕಾರರs, ಹ್ಯಾಂಗ ಕೊಡಲಿ, ಬಡವರ ಮ್ಯಾಲ ದಯಮಾಡಿರಿ ಅಂತ ಅಂಗಲಾಚಿ ಬೇಡಿಕೊಂಡರೂ ಆವ ತನ್ನ ಹಟ ಬಿಡಲಿಲ್ಲರಿ. ಹೊಲಾ ಬಿಡಬೇಕು ಅಂತ ಖಟ್ಲೀ ಮಾಡಿದಾನ ನೋಡ್ರಿ. ಈಗ ನಾ ಓಡಾಡಬೇಕಾಗೈತಿ...."

"ಇಷ್ಟೇಕೆ ತೊಂದರೆ ಪಟ್ಟುಕೊಳ್ಳುತ್ತೀಯಪ್ಪ ? ಹೊಲ ಬಿಟ್ಟು ಬೇರೆ ಮಾಡಬಹುದಾಗಿದ್ದಿತಲ್ಲ ?"

"ಬ್ಯಾರೆ ಹೊಲಾ ಒಂದು ಸಿಗಬೇಕಲ್ಲರಿ ಸ್ವಾಮಿಯವರs ? ಸಿಗುವ ಹಾಗಿದ್ದರೆ ನಾನ್ಯಾಕ ಈ ಖಟ್ಲೀದ ಗೋಜಿಗೆ ಹೋಗತಿದ್ದಿನಿ ?"

"ಹೊಲಾ ಸಿಗುವದೇ ಇಲ್ಲವೇನು ?"

"ಎಲ್ಲಿಂದ ಬರತಾವ್ರೀ ಯಪ್ಪಾ ? ಈಗ ಇರುವ ಹೊಲ ಕಳಕೊಂಡು ಬಿಟ್ಟರೆ ಆ ಮ್ಯಾಲ ಪರಟೀಗs ಹಿಡೀಬೇಕು ನೋಡ್ರಿ ಕೈಯಾಗ. ಏನಾರ ಮಾಡಿ ನನ್ನ ಉಳಿಸ್ರಿ ಯಪ್ಪಾ. ಪುಣ್ಯಾ ಕಟ್ಟಿಕೊಳ್ರಿ," ಎಂದು ಆತ ಅಳು ಧ್ವನಿಯಲ್ಲಿ ಬೇಡಿಕೊಂಡ.

ಆ ಬಡರೈತನಿಗೆ ಯಾವ ರೀತಿಯಿಂದ ಸಮಾಧಾನ ಹೇಳಬೇಕೆಂಬುದೇ ಹೊಳೆಯುಲಿಲ್ಲ. "ನನ್ನನ್ನುಳಿಸಿರಿ" ಎಂದೇನೋ ಆತ ಕೇಳುತ್ತಾನೆ. ಆದರೆ ಉಳಿಸಲು ತಾನು ಯಾರು ? ತಾಲೂಕು ಕಚೇರಿಯಲ್ಲಿ ಕೆಳದರ್ಜೆಯ ಕಾರ

ಕೂನಸಾಗಿ ದುಡಿಯುವ ತನ್ನಿಂದ ರೈತರ ಹೊಲ ಉಳಿಸುವ ಕೆಲಸವಾಗಲು ಸಾಧ್ಯವೇ ? ಪಾಪ ಆ ರೈತನಿಗೆ ಇದಾವುದೂ ತಿಳಿಯದು. ತಾಲೂಕು ಕಚೇರಿಯ ಕಾರಕೂನರೂ ಸಹ ಮಹಾ ಶಕ್ತಿವಂತರೆಂದೇ ಆತನ ತಿಳಿವಳಿಕೆ..

"ನಾನೇನು ಮಾಡಲಪ್ಪ ? ಎಲ್ಲ ಇರೋದು ಮಾಮಲೇದಾರರ ಕೈಯಲ್ಲಿ. ಅದೂ ಅಲ್ಲದೆ ಕಾಯದೆಯ ವಿರುದ್ಧವಾಗಿ ಅವರೂ ಏನೂ ಮಾಡುವಂತಿಲ್ಲ. ನಿಮ್ಮ ಸಾವುಕಾರರಿಗೆ ಒಟ್ಟು ಎಷ್ಟು ಎಕರೆ ಹೊಲ ಇದೆ ?"

"ಎಲ್ಲಾ ಸೇರಿ ನೂರು ಎಕರೆಯ ಮೇಲೆ ಅದಾವ್ರಿ."

"ಹಾಗಿದ್ದರೆ ಅಡ್ಡಿಯಿಲ್ಲ. ಖಟ್ಲೆಯಲ್ಲಿ ನಿನಗೆ ಹೊಲ ಉಳಿದರೂ ಉಳಿಯಬಹುದು. ಐವತ್ತು ಎಕರೆಗಿಂತ ಹೆಚ್ಚಿಗೆ ಭೂಮಿ ಇದ್ದ ಸಾವುಕಾರ ರೈತನಿಂದ ಹೊಲ ಬಿಡಿಸಿಕೊಳ್ಳಲಾರ. ನೀನು ಸಂರಕ್ಷಿತ ರೈತ ಹೌದೋ ಅಲ್ಲವೋ ?"

"ಅಂದರೇನ್ರಿ ?"

"ಎಷ್ಟು ವರ್ಷಗಳಿಂದ ಈ ಹೊಲ ಮಾಡುತ್ತಲಿದ್ದೀಯಾ ನೀನು ?"

"ನಮ್ಮ ಅಪ್ಪನ ಕಾಲದಿಂದಲೂ ಇದೇ ಹೊಲದಾಗ ದುಡೀತಾ ಬಂದಿದೀವ್ರಿ."

"ಹಾಗಾದರೆ ಚಿಂತೆಯಿಲ್ಲ. ನೀನು ಸಂರಕ್ಷಿತ ರೈತನೇ. ಕಾಯದೆಯ ಪ್ರಕಾರ ನಿನ್ನನ್ನಾತ ಬಿಡಿಸಲಾರ. ಏನೂ ಯೋಚನೆ ಮಾಡಬೇಡ. ಊರಿಗೆ ಹೋಗು."

ರೈತನ ರಕ್ತಹೀನ ಮುಖದಲ್ಲಿ ಆನಂದದ ಗೆರೆಯೊಂದು ಸುಳಿಯಿತು. ದೇವರನ್ನು ದಿಟ್ಟಿಸುವ ಭಕ್ತನಂತೆ ಆತ ಶಿವಮೂರ್ತಿಯ ಮುಖವನ್ನೇ ಆಸೆಯಿಂದ ನಿರುಕಿಸುತ್ತ—"ನೀವು ಹೇಳಿದ ಹಾಗಾದರ ದೇವರೇ ಪಾರು ಮಾಡಿದಂತಾಗುತೈತ್ರೀ !" ಎಂದ.

"ಹಾಗೇ ಆದೀತು. ನೀನೀಗ ಹೋಗು. ಚಿಂತೆಮಾಡ ಬೇಡ," ಎಂದು ಹೇಳಿ ಶಿವಮೂರ್ತಿ ನಡಿಗೆಯನ್ನು ಕೊಂಚ ವೇಗವಾಗಿಸಿದ. ಕಚೇರಿ ಸಮೀಪಿಸಿತ್ತು. ಸಮಯವಾಗಿದೆಯೊ ಏನೊ. ಹೊತ್ತಿಗೆ ಸರಿಯಾಗಿ ಹೋಗದಿದ್ದರೆ ಮುಖ್ಯ ಕಾರಕೂನ ಮನಸ್ಸಿಗೆ ಬಂದ ಹಾಗೆ ಮಾತನಾಡು

ತ್ತಾನೆ. ಹನ್ನೊಂದು ಗಂಟೆಗೆ ಒಂದು ನಿಮಿಷ ತಡವಾದರೂ ಸಹ ಆತನ ಕಣ್ಣು ಕೆಂಪಗಾಗುತ್ತವೆ. ಹಿಂದೆ ಅನೇಕ ಸಲ ಆತನಿಂದ ಕೆಟ್ಟ ಮಾತು ಕೇಳಿಯಾಗಿದೆ....ಮತ್ತೆ ಕೇಳುವ ಅಪೇಕ್ಷೆ ಶಿವಮೂರ್ತಿಗಿಲ್ಲ.

ಶಿವಮೂರ್ತಿ ಕಚೇರಿಯಲ್ಲಿ ಅಡಿಯಿರಿಸಿದ. ಮುಖ್ಯ ಕಾರಕೂನ ದೇಶಪಾಂಡೆ, ಅಷ್ಟು ಹೊತ್ತಿಗಾಗಲೇ ಬಂದು ತನ್ನ ಸ್ಥಳದಲ್ಲಿ ಕುಳಿತಿದ್ದ. ಈ ಕೆಲಸಕ್ಕೆ ಸೇರಿಕೊಂಡು ಕಚೇರಿಗೆ ಬರಲಾರಂಭಿಸಿದಂದಿನಿಂದ ಶಿವಮೂರ್ತಿ ಆತನನ್ನು ನೋಡುತ್ತ ಬಂದಿದಾನೆ. ಒಂದು ದಿನವೂ ತಡ ಮಾಡಿದವನಲ್ಲ ದೇಶಪಾಂಡೆ. ಎಲ್ಲ ಕಾರಕೂನರಿಗಿಂತ ಮೊದಲೇ ಬಂದು ತನ್ನ ಕುರ್ಚಿಯ ಮೇಲೆ ಕುಳಿತುಕೊಂಡಿರುತ್ತಾನೆ. ಹನ್ನೊಂದು ಗಂಟೆಗೆ ಐದು ನಿಮಿಷವಿರುವಾಗಲೇ ಆತ ಬರುವನು, ಪೇದೆಗಳ ಸಲಾಮುಗಳನ್ನು ಸ್ವೀಕರಿಸುತ್ತ ನೇರವಾಗಿ ತನ್ನ ಮೇಜಿನ ಬಳಿ ಬಂದು, ಅದರ ಮೇಲಿನ ಧೂಳು ಕೊಡಹುವನು, ಕಾಗದ ಪತ್ರಗಳನ್ನು ಸರಿಪಡಿಸುವನು, ಫೈಲುಗಳನ್ನು ಹಾಗೆ ಹೀಗೆ ತಿರುವಿ ಹಾಕಿ ಮತ್ತೆ ಅವುಗಳ ಸ್ಥಳದಲ್ಲಿರಿಸುವನು, ಕುರ್ಚಿಯ ಮೇಲೆ ಕುಳಿತುಕೊಂಡು ಇತರ ಕಾರಕೂನರ ಕುರ್ಚಿಗಳ ಕಡೆಗೆ ದೃಷ್ಟಿ ಹೊರಳಿಸುವನು, ಅವೆಲ್ಲವೂ ಇನ್ನೂ ತೆರವಾಗಿಯೆ ಇರುವುದನ್ನು ಕಂಡಾಗ ಒಂದು ಸಲ ತುಟಿಗಳಲ್ಲಿಯೇ ನಗೆ ತುಳುಕಿಸುವನು, ಕೋಟಿನ ಜೇಬಿನಿಂದ ನಸ್ಯದ ಡಬ್ಬಿಯನ್ನು ಹೊರದೆಗೆದು ಒಂದು ಚಿಟಿಕೆ ನಸ್ಯವನ್ನು ಮೂಗಿಗೇರಿಸಿ ಅದರ ಮಾದಕತೆಯನ್ನು ಹೀರುವನು. ಕಚೇರಿಯ ಗಡಿಯಾರದಲ್ಲಿ ಹನ್ನೊಂದು ಗಂಟೆ ಬಾರಿಸತೊಡಗುತ್ತಲೂ ದೇಶಪಾಂಡೆಯ ಕೆಲಸಕ್ಕಾರಂಭವಾಗುವುದು. ಒಬ್ಬೊಬ್ಬರಾಗಿ ಕಾರಕೂನರು ಕಚೇರಿಯಲ್ಲಿ ಅಡಿಯಿರಿಸಿ ದೇಶಪಾಂಡೆಯ ಕಡೆಗೆ ದೃಷ್ಟಿ ಹೊರಳಿಸುವರು. ಆತ ಮಾತ್ರ ತಲೆಯನ್ನು ಮೇಲಕ್ಕೆತ್ತುವುದಿಲ್ಲ. ತಡಮಾಡಿ ಬರುವ ಕಾರಕೂನರನ್ನು ಕಂಡರೆ ದೇಶಪಾಂಡೆಗೆ ಭಾರಿ ಕೋಪ. ಇವರೆಲ್ಲ ಕೆಲಸದ ಮಹತ್ವವನ್ನರಿಯದ ಸೋಮಾರಿಗಳು, ಕೊನೆಯ ವರೆಗೂ ಕರಣಿಕರಾಗಿಯೆ ಉಳಿಯುವ ಧಡ್ಡರು—ಎಂದು ರೇಗುತ್ತಾನೆ. ಆಗಾಗ ಬಾಣದಂತ ಬಿರುಸು ಮಾತುಗಳನ್ನು ಆಡುತ್ತಾನೆ. ಆ ತೀಕ್ಷ್ಣ ದೃಷ್ಟಿಗೂ ಬಿರುಸು ನುಡಿಗೂ ಹೆದರದವರಿಲ್ಲ ತಾಲೂಕು ಕಚೇರಿಯಲ್ಲಿ. ಪೇದೆಗಳಿಂದ ಮೊದಲು ಮಾಡಿಕೊಂಡು ಮಾಮಲೇದಾರರ ವರೆಗೆ

ಎಲ್ಲರೂ ದಿಗಿಲು ಬೀಳುವವರೇ. ಮುಖ್ಯ ಕಾರಕೂನ ಎಂದರೆ ಕಚೇರಿಯ ಮೆದುಳಿದ್ದ ಹಾಗೆ. ಆತನನ್ನು ಅಸಂತುಷ್ಟಗೊಳಿಸಿದರೆ ಮಾಮಲೇದಾರರ ಆಟವೇನೂ ನಡೆಯಲಾರದು. ಅಂತೆಯೆ, ಅವರೂ ಆತನೊಂದಿಗೆ ಬಲು ಜಾಗರೂಕತೆಯಿಂದ ವರ್ತಿಸುತ್ತಾರೆ.

ದೇಶಪಾಂಡೆಗೆ ಐವತ್ತು ವರ್ಷವಾಗುತ್ತ ಬಂದಿರಬಹುದು. ವ್ಯಕ್ತಿತ್ವ ಅಂಥ ಪ್ರಭಾವಕಾರಕವಾದುವೇನೂ ಅಲ್ಲ. ಎಣ್ಣೆಗೆಂಪು ಬಣ್ಣದ ದಪ್ಪಗಿನ ಶರೀರ. ಮುಖದ ಮೇಲೆ ಸಿಡುಬಿನ ಕಲೆಗಳು. ವಯಸ್ಸು ಹೆಚ್ಚುತ್ತ ಬಂದಂತೆಲ್ಲ ಹೊಟ್ಟೆಯ ಆಕಾರವೂ ಹೆಚ್ಚುತ್ತ ಬಂದಿದೆ. ನೂರೈವತ್ತು ರೂಪಾಯಿ ಸಂಬಳ ಪಡೆಯುವ ಮುಖ್ಯ ಕಾರಕೂನನಾಗಿದ್ದರೂ ಆತನ ಉಡುಗೆ ತೊಡುಗೆ ಮಾತ್ರ ಕೆಳದರ್ಜೆಯ ಕಾರಕೂನರಿಗಿಂತ ಕೆಳತರಗತಿ ಯವು. ಹಲವು ವರ್ಷಗಳಿಗೆ ಹಿಂದೆ ಹೊಲಿಸಿದ ಕಂದು ಬಣ್ಣದ ಕೋಟು ಹಾಕುತ್ತಾನೆ. ಹತ್ತು ವರ್ಷಗಳಿಂದ ಆತನ ಮೈಮೇಲಿರುವುದು ಅದೊಂದೇ ಒಂದು ಕೋಟೆಂದು ಕಾರಕೂನ ದೇಸಾಯಿ ಹಾಸ್ಯಮಾಡುವುದುಂಟು. ಅದೊಂದು ಕೋಟು, ಒಂದು ಸಾದಾ ರುಮಾಲು, ಸಾದಾ ಧೋತರ. ಹಲ ವಾರು ಸಲ ರಿಪೇರಿಗಳಾದ ಪಾದತ್ರಾಣ. ಅಷ್ಟಾದರೆ ದೇಶಪಾಂಡೆಯ ಬಾಹ್ಯ ವೇಷ ಮುಗಿದಂತಾಯಿತು. ಬರುವ ಐವತ್ತು ರೂಪಾಯಿಗಳಲ್ಲಿ ಇಪ್ಪತ್ತು ಮೂವತ್ತನ್ನು ಸೂಟು, ಪೈಜಮಾಗಳಿಗೆ ಹಾಳುಮಾಡುವ ಈಗಿನ ಕಾಲದ ತರುಣರೆಂದರೆ ಆತನಿಗೆ ತಿರಸ್ಕಾರ. "ಕತ್ತೆ ಚಾಕರಿ ಮಾಡುವ ಕಾರಕೂನರಿಗೆ ಇಂಥ ಸಾಹೇಬೀ ಡೌಲೆಲ್ಲ ಯಾಕೆ ಬೇಕು? ಇವರು ಸೂಟು ಬೂಟು ಹ್ಯಾಟು ಹಾಕಿದ ಮಾತ್ರಕ್ಕೆ ಕಲೆಕ್ಟರಿಕೆ ದೊರೆಯುತ್ತದೆಯೆ ?" ಎಂದು ಆತನ ಸವಾಲು. ಅರ್ಥಾತ್ ಆ ಸವಾಲಿಗೆ ಉತ್ತರವಿಲ್ಲ. ಆತನನ್ನೆದುರಿಸಿ ನಿಂತು ಎದುರುತ್ತರವೀಯುವ ಎದೆಗಾರಿಕೆಯೂ ತರುಣ ಕಾರಕೂನರಿಗಿರುವುದಿಲ್ಲ. ಈ ಕಚೇರಿಗೆ ಬಂದ ಒಂದೆರಡು ದಿನಗಳಲ್ಲಿಯೆ ಎಲ್ಲರೂ ಆತನ ಅದ್ಭುತ ವರ್ಚಸ್ಸಿಗೆ ಒಳಗಾಗುತ್ತಾರೆ. ಮುದುಕನಲ್ಲಿ ಅಂಥದೊಂದು ಅದೃಶ್ಯ ಶಕ್ತಿ ಯಿದೆ—ಕೈ ಕೆಳಗಿನವರನ್ನು ಕೈಯಲ್ಲಿಟ್ಟುಕೊಂಡು ಕೆಲಸ ತೆಗೆದುಕೊಳ್ಳುವ ಶಕ್ತಿ.

ಇನ್ನಿತರ ಕಾರಕೂನರಂತೆ ಶಿವಮೂರ್ತಿಯೂ ದೇಶಪಾಂಡೆಯ ಆ

ಶಕ್ತಿಗೆ ಶರಣೆಂದು, ಆತನಿಗೆ ಅಸಮಾಧಾನವಾಗದಂತೆ ಕೆಲಸ ಮಾಡಲು ಕಲಿತಿದ್ದ. ಆ ಕೆಲಸದಲ್ಲಿ ಆತನಿಗೆ ಕೊಂಚವೂ ಸಂತೋಷವಿರಲಿಲ್ಲ, ಆಸಕ್ತಿಯಿರಲಿಲ್ಲ ಎಂಬುದೇನೋ ನಿಜವೆ. ಆದರೆ ಯಂತ್ರವತ್ತಾಗಿಯಾದರೂ ಕೆಲಸ ಮಾಡದಿದ್ದರೆ ಬೇರೆ ಉಪಾಯವಿರಲಿಲ್ಲ. ಸಂಬಳ ಬೇಕಿದ್ದರೆ ಅಲ್ಲಿದ್ದುಕೊಂಡು ಆ ಕೆಲಸ ಮಾಡಬೇಕಾಗಿತ್ತು. ಸಂಬಳದ ಅಗತ್ಯವಿಲ್ಲವಾದರೆ ಹೊರಟು ಬಿಡಬಹುದಾಗಿತ್ತು. ಆರ್ಥಿಕ ತೊಂದರೆಯಿಂದಾಗಿಯೆ ಈ ನೌಕರಿಗೆ ಸೇರಿಕೊಂಡಿದ್ದ ಶಿವಮೂರ್ತಿ ಅದನ್ನು ಬಿಟ್ಟುಹೋಗುವುದೆಂತು ಸಾಧ್ಯ? ಅಂತೆಯೆ ಆತ ಮನಸ್ಸನ್ನು ದೃಢಗೊಳಿಸಿ ಈ ನೌಕರಿಯಲ್ಲಿಯೆ ತೊಡಗಿಸಿದ್ದುದು. ಹನ್ನೊಂದರಿಂದ ಐದರ ವರೆಗೆ, ಒಂದೊಂದು ದಿನ ಆರು ಏಳರ ವರೆಗೆ ಈ ಕಚೇರಿಯಲ್ಲಿ ಮನಸ್ಸನ್ನೂ ಮೆದುಳನ್ನೂ ದಣಿಸಿ ಹೊರಗೆ ಬಂದೊಡನೆ ಪಿಟೀಲಿನ ರಾಗಲಹರಿಯಲ್ಲಿ ಎಲ್ಲವನ್ನೂ ಮರೆಯಿಸಲು ಪ್ರಯತ್ನಿಸುತ್ತಿದ್ದ. ಕಚೇರಿಗೂ ಸೆರೆಮನೆಗೂ ಯಾವ ವ್ಯತ್ಯಾಸವೂ ಇರಲಿಲ್ಲ ಆತನ ದೃಷ್ಟಿಯಲ್ಲಿ. ಸೆರೆಮನೆಯಲ್ಲಿ ಕ್ರೂರದೃಷ್ಟಿಯ ಜೇಲಾಧಿಕಾರಿಯಿರುವ ಹಾಗೆ ಈ ಕಚೇರಿಯಲ್ಲಿ ತೀಕ್ಷ್ಣದೃಷ್ಟಿಯ ದೇಶಪಾಂಡೆ....! ಇದೊಂದು ದಿನವಾದರೂ ಈ ಉಸಿರು ಕಟ್ಟುವ ವಾತಾವರಣದಿಂದ ತಪ್ಪಿಸಿಕೊಳ್ಳಬಹುದಲ್ಲಾ ಎಂಬ ಸಂತೋಷದಿಂದಲೆ ಶಿವಮೂರ್ತಿ ತನ್ನ ಮೇಜಿನ ಬಳಿ ಕುಳಿತು ಡ್ರಾಯರನ್ನೆಳೆದು, ಬಿಳಿ ಹಾಳೆಯನ್ನು ಹೊರೆಡೆಗೆದು, ರಜೆಗಾಗಿ ಪುಟ್ಟ ಅರ್ಜಿಯೊಂದನ್ನು ಸರಸರನೆ ಬರೆದು ರುಜು ಹಾಕಿ, ಡ್ರಾಯರನ್ನು ಮುಚ್ಚಿ ಕುರ್ಚಿಯನ್ನು ಸರಿಸಿ ಮೇಲಕ್ಕೆದ್ದು, ದೇಶಪಾಂಡೆಯ ಹತ್ತಿರ ಬಂದು ಆತನ ಲಕ್ಷ್ಯ ತನ್ನ ಕಡೆಗೆ ಹೊರಳುವುದನ್ನೆ ಕಾಯುತ್ತ ನಿಂತ.

ಯಾವುದೋ ಕಾಗದವೊಂದನ್ನು ಏಕಾಗ್ರಚಿತ್ತದಿಂದ ಅಭ್ಯಸಿಸುತ್ತಿದ್ದ ದೇಶಪಾಂಡೆ ನಾಲ್ಕೈದು ನಿಮಿಷ ಶಿವಮೂರ್ತಿಯ ಕಡೆಗೆ ದೃಷ್ಟಿಯನ್ನೆ ಹೊರಳಿಸಲಿಲ್ಲ. ನಿಂತು ನಿಂತು ಶಿವಮೂರ್ತಿಗೆ ಬೇಸರವಾಗತೊಡಗಿತು. ಅರ್ಜಿಯನ್ನು ದೇಶಪಾಂಡೆಯ ಎದುರಿಗೆ ಮೇಜಿನ ಮೇಲಿಟ್ಟು— "ರಾಯರೇ," ಎಂದ.

ದೇಶಪಾಂಡೆ ತಲೆಯನ್ನು ಮೇಲಕ್ಕೆತ್ತದೆ ದೃಷ್ಟಿಯನ್ನು ಮಾತ್ರ

ಶಿವಮೂರ್ತಿಯ ಕಡೆಗೆ ತಿರುಗಿಸಿದ. "ಏನು ?" ಎಂದಾತ ಕೇಳಲಿಲ್ಲ. ಆತನ ದೃಷ್ಟಿಯಲ್ಲಿಯೆ ಆ ಪ್ರಶ್ನೆ ಅಡಕವಾಗಿದ್ದಿತು.

"ಇವೊತ್ತು ನನಗೆ ರಜಾ ಬೇಕು ರಾಯರೆ!"

ದೇಶಪಾಂಡೆ ಮಾತನಾಡದೆ ಶಿವಮೂರ್ತಿಯ ಅರ್ಜಿಯನ್ನು ಕೈಗೆ ತೆಗೆದುಕೊಂಡು ಓದಿಕೊಂಡ.

"ರಜ ಯಾಕೆ ಬೇಕು ಅನ್ನೋದನ್ನ ಇದರಲ್ಲಿ ಬರೆದಿಲ್ಲವಲ್ಲಾ ?"

"ಸ್ವಲ್ಪ ಕೆಲಸವಿತ್ತು," ಎಂದು ನುಡಿದು ಶಿವಮೂರ್ತಿ ಉಗುಳು ನುಂಗಿದ.

"ಏನು ಕೆಲಸ ಎಂಬುದನ್ನು ತಿಳಿಸಬೇಡವೇನು ? ಸುಮ್ಮನೆ ಸ್ವಲ್ಪ ಕೆಲಸವಿತ್ತು ಎಂದು ಹೇಳಿ ಎಲ್ಲರೂ ರಜ ಕೇಳುತ್ತ ಹೊರಟರೆ ಇಲ್ಲಿನ ಕೆಲಸ ಯಾರು ಮಾಡಬೇಕು ?"

ಶಿವಮೂರ್ತಿ ಉತ್ತರವೀಯಲು ನಾಲಗೆಯೇಳಲಿಲ್ಲ. ಕೈ ಕೈ ಹಿಸುಕಿ ಕೊಳ್ಳುತ್ತ ಸುಮ್ಮನೆ ನಿಂತುಕೊಂಡಿದ್ದ.

"ಏನಾದರೂ ಮಹತ್ವದ ಕೆಲಸವಿದ್ದರೆ ರಜ ತೆಗೆದುಕೊಳ್ಳಬಹುದು. ಸುಮ್ಮನೆ ಯಾಕೆ ವೇಳೆ ಹಾಳು ಮಾಡುತ್ತೀರಿ ? ನಿಮ್ಮ ವೇಳೆಯೂ ಹಾಳು, ಇಲ್ಲಿಯ ಕೆಲಸವೂ ಹಾಳು."

"ನಮ್ಮ ಪೈಕಿ ಒಬ್ಬರ ಮನೆಗೆ ಇಂದು ಸ್ವಾಮಿಗಳು ಊಟಕ್ಕೆ ಬರುತ್ತಾರೆ. ಅವರು ನನ್ನನ್ನೂ ಆಮಂತ್ರಿಸಿದ್ದಾರೆ. ಹೋಗಬೇಕಾಗಿದೆ."

ಕೈಯಲ್ಲಿದ್ದ ಕಾಗದವನ್ನು ಮೇಜಿನ ಮೇಲಿರಿಸಿ ದೇಶಪಾಂಡೆ ಮುಖವನ್ನು ಮೇಲಕ್ಕೆತ್ತಿದ. ಜೇಬಿನಿಂದ ನಸ್ಯದ ಡಬ್ಬಿಯನ್ನು ಹೊರದೆಗೆದು ಒಂದು ಚಿಟಕೆಯಷ್ಟನ್ನು ಹೊರಳೆಗಳಿಗೇರಿಸುತ್ತ ಮಾತನಾಡಿದ:

"ಊಟಕ್ಕೆ ಹೋಗಲು ರಜ ತೆಗೆದುಕೊಳ್ಳೋದೇ! ಒಳ್ಳೆ ಕೆಲಸವೇ ಇದೂ ಸಹ!"

"ಬಹಳ ಒತ್ತಾಯಪಡಿಸಿ ಕರೆದಿದ್ದಾರೆ. ಹೋಗದಿದ್ದರೆ ಏನಾದರೂ ತಿಳಿದುಕೊಳ್ಳಬಹುದು."

"ಹೇಗೋ ? ಆ ಮನೆಯವರಿಗೂ ನಿಮಗೂ ಹತ್ತಿರದ ಸಂಬಂಧವೋ ಏನು ?"

"ಸಂಬಂಧವೇನೂ ಇಲ್ಲ. ವಿಶ್ವಾಸವಿದೆ, ಅಷ್ಟೆ."

"ಸಂಬಂಧವಿಲ್ಲದವರ ಮನೆಗೆ ಊಟಕ್ಕೆ ಹೋಗಲೆಂದು ಒಂದು ದಿನದ ರಜವನ್ನು ಯಾರಾದರೂ ಹಾಳುಮಾಡುವುದುಂಟೇ? ಇಂಥ ಆಮಂತ್ರಣಗಳು ದಿನವೂ ಇರುತ್ತವೆ ನನಗೆ. ಒಂದು ದಿನವಾದರೂ ನಾನು ರಜ ಪಡೆದುಕೊಂಡದ್ದನ್ನು ನೋಡಿದ್ದೀರಾ?"

ಶಿವಮೂರ್ತಿಗೆ ಇನ್ನು ಅಲ್ಲಿ ನಿಲ್ಲಲಾಗಲಿಲ್ಲ. ದೇಶಪಾಂಡೆಯೊಂದಿಗೆ ವಾದಿಸುವುದರಿಂದ ಯಾವ ಉಪಯೋಗವೂ ಆಗದೆಂಬುದು ಮನವರಿಕೆಯಾಗುತ್ತಲೂ ಆತ ತಲೆ ತಗ್ಗಿಸಿಕೊಂಡು ಹಿಂದಿರುಗಿ ತನ್ನ ಸ್ಥಳಕ್ಕೆ ಬಂದು ಕುಳಿತುಕೊಂಡ. ಆತನಿಗಾದ ಫಜೀತಿಯನ್ನು ಕಂಡು ಉಳಿದ ಕಾರಕೂನರೆಲ್ಲ ಕಾಗದಗಳ ಹಿಂದೆ ಮುಖ ಮರೆಮಾಡಿಕೊಂಡು ನಗುತ್ತಲಿದ್ದರು.

ಮಧ್ಯಾಹ್ನದ ಬಿಡುವಿನಲ್ಲಿ ಆತ ಚಹ ತೆಗೆದುಕೊಳ್ಳಲು ಹೊರಕ್ಕೆ ಬಂದಾಗ ಕೊಂಚ ಹೊತ್ತಿನ ಹಿಂದೆ ಭೆಟ್ಟಿಯಾಗಿದ್ದ ಆ ರೈತ ಕಚೇರಿಯೆದುರಿಗಿದ್ದ ಕಟ್ಟೆಯ ಮೇಲೆ ಕುಳಿತುಕೊಂಡು ತನ್ನ ದಾರಿ ಕಾಯುತ್ತಿದ್ದುದು ಕಂಡು ಬಂದಿತು. ಶಿವಮೂರ್ತಿ ದೃಷ್ಟಿಗೆ ಬಿದ್ದೊಡನೆ ಕಟ್ಟೆಯನ್ನು ಬಿಟ್ಟು ಆ ರೈತ ಆತನ ಬಳಿ ಬಂದು—"ನೋಡಿದಿರಾ ಸ್ವಾಮಿಯವರ?" ಎಂದು ಕೇಳಿದ.

ನೋಡುವುದು? ಏನನ್ನು? ಶಿವಮೂರ್ತಿಗೆ ಆತನ ನೆನಪೇ ಇರಲಿಲ್ಲ. ರಜೆ ಸಿಕ್ಕಲಿಲ್ಲವಾದುದರಿಂದ ಆತನ ಚಿತ್ತವೆಲ್ಲ ರೋಸಿಹೋಗಿತ್ತು. ತನ್ನ ನಿರಾಸೆಯೊಂದನ್ನುಳಿದರೆ ಆತನಿಗಾಗ ಬೇರೆ ಯೋಚನೆಯೇ ಇರಲಿಲ್ಲ. ಮಧ್ಯಾಹ್ನ ಊಟವಿರಲಿಲ್ಲವಾದುದರಿಂದ ಹಸಿವು ಬೇರೆ ಪೀಡಿಸುತ್ತಲಿದ್ದಿತು; ಚಹದಂಗಡಿಗೆ ಹೋಗಿ ಏನನ್ನಾದರೂ ತಿಂದು ಅದನ್ನು ಶಮನಗೊಳಿಸಬೇಕೆಂದು ಆತ ಹೊರಟಿದ್ದ.

ರೈತ ಆತನನ್ನು ಹಿಂಬಾಲಿಸಿಕೊಂಡು ಚಹದಂಗಡಿಗೂ ನುಗ್ಗಿದ. "ನೀನು ಹೊರಗೆ ಹೋಗು," ಎಂದು ಆತನನ್ನು ಗದರಿಸಲು ಮನಸ್ಸು ಬರಲಿಲ್ಲ ಶಿವಮೂರ್ತಿಗೆ. ಆತನ ಸ್ವಭಾವವೂ ಅಂಥದಲ್ಲ.

ಬೆಂಚಿನ ಮೇಲೆ ಕುಳಿತುಕೊಂಡು ಅತ್ತ ಇತ್ತ ದೃಷ್ಟಿ ಹೊರಳಿಸಿದ. ಪಕ್ಕದಲ್ಲಿದ್ದ ಮೇಜಿನ ಬಳಿ ಆತನ ಸಹೋದ್ಯೋಗಿ ಕಾರಕೂನರು ಕುಳಿತು

ಕೊಂಡು ತಿಂಡಿ ತಿನ್ನುತ್ತಲಿದ್ದುದು ಕಾಣಿಸಿತು. ಶಿವಮೂರ್ತಿಯ ಹಿಂದೆ ಬಂದ ರೈತನನ್ನು ಕಂಡು ಅವರು ತಮ್ಮ ತಮ್ಮಲ್ಲೇ ಕಣ್ಣಿನ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಮಾಣಿ ಬಂದು "ಏನು ಕೊಡಲಿ ?" ಎಂದಾಗ ಆ ರೈತನೇ ಮುಂದಾಗಿ-"ಏನೇನೈತ್ಯಪಾ ?" ಎಂದು ಪ್ರಶ್ನಿಸಿದ.

"ಬೂಂದಿ, ಲಾಡು, ಪ್ಯೋವೆ, ಚಕ್ಕಲಿ, ಪೂರಿ ಭಾಜಿ, ಮಿಸಳ, ಖಾರಾ ಸೇವು ..."

"ಒಂದು ಬೇಸನ ಉಂಡಿ ಕೊಡು ಸ್ವಾಮಿಯವರಿಗೆ."

"ಬೇಸನ ಉಂಡಿಯಿಲ್ಲ. ಅಂಟಿನ ಉಂಡಿ ಅದ."

"ಅದನ್ನs ಕೊಡಪ್ಪ."

ಅಷ್ಟು ಹೊತ್ತಿನ ವರೆಗೆ ಸುಮ್ಮನೆ ಕುಳಿತು ಗಾಳಿ ಹಾಕಿಕೊಳ್ಳುತ್ತಲಿದ್ದ ಶಿವಮೂರ್ತಿ ಈಗ ಬಾಯಿಬಿಟ್ಟು-"ಛೆ, ಛೆ, ನೀನೇಕೆ ಹೇಳಬೇಕು ? ಏನೂ ಬೇಡ. ನಾನು ತರಿಸುತ್ತೇನೆ. ಪೂರಿಪಲ್ಯ ತಾರಯ್ಯ," ಎಂದು ನುಡಿದ.

ರೈತನಿಗೆ ಅಸಮಾಧಾನವಾದಂತೆ ತೋರಿತು. ಆತನೆಂದ : "ಬಡವ, ನನ್ನ ಕೈಲಾದಷ್ಟು ಖರ್ಚು ಮಾಡುತೀನಿ. ತಿನ್ರಿ ಸ್ವಾಮಿಯವರs. ಇಲ್ಲಾ ಅನ್ನಬ್ಯಾಡ್ರಿ."

"ಛೆ, ಛೆ. ನಾನು ಹಾಗೆಲ್ಲ ಯಾರಿಂದಲೂ ತಿನ್ನುವವನಲ್ಲ. ನೀನು ಸುಮ್ಮನಿರು," ಎಂದು ಕೊಂಚ ಬೇಸರದ ಧ್ವನಿಯಲ್ಲಿ ಹೇಳಿದ ಶಿವಮೂರ್ತಿ.

ರೈತ ಸುಮ್ಮನಿರಬೇಕಾಯಿತು.

ಪೂರಿಪಲ್ಯ ಬಂದಿತು ; ಶಿವಮೂರ್ತಿಗೊಂದು ತಟ್ಟೆ, ರೈತನಿಗೊಂದು ತಟ್ಟೆ. ಶಿವಮೂರ್ತಿ ತಿನ್ನತೊಡಗಿದ. ರೈತ ಮಾತ್ರ ಮುಟ್ಟಲಿಲ್ಲ.

"ತಿನ್ನಯ್ಯಾ."

"ಬ್ಯಾಡ ಸ್ವಾಮಿಯವರs. ಇದೇ ಈಗ ರೊಟ್ಟೀ ತಿಂದೀನಿ ನಾ. ಹೊಟ್ಟೆ ತುಂಬ್ಯೈತಿ."

"ಇರಲಿ ತಿನ್ನು. ಇದಿಷ್ಟು ತಿಂದರೇನೂ ಆಗುವದಿಲ್ಲ."

"ಬ್ಯಾಡರಿ, ಬಾಡರಿ."

ಪಕ್ಕದ ಮೇಜಿನ ಬಳಿಯಿದ್ದ ಕಾರಕೂನರು ನಗತೊಡಗಿದರು.

ಮಾಣಿಯೂ ನಕ್ಕ. ರೈತ ತಬ್ಬಿಬ್ಬಾಗಿ ಚಹದಂಗಡಿಯಲ್ಲಿದ್ದವರನ್ನು ಮಿಕಿ ಮಿಕಿ ನೋಡತೊಡಗಿದ. ಆತನ ಅವಸ್ಥೆಯನ್ನು ಕಂಡು ಶಿವಮೂರ್ತಿಗೆ ಕನಿಕರ ಬರದಿರಲಿಲ್ಲ.

"ತಿನ್ನಯ್ಯಾ, ತಿನ್ನು."

"ಏನೂ ಬ್ಯಾಡರಿ. ನೀವು ತಿಂದರೆ ನಾ ತಿಂದ ಹಾಗೇ."

ಕಾರಕೂನರು ನಗುತ್ತಾ ಮತ್ತೆ ಕಚೇರಿಗೆ ಹೊರಟು ಹೋದರು. ಎಷ್ಟು ಒತ್ತಾಯಪಡಿಸಿದರೂ ರೈತ ಪೂರಿಯನ್ನು ಮುಟ್ಟಲಿಲ್ಲವಾದುದರಿಂದ ಬೇರೆ ಉಪಾಯವಿಲ್ಲದೆ ಶಿವಮೂರ್ತಿ ಅದನ್ನೂ ತಾನೇ ತಿಂದು ಚಹ ಕುಡಿದು ಏಳಬೇಕಾಯಿತು. ಒಂದು ಸಿಗರೇಟು ಹೊತ್ತಿಸಿ ಹೊಗೆಯೆಳೆಯುತ್ತ ಆತ ಹಣ ಕೊಡಲು ಜೇಬಿಗೆ ಕೈ ಹಾಕುತ್ತಿದ್ದ ಹಾಗೆ ಆ ರೈತ ತನ್ನ ಸೊಂಟದಲ್ಲಿ ಧೋತರದಲ್ಲಿ ಮಡಿಚಿ ಇಟ್ಟದ್ದ ರೂಪಾಯಿಯೊಂದನ್ನು ಹೊರದೆಗೆದು ಅಂಗಡಿಕಾರನ ಕೈಗಿತ್ತ.

"ಛೆ, ಬೇಡ ಬೇಡ. ನೀನೇಕೆ ಕೊಡುತ್ತೀ ?"

"ಇರಲೇಳ್ರಿ ಸ್ವಾಮಿಯವರs."

"ಹೀಗೆಲ್ಲ ನಾನು ಬೇರೆಯವರ ಹಣ ಖರ್ಚುಮಾಡಿಸುವವನಲ್ಲ. ಅಂಥ ಜನ ಬೇರೆ. ಅವರ ಹಾಗೆ ನಾನೂ ಎಂದು ತಿಳಿಯಬೇಡ," ಎಂದು ಕೊಂಚ ಮುನಿಸಿನಿಂದಲೇ ನುಡಿದು ಶಿವಮೂರ್ತಿ ಆತನ ರೂಪಾಯಿಯನ್ನು ಆತನಿಗೆ ಹಿಂದಿರುಗಿಸಿ, ಅಂಗಡಿಯವನ ಹಣ ಮುಟ್ಟಿಸಿ ಹೊರಬಿದ್ದ.

"ಸ್ವಾಮಿಯವರss"

"ಏನಯ್ಯಾ ?"

"ನನ್ನ ಕೆಲಸ.... ಅಷ್ಟು ಮಾಡಿದರss...."

"ಏನದು ನಿನ್ನ ಕೆಲಸ ?"

"ಆಗಲೆ ಹೇಳಿದ್ದೆನಲ್ಲರಿ....ಅದs ಆ ಮುದತ್ತಿಂದು...."

"ನನ್ನ ಕೈಯಲ್ಲೇನೂ ಇಲ್ಲ ಅಂತ ನಾನೂ ಆಗಲೆ ಹೇಳಿದೆನಲ್ಲ. ಎಲ್ಲಾ ಹೆಡ್ ಕಾರಕೂನರ ಕೈಯೊಳಗಿದೆ. ನಾನು ಅವರ ಕೈಕೆಳಗಿನವ. ನನಗೆ ಆ ಬಗ್ಗೆ ಯಾವ ಅಧಿಕಾರವೂ ಇಲ್ಲ."

"ನಿಮ್ಮ ಕೈಯಾಗs ಐತಿ ಅಂತ ದೊಡ್ಡ ಕಾರಕೂನ ಸಾಹೇಬರೇ ಹೇಳಿದರಲ್ರೀ ?"

"ಏನೋ ಚೇಷ್ಟೆಗೆ ಹೇಳಿರಬಹುದು. ಆಗಲಿ. ನನಗೆ ಹೊತ್ತಾಗುತ್ತದೆ. ಹೋಗಬೇಕು," ಎಂದು ಆತ ಮುಂದೆ ಹೆಜ್ಜೆಯಿರಿಸಿದ.

"ಸ್ವಾಮಿಯವರsss," ರೈತನ ಧ್ವನಿಯಲ್ಲಿ ಅಳು ತುಂಬಿ ಬಂದಿದ್ದಿತು.

ಶಿವಮೂರ್ತಿ ತಡೆದು ನಿಂತ, ತುಟಿಗಳಲ್ಲಿ ಹಿಡಿದಿದ್ದ ಸಿಗರೇಟನ್ನು ಕೆಳಕ್ಕೆ ಬಿಸುಟು ಚಪ್ಪಲುಗಳಿಂದ ಅದನ್ನು ತುಳಿದು ಅದರ ಬೆಂಕಿಯನ್ನಾರಿಸಿದ, ಮತ್ತೆ ರೈತನ ಕಡೆಗೆ ತಿರುಗಿ—"ಈಗ ನನಗೆ ವೇಳೆಯಿಲ್ಲ. ಸಂಜೆ ಮಾತನಾಡೋಣ," ಎಂದವನೆ ಅಲ್ಲಿ ನಿಲ್ಲದೆ ಕಚೇರಿಯಲ್ಲಿ ಅಡಿಯಿರಿಸಿದ.

ಸಾಯಂಕಾಲ ಆರುಗಂಟೆಗೆ ಆತ ಕೆಲಸ ಮುಗಿಸಿ ಹೊರಗಡೆ ಬಂದಾಗ ಆ ರೈತ ಇನ್ನೂ ಕಾದಿದ್ದುದು ಕಾಣಿಸಿತು. ಮತ್ತೆ ಆತನ "ಸ್ವಾಮಿಯವರsss" ಪ್ರಾರಂಭವಾಯಿತು.

"ನಾನು ಏನು ಮಾಡಬೇಕೆನ್ನುತ್ತೀಯಾ, ಹೇಳು."

"ಏನೂ ದೊಡ್ಡ ಕೆಲಸ ಅಲ್ಲರಿ. ಒಂದು ಮುದತ್ತಿನಾಗ ಎಲ್ಲಾ ತೀರಿಸುವ ಹಾಂಗ ಮಾಡಿದರೆ ಪುಣ್ಯಾ ಕಟ್ಟಿಕೊಳ್ಳುತೀರಿ."

"ಮುದತ್ತು ಮುಂದೆ ಹಾಕುವದು ಹೆಡ್ ಕಾರಕೂನರಿಗೆ ಸಂಬಂಧಪಟ್ಟ ವಿಷಯವಪ್ಪ. ಎಷ್ಟು ಹೇಳಿದರೂ ನಿನಗೆ ತಿಳಿಯಲೊಲ್ಲವಲ್ಲ ?"

"ಅವರಿಗೆ ನೀವೇ ಒಂದು ಮಾತು ಹೇಳಿದರೆ ಮಾಡಿಯಾರಲ್ಲರಿ ?"

"ಛಿ ! ಅವರ ಸ್ವಭಾವ ನಿನಗೆ ತಿಳಿಯದು. ದೂರ್ವಾಸ ಮುನಿಯಂಥವರಪ್ಪ ಅವರು. ನಾವ್ಯಾರೂ ಅವರ ಹತ್ತಿರ ಇಂಥ ವಿಷಯ ಎತ್ತುವುದಿಲ್ಲ."

"ಬಡವರ ಮ್ಯಾಲ ದಯಾ ಮಾಡಿ ಏನಾರ ಮಾಡ್ರಿ ಸ್ವಾಮಿಯವರs !"

ಇನ್ನು ಆತನಿಂದ ತಪ್ಪಿಸಿಕೊಳ್ಳಲು ಬೇರಾವ ಉಪಾಯವೂ ಇರಲಿಲ್ಲ.

"ಆಗಲಿ, ನಾನು ಅವರೊಂದಿಗೆ ಮಾತನಾಡಿ ನೋಡುತ್ತೇನೆ. ನೀನು ಊರಿಗೆ ಹೋಗು."

"ಮಾಡುತೀರಾ ಸ್ವಾಮಿಯವರs ? ಅಷ್ಟು ಮಾಡ್ರಿ ಯಪ್ಪಾ. ನೀವs ನಮ್ಮ ಪಾಲಿನ ದೇವರು !"

"ಆಗಲಿ. ನೀನೀಗ ಊರಿಗೆ ಹೋಗು."

"ಸಂಜೆ ಆತು. ಇನ್ನೆಲ್ಲಿ ಊರಿಗೆ ಹೋಗೋದ್ರಿ? ಇವೊತ್ತು ಇಲ್ಲೇ ವಸತಿ ಮಾಡಬೇಕಾತು."

"ಇಲ್ಲೇ ಮಾಡುತ್ತೀಯಾ? ಯಾರಾದರೂ ಗುರುತಿನವರಿದ್ದಾರೇನು?"

"ನಮಗ್ಯಾತಕ್ಕ ಬೇಕೇಳ್ರಿ ಗುರುತಿನವರು? ಬಸವಣ್ಣನ ಗುಡಿಯೊಳಗೆ ಬೇಕಾದಷ್ಟು ಜಾಗಾ ಐತಲ್ರಿ ಮಲಗಲಾಕ?"

"ಊಟ?"

"ಇನ್ನೂ ಎರಡು ರೊಟ್ಟಿ ಉಳಿದಾವ್ರಿ. ತಿಂದು ಹೊಳೀ ನೀರು ಕುಡಿದು ದೇವರ ಹತ್ತಿರ ಮಲಕೋತೀನಿ."

"ಆಗಲಿ ಹಾಗಾದರೆ. ನಾನು ಪ್ರಯತ್ನ ಮಾಡುತೇನೆ. ಹೂಂ. ನಿನ್ನ ಹೆಸರು ಹೇಳಲು ಮರತೇಬಿಟ್ಟೆಯಲ್ಲ?"

"ನನಗ ಬಸವಾಣೆಪ್ಪ ಅಂತಾರ್ರಿ."

"ಅಡ್ಡ ಹೆಸರು?"

"ಕಮತಗಿಯವರು ಅಂತ."

"ಯಾವೂರು ಎಂದೆ? ಚಿಕ್ಕೊಪ್ಪ?"

"ಕಣಿಕೊಪ್ಪರಿ."

"ಬಸವಾಣೆಪ್ಪ ಕಮತಗಿ, ಕಣಿಕೊಪ್ಪ....ಕಣಿಕೊಪ್ಪ" ಎಂದು ಗುಣು ಗುಣಿಸುತ್ತ ಶಿವಮೂರ್ತಿ ಮನೆಯ ಕಡೆಗೆ ಹೊರಟ. ದಾರಿಯುದ್ದಕ್ಕೂ ಆತನ ತಲೆಯಲ್ಲಿ ಬಸವಾಣೆಪ್ಪನಿಗೆ ಬಂದೊದಗಿದ ಭೀಕರ ಪರಿಸ್ಥಿತಿಯ ಯೋಚನೆಯೆ ಸುತ್ತುತ್ತಿತ್ತು. ಈತನ ತಂದೆಯ ಕಾಲದಿಂದಲೂ ಅದೇ ಹೊಲದಲ್ಲಿ ದುಡಿಯುತ್ತ ಬಂದಿರುವರಂತೆ. ಏನಿಲ್ಲವೆಂದರೂ ಸುಮಾರು ಐವತ್ತು ವರ್ಷಗಳಿಂದ ಈ ಹೊಲ ಇವರ ವಶದಲ್ಲಿರಬಹುದು. ಅದನ್ನುಳಿದರೆ ಇವರಿಗೆ ಬೇರಾವ ಆಧಾರವೂ ಇಲ್ಲ. ಆ ಆರು ಎಕರೆ ಭೂಮಿಯ ಮೇಲೆಯೆ ಹತ್ತು ಜೀವಗಳು ಬದುಕಬೇಕು. ಲಾವಣಿ ಹಣ ಹೆಚ್ಚಾಗಿಯೆ ಇದ್ದರೂ ಹೇಗೋ ಅವನ್ನು ಸಲ್ಲಿಸುತ್ತ ಬಂದಿದಾರೆ. ಈಗ ಮತ್ತೆ ಹೆಚ್ಚಿಸಿದಾನೆ ಸಾಹುಕಾರ. ಅಷ್ಟು ಹಣವನ್ನಿವರು ಕೊಡಲಾರರು. ಕೊಡದಿದ್ದರೆ ಆತ ಬಿಡಲಾರ. ಅದೇ ನೆಪ ಮಾಡಿಕೊಂಡು ಹೊಲ ಬಿಡಿಸಲು ನಿಂತಿದಾನೆ.

ಬಿಡಿಸಿದ ಬಳಿಕ ಹೆಚ್ಚು ಲಾವಣಿ ಕೊಡುವವರಿಗೆ ಅದನ್ನು ಕೊಟ್ಟಾನು. ಆಗ ಈ ಬಸವಾಣೆಪ್ಪನೂ ಆತನ ಹೆಂಡಿರು ಮಕ್ಕಳೂ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು?

ಆ ಬಡರೈತ ಪರಿವಾರದ ಬಗೆಗೆ ಶಿವಮೂರ್ತಿಯ ಎದೆಯಲ್ಲಿ ಅಪಾರವಾದ ಕನಿಕರ ಉಕ್ಕಿ ಬಂದಿತು. ಆತ ಹೊರಟು ಹೋದನೋ, ಇನ್ನೂ ತನ್ನನ್ನು ಹಿಂಬಾಲಿಸುತ್ತಿರುವನೋ ಎಂದು ಒಮ್ಮೆ ಹಿಂದಿರುಗಿ ನೋಡಿದ. ಬಸವಾಣೆಪ್ಪ ಆತನ ಬೆನ್ನು ಬಿಟ್ಟಿರಲಿಲ್ಲ. ನಿಧಾನವಾಗಿ ಹೆಜ್ಜೆ ಹಾಕುತ್ತ ಕೊಂಚ ದೂರದಲ್ಲಿ ನಡೆದು ಬರುತ್ತಿದ್ದ.

ಶಿವಮೂರ್ತಿ ತಡೆದು ನಿಂತ. ಜೇಬಿನಿಂದ ಸಿಗರೇಟು ಪೆಟ್ಟಿಗೆಯನ್ನು ಹೊರದೆಗೆದು ಒಂದು ಸಿಗರೇಟು ಹೊತ್ತಿಸಿದ. ಹೊಗೆಯನ್ನುಗುಳುತ್ತ ಆ ರೈತನನ್ನೇ ಒಂದೆರಡು ಕ್ಷಣ ದಿಟ್ಟಿಸುತ್ತಲಿದ್ದ. ಉಳ್ಳವರ ನಿರ್ದಯೆಯ ಕಲ್ಲುಗಾಣಕ್ಕೆ ಸಿಲುಕಿಬಿದ್ದು ಅಸಹಾಯಕವಾಗಿ ನರಳುತ್ತಿರುವ ರೈತ ಜನಾಂಗದ ಪ್ರತಿನಿಧಿಯಂತೆ ಕಾಣಿಸಿದ ಬಸವಾಣೆಪ್ಪ. ಆತ ಹತ್ತಿರ ಬರುವ ತನಕ ಅಲ್ಲಿಯೆ ಸಿಗರೇಟು ಸೇದುತ್ತ ನಿಂತುಕೊಂಡಿದ್ದು ಆತ ಸಮೀಪಕ್ಕೆ ಬಂದೊಡನೆ —"ಏನಯ್ಯಾ, ಇನ್ನೂ ನನ್ನ ಬೆನ್ನು ಬಿಡಲಿಲ್ಲವಲ್ಲ ನೀನು?" ಎಂದು ಕೇಳಿದ.

"ರಾತ್ರಿಯಾಗೂತನಕ ಬ್ಯಾರೆ ಏನು ಕೆಲಸರೀ ನನಗ? ಹಾಂಗs ಹೊರಟೆದ್ದೆ ಆಯ್ತು ಊರಾಗ."

"ಬಾ. ಹೊಳೆಯ ದಂಡೆಯ ಮೇಲಾದರೂ ಕುಳಿತಿರೋಣ."

ಒಂದೆರಡು ಗಲ್ಲಿಗಳಲ್ಲಿ ಹಾಯ್ದು ಅವರು ನದಿಯ ಹತ್ತಿರ ಬಂದರು. ತನ್ನ ಪ್ರೀತಿಯ ಕಲ್ಲು ಕಟ್ಟೆಗೆ ಆತನನ್ನು ಕರೆದು ತಂದ ಶಿವಮೂರ್ತಿ. ಗಿಡದ ಬುಡಕ್ಕೊರಗಿ ಕುಳಿತುಕೊಂಡು ರೈತನಿಗೂ ಕುಳಿತಿರಲು ಹೇಳಿ ಹೊಳೆಯ ಕಡೆಗೆ ದೃಷ್ಟಿಯನ್ನೋಡಿಸಿದ.

ಮಳೆಗಾಲದ ಹೊಳೆಯ ಪ್ರವಾಹ. ಅಬ್ಬರದಿಂದ ಹರಿಯುತ್ತಿತ್ತು. ಅದರಾಚೆ ಹಸಿರುಡುಗೆಯನ್ನುಟ್ಟು ನಿಂತ ನಿಸರ್ಗಸುಂದರಿ. ಅದಕ್ಕೂ ಆಚೆ ಕೋಟೆಗಳ ಹಾಗೆ ತಲೆಯೆತ್ತಿ ನಿಂತ ಗುಡ್ಡಗಳು. ಸೂರ್ಯ ಮುಳುಗುವ ಹೊತ್ತು. ಪಡುವಣ ದಿಸೆಯಲ್ಲಿ ಮುಗಿಲು ವಿಧ ವಿಧದ ಬಣ್ಣಗಳಿಂದ ರಂಜಿಸುತ್ತಿತ್ತು.

ನಿಸರ್ಗದ ಮೇಲೆ ನೆಟ್ಟಿದ್ದ ದೃಷ್ಟಿಯನ್ನು ಕಿತ್ತು ಶಿವಮೂರ್ತಿ ಬಸವಾಣೆಪ್ಪನ ಕಡೆಗೆ ಹೊರಳಿಸಿದ. ಆತ ತಲೆ ತಗ್ಗಿಸಿ ಕಟ್ಟೆಯ ಕಲ್ಲುಗಳನ್ನು ಶೂನ್ಯವಾಗಿ ದಿಟ್ಟಿಸುತ್ತ ಕುಳಿತಿದ್ದ. ಆ ಹೊಳೆ, ಆ ಹಸಿರು, ಆ ಗುಡ್ಡ, ಆ ಸೂರ್ಯ, ಆ ಮುಗಿಲಿನ ಬೆಡಗು ಯಾವುದೂ ಆತನ ಗಮನವನ್ನೆಳೆಯಲು ಸಮರ್ಥವಾಗಿರಲಿಲ್ಲ.

"ಏನು ವಿಚಾರ ಮಾಡುತ್ತಿರುವೆ ಬಸವಾಣೆಪ್ಪ ?"

"ಬ್ಯಾರೆ ಏನು ಐತ್ರೀ ಸ್ವಾಮಿಯವರs ? ಮುಂದೆ ನಮ್ಮ ಗತಿ ಏನು ಅಂತ ಚಿಂತಿ ಅಷ್ಟs."

"ಈ ನಿನ್ನ ಸಾಹುಕಾರನ ಹೆಸರೇನು ಬಸವಾಣೆಪ್ಪ ?"

"ಅವರು ಇನಾಮುದಾರರಿ."

"ಯಾವೂರ ಇನಾಮುದಾರರು ?"

"ನಮ್ಮೂರೆಲ್ಲಾ ಅವರದsರಿ. ಇನ್ನೂ ಎರಡು ನೂರು ಹಳ್ಳಿಯ ಹೊಲಗಳೂ ಅವರವs."

"ಅವರೂ ನಿಮ್ಮೂರಲ್ಲೇ ಇರುವರೇನು ?"

"ಅವರ್ಯಾಕ ಇದ್ದಾರ್ರೀ ಹಳ್ಳೀ ಕೊಂಪ್ಯಾಗ ? ಅವರು ಟಿಳಕವಾಡಿಯೊಳಗ ಇರತಾರ."

"ಟಿಳಕವಾಡಿಯೊಳಗೆ ? ಏನು ಮಾಡುತಾರೆ ಅಲ್ಲಿ ?"

"ಅವರೇನು ಮಾಡಬೇಕ್ರೀ ? ದೊಡ್ಡ ಬಂಗಲೆ ಕಟ್ಟಿಸಿ ಆರಾಮಾಗಿ ಇದ್ದಾರ ಅತು."

"ಆರಾಮಾಗಿ ಇದ್ದಾರೆಯೆ ? ಕೆಲಸವೇನೂ ಇಲ್ಲ ?"

ಶಿವಮೂರ್ತಿಯ ಪ್ರಶ್ನೆಯಿಂದಾಗಿ ಬಸವಾಣೆಪ್ಪನಿಗೆ ಕೊಂಚ ನಗೆ ಬಂದಂತಾಯಿತು. ಆತನೆಂದ :

"ಹೇಳಿ ಕೇಳಿ ಇನಾಮುದಾರ್ರು ಅವರು. ಅವರ್ಯಾಕ ಕೆಲಸ ಮಾಡ್ಯಾರ್ರೀ ? ಏನು ಕಡಮಿಯಾಗೈತಿ ಅವರಿಗೆ ? ನೂರಾರು ಎಕರೆ ಜಮೀನು ಇದಾವಲ್ಲ ? ಅದರ ಲಾವಣಿ ಹಣ ಬರತೈತಿ. ಟಿಳಕವಾಡಿಯೊಳಗ ಆನಂದವಾಗಿ ಇದ್ದಾರ."

"ನೀವು ಬೆವರಿಳಿಸುತೀರಿ. ವರ್ಷ ವರ್ಷ ಲಾವಣಿ ಕೊಡುತ್ತೀರಿ. ಆ ಹಣದ ಮೇಲೆ ಅವರು ಆನಂದದಿಂದ ಇದ್ದಾರೆ ಅನ್ನಿ."

"ದೇವ್ರು ಅವರಿಗೆ ಸುಕಾ ಕೊಟ್ಟಾನ. ಇರತಾರೇಳ್ರಿ. ನಮ್ಮ ಹಣ್ಯಾಗ ದುಕ್ಕ ಬರದೈತಿ. ಅದಕ್ಕ ಯಾರೇನು ಮಾಡಬೇಕ್ರೀ ?"

ಒಂದೆರಡು ನಿಮಿಷ ಸುಮ್ಮನೆ ಕುಳಿತುಕೊಂಡಿದ್ದ ಶಿವಮೂರ್ತಿ. ದೇವರು....ಹಣೆಬರಹ....ಸುಖ....ದುಃಖ ! ಬದುಕಿನ ಬಗೆಗೆ ರೈತರಿಗಿರುವ ಈ ಅಜ್ಞಾನವನ್ನು ಹೋಗಲಾಡಿಸುವುದು ಜ್ಞಾನಿಗಳಾದವರ ಕರ್ತವ್ಯವಲ್ಲವೆ? ಪಟ್ಟಣಗಳಲ್ಲಿ ಸುಖವಸತಿಗರಾಗಿ ಕುಳಿತುಕೊಂಡು ಬಡವರ ಬೆವರಿನ ಮೇಲೆ ಬದುಕು ನಡೆಸುವ ಸಿರಿವಂತರ ಚೆಲ್ಲಾಟ ನಿಲ್ಲುವುದೆಂದು ? ನಿಲ್ಲಿಸುವವರಾರು? ಸರಕಾರ, ಅದರ ಕಾಯದೆ ಕಾನೂನುಗಳು, ನ್ಯಾಯಾಸ್ಥಾನಗಳು, ಅಧಿಕಾರಿಗಳು, ಪೋಲೀಸರು ಎಲ್ಲರೂ ಸಿರಿವಂತರ ಕಡೆಗೇ. ಸ್ವರಾಜ್ಯ ಬಂದರೂ ರೈತರ ಸುಲಿಗೆ ನಿಲ್ಲಲಿಲ್ಲ. ಬಡವರ ಗೋಳು ತಪ್ಪಲಿಲ್ಲ. ಅದನ್ನು ತಪ್ಪಿಸುವುದು ಹೇಗೆ? ತಪ್ಪಿಸುವವರು ಯಾರು ?

ಶಿವಮೂರ್ತಿಯ ಔದಾಸೀನ್ಯವಿನ್ನೂ ಹೆಚ್ಚಾಯಿತು. ಆ ಪ್ರಶ್ನೆಗಳಿಗೆ ಉತ್ತರವೀಯುವ ಸಾಮರ್ಥ್ಯವಾಗಲಿ ಧೈರ್ಯವಾಗಲಿ ತನ್ನಲ್ಲಿದ್ದಂತೆ ತೋರಲಿಲ್ಲ. ತಾನು ತೀರಾ ದುರ್ಬಲ ಮನುಷ್ಯ, ತನ್ನಿಂದ ಏನೂ ಆಗಲಾರದು ಎಂದು ಅನ್ನಿಸಿದಾಗ ಆತನ ಎದೆಯಲ್ಲಿದ್ದ ಅಲ್ಪಸ್ವಲ್ಪ ಉತ್ಸಾಹವೂ ಮಾಯವಾದಂತಾಯಿತು. ಬಸವಾಣೆಪ್ಪನನ್ನು ಬೀಳ್ಕೊಂಡು ವೇದನಾಪೂರ್ಣ ಹೃದಯದೊಂದಿಗೆ ಮರಳಿದ.

ಬೀದಿಯ ಮೇಲಿನ ಅಂಗಡಿಗಳಲ್ಲಿ ದೀಪಗಳುರಿಯುತ್ತಿದ್ದುವು. ನೀರು ತರಲು ಹೊಳೆಗೆ ಹೋಗಿ ಬರುವವರ ಗದ್ದಲ ಕಡಿಮೆಯಾಗುತ್ತಲಿತ್ತು. "ಆನಂದವಿಲಾಸ"ದ ಎದುರಿಗೆ ಶಿವಮೂರ್ತಿ ಹಾಯ್ದು ಬರುತ್ತಿದ್ದ ಹಾಗೆ ಯಾರೋ ತನ್ನ ಹೆಸರೆತ್ತಿ ಕೂಗಿದಂತಾಯಿತು. ಶಿವಮೂರ್ತಿ ದೃಷ್ಟಿಯನ್ನೆತ್ತಿ ನೋಡಿದ : ತನ್ನ ಸಹೋದ್ಯೋಗಿ ಕಾರಕೂನ ಪಾಟೀಲ. ಕಚೇರಿಯ ಕಾರಕೂನರಲ್ಲೆಲ್ಲ ಆತ ರಸಿಕನೆಂದು ಹೆಸರು ಪಡೆದಿದ್ದ.

"ಬರ್ರಿ ಶಿವಮೂರ್ತಿಸ್ವಾಮಿ, ಸ್ವಲ್ಪ ಬರ್ರಿ ಇಲ್ಲಿ."

ಅಲ್ಲಿಗೆ ಹೋಗಲು ಇಷ್ಟವಿರಲಿಲ್ಲವಾದರೂ ಆತನಿಂದ ತಪ್ಪಿಸಿಕೊಂಡು

ಹಾಗೆಯೆ ಮುಂದುವರಿಯುವುದೂ ಸಾಧ್ಯವಿರಲಿಲ್ಲ. ಶಿವಮೂರ್ತಿ 'ಆನಂದವಿಲಾಸ'ದಲ್ಲಿ ಅಡಿಯಿರಿಸಲೇಬೇಕಾಯಿತು.

"ಎಲ್ಲಿಗೆ ಹೊರಟದ್ದಿರಿ ಸ್ವಾಮಿಗಳೇ ?"

"ರೂಮಿಗೆ."

"ಇಷ್ಟು ಬೇಗ ರೂಮಿಗೆ ಹೋಗಿ ಏನು ಮಾಡುವುದಿದೆ ? ಬರ್‍ರಿ. ಸ್ವಲ್ಪ ಚಹಾ ತೆಗೆದುಕೊಂಡು ಹೋಗುವಿರಂತೆ."

"ಏನೂ ಬೇಡ ಪಾಟೀಲರೆ. ನಾನಿದೇ ಈಗ ತೆಗೆದುಕೊಂಡು ಬಂದಿದ್ದೇನೆ."

"ಇನ್ನೂ ಸ್ವಲ್ಪ ತೆಗೆದುಕೊಂಡರೆ ಏನೂ ಅಜೀರ್ಣವಾಗುವದಿಲ್ಲವಲ್ಲ ? ಇರಲಿ ಬರ್‍ರಿ," ಎನ್ನುತ್ತ ಪಾಟೀಲ ಆತನನ್ನು ಅಟ್ಟದ ಮೇಲೆ ಕರೆದೊಯ್ದು ಒಂದು "ಸ್ಪೆಶಲ್ ರೂಮು"ನಲ್ಲಿ ಸ್ಥಳ ಮಾಡಿ ಬಾಗಿಲಿಗಿದ್ದ ಪರದೆಯನ್ನು ಇಳಿಬಿಟ್ಟ.

ದುಂಡು ಮೇಜಿನ ಹತ್ತಿರ ಇಬ್ಬರೂ ಕುಳಿತುಕೊಂಡರು. ಎರಡು 'ಸ್ಪೆಶಲ್ ಮಸಾಲೆ ದೋಸೆ' ತರುವಂತೆ ಮಾಣಿಗೆ ಆಜ್ಞಾಪಿಸಿ, ಪಾಟೀಲ ಒಂದು ಸಿಗರೇಟು ಹಚ್ಚಿ ಶಿವಮೂರ್ತಿಗೊಂದು ನೀಡುತ್ತ, "ನೀವೊಬ್ಬರು ವಿಲಕ್ಷಣ ವ್ಯಕ್ತಿಯಪ್ಪ. ನಿಮ್ಮಂಥವರನ್ನು ಇದುವರೆಗೂ ಕಂಡಿರಲಿಲ್ಲ ನಾನು," ಎಂದು ನುಡಿದು ನಕ್ಕ.

"ವಿಲಕ್ಷಣ ?"

"ಹೌದು ಮತ್ತೆ ! ವಿಲಕ್ಷಣ ಅಲ್ಲದಿನ್ನೇನ್ರಿ ? ಈ ಪ್ರಪಂಚದಲ್ಲೇ ಇಲ್ಲದವರಂತೆ ಮಾಡುವಿರಲ್ಲ ನೀವು ? ಸ್ವಲ್ಪ ಜನರಲ್ಲಿ ಬೆರೆತು ಅವರಂತೆ ನಡೆಯಬೇಡವೆ ?"

"ಅವರಂತೆ ಅಂದರೆ ?"

"ಪರಿಚಿತರೊಂದಿಗೆ ಬಳಕೆ ಮಾಡಿಕೊಳ್ಳಬೇಕು, ಅವರೊಂದಿಗೆ ಕೂಡಿ ಮಾತಾಡಬೇಕು, ಸೋಶಿಯಲ್ ಆಗಿರಬೇಕು."

"ಏನೋ ಬಿಡಿರಿ. ನನ್ನದೊಂದು ತರದ ಸ್ವಭಾವ."

"ಆ ಸ್ವಭಾವವನ್ನು ಭರಣಿಯಲ್ಲಿ ಹಾಕಿ ಉಪ್ಪಿನಕಾಯಿ ಹಾಕಬೇಕು

ಸ್ವಾಮಿಗಳೆ. ಈ ಪ್ರಪಂಚದಲ್ಲಿ ಬದುಕುತ್ತಿರುವೆವೆಂದ ಮೇಲೆ ಪ್ರಪಂಚದ ಹಾಗೆ ಇರಬೇಡವೆ ?"

"ನನ್ನಷ್ಟಕ್ಕೆ ನಾನಿದ್ದರೆ ಆಗುವ ಹಾನಿಯಾದರೂ ಏನು ?"

"ಬೇರೆಯವರಿಗೆ ಯಾವ ಹಾನಿಯೂ ಆಗುವದಿಲ್ಲ. ಆಗುವದೆಲ್ಲ ನಮಗೇ ಆಗುತ್ತದೆ. ಅದರ ವಿಚಾರವನ್ನೇಕೆ ಮಾಡುವದಿಲ್ಲ ನೀವು ?"

"ಆದರೆ ಆಗಲಿ. ಏನೇನಾಗಬೇಕಾಗಿದೆಯೊ ಎಲ್ಲವೂ ಆಗಲಿ. ನೀರಲ್ಲಿ ನಿಂತವನಿಗೆ ಚಳಿಯ ಹೆದರಿಕೆಯೇನು ?"

"ಅದಕ್ಕೇ ಹೇಳುವದು ನಾನು. ನೀವು ಸ್ವಲ್ಪ ಪ್ರ್ಯಾಕ್ಟಿಕಲ್ ಆಗಬೇಕು ಎಂದು. ಈ ದಿನ ಮಧ್ಯಾಹ್ನ ನಡೆದ ವಿಷಯವನ್ನೇ ತೆಗೆದುಕೊಳ್ಳೋಣ. ನೀವು ರಜ ಕೇಳಲು ಹೋಗಿ ಇಲ್ಲನೆನ್ನಿಸಿಕೊಂಡು ಬಂದಾಗ ನಾವೆಲ್ಲರೂ ನಕ್ಕೆವು. ಸುಳ್ಳೇಕೆ ಹೇಳಬೇಕು ? ನನಗೂ ನಗೆ ಬಂತು. ಆದರೆ-ಅದರೊಂದಿಗೆ ನಿಮ್ಮ ಬಗ್ಗೆ ಕನಿಕರವೂ ಬಂದಿತ್ತು. ರಜ ಬೇಕಾಗಿದ್ದರೆ ಯಾರ ಕೈಯಲ್ಲಾದರೂ ಒಂದು ಚೀಟಿ ಕಳಿಸಿದ್ದರೆ ಮುಗಿದು ಹೋಗುತ್ತಿತ್ತು. ನೀವೇ ಆಫೀಸಿಗೆ ಬರಬೇಕಾದ ಅಗತ್ಯವೇನಿತ್ತು ?"

"ನಾನೇ ಸ್ವತಃ ಬಂದು ದೇಶಪಾಂಡೆಯವರನ್ನು ಮುಖತಃ ಕಂಡು ಅರ್ಜಿ ಕೊಟ್ಟು ಹೋಗುವದೇ ಒಳ್ಳೆಯದೆಂದು ತಿಳಿದು ಬಂದಿದ್ದೆ. ಅಲ್ಲದೆ ಚೀಟಿ ಕಳಿಸುವದಾದರೂ ಯಾರ ಕೈಯಲ್ಲಿ ?"

"ಅದಕ್ಕೇ ನೋಡಿರಿ, ಸ್ವಲ್ಪವಾದರೂ ಸೋಶಿಯಲ್ ಆಗಿರಬೇಕೆಂದು ನಾ ಹೇಳುವದು. ಜನರಲ್ಲಿ ಬೆರೆತು ಕೆಲವರೊಂದಿಗಾದರೂ ಸ್ನೇಹ ಬೆಳಸಿಕೊಂಡಿದ್ದರೆ ಇಂಥ ಸಮಯದಲ್ಲಿ ಉಪಯೋಗವಾಗುವದಿಲ್ಲವೆ ? ಯಾರ ಕೈಯಲ್ಲಾದರೂ ಚೀಟಿ ಕೊಟ್ಟು ಕಳಿಸಲು ಬರುತ್ತಿತ್ತು. ಅದು ಹೋಗಲಿ. ಆಫೀಸಿಗೆ ಬಂದವರು ಬಂದಿರಿ. ಊಟಕ್ಕೆ ಹೋಗಬೇಕಾಗಿದೆ ಎಂದೇಕೆ ಹೇಳಿದಿರಿ ?"

"ಏಕೆ ಅಂದರೆ ? ನಿಜವಾಗಿಯೂ ಊಟಕ್ಕೇ ಹೋಗಬೇಕಾಗಿತ್ತು ಎಂದೇ ಹೇಳಿದೆ."

"ನೀವೇನೋ ನಿಜವಾಗಿಯೆ ಹೋಗಬೇಕಾಗಿತ್ತು ಸರಿಯೆ. ಆದರೆ ಯಾವಾಗಲೂ ನಿಜವನ್ನೇ ಹೇಳುತ್ತ ಹೊರಟರೆ ಬದುಕುವದೇ ಕಷ್ಟ. ಈ

ಪ್ರಪಂಚದಲ್ಲಿ. ಮೈಯಲ್ಲಿ ಸ್ವಸ್ಥವಿಲ್ಲವೆಂದೋ, ಊರಿಗೆ ಹೋಗಬೇಕಾಗಿದೆ ಎಂದೋ ಹೇಳಿದರೆ ಸುಲಭವಾಗಿ ರಜ ಸಿಗುತ್ತಿತ್ತು."

"ಅದು ಹ್ಯಾಗಪ್ಪ ಸುಳ್ಳು ಹೇಳೋದು ?" ಎಂದು ತಬ್ಬಿಬ್ಬಾಗಿ ನುಡಿದ ಶಿವಮೂರ್ತಿ.

ಪಾಟೀಲ ಗಹಗಹಿಸಿ ನಗುತ್ತ-"ಇಷ್ಟು ಸತ್ಯಸಂಧತೆ ಈ ಜಗತ್ತಿನಲ್ಲಿ ಉಪಯೋಗವಿಲ್ಲ ಸ್ವಾಮಿಗಳೆ. ಹೀಗೆ ಧರ್ಮರಾಜನ ಹಾಗೆ ವರ್ತಿಸುವ ನೀವು ನೌಕರಿ ಹೇಗೆ ಮಾಡುವಿರೋ, ಹೇಗೆ ಬಾಳ್ವೆ ಮಾಡುವಿರೋ ತಿಳಿಯದು !" ಎಂದ.

ಹವೆಯಲ್ಲಿ ಮೋಡಗಳನ್ನು ರಚಿಸುತ್ತ ಮೆಲ್ಲ ಮೆಲ್ಲನೆ ಮೇಲಕ್ಕೇರುತ್ತಲಿದ್ದ ಸಿಗರೇಟಿನ ಹೊಗೆಯನ್ನು ಶೂನ್ಯ ದೃಷ್ಟಿಯಿಂದ ನಿರುಕಿಸುತ್ತ ಶಿವಮೂರ್ತಿ ಮೌನವಾಗಿ ಕುಳಿತಿದ್ದ. ಪಾಟೀಲ ಮುಂದುವರಿಸಿದ್ದ :

"ರಜದ ಮಾತು ಹಾಗಿರಲಿ. ಇಂದು ಮಧ್ಯಾಹ್ನ ಕಚೇರಿಯ ಹತ್ತಿರದ ಚಹದಂಗಡಿಯಲ್ಲಿ ನಿಮ್ಮ ಜೊತೆಗೆ ರೈತನೊಬ್ಬ ಬಂದಿದ್ದನಲ್ಲ. ಆತನಿಂದ ಏನಾದರೂ ಸಿಕ್ಕಿತೇ ?"

ಶಿವಮೂರ್ತಿ ವಿಸ್ಮಯದಿಂದ ಪಾಟೀಲನ ಮುಖವನ್ನೇ ಮಿಕಿ ಮಿಕಿ ನೋಡತೊಡಗಿದ. ಆ ಪ್ರಶ್ನೆ ಆತನಿಗೆ ಅರ್ಥವಾಗಿರಲಿಲ್ಲ.

"ಏನಾದರೂ ಸಿಕ್ಕಿತೇ ಪ್ರಸಾದ ?" ಎಂದು ನಗುತ್ತ ಪ್ರಶ್ನಿಸಿ ಪಾಟೀಲ ಬೆರಳುಗಳನ್ನು ಬಾರಿಸಿ ನಾಣ್ಯಗಳ ಸದ್ದು ಮಾಡಿದ.

ಈಗ ಮಾತ್ರ ಶಿವಮೂರ್ತಿಗೆ ಪಾಟೀಲನ ಅಭಿಪ್ರಾಯವೇನೆಂಬುದು ಅರ್ಥವಾಯಿತು. ಆತ ಕೇಳುತ್ತಿರುವುದು ಹಣದ ವಿಷಯ. ರೈತನಿಂದ ಏನಾದರೂ ಹಣ ಸಿಕ್ಕಿತೇ ಎಂದು ಪ್ರಶ್ನಿಸುತ್ತಿದಾನೆ. ರೈತನಿಂದ ಹಣ ? ಎಂದರೆ -ಲಂಚ....ಲಂಚ !

"ನಾನು ಅಂಥವನಲ್ಲ ಪಾಟೀಲರೆ !" ಎಂದು ಆತ ಕೊಂಚ ಬಿರುಸಾಗಿಯೇ ಉತ್ತರವಿತ್ತ.

"ನೀವು ಅಂಥವರಲ್ಲ ಎಂಬುದು ನಮಗೆಲ್ಲ ಚೆನ್ನಾಗಿ ಗೊತ್ತು. ಅದಕ್ಕೇ ನಾನು ಕೇಳುತ್ತಿರೋದು. ಆತನಿಂದ ನಿಮಗೇನೂ ಸಿಕ್ಕಲಿಲ್ಲವಷ್ಟೆ ?"

"ಚಹದ ರೊಕ್ಕ ತಾನೇ ಕೊಡಲು ಬಂದಿದ್ದ ಆತ. ಅದನ್ನು ಸಹ

ಕೊಡಗೊಡಲಿಲ್ಲ ನಾನು. ಬೇಕಾದರೆ ಅಂಗಡಿಯವನನ್ನು ಕೇಳಬಹುದು."

"ಕೇಳಿಯೂ ಆಗಿದೆ. ಆದರೆ ಆ ಮೇಲೆ ಆ ರೈತ ನಿಮಗೆ ಮತ್ತೆ ಭೆಟ್ಟಿಯಾಗಿದ್ದನಲ್ಲ? ಆಗ ಏನಾದರೂ?"

ಶಿವಮೂರ್ತಿಯ ಸಹನೆ ಕೊನೆಗಾಣುವುದರಲ್ಲಿತ್ತು. ಆದರೂ ಅತ್ಯಂತ ಕಷ್ಟದಿಂದ ಕೋಪವನ್ನು ತಡೆ ಹಿಡಿದುಕೊಂಡು—"ಆ ಬಡವನ ದುಃಖದ ಕಥೆ ಕೇಳುತ್ತ ಕುಳಿತಿದ್ದೆ ಪಾಟೀಲರೆ. ತೀರ ಕಷ್ಟದಲ್ಲಿ ಕಾಲ ಕಳೆಯುತ್ತಿರುವ ಅವನಿಂದ ಹಣ ತಿನ್ನುವಂಥ ಹೊಲೆಯ ನಾನಲ್ಲ...." ಎಂದು ನುಡಿದ.

ಶಿವಮೂರ್ತಿಯನ್ನು ಸಂತವಿಸಲೆಂದು ಪಾಟೀಲ ಆತನ ಭುಜವನ್ನು ಚಪ್ಪರಿಸಿ—"ನನಗೆ ಗೊತ್ತು ಶಿವಮೂರ್ತಿ. ನಿಮ್ಮ ಹೃದಯ ನನಗೆ ಗೊತ್ತು. ಬೇರೇನೂ ತಿಳಿದುಕೊಳ್ಳಬೇಡಿರಿ. ನಾನಿದನ್ನೆಲ್ಲ ಕೇಳಲು ಬೇರೆ ಕಾರಣವಿದೆ. ಅದು ಮಾತ್ರ ನಿಮಗೆ ತಿಳಿಯದು," ಎಂದು ನುಡಿದು ಅತ್ತಿತ್ತ ದೃಷ್ಟಿ ತಿರುಗಿಸಿ ಪಿಸುದನಿಯಲ್ಲಿ ಹೇಳಿದ: "ಆ ದೇಶಪಾಂಡೆ ನಿಮ್ಮ ಹಿಂದೆ ಸಿ. ಐ. ಡಿ. ಬಿಟ್ಟಿದ್ದಾನೆ. ಬೇಕೆಂತಲೇ ಆ ರೈತನನ್ನು ನಿಮ್ಮ ಕಡೆಗೆ ಕಳಿಸಿದ್ದಾನೆ. ಈ ಪ್ರಕರಣದಲ್ಲಿ ನೀವು ಸಿಕ್ಕಿದರೆ ನಿಮ್ಮನ್ನು ಸಹಜವಾಗಿ ಮನೆಗೆ ಕಳಿಸಬೇಕೆಂದು ಆತ ಹೊಂಚು ಹಾಕಿದ್ದಾನೆ."

ಶಿವಮೂರ್ತಿ ಆಶ್ಚರ್ಯದಿಂದ ಮೂಕನಂತಾಗಿ ಪಾಟೀಲನ ಮುಖವನ್ನೇ ನೋಡುತ್ತ ಕುಳಿತ. ಆತನ ಬಾಯಿಂದ ಬಹು ಹೊತ್ತಿನ ವರೆಗೆ ಮಾತೇ ಹೊರಡಲಿಲ್ಲ.

ಪಾಟೀಲ ಹೇಳುತ್ತಿದ್ದ: "ನೀವು ನಮ್ಮವರೆಂದು ಈ ಗುಟ್ಟಿನ ವಿಷಯವನ್ನು ನಿಮ್ಮೆದುರು ಹೇಳಿ ನಿಮ್ಮನ್ನು ಎಚ್ಚರಿಸಬೇಕಾಗಿದೆ. ಆ ದೇಶಪಾಂಡೆ ಬಹಳ ಧೂರ್ತ ಆಸಾಮಿ. ಯಾವಾಗ ಯಾರನ್ನು ಮನೆಗೆ ಕಳಿಸಿಯಾನೆಂಬ ನಿಯಮವಿಲ್ಲ. ನಮಗೂ ಇಂಥ ಕಟು ಅನುಭವಗಳೆಷ್ಟೋ ಸಲ ಬಂದಿವೆ. ನಾವೆಲ್ಲ ಹುಷಾರಾಗಿದ್ದೆವೆಂದು ಪಾರಾದೆವು. ನೀವಿನ್ನೂ ಇಂಥ ವಿಷಯಗಳಲ್ಲಿ ಅನನುಭವಿಕರು. ದೇಶಪಾಂಡೆಯ ಬಲೆಯಲ್ಲಿ ಸುಲಭವಾಗಿ ಸಿಕ್ಕು ಬಿದ್ದೀರಿ ಎಂಬ ಸಂಶಯದಿಂದ ನಾನು ನಿಮ್ಮನ್ನು ಎಚ್ಚರಿಸಬೇಕಾಯಿತು."

"ನನ್ನ ಮೇಲೇಕೆ ಸಿಟ್ಟು ದೇಶಪಾಂಡೆಯವರಿಗೆ? ನಾನವರಿಗೆ ಏನೂ ಕೇಡು ಬಗೆದಿಲ್ಲವಲ್ಲಾ?"

"ಕೇಡು ಬಗೆದಿರಲಿಕ್ಕಿಲ್ಲ. ಆದರೆ ಆತನ ಅಭಿಮಾನವನ್ನು ಕೆರಳಿಸಿದ್ದೀರಲ್ಲ ?"

"ಅಂದರೆ ?"

"ಆತ ಹೆಡ್‌ಕ್ಲಾರ್ಕ್. ಆಫೀಸಿನಲ್ಲೆಲ್ಲ ತಾನೇ ದೊರೆಯೆಂಬ ಭಾವವಿದೆ ಆತನಿಗೆ. ನಾವೆಲ್ಲ ಆತನ ಕೈಕೆಳಗಿನವರು. ಆತ ನಮ್ಮ ಮೇಜಿನ ಹತ್ತಿರ ಬಂದಾಗ ಆತನಿಗೆ ಮರ್ಯಾದೆ ತೋರಿಸಲು ನಾವು ಎದ್ದು ನಿಲ್ಲಬೇಕೆಂದು ಆತನ ಮನಸ್ಸು. ನೀವು ಎದ್ದು ನಿಂತಿದ್ದೀರಾ ಎಂದಾದರೂ ?"

ಶಿವಮೂರ್ತಿ ತಲೆ ಕೆರೆದುಕೊಳ್ಳುತ್ತ ಗೊಂದಲದಲ್ಲಿ ಬಿದ್ದವನಂತೆ ನುಡಿದ : "ಎದ್ದು ನಿಲ್ಲಬೇಕೇನು ?"

"ಆಫೀಸಿನ ರೂಲ್ಸ್‌ನಲ್ಲಿ ಹಾಗೇನೂ ಹೇಳಿಲ್ಲ. ನಿಜ. ಆದರೆ ವ್ಯವಹಾರದಲ್ಲಿ ಇಂಥ ರೂಲ್ಸ್ ಯಾರು ಕೇಳುತ್ತಾರೆ ? ಮೇಲಿನ ಅಧಿಕಾರಿಗಳು ಮಾಡಿದ್ದೇ ನಿಯಮ ಅಲ್ಲವೆ ? ನೀವು ಈ ಕಚೇರಿಗೆ ಬಂದಾಗಿನಿಂದ ಆತ ನಿಮ್ಮ ಮೇಲೆ ಮುನಿದುಕೊಂಡೇ ಇದ್ದಾನೆ. ಅದಕ್ಕೆ ಮುಖ್ಯ ಕಾರಣ ಇದೇ. ಅವನಿಗೆ ನೀವು ಮರ್ಯಾದೆ ತೋರಿಸುವುದಿಲ್ಲ. ಆತನನ್ನು ಕಂಡರೆ ನಮಸ್ಕಾರ ಮಾಡುವುದಿಲ್ಲ. ನಿಮ್ಮಷ್ಟಕ್ಕೆ ನೀವಿರುತ್ತೀರಿ....ಬಹಳ ದಿನಗಳಿಂದ ಆತ ನಿಮ್ಮನ್ನು ಫಜೀತಿ ಮಾಡಿ ದಾರಿಗೆ ತರಬೇಕೆಂದು ಹೊಂಚು ಹಾಕುತ್ತಲೇ ಇರಬೇಕು. ಈ ಪ್ರಕರಣದಲ್ಲಿ ನೀವು ಖಂಡಿತವಾಗಿ ಸಿಕ್ಕು ಬೀಳುತ್ತಿದ್ದಿರಿ.."

"ಲಂಚವನ್ನು ನಾನು ಮುಟ್ಟದಿದ್ದರೆ ದೇಶಪಾಂಡೆ ನನಗೇನು ಮಾಡುವರು ?"

"ಲಂಚ ತೆಗೆದುಕೊಳ್ಳಲೇಬೇಕೆಂದೇನೂ ಇಲ್ಲ. ಆ ರೈತ ನಿಮಗೆ ಚಹ ಕುಡಿಸಿದರೂ ಸಾಕು. ನಿಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳಲು ಅಷ್ಟೇ ಆಧಾರವಾದೀತು ಅವನಿಗೆ. ನಿಮ್ಮ ಬಗ್ಗೆ ಮಾಮಲೇದಾರರ ಹತ್ತಿರ ಇದ್ದದ್ದೊಂದು ಇಲ್ಲದ್ದೊಂದು ಹೇಳಿ ಅವರ ಮನಸ್ಸು ಕೆಡಿಸಿಬಿಟ್ಟನೆಂದರಾಯಿತು. ಆ ಮೇಲೆ ನೌಕರಿಯಲ್ಲಿ ನಿಮಗೆ ಬಡತಿ ಸಿಗುವುದು ಕನಸಿನ ಮಾತು.... ಅದಕ್ಕೇ ನಾನು ನಿಮಗೆ ಹೇಳುವುದು. ಹೀಗೆ ನಿಮ್ಮಷ್ಟಕ್ಕೆ ನೀವಿರದೆ ಸ್ವಲ್ಪ ಸೋಶಿಯಲ್ ಆಗಿದ್ದು ನಾಲ್ಕು ಜನ ಸ್ನೇಹಿತರನ್ನು ಕೂಡಿಕೊಂಡಿರಬೇಕು. ದೇಶಪಾಂಡೆಗೂ ನಮಸ್ಕಾರ ಹಾಕುತ್ತ ಆಗಾಗ ಚಹ ಕೊಡಿಸುತ್ತ ಆತನೊಂ

ದಿಗೂ ಒಳ್ಳೆಯ ಸಂಬಂಧ ಇಟ್ಟುಕೊಂಡಿರಬೇಕು. ಈಗಿನ ಕಾಲದಲ್ಲಿ ಚಹ ದಿಂದ ಎಂಥ ಕೆಲಸವನ್ನಾದರೂ ಸಾಧಿಸಬಹುದು. ಏಕ ಕಪ್ ಚಾ, ಬಹೋತ ಅಚ್ಛಾ-ಎಂಬ ಗಾದೆಯ ಮಾತೇ ಆಗಿದೆಯಲ್ಲಾ....ದೇಶಪಾಂಡೆ ಯನ್ನು ಒಲಿಸಿಕೊಂಡಿದ್ದರೆ ನೀವು ಲಂಚ ತಿಂದರೂ ಆತ ಬೇಡ ಎನ್ನುವು ದಿಲ್ಲ. ಅದರಲ್ಲಿ ಸ್ವಲ್ಪ ಅವನಿಗೂ ಮುಟ್ಟಿಸಿದರಾಯಿತು. ನಿಮ್ಮ ಬಗ್ಗೆ ಸಂತೋಷವಾಗಿರುತ್ತಾನೆ ಆತ...."

"ಲಂಚ ತಿನ್ನುವ ಈ ವಿಷಯ ಬಂದೊಡನೆ ನನ್ನ ತಲೆ ಕೆಡುತ್ತದೆ ಪಾಟೀಲರೆ. ಪಾಪ, ಆ ಬಡವರಿಂದ ಹೇಗೆ ಲಂಚ ತಿನ್ನುವುದು ? ಥೂ !"

"ಇಷ್ಟು ಉದಾರ ಹೃದಯದವರಾದರೆ ನೀವಿಲ್ಲಿ ಬದುಕಲಾರಿರಿ. ಈ ಜನರಲ್ಲಿ ಬದುಕಬೇಕಾದರೆ ಜನರ ಹಾಗೇ ಇರಬೇಕು. ಲಂಚ ಯಾರು ತಿನ್ನುವದಿಲ್ಲ ? ಎಲ್ಲರೂ ತಿನ್ನುತ್ತಾರೆ. ಮಂತ್ರಿಗಳಿಂದ ಮೊದಲು ಮಾಡಿ ಕೊಂಡು ಪಟ್ಟೇವಾಲಾ ಶಿಪಾಯಿಗಳ ವರೆಗೆ ಎಲ್ಲರೂ ತಿನ್ನುವವರೇ. ಕಲೆಕ್ಟ ರರೂ ತಿನ್ನುವವರೇ. ಮಾಮಲೇದಾರರೂ ತಿನ್ನುವವರೇ. ಕಾರಕೂನರೂ ತಿನ್ನುವವರೇ. ತಿನ್ನದಿದ್ದರೆ ವಿಧಿಯಿಲ್ಲ. ಪ್ರಪಂಚ ನಡೆಯಬೇಕಲ್ಲ ? ನಾಳೆ ಮುಮುಕರಾದಾಗ ಸುಖವಾಗಿ ಕುಳಿತು ಉಣ್ಣಲು ಹಣ ಬೇಕಲ್ಲ ? ಬರುವ ಸಂಬಳದಲ್ಲಿ ಸಂಸಾರ ಸಾಗಿಸಿ ಉಳಿಸಲು ಸಾಧ್ಯವಿರುವುದಿಲ್ಲ. ಅಂತೆಯೇ ನಾಳಿನ ಆಧಾರಕ್ಕಾಗಿ ಇಂದು ಲಂಚಕ್ಕೆ ಕೈಯೊಡ್ಡಬೇಕಾಗುತ್ತದೆ. ನಮ್ಮ ಈ ದೇಶಪಾಂಡೆ ಏನು ಕಡಿಮೆ ಲಂಚಕೋರನಿದ್ದಾನೆ ಅಂತೀರಾ ?"

"ಅವರೂ ತಿನ್ನುವರೇ ?"

"ಮಾಮಲೇದಾರರಿಗಿಂತ ಹೆಚ್ಚು ದೇಶಪಾಂಡೆಯೆ ತಿನ್ನುತ್ತಾನೆ. ದೇವರಿ ಗಿಂತ ಪೂಜಾರಿಯೇ ದೊಡ್ಡವನಲ್ಲವೆ ? ಇವೊತ್ತು ಆ ರೈತ ಬಂದಿದ್ದನಲ್ಲ ನಿಮ್ಮ ಹತ್ತಿರ ? ಆತನ ಸಾಹುಕಾರನಿಂದ ದೇಶಪಾಂಡೆ ನೂರಾರು ರೂಪಾಯಿ ತಿಂದಿದ್ದಾನೆ."

"ಅದಕ್ಕೇ ಎಂದು ಕಾಣುತ್ತೆ-ಮುದ್ದತ್ತು ಮುಂದೆ ಬೀಳುತ್ತಿರೋದು?"

"ಹೌದು ಮತ್ತೆ. ಖಟ್ಲೆಯನ್ನು ಹೀಗೇ ಮತ್ತೆ ಮತ್ತೆ ಮುಂದೆ ಹಾಕಿ ಆ ರೈತನಿಗೆ ಸಾಕಪ್ಪಾ ಸಾಕೆನ್ನಿಸಿಬಿಡಬೇಕೆಂದು ಇನಾಮುದಾರನ ಹೊಂಚು. ರೈಲಿಗೆ ತೆರಲು ಹಣವಿಲ್ಲದಂಥ ಪರಿಸ್ಥಿತಿಯನ್ನುಂಟುಮಾಡಿದರೆ ರೈತ

ಉಪಾಯವಿಲ್ಲದೆ ಶರಣು ಬಂದು ಹೆಚ್ಚು ಲಾವಣಿ ಕೊಡಲು ಒಪ್ಪಬಹುದೆಂದು ಇನಾಮುದಾರನ ತಂತ್ರ...."

ದೋಸೆ ಸಿದ್ಧವಾಗಿ ಬಂದಿದ್ದುವು. ಅದನ್ನು ತಿನ್ನಲು ಮನಸ್ಸು ಬರಲಿಲ್ಲ ಶಿವಮೂರ್ತಿಗೆ. ಸಾಹುಕಾರರು, ಕೋರ್ಟಿನ ಕಾರಕೂನರು ಒಂದಾಗಿ ಬಡವರನ್ನು ಹಿಂಡುತ್ತಿರುವ ಈ ವಿಷಯವೇ ಆತನ ಮನಸ್ಸನ್ನೆಲ್ಲ ಕಹಿಯಾಗಿಸಿತ್ತು. ಪಾಟೀಲನ ಬಲವಂತಕ್ಕೆ ಹೇಗೋ ದೋಸೆಯನ್ನು ತಿಂದು ಮುಗಿಸಿದ. ಚಹ ಬಂದಿತು. ಚಹ ಗುಟುಕರಿಸುತ್ತ ಪಾಟೀಲನೆಂದ :

"ಇನ್ನಾದರೂ ಹುಷಾರಾಗಿರ್ರಿ ಶಿವಮೂರ್ತಿ."

"ಏನು ಹುಷಾರಾಗುವುದೋ ಬಿಡಿರಿ. ನನಗೆ ಯಾವುದೂ ಹೊಳೆಯುಲೊಲ್ಲದು."

"ಹೀಗೇಕೆ ನಿರಾಶರಾದವರ ಹಾಗೆ ಮಾತಾಡುತ್ತೀರಿ ?"

"ಏನೋ. ನನಗೆ ಇದೆಲ್ಲವೂ ಬೇಸರವಾಗಿದೆ. ಈ ಪ್ರಪಂಚದ ನೀಚತನ, ಕಪಟ, ಮೋಸಗಳ ಬಗ್ಗೆ ಜುಗುಪ್ಸೆ ಬಂದಿದೆ. ನನ್ನ ಮಟ್ಟಿಗೆ ನಾನೊಬ್ಬನೇ ಒಂಟಿಯಾಗಿ ಇರಲು ಕಾರಣವೂ ಇದೇ," ಎಂದು ತನ್ನ ಎದೆ ಬಿಚ್ಚಿ ಹೇಳಿದ ಶಿವಮೂರ್ತಿ.

"ಪ್ರಪಂಚದ ಬಗೆಗೆ ಬೇಸರಪಟ್ಟುಕೊಂಡು ಪ್ರಯೋಜನವಿಲ್ಲ ಶಿವಮೂರ್ತಿ. ನಾವು ನಿರಾಶರಾಗಬಾರದು-ಇರುವಷ್ಟು ದಿನ ನಗುನಗುತ್ತ ಕಾಲ ಕಳೆಯಲು ಕಲಿಯಬೇಕು. ನೀಚತನ, ಕಪಟ, ಮೋಸ ಅನಾದಿಕಾಲದಿಂದ ಇದ್ದೇ ಇದೆ. ಅದರಲ್ಲೇ ಒಂದು ದಾರಿ ತೆಗೆದು ನೆಮ್ಮದಿಯಿಂದ ಬದುಕಬೇಕು," ಎಂದು ನುಡಿದು ಪಾಟೀಲ ಕ್ಷಣಹೊತ್ತು ಸುಮ್ಮನಿದ್ದು ಮತ್ತೆ ಪ್ರಶ್ನೆಮಾಡಿದ :

"ನೀವೊಬ್ಬರೇ ಇದ್ದೀರಾ ಶಿವಮೂರ್ತಿ ?"

"ನನ್ನ ಪುಣ್ಯ. ಇನ್ನೂ ಆ ಇನ್ನೊಬ್ಬರನ್ನು ಕಟ್ಟಿಕೊಳ್ಳುವ ಗೊಡವೆಗೆ ಹೋಗಿಲ್ಲ."

"ಸರಿಯೆ. ಆದರೆ ಇಂದಿಲ್ಲ ನಾಳೆ ಕಟ್ಟಿಕೊಳ್ಳಲೇಬೇಕಲ್ಲ. ಎಷ್ಟು ದಿನ ಹೀಗೆ ಇರಲಾದೀತು ? ಮದುವೆಯಾಗಲೇಬೇಕಲ್ಲವೆ ?"

"ನನ್ನ ಜೀವನದಲ್ಲಿ ಒಂದು ಸ್ಥಿರತೆ ಬರುವವರೆಗೂ, ನನ್ನ ಕಾಲ ಮೇಲೆ ನಾನು ನಿಲ್ಲುವವರೆಗೂ ಆ ಬಂಧನಕ್ಕೆ ಸಿಲುಕಬಾರದೆಂದು ನಿರ್ಧರಿಸಿದ್ದೇನೆ."

"ಅಂದರೆ ?"

"ನಾನಿನ್ನೂ ಓದಬೇಕು. ಎಂ. ಎ. ಆದರೂ ಮಾಡಬೇಕು. ಅನಂತರ ಎಲ್ಲಾದರೂ ಒಂದು ಒಳ್ಳೆಯ ಕೆಲಸಕ್ಕೆ ಸೇರಿದ ಮೇಲೆ ಮುಂದಿನ ಮಾತು."

ಪಾಟೀಲ ಗಟ್ಟಿಯಾಗಿ ನಗತೊಡಗಿದ. "ಹ ಹ ಹ ಹ! ಎಂ. ಎ. ಆಗಬೇಕು....ಒಳ್ಳೆಯ ಕೆಲಸ ಹಿಡಿಯಬೇಕು. ಮಹತ್ವಾಕಾಂಕ್ಷೆಗೇನೂ ಕಡಿಮೆಯಿಲ್ಲ ಹಾಗಾದರೆ! ಹ ಹ ಹ ಹ! ಆದರೆ ಅದನ್ನು ಸಾಧಿಸುವುದಾದರೂ ಹೇಗೆ?"

"ಈ ನೌಕರಿಗೆ ನಾನು ಹೆಚ್ಚು ದಿನ ತೊಡಗಿಕೊಂಡಿರುವುದಿಲ್ಲ. ಬಹಳವಾದರೆ ಎರಡು ವರ್ಷ. ಅಷ್ಟರಲ್ಲಿ ಸಾಧ್ಯವಾದಷ್ಟು ಹಣ ಉಳಿಸಿ ಮತ್ತೆ ಕಾಲೇಜಿಗೆ ಸೇರಬೇಕೆಂದು ಯೋಚಿಸಿದ್ದೇನೆ...."

ಪಾಟೀಲ ಬಿದ್ದು ಬಿದ್ದು ನಗತೊಡಗಿದ. ಆತ ನಗುವುದೇಕೆಂಬುದು ಶಿವಮೂರ್ತಿಗೆ ಹೊಳೆಯದ್ಂತಾಯಿತು.

ನಗೆಯ ರಭಸವಿಳಿದ ಬಳಿಕ ಪಾಟೀಲನೆಂದ: "ಒಳ್ಳೆಯ ಯೋಚನೆಯೇ. ಆದರೆ ಅದನ್ನು ಸಾಧಿಸುವ ಬಗೆಯೇನು ? ಎಲ್ಲರ ಹಾಗೆ ಲಂಚ ತಿನ್ನುವಂತಿಲ್ಲ. ಹಣ ಉಳಿಸುವಂತಿಲ್ಲ. ಇನ್ನು ಕಾಲೇಜಿನ ಮಾತು ಬರೀ ಕನಸಿನ ಮಾತೇ ಅಲ್ಲವೆ ?"

ಪಾಟೀಲನಾಡಿದ ಮಾತುಗಳಲ್ಲಿ ಅಸತ್ಯವೇನೂ ಇಲ್ಲವೆನ್ನಿಸಿತು ಶಿವಮೂರ್ತಿಗೆ. ಕಾಲೇಜು, ಎಂ. ಎ., ಪ್ರೊಫೆಸರ್ ಕೆಲಸ ಎಲ್ಲವೂ ಕನಸಿನ ಮಾತು ಎಂದು ತನಗೂ ಎಷ್ಟೋ ಸಲ ಅನ್ನಿಸಿಲ್ಲವೆ ?

"ಇವೆಲ್ಲ ಒಂದು ಹುಚ್ಚು ಶಿವಮೂರ್ತಿ. ಈ ಆಯುಷ್ಯದಲ್ಲಿ ನೀವು ಎಂ. ಎ. ಆಗುವ ವಿಚಾರ ಮರೆತುಬಿಡಿರಿ. ಈ ನೌಕರಿಗೆ ಸೇರಿಕೊಂಡ ಮೇಲೆ ಮುಗಿಯಿತು. ಈ ಯಂತ್ರದಿಂದ ಬಿಡುಗಡೆಯಿಲ್ಲ. ಸಾಯುವವರೆಗೂ ಇವರಲ್ಲೇ ಕೊಳೆಯಬೇಕಾಗುವದು. ಇದ್ದುದರಲ್ಲೇ ತೃಪ್ತಿಪಟ್ಟುಕೊಂಡು ಸಾಧ್ಯವಿದ್ದಷ್ಟು ಸುಖವಾಗಿರಲು ಕಲಿಯಬೇಕು. ಬದುಕಿನ ಬಗ್ಗೆ

ನನಗಿರುವ ಒಂದೇ ಒಂದು ತತ್ವಜ್ಞಾನವೆಂದರೆ ಇದೇ ನೋಡಿ. **Enjoy yourself!**" ಎಂದು ನುಡಿದು ಪಾಟೀಲ ಮೇಲಕ್ಕೆದ್ದ.

ಅಂಗಡಿಯವರಿಗೆ ಹಣ ಕೊಟ್ಟು ಇಬ್ಬರೂ ಬೀದಿಗೆ ಬಂದರು. "ಹೊರಡುವಿರಾ ಶಿವಮೂರ್ತಿ ? ಅಥವಾ ನನ್ನೊಡನೆ ಬರುವಿರಾ ?"

"ಎಲ್ಲಿಗೆ ?"

"ಹೀಗೇ. ನಾನು ಕರೆದುಕೊಂಡು ಹೋದಲ್ಲಿಗೆ."

"ನಿಮ್ಮ ಮನೆಗೇ ?"

"ಮನೆ ? ನನಗೆಲ್ಲಿಯ ಮನೆ ಇಲ್ಲಿ ? ನಾನೂ ನಿಮ್ಮ ಹಾಗೆ ಒಬ್ಬನೇ ಇದ್ದೇನೆ–ರೂಮು ಮಾಡಿಕೊಂಡು. ಆದರೂ ನಿಮ್ಮ ಹಾಗೆ ಏಕಾಕಿಯಾಗಿ ಉದಾಸೀನವಾಗಿ ಮಾತ್ರ ಇಲ್ಲ. ನಮ್ಮ ಮನೆಯೆಂಬುದು ಇರದಿದ್ದರೆ ಯಾವುದಾದರೊಂದನ್ನು ನಮ್ಮದನ್ನಾಗಿ ಮಾಡಿಕೊಳ್ಳುವ ವಿದ್ಯೆಯಾದರೂ ತಿಳಿದಿರಬೇಕು. ನಾನಿದೇ ಈಗ ಹೇಳಿದೆನಲ್ಲ–**Enjoy yourself** ಎಂದು. ಎಂಜಾಯ್ ಮಾಡುವ ಮನಸ್ಸೂ ಇಲ್ಲವೇ ನಿಮಗೆ?"

"ಹೇಗದು ಎಂಜಾಯ್ ಮಾಡೋದು ?"

"ನನ್ನೊಂದಿಗೆ ಬರ್ರಿ. ತಾನೇ ತಿಳಿಯುತ್ತದೆ."

"ಎಲ್ಲಿ ಸಿನಿಮಾಕ್ಕೆ ತಾನೇ ನೀವು ಕರೆಯುವುದು ? ಈಚೆಗೆ ಬರುತ್ತಿರುವ ಈ ಕೀಳು ತರಗತಿಯ ಸಿನಿಮಾಗಳೆಂದರೆ ನನಗೆ ತಲೆಬೇಸರು. ದೇವದಾಸ್, ಜಿಂದಗಿ, ಸ್ಟ್ರೀಟ್‌ಸಿಂಗರ್‌ದಂಥ ಉಚ್ಚ ತರಗತಿಯ ಸಿನಿಮಾಗಳೆಲ್ಲಿವೆ ಈಗ ?"

"ಉಚ್ಚ ತರಗತಿ ಎಂದು ಹೇಳುವುದೇ ಒಂದು ಹುಚ್ಚು ಅಷ್ಟೆ. ಜೀವನದಲ್ಲೇ ಉಚ್ಚ ಎನ್ನುವದು ಇಲ್ಲದಿರುವಾಗ ಸಿನಿಮಾದವರಾದರೂ ಎಲ್ಲಿಂದ ತಯಾರಿಸಿಯಾರು ಅದನ್ನು ? ಅದಿರಲಿ. ನಾನು ಕರೆದದ್ದು ನಿರ್ಜೀವ ಸಿನಿಮಾಕ್ಕಲ್ಲ. ಸಜೀವ ಸಿನಿಮಾಕ್ಕೆ. ಎರಡು ಗಂಟೆಗಳ ಜೀವಂತ ರಂಜನೆಗೆ. ಬರ್ತೀರಾ ಶಿವಮೂರ್ತಿ ?"

"ನೀವು ಹೇಳುವುದೇನು ಅನ್ನೋದೇ ತಿಳಿಯಲೊಲ್ಲದು ನನಗೆ," ಎಂದು ಗೊಂದಲದ ಧ್ವನಿಯಲ್ಲಿ ನುಡಿದ ಶಿವಮೂರ್ತಿ.

"ಅಚ್ಛಾ. ಹಾಗಾದರೆ ನಾನೊಬ್ಬನೇ ಹೊರಡುತ್ತೇನೆ. Good night," ಎಂದು ನುಡಿದು ಪಾಟೀಲ ಮತ್ತೊಮ್ಮೆ ನಕ್ಕು-"ಮತ್ತೊಂದು ಸಲ ಯಾವಾಗಲಾದರೂ ಬಂದೀರಂತೆ ಈ ಜೀವಂತ ಸಿನಿಮಾ ನೋಡಲು. ಬಾಯ್, ಬಾಯ್," ಎಂದು ಹೇಳಿ ಬಿರುಬಿರನೆ ಹೊರಟುಹೋದ.

ಶಿವಮೂರ್ತಿ ಅಲ್ಲಿಂದ ಹೊರಟು ತನ್ನ ಕೊಟಡಿಗೆ ಬಂದು, ಕಿಟಕಿಯನ್ನು ತೆರೆದು ಒಂದೆರಡು ಕ್ಷಣ ಅಲ್ಲಿಯೆ ನಿಂತುಕೊಂಡಿದ್ದ. ಆತನ ದೃಷ್ಟಿ ಎದುರಿಗಿದ್ದ ಅಟ್ಟದ ಕಿಟಕಿಯ ಕಡೆಗೆ ಹೊರಳಿತು. ಸರಸುವಿನ ಕೊಟಡಿಯಲ್ಲಿ ದೀಪವುರಿಯುತ್ತಿತ್ತು. ಕಿಟಕಿಯ ಸಲಾಕೆಗಳನ್ನು ಹಿಡಿದುಕೊಂಡು ಆತನ ಕೊಟಡಿಯ ಕಡೆಗೇ ದಿಟ್ಟಿಸುತ್ತ ನಿಂತಿದ್ದಳು ಸರಸು.

ತಾನು ಬರುವುದನ್ನೇ ಕಾಯುತ್ತ ಇಷ್ಟು ಹೊತ್ತಿನ ವರೆಗೆ ಅಲ್ಲಿಯೆ ನಿಂತುಕೊಂಡಿದ್ದಳೇಸೊ ಆಕೆ! ಶಿವಮೂರ್ತಿಯ ಹೃದಯವೆಲ್ಲವೂ ಕಾರಂಜಿಯಂತೆ ಪುಟಿದೇಳತೊಡಗಿತು. ಕೊಂಚ ಹೊತ್ತಿನ ಹಿಂದೆ ಪಾಟೀಲನಾಡಿದ ಆ ಮಾತು ಹಠಾತ್ತಾಗಿ ಅವನ ನೆನಪಿಗೆ ಬಂದಿತು : ಸಜೀವ ಸಿನಿಮಾ! ಜೀವಂತ ರಂಜನೆ!

ದೀಪ ಹಚ್ಚುವುದನ್ನೂ ಮರೆತು ಹಾಗೆಯೆ ನಿಂತುಕೊಂಡಿದ್ದ ಶಿವಮೂರ್ತಿ.

ಮಿಕ್ಕುದೆಲ್ಲವನ್ನೂ ಮರೆತು ಆತನನ್ನೇ ನೋಡುತ್ತ ನಿಂತಿದ್ದಳು ಸರಸು.

[೧೧]

ಮಾರನೆಯ ದಿನ ಬೆಳಿಗ್ಗೆ ಏಳುಗಂಟೆಗೆ ಶಿವಮೂರ್ತಿ ಎಚ್ಚರುಗೊಂಡು ಹಾಸುಗೆಯ ಮೇಲೆದ್ದು ಕುಳಿತುಕೊಳ್ಳುತ್ತಿದ್ದ ಹಾಗೆ ಬಾಗಿಲ ಮೇಲೆ ಬೆರಳುಗಳ ಸದ್ದು ಕೇಳಬಂದಿತು. ಆತ ಎದ್ದು ಹೋಗಿ ಬಾಗಿಲು ತೆರೆದೊಡನೆ ಗೌರಿ ಕೊಟಡಿಯೊಳಕ್ಕೆ ಚಿಮ್ಮಿ ಬಂದಳು.

"ಎದ್ದಿರಾ ಮಾಸ್ತರರೆ?" ಎಂದು ಕೇಳುತ್ತ ಕುರ್ಚಿಯ ಮೇಲೆ ಕುಳಿತುಕೊಂಡು ಕಾಲುಗಳೆರಡನ್ನೂ ಹಾಗೆ ಹೀಗೆ ತೂಗಾಡಿಸುತ್ತ ಕೊಟಡಿಯ ತುಂಬೆಲ್ಲ ದೃಷ್ಟಿಯನ್ನು ಓಡಿಯಾಡಿಸಿದಳು.

"ಅದೇನು ಇವೊತ್ತು ನಿಮ್ಮ ದಿನಚರಿ ಕಾಣೋಲ್ಲವಲ್ಲರಿ ?"

"ಇಲ್ಲವಮ್ಮ. ದಿನವೂ ಯಾರು ಬರೆಯುತ್ತಾರೆ ?"

"ಮತ್ತೆ ! ದಿನಚರಿ ಅಂದರೆ ದಿನವೂ ಬರೆಯುವದಲ್ಲವೇನ್ರಿ ?"

"ಹೌದು. ಆದರೆ ನಾನು ಮಾತ್ರ ಮನಸ್ಸು ಬಂದಾಗ ಬರೆಯುತ್ತೇನಮ್ಮ."

"ನಿನ್ನೆ ರಾತ್ರಿ ಬರೆಯಬೇಕಂತ ಮನಸ್ಸಾಗಲಿಲ್ಲವೇನ್ರಿ ?"

"ಇಲ್ಲವಮ್ಮ."

"ಏನಾಗಿತ್ತು ಮಾಸ್ತರರೆ ನಿಮ್ಮ ಮನಸ್ಸಿಗೆ ?"

"ಏನಾಗಿತ್ತೋ ಏನೊ. ಕೇಳಿದರೆ ಹೇಳೀತೇನಮ್ಮ ಅದು ?"

"ನಮ್ಮ ಸರಸಕ್ಕನಿಗೂ ಹೀಗೇ ಆಗಿತ್ತು ನೋಡ್ರಿ ಮಾಸ್ತರರೆ. ಆಕೆಯ ಮನಸ್ಸಿಗೂ ಏನೋ ಆಗಿತ್ತಂತೆ. ಏನಾಗಿದೆಯೋ ಅಂತ ನಾ ಕೇಳಿದರೆ ಏನೂ ಹೇಳಲಿಲ್ಲ. ಏನೋ ಆಗಿದೆಯವ್ವ—ಏನೆಂಬುದು ತಿಳಿಯದು ಅಂದಳು. ಈ ಮನಸ್ಸು ಅಂದರೆ ಎಂಥಾ ವಿಚಿತ್ರ ಪ್ರಾಣಿ ಮಾಸ್ತರರೆ ! ಎಲ್ಲಿರುತ್ತದೆ ಅದು ?"

"ಇಲ್ಲಿ," ಎನ್ನುತ್ತಾ ಆತ ಹಣೆಯನ್ನು ಮುಟ್ಟಿ ತೋರಿಸಿದ.

"ಹೌದು. ಅಲ್ಲೇ ಇರಬೇಕು ನೋಡ್ರಿ. ಅಕ್ಕನೂ ಹಾಗೇ ಹೇಳುತ್ತಿದ್ದಳು," ಎಂದು ನುಡಿದು ಗೌರಿ ಗಲ್ಲಗಳನ್ನುಬ್ಬಿಸಿ ಹುಸಿ ಮುನಿಸಿನಿಂದ— "ಬಹಳ ಒಳ್ಳೆಯವರು ನೀವು ಮಾಸ್ತರರೆ. ಇದ್ದರೆ ನಿಮ್ಮಂಥವರೇ ಇರಬೇಕು ನೋಡ್ರಿ," ಎಂದಳು.

"ಯಾಕವ್ವ, ಸಿಟ್ಟು ಯಾಕೆ ನಿನಗೆ ?"

"ಸಿಟ್ಟು ಬರದೆ ಇರುವದೇನ್ರೀ ? ಬರುತ್ತೇನೆ ಅಂತ ಹೇಳಿದವರು ಕಡೆಗೂ ಕೈ ಕೊಟ್ಟುಬಿಟ್ಟಿರಲ್ಲ. ಈಗ ಬರ್ತೀರಿ, ಇನ್ನೊಂದು ತಾಸಿಗೆ ಬರ್ತೀರಿ ಅಂತ ಕಾದು ಕಾದು ಸಾಕಾಯಿತು ನಮಗೆಲ್ಲಾ. ಸರಸಕ್ಕನಂತೂ ನೀವು ಬರದೆ ಊಟ ಮಾಡುವುದೇ ಇಲ್ಲ ಅಂತ ಕೂತುಬಿಟ್ಟಳು. ಬಲು ಒಳ್ಳೆಯವರು ನೀವು. ಇದ್ದರೆ ಇರಬೇಕು ನಿಮ್ಮಂಥವರೇ !"

ಗೌರಿಯ ಮಾತು ಕೇಳಿದಾಗ ಶಿವಮೂರ್ತಿಗೆ ಕಳವಳವಾಗದಿರಲಿಲ್ಲ. ತನಗಾಗಿ ಅವರೆಲ್ಲ ಕಾದು ಕುಳಿತಿದ್ದರೇ ? ಸರಸುವೂ ಕಾದು ಕುಳಿತಿದ್ದಳೇ ?

ಛೆ! ಎಂಥ ಪ್ರಮಾದವಾಯಿತು.... ಕಚೇರಿಯಲ್ಲಿ ರಜ ಸಿಕ್ಕುವುದಿಲ್ಲವಾದುದ ರಿಂದ ತನಗೆ ಊಟಕ್ಕೆ ಬರಲಾಗುವುದಿಲ್ಲವೆಂದು ಮೊದಲೇ ಹೇಳಿ ಹೋಗಿದ್ದಲ್ಲಿ ಅವರೆಲ್ಲ ತನಗಾಗಿ ಕಾಯಬೇಕಾದ ಪ್ರಸಂಗ ಬರುತ್ತಿರಲಿಲ್ಲ....

"ಸರಸೂ ಊಟ ಮಾಡಲೇ ಇಲ್ಲವೆ ಗೌರಾಂಬಿಕಾ ?"

"ಸಂಜೆಯ ವರೆಗೂ ಹಾಗೇ ಇದ್ದಳು ನೋಡ್ರಿ. ರಾತ್ರಿ ನಾವೆಲ್ಲಾ ಮಠದಿಂದ ಬಂದ ಮೇಲೆ ಸ್ವಲ್ಪ ಉಂಡಳು."

ಶಿವಮೂರ್ತಿ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದು ಒಂದು ಸಿಗರೇಟನ್ನು ಹೊತ್ತಿಸಿದ. ಅದರ ಹೊಗೆಯೂ ವಾಸನೆಯೂ ಕೋಣೆಯಲ್ಲೆಲ್ಲ ಪಸರಿಸುತ್ತಿದ್ದ ಹಾಗೆ ಗೌರಿ ಮೂಗು ಮುಚ್ಚಿಕೊಂಡು—"ಶ್ಯೀ! ಎಂಥ ಕೆಟ್ಟ ವಾಸನೆ ಈ ಸಿಗರೇಟಿಂದು! ಇದನ್ಯಾಕೆ ಸೇದುತ್ತೀರೋ ತಿಳಿಯದಪ್ಪ. ಈ ವಾಸನೆ ಅಂದರೆ ನನಗಾಗುವದಿಲ್ಲ ನೋಡ್ರಿ. ನಮ್ಮ ಮನೆಯಲ್ಲಿ ಯಾರಿಗೂ ಈ ಕೆಟ್ಟ ಚಟವಿಲ್ಲ," ಎಂದಳು.

ಶಿವಮೂರ್ತಿ ನಗುತ್ತಾ—"ಯಾರಿಗೂ ಇಲ್ಲವೆ? ನಿಮ್ಮ ತಂದೆಯವರು ಸೇದುವದಿಲ್ಲವೇ ?" ಎಂದು ಕೇಳಿದ.

"ಎಂಥಾ ಮಾತಾಡುತೀರಿ ಮಾಸ್ತರರೆ. ಇಂಥ ಚಟ ಅಂದರೆ ಅಪ್ಪನಿಗೆ ಸಿಟ್ಟು ಬೆಂಕಿ. ಒಂದು ಅಡಿಕೆ ಕೂಡಾ ಹಾಕುವದಿಲ್ಲ ಅವರು," ಎಂದು ಅಭಿಮಾನ ಬೆರೆತ ಧ್ವನಿಯಲ್ಲಿ ನುಡಿದಳು ಗೌರಿ.

"ಹಾಗಾದರೆ ಅವರೇ ಭಾಗ್ಯಶಾಲಿಗಳಪ್ಪ. ನಾವೆಲ್ಲ ದುರ್ದೈವಿಗಳು, ದುರ್ಬಲರು. ಏನಾದರೊಂದು ಚಟ ಇದ್ದೇ ಇರುತ್ತದೆ ನಮಗೆ. ಅದನ್ನು ಬಿಡೋಣವೆಂದರೆ ಆಗುವದಿಲ್ಲ."

"ನಿನ್ನೆ ಮಧ್ಯಾಹ್ನ ಯಾಕೆ ಊಟಕ್ಕೆ ಬರಲಿಲ್ಲ ಮಾಸ್ತರರೆ ?"

"ಆಗಲೆ ಹೇಳಿದನಲ್ಲವ್ವ. ರಜ ಸಿಕ್ಕುವದಿಲ್ಲ ಅಂತ."

"ಎಲ್ಲಿ ಊಟ ಮಾಡಿದಿರಿ ಹಾಗಾದರೆ ?"

"ಊಟ? ನಿನ್ನೆ ನಾನೂ ಊಟ ಮಾಡಲಿಲ್ಲ...."

"ಸರಿಹೋಯಿತು. ನಾನು ತಿಳಿದುಕೊಂಡ ಹಾಗೇ ಆಯಿತಲ್ಲ? ನೀವೂ ಮಾಡಲಿಲ್ಲ. ಸರಸಕ್ಕನೂ ಮಾಡಲಿಲ್ಲ. ಒಳ್ಳೆ ಮೋಜು ನೋಡ್ರಿ ಇದು."

ಶಿವಮೂರ್ತಿಗೂ ಆ ವಿಷಯ ಮೋಜಿನದಾಗಿ ತೋರದಿರಲಿಲ್ಲ. ಸಿಗರೇಟನ್ನು ಬಿಸುಟು ಆತ ಹಲ್ಲುಜ್ಜಿಕೊಂಡು ಮುಖ ತೊಳೆಯಲು ಹೊರಗೆ ಹೋಗಿ ಬಂದ. ಟವಲಿನಿಂದ ಮುಖವನ್ನೊರೆಸಿಕೊಳ್ಳುತ್ತ ಪ್ರಶ್ನೆ ಮಾಡಿದ:

"ನಿನ್ನೆ ಯಾರ್ಯಾರು ಊಟಕ್ಕೆ ಬಂದಿದ್ದರಮ್ಮ?"

"ಸ್ವಾಮಿಗಳು, ಶಾಸ್ತ್ರಿಗಳು...."

"ಯಾವ ಶಾಸ್ತ್ರಿಗಳು?"

"ಗಂಗಾಧರಶಾಸ್ತ್ರಿ ಅಂತ. ಕೀರ್ತನ ಕೋಲಾಹಲ, ಸಾಹಿತ್ಯವಾರಿಧಿ ಅಂತ ಏನೇನೋ ಬಿರುದು ಇವೆಯಂತಲ್ಲ—ಆತನೇ."

"ಓಹೊ. 'ಲಿಂಗವೀರ' ಪತ್ರಿಕೆಯ ಸಂಪಾದಕರೊ?"

"ಅವನೇ. ಆ ಢೋಂಗಿ ಶಾಸ್ತ್ರಿ."

"ಢೋಂಗಿ?"

"ಪಕ್ಕಾ ಢೋಂಗಿ. ಮೇಲೆ ಮೇಲೆ ನೋಡುವದಕ್ಕೆ ಒಳ್ಳೆ ಸಭ್ಯನ ಹಾಗಿದ್ದಾನೆ. ಒಳಗೆ ಮಾತ್ರ ಮಹಾ ಕಪಟ."

"ನಿನಗೆ ಹ್ಯಾಗೆ ಗೊತ್ತಾಯಿತಮ್ಮ ಅದೆಲ್ಲ?"

"ನನ್ನನ್ನೇನು ಮಗೂ ಅಂತ ತಿಳಿದಿದ್ದೀರಾ ಮಾಸ್ತರರೆ! ಹಾಲು ಯಾವುದು, ಹಿಟ್ಟಿನ ನೀರು ಯಾವುದು ಎಲ್ಲಾ ತಿಳಿದುಕೊಳ್ಳಬಲ್ಲೆ ನಾನು."

"ಸರಿ. ಸರಿ. ಶಾಸ್ತ್ರಿಗಳಾಯಿತು. ಆಮೇಲೆ?"

"ಆಮೇಲೆ ಆ ಮಲ್ಲಪ್ಪಸೆಟ್ಟರು....ಮುನಿಸಿಪಾಲ್ಟಿ ಅಧ್ಯಕ್ಷರು. ಅವನೂ ಒಬ್ಬ ಢೋಂಗೀ. ಶಾಸ್ತ್ರಿಯ ಅಪ್ಪ ಅವ."

"ಏನು, ಅವರ ಮೇಲೂ ಸಿಟ್ಟೇ ನಿನಗೆ?"

"ಸಿಟ್ಟೇನು ಬಂತು? ಅವರು ಹೀಗೆ ಹೀಗೆ ಇದ್ದಾರೆ ಅಂತ ಹೇಳುತ್ತಾ ಇದ್ದೇನೆ ಅಷ್ಟೆ. ಢೋಂಗಿಗಳಿಗೆ ಢೋಂಗಿಗಳೆಂದು ಕರೆಯಬೇಕಾದರೆ ಸಿಟ್ಟೇ ಬರಬೇಕೇನ್ರಿ?"

"ಇಲ್ಲ. ಆಮೇಲೆ?"

"ಆಮೇಲೆ ನಮ್ಮ ಅಕ್ಕಾ ಅವರು."

"ಅಕ್ಕಾ ಅವರು?"

"ಅಂದರೆ, ನಮ್ಮ ಸಾಲೆಯ ಮಾಸ್ತರತಿ. ಗದಿಗೆಮ್ಮ ಅಂತ ಹೆಸರು ಅವರಿಗೆ. ಅವರ ಗುರುತು ಇಲ್ಲವೇನ್ರಿ ನಿಮಗೆ ?"

"ಇಲ್ಲಮ್ಮ. ನನಗೆ ಹೇಗೆ ಗುರುತಾದೀತು ಅವರದು ?"

"ಅದೇನ್ರೀ ಹೀಗೆ ಹೇಳುತೀರಿ ? ಈ ಊರಲ್ಲಿ ಅವರ ಗುರುತಿಲ್ಲದವರು ಯಾರಿದಾರೆ ? ಅಕ್ಕನ ಬಳಗದ ಕಾರ್ಯದರ್ಶಿ ಅಲ್ಲವೇನ್ರಿ ಅವರು ? ನಿಮಗೆ ಅವರ ಗುರುತಿಲ್ಲ ಅಂದರೆ ಆಶ್ಚರ್ಯವೇ."

"ಇಲ್ಲವ್ವ. ನನಗೆ ಯಾರ ಗುರುತೂ ಇಲ್ಲ."

"ಆ ಮರಿ ಸ್ವಾಮಿಗಳದು ?"

"ಯಾವ ಮರಿಸ್ವಾಮಿ ?"

"ಅದೇ ಆ ಕೆಂಪಗೆ ಕುಳ್ಳಗೆ ಗುಂಡು ಹೊಟ್ಟೆ ಮಾಡಿಕೊಂಡು ಇದಾನಲ್ಲ—ಆ ಮರಿಸ್ವಾಮಿ. ಆತನೂ ಬಂದಿದ್ದ ಸ್ವಾಮಿಗಳ ಜೊತೆಗೆ."

"ಓಹ್ಹೊ ! ಸ್ವಾಮಿಗಳ ಮರಿಯೊ ? ಸರಿಯಮ್ಮ. ಈಗ ಗೊತ್ತಾಯಿತು. ಸ್ವಾಮಿಗಳು ಹೋದ ಕಡೆಗೆಲ್ಲ ಮರಿ ಹೋಗಲೇಬೇಕಲ್ಲ ?"

"ಇವರಿಗೆ ಮರಿ ಅಂತ ಯಾಕೆ ಕರೀತಾರೆ ಮಾಸ್ತರರೆ ? ಆಡಿನ ಹಿಂದೆ ಅದರ ಮರಿಗಳು, ಕೋಳಿಯ ಹಿಂದೆ ಅದರ ಮರಿಗಳು ತಿರುಗುವ ಹಾಗೆ ಸ್ವಾಮಿಗಳ ಹಿಂದೆ ಹಿಂದೆ ಅವರ ಮರಿಗಳು ಅಲೀತಾರಲ್ಲ ? ಇವರೆಲ್ಲ ಸ್ವಾಮಿಗಳ ಮರಿಗಳು–ಅಂದರೆ....ಅಂದರೆ....ಮಕ್ಕಳೇನ್ರೀ ?" ಎಂದು ಕೊಂಚ ಸಂಕೋಚದಿಂದಲೇ ಪ್ರಶ್ನಿಸಿದಳು ಗೌರಿ.

ಶಿವಮೂರ್ತಿ ನಕ್ಕು, ಅಂಗಿ ಹಾಕಿಕೊಂಡು–"ನಡೆಯಮ್ಮ, ಪಾಠಕ್ಕೆ ಹೊತ್ತಾದೀತು. ಮರಿಗಳ ಸುದ್ದಿ ಮತ್ತೊಮ್ಮೆ ಮಾತಾಡಿದರಾಯಿತು," ಎಂದು ನುಡಿದು ಬಾಗಿಲು ಹಾಕಿ ಬೀಗ ಜಡಿದು ಗೌರಿಯೊಂದಿಗೆ ಸೆಟ್ಟರ ಮನೆಗೆ ಸಾಗಿದ.

ಆತ ಬಾಗಿಲಲ್ಲಿ ಅಡಿಯಿರಿಸುತ್ತಿದ್ದ ಹಾಗೆ ಅಂಗಡಿಗೆ ಹೊರಡಲು ಸಿದ್ಧವಾಗಿ ನಿಂತಿದ್ದ ಬಸಪ್ಪಸೆಟ್ಟರನ್ನು ಕಂಡು 'ನಮಸ್ಕಾರ' ಹೇಳಿದ. ಆತನ ನಮಸ್ಕಾರಕ್ಕೆ ಪ್ರತಿಯಾಗಿ ಅವರೂ ಕೈ ಮುಗಿದು 'ಶರಣು ಶರಣಾರ್ಥಿ' ಎಂದು ನುಡಿದು–"ನಿನ್ನೆ ನೀವು ಪ್ರಸಾದಕ್ಕೆ ಬರಲೇ ಇಲ್ಲವಲ್ಲ ಸ್ವಾಮಿಗಳೆ?" ಎಂದರು.

"ಕ್ಷಮಿಸಬೇಕು. ರಜ ಸಿಕ್ಕಲಿಲ್ಲ."

"ನೌಕರಿ ಅಂದರೆ ಹೀಗೇ ನೋಡಿರಿ. ಪರತಂತ್ರ ಯಾವಾಗಲೂ. ಉಪಾಯವಿಲ್ಲ. ಶಿವನ ಇಚ್ಛೆ. ನಿನ್ನೆಯಂತೂ ನಿಮಗೆ ಬರಲಾಗಲಿಲ್ಲ. ಇವೊತ್ತಾದರೂ ಏನಾದರೂ ಸ್ವೀಕರಿಸಿರಿ," ಎಂದು ಹೇಳಿ ಸೆಟ್ಟರು ಅಡುಗೆಯ ಮನೆಯ ಕಡೆಗೆ ತಿರುಗಿ—"ಅಜ್ಜೀ, ಶಿವಮೂರ್ತಿಸ್ವಾಮಿಗಳಿಗೆ ಪ್ರಸಾದ ವಿನಿಯೋಗ ಮಾಡು," ಎಂದು ಕೂಗಿ ಹೇಳಿ "ಇವರನ್ನು ಒಳಗಡೆ ಕರೆದುಕೊಂಡು ಹೋಗು ಗೌರೂ," ಎಂದು ಮಗಳಿಗೆ ಆಜ್ಞಾಪಿಸಿ ಹೊರಟು ಹೋದರು.

"ಬರ್ರಿ ಮಾಸ್ತರರೆ!"

ಶಿವಮೂರ್ತಿ ಸಂಕೋಚದಿಂದ ಪಡಸಾಲೆಯಲ್ಲಿ ನಡೆದು ಅಡುಗೆ ಮನೆಯಲ್ಲಿ ಅಡಿಯಿರಿಸಿದ. ಒಲೆಯ ಹತ್ತಿರ ಕುಳಿತು ಚಪಾತಿ ಮಾಡುತ್ತಿದ್ದ ರುದ್ರವ್ವಜ್ಜಿ ಆತನನ್ನು ಕಂಡೊಡನೆ ಮಮತೆಯಿಂದ "ಬಾರಪ್ಪಾ ತಮ್ಮ, ಬಾ," ಎಂದು ಸ್ವಾಗತಿಸಿದಳು. ಆಕೆಯ ಸಮೀಪದಲ್ಲಿ ಮಣೆಯ ಮೇಲೆ ಕುಳಿತು ಚಪಾತಿ ತಿನ್ನುತ್ತಲಿದ್ದ ಸರಸು ಆತ ದೃಷ್ಟಿಗೆ ಬಿದ್ದೊಡನೆ ನಾಚಿಕೆಯಿಂದ ಸೆರಗನ್ನು ಸರಿಪಡಿಸಿಕೊಂಡು ಮುಖವನ್ನು ಮರೆ ಮಾಡಿಕೊಂಡು ಕುಳಿತಳು.

ಪೂಜಾಗೃಹದಲ್ಲಿ ಲಿಂಗಪೂಜೆಯಲ್ಲಿ ನಿರತಳಾಗಿದ್ದ ನಾಗಮ್ಮ ಅಲ್ಲಿಂದಲೇ ಕೂಗಿ ಹೇಳಿದಳು: "ಸ್ವಾಮಿಯವರು ಸ್ನಾನ ಮಾಡುವಂತಿದ್ದರೆ ಮಾಡಲಿ ಗೌರೂ. ಅವರಿಗೆ ನೀರು ತೋಡಿ ಕೊಡು."

"ಸ್ನಾನ ಮಾಡುತ್ತೀರಾ ಮಾಸ್ತರರೆ?"

"ಏನೂ ಬೇಡವಮ್ಮ."

"ಇಷ್ಟವಿಲ್ಲವಾದರೆ ಅಗತ್ಯವಿಲ್ಲ. ಅವರಿಗೆ ಕಾಲಿಗೆ ನೀರು ಕೊಡು ಗೌರೂ," ಎಂದು ಮತ್ತೆ ನಾಗಮ್ಮ ಕೂಗಿ ಹೇಳಿದಳು.

"ಬರ್ರಿ ಮಾಸ್ತರರೆ," ಎಂದು ಗೌರಿ ಶಿವಮೂರ್ತಿಯನ್ನು ಬಚ್ಚಲು ಮನೆಗೆ ಕರೆದೊಯ್ದಳು.

"ಸ್ನಾನ ಮಾಡಿಯೆ ತಿಂಡಿ ತಿನ್ನಬೇಕೆಂಬ ಕಟ್ಟಳೆಯಿದೆಯೇನಮ್ಮ ನಿಮ್ಮ ಮನೆಯಲ್ಲಿ?" ಎಂದು ಮೆಲ್ಲಗಿನ ಧ್ವನಿಯಲ್ಲಿ ಕೇಳಿದ ಶಿವಮೂರ್ತಿ.

"ಇದೆಲ್ಲಾ ಅಪ್ಪನ ಮಟ್ಟಿಗೆ. ನನಗೂ ಸರಸುವಿಗೂ ಯಾವ ಕಟ್ಟ

ಳೆಯೂ ಇಲ್ಲ. ಮುಖ ತೊಳೆದವರೇ ಮೊದಲು ತಿಂಡಿ—ಆಮೇಲೆ ಸ್ನಾನ ಪೂಜೆ ಎಲ್ಲಾ...."

"ನೀವೂ ಪೂಜೆ ಮಾಡುತ್ತೀರಾ ?" ಎಂದು ಕುತೂಹಲದಿಂದ ಕೇಳಿದ ಶಿವಮೂರ್ತಿ. "ನೀನು ಸರಸೂ ಇಬ್ಬರೂ ಪೂಜೆ ಮಾಡುತ್ತೀರಾ ?" ಎಂಬ ಪ್ರಶ್ನೆಯನ್ನಾತ ಕೇಳುವವನಿದ್ದ. ಆದರೆ ಸರಸು ತೀರ ಸನಿಯದಲ್ಲಿಯೆ ಇರುವಾಗ ಆ ಪ್ರಶ್ನೆ ಆತನ ಬಾಯಿಂದ ಬರುವುದಾದರೂ ಎಂತು ?

"ಮಾಡದಿದ್ದರೆ ಹೇಗೆ ಮಾಸ್ತರರೆ ? ಲಿಂಗವಂತರಾದ ಮೇಲೆ ಮಾಡಲೇಬೇಕಲ್ಲ ? ನೀವು ಮಾಡುವದಿಲ್ಲವೆ ?"

ಮುಖ ತೊಳೆಯುವ ನೆವದಿಂದ ಆ ಪ್ರಶ್ನೆಗೆ ಉತ್ತರವನ್ನೇ ಕೊಡದೆ ಸುಮ್ಮನಿದ್ದುಬಿಟ್ಟ ಶಿವಮೂರ್ತಿ. ಉತ್ತರವಾದರೂ ಎಲ್ಲಿದ್ದಿತು ಆತನ ಹತ್ತಿರ? ತಾನು ಪೂಜೆ ಮಾಡುವುದು ? ಲಿಂಗ ಕಟ್ಟಿಕೊಂಡಿದ್ದರಲ್ಲವೆ ಪೂಜೆಯ ವಿಚಾರ ? ಆ ಲಿಂಗವನ್ನೇ ಎಂದೋ ತೆಗೆದು ಎಲ್ಲಿಯೋ ಬಿಸುಟಿ ಬಿಟ್ಟಿದ್ದ ! ಇನ್ನು ಪೂಜೆ ?

ಕೈಕಾಲು ಮುಖ ತೊಳೆದುಕೊಂಡು ವಿಭೂತಿ ಹಚ್ಚಿಕೊಳ್ಳುವ ಶಾಸ್ತ್ರ ಮಾಡಿ ಆತ ಮಣೆಯ ಮೇಲೆ ಕುಳಿತುಕೊಂಡ. ಅಷ್ಟರಲ್ಲಿ ತಿಂಡಿ ತಿನ್ನುವುದನ್ನು ಮುಗಿಸಿ ಸರಸು ಅಲ್ಲಿಂದ ಜಾರಿಕೊಂಡು ತನ್ನ ಕೊಟಡಿಗೆ ತೆರಳಿದ್ದಳು. ಆಕೆಯ ಅವಸರವನ್ನು ಕಂಡು ಕೊಂಚ ನಗು ಬಂದಿತು ಶಿವಮೂರ್ತಿಗೆ. ಕಿಟಕಿಯಲ್ಲಿ ನಿಂತುಕೊಂಡು ಅರ್ಧಗಂಟೆಯ ವರೆಗೆ ತನ್ನನ್ನೇ ದಿಟ್ಟಿಸುತ್ತ ನಿಂತಿರುವ ಈ ಯುವತಿ ತಾನು ಹತ್ತಿರ ಬಂದಾಗ ಮಾತ್ರ ಲಜ್ಜೆಯಿಂದ ದೂರವಾಗುವುದೇಕೆಂಬುದು ಆತನಿಗೆ ಅರ್ಥವಾಗಲಿಲ್ಲ.

ಲಿಂಗಪೂಜೆಯನ್ನು ಮುಗಿಸಿ ನಾಗಮ್ಮ ಅಡುಗೆಮನೆಗೆ ಬಂದಳು. ಶಿವಮೂರ್ತಿಯ ಪಾದಗಳಿಗೆ ಹಣೆ ಮುಟ್ಟಿಸಿ ನಮಸ್ಕಾರ ಮಾಡಿದಳು. ಶಿವಮೂರ್ತಿಗೆ ಸಂಕೋಚವಾಗದಿರಲಿಲ್ಲ. ತಾನು ಜಂಗಮನಾದುದರಿಂದ ಈ ಹೆಣ್ಣು ಮಗಳು ತನ್ನ ಪಾದ ಮುಟ್ಟಿ ನಮಸ್ಕರಿಸುತ್ತಿದಾಳೆ. ಜಂಗಮ ! ತಾನೆಂಥ ಜಂಗಮನೆಂಬುದನ್ನು ನೆನೆದಾಗ ಆತನಿಗೆ ಒಳಗೊಳಗೇ ನಗೆಯುಕ್ಕಿ ಬಂದಿತು. ಜಂಗಮನ ಮುಖ್ಯ ಲಾಂಛನವಾದ ಲಿಂಗವನ್ನೂ ಧರಿಸಿಲ್ಲ ತಾನು.

ಸರಲಹೃದಯದ ಈ ಹೆಣ್ಣು ಮಗಳಿಗೆ ಈ ವಿಷಯ ತಿಳಿಯದು. ಒಂದು ವೇಳೆ ತಿಳಿದರೆ....

"ನಿನ್ನೆ ನಿಮ್ಮ ದಾರಿ ಬಹಳ ಹೊತ್ತು ನೋಡಿದೆವು ಸ್ವಾಮಿಗಳೆ. ನೀವು ಬರಲೇ ಇಲ್ಲ."

"ಹೌದು ತಾಯಿ. ಬರಲು ಸಾಧ್ಯವಾಗಲಿಲ್ಲ."

"ಸ್ವಾಮಿಗಳೂ ನಿಮ್ಮ ನೆನಪು ತೆಗೆದಿದ್ದರು. ನಿಮಗೂ ಅವರಿಗೂ ಚೆನ್ನಾಗಿ ಪರಿಚಯವಿದೆಯಂತಲ್ಲ ?"

ಸ್ವಾಮಿಗಳೊಂದಿಗೆ ಪರಿಚಯ ? ಶಿವಮೂರ್ತಿಗೆ ಕೊಂಚ ಆಶ್ಚರ್ಯವಾಗದಿರಲಿಲ್ಲ. ತನಗಂತೂ ಅವರನ್ನು ಕಂಡ ಹಾಗೆ ನೆನಪಿಲ್ಲ. ಅವರೇ ಎಲ್ಲಿಯಾದರೂ ನೋಡಿದ್ದರೊ ಏನೊ. ಇದ್ದರೂ ಇರಬಹುದು....

"ನೀವು ಹೈಸ್ಕೂಲಿನಲ್ಲಿದ್ದಾಗ ಅವರು ಎರಡು ಮೂರಾವರ್ತಿ ಅಲ್ಲಿಗೆ ಬಂದಿದ್ದರಂತೆ. ಒಂದು ಸಲ ಅವರ ಅಧ್ಯಕ್ಷತೆಯಲ್ಲೇ ನೀವು ಭಾಷಣ ಮಾಡಿದಿರಂತೆ. ಆ ಭಾಷಣವನ್ನು ಮೆಚ್ಚಿ ಅವರು ನಿಮಗೊಂದು ಪುಸ್ತಕವನ್ನೂ ಬಹುಮಾನವಾಗಿ ಕೊಟ್ಟಿದ್ದರಂತೆ...."

ಭಾಷಣ....ಬಹುಮಾನ....ಓ ! ಈಗ ಜ್ಞಾಪಕವಾಯಿತು....ಮೂರು ವರ್ಷಗಳ ಹಿಂದೆ ಬಸವ ಜಯಂತಿಯ ಉತ್ಸವದಲ್ಲಿ ತಾನು ಮಾತನಾಡಿದ್ದ. ಬಸವಣ್ಣನವರು ಮಾಡಿದ ಸಾಮಾಜಿಕ ಕ್ರಾಂತಿ—ಎಂಬ ವಿಷಯವಾಗಿ. ಅಂದು ಪರಸ್ಥಳದ ಸ್ವಾಮಿಗಳೊಬ್ಬರು ಅಧ್ಯಕ್ಷರಾಗಿದ್ದರು. ಇನ್ನೂ ತರುಣ ವಯಸ್ಸಿನವರು. ತನ್ನ ಭಾಷಣವನ್ನು ತುಂಬಾ ಕೊಂಡಾಡಿದ್ದರಲ್ಲದೆ ಹಳಗನ್ನಡದ ಗ್ರಂಥವೊಂದನ್ನು ಬಹುಮಾನವಾಗಿ ಕೊಟ್ಟಿದ್ದರು. ಅವರೇ ಏನೊ ಈ ಸ್ವಾಮಿಗಳು....ಇದ್ದರೂ ಇರಬಹುದು....

"ನೀವು ಬಹಳ ಬುದ್ಧಿವಂತರು—ಗೌರಿಗೆ ಪಾಠ ಹೇಳಲು ನಿಮ್ಮಂಥವರನ್ನು ನಿಯಮಿಸಿದ್ದು ಬಹಳ ಒಳ್ಳೆಯದಾಯಿತು ಎಂದೆಲ್ಲ ಹೇಳಿದರು ಸ್ವಾಮಿಗಳು. ಬಹಳ ದಿವಸಗಳಿಂದ ನಿಮ್ಮನ್ನು ನೋಡಿಯೆ ಇಲ್ಲವಂತೆ. ಕೂಡಲೆ ಬಂದು ಕಾಣಬೇಕೆಂದು ತಿಳಿಸಿದ್ದಾರೆ."

"ಕಾಣಬೇಕಂತೆ ? ಎಲ್ಲಿ ತಾಯಿ ?"

"ಎಲ್ಲಿ ಅಂದರಿ? ಮಠದಲ್ಲಿ. ಈ ದಿನ ಸಾಯಂಕಾಲವೇ ಬರ್ರಿ. ಪ್ರವಚನವನ್ನೂ ಕೇಳಿದಂತಾದೀತು. ಸ್ವಾಮಿಗಳನ್ನೂ ಕಂಡಂತಾದೀತು."

"ಆಗಲಮ್ಮ," ಎಂದು ನುಡಿದು ಶಿವಮೂರ್ತಿ ತಲೆ ಬಾಗಿಸಿಕೊಂಡು ಚಪಾತಿ ತಿನ್ನತೊಡಗಿದ. ರುದ್ರವ್ವಜ್ಜಿ ಅತ್ಯಂತ ವಾತ್ಸಲ್ಯದಿಂದ ಆತನಿಗೆ ಚಪಾತಿಗಳನ್ನು ಬಡಿಸುತ್ತಿದ್ದಳು. ಎರಡು ಚಪಾತಿ ತಿಂದು ಮುಗಿಸುವುದರಲ್ಲಿ ಆತನ ಹೊಟ್ಟೆ ತುಂಬಿದಂತಾಯಿತು. "ಸಾಕಮ್ಮ, ಸಾಕು," ಎಂದ.

ಅಜ್ಜಿ ಇನ್ನೊಂದು ಚಪಾತಿಯನ್ನು ಆತನ ತಟ್ಟೆಗೆ ಹಾಕಿ ತುಪ್ಪ ನೀಡುತ್ತ ನುಡಿದಳು: "ನಿನ್ನ ತಾಯಿ ಗೀಯಿ ಎಲ್ಲ ಎಲ್ಲಿದಾರೊ. ಒಬ್ಬನೇ ಪರದೇಶಿಯಂತೆ ಇದೀಯ ಇಲ್ಲಿ. ತಿನ್ನಪ್ಪ ತಮ್ಮ. ನಾಚಿಕೆ ಬೇಡ ತಿನ್ನು."

"ನಿಮ್ಮ ತಾಯಿ ಎಲ್ಲಿದಾರೆ ಸ್ವಾಮಿಗಳೆ?"

"ಯಾರೂ ಇಲ್ಲವಮ್ಮ ನನಗೆ."

"ಅಯ್ಯೋ ಪಾಪ. ಎಲ್ಲಾ ಹೋಗಿ ಬಿಟ್ಟರೇ!" ಎಂದು ನುಡಿದು ಆ ಮಾತನ್ನು ಅಲ್ಲಿಗೇ ನಿಲ್ಲಿಸಿದಳು ನಾಗಮ್ಮ.

ತನ್ನ ತಾಯಿ ಆ ಮಾತನ್ನು ನಿಲ್ಲಿಸಿದರೂ ಗೌರಿ ಮಾತ್ರ ನಿಲ್ಲಿಸಲಿಲ್ಲ. ಮಾಸ್ತರರಿಗೆ ತಾಯಿ ತಂದೆ ಯಾರೂ ಇಲ್ಲವಂತೆ. ಈ ವಿಷಯವನ್ನು ಅವರು ತನಗೆ ಹೇಳಲೇ ಇಲ್ಲವಲ್ಲ? ಯಾಕೆ ಬಚ್ಚಿಟ್ಟುಕೊಂಡರೋ?

ಪಾಠದ ಕೊಟಡಿಗೆ ಬಂದೊಡನೆ ಆಕೆ ಕೇಳಿದಳು:

"ನಿಮಗೆ ಯಾರೂ ಇಲ್ಲ ಎಂಬುದನ್ನು ನನಗ್ಯಾಕೆ ಹೇಳಲಿಲ್ಲರೀ ಮಾಸ್ತರರೆ?"

"ಏನೋ ಹೇಳಲಿಲ್ಲವ್ವ. ಆ ದುಃಖದ ಮಾತೆಲ್ಲಾ ಯಾಕೆ?"

ಪಕ್ಕದ ಕೊಟಡಿಯಲ್ಲಿ ಮಂಚದ ಮೇಲೊರಗಿಕೊಂಡು ಇವರ ಮಾತುಗಳನ್ನಾಲಿಸುತ್ತಿದ್ದ ಸರಸುವಿಗೆ ದುಃಖದಿಂದ ಎದೆಯುಕ್ಕಿ ಬಂದಿತು. ಚಿಕ್ಕ ವಯಸ್ಸಿನಲ್ಲಿಯೆ ತನ್ನನ್ನು ಬಿಟ್ಟು ತೆರಳಿದ ತಾಯಿಯ ಜ್ಞಾಪಕ ಬಂದು ಕಣ್ಣುಗಳಲ್ಲಿ ನೀರು ತುಂಬಿತು. ತನಗೂ ತಾಯಿಯಿಲ್ಲ; ಶಿವಮೂರ್ತಿಗೂ ತಾಯಿಯಿಲ್ಲ. ತನಗೆ ತಂದೆಯಾದರೂ ಇದ್ದಾರೆ; ಆತನಿಗೆ ತಂದೆಯೂ ಇಲ್ಲ. ಎಷ್ಟು ದುಃಖಪೂರ್ಣ ಈ ಬದುಕು!

ಗೋಡೆಯ ಮೇಲಿದ್ದ ಮಹಾದೇವಿಯಕ್ಕನ ಚಿತ್ರವೂ ನಕ್ಕು ನುಡಿ

ದಂತಾಯಿತು : "ಎಷ್ಟು ದುಃಖದಾಯಕ ಈ ಬದುಕು !" ಎಂದು. "ಈ ಸಂಸಾರದಲ್ಲಿ ಏನೂ ಹುರುಳಿಲ್ಲವೆಂದೇ ನಾನದರ ಪರಲು ಹರಿದುಕೊಂಡು ಚೆನ್ನಮಲ್ಲಿಕಾರ್ಜುನನ್ನರಸುತ್ತ ಹೊರಟು ಆತನನ್ನು ಸೇರಿದೆ. ನೀನಿನ್ನೂ ಈ ಮಾಯೆಯಲ್ಲೇ ಹೊರಳಾಡುತ್ತಿರುವೆಯಲ್ಲಾ ?" ಎಂದು ಕೇಳಿದಂತಾಯಿತು.

"ಮಾಯೆ ? ನೀನೆನ್ನುವುದಾದರೂ ಏನು ? ನಿನ್ನ ಹಾಗೆ ಎಲ್ಲರೂ ಸಂಸಾರವನ್ನು ತೊರೆದು ಅಡವಿ ಸೇರಬೇಕು ಎಂದು ಹೇಳುತ್ತೀಯಾ ?" ಎಂದು ಪ್ರಶ್ನಿಸಿತು ಸರಸುವಿನ ಮನಸ್ಸು.

ಮಹಾದೇವಿಯಕ್ಕನ ಚಿತ್ರ ಅಲುಗಾಡಿದಂತಾಯಿತು. ಮೆಲುನಗೆಯೊಂದಿಗೆ ಅಕ್ಕ ನುಡಿದಂತಾಯಿತು.

"ನನ್ನ ಮಟ್ಟಿಗೆ ನಾನು ಅಡವಿ ಸೇರಿ ಶಾಂತಿಯನ್ನು ಕಂಡುಕೊಂಡೆ. ಇದರಲ್ಲಿ ಏನೂ ಹುರುಳಿಲ್ಲ ತಂಗೀ, ಈ ಸಂಸಾರದಲ್ಲಿ ಏನೂ ಹುರುಳಿಲ್ಲ. ಈ ದೇಹದಲ್ಲಿ ಏನೂ ಅರ್ಥವಿಲ್ಲ. ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ....ಇದನ್ನು ನೆಚ್ಚಿ ಕೆಡಬೇಡ ತಂಗೀ...."

ಸರಸು ಕಿವಿಗಳೆರಡನ್ನೂ ಕೈಗಳಿಂದ ಮುಚ್ಚಿಕೊಂಡಳು. "ಕೇಳಲಾರೆ ನಿನ್ನ ಉಪದೇಶವನ್ನು. ನನಗೆ ಹುಚ್ಚು ಹಿಡಿಸಬೇಡ ಅಕ್ಕ. ನಿನ್ನ ವಿಚಿತ್ರ ತತ್ವಜ್ಞಾನದ ಹುಚ್ಚು ಹಿಡಿಸಬೇಡ. ಇಷ್ಟು ದಿನ ನನ್ನ ವ್ಯಥೆಯನ್ನು ಕಂಡರೂ ನಿನಗೆ ಕರುಣೆ ಬರಲಿಲ್ಲವೇ ? ನಾನಿನ್ನೂ ತುಂಬು ಜವ್ವನೆ. ಸುಖ ಪಡುವ ಅಧಿಕಾರ ನನಗೂ ಇಲ್ಲವೆ ?" ಮೂಕವಾಗಿಯೆ ಸವಾಲು ಹಾಕಿದಳು.

"ಜವ್ವನೆ ! ತುಂಬು ಜವ್ವನೆ !" ಎಂದು ನುಡಿದು ಗಹಗಹಿಸಿ ನಕ್ಕಂತಾಯಿತು ಅಕ್ಕ. "ನಾನೂ ಜವ್ವನೆಯೆ ಆಗಿದ್ದೆ. ತುಂಬು ಜವ್ವನೆ. ಸೌಂದರ್ಯ ಲಾವಣ್ಯಗಳಿಗೂ ಕೊರತೆಯಿರಲಿಲ್ಲ. ನಾನು ಬಯಸಿದ್ದರೆ ರಾಣಿಯಾಗಿ ಮೆರೆಯಬಹುದಾಗಿತ್ತು. ಕೌಶಿಕ ರಾಜ ನನ್ನ ಪದತಲದಲ್ಲಿ ಸರ್ವಸ್ವವನ್ನೂ ಅರ್ಪಿಸಲು ಸಿದ್ಧನಾಗಿದ್ದ. ಆದರೂ ನಾನು ಎಲ್ಲವನ್ನೂ ಧಿಕ್ಕರಿಸಿದೆ. ವಿರಾಗಿಣಿಯಾಗಿ ಕದಳಿಯ ಬನಕ್ಕೆ ಹೊರಟೆ. ಅದೆಲ್ಲವೂ ಮಾಯೆ, ಕೇವಲ ಮಾಯೆ ಎನ್ನುವುದು ನನಗೆ ಗೊತ್ತಿದ್ದಿತು. ತಿಳಿದು ತಿಳಿದೂ ಆ ಕೊಳಚೆ

ಯಲ್ಲೇ ಸಿಲುಕಿ ಬೀಳುವರೇ ಯಾರಾದರೂ ? ಚೆನ್ನಮಲ್ಲಿಕಾರ್ಜುನನೇ ನಿಜವಾದ ಗಂಡ. ಉಳಿದವರೆಲ್ಲ ಸಾವ ಕೆಡುವ ಗಂಡರು...."

"ನಿನ್ನ ಹಾಗೆ ನಾನೂ ಈ ಚೆನ್ನಮಲ್ಲಿಕಾರ್ಜುನ ಗಂಡನನ್ನು ಅರಸುತ್ತ ಹೊರಡಲು ಸಾಧ್ಯವೆ ? ಎಲ್ಲಿದಾನೆ ನಿನ್ನ ಆ ಚೆನ್ನಮಲ್ಲಿಕಾರ್ಜುನ ? ಸುಳ್ಳು. ಎಲ್ಲವೂ ಸುಳ್ಳು. ನೀನೊಬ್ಬಳು ಹುಚ್ಚಿ. ನಿನ್ನ ಬುದ್ಧಿ ನೆಟ್ಟಗಿರಲಿಲ್ಲ. ಅಂತೆಯೆ ಒಲಿದು ಬಂದ ರಾಜನನ್ನು ತೊರೆದು ಇಲ್ಲದ ದೇವರನ್ನು ಅರಸುತ್ತ ಹುಚ್ಚಿಯಂತೆ ತಿರುಗಿದೆ."

"ಹುಚ್ಚಿ ?"

"ಹೌದು. ಹುಚ್ಚಿಯಲ್ಲದಿನ್ನೇನು ? ಸೀರೆಯನ್ನು ಬಿಸುಟು ಗಂಡುಸರೆದುರಿಗೆ ಅಲೆಯಬೇಕಾದರೆ ಹುಚ್ಚಿಯಲ್ಲದಿನ್ನೇನು ? ಒಲಿದ ಗಂಡನನ್ನು ತ್ಯಜಿಸಿ ಕಾಣದ ಗಂಡನನ್ನು ಹುಡುಕುತ್ತ ಗುಡ್ಡ ಬೆಟ್ಟ ತಿರುಗಿ ಎಲ್ಲೋ ಬಿದ್ದು ಸತ್ತುಹೋದೆ. ನಿನ್ನ ಹಾಗೆ ನಾನೂ ದಿಗಂಬರೆಯಾಗಿ ಕಾಡು ಬೆಟ್ಟ ತಿರುಗಬೇಕೆನ್ನುವಿಯಾ ? ಸೀರೆಯನ್ನು ಕಳಚಿ ನಾನು ಹೊರಗೆ ಹೊರಟರೆ ಸಾಕು, ನಾಳೆಯೇ ನನ್ನನ್ನು ಹುಚ್ಚರಾಸ್ಪತ್ರೆಗೆ ಕಳಿಸುತ್ತಾರೆ. ಸುಮ್ಮನೆ ನಿನ್ನಷ್ಟಕ್ಕೆ ನೀನಿರು ಅಕ್ಕ. ನನ್ನ ಮೇಲೆ ನಿನ್ನ ಪ್ರಭಾವ ಬೀರುವ ವ್ಯರ್ಥ ಪ್ರಯತ್ನ ಮಾಡಬೇಡ."

ಅಕ್ಕ ನಕ್ಕು ಮೌನ ತಳೆದಂತಾಯಿತು. ಪಕ್ಕದ ಕೊಟಡಿಯಿಂದ ಕೇಳಬರುತ್ತಿದ್ದ ಶಿವಮೂರ್ತಿಯ ಮಧುರ ಧ್ವನಿಯನ್ನಾಲಿಸುತ್ತ ಸರಸು ಹಗಲುಗನಸುಗಳನ್ನು ಕಲ್ಪಿಸಿಕೊಳ್ಳತೊಡಗಿದಳು.

[೧೨]

ಅಂದು ಸಾಯಂಕಾಲ ಕಚೇರಿಯಲ್ಲಿ ಕೆಲಸ ಮುಗಿಯುತ್ತಲೂ ಶಿವಮೂರ್ತಿ ಹೊರಕ್ಕೆ ಹೊರಡುತ್ತಿದ್ದ ಹಾಗೆ ದೇಶಪಾಂಡೆಯ ಕರೆ ಕೇಳಬಂದಿತು. ಇತರ ಕಾರಕೂನರೆಲ್ಲ ಆಗಲೆ ಹೊರಟುಹೋಗಿದ್ದರು. ಆರು ಗಂಟೆಯಾಗುತ್ತ ಬಂದಿದ್ದರೂ ದೇಶಪಾಂಡೆ ಮಾತ್ರ ಇನ್ನೂ ತನ್ನ ಮೇಜಿನ ಹತ್ತಿರ ಕುಳಿತೇ ಇದ್ದ.

"ಸ್ವಾಮಿ, ಇಲ್ಲಿ ಬರ್ರಿ."

ಶಿವಮೂರ್ತಿ ಬಂದು ದೇಶಪಾಂಡೆಯ ಎದುರಿಗೆ ನಿಂತುಕೊಂಡ.

"ನಿಮ್ಮ ಹತ್ತಿರ ಮಾತಾಡಲೆಂದೇ ನಾನು ಇಂದು ಇಷ್ಟು ಹೊತ್ತು ಕಾಯ್ದು ಕುಳಿತದ್ದು," ಎಂದು ಪೀಠಿಕೆಗಾರಂಭಿಸಿ ದೇಶಪಾಂಡೆಯೆಂದ : "ಸ್ವಲ್ಪ ವಿಶೇಷ ಕೆಲಸವಿದೆಯೆಂದೇ ನಿಮ್ಮನ್ನು ಕೂಗಬೇಕಾಯಿತು. ನಿಮಗೆ ಅವಸರವೇನೂ ಇಲ್ಲವಷ್ಟೆ ?"

"ಇಲ್ಲ."

"ಸರಿ. ಹಾಗಾದರೆ ಕೂತುಕೊಳ್ಳಿರಿ," ಎಂದು ನುಡಿದು ದೇಶಪಾಂಡೆ ಒಂದು ಚಿಟಿಕೆ ನಸ್ಯವನ್ನು ಮೂಗಿಗೆ ತುಂಬಿ ಮಾತನಾಡತೊಡಗಿದ :

"ನೀವಿನ್ನೂ ನೌಕರಿಗೆ ಹೊಸಬರು. ಅನುಭವ ಕಡಿಮೆ. ಕಡಿಮೆ ಯೆಂದೇಕೆ ಹೇಳಬೇಕು? ಏನೂ ಇಲ್ಲವೇ ಇಲ್ಲವೆಂದರೂ ನಡೆದೀತು. ಅಂತೆಯೆ ನಿಮ್ಮ ಹಿತಕ್ಕಾಗಿ ನಾಲ್ಕು ಮಾತು ಆಡಬೇಕಾಗಿದೆ. ಏನೂ ತಿಳಿಯಬಾರದು ಮತ್ತೆ !"

"ಇಲ್ಲ ರಾಯರೆ. ಹಾಗೇಕೆ ತಿಳಿದುಕೊಳ್ಳಬೇಕು ?"

"ಯಾರಿಗೆ ಗೊತ್ತಪ್ಪ ? ನೀವೆಲ್ಲ ಈಗಿನ ಕಾಲದ ತರುಣರು. ಸ್ವಾತಂತ್ರ್ಯದ ಕಾಲದವರು. ಕಾನೂನುಭಂಗ ಮಾಡಿ ಜೇಲು ಗೀಲು ಕಂಡು ಬಂದವರು. ಅರ್ಥಾತ್ ಕಾನೂನುಗಳ ಬಗ್ಗೆ ನಿಮಗೆ ಅಂಥ ಆದರವೇನೂ ಇರುವುದಿಲ್ಲ. ಅದೂ ಸಾಹಜಿಕವೇ ಅನ್ನಿ. ನಮ್ಮ ಪೀಳಿಗೆಯ ಮನೋವೃತ್ತಿಯೇ ಒಂದು ರೀತಿಯದು. ನಾವೆಲ್ಲ ಸರಕಾರದ ನೌಕರಿಯಲ್ಲೇ ಆಯುಷ್ಯ ಸವೆಯಿಸಿ ನೌಕರಿಯೇ ಸರ್ವಸ್ವ ಅಂತ ತಿಳಿದವರು. ನೀವು ಹಾಗಲ್ಲ. ನೀವು ಬೆಳೆದ ಕಾಲಮಾನವೇ ಬಂಡಾಯದ ಕಾಲಮಾನ. ಯಾರಿಗೂ ತಲೆ ಬಾಗಿಸಬಾರದು—ಎಂಬ ಮನೋಭಾವ ನಿಮ್ಮ ಪೀಳಿಗೆಯದು...."

ದೇಶಪಾಂಡೆ ಇಂಥ ಮಾತುಗಳನ್ನೆಲ್ಲ ಏತಕ್ಕಾಗಿ ಆಡುತ್ತಿರುವನೆಂಬುದೇ ತಿಳಿಯದಂತಾಯಿತು ಶಿವಮೂರ್ತಿಗೆ. ಆತ ದಿಗಿಲುಗೊಂಡು ದೇಶಪಾಂಡೆಯ ಮುಖವನ್ನೇ ಮಿಕಿ ಮಿಕಿ ನೋಡುತ್ತಲಿದ್ದ.

"ಕಚೇರಿಗೆ ಕೆಲಸಕ್ಕಾಗಿ ಬರುವ ರೈತರೊಂದಿಗೆ ಹೆಚ್ಚು ಸಲಿಗೆ ಬೆಳೆಸ

ಬಾರದೆಂಬ ನಿಯಮವಿರುವುದು ನಿಮಗೆ ಗೊತ್ತಿದ್ದ ಹಾಗೆ ತೋರುವ ದಿಲ್ಲವಲ್ಲ ?"

"ಸಲಿಗೆ ?"

"ಸಲಿಗೆ ಎಂದರೆ ಅವರೊಡನೆ ನೆಂಟಸ್ತನ ಬೆಳೆಸುವದೆಂಬೇನೂ ಅಲ್ಲ. ಅವರೊಂದಿಕೆ ವಿಶೇಷ ಬಳಕೆ ಮಾಡಿಕೊಂಡರೂ ಸಲಿಗೆಯೆ, ಅವರೊಂದಿಗೆ ಚಹ ಕುಡಿದರೂ ಸಲಿಗೆಯೆ...."

ಮುನ್ನಾದಿನ ಆ ರೈತನೊಂದಿಗೆ ತಾನು ಚಹ ಕುಡಿದುದರ ನೆನಪಾಗಿ ಶಿವಮೂರ್ತಿಗೆ ಕೊಂಚ ವಿವಂಚನೆಯುಂಟಾಗದಿರಲಿಲ್ಲ. ಪಾಟೀಲನಾಡಿದ ಮಾತುಗಳೂ ಮತ್ತೆ ಆತನ ಕಿವಿಗಳಲ್ಲಿ ಮೊರೆಯತೊಡಗಿದುವು.

"ನಿನ್ನೆ ಒಬ್ಬ ರೈತನೊಂದಿಗೆ ಚಹ ಕುಡಿದಿರಲ್ಲವೇ ನೀವು ?"

"ಹೌದು. ಕುಡಿದದ್ದುಂಟು. ನಾನು ಚಹದಂಗಡಿಗೆ ಹೋದಾಗ ಆತನೂ ಹಿಂದೆ ಹಿಂದೆ ಬಂದ. ನಾನೇನೂ ಆತನನ್ನು ಕರೆದಿರಲಿಲ್ಲ—ಚಹದ ರೊಕ್ಕವನ್ನು ನಾನೇ ಕೊಟ್ಟೆ."

"ಕೊಟ್ಟಿರಬಹುದು. ಅದಕ್ಕೆ ಮೊದಲೇ ಆತನಿಂದ ನಿಮಗೆ ಸಾಕಷ್ಟು ರೊಕ್ಕ ಸಿಕ್ಕಿರಬಹುದಲ್ಲ ? ತಿಂಗಳೆರಡು ತಿಂಗಳು ಚಹಕ್ಕಾಗುವಷ್ಟು ?"

ಶಿವಮೂರ್ತಿ ಉದ್ವೇಗದಿಂದ ಕುರ್ಚಿಯಿಂದೆದ್ದು—"ಏನು ? ಎಂಥ ಆರೋಪ ಮಾಡುತ್ತೀರಿ ರಾಯರೆ ? ನಾನೆಂದೂ ಇಂಥ ಕೆಲಸ ಮಾಡಿದ ವನಲ್ಲ...." ಎಂದು ತ್ವೇಷದಿಂದ ನುಡಿದ.

"ಅಗೊ....ಅಗೊ....ನಾನು ಇದೇ ಈಗ ಹೇಳಿದ ಹಾಗೇ ಆಯ್ತು. ಒಂದು ಮಾತನ್ನಾದರೂ ಸಮಾಧಾನದಿಂದ ಕೇಳಿಕೊಳ್ಳುವ ತಾಳ್ಮೆಯಿಲ್ಲವಲ್ಲಾ ನಿಮಗೆ ?"

"ಇಂಥ ಸುಳ್ಳು ಆರೋಪಗಳನ್ನು ಹೊರಿಸುತ್ತ ಹೊರಟರೆ ತಾಳ್ಮೆಯಾ ದರೂ ಹೇಗೆ ಬರಬೇಕು ?"

"ಸುಳ್ಳೋ ಸತ್ಯವೋ ಎಂಬುದು ಆಮೇಲೆ ನಿರ್ಧರವಾಗುತ್ತದೆ. ಮೊದಲು ಕೇಳಿಯಾದರೂ ಕೇಳಬಾರದೇ ? ಈ ವಿಷಯವಿನ್ನೂ ಸಾಹೇಬರ ಕಿವಿಗೆ ಹೋಗಿಲ್ಲ. ನಿಮ್ಮ ಪುಣ್ಯ. ಅವರ ವರೆಗೆ ಇದನ್ನು ಹೋಗಗೊಡದೆ ನಾನೇ ಬಗೆಹರಿಸಬೇಕೆಂದು ಮಾಡಿದರೆ ನೀವು ನನ್ನ ಮೇಲೆ ಸಿಟ್ಟಾಗುತ್ತೀ

ರಲ್ಲ ? ಸಾಹೇಬರ ಕಿವಿಗೆ ಹೋಯಿತೆಂದರೆ ಮುಗಿದೇ ಹೋಯಿತು. ನಿಮ್ಮ ನೌಕರಿಗೇ ಚಕ್ರ ಬರುತ್ತದೆ. ನಿಮ್ಮ ಬಗ್ಗೆ ಕನಿಕರಗೊಂಡು ನಾನು ನಿಮ್ಮನ್ನು ಉಳಿಸಲೆಂದು ಹೊರಟರೆ ನೀವು ನನ್ನ ಮೇಲೆ ಹರಿಹಾಯುತ್ತೀರಲ್ಲ ?"

ನೌಕರಿಗೆ ಚಕ್ರ ಬೀಳುವುದೆಂಬ ಮಾತು ಹೊರಡುತ್ತಲೂ ಶಿವಮೂರ್ತಿಯ ಸಿಟ್ಟೆಲ್ಲವೂ ಇಳಿದುಹೋಯಿತು.

"ಆ ರೈತನಿಗೂ ನಿಮಗೂ ಏನು ಸಂಬಂಧ ?" ಮತ್ತೆ ಪ್ರಶ್ನಿಸಿದ, ದೇಶಪಾಂಡೆ.

"ಸಂಬಂಧವೇನೂ ಇಲ್ಲ. ಆತನನ್ನು ಈ ಮೊದಲು ಎಂದೂ ಕಂಡಿರಲಿಲ್ಲ ನಾನು. ನಿನ್ನೆ ಆತ ತಾನಾಗಿಯೆ ಬಂದು ನನ್ನನ್ನು ಮಾತನಾಡಿಸಿದ."

"ಬಹಳ ಸಲಿಗೆಯಿದ್ದವರ ಹಾಗೆ ಇಬ್ಬರೂ ಎರಡು ಮೂರು ತಾಸು ಮಾತನಾಡುತ್ತಿದ್ದರಂತಲ್ಲ ?"

"ಆತ ಬಡವ. ತನ್ನ ಗೋಳಿನ ಕತೆ ಹೇಳುತ್ತಲಿದ್ದ. ಕೇಳುತ್ತಿದ್ದೆ, ಅಷ್ಟೆ."

"ಆತ ಬಡವ ಎಂದು ಕೇಳುತ್ತಿದ್ದಿರೋ, ಅಥವಾ ನಿಮ್ಮವ ಎಂದು ಕೇಳುತ್ತಿದ್ದಿರೋ ?"

"ನಮ್ಮವ ಅಂದರೆ ?"

"ಅಂದರೆ ನಿಮ್ಮ ಜಾ–ತಿ–ಯವ."

ಶಿವಮೂರ್ತಿಗೆ ಮತ್ತೆ ಸಿಟ್ಟು ಬರದಿರಲಿಲ್ಲ. ಆದರೂ ತುಂಬಾ ಕಷ್ಟದಿಂದ ಅದನ್ನು ತಡೆದುಕೊಂಡು ಸಮಾಧಾನದಿಂದಲೆ ನುಡಿದ :

"ಆತ ಯಾವ ಜಾತಿಯವನೋ ನನಗಂತೂ ತಿಳಿಯದು. ಜಾತಿಯ ಪ್ರಶ್ನೆ ಎಲ್ಲಿ ಬರುತ್ತದೆ ಇಲ್ಲಿ ರಾಯರೆ ?"

ದೇಶಪಾಂಡೆ ಮುಗುಳುನಗೆ ನಕ್ಕು ಹೇಳಿದ : "ಹೆಸರು ಕೇಳಿದರೆ ಗೊತ್ತಾಗುವದಿಲ್ಲವೇ ಜಾತಿ ? ಆತನ ಹೆಸರು ಬಸವಾಣೆಪ್ಪ ಅಂತ. ಹೌದೋ ಅಲ್ಲವೊ ?"

"ಇದ್ದೀತು. ನನಗೆ ಸರಿಯಾಗಿ ನೆನಪಿಲ್ಲ."

"ಬಸವಾಣೆಪ್ಪ ಅಂದರೆ ಯಾವ ಜಾತಿ ಎಂದು ತಿಳಿಯುವುದು ಕಷ್ಟವೇ? ಲಿಂಗಾಯತರನ್ನು ಬಿಟ್ಟು ಇನ್ನಾವ ಜಾತಿಯಲ್ಲಿ ಈ ಹೆಸರು ಇಡುತ್ತಾರೆ ?"

"ಜಾತಿಗಳ ವಿಷಯ ನಾನೆಂದೂ ತಲೆಯಲ್ಲಿ ಹಾಕಿಕೊಂಡಿಲ್ಲ ರಾಯರೆ. ನನಗಿಂತ ಚೆನ್ನಾಗಿ ನಿಮಗೇ ಗೊತ್ತು ಈ ವಿಷಯ."

"ಹಾಂ. ಹೀಗೆ ಹಾದಿಗೆ ಬರ್ರಿ....ಈ ಬಸವಾಣೆಪ್ಪನೂ ಲಿಂಗಾಯತ. ನೀವೂ ಲಿಂಗಾಯತರು....ಅರ್ಥಾತ್ ಆತನ ಬಗ್ಗೆ ನಿಮಗೆ ಕನಿಕರ ಬರುವದು ಸ್ವಾಭಾವಿಕ...."

"ಆತ ಲಿಂಗಾಯತ ಎಂಬುದು ನನ್ನ ತಲೆಯಲ್ಲೇ ಇರಲಿಲ್ಲ ಎಂದು ಹೇಳಿದೆನಲ್ಲ ರಾಯರೆ. ಆತ ರೈತ, ತೀರ ಬಡವ, ಇಷ್ಟು ಮಾತ್ರ ಗೊತ್ತಿತ್ತು."

"ಸರಿ. ತನ್ನ ಗೋಳಿನ ಕತೆ ಹೇಳಿಕೊಂಡು ಆ ಗೋಳನ್ನು ಕೊನೆಗೊಳಿಸಲು ಎಷ್ಟು ರೂಪಾಯಿ ಕೊಟ್ಟ ಆ ಬಡ ರೈತ ?"

ಶಿವಮೂರ್ತಿಗೆ ಇನ್ನು ಅಲ್ಲಿ ಕುಳಿತುಕೊಳ್ಳಲಾಗಲಿಲ್ಲ. "ಬಡ ರೈತರಿಂದ ಲಂಚ ತಿನ್ನುವಂಥ ಹೇಸಿ ಕೆಲಸ ನನ್ನಿಂದ ಎಂದೂ ಆಗದು ರಾಯರೆ. ನೀವು ನನ್ನ ಬಗ್ಗೆ ಪೂರಾ ತಪ್ಪು ತಿಳಿದುಕೊಂಡಿದ್ದೀರಿ. ನಾನಿನ್ನು ಹೋಗುತ್ತೇನೆ. ನಮಸ್ಕಾರ," ಎಂದು ನುಡಿದವನೆ ಕಚೇರಿಯಿಂದ ಹೊರಟುಬಿಟ್ಟ.

"ಇಲ್ಲಿ ಕೇಳಿರಿ ಸ್ವಾಮಿ, ಸ್ವಲ್ಪ ಕೇಳಿರಿ...." ಎಂದು ದೇಶಪಾಂಡೆ ಕೂಗುತ್ತಲಿದ್ದ. ಶಿವಮೂರ್ತಿ ಮಾತ್ರ ಅಲ್ಲಿ ನಿಲ್ಲಲಿಲ್ಲ. ವೇಗವಾಗಿ ಹೆಜ್ಜೆ ಹಾಕುತ್ತ ಬೀದಿಗೆ ಬಂದು ಸರಸರನೆ ನಡೆಯತೊಡಗಿದ. ಆತನ ತಲೆಯೆಲ್ಲವೂ ಕಾಯ್ದು ಹೋದಂತಿದ್ದಿತು.

ಆತ 'ಆನಂದ ವಿಲಾಸ'ದ ಎದುರಿಗೆ ಹಾಯ್ದು ಹೊರಟಿದ್ದ ಹಾಗೆ ತನ್ನ ಹೆಸರೆತ್ತಿ ಯಾರೋ ಕೂಗಿದಂತಾಯಿತು. ತಿರುಗಿ ನೋಡಿದ. ಕೂಗಿದಾತ ಬೇರಾರೂ ಆಗಿರಲಿಲ್ಲ ; ಮುನ್ನಾದಿನ ಅದೇ ಅಂಗಡಿಯಲ್ಲಿ ಭೆಟ್ಟಿಯಾಗಿದ್ದ ಪಾಟೀಲ.

ಆತನೊಂದಿಗೆ ಅಂಗಡಿಗೆ ನುಗ್ಗಿ ಮಾತಿನಲ್ಲಿ ತೊಡಗಿಕೊಳ್ಳುವ ಅಪೇಕ್ಷೆ ಕೊಂಚವೂ ಇರಲಿಲ್ಲ ಶಿವಮೂರ್ತಿಗೆ. ನೇರವಾಗಿ ಕೊಟಡಿಗೆ ಹೋಗಬೇಕು, ತನ್ನ ಪ್ರೀತಿಯ ಪಿಟೀಲಿನ ರಾಗಲಹರಿಯಲ್ಲಿ ಉದ್ವೇಗವೆಲ್ಲವನ್ನೂ ತೇಲಿಸಿ

ಬಿಡಬೇಕು ಎಂದು ಆತ ನಿರ್ಧರಿಸಿದ್ದ. ಆದರೆ ಪಾಟೀಲ ಆತನನ್ನು ಬಿಡಲಿಲ್ಲ.

"ಇಷ್ಟು ರಭಸದಿಂದ ಎಲ್ಲಿಗೆ ಹೊರಟಿದ್ದೀರಿ ಶಿವಮೂರ್ತಿ? ಬರ್ರಿ, ಬರ್ರಿ, ಸ್ವಲ್ಪ ಚಹ ತೆಗೆದುಕೊಂಡು ಹೋಗುವಿರಂತೆ."

"ಇಲ್ಲ, ನನ್ನ ಮನಸ್ಸು ಸ್ತಿಮಿತದಲ್ಲಿಲ್ಲ. ನನಗಾವುದೂ ಬೇಡವಾಗಿದೆ ಪಾಟೀಲರೆ. ನನ್ನ ಬಿಟ್ಟು ಬಿಡಿ."

ಶಿವಮೂರ್ತಿಯ ಧ್ವನಿಯಲ್ಲಿ ಹರಿದು ಬಂದ ವಿಷಾದದ ಅರಿವಾಗದಿರಲಿಲ್ಲ ಪಾಟೀಲನಿಗೆ. ಆತ ಸಹಾನುಭೂತಿಯಿಂದ ಶಿವಮೂರ್ತಿಯ ಭುಜದ ಮೇಲೆ ಕೈ ಹಾಕಿ–"ಯಾಕೆ? ಬಹಳ ದುಃಖದಲ್ಲಿದ್ದ ಹಾಗಿದೆಯಲ್ಲ ಮೂರ್ತಿ? ಏನಾಗಿದೆ ನಿಮಗೆ?" ಎಂದು ಕೇಳಿದ.

"ಏನಾಗಿದೆಯೊ ಏನೊ. ತಲೆ ವಿಪರೀತ ಸಿಡಿಯುತೊಡಗಿದೆ."

"ತಲೆ ಸಿಡಿದರೆ ಹಾಗೇ ನರಳುತ್ತಿರಬೇಕೆ? ಅದಕ್ಕೆ ಔಷಧ ಬೇಡವೇ? ಬರ್ರಿ. ನಿಮ್ಮ ತಲೆನೋವನ್ನು ಗುಣಪಡಿಸುವಂಥ ಔಷಧ ಮಾಡೋಣ."

"ನನಗೆ ಚಹ ಬೇಕಿಲ್ಲ ಪಾಟೀಲ."

"ಚಹ ಬೇಡವಾದರೆ ಬೇಡ. ಬೇರೊಂದು ಔಷಧ ತೆಗೆದುಕೊಂಡೀರಂತೆ. ಬರ್ರಿ," ಎಂದು ಹೇಳಿ ಪಾಟೀಲ ಆತನ ಕೈ ಹಿಡಿದು ಎಳೆಯುತೊಡಗಿದ.

ಶಿವಮೂರ್ತಿ ಬೇಸರದಿಂದ–"ಎಲ್ಲಿಗೆ ಪಾಟೀಲರೆ?" ಎಂದ.

"ನನ್ನೊಡನೆ ಸುಮ್ಮನೆ ಬಂದುಬಿಡಬಾರದೇ ಮೂರ್ತಿ?" ಎಂದು ನುಡಿದು ಪಾಟೀಲ ಆತನನ್ನು ಬಲವಂತದಿಂದ ಕರೆದುಕೊಂಡು ಹೊರಟ. ಪಾಟೀಲನ ಕೈಯಿಂದ ಬಿಡಿಸಿಕೊಂಡು ಹೊರಡುವಷ್ಟು ಶಕ್ತಿಯೂ ತನ್ನಲ್ಲಿ ಉಳಿದಿದ್ದಂತೆ ತೋರಲಿಲ್ಲ ಶಿವಮೂರ್ತಿಗೆ. ಕನಸಿನಲ್ಲಿ ನಡೆಯುವವರ ಹಾಗೆ ಆತ ಮೂಕವಾಗಿ ನಡೆಯುತ್ತಲಿದ್ದ.

ಎರಡು ಮೂರು ಗಲ್ಲಿಗಳಲ್ಲಿ ಸುತ್ತಿ ಪಾಟೀಲ ಆತನನ್ನು ಚಿಕ್ಕ ಮನೆಯೊಂದರ ಬಳಿಗೆ ಕರೆದು ತಂದ. ಹೊಲಸು ವಾಸನೆ ಬೀರುವ ಓಣಿ. ತೀರ ಚಿಕ್ಕದಾದ ಮನೆ. ಮನೆಯ ಬಾಗಿಲಲ್ಲಿ ಅಲಂಕೃತ ಸ್ತ್ರೀಯೊಬ್ಬಳು ನಿಂತುಕೊಂಡು ಬರು ಹೋಗುವವರನ್ನು ದಿಟ್ಟಿಸುತ್ತಲಿದ್ದಳು. ಪಾಟೀಲನನ್ನು

ಕಂಡೊಡನೆ ಆಕೆಯ ಮುಖದ ಮೇಲೆ ಹಾಸ್ಯ ಲಹರಿಯೊಂದು ಸುಳಿಯಿತು. ಹುಬ್ಬು ಹಾರಿಸಿ ಆತನನ್ನು ಸ್ವಾಗತಿಸಿದಳು.

ಅದು ಯಾರ ಮನೆ, ಎಂಥ ಮನೆ ಎಂಬುದು ಶಿವಮೂರ್ತಿಗೆ ತಿಳಿಯದಿರಲಿಲ್ಲ. ಆತ ಪಾಟೀಲನ ಕೈಯಿಂದ ತನ್ನ ಕೈ ಬಿಡಿಸಿಕೊಂಡು—"ನಾನು ಹೋಗುತ್ತೇನೆ ಪಾಟೀಲ," ಎಂದು ನುಡಿದವನೆ ರಭಸದಿಂದ ಹೆಜ್ಜೆಯಿಡುತ್ತ ಹೊರಟುಬಿಟ್ಟ. ಪಾಟೀಲ ನಕ್ಕು ಮನೆಯೊಳಗಡೆ ಅಡಿಯಿರಿಸಿದ.

ಪಡಸಾಲೆಯಲ್ಲಿದ್ದ ಮುರುಕು ಕುರ್ಚಿಯ ಮೇಲೆ ಕುಳಿತುಕೊಂಡು ಆತ ಒಂದು ಸಿಗರೇಟನ್ನು ಹೊತ್ತಿಸಿ ಹೊಗೆಯೆಳೆಯತೊಡಗಿದ. ಆಕೆ ಆತನ ಪಕ್ಕದಲ್ಲಿ ಬಂದು ಕುರ್ಚಿಯ ಮೇಲೆ ಕೈಯೂರಿ ನಿಂತು ಕೇಳಿದಳು :

"ಯಾರ್ರೀ ಅವ, ಹಾಂಗ ಹೊಂಟು ಹೋದ ?"

"ಹೀಗೇ. ನಮ್ಮ ಗೆಳೆಯ. ನಮ್ಮ ಆಫೀಸಿನಲ್ಲೇ ಕೆಲಸ ಮಾಡುತಾರೆ."

"ಹಂಗ್ಯಾಕೆ ಮೂಗು ಮುರಿದು ಹೋಗಿಬಿಟ್ಟ ?"

"ಇದೆಲ್ಲಾ ಆತನಿಗೆ ಸರಿಬರುವದಿಲ್ಲಾಂತ ಕಾಣುತ್ತದೆ. ಇನ್ನೂ ಹುಡುಗ. ಒಬ್ಬನೇ ಇದ್ದಾನೆ. ದುಃಖದಲ್ಲಿದ್ದ ಹಾಗಿತ್ತು. ಏನೋ ಅದನ್ನು ಸ್ವಲ್ಪ ಮರೆಯಲಿ ಪಾಪ, ಅಂತ ಕರೆದುಕೊಂಡು ಬಂದೆ. ಆದರೆ...."

"ಅವೆಲ್ಲಾ ಎಂಥಾ ಗಂಡಸ್ರು ಬಿಡ್ರಿ...." ಎಂದು ಅಲಂಕೃತೆ ಮೂಗು ಮುರಿದಳು.

"ಛೆ, ಹಾಗನ್ನಬಾರದು ಸಾವಿತ್ರೀ. ಪಾಪ, ಆತ ಬಲು ಒಳ್ಳೆಯ ಹುಡುಗ. ಯಾರ ತಂಟೆಗೂ ಹೋಗದೆ ತನ್ನಷ್ಟಕ್ಕೆ ತಾನಿರುತ್ತಾನೆ. ಆಫೀಸಿನಲ್ಲಿ ಬಹಳ ತ್ರಾಸವಾಗಿ ತಲೆ ಕೆಟ್ಟಿರುತ್ತದೆ. ಹುಡುಗ ಮುಂದೆ ಓದಬೇಕೆಂದಿದ್ದ. ಅದೂ ಆಗಲಿಲ್ಲ. ಅದನ್ನೂ ಮನಸ್ಸಿಗೆ ಹಚ್ಚಿಕೊಂಡಿದ್ದಾನೆ."

"ಓದಬೇಕು ? ಏನು ಓದೂದು ?"

"ಕಾಲೇಜಿಗೆ ಹೋಗಿ ಎಂ. ಎ. ಮಾಡಬೇಕೆಂದಿದ್ದ."

"ಎಷ್ಟ್ಯೇನೋ ಕೋಣಾನೋ !" ಎಂದು ಆಕೆ ನಕ್ಕಳು.

ಪಾಟೀಲನಿಗೆ ನಗೆ ಬರಲಿಲ್ಲ. ಶಿವಮೂರ್ತಿಯ ಬಗೆಗೆ ಆತನಲ್ಲಿ ಅಪಾರವಾದ ಕರುಣೆಯುದ್ಭವಿಸಿದ್ದಿತು. ದೇಶಪಾಂಡೆಯಿಂದ ಶಿವಮೂರ್ತಿಗಾಗು

ತ್ತಿದ್ದ ಕಿರುಕುಳದ ವಿಷಯವೆಲ್ಲ ಆತನಿಗೆ ತಿಳಿದಿದ್ದಿತು. ಶಿವಮೂರ್ತಿ ಭಾವ ನಾವಶ ಯುವಕ. ವ್ಯವಹಾರೀ ಜಗತ್ತಿನ ರೀತಿನೀತಿಗಳು ಇನ್ನೂ ಆತನಿಗೆ ಪರಿಚಿತವಾಗಿರಲಿಲ್ಲ. ಇಂಥ ಪ್ರಪಂಚದಲ್ಲಿ ಬದುಕಬೇಕಾದರೆ ತುಂಬ ಜಾಣ್ಮೆ ಬೇಕೆಂಬುದರ ಅರಿವೂ ಆತನಿಗಿದ್ದಂತಿರಲಿಲ್ಲ. ಹುಡುಗ ಒಳಗೊಳಗೇ ಕೊರಗುತ್ತಿದ್ದ. ಆ ಕೊರಗನ್ನು ಹೇಗೆ ಹೋಗಲಾಡಿಸುವುದೆಂಬುದೇ ಒಂದು ಸಮಸ್ಯೆಯಾಯಿತು ಪಾಟೀಲನಿಗೆ.

ಮಾರನೆಯ ದಿನ ಸಾಯಂಕಾಲವೂ ಆತ ಶಿವಮೂರ್ತಿಯನ್ನು ಸಂಧಿಸಿದ. ಪಾಟೀಲನಿಂದ ತಪ್ಪಿಸಿಕೊಂಡು ತನ್ನ ಕೊಟಡಿಗೆ ಪಲಾಯನ ಹೇಳಿಸಬೇಕೆಂದು ಶಿವಮೂರ್ತಿ ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು.

"ನನ್ನನ್ನು ಕಂಡರೆ ಹೀಗೇಕೆ ದೆವ್ವವನ್ನು ಕಂಡಂತೆ ಮಾಡುತ್ತೀರಿ ಶಿವಮೂರ್ತಿ ?"

ಶಿವಮೂರ್ತಿ ಒಂದು ಕ್ಷಣ ಮೌನವಾಗಿದ್ದು, ಅನಂತರ ಮಾತನಾಡಿದ: "ನಿನ್ನೆ ಸಂಜೆಯ ಆ ವಿಷಯ ನನಗೆ ಸರಿಬರಲಿಲ್ಲ ಪಾಟೀಲ. ನೀವು ಅಂಥವರಿರಬಹುದೆಂದು ನಾ ತಿಳಿದಿರಲಿಲ್ಲ," ಎಂದ.

ಪಾಟೀಲ ಮೆಲ್ಲಗೆ ನಕ್ಕು ನುಡಿದ : "ನಿಮಗೆ ಸರಿಬರಲಿಲ್ಲ ? ಯಾಕೆ ಎಂಬುದನ್ನು ಸ್ವಲ್ಪ ಹೇಳುತ್ತೀರಾ ?"

"ಯಾಕೋ ಏನೋ, ಅಂತೂ ನನಗೆ ಅಂಥವೆಲ್ಲ ಸರಿಬರುವದಿಲ್ಲ.?

"ಅಂಥದೆಲ್ಲ ಅಂದರೆ ?"

"ನೀವು ಅಂಥವರ ಮನೆಗಳಿಗೆ ಹೋಗುವದೂ ಅಲ್ಲದೆ ನನ್ನಂಥವನನ್ನೂ ಎಳೆಯುವುದು."

"ಅಂಥವರ ಮನೆಗಳು ಅಂದರೆ ?"

"ಅವರೆಂಥವರು ಎನ್ನುವುದನ್ನು ನನ್ನ ಬಾಯಿಂದ ಏಕೆ ಹೊರಡಿಸ ಬಯಸುತ್ತೀರಿ ? ನಿಮಗೆ ಗೊತ್ತಿಲ್ಲವೆ ?"

"ನನಗೆ ಗೊತ್ತು. ಆದರೆ ನಿಮಗೆ ಮಾತ್ರ ಕೆಲವು ವಿಷಯಗಳ ಬಗೆ ಏನೇನೂ ಗೊತ್ತಿಲ್ಲ. ಎಂಟು ವರ್ಷದ ಹಸುಳೆಯ ಹಾಗಿದ್ದೀರಿ ನೀವು ಮೂರ್ತಿ. ಪ್ರಪಂಚದ ಅನುಭವ ಏನೇನೂ ಇಲ್ಲ ನಿಮಗೆ."

"ಇರಲಿಕ್ಕಿಲ್ಲ. ಇಂಥ ಅನುಭವ ಪಡೆಯುವ ಅಪೇಕ್ಷೆಯೂ ನನಗಿಲ್ಲ."

"ಆ ಮಾತು ಬೇರೆ. ನಿಮಗದು ಇಷ್ಟವಿಲ್ಲವಾದರೆ ಒಳ್ಳೆಯದೇ. ಆದರೆ ಈ ವಿಷಯವಾಗಿ ಏನೇನೊ ಹುಚ್ಚು ಕಲ್ಪನೆಗಳನ್ನು ತಲೆಯಲ್ಲಿ ತುಂಬಿ ಕೊಂಡಿರಬಾರದು, ಅಷ್ಟೆ."

"ಹುಚ್ಚು ಕಲ್ಪನೆಗಳು ?"

"ಹುಚ್ಚು ಕಲ್ಪನೆಗಳಲ್ಲದಿನ್ನೇನು ? ಬರ್ರಿ. ಗುಡ್ಡದ ತುದಿಗಾದರೂ ಹೋಗಿ ಬರೋಣ. ಮೇಲೆ ಕುಳಿತು ಮಾತನಾಡಿದರಾಯಿತು. ಹೂಂ. ಮೊದಲೇ ಕೇಳುತ್ತೇನಪ್ಪ. ಅಂಥ ಸ್ಥಳಕ್ಕಾದರೂ ಬರುತ್ತೀರೋ ಇಲ್ಲವೋ ನೀವು ?"

ಶಿವಮೂರ್ತಿಗೆ ಕೊಂಚ ನಾಚಿಕೆಯೆನ್ನಿಸದಿರಲಿಲ್ಲ. ಆತ ಮಾತ ನ್ನೇನೂ ಆಡದೆ ಪಾಟೀಲನೊಂದಿಗೆ ಹೆಜ್ಜೆ ಹಾಕತೊಡಗಿದ.

ಊರಿನ ಪಶ್ಚಿಮ ದಿಕ್ಕಿನಲ್ಲಿ ಒಂದು ಸಾವಿರ ಅಡಿಗಳಷ್ಟು ಎತ್ತರಕ್ಕೆ ತಲೆಯೆತ್ತಿ ನಿಂತಿರುವ ಆ ಗುಡ್ಡವನ್ನೇರಿ ತುದಿಯ ವರೆಗೆ ಹೋಗುವ ಜನ ತೀರ ವಿರಳ. ತೀರ ಕಡಿದಾದ ದಾರಿ. ಕಲ್ಲುಗಳ ಮೇಲೆ ಕಾಲು ಜಾರಿದರೆ ನೂರಾರು ಅಡಿಗಳ ವರೆಗೆ ಉರುಳುತ್ತ ಬೀಳುವ ಪ್ರಸಂಗ. ಅಂತೆಯೆ ಹೆಚ್ಚು ಜನರು ಆ ಗುಡ್ಡವನ್ನೇರುವ ಗೊಡವೆಗೆ ಹೋಗುವುದಿಲ್ಲ. ಗುಡ್ಡದ ತುದಿಯಲ್ಲಿ ಕಲ್ಲಿನಿಂದ ಕಟ್ಟದ ಹಳೆಯ ಕಾಲದ ಕೋಟೆಯ ಗೋಡೆಗಳು ಅಲ್ಲಲ್ಲಿ ಉರುಳಿಬಿದ್ದಿವೆ. ಒಂದು ಮೂಲೆಯಲ್ಲಿ ಮಹಮ್ಮದೀಯರ ಗುಡಿ ಯೊಂದೂ ಇದೆ. ಆ ದೇವರಿಗೆ ಆಗಾಗ ಕುರಿ ಕೋಳಿಗಳ ಬಲಿಯೂ ನಡೆ ಯುತ್ತದೆ. ಅಂಥ ದಿನಗಳಲ್ಲಿ ಗುಡ್ಡದ ಮೇಲೆ ಜಾತ್ರೆ ನಡೆಯುವುದುಂಟು. ಆಗ ಮಹಮ್ಮದೀಯರು ಅಲ್ಲಿ ಹಿಂಡು ಹಿಂಡಾಗಿ ಸೇರುತ್ತಾರೆ. ಅಂಥ ದಿನ ಗಳನ್ನು ಬಿಟ್ಟರೆ ಉಳಿದ ಕಾಲದಲ್ಲಿ ಆ ಗುಡ್ಡ ಜನಶೂನ್ಯವಾಗಿರುತ್ತದೆ.

ಪಾಟೀಲ ಮತ್ತು ಶಿವಮೂರ್ತಿ ಗುಡ್ಡವನ್ನೇರತೊಡಗಿದಾಗ ಸೂರ್ಯಾಸ್ತಸಮಯ ಸಮೀಪಿಸುತ್ತಲಿತ್ತು. ಸಂಜೆಯ ಸೂರ್ಯನ ಬಂಗಾರ ಬಣ್ಣದಲ್ಲಿ ಸುತ್ತುಮುತ್ತಲಿನ ಸೃಷ್ಟಿಯೆಲ್ಲ ಮಿಾಯುವಂತೆ ತೋರುತ್ತಿತ್ತು. ಕಾಲುದಾರಿಯಲ್ಲಿ ಸೂರೆಯಾಗಿದ್ದ ಬಿಳಿಯ ಕಲ್ಲುಗಳು ಆ ಬೆಳಕಿನಲ್ಲಿ ಚಿನ್ನದ ತುಂಡುಗಳಂತೆ ಹೊಳೆಯುತ್ತಲಿದ್ದುವು.

ಗುಡ್ಡವನ್ನೇರಿ ಮೇಲೆ ಬಂದು ವಿಶಾಲವಾದ ಬಂಡೆಗಲ್ಲೊಂದರ ಮೇಲೆ ನಿಂತುಕೊಂಡು ಸುತ್ತುಮುತ್ತಲೂ ದೃಷ್ಟಿ ಹೊರಳಿಸಿದರು.

ಗುಡ್ಡದ ಕೆಳಗಡೆ, ಉತ್ತರ ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಊರು ಶಾಂತವಾಗಿ ಬಿದ್ದುಕೊಂಡಿದೆ. ಮನೆಗಳ ಹೆಂಚುಗಳ ಮೇಲೆ ಸೂರ್ಯನ ಇಳಿಬಿಸಿಲು ಶೋಧಜ್ಯೋತಿಯ ಹಾಗೆ ಸುರಿದಿದೆ. ಅಡುಗೆಯ ಮನೆಗಳಿಂದ ಹೊರಡುವ ಹೊಗೆಯಲ್ಲಿ ಬಿಸಿಲಿನ ಕಿರಣಗಳು ಬೆರೆತಾಗ ಸಾವಿರಾರು ಸಿಗರೇಟುಗಳ ಧೂಮ್ರವಲಯ ಮೇಲಕ್ಕೇರಿದಂತೆ ತೋರುತ್ತದೆ. ಮೋಟಾರು ನಿಲ್ದಾಣದಲ್ಲಿ ನಿಂತ ಬಸ್ಸುಗಳು ಆ ಎತ್ತರದಿಂದ ಮಕ್ಕಳಾಟಿಗೆಗಳ ಹಾಗೆ ಕಾಣಿಸುತ್ತವೆ. ಊರ ಹೊರಗಿನ ಮುಹಮ್ಮದೀಯರ ನಮಾಜಿನ ವಿಶಾಲ ಸ್ಥಳವೂ ಮೇಲಿಂದ ಪುಟ್ಟ ಅಂಗಳವೊಂದರಂತೆ ಕಾಣುತ್ತದೆ.

ಪೂರ್ವ ದಿಸೆಯನ್ನುಳಿದು ಮಿಕ್ಕ ಮೂರು ದಿಸೆಗಳಲ್ಲೂ ಎತ್ತರವಾಗಿ ಬೆಳೆದು ನಿಂತ ಗುಡ್ಡಗಳ ಸಾಲು. ಎರಡು ಗುಡ್ಡಗಳ ಮಧ್ಯೆ ಕೊಳ್ಳವನ್ನು ರಚಿಸಿಕೊಂಡು, ಅತ್ತ ಹೊರಳಿ ಇತ್ತ ತಿರುಗಿ ಭೀಮಾಕಾರದ ಘಟಸರ್ಪದಂತೆ ಹರಿದು ಬರುವ ಹೊಳೆ. ಅದರ ಇಕ್ಕೆಲಗಳಲ್ಲೂ ಬೆಳೆದು ನಿಂತಿರುವ ತೋಟಪಟ್ಟಿಗಳು. ಸೂರ್ಯನ ಕಿರಣಗಳಲ್ಲಿ ನಸು ಹಳದಿಯಾಗಿ ಕಾಣಿಸುವ ಹೊಲಗಳ ಹಸುರು. ನಿಸರ್ಗ ನಿರ್ಮಿತ ನಕ್ಷೆಯಂತೆ ಕಾಣಿಸುವ ಹೊಲಗಳ ಪಟ್ಟಿ.

ರಭಸದಿಂದ ಗಾಳಿ ಬೀಸಿ ಬರುತ್ತಿತ್ತು. ಸಾಯಂಕಾಲದ ತಂಪು ಗಾಳಿ. ಗುಡ್ಡಗಳ ಮೇಲೂ ಹೊಳೆಯ ಮೇಲೂ ಹಾಯ್ದು ಬರುವ ಹಿತಕರವಾದ ಗಾಳಿ. ಕೊಂಚ ಹೊತ್ತು ಆ ಗಾಳಿಗೆ ಮೈಯೊಡ್ಡಿ ಗೆಳೆಯರಿಬ್ಬರೂ ಹಾಗೆಯೆ ನಿಂತುಕೊಂಡಿದ್ದರು. ಗುಡ್ಡ ಹತ್ತಿ ಬಂದುದರಿಂದ ಉಂಟಾದ ದಣಿವನ್ನೆಲ್ಲ ಆ ತಣ್ಣನೆಯ ಗಾಳಿ ತನ್ನೊಡನೆ ಸೆಳೆದುಕೊಂಡು ಹೋದಂತಾಯಿತು.

"ಕುಳಿತುಕೊಳ್ಳಿ ಪಾಟೀಲ. ಎಂಥ ಸೊಗಸಾದ ಗಾಳಿ. ಎಂಥ ಸುಂದರ ನೋಟ!" ಎಂದ ಶಿವಮೂರ್ತಿ.

ಬಂಡೆಗಲ್ಲಿನ ಮೇಲೆ ಇಬ್ಬರೂ ಕುಳಿತುಕೊಂಡರು. ಒಂದೆರಡು ಕ್ಷಣ ಯಾರೂ ಮಾತನಾಡಲಿಲ್ಲ. ಜೇಬಿನಿಂದ ಸಿಗರೇಟು ಪೆಟ್ಟಿಗೆಯನ್ನು ಹೊರ ತೆಗೆದು ಪಾಟೀಲ ತಾನೊಂದು ಸಿಗರೇಟು ಹೊತ್ತಿಸಿ ಶಿವಮೂರ್ತಿಗೊಂದನ್ನು

ನೀಡುತ್ತ—"ನಾವು ಊರಲ್ಲಿ ಓಡಾಡುತ್ತಿದ್ದಾಗ ದೊಡ್ಡ ದೊಡ್ಡವಾಗಿ ಕಾಣು ತ್ತಿದ್ದ ಕಟ್ಟಡಗಳು ಈ ಎತ್ತರದಿಂದ ಎಷ್ಟು ಕ್ಷುಲ್ಲಕವಾಗಿ ಕಾಣುತ್ತವೆ ನೋಡಿ ದಿರಾ ?" ಎಂದ.

"ಹೌದು. ಎತ್ತರದಿಂದ ಎಲ್ಲವೂ ಹಾಗೇ. ಸೊಕ್ಕಿನಿಂದ ನೆಗೆಯುತ್ತ ಹೋಗುವ ಹೊಳೆಯೂ ಸಹ ಎಷ್ಟು ಅಲ್ಪವಾಗಿ ಕಾಣುತ್ತದೆ !"

"ಹಾಗೇ ಮನಸ್ಸಿನ ಎತ್ತರದಿಂದ ನೋಡಿದಾಗ ಜೀವನದ ಸಮಸ್ಯೆ ಗಳೂ ಅಲ್ಪವಾಗಿ ಕಾಣುತ್ತವೆ ಮೂರ್ತಿ."

ಶಿವಮೂರ್ತಿ ಮೌನವಾಗಿ ಸಿಗರೇಟು ಸೇದುತ್ತಿದ್ದ. ಪಾಟೀಲ ಮುಂದುವರಿಸಿದ.

"ನಾನು ಸೂಳೆಯರ ಮನೆಗೆ ಹೋಗುವದನ್ನು ಕಂಡು ನೀವು ಮೂಗು ಮುರಿದಿರಿ ಆಗಲೆ. ಅಂಥದೆಲ್ಲ ನಮಗೆ ಸರಿಬರುವದಿಲ್ಲವೆಂದು ಹೇಳಿದಿರಿ. ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಿದರೆ ಇದರಲ್ಲಿ ನಿಮಗೆ ಅಂಥ ದೋಷ ವೇನೂ ಕಾಣಲಾರದು. ಬದುಕಿನಲ್ಲಿ ಎಲ್ಲ ವಿಷಯಗಳ ಹಾಗೆ ಇದೂ ತೀರ ಸಾಹಜಿಕ ಎಂದು ಅನ್ನಿಸಬಹುದು."

"ಸಾಹಜಿಕ ?"

"ಹೌದು. ಸಾಹಜಿಕ. ಯಾವುದನ್ನು ನಾವು ತುಚ್ಛ ಎಂದು ತಿಳಿದಿ ರುವೆವೊ ಅದು ನಿಜಕ್ಕೂ ತುಚ್ಛವಾಗಿರುವದಿಲ್ಲ. ಈ ವಿಶಾಲವಾದ ಪ್ರಪಂಚ ದಲ್ಲಿ ಯಾವುದೂ ತುಚ್ಛವಲ್ಲ. ಸೂಳೆಗಾರಿಕೆಯೂ ಒಂದು ವ್ಯವಸಾಯ. ಬದುಕಿಗಾಗಿ ಮನುಷ್ಯಪ್ರಾಣಿ ಕೈಕೊಂಡಿರುವ ಅನೇಕ ವೃತ್ತಿಗಳಲ್ಲಿ ಅದೂ ಒಂದು. ಅನಾದಿಕಾಲದಿಂದಲೂ ಆ ವೃತ್ತಿ ನಡೆದು ಬಂದಿದೆ. ಹೊಟ್ಟೆಯ ಹಸಿವೆಗಾಗಿ ಹೆಂಗಸರು ಸೂಳೆಯರಾಗುವ ಹಾಗೆ ಮನಸ್ಸಿನ ಹಸಿವೆಗಾಗಿ ಗಂಡಸರು ಸೂಳೆಯರಿಗೆ ಮೊರೆಹೋಗುತ್ತಾರೆ. ಅದೂ ಒಂದು ಬಗೆಯ ಹಸಿವು. ಇದೂ ಒಂದು ಬಗೆಯ ಹಸಿವು. ಒಂದರಿಂದ ಇನ್ನೊಂದು ತೃಪ್ತಿ ಹೊಂದುತ್ತದೆ."

"ಇದೆಂಥ ತೃಪ್ತಿಯೊ. ನನಗಂತೂ ಅರ್ಥವಾಗದು."

"ಸ್ವಲ್ಪ ವಿಚಾರ ಮಾಡಿದರೆ ಅರ್ಥವಾಗುತ್ತದೆ. ಈಗ ನೋಡಿರಿ, ನನಗೆ ವಯಸ್ಸೆಷ್ಟು ಎಂಬುದು ನಿಮಗೆ ಗೊತ್ತೆ ?"

"ಇಪ್ಪತ್ತೆಂಟು ?"

"ಅಷ್ಟು ಚಿಕ್ಕವನಾಗಿ ಕಾಣುವೆನೇ ನಾನು ? ನಿಜಕ್ಕೂ ನನಗೆ ಮೂವತ್ತೈದು ವರ್ಷ ವಯಸ್ಸು."

"ಮೂವತ್ತೈದು ಅಂದರೆ ಬಹಳವಾಯಿತು. ನಿಮಗಿಷ್ಟು ವಯಸ್ಸಾಗಿರಬಹುದೆಂದು ನಾನು ತಿಳಿದಿರಲಿಲ್ಲ."

"ನನ್ನ ವಯಸ್ಸು ಮಾತ್ರವಲ್ಲ–ನನ್ನ ಹೃದಯವೂ ನಿಮಗೆ ತಿಳಿದಿಲ್ಲ. ನಾನು ಸೂಳೆಯರ ಸಹವಾಸ ಮಾಡುವುದನ್ನು ಕಂಡಂದಿನಿಂದ ನಾನೊಬ್ಬ ಪೋಲಿ,ಲಫಂಗ,ವ್ಯಭಿಚಾರಿ ಎಂದು ನೀವು ಯೋಚಿಸುತ್ತಿರಬಹುದು, ಅಲ್ಲವೆ? ಹಾಗೆ ಯೋಚಿಸುವುದೂ ಸ್ವಾಭಾವಿಕವಾಗಿಯೇ ಇದೆ. ಈ ಊರಿನಲ್ಲಿ ಎಷ್ಟೋ ಜನಕ್ಕೆ ನಾನು ವ್ಯಭಿಚಾರಿ ಎನ್ನುವುದು ಗೊತ್ತಿದೆ. ನನ್ನ ಹಿಂದೆ ಅವರು ನನ್ನನ್ನು ಹಾಗೆ ಕರೆಯುವುದೂ ಉಂಟು. ಆ ಬಗ್ಗೆ ನನಗೇನೂ ಸಿಟ್ಟಿಲ್ಲ. ಜನ ಸತ್ಯವನ್ನೇ ಆಡುವರೆಂದ ಮೇಲೆ ಸಿಟ್ಟಾಗಲು ಕಾರಣವಾದರೂ ಏನು? ನಾನು ವ್ಯಭಿಚಾರ ಮಾಡುತ್ತೇನೆಂಬುದೇನೊ ನಿಜ. ಇದು ಒಳ್ಳೆಯದಲ್ಲ, ಶಿಷ್ಟಸಮಾಜದ ರೀತಿನೀತಿಗಳಿಗೆ ಇದು ಸರಿಹೋಗುವುದಿಲ್ಲವೆಂಬುದೂ ನನಗೆ ಗೊತ್ತಿದೆ. ಎಲ್ಲ ಗೊತ್ತಿದ್ದರೂ ನಾನೇಕೆ ಹೀಗಾದೆ ಎಂಬುದು ಗೊತ್ತೇ ನಿಮಗೆ? ನನ್ನನ್ನು ವ್ಯಭಿಚಾರಿಯೆಂದು ಕರೆಯುವ ಎಷ್ಟು ಜನರಿಗೆ ಗೊತ್ತಿದೆ ಅದರ ಕಾರಣ ? ನಿಮಗೆ ನಿಜ ಹೇಳುತ್ತೇನೆ ಶಿವಮೂರ್ತಿ, ಒಂದು ಕಾಲಕ್ಕೆ ನಾನೂ ನಿಮ್ಮ ಹಾಗೇ ಇದ್ದೆ. ಸೂಳೆಯರೆಂದರೆ ನನ್ನ ಮೈಗೆ ನಡುಕ ಬರುತ್ತಿತ್ತು. ಅವರ ಓಣಿಯಲ್ಲಿ ಕಾಲಿಡಲಿಕ್ಕೂ ಮನಸ್ಸು ಹೇಸುತ್ತಿತ್ತು. ಬೀದಿಯಲ್ಲಿ ನಾನು ನಡೆದು ಬರುವಾಗ ಎದುರಿನಿಂದ ಸೂಳೆಯರಾರಾದರೂ ಬರುವುದು ಕಾಣಿಸಿದಾಗ ಹೊಲೆಯರನ್ನು ಕಂಡು ದೂರ ಸಿಡಿಯುವ ಹಾರುವರಂತೆ ದೂರ ಸಿಡಿದು ಹೋಗುತ್ತಿದ್ದೆ. ಅದನ್ನು ನೆನೆದರೇ ಈಗ ನಗು ಬರುತ್ತದೆ," ಎಂದು ನುಡಿದು ಪಾಟೇಲ ನಕ್ಕ. ಸಿಗರೇಟಿನ ಬೂದಿಯನ್ನು ಕೊಡವಿ ಒಂದು ಸಲ ಹೊಗೆಯನ್ನೆಳೆದು ಮತ್ತೆ ಹೇಳತೊಡಗಿದ.

"ನನಗೀಗ ಮೂವತ್ತೈದು ವರ್ಷ ವಯಸ್ಸು ಎಂದು ಹೇಳಿದೆನಲ್ಲ–ಇಪ್ಪತ್ತು ವರ್ಷಕ್ಕಾಗಲೆ ನಾನು ಮ್ಯಾಟ್ರಿಕ್ ಮುಗಿಸಿದ್ದೆ. ಕಾಲೇಜಿಗೆ ಹೋಗುವ ವಿಚಾರವೂ ಇತ್ತು. ಆದರೆ ನಮ್ಮ ತಂದೆ ತಾಯಿ ತೀರ ಬಡವರು.

ಅಲ್ಲಿ ಇಲ್ಲಿ ಸಾಲ ಮಾಡಿ ಹೇಗೋ ನನ್ನನ್ನು ಮ್ಯಾಟ್ರಿಕ್ ದಾಟಿಸಿದ್ದರು. ನಮ್ಮದೆನ್ನುವ ಒಂದು ಹಳೆಯ ಮನೆ ಸಾಲದಲ್ಲಿ ಸಿಲುಕಿಕೊಂಡಿತ್ತು. ಸ್ವಂತ ಹೊಲವಿರಲಿಲ್ಲ. ಬೇರೆಯವರ ಹೊಲಗಳಲ್ಲಿ ಕೂಲಿ ಕುಂಬಳಿ ಮಾಡಿ ನನ್ನ ತಂದೆ ತಾಯಿ ಜೀವಿಸುತ್ತಿದ್ದರು. ಅಂಥವರಲ್ಲಿಯೆ ನನಗೆ ಮ್ಯಾಟ್ರಿಕ್ ವರೆಗೆ ಕಲಿಸಿದ್ದು ಆಶ್ಚರ್ಯವಲ್ಲವೆ ? ಮುಂದೆ ಕಾಲೇಜಿಗೆ ಹೋಗುವುದು ಸಾಧ್ಯವೇ ಇರಲಿಲ್ಲ. ಒಡನೆಯೆ ನಾನು ಎಲ್ಲಿಯಾದರೂ ನೌಕರಿ ಹಿಡಿಯ ಬೇಕಾಗಿತ್ತು. ಆದರೆ ಹದಿನೈದು ವರ್ಷಗಳಿಗೆ ಹಿಂದೆ ಎಂ. ಎ. ದವರಿಗೂ ನೌಕರಿ ಸಿಗುವುದು ಕಷ್ಟವಾಗಿದ್ದಿತಲ್ಲ. ಇನ್ನು ಮ್ಯಾಟ್ರಿಕ್‌ದವರನ್ನು ಯಾರು ಕೇಳಬೇಕು ? ಒಂದು ವರ್ಷ ಅಲೆದ ತರುವಾಯ ಪ್ರಾಥಮಿಕ ಸಾಲೆಯೊಂದ ರಲ್ಲಿ ಮಾಸ್ತರ ಕೆಲಸ ಸಿಕ್ಕಿತು—ಹದಿನೈದು ರೂಪಾಯಿ ಸಂಬಳದ ಮೇಲೆ....

"ಎಂಥ ಕೆಲಸವೇ ಆಗಲಿ, ಅಂತೂ ಒಂದು ಕೆಲಸಿ ಸಕ್ಕಿತಲ್ಲ. ನನ್ನ ತಂಪೆ ತಾಯಿಗಳಿಗೆ ಅದೇ ಒಂದು ಹಿಗ್ಗ. ಆ ಹಿಗ್ಗಿನ ಭರದಲ್ಲಿ ನನಗೆ ಹೆಣ್ಣು ನೋಡಲು ಮೊದಲು ಮಾಡಿದರು. ಒಬ್ಬನೇ ಮಗ—ಮದುವೆ ಮಾಡಿ ಸೊಸೆಯನ್ನು ಕಂಡು ಸಂತೋಷಪಡಬೇಕೆಂದು ಅವರ ಆಸೆ. ನನಗೂ ಮದುವೆಯ ವಿಚಾರವಿರದಿರಲಿಲ್ಲ. ಪುಟ್ಟ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಬರುವ ಅಲ್ಪ ಸಂಬಳದಲ್ಲೇ ತಂದೆ ತಾಯಿ ಹಾಗು ಹೆಂಡತಿ ಯೊಂದಿಗೆ ಸುಖವಾಗಿ ಬದುಕು ಸಾಗಿಸೋಣವೆಂದು ಯೋಚಿಸುತ್ತಿದ್ದೆ. ನಮ್ಮ ಊರಿನಲ್ಲೇ ಎರಡು ಮೂರು ಹೆಣ್ಣು ನೋಡಿದ್ದಾಯಿತು. ಒಬ್ಬ ಹುಡುಗಿಯನ್ನು ನೋಡಿ ನಾನು ಮರುಳಾದದ್ದೂ ಆಯಿತು. ಮದುವೆಯಾ ದರೆ ಆಕೆಯನ್ನೇ ಆಗುವುದೆಂದು ಹಟ ತೊಟ್ಟೆ. ನನ್ನ ತಂದೆತಾಯಿ ಮಾತು ಕತೆಗೆ ತೊಡಗಿದರು. ಹುಡುಗಿಯನ್ನು ಕೊಡಬೇಕಾದರೆ ಅವರು ಹಾಕಿದ ಕರಾರುಗಳನ್ನು ಕೇಳಿದಾಗ ನನ್ನ ಎದೆಯೊಡೆಯಿತು. ಬಂಗಾರದ ಒಡವೆ ಗಳು, ಮುನ್ನೂರು ರೂಪಾಯಿ ತೆರವು, ನಾಲ್ಕೈದು ಸೀರೆಗಳನ್ನು ಕೊಡ ಬೇಕು, ಮದುವೆಯ ಖರ್ಚನ್ನೂ ನಾವೇ ವಹಿಸಬೇಕು. ಏನಿಲ್ಲವೆಂದರೂ ಅದಕ್ಕೆಲ್ಲ ಏಳೆಂಟುನೂರು ರೂಪಾಯಿ ಬೇಕಾಗುತ್ತಿತ್ತು. ಬಡವರಾದ ನಾವು ಎಲ್ಲಿಂದ ತರುವುದು ಅಷ್ಟೊಂದು ಹಣ? ನನ್ನ ಹೃದಯಕ್ಕೆ ಬಲವಾದ ಆಘಾತವಾಯಿತು. ಆ ಹುಡುಗಿಯನ್ನೇ ನೆನೆಯುತ್ತ ಒಂದು ವರ್ಷ ನರಳಿದೆ.

ಮತ್ತೆ ಹಲವಾರು ಕಡೆ ಹೆಣ್ಣು ನೋಡಿದ್ದಾಯಿತು. ಹೊಲ ಮನೆ ಎಷ್ಟಿದೆ, ಬಂಗಾರ ಎಷ್ಟಿದೆ ಎಂದು ಕೇಳುವವರೇ ಎಲ್ಲರೂ. ಬರುಬರುತ್ತಾ ನನಗೆ ಮದುವೆ ಎಂದರೇನೇ ಹೇಸಿಕೆಯಾಗತೊಡಗಿತು. ಇವರು ಹೆಣ್ಣು ಕೊಡು ವುದು ಹೊಲ ಮನೆ ಬೆಳ್ಳಿ ಬಂಗಾರಗಳಿಗೋ, ಗಂಡಿಗೋ ? ಗಂಡಿನ ವಿಚಾ ರವೇ ಅಷ್ಟು ಮಹತ್ವದ್ದಿದ್ದಂತೆ ತೋರಲಿಲ್ಲ. ಗಂಡು ಹೇಗಿದ್ದರೇನು, ಆತನಿಗೆ ಹೊಲ ಮನೆ ಬೆಳ್ಳಿ ಬಂಗಾರ ಸಾಕಷ್ಟು ಇದ್ದರಾಯಿತು. ಈ ಹಣಪ್ರಪಂಚ ದಲ್ಲಿ ಮದುವೆಯೆಂದರೆ ಅದೂ ಒಂದು ಬಗೆಯ ಸೂಳೆಗಾರಿಕೆಯೆ ಎಂದು ನನಗೆನ್ನಿಸಿತು. ನಾಲ್ಕಾಣೆಯನ್ನೋ ಎಂಟಾಣೆಯನ್ನೋ ತೆಗೆದುಕೊಂಡು ಸೂಳೆ ತನ್ನ ದೇಹವನ್ನು ಅರ್ಪಿಸುತ್ತಾಳೆ-ಒಂದು ಹೊತ್ತಿಗೆ. ಬಂಗಾರ, ಹೊಲ ಮನೆ, ಸೀರೆಗಳನ್ನು ತೆಗೆದುಕೊಂಡು ಸಮಾಜ ವಧುವನ್ನು ಅರ್ಪಿ ಸುತ್ತದೆ-ಒಂದು ಬದುಕಿಗೆ. ಎರಡೂ ನಡೆಯುವುದು ಹಣದ ದೃಷ್ಟಿಯಿಂದಲೇ. ಹಾಗಾದರೆ ಸೂಳೆಗಾರಿಕೆಗೂ ಮದುವೆಗೂ ಏನು ಭೇದ ?-ಇಡೀ ಬದುಕಿಗಾಗಿ ಒಂದು ಹೆಣ್ಣನ್ನು ಕೊಂಡುಕೊಳ್ಳಲು ನನ್ನ ಹತ್ತಿರ ಬಂಗಾರವಿರಲಿಲ್ಲ, ಊರಲ್ಲಿ ಹೊಲವಿರಲಿಲ್ಲ, ಮನೆಯಿರಲಿಲ್ಲ. ಸರಿಯೆ. ಹೆಣ್ಣಿನ ಸಹವಾಸವಂತೂ ಅಗತ್ಯವಾಗಿತ್ತು. ಆ ಆವಶ್ಯಕತೆಯನ್ನು ಪೂರೈಯಿಸಿಕೊಳ್ಳುವುದಕ್ಕಾಗಿ ಸೂಳೆಯರ ಮನೆಗಳಿಗೆ ಹೋಗುವುದರಲ್ಲಿ ಏನೂ ತಪ್ಪಿಲ್ಲವೆಂದು ನನಗೆನ್ನಿ ಸಿತು.

"ನಾನು ಇಂಥ ಮನಃಸ್ಥಿಯಲ್ಲಿದ್ದಾಗ ಒಂದು ಘಟನೆ ನಡೆಯಿತು. ಮೊದಲು ಮೊದಲು ಸೂಳೆಯರನ್ನು ಕಂಡೊಡನೆ ಬೇಕೆಂತಲೇ ದೂರ ಹಾಯ್ದು ಹೋಗುವುದು ನನ್ನ ಪರಿಸ್ಥಿತಿಯಾಗಿದ್ದಿತೆಂದು ಆಗಲೇ ಹೇಳಿದೆ ನಲ್ಲ. ಬಹಳ ದಿನಗಳಿಂದ ಅಂಟಿಕೊಂಡ ಕೆಟ್ಟ ಚಟಗಳು ಒಮ್ಮೆಲೆ ತೊಲ ಗುವುದಿಲ್ಲ. ಒಂದು ದಿನ ಸಾಯಂಕಾಲ ನಾನು ಬೀದಿಯಲ್ಲಿ ಹಾಯ್ದು ಬರು ತ್ತಿದ್ದಾಗ ಎದುರಿನಿಂದ ಎಳೆವಯಸ್ಸಿನ ಸೂಳೆಯೊಬ್ಬಳು ಬಳುಕುತ್ತ ಬಳು ಕುತ್ತ ಬರುತ್ತಿದ್ದಳು. ಆಕೆ ಹತ್ತಿರ ಬಂದಾಗ ನಾನು ತಟ್ಟನೆ ದೂರ ಸರಿದು ಭರಭರನೆ ಹೊರಟು ಹೋದೆ. ಪಾಪ, ಆಕೆಗೆ ಬಲು ಅಪಮಾನವಾದಂತೆ ತೋರಿತು. ಒಯ್ಯಾರದಿಂದ ಬರುತ್ತಿದ್ದ ಆಕೆ ನಡಿಗೆಯನ್ನು ಮುಂದಗೊಳಿಸಿ ತಲೆ ತಗ್ಗಿಸಿ ಹೊರಟು ಹೋದಳು. ಆಕೆಯ ಮುಖದ ಮೇಲೆ ಮೂಡಿದ್ದ

ದೈನ್ಯತೆಯನ್ನೂ ಕಳವಳವನ್ನೂ ಕಂಡಾಗ ನನ್ನ ಹೃದಯದಲ್ಲಿ ತಳಮಳ ವಾದಂತಾಯಿತು. ಪಾಪ, ಇನ್ನೂ ಎಳೆಯ ವಯಸ್ಸು. ಏನು ಕಷ್ಟವೋ, ಎಂಥ ತೊಂದರೆಯೊ ಈ ವೃತ್ತಿಗಿಳಿಯಬೇಕಾಗಿ ಬಂದಿದ್ದೀತು. ಮೊದಲೇ ನೊಂದುಕೊಂಡಿದ್ದ ಆ ಜೀವಕ್ಕೆ ನಾನು ಇನ್ನೂ ನೋವನ್ನುಂಟುಮಾಡ ಬಾರದಾಗಿತ್ತು ಎನ್ನಿಸಿತು. ನನ್ನ ಕೃತಿಯ ಬಗ್ಗೆ ನನಗೇ ಹೇಸಿಕೆಯಾಯಿತು. ಕೊಂಚ ದೂರ ಹೋಗಿ ನಿಂತುಕೊಂಡು ಹೊರಳಿ, ಆಕೆ ಹೋದತ್ತ ದೃಷ್ಟಿ ತಿರುಗಿಸಿದೆ. ಆಕೆ ತಲೆಯನ್ನು ಬಾಗಿಸಿಕೊಂಡು ಹಾಗೇ ಮೆಲ್ಲಮೆಲ್ಲನೆ ಹೊರಟು ನಡೆದಿದ್ದಳು. ಅಲ್ಲಿ ನಿಂತು ಆಕೆಯ ಆಕೃತಿಯನ್ನು ನಿರೀಕ್ಷಿಸಿದ ಹಾಗೆಲ್ಲ ನನ್ನ ಹೃದಯದಲ್ಲಿ ವಿಲಕ್ಷಣ ಭಾವವೊಂದು ಚಿಮ್ಮಿ ಬಂದಂತಾ ಯಿತು. ಆಕೆಯನ್ನು ಹಿಂಬಾಲಿಸಿಕೊಂಡು ಹೋಗಬೇಕು, ಆಕೆಯನ್ನು ಮಾತನಾಡಿಸಬೇಕು, ನನ್ನ ಕೃತಿಗಾಗಿ ಕ್ಷಮೆ ಕೇಳಬೇಕು ಎಂಬ ವಿಚಾರ ಮೂಡಿತು. ನನಗರಿಯದಂತೆಯೆ ನನ್ನ ಕಾಲುಗಳು ಮುಂದುವರಿದುವು. ಆಕೆಯ ಹಿಂದೆ ಹಿಂದೆ ಹೊರಟೆ. ನಾಲ್ಕಾರು ಗಲ್ಲಿಗಳನ್ನು ದಾಟಿ ಆ ಗಲ್ಲಿಗೆ ಆಕೆ ಅಡಿಯಿರಿಸಿದಳು. ಆ ಗಲ್ಲಿ....ವೇಶ್ಯೆಯರ ಗಲ್ಲಿ—ನನ್ನ ಎದೆ ಡವಡವನೆ ಬಡಿದುಕೊಳ್ಳುತ್ತಿತ್ತು. ಈ ಮೊದಲೆಂದೂ ನಾನು ಆ ಗಲ್ಲಿಗೆ ಅಡಿಯಿರಿಸಿರ ಲಿಲ್ಲ. ಅಲ್ಲಿನ ಮನೆಗಳಲ್ಲಿ ಪ್ರವೇಶಿಸಿರಲಿಲ್ಲ. ಕಿರುಮನೆಯೊಂದರಲ್ಲಿ ಆಕೆ ಹೊಕ್ಕಳು. ನಾನೂ ಹಿಂಬಾಲಿಸಿದೆ.

"ಅಷ್ಟು ಹೊತ್ತಿಗಾಗಲೆ ಕತ್ತಲೆಯಾಗುತ್ತ ಬಂದಿತ್ತು. ಆಕೆ ದೀಪ ವನ್ನಂಟಿಸಿ ಅದನ್ನು ಮೊಳೆಗೆ ತಗಲು ಹಾಕಿ ಅದರ ಬೆಳಕಿನಲ್ಲಿ ನನ್ನ ಮುಖ ವನ್ನು ಕಂಡು ಚಕಿತಳಾದಳು. ನನ್ನ ಮುಖದ ಮೇಲೆ ಬೆವರು ಸುರಿಯು ತ್ತಿತ್ತು. ಬಾಯಿಯಿಂದ ಮಾತು ಹೊರಡುವಂತಿರಲಿಲ್ಲ. ಹುಚ್ಚನಂತೆ ಆಕೆ ಯನ್ನು ದಿಟ್ಟಿಸುತ್ತ ಹಾಗೇ ನಿಂತುಕೊಂಡಿದ್ದೆ. ನನ್ನ ಸ್ಥಿತಿಯನ್ನಾಕೆ ಗುರು ತಿಸಿಕೊಂಡಳೋ ಏನೊ. ತುಟಿಗಳಲ್ಲಿ ನಗೆಯನ್ನು ತುಳುಕಿಸುತ್ತ 'ಕೂಡಿ ರಲ್ಲಾ ?' ಎಂದಳು. ಕೆಳಗಡೆ ಚಾಪೆಯೊಂದನ್ನು ಬಿಡಿಸಿ ಅದರ ತುದಿಗೆ ಗೋಡೆಗುಂಟ ಗಾದಿಯನ್ನು ಸುರುಳಿನಾಡಿ ಇರಿಸಲಾಗಿದ್ದಿತು. ಆ ಸುರುಳಿ ಗೊರಗಿ ನಾನು ಕುಳಿತುಕೊಂಡೆ.

"ದೀಪದ ಬೆಳಕಿಗೆದುರಾಗಿ ಆಕೆ ಕುಳಿತುಕೊಂಡಳು. ಹತ್ತಿರವೇ

ಬಿದ್ದಿದ್ದ ಬಿದಿರಿನ ಬೀಸಣಿಗೆಯಿಂದ ನನಗೆ ಗಾಳಿ ಹಾಕುತ್ತ ನನ್ನ ಮುಖ ವನ್ನೇ ದಿಟ್ಟಿಸತೊಡಗಿದಳು. ಆಕೆಯೂ ನನ್ನ ವಯಸ್ಸಿನಾಕೆಯೆ ಇದ್ದಿರ ಬಹುದು. ಸಾದುಗಪ್ಪು ಬಣ್ಣದವಳಾದರೂ ಕಣ್ಣು ಮೂಗಿನಿಂದ ಚೆಲು ವಾಗಿಯೆ ಇದ್ದಳು. ದೇಹ ಕೃಶವಾದುದು. ಆಕೆಯನ್ನು ಕಂಡೊಡನೆ ಕೋಮಲವಾದ ಬಳ್ಳಿಯೊಂದನ್ನು ಕಂಡಂತಾಗುತಿತ್ತು.

" 'ಯಾವೂರವರು ?' ಎಂದಾಕೆ ಪ್ರಶ್ನಿಸಿದಳು. ಅವಳ ಶರೀರದಂತೆ ಧ್ವನಿಯೂ ತಂಬ ಕೋಮಲವಾಗಿತ್ತು.

" 'ಊರು....ಊರು....ಇದೇ....' ಎಂದು ನಾನು ತಡವರಿಸುತ್ತಾ ಉತ್ತರವಿತ್ತೆ.

"ನನ್ನಂಥ ಅನೇಕ ತರುಣರನ್ನು ಆಕೆ ಕಂಡವಳಲ್ಲವೆ ? ಸೂಳೆಯರ ಮನೆಗಳಲ್ಲಿ ಕಾಲಿಡುವ ಹೊಸಬರ ಮನಃಸ್ಥಿತಿ ಆಕೆಗೇನೂ ಅಪರಿಚಿತವಾದು ದಾಗಿರಲಿಲ್ಲ. ನನ್ನ ಸಂಕೋಚವನ್ನೂ, ಅಧೈರ್ಯವನ್ನೂ ಹೋಗಲಾಡಿ ಸಲು ಉಪಾಯವಾಗಿ ಯತ್ನಿಸಿದಳು. ಒಲೆ ಹೊತ್ತಿಸಿ ಚಹ ಮಾಡಿ ತಂದು ಕೊಟ್ಟಳು. ಅಷ್ಟು ಮಾತ್ರವಲ್ಲ, ಸಾಸರನ್ನು ನನ್ನ ತುಟಿಗಳಿಗೆ ಹಿಡಿದು ತಾನೇ ಕುಡಿಸಿದಳು. ಅವಳು ನನ್ನ ಸಮೀಪಕ್ಕೆ ಬಂದಂತೆಲ್ಲ ನನ್ನ ಸಂಕೋಚ ಸ್ವಲ್ಪ ಸ್ವಲ್ಪವಾಗಿ ಮಾಯವಾಯಿತು. ಚಹ ಕುಡಿದು ಮುಗಿಸಿದಾಗ ಎದೆ ಬಡಿದುಕೊಳ್ಳುವುದೂ ನಿಂತು ಹೋಗಿತ್ತು. ಬಾಯಿಂದ ಮಾತೂ ಹೊರಡ ಬಹುದೆಂದು ಅನ್ನಿಸಿತು.

" 'ಹಾದಿಯಲ್ಲಿ ನಿಮ್ಮನ್ನು ಕಂಡು ಹಾಗೆ ಮಾಡಬಾರದಾಗಿತ್ತು ನಾನು. ನನ್ನಿಂದ ತಪ್ಪಾಯಿತು,' ಎಂದು ನುಡಿದೆ.

"ಆಕೆ ನನ್ನ ಭುಜಕ್ಕೊರಗಿ ಕುಳಿತುಕೊಂಡು ನಗುತ್ತಾ ಹೇಳಿದಳು : 'ಅದೇನು ದೊಡ್ಡ ತಪ್ಪು ಬಿಡಿರಿ. ನಮಗೆ ಅಂಥದನ್ನೆಲ್ಲ ಸಹಿಸಿ ರೂಢಿ ಯಿದೆ.'

" 'ರೂಢಿಯಿದ್ದರೂ ಸಹ ದುಃಖವಾಗದಿರುತ್ತದಯೆ ? ಆಗ ನೀವೆಷ್ಟು ನೊಂದುಕೊಂಡಿರೋ ?'

" 'ಏನೋ ಸ್ವಲ್ಪ ದುಃಖವಾಗುತ್ತದಷ್ಟೆ. ಆದರೆ....ಅದನ್ನೆಲ್ಲಾ ನಾವು ಮನಸಿಗೆ ಹಚ್ಚಿಕೊಂಡರಾದೀತೇ ? ನಮ್ಮ ಬದುಕು ನಡೀಬೇಕಲ್ಲ ?'

" 'ಆಗ ನೀವು ಮುಖ ಬಾಡಿಸಿ ತಲೆ ತಗ್ಗಿಸಿದ್ದನ್ನು ನೋಡುತ್ತಲೂ ನನಗೆ ಬಲು ಕಳವಳವಾಯಿತು. ಇಂದು ನನಗೆ ಊಟವೂ ರುಚಿಸಲಿಕ್ಕಿಲ್ಲ, ನಿದ್ದೆಯೂ ಬರಲಿಕ್ಕಿಲ್ಲ ಅನ್ನಿಸಿತು. ನಿಮ್ಮನ್ನು ಕಂಡು ತಪ್ಪಾಯಿತೆಂದು ಹೇಳಿದ ಹೊರತೂ ಸಮಾಧಾನವಾಗದೆಂದು ತೋರಿತು. ಅಂತೆಯೇ ನಿಮ್ಮ ಹಿಂದೆ ಹಿಂದೆ ಬಂದೆ. ಈ ವ್ಯವಹಾರವೆಲ್ಲಾ ನನಗೆ ಹೊಸದು. ಏನು ಕೊಡಬೇಕೋ ಎಷ್ಟುಕೊಡಬೇಕೋ ಯಾವುದೂ ನನಗೆ ತಿಳಿಯದು. ನಿಜ ಹೇಳಬೇಕಾದರೆ ನಾನು ಅದಕ್ಕಾಗಿ ಬರಲೂ ಇಲ್ಲ. ನಿಮ್ಮನ್ನು ಕಂಡು ಒಂದು ಮಾತು ಆಡಿ ಹೊರಟುಬಿಡಬೇಕೆಂದು ಬಂದೆ ಅಷ್ಟೆ' ಎಂದೆ.

"ನನ್ನ ಮಾತು ಕೇಳಿ ಆಕೆ ಮನಸೋಕ್ತವಾಗಿ ನಕ್ಕಳು. 'ಬರೀ ಅಷ್ಟಕ್ಕಾಗಿಯೆ ಬಂದಿದ್ದಿರಾ ? ಬರೀ ಮಾತು ಮಾತ್ರ ಸಾಕೇ ? ಇನ್ನೇನೂ ಬೇಡವೆ ? ನಾನಂತೂ ನಿಮ್ಮನ್ನು ಹೀಗೇ ಕಳಿಸುವದಿಲ್ಲ. ಈ ರಾತ್ರಿಯೆಲ್ಲ ನಿಮ್ಮನ್ನು ಬಿಡುವದಿಲ್ಲ,' ಎಂದಳು.

"ತಾರುಣ್ಯದಲ್ಲಿ ಹೆಣ್ಣಿನ ಆಸೆ ತೀರ ಸ್ವಾಭಾವಿಕವಲ್ಲವೆ ? ಆಕೆ ಅಷ್ಟು ಹತ್ತಿರದಲ್ಲಿ ಕುಳಿತು ನಗುನಗುತ್ತ ಮಾತನಾಡುತ್ತಿದ್ದಾಗ ಆಕೆಯನ್ನು ಹಾಗೆಯೆ ಬಿಟ್ಟು ಹೋಗುವುದು ಸಾಧ್ಯವಾದೀತೇ ?

"ತನ್ನ ಎರಡೂ ಕೈಗಳಲ್ಲಿ ನನ್ನ ಮುಖ ಹಿಡಿದುಕೊಂಡು ನನ್ನ ದೃಷ್ಟಿಗೆ ದೃಷ್ಟಿ ಸೇರಿಸುತ್ತ ಆಕೆ ಕೇಳಿದಳು : 'ನಿಮಗೆ ಮದುವೆಯಾಗಿದೆಯೆ ?'

" 'ಇಲ್ಲ' ಎಂದೆ ನಾನು.

" 'ಹಾಗಾದರೆ ನನ್ನನ್ನೇ ಮದುವೆಯಾಗುತ್ತೀರಾ ?' ಎಂದಾಕೆ ಕೇಳಿದಳು. 'ಹೆದರಬೇಡಿರಿ. ಮದುವೆ ಅಂದರೆ ಇದೊಂದು ರಾತ್ರಿಯ ಮಟ್ಟಿಗೆ. ಇಡೀ ಆಯುಷ್ಯದುದ್ದವೂ ನಾನೇನೂ ನಿಮಗೆ ಗಂಟು ಬೀಳುವದಿಲ್ಲ. ಹೇಳಿರಿ. ಒಪ್ಪಿಗೆಯೆ?'

" 'ಅದೆಲ್ಲ ಸರಿ. ಆದರೆ ನಾನೇನು ಕೊಡಬೇಕು ನಿನಗೆ? ನಾನು ಶ್ರೀಮಂತನಲ್ಲ. ಬಡವ. ಕನ್ನಡಸಾಲೆಯ ಮಾಸ್ತರ್.' ಎಂದೆ.

"ಆಕೆ ನನ್ನನ್ನು ಬರಸೆಳೆದು ತಬ್ಬಿಕೊಂಡು ಮೆಲ್ಲಗಿನ ದನಿಯಲ್ಲಿ ನುಡಿದಳು : 'ನೀವೇನೂ ಕೊಡದಿದ್ದರೂ ಚಿಂತೆಯಿಲ್ಲ. ಯಾಕೋ ಏನೋ ನಿಮ್ಮನ್ನು ಕಂಡಾಗಿನಿಂದ ನನಗೆ ಸಮಾಧಾನವೇ ಇಲ್ಲ. ಆಗ ರಸ್ತೆಯೊಳಗೆ

ಹಾಗೆ ಮುಖ ತಿರುವಿದಿರಿ. ಆಗಲೇ ನಿಮ್ಮನ್ನು ಒಂದಿಲ್ಲೊಂದು ದಿನ ಗೆದ್ದು ಕೊಂಡು ಈ ಮನೆಗೆ ಕರೆತರುವೆನೆಂದು ನಾನು ಹಟ ತೊಡುತ್ತಿದ್ದೆ. ಇಷ್ಟು ಬೇಗ ನನ್ನ ಹಟ ಪೂರೈಸಿತಲ್ಲಾ—ಅದೇ ಸಮಾಧಾನ ನನಗೆ....'

"ಅಂದಿನಿಂದ ನನ್ನ ಅವಳ ಸ್ನೇಹಕ್ಕಾರಂಭವಾಯಿತು ಮೂರ್ತಿ. ಅವಳು ....ಅವಳಿಗೆ ಶಾಂತಾ ಎಂದು ಹೆಸರು. ನನ್ನ ಅಶಾಂತ ಬದುಕಿನಲ್ಲಿ ಆಕೆ ಯಿಂದಾಗಿ ಒಂದು ಶಾಂತಿ ಬಂತು ಮೂರ್ತಿ. ಪ್ರಪಂಚದ ಬಗೆಗೆ ನನ್ನಲ್ಲಿ ಹುಟ್ಟಿದ್ದ ಬೇಸರ, ತಿರಸ್ಕಾರಗಳೆಲ್ಲವೂ ಆಕೆಯ ಸಹವಾಸದಲ್ಲಿ ಮರೆತು ಹೋಯಿತು. ಶಾಂತಾ ಒಬ್ಬಳಿದ್ದರೆ ಸಾಕು, ನನಗೆ ಮದುವೆಯೂ ಬೇಡ, ಮನೆಯೂ ಬೇಡ, ಮಕ್ಕಳೂ ಬೇಡವೆನ್ನಿಸುತ್ತಿತ್ತು. ಹಣಕ್ಕಾಗಿ ನನ್ನನ್ನಾಕೆ ಎಂದೂ ಕೇಳುತ್ತಿರಲಿಲ್ಲ. ನಾನಾಗಿ ಕೊಟ್ಟಷ್ಟನ್ನು ಮಾತ್ರ ಸ್ವೀಕರಿಸು ತ್ತಿದ್ದಳು. ಕೆಲ ದಿನಗಳಲ್ಲಿ ಆಕೆಯೇ ನನಗೆ ಈ ಸರಕಾರಿ ಕೆಲಸ ಕೊಡಿಸಿ ದಳು."

"ಆಕೆ ಕೊಡಿಸಿದಳೇ ?" ಎಂದು ಬೆರಗಾಗಿ ಕೇಳಿದ ಶಿವಮೂರ್ತಿ.

"ಹೌದು. ಶಾಂತಾನೇ ನನಗೀ ಕೆಲಸ ಕೊಡಿಸಿದ್ದು. ರೆವಿನ್ಯೂ ಅಧಿ ಕಾರಿಗಳೊಬ್ಬರು ಆಕೆಯ ಮನೆಗೆ ಬಂದು ಹೋಗುತ್ತಿದ್ದರು. ಆಕೆಯನ್ನು ಕಂಡರೆ ಅವರಿಗೆ ತುಂಬ ಹುಚ್ಚು. ಶಾಂತಾ ಒಂದು ದಿನ ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟು ಈ ಖಾತೆಯಲ್ಲಿ ನೌಕರಿಗೆ ಸೇರಿಸಿಕೊಳ್ಳುವಂತೆ ಹೇಳಿದಳು. ಒಂದು ಸ್ಥಳ ಖಾಲಿ ಬೀಳುತ್ತಲೂ ಸೇರಿಸಿಕೊಳ್ಳುವದಾಗಿ ಅವರು ಮಾತುಕೊಟ್ಟರು. ಅದರಂತೆ ನನಗೀ ನೌಕರಿಯೂ ಸಿಕ್ಕಿತು. ಸಾಲೆಯ ಮಾಸ್ತರಿಕೆ ತಪ್ಪಿಹೋಯಿತು. ಹದಿನೈದು ರೂಪಾಯಿಗಳಿಂದ ನಾನು ಮೂವತ್ತು ರೂಪಾಯಿ ಸಂಬಳಕ್ಕೇರಿದೆ."

"ನಿಮ್ಮ ತಂದೆ ತಾಯಿಗಳಿಗೆ ಬಹಳ ಸಂತೋಷವಾಗಿರಬೇಕು."

"ಆ ಸಂತೋಷವನ್ನನುಭವಿಸಲು ಅವರು ಬಹುಕಾಲ ಬದುಕಿರಲಿಲ್ಲ. ನನಗೆ ಮದುವೆಯಾಗಲಿಲ್ಲವಲ್ಲಾ ಎಂಬ ಕೊರಗಿನಿಂದಾಗಿ ನನ್ನ ತಾಯಿ ಸತ್ತುಹೋದಳು. ನಮ್ಮ ತಂದೆ ದಮ್ಮಿನ ಬೇನೆಯಿಂದ ತೀರಿಕೊಂಡ. ನಾನು ಒಬ್ಬೊಂಟಿಗನಾದೆ. ಶಾಂತಳ ಸಹವಾಸದಲ್ಲಿ ದಿನಗಳೆಯತೊಡಗಿದೆ."

"ಅಂದರೆ? ಆಕೆಯ ಮನೆಯಲ್ಲೇ ಇದ್ದಿರಾ ?"

"ಇಲ್ಲ. ಬೇರೊಂದು ಕೋಣೆಯಿತ್ತು. ಆದರೆ ಊಟ ಅಡಿಗೆ ಎಲ್ಲಾ ಅವಳಲ್ಲಿಯೆ ನಡೆಯುತ್ತಿತ್ತು. ಬಂದ ಸಂಬಳದಲ್ಲಿ ಐದಾರು ರೂಪಾಯಿ ಇಟ್ಟುಕೊಂಡು ಉಳಿದದ್ದನ್ನೆಲ್ಲ ಅವಳ ಕೈಗೇ ಕೊಡುತ್ತಿದ್ದೆ."

"ನಿಮ್ಮನ್ನು ಬಿಟ್ಟರೆ ಇನ್ನಾರೂ ಬರುತ್ತಿರಲಿಲ್ಲವೇ ಆಕೆಯ ಹತ್ತಿರ ?"

"ಬರುತ್ತಿದ್ದರು. ಆ ರೆವಿನ್ಯೂ ಅಧಿಕಾರಿ ಬರುತ್ತಿದ್ದರೆಂದು ಆಗಲೆ ಹೇಳಿದೆನಲ್ಲ ? ಇನ್ನೂ ಅನೇಕರು ಬರುತ್ತಿದ್ದರು. ಆದರೆ ಅವರಿಗೆಲ್ಲ ಒಂದೊಂದು ವೇಳೆ ಗೊತ್ತಾಗಿತ್ತು. ಅವರಾರೂ ಇಲ್ಲದಾಗ ನಾನು ಬರುತ್ತಿದ್ದೆ. ಸುಮಾರು ರಾತ್ರಿ ಒಂಭತ್ತು ಗಂಟೆಗೆ."

"ಅವರೆಲ್ಲ ಆಕೆಯ ಸಹವಾಸ ಮಾಡುವರೆಂಬುದು ಗೊತ್ತಿದ್ದರೂ ನೀವು ಆಕೆಯೊಂದಿಗೆ ಹೇಗೆ ಕೂಡಿ ಇದ್ದಿರೋ !"

"ಅದರಲ್ಲೇನಿದೆ ಮೂರ್ತಿ? ನಾನು ಕೊಡುವ ಇಪ್ಪತ್ತು ರೂಪಾಯಿಗಳಲ್ಲಿ ಆಕೆಯ ಜೀವನ ನಡೆಯುವುದು ಸಾಧ್ಯವಿರಲಿಲ್ಲ. ಆಕೆಯ ವೃತ್ತಿಯೇ ಹಾಗಿರುವಾಗ ನಾನು ಅದಕ್ಕೆ ಅಡ್ಡಿಯಾಗುವುದು ಹೇಗೆ? ಬೇರೆಯವರ ವಿಚಾರವನ್ನೇ ತಲೆಗೆ ಹಾಕಿಕೊಳ್ಳದೆ ನಾನು ಆಕೆಯ ಜೊತೆಗಿರುವಷ್ಟು ಹೊತ್ತೂ ಆಕೆ ನನ್ನಾಕೆಯೆ ಎಂದು ತಿಳಿದು ಸುಖವಾಗಿದ್ದೆ. ಪಾಲಿಗೆ ಬಂದುದೇ ಪಂಚಾಮೃತ ಎಂದು ಭಾವಿಸಿ ಸಮಾಧಾನದಿಂದಿರುವುದೇ ಒಳ್ಳೆಯದು ಈ ಜಗತ್ತಿನಲ್ಲಿ...."

"ಇದೆಲ್ಲ ನಡೆದುದು ಬೆಳಗಾವಿಯಲ್ಲಿ ಅಲ್ಲವೆ ?"

"ಹೌದು."

"ಈಗ ಆ ಶಾಂತಾ ಎಲ್ಲಿದ್ದಾಳೆ ? ನಿನ್ನೆ ನೀವು ಹೋದ ಮನೆ ಆಕೆಯದೋ ಏನು ? ನಿಮಗೆ ಈ ಊರಿಗೆ ವರ್ಗವಾಗುತ್ತಲೂ ಆಕೆಯನ್ನೂ ಇಲ್ಲಿಗೇ ಕರೆದು ತಂದಿರಾ ?"

ಆ ಪ್ರಶ್ನೆಗೆ ಪಾಟೀಲನಿಂದ ಉತ್ತರ ದೊರೆಯಲಿಲ್ಲ. ಪಶ್ಚಿಮ ದಿಕ್ಕಿನ ಗುಡ್ಡದೋರೆಯಲ್ಲಿ ನಿಧಾನವಾಗಿ ಕೆಳಕ್ಕಿಳಿಯುತ್ತಲಿದ್ದ ಸೂರ್ಯ ಬಿಂಬವನ್ನು ದಿಟ್ಟಿಸುತ್ತ ಆತ ಮೌನವಾಗಿ ಕುಳಿತುಕೊಂಡ.

ಶಿವಮೂರ್ತಿಯೂ ಸ್ವಲ್ಪ ಹೊತ್ತು ಕದಲದೆ ಕುಳಿತಿದ್ದ. ಪಾಟೀಲನ ವಿಲಕ್ಷಣ ಬದುಕು ಆತನಲ್ಲಿ ಹೊಸದೊಂದು ದೃಷ್ಟಿಯನ್ನು ಹುಟ್ಟಿಸಿದಂತಾಗಿ

ದ್ದಿತು. ಮೇಲೆ ಮೇಲೆ ನೋಡಲು ಪೋಲಿಯಂತೆ, ವ್ಯಭಿಚಾರಿಯಂತೆ ಕಾಣುತ್ತಲಿದ್ದ ಪಾಟೀಲನ ಅಂತರಾಳದಲ್ಲಿ ಇಂಥ ಅದ್ಭುತ ರಹಸ್ಯ ಅವಿತಿರ ಬಹುದೆಂದು ಯಾರು ತಿಳಿದಿದ್ದರು ? ಆ ಕೋಮಲ ಶರೀರದ, ಕೋಮಲ ಸ್ವರದ ಶಾಂತಾ....ಅವರಿಬ್ಬರ ವಿಲಕ್ಷಣ ಪ್ರೀತಿ....ಆ ಬದುಕು....!

"ಆ ಶಾಂತಾ ಎಲ್ಲಿದಾಳೆ ಪಾಟೀಲ ?" ಎಂದು ಮತ್ತೆ ಪ್ರಶ್ನಿಸಿದ ಶಿವ ಮೂರ್ತಿ.

"ಆಕೆಯೀಗ ಈ ಜಗತ್ತಿನಲ್ಲಿಲ್ಲ ಮೂರ್ತಿ," ಎಂದು ಭಾರವಾದ ಧ್ವನಿ ಯಲ್ಲಿ ನುಡಿದ ಪಾಟೀಲ.

"ಅಂದರೆ ? ಏನಾಯಿತು ಆಕೆಗೆ ?"

ವ್ಯಥೆಯಿಂದ ಜಡವಾದ ಧ್ವನಿಯಲ್ಲಿ ಪಾಟೀಲ ಹೇಳಿದ: "ಆಕೆ ಮೊದಲೇ ತುಂಬ ಕೋಮಲವಾಗಿದ್ದಳೆಂದು ಹೇಳಿದೆನಲ್ಲ. ಮೊದಲೇ ಕೃಶ ವಾದ ಶರೀರ. ಆ ವೃತ್ತಿಯ ದುಡಿತದಿಂದಾಗಿ ದಿನೇ ದಿನೇ ಸೊರಗುತ್ತ ಬಂದಳು. ಕೊನೆಗೆ ಅದು ಕ್ಷಯರೋಗವೆಂದು ಗೊತ್ತಾಯಿತು. ನನ್ನ ಸಂಬಳವೆಲ್ಲವನ್ನೂ ಡಾಕ್ಟರಿಗೆ ಸುರಿದು ಆಕೆಯನ್ನುಳಿಸಿಕೊಳ್ಳಲು ಪ್ರಯತ್ನಿ ಸಿದೆ. ಆದರೆ....ಆಕೆ ಉಳಿಯಲಿಲ್ಲ. ಒಂದು ದಿನ ಹೊರಟು ಹೋದಳು...."

ದಿಗಂತದಾಚೆಗೆ ಸೂರ್ಯ ಮರೆಯಾಗಿದ್ದ. ಕೆಂಬಣ್ಣ ತಳೆದಿದ್ದ ಮೋಡಗಳಿಗೆ ನಿಧಾನವಾಗಿ ಕಪ್ಪು ಬಣ್ಣವೇರತೊಡಗಿದ್ದಿತು. ಗಾಳಿಯ ರಭಸ ಕ್ರಮೇಣವಾಗಿ ಹೆಚ್ಚುತ್ತಲಿದ್ದಿತು. ಗಾಳಿಯ ಅಲೆದಾಟದೊಂದಿಗೆ ಮೋಡಗಳೂ ಅತ್ತ ಇತ್ತ ಓಡತೊಡಗಿದ್ದುವು.

ಶಿವಮೂರ್ತಿ ಕೆಳಗಡೆ ದೃಷ್ಟಿ ತೂರಿದ. ಊರಿನ ಬೀದಿಗಳಲ್ಲಿ ದೀಪ ಗಳು ಒಂದೊಂದಾಗಿ ಅಂಟಿಕೊಳ್ಳತೊಡಗಿದ್ದುವು. ಕತ್ತಲೆ ನಿಧಾನವಾಗಿ ಸೃಷ್ಟಿಯ ಮೇಲೆ ಅಡಿಯಿಡುತ್ತಲಿತ್ತು.

ಕುಳಿತ ಸ್ಥಳದಿಂದ ಮೇಲಕ್ಕೇಳುತ್ತ ಪಾಟೀಲ ನುಡಿದ: "ಆಕೆ ಹೋದ ಬಳಿಕ ಆ ಊರಿನಲ್ಲೇ ಇರಲಾಗಲಿಲ್ಲ ನನಗೆ. ನಾನಾಗಿಯೆ ವರ್ಗಮಾಡಿಸಿ ಕೊಂಡು ಇಲ್ಲಿಗೆ ಬಂದುಬಿಟ್ಟೆ. ಒಂದು ವರ್ಷದ ವರೆಗೆ ಉದಾಸೀನವಾಗಿ ದಿನಗಳೆದುವು. ಈಗ ನೀವಿರುವಿರಲ್ಲ—ಹಾಗೇ ಇದ್ದೆ ನಾನೂ ಆಗ. ಮುಂದೆ ಸಾವಿತ್ರಿಯ ಪರಿಚಯವಾಯಿತು. ಆಕೆಯ ಸಹವಾಸದಲ್ಲಿ ದಿನಗಳೆಯತೊಡ

ಗಿವೆ. ಶಾಂತಳನ್ನು ನಾನು ಮರೆತಿಲ್ಲವಾದರೂ ಆಕೆಯ ನೆನಪಿನಲ್ಲಿ ಸಾವಿತ್ರಿಯನ್ನೂ ಕಡೆಗಣಿಸುವಂತಿಲ್ಲ. ಹೂಂ....ಸಾವಿತ್ರಿ ಅಂದರೆ ಯಾರು ಎಂಬುದನ್ನು ಹೇಳಲೇ ಇಲ್ಲವಲ್ಲ ನಿಮಗೆ ? ನಿನ್ನೆ ನಾನು ಕರೆದೊಯ್ದಿದ್ದೆನಲ್ಲ–ಆ ಮನೆಯಲ್ಲಿರುವವಳು ಆಕೆಯೆ. ಹಳ್ಳಿಯಿಂದ ಬಂದ ಹೆಂಗುಸು. ಇದೇ ಅವಳ ವೃತ್ತಿಯೇನೂ ಅಲ್ಲ. ಹೊಟ್ಟೆಪಾಡಿಗಾಗಿ ಇದಕ್ಕಿಳಿದಳಷ್ಟೆ. ಬಲು ಒಳ್ಳೆಯವಳು. ನನಗೆ ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಂಡಿದ್ದಾಳೆ."

ಇಬ್ಬರೂ ಗುಡ್ಡವನ್ನಿಳಿಯತೊಡಗಿದರು.

"ಆಕೆಯ ಸಹವಾಸ ಮಾಡಿಸಲೆಂದೇ ನನ್ನನ್ನು ಕರೆದೊಯ್ಯುತ್ತಿದ್ದಿರಾ ಪಾಟೀಲ ?"

"ಇಲ್ಲ ಮಹಾರಾಯ. ಪಕ್ಕದ ಮನೆಯಲ್ಲಿ ಆಕೆಯ ಗೆಳತಿಯೊಬ್ಬಳಿದಾಳೆ. ಕಮಲಾ ಎಂದು. ಬ್ರಾಹ್ಮಣರ ಹುಡುಗಿ ಆಕೆ. ವಿಧವೆಯಾದ ಮೇಲೆ ಅತ್ತೆಯಮನೆಯಲ್ಲಿ ಹಲವು ವರ್ಷ ಕಷ್ಟಪಟ್ಟು ಅದನ್ನು ಸಹಿಸಲಾರದೆ ಈ ವೃತ್ತಿಗಿಳಿದವಳು. ಇನ್ನೂ ತರುಣಿ. ಸ್ವಲ್ಪ ಸುಂದರಿಯೂ ಹೌದು. ನಿಮಗೂ ಕಮಲಳಿಗೂ ಸ್ನೇಹ ಮಾಡಿಸಿಕೊಡಬೇಕೆಂದು ನನ್ನ ವಿಚಾರವಿತ್ತು. ಈಗಲೂ ನಿಮಗೆ ಮನಸ್ಸಿದ್ದರೆ ಬರ್‍ರಿ. ಅಲ್ಲಿಗೇ ಹೋಗೋಣ."

"ಬೇಡ ಪಾಟೀಲ. ನನಗೆ ಅಂಥ ಮನಸ್ಸೇ ಇಲ್ಲ."

ಗುಡ್ಡವನ್ನಿಳಿಯುತ್ತಿದ್ದ ಪಾಟೀಲ ಒಂದು ಕ್ಷಣ ನಿಂತುಕೊಂಡ. ಶಿವಮೂರ್ತಿಯ ಮುಖವನ್ನೇ ಕೊಂಚ ಹೊತ್ತು ದಿಟ್ಟಿಸಿ ನೋಡಿ ನುಡಿದ: "ಈ ವಯಸ್ಸಿನಲ್ಲಿ ನೀವು ಶುಕಮುನಿಯ ಹಾಗೆ ಹೇಗಾದರೂ ಇರುವಿರೋ ನನಗರ್ಥವಾಗದು. ಅಥವಾ, ನಿಮ್ಮ ಮನಸ್ಸು ಬೇರೆ ಯಾರಲ್ಲಾದರೂ ನೆಟ್ಟಿದೆಯೋ ?"

ಪಾಟೀಲನ ಆ ಪ್ರಶ್ನೆಯೊಂದಿಗೆ ಶಿವಮೂರ್ತಿಯ ದೃಷ್ಟಿಯೆದುರಿಗೆ ಸರಸುವಿನ ಸುಂದರ ಮುಖ ಬಂದು ನಿಂತಂತಾಯಿತು. ತನ್ನ ಮನಸ್ಸು ಆಕೆಯಲ್ಲಿ ನೆಟ್ಟಿದೆಯೆ ? ಆಕೆಯ ಮನಸ್ಸು ತನ್ನಲ್ಲಿ ನೆಟ್ಟಿದೆಯೆ ? ತಾನು ಆಕೆಯನ್ನು ಪ್ರೀತಿಸುತ್ತಿರುವೆನೇ ?

ಪಾಟೀಲನ ಭುಜದ ಮೇಲೆ ಸ್ನೇಹದಿಂದ ಕೈ ಹಾಕಿ ಶಿವಮೂರ್ತಿಯೆಂದ:

"ಈ ಪ್ರಶ್ನೆಗೆ ಈಗಲೆ ಉತ್ತರ ಕೊಡಲಾರೆ ಪಾಟೀಲ. ಮತ್ತೊಮ್ಮೆ ಎಂದಾದರೂ ಹೇಳುತ್ತೇನೆ."

"ಅಂತೂ ನಾನು ಊಹಿಸಿದ್ದು ಸುಳ್ಳೇನೂ ಇರಲಾರದು. ಏನೋ ಇರುವುದಂತೂ ನಿಶ್ಚಿತವೇ. ಅಲ್ಲವೆ ?" ಎಂದ ಪಾಟೀಲ.

ಶಿವಮೂರ್ತಿ ಅದಕ್ಕೆ ಉತ್ತರವೀಯದೆ ಸುಮ್ಮನೆ ನಕ್ಕುಬಿಟ್ಟ. ಮೋಹಕವಾದ ನಗೆ....ಅರ್ಥಪೂರ್ಣವಾದ ನಗೆ....ಬದುಕಿನ ರಸದಿಂದ ಕಳೆಗೊಂಡ ನಗೆ.

ಆ ದಿನ ರಾತ್ರಿ ಶಿವಮೂರ್ತಿ ತನ್ನ ದಿನಚರಿಯಲ್ಲಿ ಬರೆದುದು ಹೀಗೆ :

"ಹಲವು ದಿನಗಳಿಂದ ಮನಸ್ಸು ಸ್ತಿಮಿತದಲ್ಲಿಲ್ಲ. ಜೀವಕ್ಕೆ ಸೊಗಸಿಲ್ಲ. ಸೊಗಸಿಲ್ಲವೇ ಇಲ್ಲ ಎಂದು ಹೇಳಲೂ ಸಾಧ್ಯವಿಲ್ಲ. ಆಗಾಗ ಬದುಕೆಲ್ಲವೂ ಬಣ್ಣ ಬಣ್ಣಗಳಿಂದ ತುಂಬಿ ಮೋಹಕವಾಗಿದ್ದಂತೆ ತೋರುತ್ತದೆ. ವಸಂತ, ಹೇಮಂತಗಳೆರಡೂ ಒಂದೇ ಬಾರಿಗೆ ನನ್ನ ಜೀವನವನ್ನು ಮುತ್ತಿದಂತೆ ಭಾಸವಾಗುತ್ತದೆ.

ಎದುರಿನ ಮನೆಯ ಸೆಟ್ಟರ ಮಗಳು ಸರಸೂ ನನ್ನ ವ್ಯಕ್ತಿತ್ವವನ್ನೆಲ್ಲ ಆಕ್ರಮಿಸುತ್ತಿದಾಳೆ. ದಿನ ಕಳೆದ ಹಾಗೆಲ್ಲ ಆಕೆಯಲ್ಲಿ ಮೋಹ ಹೆಚ್ಚುತ್ತ ನಡೆದಿದೆ. ಇದುವರೆಗೆ ಹೆಣ್ಣಿನ ಸಂಪರ್ಕವೆ ನನಗಿರಲಿಲ್ಲ. ನಾನು, ನನ್ನ ಪುಸ್ತಕಗಳು, ನನ್ನ ಪಿಟೀಲು, ನನ್ನ ಕನಸಿನ ರಾಜ್ಯ—ಇಷ್ಟೆ ಇತ್ತು. ಅವರ ಮನೆಗೆ ನಾನು ಪಾಠಕ್ಕೆ ಹೋಗಲಾರಂಭಿಸಿದಂದಿನಿಂದ ನನ್ನ ದಿನಚರಿಯೆ ಬದಲುಗೊಂಡಂತಿದೆ. ಯಾವಾಗಲೂ ಮಂಜಿನಲ್ಲಿ ಅವಿತುಕೊಂಡಂತಿದ್ದ ನನ್ನ ಚಿತ್ತ ಇದೀಗ ಸೂರ್ಯಕಿರಣಗಳಲ್ಲಿ ಚಿನ್ನಾಟವಾಡುತ್ತಿರುವಂತಿದೆ. ಸರಸೂ ನನ್ನ ಬಾಳಿನಲ್ಲಿ ಸದ್ದಿಲ್ಲದಂತೆ ನುಸುಳಿ ಬಂದಳು. ಆಕೆ ನನ್ನ ಮನಸ್ಸನ್ನಾಕ್ರಮಿಸುತ್ತಿದ್ದುದು ನನಗೇ ಗೊತ್ತಾಗಲಿಲ್ಲ. ಈಗ ಝುಗ್ಗನೆ ಬೆಳಕು ಬಿದ್ದಿದೆ—ನನ್ನ ಹೃದಯದಲ್ಲೆಲ್ಲ ಸರಸುವಿನ ಮೂರ್ತಿಯೆ ತುಂಬಿರುವುದು ಕಂಡುಬರುತ್ತಿದೆ.

ನನ್ನ ಕೋಣೆಯ ಎದುರಿಗೇ ಅವರ ಮನೆಯಿರುವುದು. ನನ್ನ ಕೋಣೆಯ ಕಿಟಕಿಗೆದುರಾಗಿಯೆ ಆಕೆಯ ಕೋಣೆಯ ಕಿಟಕಿಯೂ ಇದೆ. ನಾನಿಲ್ಲಿಗೆ ಬಂದು ಎಷ್ಟೋ ದಿನಗಳಾದರೂ ಇದುವರೆಗೆ ಆಕೆಯ ಕಡೆಗೆ

ಲಕ್ಷ್ಯ ಹೊರಳದಿರುವುದು ಸೋಜಿಗದ ವಿಷಯವೇ ಸರಿ. ದಿನವೂ ಸಾಯಂ ಕಾಲ ನಾನು ಕೋಣೆಗೆ ಬರುವ ವೇಳೆಗೆ ಆಕೆ ಕಿಟಕಿಯಲ್ಲಿ ನಿಂತುಕೊಂಡಿರು ತ್ತಾಳೆ. ನಾನು ಬಂದ ಬಳಿಕ ತಾಸೆರಡುತಾಸುಗಳ ವರೆಗೂ ಹಾಗೇ ನಿಂತು ಕೊಂಡಿರುತ್ತಾಳೆ. ಕೊಟಡಿಯಲ್ಲಿ ದೀಪ ಹಚ್ಚುವುದನ್ನೂ ಮರೆತು ನಾನೂ ಅವಳನ್ನು ದಿಟ್ಟಿಸುತ್ತ ನಿಂತುಕೊಂಡಿರುತ್ತೇನೆ. ಬರಿಯ ನೋಟದಲ್ಲೇ ಇಷ್ಟು ಸೊಗಸಿರುವಾಗ ಪ್ರತ್ಯಕ್ಷ ಪ್ರಣಯದಾಟದಲ್ಲಿ ಎಷ್ಟು ಸೊಗಸಿದೆಯೊ !

ಕೊಟಡಿಗೆ ಬಂದು ಅವಳ ಸುಂದರ ಮುಖವನ್ನೊಮ್ಮೆ ನೋಡುತ್ತಲೂ ನನ್ನ ಮನಸ್ಸಿನ ತಾಪವೆಲ್ಲ ಮಾಯವಾಗುತ್ತದೆ. ಕಚೇರಿಯಲ್ಲಿ ಈಚೆಗೆ ತುಂಬ ತೊಂದರೆ. ಹೆಡ್‌ಕಾರಕೂನ ದೇಶಪಾಂಡೆ ನನ್ನನ್ನು ಒಂದೆ ಸಮನೆ ಪೀಡಿಸುತ್ತಿದ್ದಾನೆ. ನಿನ್ನೆ ಅವನಿಗೂ ನನಗೂ ಮಾತಿಗೆ ಮಾತು ಬೆಳೆದು ವಿಪರೀತಕ್ಕಿಟ್ಟುಕೊಂಡಿದ್ದಿತು. ನಾನು ಲಂಚ ತಿನ್ನುತ್ತಿರಬಹುದು, ನಮ್ಮ ಜಾತಿಯ ರೈತನೊಬ್ಬನಿಗೆ ಸಹಾಯ ಮಾಡುತ್ತಿರಬಹುದು ಎಂದು ಆತನ ಆರೋಪ. ಪಾಪ, ಆ ಬಡರೈತನಿಂದ ಲಂಚ ತಿನ್ನುವಂಥ ಕಠೋರ ಹೃದ ಯಿಯೆ ನಾನು? ಆತನ ಬಗೆಗೆ ನನ್ನಲ್ಲಿ ಕನಿಕರ ಹುಟ್ಟಲು ಆತನ ಬಡತನವೇ ಕಾರಣವಲ್ಲದೆ ಜಾತಿಯಲ್ಲ. ದೇಶಪಾಂಡೆಗೆ ಈ ವಿಷಯವನ್ನು ಹೇಗೆ ತಿಳಿಸು ವುದು ? ನನ್ನದು ಯಾವ ಜಾತಿ ? ನಾನು ವೀರಶೈವನೇ ? ಜಂಗಮನೇ ? ಈ ಪ್ರಶ್ನೆಗೆ ನನ್ನ ಹತ್ತಿರವಾದರೂ ಯಾವ ಉತ್ತರವಿದೆ ? ಜಂಗಮ ಕುಟುಂಬ ವೊಂದರಲ್ಲಿ ನಾನು ಹುಟ್ಟಿ ಬಂದುದೇನೊ ನಿಜವೆ. ಆದರೆ ಜಂಗಮನ ಮುಖ್ಯ ಲಾಂಛನವಾದ ಲಿಂಗವನ್ನು ನಾನೆಂದೋ ತ್ಯಜಿಸಿಬಿಟ್ಟುದಾಗಿದೆ. ಆ ಪೂಜೆ....ಆ ದೇವರು....ಅದಾವುದರಲ್ಲೂ ನನಗೆ ಅಭಿರುಚಿಯಿಲ್ಲ—ಲಿಂಗವೇ ಇಲ್ಲದಿರುವಾಗ ನಾನು ಜಂಗಮನಾಗುವುದಾದರೂ ಹೇಗೆ? ವಿರಶೈವನಾಗಿ ಉಳಿಯುವುದಾದರೂ ಹೇಗೆ? ದೇಶಪಾಂಡೆಗೆ ಈ ವಿಷಯ ಅರ್ಥವಾಗಲಾ ರದು. ನನ್ನಂತೆ ಆತ ತನ್ನ ಜಾತಿಯ ಲಾಂಛನವಾದ ಜನಿವಾರವನ್ನು ತ್ಯಜಿಸಿರಲಿಕ್ಕಿಲ್ಲ. ಜಾತಿಧರ್ಮದ ಕಟ್ಟು ಕಟ್ಟಳೆಗಳಲ್ಲೂ ಆತನಿಗೆ ವಿಶ್ವಾಸ ವಿರಬಹುದು. ಅಂತೆಯೆ, ತನ್ನ ಹಾಗೆ ಇತರರೂ ಜಾತ್ಯಾಭಿಮಾನಿಗಳೆಂದು ಆತ ತಿಳಿದು ಆ ರೀತಿ ಆಚರಿಸುತ್ತಿರುವನೊ ಏನೊ. ನನ್ನ ಮಟ್ಟಿಗೆ ನನಗೆ ಜಾತಿಯ ಅಭಿಮಾನವೆಂದರೇನೆಂಬುದೇ ಅರ್ಥವಾಗದು. ಆ ರೈತ ಲಿಂಗಾ

ಯತನಾಗಿರಬಹುದು. ಆತನ ಬಗ್ಗೆ ನನಗೆ ಸಹಾನುಭೂತಿಯುಂಟಾಗಲು ಅದೇನೂ ಕಾರಣವಲ್ಲ. ಆತ ಲಿಂಗಾಯತನಾಗಿರದೆ ಬ್ರಾಹ್ಮಣನೊ, ಮರಾಠನೊ, ಹರಿಜನನೊ, ಮುಹಮ್ಮದೀಯನೊ ಆಗಿದ್ದರೂ ನನಗೆ ಸಹಾನುಭೂತಿ ಬಂದೇ ಬರುತ್ತಿತ್ತು. ಮುಖ್ಯವಾದದ್ದು ಆತನ ಬಡತನ, ಆತನ ಅಸಹಾಯಕತೆ, ಆತನ ಗೋಳು. ಬಡತನವೆಂದರೇನೆಂಬುದನ್ನು ನಾನೂ ಸಾಕಷ್ಟು ಅರಿತಿದ್ದೇನೆ. ಹಸಿವೆಯಿಂದ ನರಳುವುದೆಂದರೆ ಹೇಗಿರುವುದೆಂಬುದನ್ನು ನಾನೂ ಅನುಭವಿಸಿದ್ದೇನೆ. ಅಂತೆಯೆ ಬಡವರನ್ನು ಕಂಡರೆ ನನಗೆ ಆತ್ಮೀಯತೆ, ಸಹಾನುಭೂತಿ. ದೇಶಪಾಂಡೆಗೆ ನನ್ನ ಹೃದಯವನ್ನು ಹೇಗೆ ಬಿಚ್ಚಿ ತೋರಿಸಲಿ ? ಆತ ನನ್ನ ಬಗೆಗೆ ಸಂಪೂರ್ಣವಾಗಿ ತಪ್ಪು ಕಲ್ಪನೆ ಮಾಡಿಕೊಂಡು ನನ್ನನ್ನು ಪೀಡಿಸುತ್ತಿದಾನೆ. ನನ್ನನ್ನು ಕೆಲಸದಿಂದ ತೆಗೆಯಿಸುವವರೆಗೂ ಆತನಿಗೆ ಸಮಾಧಾನವಿಲ್ಲವೆಂದು ತೋರುತ್ತದೆ. ಆತನ ಕೈಕೆಳಗೆ ಕೆಲಸ ಮಾಡುವುದು ಹೇಗೆಂಬುದೇ ತಿಳಿಯದಾಗಿದೆ. ಕಚೇರಿಯಲ್ಲಿ ಕಾಲಿರಿಸುತ್ತಲೂ ಮನಸ್ಸು ಕಹಿಯಾಗುತ್ತದೆ. ಸಾಯಂಕಾಲ ಅದರಿಂದ ಹೊರಬರುವಾಗ ಜೀವ ಸೋತು ಸುಣ್ಣವಾಗಿರುತ್ತದೆ.

ಅದೇ ಯೋಚನೆಯಿಂದ ಬಳಲಿ ಕೊಟಡಿಗೆ ಬಂದು ಬಾಗಿಲು ತೆರೆದು ಕಿಟಕಿಯಲ್ಲಿ ನಿಂತುಕೊಳ್ಳುತ್ತೇನೆ. ಮೇಲಿನ ಕಿಟಕಿಯಿಂದ ಎರಡು ಕಣ್ಣುಗಳು ನನ್ನನ್ನೇ ಆಸೆಯಿಂದ ನಿರುಕಿಸುತ್ತಿರುತ್ತವೆ. ಒಂದೆ ಒಂದು ಕಟಾಕ್ಷ ....ಸರಿ! ನನ್ನೆದೆಯನ್ನು ಗಾಸಿಗೊಳಿಸುವ ಯೋಚನೆಗಳೆಲ್ಲವೂ ಸದ್ದಿಲ್ಲದಂತೆ ದೂರ ಸರಿಯುತ್ತವೆ. ಏನಾಶ್ಚರ್ಯ ! ದೇಶಪಾಂಡೆ, ಕಚೇರಿ, ಅಲ್ಲಿನ ಕಲಹ, ಮನಸ್ತಾಪ, ಎಲ್ಲವನ್ನೂ ಮರೆತು ನಾನು ಸರಸುವಿನ ಕಣ್ಣುಗಳಲ್ಲಿ ಅಡಗಿಹೋಗುತ್ತೇನೆ. ಸರಸೂ....ಎಷ್ಟು ಸುಂದರ ಅವಳ ಹೆಸರು! ಆ ರೂಪೂ ಎಷ್ಟು ಸುಂದರ! ಆ ನಿಲುವು, ಆ ನೋಟ, ಆ ನಗೆ, ಆ ಮುಂಗುರುಳು, ಆ ದೇಹದ ಮಾಟ, ಆ ಮಾಯೆ! ಹೌದು....ಇದೆಲ್ಲ ಮಾಯೆಯೆ ಇರಬೇಕು. ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ! ಯಾರನ್ನು ಬಿಡದ ಈ ಮಾಯೆ ನನ್ನನ್ನು ಹಾಗೆಯೆ ಬಿಡುವುದೇ ?

ಇಂದು ಸಾಯಂಕಾಲ ಪಾಟೀಲನೊಂದಿಗೆ ಗುಡ್ಡದ ತುದಿಯನ್ನೇರಿ ಹೋಗಿದ್ದೆ. ಎಷ್ಟು ವಿಲಕ್ಷಣವಾಗಿದೆ ಆತನ ಬದುಕು! ಆತನ ಪ್ರೇಯಸಿ

ಆ ಶಾಂತಾ....ಆಕೆಯ ಶೋಚನೀಯ ಮೃತ್ಯು-ಆತನ ದ್ವಿತೀಯ ಪ್ರೇಯಸಿ ಸಾವಿತ್ರಿ-ಅವರನ್ನು ಆತನ ಪ್ರೇಯಸಿಯರೆಂದು ಕರೆಯಬಹುದೇ? ಓ, ಯಾಕೆ ಕರೆಯಬಾರದು? ಜಗತ್ತಿನ ದೃಷ್ಟಿಯಲ್ಲಿ ಅವರು ವೇಶ್ಯೆಯರಾದರೂ ಆತನ ದೃಷ್ಟಿಯಲ್ಲಿ ಪ್ರೇಯಸಿಯರೇ. ನನ್ನ ದೃಷ್ಟಿಯಲ್ಲಿ?....ಅವರನ್ನು ವೇಶ್ಯೆಯರೆಂದು ಕರೆಯಲೂ ನನ್ನ ಮನಸ್ಸು ಒಪ್ಪುತ್ತಿಲ್ಲ. ತಿಂಗಳಿಗೆ ದೊರೆಯುವ ನೂರು ರೂಪಾಯಿಗಳಿಗಾಗಿ ನಾನು ನನ್ನನ್ನು ಈ ನೌಕರಿಗೆ ಮಾರಿಕೊಂಡ ಹಾಗೆ ಅವರೂ ಈ ವೃತ್ತಿಗೆ ತಮ್ಮನ್ನು ಮಾರಿಕೊಂಡಿದ್ದಾರೆ. ಅವರದು ಸೂಳೆಗಾರಿಕೆಯಾದರೂ ನನ್ನಂಥ ಕಾರಕೂನರದೂ ಒಂದು ಬಗೆಯ ಸೂಳೆಗಾರಿಕೆಯೇ ಅಲ್ಲವೆ?

ಪಾಟೇಲನ ಜೀವನ ಕಥೆಯನ್ನು ಕೇಳಿದಾಗಿನಿಂದ ನನ್ನ ದೃಷ್ಟಿಗೆ ಹೊಸತನವೊಂದು ಬಂದಂತಾಗಿದೆ. ನಾನು ಆತನಿಗೆ ಮನಸ್ಸಿಗೆ ಹತ್ತುವ ಹಾಗೆ ಮಾತನಾಡಿದ್ದು ತಪ್ಪಾಯಿತು. ಹಾಗೆ ಆಡಬಾರದಾಗಿತ್ತು....ಗುಡ್ಡದ ತುದಿಯ ಮೇಲೆ ಆತನಾಡಿದ ಆ ಒಂದು ಮಾತು ಇನ್ನೂ ನನ್ನ ಕಿವಿಗಳಲ್ಲಿ ದುಮುದುಮಿಸುತ್ತಿದೆ. 'ಈ ವಿಶಾಲವಾದ ಪ್ರಪಂಚದಲ್ಲಿ ಯಾವುದೂ ತುಚ್ಛವಲ್ಲ!' ಎಷ್ಟು ಸತ್ಯ ಆತನ ಆ ನುಡಿ!"

[೧೩]

ಗೌಡರ ಚೆನ್ನಪ್ಪನವರೂ ಅವರ ನಾಲ್ವರು ಜೊತೆಗಾರರೂ ಬಸ್ಸಿನಿಂದಿಳಿದು ಆ ಹಳ್ಳಿಯ ಕಡೆಗೆ ಹೊರಟಾಗ ಸಂಜೆ ಸಮೀಪಿಸುತ್ತಲಿದ್ದಿತು. ಮಳೆ ಬರುವ ಲಕ್ಷಣಗಳು ಕಾಣಿಸುತ್ತಿದ್ದುವಾದುದರಿಂದ ಬೇಗ ಬೇಗ ನಡೆದು ಹಳ್ಳಿಯನ್ನು ಸೇರಬೇಕಾಗಿದ್ದಿತು.

ಅದೇ ಬಸ್ಸಿನಲ್ಲಿ ಬಂದಿದ್ದ ಆ ಹಳ್ಳಿಯ ರೈತನೊಬ್ಬ ಮುಂದೆ ನಡೆಯುತ್ತ ಅವರಿಗೆ ದಾರಿ ತೋರಿಸುತ್ತಲಿದ್ದ. ಹೊಲಗಳಲ್ಲಿ ಹಾಯ್ದು ಹೊರಟಿದ್ದ ಕಾಲು ದಾರಿ-ಜೋಳ, ನವಣೆ, ಬರಗಗಳ ಬೆಳೆ ಒಂದೆರಡು ಅಡಿಗಳುದ್ದ ಬೆಳೆದು ನಿಂತಿದ್ದಿತು. ಮುನ್ನಾದಿನ ರಾತ್ರಿ ತುಂಬ ಮಳೆಯಾಗಿದ್ದುದರಿಂದ ನೆಲವೆಲ್ಲ ಕೆಸರಾಗಿದ್ದಿತು. ಗೌಡರೂ ಅವರ ಜೊತೆಗಾರರೂ ತಮ್ಮ ತಮ್ಮ ಕಾಲುಮರೆಗಳನ್ನು ಕೈಗಳಲ್ಲಿ ಹಿಡಿದುಕೊಂಡು, ಉಟ್ಟ ಧೋತರಗಳನ್ನು

ಮೇಲಕ್ಕೇರಿಸಿ ನಡೆದು ಬರುತ್ತಿದ್ದರು. ನಡಿಗೆಯೊಂದಿಗೆ ಮಾತೂ ಸಾಗಿದ್ದಿತು.

"ಸ್ವಾಮಿಗಳನ್ನು ಹುಡುಕಿ ಹುಡುಕಿ ಸಾಕಾಯ್ತಪ್ಪಾ. ತಾಲೂಕೆಲ್ಲಾ ಸುತ್ತಿಹಾಕಿದೆವು. ನೂರಾರು ಹಳ್ಳಿಗಳನ್ನು ತಿರುಗಿದೆವು. ಅಂತೂ ಕೊನೆಗೆ ಸಿಕ್ಕರಲ್ಲ !" ಎಂದರು ಚೆನ್ನಪ್ಪಗೌಡರು.

"ಸಿಗದ ಎಲ್ಲಿ ಹೋಗತಾರರೀ ? ಅವರು ನಮ್ಮೂರಾಗ ಇದಾರೆನ್ನೋದು ಹ್ಯಾಂಗ ಗೊತ್ತಾತು ನಿಮಗ ?" ಎಂದು ಆ ರೈತ—ಕಲ್ಲಪ್ಪ—ಪ್ರಶ್ನಿಸಿದ.

"ನಮ್ಮ ಪೂರ್ವಜನ್ಮದ ಪುಣ್ಯ ಅಂತಲೇ ಹೇಳಬೇಕಪ್ಪ. ಮೊನ್ನೆ ಗೋಕಾವಿಗೆ ಹೊರಟಾಗ ಬಸ್ಸಿನಾಗ ಇದೇ ಮಾತು ಆಡುತಾ ಕೂತಿದ್ದೆವು. ನಿಮ್ಮೂರ ರೈತನೊಬ್ಬ ಅದರೊಳಗೇ ಇದ್ದನೇನೊ. ನಾವು ಸ್ವಾಮಿಗಳನ್ನು ಹುಡುಕುವದಕ್ಕಾಗಿ ಊರು ಊರು ತಿರುಗಿದ್ದನ್ನು ಕೇಳಿ ಅವ ಯಾವ ಸ್ವಾಮಿಗಳು ಅಂತ ಕೇಳಿದ. ನಾವು ಪ್ರಭುಸ್ವಾಮಿಗಳು ಅಂತ ಹೇಳಿದರೆ ಅವನಿಗೆ ತಿಳಿಯಲಿಲ್ಲ. ಅವರ ವಯಸ್ಸು, ಆಕಾರ, ಸ್ವಭಾವ ಮೊದಲಾದ್ದನ್ನು ಹೇಳಿದಾಗ 'ಹೋ, ಹಾಂಗಾದರೆ ನಮ್ಮೂರಿಗೆ ಬಂದಿರುವವರು ಅವರೇ ಇರಬೇಕು—' ಅಂತ ಹೇಳಿದ. ನಾವು ಸ್ವಲ್ಪ ಸೂಕ್ಷ್ಮವಾಗಿ ವಿಚಾರಿಸಿದ ಮೇಲೆ ಅವರೇ ಪ್ರಭುಸ್ವಾಮಿಗಳೆಂದು ಖಾತ್ರಿಯಾಯಿತು. ಹೌದೇನಪ್ಪ, ತಮ್ಮ ಹೆಸರನ್ನೂ ಕೂಡ ತಿಳಿಸಿಲ್ಲವೇನು ಅವರು ?"

"ಇಲ್ಲರೀ ಗೌಡರೆ. ಅವರ ಹೆಸರು ನಾವಾದರೂ ಯಾತಕ್ಕ ಕೇಳೂಣು ಬಿಡ್ರಿ. ಮಾರಾಯ ದೇವರು ಬಂದಾಂಗ ಬಂದಾನ ನಮ್ಮೂರಿಗೆ. ದೇವರ ಹೆಸರು ಯಾರಾದರೂ ಕೇಳತಾರೇನ್ರಿ ?"

ಗೌಡರ ಜೊತೆಗಾರರಲ್ಲೊಬ್ಬ ಆ ಪ್ರಶ್ನೆಗೆ ಹಾಸ್ಯಪೂರ್ಣವಾಗಿ ಉತ್ತರವಿತ್ತ :

"ಕೇಳದೆ ಬಿಟ್ಟಾರೇನಪ್ಪ ನಮ್ಮ ಮಂದಿ ? ನೀನೇನು ಶಂಕರನೊ, ವಿಷ್ಣುವೊ, ಬ್ರಹ್ಮನೊ, ಅಲ್ಲಾನೊ, ಬಸವಣ್ಣನೊ, ಹನುಮಂತನೊ, ಭರಮಪ್ಪನೊ, ಕರೆವ್ವನೊ....ಅಂತ...."

"ಅವೆಲ್ಲಾ ನಿಮ್ಮ ಶಹರದಾಗಿನ ಮಾತು ಬಿಡ್ರಿ ಅಣ್ಣಾಅವರೆ ನಮ್ಮಂಥ ಹಳ್ಳೀ ಮಂದಿಗೆ ಯಾವ ದೇವರಾದರೇನ್ರಿ—ಎಲ್ಲಾ ದೇವರೇ. ಎಲ್ಲಾ ದೇವರಿಗೂ ನಾವು ಕೈ ಮುಗೀತೀವಿ."

"ಸ್ವಾಮಿಗಳು ನಿಮ್ಮೂರಿಗೆ ಬಂದು ಎಷ್ಟು ದಿನವಾಯ್ತಪ್ಪ ?" ಎಂದು ಗೌಡರು ಕೇಳಿದರು.

"ಹದಿನೈದು ಇಪ್ಪತ್ತು ದಿನ ಆಗ್ತಾ ಬಂದಿದ್ದೀತು. ಅವರು ನಮ್ಮೂರಾಗ ಕಾಲಿಟ್ಟಾಗಿನಿಂದ ಊರೇ ಬದಲಾಗಿ ಹೋಗ್ಯೆತಿ ನೋಡ್ರಿ."

"ಅದೇನಪ್ಪಾ, ಹೀಗಾಯಿತು?" ಎಂದು ಗೌಡರು ಕುತೂಹಲದಿಂದ ಕೇಳಿದರು.

"ಅವರು ಬರೂದಕ್ಕೆ ಮೊದಲು ನಮ್ಮೂರು ಗೊಬ್ಬರಗುಂಡಿ ಇದ್ದಾಂಗ ಇತ್ತು ನೋಡ್ರಿ. ಊರು ಸ್ವಚ್ಛ ಇಟ್ಟುಕೋಬೇಕು, ಮನೆಗಳನ್ನು ಸ್ವಚ್ಛ ಮಾಡಬೇಕು, ಹಾದಿ ಬೀದಿಯೊಳಗಿನ ಕಸಾ ತೆಗೆದು ಹಾಕಬೇಕು ಅನ್ನೊ ವಿಚಾರನs ಯಾರಿಗೂ ಇರಲಿಲ್ಲರಿ. ಅವರು ಒಂದು ದಿನ ನಸುಕಿನಾಗ ಕೈಯಾಗ ಕೋಲು ಹಿಡಕೊಂಡು ನಮ್ಮೂರಿಗೆ ಬಂದರು. ಆ ದಿನ ಇನ್ನೂ ಚೆನ್ನಾಗಿ ನೆನಪೈತಿ ನನಗೆ. ಅವರು ಯಾರು, ಎಲ್ಲಿಯವರು, ಯಾವ ಮಠದ ಸ್ವಾಮಿಗಳು ಯಾವದೂ ಗೊತ್ತಿರಲಿಲ್ಲ ನಮಗೆ. ಬಂದವರೇ ಒಮ್ಮೆ ಊರನ್ನೆಲ್ಲಾ ತಿರುಗಾಡಿ ನೋಡಿದರು. ನಾವೆಲ್ಲ–ಊರ ಮಂದಿ ಅವರನ್ನೇ ಮಿಕಿ ಮಿಕಿ ನೋಡುತಾ ನಿಂತಿದ್ದೆವು. ನಮ್ಮೂರಾಗ ಒಂದು ಗುಡಿ ಐತಿ–ಬಸವಣ್ಣನ ಗುಡಿ. ಊರ ತುಂಬೆಲ್ಲಾ ಕಸ ತುಂಬಿದ ಹಾಂಗ ಆ ಗುಡಿಯೊಳಗೂ ಕಸ ತುಂಬಿತ್ತು."

"ಗುಡಿಯನ್ನು ಉಡುಗಿ ಸ್ವಚ್ಛ ಮಾಡುವವರಾರೂ ಇರಲಿಲ್ಲೇನು ?"

"ಸ್ವಚ್ಛ ಮಾಡೂ ಮಾತು ಯಾಕ್ರೀ? ಇನ್ನಷ್ಟು ಹೊಲಸು ಮಾಡುವವರೇ ಎಲ್ಲರೂ. ರಾತ್ರಿ ಎಷ್ಟೋ ಮಂದಿ ಗುಡಿಯೊಳಗೇ ಮಲಗುವವರು. ಆ ಧೂಳಿನಾಗs ಕಂಬಳಿ ಕೌದಿ ಹಾಸಿ ಬಿದ್ದುಬಿಡುವವರೇ ಹೊರತು ಅದನ್ನು ಉಡುಗಿ ಸ್ವಚ್ಛಮಾಡಿ ಮಲಗಬೇಕು ಅನ್ನೊ ವಿಚಾರ ಯಾರಿಗೂ ಇರಲಿಲ್ಲ. ರಾತ್ರಿಯೆಲ್ಲಾ ಬೀಡಿ, ತಂಬಾಕು ಸೇದಿ ಅಲ್ಲೇ ಹೊಲಸು ಮಾಡುತಿದ್ರು. ಅಂಗಳದಾಗ ಉಗುಳೂದು, ಸಿಂಬಳ ಕಳಿಯೂದು. ಅಂತೂ ಗುಡಿ ಹೊಲಸು ನಾರುತಿತ್ತು. ನಮ್ಮ ಸ್ವಾಮಿಗಳು ಬಂದವರೇ ಮೊದಲು ಆ ಗುಡಿ ಸ್ವಚ್ಛ ಮಾಡಲಿಕ್ಕೆ ನಿಂತರು. ಕಸಬರಿಗೀ ಹಿಡಕೊಂಡು ಒಬ್ಬರೇ ಗುಡಿಯೊಳಗಿನ ಕಸಾ ಎಲ್ಲಾ ಉಡುಗಿ ಬುಟ್ಟಿಗೆ ತುಂಬಿ ದೂರ ಒಯ್ದು

ತಿಪ್ಪೆಗೆ ಹಾಕಿದರು. ಆ ವ್ಯಾಲ ಅಂಗಳ ಸ್ವಚ್ಛ ಮಾಡಿದರು. ಸೆಗಣಿ ತಂದು ಗುಡಿಯನ್ನೆಲ್ಲಾ ಸಾರಿಸಿದರು. ಇವ ಯಾರೋ ಹುಚ್ಚಯ್ಯ ಬಂದಿರಬೇಕು ಅಂತಂದುಕೊಂಡು ಮಂದಿ ತಮ್ಮ ತಮ್ಮ ಕೆಲಸಕ್ಕ ಹೋದರು. ನಾನೂ ಹೊಲಕ್ಕ ಹೋದೆ. ಹೋರೆ ಮುಗಿಸಿಕೊಂಡು ನಾವೆಲ್ಲಾ ಸಂಜೆಗೆ ಊರಿಗೆ ಬಂದು ನೋಡಿದರೆ ಊರಿಗೆ ಊರೇ ಬದಲಾಗಿತ್ತು. ಹಳ್ಳಿಯೊಳಗಿನ ಹಾದಿ ಬೀದಿ ಎಲ್ಲಾ ಸ್ವಚ್ಛ ಆಗಿದ್ದುವು. ಬೆಳಗಿನಿಂದ ಸಂಜೆಯ ತನಕ ಒಬ್ಬರೇ ದುಡಿದು ಸ್ವಾಮಿಗಳು ಊರೆಲ್ಲಾ ಸ್ವಚ್ಛ ಮಾಡಿದ್ದರು ನೋಡ್ರಿ."

"ಊಟ ಆದರೂ ಮಾಡಿದ್ದರೋ ಇಲ್ಲೋ ?"

"ಮಧ್ಯಾಹ್ನದಾಗ ಉಂಡರೋ ಇಲ್ಲೋ ತಿಳೀಲಿಲ್ಲ. ಹಾಂಗs ಕೆಲಸಾ ಮಾಡಿದ್ದರೂ ಮಾಡಿರಬಹುದು. ಸಂಜೆಗೆ ಮಾತ್ರ ಕೆಲಸ ಮುಗಿಸಿ ಹಳ್ಳಕ್ಕೆ ಹೋಗಿ ಜಳಕಾ ಮಾಡಿ ಬಂದು ಗುಡಿಯೊಳಗ ಕುಳಿತಿದ್ದಾಗ ನಾವು ಮೂರು ನಾಲ್ಕು ಮಂದಿ ಹೋಗಿ ನಮಸ್ಕಾರ ಮಾಡಿ ಅವರಿಗೆ ರೊಟ್ಟಿ ಅನ್ನ ಕೊಟ್ಟು ಬಂದೆವು. ನೀವು ಎಲ್ಲಿಂದ ಬಂದಿರಿ ಬುದ್ದಿ, ಯಾವ ಮಠದವರು ಅಂತ ಕೇಳಿಸಿವು. ಅವರು ಯಾವದಕ್ಕೂ ಏನೂ ಹೇಳಲಿಲ್ಲ. ರೊಟ್ಟಿ ತಕ್ಕೊಂಡು ತಿಂದು ಮಲಗಿಕೊಂಡರು. ಮತ್ತೆ ಬೆಳಗಿನಾಗ ನಮ್ಮೆಲ್ಲರಿಗಿಂತ ಮೊದಲೇ ಎದ್ದು ಕಸ ಉಡುಗತೊಡಗಿದರು. ನಮ್ಮ ಹಳ್ಳಿ ಅಷ್ಟೇನೂ ದೊಡ್ಡದಲ್ಲ. ಎಲ್ಲಾ ಸೇರಿ ಎಂಟು ಹತ್ತು ಓಣಿ ಇದ್ದಾವು. ಸ್ವಾಮಿಗಳು ಈ ಓಣಿಗಳ ನ್ನೆಲ್ಲಾ ಉಡುಗಿ ಝಳಝಳ ಮಾಡಿದರು. ಮನೆಯ ಮುಂದೆ ಹುಡುಗರು ಇಶ್ಶೀ ಮಾಡುತಿದ್ದುವು. ಅದನ್ನೆಲ್ಲಾ ಸ್ವಾಮಿಗಳೇ ಬಳಿದು ತಿಪ್ಪೆಗೆ ಹಾಕಿ ದರು ನೋಡ್ರಿ. ಮನೆಯ ಮುಂದೆ ಕಾಲು ತೊಳೆದು ಸಿಂಬಳ ಕಳೆಯೂದು ನಮ್ಮ ಪದ್ಧತಿಯಾಗಿತ್ತು. ಸ್ವಾಮಿಗಳು ಅದನ್ನೂ ಬಳಿದರು. ಅವರು ಮಾಡುವ ಕೆಲಸ ನೋಡಿದ ಹಾಂಗೆಲ್ಲ ಊರವರಿಗೆಲ್ಲ ನಾಚಿಕೆಯಾಯಿತು. ಇನ್ನು ಮುಂದೆ ಮನೆಯ ಮುಂದೆ ಹೇಸಿಗೆ ಮಾಡಬಾರದು, ಮಕ್ಕಳನ್ನೂ ಅಲ್ಲಿ ಹೇಸಿಗೆಗೆ ಬಿಡಬಾರದು ಎಂದು ಬುದ್ಧಿ ಕಲಿತರು. ಹೀಂಗ ಸ್ವಾಮಿಗಳು ಯಾರಿಗೂ ಒಂದು ಮಾತೂ ಹೇಳದೆ ತಾವೇ ಕೆಲಸ ಮಾಡಿ ಎಲ್ಲಾ ಕಲಿ ಸಿದರು ನೋಡ್ರಿ."

"ಎಷ್ಟು ಮನೆಗಳಿವೆಯಪ್ಪಾ ನಿಮ್ಮೂರಲ್ಲಿ ?"

"ಎಲ್ಲಾ ಕೂಡಿ ಒಟ್ಟು ನೂರು ಮನಿ ಇದ್ದಾವು."

"ಹರಿಜನರೂ ಇದ್ದಾರೇನು ?"

"ಹರಿಜನರು ? ಹೊಲೇರು ಅಲ್ಲವೇನ್ರಿ ನೀವು ಅನ್ನೂದು ? ಹೂಂ ಅವರೂ ಇದಾರ. ಒಡ್ಡರೂ ಇದಾರ. ನಮ್ಮ ಸ್ವಾಮಿಗಳು ಅವರ ಓಣಿಗಳನ್ನೂ ಬಿಡಲಿಲ್ಲ ನೋಡ್ರಿ. ಅವನ್ನೂ ಉಡುಗಿ ಸ್ವಚ್ಛ ಮಾಡಿದರು. ಹೊಲೇರ ಹುಡುಗರನ್ನ ತಾವೇ ಹಳ್ಳಕ್ಕೆ ಕರಕೊಂಡು ಹೋಗಿ ಜಳಕಾ ಮಾಡಿಸಿದರು. ಅವರ ಅರಿವೆ ಒಗೆದುಕೊಟ್ರು. ಇದಕ್ಕೆ ಮೊದಲು ಯಾವ ಸ್ವಾಮಿಯೂ ಅವರ ಕೇರಿಗೆ ಕಾಲಿಡಾಕಿಲ್ಲ. ಈಗ ಹೊಲೇರು ಮತ್ತು ಒಡ್ಡರು ಈ ಸ್ವಾಮಿಗಳನ್ನ ದೇವರು ಅಂತಲೇ ತಿಳಕೊಂಡಾರೆ."

"ಇನ್ನೂ ಎಷ್ಟು ದೂರ ಇದೆಯಪ್ಪ ಊರು ?"

"ಇನ್ನೇನು ಬಂತು ನೋಡ್ರಿ. ಅಲ್ಲಿ ಆ ಗುಡ್ಡದ ಕೆಳಗ ಕಾಣಿಸುತೈತೆಲ್ಲ—ಅದೇ ನೋಡ್ರಿ," ಎಂದು ನುಡಿದು ಕಲ್ಲಪ್ಪ ಉತ್ತರ ದಿಕ್ಕಿಗೆ ಬೆರಳು ಮಾಡಿ ತೋರಿಸಿದ. ಗುಡ್ಡದ ಅಡಿಯಲ್ಲಿ ಗಿಡಗಳ ನಡುವೆ ಆ ಹಳ್ಳಿ ತುಂಬ ಸುಂದರವಾಗಿ ಕಾಣುತ್ತಿತ್ತು.

"ಹೆಸರೇನಪ್ಪಾ ನಿಮ್ಮೂರಿನದು ?"

"ಕರಕನಟ್ಟಿ ಅಂತಾರ್ರಿ."

"ಒಳ್ಳೆ ಹೆಸರೇ !" ಎಂದು ಗೌಡರು ನಕ್ಕರು.

ದಾರಿಯಲ್ಲಿ ಅಡ್ಡ ಬಂದ ಹಳ್ಳವೊಂದನ್ನು ದಾಟಿ ಅವರು ಹಳ್ಳಿಯ ಹತ್ತಿರ ಬಂದರು. ಊರ ಹೊರಭಾಗದಲ್ಲೇ ಬಸವಣ್ಣನ ಗುಡಿಯಿದ್ದಿತು. ಹಳೆಯ ಕಾಲದ ಮುರುಕು ಕಟ್ಟಡ. ಗೋಡೆಗಳು ಅಲ್ಲಲ್ಲಿ ಬಿದ್ದು ಹೋಗಿ ಮಣ್ಣು, ಕಲ್ಲು ಅತ್ತ ಇತ್ತ ಸುರಿದಿತ್ತು. ಅದು ಗುಡಿಯ ಹಾಗೆ ಕಾಣಿಸುತ್ತಿರಲೇ ಇಲ್ಲ. ಕಟ್ಟಡ ತೀರ ವಿದ್ರೂಪವಾಗಿತ್ತು.

"ಊರವರೆಲ್ಲ ಕೂಡಿ ಇದನ್ನು ನೆಟ್ಟಗೆ ಮಾಡಬಾರದೇನಪ್ಪ ?"

"ಯಾರು ಮಾಡುತಾರರೀ ? ಯಾರಿಗೆ ಬೇಕಾಗೈತಿ ಈ ಕೆಲಸ ? ಎಲ್ಲರೂ ತಮ್ಮ ತಮ್ಮ ಕೆಲಸದಾಗ ತೊಡಗಿಕೊಂಡಿರುವವರು. ಪುರಸತ್ತೇ ಇರೂದಿಲ್ಲ."

"ಸೋಮವಾರ ಆದರೂ ಪುರಸತ್ತಿರುವದಿಲ್ಲೇನು ?"

"ಹೌದು. ಇರುತೈತಿ. ಆ ದಿನ ಎತ್ತು ಹೂಡುವದಿಲ್ಲ ನಾವು. ಆದರೂ ಹೊಲದಾಗ ಅದು ಇದು ಮಾಡುತಾನೇ ಇರ್‍ತೀವಿ."

"ವಾರದೊಳಗ ಒಂದು ದಿನ ಎಲ್ಲರೂ ಕೂಡಿ ಗುಡಿ ಕಟ್ಟಾಕ ಸಿಂತರೆ ಆಗಿ ಹೋದೀತಲ್ಲ ?"

"ಆಗಬಹುದು. ಆದರೆ ಮುಂದ ಬಂದು ಮಾಡುವವರು ಯಾರಿದಾರ ? ಏನೋ ನಮ್ಮ ಸ್ವಾಮಿಗಳು ಮನಸ್ಸು ಮಾಡಿದರ ಆದೀತು."

"ಈಗ ಏನು ಮಾಡ್ತಾ ಇದ್ದಾರೋ ಸ್ವಾಮಿಗಳು !"

"ಗುಡಿಯಾಗಂತೂ ಇದ್ದಾಂಗ ಕಾಣೂದಿಲ್ಲ. ಊರಾಗ ಎಲ್ಲಾದ್ರೂ ಇದ್ದಾರು. ಬರ್‍ರಿ, ನೋಡೋಣಂತೆ."

ಎಲ್ಲರೂ ಗುಡಿಗೆ ಬಂದು ದೇವರಿಗೆ ಕೈ ಮುಗಿದು ಸ್ವಚ್ಛವಾಗಿದ್ದ ಪಡಸಾಲೆಯಲ್ಲಿ ಕುಳಿತುಕೊಂಡರು. ಗೋಡೆಯ ಮೇಲಿನ ಒಂದು ಗೂಟಕ್ಕೆ ಕಪನಿಯೊಂದು ನೇತಾಡುತ್ತಿತ್ತು. ಅದರ ಕೆಳಗೆ ಮರದಿಂದ ಮಾಡಿದ ಪಾದುಕೆಗಳಿದ್ದುವು. ಮೂಲೆಯಲ್ಲಿ ದಪ್ಪಗಿನದೊಂದು ಕೋಲು. ಅದರ ಹತ್ತಿರವೆ ನೀರು ತುಂಬಿದ ಮಣ್ಣಿನ ಪಾತ್ರೆಯೊಂದು. ಅದರ ಮೇಲೆ ಮಣ್ಣಿನದೇ ಆದ ಒಂದು ಮಗಿ. ಪಾತ್ರೆಯ ಪಕ್ಕದಲ್ಲಿ ಮಣ್ಣಿನ ತಟ್ಟೆಯೊಂದು.

ನಾಲ್ಕೈದು ನಿಮಿಷ ಅಲ್ಲಿಯೆ ಕುಳಿತು ಆ ವಸ್ತುಗಳನ್ನೇ ಮಿಕಿ ಮಿಕಿ ನೋಡುತ್ತಲಿದ್ದರು. ಮಠದ ಭಾರಿ ಆಸ್ತಿಯನ್ನೆಲ್ಲ ತೊರೆದು ಬೈರಾಗಿಯ ಹಾಗೆ ಈ ಹಳ್ಳಿಗೆ ಬಂದು ಏಕಾಕಿಯಾಗಿ ವಾಸಿಸುತ್ತಿರುವ ಸ್ವಾಮಿಗಳನ್ನು ನೆನೆದು ಗೌಡರ ಕತ್ತು ಉಬ್ಬಿ ಬಂದಿತು. ಗೂಟದ ಮೇಲಿದ್ದ ಆ ಏಕ ಕಪನಿ....ಆ ಕೋಲು....ಆ ಮಣ್ಣಿನ ಪಾತ್ರೆಗಳು....ಗೌಡರ ಕಣ್ಣುಗಳಲ್ಲಿ ನೀರೂರಿತು. ಅದನ್ನೊರೆಸಿಕೊಳ್ಳುವ ಗೊಡವೆಗೆ ಹೋಗದೆ ಎದ್ದು ನಿಂತು ನುಡಿದರು : "ನಡೆಯಪ್ಪ. ಸ್ವಾಮಿಗಳೆಲ್ಲಿದಾರೋ ನೋಡೋಣ."

"ನೀವಿಲ್ಲೇ ಇರ್‍ರಿ ಗೌಡರೇ. ದಣಿವಾರಿಸಿಕೊಳ್ರಿ. ನಾ ಅವರನ್ನ ಕರಕೊಂಡು ಬರ್‍ತೇನೆ."

"ಎಂಥ ದಣಿವು ಬಿಡಪ್ಪ. ಸ್ವಾಮಿಗಳ ದರ್ಶನವಾದರೆ ಸಾಕು, ಎಲ್ಲಾ ಹಾರಿ ಹೋದೀತು. ನಡೆ, ನಾವೂ ಬರುತ್ತೇವೆ."

"ಸ್ವಾಮಿಗಳೆಲ್ಲಿದಾರೆ ?" ಎಂದು ಅವರಿವರನ್ನು ವಿಚಾರಿಸುತ್ತ ಕಲ್ಲಪ್ಪ

ಮುಂದೆಹೊರಟೆ. ಹರಿಜನಕೇರಿಯಲ್ಲಿ ಯಾವುದೋ ಕೆಲಸದಲ್ಲಿ ತೊಡಗಿರುವರೆಂದು ತಿಳಿದು ಬಂದಿತು. ಮತ್ತಾವ ಕೆಲಸದಲ್ಲಿ ತೊಡಗಿರುವರೊ, ಎಂದು ಯೋಚಿಸುತ್ತ ಅವರು ಕೇರಿಗೆ ಅಡಿಯಿರಿಸಿದರು.

ಕೇರಿಯ ಮಧ್ಯಭಾಗದಲ್ಲಿ ಮುರಿದು ಬಿದ್ದ ಮನೆಯೊಂದರ ಮುಂದೆ ನಿಂತು ಸ್ವಾಮಿಗಳು ಕೆಲಸದಲ್ಲಿ ತೊಡಗಿದ್ದರು. ಓಣಿಯ ನಡುವೆ ಮಣ್ಣಿನ ರಾಶಿಮಾಡಿ ಅದಕ್ಕೆ ನೀರು ಬೆರಸಿ ಕೆಸರು ಸಿದ್ಧಗೊಳಿಸುವ ಕಾಯಕ ನಡೆದಿದ್ದಿತ್ತು. ಹರಿಜನ ಯುವಕರಿಬ್ಬರು ಕೊಡಗಳಲ್ಲಿ ನೀರು ತಂದು ಹಾಕುತ್ತಿದ್ದರು. ಕೈಯಲ್ಲಿ ಸಲಿಕೆಯನ್ನು ಹಿಡಿದು ಸ್ವಾಮಿಗಳು ಕೆಸರು ಅಣಿಗೊಳಿಸುತ್ತಿದ್ದರು. ಮೂರು ನಾಲ್ಕು ಜನ ಗಂಡುಸರೂ ಹೆಂಗುಸರೂ ಗೋಡೆಗಳನ್ನು ಕಟ್ಟುತ್ತಿದ್ದರು.

"ಯಾರ ಮನೆಯಪ್ಪ ಅದು ?" ಎಂದು ಗೌಡರು ಪ್ರಶ್ನಿಸಿದರು.

"ಹೊಲೇರ ಮುದುಕ ಒಬ್ಬನದು."

"ಒಬ್ಬನೇ ಇದ್ದಾನೊ ಏನೊ. ಯಾರೂ ಇಲ್ಲೇನು ಅವನಿಗೆ ?"

"ಮಕ್ಕಳಿದ್ದರು. ಎಲ್ಲಾ ಸತ್ತು ಹೋದರು. ಪಾಪ, ಬಹಳ ಬಡವ. ಒಬ್ಬನೇ ಇದಾನ. ಅವನ ಮನಿಯೂ ಬಿದ್ದು ನಾಲ್ಕೈದು ವರ್ಷ ಆಯ್ತು."

"ಅದಕ್ಕೇ ಸ್ವಾಮಿಗಳು ಅದನ್ನು ಕಟ್ಟಲು ನಿಂತಿರುವರೊ ಏನೊ. ಗುಡಿ ಕಟ್ಟುವದಕ್ಕಿಂತ ಬಡವರ ಮನೆ ಕಟ್ಟುವದೇ ದೊಡ್ಡ ಕೆಲಸ. ಬಾ, ಸ್ವಾಮಿಗಳಿಗೆ ಭೆಟ್ಟಿಯಾಗೋಣ."

ಎಲ್ಲರೂ ಬಂದು ಸ್ವಾಮಿಗಳಿಗೆ ಮಣಿದರು. ಸಲಿಕೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಹಾಗೇ ಸ್ವಾಮಿಗಳು ಬಂದವರನ್ನು ಪ್ರಸನ್ನವದನದಿಂದ ನಿರೀಕ್ಷಿಸುತ್ತ–"ಬಂದಿರಾ ? ಎಲ್ಲಾ ಕ್ಷೇಮವೆ ?" ಎಂದರು.

"ಎಲ್ಲಾ ನೆಟ್ಟಗೆ ಬುದ್ಧೀ. ಆದರೆ ನೀವಿತ್ತ ಬಂದಾಗಿನಿಂದ ನಮಗಾರಿಗೂ ಆನಂದವಿಲ್ಲ."

ಸ್ವಾಮಿಗಳ ಮುಖದಲ್ಲಿ ಮುಗ್ಧವಾದ ನಗೆಯ ಲಹರಿ ಪಸರಿಸಿತು. "ದಣಿದು ಬಂದಿದ್ದೀರಿ. ಹಳ್ಳಕ್ಕೆ ಹೋಗಿ ಕೈಕಾಲು ತೊಳೆದುಕೊಂಡು ಬನ್ನಿ. ಅಷ್ಟರೊಳಗಾಗಿ ರೊಟ್ಟಿಗಿಟ್ಟಿ ಸಿದ್ಧವಾದಾವು," ಎಂದರು.

ಸ್ವಾಮಿಗಳ ಮುಖದಿಂದ ಆ ಮಾತು ಬರುತ್ತಲೂ ಕಲ್ಲಪ್ಪ ಅಕ್ಷಿಂತ

ಜಾರಿಕೊಂಡ. "ರೊಟ್ಟಿ ಸಿದ್ಧವಾದಾವು," ಎಂದು ಸ್ವಾಮಿಗಳು ಹೇಳಿದ್ದರಷ್ಟೆ. "ರೊಟ್ಟಿ ತಕ್ಕೊಂಡು ಬಾ ಕಲ್ಲಪ್ಪ," ಎಂದೇನೂ ಹೇಳಿರಲಿಲ್ಲ. ಆದರೂ ಸ್ವಾಮಿಗಳ ಮಾತಿನಂತೆ ರೊಟ್ಟಿ ಸಿದ್ಧಗೊಳಿಸಿ ತರುವುದು ತನ್ನ ಕರ್ತವ್ಯ ವೆಂದು ತಿಳಿದು ಆತ ಅಲ್ಲಿಂದ ಹೊರಟು ತನ್ನ ಮನೆಗೆ ನಡೆದ.

ಪ್ರಭುಸ್ವಾಮಿಗಳಿಗೆ ಐವತ್ತಕ್ಕಿಂತಲೂ ಹೆಚ್ಚು ವಯಸ್ಸಾಗಿದ್ದ ಹಾಗೆ ತೋರುತ್ತಿದ್ದಿತು. ಐದು, ಐದೂವರೆ ಅಡಿ ಉದ್ದವಾದ ದೇಹ. ತುಂಬಿ ಬಳೆದ ಕಾಯವಾದರೂ ಕೊಂಚ ಕೃಶವಾಗಿ ತೋರುತ್ತಿದ್ದಿತು. ಮೊಳಕಾಲು ಗಳ ವರೆಗೆ ಬರುವಂಥ ಕಾವಿ ಬಟ್ಟೆಯೊಂದನ್ನು ಸುತ್ತಿಕೊಂಡು ಸ್ವಾಮಿಗಳು ತಲೆಗೆ ಕಾವಿ ಬಟ್ಟೆಯೊಂದನ್ನು ಕಟ್ಟಿಕೊಂಡಿದ್ದರು. ಸೊಂಟದ ವರೆಗಿನ ಭಾಗವೆಲ್ಲ ಬರಿಯದಾಗಿಯೆ ಇತ್ತು. ಕೊರಳಲ್ಲೊಂದು ರುದ್ರಾಕ್ಷಿಯ ಸರ. ಒಂದು ಸಣ್ಣ ಲಿಂಗ. ಮುಖದ ಮೇಲೆ ನರೆತ ಗಡ್ಡ ಮಿಾಸೆ. ಅಷ್ಟು ವಯಸ್ಸಾಗಿದ್ದರೂ ಅವರ ಮುಖದ ಮೇಲೆ ವೃದ್ಧಾಪ್ಯದ ಗೆರೆ ಮೂಡಿ ರಲಿಲ್ಲ. ಹಸುಳೆಯಂಥ ಹಾಲುಗಲ್ಲಗಳ ಮೇಲೆ ಸಾತ್ವಿಕ ತೇಜಸ್ಸು ಸುಳಿ ದಿತ್ತು. ತುಟಿಗಳಲ್ಲಿ ಪ್ರೇಮವೇ ತುಂಬಿ ಬಂದಂತೆ ತೋರುತ್ತಿತ್ತು. ಕಣ್ಣು ಗಳಲ್ಲಿ ಶಾಂತಿ ನೆಲಸಿದಂತಿತ್ತು.

"ತಮ್ಮಂಥವರು ಇಂಥ ಕೆಲಸ ಮಾಡಬೇಕೇ ಬುದ್ಧೀ ?" ಎಂದು ಗೌಡರು ಕಳವಳದಿಂದ ಕೇಳಿದರು.

ಕೆಸರನ್ನು ಎತ್ತಿ ಬುಟ್ಟಿಗೆ ತುಂಬುವ ಕಾರ್ಯವನ್ನು ಹಾಗೆಯೆ ಮುಂದುವರಿಸುತ್ತ ಸ್ವಾಮಿಗಳೆಂದರು :

"ನಮ್ಮಂಥವರೇ ಅಗತ್ಯವಾಗಿ ಮಾಡಬೇಕಾದ ಕೆಲಸವಪ್ಪ ಇದು. ಇಷ್ಟು ದಿನಗಳ ವರೆಗೆ ಈ ಜನರನ್ನು ಮರೆತು ಮಾಡಿದ ತಪ್ಪನ್ನು ಈಗ ತಿದ್ದಿಕೊಳ್ಳಬೇಕಾಗಿದೆ."

"ತಪ್ಪು ? ಎಂಥ ತಪ್ಪು ಬುದ್ಧೀ ?"

"ಮಠವೆಂಬ ಆ ಸೆರೆಮನೆಯಲ್ಲಿ ನನಗೆ ನಾನೇ ಕೈದಿಯಾಗಿ ವ್ಯರ್ಥ ಕಾಲಹರಣ ಮಾಡುತ್ತಿದ್ದೆನಲ್ಲ. ಹೊರಗಿನ ಈ ಜನ ನನ್ನನ್ನು ಕರೆಯು ತ್ತಿತ್ತು. ಇವರಿಗೆಲ್ಲ ನನ್ನ ಸೇವೆ ಸಲ್ಲಬೇಕಾಗಿತ್ತು. ಎಲ್ಲವನ್ನೂ ಮರೆತು ಅಲ್ಲಿ ಕುಳಿತಿದ್ದೆ. ಅದು ತಪ್ಪಲ್ಲವೆ ?"

"ಸ್ವಾಮಿಗಳಾದ ಬಳಿಕ ಮಠದಲ್ಲಿದ್ದು ಭಕ್ತರ ಉದ್ಧಾರ ಮಾಡ ಬೇಕಾದುದು ಅಗತ್ಯವಲ್ಲವೇ ಬುದ್ಧೀ ?"

"ಭಕ್ತರ ಉದ್ಧಾರ...." ಎಂದು ನುಡಿದು ಸ್ವಾಮಿಗಳು ಮುಗುಳ್ನಗೆ ನಕ್ಕರು. "ಭಕ್ತರು ! ನಿಜವಾಗಿಯೂ ನನಗೆ ನಗೆ ಬರುತ್ತದೆ ಗೌಡರೆ. ಭಕ್ತಿ ಅಂದರೆ ಯಾರಲ್ಲಿ ಭಕ್ತಿ ? ಇಂದಿನ ಕಾಲಮಾನದಲ್ಲಿ ಭಕ್ತಿ ಎಂಬ ಶಬ್ದಕ್ಕೆ ಏನಾದರೂ ಅರ್ಥವುಳಿದಿದೆಯೆ ? ಇಂದಿನದು ಯಾಂತ್ರಿಕ ಯುಗ. ಬಂಡ ವಾಳಗಾರಿಕೆಯ ಯುಗ. ಹಣ ಗಳಿಸುವುದೊಂದೇ ಮನುಷ್ಯನ ಜೀವನ ಧ್ಯೇಯವಾಗಿದೆ. ಹೇಗಾದರೂ ಮಾಡಿ ಹಣ ಗಳಿಸಿದ್ದರಾಯ್ತು. ಆತನ ಬುದ್ಧಿ, ವಿಚಾರ, ಮನಸ್ಸು, ಹೃದಯ ಎಲ್ಲವೂ ಅದೊಂದೇ ಒಂದು ಗುರಿ ಯತ್ತ ಸಾಗಿವೆ. ಭಕ್ತಿ....ಹಣದಲ್ಲಿ ಭಕ್ತಿ ಅಂತ ಹೇಳಬಹುದು ಬೇಕಾದರೆ. ದೇವರು ಗೀವರು ಯಾವುದನ್ನೂ ಯಾರೂ ನಂಬುವುದಿಲ್ಲ ಇಂದು. ಎಲ್ಲವೂ ತೋರಿಕೆಯ ಆಟ. ದೇವಾಲಯ, ಮಠ, ಪೂಜೆ ಪುನಸ್ಕಾರ, ಜಾತ್ರೆ,— ಎಲ್ಲವೂ ತೋರಿಕೆಗಾಗಿ. ಹಿಂದಿನಿಂದ ನಡೆದು ಬಂದ ಸಾಂಪ್ರದಾಯವನ್ನು ಬಿಡಲಾರದ್ದಕ್ಕಾಗಿ ಜನ ಇದೆಲ್ಲವನ್ನೂ ಮುಂದುವರಿಸಿಕೊಂಡು ಬಂದಿದಾರೆ. ಯಾವುದರಲ್ಲೂ ಅರ್ಥವಿಲ್ಲ. ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯಾ, ವಿಚಾರಿಸಿದೆಡೆ ಏನೂ ಹುರುಳಿಲ್ಲವಯ್ಯಾ. ನಾನು ಭಕ್ತನಲ್ಲಯ್ಯ, ನಾನು ವೇಷಧಾರಿಯಯ್ಯ....ಭಕ್ತರೆಂಬವರು ಈ ಧನಯುಗದಲ್ಲಿ ಇಲ್ಲವೆ ಇಲ್ಲ ಗೌಡರೆ. ಎಲ್ಲರೂ ವೇಷಧಾರಿಗಳು. ವೇಷಧಾರಿಗಳಲ್ಲವಾದರೆ ಅಜ್ಞಾನಿಗಳು. ಅಜ್ಞಾನಿಗಳ ಅಜ್ಞಾನವನ್ನು ತೊಡೆದುಹಾಕುವುದೇ ನಮ್ಮ ನಿಮ್ಮ ಕೆಲಸವ ಲ್ಲವೆ ? ಸ್ವಾಮಿಗಳೆಂದು ಹೇಳಿಕೊಳ್ಳುವವರ ಮುಖ್ಯ ಕೆಲಸ ಅದೇ ಅಲ್ಲವೆ ?"

"ತಾವು ತಿಳಿದವರು ಬುದ್ಧೀ. ತಮಗೆ ಎದುರು ಆಡುವ ಯೋಗ್ಯತೆ ನಮಗೆಲ್ಲಿಯದು ?"

"ಈ ಪ್ರಪಂಚದಲ್ಲಿ ಯಾರೂ ತಿಳಿದವರಿಲ್ಲ ಗೌಡರೇ. ತಿಳಿದವರು ಎಂದುಕೊಳ್ಳುವ ನಾವೂ ಸಹ ತಿಳಿದಿರುವುದು ಅರ್ಧಮರ್ಧ. ಪೂರಾ ತಿಳಿದ ವರು ಯಾರೂ ಇಲ್ಲ. ಅಂಥ ತಿಳಿವನ್ನು ತಂದುಕೊಳ್ಳಲೆಂದೇ ನಾನು ಹಳ್ಳಿ ಗಳಿಗೆ ಹೊರಟಿರುವುದು."

"ಇರಬಹುದು ಬುದ್ಧೀ. ಆದರೆ ತಮ್ಮ ಮಠವನ್ನು ಬಿಟ್ಟು ಇತ್ತ ಹೊರಟು ಬಂದರೆ ಅಲ್ಲಿ ನಾವೆಲ್ಲ ಯಾರ ಉಪದೇಶದಿಂದ ಮುಂದುವರಿಯಬೇಕು ? ನಮ್ಮನ್ನೆಲ್ಲ ಅನಾಥರನ್ನಾಗಿ ಮಾಡಿ ಹೀಗೆ ಹೊರಟು ಬರುವುದು ಒಳ್ಳೆಯದೇ ?"

"ನೀವು ಅನಾಥರೆಂದು ನಾನೆಂದೂ ತಿಳಿದಿಲ್ಲ. ನೀವು ಓದಿದವರು. ತಕ್ಕಮಟ್ಟಿಗೆ ತಿಳಿದುಕೊಂಡವರು. ಯಾರ ಉಪದೇಶದ ಅಗತ್ಯವೂ ನಿಮಗಿಲ್ಲ. ಆದರೆ ಈ ಜನ....ಹಳ್ಳಿಯ ಮೂಕ ದರಿದ್ರ ಜನ....ಇವರ ಕಷ್ಟ ದುಃಖ ಯಾರಿಗೂ ಬೇಡವಾಗಿದೆ. ಕಾವಿ ತೊಟ್ಟು ವಿರಕ್ತರಾದವರು ಮುಖ್ಯವಾಗಿ ಮಾಡಬೇಕಾದುದೆಂದರೆ ಈ ಜನರ ಸೇವೆ. ಬಡ ರೈತರ ಸೇವೆ...." ಎಂದು ನುಡಿದು ಸ್ವಾಮಿಗಳು ಸಲಿಕೆಯನ್ನು ಕೆಳಗಿಟ್ಟು—"ಈಗ ಇಲ್ಲಿಗೇ ಸಾಕುಮಾಡೋಣ ಮರಿಯಣ್ಣ. ನಾಳೆ ಮತ್ತೆ ಕಟ್ಟೋಣ," ಎಂದು ಹೇಳಿ ಗೌಡರೊಂದಿಗೆ ಹಳ್ಳದ ಕಡೆಗೆ ಹೊರಟರು.

ಕೈಕಾಲು ಮುಖ ತೊಳೆದುಕೊಂಡು ಎಲ್ಲರೂ ಗುಡಿಗೆ ಬರುವುದರೊಳಗಾಗಿ ಕಲ್ಲಪ್ಪ ರೊಟ್ಟಿ ಪಲ್ಯ ಅಂಬಲಿ ಸಿದ್ಧಗೊಳಿಸಿ ತಂದಿದ್ದ. ಎಲ್ಲರೊಡನೆ ಸ್ವಾಮಿಗಳೂ ಊಟಕ್ಕೆ ಕುಳಿತರು.

"ಏನು ಬಂದಿರಿ ಗೌಡರೆ ? ಏನು ವಿಶೇಷ ?" ಎಂದು ಸ್ವಾಮಿಗಳು ಮಾತಿಗಾರಂಭಿಸಿದರು.

ಗೌಡರು ಆ ಪ್ರಶ್ನೆಯನ್ನು ನಿರೀಕ್ಷಿಸಿಕೊಂಡೇ ಇದ್ದರು. ಅದಕ್ಕೆ ಸರಿಯಾದ ಉತ್ತರವನ್ನೂ ಮೊದಲೇ ಸಿದ್ಧಗೊಳಿಸಿಕೊಂಡಿದ್ದರು. ಸ್ವಾಮಿಗಳ ಸ್ವಭಾವ ಗೌಡರಿಗೆ ಅಪರಿಚಿತವಾದುದೇನೂ ಆಗಿರಲಿಲ್ಲ. ಪಟ್ಟಣಗಳಿಗಿಂತ ಅವರಿಗೆ ಹಳ್ಳಿಗಳ ಕಡೆಗೆ ಒಲವು ಹೆಚ್ಚು, ಹಳ್ಳಿಯ ರೈತರ ಸೇವೆಯಲ್ಲೇ ಅವರಿಗೆ ಅತ್ಯಂತ ಆಸಕ್ತಿ—ಎಂಬುದೆಲ್ಲ ಗೌಡರಿಗೆ ತಿಳಿದ ವಿಷಯವೇ. ಹಳ್ಳಿಯನ್ನು ಬಿಡಿಸಿ ಅವರನ್ನು ಮತ್ತೆ ನಗರಕ್ಕೆ ಕರೆದೊಯ್ಯಬೇಕಾದರೆ ಯಾವುದಾದರೊಂದು ಉಪಾಯ ಯೋಚಿಸದೆ ಗತ್ಯಂತರವಿಲ್ಲ. ಸ್ವಾಮಿಗಳನ್ನಂತೂ ಊರಿಗೆ ಕರೆದೊಯ್ಯಲೇಬೇಕು, ಕರೆದೊಯ್ದು ಮತ್ತೆ ಮಠದ ಪೀಠದಲ್ಲಿ ಕುಳ್ಳಿರಿಸಲೇಬೇಕು, ಅವರನ್ನು ಕರೆದು ತಂದು ಅಧಿಕಾರಕ್ಕೇರಿಸದಿದ್ದರೆ ತನ್ನ ಹೆಸರು ಚೆನ್ನಪ್ಪಗೌಡನಲ್ಲ—ಎಂದು ಪಣ ತೊಟ್ಟು [illegible]

ದಾಗಿದೆ. ಆ ಪಣವನ್ನು ಪೂರಯಿಸಲೇಬೇಕು. "ಮಠಕ್ಕೆ ನಿಜವಾಗಿಯೂ ಅಧಿಕಾರಿಗಳಾದವರು ತಾವು. ಆ ಅಯೋಗ್ಯ ಸಿದ್ಧವೀರಸ್ವಾಮಿಯನ್ನು ಮಲ್ಲಪ್ಪಸೆಟ್ಟ ತಂದು ಪೀಠಕ್ಕೇರಿಸಿರುವುದು ಅನ್ಯಾಯ. ತಾವು ಇಷ್ಟು ಸುಲಭವಾಗಿ ಅಧಿಕಾರವನ್ನು ಬಿಟ್ಟುಕೊಟ್ಟು ಈ ರೀತಿ ಹಳ್ಳಿಗಳಲ್ಲಿ ಕೊಳೆಯುವುದು ಸರಿಯಲ್ಲ," ಎಂಬುದಾಗಿ ಹೇಳಿದಲ್ಲಿ ಸ್ವಾಮಿಗಳು ಖಂಡಿತ ಬರಲಾರರು. "ಅಧಿಕಾರ ? ಯಾರ ಮೇಲೆ ಯಾರ ಅಧಿಕಾರ ಗೌಡರೆ ? ಎಲ್ಲವೂ ಸುಳ್ಳು. ನಾನು ಸ್ವಾಮಿಯಾಗಿದ್ದರೇನು, ಸಿದ್ಧವೀರಸ್ವಾಮಿಗಳಾಗಿದ್ದರೇನು ? ಎಲ್ಲವೂ ಒಂದೇ ಆ ಪಟ್ಟಣದಲ್ಲಿರಲು ನನಗೂ ಮನಸ್ಸಿಲ್ಲ. ಯಾರಿಗಾದರೂ ಅಧಿಕಾರವನ್ನೊಪ್ಪಿಸಿ ಹಳ್ಳಿಗಳ ಕಡೆಗೆ ಹೊರಡೋಣವೆಂದೇ ನಾನು ಲೆಕ್ಕ ಹಾಕುತ್ತಿದ್ದೆ. ಅದಕ್ಕೆ ಸರಿಯಾಗಿ ಸಿದ್ಧವೀರಸ್ವಾಮಿಗಳೂ ಸಿಕ್ಕಿದರು. ಬಂದು ಅಧಿಕಾರ ವಹಿಸಿಕೊಂಡರು. ಒಳ್ಳೆಯದೆ ಆಯಿತಲ್ಲ. ಸುಮ್ಮನೆ ನನ್ನನ್ನು ಏಕೆ ಬಲವಂತಪಡಿಸುತ್ತೀರಿ ? ಅಲ್ಲಿಗೆ ಮತ್ತೆ ಬರಲು ನನಗೆ ಮನಸ್ಸಿಲ್ಲ," ಎಂದು ಸ್ಪಷ್ಟವಾಗಿ ಹೇಳಿಬಿಡಬಹುದು. ಅಂತೆಯೆ, ಅವರನ್ನು ಕರೆದೊಯ್ಯಬೇಕಾದರೆ ಸುಳ್ಳು ಹೇಳದೆ ವಿಧಿಯಿರಲಿಲ್ಲ. ಗೌಡರ ತಾಯಿ, ಮುದುಕಿ ಕಾಶವ್ವನಿಗೆ ಸ್ವಾಮಿಗಳ ಬಗೆಗೆ ತುಂಬ ಭಕ್ತಿ. ಸ್ವಾಮಿಗಳಿಗೂ ಆಕೆಯ ಬಗೆಗೆ ಆದರವಿದ್ದಿತು. ತಾಯಿಗೆ ತೀವ್ರ ಕಾಯಿಲೆಯಾಗಿರುವುದಾಗಿಯೂ, ಕಣ್ಣು ಮುಚ್ಚುವುದರೊಳಗಾಗಿ ಸ್ವಾಮಿಗಳನ್ನೊಮ್ಮೆ ನೋಡಬಯಸುವುದಾಗಿಯೂ ಹೇಳಿದಲ್ಲಿ ಅವರು ಬರಲು ಸಿದ್ಧರಾಗಬಹುದೆಂದು ಗೌಡರಿಗೆನ್ನಿಸಿದ್ದಿತು.

ಮುದುಕಿಯ ಅಂತಿಮ ಅಪೇಕ್ಷೆಯ ವಿಚಾರ ತಿಳಿದಾಗ ಸ್ವಾಮಿಗಳು ಯೋಚನೆಗೊಳಗಾದರು. ಹಳ್ಳಿಯನ್ನು ಬಿಟ್ಟು ನಗರಕ್ಕೆ ಹೋಗಲು ಅವರಿಗೆ ಕೊಂಚವೂ ಇಷ್ಟವಿರಲಿಲ್ಲವಾದರೂ ತಮ್ಮನ್ನು ಕಾಣಲೆಂದೇ ಪ್ರಾಣ ಹಿಡಿದುಕೊಂಡಿದ್ದ ಮುಗ್ಧ ಜೀವವೊಂದನ್ನು ನಿರಾಶೆಗೊಳಿಸಲೂ ಅವರಿಗೆ ಮನಸ್ಸೊಪ್ಪದಾಯಿತು.

"ಇದೆಂಥ ಹುಚ್ಚು ಬಯಕೆ ಗೌಡರೆ. ಎಲ್ಲವೂ ಮಾಯೆಯೆಂಬುದನ್ನರಿತಿದ್ದರೂ ಮತ್ತೆ ಆ ಮಾಯೆಗೇ ಕಟ್ಟುಬೀಳುವುದೇ ?"

"ಜೀವವಿರುವ ತನಕ ಮಾಯೆಯ ಆಟ ಎಲ್ಲಿ ನಿಲ್ಲುತ್ತದೆ ಬುದ್ಧಿ ?"

ತಮ್ಮಂಥವರೇನೊ ಮಾಯೆಯನ್ನು ಗೆದ್ದು ಮುಕ್ತರಾಗಬಲ್ಲಿರಿ. ನಮ್ಮಂಥ ಸಾಮಾನ್ಯರಿಗೆಲ್ಲ ಅದು ಹೇಗೆ ಸಾಧ್ಯ ?"

"ನಾನೇನು ಅಸಾಮಾನ್ಯ ವ್ಯಕ್ತಿಯೆಂದು ತಿಳಿದಿರುವಿರಾ ಗೌಡರೆ ? ಮಾಯೆಯ ಬಂಧನದಿಂದ ದೂರವಾಗುವುದು ನನ್ನಿಂದಲೂ ಸಾಧ್ಯವಿಲ್ಲ. ಯಾರಿಂದಲೂ ಸಾಧ್ಯವಿಲ್ಲವೊ ಏನೊ. ಮಾಯೆ ಎಂದರೆ ಅದೃಶ್ಯವಾದ ವಿಲಕ್ಷಣವಾದ ಅಮಾನುಷವಾದ ವಸ್ತುವೇನೂ ಅಲ್ಲ. ಈ ಪ್ರಪಂಚದಲ್ಲಿ ಜೀವಿಸಿರುವವರಿಗೆಲ್ಲ ಅದು ತೀರ ಸ್ವಾಭಾವಿಕ. ಹುಟ್ಟಿದಂದಿನಿಂದ ಸಾಯುವ ವರೆಗೆ ಮನುಷ್ಯನ ಸಕಲ ಕರ್ಮಗಳನ್ನೂ ಸಾಗಿಸುವುದೂ ಈ ಮಾಯೆಯೆ. ಮಾಯೆಯೆಂದರೆ ಪ್ರೇಮ. ಮಾಯೆಯೆಂದರೆ ಮೋಹ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದೇ ಮಾಯೆಯಾದರೆ ಅದು ಉದಾತ್ತವಾದುದೇ ಅಲ್ಲವೆ ?"

ಹಳ್ಳಿಯನ್ನು ಬಿಟ್ಟು ಹೊರಡಲು ಮನಸ್ಸಿರಲಿಲ್ಲವಾದರೂ ಪ್ರಭುಸ್ವಾಮಿಗಳು ಹೊರಡಲೇಬೇಕಾಗಿ ಬಂದಿತು. ಅವರು ಹೊರಟು ನಿಂತಾಗ ಹಳ್ಳಿಗರೆಲ್ಲರ ಕಣ್ಣುಗಳಲ್ಲಿ ನೀರೂರಿತ್ತು. ಹರಿಜನಕೇರಿಯ ಆ ಮುದುಕನಂತೂ ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಚಿಕ್ಕ ಮಕ್ಕಳಂತೆ ಅತ್ತುಬಿಟ್ಟ.

"ನಮ್ಮ ಪಾಲಿಗೆ ದೇವರ ಹಾಂಗ ಬಂದಿದ್ರಿ ಬುದ್ಧೀ. ನಾವೇನು ಪಾಪ ಮಾಡಿದ್ದೆವೊ, ಇಷ್ಟು ಬೇಗ ಹೊರಟುಬಿಟ್ಟರಿ."

"ಇಲ್ಲ ಮರಿಯಪ್ಪ. ಮತ್ತೆ ಬರುತ್ತೇನೆ. ನೀನು ದುಃಖ ಮಾಡಬೇಡ. ಬಂದ ಬಳಿಕ ನಿನ್ನ ಮನೆಯನ್ನು ಪೂರ್ಣವಾಗಿ ಕಟ್ಟುವಾ."

"ನೀವು ಬರುವುದರೊಳಗಾಗಿ ಅವನ ಮನೆ ಮುಗಿಸಿಬಿಟ್ಟಿರುತ್ತೇವೆ ದೇವ್ರೂ," ಎಂದು ರೈತರು ಉತ್ಸಾಹದಿಂದ ನುಡಿದರು.

"ಹಾಗೇ ಮಾಡಿರಿ. ಇದೊಂದೇ ಒಂದು ಕೆಲಸವನ್ನು ನೀವು ಮುಗಿಸಿದರೂ ಶಿವನಿಗೆ ಸಂತೋಷವಾಗುವದು. ಕುಲ ಜಾತಿಗಳನ್ನೆಲ್ಲ ತೊಡೆದು ಹಾಕಿ ಎಲ್ಲ ಮಾನವರೂ ಸೋದರರಂತೆ ಇರುವ ಸಮಾಜವನ್ನು ನಿರ್ಮಿಸುವದೇ ಬಸವಣ್ಣನವರ ಆಶಯವಾಗಿತ್ತು. ಅವರ ಮತದವರೆಂದು ಹೇಳಿಕೊಳ್ಳುವ ನಾವು ಅವರ ಉದಾತ್ತ ತತ್ವಗಳನ್ನು ಮರೆತು ಪಶುಗಳಂತೆ ವರ್ತಿ

ಸುತ್ತಿದ್ದೇವೆ. ಹೊಲೆಯರನ್ನು ಊರ ಹೊರಗೇ ಇರಿಸಿ, ಅವರ ಕಷ್ಟ ದುಃಖ ತಿಳಿದುಕೊಂಡು ಅವುಗಳನ್ನು ದೂರಗೊಳಿಸುವ ಗೊಡವೆಗೆ ಹೋಗದೆ ನಮ್ಮ ಮತದ ದಿವ್ಯ ಸಂದೇಶವನ್ನು ಗಾಳಿಗೆ ತೂರಿದ್ದೇವೆ. ಹೊಲಗೇರಿಯೆಂಬುದು ಮಾಯವಾಗಿ ಕುಲಗಳೆಲ್ಲ ಸಮಾನವಾದಾಗಲೇ ನಿಜವಾದ ವೀರಶೈವ ಧರ್ಮ ನೆಲಸೀತು. ಅಂಥ ಕಾಲ ಬರಲು ಪ್ರಯತ್ನಿಸುವುದೇ ನಮ್ಮ ನಿಮ್ಮೆಲ್ಲರ ಕರ್ತವ್ಯ."

"ಬೇಗ ಬರ್ರಿ ಬುದ್ಧೀ," ಎಂದು ದೀನವಾಣಿಯಿಂದ ಕೇಳಿಕೊಂಡ ಕಲ್ಲಪ್ಪ.

ಅವರು ಹೊರಟುನಿಂತಾಗ ಊರಿಗೆ ಊರೆಲ್ಲವೂ ಅವರನ್ನು ಕಳುಹಿಸಲು ಹಳ್ಳದ ವರೆಗೂ ಬಂದಿತ್ತು. ಎಷ್ಟೋ ಜನರ ಕತ್ತು ಬಿಗಿದು ದುಃಖ ವುಕ್ಕಿಬರುವುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರೆಲ್ಲರನ್ನು ಅಲ್ಲಿಯೇ ಬೀಳ್ಕೊಂಡು ಸ್ವಾಮಿಗಳು ಗೌಡರೊಂದಿಗೆ ಮುಂದೆ ಸಾಗಿದರು. ಅವರಿಗೆ ತಿಳಿಯದಂತೆಯೆ ಅವರ ಕಣ್ಣಂಚಿನಲ್ಲೂ ನೀರು ತುಳುಕುತ್ತಿತ್ತು.

[೧೪]

ಶ್ರಾವಣಮಾಸದ ಕೊನೆಯವಾರ. ಮಠದ ವಾರ್ಷಿಕ ಜಾತ್ರೆ ಗಾರಂಭವಾಗಿದೆ. ಮೂರು ದಿನಗಳ ಕಾಲ ಹಗಲಿರುಳೂ ಉತ್ಸವ ನಡೆಯುತ್ತದೆ. ದೂರ ದೂರದ ಊರುಗಳಿಂದ ಸ್ತ್ರೀಪುರುಷರು ನೆರೆಯುತ್ತಾರೆ. ಹಳ್ಳಿಗಳಿಂದ ರೈತಪರಿವಾರಗಳು ಆಗಮಿಸುತ್ತವೆ. ಮೂರು ಹಗಲು ಮೂರು ಇರುಳು ಊರಲ್ಲೆಲ್ಲ ಗದ್ದಲವೋ ಗದ್ದಲ. ಯಾರೊಬ್ಬರ ಮನೆಯಲ್ಲೂ ತೆರವಾದ ಸ್ಥಳವಿರುವುದಿಲ್ಲ. ಆಪ್ತೇಷ್ಟರಿಂದ ಮನೆಗಳು ತುಂಬಿರುತ್ತವೆ. ಹೊರಗಿನ ಪಡಸಾಲೆಗಳನ್ನೂ, ಕಟ್ಟೆಗಳನ್ನೂ ಹಳ್ಳಿಗರು ಆಕ್ರಮಿಸಿಕೊಂಡಿರುತ್ತಾರೆ. ಮೂರು ದಿನಗಳ ಕಾಲ ಪ್ರತಿಯೊಬ್ಬರ ಮನೆಯಲ್ಲೂ ಸಿಹಿಯಡುಗೆ ಸಿದ್ಧವಾಗುತ್ತದೆ. ಹೋಳಿಗೆ, ಖೀರು, ಕರಜೀಕಾಯಿ, ಹುಗ್ಗಿಗಳ ವಾಸನೆಯನ್ನು ಹೊತ್ತು ಗಾಳಿ ಬೀಸುತ್ತಿರುತ್ತದೆ.

ಉತ್ಸವದ ಮೊದಲ ದಿನದಿಂದ ಮೊದಲು ಮಾಡಿಕೊಂಡು ಕೊನೆಯ ದಿನದ ವರೆಗೆ ಬಗೆಬಗೆಯ ಆಟಪಾಟ ಜರುಗುತ್ತವೆ. ಪ್ರಸಿದ್ಧ ಮಲ್ಲರ ಕುಸ್ತಿ

ಕಾಳಗಗಳು, ಬಯಲಾಟ ದೊಡ್ಡಾಟಗಳು, ಲಾವಣಿ ಗೀಗೀ ಪದಗಳು, ಕೀರ್ತನ ಪ್ರವಚನಗಳು, ಶಾಹೀರ ಗಾನಗಳು. ಮೂರು ರಾತ್ರಿ ಯಾರೂ ಕಣ್ಣಿಗೆ ಕಣ್ಣು ಹಚ್ಚುವುದಿಲ್ಲ. ಎಲ್ಲೆಲ್ಲೂ ಉತ್ಸವದ ಉನ್ಮಾದ. ಸಂತಸದ ವಾತಾವರಣ.

ಮಠದ ಹೆಬ್ಬಾಗಿಲಿನಿಂದ ಮೊದಲು ಮಾಡಿಕೊಂಡು ಒಂದೆರಡು ಫರ್ಲಾಂಗುಗಳ ವರೆಗೆ ಅಂಗಡಿಗಳ ಸಾಲು ಕಾಣಿಸುತ್ತವೆ. ಚುರಮುರಿ, ಪುಠಾಣಿ, ಬೆಂಡುಬತ್ತಾಸುಗಳ ಅಂಗಡಿಗಳೇ ಹೆಚ್ಚು. 'ವೀರಶೈವ ಲಿಂಗಾಯತರ ಚಾ ಕಾಫಿ ದುಕಾನ'ಗಳಿಗೂ ಲೆಕ್ಕವಿಲ್ಲ. "ಸೋಡಾವಾಟರ್" ಅಂಗಡಿಗಳೂ ಅಲ್ಲಲ್ಲಿ ಇವೆ. ಮೂರು ನಾಲ್ಕು 'ಫೋಟೋ ಸ್ಟುಡಿಯೋ'ಗಳೂ ಡೇರೆ ಹೊಡೆದು ನಿಂತಿವೆ. ಅವುಗಳ ಎದುರಿಗೆ ವಿಚಿತ್ರ ಮುಖಾಕೃತಿಯ ಬಗೆಬಗೆಯ ಫೋಟೋಗಳ ಪ್ರದರ್ಶನ. ಬಳೆಯಂಗಡಿ, ಗೊಂಬೆಯಂಗಡಿ, ಮಣಿಗಾರರ ಅಂಗಡಿಗಳೂ ಅಲ್ಲಲ್ಲಿ ತಳ ಊರಿವೆ. ಅಂಗಡಿಗಳ ನಡುವಿನ ಕಿರುದಾರಿಯಲ್ಲಿ ಗಂಡು, ಹೆಣ್ಣು, ಕೂಸು ಇರುವೆಗಳಂತೆ ಓಡಿಯಾಡುತ್ತವೆ.

ಮಠದ ಅಂಗಳದಲ್ಲಿ ಮೂರು ಮೂಲೆಗಳಲ್ಲಿ ಅಟ್ಟಣೆಯನ್ನು ಕಟ್ಟಿ ಬಯಲಾಟ ಪ್ರದರ್ಶಿಸಲು ಸ್ಥಳವನ್ನಣಿಗೊಳಿಸಲಾಗಿದೆ. ಏಕಕಾಲಕ್ಕೆ ಮೂರು ಆಟಗಳ ಪ್ರದರ್ಶನ! ಆಡುವವರಿಗೂ ಹುರುಪು, ನೋಡುವವರಿಗೂ ಹುರುಪು.

ರಾತ್ರಿ ಎಂಟುಗಂಟೆಯಾಗಿರಬಹುದು. ಬಸಪ್ಪಸೆಟ್ಟರ ಮನೆಯುವರೆಲ್ಲರೂ ಮಠಕ್ಕೆ ಬಂದಿದ್ದಾರೆ. ನಾಗಮ್ಮ, ರುದ್ರವ್ವಜ್ಜಿ, ಸರಸು, ಗೌರಿ. ಸೆಟ್ಟರು ಮಾತ್ರ ಅವರ ಜೊತೆಗಿಲ್ಲ. ಅಂಗಡಿಯಲ್ಲಿನ ಕೆಲಸ ಮುಗಿಯುವವರೆಗೆ ಅವರು ಜಾತ್ರೆಯತ್ತ ಬರುವಂತಿಲ್ಲ. ನಾಗಮ್ಮನವರು ಮಕ್ಕಳೊಂದಿಗೆ ಬಂದಿದ್ದಾರೆ. ರಾತ್ರಿಯೆಲ್ಲ ಅಲ್ಲಿಯೆ ಇದ್ದು ಆಟಗಳನ್ನು ನೋಡಿಕೊಂಡು ಬೆಳಗಿನ ಜಾವದಲ್ಲಿ ಮನೆಗೆ ಹೋಗಬೇಕೆಂದು ಅವರ ವಿಚಾರ.

ಮಠದ ವಿಶಾಲವಾದ ಅಂಗಳದಲ್ಲಿ ಎಂಟು ಹತ್ತು ಗ್ಯಾಸ್‌ದೀಪ ಬೆಳಗುತ್ತಿವೆ. ಮಠದ ಕಟ್ಟೆಗೆ ಹೊಂದಿಕೊಂಡು ಸ್ವಾಮಿಗಳ ಕೊಟಡಿಗಳು. ಹೊರಗಿನ ಕೊಟಡಿಯಲ್ಲಿ ನಾಗಮ್ಮ ಮಕ್ಕಳೊಂದಿಗೆ ಕುಳಿತಿದ್ದಾಳೆ. ಅಲ್ಲಿ ಅವರಿಗಾಗಿ ಜಮುಖಾನಾ ಹಾಸಿ ಸ್ಥಳವನ್ನಣಿಗೊಳಿಸಲಾಗಿದೆ. ಅವರ ಹೊರ

ಗಿರುವ ಕಟ್ಟೆಯ ಮೇಲೆ ಗುಡಾರಗಳನ್ನು ಹಾಸಲಾಗಿದೆ. ಅಲ್ಲಿ ಅವರು ಆಟ ನೋಡಲಿದ್ದಾರೆ.

ಒಳಗಿನ ಕೊಟಡಿಯೇ ಸ್ವಾಮಿಗಳು ಮಲಗುವ ಕೊಟಡಿ. ಅದರ ಗೋಡೆಗಳಿಗೆಲ್ಲ ನೀಲವರ್ಣ ಬಳಿದು ಅಲ್ಲಲ್ಲಿ ಬಳ್ಳಿಗಳನ್ನೂ ಹೂವುಗಳನ್ನೂ ಚಿತ್ರಿಸಲಾಗಿದೆ. ಕಿಟಕಿ ಬಾಗಿಲುಗಳಿಗೂ ನೀಲವರ್ಣ. ಕಿಟಕಿಯ ಹತ್ತಿರ ಕರೀಮರದ ಭಾರಿ ಮಂಚವೊಂದು ಸೊಳ್ಳೆಯ ಪರದೆಯನ್ನು ಹೊತ್ತು ನಿಂತಿದೆ. ಮಂಚದ ಮೇಲೆ ದಪ್ಪನೆಯ ಹಾಸಿಗೆ. ಅದರ ಮೇಲೆ ದಿಂಬುಗಳು. ದಿಂಬುಗಳಿಗೊರಗಿ ಸಿದ್ಧವೀರಸ್ವಾಮಿ ಕುಳಿತಿದ್ದಾರೆ. ಅವರ ತೊಡೆಗಳ ಮೇಲೂ ಒಂದೆರಡು ದುಂಡಗಿನ ದಿಂಬುಗಳಿವೆ. ಆಗಾಗ ಅವುಗಳ ಮೇಲೆ ತೋಳು ಗಳನ್ನೂರಿ ಕುಳಿತವರ ಕಡೆಗೆ ದೃಷ್ಟಿ ತಿರುಗಿಸುತ್ತಾರೆ.

ಮಂಚದ ಕೆಳಗಡೆ ನೆಲದ ಮೇಲೆ ಹಾಸಿದ ಜಮಖಾನದ ಮೇಲೆ ಮಲ್ಲಪ್ಪಸೆಟ್ಟರು, ಗಂಗಾಧರಶಾಸ್ತ್ರಿ, ಗದಿಗೆಮ್ಮ ಕುಳಿತಿದ್ದಾರೆ. ಅವರಿಗೆದು ರಾಗಿ ಕೊಂಚ ದೂರದಲ್ಲಿ ಮಧ್ಯವಯಸ್ಸಿನ ವ್ಯಕ್ತಿಯೊಂದು ದೊಡ್ಡ ವೀಣೆ ಯೊಂದನ್ನು ಹಿಡಿದು ಬಾರಿಸುತ್ತಲಿದೆ. ವೀಣೆಯ ತಂತಿಗಳ ಮೇಲಾಡುತ್ತ ಆತನ ಎಡಗೈ ಮೇಲಕ್ಕೂ ಕೆಳಕ್ಕೂ ಧಾವಿಸುತ್ತಿದೆ.

ಬಾರಿಸಿ ಮುಗಿಸಿ ಆತ ಸ್ವಾಮಿಗಳಿಗೆ ವಂದಿಸಿ ಹೊರಟುಹೋದ.

"ಚೆನ್ನಾಗಿ ಬಾರಿಸಿದ, ಅಲ್ಲವೆ?" ಎಂದರು ಸ್ವಾಮಿಗಳು.

"ಸಾಧಾರಣ ಬಾರಿಸುತ್ತಾನೆ. ಇವನಿಗಿಂತ ನೂರು ಪಾಲಿಗೆ ಚೆನ್ನಾಗಿ ಬಾರಿಸುವ ಎಷ್ಟೋ ಜನರನ್ನು ಕಂಡಿದ್ದೇನೆ ನಾನು," ಎಂದ ಶಾಸ್ತ್ರಿ.

"ಗಂಡಸರನ್ನೊ, ಹೆಂಗಸರನ್ನೊ?" ಎಂದು ಪ್ರಶ್ನಿಸಿ ಮಲ್ಲಪ್ಪಸೆಟ್ಟರು ಗದಿಗೆಮ್ಮನ ಕಡೆಗೆ ಹೊರಳಿ ಕಣ್ಣು ಮಿಟುಕಿಸಿ, ಸ್ವಾಮಿಗಳ ಕಡೆಗೆ ತಿರುಗಿ ಮುಗುಳ್ನಗೆ ಬೀರಿದರು.

"ಬಾರಿಸುವ ಕೈ ಬಳೆಯದಾದರೆ ವೀಣಾನಾದಕ್ಕೆ ನಿಜವಾದ ಸೊಗಸು. ಗಂಡಸಿನ ಒರಟು ಕೈ ಸರಸ್ವತಿಯನ್ನು ಪ್ರತ್ಯಕ್ಷಗೊಳಿಸುವುದು ಕಷ್ಟವೇ ಸರಿ," ಎಂದ ರಸಿಕ ಶಾಸ್ತ್ರಿ. ಆತನ ಮಾತು ತಮ್ಮ ಮನಸ್ಸಿಗೆ ಬಂದಿತೆಂದು ಸೂಚಿಸ ಲೋಸುಗ ಸ್ವಾಮಿಗಳು ಮೆಲುನಗೆ ಬೀರಿದರು.

"ಇನ್ನು ಮೂರು ರಾತ್ರಿ ತಮಗೆ ಕಣ್ಣಿಗೆ ಕಣ್ಣು ಹತ್ತುವಂತಿಲ್ಲ ಬುದ್ಧಿ!"

ಹಗಲು ನಿದ್ರೆ ತೆಗೆಯುತ್ತಾ ಇರಿ. ಇಲ್ಲವಾದರೆ ತುಂಬ ತೊಂದರೆಯಾದೀತು," ಎಂದಳು ಗದಿಗೆವ್ವ.

"ನಾನೇನು ರಾತ್ರಿಯೆಲ್ಲ ಕೂತು ಬಯಲಾಟ ನೋಡಬೇಕಾಗಿದೆಯೆ ?"

"ಜಾತ್ರೆಗೆಲ್ಲ ಪ್ರಾಣಸ್ವರೂಪರೆಂದರೆ ತಾವೇ ಅಲ್ಲವೆ? ತಾವು ನೋಡಿ ಸಂತೋಷಗೊಂಡು ತೃಪ್ತಿ ಸೂಚಿಸಿ ಬಹುಮಾನವಿತ್ತು ಪ್ರೋತ್ಸಾಹಿಸಿದರೆ ಮಾತ್ರ ಆಡುವವರಿಗೆಲ್ಲ ಸಮಾಧಾನ. ತಮ್ಮ ಕಲೆಯನ್ನು ಸ್ವಾಮಿಗಳು ಮೆಚ್ಚಿದರಲ್ಲಾ ಎಂದು ಅವರಿಗೆಹುರುಪು ಬರುವದು. ತಾವೇ ನೋಡದಿದ್ದರೆ ಹೇಗೆ?"

"ಅವೇನೊ ಸರಿಯೆ. ಆದರೆ ಎಲ್ಲರಂತೆ ನಾವೂ ಹೊರಗೆ ಕುಳಿತು ಆಟ ನೋಡುವುದು ಹೇಗೆ ಸಾಧ್ಯ ? ನೋಡಿದ ಜನ ಏನೆಂದಾರು ?"

"ಹೊರಗಡೆ ಕಟ್ಟೆಯ ಮೇಲೇನೂ ಕೂತುಕೊಳ್ಳಬೇಕಾಗಿಲ್ಲವಲ್ಲ ? ಹೊರಗಿನ ಕೋಣೆಯಲ್ಲಿ ಕೂತಿರಬಹುದು. ಬಾಗಿಲು ತೆರೆವೇ ಇರುತ್ತದೆ. ಜನರಿಗೆ ಕಾಣಿಸದಂತೆ ಮರೆಯಲ್ಲಿ ಕುಳಿತು ಎಲ್ಲವನ್ನೂ ನೋಡಬಹುದು."

"ಹಿಂದಿನ ಸ್ವಾಮಿಗಳು ನೋಡುತ್ತಿದ್ದರೇ ?"

"ಛೆ, ಬಿಡಿರಿ. ಎಂಥಾ ಮಾತು ! ಜಾತ್ರೆ ಮುಗಿಯುವ ವರೆಗೆ ಮೂರು ದಿನವೂ ಅವರು ತಮ್ಮ ಕೋಣೆಯನ್ನು ಬಿಟ್ಟು ಹೊರಕ್ಕೆ ಬರುತ್ತಿರಲಿಲ್ಲ. ಜನರಿಗೆ ದರ್ಶನ ಲಭಿಸುವುದೂ ಕಷ್ಟವಾಗುತಿತ್ತು. ಜಾತ್ರೆಗೆ ಬಂದು, ಸ್ವಾಮಿಗಳ ಪಾದಗಳಿಗೆ ಮಣಿದು ಪುನೀತರಾಗಿ ಹೋಗಬೇಕೆಂದುಕೊಂಡವರೆಲ್ಲ ಅವರನ್ನು ಕಾಣದೆ ನಿರಾಶರಾಗಿ ಹೊರಟು ಹೋಗುತ್ತಿದ್ದರು. ಸ್ವಾಮಿಗಳು ಪೀಠದ ಮೇಲೆ ಕೂಡ್ರುತ್ತಿರಲೇ ಇಲ್ಲ."

"ಮತ್ತೆ ?"

"ಪೀಠದ ಮೇಲೆ ದೇವರ ಹಾಗೆ ಕುಳಿತು ಸಾವಿರಾರು ಜನರಿಂದ ಸಾಷ್ಟಾಂಗ ನಮಸ್ಕಾರ ಸ್ವೀಕರಿಸುವದೆಂದರೆ ಅದೊಂದು ಅಪರಾಧ, ನಾಚಿಕೆಗೇಡಿನ ಕೆಲಸ, ಆ ಜನರಿಂದ ನಮಸ್ಕಾರ ಮಾಡಿಸಿಕೊಳ್ಳುವ ಯೋಗ್ಯತೆ ತಮ್ಮದಲ್ಲ—ಎಂದು ಏನೇನನ್ನೊ ಬಡಬಡಿಸಿ ಕೋಣೆಯೊಳಗೇ ಕುಳಿತುಬಿಡುತ್ತಿದ್ದರು. ನಾವೆಲ್ಲ ಎಷ್ಟು ದುಂಬಾಲ ಬಿದ್ದರೂ ಬರುತ್ತಿರಲಿಲ್ಲ," ಎಂದರು ಸೆಟ್ಟರು.

"ಜನರಿಂದ ನಮಸ್ಕಾರ ಮಾಡಿಸಿಕೊಳ್ಳುವದಕ್ಕೂ ಒಂದು ಭಾಗ್ಯ

ಬೇಕು. ಅದು ಅವರ ಹಣೆಯಲ್ಲೇ ಬರೆದಿರಲಿಲ್ಲ. ಯಾರೇನು ಮಾಡಬೇಕು ? ಅಂತೂ ಹೊರಟು ಹೋದರಲ್ಲ. ಬಲು ಚೆನ್ನಾಯಿತು. ತಮ್ಮಂಥ ಉತ್ಸವಮೂರ್ತಿ ನಮಗೆ ಲಭಿಸಿತಲ್ಲ. ನಮ್ಮ ಪುಣ್ಯ," ಎಂದಳು ಗದಿಗೆಮ್ಮ.

ಸ್ವಾಮಿಗಳು ಆಕೆಯ ದುಂಡುಮುಖವನ್ನು ದಿಟ್ಟಿಸುತ್ತ ಮನಸ್ಸಿನಲ್ಲಿಯೆ ಹೇಳಿಕೊಂಡರು : "ಯಾವ ಅರ್ಥದಲ್ಲಿ ಮಾತನಾಡುತ್ತಿರುವಳೋ ಈ ಚದುರೆ ? ನನ್ನಂಥ ಉತ್ಸವಮೂರ್ತಿ ದೊರೆತುದರಿಂದ ಈಕೆಗೆ ನಿಜಕ್ಕೂ ಆನಂದವಾಗಿರಲು ಸಾಕು. ಅರಳಿ ನಳನಳಿಸುವ ಗುಲಾಬಿ ಹೂವಿನಂತೆ ತೋರುವ ಇವಳ ಮುಖವೇ ಆ ಆನಂದವನ್ನು ಸೂಚಿಸುತ್ತಿದೆ. ಗದಿಗೆಮ್ಮ ನಿಜವಾಗಿಯೂ ನನ್ನನ್ನು ಕಂಡು ಮೋಹಿತಳಾದಂತಿದೆ. ನಾನೂ ಸಹ ಆಕೆಗೆ ಮೋಹಿತನಾಗಿರುವೆನೇ ? ಹೌದು. ಅದರಲ್ಲೇನೂ ಸಂದೇಹವಿಲ್ಲ. ಇಂಥ ಹೆಣ್ಣನ್ನು ಕಂಡು ಮೋಹಗೊಳ್ಳದಿರಲು ಸಾಧ್ಯವಾದೀತೇ ? ಇವಳ ಕರೆಯುವ ಕಣ್ಣು, ಉತ್ತೇಜಿತಗೊಳಿಸುವ ಓರೆನೋಟ, ಮನಸ್ಸಿಗೆ ಹುಚ್ಚು ಹಿಡಿಸುವ ಮಂದಹಾಸ, ಮೋಹವನ್ನು ಬಡಿದೆಬ್ಬಿಸುವ ಅರ್ಥಪೂರ್ಣ ಮಾತು, ಆಹ್ವಾನಿಸುವ ಎದೆಕಟ್ಟು!" ಸ್ವಾಮಿಗಳು ಕಳ್ಳದೃಷ್ಟಿಯಿಂದ ಆಕೆಯ ಎದೆಕಟ್ಟನ್ನೇ ನಿರುಕಿಸುತ್ತ ಕುಳಿತರು. ಪ್ರಭುಸ್ವಾಮಿಗಳನ್ನು ಕುರಿತು ಯೋಚಿಸುತ್ತಲಿದ್ದ ಮಲ್ಲಪ್ಪಸೆಟ್ಟರಿಗೆ ಸಿದ್ಧವೀರಸ್ವಾಮಿಗಳ ಈ ಕಳ್ಳನೋಟ ಗಮನಕ್ಕೆ ಬರಲಿಲ್ಲ. ಚಾಣಾಕ್ಷನಾದ ಗಂಗಾಧರಶಾಸ್ತ್ರಿ ಮಾತ್ರ ಸ್ವಾಮಿಗಳ ನೋಟದ ಹಾರಾಟವನ್ನೇ ಸೂಕ್ಷ್ಮವಾಗಿ ಗಮನಿಸುತ್ತಲಿದ್ದ.

ಉತ್ಸವದ ದಿನವಾದುದರಿಂದ ಅಂದು ಗದಿಗೆಮ್ಮ ವಿಶೇಷ ಅಲಂಕಾರ ಮಾಡಿಕೊಂಡು ಬಂದಿದ್ದಳು. ತೆಳುರೇಶಿಮೆಯ ಸೀರೆಯನ್ನುಟ್ಟು, ಬಿಳಿಯ ರವಕೆ ತೊಟ್ಟು ಕೊರಳಿನಲ್ಲಿ ಅಚ್ಚ ಬಿಳಿಯ ಮುತ್ತುಗಳ ಹಾರವೊಂದನ್ನು ಧರಿಸಿದ್ದಳು. ರೇಶಿಮೆ ಸೀರೆಯಾದುದರಿಂದ ಎಷ್ಟು ಸಲ ಮೇಲಕ್ಕೆಳೆದರೂ ತನ್ನ ಸ್ಥಳದಲ್ಲಿ ಕೂತಿರದೆ ಸೆರಗು ಮತ್ತೆ ಮತ್ತೆ ತಲೆಯನ್ನು ತ್ಯಜಿಸಿ ಕೆಳಕ್ಕುರುಳಿ ಆಕೆಯ ಎದೆಕಟ್ಟನ್ನು ತೋರಿಸುತ್ತಲಿತ್ತು. ಬಿಗಿಯಾಗಿ ಹೊಲೆಯಲ್ಪಟ್ಟಿದ್ದ ರವಕೆಯನ್ನು ಲೆಕ್ಕಿಸದೆ ಆಕೆಯ ಬಿಳಿಯ ತೋಳುಗಳು ಸೊಕ್ಕಿನಿಂದ ಎದ್ದು ಕಾಣಿಸುತ್ತಿದ್ದುವು. ಬಿಳಿಯ ಮೌಕ್ತಿಕಮಾಲೆಯ ಹಿನ್ನೆಲೆಯಲ್ಲಿ

ತುಂಬಿದ ಕೊರಳು ಸೊಗಸಾಗಿ ಒಪ್ಪುತ್ತಿತ್ತು. ತರುಣರಾದ ಸ್ವಾಮಿಗಳು ಆಕೆಗೆ ಮರುಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

ನಾಗಮ್ಮ ತನ್ನ ಪರಿವಾರದೊಂದಿಗೆ ಹೊರಗಿನ ಕೊಟಡಿಯಲ್ಲಿ ಅಡಿಯಿರಿಸಿದಾಗ ಒಳಗಿನ ಕೊಟಡಿಯಲ್ಲಿದ್ದವರ ಲಕ್ಷ್ಯ ಅತ್ತ ಹೊರಳಿತು. "ನಾಗಮ್ಮನವರು ಬಂದರೆಂದು ಕಾಣುತ್ತದೆ," ಎಂದು ನುಡಿದು ಗದಿಗೆಮ್ಮ ಅವರನ್ನು ಒಳಕ್ಕೆ ಕರೆದು ತರಲು ಹೊರಟು ನಿಂತಳು. ದಿಂಬುಗಳ ಮೇಲೆ ಮೊಳಕೈಗಳನ್ನೂರಿ ಕುಳಿತಿದ್ದ ಸ್ವಾಮಿಗಳು ಆತುರತೆಯಿಂದ ಮುಖವನ್ನೆತ್ತಿ ಬಾಗಿಲ ಕಡೆಗೆ ದೃಷ್ಟಿ ತಿರುಗಿಸಿದರು. "ನಾಗಮ್ಮ ಬಂದಳೇ ? ಹಾಗಾದರೆ ಅವಳ ಜೊತೆಗೆ ಸರಸುವೂ ಬಂದಿರಲು ಸಾಕು. ತಾರುಣ್ಯದಿಂದ ತುಂಬಿ ತುಳುಕುವ ಲಾವಣ್ಯದ ಬಳ್ಳಿಯಂತಿರುವ ಸರಸೂ...."ಎಂದುಕೊಂಡು ಅವರು ಆಕೆಯ ಮುಖವನ್ನು ಕಾಣಲು ಕಾತುರರಾದರು. ಇಷ್ಟು ಹೊತ್ತಿನ ವರೆಗೆ ಗದಿಗೆಮ್ಮನಿಗಾಗಿ ಹಾರಯಿಸುತ್ತಿದ್ದ ಅವರ ಮನಸ್ಸು ಈಗ ಆಕೆಯನ್ನು ಬದಿಗೆ ಸರಿಸಿ, ಸರಸುವಿನ ಮಾರ್ಗಪ್ರತೀಕ್ಷೆ ಮಾಡತೊಡಗಿತು.

ನಾಗಮ್ಮನ ಆಗಮನದಿಂದಾಗಿ ಗಂಗಾಧರಶಾಸ್ತ್ರಿಯೂ ಆನಂದದ ತೆರೆಗಳ ಮೇಲೆ ಈಜತೊಡಗಿದ್ದ. ನಾಗಮ್ಮನೊಂದಿಗೆ ಅರ್ಥಾತ್ ಸರಸುವೂ ಬಂದಿದ್ದಾಳೆ. ಸರಸುವಿನ ಬಗೆಗೆ ಸ್ವಾಮಿಗಳಲ್ಲಿರುವ ಮೋಹ ತನಗೆ ತಿಳಿಯದ ವಿಷಯವೇನೂ ಅಲ್ಲ–ಸರಸು ಎದುರಿಗಿದ್ದಾಗ ಗದಿಗೆಮ್ಮನ ಕಡೆಗೆ ಅವರು ಕಣ್ಣೆತ್ತಿ ಸಹ ನೋಡುವುದಿಲ್ಲ. ಈ ರಾತ್ರಿ ಸರಸೂ ಇಲ್ಲಿಗೆ ಬರುವುದರ ಮೂಲಕ ತನ್ನ ಮೇಲೆ ಮಹೋಪಕಾರ ಮಾಡಿದಳೆಂವೇ ಶಾಸ್ತ್ರಿಗೆನ್ನಿಸಿತು. ಸೆಟ್ಟರಂತೂ ರಾತ್ರಿಯೆಲ್ಲ ಇಲ್ಲಿರುವುದಿಲ್ಲ. ಒಂದೆರಡು ಗಂಟೆಗಳ ವರೆಗೆ ಕುಳಿತಿದ್ದು ಮನೆಗೆ ಹೊರಟು ಬಿಡುವರು. ರಾತ್ರಿ ಜಾಗರಣೆ ಮಾಡುವುದು ಅವರ ಪ್ರಕೃತಿಗೆ ಒಗ್ಗುವುದಿಲ್ಲ. ಅವರು ಹೊರಟುಹೋದ ಬಳಿಕ ಗದಿಗೆಮ್ಮ ತನಗಾಗಿಯೆ ಮೀಸಲಾಗಿ ಉಳಿಯುವಳು. ಸ್ವಾಮಿಗಳೂ ತನ್ನ ಆಸೆಯಲ್ಲಿ ಅಡ್ಡ ಬರುವಂತಿಲ್ಲ. ಅವರ ಬಯಕೆಯನ್ನು ನೆರವೇರಿಸಲು ಸರಸೂ ಸಿದ್ಧವಾಗಿ ಬಂದಿದಾಳೆ. ಏನಾದರೂ ಉಪಾಯ ಹೂಡಿ ಈ ರಾತ್ರಿಯೆ ಸರಸುವನ್ನೂ ಸ್ವಾಮಿಗಳನ್ನೂ ಕೂಡಿಸಬೇಕು. ಜಾತ್ರೆಯ ಗದ್ದಲದಲ್ಲಿ ಈ ಗದ್ದಲ ಯಾರಿಗೂ ಗೊತ್ತಾಗಲಾರದು. ನಾಗಮ್ಮ ಆಟ ನೋಡುತ್ತಿರುತ್ತಾಳೆ.

ಮಧ್ಯರಾತ್ರಿಯಲ್ಲಿ ಸರಸುವಿಗೆ ನಿದ್ರೆ ಬರಬಹುದು. ಆಗ ಆಕೆಯನ್ನು ಉಪಾಯವಾಗಿ ಒಳಕ್ಕೆ ಕರೆದುತಂದು ಸ್ವಾಮಿಗಳ ಕೊಟಡಿಯಲ್ಲಿ ಬಿಡಬಹುದು. ಗದಿಗೆಮ್ಮನೂ ಈ ವಿಷಯದಲ್ಲಿ ನೆರವಾಗಬಹುದು. ಈ ಕೆಲಸವನ್ನು ಸಾಧಿಸಿ ಕೊಟ್ಟರೆ ಸ್ವಾಮಿಗಳಿಂದ ಸಾಕಷ್ಟು ಹಣ ದೊರೆಯುವುದಲ್ಲದೆ ಕೊನೆಯ ವರೆಗೂ ಅವರು ತನ್ನ ಕೈಯಲ್ಲೇ ಉಳಿಯಬಹುದು. ತನ್ನ ಇಷ್ಟ ಬಂದ ಹಾಗೆ ತಾನು ಅವರನ್ನು ಕುಣಿಸಲು ಸಾಧ್ಯವಾಗಬಹುದು. ಸ್ವಾಮಿಗಳ ಬಯಕೆಯಂತೂ ಅವರ ಮುಖದ ಮೇಲೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಈ ರಾತ್ರಿ ಹೆಣ್ಣಿನ ಸಹವಾಸ ಲಭಿಸದಿದ್ದಲ್ಲಿ ಅವರಿಗೆ ಹುಚ್ಚು ಹಿಡಿದರೂ ಹಿಡಿದೀತು....ತನಗೆ? ತನ್ನ ಬಯಕೆಯೂ ಅಷ್ಟೇ ಬಲವಾದುದಾಗಿಲ್ಲವೆ? ಗದಿಗೆಮ್ಮನ ಸಹವಾಸದಾಸೆಯಿಂದಾಗಿ ತನ್ನ ನರನರಗಳೆಲ್ಲ ಹುಚ್ಚೆದ್ದು ಕುಣಿಯುತ್ತಿವೆಯಲ್ಲವೆ? ಸರಸುವನ್ನು ಸ್ವಾಮಿಗಳಿಗೆ ತಂದುಕೊಟ್ಟಲ್ಲಿ ಗದಿಗೆಮ್ಮ ತನಗೆ ಸಿಕ್ಕುವಳು....ಗದಿಗೆಮ್ಮ! ಆ ಹಾ ಹಾ! ಏನವಳ ರೂಪು ....ಏನವಳ ಮೈಕಟ್ಟು....ಶಾಸ್ತ್ರಿಯ ಹೃದಯ ಪುಟಿದೇಳುತ್ತಿತ್ತು.

"ನಾಗಮ್ಮನನ್ನು ಕರೆದು ತರುತ್ತೇನೆ," ಎಂದು ಹೇಳಿ ಗದಿಗೆಮ್ಮ ಹೊರಗಿನ ಕೊಟಡಿಗೆ ತೆರಳಿದಳು. "ನಾನು ಸ್ವಲ್ಪ ಹೊರಗೆ ತಿರುಗಾಡಿ ಆಟ ಪಾಟಗಳ ಏರ್ಪಾಟು ನೋಡಿಕೊಂಡು ಮನೆಗೆ ಹೋಗುತ್ತೇನೆ," ಎಂದು ಹೇಳಿ ಮಲ್ಲಪ್ಪಸೆಟ್ಟರು ಸ್ವಾಮಿಗಳಿಗೆ ವಂದಿಸಿ ಅಲ್ಲಿಂದ ತೆರಳಿದರು. ಕೊಟಡಿ ಯಲ್ಲಿ ತಾವಿಬ್ಬರೇ ಉಳಿಯುತ್ತಲೂ ಸ್ವಾಮಿಗಳೂ ಶಾಸ್ತ್ರಿಯೂ ಪರಸ್ಪರ ಮುಖ ನೋಡಿಕೊಂಡರು.

"ಬುದ್ಧಿಗಳ ಅಭಿಪ್ರಾಯವೇನು?" ಎಂದು ಶಾಸ್ತ್ರಿ ನಗುತ್ತಾ ಪ್ರಶ್ನಿಸಿದ.

"ನಿಮ್ಮ ಅಭಿಪ್ರಾಯವೇನು?" ಎಂದು ಸ್ವಾಮಿಗಳು ಮರುಪ್ರಶ್ನೆ ಹಾಕಿದರು—"ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ" ಎಂದು ಸೂಚಿಸುವ ಧ್ವನಿಯಲ್ಲಿ.

"ಶಿವನು ಮೆಚ್ಚಿ ಕೊಟ್ಟರೆ ಅನುಭವಿಸಬೇಕು. ಆ ಅನುಭವವನ್ನೂ ಶಿವನಿಗೇ ಅರ್ಪಿಸಬೇಕು. ಲಿಂಗಾಂಗ ಸಾಮರಸ್ಯವೆಂದರೆ ಅದೇ ಅಲ್ಲವೆ?" ಎಂದ ಶಾಸ್ತ್ರಿ.

"ನಿಮ್ಮಂಥ ರಸಿಕರನ್ನು ನಾವು ಇದುವರೆಗೂ ಕಂಡಿರಲಿಲ್ಲ ನೋಡಿರಿ."

"ರಸಿಕತನವನ್ನು ಬಿಟ್ಟರೆ ಈ ಬದುಕಿನಲ್ಲಿ ಇನ್ನೇನಿದೆ ಬುದ್ಧೀ? ನಾಲ್ಕೈಪತ್ತು ಈ ಲೋಕದಲ್ಲಿದ್ದು ಸುಖವಾಗಿ ಬಾಳಿ ಬರ್ರಿ ಎಂದು ಶಿವ ನಮ್ಮನ್ನು ಇಲ್ಲಿಗೆ ಕಳಿಸಿದ್ದಾನೆ. ಆತನ ಆಜ್ಞೆಯಂತೆ ಇರುವಷ್ಟು ದಿನ ಸುಖವಾಗಿ ಬಾಳಬೇಕು. ಇದೇ ಬದುಕಿನ ತತ್ವಜ್ಞಾನ."

"ಒಳ್ಳೆ ತತ್ವಜ್ಞಾನವೆ. 'ಲಿಂಗವೀರ' ಪತ್ರಿಕೆಯಲ್ಲೇಕೆ ನೀವಿದನ್ನು ಪ್ರಕಟಿಸಬಾರದು?"

"ಪತ್ರಿಕೆಯಲ್ಲಿ ಪ್ರಕಟಿಸುವ ಕಾಲವಿನ್ನೂ ಬಂದಿಲ್ಲ ಸ್ವಾಮಿಗಳೆ. ಅದರಲ್ಲಿ ಬರೆಯುವ ವಿಚಾರವೇ ಬೇರೆ. ನಮ್ಮ ಅಂತರಂಗದಲ್ಲಿರುವುದನ್ನೆಲ್ಲ ಇದ್ದಕ್ಕಿದ್ದ ಹಾಗೆ ಬರೆದುಬಿಟ್ಟರೆ ಈ ವಿಚಿತ್ರ ಸಮಾಜ ನಮ್ಮನ್ನು ಹೀಯಾಳಿಸದಿರುತ್ತದೆಯೆ? ಆಷಾಢಭೂತಿತನವೇ ಬೇಕು ಈ ಸಮಾಜಕ್ಕೆ. ತತ್ವ, ಆದರ್ಶ, ನೀತಿ, ನ್ಯಾಯಗಳೆಲ್ಲ ಬಾಯಲ್ಲಿ ಹೇಳುವುದಕ್ಕೆ ಮಾತ್ರ. ಕೃತಿಯಲ್ಲಿ ಅವುಗಳಿಗೆ ಪೂರಾ ವಿರುದ್ಧವಾಗಿದ್ದರೂ ಚಿಂತೆಯಿಲ್ಲ. ಸಮಾಜದಲ್ಲಿ ಮುಕ್ಕಾಲುಪಾಲು ಜನರು ಇಂಥ ಡಾಂಭಿಕತನವನ್ನೇ ಅನುಸರಿಸುವಾಗ ನಾವಾದರೂ ಏಕೆ ಪ್ರಾಮಾಣಿಕರಾಗಿರಬೇಕು? ನಾಲ್ಕು ಜನ ಮಾಡಿದ ಹಾಗೆ ನಾವೂ ಮಾಡುತ್ತಿದ್ದರಾಯಿತು."

"ನೀವು ಹೇಳುವುದು ಸರಿಯಾದ ಮಾತು. ಈ ಸಮಾಜದ ಯೋಗ್ಯತೆಯೇನೆಂಬುದನ್ನು ನಾವೆಂದೋ ತಿಳಿದುಕೊಂಡಿದ್ದೇವೆ. ಅಂತೆಯೆ, ಯಾವುದರ ಬಗೆಗೂ ಕಟ್ಟುನಿಟ್ಟುಗಳನ್ನಿಟ್ಟುಕೊಂಡಿಲ್ಲ. ಸಮಾಜವೆಲ್ಲವೂ ಡಾಂಭಿಕವಾಗಿ ಆಚರಿಸುತ್ತ ಸುಖ ಪಡೆಯುತ್ತಿರುವಾಗ ನಾವು ಮಾತ್ರ ಪ್ರಾಮಾಣಿಕರಾಗಿದ್ದು ನೀರಸ ಬದುಕು ಸಾಗಿಸುವ ಅಗತ್ಯವೇನು? ನೀವೇನೆನ್ನುವಿರಿ?"

"ರಸಿಕ ಶಿಷ್ಯರಿಗೆ ರಸಿಕ ಗುರುಗಳಿರಬೇಕಾದುದು ನ್ಯಾಯವೆಂದೇ ನನ್ನ ಅಭಿಪ್ರಾಯ. ಓಹ್ಹೊ, ನಾಗಮ್ಮನವರು ಬರುತ್ತಿದಾರೆ. ಸ...." ಎಂದು ಶಾಸ್ತ್ರಿ ಹೇಳುತ್ತಿದ್ದಂತೆಯೆ ನಾಗಮ್ಮ, ರುದ್ರವ್ವಜ್ಜಿ, ಸರಸು, ಗೌರಿ ಗದಿಗೆಮ್ಮನೊಂದಿಗೆ ಒಳಕ್ಕೆ ಅಡಿಯಿರಿಸಿದರು. ಅವರನ್ನು ಕಂಡೊಡನೆ ಶಾಸ್ತ್ರಿ ಕುಳಿತ ಸ್ಥಳದಿಂದ ಚಂಗನೆ ನೆಗೆದೆದ್ದು—"ಹೀಗೆ ಬರ್ರಿ. ಇಲ್ಲಿ ಕುಳಿತುಕೊಳ್ಳಿರಿ. ಬನ್ನಿ ನಾಗಮ್ಮನವರೆ, ಬನ್ನಿ ಅಜ್ಜಮ್ಮನವರೆ, ಬನ್ನಿ ಸರಸ್ವತೀ

ದೇವಿ, ಬನ್ನಿ ಗೌರೀದೇವೀ....ಹೀಗೆ ಬನ್ನಿ....ಹಣ್ಣು ಹಾಲು ತೆಗೆದುಕೊಳ್ಳಿ," ಎಂದು ಪುಟುಪುಟಿಸುತ್ತ ಸ್ವಾಮಿಗಳ ಮಂಚದ ಕೆಳಗೆ ಬುಟ್ಟಿಯಲ್ಲಿದ್ದ ಕಿತ್ತಳೆ ಹಣ್ಣುಗಳನ್ನೂ ಸೀಬೆ ಹಣ್ಣುಗಳನ್ನೂ ತೆಗೆದು ಅವರ ಎದುರಿಗಿರಿಸಿ, ದೇಶಾವರಿ ನಗೆ ಬೀರುತ್ತ ನಿಂತುಕೊಂಡ.

ಒಬ್ಬೊಬ್ಬರಾಗಿ ಬಂದವರೆಲ್ಲ ಸ್ವಾಮಿಗಳಿಗೆ ವಂದಿಸಿದರು. ಎಲ್ಲರ ತಲೆಗಳನ್ನೂ ಕೈಯಿಂದ ಮುಟ್ಟಿ ಸ್ವಾಮಿಗಳು ಆಶೀರ್ವದಿಸಿದರು. ಸರಸು ನಮಸ್ಕಾರ ಮಾಡುತ್ತಿದ್ದಾಗ ಆಕೆಯ ಕೇಶರಾಶಿಯ ಮಾದಕ ಸುಗಂಧದಿಂದಾಗಿ ಸ್ವಾಮಿಗಳಿಗೆ ಹುಚ್ಚು ಹಿಡಿದಂತಾಯಿತು. ತಲೆಬಾಗಿಸಿ ನಮಸ್ಕರಿಸಿ ಮೇಲಕ್ಕೇಳುವಾಗ ಸರಸುವಿನ ಸ್ಥಿತಿಯೂ ವಿಚಿತ್ರವಾಗಿದ್ದಿತು. ಆ ಕೊಟಡಿಯಲ್ಲಿ ಅಡಿಯಿರಿಸುತ್ತಲೂ ಸಮ್ಮೋಹನಾಸ್ತ್ರವೊಂದು ತನ್ನ ಎದೆಯ ಸುತ್ತ ಬೀಸಿ ತನ್ನನ್ನು ಸ್ವಾಮಿಗಳ ಕಡೆಗೆ ಸೆಳೆಯುತ್ತಿದ್ದಂತೆ ಆಕೆಗೆ ಭಾಸವಾಗಿದ್ದಿತು. ವಿದ್ಯುದ್ದೀಪದ ಕೆಳಗಡೆ ಕುಳಿತಿದ್ದ ಸ್ವಾಮಿಗಳ ತುಂಬು ಹರಯದ ದೇಹ, ಹೊಳೆ ಹೊಳೆಯುತ್ತಿದ್ದ ಕೆನ್ನೆ, ವಿಲಕ್ಷಣ ಮಾದಕತೆಯಿಂದ ತುಂಬಿಕೊಂಡಿದ್ದ ಕಣ್ಣು, ಮಿಂಚಿನಂತೆ ಹೊಳೆಯುತ್ತಿದ್ದ ಕಟಾಕ್ಷ ಆಕೆಯ ಮೈ ಮರೆಯಿಸಿದ್ದುವು. ಸ್ವಾಮಿಗಳ ಕೈ ತನ್ನ ತಲೆಯನ್ನು ನಯವಾಗಿ ನೇವರಿಸಿದಾಗ ಅವರ ದೇಹದಲ್ಲಿನ ವಿದ್ಯುತ್ತು ಆ ಕೈಯ ಮೂಲಕ ಇಳಿದು ಬಂದು ತನ್ನನ್ನು ಎಚ್ಚರದಪ್ಪಿಸುತ್ತಿದ್ದ ಹಾಗೆ ತೋರಿತು ಆಕೆಗೆ. ಮಣಿದು ಮೇಲಕ್ಕೇಳುವಾಗ ಆಕೆಯ ದೃಷ್ಟಿ ಅವರ ದೃಷ್ಟಿಯೊಂದಿಗೆ ಬೆರೆಯಿತು. ಬಹು ದಿನಗಳಿಂದ ಹತ್ತಿಕ್ಕಲ್ಪಟ್ಟ ಬಯಕೆ ಬಂಧನವನ್ನು ಕಿತ್ತೆಸೆದು ಸ್ವಾಮಿಗಳ ಕಡೆಗೆ ಧುಮುಕಿದಂತಾಯಿತು. ಆಕೆಯ ಕಣ್ಣುಗಳೆದುರಿಗೆ ಕತ್ತಲೆ ಕವಿದಂತಾಯಿತು. ಮೂರ್ಛೆ ಬಂದು ತಾನು ಅಲ್ಲಿಯೆ ಬಿದ್ದುಬಿಡುವೆನೇನೊ ಎಂದು ಭಯವಾಯಿತು. ಅವಳಿಗೆ ತಿಳಿಯದಂತೆಯೆ ಅವಳ ಮುಖದಿಂದ ನಯವಾದ ನಿಟ್ಟುಸಿರೊಂದು ಹೊರಹೊರಟಿತು. ತುಂಬ ಕಷ್ಟದಿಂದ ತನ್ನನ್ನು ತಾನೇ ಸಾವರಿಸಿಕೊಂಡು ಅಲ್ಲಿಂದೆದ್ದು ತಾಯಿಯ ಹತ್ತಿರ ಹೋಗಿ ದೃಷ್ಟಿಯನ್ನು ಕೆಳಕ್ಕೆ ಚೆಲ್ಲಿ ಕುಳಿತುಕೊಂಡಳು. ಗಂಗಾಧರಶಾಸ್ತ್ರಿ, ಗದಿಗೆಮ್ಮ ಇಬ್ಬರೂ ಸರಸುವಿನ ಭಾವವನ್ನು ಅರಿತುಕೊಳ್ಳದಿರಲಿಲ್ಲ. "ಹಿಟ್ಟು ಹಳಸಿದೆ,

ನಾಯಿ ಹಸಿದಿದೆ," ಎಂದುಕೊಂಡು ಶಾಸ್ತ್ರಿ ಹಿಗ್ಗಿದ. ನಾಗಮ್ಮನಿಗೆ ಮಾತ್ರ ಮಗಳ ಮನೋಭಾವ ಅರ್ಥವಾಗಲಿಲ್ಲ.

"ಏಳಿರಿ, ಮೊದಲು ಪ್ರಸಾದ ತೆಗೆದುಕೊಂಡು ಬರ್ರಿ," ಎಂದರು ಸ್ವಾಮಿಗಳು.

"ಈಗತಾನೆ ತೆಗೆದುಕೊಂಡೇ ಬಂದೆವು ಬುದ್ಧೀ."

"ಹಣ್ಣು ಹಾಲು ಆದರೂ ತೆಗೆದುಕೊಳ್ಳಬಹುದಲ್ಲ? ತೆಗೆದುಕೊಳ್ಳಿರಿ ಸರಸ್ವತೀದೇವಿ. ಗೌರಮ್ಮ, ನೀನೂ ತೆಗೆದುಕೊಳ್ಳಮ್ಮ. ಅಜ್ಜೀ, ನೀನೂ ತೆಗೆದುಕೋ ತಾಯಿ."

"ನನ್ನ ಹೊಟ್ಟೆಯಲ್ಲಿ ಸ್ಥಳವೇ ಉಳಿದಿಲ್ಲ ಸ್ವಾಮಿಗಳೇ," ಎಂದು ಗೌರಿ ಉತ್ತರವಿತ್ತಳು.

ಸ್ವಾಮಿಗಳು ನಗುತ್ತಾ-"ಹೊಟ್ಟೆಯಲ್ಲಿ ಸ್ಥಳವಿರದಿದ್ದರೆ ಚಿಂತೆಯಿಲ್ಲ. ಲಂಗದ ಜೇಬಿನಲ್ಲಾದರೂ ಇವೆಯಲ್ಲ? ಅಲ್ಲೇ ಇಟ್ಟುಕೊಂಡುಬಿಡಮ್ಮ. ರಾತ್ರಿಯೆಲ್ಲ ಆಟ ನೋಡುತ್ತ ಕೂತಿರುತ್ತೀರಿ. ತಾಸೆರಡುತಾಸುಗಳಲ್ಲಿ ಹೊಟ್ಟೆಯಲ್ಲಿ ಸ್ಥಳವಾದೀತು. ಆಗ ತಿಂದರಾಯಿತು," ಎಂದರು.

"ರಾತ್ರಿ ನಾನು ಏನೂ ತಿನ್ನುವದಿಲ್ಲ ಸ್ವಾಮಿಗಳೇ. ಅದು ನನ್ನ ಆರೋಗ್ಯಕ್ಕೆ ಒಳ್ಳೆಯದಲ್ಲವೆಂದು ಡಾಕ್ಟರು ಹೇಳಿದ್ದಾರೆ."

"ಹೀಗೇನು? ಯಾವ ಡಾಕ್ಟರಮ್ಮ ಅವರು? ಕುಂಟುಗಾಲಿನ ವೈದ್ಯರೋ ಏನು? ರಾತ್ರಿ ನಿದ್ರೆಗೆಟ್ಟಾಗ ಹಣ್ಣು ತಿನ್ನುವುದೊಳ್ಳೆಯದು. ಶಾಸ್ತ್ರಿಗಳನ್ನು ಕೇಳು ಬೇಕಾದರೆ...."

"ಹೌದಮ್ಮ. ಸ್ವಾಮಿಗಳ ಮಾತು ನಿಜ. ಜಾಗರಣೆ ಮಾಡುವಾಗ ಹಣ್ಣು ಹಂಪಲು ಹಾಲು ಹತ್ತಿರವೇ ಇರಬೇಕು. ಇಲ್ಲವಾದರೆ ಬಳಲಿಕೆಯಾಗುತ್ತದೆ," ಎಂದು ಹೇಳಿ ಶಾಸ್ತ್ರಿ ಗದಿಗೆವ್ವನ ಕಡೆಗೆ ಹೊರಳಿ ಅರ್ಥಪೂರ್ಣವಾಗಿ ನಕ್ಕು ಯಾರಿಗೂ ಗೊತ್ತಾಗದಂತೆ ಕಣ್ಣು ಮಿಟುಕಿಸಿದ.

ಹೊರಗಡೆ ಕರಡೀ ಮಜಲಿನ ಭೀಕರ ಗದ್ದಲಕ್ಕಾರಂಭವಾಯಿತು. "ಢಮ ಢಮಕ್ಕ-ಢಮಕ್ಕ-ಢಮ್-ಢಮ್...." ಸುತ್ತುಮುತ್ತಲಿನ ಪ್ರದೇಶವೆಲ್ಲವೂ ಆ ಸಪ್ಪಳದಿಂದ ನಿನದಿಸತೊಡಗಿತು. ನಾಗಮ್ಮ ಎದ್ದು ನಿಂತಳು. ಆಕೆಯೊಂದಿಗೆ ಉಳಿದವರೂ ಮೇಲಕ್ಕೆದ್ದರು.

"ರಾತ್ರಿ ಇಲ್ಲಿಯೆ ಇರುವಿರಲ್ಲವೆ? ಹೊರಗಿನ ಕೋಣೆಯಲ್ಲಿ ನಿಮಗಾಗಿ ಎಲ್ಲ ವ್ಯವಸ್ಥೆ ಮಾಡಿದೆ," ಎಂದು ಸ್ವಾಮಿಗಳು ಕೂಗಿ ಹೇಳಿದರು.

"ಹೌದು ಬುದ್ಧೀ. ಬೆಳಗಾಗುವ ತನಕ ಇರುತ್ತೇವೆ. ಬೈಲಾಟ, ದೊಡ್ಡಾಟ ಎಂದರೆ ನಮ್ಮ ಸರಸುವಿಗೆ ಬಲು ಪ್ರೀತಿ. ಯಾವ ವರ್ಷವೂ ಆಕೆ ಅವುಗಳನ್ನು ತಪ್ಪಿಸುವದಿಲ್ಲ," ಎಂದು ನುಡಿದು ನಾಗಮ್ಮ ಶಾಸ್ತ್ರಿಯ ಕಡೆಗೆ ತಿರುಗಿ—"ಇವೊತ್ತು ಯಾವ ಯಾವ ಆಟಗಳಿವೆ ಶಾಸ್ತ್ರಿಗಳೆ?" ಎಂದು ಕೇಳಿದಳು.

"ಪ್ರೌಢಮತಿ ವಿಜಯ ಎಂಬುದೊಂದು, ಪಾರಿಜಾತ ಒಂದು. ಎರಡೂ ಸುರಸ ಕತೆಗಳೇ. ಕಡೆಯ ವರೆಗೂ ನೋಡಿದರೂ ಬೇಸರವಾಗುವಂತಿಲ್ಲ. ನಿದ್ರೆ ಬಂದರೆ ಮಲಗಲು ಎಲ್ಲ ವ್ಯವಸ್ಥೆ ಮಾಡಿದ್ದೇವೆ. ಸುಖವಾಗಿ ಆಟ ನೋಡುತ್ತಿರಿ," ಎಂದಾತ ಉತ್ತರವಿತ್ತ.

ರುದ್ರಪ್ಪಜ್ಜಿಯೂ ಇನ್ನಿತರರೂ ಅಲ್ಲಿಂದ ಹೊರಟು ಹೊರಗಿನ ಕಟ್ಟೆಯ ಮೇಲೆ ತಮಗಾಗಿ ಹಾಸಿದ್ದ ಗುಡಾರದ ಮೇಲೆ ಕುಳಿತುಕೊಂಡರು. ಅಷ್ಟು ಹೊತ್ತಿಗಾಗಲೆ ಜನ ಅಂಗಳದಲ್ಲಿ ನೆರೆದು ಕುಳಿತುಕೊಳ್ಳಲು ಸ್ಥಳ ಹಿಡಿಯತೊಡಗಿದ್ದಿತು. ಎಷ್ಟೋ ಜನ ಸ್ತ್ರೀ ಪುರುಷರು ನೆಲದ ಮೇಲೆಯೆ ದೇಹಗಳನ್ನೊರಗಿಸಿ ನಿದ್ರೆಯಲ್ಲಿ ಮುಳುಗಿದ್ದರು. ಆಟಕ್ಕಾರಂಭವಾಗಬೇಕಾದರೆ ಹನ್ನೊಂದು ಗಂಟೆಯಾಗುತ್ತದೆ. ಹಿಮ್ಮೇಳದವರು ರಂಗದ ಮೇಲೆ ಬಂದು ರಂಗವನ್ನು ಪೂಜಿಸಿ ಕಾಯಿಯನ್ನೊಡೆದು ಕರ್ಪುರ ಬೆಳಗಿ, ಸ್ವರ ತೆಗೆಯುವವರೆಗೂ ನಿದ್ರೆ ಮಾಡುವ ಜನ ಇದು. ಆಟಕ್ಕಾರಂಭವಾಯಿತೆಂಬುದನ್ನು ಘೋಷಿಸಲೆಂದು ಮೇಳದ ನಾಯಕರು "ಆ್ಯSSSSSS" ಎಂದು ಸ್ವರವೆತ್ತುತ್ತಲೂ ಇವರೆಲ್ಲರೂ ಗಡಬಡಿಸಿ ಏಳುತ್ತಾರೆ.

ಅಂಗಳದಲ್ಲೆಲ್ಲ ಅಸ್ತವ್ಯಸ್ತವಾಗಿ ಉರುಳಿದ್ದ ಆ ಜನವನ್ನು ನಿರುಕಿಸುತ್ತ ನಾಗಮ್ಮನೆಂದಳು: "ಆಟ ಇನ್ನೂ ಯಾವಾಗ ಆರಂಭವಾಗುವುದೇನೊ. ಅಷ್ಟು ಹೊತ್ತೂ ಮಾಡುವುದೇನು? ನಾ ಸ್ವಲ್ಪ ನಿದ್ದೆ ತೆಗೆಯಲಾ ಸರಸೂ?"

"ನಿನಗೆ ನಿದ್ದೆ ಬರುವಂತಿದ್ದರೆ ಮಲಗಿಕೊಂಡು ಬಿಡವ್ವ. ಒಳಗಿನ ಕೋಣೆಯಲ್ಲಿ."

ಅಷ್ಟು ಹೊತ್ತಿಗೆ ಗೌರಿಗೂ ತೂಕಡಿಕೆ ಬರುತ್ತಿತ್ತು. ನಿದ್ರೆಯೆಂಬ ಶಬ್ದ ತಾಯಿಯ ಬಾಯಿಂದ ಹೊರಬೀಳುತ್ತಲೂ ಆಕೆ ಮೈ ಮುರಿಯುತ್ತ ಮೇಲಕ್ಕೆದ್ದು—"ಹೌದವ್ವ, ಹಾಗೇ ಮಾಡೋಣ. ಆಟ ಸುರುವಾದ ಬಳಿಕ ಎದ್ದರಾಯಿತು. ಈ ಪಾರ್ಟಿ ಮಾಡುವ ಜನ ಇನ್ನೂ ಬಣ್ಣ ಬಳಿದು ಕೊಂಡಿಲ್ಲ. ಸುಮ್ಮನೆ ಕುಳಿತೇನು ಮಾಡೋದು? ನಾನಂತೂ ಮಲಗು ತ್ತೇನೆ," ಎಂದು ನುಡಿದು ಒಳಗಿನ ಕೊಟಡಿಗೆ ಹೊರಟಳು.

"ಹಾಗಾದರೆ ನೀನು ಅಜ್ಜಿ ಇಲ್ಲೇ ಕೂತಿರಿ. ನಾವಿಬ್ಬರೂ ಮಲಗಿರು ತ್ತೇವೆ," ಎಂದು ನುಡಿದು ನಾಗಮ್ಮ ಮಗಳನ್ನು ಹಿಂಬಾಲಿಸಿದಳು.

ಢಕ್ಕೆಗಳನ್ನು ಕೊರಳಿಗೆ ನೇತುಬಿಟ್ಟು ನಾಲ್ಕೈದು ಜನರು ಒಂದೆಡೆ ನಿಂತು ಆವೇಶಗೊಂಡು ಬಾರಿಸುತ್ತಿದ್ದರು. ಕರ್ಣಕಠೋರವಾದ ಆ ಸದ್ದಿಗೂ ಮಿಸುಕದೆ ಸ್ತ್ರೀಪುರುಷರು ನಿದ್ರಿಸುತ್ತಿದ್ದರು. ಒಂದು ಭಾಗದಲ್ಲಿ ಹುಗ್ಗಿಯನ್ನು ಣ್ಣಲು ಜನ ಸಾಲುಗಟ್ಟಿ ಕುಳಿತಿದ್ದಿತು. ಅವರಿಂದ ತುಸು ದೂರದಲ್ಲಿ ಐದು ಕೊಪ್ಪರಿಗೆಗಳಲ್ಲಿ ಜೋಳದ ಹುಗ್ಗಿ ಉಗಿಯೆಬ್ಬಿಸುತ್ತಲಿದ್ದಿತು. ಹುಗ್ಗಿ ತುಂಬಿದ ಬಕೀಟುಗಳನ್ನೂ ಸಟ್ಟುಗಗಳನ್ನೂ ಹಿಡಿದುಕೊಂಡು ಬಡಿಸುವವರು ಅತ್ತ ಇತ್ತ ಧಾವಿಸುತ್ತಿದ್ದರು. ಉಂಡು, ನೀರು ಕುಡಿದು, ಎಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಕೆಲವರು ಅಲ್ಲಿಂದೆದ್ದು ಹೊರಡುತ್ತಲೂ ಮೊದಲೇ ಕಾಯ್ದಿದ್ದ ಬೇರೆಯವರು ಸ್ಥಳ ಹಿಡಿದು ಕೂತುಕೊಳ್ಳುತ್ತಿದ್ದರು. ಮತ್ತೆ ಎಲೆ ಹಾಕುವುದು, ಮತ್ತೆ ಹುಗ್ಗಿ ನೀಡುವುದು, ಮತ್ತೆ ಗದ್ದಲ.

ಜಾತ್ರೆಯ ಆ ಮಹಾ ಗಲಾಟೆ ಸರಸುವಿಗೆ ಹೊಸದೇನೂ ಆಗಿರಲಿಲ್ಲ. ತನಗೆ ತಿಳಿವು ಬಂದಂದಿನಿಂದ ಪ್ರತಿ ವರುಷವೂ ಆಕೆ ಅದನ್ನು ಕಂಡಿದ್ದಾಳೆ; ಮೂರು ರಾತ್ರಿ ತಪ್ಪದೆ ಅಲ್ಲಿಗೆ ಬಂದು ಬಯಲಾಟ ನೋಡಿದ್ದಾಳೆ. ಕರಡೀ ಮಜಲಿನವರ ಹುಚ್ಚು ಉತ್ಸಾಹ ಕಂಡು ನಲಿದಿದ್ದಾಳೆ. ಗೀಗೀ ಪದಗಳ, ಲಾವಣಿಗಳ ಚೆಲುವನ್ನು ಸವಿದಿದ್ದಾಳೆ. ಆದರೆ ಯಾವ ಸಲವೂ ಅನುಭವಕ್ಕೆ ಬರದಿದ್ದ ಅಪೂರ್ವ ರಸವೊಂದು ಈ ಸಲ ತನ್ನ ಅನುಭವಕ್ಕೆ ಬಂದಂತಾಗು ತ್ತಿದೆ ಆಕೆಗೆ. ಅದುವರೆಗೆ ಆ ಎಲ್ಲ ಗದ್ದಲವನ್ನು ಕಂಡರೂ ಅದರಿಂದ ತಾನು ದೂರವುಳಿದಿದ್ದ ಹಾಗಿದ್ದಿತು. ಆದರೆ ಈಗ ಮಾತ್ರ ಹಾಗಾಗದೆ, ಜಾತ್ರೆಯ ಪ್ರತಿಯೊಂದು ಅಂಶವೂ ತನ್ನನ್ನು ಪ್ರಭಾವಿತಗೊಳಿಸುತ್ತಿರುವಂತೆ

ತೋರುತ್ತಿದ್ದಿತು. ಉತ್ಸವದ ಉನ್ಮಾದಮಯ ವಾತಾವರಣದಲ್ಲಿ ತಾನೂ ಉನ್ಮಾದಿತಳಾಗುತ್ತಿರುವಂತೆ ಭಾಸವಾಗುತ್ತಿದ್ದಿತು.

ಐದಾರು ನಿಮಿಷಗಳ ವರೆಗೆ ಬಾರಿಸಿದ ಬಳಿಕ, ದೇವರಿಗೆ ಕೈ ಮುಗಿದು ಕರಡೀಮಜಲಿನ ಜನ ಕೆಳಗೆ ಕುಳಿತರು. ಆ ಸದ್ದು ನಿಂತುಹೋಗುತ್ತಲೂ ಪಕ್ಕದ ಆವರಣದಲ್ಲಿ ನಡೆದಿದ್ದ ಲಾವಣಿಯ ಸ್ವರ ಕೇಳಬರತೊಡಗಿತು. ಕಣಕದ ಹಿಟ್ಟಿನಂತೆ ನಯವಾದ ಸ್ವರ. ಕೊಳಲಿನ ಇನಿದನಿಯನ್ನೂ ನಾಚಿಸುವ ಕೋಮಲ ಸ್ವರ. ಅದು ಹೆಣ್ಣಿನ ಕಂಠದಿಂದ ಹೊರಡುತ್ತಿದ್ದಿತೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಆ ಸ್ವರವನ್ನು ಕೇಳಿಯೇ ಆ ಹೆಣ್ಣಿನ ವಯಸ್ಸು ಹಾಗು ರೂಪುಗಳನ್ನು ಊಹಿಸಬಹುದಾಗಿದ್ದಿತು. ಹಾಡುತ್ತಿದ್ದ ಹೆಣ್ಣು ತುಂಬು ಜವ್ವನೆಯಾಗಿರಬೇಕು, ಕೋಮಲ ಶರೀರೆಯಾಗಿರಬೇಕು... ಶೃಂಗಾರಪೂರ್ಣ ಲಾವಣಿಯ ಆ ಚರಣ ಎಷ್ಟು ಸೊಗಸಾಗಿ, ಎಷ್ಟು ಸಹಜವಾಗಿ ಹೊರಡುತ್ತಿತ್ತು ಅವಳ ಕಂಠದಿಂದ!

"ಹುಡುಕತಾರ ಕೃಷ್ಣನಾSSS

ಸಾವಿತ್ರಿ ಸತ್ಯಭಾಮೆ ಕೂಡಿ ಹುಡುಕತಾರ ಗೋಕಲಾಷ್ಟಮಿ ದಿನಾS" ಎಂದಾಕೆ ಧ್ವನಿಯೆತ್ತಿ ಹಾಡುವಾಗ ಆ ಧ್ವನಿಯೇ ಕೃಷ್ಣನಿಗಾಗಿ ಸುತ್ತುಮುತ್ತಲೂ ಹುಡುಕಾಡಿದಂತಾಗುತಿತ್ತು.

"ಎಷ್ಟು ಚೆಂದಾಗಿ ಹಾಡುತಾಳಲ್ಲ ಅಜ್ಜೀ. ಯಾವ ಹಾಡು ಇದು?" ಎಂದು ಕೇಳಿದಳು ಸರಸು.

"ಇನ್ನಾವದವ್ವ. ಅದೇ ಆ ಪುಂಡ ಕೃಷ್ಣಂದೇ. ಅಲ್ಲೇ ಹೋಗಿ ಕೇಳಬೇಕಂತೀಯೋ ಏನು?"

"ಏನೂ ಬೇಡವ್ವ. ಇಲ್ಲೇ ಚೆನ್ನಾಗಿ ಕೇಳಿಸುತ್ತದಲ್ಲ?"

"ಈ ಕರಡೀ ಮಜಲಿನ ಕರಡಿಗಳಿಗೆ ಮತ್ತೆ ದೆವ್ವ ಹತ್ತದಿದ್ದರಾಯಿತು."

ಸರಸು ನಕ್ಕು ಸುಮ್ಮನಾದಳು. ಹಾಡು ಕೇಳಬರುತ್ತಿತ್ತು :

"ವಾಮನ ಲಂಬೋದರಿ
ವಸುದೇವ ದೇವಕೀ ನಂದನಾ
ಯಶೋದಾ ಕೇಳತಾಳ ಕಂಡೀರೇನ
ಗೋಪಾಲ ಬಾಲ ಪಾಲನಾSS"

ಲಾವಣಿಯು ಆ ಚರಣದೊಂದಿಗೆ ಸರಸುವಿನ ಬಗೆಗಣ್ಣಿನೆದುರಿಗೆ ತುಂಟ ಕೃಷ್ಣನ ಮುದ್ದು ಮೊಗ ಬಂದು ನಿಂತಂತಾಯಿತು. ಗೋಪಿಯರೊಂದಿಗೆ ಆಟವಾಡುತ್ತ, ಯಾರ ಕೈಗೂ ಸಿಲುಕದೆ ಥಟ್ಟನೆ ಮಾಯವಾಗಿ ಮತ್ತೆ ಮೊಗದೋರಿ, ಮತ್ತೆ ಅದೃಶ್ಯನಾಗಿ ಸರಸಕೇಳಿಯಲ್ಲಿ ನಿರತನಾಗಿರುವ ಶ್ರೀಕೃಷ್ಣ ! ಆತನನ್ನು ಕಂಡು ಮೋಹಿತರಾಗಿ ಆತ ಕುಣಿಸಿದಂತೆ ಕುಣಿಯುತ್ತಿರುವ ನೂರಾರು ಗೋಪಿಯರಲ್ಲಿ ತಾನೂ ಒಬ್ಬಳೆಂದು ಸರಸುವಿಗೆನ್ನಿಸಿತು. ಎಲ್ಲ ಗೋಪಿಯರಂತೆ ತಾನೂ ಒಬ್ಬ ಸಾಮಾನ್ಯ ಗೋಪಿಯಲ್ಲ—ತಾನೇ ರಾಧಾರಾಣಿ, ಶ್ರೀಕೃಷ್ಣನ ಮೆಚ್ಚಿನ ತರುಣಿ....ಮನಮೋಹಕ ರೂಪದ ಕೃಷ್ಣ....ಆತನ ಪ್ರೀತಿಪಾತ್ರಳಾದ ರಾಧೆ....ಗೋಪಿಯರೆಲ್ಲ ಕುಣಿಯುತ್ತಿದ್ದಾರೆ—ವರ್ತುಲವಾಗಿ ರೂಪುಗೊಂಡು. ತಾನು ಮತ್ತು ಶ್ರೀಕೃಷ್ಣ ಇಬ್ಬರೆ ಆ ವರ್ತುಲದ ನಡುವೆ ನಿಂತು ನರ್ತಿಸುತ್ತಿದ್ದಾರೆ. ಸರಸು ಕಣ್ಣು ಮುಚ್ಚಿ ಆ ದೃಶ್ಯವನ್ನು ಕಲ್ಪಿಸಿಕೊಳ್ಳುತ್ತಿದ್ದಳು. ಲಾವಣಿಯ ಚರಣ ಹರಿದು ಬರುತ್ತಿತ್ತು :

"ಭಂಗಾರ ಬಳೀ ಚಂದ್ರಹಾರ
ಕೊರಳಾಗ ರತ್ನದ ಮಣಿ
ತಬಲ ತಂಬೂರಿ ವೀಣಾ ತಗೊಂಡು
ನಾಚ ಮಾಡ್ತಾಳ ನಾಯ್ಕಿಣಿ
ತಾಳ ಮದಲಿ ಗತ್ತಿನೊಳಗ ರಾಧಕೀ
ಕುಣಿಯತಾಳ ಶಿರೋಮಣೀ...."

ಹಾಡುವಾಕೆ ಸ್ವರವೇರಿಸಿ ಮೈಮರೆತು ಹಾಡುತ್ತಿದ್ದಳು :

"ಪುಗಡೀ ಆಟ ಏನ ಹೇಳಲಿ
ತಾಳಗತ್ತ ಮಾಡಿದಾಂಗ
ನಗಾರಿ ನುಡಿದಾಂಗ
ದುಮುದುಮಿ ಹೊಡಿದಾಂಗ
ನೌಬತ್ತ ಬಡಿದಾಂಗ
ಕೊಂಬಕಾಳಿ ಹಿಡಿದಾಂಗ
ಸಿಡ್ಲ ಮಿಂಚ ಕಡಿದಾಂಗ

ಮಗ್ಗಿ ಪಾಟ್ಲೆ ಹೆಣೆದ್ಹಾಂಗ
ಸುದ್ದ ನವಿಲ ಕುಣಿದಾಂಗ
ತಂಡ ತಂಡ ನೆರೆದಿತ್ರೊ ಜನಾ
ಕುಣಿಕುಣಿದು ದಣಿದು ಬ್ಯಾಸತ್ತು ನಿಂತಿದಾರ
ಗೋಕುಲಾಷ್ಟಮಿಾ ದಿನಾssss"

ಕೃಷ್ಣನೊಂದಿಗೆ ತಾನೂ ಕುಣಿದು ಕುಣಿದು ದಣಿದು ಒರಗಿದ ಹಾಗೆ ತೋರಿತು ಸರಸೂಗೆ. ಕಟ್ಟೆಯ ಮೇಲಿನ ಕಂಬಕ್ಕೆ ತೋಳುಗಳನ್ನು ಆನಿಸಿಟ್ಟು ಆಕೆ ಕಣ್ಣು ಮುಚ್ಚಿಕೊಂಡು ಕುಳಿತಿದ್ದಳು. ಒಳಗಣ್ಣಿನೆದುರಿಗೆ ಇನ್ನೂ ಕೃಷ್ಣ ಕುಣಿಯುತ್ತಿದ್ದ. ಪುಟ್ಟ ಕಿರೀಟವನ್ನು ತಲೆಗಿಟ್ಟುಕೊಂಡು ಅದಕ್ಕೆ ನವಿಲುಗರಿಯನ್ನು ಸಿಕ್ಕಿಸಿಕೊಂಡ ಕೃಷ್ಣ....ಕೃಷ್ಣನ ವೇಷದಲ್ಲಿ ಕಾಣುವ ಆ ಮುಖ ಯಾರ ಹಾಗಿದೆ ? ಸ್ವಾಮಿಗಳ ಹಾಗೆಯೆ ? ಶಿವಮೂರ್ತಿಯ ಹಾಗೆಯೆ ? ಸಿದ್ದವೀರಸ್ವಾಮಿ....ಅವರ ಮಾದಕ ಕಣ್ಣುಗೊಂಬೆಗಳು....ತುಟಿಗಳ ಮೂಲೆಗಳಲ್ಲಿ ನರ್ತಿಸುವ ಮಂದಹಾಸ....ಕೃಷ್ಣನ ರೂಪದಲ್ಲಿ ತನ್ನೆದುರಿಗೆ ಕಾಣಿಸಿಕೊಂಡು ತನ್ನನ್ನು ಆಕರ್ಷಿಸುತ್ತಿರುವರೇನೊ ಸ್ವಾಮಿಗಳು....

"ಸರಸೂ, ಸರಸೂ...." ಆಗತಾನೆ ಹೊರಗೆ ಬಂದ ಗದಿಗೆವ್ವ ಅವಳೆದುರಿಗೆ ನಿಂತು ಕೂಗುತ್ತಿದ್ದಳು.

"ಓ....ಯಾರು ಅವರು ? ನೀವೇ ?" ಎಂದು ಹೇಳುತ್ತಾ ಸರಸು ಕಣ್ಣೆವೆಗಳನ್ನು ಚಿಮುಕಿಸಿದಳು.

"ನಿದ್ರೆ ಬಂದಿತೇ ಸರಸೂ ?"

"ಇಲ್ಲರೀ, ಇಲ್ಲ."

"ಬರುತ್ತಿದ್ದರೆ ಸಂಕೋಚ ಮಾಡಿಕೊಳ್ಳಬೇಡ ತಾಯಿಾ. ಒಳಗೆ ಹೋಗಿ ಮಲಗಿಕೊಂಡು ಬಿಡು. ಆಟ ಸುರುವಾಗುತ್ತಲೂ ಎಬ್ಬಿಸುತ್ತೇನೆ."

"ಇಲ್ಲರೀ ಇಲ್ಲ. ನಿದ್ರೆ ಬಂದಿರಲಿಲ್ಲ. ಹಾಡು ಕೇಳುತ್ತ ಹಾಗೇ ಕಣ್ಣು ಮುಚ್ಚಿಕೊಂಡಿದ್ದೆ ನಷ್ಟೆ."

"ಹಾಡು ? ಯಾವ ಹಾಡು ? ಓಹ್ಹೊ....ಆಚೆಯ ಅಂಗಳದಲ್ಲಿ ನಡೆದಿರುವ ಲಾವಣಿಯನ್ನೋ ?" ಎಂದು ನುಡಿದು, ಗದಿಗೆವ್ವ ಒಂದು ಕ್ಷಣ

ತಡೆದು ಕಿವಿಗೊಟ್ಟು ಕೇಳಿ—"ಹುಡುಕತಾರ ಕೃಷ್ಣನಾ! ರಾಧಾಕೃಷ್ಣರ ಹಾಡೋ ಏನೊ. ಅಲ್ಲೇ ಹೋಗಿ ಕೇಳೋಣ ಬರ್ತೀಯಾ ಸರಸೂ? ಹಾಡುವವರ ಎದುರಿಗೇ ಕೂತು ಕೇಳಿದರೆ ಹೆಚ್ಚು ಸೊಗಸು," ಎಂದಳು.

"ಹೋಗಿ ಬರಲಾ ಅಜ್ಜಿ?"

"ಮನಸ್ಸಿದ್ದರೆ ಹೋಗು ತಾಯಿ. ಮಾಸ್ತರತನ್ನ ಸಂಗಡ ಇದ್ದಾರಲ್ಲ. ನೋಡಿಕೊಂಡು ಬಾ," ಎಂದಳು ಅಜ್ಜಿ.

ನೆಲದ ಮೇಲೆಲ್ಲ ಒರಗಿಕೊಂಡಿದ್ದ ಸ್ತ್ರೀ ಪುರುಷರ ನಡುವೆ ದಾರಿ ಮಾಡಿಕೊಳ್ಳುತ್ತ ಅವರಿಬ್ಬರೂ ಆಟದ ಅಂಗಳವನ್ನು ದಾಟಿ ಆಚೆಯ ಬಯಲಿಗೆ ಅಡಿಯಿಟ್ಟರು. ಉತ್ತರ ದಿಕ್ಕಿನಲ್ಲಿದ್ದ ಕಲ್ಲಿನ ಕಟ್ಟೆಯ ಮೇಲೆ ಗ್ಯಾಸ್ ದೀಪದ ಪ್ರಖರ ಬೆಳಕಿನಲ್ಲಿ ನಿಂತುಕೊಂಡು ತರುಣಿಯೊಬ್ಬಳು ಹಾಡುತ್ತಲಿದ್ದಳು. ಎಡಗೈಯಲ್ಲಿ ಡಬ್ಬು ಹಿಡಿದುಕೊಂಡು ಹಾಡು ಹೇಳುತ್ತ ಒಂದು ಚರಣ ಮುಗಿಯುತ್ತಲೂ ಒಂದೆರಡು ಸಲ ಡಬ್ಬು ಬಾರಿಸುತ್ತಿದ್ದಳು. ಕೆಳಗಡೆ ನೆಲದ ಮೇಲೆ ಜನ ಗುಂಪುಗೂಡಿ ಕುಳಿತು ಅವಳ ಮುಖವನ್ನೇ ದಿಟ್ಟಿಸುತ್ತ ಹಾಡು ಕೇಳುವುದರಲ್ಲಿ ತಲ್ಲೀನವಾಗಿದ್ದಿತು. ಆಕೆ ಸ್ವರವೆತ್ತಿ ವಿಶೇಷ ಜಾಣ್ಮೆ ಪ್ರದರ್ಶಿಸಿದಾಗ ಜನದ ನೆರವಿಯಿಂದ "ವಾಹವ್ವಾ", "ಶಹಬ್ಬಾಸ್," "ಭಪ್ಪರೆ ಹುಡುಗೀ," "ಹೌದೇ!" ಎಂಬ ಪ್ರಶಂಸೆಯ ಉದ್ಗಾರಗಳು ಹೊರಡುತ್ತಿದ್ದುವು. ಹಾಡುವಾಕೆ ಒಂದು ಸಲ ಅವರ ಕಡೆಗೆ ತಿರುಗಿ ಸೊಗಸಾಗಿ ಕೊರಳು ಬಳುಕಿಸಿ, ಮೊದಲಿನಕಿಂತಲೂ ಹೆಚ್ಚು ಉತ್ಸಾಹದಿಂದ ಧ್ವನಿ ತೆಗೆದು ಮುಂದುವರಿಸುತ್ತಿದ್ದಳು.

ಸರಸುವಿನ ದೃಷ್ಟಿ ಆ ಹಾಡುಗಾರ್ತಿಯ ಮೇಲೆ ಸುಳಿದು ಅತ್ತ ಇತ್ತ ಅಲೆದಾಡುತ್ತ, ದಕ್ಷಿಣದಿಕ್ಕಿನ ಮೂಲೆಯೊಂದರಲ್ಲಿ ಕುರ್ಚಿಗಳ ಮೇಲೆ ಕುಳಿತು ಹಾಡು ಕೇಳುತ್ತಿದ್ದ ಸುಶಿಕ್ಷಿತ ಯುವಕರಿಬ್ಬರನ್ನು ಗುರುತಿಸಿತು. ಅವರಲ್ಲೊಬ್ಬ ಶಿವಮೂರ್ತಿ. ಹೌದು, ಆತನೇ. ಸಂದೇಹವೇ ಇಲ್ಲ. ಕಣ್ಣುಗಳನ್ನು ಅರ್ಧ ಮುಚ್ಚಿ ತಲೆಬಾಗಿಸಿ ಧ್ಯಾನಮಗ್ನನಂತೆ ಕುಳಿತ ಆ ಭಂಗಿ ಆತನದೇ. ಮೆಲ್ಲನೆ ಬೀಸಿಬರುತ್ತಿದ್ದ ಗಾಳಿಗೆ ಅತ್ತ ಇತ್ತ ತೂಗಾಡುವ ಅದೇ ಆ ಮುಂಗುರುಳು....ಶಿವಮೂರ್ತಿ....ತನ್ನ ಪ್ರೀತಿಯ ಶಿವಮೂರ್ತಿ.... ಸರಸುವಿನ ಎದೆ ಧಡಧಡನೆ ಹಾರತೊಡಗಿತು. ಒಂದೆರಡು ನಿಮಿಷಗಳ ಹಿಂದೆ

ಸ್ವಾಮಿಯ ರೂಪಕ್ಕೆ ಮರುಳಾಗಿ ತಾನು ಹುಚ್ಚಿಯಂತಾಗಿದ್ದುದನ್ನು ಜ್ಞಾಪಿಸಿಕೊಂಡಾಗ ಆಕೆಗೆ ತನ್ನ ಬಗೆಗೆ ತನಗೇ ಹೇಸಿಕೆಯೆನ್ನಿಸಿತು. ಮೂರ್ತಿಯಂಥ ಚೆಲುವ ಚಂದ್ರಾಮ ತನ್ನವನಾಗಿರುವಾಗ ಆ ಕಾವಿಬಟ್ಟೆಯ ಶುಂಭನಿಗೆ ಹೇಗಾದರೂ ಮರುಳಾದೆನೋ ತಾನು? ಶಿವಮೂರ್ತಿಯ ಒಂದು ಮುಂಗುರುಳಿನ ಮೇಲೆ ಇಂಥ ನೂರು ಸ್ವಾಮಿಗಳನ್ನು ನಿವಾಳಿಸಿ ಒಗೆದು ಬಿಡಬಹುದು....

"ಕೂತುಕೊಳ್ಳುತ್ತೀಯಾ ಸರಸೂ?" ಅದು ಗದಿಗೆವ್ವನ ಪ್ರಶ್ನೆ.

"ಎಲ್ಲಿ?"

"ಒಳಗಡೆ ಕುರ್ಚಿಗಳಿವೆ, ತರಿಸಲಾ?"

"ಏನೂ ಬೇಡ ಬಿಡಿರಿ. ಯಾಕೆ ಗದ್ದಲ ಸುಮ್ಮನೆ?" ಎಂದಾಕೆ ಹೇಳುತ್ತಿದ್ದಂತೆಯೆ ಹತ್ತಿರ ಕುಳಿತಿದ್ದ ಮೂರು ನಾಲ್ಕು ಜನರು ಕೋಪದಿಂದ ಅವರ ಕಡೆಗೆ ತಿರುಗಿ—"ಹಾಡು ಕೆಡಿಸಬ್ಯಾಡ್ರಿ. ಒಳಗ ಹೋಗಿ ಮಾತಾಡ್ರೆಲ್ಲ!" ಎಂದು ಕೂಗಿಕೊಂಡರು. ಅವರ ಕೂಗಿನಿಂದಾಗಿ ಅನೇಕರ ಲಕ್ಷ್ಯ ಅತ್ತ ತಿರುಗಿತು. ಕುರ್ಚಿಯ ಮೇಲೆ ಕುಳಿತು ತದೇಕಚಿತ್ತದಿಂದ ಹಾಡು ಕೇಳುತ್ತಿದ್ದ ಯುವಕರೂ ಅತ್ತ ತಿರುಗಿದರು. ತಲೆಯನ್ನು ಮೇಲಕ್ಕೆತ್ತಿ ಶಿವಮೂರ್ತಿಯೂ ಅವಳ ಕಡೆಗೆ ದೃಷ್ಟಿ ಹೊರಳಿಸಿದ. ಗ್ಯಾಸ್‌ದೀಪದ ಪ್ರಖರ ಬೆಳಕಿನಲ್ಲಿ ಸರಸುವನ್ನು ಗುರುತಿಸುವುದೇನೂ ಕಷ್ಟದ ವಿಷಯವಾಗಿರಲಿಲ್ಲ. ಆಕೆಯನ್ನು ಕಂಡೊಡನೆಯೆ ಆತ ಮೇಲಕ್ಕೆದ್ದು—"ಸರಸುವೂ ಬಂದಿರುವಳೇ? ಜೊತೆಗಿರುವಾಕೆ ಯಾರೊ?" ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಳ್ಳುತ್ತ ಆಕೆಯನ್ನೆ ದಿಟ್ಟಿಸತೊಡಗಿದ.

"ಓಹ್ಹೋ. ಗದಿಗೆವ್ವನವರ ಸವಾರಿಯೂ ಬಂದಿದೆಯಲ್ಲ ಜಾತ್ರೆಗೆ!" ಎಂದೆನ್ನುತ್ತ ಆತನ ಜೊತೆಗಾರನೂ ಕುರ್ಚಿಯನ್ನು ಬಿಟ್ಟು ಎದ್ದುನಿಂತ.

"ಗದಿಗೆವ್ವ?"

"ಅದೇ ಮಹಾರಾಯಿತಿ. ಅಕ್ಕನ ಬಳಗದ ಕಾರ್ಯದರ್ಶಿನಿ. ನೀವು ಇನ್ನೂ ನೋಡಿರಲಿಲ್ಲವೇ ಆಕೆಯನ್ನು?"

"ಇಲ್ಲ ಪಾಟೀಲ. ಅಂಥವರ ಪರಿಚಯ ಯಾತಕ್ಕೆ ನನಗೆ?"

"ಊರಿಗೆಲ್ಲಾ ಪರಿಚಯವಂತೆ. ನಿಮಗೊಬ್ಬರಿಗೇ ಇಲ್ಲದಿರುವದು ಆಶ್ಚರ್ಯವೇ ಸರಿ. ಆಕೆಯು ಜೊತೆಗಿರುವವರು ಯಾರು ಗೊತ್ತೇ ನಿಮಗೆ?"

"ಗೊತ್ತು. ಚೆನ್ನಾಗಿ ಗೊತ್ತು," ಎಂಬ ಉತ್ತರ ಶಿವಮೂರ್ತಿಯ ನಾಲಗೆಯ ಮೇಲೆಯೆ ಬಂದಿದ್ದಿತಾದರೂ ಆತ ಅದನ್ನು ಹೊರಗೆಡಹದೆ ತಡೆದು ಹಿಡಿದ. ಅವಕ್ಕೆ ಪ್ರತಿಯಾಗಿ—"ನಿಮಗೆ ಗೊತ್ತೇ ಆಕೆ?" ಎಂದು ಪ್ರಶ್ನಿಸಿದ.

"ಪರಿಚಯವಿಲ್ಲ. ಆದರೆ ಆಕೆಯ ವಿಷಯವೆಲ್ಲ ಗೊತ್ತು. ಆಕೆ ಬಸಪ್ಪಸೆಟ್ಟರ ಮಗಳು ಸರಸ್ವತೀದೇವಿ. ಅಕ್ಕನ ಬಳಗಕ್ಕೆ ಆಗಾಗ ಬರುತ್ತಾಳೆ. ಚೆನ್ನಾಗಿ ಓದಿಕೊಂಡಿರಬೇಕು. ಆದರೆ....ಪಾಪ....ಏನು ಕರ್ಮವೋ ಆಕೆಯದು...." ಎಂದು ಪಾಟೀಲ ಹೇಳುತ್ತಿದ್ದ ಹಾಗೆಯೆ ನೆಲದ ಮೇಲೆ ಕುಳಿತಿದ್ದ ರುಮಾಲುಗಳ ರಸಿಕರು ಆತನ ಕಡೆಗೆ ತಿರುಗಿ ಒರಟು ಸ್ವರದಲ್ಲಿ—"ಯಾಕ ಬಾಯಿಮಾಡುತೀರೀ ರಾಯರೇ. ಹೊರಗ ಹೋಗಿಯಾದ್ರೂ ಪಿಟಿಪಿಟಿ ಹಚ್ಚಿಕೊಳ್ಳಿರಲ್ಲ," ಎಂದು ಕಿರುಚಿದರು. ಸರಿ. ಪಾಟೀಲ ತನ್ನ ಮಾತನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು.

ಅಷ್ಟರೊಳಗಾಗಿ ಗದಿಗೆವ್ವ ಸರಸುವನ್ನು ಕರೆದುಕೊಂಡು ಅಲ್ಲಿಂದ ಹೊರಟುಹೋಗಿದ್ದಳು. ಶಿವಮೂರ್ತಿಗೂ ಅಲ್ಲಿ ನಿಲ್ಲಲಾಗಲಿಲ್ಲ. ಸರಸು ಹೋದಲ್ಲಿಗೆ ಹೋಗಬೇಕೆಂದು ಆತನ ಮನಸ್ಸು ಆಶಿಸುತ್ತಿತ್ತು. ಆದರೆ ಜೊತೆಯಲ್ಲಿ ಪಾಟೀಲನಿದ್ದುದರಿಂದ ಧೈರ್ಯವಾಗಿ ಮುನ್ನುಗ್ಗುವಂತಿರಲಿಲ್ಲ.

"ಸಾಕು ಈ ಲಾವಣಿಗಳ ಸಹವಾಸ. ಕೊಂಚ ತಿರುಗಾಡಿ ನೋಡೋಣ ಬರ್ರಿ," ಎಂದು ಪಾಟೀಲ ಅಲ್ಲಿಂದ ಹೊರಟುನಿಂತ.

ಗೆಳೆಯರಿಬ್ಬರೂ ಆ ಭಾಗವನ್ನು ಬಿಟ್ಟು ಆಟದ ಅಂಗಳಕ್ಕೆ ಬಂದರು. ಮಾತನಾಡಿಕೊಳ್ಳುವವರಿಗೆ ಅಲ್ಲಿ ಯಾರ ಅಡೆತಡೆಯೂ ಇರಲಿಲ್ಲ. ಅಟ್ಟಣೆಯೊಂದರ ಮಧ್ಯೆ ಗುಡಾರ ಇಳಿಬಿಟ್ಟು ಅದರ ಹಿಂದೆ ಕುಳಿತು ಪಾತ್ರಧಾರಿಗಳು ಮುಖಗಳಿಗೆ ಬಣ್ಣ ಹಚ್ಚಿಕೊಳ್ಳುತ್ತಿದ್ದರು. ಸ್ತ್ರೀ ಪಾತ್ರಧಾರಿ ಹುಡುಗ ತನ್ನ ಹುಬ್ಬುಗಳಿಗೆ ಕಪ್ಪುಬಣ್ಣ ಹಚ್ಚುತ್ತಲಿದ್ದ.

"ಯಾವ ಪಾತ್ರವಪ್ಪ ನಿನ್ನದು?" ಎಂದು ಪ್ರಶ್ನಿಸಿದ ಪಾಟೀಲ.

"ಪರೌಢಮತಿ," ಎಂದು ನುಡಿದು ಆ ಹುಡುಗ ತನ್ನ ಕೆನ್ನೆಗಳಿಗೆ ದೃಷ್ಟಿಯ ಬೊಟ್ಟು ಇಟ್ಟುಕೊಳ್ಳುವುದರಲ್ಲಿ ನಿರತನಾದ.

"ಪರೌಢಮತಿ....! ತನ್ನ ಪಾತ್ರದ ಹೆಸರನ್ನು ತಾನೇ ಸರಿಯಾಗಿ ಹೇಳಲಾರ. ಇನ್ನು ಬೇರೆ ಪಾತ್ರಗಳು ಹೇಗೆ ಹೇಳುವವೊ. ಬಯಲಾಟಗಳ ಉಚ್ಚಾರವೇ ವಿಚಿತ್ರ," ಎಂದು ಹೇಳಿ ಪಾಟೀಲ ನಕ್ಕ.

"ಪಾಪ, ಅಶಿಕ್ಷಿತ ಹಳ್ಳಿಗರು. ಓದಿದವರಲ್ಲ, ಬರೆಯುವವರಲ್ಲ. ಏನೋ ಒಂದು ಉತ್ಸಾಹದಿಂದ ಆಡುತ್ತಾರೆ. ಅವರ ಉಚ್ಚಾರ ಹೇಗಿದ್ದರೇನು ? ಉತ್ಸಾಹಕ್ಕೇನೂ ಕೊರತೆಯಿಲ್ಲವಲ್ಲ ?" ಎಂದ ಶಿವಮೂರ್ತಿ.

ಪ್ರೌಢಮತಿಯ ಪಾತ್ರಧಾರಿಯ ಕಾಲಿಗೆ ಗೆಜ್ಜೆಗಳನ್ನು ಕಟ್ಟುತ್ತಲಿದ್ದ ಹಳ್ಳಿಗನೊಬ್ಬನಿಗೆ ಇವರಾಡುವ ಮಾತು ಕೇಳಿಸಿರಬೇಕು. ಆತ ಮುಖವೆತ್ತಿ ಇವರಿಬ್ಬರನ್ನೂ ದಿಟ್ಟಿಸುತ್ತ ನುಡಿದ: "ನೆಟ್ಟಗ ಮಾತಾಡಲಾಕ ಹ್ಯಾಂಗ ಬರಬೇಕ್ರೀ ನಮ್ಮಂಥ ಹಳ್ಳೀ ಮುಕ್ಕರಿಗೆ ? ಏನೋ ಹ್ಯಾಂಗೋ ಆಡತೀವಿ ಆಯ್ತು."

"ಇಷ್ಟೆಲ್ಲ ಕಷ್ಟಪಟ್ಟು ಆಡಿದರೆ ನಿಮಗೆ ಸಿಕ್ಕುವ ಹಣವಾದರೂ ಎಷ್ಟು ?"

"ಐದು ಹತ್ತು ರೂಪಾಯಿ ಸಿಕ್ಕಬಹುದು."

"ಇಷ್ಟಕ್ಕಾಗಿ ಇಲ್ಲಿಯ ತನಕ ಬಂದು ಆಡಿ ಹೋಗುತ್ತೀರಾ ?" ಎಂದು ಬೆರಗುಗೊಂಡ ಧ್ವನಿಯಲ್ಲಿ ಪ್ರಶ್ನಿಸಿದ ಪಾಟೀಲ.

"ಇಷ್ಟಕ್ಕಾಗಿ ಅಂದರೇನ್ರಿ ? ನಾವು ಆಡೂದು ಈ ಐದು ರೂಪಾಯಿಗಲ್ಲ. ಏನೋ ನಮ್ಮ ತಲ್ಯಾಗಿನ ಹುಚ್ಚು ಈ ಆಟ. ಅದನ್ನ ತೀರಿಸಿಕೊಳ್ಳಾಕ ಆಡುತೀವಿ. ನಾಕು ಮಂದಿ ನೋಡಿ ಸಂತೋಸಪಡತಾರ. ನಾವೂ ಸಂತೋಸಪಡತೀವಿ. ಈ ಐದು ರೂಪಾಯಿ ಏನೋ ಸ್ವಾಮಿಗಳ ಆಶೀರ್ವಾದ ಅಂತ ತಗೊಳ್ಳತೀವಿ. ಒಂದು ಆಟ ಆಡಬೇಕಾದರ ನಮಗ ಐವತ್ತು ಅರವತ್ತು ರೂಪಾಯಿ ಖರ್ಚು ಬಂದಿರುತೈತಿ."

"ಅದನ್ನೆಲ್ಲ ಯಾರು ಕೊಡುತಾರೆ ?"

"ನಾವೇ. ಇನ್ಯಾರು ಕೊಡಬೇಕು ? ನಮ್ಮ ಹುಚ್ಚಿಗೆ ನಾವು ಆಡುತೀವಿ ಅಂದ ಮ್ಯಾಲ ನಾವೇ ಹಾಕಬೇಕಲ್ಲ ರೊಕ್ಕಾ ?"

ಹುಚ್ಚು! "ಆ ಹುಚ್ಚನ್ನೇ ನಾವು ಕಲೆ ಎಂದು ಕರೆಯುವುದು. ಕಲೆ ಎಂಬ ಶಬ್ದ ಈ ಹಳ್ಳಿಗರಿಗೆ ತಿಳಿದಿಲ್ಲವಾದರೂ ಅದರ ಮರ್ಮವನ್ನವರು ತಿಳಿದುಕೊಂಡಿದ್ದಾರೆ. ಅನಾದಿಕಾಲದಿಂದ ಅವರ ಬದುಕಿನಲ್ಲಿ ಸಮರಸವಾಗಿ ಬೆರೆತುಕೊಂಡು ಬಂದಿದೆ ಕಲೆ. ಅದರ ವಿವಿಧ ಮುಖಗಳೇ ಆಟ ಬಯಲಾಟಗಳು, ಕೋಲು ಕುಣಿತಗಳು, ಲಾವಣಿ ಗೀಗೀ ಪದಗಳು, ಜಾನಪದಗೀತೆಗಳು...." ಗೆಳೆಯರಿಬ್ಬರೂ ಪರಸ್ಪರರ ಮುಖ ನೋಡಿಕೊಂಡು ಆ ಸ್ಥಳ ಬಿಟ್ಟು ಹೊರಟರು.

"ಸ್ವಲ್ಪ ಚಹವನ್ನಾದರೂ ಕುಡಿದು ಬರೋಣವೇ ಮೂರ್ತಿ? ರಾತ್ರಿಯೆಲ್ಲ ಜಾಗರಣೆ ಬೇರೆ ಮಾಡಬೇಕಲ್ಲ?"

"ನಿಮಗೆ ಬೇಕಿದ್ದರೆ ಕುಡಿದು ಬರೋಣ. ಆದರೆ ಈ ಜಾತ್ರೆಯಲ್ಲಿ ಒಳ್ಳೆಯ ಚಹ ಎಲ್ಲಿ ಸಿಕ್ಕೀತು?"

"ಸಿಕ್ಕಂಥದನ್ನೇ ಕುಡಿಯುವದು. ಜಾತ್ರೆ ನೋಡಲು ಬಂದ ಬಳಿಕ ಅದರ ಮೋಜನ್ನೆಲ್ಲ ಸವಿಯಲೇಬೇಕಲ್ಲ?"

"ಬರ್ರಿ ಹಾಗಾದರೆ, ಯಾವದಾದರೊಂದು ಅಂಗಡಿಗೆ ನುಗ್ಗೋಣ," ಎಂದು ಶಿವಮೂರ್ತಿ ಮುಂದೆ ಸಾಗಿದ.

"ಇಂದು ನೀವಿತ್ತ ಬಂದದ್ದೇ ಆಶ್ಚರ್ಯದ ವಿಷಯ," ಎಂದು ನುಡಿದ ಪಾಟೀಲ.

"ಇಂಥ ಗದ್ದಲವೆಲ್ಲ ನನಗೆ ಹಿಡಿಸುವದಿಲ್ಲವೆಂಬುದೇನೊ ನಿಜ. ಆದರೆ ಇಂದು ಸಾಯಂಕಾಲ ಆ ದೇಶಪಾಂಡೆ ನನ್ನ ತಲೆ ಕೆಡಿಸಿಬಿಟ್ಟಿದ್ದ. ಅವನ ಕೈಯಲ್ಲಿ ನಾನು ಬಹಳ ದಿನ ತಡೆಯಲು ಸಾಧ್ಯವಿಲ್ಲವೆಂದೇ ತೋರುತ್ತದೆ. ನನ್ನನ್ನು ಡಿಸ್‌ಮಿಸ್ ಮಾಡಿಸಿಯೆ ಬಿಡಬೇಕೆಂದು ಆತ ಹಟ ತೊಟ್ಟಿರುವನೊ ಏನೊ...."

"ಯಾಕೆ? ಮತ್ತೇನಾಯಿತು?"

"ಅಂದು ಹಿಂದೊಮ್ಮೆ ಬಂದಿದ್ದನಲ್ಲ ಆ ಕಣಿಕೊಪ್ಪದ ರೈತ. ನಿನ್ನೆ ಆತ ಮತ್ತೆ ಬಂದಿದ್ದ. ಬೇಗ ಮುದತ್ತು ತೆಗೆದುಕೊಳ್ಳಬೇಕೆಂದು ಅಂಗಲಾಚಿ ಬೇಡಿಕೊಂಡ. ನನ್ನೊಡನೆ ಆತ ಮಾತನಾಡುತ್ತಿದ್ದುದನ್ನು ದೇಶಪಾಂಡೆ ಯಾವಾಗ ನೋಡಿಕೊಂಡಿದ್ದನೇನೊ-ಇಂದು ನನ್ನನ್ನು ಕರೆದು

ಆ ರೈತನಿಂದ ಸಾಧ್ಯವಾದಷ್ಟು ಲಂಚ ತಿನ್ನಬೇಕೆಂದೂ ಅದರಲ್ಲಿ ತನಗೂ ಅರ್ಧಪಾಲು ಕೊಡಬೇಕೆಂದೂ ಸ್ಪಷ್ಟವಾಗಿ ಹೇಳಿದ."

"ಹೀಗೆಂದನೇ? ನೀವೇನು ಉತ್ತರ ಕೊಟ್ಟಿರಿ?"

"ನನ್ನ ಸ್ವಭಾವ ನಿಮಗೆ ಗೊತ್ತಿದೆಯಲ್ಲ? ಅಂಥ ಹೇಸಿ ಕೆಲಸ ನನ್ನಿಂದ ಎಂದೂ ಆಗಲಾರದು, ಸುಮ್ಮನೆ ನನ್ನನ್ನು ಪೀಡಿಸಬೇಡಿ ಎಂದು ಸ್ಪಷ್ಟವಾಗಿ ಹೇಳಿಬಿಟ್ಟೆ. ಈ ಬಗೆಯಾಗಿ ಇದುವರೆಗೆ ನನಗೆ ಯಾರೂ ಉತ್ತರ ಕೊಟ್ಟಿಲ್ಲ—ನಿಮ್ಮ ಉದ್ಧಟತನಕ್ಕೆ ತಕ್ಕದ್ದು ಮಾಡದಿದ್ದರೆ ನನ್ನ ಹೆಸರು ದೇಶಪಾಂಡೆ ಅಲ್ಲ ಎಂದು ಪಣ ತೊಟ್ಟಿದಾನೆ ಆತ."

ಪಾಟೀಲ ಯೋಚನೆಗೊಳಗಾಗಿ ಕೊಂಚ ಹೊತ್ತು ಮೌನವಾಗಿದ್ದು, ಅನಂತರ ನುಡಿದ: "ಮುಂದೆ ಏನು ಮಾಡಬೇಕೆಂದಿರುವಿರಿ ಮೂರ್ತಿ?"

"ಏನೋ, ಯಾವುದೂ ಹೊಳೆಯಲೊಲ್ಲದು,"

"ವಿಷಯ ತುಂಬ ಕಷ್ಟಕ್ಕಿಟ್ಟುಕೊಂಡಿತಲ್ಲ? ಆತ ನಿಮಗೆ ಈ ಪ್ರಕಾರ ಶನಿಯ ಹಾಗೆ ಗುಂಟುಬೀಳಬಹುದೆಂದು ನಾನು ತಿಳಿದಿರಲಿಲ್ಲ. ನೀವೂ ಸೋಲುವವರಲ್ಲ. ಅವನಿಗಂತೂ ಸೋಲೆಂಬುವೇ ತಿಳಿಯದು. ನಿಮ್ಮಿಬ್ಬರ ಈ ಯುದ್ಧದ ಪರಿಣಾಮವೇನಾಗುವದೊ...."

"ಏನಾದೀತೆಂಬುದು ಸ್ಪಷ್ಟವೆ ಇದೆಯಲ್ಲವೆ? ಈ ನೌಕರಿ ಕಳೆದು ಕೊಂಡು ನಾನು ಮನೆಗೆ ಹೋಗಬೇಕಾಗುವುದು," ಎಂದು ವಿಷಾದಪೂರ್ಣ ಧ್ವನಿಯಿಂದ ಹೇಳಿದ ಶಿವಮೂರ್ತಿ.

"ನೌಕರಿ ಕಳೆದುಕೊಂಡೇನು ಮಾಡುವಿರಿ ಮೂರ್ತಿ? ಸುಮ್ಮನೆ ಎಲ್ಲ ರಂತೆ ನೀವೂ ದೇಶಪಾಂಡೆ ಹೇಳಿದ ಹಾಗೆ ಕೇಳಬಾರದೇ? ನಿಮಗೂ ನಾಲ್ಕು ಕಾಸು ಬರುವುದು....ನೌಕರಿಯೂ ಉಳಿಯುವುದು...."

"ಛೆ! ಪ್ರಾಣ ಹೋಗುವ ಪ್ರಸಂಗ ಬಂದರೂ ಅಂಥ ಕೆಲಸ ಮಾಡಲಿ ಕ್ಕಿಲ್ಲ ನಾನು. ಆ ಬಡ ರೈತನ ದೀನಮುಖವನ್ನು ಕಂಡರೂ ಕರುಳು ಕೊರೆ ಯುತ್ತದೆ. ಇನ್ನು ಆತನಿಂದ ಲಂಚ ತಿನ್ನುವುದು....ಹೃದಯಹೀನ ರಾಕ್ಷಸ ಕೆಲಸ ಅದು!"

"ಪ್ರಪಂಚವೆಲ್ಲ ಹೆಚ್ಚಾಗಿ ಇಂಥ ರಾಕ್ಷಸರಿಂದಲೇ ತುಂಬಿರುವಾಗ ಒಬ್ಬಿಬ್ಬರು ನಿಮ್ಮಂಥವರು ಇಲ್ಲಿ ಹೇಗೆ ಬದುಕಬಲ್ಲಿರಿ?"

“ಹೇಗೋ ! ಅಂತೂ ಬದುಕಬೇಕು,” ಎಂದು ಉದಾಸೀನತೆಯಿಂದ ಉತ್ತರವಿತ್ತ ಶಿವಮೂರ್ತಿ.

ಅವರು ಚಹ ಕುಡಿದು ಈಚೆಗೆ ಬಂದಾಗ ಬಳೆಯಂಗಡಿಯೊಂದರ ಹತ್ತಿರ ಗದಿಗೆವ್ವನೂ ಸರಸುವೂ ನಿಂತುಕೊಂಡು ಮಾತನಾಡುತ್ತಿದ್ದುದು ಕಾಣಿಸಿತು.

“ಓಹ್ಹೊ, ಆ ಮಹಾದೇವಿಯಕ್ಕನ ಅವತಾರ ಇನ್ನೂ ಇಲ್ಲೇ ಇದೆಯಲ್ಲ ? ಪಾಪ, ಆ ಹುಡುಗಿಗೆ ಯಾವ ವಚನ ಪಾಠ ಮಾಡಿಸುತ್ತಿರುವಳೊ, ಏನು ಮಂತ್ರ ಹೇಳಿಕೊಡುತ್ತಿರುವಳೊ,” ಎಂದ ಪಾಟೀಲ.

“ಆ ಗದಿಗೆವ್ವನವರ ಬಗ್ಗೆ ನಿಮಗೇನೂ ಒಳ್ಳೆಯ ಅಭಿಪ್ರಾಯವಿದ್ದಂತಿಲ್ಲವಲ್ಲ ?”

“ಒಳ್ಳೆಯದೊ, ಕೆಟ್ಟದೊ ? ನನ್ನ ಎಲೆಯಲ್ಲೇ ಕತ್ತೆ ಸತ್ತು ಬಿದ್ದಿರುವಾಗ ಆಕೆಯ ಎಲೆಯಲ್ಲಿನ ನೊಣ ಜಾಡಿಸುವ ಮೂರ್ಖತನಕ್ಕೇಕೆ ಹೋಗಬೇಕು ? ಆಕೆ ಹೇಗಿದ್ದರೂ ನನಗಾಗಬೇಕಾದುದೇನೂ ಇಲ್ಲ. ಆದರೆ ಆ ಡಾಂಭಿಕತನ ಮಾತ್ರ ನನಗೆ ಸರಿಬರುವದಿಲ್ಲ. ಸುಮ್ಮನೆ ಮಹಾದೇವಿಯಕ್ಕನ ಹೆಸರನ್ನೇಕೆ ಕೆಡಿಸಬೇಕು ? ಅಕ್ಕನನ್ನು ಆಕೆಯ ಪಾಡಿಗೆ ಬಿಟ್ಟುಬಿಡಬಾರದೇ ಇವರು ? ಅಕ್ಕನ ಬಳಗ, ವೈರಾಗ್ಯ, ಶ್ರೀಶೈಲ, ಕದಳೀಬನ, ಚೆನ್ನಮಲ್ಲಿಕಾರ್ಜುನ ಎಂದೆಲ್ಲ ಭಾಷಣ ಮಾಡುತ್ತ ಹಗಲುರಾತ್ರಿ ವ್ಯಭಿಚಾರದಲ್ಲೇ ಕೊಳೆಯುತ್ತಿರುವದೇ ? ಅಕ್ಕನ ತತ್ವಗಳಲ್ಲಿ ಒಂದನ್ನಾದರೂ ಆಚರಣೆಯಲ್ಲಿ ತರುವ ಮನಸ್ಸು ಬೇಡವೆ ? ತಾವು ಮಾಡುವ ಕುಕರ್ಮಗಳನ್ನು ಮುಚ್ಚುವುದಕ್ಕಾಗಿ ಅಕ್ಕನ ಬಳಗದ ಸೋಗು. ಇಂಥ ಡಾಂಭಿಕತನವನ್ನು ಮಾತ್ರ ನಾನು ಸಹಿಸಲಾರೆ. ನನ್ನ ಮಟ್ಟಿಗೆ ನಾನು ವ್ಯಭಿಚಾರಿಯೆಂಬುದನ್ನು ಬಹಿರಂಗವಾಗಿಯೆ ಒಪ್ಪುತ್ತೇನೆ. ಆ ಅಕ್ಕ, ಆ ಬಸವಣ್ಣ ಅಂಥವರ ಆದರ್ಶಗಳೆಲ್ಲ ನಮ್ಮಂಥ ಸಾಮಾನ್ಯರಿಗೆ ಸಾಧ್ಯವಲ್ಲ. ಆದರೆ— ಈ ಗದಿಗೆವ್ವ....ಪಾಪ, ಆ ಸೆಟ್ಟರ ಹುಡುಗಿಗೆ ಏನು ಗುರುಬೋಧೆ ನಡೆದಿದೆಯೊ....”

“ಬೇರೆಯವರನ್ನೂ ಕೆಡಿಸುವಂಥವಳೇ ಈ ಗದಿಗೆವ್ವ ?”

“ಅದು ಆಕೆಯ ಉದ್ಯೋಗವೇ ಆಗಿರುವಾಗ ಸುಮ್ಮನಿರುವಳೇ ?

ಈಚೆಗೆ ಈ ಮಠಕ್ಕೆ ತರುಣ ಸ್ವಾಮಿಗಳೊಬ್ಬರು ಬಂದಿರುವರಲ್ಲ—ಅವರನ್ನೂ ಈಕೆ ತನ್ನ ಬುಟ್ಟಿಗೆ ಬೀಳಿಸಿಕೊಂಡಿರುವಂತಿದೆ. ಅವರೂ ಒಳ್ಳೆಯ ರಸಿಕರು. ಗದಿಗೆವ್ವನಂಥ ಏಜಂಟರ ಸಹಾಯದಿಂದಲೇ ಅವರ ರಸಿಕತನ ನಡೆಯುವುದಲ್ಲವೆ ?

"ಏಜಂಟರು ? ನೀವು ಹೇಳುತ್ತಿರುವುದರ ಅರ್ಥವಾದರೂ ಏನು ಪಾಟೀಲರೆ ?"

"ನಿಮಗೆ ಇನ್ನೂ ಅರ್ಥವಾಗಲಿಲ್ಲವೆ ? ಏಜಂಟರೆಂದರೆ ಅವರಿವರನ್ನು ತಂದುಕೊಡುವವರು. ಸ್ವಾಮಿಗಳಿಗೆ ಒಬ್ಬ ಸುಂದರಿಯ ಮೇಲೆ ಆಸೆಯಾಯಿತೆಂದು ತಿಳಿಯಿರಿ. ಗದಿಗೆವ್ವನಂಥವರಿಗೆ ಆ ವಿಚಾರ ತಿಳಿಸಿದರೆ ಸಾಕು, ಕೆಲಸ ಕೈಗೂಡಿತೆಂಪೇ ತಿಳಿಯಬೇಕು."

"ಈ ಸ್ವಾಮಿಗಳೂ ಅಂಥವರೇ ಏನು ?"

"ಇವರೊಬ್ಬರೇ ಅಂಥವರೆಂದು ಏಕೆ ಹೇಳಬೇಕು ? ನೂರರಲ್ಲಿ ತೊಂಭತ್ತೊಂಭತ್ತು ಜನ ಸ್ವಾಮಿಗಳೂ ಅಂಥವರೇ. ಅದರಲ್ಲೂ ತುಂಬುಹರಯದ ಸ್ವಾಮಿಗಳನ್ನಂತೂ ಕೇಳಬೇಕಾಗಿಯೆ ಇಲ್ಲ. ಅದು ಅವರ ತಪ್ಪೆಂದೂ ನಾನು ಹೇಳುವುದಿಲ್ಲ. ತಾರುಣ್ಯದಲ್ಲಿ ಹೆಣ್ಣಿನ ಆಸೆ ತೀರ ಸ್ವಾಭಾವಿಕವಲ್ಲವೆ ? ಕಾವಿ ಬಟ್ಟೆಯಿಂದ ದೇಹವನ್ನು ಮುಚ್ಚಿದ ಮಾತ್ರಕ್ಕೆ ಮನುಷ್ಯನ ನೈಸರ್ಗಿಕ ಆಸೆ ಆಕಾಂಕ್ಷೆಗಳಿಗೂ ಮುಚ್ಚಳ ಹಾಕಲಾಗುತ್ತದೆಯೆ ? ಹೆಣ್ಣಿನ ಮುಖದರ್ಶನವಾಗದಂಥ ಅಟ್ಟಟ್ಟ ಅಡವಿಯಲ್ಲಿ ಹೋಗಿ ಕುಳಿತರೆ ಆ ಮಾತು ಬೇರೆ. ಆದರೆ ಪಾಪ, ಈ ಸ್ವಾಮಿಗಳ ಸುತ್ತುಮುತ್ತು ಸುಳಿದಾಡುವವರು ಹೆಚ್ಚಾಗಿ ಹೆಂಗುಸರೇ. ಅಕ್ಕನ ಬಳಗ, ಅಣ್ಣನ ಬಳಗ, ಎಂದು ಹೇಳಿಕೊಂಡು ಒಯ್ಯಾರದಿಂದ ಓಡಿಯಾಡುತ್ತ ಇವರು ಸ್ವಾಮಿಗಳ ಬಯಕೆಯನ್ನು ಉದ್ರೇಕಿಸುತ್ತಾರೆ. ಸಿಲ್ಕ್ ಸೀರೆಯುಟ್ಟು ತುಂಬಿದ ಎದೆ ಕಟ್ಟನ್ನು ಪ್ರದರ್ಶಿಸುತ್ತ ಸ್ವಾಮಿಗಳ ಚಿತ್ತ ಚಂಚಲಗೊಳಿಸುವ ಇಂಥ ಗದಿಗೆವ್ವಗಳಿಗೇನೂ ಕೊರತೆಯಿರುವದಿಲ್ಲವಲ್ಲ ? ಪಾಪ, ಸ್ವಾಮಿಗಳೂ ನಮ್ಮ ಹಾಗೆ ಮನುಷ್ಯರಲ್ಲವೆ ? ಅವರಿಗೂ ಭಾವರಾಗಗಳಿರುವದಿಲ್ಲವೆ ? ಕೋಪ, ದ್ವೇಷಗಳನ್ನು ಹೇಗೋ ತಡೆಹಿಡಿಯಬಹುದು. ಹೆಣ್ಣಿನ ಮೋಹವನ್ನು ಮಾತ್ರ ತಡೆಹಿಡಿಯುವುದು ತೀರಾ ಅಸಾಧ್ಯ. ಸ್ವಾಮಿ ವಿವೇಕಾ

ನಂದರಂತಹ ಸನ್ಯಾಸಿಗಳೂ ಈ ವಿಷಯವಾಗಿ ತುಂಬ ಕಷ್ಟಪಟ್ಟಿದ್ದಾರೆ. ಇನ್ನು ನಮ್ಮ ಈ ಸ್ವಾಮಿಗಳು !...."

ಗೆಳೆಯರಿಬ್ಬರೂ ಮಾತನಾಡುತ್ತ ಆ ಬಳೆಯಂಗಡಿಯ ಸನಿಯಕ್ಕೆ ಬಂದಾಗ ಗದಿಗೆವ್ವನ ದೃಷ್ಟಿ ಅವರತ್ತ ಹೊರಳಿತು. ಪಾಟೀಲನನ್ನು ಕಂಡೊಡನೆ ಆಕೆ ವಿನಯದಿಂದ ಕೈಮುಗಿದು—"ನಮಸ್ಕಾರ ಪಾಟೀಲರೇ," ಎಂದಳು.

"ನಮಸ್ಕಾರ. ಏನು, ಅಕ್ಕನವರ ಸವಾರಿ ಆಟ ನೋಡಲು ಬಂದಿದೆಯೆ?"

"ನಾನೇನು ಆಟ ನೋಡೋದ್ರೀ ? ನಮ್ಮ ಬಳಗದ ಅಧ್ಯಕ್ಷಿಣಿ ನಾಗಮ್ಮನವರು ಬಂದಿದ್ದಾರೆ. ಅವರಿಗೆಲ್ಲ ವ್ಯವಸ್ಥೆ ಮಾಡಿಕೊಟ್ಟು ಹೋಗೋಣವೆಂದು ಬಂದಿದ್ದೆ. ಇವರು ಯಾರು ? ಪರಿಚಯ ಮಾಡಿಕೊಡಲೇ ಇಲ್ಲವಲ್ಲ ?"

"ಇವರೂ ನಮ್ಮ ಕಚೇರಿಯಲ್ಲೇ ಕೆಲಸದಲ್ಲಿದ್ದಾರೆ. ಶಿವಮೂರ್ತಿ ಸ್ವಾಮಿಗಳು ಎಂದು ಹೆಸರು."

"ನಮಸ್ಕಾರ. ನಿಮ್ಮನ್ನು ಕಂಡು ಬಹಳ ಸಂತೋಷವಾಯಿತು. ನಮ್ಮ ಅಧ್ಯಕ್ಷಿಣಿಯವರ ಮನೆಗೆ ಪಾಠ ಹೇಳಲು ಬರುವವರು ನೀವೇ ಅಲ್ಲವೆ? ನಿಮ್ಮ ಬಗ್ಗೆ ಅವರೆಲ್ಲರೂ ಬಹಳ ಹೊಗಳುತ್ತಿದ್ದರು. ಇದುವರೆಗೂ ನೋಡಲು ಸಾಧ್ಯವಾಗಿರಲಿಲ್ಲ. ನಮ್ಮ ಸರಸೂ ಸಹ ಬಂದಿದ್ದಾಳೆ...."

ಸರಸೂ ತಲೆಯೆತ್ತಿ ಶಿವಮೂರ್ತಿಯನ್ನೊಂದು ಸಲ ಸಂಕೋಚದಿಂದ ದಿಟ್ಟಿಸಿನೋಡಿದಳು.

"ಆಟ ನೋಡಲು ಬಂದಿದ್ದೀರಾ ?" ಎಂದು ಕೇಳಿದ ಶಿವಮೂರ್ತಿ.

"ಹೌದು. ಪ್ರತಿವರ್ಷವೂ ಬರುವುದು ನಮ್ಮ ಪದ್ಧತಿ. ಯಾವ ವರ್ಷವೂ ತಪ್ಪಿಸುವುದಿಲ್ಲ."

"ಈ ಗದ್ದಲದಲ್ಲಿ ಹೇಗೆ ನೋಡುವವರು ?"

"ಗದಿಗೆವ್ವನವರು ಎಲ್ಲಾ ವ್ಯವಸ್ಥೆ ಮಾಡಿದ್ದಾರೆ. ಕೂತುಕೊಳ್ಳಲು ಗುಡಾರಗಿಡಾರ ಎಲ್ಲಾ ಸಿದ್ಧವಿದೆ."

"ನೀವೆಲ್ಲಿ ಕುಳಿತುಕೊಳ್ಳುತ್ತೀರಿ ? ಅಲ್ಲೇ ಬರ್‍ರಿ ಬೇಕಾದರೆ. ಸಾಕಷ್ಟು ಜಾಗವಿದೆ. ಆರಾಮಾಗಿ ಕುಳಿತು ನೋಡಬಹುದು. ನೀವೂ ಬರ್‍ರಿ

ಪಾಟೀಲರೇ," ಎಂದು ಗದಿಗೆವ್ವ ಹೇಳುತ್ತಿದ್ದ ಹಾಗೆ ಪಾಟೀಲನನ್ನು ಯಾರೋ ಕೂಗಿದುದು ಕೇಳಿಸಿತು. ಆತ ಹಿಂದಿರುಗಿ ನೋಡಿದ. ಹೊಸ ಸೀರೆಯೊಂದನ್ನುಟ್ಟುಕೊಂಡು ಜಾತ್ರೆಗೆ ಬಂದಿದ್ದ ಸಾವಿತ್ರಿ "ರೀss" ಎಂದು ಆತನನ್ನು ಕೂಗಿ ಕರೆಯುತ್ತಿದ್ದಳು. ಆಕೆಯನ್ನು ಕಂಡೊಡನೆ—"ಈಗ ಬಂದೆ," ಎಂದು ಹೇಳಿ ಆತ ಹೊರಟುಹೋದ. "ಈಗ ಬಂದೆ," ಎಂದು ದೆಷ್ಟೋ ಅಷ್ಟೆ, ಆಮೇಲೆ ಆತ ಬರಲೇ ಇಲ್ಲ, ಸಾವಿತ್ರಿಯೊಂದಿಗೆ ಜನದ ಗುಂಪಿನಲ್ಲಿ ಮಾಯವಾದ.

"ಅವರಿಗೆ ಯಾರೋ ಜೊತೆಯಾದರು. ಇನ್ನೇನು ಅವರು ಬರುವಂತಿಲ್ಲ. ಬರ್ರಿ ಶಿವಮೂರ್ತಿಸ್ವಾಮಿ. ನಾವು ಹೋಗೋಣ," ಎಂದು ಗದಿಗೆವ್ವ ಅವರನ್ನು ಕರೆದುಕೊಂಡು ಹೊರಟಳು.

"ಬಸಪ್ಪಸೆಟ್ಟರೂ ಬಂದಿರುವರೇ ?" ಎಂದು ಶಿವಮೂರ್ತಿ ಸರಸುವನ್ನು ಕುರಿತು ಪ್ರಶ್ನಿಸಿದ.

"ಇಲ್ಲ. ಅವರಿಗೆ ಈ ಆಟ ಪಾಟ ಎಂದರಾಗದು. ಅವರೆಂದೂ ಬರುವವರಲ್ಲ."

"ಬೈಲಾಟ ಎಂದರೆ ನಿಮಗೆ ತುಂಬ ಪ್ರೀತಿಯೆ ?"

"ಹೌದು. ನಾನು ಚಿಕ್ಕವಳಿದ್ದಾಗಿನಿಂದ ಬೈಲಾಟ ಎಂದರೆ ಹುಚ್ಚು. ಸಿನಿಮಾ ನಾಟಕ ನೋಡಿದರೂ ಸಹ ಈ ಆಟಗಳ ಬಗ್ಗೆ ಬೇಸರು ಬರಲಿಲ್ಲ."

"ಸಿನಿಮಾ ನಾಟಕಗಳನ್ನೂ ಬಹಳವಾಗಿ ನೋಡುತ್ತೀರಾ ?"

"ಹೌದು. ಅದೂ ಒಂದು ಹುಚ್ಚೇ ನನಗೆ."

"ಈಗಿನ ಹುಡುಗಿಯರೆಲ್ಲ ಹಾಗೇ ಬಿಡಿರಿ. ಅವರ ಜಗತ್ತೆಂದರೆ ಈ ಸಿನಿಮಾ ನಾಟಕ ಆಟ ನೋಟಗಳೇ," ಎಂದು ಗದಿಗೆವ್ವ ನಗುತ್ತ ನುಡಿದಳು.

ಶಿವಮೂರ್ತಿಯ ಪ್ರಶ್ನೆಗೆ ಉತ್ತರವೀಯುವ ಸಂದರ್ಭಗಳಲ್ಲೆಲ್ಲ ಸರಸು ಆತನ ಕಡೆಗೆ ನೋಡುತ್ತಿದ್ದ ಬಗೆಯನ್ನು ಕಂಡಾಗ ಸೂಕ್ಷ್ಮ ಬುದ್ಧಿಯ ಗದಿಗೆವ್ವನಿಗೆ ಸಂದೇಹ ಬರದಿರಲಿಲ್ಲ....ಆಕೆ ಮನಸ್ಸಿನಲ್ಲಿಯೆ ಏನೇನೊ ಲೆಕ್ಕ ಹಾಕಿದಳು. ಶಿವಮೂರ್ತಿ ಸುಂದರ ಯುವಕ. ಸುಶಿಕ್ಷಿತ. ಸರಸುವಿನ ಮನೆಗೆ ಪಾಠ ಹೇಳಲು ಬರುತ್ತಿದಾನೆ. ಆತನ ಕೊಟಡಿಯೂ

ಅವರ ಮನೆಯೆದುರಿಗೇ ಇದ್ದ ಹಾಗಿದೆ. ನಿಕಟ ಸಹವಾಸದಿಂದಾಗಿ ಇವರಿಬ್ಬರಲ್ಲೂ ಅನುರಾಗ ಬೆಳೆದಿರಬಹುದೇ ? ಸರಸುವೂ ಹರಯದ ಹುಡುಗಿ. ಮೂರ್ತಿಯೂ ಹರಯದವ. ಆತನಿಗಿನ್ನೂ ಮದುವೆಯಾದ ಹಾಗೆ ತೋರುವುದಿಲ್ಲ. ಒಂಟಿಬಾಳು ಸಾಗಿಸುತ್ತಿರುವ ಅನುರೂಪರಾದ ಯುವಕ ಯುವತಿಯರು ಹೀಗೆ ತೀರ ಸಮೀಪದಲ್ಲಿ ಬಂದಾಗ ಅವರಲ್ಲಿ ಅನುರಾಗ ಹುಟ್ಟುವುದೂ ತೀರ ಸಹಜ. ಅವರಿಬ್ಬರೂ ಪರಸ್ಪರರನ್ನು ದೃಷ್ಟಿಸುವ ರೀತಿಯೇ ಆ ಅನುರಾಗವನ್ನು ತೆರೆದು ತೋರಿಸುವಂತಿದೆ. ಸರಸುವಂತೂ ಆತನಿಗೆ ಮರುಳಾದುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಅವಳೊಂದಿಗೆ ಮಾತನಾಡುವಾಗ ಆತನ ಸ್ವರದಲ್ಲಿ ಮಾರ್ದವತೆ ತುಂಬಿ ಬರುತ್ತದೆ. ಅರ್ಥಾತ್—ಅವರಿಬ್ಬರೂ ಪರಸ್ಪರ ಆಕರ್ಷಿತರಾಗಿರಲೇಬೇಕು—ಎನ್ನಿಸಿತು ಗದಿಗೆಮ್ಮನಿಗೆ. ಅವರಿಬ್ಬರೂ ಗಂಡ ಹೆಂಡಿರಾದಲ್ಲಿ ಜೊತೆ ಬಹಳ ಅನುರೂಪವಾಗುವುದು—ಎಂದಾಕೆ ಮನಸ್ಸಿನಲ್ಲೇ ಹೇಳಿಕೊಂಡಳು. ಹಾಗಾದಲ್ಲಿ ತನಗೂ ತುಂಬ ಸಂತೋಷವಾಗುವುದು. ಪಾಪ, ಬಂಗಾರದ ಬಳ್ಳಿಯಂತಿರುವ ಈ ಹುಡುಗಿಯ ಬದುಕು ವ್ಯರ್ಥ ಹಾಳಾಗುವುದು ತಪ್ಪಿಹೋಗುವುದು. ಆದರೆ—ಸನಾತನಿಗಳಾದ ಸೆಟ್ಟರು ಈ ವಿವಾಹಕ್ಕೊಪ್ಪಬಹುದೇ ? ನಾಗಮ್ಮನೇನೊ ಒಪ್ಪಿಯಾರು. ಸರಸುವನ್ನು ಹೀಗೆಯೆ ಕೊಳೆಯಬಿಡಲು ಅವರಿಗೂ ಇಷ್ಟವಿರಲಾರದು. ರುದ್ರಪ್ಪಜ್ಜಿಯೂ ಮದುವೆಗೆ ಅನುಕೂಲವಾದಾಳು. ಆತಂಕವೆಂದರೆ ಆ ಸೆಟ್ಟರದೇ....ಆ ಆತಂಕವನ್ನು ದೂರಗೊಳಿಸಿ ಸರಸುವಿನ ಜೀವನವನ್ನು ಸುಖದಾಯಕವನ್ನಾಗಿ ಮಾಡಲು ತನ್ನಿಂದ ಸಾಧ್ಯವಿರುವುದೆಲ್ಲವನ್ನೂ ಮಾಡುವುದಾಗಿ ಗದಿಗೆಮ್ಮ ಮನಸ್ಸಿನಲ್ಲಿಯೆ ನಿರ್ಧರಿಸಿದಳು.

ಆಟದ ಅಂಗಳದಲ್ಲಿ ಹಾಯ್ದು ಅವರು ಕಟ್ಟೆಯ ಬಳಿ ಬಂದು ಕುಳಿತುಕೊಂಡರು. ಎದುರಿಗಿನ ಅಟ್ಟಣೆಯ ಮೇಲೆ ಚಟುವಟಿಕೆ ಬಿರುಸಾಗಿ ಸಾಗಿದ್ದಿತು. ಹಾರ್ಮೋನಿಯಂ ಬಾರಿಸುವವನೂ, ಮೃದಂಗದವನೂ ತಮ್ಮ ತಮ್ಮ ವಾದ್ಯಗಳನ್ನು ಶೃತಿಗೊಳಿಸುತ್ತಿದ್ದರು. ಬಲಗಡೆಗಿದ್ದ ಅಟ್ಟಣೆಯ ಮೇಲೆ ಗ್ಯಾಸ್‌ದೀಪ ಕಟ್ಟುವ ಕಾರ್ಯ ನಡೆದಿತ್ತು. ನೆಲದ ಮೇಲುರುಳಿ ನಿದ್ರೆಹೋಗಿದ್ದವರಲ್ಲಿ ಅನೇಕರು ನಿಧಾನವಾಗಿ ಮೇಲಕ್ಕೆದ್ದು ಕಂಬಳಿಗಳನ್ನು

ಹೊದೆದುಕೊಂಡು ಪಿಳಿಪಿಳಿ ಕಣ್ಣು ಬಿಡುತ್ತ ಆಟಗಳಿಗಾರಂಭವಾಗುವುದನ್ನು ಎದುರು ನೋಡುತ್ತಲಿದ್ದರು.

ಒಳಗಡೆ ಸ್ವಾಮಿಗಳ ಕೊಟಡಿಯಲ್ಲಿ, ಶಾಸ್ತ್ರಿ ಗದಿಗೆಮ್ಮನ ದಾರಿ ಕಾಯುತ್ತ ಕುಳಿತಿದ್ದ. ಸರಸುವನ್ನು ಕರೆದುಕೊಂಡು ಗದಿಗೆಮ್ಮ ಹೊರ ಗಡೆ ಹೋದುದನ್ನು ಆತ ಕಂಡಿದ್ದ. ಸ್ವಾಮಿಗಳಿಗೆ ಒಲಿಯುವಂತೆ ಸರಸು ವಿನ ಮನಸ್ಸನ್ನೊಲಿಸುವುದಕ್ಕಾಗಿಯೆ ಗದಿಗೆಮ್ಮ ಆಕೆಯನ್ನು ಕರೆದೊಯ್ದಿರ ಬೇಕೆಂದು ಆತನ ತಿಳಿವಳಿಕೆ. ಸ್ವಾಮಿಗಳೂ ಹಾಗೆಯೆ ಭಾವಿಸಿದ್ದರು. ಗದಿಗೆಮ್ಮನ ಸಂಧಾನ ಯಶಸ್ವಿಯಾದೀತು, ಸರಸೂ ತಮಗೆ ಲಭಿಸಿಯಾಳು ಎಂದು ಅವರು ಕಾತರರಾಗಿ ಕಾದು ಕುಳಿತಿದ್ದರು.

ಗದಿಗೆಮ್ಮ ಸರಸುವಿನೊಂದಿಗೆ ಮಾತನಾಡಲೆಂದೇ ಆಕೆಯನ್ನು ಕರೆದು ಕೊಂಡು ಹೋದುದೇನೊ ನಿಜವಾಗಿದ್ದಿತಾದರೂ ಶಾಸ್ತ್ರಿಗಳೂ ಸ್ವಾಮಿಗಳೂ ತಿಳಿದುಕೊಂಡ ಹಾಗೆ ಸ್ವಾಮಿಗಳ ಪ್ರೇಯಸಿಯಾಗಲು ಆಕೆಯನ್ನು ಒಪ್ಪಿ ಸುವ ಕೆಲಸಕ್ಕೆ ಮಾತ್ರ ತೊಡಗಿರಲಿಲ್ಲ. ಸರಸುವಿನ ಮೇಲೆ ಸ್ವಾಮಿಗಳ ಕಣ್ಣು ಬಿದ್ದಿರುವ ವಿಷಯವೇನೊ ಗದಿಗೆಮ್ಮನಿಗೆ ಚೆನ್ನಾಗಿ ಗೊತ್ತಿದ್ದಿತು. ಆಕೆಯನ್ನು ದೊರಕಿಸಿಕೊಟ್ಟಲ್ಲಿ ತನಗೆ ಸಾವಿರಾರುರೂಪಾಯಿ ಲಾಭ ದೊರೆಯ ಬಹುದೆಂಬುದೂ ತಿಳಿದಿದ್ದಿತು. ಆದರೆ, ಚಿಕ್ಕ ಮಗುವಾಗಿದ್ದಾಗಿನಿಂದ ತನ್ನ ಕೈಯಲ್ಲಿಯೆ ಓದು ಕಲಿತು ದೊಡ್ಡವಳಾಗಿದ್ದ ಸರಸುವಿನ ಬಗೆಗೆ ಗದಿಗೆಮ್ಮ ನಲ್ಲಿ ತಾಯ ವಾತ್ಸಲ್ಯ ಬೆಳೆದು ಬಂದಿದ್ದಿತು. ಗದಿಗೆಮ್ಮನಿಗೆ ಮಕ್ಕಳಿರಲಿಲ್ಲ ವಾದುದರಿಂದ ಆಕೆ ತನ್ನ ವಿದ್ಯಾರ್ಥಿನಿಯರನ್ನೆಲ್ಲ ತನ್ನ ಮಕ್ಕಳೆಂದೇ ಭಾವಿಸಿ ಅವರನ್ನು ಪ್ರೀತಿಸುತ್ತ ಬಂದಿದ್ದಳು. ಸರಸು ತಾಯಿಯಿಲ್ಲದ ತಬ್ಬಲಿ ಯಾದುದರಿಂದ ಆಕೆಯ ಬಗೆಗೆ ಗದಿಗೆಮ್ಮನಿಗೆ ವಿಶೇಷ ವಾತ್ಸಲ್ಯವಿದ್ದಿತು. ತನ್ನ ಮಗಳಂತಿದ್ದ ಆ ಎಳೆ ಹುಡುಗಿಯನ್ನು ಸ್ವಾಮಿಗಳ ಕಾಮಲಾಲಸೆಗೆ ಬಲಿಗೊಡಲು ಆಕೆಯ ಮನಸ್ಸು ಒಪ್ಪಲಿಲ್ಲ.

ಸರಸುವನ್ನು ಸ್ವಾಮಿಗಳಿಂದ ದೂರವಿಡುವುದರಲ್ಲಿ ಗದಿಗೆಮ್ಮನ ಸ್ವಾರ್ಥವೂ ಇದ್ದಿತೆಂದೇ ಹೇಳಬೇಕು. ಸ್ವಾಮಿಗಳು. ಈ ಊರಿಗೆ ಬಂದಂದಿ ನಿಂದ ಆಕೆ ಅವರ ಸುಪುಷ್ಟ ದೇಹವನ್ನೂ ಸುಂದರ ರೂಪವನ್ನೂ ಕಂಡು ಮರುಳಾಗಿದ್ದಳು. ಅವರೂ ತನ್ನನ್ನು ಕಂಡು ಆಸೆ ಪಡುತ್ತಿದ್ದುದನ್ನು ಗುರುತಿಸಿ

ಕೊಂಡಿದ್ದಳು. ಅವರಿಲ್ಲಿ ಇರುವವರೆಗೂ ಬೇರಾವ ಹೆಣ್ಣಿಗೂ ಅವರು ಮನ ಸೋಲದಂತೆ ನೋಡಿಕೊಂಡು ತಾನೊಬ್ಬಳೇ ಅವರ ರಹಸ್ಯರಾಣಿಯಾಗಿ ಮೆರೆಯಬೇಕೆಂದು ಆಕೆ ನಿರ್ಧರಿಸಿದ್ದಳು. ತಾನೊಬ್ಬಳೇ ಎದುರಿಗಿದ್ದಾಗ ಸ್ವಾಮಿಗಳು ತನ್ನನ್ನೇ ಆಶಿಸುತ್ತಾರೆ; ಸರಸುವಿನಂಥ ಎಳೆ ಯುವತಿಯನ್ನು ಕಂಡೊಡನೆಯೆ ತನ್ನನ್ನು ಕಡೆಗಣಿಸಿ ಆಕೆಯ ಕಡೆಗೆ ಹೊರಳುತ್ತಾರೆ. ಇದೆಂಥ ನ್ಯಾಯ ? ಗದಿಗೆವ್ವನ ಸ್ವಾಭಿಮಾನ ಕೆರಳಿ ಮೇಲಕ್ಕೆದ್ದಿದ್ದಿತು. ತನ್ನ ವಿನಾ ಇನ್ನಾರೂ ಸ್ವಾಮಿಗಳ ಒಲವಿಗೆ ಪಾತ್ರರಾಗದಂತೆ ಎಚ್ಚರದಿಂದಿರಲು ನಿರ್ಧರಿಸಿದ್ದಳಾಕೆ. ಅಂತೆಯೆ, ಸರಸುವಿನ ಎದುರಿಗೆ ಸ್ವಾಮಿಗಳ ಹೆಸರನ್ನೇ ಆಕೆ ತೆಗೆದಿರಲಿಲ್ಲ. ಅವರಲ್ಲಿ ನಡೆದ ಮಾತುಕತೆಯೇನೊ ಪ್ರಣಯಕ್ಕೆ ಸಂಬಂಧಪಟ್ಟದೇ ಆಗಿದ್ದಿತಾದರೂ ಸ್ವಾಮಿಗಳ ಸಂಬಂಧವೇನೂ ಅದರಲ್ಲಿರಲಿಲ್ಲ.

ಲಾವಣಿಯ ಅಂಗಳವನ್ನು ಬಿಟ್ಟು, ಅಂಗಡಿಗಳ ಹತ್ತಿರ ಸರಸುವನ್ನು ಕರೆದುಕೊಂಡು ಬರುತ್ತಿದ್ದ ಹಾಗೆ ಗದಿಗೆವ್ವ ಪ್ರಶ್ನಿಸಿದ್ದಳು :

"ಹೀಗೇ ಎಷ್ಟು ದಿನ ಒಂಟಿಯಾಗಿರುವಾಕೆ ನೀನು ಸರಸೂ? ಮುಂದಿನ ವಿಚಾರವೇನು ?"

ಆ ಪ್ರಶ್ನೆ ಕಿವಿಗೆ ಸೇರುತ್ತಲೂ ಸರಸುವಿಗೆ ದುಃಖವುಕ್ಕಿಬಂದಿತ್ತು. ಆಕೆಯ ಕಂಠ ಬಿಗಿದು ಬಂದು ಕಣ್ಣುಗಳಲ್ಲಿ ನೀರೂರಿದ್ದುವು.

"ನಿಮ್ಮ ತಂದೆಯಂತೂ ನಿನ್ನ ಮದುವೆಗೆ ಒಪ್ಪುವಹಾಗೆ ಕಾಣುವದಿಲ್ಲ. ಅವರು ಒಪ್ಪುವದಿಲ್ಲವೆಂದು ನೀನು ಸುಮ್ಮನಿದ್ದು ಬಿಡಬೇಕೇ ? ಈ ತುಂಬಿದ ತಾರುಣ್ಯದಲ್ಲಿ ಇನ್ನೂ ಎಷ್ಟುದಿನ ಹೀಗೇ ಒಂಟಿಯಾಗಿರುವಾಕೆ ನೀನು ?"

ಸರಸು ಮೌನವಾಗಿದ್ದಳು. ಗದಿಗೆವ್ವನಿಗೆ ಏನೆಂದು ಉತ್ತರ ಕೊಡುವುದು ? ಹೇಗೆ ಉತ್ತರ ಕೊಡುವುದು ?

"ಇಂದಿನ ದಿನಮಾನದಲ್ಲಿ ಸನ್ಯಾಸಿನಿಯ ಹಾಗೆ ಬದುಕು ಸಾಗಿಸಲು ಸಾಧ್ಯವಿಲ್ಲ ಸರಸೂ. ಅದರಲ್ಲೂ ಸುತ್ತುಮುತ್ತಲೂ ವಿಲಾಸದ ವಾತಾವರಣವೇ ಇರುವಾಗ ನಿನ್ನಂಥ ಕಲಿತ ಹುಡುಗಿಯರು ವೈರಾಗಿನಿಯಾಗಿರಲು ಸಾಧ್ಯವೆ ? ನಿನ್ನ ಮನಸ್ಸಿನಲ್ಲಿ ಎಂಥ ಭಾವನೆಗಳಿರುವವೆಂಬುದನ್ನು ನಾನು ಊಹಿಸಬಲ್ಲೆ. ನಿನಗೊಬ್ಬ ಜೊತೆಗಾರ ಬೇಕೇ ಬೇಕು. ಆತನಿಲ್ಲದೆ ನೀನು

ಬದುಕಲಾರೆ. ತಂದೆಯ ಒತ್ತಾಯಕ್ಕೊಳಗಾಗಿ ಬಾಯಿ ಮುಚ್ಚಿಕೊಂಡು ನೀನು ಹೀಗೇ ಸುಮ್ಮನಿದ್ದುಬಿಟ್ಟೆಯೋ, ಹಾಳಾಗಿ ಹೋಗುತ್ತೀಯ. ನಿನಗೆ ಹುಚ್ಚು ಹಿಡಿದರೂ ಹಿಡಿಯಬಹುದು...."

"ನಾನೇನು ಮಾಡಬೇಕು ಎನ್ನುತ್ತೀರಿ ನೀವು ?"

"ನಿನ್ನಂಥ ಪ್ರಸಂಗಕ್ಕೆ ಸಿಕ್ಕುಬಿದ್ದಿರುವ ಎಲ್ಲ ಹುಡುಗಿಯರು ಏನು ಮಾಡುವರೋ ಅದನ್ನೇ ಮಾಡಬೇಕು. ನಿನಗೆ ಅನುರೂಪನಾದ ಯುವಕನೊಬ್ಬನನ್ನು ಹುಡುಕಿಕೊಂಡು ಆತನೊಂದಿಗೆ ಓಡಿಹೋದರೂ ಚಿಂತೆಯಿಲ್ಲ. ಅಂತೂ ಈ ಏಕಾಕಿ ಜೀವನದ ನರಕದಲ್ಲಿ ಕೊಳೆಯದಿದ್ದರಾಯಿತು."

ಓಡಿಹೋಗುವುದು ! ಸರಸುವಿನ ಶರೀರವೆಲ್ಲ ಥರಥರನೆ ನಡುಗಿದ್ದಿತು. ಯುವಕನೊಬ್ಬನನ್ನು ಕಟ್ಟಿಕೊಂಡು ಓಡಿಹೋಗುವುನೆಂದರೆ ಸಾಮಾನ್ಯ ವಿಷಯವೇನೂ ಅಲ್ಲ. ತನ್ನ ತಂದೆತಾಯಿಗಳಿಗೆ ಅಪಕೀರ್ತಿ ಬರುವುದು, ಅವಮಾನವಾಗುವುದು. ತನಗೂ ಅಪಕೀರ್ತಿಯೆ. ಗದಿಗೆವ್ವ ಈ ರೀತಿ ಉಪದೇಶ ಮಾಡುವುದನ್ನು ಕಂಡು ಆಕೆಗೆ ಆಶ್ಚರ್ಯವಾಗದಿರಲಿಲ್ಲ.

"ಏನು ಹೇಳುತ್ತೀರಿ ಅಕ್ಕಾವರೆ !"

"ನಿನಗೆ ಒಳ್ಳೆಯದಾಗಲೆಂದೇ ಈ ಮಾತು ಹೇಳುತ್ತಿದೇನೆ ಸರಸೂ. ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬೇಡ. ಮನಸ್ಸಿನ ಬಯಕೆಯನ್ನು ತಡೆಯುಲಾರದೆ ಕದ್ದು ಮುಚ್ಚಿ ಕೆಲಸ ಮಾಡುವುದಕ್ಕಿಂತ ಒಬ್ಬನನ್ನು ಕಟ್ಟಿಕೊಂಡು ಬಹಿರಂಗವಾಗಿಯೆ ಸಂಸಾರ ಹೂಡುವುದು ಉತ್ತಮವಲ್ಲವೆ ?"

ಆ ಪ್ರಶ್ನೆಗೆ ಸರಸುವಿನಲ್ಲಿ ಉತ್ತರವಿರಲಿಲ್ಲ. ಗದಿಗೆವ್ವ ಹೇಳುವುದು ಸರಿಯಾದ ಮಾತೇ. ಅಂದು ಪ್ರಭುಲಿಂಗಲೀಲೆಯ ಪ್ರವಚನ ನಡೆದಾಗ ಸ್ವಾಮಿಗಳನ್ನು ಕಂಡು ತಾನು ಮರುಳಾಗಿರಲಿಲ್ಲವೆ ? ಅವರ ಕಣ್ಣ ನೋಟಕ್ಕೆ ಸೋತುಹೋಗಿರಲಿಲ್ಲವೆ ? ಕನಸಿನಲ್ಲೂ ಸಹ ಅವರ ಬಗೆಗಿದ್ದ ಬಯಕೆಯೇ ಕಾಣಿಸಿಕೊಂಡು ತನ್ನನ್ನು ಪೀಡಿಸುತ್ತಿರಲಿಲ್ಲವೆ ? ಇಂದು ರಾತ್ರಿ ತಾವು ಅವರನ್ನು ಕಂಡಾಗ ಮತ್ತೆ ಅವರ ಕಡೆಗೆ ತಾನು ಆಕರ್ಷಿತಳಾಗಿರಲಿಲ್ಲವೆ ? ಪುರುಷನನ್ನು ಬಿಟ್ಟು ಸ್ತ್ರೀಯು ಬದುಕುವುದು ಸಾಧ್ಯವೇ ಇಲ್ಲವೆಂದು ತೋರುತ್ತದೆ. ಶಿವಮೂರ್ತಿಯನ್ನು ಕಂಡಂದಿನಿಂದ, ಆತನ ಶರೀರಸ್ಪರ್ಶವಾದಂದಿನಿಂದ ಆತನಿಗಾಗಿ ಹೇಗೆ ಪರಿತಪಿಸುತ್ತಿದೆ ತನ್ನ ಹೃದಯ ! ಗಂಟೆ

ಗಂಟೆಗಳ ವರೆಗೆ ಆತನನ್ನು ದೃಷ್ಟಿಸುತ್ತ ನಿಂತಿರುವುದು, ಆತ ದೃಷ್ಟಿಗೆ ಬೀಳ ದಿದ್ದಾಗ ವೇದನೆಯಿಂದ ನರಳುವುದು, ಆತನ ಪಾದಧ್ವನಿಯನ್ನೂ, ಕಂಠ ಸ್ವರವನ್ನೂ ಕೇಳಿ ಸುಖಿಸುವುದು, ರಾತ್ರಿಯಾಗಲು ಹಾಸಿಗೆಯ ಮೇಲೆ ಹೊರಳಾಡುತ್ತ ನಿದ್ರೆಯಿಲ್ಲದೆ ಬಳಲುವುದು....ಊಟದಲ್ಲಿ ಆಸಕ್ತಿಯಿಲ್ಲ, ತಿಂಡಿಯಲ್ಲಿ ರುಚಿಯಿಲ್ಲ, ಪುಸ್ತಕ ಓದುವುದರಲ್ಲಿ ಲಕ್ಷ್ಯವಿಲ್ಲ. ಕವಿತೆಯ ಪುಸ್ತಕ ಹಿಡಿದುಕೊಂಡು ಕುಳಿತರೆ ಅಕ್ಷರಗಳಿಗೆ ಪ್ರತಿಯಾಗಿ ಶಿವಮೂರ್ತಿಯ ಸುಂದರ ಮುಖವೆ ಅಲ್ಲಿ ಕಾಣಿಸುವುದು. ಮುದ್ದು ಸೂಸುವ ಆ ಮುಖ ವನ್ನು ಹಿಡಿದುಕೊಂಡು ಎದೆಗೆ ತಬ್ಬಿಕೊಳ್ಳಬೇಕೆಂದು ಆಸೆಯಾಗುವುದು. ಕನಸಿನಲ್ಲಿ, ಮನಸಿನಲ್ಲಿ ಆತನನ್ನೇ ಕಂಡಂತಾಗುವುದು. ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ....ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ....ತಾರುಣ್ಯ ದಲ್ಲಿ ಇದೆಲ್ಲ ತೀರ ಸ್ವಾಭಾವಿಕ. ಗಂಡು ಹೆಣ್ಣಿನ ಸಂಗಕ್ಕಾಗಿ ಆಶಿಸುವುದೂ, ಹೆಣ್ಣು ಗಂಡಿನ ಸಂಗಕ್ಕಾಗಿ ಆಶಿಸುವುದೂ ತೀರ ನೈಸರ್ಗಿಕ. ನೈಸರ್ಗಿಕ ವಾದ ಭಾವರಾಗಗಳನ್ನು ಕೃತ್ರಿಮ ಬಂಧನಕ್ಕೊಳಪಡಿಸಿದಲ್ಲಿ ಆ ವ್ಯಕ್ತಿಗೆ ಹುಚ್ಚು ಹಿಡಿಯುವುದು ಖಂಡಿತ....ಗವಿಗೆಮ್ಮನ ಮಾತು ನಿಜ. ಈ ಕೂಡಲೆ ತನಗೊಬ್ಬ ಜೊತೆಗಾರ ದೊರಕದಿದ್ದಲ್ಲಿ ತನಗೆ ಹುಚ್ಚು ಹಿಡಿಯುವುದರಲ್ಲಿ ಸಂದೇಹವೇ ಇಲ್ಲ. ಆದರೆ...ಶಿವಮೂರ್ತಿ ತನ್ನ ಕೈಹಿಡಿಯಲು ಸಿದ್ಧನಾಗ ಬಹುದೇ ? ತಾನು ಇಷ್ಟಪಟ್ಟಲ್ಲಿ ತನ್ನೊಂದಿಗೆ ಬರಲು ಒಪ್ಪಬಹುದೇ ? ಆತನೇನೂ ಹಣವುಳ್ಳವನಲ್ಲ. ಇಲ್ಲಿ ತನಗಿರುವ ಸರಕಾರೀ ಕೆಲಸ ಬಿಟ್ಟು ತನ್ನನ್ನು ಕಟ್ಟಿಕೊಂಡು ಹೊರಡಬಹುದೇ ಆತ ?

ಆಕೆ ಇಂಥ ಯೋಚನೆಗಳಲ್ಲಿ ಮುಳುಗೇಳುತ್ತಿರುವಾಗಲೆ ಶಿವಮೂರ್ತಿ ತನ್ನ ಗೆಳೆಯನೊಂದಿಗೆ ಅವರ ಹತ್ತಿರ ಬಂದಿದ್ದ. ಆತನನ್ನು ಕಂಡೊಡನೆ ಸರಸುವಿನ ಯೋಚನೆಗಳು ಬೇರೆ ದಾರಿಯಲ್ಲಿ ಹರಿಯುತ್ತಿದ್ದುವು. ಶಿವ ಮೂರ್ತಿಯನ್ನು ತಾನು ಮದುವೆಯಾಗುವುದಾಗಿ ಹಟ ತೊಟ್ಟು ಕುಳಿತಲ್ಲಿ ತಂದೆ ಒಪ್ಪಿದರೂ ಒಪ್ಪಬಹುದೆಂಬ ದೂರದ ಆಸೆಯೊಂದು ಆಕೆಯ ಎದೆ ಯಲ್ಲಿ ಸುಳಿಯುತ್ತಿತ್ತು. ಪ್ರಯತ್ನಪಟ್ಟು ನೋಡಬಹುದು. ಆದರೆ–ಪ್ರಯತ್ನಿ ಸುವವರು ಯಾರು ? ತಂದೆಯೆದುರಿಗೆ ಇಂಥ ವಿಷಯವಾಗಿ ತಾನೆಂದೂ ಬಾಯಿ ಬಿಟ್ಟವಳಲ್ಲ. ತಾಯಿಯಂತೂ ಆತನ ಹತ್ತಿರ ಈ ಮಾತು ಪ್ರಸ್ತಾ

ಪಿಸಲು ಹೆದರುವಳು. ಹಾಗಾದರೆ ಪ್ರಯತ್ನಿಸುವವರಾರು ? ಗದಿಗೆಮ್ಮನನ್ನು ಕೇಳಿ ನೋಡಬೇಕು. ಯಾರಿಗೂ ಹೆದರುವಾಕೆಯಲ್ಲ ಗದಿಗೆಮ್ಮ. ತಂದೆಗೆ ತಿಳಿಹೇಳಿ ಆತನನ್ನು ಒಪ್ಪಿಸಲೂ ಸಮರ್ಥಳಾಗಬಹುದು ಆಕೆ....

ಕಟ್ಟೆಯ ಮೇಲೆ ಕುಳಿತಿದ್ದ ಹಾಗೆ ಸರಸು, ತನ್ನಿಂದ ಕೊಂಚ ದೂರ ದಲ್ಲಿ ಕುಳಿತು ಕಳ್ಳನೋಟದಿಂದ ತನ್ನನ್ನೇ ನಿರುಕಿಸುತ್ತಲಿದ್ದ ಶಿವಮೂರ್ತಿಯ ಕಡೆಗೆ ದೃಷ್ಟಿ ತಿರುಗಿಸಿದಳು. ಇವರಿಬ್ಬರ ಕಣ್ಣಾಟವನ್ನು ಸೂಕ್ಷ್ಮವಾಗಿ ನಿರುಕಿಸುತ್ತಲಿದ್ದ ಗದಿಗೆಮ್ಮ ತುಟಿಗಳಲ್ಲಿಯೆ ಕಿರುನಗೆ ಸೂಸುತ್ತಿದ್ದಳು.

ಆಟಕ್ಕಾರಂಭವಾಗುವ ಸಮಯವಾಯಿತು. ರಂಗಮಂಟಪದ ಪೂಜೆಯೂ ಮುಗಿಯಿತು. ಕೈಯಲ್ಲಿ ತಾಳಗಳನ್ನು ಹಿಡಿದು ಹಿಮ್ಮೇಳ ದವರು ಮುಂದೆ ಬಂದು "ಆ್ಯssss" ಎಂದು "ಸೂರ" ತೆಗೆಯಲಾರಂಭಿಸಿ ದರು. ಅಷ್ಟು ಹೊತ್ತಿನ ವರೆಗೆ ಹೇಗೋ ಒಳಗೆ ಕುಳಿತಿದ್ದ ಗಂಗಾಧರಶಾಸ್ತ್ರಿ ಇನ್ನು ಅಲ್ಲಿ ಕುಳಿತಿರಲಾರದೆ ಹೊರಗೆ ಬಂದ. ಸರಸುವಿನ ಜೊತೆಗೆ ಕುಳಿತಿದ್ದ ಯುವಕನಾರೆಂಬುದು ಆತನಿಗೆ ತಿಳಿಯಲಿಲ್ಲ.

"ಆಟಕ್ಕಾರಂಭವಾಯಿತಲ್ಲ ಗದಿಗೆಮ್ಮನವರೆ. ನಾಗಮ್ಮನವರನ್ನು ಎಬ್ಬಿಸುವದಿಲ್ಲವೆ ?"

"ಹೌದು, ಹೌದು. ಮರೆತಿದ್ದೆ," ಎನ್ನುತ್ತ ಆಕೆ ಮೇಲಕ್ಕೆದ್ದಳು.

ಆಟಕ್ಕಾರಂಭವಾಗುತ್ತಲೂ ಏಳುವುದಾಗಿ ನಾಗಮ್ಮ ಹೇಳಿದ್ದಳಾದರೂ ಅಷ್ಟರೊಳಗಾಗಿ ನಿದ್ರೆ ಆಕೆಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದ್ದಿತಾದುದರಿಂದ ಗದಿಗೆಮ್ಮ ಬಂದು ಎಬ್ಬಿಸಿದಾಗ ಆಕೆ ಮೇಲಕ್ಕೇಳಲಿಲ್ಲ. "ಏನು ಆಟವೋ ಬಿಡಿರಿ. ಈಗ ವಿಪರೀತ ನಿದ್ದೆ. ಬೆಳಗಿನ ಜಾವದಲ್ಲಿ ಎದ್ದು ನೋಡುತ್ತೇನೆ," ಎಂದು ಹೇಳಿದವಳೇ ಮತ್ತೆ ಮುಸುಕನ್ನೆಳೆದು ಕೊಂಡು ಮಲಗಿಬಿಟ್ಟಳು. ಗೌರಿಯಂತೂ ಈ ಲೋಕದಲ್ಲಿರಲೇ ಇಲ್ಲ. ಸುಖನಿದ್ರೆಯಲ್ಲಿ ತಲ್ಲೀನವಾಗಿದ್ದ ಆ ಮುದ್ದು ಮಗುವನ್ನು ಎಚ್ಚರುಗೊಳಿಸುವ ಮನಸ್ಸಾಗಲಿಲ್ಲ ಗದಿಗೆಮ್ಮನಿಗೆ.

"ಹೋಗಲಿ ಬಿಡಿರಿ, ಅವರೇನೂ ಏಳುವ ಹಾಗೆ ತೋರುವದಿಲ್ಲ," ಎಂದ ಶಾಸ್ತ್ರಿ. ಇಬ್ಬರೂ ಒಳಗಿನ ಕೊಟಡಿಗೆ ಬಂದರು. ಕೊಂಚ ಹೊತ್ತಿನ ಹಿಂದೆ ಮಂಚದ ಮೇಲೊರಗಿದ್ದ ಸ್ವಾಮಿಗಳು ಈಗ ಅಲ್ಲಿ ಕಾಣಿಸುತ್ತಿರಲಿಲ್ಲ.

"ಸರಸೂ ಜತೆಗೆ ಕುಳಿತಿರುವ ಆ ಹುಡುಗ ಯಾರು ಗದಿಗೆಮ್ಮ?"

"ಅವರೇ? ಶಿವಮೂರ್ತಿಸ್ವಾಮಿ ಎಂದು ಹೆಸರು ಅವರಿಗೆ."

"ಅವರ ಆಪ್ತರೋ ಏನು?"

"ಆಪ್ತರಾಗುವವರು."

"ಅಂದರೆ? ನಿಮ್ಮ ಮಾತು ಅರ್ಥವಾಗಲಿಲ್ಲ."

"ಸರಸುವಿಗೆ ಅವರ ಬಗ್ಗೆ ತುಂಬ ಪ್ರೀತಿ. ಅವರಿಗೂ ಆಕೆಯನ್ನು ಕಂಡರೆ ಹಾಗೆಯೆ. ಇಬ್ಬರೂ ಇಷ್ಟರಲ್ಲೇ ಮದುವೆಯಾಗಲಿದ್ದಾರೆ."

"ಓಹ್ಹೊ, ಹೀಗೊ? ಆದರೆ ಸರಸೂ...."

"ಆದರೆ ಗೀದರೆ ಯಾವುದೂ ಇಲ್ಲ. ಅವರು ಮದುವೆಯಾಗುವುದು ಖಂಡಿತ."

"ಅವರ ತಂದೆ ಒಪ್ಪಬಹುದೇ?"

"ಒಪ್ಪದೆ ಏನು? ಒಪ್ಪಿಯೆ ಒಪ್ಪುತ್ತಾರೆ."

"ನನಗೇನೊ ಈ ಮದುವೆಯ ಬಗ್ಗೆ ಉತ್ಸಾಹವಿಲ್ಲ. ನಮ್ಮ ಸ್ವಾಮಿಗಳು...." ಎಂದು ನುಡಿದು ಮುಂದಿನ ಮಾತನ್ನಾಡಲು ಧೈರ್ಯ ಸಾಲದೆ ಆತ ನಾಲಗೆ ಕಚ್ಚಿಕೊಂಡ.

"ಏನು, ಸ್ವಾಮಿಗಳು ಅಂದಿರಿ?"

"ಏನೂ ಇಲ್ಲ....ಹೆ-ಹೆ-ಹೆ-ಹೆ! ಅಂದರೆ....ಹೀಗೆ....ಹೆ-ಹೆ-ಹೆ-ಹೆ-ನಿಮಗೆ ತಿಳಿಯದಿರುವದೇನಿದೆ? ಕಾವೀ ಬಟ್ಟೆಯವರ ವಿಷಯ ಗೊತ್ತೇ ಇದೆಯಲ್ಲಾ ನಿಮಗೆ?....ಹೆ-ಹೆ-ಹೆ-," ಎನ್ನುತ್ತಾ ಶಾಸ್ತ್ರಿ ಕೈ ಕೈ ಹಿಸುಕಿಕೊಳ್ಳತೊಡಗಿದ.

ಗದಿಗೆಮ್ಮ ಹುಬ್ಬು ಮೇಲಕ್ಕೇರಿಸಿ ಹೇಳಿದಳು: "ನೀವೇನನ್ನು ಹೇಳುತ್ತಿರುವಿರೆಂಬುದೇ ನನಗರ್ಥವಾಗಲಿಲ್ಲ. ಸ್ವಲ್ಪ ಬಿಡಿಸಿ ಹೇಳಬಾರದೇ?"

ಶಾಸ್ತ್ರಿ ಮತ್ತೆ "ಹೆ ಹೆ ಹೆ"ಗಾರಂಭಿಸಿ, ಅನಂತರ ಕಳ್ಳಧ್ವನಿಯಲ್ಲಿ ಹೇಳಿದ: "ಸ್ವಾಮಿಗಳಿಗೆ ಸರಸುವಿನ ಮೇಲೆ....ಹೆ....ಹೆ....ಹೆ....ಆಸೆ...."

ಗದಿಗೆಮ್ಮನ ತುಟಿಗಳ ಮೇಲೆ ವ್ಯಂಗ್ಯವಾದ ನಗೆಯ ಲಹರಿಯೊಂದು ಸುಳಿದು ಮಾಯವಾಯಿತು. ಆಕೆಯೆಂದಳು:

"ಆಸೆ? ಸರಸುವಿನ ಮೇಲೆ? ಸ್ವಾಮಿಗಳಿಗೆ ಹುಚ್ಚು ಬೇರೆ ಹಿಡಿದಿರ

ಲಿಕ್ಕಿಲ್ಲವಷ್ಟೆ ? ಈ ಊರಿಗೆ ಬಂದು ಇನ್ನೂ ಒಂದು ತಿಂಗಳು ಕಳೆದಿಲ್ಲ. ಇಷ್ಟರಲ್ಲೇ ತಲೆಯೊಡೆಯಿಸಿಕೊಂಡು ಫಜೀತಿಯಾಗಿ ಇಲ್ಲಿಂದ ಪಲಾಯನ ಹೇಳಿಸಬೇಕೆಂಬ ವಿಚಾರವಿದೆಯೇನು ಅವರಿಗೆ ?"

"ಚೆಲುವಾದ ಹೆಣ್ಣನ್ನು ಕಂಡರೆ ಯಾರಿಗೆ ಆಸೆಯಾಗುವದಿಲ್ಲ ಗದಿಗೆಮ್ಮನವರೆ ? ಸ್ವಾಮಿಗಳೂ ನಮ್ಮ ಹಾಗೆ ಗಂಡಸರೇ ಅಲ್ಲವೆ ?" ಎಂದು ದಿಟ್ಟತನದಿಂದ ನುಡಿದ ಶಾಸ್ತ್ರಿ.

"ಒಳ್ಳೆಯ ಗಂಡಸರೇ. ತಮ್ಮ ಗಂಡಸುತನವನ್ನು ಇಂಥ ಎಳೆ ಬಾಲಕಿಯರ ಮೇಲೆ ಉಪಯೋಗಿಸಲು ಸಿದ್ಧರಾಗುವವರು ಗಂಡಸರಲ್ಲ— ಪಶುಗಳು.... ಹೌದು.... ಪಶುಗಳು...."

ಸ್ವಲ್ಪಹೊತ್ತು ಶಾಸ್ತ್ರಿ ಮೌನವಾಗಿದ್ದು ಅನಂತರ ಮತ್ತೆ ಹೇಳಿದ :

"ಇಲ್ಲಿ ನೋಡಿರಿ ಗದಿಗೆಮ್ಮ, ಒಳ್ಳೆಯದು ಕೆಟ್ಟದು ಎಂಬ ವಿಚಾರ ತೆಗೆದುಕೊಂಡೇನು ನಮಗೆ ? ಸರಸುವನ್ನು ಸ್ವಾಮಿಗಳಿಗೆ ದೊರಕಿಸಿಕೊಟ್ಟಲ್ಲಿ ನಿಮಗೆ ತುಂಬ ಲಾಭವಿದೆ. ಆ ಮೇಲೆ ಸ್ವಾಮಿಗಳು ನೀವು ಹೇಳಿದ ಹಾಗೆ ಕೇಳುವರು. ಈ ಮಠದ ಉತ್ಪನ್ನವೆಲ್ಲ ನಿಮ್ಮದೇ ಎಂದು ತಿಳಿದುಕೊಳ್ಳಿರಿ...."

"ಓಹ್ಹೋ. ಹೀಗೇನು ? ನನಗೆ ಇಂಥ ಆಸೆ ತೋರಿಸಿ ಕೆಲಸ ಸಾಧಿಸಲು ತಿಳಿಸಿರುವರೇನು ಸ್ವಾಮಿಗಳು ? ನಾನೆಂದರೆ ಏನೆಂದು ತಿಳಿದಿದ್ದಾರೆ ಅವರು ? ನೀವಾದರೂ ನನ್ನನ್ನು ಏನೆಂದು ಭಾವಿಸಿಕೊಂಡಿದ್ದೀರಿ ? ಕುಂಟಲಗಿತ್ತಿಯೆಂದೋ ?" ಎಂದು ಸ್ಪಷ್ಟವಾಗಿ ಕೇಳಿದಳು ಗದಿಗೆಮ್ಮ. ಆಕೆಯ ಸ್ವರದಲ್ಲಿ ಕಟುತ್ವವೂ ಇರಲಿಲ್ಲ. ಕೋಪವೂ ಇರಲಿಲ್ಲ.

ಶಾಸ್ತ್ರಿ ಹೆದರಿ ಸುಮ್ಮನಾದ. ಗದಿಗೆಮ್ಮನೇ ಧ್ವನಿಯೆತ್ತಿ ಕೇಳಿದಳು:

"ಸ್ವಾಮಿಗಳು ಕಾಣಿಸುವದಿಲ್ಲವಲ್ಲ ? ಎಲ್ಲಿ ಮಾಯವಾದರು ?"

"ಇಂದಿನ ಮಟ್ಟಿಗೆ ಅವರು ಕೆಳಗೆ ನೆಲಮನೆಯಲ್ಲಿ ಮಲಗಿದ್ದಾರೆ."

"ಏಕೆ ? ಇಲ್ಲಿ ಇಂಥ ಕೆಲಸ ಮಾಡಲು ಧೈರ್ಯವಾಗಲಿಲ್ಲವೆಂದೋ ? ಒಳ್ಳೆಯ ಗಂಡಸರು ! ಇದ್ದರೆ ನಿಮ್ಮಂಥ ಗಂಡಸರೇ ಇರಬೇಕು ನೋಡಿರಿ. ನೆಲಮನೆಯಲ್ಲಿ ಇಂಥ ಕೆಲಸ ನಡೆಸಲು ಸಿದ್ಧರಾದರೇ ! ಆ ಸಮಾಧಿಯ ಹತ್ತಿರ ?"

"ಸಮಾಧಿ ? ಯಾರ ಸಮಾಧಿ ?"

"ಹಿಂದಿನ ಸ್ವಾಮಿಗಳದ್ದು. ಉಗ್ರ ತಪಸ್ವಿಗಳೆಂದು ಪ್ರಸಿದ್ಧರಾಗಿದ್ದವರು. ಇಂದಿನ ಸ್ವಾಮಿಗಳ ಈ ಹೊಸ ಮಾದರಿಯ ತಪಸ್ಸನ್ನು ಕಂಡು ಅವರು ಗೋರಿಯಿಂದ ಎದ್ದು ಭೂತವಾಗಿ ತಿರುಗಿದರೂ ಆಶ್ಚರ್ಯವಿಲ್ಲ."

"ನೆಲಮನೆಯಲ್ಲಿ ಬೇಡವೆಂದು ನಾನೂ ಹೇಳಿನೋಡಿದೆ. ಸ್ವಾಮಿಗಳು ಕೇಳಲಿಲ್ಲ."

"ಹೋಗಿರಿ. ಅವರನ್ನು ಮೇಲಕ್ಕೆ ಕರೆದು ತನ್ನಿರಿ."

ಮಹಾರಾಣಿಯ ಆಜ್ಞೆಯನ್ನು ಪಾಲಿಸುವ ಸೇವಕನಂತೆ ಶಾಸ್ತ್ರಿ ಮಂಚದ ಕೆಳಗಡೆ ನುಸುಳಿ, ಅಲ್ಲಿದ್ದ ನೆಲಮನೆಯ ಮುಚ್ಚಳವನ್ನು ಬದಿಗೆ ಸರಿಸಿ ಮೆಟ್ಟಲುಗಳನ್ನಿಳಿದು ಕೆಳಕ್ಕೆ ಹೋದ.

ನೆಲಮನೆಯ ಗೋಡೆಯೊಂದರ ಮಾಡದಲ್ಲಿ ಪುಟ್ಟ ಕೈದೀಪವೊಂದು ಉರಿಯುತ್ತಿತ್ತು. ನಟ್ಟನಡುವೆ ಎತ್ತರಿಸಿ ಕಟ್ಟಲಾಗಿದ್ದ ಸಮಾಧಿಯ ಹತ್ತಿರ ಹಾಸಿದ ಹಾಸುಗೆಯ ಮೇಲೆ ಸಿದ್ಧವೀರಸ್ವಾಮಿಗಳು ಒರಗಿಕೊಂಡಿದ್ದರು. ಮೆಟ್ಟಲುಗಳ ಮೇಲೆ ಸದ್ದು ಕೇಳಿ ಬರುತ್ತಲೂ ಆತುರದಿಂದ ಅವರು ಅತ್ತ ತಿರುಗಿದರು. ಶಾಸ್ತ್ರಿಯ ಆಕೃತಿಯನ್ನು ಕಂಡೊಡನೆ ನಿರಾಸೆಯಿಂದ ಮುಖ ಬಾಡಿಸಿಕೊಂಡು ಮೇಲಕ್ಕೆದ್ದು ಕುಳಿತರು.

"ಏನಾಯಿತು ಶಾಸ್ತ್ರಿ ?"

"ಕೆಲಸ ಕೆಟ್ಟಿತು ಸ್ವಾಮಿಗಳೇ."

"ಅಂದರೆ ?"

"ಸರಸುವಿನ ಆಸೆಯನ್ನು ಸದ್ಯಕ್ಕಂತೂ ಬಿಟ್ಟುಬಿಡಿ. ಆ ಗವಿಗೆಮ್ಮ ಅದಕ್ಕೆ ಸಿದ್ಧಳಿಲ್ಲ."

"ಏನೆನ್ನುತ್ತಾಳೆ ಆಕೆ ?"

"ಸಾಧ್ಯವಿಲ್ಲ ಎಂದು ಹೇಳುತ್ತಾಳೆ."

"ಸಾವಿರ ರೂಪಾಯಿ ಹೋದರೂ ಚಿಂತೆಯಿಲ್ಲ ಶಾಸ್ತ್ರಿ. ಸರಸುವನ್ನು ಕರೆದುತರಹೇಳಿ. ಇವತ್ತೇ ತುಂಬ ಅನುಕೂಲವಾದ ಸಂದರ್ಭ ಬಂದಿದೆ. ಇಂಥ ಯೋಗಾಯೋಗ ಇನ್ನೆಂದೂ ಲಭಿಸಲಾರದು."

"ಇವೊತ್ತು ಏನು ಮಾಡಿದರೂ ಸರಸು ಸಿಕ್ಕಲಾರಳು ಸ್ವಾಮಿ. ಮತ್ತೆ ಎಂದಾದರೂ ಪ್ರಯತ್ನಿಸೋಣ. ಈ ಊರು ಬಿಟ್ಟು ಎಲ್ಲಿಗೆ ಹೋಗು

ತ್ತಾಳೆ ಆಕೆ ? ವಿಶ್ವಪ್ರಯತ್ನ ಮಾಡಿ ನಿಮಗೆ ಆಕೆಯನ್ನು ತಂದುಕೊಡು ತ್ತೇನೆ."

"ಆದರೆ, ಶಾಸ್ತ್ರಿ...."

"ಇವೊತ್ತು ಮಾತ್ರ ಸಾಧ್ಯವಿಲ್ಲ ಸ್ವಾಮಿಗಳೆ. ಉಪಾಯವಿಲ್ಲ. ಏಳಿರಿ, ಮೇಲಿನ ಕೋಣೆಗೇ ಬನ್ನಿ."

"ಆ ಗದಿಗೆವ್ವನಾದರೂ ಇದ್ದಾಳೆಯೆ, ಇಲ್ಲ—ಆಕೆಯೂ ಹೊರಟು ಹೋದಳೇ ?" ಎಂದು ಹತಾಶರಾಗಿ ಕೇಳಿದರು ಸ್ವಾಮಿಗಳು.

"ಆಕೆಯೇಕೆ ಹೋದಾಳು ? ನಿಮ್ಮ ದಾರಿ ಕಾಯುತ್ತ ಕೂತಿದಾಳೆ."

"ಅಂತೂ ಅವಳಾದರೂ ಇರುವಳಲ್ಲ ! ಇಲ್ಲಿಗೇ ಬರಹೇಳು ಶಾಸ್ತ್ರಿ."

"ಹಿಂದಿನ ಸ್ವಾಮಿಗಳ ಸಮಾಧಿಯ ಹತ್ತಿರ ಇಂಥ ಕೆಲಸ ಮಾಡ ಬಾರದು ಎನ್ನುತ್ತಾಳೆ ಆಕೆ."

"ಹಾಗೆಂದಳೇ ? ಇಷ್ಟು ಮುಂದುವರಿದವಳಾದರೂ ಇನ್ನೂ ಇಂಥ ಅಂಧಬುದ್ಧಿ ತೊಲಗಿಲ್ಲವೆಂದು ಕಾಣುತ್ತೆ. ಪಾಪ, ಸತ್ತವರು ಸತ್ತುಹೋ ದರು. ನಾವು ಏನು ಮಾಡುತ್ತಿದ್ದರೆ ಅವರಿಗೇನು ?" ಎನ್ನುತ್ತ ಸ್ವಾಮಿ ಗಳು ಎದ್ದು ಮೇಲಕ್ಕೆ ಬಂದರು. ಅವರ ಹಿಂದೆ ಹಿಂದೆ ಶಾಸ್ತ್ರಿಯೂ ಮೆಟ್ಟಿಲು ಗಳನ್ನೇರಿ ಬಂದು ಮುಚ್ಚಳವನ್ನು ಮುಚ್ಚಿದ.

"ನಿಮಗೆ ನಿದ್ರೆ ಬರುತ್ತಿರಬಹುದಲ್ಲ ಶಾಸ್ತ್ರಿಗಳೇ !" ಎಂದರು ಸ್ವಾಮಿ ಗಳು.

ಸೂಚನೆಯನ್ನು ಅರ್ಥಮಾಡಿಕೊಂಡು ಶಾಸ್ತ್ರಿ ಮರುಮಾತನಾಡದೆ ಕೊಟಡಿಯಿಂದ ಹೊರಟುಹೋದ. ಒಳಗಿನಿಂದ ಚಿಲಕ ಹಾಕಿ ಬಾಗಿಲನ್ನು ಭದ್ರಗೊಳಿಸಿ ಸ್ವಾಮಿಗಳು ಗದಿಗೆವ್ವನ ಎದುರಿಗೆ ಬಂದು ನಿಂತುಕೊಂಡರು.

ಕೆಲಹೊತ್ತು ನೀರವ.

"ಗದಿಗಾ," ಎಂದರು ಸ್ವಾಮಿಗಳು—"ಗದಿಗೆವ್ವಾ" ಎಂದಾಕೆಯನ್ನು ಕರೆಯಲಾರದೆ.

ಆಕೆ ಮೆಲ್ಲನೆ ತಲೆಯೆತ್ತಿ ಅವರನ್ನು ನೋಡಿದಳು.

"ಒಪ್ಪಿಗೆಯೇ ಗದಿಗಾ ?"

"ನೀವು ಇನ್ನು ಮೇಲೆ ಅವರಿವರ ಮೇಲೆ ಕಣ್ಣು ಹಾಕುವುದಿಲ್ಲವಾಗಿ ಮಾತು ಕೊಟ್ಟರೆ ಒಪ್ಪುತ್ತೇನೆ."

ಅವಳ ಕೈಯ ಮೇಲೆ ತಮ್ಮ ಕೈಯನ್ನಿಟ್ಟು ಸ್ವಾಮಿಗಳೆಂದರು :

"ಇದೋ, ಭಾಷೆ ಕೊಡುತ್ತೇನೆ. ನೀನೇ ನನ್ನ ಪ್ರೇಯಸಿ. ನಿನ್ನನ್ನು ಬಿಟ್ಟು ಇನ್ನಾರನ್ನೂ ಆಶಿಸುವುದಿಲ್ಲ. ಆದರೆ ನೀನು...."

"ನಾನೂ ಅಷ್ಟೆ."

"ಆದರೆ ಆ ಮಲ್ಲಸೆಟ್ಟಿ ?"

"ನಾನು ಬೇಡವೆಂದರೆ ನನ್ನ ಹತ್ತಿರ ಸುಳಿಯುವ ಯೋಗ್ಯತೆ ಯಾರಿಗಿದೆ ಈ ಊರಿನಲ್ಲಿ ?"

"ಸರಿ. ಇನ್ನುಮೇಲೆ ನೀನು ನನ್ನವಳು ಹೌದಲ್ಲವೆ ?"

ಗದಿಗೆಮ್ಮ ಉತ್ತರವೀಯದೆ ಸ್ವಾಮಿಗಳ ಎದೆಯ ಮೇಲೆ ತನ್ನ ತಲೆಯನ್ನೊರಗಿಸಿದಳು.

ಸ್ವಾಮಿಗಳು ಆಕೆಯನ್ನು ಬಳಸಿಕೊಂಡಿದ್ದಂತೆಯೆ ಗೋಡೆಯ ಹತ್ತಿರ ಹೋಗಿ ವಿದ್ಯುದ್ದೀಪದ ಗುಂಡಿಯನ್ನೆಳೆದು ದೀಪವನ್ನಾರಿಸಿದರು.

ಮತ್ತೆ ಅವರು ಗುಂಡಿಯನ್ನೆಳೆದು ದೀಪವನ್ನುಂಟಿಸಿದಾಗ ಮಾಡದಲ್ಲಿದ್ದ ಪುಟ್ಟ ಗಡಿಯಾರ ಹನ್ನೆರಡು ಗಂಟೆಯನ್ನು ತೋರಿಸುತ್ತಿತ್ತು.

ಗದಿಗೆಮ್ಮ ಮಂಚವನ್ನಿಳಿದು ಬಂದು, ಕನ್ನಡಿಯೆದುರಿಗೆ ನಿಂತು ತಲೆಗೂದಲನ್ನು ಸರಿಪಡಿಸಿಕೊಂಡಳು. ಹಣೆಯ ಮೇಲೆ ಹರಡಿದ್ದ ಕುಂಕುಮವನ್ನಳಿಸಿ, ಸೀರೆಯ ನಿರಿಗಳನ್ನು ಓರಣವಾಗಿಸಿದಳು.

ಬಯಲಾಟ ಯಾವಾಗಲೋ ಪ್ರಾರಂಭವಾಗಿದ್ದಿತು. ಪ್ರೌಢಮತಿಯ ಪಾತ್ರ ರಂಗದ ಮೇಲೆ ಬಂದು ಹಾಡು ಹೇಳುತ್ತ ನರ್ತಿಸುತ್ತಿದ್ದಿತು. ಅವಳ ಕಾಲಗೆಜ್ಜೆಗಳ ಸದ್ದೂ, ಹಾಡಿನ ಚರಣವೂ ಕೊಟಡಿಯೊಳಗೆ ತೂರಿಬರುತ್ತಿದ್ದುವು.

"ಹೊಂಬಣ್ಣದಿಂದ ಹೊಳೆಯುವ ಅಂಗಾ
ಪ್ರೇಮದಿ ಹೊಂದಿರಿ ವಿಟಪುಂಗಾ
ಕಾಮಬಾಧೆಯ ಮಾಡಿರಿ ಭಂಗಾ

ಗಂಧಕಸ್ತೂರಿಯನು ಲೇಪಿಸಿಕೊಂಡಿಹೆನು
ಚಂದದಿ ಆಲಿಂಗನ ಕೊಡಿರಿನ್ನು."

ಮಂಚದ ಮೇಲೊರಗಿದ್ದ ಹಾಗೆ ಸ್ವಾಮಿಗಳು ಗದಿಗೆವ್ವನ ತುಂಬು ದೇಹವನ್ನು ಎವೆಯಿಕ್ಕದೆ ದಿಟ್ಟಿಸುತ್ತಲಿದ್ದರು. ಆಕೆ ಹೊರಕ್ಕೆ ಹೊರಡುವ ಸಿದ್ಧತೆ-ನಡೆಸಿದ್ದಳು. ಇಷ್ಟು ಬೇಗ ಆಕೆಯನ್ನು ಬಿಡುವ ಮನಸ್ಸಿರಲಿಲ್ಲ ಸ್ವಾಮಿಗಳಿಗೆ. ಬಯಲಾಟ ಮುಗಿಯುವ ವರೆಗೆ, ಬೆಳಗಾಗುವ ವರೆಗೆ ಆಕೆ ತನ್ನೊಡನಿರಬೇಕೆಂದು ಅವರಿಗೆನ್ನಿಸುತ್ತಿತ್ತು. ತಮ್ಮ ಬಯಕೆಯನ್ನು ಹುಚ್ಚೆಬ್ಬಿಸುವ ಹಾಗೆ ಹೊರಗಿನಿಂದ ಆಟದ ಮಾತೂ, ಹಾಡೂ ಕೇಳಬರುತ್ತಿದ್ದುದು ಬೇರೆ. ವಿಟಪುರುಷನನ್ನು ಕರೆಯುತ್ತ ವೇಶ್ಯಾಮಣಿ ಪ್ರೌಢಮತಿ ಕೊಂಚವೂ ನಾಚಿಕೆಯಿಲ್ಲದೆ ತನ್ನ ಅಂಗಾಂಗಗಳ ವರ್ಣನೆ ಮಾಡಿಕೊಳ್ಳುತ್ತಿದ್ದಳು :

"ಹೇ ಯತಿವರ್ಯನೆ, ನನ್ನ ಶರೀರ ಸೌಂದರ್ಯವನ್ನಾದರೂ ಪರೀಕ್ಷಿಸು. ಬಂಗಾರದ ಬಳ್ಳಿಯಂತಿರುವ ಶರೀರವು, ಕೊಬ್ಬೇರಿದ ಕುಚಗಳು, ರತಿಯನ್ನು ನಿಂದಿಸುವ ಮುಖಕಾಂತಿಯುಳ್ಳವಳಾಗಿ ತಾರುಣ್ಯದ ಸಿರಿಯಿಂದ ಮೆರೆಯುತ್ತಿರುವೆನು. ಇಂಥ ತರುಣೀಮಣಿಯನ್ನು ಕೂಡಿ ರತಿಸುಖ ಹೊಂದುವದಕ್ಕೆ ಒಲ್ಲೆನೆನ್ನುವದೇತರ ಮಾತು ?"

ಸ್ವಾಮಿಗಳು ಕಿಲಕಿಲನೆ ನಕ್ಕರು. ಅವರ ನಗೆ ಕಿವಿಗೆ ಬೀಳುತ್ತಲೂ ಗದಿಗೆವ್ವ ಅತ್ತ ಹೊರಳಿದಳು.

"ಏನದು, ಬಹಳ ನಗೆ ?"

"ನಗೆ ಬರದಿರುತ್ತದೆಯೆ ? ಇಂಥ ಸುಂದರಿಯೊಬ್ಬಳು ತಾನಾಗಿಯೆ ಕರೆಯುತ್ತಿರುವಾಗ ಒಲ್ಲೆನೆನ್ನುವವರೂ ಇದ್ದಾರೆಯೆ ಈ ಪ್ರಪಂಚದಲ್ಲಿ ? ಅವನೆಂಥ ಯತಿಯೊ, ಯಾರು ಬಲ್ಲರು ? ಅಂಥವರೂ ಇರುವುದುಂಟೇ ?"

"ಮತ್ತೆ ! ಎಲ್ಲರೂ ನಿಮ್ಮಂಥ ಅರ್ಜುನ ಸನ್ಯಾಸಿಗಳೇ ಆಗಿರುತ್ತಾರೆಯೆ ? ನಿಜವಾದ ತಪಸ್ವಿಗಳೇ ಇರುವುದಿಲ್ಲವೆ ?"

"ಹೆಣ್ಣು ಬಂದು ಕರೆಯುತ್ತಿರುವಾಗ ಎಲ್ಲಿನ ತಪಸ್ಸು, ಏನು ಕತೆ ! ವಿಶ್ವಾಮಿತ್ರನಂಥ ಮುನಿಯೂ...." ಎಂದು ಸ್ವಾಮಿಗಳು ಹೇಳುತ್ತಿದ್ದ ಹಾಗೆ ಹೊರಗಡೆ ಪ್ರೌಢಮತಿ ಮತ್ತೆ ಹಾಡತೊಡಗಿದಳು :

"ಎನ್ನ ಕೈಯೊಳು ಕಂಕಣರವವು
ಕಾಲಂದುಗೆ ಝೇಂಕರಿಸುವವು
ಮನ್ಮಥನೋದ್ಭವ ಮಾಡುವವು
ಇಂಥ ಕಾಮಿನಿಯನ್ನು ಕೂಡಿ ವಿಲಾಸವನು
ಮಾಡದಿದ್ದರೆ ಸಾರ್ಥಕವೇನು ?"

"ಕೇಳಿದೆಯಾ ಗದಿಗಾ ! ಎಷ್ಟು ಚೆನ್ನಾಗಿ ಹೇಳುತ್ತಾಳೆ ಪ್ರೌಢಮತಿ. ಗಂಡಾಗಿ ಹುಟ್ಟಿ ಬಂದ ಮೇಲೆ ಹೆಣ್ಣನ್ನು ಕೂಡದಿದ್ದರೆ ಜೀವನ ನಿಸ್ಸಾರ್ಥಕವೇ ಸರಿ. ಅದರಲ್ಲೂ ನಿನ್ನಂಥ ಚದುರೆ ಪ್ರಾಪ್ತವಾದಾಗ...."

"ಸಾಕು ಮಾಡಿರಿ. ನಾಗಮ್ಮ ಎದ್ದಿರುವಳೋ ಏನೊ. ಆಕೆಗೆಲ್ಲಾದರೂ ನಿಮ್ಮ ಮಾತು ಕೇಳಿಸೀತು."

"ಬಾಗಿಲದ ಕಿಂಡಿಯಲ್ಲಿ ಇಣುಕಿಹಾಕಿ ನೋಡು. ಅವರು ಎದ್ದಿದ್ದರೆ ಗೊತ್ತಾಗುತ್ತದೆ."

ಗದಿಗೆವ್ವ ಅಡಿಗಳ ಸದ್ದಾಗದಂತೆ ಬಾಗಿಲ ಬಳಿ ಬಂದು ಛಿದ್ರಗಳಲ್ಲಿ ದೃಷ್ಟಿ ಬಿಟ್ಟು ನೋಡಿದಳು. ನಾಗಮ್ಮ, ಗೌರಿ ಮಲಗಿದ ಹಾಗೆಯೆ ಮಲಗಿದ್ದರು.

"ಇಲ್ಲ. ಅವರಿನ್ನೂ ಎದ್ದಿಲ್ಲ."

"ಬಹಳ ಒಳ್ಳೆಯದಾಯಿತು. ನಿನಗಾದರೂ ಏನವಸರ? ಈಗಲೆ ಎಲ್ಲಿಗೆ ಹೊರಟೆ ?"

"ನಿಮಗೇನಂತೆ ! ಮಠ ಅಂದ ಮೇಲೆ ಥಟಕ್ಕನೆ ಯಾರಾದರೂ ಬಂದುಬಿಡುತ್ತಾರೆ. ನಾನಿಲ್ಲಿ ಸಿಕ್ಕುಬಿಟ್ಟರೆ ನನ್ನ ಗತಿಯೇನು ?"

"ನನ್ನ ಗತಿಯಾದರೂ ಏನು ? ಆದರೆ ಅಂಥ ಭಯಕ್ಕೆ ಕಾರಣವಿಲ್ಲ. ಇಂಥ ಸಮಯದಲ್ಲಿ ಯಾರು ಬರುತ್ತಾರೆ ?"

"ಹಾಗೆ ಹೇಳಲು ಬರುತ್ತದೆಯೆ ? ಆಟ ನೋಡಲು ಬಂದವರು ಯಾರಾದರೂ ಈ ಕೋಣೆಯಲ್ಲಿ ದೀಪವಿರುವದನ್ನು ಕಂಡು ನೀವು ಎಚ್ಚರವಾಗಿರುವದನ್ನು ತಿಳಿದು ಬಂದುಬಿಟ್ಟರೆ ?"

"ಅದಕ್ಕೇ ದೀಪ ಅಂಟಿಸುವದು ಬೇಡವೆಂದು ನಾನು ಹೇಳಿದ್ದು. ನೀನು ಕೇಳಲಿಲ್ಲ. ದೀಪ ಆರಿಸಿ ಬಂದುಬಿಡು. ಇನ್ನೂ ಸಾಕಷ್ಟು ಹೊತ್ತಿದೆ."

"ಸದಾಶಿವನಿಗೆ ಅದೇ ಧ್ಯಾನ ಅಂದ ಹಾಗೆ ನಿಮಗೆ...." ಎಂದು ಗದಿಗೆವ್ವ ಹೇಳುತ್ತಿದ್ದ ಹಾಗೆ ಹೊರಗಡೆಯಿಂದ ನೂರಾರು ಜನರ ಕೂಗಾಟ ಕೇಳಬಂದಿತು. ಹಾಡು ನಿಂತುಹೋಯಿತು. ಆಟ ನೋಡುತ್ತ ಕುಳಿತಿದ್ದ ಜನರು ಮೇಲಕ್ಕೆದ್ದು ಆಕ್ರೋಶ ಮಾಡುತ್ತಿದ್ದುದೂ ಕೇಳಿಬರತೊಡಗಿತು. ಒಂದೆರಡು ಕ್ಷಣಗಳಲ್ಲಿಯೆ ಕೊಟಡಿಯ ಬಾಗಿಲನ್ನು ಯಾರೋ ಬಲವಾಗಿ ದೂಡತೊಡಗಿದರು.

ಗದಿಗೆವ್ವ ಕೈಕಾಲು ಕಳೆದುಕೊಂಡಳು. ತಟ್ಟನೆ ದೀಪವನ್ನಾರಿಸಿ ಮಂಚದ ಹತ್ತಿರ ಹೋಗಿ—"ಏನು ಗದ್ದಲವೊ ತಿಳಿಯದು. ಇನ್ನು ಹ್ಯಾಗೆ ಮಾಡೋಣ ?" ಎಂದಳು.

ಅಷ್ಟು ಹೊತ್ತಿಗಾಗಲೆ ಸ್ವಾಮಿಗಳ ಎದೆಯೂ ಡವಡವನೆ ಬಡಿದು ಕೊಳ್ಳತೊಡಗಿದ್ದಿತು. ಎಂಥ ಗದ್ದಲಕ್ಕಾರಂಭವಾಗಿದೆಯೊ, ಗದ್ದಲ ಮಾಡು ತ್ತಿರುವವರು ಯಾರೊ ! ಕೊಟಡಿಯ ಬಾಗಿಲನ್ನು ದೂಡುತ್ತಿದಾರೆ. ಬಾಗಿಲು ತೆರೆಯದಿದ್ದರೆ ಅವರು ಸುಮ್ಮನೆ ಬಿಡುವಂತೆ ತೋರುವುದಿಲ್ಲ. ಭಾರಿ ಸಂಕಟ ಪ್ರಸಂಗವೇ ಬಂದಿತಲ್ಲ....ಇನ್ನೇನು ಮಾಡುವುದು ? ಗದಿಗೆವ್ವನನ್ನು ಎಲ್ಲಿ ಅಡಗಿಸುವುದು ? ಹೇಗೆ ಪಾರಾಗುವುದು ?—ಎಂದು ಅವರು ಯೋಚಿಸು ತ್ತಿದ್ದ ಹಾಗೆ ಕೆಳಗಡೆ ನೆಲಮನೆಯಿರುವುದು ಅವರ ನೆನಪಿಗೆ ಬಂದಿತು. ಒಡ ನೆಯೆ ಅವರು ಮಂಚದಿಂದಿಳಿದು ನೆಲಮನೆಯ ಮುಚ್ಚಳವನ್ನು ತೆಗೆದು ಗದಿಗೆವ್ವನನ್ನು ಕೆಳಕ್ಕಿಳಿಸಿ—"ನಾನು ಕರೆಯುವ ತನಕ ನೀನು ಅಲ್ಲೇ ಇರು, ಹೇಗೂ ಅಲ್ಲೊಂದು ಹಾಸುಗೆಯಿದ್ದೇ ಇದೆ. ಮಲಗಿಕೊಂಡಿರು," ಎಂದು ಪಿಸುದನಿಯಲ್ಲಿ ಹೇಳಿ ಮುಚ್ಚಳವನ್ನು ಭದ್ರಗೊಳಿಸಿ ಎದ್ದು ಹೋಗಿ ಬಾಗಿ ಲಿನ ಚಿಲಕವನ್ನು ತೆಗೆದರು.

ಒಡನೆಯೆ, ಕೈಯಲ್ಲಿ ಬ್ಯಾಟ್ರಿದೀಪ ಹಿಡಿದುಕೊಂಡಿದ್ದ ನಾಲ್ಕೈದು ಜನರು ಒಳನುಗ್ಗಿ ಬಂದು ಸ್ವಾಮಿಗಳನ್ನು ಬಿಗಿಯಾಗಿ ಹಿಡಿದುಕೊಂಡರು. ಅವರಲ್ಲೊಬ್ಬ ಸ್ವಾಮಿಗಳ ಬಾಯಿಯನ್ನು ತನ್ನ ಎರಡು ಕೈಗಳಿಂದ ಬಿಗಿ ಯಾಗಿ ಮುಚ್ಚಿದ.

"ಈ ಕೋಣೆಯ ಕೆಳಗೆ ಸಮಾಧಿಯಿದೆಯಲ್ಲ. ಅಲ್ಲಿ ಹಾಕಿಬಿಡೋಣ ಇವರನ್ನು," ಎಂದು ಒಬ್ಬನೆಂದ.

"ಹೌದು. ಹಾಗೇ ಮಾಡಬೇಕು. ನಮ್ಮ ದೇವರಂಥ ಸ್ವಾಮಿಗಳನ್ನು ಓಡಿಸಿ ತಾನು ಸ್ವಾಮಿಯಾಗಿ ಮೆರೆಯಲು ಬಂದಿದಾನೆ ಮಗ. ಈ ಊರವ ರೆಂದರೆ ಎಂಥವರೆಂಬುದು ಇನ್ನೂ ಗೊತ್ತಿರಲಿಕ್ಕಿಲ್ಲ ಇವನಿಗೆ. ಹಾಕಿರಿ ಇವ ನನ್ನು ನೆಲಮನೆಯಲ್ಲಿ. ಅಲ್ಲೇ ಇವನ ಜೀವಂತ ಸಮಾಧಿಯಾಗಲಿ."

ಸ್ವಾಮಿಗಳು ಬಾಯಿಬಿಡುವಂತಿರಲಿಲ್ಲ. ಕೂಗಿಕೊಳ್ಳುವ ಮಾತು ಹಾಗಿರಲಿ, ಕೈಕಾಲು ಅಲುಗಾಡಿಸಲೂ ಸಾಧ್ಯವಿರಲಿಲ್ಲ. ಒಂದೆರಡು ಕ್ಷಣ ಗಳಲ್ಲಿಯೆ ಅವರನ್ನು ನೆಲಮನೆಗೆ ದೂಡಿ ಮುಚ್ಚಳವನ್ನೆಳೆದು ಮೇಲೆ ಬೀಗ ಜಡಿಯಲಾಯಿತು. ಆ ಕೆಲಸವನ್ನು ಮುಗಿಸಿ ಬಂದವರು ಬಂದ ಹಾಗೆಯೆ ಹೊರಟುಹೋದರು.

ಹೊರಗಡೆ ಮಹಾಕೋಲಾಹಲಕ್ಕಾರಂಭವಾಗಿದ್ದಿತು. ಆಟಗಳೆರಡೂ ನಿಂತುಹೋಗಿದ್ದುವು. ಮಠದ ಪಡಸಾಲೆಯಲ್ಲಿ, ಸ್ವಾಮಿಗಳು ಕೂಡ್ರುವ ಪೀಠದ ಮೇಲೆ ಪ್ರಭುಸ್ವಾಮಿಗಳನ್ನು ಕೂಡ್ರಿಸಲಾಗಿದ್ದಿತು. ಅವರ ಎಡಕ್ಕೂ ಬಲಕ್ಕೂ ದೊಣ್ಣೆಗಳನ್ನು ಹಿಡಿದುಕೊಂಡು ಹತ್ತಿಪ್ಪತ್ತು ಜನ ಧಡಿಯರು ನಿಂತುಕೊಂಡಿದ್ದರು. ಎಡಗೈಯಲ್ಲಿ ಪಿಸ್ತೂಲನ್ನು ಹಿಡಿದು ಸ್ವಾಮಿಗಳ ಎದುರಿಗೆ ನಿಂತುಕೊಂಡು ಚೆನ್ನಪ್ಪಗೌಡರು ಕೂಗಿ ಹೇಳುತ್ತಿದ್ದರು :

"ಕೇಳಿರಿ. ಎಲ್ಲರೂ ಕೇಳಿರಿ. ನ್ಯಾಯವಾಗಿ ಈ ಮಠದ ಅಧಿಕಾರಿ ಗಳಾಗಿರುವವರು ಈ ನಮ್ಮ ಪ್ರಭುಸ್ವಾಮಿಗಳು. ಇವರನ್ನು ಅನ್ಯಾಯ ವಾಗಿ ಮಠದಿಂದ ಹೊರಗೆ ಹಾಕಿ ಆ ಮಲ್ಲಪ್ಪಸೆಟ್ಟಿ ಒಬ್ಬ ಅಯೋಗ್ಯ ಜಂಗಮನನ್ನು ಕರೆದುತಂದು ಪಟ್ಟ ಕಟ್ಟಿದ್ದಾನೆ. ಇಂಥ ಅನ್ಯಾಯಕ್ಕೆ ನಾ ವೆಂದೂ ತಲೆ ಬಾಗಿಸಲಾರೆವು. ನಮ್ಮ ಸ್ವಾಮಿಗಳೆಂದರೆ ಇವರೇ. ಪ್ರಭು ಸ್ವಾಮಿಗಳಿಗೆ ಜಯ ಜಯಾ!"

ಯಾವುದೂ ಅರ್ಥವಾಗದೆ ಗೊಂದಲದಲ್ಲಿ ಸಿಲುಕಿ ನಿಂತಿದ್ದ ಜನ ಜಂಗುಳಿ ಆ ಜಯಕಾರಕ್ಕೆ ಮರುಧ್ವನಿ ಕೊಟ್ಟಿತು.

ಅಷ್ಟರೊಳಗಾಗಿ ಮಠದ ಮಹಾದ್ವಾರದಾಚೆ ಮತ್ತೆ ಕೂಗಾಟ ಕೇಳಿ ಬಂದಿತು. ಚೆನ್ನಪ್ಪಗೌಡರು ಅತ್ತ ಹೊರಳುತ್ತಿದ್ದಂತೆಯೆ ಕೈಗಳಲ್ಲಿ ಕುಡು ಗೋಲುಗಳನ್ನೂ, ದೊಣ್ಣೆಗಳನ್ನೂ ಹಿಡಿದುಕೊಂಡಿದ್ದ ಜನರು ಒಬ್ಬರನ್ನೊ

ಬ್ಬರು ತಳ್ಳುತ್ತ ಧಾವಿಸಿ ಬರತೊಡಗಿದರು. ಮಲ್ಲಪ್ಪಸೆಟ್ಟರ ಧ್ವನಿಯೂ ಕೇಳಬಂದಿತು.

"ಯಾವನೋ ಅವ ಆ ಮುದುಕ ಸ್ವಾಮಿಯನ್ನ ಮತ್ತೆ ತಂದು ಕೂಡ್ರಿಸುವವ ? ಹೊಡೀರಿ ಅವನ್ನ. ಕಡೀರಿ ಅವನ್ನ," ಎಂದು ಕೂಗುತ್ತಾ ಮಲ್ಲಪ್ಪಸೆಟ್ಟರು ಮುನ್ನುಗ್ಗಿದರು. ಚೆನ್ನಪ್ಪಗೌಡರು ಅವಡುಗಚ್ಚಿ ಪಿಸ್ತೂಲು ಹಾರಿಸಿದರು. ಮಲ್ಲಪ್ಪಸೆಟ್ಟರಿಗೆ ಗುಂಡು ತಗಲಲಿಲ್ಲ. ಮಹಾದ್ವಾರದ ಗೋಡೆಗೆ ಬಡಿದು ಅಲ್ಲಿ ಕಿಡಿಗಳನ್ನೆಬ್ಬಿಸಿ ಅದು ಅದೃಶ್ಯವಾಯಿತು.

ಮೊದಲೇ ಅಂಗಳದಲ್ಲಿ ಸಿದ್ಧವಾಗಿ ನಿಂತಿದ್ದ ಗುಂಪಿಗೂ, ಆಮೇಲೆ ಬಂದ ಗುಂಪಿಗೂ ಕೈ ಕೈ ಕಾಳಗಕ್ಕಾರಂಭವಾಯಿತು. ದೊಣ್ಣೆ, ಕುಡುಗೋಲು ಧಾರಾಳವಾಗಿ ಬಳಸಲ್ಪಟ್ಟವು. ಆಟ ನೋಡಲು ಬಂದವರೂ, ಆಡಲು ಬಂದವರೂ, ಲಾವಣಿ ಹಾಡಲು ಬಂದವರೂ, ಕೇಳಲು ಬಂದವರೂ ಹೌಹಾರಿ ದಾರಿ ಸಿಕ್ಕಿದತ್ತ ಓಡಿಹೋದರು.

ಗದ್ದಲಕ್ಕಾರಂಭವಾಗುತ್ತಲೂ ನಿದ್ರೆ ತಿಳಿದೆದ್ದು ಕಟ್ಟೆಯ ಮೇಲೆ ನಿಂತುಕೊಂಡು ನಾಗಮ್ಮ ಸರಸುವಿಗಾಗಿ ಕೂಗುತ್ತಿದ್ದಳು. ಗೌರಿ ಹೆದರಿ ದನಿದೆಗೆದು ಆಕ್ರೋಶ ಮಾಡತೊಡಗಿದ್ದಳು. "ಸರಸೂ, ಸರಸೂ, ಎಲ್ಲಿ ಹೋದೆಯೋ ತಾಯಿ ?"

ಮಠದಲ್ಲಿ ಆರಂಭವಾದ ಗದ್ದಲ ಹಾ ಹಾ ಎನ್ನುವುದರೊಳಗಾಗಿ ಊರಲ್ಲೆಲ್ಲ ಪಸರಿಸಿದ್ದಿತು. ಚೆನ್ನಪ್ಪಗೌಡರ ಪಕ್ಷಕ್ಕೂ, ಮಲ್ಲಪ್ಪಸೆಟ್ಟರ ಪಕ್ಷಕ್ಕೂ ಬಡಿದಾಟ ! ಸರಿ, ಆಯಾ ಪಕ್ಷಗಳಿಗೆ ಸೇರಿದ ಜನರೆಲ್ಲ ಬೀದಿ ಬೀದಿಗಳಲ್ಲಿ ಹೊಡೆದಾಟಕ್ಕಾರಂಭಿಸಿದರು.

ಅಂಗಡಿಯಿಂದ ಬಂದು ಮನೆಯಲ್ಲಿ ಮಲಗಿಕೊಂಡಿದ್ದ ಬಸಪ್ಪಸೆಟ್ಟರು, ಕೋಲಾಹಲದ ಧ್ವನಿ ಕೇಳಿ ಎಚ್ಚತ್ತು, ಹೆಂಡಿರು ಮಕ್ಕಳು ಮಠದಲ್ಲಿರುವುದನ್ನ ನೆನೆದುಕೊಂಡು ಮನೆಯ ಬಾಗಿಲಿಗೆ ಬೀಗ ಹಾಕುವುದನ್ನೂ ಮರೆತು ಅತ್ತ ಧಾವಿಸಿದರು. ದಾರಿಯಲ್ಲಿ ಗೌಡರ ಪಕ್ಷಕ್ಕೆ ಸೇರಿದವನೊಬ್ಬ ಅವರನ್ನ ಗುರುತಿಸಿ ದೊಣ್ಣೆಯಿಂದ ಒಂದೇಟು ಹಾಕಿದ. ಬಸಪ್ಪಸೆಟ್ಟರು ಒಂದೆರಡು ನಿಮಿಷ ನೆಲದ ಮೇಲೆ ಉರುಳಾಡುತ್ತಿದ್ದು, ಅನಂತರ ಮತ್ತೆ ಎದ್ದು ಓಡುತ್ತೋಡುತ್ತ ಮಠಕ್ಕೆ ಬಂದರು. ಅಷ್ಟರೊಳಗಾಗಿ ಪೋಲೀಸರು ಅಲ್ಲಿಗೆ ಬಂದು

ಗದ್ದಲವನ್ನು ಶಾಂತಗೊಳಿಸಿದ್ದರು. ಚೆನ್ನಪ್ಪಗೌಡರನ್ನೂ ಮಲ್ಲಪ್ಪಸೆಟ್ಟರನ್ನೂ ಇನ್ನಿತರ ಮುಖಂಡರನ್ನೂ ಕಚೇರಿಗೆ ಸಾಗಿಸಲಾಗಿದ್ದಿತು. ಇನ್ನುಳಿದವರೆಲ್ಲ ಓಡಿಹೋಗಿದ್ದರು. ಪೀಠದ ಮೇಲೆ ಸ್ವಾಮಿಗಳೂ ಇರಲಿಲ್ಲ. ಅವರು ಯಾವಾಗಲೋ ಅಲ್ಲಿಂದ ಮಾಯವಾಗಿದ್ದರು.

ಬಸಪ್ಪಸೆಟ್ಟರು ಮಹಾದ್ವಾರದಲ್ಲಿ ಅಡಿಯಿರಿಸಿದೊಡನೆ ನಾಗಮ್ಮನೂ ಗೌರಿಯೂ ಅವರೆಡೆಗೆ ಧಾವಿಸಿದರು.

"ಸರಸೂ ಎಲ್ಲಿ ?" ಎಂದು ಗಾಬರಿಗೊಂಡು ಕೇಳಿದರು ಸೆಟ್ಟರು.

"ಅಷ್ಟು ಹೊತ್ತಿನಿಂದ ಆಕೆಯನ್ನೇ ಹುಡುಕುತ್ತಿದೇನೆ. ಎಲ್ಲಿ ಹೋದಳೋ ತಿಳಿಯದು."

"ಆಕೆಯನ್ನು ಬಿಟ್ಟು ನೀನೆಲ್ಲಿಗೆ ಹೋಗಿದ್ದೆ ?"

"ನಿದ್ದೆ ಬಂದಿತ್ತು. ನಾನು ಒಳಗಿನ ಕೋಣೆಯಲ್ಲಿ ಮಲಗಿದ್ದೆ. ಅಜ್ಜಿ, ಸರಸೂ ಹೊರಗಡೆ ಕಟ್ಟೆಯ ಮೇಲಿದ್ದರು."

"ಅಜ್ಜಿಯಾದರೂ ಎಲ್ಲಿ ಹಾಳಾದಳು ?"

"ಏನೋ. ಇಬ್ಬರೂ ಮಾಯವಾಗಿದ್ದಾರೆ."

"ಒಳಗಿನ ಕೋಣೆಯಲ್ಲೇ ಮಲಗಿದ್ದಾರು. ಸರಿಯಾಗಿ ನೋಡಿದಿಯಾ ?"

"ಇಲ್ಲ. ಒಳಗೆ ಬೆಳಕಿಲ್ಲ. ನೋಡೋಣ ಬರ್ರಿ."

ಮತ್ತೆ ಕೊಟಡಿಗೆ ಬಂದು ನೋಡಿದರು. ಮೂಲೆಯೊಂದರಲ್ಲಿ ರುದ್ರವ್ವಜ್ಜಿ ಮರದ ತುಂಡಿನಂತೆ ಬಿದ್ದು ಗೊರಕೆ ಹೊಡೆಯುತ್ತಿದ್ದಳು. ಆಕೆಯನ್ನು ಎಚ್ಚರುಗೊಳಿಸಿ "ಸರಸೂ ಎಲ್ಲಿ ?" ಎಂದು ಸೆಟ್ಟರು ಕೇಳಿದಾಗ ಕ್ಷಣಕಾಲ ಆಕೆಯಿಂದ ಉತ್ತರವೇ ಬರಲಿಲ್ಲ. ಸೆಟ್ಟರು ಮತ್ತೆ ಬಾಯಿ ಮಾಡಿ ಗದರಿಸಿದಾಗ ಆಕೆ ಕಣ್ಣುಜ್ಜಿಕೊಳ್ಳುತ್ತ ಹೇಳಿದಳು :

"ಸರಸೂನೇ ? ಆಕೆಯೆಲ್ಲಿಗೆ ಹೋದಾಳು ? ಹೊರಗೇ ಕುಳಿತಿದ್ದಳಲ್ಲ, ಶಿವಮೂರ್ತಿಯ ಸಂಗಡ ?"

"ಶಿವಮೂರ್ತಿ ? ಆತ ಯಾವಾಗ ಬಂದಿದ್ದ ?"

"ಆಟ ಸುರುವಾಗುವದಕ್ಕೆ ಮೊದಲೇ ಬಂದಿದ್ದ. ಅವ ಬಂದ ಮೇಲೆ

ನನಗೂ ನಿದ್ದೆ ಬರಹತ್ತಿತು. ನೀವಿಬ್ಬರೂ ನೋಡುತ್ತಿರಿಯಪ್ಪ–ಅಂತ ಹೇಳಿ ನಾನಿಲ್ಲಿ ಬಂದು ಬಿದ್ದುಕೊಂಡೆ."

ಸೆಟ್ಟರೂ ನಾಗಮ್ಮನೂ ಒಂದೆರಡು ನಿಮಿಷ ಯೋಚಿಸುತ್ತಲಿದ್ದರು.

"ಶಿವಮೂರ್ತಿ ಆಕೆಯ ಜೊತೆಗಿದ್ದನೆಂದ ಮೇಲೆ ಭಯವೇನೂ ಇಲ್ಲ ಬಿಡಿರಿ. ಗದ್ದಲಕ್ಕಾರಂಭವಾಗುತ್ತಲೂ ಆತ ಆಕೆಯನ್ನು ಸುರಕ್ಷಿತವಾಗಿ ದಾಟಿಸಿ ಕರೆದುಕೊಂಡು ಹೋಗಿದ್ದಾನು. ಆತ ಸಂಭಾವಿತ ಹುಡುಗ. ಆತನ ಬಗ್ಗೆ ನನಗೆ ಪೂರಾ ನಂಬಿಕೆಯಿದೆ," ಎಂದಳು ನಾಗಮ್ಮ.

"ಹೌದು. ನನಗೂ ನಂಬಿಕೆಯಿದೆ. ಆದರೆ ಸರಸುವೊಬ್ಬಳನ್ನೇ ಹೇಗೆ ಕರೆದೊಯ್ದ ಆತ ? ನೀವಿಲ್ಲಿ ಒಳಗೆ ಮಲಗಿರುವಿರೆಂಬುದು ಆತನಿಗೆ ಗೊತ್ತಿರಲಿಲ್ಲವೆ ? ನಿಮ್ಮನ್ನೂ ಕರೆದೊಯ್ಯಬೇಕೆಂಬ ವಿಚಾರ ಆತನಿಗೆ ಬರಲಿಲ್ಲವೆ?"

"ಏನೋ, ಅವಸರದಲ್ಲಿ ಮರೆತಿರಬಹುದು. ಈಗಾಗಲೆ ಅವರು ಮನೆಗೆ ಹೋಗಿದ್ದರೂ ಹೋಗಿದ್ದಾರು. ಹೋಗೋಣ ಬನ್ನಿ," ಎಂದು ನಾಗಮ್ಮ ಹೊರಟು ನಿಂತಳು.

"ಗಡಿಬಿಡಿಯಲ್ಲಿ ಮನೆಗೆ ಬೀಗ ಹಾಕವೆ ಹಾಗೇ ಬಂದೆ. ಈ ಗಲಾಟೆಯಲ್ಲಿ ಯಾರಾದರೂ ಒಳಹೊಕ್ಕು ಲೂಟಿ ಮಾಡಿದರೇನು ಗತಿ ?" ಎಂದವರೇ ಸೆಟ್ಟರು ಲಗುಬಗೆಯಿಂದ ಧಾವಿಸತೊಡಗಿದರು.

ಬೀದಿಗಳಲ್ಲಿ ಗಲಾಟೆಯಿನ್ನೂ ಶಾಂತವಾಗಿರಲಿಲ್ಲ. ಅಲ್ಲಲ್ಲಿ ಪೋಲೀಸಿನವರೂ ಓಡಿಯಾಡುತ್ತಲಿದ್ದರು. ಸೆಟ್ಟರು ತಮ್ಮ ಪರಿವಾರದೊಂದಿಗೆ ಹೇಗೋ ಮನೆಯವರೆಗೆ ಬಂದರು. ಹಾಕಿದ ಬಾಗಿಲು ಹಾಗೆಯೆ ಇತ್ತು. ಒಳಗಡೆ ಯಾರ ಸುಳಿವೂ ಇರಲಿಲ್ಲ. ಶಿವಮೂರ್ತಿಯ ಕೊಟಡಿಗೆ ಹೋಗಿ ನೋಡಿದರು. ಬಾಗಿಲಿಗೆ ಬೀಗ ಬಿದ್ದಿತ್ತು.

"ಗದ್ದಲ ಮುಗಿದ ಮೇಲೆ ಬಂದರಾಯಿತೆಂದು ಎಲ್ಲಾದರೂ ಸುರಕ್ಷಿತ ಸ್ಥಳದಲ್ಲಿ ಕುಳಿತಿದ್ದಾರು. ಈಗ ಬರಬಹುದು," ಎಂದು ಸಮಾಧಾನ ಹೇಳಿಕೊಳ್ಳುತ್ತ ಎಲ್ಲರೂ ಒಳಗೆ ಬಂದು ಕುಳಿತರು. ಆದರೆ ಯಾರಿಗೂ ನಿಜವಾದ ಸಮಾಧಾನವಾಗಿರಲಿಲ್ಲ. ಗೌರಿಯಂತೂ ದನಿ ತೆಗೆದು ರೋದಿಸುತ್ತಲಿದ್ದಳು:

"ಸರಸೂ....ಸರಸಕ್ಕಾ....ಸರಸೂ," ಎಂದು.

ನಿಜಕ್ಕೂ ಎಲ್ಲಿದ್ದಳು ಸರಸೂ ?

[೧೫]

ಆಟಕ್ಕಾರಂಭವಾದಾಗ ಸರಸು ಶಿವಮೂರ್ತಿ ಇಬ್ಬರೂ ಅಲ್ಲಿಯೆ ಇದ್ದರು.

ಹಳದಿಯ ಬಣ್ಣದ ನಿಲುವಂಗಿಯೊಂದನ್ನು ಧರಿಸಿ, ಕಂಕುಳಲ್ಲಿ ಚಿಗರಿಯ ಚರ್ಮವನ್ನೂ, ಕೈಯಲ್ಲಿ ಕಮುಂಡಲವನ್ನೂ ಹಿಡಿದುಕೊಂಡು, ಹಣೆಗೆ ಢಾಳವಾಗಿ ವಿಭೂತಿ ಹಚ್ಚಿಕೊಂಡ ಜೀವನ್ಮುಕ್ತಸ್ವಾಮಿ ರಂಗದ ಮೇಲೆ ಪ್ರವೇಶಿಸಿದ್ದ. ಹುಲುಸಾಗಿ ಬೆಳೆದ ಗಡ್ಡ ಮೀಸೆಗಳಿಂದೊಡಗೂಡಿದ ಮುಖದ ನಡುಹರಯದ ವ್ಯಕ್ತಿಯೊಬ್ಬ ಧೋತರವೊಂದನ್ನು ತಲೆಯ ಮೇಲೆ, ಸೆರಗಿನ ಹಾಗೆ ಹಾಯಿಸಿಕೊಂಡು "ದೂತೆ"ಯಾಗಿ ಬಂದು ಜೀವನ್ಮುಕ್ತ ಸ್ವಾಮಿಯನ್ನು ಪ್ರಶ್ನಿಸುತ್ತಲಿದ್ದ.

ರುದ್ರವ್ವಜ್ಜಿ ಅಷ್ಟು ಹೊತ್ತಿಗಾಗಲೆ ಒಳಗಿನ ಕೊಟಡಿಗೆ ಹೊರಟು ಹೋಗಿದ್ದಳು. ಸರಸು ಶಿವಮೂರ್ತಿ ಇಬ್ಬರೇ ಕಟ್ಟೆಯ ಮೇಲೆ ಕುಳಿತಿದ್ದರು. 'ದೂತೆ'ಯ ಆ ಹಂಡಬಂಡ ವೇಷವನ್ನು ಕಂಡಾಗ ಶಿವಮೂರ್ತಿಗೆ ಸಹಜವಾಗಿಯೆ ನಗು ಬಂದಿತು.

"ಇದೆಂಥ ದೂತೆ ನೋಡಿದಿರಾ ?" ಎಂದನಾತ.

"ಬಯಲಾಟಗಳಲ್ಲೆಲ್ಲ ಹೀಗೇ. ಇದೇ ದೂತೆಯ ವೈಶಿಷ್ಟ್ಯ."

"ಎಂಥ ವೈಶಿಷ್ಟ್ಯವೊ. ಎಲ್ಲಾ ವಿಚಿತ್ರವೆ."

"ವಿಚಿತ್ರವಿದ್ದರೇನೇ ಆಟ ರಂಗಿಗೇರುವುದು. ನೀವು ಬಯಲಾಟ ನೋಡಿಯೆ ಇಲ್ಲವೊ ಏನೊ."

"ಬಹಳ ಕಡಿಮೆ. ನನಗೆ ಈ ಆಟಪಾಟಗಳೆಂದರೇ ತಲೆಬೇಸರು."

"ಬೇಸರುಗೊಳ್ಳಬೇಕಾದ ಅಗತ್ಯವೇನೂ ಇಲ್ಲ. ಮುಂದೆ ಮೋಜು ಬರುತ್ತದೆ, ನೋಡುತ್ತಿರಿ."

ರಂಗದ ಮೇಲೆ ಸ್ವಾಮಿಯನ್ನು 'ದೂತೆ' ಮಾತನಾಡಿಸುತ್ತಲಿದ್ದಳು :

"ಸ್ವಾಮಿ, ತಾವು ಬಂದಂಥವರು ಯಾರು, ತಮ್ಮ ಹೆಸರೇನು ?"

"ಏನೇ, ನಮ್ಮನ್ನು ಮಾತಾಡಿಸುತ್ತೀ ? ನೀನು ಯಾರು, ನಿನ್ನ ಹೆಸರೇನು ?"

"ನನಗೆ ನೋಡ್ರೆಪಾ, ಮಾತಿಗೆ ಮಾತು ಹೇಳಿ ಆತುರದಿಂದ ಬಂದು ಸಾಕ್ಷಿಕರನ್ನು ಬೇತಿನಿಂದ ಮಾತಾಡಿಸುವಂಥಾ ಸುಲ್ಲ ಸುಬ್ಯಾನ ಮಗಳು ಗುಲ್ಲಾಗಂಟೇ ದೂತೆ–ದೂತೆ ಅಂತಾ ಈ ಊರಾನವರೆಲ್ಲಾ ಹೆಸರಿಟ್ಟಾರ," ಎಂದು 'ದೂತೆ' ಉತ್ತರವೀಯುವಾಗ ಆಟ ನೋಡುತ್ತಲಿದ್ದ ರಸಿಕರೆಲ್ಲ ಘೊಳ್ಳೆಂದು ನಕ್ಕರು. ಅವರೊಂದಿಗೆ ಸರಸುವೂ ನಕ್ಕಳು. ಶಿವಮೂರ್ತಿಗೆ ಮಾತ್ರ ನಗು ಬರಲಿಲ್ಲ. 'ದೂತೆ'ಯ ಆ ಮಾತುಗಳಲ್ಲಿ ನಗು ಬರಿಸುವಂಥ ದೇನಿದ್ದಿತೆಂಬುದೇ ಅವನಿಗೆ ತಿಳಿಯಲಿಲ್ಲ.

"ಸ್ವಾಮಿ, ತಾವು ಯಾರು ?" ಎಂದು 'ದೂತೆ' ಕೇಳಿದುವಕ್ಕೆ ಉತ್ತ ರವಾಗಿ ಜೀವನ್ಮುಕ್ತ ತಾನು "ಜೀವನ್ಮುಕ್ತಸ್ವಾಮಿ" ಎಂಬುದಾಗಿ ಹೇಳಿದ್ದ. ಅದಕ್ಕೆ ದೂತೆ–

"ಸ್ವಾಮಿ, ತಮ್ಮ ಹೆಸರಂತೂ ತಿಳಿಯಿತು. ಆದರೆ ಮೊನ್ನೆ ಮೊನ್ನೆ ನಿಮ್ಮಂಗ ಥಗಲೀ ತೊಟ್ಟುಕೊಂಡು ಜಗಲೀ ಮಾರ್‍ಯಾವ ಒಬ್ಬ ಬಂದಿದ್ದ. ಅವಗ ಮಾತ್ರ ಗುಡ್ಡದಾಗಿರೋ ಗಡ್ಡದ ಬಾವಾ ಅಂತಿದ್ದರು. ನೀವೂ ಮಡ್ಡ್ಯಾಗಿರೋ ಗಿಡ್ಡ ಬಾವಾಗಳೋ, ಏನ ದುಡ್ಡಿಗೆ ಆಸೆ ಮಾಡಿ ಬಂದ ಎಡ್ಡಿನ ಬಾವಾಗಳೊ ಖರೇ ಹೇಳ್ರಿ," ಎಂದು ಸವಾಲು ಹಾಕಿದಾಗ ಜನದ ನೆರವಿಯಿಂದ "ಹೌದೋ!" ಎಂಬ ಪ್ರಶಂಸೆಯ ಧ್ವನಿ ಕೇಳಬಂದಿತು. ರಂಗದ ಕೆಳಗೆ ತೀರ ಸನಿಯದಲ್ಲಿ ಕುಳಿತಿದ್ದವನೊಬ್ಬ ಚಂಗನೆ ಮೇಲಕ್ಕೆದ್ದು 'ದೂತೆ'ಯ ಮೇಲೆ ಚುರಮುರಿಯನ್ನು ತೂರಿದ. ಆತನ ಉತ್ಸಾಹವನ್ನು ಕಂಡು ಜನರು ನಕ್ಕರು. ಶಿವಮೂರ್ತಿಗೂ ನಗು ಬಂದಿತು.

"ದೂತೆಯ ಮಾತಿನಲ್ಲಿ ಅಂಥ ಸ್ವಾರಸ್ಯವೇನಿದ್ದಿತೆಂಬುದೇ ನನಗರ್ಥ ವಾಗಲಿಲ್ಲ. ಇವರು 'ಹೌದೋ' ಎಂದು ಯಾಕೆ ಕೂಗಿದರೊ, ಚುರಮುರಿ ಯಾಕೆ ತೂರಿದರೋ–ಎಲ್ಲಾ ವಿಚಿತ್ರವೆ !" ಎಂದನಾತ.

"ಇನ್ನೂ ಸ್ವಲ್ಪ ಹೊತ್ತು ನೋಡುತ್ತಿರಿ. ನಾಯಕಿಯ ಪಾತ್ರ ರಂಗದ ಮೇಲೆ ಬಂದೊಡನೆಯೆ ಹೇಗೆ ಹುಚ್ಚೆದ್ದು ಹಾರಾಡುತ್ತಾರೆ!" ಎಂದಳು ಸರಸು.

ಆಕೆ ಹೇಳಿದ ಹಾಗೆಯೆ ಆಯಿತು. ಕರಿಯ ಚಂದ್ರಕಾಳಿ ಸೀರೆಯ ನ್ನುಟ್ಟು ಮುಗಿಲ ಬಣ್ಣದ ಕುಪ್ಪುಸ ತೊಟ್ಟು, ಕೊರಳಲ್ಲಿ ಬಗೆಬಗೆಯ

ಬಣ್ಣಗಳ ಮಣಿಸರವನ್ನೂ, ಮುಡಿಯಲ್ಲಿ ಕಾಗದದ ಹೂವುಗಳನ್ನೂ, ಕಾಲುಗಳಲ್ಲಿ ಗೆಜ್ಜೆಗಳನ್ನೂ ಧರಿಸಿದ ಪ್ರೌಢಮತಿಯ ಪಾತ್ರ ರಂಗದ ಮೇಲೆ ಬಂದು 'ದೂತಿ'ಯೊಂದಿಗೆ ಕುಣಿಯತೊಡಗುತ್ತಲೂ ಆಟ ನೋಡಲು ಕುಳಿತಿದ್ದ ರಸಿಕರ ಮೇಲೆ ಉತ್ಸಾಹದ ಹೊಳೆ ಹರಿದುಹೋದಂತಾಯಿತು. ಚುರಮರಿಯ ಕಾಳು ಹಾರತೊಡಗಿದುವು. ಸಿಳ್ಳು ಕೇಳಬರತೊಡಗಿದುವು. ಆ ಉತ್ಸಾಹವನ್ನು ಕಂಡು ಪ್ರೌಢಮತಿಗೂ ಉತ್ಸಾಹ ಬಂದಿತೇನೊ, ಆಕೆಯೂ ಹುರುಪಿನಿಂದ ಕುಣಿಯತೊಡಗಿದಳು. ಆ ಕುಣಿತದ ರಭಸಕ್ಕೆ ಅಟ್ಟವೆಲ್ಲವೂ ಹೊಯ್ದಾಡತೊಡಗಿತು.

ಜೀವನ್ಮುಕ್ತಸ್ವಾಮಿ ಮತ್ತೆ ಕಾಣಿಸಿಕೊಂಡ. ಆತನನ್ನು ಕಂಡು ವೇಶ್ಯಾಮಣಿ ಪ್ರೌಢಮತಿ ಮರುಳಾಗಿ 'ದೂತಿ'ಗೆ ಹೇಳುವಳು :

"ದೂತಿಮ್ಮಾ ಲಗು ಬಾರೆ, ಹೋಗುವರಿವರ್‍ಯಾರೆ,
ಪ್ರೀತಿಯಿಂದ ಕರತಾರೆ !
ಸುಂದರ ಮುಖದವ, ಮಂದಿರಕೊಪ್ಪುವವ
ಸುಂದರಾಂಗೀ ನೀ ಹೋಗಿ ಕರತಾರೆ !
ತಂದು ಬೇಗ ಅವನ ಮುಖವ ತೋರೆ
ಒಂದು ಗಳಿಗೆ ನಾ ತಾಳಲಾರೆ
ಕಾಮ ಬಾಧೆಯನು ಸಹಿಸಲಾರೆ
ಬೇಗ ಹೋಗಿ ಕರತಾರೆ !"

ಅಂಥ ಅತಿ ಸ್ಪಷ್ಟ ಶಬ್ದಗಳಲ್ಲಿ ತನ್ನ ಕಾಮವಾಸನೆಯನ್ನು ವ್ಯಕ್ತಗೊಳಿಸುವ ನಾಯಕಿಯನ್ನು ಶಿವಮೂರ್ತಿ ಯಾವ ಆಟದಲ್ಲೂ ಕಂಡಿರಲಿಲ್ಲ. "ಕಾಮಬಾಧೆಯನು ಸಹಿಸಲಾರೆ" ಎಂದು ಸ್ಪಷ್ಟವಾಗಿ ಘೋಷಿಸುತ್ತಾಳೆ ಆಕೆ ! ಶಿವಮೂರ್ತಿ ಸರಸುವಿನ ಕಡೆಗೆ ದೃಷ್ಟಿ ತಿರುಗಿಸಿದ. ಪ್ರೌಢಮತಿಯ ಮಾತಿನಿಂದಾಗಿ ಆಕೆಯ ಮನಸ್ಸಿನ ಮೇಲೂ ವಿಚಿತ್ರ ಪರಿಣಾಮವಾದುದು ಸ್ಪಷ್ಟವಾಗಿ ಕಾಣಿಸುತ್ತಿದ್ದಿತು. ಸರಸುವಿನ ಮುಖಕ್ಕೆಲ್ಲ ರಕ್ತವೇರಿದ್ದಿತು. ಕಣ್ಣುಗಳಲ್ಲಿ ವಿಲಕ್ಷಣವಾದ ಭಾವವೊಂದು ತುಂಬಿ ಬಂದಿದ್ದಿತು. ಉಸಿರು ವೇಗವಾಗಿ ಹೊರಬರುತ್ತಿದ್ದಿತು—ತುಟಿಗಳೆರಡೂ ಸೂಕ್ಷ್ಮವಾಗಿ ಕಂಪಿಸುತ್ತಲಿದ್ದುವು.

ಪಶ್ಚಿಮ ದಿಸೆಯ ಆಗಸದಲ್ಲಿ ಮೂಡಿದ ಬಣ್ಣಗಳ ಪಡಿನೆಳಲು ಪೂರ್ವ ದಿಸೆಯಲ್ಲೂ ಮೂಡುವಂತೆ ಸರಸುವಿನ ಹೃದಯದಲ್ಲಿದ್ದ ಭಾವರಾಗಗಳು ಶಿವಮೂರ್ತಿಯಲ್ಲೂ ಉದ್ಭವಿಸಿ ಆತನನ್ನು ಗಾಸಿಗೊಳಿಸತೊಡಗಿದುವು.

ಎದುರಿಗೆ, ರಂಗದ ಮೇಲೆ ಪ್ರೌಢಮತಿ ಜೀವನ್ಮುಕ್ತನನ್ನು ಅಂಗಲಾಚಿ ಬೇಡಿಕೊಳ್ಳತೊಡಗಿದ್ದಳು :

"ಎಲೈ ಯತಿವರನೇ, ಕಂದರ್ಪನ ಸತಿಯಾದ ರತಿಯನ್ನು ಪೋಲುವ ಸೌಂದರ್ಯವನ್ನುಳ್ಳ ನನ್ನ ಮುಖವು ನೋಡುವವರ ಚಿತ್ತಾಕರ್ಷಣ ಮಾಡುವದಲ್ಲದೆ ಎಂಥ ಪುರುಷನಲ್ಲೂ ಕಾಮಬಾಧೆಯನ್ನುಂಟುಮಾಡದೆ ಬಿಡಲಾರದು. ಇಂಥ ರೂಪಾತಿಶಯವುಳ್ಳವಳನ್ನು ಕೂಡಿ ಕ್ರೀಡಾನಂದ ಹೊಂದಿರಿ. ಇಂಥ ವಿಶಾಲವಾದ ಸೌಂದರ್ಯದಿಂದ ಕೂಡಿದ ಸ್ತ್ರೀಯನ್ನು ಯಾರು ಭೋಗಿಸದೆ ಬಿಟ್ಟಾರು ?"

ಇನ್ನು ಅಲ್ಲಿ ಕುಳಿತುಕೊಂಡಿರುವುದೇ ಅಸಾಧ್ಯವೆನ್ನಿಸಿತು ಶಿವಮೂರ್ತಿಗೆ. ಸರಸುವಿನ ಸ್ಥಿತಿಯೂ ಅಸಹನೀಯವಾಗಿದ್ದಿತು. ಕಾಮಬಾಧೆ, ಕ್ರೀಡಾನಂದ, ಭೋಗ ಇತ್ಯಾದಿ ಶಬ್ದಗಳು ಸ್ಪಷ್ಟವಾಗಿ ಕೇಳಿಸುತ್ತಿರುವಾಗ ಆಟದ ನಾಯಕಿ ದೀನಕಂಠದಿಂದ ಪುರುಷನೊಬ್ಬನನ್ನು ಕ್ರೀಡೆಗೆ ಕರೆಯುವುದನ್ನು ನೋಡುತ್ತಿರುವಾಗ ಸರಸುವಿನ ತಾರುಣ್ಯದ ಬಯಕೆಗಳೆಲ್ಲ ಹೊರಚಿಮ್ಮಿ ತೃಪ್ತಿಗಾಗಿ ಹಾರೈಸುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ.

"ನಾನಿನ್ನು ಇಲ್ಲಿ ಕೂತಿರಲಾರೆ ಸರಸೂ."

"ನಾನೂ ಇರಲಾರೆ," ಎಂದು ಬಳಲಿದ ಧ್ವನಿಯಲ್ಲಿ ನುಡಿದಳು ಸರಸು.

ಶಿವಮೂರ್ತಿ ಕೊಂಚ ಹೆದರುತ್ತಲೇ ಪ್ರಶ್ನಿಸಿದ :

"ಹೊಳೆಯ ಕಡೆಗಾದರೂ ಹೋಗಿ ಕೊಂಚ ತಿರುಗಾಡಿ ಬರೋಣ, ಬರುತ್ತೀರಾ ?"

"ಓಹ್ಹೊ. ಸಂತೋಷದಿಂದ ಬರುತ್ತೇನೆ," ಎಂದು ಆಕೆಯ ಮುಖಭಾವ ಉತ್ತರವೀಯುತ್ತಲಿದ್ದಿತಾದರೂ ನಾಲಗೆ ಆ ಬಗೆಯ ಶಬ್ದಗಳನ್ನು ಆಡಲಿಲ್ಲ.

"ಅಪ್ಪ ಅಜ್ಜಿ ಒಳಗಡೆ ಇದ್ದಾರಲ್ಲ ?" ಎಂದಾಕೆ ಕೇಳಿದಳು.

"ಇದ್ದರೇನಂತೆ. ಮಲಗಿಕೊಳ್ಳಲಿ. ಕೊಂಚ ತಿರುಗಾಡಿಕೊಂಡು ಮತ್ತೆ ಬಂದು ಬಿಡೋಣ."

"ಯಾರಾದರೂ ನೋಡಿದರೆ ?"

"ಈ ಆಟದ ಗದ್ದಲದಲ್ಲಿ ಯಾರು ನೋಡಲು ಬರುತ್ತಾರೆ ? ಅಂಥ ಚಿಂತೆಯೇನೂ ಬೇಡ. ಬರ್ರಿ, ಬಂದು ಬಿಡೋಣ," ಎಂದು ಆತ ಮೇಲಕ್ಕೆದ್ದ. ಮುಖದ ಮೇಲೆ ಬೆಳಕು ಬೀಳದ ಹಾಗೆ ಸೆರಗನ್ನು ಓರೆಯಾಗಿ ಹೊದೆದುಕೊಂಡು ಸರಸು ಆತನನ್ನು ಹಿಂಬಾಲಿಸಿದಳು.

ಆಟದ ಅಂಗಳವನ್ನು ದಾಟಿ ಅವರು ಲಾವಣಿಯ ಅಂಗಳಕ್ಕೆ ಅಡಿಯಿರಿಸಿದಾಗ ಒಬ್ಬ ಯುವಕನೂ ಒಬ್ಬ ಯುವತಿಯೂ ಇವಿರು ಬದಿರಾಗಿ ನಿಂತು ಹಾಡುತ್ತಿದ್ದರು. ಅದೂ ಶೃಂಗಾರರಸಭರಿತ ಹಾಡೇ. ಮನವನ್ನು ಮದೋನ್ಮತ್ತಗೊಳಿಸುವ ಹಾಡೇ.

"ಹೆಣ್ಣಸಲ ಜಾತ ಪದ್ಮಿನಿ
ಸುರತ ಚಂದ್ರಾಣಿ
ಹೊರಟಿ ನಾಗಿಣೀ, ನೋಡ ತಿರುಗಿ
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಿಗಿ
ಹೊಳಿನೀರ ತೆರಿಯು ಹೊಡಿದಂತೆ ಒದುತೆ ಸಿಲಗಿ
ತ್ರೀಲೋಕ ತಿರುಗಿ ಬಂವೆ ಹಾಡಿ
ಇಲ್ಲ ನಿನ್ನ ಜೋಡಿ
ರಂಭಿ ನಿನ್ನ ನೋಡಿ ನಾಚ್ಯಾಳ ಕಡಿಗಿ."

ಶಿವಮೂರ್ತಿಗೆ ಗೊತ್ತಾಗದಂತೆಯೆ ಆತನ ಕೈ ಸರಸುವಿನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡಿತು. ಭಾವಾವೇಶದಿಂದ ಆಕೆಯ ಕೈ ಸೂಕ್ಷ್ಮವಾಗಿ ಕಂಪಿಸುತ್ತಿದ್ದ ಹಾಗೆ ತೋರುತ್ತಿತ್ತು. ಹಾಗೆ ಕಂಪನವುಂಟಾಗುವುದು ಅಸಹಜವೂ ಆಗಿರಲಿಲ್ಲ. ಬಯಲಾಟದಲ್ಲಿ ಬಗೆಯನ್ನು ಕದಡುವ ಮಾತು, ಹಾಡು ; ಲಾವಣಿಯಲ್ಲೂ ಹಾಗೆಯೆ. ಎತ್ತ ತಿರುಗಿದರೂ ಶೃಂಗಾರಪೂರ್ಣ ವಾತಾವರಣ. ಗಂಡು ಹೆಣ್ಣನ್ನು ಕರೆಯುವುದು, ಹೆಣ್ಣು ಗಂಡನ್ನು ಕರೆಯುವುದು. ಲಾವಣಿ ಹೇಳುವಾತ ಎದುರಿಗೆ ನಿಂತ ಹೆಣ್ಣನ್ನು ಮೋಹಪೂರ್ಣ ದೃಷ್ಟಿಯಿಂದ ನಿರುಕಿಸುತ್ತ ಉತ್ಸಾಹದಿಂದ ಸ್ವರವೆತ್ತಿ ಹಾಡುತ್ತಲಿದ್ದ:

"ಗರಗರಾ ತಿರುವತೀ ಕಣ್ಣಾ
ಕೆಂಪ ಮೈ ಬಣ್ಣಾ
ಬೈತಲಾ ಸಣ್ಣಾ, ಕತ್ತಿ ಧಾರೀsss
ನಿನ್ನ ಕಂಡು ಪಕ್ಷಿಗಳು ನಿಂತು ಹೌಹಾರೀss
ನಿನ್ನ ನಡಿಗೀ ನೋಡಿ ನವಿಲು ಕುಣಿವುದ ಮರೆತೀತರೀ
ನಿನ್ನ ಶಬ್ದ ಕೇಳಿ ಆಯ್ತು ಲುಬ್ಧ
ಕೋಗಿಲಾ ನಾಚಿ ಕದ್ದ
ವನಾ ಬಿಟ್ಟು ಎದ್ದ ಹೋಯ್ತು ಹಾರೀss
ನಿನ್ನ ನಡಾ ನೋಡಿ ಸಿಂಹ ನಾಚಿ ತಿರುವಿತ ಮಾರೀss"

ಸರಸುವಿನ ಕೈ ಹಿಡಿದುಕೊಂಡು ಶಿವಮೂರ್ತಿ ಬೇಗ ಬೇಗ ಹೆಜ್ಜೆ ಹಾಕುತ್ತ ಆ ಅಂಗಳವನ್ನು ದಾಟಿ ಹೊರಟ. ಮಠದ ಮಹಾದ್ವಾರವನ್ನು ದಾಟಿ ಅವರು ಹೊಳೆಯ ಕಡೆಗೆ ಹೊರಟಾಗ ಲಾವಣಿಯು ಚರಣವಿನ್ನೂ ಕೇಳಿಸುತ್ತಲೇ ಇತ್ತು :

"ಹಾಲಕ್ಕಿ ನೋಡಿ ಆಯಿತು ಗಪ್ಪ
ಏನು ಇಕೀ ರೂಪ, ಹಚ್ಚಿದಂಗ ದೀಪ
ಚಂದ್ರನ ಬೆಳಕಾ !
ತಿದ್ದಿ ತೀಡಿ ಗೊಂಬೀ ಹಾಂಗ ಮಾಡಿ
ರಂಭಿ ನಿನ್ನ ತಾಡಿ, ಗರುಡಪಕ್ಷಿ ನೋಡಿ
ನಾಚಿ ತನ್ನ ಜೀವಕ
ಭಲ್ಳಲಾ ಪಕ್ಷಿ ಹೋದು ಬೆರತ
ಹಾರಿತ ನನ್ನ ಸುರತ
ಬಾರ ನೀ ಅರಿತ, ನಮ್ಮ ಮನಿಗಿ
ನಾ ಬಿಟ್ಟೆನಿ ಅನ್ನ ನೀರ ನಿನ್ನ ಕಾಲಾಗ ಸೊರಗೀ‌‌‌‌‌‌‌‌((("

ಕೊನೆಯ ವಾಕ್ಯ ಕಿವಿಗೆ ಬೀಳುತ್ತಲೂ ಸರಸು ಶಿವಮೂರ್ತಿ ಪರಸ್ಪರ ಮುಖ ನೋಡಿಕೊಂಡರು. "ನಾ ಬಿಟ್ಟೆನಿ ಅನ್ನ ನೀರ ನಿನ್ನ ಕಾಲಾಗ ಸೊರಗಿ !" ಎಂಥ ಮರ್ಮಭೇದಕ ನುಡಿ ಅದು....ಶಿವಮೂರ್ತಿಯು ಧ್ಯಾನದಲ್ಲಿ ತಾನೂ ಹೀಗೆಯೆ ಅನ್ನ ನೀರು ಬಿಟ್ಟು ಸೊರಗಿಹೋದುದಾಗಿ ಭಾಸವಾ

ಯಿತು ಸರಸೂಗೆ. ಆಕೆ ತನ್ನವಳಾಗದಿದ್ದಲ್ಲಿ ತಾನೂ ಹಾಗೆಯೆ ಸೊರಗಿ ಹೋಗಬಹುದೆಂದು ತೋರಿತು ಶಿವಮೂರ್ತಿಗೆ. ಬಯಲಾಟದ ಅಂಗಳ ಅವರಿಬ್ಬರನ್ನೂ ಹತ್ತಿರ ತಂದು ಬೆಸೆದ ಹಾಗಿತ್ತು. ಹೀಗಾಗಬಹುದೆಂದು ಯಾರು ತಿಳಿದಿದ್ದರು? ಎಲ್ಲವೂ ಮಿಂಚಿನಂತೆ ನಡೆದುಹೋಯಿತಲ್ಲ! ಶಿವಮೂರ್ತಿ ತನ್ನ ಪ್ರಿಯಕರನಾಗಬಹುದೇ ಎಂದು ಯೋಚಿಸಿ ಬಳಲುತ್ತಿದ್ದ ಸರಸೂಗೆ ಇಷ್ಟುಬೇಗ ಆತ ಲಭಿಸಬಹುದೆಂದು ತಿಳಿದಿದ್ದಿತೇ? ಸರಸೂ ತನ್ನನ್ನು ಪ್ರೀತಿಸುತ್ತಿರಬಹುದೇ ಎಂದು ಸಂದೇಹದಲ್ಲಿದ್ದ ಶಿವಮೂರ್ತಿಗೆ ಇಷ್ಟುಬೇಗ ತಾನು ಆಕೆಯ ಕೈಯಲ್ಲಿ ಕೈ ಹಾಕಿಕೊಂಡು ಅಲೆಯುವ ಪ್ರಸಂಗ ಬಂದೀತೆಂದು ತಿಳಿದಿದ್ದಿತೇ? ಅಂದು ರಾತ್ರಿ ಅಕಸ್ಮಾತ್ತಾಗಿ ಆಕೆಯ ಭೆಟ್ಟಿಯಾಯಿತು. ಭೆಟ್ಟಿಯೊಂದಿಗೆ ನಿಕಟ ಸಹವಾಸಯೋಗವೂ ಲಭಿಸಿತು. ತಾವಿಬ್ಬರೂ ಗಂಡ ಹೆಂಡಿರಾಗಬೇಕೆಂದು ವಿಧಾತ ಗೊತ್ತುಪಡಿಸಿದ್ದನೇನೊ...

ಮಳೆಗಾಲದ ಹೊಳೆ ಅಬ್ಬರದಿಂದ ಸದ್ದುಮಾಡುತ್ತ ಸೊಕ್ಕಿನಿಂದ ಹರಿದು ಹೋಗುತ್ತಲಿದ್ದಿತು. ತನ್ನ ಪ್ರೀತಿಯ ಕಲ್ಲು ಕಟ್ಟೆಗೆ ಸರಸುವನ್ನು ಕರೆದುತಂದ ಶಿವಮೂರ್ತಿ. ಅದರ ಮೇಲಿದ್ದ ಬೇವಿನ ಗಿಡದ ಬೊಡ್ಡೆಗೆ ಆತುಕೊಂಡು ಇಬ್ಬರೂ ಕುಳಿತುಕೊಂಡರು. ಎಡಗೈಯಿಂದ ಆಕೆಯ ತಲೆಯನ್ನು ಬರಸೆಳೆದುಕೊಂಡು ಶಿವಮೂರ್ತಿ ಅದನ್ನು ತನ್ನ ಎದೆಯ ಎಡ ಭಾಗದ ಮೇಲೊರಗಿಸಿಕೊಂಡ.

ಹೊಳೆಯ ನೀರಿನ ಮೇಲಿಂದ ಹಾಯ್ದು ಬಂದ ಗಾಳಿ ತಣ್ಣಗೆ ಮೈ ಕೊರೆಯುತ್ತಲಿದ್ದಿತು. ಮೇಲೆ ಗಗನದಲ್ಲಿ ಲಕ್ಷಾವಧಿ ತಾರೆಗಳು ಮಿನುಗುತ್ತಲಿದ್ದುವು. ಹೊಳೆಯ ಆಚೆಯ ದಡದ ಮೇಲೆ ಮಾವಿನಗಿಡಗಳು ಸ್ತಬ್ಧವಾಗಿ ನಿಂತಿದ್ದುವು. ಪ್ರವಾಹದ ಸಪ್ಪಳವನ್ನು ಬಿಟ್ಟರೆ ಎಲ್ಲವೂ ಶಾಂತವಾಗಿತ್ತು.

ಕೆಲಹೊತ್ತು ಇಬ್ಬರೂ ಮೌನವಾಗಿ ಕುಳಿತಿದ್ದರು. ಬಯಲಾಟ, ಲಾವಣಿಗಳಿಂದುಂಟಾದ ಭಾವೋದ್ರೇಕವೆಲ್ಲವೂ ಪರಸ್ಪರರ ಆಲಿಂಗನದಲ್ಲಿ ಕರಗಿ ಹೋಗುತ್ತಲಿದ್ದಿತು. ಆದರೆ ಸರಸುವಿನ ಶರೀರದ ಕಂಪನ ಮಾತ್ರ ಇನ್ನೂ ನಿಂತಿರಲಿಲ್ಲ.

ಆಕೆಯ ಸೆರಗನ್ನು ಕೈಗೆ ತೆಗೆದುಕೊಂಡು, ಅದನ್ನು ಆಕೆಯ ಎದೆಯ ಸುತ್ತ ಸರಿಯಾಗಿ ಹೊದ್ದಿಸುತ್ತ ಶಿವಮೂರ್ತಿಯೆಂದ :

"ಚಳಿಯಾಗುತ್ತಿದೆಯೇನೇ ಸರಸೂ ?"

ಆತ ತನ್ನನ್ನು ಏಕವಚನದಿಂದ ಸಂಬೋಧಿಸಿದುದು ಇದೇ ಮೊದಲ ಸಲ. ಸರಸುವಿನ ಹೃದಯ ಹಿಗ್ಗಿನಿಂದ ಹಾರಾಡಿಕೊಂಡಿತು. "ಏನೇ, ಸರಸೂss" ಎಂಬ ಮಾತು ಆತನ ಬಾಯಿಂದ ಎಷ್ಟು ಮುದ್ದಾಗಿ ಹೊರ ಬಿದ್ದಿತ್ತು !

ಆಕೆ ತಲೆಯನ್ನು ಕೊಂಚ ಬಲಕ್ಕೆ ತಿರುಗಿಸಿ ಆತನ ಮುಖವನ್ನೇ ದಿಟ್ಟಿಸಿ ನೋಡಿದಳು. ಆತನ ಹಣೆಯ ಮೇಲೆ ಉರುಳಿಬಿದ್ದ ಮುಂಗುರುಳು –ಆಕೆಯನ್ನು ಹುಚ್ಚಿಯನ್ನಾಗಿ ಮಾಡುತಿದ್ದ ಮೋಹಕ ಮುಂಗುರುಳು, ಆಕೆಯ ಹಣೆಗೆ ತಾಕಲಾಡುತಿತ್ತು. ಅದರೊಂದಿಗೆ ಆಕೆಯ ನರನರಗಳೆಲ್ಲ ಉಬ್ಬಿ ಹರುಷಗೊಂಡಂತಾಯಿತು.

"ಇನ್ನೂ ನಡುಗುತ್ತಿರುವೆಯಲ್ಲಾ ಸರಸೂ ?"

ಹೌದು. ತಾನು ನಡುಗುತ್ತಿದಾಳೆ, ಆನಂದದಿಂದ ನಡುಗುತ್ತಿದಾಳೆ, ಬಯಕೆ ಫಲಿಸುವ ಸಮಯ ಬಂದುದರಿಂದ ನಡುಗುತ್ತಿದಾಳೆ. ಶಿವಮೂರ್ತಿಗೆ ಅದು ಗೊತ್ತಾಗಿದೆಯೊ ಇಲ್ಲವೊ.

"ಸರಸೂ,"

"ಏನು ?"

"ನಿನ್ನನ್ನು ಬಿಟ್ಟು ನಾನಿರಲು ಸಾಧ್ಯವಿಲ್ಲ ಸರಸೂ."

"ನನಗೂ ಸಾಧ್ಯವಿಲ್ಲ."

"ಮುಂದೆ ಹೇಗೆ? ನಮ್ಮ ಮದುವೆಗೆ ನಿಮ್ಮ ತಂದೆತಾಯಿ ಒಪ್ಪ ಬಹುದೇ ?"

ಮದುವೆ ಎಂಬ ಶಬ್ದ ಕಿವಿಗೆ ಬಿದ್ದೊಡನೆ ಮತ್ತೆ ಸರಸುವಿನ ಎದೆ ನಡುಗಿತು. ಮದುವೆ! ಅದು ಸಾಧ್ಯವೆ? ಶಿವಮೂರ್ತಿ ನಿಜಕ್ಕೂ ತನ್ನನ್ನು ಮದುವೆಯಾಗಲು ಸಿದ್ಧನಾಗಬಹುದೇ ? ತಾನು....ತಾನು....

ಆಕೆ ಮೌನವಾಗಿದ್ದುದನ್ನು ಕಂಡು ಶಿವಮೂರ್ತಿಯೇ ಮತ್ತೆ ಕೇಳಿದ:

"ಯಾಕೆ ಸುಮ್ಮನಾದೆ ಸರಸೂ ? ನನ್ನನ್ನು ಮದುವೆಯಾಗಲು ನಿನಗೆ ಮನಸ್ಸಿಲ್ಲವೆ ?"

ಆ ಪ್ರಶ್ನೆ ಕಿವಿಗೆ ಬಿದ್ದೊಡನೆ ಅಂಥ ಸಮಯದಲ್ಲಿಯೂ ಸರಸುವಿಗೆ ನಗು ಬರದಿರಲಿಲ್ಲ. ಇಂಥ ನಡುರಾತ್ರಿಯಲ್ಲಿ ಆತನೊಡನೆ ಒಬ್ಬಳೇ ಬಂದು ಇಂಥ ಏಕಾಂತದಲ್ಲಿ ಆತನನ್ನು ತಬ್ಬಿಕೊಂಡು ಕುಳಿತಿದ್ದರೂ ಸಹ ತನ್ನ ಪ್ರೇಮದಲ್ಲಿ ಸಂದೇಹವೇ ಈತನಿಗೆ? ಆತನನ್ನು ಮದುವೆಯಾಗಲು ತನಗೆ ಮನಸ್ಸಿಲ್ಲವೆ? ಎಂಥ ಪ್ರಶ್ನೆ ಅದು! ಆತ ತನ್ನವನಾಗಲೆಂದು ಗಿರಿಜೆಯಂತೆ ತಪಸ್ಸು ಮಾಡುವುದಕ್ಕೂ ಸಿದ್ಧಳು ತಾನು. ಆತನೇ ಸಿದ್ಧನಾಗುವನೊ ಇಲ್ಲವೊ ಎಂಬ ಅನುಮಾನ ಹುಟ್ಟಿ ತಾನು ಪರಿತಪಿಸುತ್ತಲಿದ್ದಾಳೆ. ಎಂಥ ಹುಚ್ಚು ಪ್ರಶ್ನೆ!

"ನಾನು....ನಾನು....ನನ್ನನ್ನು...." ಎಂದು ತಡೆತಡೆಯುತ್ತ ನುಡಿದು ಸರಸು ಆತನ ಎದೆಯಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಹಠಾತ್ತಾಗಿ ಆಕೆಗೆ ಅಳು ಏಕೆ ಉಕ್ಕಿಬಂದಿತೆಂಬುದು ಆತನಿಗೆ ಅರ್ಥವಾಗಲಿಲ್ಲ. ಆಕೆಯ ತಲೆಗೂದಲನ್ನು ಪ್ರೀತಿಯಿಂದ ಸವರುತ್ತ ಆತನೆಂದ:

"ಏಕೆ ಸರಸೂ, ಏನಾಯಿತು ನಿನಗೆ? ಅಳುವದೇಕೆ?"

ಎರಡು ಮೂರು ನಿಮಿಷ ಆಕೆ ಮಾತನಾಡಲಿಲ್ಲ. ಅಳುವಿನ ಆವೇಗ ಕೊಂಚ ತಗ್ಗಿದ ಬಳಿಕ ಹೇಳಿದಳು:

"ನನ್ನನ್ನು ನೀವು ಮದುವೆಯಾಗಲು ಸಾಧ್ಯವೆ? ನನ್ನ ವಿಷಯ ನಿಮಗೆ ಪೂರ್ಣವಾಗಿ ಗೊತ್ತಿದೆಯೊ ಇಲ್ಲವೊ. ನಾನು...."

"ಏನದು ವಿಷಯ? ಯಾಕೆ ಹಿಂಜರಿಯುತ್ತೀಯ? ಎಲ್ಲಾ ಹೇಳಿಬಿಡಬಾರದೇ?"

"ಇಷ್ಟು ದಿನ ನನ್ನನ್ನು ನೋಡುತ್ತ ಬಂದಿದ್ದರೂ ಇನ್ನೂ ತಿಳಿದಿಲ್ಲವೊ ಏನೊ ನಿಮಗೆ. ನಾನು....ನಾನು ವಿಧವೆ...." ಎಂದು ನುಡಿದು ಆಕೆ ಮುಖವೆತ್ತಿ ಆತನ ದೃಷ್ಟಿಗೆ ದೃಷ್ಟಿ ಸೇರಿಸಲಾರದೆ ಮತ್ತೆ ಬಿಕ್ಕತೊಡಗಿದಳು.

ಒಂದು ಕ್ಷಣ ಶಿವಮೂರ್ತಿಗೆ ಏನೂ ತೋಚದಂತಾಯಿತು. ಸರಸೂ ವಿಧವೆ? ಬಾಲ ವಿಧವೆ? ಇದುವರೆಗೆ ಈ ವಿಷಯ ಹೇಗೆ ಗೊತ್ತಾಗಲಿಲ್ಲ ತನಗೆ? ಆಕೆಯಿನ್ನೂ ಅವಿವಾಹಿತೆಯಾದ ಕುಮಾರಿಯೆಂದೇ ತನ್ನ ಕಲ್ಪನೆ

ಯಿತ್ತು. ಸರಸೂ ವಿಧವೆ....ಆಕೆ ನಿಜ ಹೇಳುತ್ತಿರುವಳೇ, ಅಥವಾ ತನ್ನನ್ನು ಪರೀಕ್ಷಿಸಲೆಂದು ಹಾಗೆ ಹೇಳುತ್ತಿರುವಳೇ ?

"ನಿಜವೇ ಸರಸೂ, ನೀ ಹೇಳುವುದು ?"

"ನಿಜ. ನಿಮಗಿನ್ನೂ ನಂಬಿಕೆಯಾಗಲಿಲ್ಲವೆ? ನನ್ನನ್ನೆಂದೂ ಸರಿಯಾಗಿ ನೋಡಿಯೇ ಇಲ್ಲವೇ ನೀವು ? ನನ್ನ ಹಣೆ ಬರಿಯದಾಗಿದ್ದುದನ್ನು, ಅಲ್ಲಿ ಕುಂಕುಮವಿಲ್ಲದಿದ್ದುದನ್ನು ಸಹ ಕಂಡಿಲ್ಲವೆ ?"

"ಇಲ್ಲ ಸರಸೂ. ಅಷ್ಟು ಲಕ್ಷ್ಯಗೊಟ್ಟು ನಿನ್ನನ್ನೆಂದೂ ನೋಡಿಲ್ಲ ನಾನು. ನಾನು ನೀನು ತೀರ ಹತ್ತಿರದಿಂದ ಭೆಟ್ಟಿಯಾದ ಪ್ರಸಂಗಗಳೂ ಬಹಳ ಕಡಿಮೆ, ಅಲ್ಲವೆ ? ಅಂದು ರಾತ್ರಿ ಪ್ರಚಂಡ ಮಳೆ ಸುರಿಯುತ್ತಿದ್ದಾಗ ಇದೇ ಕಟ್ಟೆಯ ಮೇಲೆ ನಾನು ನಿನ್ನನ್ನು ಮೊದಲಬಾರಿಗೆ ಕಂಡಿದ್ದೆ. ಆಗ ನಿನ್ನನ್ನು ನೋಡುತ್ತಲೂ ದೇವಕನ್ಯೆಯೊಬ್ಬಳನ್ನು ನೋಡಿದ ಹಾಗಿದ್ದಿತೇ ವಿನಾ ಭೂಲೋಕದ ತರುಣಿಯನ್ನು ಕಂಡಂತಾಗಿರಲಿಲ್ಲ. ಅನಂತರ ನೀನು ನನ್ನನ್ನು ನಿಮ್ಮ ಮನೆಗೆ ಕರೆದೊಯ್ದು ಉಪಚರಿಸಿದ ಬಳಿಕ ಮತ್ತೊಮ್ಮೆ ನೋಡಿದೆ. ಪಿಟೀಲನ್ನು ಕೊಡಲು ನನ್ನ ಕೋಣೆಗೆ ಬಂದಾಗ ಮತ್ತೆ ನೋಡಿದೆ. ಆಮೇಲೂ ಆಗಾಗ ದೂರದಿಂದ ನೋಡುತ್ತಿದ್ದೆ. ಆದರೆ ನಿನ್ನ ಹಣೆಯ ಕಡೆಗೆ ನನ್ನ ಲಕ್ಷ್ಯವೇ ಹೋಗಿರಲಿಲ್ಲ. ಅಂಥ ವಿಷಯಗಳನ್ನು ಗಮನಿಸುವ ಸ್ವಭಾವವೂ ನನ್ನದಲ್ಲ...."

"ಈಗಲಾದರ ೂಗೊತ್ತಾಯಿತಲ್ಲ ? ನಾನು ವಿಧವೆ. ನನ್ನ ಗಂಡ ಸತ್ತು ಹೋಗಿದ್ದಾನೆ."

"ನಿನ್ನ ಮದುವೆ ಯಾವಾಗ ಆಯಿತು ಸರಸೂ ?"

"ನಾನು ಹದಿಮೂರು ವರ್ಷದವಳಿದ್ದಾಗ. ನನ್ನ ಮನಸ್ಸಿನ ವಿರುದ್ಧವಾಗಿ ಶ್ರೀಮಂತ ವರನೊಬ್ಬನಿಗೆ ನನ್ನನ್ನು ಕಟ್ಟಿದ್ದರು. ಆತ ಕುರೂಪಿ, ಅಶಕ್ತ, ರೋಗಿಷ್ಠ. ಮದುವೆಯಾದಾಗಲೇ ಆತನಲ್ಲಿ ಕ್ಷಯದ ಲಕ್ಷಣಗಳಿದ್ದುವು. ನಾನು ಅವರ ಮನೆಗೆ ಹೋಗುತ್ತಲೂ ಆ ರೋಗ ಹೆಚ್ಚಿತು. ಒಂದು ದಿನ ಆತ ಸ್ಯಾನಿಟೋರಿಯಂನಲ್ಲಿ ಸತ್ತುಹೋದ. ನಾನಿತ್ತ ಬಂದೆ."

"ಅಂದಿನಿಂದ ಮಾವನ ಮನೆಗೆ ಹೋಗಿಯೆ ಇಲ್ಲವೆ ?"

"ಇಲ್ಲ. ಅವರೇನೋ ಆಗಾಗ ಬಂದು ಬಲವಂತ ಮಾಡಿ ಕರೆಯು

ತ್ತಾರೆ. ಗಂಡನಿದ್ದಾಗಲೇ ನನಗೆ ಅಲ್ಲಿಗೆ ಹೋಗುವ ಮನಸ್ಸಿರಲಿಲ್ಲ. ಇನ್ನು ಈಗ ಹೋಗಬಹುದೇ ? ನನ್ನ ಆ ಸಂಬಂಧ ಎಲ್ಲೋ ಹಿಂದಿನ ಜನ್ಮದ ಸಂಬಂಧದಂತಾಯಿತು."

"ಮತ್ತೆ ಮದುವೆ ಮಾಡಬೇಕೆಂಬ ವಿಚಾರ ನಿಮ್ಮ ತಂದೆಯವರಿಗೆ ಬರಲಿಲ್ಲವೆ ?"

"ಅವರು ಬಹಳ ಹಳೆಯ ವಿಚಾರದವರು. ಇಂಥ ವಿಷಯಗಳಲ್ಲಿ ಪೂರಾ ಸನಾತನಿಗಳೆಂದರೂ ಅಡ್ಡಿಯಿಲ್ಲ. ಗಂಡ ಸತ್ತ ಹುಡುಗಿಗೆ ಎರಡನೆ ಮದುವೆ ಮಾಡಿದರೆ ಮನೆತನದ ಮರ್ಯಾದೆ ಕೆಟ್ಟುಹೋಗುವುದು ಎನ್ನು ತ್ತಾರೆ."

"ಅದೇನು ಹೀಗೆ ಹೇಳುತ್ತೀಯ ? ವೀರಶೈವರಲ್ಲಿ ಇಂಥವರುಂಟೇ ? ಇವರೇನು ತಮ್ಮನ್ನು ಬ್ರಾಹ್ಮಣರೆಂದು ತಿಳಿದಿರುವರೇ ?" ಎಂದು ಆಶ್ಚರ್ಯ ದಿಂದ ಕೇಳಿದ ಶಿವಮೂರ್ತಿ.

"ಬ್ರಾಹ್ಮಣರಾಗಿದ್ದಲ್ಲಿ ಅದೊಂದು ಬೇರೆ ರೀತಿಯಾಗಬಹುದಿತ್ತು. ಅವರಲ್ಲಿ ಸುಧಾರಣೆಯಾಗಿದೆ. ಆಧುನಿಕ ವಿಚಾರ ಬೆಳೆದಿದೆ. ಬಾಲ ವಿಧವೆ ಯರಿಗೆ ಪುನರ್ವಿವಾಹ ಮಾಡುವುದರಲ್ಲಿ ತಪ್ಪೇನೂ ಇಲ್ಲವೆಂಬ ಭಾವನೆ ಬೆಳೆ ಯುತ್ತಿದೆ. ಎಷ್ಟೋ ಜನ ವಿಧವೆಯರು ಮದುವೆಯಾಗಿ ಸುಖವಾಗಿ ಬಾಳು ತ್ತಲೂ ಇದಾರೆ. ಆದರೆ ನಮ್ಮ ಸಮಾಜ ಅವರ ಹಾಗೆ ಸುಧಾರಿಸಿಯೂ ಇಲ್ಲ. ಸುಶಿಕ್ಷಿತವಾಗಿಯೂ ಇಲ್ಲ. ನಮ್ಮ ತಂದೆಯಂಥವರು ಇನ್ನೂ ಹಳೆಯ ಸಂಕುಚಿತತನದಲ್ಲೇ ಕೊಳೆಯುತ್ತಿದಾರೆ. ಮನೆತನದ ಮರ್ಯಾದೆ, ಗೌರವ, ಅದಕ್ಕೆ ಕುಂದು—ಏನೇನೋ ಹುಚ್ಚು ಕಲ್ಪನೆಗಳು...."

"ಬಸವಣ್ಣನವರಂಥ ಮಹಾ ಕ್ರಾಂತಿಕಾರಕನನ್ನು ಪಡೆದರೂ ಈ ಸಮಾಜ ಇಷ್ಟು ಹಿಂದುಳಿದಿದೆಯಲ್ಲ ಸರಸೂ ?"

"ಬಸವಣ್ಣನವರ ಕ್ರಾಂತಿಕಾರಕ ವಿಚಾರಗಳನ್ನೆತ್ತಿ ಹೊಗಳುವುದ ರಲ್ಲೇ ಇವರ ಕಾಲ ಕಳೆದು ಹೋಗುತ್ತಿದೆ. ಅವರ ತತ್ವಗಳಲ್ಲಿ ಒಂದನ್ನೂ ಕೃತಿಗಿಳಿಸುವ ಮನಸ್ಸಿಲ್ಲ. ನಮ್ಮ ತಾಯಿಯೇನೋ ನನ್ನ ಮದುವೆಗಾಗಿ ಮತ್ತೆ ಪ್ರಯತ್ನಿಸಿದಳು. ಆದರೆ ಆ ಮಾತನ್ನೇ ಎತ್ತಬೇಡ ಎಂದು ಅಪ್ಪ

ಕಿಡಿಕಿಡಿಯಾದರು. ಪಾಪ, ಹೆಣ್ಣು ಹೆಂಗಸು ಆಕೆಯಾದರೂ ಏನು ಮಾಡಿ ಯಾಳು ? ಸುಮ್ಮನಾದಳು."

ಕೊಂಚ ಹೊತ್ತು ಮೌನವಾಗಿ ಕುಳಿತಿದ್ದು, ಅನಂತರ ಪ್ರಶ್ನಿಸಿದ ಶಿವ ಮೂರ್ತಿ :

"ಅಂದರೆ ? ನಿನ್ನ ಪುನರ್ವಿವಾಹಕ್ಕೆ ತಂದೆ ಒಪ್ಪುವುದಿಲ್ಲವೆಂತಲೇ ಆಯಿತಲ್ಲ ಸರಸೂ ?"

"ಹೌದು. ಹಾಗೆಯೇ. ಅವರೆಂದೂ ಒಪ್ಪಿಗೆ ಕೊಡಲಾರರು."

"ಇಂಥ ವಯಸ್ಸಿನಲ್ಲಿ ನೀನು ಹೀಗೇ ಕೊಳೆಯಬೇಕೆಂದು ಅವರ ಅಭಿ ಪ್ರಾಯವೋ ಏನು ?"

"ಧಾರ್ಮಿಕ ವಿಷಯಗಳಲ್ಲಿ ಮನಸ್ಸು ತೊಡಗಿಸಬೇಕೆಂದು ಅವರು ಉಪದೇಶಿಸುತ್ತಾರೆ. ಪುರಾಣ ಪುಣ್ಯಕತೆಗಳನ್ನೋದುವುದು, ಸ್ವಾಮಿಗಳು ಜಗದ್ಗುರುಗಳ ಸೇವೆ ಮಾಡುವುದು, ಲಿಂಗಪೂಜೆಯಲ್ಲಿ ನಿರತಳಾಗುವುದು.... ಹೀಗೆಲ್ಲ ಮಾಡಿದರೆ ಸದ್ಗತಿಯಾಗುವುದಂತೆ. ನನ್ನ ಹಾಗೆಯೆ ಇನ್ನೂ ಅನೇಕ ದುರ್ದೈವಿ ತರುಣಿಯರು ಹೇಗೋ ತಮ್ಮ ಬದುಕು ಸಾಗಿಸುತ್ತಿರುವರಲ್ಲ ? ಹಾಗೇ ನಾನೂ...."

"ಈ ಧಾರ್ಮಿಕ ವಿಷಯಗಳಲ್ಲಿ ನಿನಗೆ ಆಸಕ್ತಿಯುಂಟೇ ಸರಸೂ ?"

"ಎಲ್ಲಿನ ಆಸಕ್ತಿ ? ಲಿಂಗಪೂಜೆ ಎಂದರೆ ನನಗೆ ತಲೆಬೇಸರು. ದೇವರು ದಿಂಡರು ಎಂದರೆ ಪಿತ್ತ ಕೆರಳುತ್ತದೆ. ಅಕ್ಕಮಹಾದೇವಿಯ ವಚನಗಳ ಬಗ್ಗೆ ಹಲವು ದಿನ ವಿಪರೀತ ಹುಚ್ಚಿತ್ತು. ಈಚೆಗೆ ಅದೂ ಮಾಯವಾಗಿದೆ."

"ಅದೇಕೆ ?" ಎಂದು ಆತ ಕುತೂಹಲದಿಂದ ಕೇಳಿದ.

"ಏಕೋ ಏನೋ ತಿಳಿಯದು. ಅಕ್ಕನ ಜೀವನವೆಲ್ಲ ಅಮಾನುಷ, ಅವಾಸ್ತವ ಎಂದು ನನಗೆನ್ನಿಸಿತು. ಆಕೆಯ ವಚನಗಳೇನೋ ಓದಲು ಸುಂದರವಾಗಿವೆ. ಆದರೆ ನಮ್ಮಂಥ ಸಾಮಾನ್ಯ ಮನುಷ್ಯರ ಕೈಗೆ ನಿಲುಕದ ವಿಚಿತ್ರ ಆದರ್ಶ ಆಕೆಯದು. ಆಕೆಯ ಹಾಗೆ ಎಲ್ಲರೂ ವಿರಾಗಿಣಿಯರಾಗಿ ಸಂಸಾರವನ್ನು ತೊರೆದು ಚೆನ್ನಮಲ್ಲಿಕಾರ್ಜುನನನ್ನರಸುತ್ತ ಶ್ರೀಶೈಲದತ್ತ ಹೊರಟು ಬಿಡಲು ಸಾಧ್ಯವಿದೆಯೆ ? ನಮ್ಮ ತಂದೆಯಂಥವರ ದೃಷ್ಟಿಯಲ್ಲಿ ನಮ್ಮ ಮನೆಯ ನಾಲ್ಕು ಗೋಡೆಗಳೊಳಗಿನ ಸ್ಥಳವೇ ಶ್ರೀಶೈಲ. ನಮ್ಮಂಥ

ಅಕ್ಕಂದಿರು ಅಲ್ಲಿಯೆ ತಮ್ಮ ತಮ್ಮ ಚೆನ್ನಮಲ್ಲಿಕಾರ್ಜುನರನ್ನು ಕಂಡುಕೊಳ್ಳ ಬೇಕು...." ಎಂದು ನುಡಿದು ಆಕೆ ನಸುನಕ್ಕಳು.

"ಮುಂದೆ ಹೇಗೆ ಸರಸೂ ? ನಿಮ್ಮ ತಂದೆಯಂತೂ ಒಪ್ಪುವುದಿಲ್ಲ ವೆಂಬುದು ಖಚಿತವಾದಂತಾಯಿತು. ತಾಯಿ ?"

"ಆಕೆ ಸಂತೋಷದಿಂದ ಒಪ್ಪಿಯಾಳು. ಆದರೆ ತಂದೆ ಒಪ್ಪದಿರುವಾಗ ಆಕೆಯ ಸಂತೋಷದಿಂದ ಯಾವ ಉಪಯೋಗವಾದೀತು ?"

"ಅಂತೂ ನಾವು ಈ ಊರಲ್ಲಿರಲು ಸಾಧ್ಯವಾಗಲಿಕ್ಕಿಲ್ಲ...."

"ಹೌದು. ಅದಂತೂ ಖಂಡಿತ. ತಂದೆ ಮಹಾ ಕೋಪಿಷ್ಠ. ನಾವು ಎದುರಿಗೇ ಇದ್ದರೆ ಆತ ಯಾವಾಗ ಏನು ಮಾಡಿಯಾನೆಂಬುದನ್ನು ಹೇಳಲು ಸಾಧ್ಯವಿಲ್ಲ."

"ಹಾಗಾದರೆ ನಾವಿಲ್ಲಿಂದ ಹೊರಡದೆ ಬೇರೆ ದಾರಿಯಿಲ್ಲವೆಂದಾಯಿತಲ್ಲ? ಎಲ್ಲಿಗೆ ಹೋಗುವುದು ? ಏನು ಮಾಡುವುದು ? ನಾನು ಇಲ್ಲಿ ನೌಕರಿಯಲ್ಲಿ ದ್ದೇನೆ. ಈಗಲೇ ವರ್ಗವಾಗುವಂತಿಲ್ಲ."

"ಈ ನೌಕರಿಯನ್ನು ಬಿಟ್ಟರೆ ಇನ್ನೊಂದು ಕೆಲಸ ಸಿಗಲಾರದೇ ?"

"ಈಗಿನ ಕಾಲದಲ್ಲಿ ನೌಕರಿ ಸಿಗುವುದು ಬಲು ಕಷ್ಟ ಸರಸೂ. ನಿನಗೂ ಗೊತ್ತೇ ಇರಬೇಕಲ್ಲ? ಅಲ್ಲದೆ, ಇದು ಸರಕಾರೀ ಕೆಲಸ....ಬಿಟ್ಟುಬಿಟ್ಟರೆ....?"

ಸರಸೂಗೆ ನಿರಾಸೆಯಾಗತೊಡಗಿತು. ಆತನೂ ತಾನೂ ಹೊಳೆಯ ತೀರಕ್ಕೆ ಬಂದಾಗ ಆತನಲ್ಲಿದ್ದ ಉತ್ಸಾಹ ಈಗ ಕಾಣೆಸದಾಗಿದ್ದಿತು. "ನಿನ್ನನ್ನು ಬಿಟ್ಟು ನಾನಿರಲು ಸಾಧ್ಯವಿಲ್ಲ ಸರಸೂ," ಎಂದು ಆಡಿದ್ದ ಶಿವಮೂರ್ತಿ ಎಂಟು ಹತ್ತು ನಿಮಿಷಗಳಲ್ಲಿಯೆ ತನಗಾಗಿ ಒಂದು ಸೊಟ್ಟ ನೌಕರಿಯನ್ನು ಬಿಡುವು ದಕ್ಕೊ ಹಿಂದೆ ಮುಂದೆ ನೋಡುತ್ತಿರುವುದನ್ನು ಕಂಡಾಗ ಆಕೆಗೆಷ್ಟು ವ್ಯಥೆ ಯಾಗಬೇಡ! ತನ್ನ ವಿಚಾರವಾಗಿ ಶಿವಮೂರ್ತಿಗೆ ಉತ್ಕಟ ಪ್ರೀತಿಯಿದೆಯೆ ಇಲ್ಲವೆ ? ಅಂಥ ಪೂರ್ಣ ಪ್ರೀತಿಯಿದ್ದುದೇ ನಿಜವಿದ್ದಲ್ಲಿ ಆತನ ಮುಖದಿಂದ ಇಂಥ ದುರ್ಬಲ ಮಾತು ಹೊರಡಲು ಸಾಧ್ಯವಾಗುತ್ತಿರಲಿಲ್ಲ. ಆತನ ದೃಷ್ಟಿ ಯಲ್ಲಿ ತನಗಿಂತಲೂ ಒಂದು ನೌಕರಿಯೆ ದೊಡ್ಡದಾಗಬೇಕೇ ? ಸರಸುವಿನ ಹೃದಯವೆಲ್ಲ ತಳಮಳಗೊಂಡು ಆಕೆ ಒಳಗೊಳಗೇ ನರಳತೊಡಗಿದಳು. ತಾವು ಪ್ರೀತಿಸಿದ ಹೆಣ್ಣಿಗಾಗಿ ಪ್ರಾಣವನ್ನೂ ಅರ್ಪಿಸಲು ಸಿದ್ಧರಾಗುವ ವೀರ

ನಾಯಕರೆಲ್ಲಿ, ವಾಸ್ತವ ಜೀವನದ ಈ ಶಿವಮೂರ್ತಿಯಂಥ ಯುವಕರೆಲ್ಲಿ! ಭವಿತವ್ಯದ ವಿಚಾರವಾವುದನ್ನೂ ತಲೆಗೆ ಹಾಕಿಕೊಳ್ಳದೆ ತಮ್ಮ ಪ್ರೇಯಸಿಯ ರೊಂದಿಗೆ ಎಲ್ಲಿಗೆ ಬೇಕಾದರೂ ಹೊರಡಲು ಸಿದ್ಧರಾಗುವ ನಾಯಕರೆಲ್ಲಿ, ಈ ಊರು ಬಿಟ್ಟು ಹೋಗಬೇಕಾಗುವುದಲ್ಲಾ–ಎಂದು ಯೋಚಿಸುವ ಶಿವಮೂರ್ತಿ ಯೆಲ್ಲಿ! ಆ ಒಂದು ಕ್ಷಣ ಸರಸುವಿಗೆ ಆತನ ಬಗೆಗೆ ಹೇಸಿಕೆಯಾಯಿತು. ಇಂಥವನಲ್ಲಿ ತನ್ನ ಮನಸ್ಸು ಹೇಗೆ ನೆಟ್ಟಿತೋ ಎಂದು ತನ್ನ ಬಗೆಗೂ ತಿರಸ್ಕಾರ ಬಂದಿತು. ಆದರೂ....ಅಂಥವನ ಬಗೆಗೇ ಗಾಢವಾದ ಮೋಹ ಹುಟ್ಟಿದೆ, ಅನುರಾಗ ಬೆಳೆದಿದೆ....ಆತನಲ್ಲಿ ಎಂಥ ದೌರ್ಬಲ್ಯವಿದ್ದರೂ ಅದನ್ನೆಲ್ಲ ಮರೆತು ಆತನೊಂದಿಗೇ ಕೂಡಬೇಕೆಂಬ ದೃಢನಿರ್ಧಾರ ಮೂಡಿದೆ. ಆತ ಹೇಗಿದ್ದರೂ ಚಿಂತೆಯಿಲ್ಲ–ತನ್ನವನಾಗಲೇಬೇಕು. ತನ್ನ ಆತನ ಸಮಾಗಮ ವಾಗದಿದ್ದಲ್ಲಿ ತಾನು ಬದುಕುವುದೇ ಸಾಧ್ಯವಿಲ್ಲ. ಗದಿಗೆವ್ವ ಹೇಳಿದ ಹಾಗೆ ತನಗೆ ಹುಚ್ಚು ಹಿಡಿದರೂ ಹಿಡಿದೀತು....

ಶಿವಮೂರ್ತಿ ಮಾತನ್ನು ಮುಂದುವರಿಸಿದ್ದ:

“ನಾನು ಹೀಗೆಲ್ಲ ಹೇಳುತ್ತಿರುವೆನೆಂದು ಏನೂ ತಿಳಿದುಕೊಳ್ಳಬೇಡ ಸರಸೂ. ನನ್ನ ಸ್ಥಿತಿಯೇನೆಂಬುದನ್ನು ಅರ್ಥಮಾಡಿಕೋ. ನಿಮ್ಮ ಹಾಗೆ ನಾನು ಶ್ರೀಮಂತನಲ್ಲ. ತೀರ ಬಡವ. ಕಾಲೇಜಿಗೆ ಹೋಗಿ ಎಂ. ಎ. ವರೆಗೂ ಓದಬೇಕೆಂಬ ಆಸೆಯಿತ್ತು. ಬಡತನದಿಂದಾಗಿ ಅದು ಕೈಗೂಡಲಿಲ್ಲ. ಈಗಲೂ ಸಹ ಆ ಆಸೆ ಮಾಯವಾಗಿಲ್ಲ ಸರಸೂ. ನೌಕರಿಯಿಂದ ಬರುವ ಸಂಬಳ ದಲ್ಲಿ ಅಲ್ಪಸ್ವಲ್ಪ ಹಣವನ್ನುಳಿಸಿಕೊಂಡು ಮತ್ತೆ ಕಾಲೇಜು ಸೇರಬೇಕೆಂಬ ವಿಚಾರವೂ ಇದೆ. ನಗಬೇಡ ಈ ಮಾತು ಕೇಳಿ....ನಗಬೇಡ....”

ಆತ “ನಗಬೇಡ” ಎಂದು ಹೇಳಿದುದರಿಂದಲೇ ಸರಸೂಗೆ ನಗುಬರ ತೊಡಗಿತು. ವಿಚಿತ್ರ ನಗು....ಕಟು ವ್ಯಂಗ್ಯ ತುಂಬಿದ ನಗು....ತನ್ನ ಬಡ ತನದ ಬವಣೆಯನ್ನೆಲ್ಲ ಈಗ ಏತಕ್ಕಾಗಿ ಬಿಚ್ಚುತ್ತಿರುವನೊ ಈತ? ಹಣ ವನ್ನುಳಿಸಿ ಕಾಲೇಜಿಗೆ ಹೋಗಿ ಕಲಿಯುವ ವಿಚಾರ!....ಹುಚ್ಚು ಹುಡುಗ.... ಹುಚ್ಚು ವಿಚಾರ. ಒಮ್ಮೆ ಮದುವೆಯ ಮಾತನಾಡುತ್ತಾನೆ....ಮರುಕ್ಷಣವೆ ಕಾಲೇಜಿನ ಮಾತೂ ಆಡುತ್ತಾನೆ. ಎಷ್ಟು ಅಸಂಬದ್ಧ....ಇಂಥವನನ್ನು ನೆಚ್ಚಿಕೊಂಡು ತಾನು ಬದುಕಿನ ರಂಗಕ್ಕೆ ಧುಮುಕುವುದು ಉಚಿತವಾದೀತೇ?

ಈತನೊಂದಿಗೆ ತನ್ನ ಸಂಸಾರ ಸುಖವಾಗಿ ನಡೆದೀತೇ? "ಹೃದಯವೆ, ಯೋಚಿಸು, ಈಗಲೇ ಆಳವಾಗಿ ಯೋಚಿಸು. ದುಡುಕಿ ಕೆಡಬೇಡ. ಆಯುಷ್ಯ ವನ್ನು ಹಾಳು ಮಾಡಿಕೊಂಡೀಯೆ, ಹುಷಾರಿ!" ಎಂದು ಹೇಳಿಕೊಂಡಳು. "ಹಾಳಾಗುವುದೆಂಬ ಹೆದರಿಕೆಯೇಕೆ ಹುಚ್ಚೀ? ಆತ ಎಂಥವನಿದ್ದರೇನು, ಪರಸ್ಪರರಲ್ಲಿ ಗಾಢ ಪ್ರೇಮವಿದೆಯೆಂದ ಮೇಲೆ ಯಾವ ಭಯವೂ ಇಲ್ಲ. ಆ ಪ್ರೇಮವೇ ನಿಮ್ಮಿಬ್ಬರನ್ನೂ ರಕ್ಷಿಸುವುದು," ಎಂದು ಉತ್ತರ ಬಂದಿತು. ಇಲ್ಲ ....ಆತನನ್ನು ತಾನು ಬಿಡಲು ಸಾಧ್ಯವಿಲ್ಲ....ಆತನೂ ತನ್ನನ್ನು ಬಿಟ್ಟು ಇರ ಲಾರನೇನೊ. ಆತನಿಗೂ ತನ್ನ ಬಗೆಗೆ ಪ್ರೀತಿಯಿದೆ. ಗಾಢವಾದ ಪ್ರೀತಿ ಯಿದೆ. ಆದರೆ–ಆತ ದುಡ್ಡಿಲ್ಲದವ....ಭವಿಷ್ಯದ ವಿಚಾರವಾಗಿ ಸಂದೇಹ ಗೊಂಡು ಈ ರೀತಿ ಆಡುತ್ತಿರಬಹುದು.

"ನೀವೇನೂ ಚಿಂತಿಸಬೇಡಿರಿ. ನಾನೂ ಮುಲ್ಕೀ ಪರೀಕ್ಷೆ ಪಾಸು ಮಾಡಿದ್ದೇನೆ. ನಿಮಗೆ ಬೇಗ ನೌಕರಿ ಸಿಕ್ಕದಿದ್ದರೂ ಚಿಂತೆಯಿಲ್ಲ. ನಾನು ಯಾವುದಾದರೊಂದು ಸಾಲೆಯಲ್ಲಿ ಶಿಕ್ಷಕಿಯ ಕೆಲಸ ದೊರಕಿಸಬಲ್ಲೆ. ನಾನೂ ಸಂಪಾದಿಸಬಲ್ಲೆ," ಎಂದು ಉತ್ಸಾಹದಿಂದ ನುಡಿದಳು ಸರಸು. ತನ್ನ ಉತ್ಸಾಹ ಆತನಲ್ಲಿಯೂ ಉತ್ಸಾಹ ತುಂಬಿಸಬಹುದೆಂದು ಆಕೆಗೆನ್ನಿಸಿದ್ದಿತು. ಆದರೆ ಹಾಗಾಗಲಿಲ್ಲ. ಶಿವಮೂರ್ತಿ ಕುಗ್ಗಿದ ಧ್ವನಿಯಲ್ಲಿ ಹೇಳಿದ:

"ಅದೂ ಸಹ ನೀನು ತಿಳಿದಷ್ಟು ಸುಲಭವಲ್ಲ ಸರಸೂ. ಅಲ್ಲದೆ ಹೆಂಡ ತಿಯ ಗಳಿಕೆಯ ಮೇಲೆ ಜೀವಿಸುವಂಥ ಮನುಷ್ಯ ನಾನಲ್ಲ....ಅದೂ ಅಲ್ಲದೆ ನಾವು ಹೋಗುವುದಾದರೂ ಎಲ್ಲಿಗೆ? ಯಾವ ಊರಿಗೆ? ಎಲ್ಲೂ ಯಾರ ಪರಿಚಯವೂ ನಮಗಿಲ್ಲ– ಇರುವುದೆಲ್ಲಿ, ಮಾಡುವುದೇನು?"

ಈಗ ಮಾತ್ರ ಸರಸುವಿಗೆ ಆತನ ಬಗೆಗೆ ಬೇಸರು ಬರತೊಡಗಿತು. "ನಿನಗಾಗಿ ಎಂಥ ಸಂಕಟವನ್ನಾದರೂ ಎದುರಿಸಬಲ್ಲೆ," ಎಂದಾತ ಹೇಳಬಹು ದೆಂದು ಆಕೆ ಭಾವಿಸಿದ್ದಳು. ಆತನ ಮುಖದಿಂದ ಇಂಥ ನಿರಾಸೆಯ ಮಾತು ಬರಬಹುದೆಂದು ಆಕೆ ನಿರೀಕ್ಷಿಸಿಕೊಂಡಿರಲಿಲ್ಲ. ಆಕೆಯ ಮನಸ್ಸಿಗೆ ಬಲವಾದ ಆಘಾತವಾಯಿತು. ತಾನು ವಿಧವೆಯೆಂಬ ವಿಚಾರ ತಿಳಿದ ಬಳಿಕ ಆತನ ಮನಸ್ಸು ಬದಲುಗೊಂಡಿತೋ ಏನೋ ಎಂಬ ಸಂದೇಹವೂ ಆಕೆಗೆ ಬರದಿರ ಲಿಲ್ಲ.

"ಹೀಗೆಲ್ಲ ಏಕೆ ಮಾತನಾಡುತ್ತೀರಿ ನೀವು? ನನ್ನ ಬಗ್ಗೆ ಬೇಸರು ಬಂದಿತೇ? ನಾನು ವಿಧವೆಯೆಂಬುದನ್ನು ತಿಳಿದೊಡನೆ ಮನಸ್ಸಿಗೆ ಅಸಹ್ಯ ವಾಯಿತೇ?"

ಶಿವಮೂರ್ತಿ ಆಕೆಯನ್ನು ಬಿಗಿಯಾಗಿ ತಬ್ಬಿಕೊಂಡು, ಸಂತವಿಸುವ ಧ್ವನಿಯಲ್ಲಿ ನುಡಿದ:

"ಅಂಥ ಮಾತು ಆಡಬೇಡ ಸರಸೂ. ನೀನು ವಿಧವೆಯೆಂಬ ವಿಚಾರವೇ ನನ್ನ ತಲೆಯಲ್ಲಿ ಸುಳಿದಿಲ್ಲ. ನೀನು ಬಾಯಿಬಿಟ್ಟು ಹೇಳಿದ ಮೇಲೂ ಆ ಬಗ್ಗೆ ನನಗೇನೂ ಅನ್ನಿಸಲಿಲ್ಲ. ಅಂದು ರಾತ್ರಿ ಇದೇ ಕಟ್ಟೆಯ ಮೇಲೆ ನಾನು ಮೈಮರೆತು ಕುಳಿತಿದ್ದಾಗ ಆಕಾಶದಿಂದ ಇಳಿದು ಬಂದ ದೇವಕನ್ಯೆಯಂತೆ ನನ್ನನ್ನು ಕರೆದೊಯ್ದು ಉಪಚರಿಸಿದ ಕರುಣಾಹೃದಯಿ ನೀನು. ಅಂದಿನ ನಿನ್ನ ಆ ದಿವ್ಯರೂಪ ಇಂದಿಗೂ ನನ್ನ ಕಣ್ಣೆದುರು ಕಟ್ಟಿದೆ ಸರಸೂ. ಅಚ್ಚ ಬಿಳಿಯ ವಸ್ತ್ರಧಾರಿಯಾಗಿ ದೇವಿಯಂತೆ ತೋರುತ್ತಿದ್ದ ನಿನ್ನ ರೂಪ ....ನನ್ನ ದೃಷ್ಟಿಯಲ್ಲಿ ನೀನೊಬ್ಬ ದೇವತೆ ಸರಸೂ. ನನ್ನ ದೇವತೆ...."

"ಅದಕ್ಕೇ ಏನೊ, ಮನುಷ್ಯರ ಮುಂದೆ ಆಡಬಾರದ ಮಾತುಗಳನ್ನೆಲ್ಲ ಈ ದೇವತೆಯ ಮುಂದೆ ಆಡುತ್ತಿರಬೇಕು ನೀವು!" ಎಂದಳಾಕೆ. ಆಕೆಯ ಕಣ್ಣುಗಳಿಂದ ಒಂದೆರಡು ಹನಿಗಳುದುರಿ ಶಿವಮೂರ್ತಿಯ ಕೈಯ ಮೇಲೆ ಬಿದ್ದುವು.

ಆಕೆಯ ಬಗೆಗೆ ಆತನ ಹೃದಯದಲ್ಲಿದ್ದ ಪ್ರೇಮವೆಲ್ಲಾ ಉಕ್ಕೇರಿ ಬಂದಿತು. "ನಿನ್ನನ್ನು ನಾನು ನೋಯಿಸಿದೆನೇನೇ ಸರಸೂ.?. ನಾನು ಹೀಗೆಲ್ಲ ಮಾತನಾಡಬಾರದಾಗಿದ್ದಿತೇ? ಏನೇನು ಆಡಿದೆನೋ ನನಗೇ ತಿಳಿಯದು. ವಿಕಟ ಆರ್ಥಿಕ ಪರಿಸ್ಥಿತಿ ನನ್ನಿಂದ ಅಂಥ ಮಾತುಗಳನ್ನಾಡಿಸಿರಬಹುದು. ನೊಂದುಕೊಳ್ಳಬೇಡ ಸರಸೂ. ದಯವಿಟ್ಟು ನೊಂದುಕೊಳ್ಳಬೇಡ. ನಿನಗಾಗಿ ನಾನು ಎಂಥ ಕಷ್ಟವನ್ನೂ ಸಹಿಸಬಲ್ಲೆ. ಈಗ ಏನು ಮಾಡೋಣ ಹೇಳು...."

"ನೀವೇನು ಮಾಡಬೇಕೆನ್ನುವಿರಿ?"

"ಊರಲ್ಲಂತೂ ಇರುವಂತಿಲ್ಲ. ನಿಜ ಹೇಳಬೇಕಾದರೆ ನನಗೂ ಈ ಊರು ಬೇಸರವಾಗಿದೆ. ನೌಕರಿಯಲ್ಲಿ ಸುಖವಿಲ್ಲ. ನಮ್ಮ ಹೆಡ್‌ಕಾರ

ಕೂನ ನನ್ನನ್ನು ಹರಿದು ತಿನ್ನುತ್ತಿದಾನೆ. ನನ್ನನ್ನು ನೌಕರಿಯಿಂದ ತೆಗೆದು ಹಾಕಬೇಕೆಂದೇ ಹೊಂಚುಹಾಕಿದ್ದಾನೆ. ಆತನ ಕೈಯಲ್ಲಿ ಕೆಲಸ ಮಾಡುವುದು ತೀರ ಕಷ್ಟಕ್ಕಿಟ್ಟುಕೊಂಡಿದೆ. ಇಂದಿಲ್ಲ ನಾಳೆ ಆ ನೌಕರಿ ಕಳೆದು ಹೋಗುವುದೇ ಖಂಡಿತ. ಅದರಲ್ಲಿ ಯಾವ ಸುಖವೂ ಇಲ್ಲದಿರುವಾಗ ಇವತ್ತೇನು, ನಾಳೆಯೇನು ? ಅವರಾಗಿ ನನ್ನನ್ನು ಕಿತ್ತುಹಾಕುವವರೆಗೂ ದಾರಿ ಕಾಯುವುದೇಕೆ ? ನಾನಾಗಿಯೆ ಅದನ್ನು ತ್ಯಜಿಸಿ ಹೊರಟುಬಿಟ್ಟರೆ ಮೇಲಲ್ಲವೆ ? ಹೌದು. ಹಾಗೇ ಮಾಡುವಾ. ಈಗ ನಾನೊಂದು ನಿರ್ಧಾರಕ್ಕೆ ಬಂದಂತಾಯಿತು ಸರಸೂ. ಈಗಲೇ, ಇದೇ ಗಳಿಗೆಗೇ ನಿನ್ನೊಂದಿಗೆ ಎಲ್ಲಿಗೆ ಬೇಕಾದರೂ ಬರಲು ಸಿದ್ಧ ನಾನು.”

“ನಿಜವೇ ?” ಎಂದು ಹರ್ಷಾತಿಶಯದಿಂದ ಕೇಳಿದಳಾಕೆ.

“ಏಳು, ಈಗಿಂದೀಗಲೆ ಹೊರಟುಬಿಡೋಣ. ಇಬ್ಬರೂ ಸೇರಿ ಈ ಊರು ಬಿಟ್ಟು ತೊಲಗುವುದೇ ನಿರ್ಧಾರವಾಗಿರುವಾಗ ಇಂದೇನು, ನಾಳೆಯೇನು ? ಹೇಗೂ ಇವೊತ್ತು ಜಾತ್ರೆ. ಮನೆಯವರೆಲ್ಲ ಮಠದಲ್ಲಿದ್ದಾರೆ. ಇಂಥ ಸುಸಂಧಿ ಮತ್ತೆ ಸಿಗುವುದೇ ? ಇನ್ನು ಒಂದು ಒಂದೂವರೆ ಗಂಟೆಯೊಳಗಾಗಿ ಎಕ್ಸಪ್ರೆಸ್ ಗಾಡಿ ಸಿಕ್ಕುತ್ತದೆ. ಹೊರಟು ಬಿಡೋಣವೆ ?” ಎನ್ನುತ್ತ ಆತ ಮೇಲಕ್ಕೆದ್ದುನಿಂತ. ಆತನ ಕೈಯನ್ನು ಹಿಡಿದುಕೊಂಡು ಆಕೆಯೂ ಮೇಲಕ್ಕೆದ್ದಳು. ಕೆಲ ನಿಮಿಷಗಳ ಹಿಂದೆ ಆಕೆಯ ಚಿತ್ತವನ್ನು ಕವಿದಿದ್ದ ನಿರಾಸೆಯ ಭಾವ ಮಾಯವಾಗಿ ಮತ್ತೆ ಉತ್ಸಾಹವುಕ್ಕೇರಿಬಂದಿದ್ದಿತು. ಕತೆ, ಕಾದಂಬರಿ, ನಾಟಕ, ಕಾವ್ಯಗಳಲ್ಲಿನ ನಾಯಕರಂತೆಯೆ ಶಿವಮೂರ್ತಿಯೂ ಧೀರೋದಾತ್ತವಾಗಿ ವರ್ತಿಸುತ್ತಿರುವಂತೆ ಆಕೆಗೆ ತೋರಿತು.

“ನನ್ನ ಕೊಟಡಿಗೆ ಹೋಗಿ ಅಗತ್ಯವಿರುವಷ್ಟು ಬಟ್ಟೆಬರೆಗಳನ್ನು ಮಾತ್ರ ತೆಗೆದುಕೊಂಡು ಹೊರಟುಬಿಡೋಣ ಸರಸೂ. ನಿನಗೂ ಸೀರೆ ರವಕೆಗಳು ಬೇಕಲ್ಲ ?”

“ತೆಗೆದುಕೊಂಡು ಬರಬಹುದಿತ್ತು. ಆದರೆ ಮನೆಯಲ್ಲಿ ಅಪ್ಪ ಮಲಗಿರುತ್ತಾರೆ.”

“ಏನೂ ಚಿಂತೆಯಿಲ್ಲ. ನನ್ನ ಹತ್ತಿರ ಕೊಂಚ ಹಣವಿದೆ. ನಾಳೆ ಎಲ್ಲಿಯಾದರೂ ಕೊಂಡುಕೊಂಡರಾದೀತು.”

ಇಬ್ಬರೂ ಕೊಟಡಿಗೆ ಬಂದು ಕತ್ತಲೆಯಲ್ಲೇ ಸಾಮಾನುಗಳನ್ನು ಗಂಟುಕಟ್ಟತೊಡಗಿದರು. ದೀಪವನ್ನುಂಟಿಸುವುದು ಗಂಡಾಂತರದ್ದಾಗಿದ್ದಿತು. ಶಿವಮೂರ್ತಿ ತನ್ನ ಬಟ್ಟೆಬರೆಗಳನ್ನೂ, ಹಾಸಿಗೆ ಹೊದ್ದಿಕೆಗಳನ್ನೂ ಕೈಗೆ ಸಿಕ್ಕಿದ ಪುಸ್ತಕಗಳನ್ನೂ ಕೂಡಿಸಿ ಒಂದು ಸುರುಳಿ ಸುತ್ತಿದ. ಸರಸು ಆತನ ಪಿಟೀಲನ್ನು ಕಂಕುಳಲ್ಲಿಟ್ಟುಕೊಂಡಳು.

ಅಷ್ಟುಹೊತ್ತಿಗೆ ಹೊರಗಡೆ ಜನಗಳ ಕೂಗು ಕೇಳಿಸತೊಡಗಿತು. ಅದೇನೆಂದು ಶಿವಮೂರ್ತಿ ಕಿಟಕಿಯಲ್ಲಿ ಇಣುಕಿ ನೋಡುತ್ತಿದ್ದ ಹಾಗೆ ಬಸಪ್ಪ ಸೆಟ್ಟರು ಮನೆಯ ಬಾಗಿಲನ್ನು ತೆರೆದು ಹೊರಕ್ಕೆ ಬಂದು ಅದಕ್ಕೆ ಬೀಗ ಹಾಕುವುದನ್ನೂ ಮರೆತು ಅವಸರದಿಂದ ಬೀದಿಗಿಳಿದು ಮಠದ ಕಡೆಗೆ ಧಾವಿಸಿದರು. ಶಿವಮೂರ್ತಿಗೆ ಯಾವುದೂ ಅರ್ಥವಾಗಲಿಲ್ಲ.

"ಏನು ಸರಸೂ, ಏನು ಗದ್ದಲವಿರಬಹುದು ಇದು ?"

"ಏನಾಗಿದೆಯೊ ಏನೊ. ಈ ಊರಲ್ಲಿ ಆಗಾಗ ಇಂಥದೇನಾದರೂ ಇದ್ದೇ ಇರುತ್ತದೆ. ಯಾವಾಗಲೂ ಪಾರ್ಟಿಗಳ ಬಡಿದಾಟ."

"ಮಠದಲ್ಲಿ ಏನಾದರೂ ಆಗಿರಬಹುದೇ ?"

"ಅಲ್ಲೇನಾಗುತ್ತದೆ ? ಇಲ್ಲೇ ಗೌಡರ ಬೀದಿಯಲ್ಲಿ ಏನಾದರೂ ನಡೆದಿರಬಹುದು. ಆ ಗದ್ದಲ ಕೇಳಿ ಅಪ್ಪ ಹೋದರೋ ಏನೊ. ಅವರು ಬರಲು ಕೊಂಚ ಹೊತ್ತಾಗಬಹುದೇನೊ. ನಾನು ಹೋಗಿ ಸೀರೆಗಳನ್ನು ತೆಗೆದುಕೊಂಡು ಬರಲಾ ?"

"ಬೇಡ ಬಿಡು. ಅಷ್ಟರಲ್ಲಿ ಬಂದುಬಿಟ್ಟಾರು. ಸೀರೆಯೂ ಬೇಡ, ಏನೂ ಬೇಡ. ಹೀಗೆಯೆ ಹೋದರಾಯಿತು," ಎಂದು ನುಡಿದು ಆತ ಹಾಸಿಗೆ ಸುರುಳಿಯನ್ನು ಕಂಕುಳಲ್ಲಿರಿಸಿಕೊಂಡು ಕೊಟಡಿಯಿಂದ ಹೊರ ನಡೆದ, ಕೊಟಡಿಗೆ ಬೀಗ ಹಾಕಿ ಇಬ್ಬರೂ ಬೀದಿಗಿಳಿದು ರೈಲ್ವೆ ಸ್ಟೇಶನ್ನಿನ ದಾರಿ ಹಿಡಿದು ಹೊರಟರು.

ಸರಸು ಒಂದು ಕ್ಷಣ ನಿಂತು, ಬೀದಿಯ ದೀಪದ ಮಂದ ಬೆಳಕಿನಲ್ಲಿ ಭವ್ಯವಾಗಿ ತಲೆಯೆತ್ತಿ ನಿಂತಿದ್ದ ತಮ್ಮ ಮನೆಯನ್ನು ದಿಟ್ಟಿಸಿ ನೋಡಿ ನಿಟ್ಟುಸಿರಿಟ್ಟಳು. ತಮ್ಮ ಮನೆ....ತಾನು ಹುಟ್ಟಿ ಬೆಳೆದು ದೊಡ್ಡವಳಾದ ಮನೆ.... ತನ್ನ ಆತ್ಮೀಯರೆಲ್ಲ ಇರುವ ಮನೆ....ತಂದೆ, ತಾಯಿ, ಅಜ್ಜಿ, ಗೌರಾಂಬಿಕಾ

....ಅವರೆಲ್ಲರನ್ನೂ ತ್ಯಜಿಸಿ ಹೊರಟುನಿಂತಿದಾಳೆ. ಒಲವಿನ ನಲ್ಲನೊಡನೆ ಹೊರಟುನಿಂತಿರುವಳಾದರೂ ತವರಿನ ಕರುಳು ಸೆಳೆಯುತ್ತಿದೆ. ತಂಗಿ ಗೌರಿಯ ಬಗೆಗಂತೂ ಆಕೆಗೆ ತುಂಬ ಪ್ರೀತಿ. ಆಕೆ ಮಲತಾಯಿಯ ಮಗ ಳೆಂದು ತಾನು ತಿಳಿದಿರಲೇ ಇಲ್ಲ. ಆ ಮಲತಾಯಿಯೂ ಮಲತಾಯಿಯ ಹಾಗೆ ವರ್ತಿಸಿರಲಿಲ್ಲ. ತನಗೆ ಯಾವುದಕ್ಕೂ ಕೊರತೆಯಾಗದಂತೆ, ತನ್ನ ಮನಸ್ಸಿಗೆ ಕೊಂಚವೂ ನೋವಾಗದಂತೆ ಅತ್ಯಂತ ಪ್ರೀತಿಯಿಂದ, ವಾತ್ಸಲ್ಯ ದಿಂದ, ತನ್ನ ಹೊಟ್ಟೆಯ ಮಗಳ ಹಾಗೆಯೆ ನೋಡಿಕೊಂಡಿದ್ದಳು. ಗೌರಿ ಯಂತೂ ತನ್ನನ್ನು ಬಿಟ್ಟು ಅರಗಳಿಗೆಯೂ ಇರುತ್ತಿರಲಿಲ್ಲ. ತಾನೂ ಅಷ್ಟೆ, ಆಕೆಯನ್ನು ಬಿಟ್ಟು ಬಾಯಲ್ಲಿ ನೀರೂ ಸಹ ಹಾಕುತ್ತಿರಲಿಲ್ಲ. ಇಬ್ಬರೂ ಕೂಡಿಯೆ ಊಟ ಮಾಡುವುದು, ಇಬ್ಬರೂ ಕೂಡಿಯೆ ಮಲಗುವುದು.... ಅದೂ ಒಂದೇ ಮಂಚದ ಮೇಲೆ, ಒಂದೇ ರಗ್ಗು ಹೊದೆದುಕೊಂಡು. ವಯ ಸ್ಸಿನಲ್ಲಿ ಗೌರಿ ತನಗಿಂತ ಏಳು ವರ್ಷಕ್ಕೆ ಕಿರಿಯಳಾಗಿದ್ದರೂ ತಾವಿಬ್ಬರೂ ಅವಳಿ ಜವಳಿ ಸೋದರಿಯರಂತೆ ಬಳೆದುಬಂದಿದ್ದರು. ಅಂಥ ಆತ್ಮೀಯ ಳನ್ನು ಬಿಟ್ಟು ಹೋಗಬೇಕಾಯಿತು. ಇನ್ನು ಆಕೆಯ ಮುಖವನ್ನೆಂದು ಕಾಣುವೆನೊ. ಅವ್ವ....ರುದ್ರವ್ವಜ್ಜಿ....ಅವರನ್ನು ಮತ್ತೆ ನೋಡಲಾದೀತೊ ಇಲ್ಲವೊ....ಅಪ್ಪ ಕೊಂಚ ಸಿಟ್ಟಿನ ಮನುಷ್ಯ....ಹಳೆಯ ವಿಚಾರದವರು, ಆದರೂ ತನ್ನ ಬಗೆಗೆ ಅವರಿಗೆ ಎಂಥ ಅಕ್ಕರತೆ....ಅವರ ಬಗೆಗೂ ತನ್ನಲ್ಲಿ ಗಾಢ ಪ್ರೀತಿಯುಂಟು....ಅವರನ್ನೆಲ್ಲ ಬಿಟ್ಟು ಹೋಗಬೇಕು....ಸರಸೂಗೆ ಕಂಬನಿ ಚಿಮ್ಮಿ ಬಂದಿತು. ಕಾಲುಗಳು ಮುಂದೆ ಏಳದಾದುವು. ಮದುವೆ ಯಾದ ಗಂಡನೊಂದಿಗೆ ಮೊದಲ ಬಾರಿಗೆ ತವರು ಮನೆಯನ್ನು ಬಿಟ್ಟು ಹೊರಟು ನಿಂತ ನವವಧುವಿನಂತೆ ಆಕೆಯ ಸ್ಥಿತಿಯಾಗಿದ್ದಿತು. ಆಕೆಯ ಎದೆಯಲ್ಲಿ ತುಂಬಿ ಬಂದ ಭಾವನೆಗಳನ್ನು ಶಿವಮೂರ್ತಿ ಗುರುತಿಸಿಕೊಂಡ ನೇನೊ, ಆಕೆಯ ಭುಜದ ಮೇಲೆ ಅಕ್ಕರತೆಯಿಂದ ಕೈಯಿಟ್ಟು ಆತ ಮೆಲು ದನಿಯಲ್ಲಿ ಹೇಳಿದ: "ದುಃಖಿಸಬೇಡ ಸರಸೂ, ಮತ್ತೆ ಎಲ್ಲರನ್ನೂ ನೋಡಲು ಸಾಧ್ಯವಾಗಬಹುದು. ಸೆಟ್ಟರ ಸಿಟ್ಟು ಬಹಳ ದಿನ ತಡೆಯಲಾರದು. ಎಷ್ಟಾ ದರೂ ತಂದೆಯ ಕರುಳಲ್ಲವೆ?"

ಆತನ ಮಾತಿನಲ್ಲಿ ಆಕೆಗೆಷ್ಟು ಅರ್ಥವಾಯಿತೊ, ತಿಳಿಯದು. ಅರ್ಥ

ಮಾಡಿಕೊಳ್ಳುವ ಸ್ಥಿತಿಯಲ್ಲಾಕೆ ಇರಲಿಲ್ಲ. ಒಂದೆರಡು ಕ್ಷಣ ನೀರವವಾಗಿ ನಿಂತಿದ್ದು ಅನಂತರ ಮನಸ್ಸನ್ನು ದೃಢಗೊಳಿಸಿ ಮುಂದೆ ಅಡಿಯಿಟ್ಟಳು.

ಒಂದೆರಡು ಬೀದಿಗಳನ್ನು ದಾಟ ಅವರು ಸ್ಟೇಶನ್‌ರಸ್ತೆಗೆ ಬಂದು ತಲುಪಿದಾಗ ಪೇಟೆಯ ಕಡೆಯಿಂದ ಬರುವ ದಾರಿಯಿಂದ ಕುದುರೆಗಾಡಿ ಯೊಂದು ನಿಧಾನವಾಗಿ ಬರುತ್ತಿದ್ದುದು ಕಾಣಿಸಿತು.

"ಒಳ್ಳೆಯ ಸಮಯಕ್ಕೆ ಗಾಡಿ ಬಂತು. ಇಲ್ಲವಾದರೆ ಅರ್ಧಮೈಲು ನಡೆದುಕೊಂಡೇ ಹೋಗಬೇಕಾಗುತ್ತಿತ್ತು. ಏ, ಗಾಡಿವಾಲಾss !" ಎಂದು ಕೂಗಿದಳು ಸರಸೂ.

ಗಾಡಿಯುವ ಆಕೆಯ ಧ್ವನಿಯನ್ನು ಗುರುತಿಸಿಕೊಂಡನೇನೊ, ಚಬಕ ವನ್ನೆತ್ತಿ ಕುದುರೆಗೆ ಒಂದೇಟು ಹಾಕಿ ಅದನ್ನು ತ್ವರೆಯಿಂದ ಓಡಿಸುತ್ತ— "ಬಂದೆ ತಾಯಿಾ, ಬಂದೆ," ಎಂದು ಮಾರುತ್ತರವಿತ್ತ.

"ಗಾಡಿಯುವ ನಿಮ್ಮ ಗುರುತಿನವನೇನು ಸರಸೂ ?"

"ಹೌದು. ನಾವು ಎಲ್ಲಿಗೆ ಹೋಗಬೇಕಾದರೂ ಇವನ ಗಾಡಿಯೇ ಮಿಾಸಲು. ನಮಗೆ ಗಾಡಿಯು ಅಗತ್ಯವಿರುವಾಗಲೆಲ್ಲ ಈತ ಹತ್ತಿರವೆ ಹಾಯ್ದು ಹೋಗುತ್ತಿರುತ್ತಾನೆ. ಜಾದುವಿದ್ಯೆಯನ್ನೇನಾದರೂ ಈತ ಕಲಿತಿರುವನೇನೊ ಎಂದು ಒಂದೊಂದು ಸಲ ಆಶ್ಚರ್ಯವಾಗುತ್ತದೆ ನನಗೆ. ಇದೇ ಈಗ ಅರ್ಧ ಮೈಲು ಹೇಗಪ್ಪ ನಡೆಯೋದು ಎಂದು ನಾನು ವಿಚಾರ ಮಾಡುತ್ತಿದ್ದ ಹಾಗೆ ತಟಕ್ಕನೆ ಈತ ಕಾಣಿಸಿಕೊಳ್ಳಬೇಕೇ? ಅವೊತ್ತು ನೀವು ಹೊಳೆಯ ದಂಡೆಯ ಮೇಲೆ ಮಳೆಯಲ್ಲಿ ತೋಯಿಸಿಕೊಳ್ಳುತ್ತ ಕುಳಿತಿದ್ದಿರಲ್ಲ—ಅಂದು ನಿಮ್ಮನ್ನು ಮನೆಯ ವರೆಗೆ ತಂದು ಬಿಟ್ಟವನೂ ಈತನೇ. ನಾನು ಚಿಕ್ಕವಳಿದ್ದಾಗಿ ನಿಂದ ಇವನ ಗಾಡಿಯಲ್ಲೇ ಕುಳಿತಿದ್ದೇನೆ....ಮುಹಮ್ಮದಸಾಹೇಬ್, ಓ ಮುಹಮ್ಮದಸಾಹೇಬ್...."

"ಬಂದೆ ತಾಯಿಾ."

ಗಾಡಿ ಬಂದು ಹತ್ತಿರ ನಿಂತಿತು. ಇಬ್ಬರೂ ಅದರಲ್ಲಿ ಹತ್ತಿ ಕುಳಿ ತದ್ದೂ ಆಯಿತು. ಗಾಡಿ ಓಡತೊಡಗಿತು.

"ಇಂಥ ರಾತ್ರಿಯಲ್ಲಿ ಎಲ್ಲಿಗೆ ಹೊರಟಿರಿ ತಾಯಿಾ ?"

"ಎಲ್ಲಾದರೂ ಹೊರಟು ನಿಂತಾಗ ಎಲ್ಲಿಗೆ ಎಂದು ಕೇಳಬಾರದು

ಮಹಮ್ಮದಸಾಹೇಬು. ನಾವೇ ಹೇಳಿದರೆ ಕೇಳಲು ಮಾತ್ರ ಯಾವ ಅಡ್ಡಿಯೂ ಇಲ್ಲ. ಈ ವಿಷಯ ಗೊತ್ತಿಲ್ಲವೇ ನಿನಗೆ ?"

"ಮರೆತು ಬಿಟ್ಟೆ ತಾಯಿ. ಆಗಲಿ. ನೀವೇ ಹೇಳಿರಿ."

"ಹೀಗೇ ಒಂದೂರಿಗೆ ಹೊರಟಿದ್ದೇವೆ. ಎಲ್ಲಿಗೆ ಎಂಬುದನ್ನು ನಾವೇ ಇನ್ನೂ ಯೋಚಿಸಿಲ್ಲ."

"ಅಂದರೆ ? ಇದರರ್ಥವೇನು ತಾಯಿ ?" ಎಂದು ಆತ ವಿಸ್ಮಯದಿಂದ ಕೇಳಿದ. "ಈ ಸ್ವಾಮಿ ಯಾರು ? ಅವೊತ್ತು ರಾತ್ರಿ ಮಳೆಯೊಳಗೆ ಕರೆದು ತಂದಿದ್ದೆವಲ್ಲ, ಅವರೇ ಅಲ್ಲವೆ ?"

"ಹೌದು ಅವರೇ. ನೀನೂ ಮರೆತಿಲ್ಲವಲ್ಲ ಸಾಹೇಬು ?"

"ಮರೆಯೋದು ಹ್ಯಾಗೆ ತಾಯಿ ? ಅಂದು ನಾನೇ ಇವರನ್ನೆತ್ತಿಕೊಂಡು ನಿಮ್ಮ ಮನೆಯಲ್ಲಿಳಿಸಿದ್ದೆನಲ್ಲ.... ಇಬ್ಬರೇ ಹೊರಟಿದ್ದೀರಾ ?"

"ಹೌದು. ಇಬ್ಬರೇ ಹೊರಟಿದ್ದೇವೆ. ನಾವು ಹೀಗೆ ಹೋದ ಸುದ್ದಿಯನ್ನು ಯಾರ ಹತ್ತಿರವೂ ಹೇಳಬಾರದು ಸಾಹೇಬು."

ಮಹಮ್ಮದಸಾಹೇಬ ತನ್ನ ಗಡ್ಡವನ್ನು ನೀವಿಕೊಳ್ಳುತ್ತ ಒಂದೆರಡು ಕ್ಷಣ ಮೌನವಾಗಿದ್ದ. ಅನಂತರ ನಸುನಕ್ಕು ಹೇಳಿದ : "ಅಲ್ಲಾ ನಿಮಗಿಬ್ಬರಿಗೂ ಒಳ್ಳೇದು ಮಾಡಲಿ ತಾಯಿ. ಎಲ್ಲಾದರೂ ಸರಿಯೆ, ನೀವು ಸುಖವಾಗಿದ್ದರೆ ಸಾಕು. ಈ ಮುದುಕನನ್ನು ಮಾತ್ರ ಮರೆಯಬೇಡಿರಿ."

ತೀರ ಸಾಧಾರಣವಾದ ಮಾತು. ಆದರೂ ಅದು ಕಿವಿಗೆ ಬಿದ್ದೊಡನೆ ಸರಸುವಿನ ನಯನಗಳೆರಡೂ ನೀರಿನಲ್ಲಿ ಮಿಂಾಯತೊಡಗಿದುವು. ಮನೆಯನ್ನು ಬಿಟ್ಟು ಬಂದಾಗಿನಿಂದ ಹೀಗೆಯೆ ಆಗುತ್ತಿದೆ ಆಕೆಗೆ. ಆತ್ಮೀಯತೆಯ ಮಾತು ಹೊರಟಾಗಲೆಲ್ಲ ಕಣ್ಣೀರು ಚಿಮ್ಮುತ್ತಿದೆ. ಚಿಕ್ಕವಳಾಗಿದ್ದಾಗಿನಿಂದ ಸಾಹೇಬು ಆಕೆಯನ್ನು ಕಂಡವ. ಲಂಗ ಹಾಕಿಕೊಂಡು ಗಾಡಿಯಲ್ಲಿ ನೆಗೆದು ಕೂತು ತನ್ನ ಗಡ್ಡದೊಂದಿಗೆ ಆಟವಾಡುತ್ತಿದ್ದ ಪುಟ್ಟ ಸರಸುವಿನ ನೆನಪು ಆತನಿಗಿನ್ನೂ ಇದೆ. ಜರಿಯ ಪೀತಾಂಬರವನ್ನುಟ್ಟುಕೊಂಡು ಕಣ್ಣೀರು ಸುರಿಸುತ್ತ ಪತಿಗೃಹಕ್ಕೆ ಹೊರಟಿದ್ದ ನವವಧು ಸರಸುವಿನ ನೆನಪೂ ಆತನಿಗಿದೆ. ಗಂಡ ಸತ್ತುಹೋದ ಬಳಿಕ, ಮಂಗಲಸೂತ್ರ, ಕುಂಕುಮ, ಕೈಬಳೆಗಳನ್ನು ಕಿತ್ತು ಹಾಕಿ ವಿಧವೆಯಾಗಿ ಮತ್ತೆ ತವರಿಗೆ ಬಂದಿದ್ದ ಸರಸುವಿನ ನೆನಪೂ ಆತನಿ

ಗಿದೆ. ಅನಂತರ ಎಷ್ಟೋ ಸಲ ಆಕೆ ಆತನ ಗಾಡಿಯಲ್ಲಿ ಕುಳಿತುದುಂಟು. ಬಾಡಿದ ಮೊಗದ, ಉದಾಸೀನ ಭಾವದ ಸರಸೂ. ಆಕೆಗಿನ್ನು ಸುಖವಿಲ್ಲ ಎಂಬುದನ್ನು ನೆನೆದು ಆತನೂ ಕೊರಗಿದ್ದುಂಟು. ಆದರೆ—ಇಂದು ಆಕೆಯ ಮುಖ ಮತ್ತೆ ಉಲ್ಲಾಸದಿಂದ ಅರಳಿದೆ. ತನ್ನೊಲವಿನ ಈ ಯುವಕ ನೊಂದಿಗೆ ಆಕೆ ಎಲ್ಲಿಗೋ ಹೊರಟುನಿಂತಿದ್ದಾಳೆ. ಇಂಥ ಸಂದರ್ಭದಲ್ಲಿ ಬೇರೆ ಯಾರು ಅವರನ್ನು ಕಂಡಿದ್ದರೂ—"ಅವರು ಓಡಿಹೋಗುತ್ತಿದಾರೆ" ಎಂದೇ ಹೇಳುತ್ತಿದ್ದರು. ಆದರೆ ಮುಹಮ್ಮದನಿಗೆ ಮಾತ್ರ ಹಾಗೆನಿಸಲಿಲ್ಲ. "ಹೋಗಲಿ, ಎಲ್ಲಾದರೂ ಸರಿಯೆ, ಹೇಗಾದರೂ ಸರಿಯೆ, ಈ ತಾಯಿ ಸುಖ ವಾಗಿರಲಿ," ಎಂದುಕೊಂಡನಾತ.

ಗಾಡಿ ನಿಲ್ದಾಣಕ್ಕೆ ಬಂದು ತಲುಪುವುದರೊಳಗಾಗಿ ರೈಲುಗಾಡಿಯೂ ಧಡಧಡನೆ ಸದ್ದು ಮಾಡುತ್ತ ಬಂದು ನಿಂತುಕೊಂಡಿತು. ರಾತ್ರಿಯ ಗಾಡಿ ಯಾದುದರಿಂದ ನಿಲ್ದಾಣದಲ್ಲಿ ಜನದಟ್ಟಣೆಯೇನೂ ಇರಲಿಲ್ಲ. ಬೇಗ ಬೇಗ ಟಿಕೆಟ್ಟು ತೆಗೆಯಿಸಿ ಮುಹಮ್ಮದನಿಗೆ ಹಣ ಕೊಟ್ಟು ಆತನನ್ನು ಬೀಳ್ಕೊಂಡು, ಅವರಿಬ್ಬರೂ ಚಿಕ್ಕ ಡಬ್ಬಿಯೊಂದನ್ನೇರಿ ಕುಳಿತರು. ಒಡನೆಯೆ ಗಾಡಿಯೂ ಹೊರಟಿತು.

ತೀರ ಚಿಕ್ಕ ಡಬ್ಬಿ. ಆರು ಜನರು ಕುಳಿತುಕೊಳ್ಳಬಹುದಾದ ಆ ಡಬ್ಬಿ ಯಲ್ಲಿ ಆಗ ಅವರನ್ನುಳಿದು ಇನ್ನೊಂದೇ ಒಂದು ವ್ಯಕ್ತಿಯಿದ್ದಿತು. ಕಿಟಕಿಯ ಹತ್ತಿರ ಮುಖವನ್ನಿರಿಸಿ ಆ ವ್ಯಕ್ತಿ ಆಚೆಗೆ ದೃಷ್ಟಿ ಬಿಟ್ಟು ಕುಳಿತಿದ್ದಿತಾದುದ ರಿಂದ ಸರಸೂ ಶಿವಮೂರ್ತಿ ಕೂಡಲೆ ಅದನ್ನು ಗುರುತಿಸಲಾಗಲಿಲ್ಲ. ತೆರ ವಾಗಿದ್ದ ಬೆಂಚಿನ ಮೇಲೆ ಹಾಸಿಗೆ ಸುರುಳಿಯನ್ನು ಬಿಚ್ಚಿ ಹಾಸಿ, ಶಿವಮೂರ್ತಿ —"ನೀನು ಮಲಗಿಬಿಡು ಸರಸೂ. ನಿದ್ರೆ ಬಂದಿರಬಹುದು," ಎಂದು ನುಡಿದು ತಾನು ಆ ವ್ಯಕ್ತಿಯ ಪಕ್ಕದಲ್ಲಿ ಕುಳಿತುಕೊಂಡ.

ಸರಸೂ ಮಲಗಿಕೊಳ್ಳಲಿಲ್ಲ. ಮಲಗಿದರೂ ಸಹ ತನಗೆ ನಿದ್ರೆ ಬರು ವುದು ಸಾಧ್ಯವಿಲ್ಲವೆಂಬ ವಿಷಯ ಆಕೆಗೆ ಚೆನ್ನಾಗಿ ಗೊತ್ತಿದ್ದಿತು. ತನ್ನ ಬದುಕಿನ ದಿಸೆಯನ್ನೆ ಬದಲು ಮಾಡುವ ಅನೇಕ ಘಟನೆಗಳು ಜರುಗಿದ ಈ ರಾತ್ರಿ ತನಗೆ ನಿದ್ರೆ ಬರುವುದಾದರೂ ಹೇಗೆ ಸಾಧ್ಯ?

ಆಕೆಯ ದೃಷ್ಟಿ ಸಹಜವಾಗಿಯೆ ಕಿಟಕಿಯಲ್ಲಿ ಮುಖವಿಟ್ಟು ಕುಳಿತ ವ್ಯಕ್ತಿಯ ಕಡೆಗೆ ಹೊರಳಿತು. ಆತನುಟ್ಟ ಕಾವೀಬಟ್ಟೆಯನ್ನೂ ನರೆತ ಗಡ್ಡ ವಿಶಾಸೆಗಳಿಂದೊಡಗೂಡಿದ ಮುಖವನ್ನೂ ಕಂಡು, ಆಕೆಗೆ ಆಶ್ಚರ್ಯದ ಆಘಾತವಾದಂತಾಯಿತು. ತಮ್ಮೂರಿನ ಮಠದ ಸ್ವಾಮಿಗಳಾಗಿದ್ದ ಪ್ರಭು ಸ್ವಾಮಿಗಳೇ ಅವರೆನ್ನುವಲ್ಲಿ ಯಾವ ಸಂದೇಹವೂ ಇರಲಿಲ್ಲ. ಒಂದು ತಿಂಗ ಳಿಗೆ ಹಿಂದೆ ಮಠವನ್ನು ತೊರೆದು ಎಲ್ಲಿಗೋ ಹೊರಟುಹೋಗಿದ್ದ ಸ್ವಾಮಿ ಗಳು ಈ ಗಾಡಿಯಲ್ಲಿ ಯಾವಾಗ ಬಂದರು? ಎಲ್ಲಿಂದ ಬಂದರು? ಸ್ವಾಮಿಗ ಳೊಂದಿಗೆ ಆಕೆಗೆ ಸಾಕಷ್ಟು ಪರಿಚಯವಿತ್ತು. ಚಿಕ್ಕಮಗುವಾಗಿದ್ದಾಗಿ ನಿಂದ ಆಕೆ ಅವರನ್ನು ಕಂಡಿದ್ದಳು. ಅವರೂ ಆಕೆಯನ್ನು ವಾತ್ಸಲ್ಯದಿಂದ ಮಾತನಾಡಿಸಿದ್ದರು. ಆದರೆ—ಇಂದು ರೈಲುಗಾಡಿಯಲ್ಲಿ ತನ್ನನ್ನು ಕಂಡರೂ ಹೀಗೇಕೆ ಮುಖ ತಿರುಗಿಸಿ ಮೌನವಾಗಿ ಕುಳಿತಿದ್ದಾರೆ? ತಾವು ಈ ಡಬ್ಬಿಯ ನ್ನೇರಿ ಬಂದುದನ್ನು ಅವರು ನೋಡಿರಬಹುದೇ ಇಲ್ಲವೆ? ಛೆ, ನೋಡಿರಲೇ ಬೇಕು. ಎಂಥ ವಿಚಿತ್ರ ಸ್ವಭಾವದವರಾಗಿದ್ದರೂ ಸರಿಯೆ, ರೈಲುಗಾಡಿ ಯಲ್ಲಿ ಹೊಸದಾಗಿ ಹತ್ತುವವರನ್ನು ಹೊರಳಿ ನೋಡಿಯೆ ನೋಡುತ್ತಾರೆ. ಇವರೂ ನೋಡಿರಲು ಸಾಕು. ತನ್ನನ್ನು ಅವರು ಖಂಡಿತವಾಗಿಯೂ ಗುರುತಿಸಿರಬೇಕು. ತಾನು ಬಸಪ್ಪಸೆಟ್ಟರ ಮಗಳೆಂಬುದನ್ನು ಅವರು ಬಲ್ಲರು. ತನ್ನ ತಾಯಿ ಅಕ್ಕನ ಬಳಗದ ಅಧ್ಯಕ್ಷಳೆಂಬುದನ್ನೂ ಬಲ್ಲರು. ಆ ಅಕ್ಕನ ಬಳಗದ ಬಗೆಗೆ ಅವರಲ್ಲಿ ಅಂಥ ಆಸಕ್ತಿಯೇನೂ ಇರಲಿಲ್ಲವಾದರೂ ವೈಯಕ್ತಿ ಕವಾಗಿ ತನ್ನ ತಾಯಿಯ ಬಗೆಗಾಗಲಿ, ತನ್ನ ಬಗೆಗಾಗಲಿ ಅವರಲ್ಲಿ ಯಾವ ವಿರೋಧ ಭಾವವೂ ಇರಲಿಲ್ಲ. ತಾವು ಮಠಕ್ಕೆ ಹೋದಾಗಲೆಲ್ಲ ಪ್ರೀತಿ ಯಿಂದಲೇ ತಮ್ಮನ್ನು ಬರಮಾಡಿಕೊಳ್ಳುತ್ತಿದ್ದರು. ಅಂಥವರು ಈಗ ಮೌನ ವಾಗಿರುವುದೇಕೆಂಬುದು ಸರಸುವಿಗೆ ಹೊಳೆಯಲಿಲ್ಲ. ಶಿವಮೂರ್ತಿಯೂ ಅವರನ್ನು ಗುರುತಿಸಿದ್ದ. ಅವರ ಮೌನವನ್ನು ಕಂಡು ದಿಗಿಲುಗೊಂಡಿದ್ದ.

ಹತ್ತು ಹದಿನೈದು ನಿಮಿಷ ಹಾಗೆಯೆ ಮೌನದಲ್ಲಿ ಕಳೆದುಹೋದುವು. ಸ್ವಾಮಿಗಳು ಕಿಟಕಿಯಿಂದ ಈಚೆಗೆ ಮುಖ ಹೊರಳಿಸಲಿಲ್ಲ. ಅವರ ದೃಷ್ಟಿಯೂ ಅತ್ತ ಹೊರಳಲಿಲ್ಲ. ಎಷ್ಟು ಹೊತ್ತು ಹಾಗೆಯೆ ಕುಳಿತಿದ್ದಾರು, ಕತ್ತು ನೋಯತೊಡಗಿದ ಬಳಿಕವಾದರೂ ಅವರಿತ್ತ ಹೊರಳಿಯೆ ಹೊರಳು

ವರು ಎಂದು ಕಾದು ಕುಳಿತಿದ್ದ ಸರಸೂಗೆ ನಿರಾಸೆಯಾಗತೊಡಗಿತು. ಅವರನ್ನು ಮಾತನಾಡಿಸುವ ಕುತೂಹಲವಂತೂ ತಡೆಯಲಸಾಧ್ಯವಾಗಿದ್ದಿತು. ಅಂತೆಯೆ ಆಕೆ ಕುಳಿತ ಸ್ಥಳದಿಂದ ಮೇಲಕ್ಕೆದ್ದು ಸ್ವಾಮಿಗಳ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದಳು. ಆಗ ಮಾತ್ರ ಅವರ ದೃಷ್ಟಿ ಅತ್ತ ತಿರುಗಿತು. ತಮ್ಮ ಬಲಗೈಯನ್ನೆತ್ತಿ ಆಕೆಯನ್ನು ಹರಸುತ್ತ ಅವರೆಂದರು: "ಶಿವನು ನಿನಗೆ ಕಲ್ಯಾಣ ಮಾಡಲಿ." ಅವರ ಕಣ್ಣುಗಳಲ್ಲಿ ನೀರು ತುಂಬಿಬಂದಿದ್ದುವು. ಬಹಳ ಹೊತ್ತಿನಿಂದ ಕಣ್ಣೀರು ಬರುತ್ತಿದ್ದಿತೇನೊ, ಕಣ್ಣುಗಳೆರಡೂ ಕೆಂಪಗಾಗಿದ್ದುವು. ಸ್ವಾಮಿಗಳು ಅತ್ಯಂತ ದುಃಖದಲ್ಲಿರುವರೆಂಬುದೂ, ಏನನ್ನೋ ನೆನೆದುಕೊಂಡು ಕಣ್ಣೀರು ಸುರಿಸುತ್ತಿರುವರೆಂಬುದೂ ಸ್ಪಷ್ಟವಾಗಿದ್ದಿತು.

"ಕಣ್ಣೀರು ಯಾಕೆ ಸ್ವಾಮಿಗಳೇ ?" ಎಂದು ಕಳವಳದಿಂದ ಕೇಳಿದಳು ಸರಸು. ಶಿವಮೂರ್ತಿಯೂ ಕುತೂಹಲದಿಂದ ಅವರನ್ನೇ ದಿಟ್ಟಿಸುತ್ತಲಿದ್ದ.

ಸ್ವಲ್ಪ ಹೊತ್ತಿನ ವರೆಗೆ ಸರಸುವಿನ ಪ್ರಶ್ನೆಗೆ ಯಾವ ಉತ್ತರವೂ ದೊರೆಯಲಿಲ್ಲ. ತಮ್ಮ ಕಾವಿ ಅಂಗಿಯ ತೋಳಿನಿಂದ ಕಣ್ಣುಗಳನ್ನೊರೆಸಿಕೊಂಡು ಸ್ವಾಮಿಗಳು ಗಂಭೀರ ಸ್ವರದಲ್ಲಿ ನುಡಿದರು :

"ನಮ್ಮ ಜನರ ಅಜ್ಞಾನ ಎಂಥ ಅನಾಹುತ ಮಾಡಬಲ್ಲುದು ಎಂಬುದರ ಪ್ರತ್ಯಕ್ಷ ಅನುಭವ ಬಂದುದರಿಂದ ವ್ಯಸನವಾಗಿತ್ತು ತಂಗೀ."

"ಅನಾಹುತ ?"

"ಅನಾಹುತವಲ್ಲದಿನ್ನೇನು ತಂಗೀ ? ಈ ರಾತ್ರಿ ನಿಮ್ಮೂರಿನಲ್ಲಿ ನಡೆದ ಘಟನೆಗಳನ್ನು ಕೇಳಿದರೆ ವೀರಶೈವರಾದವರೆಲ್ಲ ನಾಚಿ ತಲೆ ತಗ್ಗಿಸಬೇಕು. ನೀವಿಬ್ಬರೂ ಎಲ್ಲಿಂದ ಬಂದಿರಿ ? ಇದೇ ನಿಲ್ದಾಣದಲ್ಲಿ ರೈಲು ಹತ್ತಿದಿರಿ ತಾನೆ ?"

"ಹೌದು. ತಾವು ?"

"ನಾನೂ ಅಲ್ಲೇ ಹತ್ತಿದ್ದು. ಬಹಳ ದುಃಖದಲ್ಲಿದ್ದೆ. ನೀವು ಬಂದುದು ನನಗೆ ಗೊತ್ತಾಗಲಿಲ್ಲ. ಊರಲ್ಲಿ ನಡೆದುದನ್ನು ನೀವು ಕೇಳಿಯೆ ಇಲ್ಲವೆ ?"

"ಇಲ್ಲ ಬುದ್ಧೀ. ಏನೋ ಗದ್ದಲವಾಗುತ್ತಿದೆಯೆಂಬುದು ಮಾತ್ರ

ಗೊತ್ತಾಯಿತು. ಅದೇನು, ಅದಕ್ಕೆ ಕಾರಣವೇನು ಎಂಬುದು ಮಾತ್ರ ತಿಳಿಯು ಲಿಲ್ಲ."

"ಅದಕ್ಕೆ ಕಾರಣ ಇನ್ನಾರೂ ಅಲ್ಲ. ನಾನೇ."

ಸರಸು ಬೆಚ್ಚಿಬಿದ್ದು ಕೇಳಿದಳು : "ತಾವು ? ಅದು ಹೇಗೆ ?"

"ಅದೊಂದು ದೊಡ್ಡ ಕತೆ. ಕೇಳಬಯಸುತ್ತೀಯಾ? ನಿನಗೆ ನಿದ್ರೆ ಬರುತ್ತಿಲ್ಲವಷ್ಟೆ ?"

"ಇಲ್ಲ ಬುದ್ಧೀ. ಪ್ರವಾಸಕಾಲದಲ್ಲಿ ಎಲ್ಲಿಯ ನಿದ್ರೆ ? ಏನಾಯಿತು ಹೇಳಿರಿ."

"ಈಗೊಂದು ತಿಂಗಳ ಕೆಳಗೆ ನಾನು ಮಠ ಬಿಟ್ಟು ಹೋದದ್ದು ನಿನಗೆ ಗೊತ್ತಿದೆ. ಈ ಮಠ, ಇಲ್ಲಿಯ ವಾತಾವರಣ ಬೇಸರವಾದುದರಿಂದಲೇ ನಾನು ಹೊರಟುಹೋದದ್ದು. ಅನಂತರ ಮಲ್ಲಪ್ಪಸೆಟ್ಟರು ಸಿದ್ಧವೀರಸ್ವಾಮಿಗಳನ್ನು ಕರೆದುತಂದು ಪೀಠಕ್ಕೇರಿಸಿದರು. ಅವರು ತರುಣರು, ಉತ್ಸಾಹಿಗಳು. ಶ್ರಾವಣಮಾಸದ ಉತ್ಸವಾದಿಗಳನ್ನು ವಿಜೃಂಭಣೆಯಿಂದ ನಡೆಯಿಸಿದರೆಂದು ಕೇಳಿದ್ದೆ. ನನ್ನಂಥ ವೈರಾಗಿಯ ಸಹವಾಸದಿಂದ ಬೇಸರುಗೊಂಡಿದ್ದ ಊರ ಜನರೆಲ್ಲ ಇನ್ನು ಮೇಲಾದರೂ ಸಂತೋಷದಿಂದಿದ್ದಾರೆಂದು ನಾನು ತಿಳಿದಿದ್ದೆ. ನನ್ನ ಪಾಡಿಗೆ ನಾನು ಒಂದು ಹಳ್ಳಿಯಲ್ಲಿದ್ದು ರೈತರ ಸಹವಾಸದಲ್ಲಿ ದಿನಗಳೆಯುತ್ತಿದ್ದೆ. ಮೊನ್ನೆ ಅಕಸ್ಮಾತ್ತಾಗಿ ಚೆನ್ನಪ್ಪಗೌಡರು ಆ ಹಳ್ಳಿಗೆ ಬಂದು ತಮ್ಮ ತಾಯಿಗೆ ಜಡ್ಡಾಗಿದೆಯೆಂಬ ನೆಪ ಹೇಳಿ ನನ್ನನ್ನು ಬಲವಂತದಿಂದ ಈ ಊರಿಗೆ ಎಳೆದುತಂದರು. ಮುದುಕಿಗೆ ಜಡ್ಡೇನೋ ಇತ್ತು. ಆದರೆ— ವೃದ್ಧಾಪ್ಯದಲ್ಲಿ ಎಲ್ಲರಿಗೂ ಸ್ವಾಭಾವಿಕವಾಗಿ ಬರುವ ಜಡ್ಡು ಅದು. ಅಂಥ ಗಂಭೀರ ಸ್ಥಿತಿಯೇನೂ ಇರಲಿಲ್ಲ. ಒಂದು ದಿನ ಇದ್ದು ಹೊರಟುಬಿಡಬೇಕೆಂದು ನಾನು ಯೋಚಿಸುತ್ತಲಿದ್ದೆ. ಆದರೆ ಈ ದಿನ ರಾತ್ರಿ ಒಮ್ಮಿಂದೊಮ್ಮೆಲೆ ನನ್ನ ಮೇಲೆ ದುರ್ಧರ ಪ್ರಸಂಗವೊಂದು ಬಂದು ಬಿತ್ತು. ಅದನ್ನು ನೆನಸಿಕೊಂಡರೆ ಈಗಲೂ ಮೈ ಜುಮ್ಮೆನ್ನುತ್ತದೆ...."

ಇಷ್ಟು ಹೇಳಿ ಸ್ವಾಮಿಗಳು ಸ್ವಲ್ಪ ತಡೆದು ನಿಂತರು. ಅವರೆಂದ ಹಾಗೆ ನಿಜಕ್ಕೂ ಅವರ ಶರೀರ ಜುಮ್ಮೆಂದ ಹಾಗೆ ತೋರುತ್ತಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಹೇಳತೊಡಗಿದರು :

"ಇವೊತ್ತು ಜಾತ್ರೆಗಾರಂಭವಾಯಿತಲ್ಲ. ರಾತ್ರಿ ಹತ್ತು ಗಂಟೆಯ ಹೊತ್ತಿಗೆ ದೇವರ ಉತ್ಸವಕ್ಕೆ ಬಂದು ಹೋಗಬೇಕೆಂದು ಸಿದ್ಧವೀರಸ್ವಾಮಿಗಳು ಹೇಳಿಕಳಿಸಿರುವುದಾಗಿ ಗೌಡರು ಹೇಳಿದರು. ಮತ್ತೆ ಈ ಮಠಕ್ಕೆ ಕಾಲುಹಾಕಲು ಮನಸ್ಸಿರಲಿಲ್ಲ ನನಗೆ. ಆದರೆ ಸ್ವಾಮಿಗಳು ಹೇಳಿಕಳಿಸಿದರೂ ಹೋಗದಿರುವುದೊಳ್ಳೆಯದಲ್ಲವೆಂದು ಬಗೆದು ಹೊರಡಬೇಕಾಯಿತು. ಗೌಡರು ಬೇಗ ಹೊರಡಲಿಲ್ಲ. ಸುಮಾರು ಮಧ್ಯರಾತ್ರಿಯ ಹೊತ್ತಿಗೆ ಕರೆದುಕೊಂಡು ಹೊರಟರು. ನಾವು ಮಠಕ್ಕೆ ಹೋದಾಗ ಅಲ್ಲಿ ಆಟಪಾಟ ನಡೆಧಿದ್ದುವು. ಮಠದ ಕೈಸಾಲೆಯಲ್ಲಿ ಪೀಠವನ್ನಿರಿಸಲಾಗಿದ್ದಿತು. ಅಲ್ಲಿಗೆ ಕರೆದೊಯ್ದು ನನ್ನನ್ನು ಕೂಡ್ರಿಸಿ ಏಳೆಂಟು ಜನ ನನ್ನ ಸುತ್ತ ಕಾವಲಿಗಾಗಿ ನಿಂತರು. ಸಿದ್ಧವೀರಸ್ವಾಮಿಗಳೆಲ್ಲಿಯೂ ಕಾಣಿಸಲಿಲ್ಲವಾದ್ದರಿಂದ ನಾನು ಅವರಿಗಾಗಿ ವಿಚಾರಿಸಿದಾಗ—"ಅವರನ್ನು ಉಳವೀ ಜಾತ್ರೆಗೆ ಕಳಿಸಲಾಗಿದೆ. ಇನ್ನು ಮೇಲೆ ನೀವೇ ಸ್ವಾಮಿಗಳು" ಎಂದು ಉತ್ತರ ಬಂದಿತು. ಆಗ ನನಗೆ ನಿಜಕ್ಕೂ ಗಾಬರಿಯಾಯಿತು. ಸಿದ್ಧವೀರಸ್ವಾಮಿಗಳಿಗೆ ಪ್ರಾಣಾಪಾಯವೇನೂ ಆಗಿರಲಾರದಷ್ಟೆ—ಎಂದು ಚಿಂತಿಸತೊಡಗಿದೆ. ಮುಂದೆ ನಡೆದುದನ್ನು ಹೇಗೆ ಹೇಳಲಿ? ನನ್ನ ಕಣ್ಣೆದುರಿಗೇ ಬಡಿದಾಟಕ್ಕಾರಂಭವಾಯಿತು. ನನ್ನ ಕಣ್ಣಿಗೆ ಕತ್ತಲೆ ಬಂದಂತಾಯಿತು. ಹೇಗೋ ಸಾವರಿಸಿಕೊಂಡು ಎದ್ದು ಬಂದೆ...."

"ಚೆನ್ನಪ್ಪಗೌಡರು ತಮ್ಮನ್ನು ಹಾಗೇಕೆ ಮೋಸಗೊಳಿಸಿದರು?"

"ಮೋಸವೇನು ಬಂತು ತಾಯಿ ಅದರಲ್ಲಿ? ಅವೆಲ್ಲವೂ ಅಜ್ಞಾನದ ಪರಿಣಾಮ. ಗೌಡರಿಗೆ ನನ್ನ ಬಗ್ಗೆ ಅಂಥ ಅಭಿಮಾನ. ನಾನು ಈ ಮಠದಿಂದ ಹೊರಟುಹೋದ ಮೇಲೆ ಸಿದ್ಧವೀರಸ್ವಾಮಿಗಳನ್ನು ಪೀಠಕ್ಕೇರಿಸಿದ್ದು ಅವರಿಗೆ ಸರಿಬಂದಿರಲಿಲ್ಲ. ಮಲ್ಲಪ್ಪಸೆಟ್ಟರಿಗೂ ಗೌಡರಿಗೂ ಮೊದಲಿನಿಂದ ಮನಸ್ತಾಪ ಬೇರೆ ಇದೆಯಲ್ಲವೆ? ಸಿದ್ಧವೀರಸ್ವಾಮಿಗಳನ್ನು ಸೆಟ್ಟರು ಕರೆದು ತಂದುದರಿಂದ ಗೌಡರಿಗೆ ಹಟ ಹುಟ್ಟಿರಬೇಕು. ನನ್ನನ್ನು ಮತ್ತೆ ಕರೆದುಕೊಂಡು ಬಂದು ಪೀಠಕ್ಕೇರಿಸಲೇಬೇಕೆಂದು ಹಟ ತೊಟ್ಟು ಅವರು ಈ ರೀತಿ ಮಾಡಿರಬೇಕು."

"ಆದರೆ ಈ ರೀತಿ ಸುಳ್ಳು ಹೇಳಿ ತಮ್ಮನ್ನಿಲ್ಲಿಗೆ ಕರೆದುತರಬೇಕಾದ ಅಗತ್ಯವೇನಿದ್ದಿತು?" ಎಂದು ಪ್ರಶ್ನಿಸಿದ ಶಿವಮೂರ್ತಿ.

"ಗೌಡರು ಮೊದಲೆ ಎಲ್ಲವನ್ನೂ ಹೇಳಿಬಿಟ್ಟಿದ್ದಲ್ಲಿ ನಾನು ಅವರೊಂದಿಗೆ ಬರುತ್ತಿರಲೇ ಇಲ್ಲವಲ್ಲ ? ನನ್ನ ಸ್ವಭಾವ ಅವರಿಗೆ ಗೊತ್ತು. ನಾನು ಇಂಥ ಗದ್ದಲಕ್ಕೆಲ್ಲ ಹೋಗುವವನಲ್ಲ. ಮಠದ ಆಸ್ತಿ, ಅಧಿಕಾರಗಳ ಬಗ್ಗೆ ಯಾವ ಆಸೆಯೂ ನನಗಿಲ್ಲ. ಸಿದ್ಧವೀರಸ್ವಾಮಿಗಳು ಅದನ್ನೆಲ್ಲ ನಡಸಿಕೊಂಡು ಹೋಗಬಲ್ಲವರು. ಅಂದಮೇಲೆ ಅವರೇ ಪೀಠದ ಅಧಿಕಾರಿಗಳಾದುದು ಒಳ್ಳೆಯದೇ ಆಗಲಿಲ್ಲವೆ ? ನನ್ನ ಮಟ್ಟಿಗೆ ನಾನು ಯಾವುದೋ ಒಂದು ಹಳ್ಳಿಯಲ್ಲಿ ಸಮಾಧಾನದಿಂದ ಕಾಲ ಕಳೆಯುತ್ತಿದ್ದೆ. ಈ ಪಟ್ಟಣದ ಗದ್ದಲದಲ್ಲಿ ಬಂದು ಬೀಳುವ ಇಚ್ಛೆ ಕೊಂಚವೂ ಇರಲಿಲ್ಲ. ಗೌಡರು ಇದನ್ನೆಲ್ಲ ಅರಿತುಕೊಂಡಿದ್ದರಾದುದರಿಂದ ತಾಯಿಯ ಕಾಯಿಲೆಯ ನೆಪ ಹೇಳಿ ನನ್ನನ್ನು ಕರೆದು ತಂದರು. ಸಿದ್ಧವೀರಸ್ವಾಮಿಗಳು ಕರೆಯುತ್ತಿರುವರೆಂದು ಹೇಳಿ ಮಠಕ್ಕೂ ಕರೆದೊಯ್ದರು. ಸಿದ್ಧವೀರಸ್ವಾಮಿಗಳಿಗೆ ನಾನಿಲ್ಲಿಗೆ ಬಂದ ವಿಷಯವೇ ಗೊತ್ತಿರಲಾರದು. ಪಾಪ, ಅವರಿಗೂ ಹೊಡೆತ ಬಿದ್ದಿತೊ ಏನೊ...."
ಎಂದು ನುಡಿದು ಸ್ವಾಮಿಗಳು ಮತ್ತೆ ಕಣ್ಣುಗಳನ್ನೊರೆಸಿಕೊಂಡರು.

ಕೆಲಹೊತ್ತು ಎಲ್ಲರೂ ಮೌನವಾಗಿ ಕುಳಿತಿದ್ದರು. ಕತ್ತಲೆಯನ್ನು ಭೇದಿಸಿಕೊಂಡು ರೈಲು ಭರದಿಂದ ಧಾವಿಸುತ್ತಿತ್ತು.

"ಒಂದು ಮಠದ ಅಧಿಕಾರಕ್ಕಾಗಿ ಇಷ್ಟು ಬಡಿದಾಟ, ಹೊಡೆದಾಟ, ಮನಸ್ತಾಪ, ವೈಮನಸ್ಯ, ಒಡಕು....ಈ ಸಮಾಜ ಎಂಥ ಅಜ್ಞಾನದಲ್ಲಿ ಮುಳುಗಿದೆ ! ಸಮಾಜದಲ್ಲಿ ನೀತಿಯನ್ನೂ ಧರ್ಮವನ್ನೂ ಕಾಯ್ದುಕೊಂಡು ಹೋಗುವುದಕ್ಕಾಗಿ ಈ ಮಠಗಳು ಸ್ಥಾಪಿಸಲ್ಪಟ್ಟುವು. ಈ ಮೂಲ ಉದ್ದೇಶ ಎಲ್ಲಿಯೊ ಉಳಿದು ಇಂದು ಮಠಗಳೇ ಅನೀತಿಯ, ಅಧರ್ಮದ ಕೇಂದ್ರಸ್ಥಳಗಳಾಗುತ್ತಿವೆಯಲ್ಲ....ಸಮಾಜದಲ್ಲಿ ಒಕ್ಕಟ್ಟನ್ನು ಕಾಯುವುದಕ್ಕಾಗಿ ಯಾವ ಮಠಗಳು ಸ್ಥಾಪಿಸಲ್ಪಟ್ಟವೊ ಆ ಮಠಗಳಿಗಾಗಿಯೆ ಈಗ ಒಡಕು ಹುಟ್ಟುವುದೆಂದರೆ ! ನಾನಿತ್ತ ಬಂದ ಬಳಿಕ ಬಡಿದಾಟ ಯಾವ ಸ್ವರೂಪಕ್ಕೆ ಮುಟ್ಟಿದೆಯೊ ಏನೊ. ಎರಡು ಪಕ್ಷಗಳವರಿಗೂ ಭೀಕರ ಹೊಡೆದಾಟಕ್ಕಾರಂಭವಾಗಿರಬಹುದು. ಪೋಲೀಸರು ಬಂದಿರಬಹುದು. ಬಂಧನಗಳಾಗಿರಬಹುದು. ಖಟ್ಲೆ ಸುರುವಾಗಬಹುದು. ಈ ರಾತ್ರಿಯ ಅನಾಹುತದಿಂದ ಇನ್ನೂ ಎಂಥೆಂಥ ಪರಿಣಾಮವಾಗಲಿದೆಯೊ....ಎಲ್ಲಿಗೆ ಹೋಗುತ್ತಿದೆ ಈ ಸಮಾಜ ?"

"ಹೀಗೇ ನಡೆಯುತ್ತೊಡಗಿದರೆ ಇಂದಿಲ್ಲ ನಾಳೆ ಇದು ರಸಾತಳಕ್ಕೆ ಹೋಗುವುದು ಖಂಡಿತ," ಎಂದ ಶಿವಮೂರ್ತಿ.

"ನಿನ್ನ ಮಾತು ನಿಜ ತಮ್ಮಾ. ಯಾವ ಸಮಾಜದಲ್ಲಿ ಒಕ್ಕಟ್ಟಿಲ್ಲವೋ ಅದು ಉಳಿಯುವುದಾದರೂ ಹೇಗೆ ಸಾಧ್ಯ ? ಶರಣರ ಕಾಲದ ಉದಾತ್ತ ತತ್ವಗಳೆಲ್ಲ ಪುಸ್ತಕದ ತತ್ವಗಳಾಗಿ ಉಳಿದಿವೆ. ಲಿಂಗವಿದ್ದವರೆಲ್ಲ ಒಂದೇ-ಅವರದೆಲ್ಲ ಒಂದೇ ಸಮಾಜ–ಎಂದು ಹೇಳಿದರು ಶರಣರು. ನಾವಿಂದು ಆ ದಿವ್ಯ ಸಂದೇಶವನ್ನು ಮರೆತುಬಿಟ್ಟಿದ್ದೇವೆ. ಜಾತಿಪದ್ಧತಿಯ ವಿರುದ್ಧ ಬಂಡಾಯದ ಬಾವುಟ ಎತ್ತಿದ ಸಮಾಜವೇ ಇಂದು ತನ್ನಲ್ಲಿಯೆ ನೂರಾರು ಜಾತಿಗಳನ್ನು ನಿರ್ಮಿಸಿಕೊಂಡಿದೆಯಲ್ಲ? ಪಂಚಮಸಾಲಿಗಳು, ಬಣಜಿಗರು, ಸಾದರು....ಇವರಿವರಲ್ಲಿ ಸಂಬಂಧ ನಡೆಯುವಂತಿಲ್ಲ. ಪಂಚಮಸಾಲಿಯವರಿಗಿಂತ ನಾವು ಹೆಚ್ಚಿನವರು ಎಂದು ಬಣಜಿಗರು ಹೇಳಿಕೊಳ್ಳುತ್ತಾರೆ. ಬಣಜಿಗರಿಗಿಂತ ನಾವೇ ಶ್ರೇಷ್ಠರೆಂದು ಪಂಚಮಸಾಲಿಯವರು ಹೇಳಿಕೊಳ್ಳುತ್ತಾರೆ. ಇವರೆಲ್ಲರಿಗಿಂತ ನಾವೇ ಹೆಚ್ಚಿನವರೆಂದು ಸಾದರು ಸಾರುತ್ತಾರೆ. ಜಂಗಮರದಂತೂ ಒಂದು ಬೇರೆ ಜಾತಿಯೇ ಆಗಿದೆ. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬಿ–ಎಂಬ ಬಸವಣ್ಣನವರ ಆ ಅಮರ ಸಂದೇಶವನ್ನು ನಾವೆಲ್ಲ ಕಡೆಗಣಿಸಿಬಿಟ್ಟೆವು....ನಮ್ಮ ಗತಿ ಹೀಗಾಯಿತು...." ಎಂದು ಹೇಳುತ್ತಿದ್ದ ಹಾಗೆ ಭಾವಾವೇಶದಿಂದ ಸ್ವಾಮಿಗಳ ಕಣ್ಣುಗಳಲ್ಲಿ ನೀರೂರಿತು.

"ಬಸವಣ್ಣನವರನ್ನು ಕಡೆಗಣಿಸಿಲ್ಲವಲ್ಲ ಬುದ್ಧಿ. ಪ್ರತಿ ವರ್ಷ ಬಸವ ಜಯಂತಿ ಉತ್ಸವ ಮಾಡುತ್ತಲೇ ಇರುವರಲ್ಲ ಸಮಾಜದವರು? ಕರ್ನಾಟಕದ ಎಲ್ಲ ಊರುಗಳಲ್ಲೂ ಬಸವಜಯಂತಿ ವಿಜೃಂಭಣೆಯಿಂದ ನಡೆಯುತ್ತದೆ...."

"ಹೌದಪ್ಪ ಮಗಳೇ....ಬಸವಜಯಂತಿ ನಡೆಯುತ್ತದೆ....ಬಲು ವಿಜೃಂಭಣೆಯಿಂದ ನಡೆಯುತ್ತದೆ. ದೂರದೂರದ ನಗರಗಳಿಂದ ಭಾಷಣಕಾರರು ಬರುತ್ತಾರೆ. ಬಸವಣ್ಣನವರ ಜೀವನ ತತ್ವಗಳನ್ನು ಕುರಿತು ಗಂಟೆಗಂಟೆಗಳ ವರೆಗೆ ಭಾಷಣ ಮಾಡುತ್ತಾರೆ. ಜನರು ಕೇಳುತ್ತಾರೆ. ಭಾಷಣಕಾರರು ತಮ್ಮ ಊರಿಗೆ ಹೋಗುತ್ತಾರೆ. ಜನರು ಮನೆಗಳಿಗೆ ಹಿಂದಿರುಗುತ್ತಾರೆ. ಮುಂದೆ ಒಂದು ವರ್ಷದ ವರೆಗೆ ಬಸವಣ್ಣನವರ ನೆನಪೇ ಇಲ್ಲ ಯಾರಿಗೂ.

ಅವರ ಜೀವನದಂತೆ ತಮ್ಮ ಜೀವನವೂ ಆಗಬೇಕು, ಅವರ ತತ್ವಗಳಲ್ಲಿ ನೂರಕ್ಕೆ ಐವತ್ತನ್ನಾದರೂ ಆಚರಣೆಯಲ್ಲಿ ತರಬೇಕು ಎಂಬ ಯೋಚನೆಯೇ ಇಲ್ಲ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂದರು ಬಸವಣ್ಣನವರು. ವರ್ಷವರ್ಷವೂ ಬಸವಜಯಂತಿಯ ಕಾಲಕ್ಕೆ ಈ ವಚನ ವನ್ನು ಹಾಡಿ ಹಾಡಿ ಹೊಗಳುತ್ತೇವೆ. ವಿದ್ಯಾರ್ಥಿಗಳು ಅದನ್ನು ಪಾಠ ಮಾಡಿ ರಾಗವಾಗಿ ಅಂದು ತೋರಿಸಿ ಬಹುಮಾನ ಪಡೆಯುತ್ತಾರೆ. ಪರಿ ಣಾಮವೇನು? ಏನೂ ಇಲ್ಲ. ಮತ್ತೆ ಕಳ್ಳತನವೆ, ಕೊಲೆಯೆ, ಸುಲಿಗೆಯೆ, ಸುಳ್ಳು ಹೇಳುವುದಕ್ಕಂತೂ ಲೆಕ್ಕವಿಲ್ಲ. ಇಂಥ ಜಯಂತಿಯ ಆಚರಣೆಯೂ ಒಂದು ಆಚರಣೆಯೆ? ಇದೆಲ್ಲ ಕೇವಲ ನಾಟಕ, ತಮಾಷೆ. ಮೂರು ದಿನವೊ, ಆರು ದಿನವೊ, ಭಾಷಣಗಳನ್ನು ಮಾಡಿಸಿಬಿಟ್ಟರಾಯಿತೇ? ನೂರನೋದಿ, ನೂರ ಕೇಳಿದರೇನು? ಆಸೆ ಸರಿಯದು, ರೋಷ ಬಿಡದು. ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ ನಗುವ ಕೂಡಲ ಸಂಗಮದೇವಾ....ಬಸವಣ್ಣನವರು ವೀರಶೈವರು, ಆದ್ದರಿಂದ ನಾವು ಅವರ ಜಯಂತಿಯನ್ನಾಚರಿಸಿ ಉತ್ಸವ ಮಾಡಿ ಅವರನ್ನು ಹೊಗಳಿ ಕುಳಿತರಾಯಿತೇ?"

"ಈ ಸಮಾಜವನ್ನು ಹೇಗೆ ಸುಧಾರಿಸುವುದು ಬುದ್ಧೀ?"

"ಸುಧಾರಿಸುವುದು? ಸುಧಾರಣೆಯೆಂದರೆ ಸಾಮಾನ್ಯವಲ್ಲ ತಮ್ಮ. ಬಸವಣ್ಣನಂಥವರೇ ಎಷ್ಟು ಕಷ್ಟಪಡಬೇಕಾಯಿತು....ಹಾಗೆ ಕಷ್ಟಪಟ್ಟು ಕೆಲಸ ಮಾಡಬಲ್ಲವರು ಇಂದು ಸೊಂಟ ಕಟ್ಟಿ ಮುಂದೆ ಬರಬೇಕು. ಎಲ್ಲಿದ್ದಾರೆ ಅಂಥ ಜನ?"

ಹೌದು. ಎಲ್ಲಿದ್ದಾರೆ ಅಂಥ ಜನ? ಸುಧಾರಣೆಯಾಗಬೇಕೆಂದು ಮಾತ ನಾಡುವವರಿಗೇನೂ ಕೊರತೆಯಿಲ್ಲ. ಆದರೆ-ಮಾತನಾಡಿದಷ್ಟು ಉತ್ಸಾಹ ದಿಂದ ಕೆಲಸ ಮಾಡಬಲ್ಲವರು ತೀರ ವಿರಳ. ಇಲ್ಲವೇ ಇಲ್ಲವೆಂದರೂ ಸಲ್ಲು ವುದು. ಮಾಡಬೇಕೆಂಬ ಅಪೇಕ್ಷೆ ತನಗೂ ಇದೆ. ಆದರೆ ತನ್ನಿಂದ ಆಗ ಬಹುದಾದ ಕೆಲಸವೆಷ್ಟು? ಏನು?-ಶಿವಮೂರ್ತಿ ತನ್ನಷ್ಟಕ್ಕೆ ತಾನೇ ಈ ಪ್ರಶ್ನೆ ಕೇಳಿಕೊಂಡ. ಉತ್ತರ ಹೊರಡಲಿಲ್ಲ.

ಸ್ವಾಮಿಗಳು ಹೇಳುತ್ತಿದ್ದರು:

"ಇನ್ನೊಂದು ಸಾಮಾಜಿಕ ಕ್ರಾಂತಿಯಾದಾಗಲೇ ಎಲ್ಲವೂ ಸುಧಾರಿಸುವುದು ತಮ್ಮ. ಮೇಲುಮೇಲಿನ ಸುಧಾರಣೆಯಿಂದ ಏನೂ ಉಪಯೋಗವಾಗದು. ತಳಹದಿಯಿಂದಲೇ ಪ್ರಾರಂಭಿಸಬೇಕಾಗುವುದು. ಸಮಾಜದ ಕಟ್ಟಡವೆಲ್ಲ ಗೆದ್ದಲು ತಿಂದು ಕೆಟ್ಟುಹೋಗಿದೆ. ಕೆಳಗಿನಿಂದ ಮೊದಲು ಮಾಡಿಕೊಂಡು ಬೇರೆ ಕಟ್ಟಡ ಕಟ್ಟಬೇಕಾಗುವುದು. ಆ ಕೆಲಸ ಮಾಡಲು ತರುಣರ ತಂಡ ಬೇಕು. ಎಲ್ಲಿದೆ ಅಂಥ ತರುಣರ ತಂಡ ?"

ಶಿವಮೂರ್ತಿ ಮೌನವಾಗಿದ್ದ.

"ತಾವೀಗ ಎಲ್ಲಿಗೆ ಹೊರಟಿರುವುದು ಬುದ್ಧೀ ?" ಎಂದು ಕೇಳಿದಳು ಸರಸು.

"ಒಂದು ಹಳ್ಳಿಯಲ್ಲಿ ಕೆಲಸವನ್ನು ಅರ್ಧಕ್ಕೇ ಬಿಟ್ಟು ಬಂದಿದ್ದೆನಮ್ಮ. ಅದನ್ನು ಮುಗಿಸಲು ಹೋಗಬೇಕಾಗಿದೆ."

"ಯಾವ ಹಳ್ಳಿ ಬುದ್ಧೀ ?"

"ಹಿಂದುಸ್ಥಾನದಲ್ಲಿರುವ ಲಕ್ಷಾವಧಿ ಹಳ್ಳಿಗಳಲ್ಲಿ ಹೀಗೇ ಒಂದು ಹಳ್ಳಿ. ಹಳ್ಳಿಯ ಹೆಸರು ಕೇಳಿ ಉಪಯೋಗವಾದರೂ ಏನು ?"

"ಇಲ್ಲಿಂದ ಎಷ್ಟು ದೂರವಿದೆ ?"

"ಇಲ್ಲೊಂದು ಚಿಕ್ಕ ಸ್ಟೇಶನ್ನಿಗಿಳಿದು ಹತ್ತು ಹನ್ನೆರಡು ಮೈಲು ನಡೆಯುತ್ತ ಹೋಗಬೇಕು."

ಸರಸು ಕಳವಳದಿಂದ ಕೇಳಿದಳು : "ಅಲ್ಲಿ ಎಲ್ಲಿ ಇಳಿದುಕೊಳ್ಳುತ್ತೀರಿ ಬುದ್ಧೀ ? ಊಟವೆಲ್ಲಿ, ಉಡುಗೆಯೆಲ್ಲಿ ?"

ಸ್ವಾಮಿಗಳು ನಕ್ಕು ನುಡಿದರು : "ಸನ್ಯಾಸಿಗೆ ಊಟ ವಸತಿಯ ಚಿಂತೆಯಾತಕ್ಕಪ್ಪ ತಂಗೀ ! ಅಕ್ಕಮಹಾದೇವಿ ಹೇಳಿಲ್ಲವೆ—ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಹಳ್ಳ ಭಾವಿಗಳುಂಟು, ಶಯನಕ್ಕೆ ಹಾಳು ಪೇಗುಲಗಳುಂಟು....ಊಟಕ್ಕೇನು ಕೊರತೆ ತಂಗೀ, ಶಿವ ಎಲ್ಲಿಂದಲಾದರೂ ತಂದು ಕೊಡುತ್ತಾನೆ. ಮಲಗಿಕೊಳ್ಳಲು ಊರೂರಿಗೆ ಬಸವಣ್ಣನ ಗುಡಿಗಳಿದ್ದೇ ಇವೆಯಲ್ಲ....ಸರಿ. ನಿಮ್ಮ ಸಮಾಚಾರವೇ ತಿಳಿಯಲಿಲ್ಲವಲ್ಲ ? ನೀವಿಬ್ಬರೂ ಎಲ್ಲಿಗೆ ಹೊರಟಿದ್ದೀರಿ ? ಏನು ಕತೆ ? ಸೆಟ್ಟರು, ತಾಯಿ ಎಲ್ಲರೂ ಎಲ್ಲಿ ?"

"ಅವರೆಲ್ಲ ಅಲ್ಲಿಯೆ ಇದಾರೆ."

"ಮತ್ತೆ ನೀವು ?"

"ನಾವು ನಮ್ಮ ದಾರಿ ಹಿಡಿದು ಹೊರಟಿದ್ದೀವೆ ಬುದ್ಧಿ," ಎಂದು ನಗುತ್ತಾ ಹೇಳಿದ ಶಿವಮೂರ್ತಿ.

ಸ್ವಾಮಿಗಳಿಗೆ ಅರ್ಥವಾಯಿತೇನೊ. ಅವರು ಹಸನ್ಮುಖದಿಂದ ನುಡಿದರು :

"ಶಿವನು ನಿಮಗೆ ಕಲ್ಯಾಣ ಮಾಡಲಿ. ಎಂದಾದರೂ ಅಗತ್ಯ ಬಿದ್ದರೆ ನನ್ನ ಹತ್ತಿರ ಬನ್ನಿ. ಏನೂ ಸಂಕೋಚ ಮಾಡಿಕೊಳ್ಳಬೇಡಿರಿ."

"ಸಂಕೋಚವೇನು ಬಿಡಿರಿ. ಆದರೆ ತಮ್ಮನ್ನು ಹುಡುಕುವುದಾದರೂ ಎಲ್ಲಿ ?"

"ಇಲ್ಲೇ ಎಲ್ಲಾದರೂ. ಇಷ್ಟರಲ್ಲೇ ಯಾವುದಾದರೊಂದು ಹಳ್ಳಿಯಲ್ಲಿ ಒಂದು ಆಶ್ರಮ ಸ್ಥಾಪಿಸಬೇಕೆಂದಿದ್ದೇನೆ. ಅದನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸುತ್ತುಮುತ್ತಲಿನ ಹಳ್ಳಿಗಳ ಸೇವೆ ಮಾಡಬೇಕು. ನಮಗೊಬ್ಬರು ಡಾಕ್ಟರರೂ ಬೇಕಾಗುವರು. ಯಾರಾದರೂ ಸಿಕ್ಕಬಹುದೇನು ?"

"ಡಾಕ್ಟರರೆ ? ಒಳ್ಳೆಯ ಸಂಬಳದ ಕೆಲಸಗಳನ್ನು ಬಿಟ್ಟು ಅವರು ಆಶ್ರಮಗಳಿಗೇತಕ್ಕೆ ಬಂದಾರು ಬುದ್ಧೀ ? ಅಲ್ಲಿ ಉಚಿತವಾಗಿ ಕೆಲಸ ಮಾಡಬೇಕಷ್ಟೆ ?"

"ಅರ್ಥಾತ್ ಉಚಿತವಾಗಿಯೆ. ಹೊಟ್ಟೆಯನ್ನೇ ಸರಿಯಾಗಿ ತುಂಬಿಸಿಕೊಳ್ಳಲಾರದ ನಮ್ಮ ಬಡರೈತರು ಡಾಕ್ಟರಿಗೆ ಹಣವನ್ನೆಲ್ಲಿಂದ ಕೊಟ್ಟಾರು?"

"ಹತ್ತಿಪ್ಪತ್ತು ಹಳ್ಳಿಗಳಿಗೊಬ್ಬರು ಸರಕಾರೀ ವೈದ್ಯರನ್ನು ನಿಯಮಿಸಲಾಗಿದೆಯಲ್ಲ? ಅವರೇಕೆ ಹಳ್ಳಿಗಳನ್ನು ಸುತ್ತಿ ಔಷಧೋಪಚಾರ ಮಾಡಬಾರದು ?"

"ಮಾಡಬಹುದು. ಆದರೆ ಅವರಿಗೂ ಫೀ ಕೊಡಬೇಕಲ್ಲ ?"

"ಸರಕಾರದಿಂದ ಇವರಿಗೆ ನೂರೋ ನೂರೈವತ್ತೋ ರೂಪಾಯಿ ಸಂಬಳ ಸಿಕ್ಕುತ್ತಿರಬೇಕಲ್ಲ ?"

"ಸಿಕ್ಕುತ್ತಿರಬಹುದು. ಆದರೆ ಅವರನ್ನಾರು ಕೇಳಬೇಕು ? ಅವರು ಹೇಳಿದ್ದೇ ನ್ಯಾಯ. ಒತ್ತಾಯದಿಂದ ಅವರನ್ನೇನಾದರೂ ಹಳ್ಳಿಗಳಿಗೆ ಕರೆ

ದೊಯ್ದು ರಿ ಕೋಪಿಸಿಕೊಂಡು ಔಷಧಕ್ಕೆ ಬದಲಾಗಿ ವಿಷ ಕೊಟ್ಟು ರೋಗಿಗಳನ್ನು ನೆಟ್ಟಗೆ ಯಮನ ಬಾಯಿಗೇ ಕಳಿಸಿಬಿಟ್ಟರೆ! ಅಂತೆಯೆ, ಈ ಸರಕಾರೀ ಡಾಕ್ಟರರಿಂದ ದೂರವಿರುವುದೇ ಒಳ್ಳೆಯದು. ನಿಮ್ಮ ಸ್ನೇಹಿತರಲ್ಲಿ ಯಾರಾದರೊಬ್ಬರು ಡಾಕ್ಟರು ಸಿಕ್ಕಬಹುದೇನೋ ನೋಡಿರಿ."

ತಾವು ಇಳಿಯಬೇಕಾದ ನಿಲ್ದಾಣ ಬಂದೊಡನೆಯೆ ಸ್ವಾಮಿಗಳು ಹೊರಟು ನಿಂತರು. ಸರಸೂ ಶಿವಮೂರ್ತಿ ಇಬ್ಬರೂ ಅವರ ಅಡಿಗಳಿಗೆರಗಿದರು. ಸ್ವಾಮಿಗಳು ಇಬ್ಬರನ್ನೂ ಮನಃಪೂರ್ವಕವಾಗಿ ಹರಸಿ ಬೀಳ್ಕೊಂಡರು.

ಅವರು ಇಳಿದು ಹೋದ ತರುವಾಯ ಡಬ್ಬಿಯಲ್ಲಿ ಅವರಿಬ್ಬರೇ ಆದರು. ಗಾಡಿ ಮತ್ತೆ ಮುಂದೆ ಸಾಗಿತು.

"ಸರಿ. ಮುಂದೆ ?" ಎಂದ ಶಿವಮೂರ್ತಿ.

"ಪಟ್ಟಣಕ್ಕೆ ಟಿಕೀಟನ್ನಂತೂ ತೆಗೆಸಿಯಾಗಿದೆ. ಮೊದಲು ಅಲ್ಲಿಗೇ ಹೋದರಾಯಿತು. ಮುಂದಿನದನ್ನು ಮುಂದೆ ಯೋಚಿಸಿದರಾಯಿತು."

"ಆದರೆ-ಅಲ್ಲಿ ಇಳಿದುಕೊಳ್ಳುವುದೆಲ್ಲಿ ಎಂಬುದರ ವಿಚಾರ ?"

"ಆ ವಿಚಾರ ನೀವೇನೂ ಚಿಂತೆ ಮಾಡಬೇಕಾಗಿಲ್ಲ. ನಾನಾಗಲೇ ಯೋಚಿಸಿಟ್ಟುಕೊಂಡಿದ್ದೇನೆ."

"ಏನು ಯೋಚನೆ ?"

"ಸುಶೀಲಾ ಅಂತ ನನ್ನ ಗೆಳತಿಯೊಬ್ಬಾಕೆ ಅಲ್ಲಿದ್ದಾಳೆ. ಆಕೆಯ ಮನೆಗೇ ಹೋದರಾಯಿತು."

"ಆಕೆಯ ಮನೆಯೆಂದರೆ ? ಮದುವೆಯಾಗಿದೆ ತಾನೆ ?"

"ಇಲ್ಲ. ಇನ್ನೂ ಆಗಿಲ್ಲ. ಒಬ್ಬಳೇ ಇದ್ದಾಳೆ."

"ಒಬ್ಬಳೇ ?"

"ಒಬ್ಬಳೇ ಅಂದರೆ ಒಬ್ಬಳೇ ಅಲ್ಲ. ಆಕೆಯ ತಾಯಿ ಸುಬ್ಬಕ್ಕನೂ ಇದ್ದಾಳೆ."

"ನಿಮ್ಮ ಈ ಸುಶೀಲಮ್ಮ ಏನು ಮಾಡುತ್ತಾರೆ? ಓದುತ್ತಿದ್ದಾರೆಯೊ?"

ಎಲ್ಲಿಯ ಓದು ಪಾಪ! ಮ್ಯಾಟ್ರಿಕ್ ಮಾಡಬೇಕೆಂದು ಆಕೆಗೆ ಬಲು ಆಸೆಯಿತ್ತು. ಬಡತನದಿಂದಾಗಿ ಸಾಧ್ಯವಾಗಲಿಲ್ಲ. ನರ್ಸಿಂಗ್ ಶಿಕ್ಷಣ

ಪಡೆದು ಈಗ ಪಟ್ಟಣದಲ್ಲಿ ಮುನಿಸಿಪಾಲ್ಟಿಯು ಹೆರಿಗೆ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾಳೆ."

"ಆಕೆಗೆ ವಯಸ್ಸೆಷ್ಟು ಸರಸೂ ?" ಎಂದು ಕುತೂಹಲದಿಂದ ಪ್ರಶ್ನಿಸಿದ ಶಿವಮೂರ್ತಿ.

"ವಯಸ್ಸ ? ನನ್ನಷ್ಟೇ ಆಗಿರಬಹುದು."

"ಮದುವೆಯಾಗಲಿಲ್ಲವೇಕೆ ಇನ್ನೂ ?"

"ಅದೊಂದು ಬೇರೆ ಕತೆಯೇ ಇದೆ. ಪಾಪ, ಅಂಥ ಸ್ಥಿತಿ ಯಾರಿಗೂ ಬರಬಾರದು ನೋಡಿರಿ," ಎಂದು ನುಡಿದು ಒಂದೆರಡು ಕ್ಷಣ ಸುಮ್ಮನಿದ್ದು ಸರಸು ಹೇಳತೊಡಗಿದಳು : "ಆಕೆಯ ತಾಯಿ ಸುಬ್ಬಕ್ಕ ಬ್ರಾಹ್ಮಣರಾಕೆ. ಚಿಕ್ಕ ವಯಸ್ಸಿನಲ್ಲಿಯೆ ಗಂಡನನ್ನು ಕಳೆದುಕೊಂಡಳಂತೆ. ಅವರ ಜಾತಿಯಲ್ಲಿ ಪುನರ್ವಿವಾಹವಿಲ್ಲವಲ್ಲ. ಸುಬ್ಬಕ್ಕನಿಗೆ ತುಂಬು ತಾರುಣ್ಯ ಆಗ. ಹೇಗೋ ಏನೊ ಕಾಲು ಜಾರಿತು. ಅದರ ಫಲವಾಗಿ ಸೂಶಿ ಹುಟ್ಟಿದಳು. ಸಮಾಜ ಆಕೆಯನ್ನು ಬಹಿಷ್ಕರಿಸಿತು. ತಂದೆ ತಾಯಿಗಳು ಕೈ ಬಿಟ್ಟರು. ಆದರೂ ಸುಬ್ಬಕ್ಕ ಹೆದರಲಿಲ್ಲ. ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡಿ ಮಗಳನ್ನು ಬೆಳೆಸಿದಳು. ವಿದ್ಯೆ ಕಲಿಸಿದಳು. ಏನಾದರೇನು, ಸೂಶಿಯ ಮದುವೆ ಮಾಡುವುದು ಮಾತ್ರ ಸಾಧ್ಯವಾಗಲಿಲ್ಲ."

"ಏಕೆ ? ಸುಶಿಕ್ಷಿತ ತರುಣರಲ್ಲಿ ಯಾರೂ ಆಕೆಯನ್ನು ಮದುವೆಯಾಗಲು ಸಿದ್ಧರಾಗಲಿಲ್ಲವೆ ?"

"ಆಕೆಯ ಜನ್ಮವೃತ್ತಾಂತ ಗೊತ್ತಾಗುತ್ತಲೂ ಎಲ್ಲರೂ ಮುಖ ತಿರುಗಿಸಿಕೊಂಡು ಹೊರಟುಹೋಗುತ್ತಿದ್ದರು. ಅದೂ ಅಲ್ಲದೆ ಸೂಶಿ ಅಂಥ ಚೆಲುವೆಯೂ ಅಲ್ಲ. ಅದರಿಂದಾಗಿ ಇನ್ನೂ ತೊಂದರೆಯಾಯಿತು. ಆದರೆ— ಹುಡುಗಿಯ ಗುಣ ತುಂಬ ಒಳ್ಳೆಯದು. ನಮ್ಮ ಸೂಶಿಯೆಂದರೆ ರತ್ನದ ಗಣಿಯಿದ್ದ ಹಾಗೆ. ನನಗೂ ಆಕೆಗೂ ಬಹಳ ಪ್ರೀತಿ. ಚಿಕ್ಕಂದಿನಿಂದಲೂ ಇಬ್ಬರೂ ಗೆಳತಿಯರು. ಕನ್ನಡಸಾಲೆಯಲ್ಲಿ ಕೂಡಿಯೆ ಓದಿದೆವು. ಮುಂದೆ ಆಕೆ ಇಂಗ್ಲೀಷು ಸಾಲೆಗೆ ಹೋದಳು. ನಾನು ಹೋಗಲಿಲ್ಲ. ಆದರೂ ನಮ್ಮಿಬ್ಬರ ಗೆಳೆತನ ಹಾಗೇ ಬೆಳೆದು ಬಂದಿದೆ. ನಮ್ಮನಮ್ಮಲ್ಲಿ ಪತ್ರವ್ಯವಹಾರವೂ ಇದೆ."

"ಸರಿ. ಅಷ್ಟು ಸ್ನೇಹವಿದ್ದಲ್ಲಿ ಚಿಂತೆಯಿಲ್ಲ. ಆದರೆ ನಾವಿಬ್ಬರೂ ಬರುವ ವಿಷಯ ಆಕೆಗೆ ಸ್ವಲ್ಪವೂ ತಿಳಿಯದಷ್ಟೆ ?"

"ಹೇಗೆ ತಿಳಿಯಬೇಕು ಹೇಳಿರಿ. ನಾವು ಇಂದು ಈ ರೀತಿ ಅಕಸ್ಮಾತ್ತಾಗಿ ಹೊರಟುಬಿಡುವ ವಿಷಯ ನನಗಾದರೂ ಎಲ್ಲಿ ತಿಳಿದಿತ್ತು ? ನಿಮಗೇನಾದರೂ ತಿಳಿದಿದ್ದಿತೇನು ?"

"ಕನಸುಮನಸಿನಲ್ಲೂ ಇರಲಿಲ್ಲ. ಅದಿರಲಿ. ನಮ್ಮನ್ನು ಅವರು ಸಂತೋಷದಿಂದ ಸ್ವಾಗತಿಸಬಹುದೇ ? ನನ್ನ ನಿನ್ನ ಸಂಬಂಧವನ್ನು ಕುರಿತು ಅವರೇನನ್ನೂ ತಿಳಿದುಕೊಳ್ಳಲಿಕ್ಕಿಲ್ಲವಷ್ಟೆ ?"

"ಸೂಶಿ, ಸುಬ್ಬಕ್ಕ ಯಾರೂ ಅಂಥ ಸಂಕುಚಿತ ವಿಚಾರದವರಲ್ಲ. ಖಂಡಿತವಾಗಿಯೂ ಅವರಿಬ್ಬರೂ ನಮ್ಮನ್ನು ಆನಂದದಿಂದ ಬರಮಾಡಿಕೊಳ್ಳುವರು. ನೀವೇ ನೋಡುವಿರಂತೆ."

"ಅದು ಸರಿ. ಆದರೆ ಎಷ್ಟು ದಿನ ಅವರ ಮನೆಯಲ್ಲಿರಲಿಕ್ಕಾದೀತು?"

"ಬೇರೆ ಮನೆ ಸಿಕ್ಕುವ ವರೆಗೂ ಇರಬಹುದಲ್ಲ. ನೀವು ಯಾತಕ್ಕೂ ಸಂಕೋಚಪಟ್ಟುಕೊಳ್ಳಬೇಕಾಗಿಲ್ಲ. ಅದು ನನ್ನ ಮನೆಯೆಂದೇ ತಿಳಿದುಕೊಳ್ಳಿರಿ."

ಆದರೂ ಶಿವಮೂರ್ತಿಗೆ ಸಮಾಧಾನವಾಗಲಿಲ್ಲ. ಸೂಶಿ, ಸುಬ್ಬಕ್ಕ ಇಬ್ಬರೂ ತನಗೆ ಅಪರಿಚಿತರು. ಈ ರೀತಿ ಅತಿಥಿಗಳಾಗಿ ಅವರ ಮನೆಗೆ ಹೋಗುವುದೆಂದರೇನು ! ಅಲ್ಲಿ ಎಷ್ಟು ದಿನ ಇರಬೇಕಾಗುವುದೊ....ಮುಂದೆ ಮಾಡುವುದೇನನ್ನು ? ಮೊದಲು ಕೆಲಸವೊಂದನ್ನು ಹುಡುಕಿಕೊಳ್ಳಬೇಕು. ಜತೆಯಲ್ಲೇ ಮನೆಯನ್ನೂ ಹುಡುಕಬೇಕು. ಕೆಲಸ ಸಿಕ್ಕುವುದೂ ಕಷ್ಟದ ವಿಷಯ. ಮನೆ ಸಿಕ್ಕುವುದು ಅದಕ್ಕಿಂತ ಕಷ್ಟದ ವಿಷಯ. ಪಟ್ಟಣಗಳಲ್ಲಿ ಇಂದಿನ ಕಾಲದಲ್ಲಿ ಮನೆಗಳ ಕೊರತೆ ವಿಪರೀತ. ನಲವತ್ತು ಐವತ್ತು ರೂಪಾಯಿ ಬಾಡಿಗೆ ಕೊಡಬಲ್ಲವರಿಗೇನೊ ಮನೆಗಳು ಸಿಕ್ಕಬಹುದು. ಆದರೆ ....ತನ್ನಂಥವನು ಅಷ್ಟು ಬಾಡಿಗೆ ತೆರುವುದೆಲ್ಲಿ ಸಾಧ್ಯ ? ಇನ್ನು ಮನೆ....!

"ಯಾಕ್ರೀ, ಹೀಗೆ ಕೂತುಕೊಂಡಿರಿ ?"

"ಅ....ಹಂ....ಓ....ಏನೂ ಇಲ್ಲ ಸರಸೂ...." ಎಂದು ತಡವರಿಸುತ್ತ ನುಡಿದ ಶಿವಮೂರ್ತಿ.

"ಏನೂ ಇಲ್ಲ ಅಂತ ಹಾರಿಸಿಬಿಡಬೇಡಿರಿ. ಅಷ್ಟೂ ತಿಳಿಯುವದಿಲ್ಲವೇ ನನಗೆ? ಏನೋ ವಿಚಾರ ನಡಿಸಿದ್ದೀರಿ. ನಿಮ್ಮ ಮುಖವೇ ಹೇಳುತ್ತದಲ್ಲ ?"

"ಏನು ಹೇಳುತ್ತದೆ ?"

"ಈ ಹುಡುಗಿ ಎಲ್ಲಿ ಗಂಟುಬಿದ್ದಳೋ....ನೌಕರಿಯನ್ನಂತೂ ಬಿಟ್ಟು ಬಂದದ್ದಾಯಿತು. ಮುಂದೆ ಏನು ಮಾಡುವುದು....ಎಂಥ ಕಷ್ಟ ಬಂತು.... ಅಂತ ಹೇಳುತ್ತಿದೆ."

ಆಕೆಯ ಚೆಲುವಾದ ಮುಖವನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದು ಕೊಂಡು ಆತನೆಂದ : "ಛೆ, ! ಹಾಗೇನೂ ಹೇಳುತ್ತಿಲ್ಲ ಅದು. ಅದು ಹೇಳು ವುದೇ ಒಂದು, ನೀನು ತಿಳಿದುಕೊಳ್ಳುವುದೇ ಇನ್ನೊಂದು."

"ಹೇಗೇನು ? ಏನು ಹೇಳುತ್ತದೆ ಅದು ಹಾಗಾದರೆ ?"

"ಎಲೋ ಮೂರ್ತಿ, ಎಂಥ ಭಾಗ್ಯಶಾಲಿಯಪ್ಪ ನೀನು ! ಎಂದು ಹೇಳುತ್ತಿದೆ."

"ಭಾಗ್ಯಶಾಲಿ ? ಅದೇಕೊ ?"

"ಇಂಥ ಚೆಲುವೆ ನಿನ್ನನ್ನೊಲಿದು ಬಂದಳಲ್ಲಾ. ಇದೇನು ಕಡಿಮೆ ಭಾಗ್ಯವೇ ? ಎನ್ನುತ್ತದೆ."

"ಥೂ, ಬಿಡಿರಿ. ಏನೇನೊ ಹುಚ್ಚು ಹುಚ್ಚು ಆಡುತ್ತೀರಿ ಆಯಿತು," ಎಂದು ಹೇಳುತ್ತ ಸರಸು ಆತನ ಕೈಗಳಲ್ಲಿ ತನ್ನ ಮುಖವನ್ನಡಗಿಸಿದಳು.

"ಹೀಗೆ ಆಡುವುದು ನಾನಲ್ಲ—ನನ್ನ ಮುಖ. ಇನ್ನೂ ಒಂದು ಮಾತು ಹೇಳುತ್ತಿದೆ ಅದು...."

"ಹೂಂ. ಇನ್ನೂ ಮುಗೀಲಿಲ್ಲವೇನು ?"

"ಇಂಥ ರಾಜಕುಮಾರಿಯನ್ನು ಒಯ್ದು ಎಲ್ಲಿಡುವೆ ? ಆಕೆಗೆ ಶೋಭಿ ಸುವಂಥ ಸ್ಥಳ ಬೇಕು, ಸುಖದ ಸಾಮುಗ್ರಿಗಳು ಬೇಕು. ರತ್ನವನ್ನೊಯ್ದು ಕಿರೀಟದಲ್ಲಿಯೆ ಇಡಬೇಕು. ಎಲ್ಲಿಯಾದರೂ ಮೂಲೆಯಲ್ಲಿ ಬಿಸುಟಬಾರದು —ಎಂದು ಎಚ್ಚರಿಸುತ್ತಿದೆ."

"ಸದ್ಯ ಆ ಚಿಂತೆಯೇನೂ ಬೇಡ ಅಂತ ಹೇಳಿರಿ ಅದಕ್ಕೆ. ಸೂಳಿಯ ಮನೆಯಲ್ಲೇ ಸುಖವಾಗಿರಬಲ್ಲುದು ನಿಮ್ಮ ರತ್ನ."

"ಹೇಳಿದೆ. ಆದರದು ಈ ಮಾತು ಒಪ್ಪುತ್ತಿಲ್ಲ."

"ಮತ್ತೆ ?"

"ನನಗೇನೂ ಸಮಾಧಾನವಿಲ್ಲ—ಎನ್ನುತ್ತಿದೆ."

ಆತನ ಕೈಗಳಲ್ಲಿ ಅಡಗಿದ್ದ ತನ್ನ ಮುಖವನ್ನು ಈಚೆಗೆ ತಂದು ಸರಸು ಕಳವಳಪೂರ್ಣ ಸ್ವರದಲ್ಲಿ ನುಡಿದಳು : "ನನ್ನಾಣೆ ನಿಮಗೆ. ನೀವೇನೂ ಚಿಂತೆ ಮಾಡಬೇಡಿರಿ. ಸೂಶಿಯ ಮನೆ ಬೇರೆ, ನನ್ನ ಮನೆ ಬೇರೆಯಲ್ಲ...."

ಶಿವಮೂರ್ತಿ ಉತ್ತರವೀಯದೆ ಮೌನವಾಗಿದ್ದ. ಆದರೆ ಆತನ ಮನಸ್ಸು ಮಾತ್ರ ಮೌನ ತಳೆಯಲಿಲ್ಲ; ಭವಿತವ್ಯವನ್ನು ಕುರಿತು ಚಿಂತಿಸುತ್ತ ಒಂದೇಸಮನೆ ಆಕ್ರೋಶ ಮಾಡತೊಡಗಿತು.

[೧೬]

"ಅದು ನನ್ನ ಮನೆಯೆಂದೇ ತಿಳಿದುಕೊಳ್ಳಿರಿ," ಎಂದು ಸರಸು ಹೇಳಿದ್ದ ಮಾತಿನಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲವೆಂದೇ ಶಿವಮೂರ್ತಿಗೆನ್ನಿಸಿತು. ಸೂಶಿಯ ಮನೆಯಲ್ಲಿ ಅಡಿಯಿರಿಸುವಾಗ ಆತನಿಗಿದ್ದ ಸಂಕೋಚ ಆಕೆಯನ್ನು ಕಂಡೊಡನೆಯೆ ಎಲ್ಲಿ ಮಾಯವಾಯಿತೊ ! ಒಂದೆರಡು ನಿಮಿಷಗಳಲ್ಲಿಯೆ ಆತ ಆ ಮನೆಯವರಲ್ಲೊಬ್ಬನಂತೆ ವರ್ತಿಸುವಂತಾಯಿತು. ಸೂಶಿಯ ಸರಲ ಹಾಗೂ ಮುಕ್ತ ಮನಸ್ಸಿನ ವರ್ತನೆಯೆ ಅದಕ್ಕೆ ಕಾರಣವಾಯಿತೆಂದು ಹೇಳ ಬಹುದು.

ಕುದುರೆಗಾಡಿಯೊಂದನ್ನು ಗೊತ್ತುಮಾಡಿಕೊಂಡು, ಸೂಶಿಯ ಮನೆಯನ್ನು ಹುಡುಕುತ್ತ ಅವರು ಅಲ್ಲಿಗೆ ಬಂದು ಮುಟ್ಟಿದಾಗ ಬೆಳಗಿನ ಎಂಟು ಗಂಟೆಯಾಗಿದ್ದಿತು. ಪಟ್ಟಣದ ನಟ್ಟನಡುವೆ ಇಕ್ಕಟ್ಟಾದ ಬೀದಿಯೊಂದರ ಲ್ಲಿದ್ದ ಆ ಮನೆ ಚಿಕ್ಕದಾಗಿದ್ದರೂ ಚೊಕ್ಕಟವಾಗಿದ್ದಿತು. ಬಾಗಿಲಿನೊಳ ಗಿಂದ ಪ್ರವೇಶಿಸುತ್ತಲೂ ಒಂದು ಕೈಸಾಲೆ. ಅದರ ಎಡಗಡೆಗೊಂದು ಕೊಟಡಿ. ಅದಕ್ಕೆ ಹೊಂದಿಕೊಂಡು ಅಡುಗೆಯ ಮನೆ. ಅದರ ಪಕ್ಕದಲ್ಲೇ ಬಚ್ಚಲುಮನೆ. ಕೈಸಾಲೆಯಲ್ಲಿ ಮೂರು ನಾಲ್ಕು ಸಾದಾ ಕುರ್ಚಿಗಳೂ ಅವುಗಳ ನಡುವೆ ಒಂದು ದುಂಡು ಮೇಜೂ ವ್ಯವಸ್ಥಿತವಾದ ರೀತಿಯಲ್ಲಿ ಇರಿಸಲ್ಪಟ್ಟಿದ್ದುವು.

ಕುದುರೆಗಾಡಿ ಮನೆಯೆದುರಿಗೆ ಬಂದು ನಿಂತಾಗ ಸೂಶಿ ಸ್ನಾನ ಮಾಡು

ವುದರಲ್ಲಿ ತೊಡಗಿದ್ದಳು. ಸರಸುವಿನ ಕರೆ ಕೇಳಿಸುತ್ತಲೂ ಲಗುಬಗೆಯಿಂದ ಸ್ನಾನ ಮುಗಿಸಿ ಅಂಗವಸ್ತ್ರದಿಂದ ಮೈಯನ್ನೊರೆಸಿಕೊಂಡು, ಅವಸರವಸರವಾಗಿ ಸೀರೆಯನ್ನುಟ್ಟುಕೊಂಡು ಕೈಸಾಲೆಗೆ ಧಾವಿಸಿದಳು.

ಪಿಟೀಲಿನ ಪೆಟ್ಟಿಗೆಯನ್ನು ಕಂಕುಳಲ್ಲಿರಿಸಿಕೊಂಡು ಸಂಕೋಚದಿಂದ ನಿಂತುಕೊಂಡಿದ್ದ ಶಿವಮೂರ್ತಿ. ಸೂಶಿ ಅಲ್ಲಿಗೆ ಬಂದವಳೇ ಗೆಳತಿಯನ್ನು ಬಿಗಿದಪ್ಪಿಕೊಂಡಳು.

"ಇದೇನೇ, ಎಲ್ಲಿಂದ ಇಳಿದು ಬಂದೆ ಹೀಗೆ ಏಕಾಏಕಿಯಾಗಿ ? ಇವರು ಯಾರು ?"

ಸೂಶಿಯ ಅಪ್ಪುಗೆಯಿಂದ ಮುಕ್ತಳಾಗಿ ಸರಸು ಶಿವಮೂರ್ತಿಯನ್ನು ಪರಿಚಯ ಮಾಡಿಕೊಡಲು ಅಣಿಯಾದಳು. ಆದರೆ ಆ ಕಾರ್ಯ ಅಷ್ಟೇನೂ ಸುಲಭವಾದುದಾಗಿರಲಿಲ್ಲ, ಆತನನ್ನು ಏನೆಂದು ಪರಿಚಯ ಮಾಡಿಕೊಡುವುದು ? ತನಗೂ ಆತನಿಗೂ ಇರುವ ಸಂಬಂಧವನ್ನು ಏನೆಂದು ವರ್ಣಿಸುವುದು ? "ನಮ್ಮವರು" ಎಂದು ಹೇಳುವುದೇ ? ಮದುವೆಯಾಗಿಲ್ಲ. "ಪ್ರಿಯಕರ"ನೆಂದು ಹೇಳುವುದೇ ? ಆತನ ಸಮಕ್ಷಮದಲ್ಲಿ ಆ ರೀತಿ ಹೇಳುವುದಾದರೂ ಹೇಗೆ ? ಸರಸುವಿನ ಮುಖಕ್ಕೆಲ್ಲ ರಕ್ತವೇರಿತು. "ಇವರು....ಇವರು...." ಎಂದು ತಡವರಿಸುತ್ತ ನುಡಿದು, ಸರಸು ಆ ಮಾತನ್ನು ಅಷ್ಟಕ್ಕೇ ನಿಲ್ಲಿಸಿ— "ಮೊದಲು ಸ್ವಲ್ಪ ಚಹವನ್ನಾದರೂ ಕೊಡು ತಾಯಿ. ಅನಂತರ ಎಲ್ಲವನ್ನೂ ಹೇಳುವೆನಂತೆ," ಎಂದಳು.

ಸೂಶಿ ನಗುತ್ತಾ ಶಿವಮೂರ್ತಿಯ ಕಡೆಗೆ ತಿರುಗಿ, "ಯಾಕಾಗಲೊಲ್ಲದು. ನೀವು ಕುಳಿತುಕೊಳ್ಳಿರಿ. ಏನೂ ಸಂಕೋಚ ಮಾಡಿಕೊಳ್ಳಬೇಡಿರಿ. ಇದೇನೂ ಬೇರೆಯವರ ಮನೆ ಅಂತ ತಿಳಿಯಲೇ ಬೇಡಿರಿ. ನಿಮ್ಮದೇ ಅಂತ ತಿಳಿದುಕೊಳ್ಳಿರಿ. ನಾನು, ಸರಸೂ ಚಹ ಮಾಡಿ ತರುತ್ತೇವೆ. ಐದು ನಿಮಿಷ.... ಹಂ....?" ಎಂದಳು.

ಪಿಟೀಲಿನ ಪೆಟ್ಟಿಗೆಯನ್ನು ದುಂಡು ಮೇಜಿನ ಮೇಲಿರಿಸಿ ಶಿವಮೂರ್ತಿ ಕುರ್ಚಿಯೊಂದರಲ್ಲಿ ಕುಳಿತುಕೊಂಡ. ಸೂಶಿಯ ಸರಲತನವೂ ಸಲುಗೆಯ ಮಾತುಗಳೂ ಆತನ ಸಂಕೋಚವೆಲ್ಲವನ್ನೂ ತೊಲಗಿಸಿದ್ದುವು. ಪ್ರಥಮ ಪರಿಚಯದಲ್ಲಿಯೆ ಎಂಥವರನ್ನಾದರೂ ಆತ್ಮೀಯರನ್ನಾಗಿ ಮಾಡಿಕೊಳ್ಳ

ಬಲ್ಲ ಮಾಟಗಾರಿಕೆ ಸೂಶಿಯಲ್ಲಿದ್ದ ಹಾಗೆ ತೋರುತ್ತಿತ್ತು. ಅದೇನೂ ಮಾಟಗಾರಿಕೆಯಾಗಿರಲಿಕ್ಕಿಲ್ಲ—ಆಕೆಗೆ ಸಹಜವಾದ ಸ್ವಭಾವ ವೈಶಿಷ್ಟ್ಯವೇ ಇರಬಹುದು, ಎಂದುಕೊಂಡ ಶಿವಮೂರ್ತಿ.

ಸರಸು ಹೇಳಿದ ಹಾಗೆ ಸೂಶಿ ಚೆಲುವೆಯೇನೂ ಆಗಿರಲಿಲ್ಲ. ನಸುಗಪ್ಪು ಬಣ್ಣ. ಸಾದಾ ಕಣ್ಣು ಮೂಗು. ಕೊಂಚ ಕುಳ್ಳಗಿನವೇ ಆದ ನಿಲುವು. ಆದರೂ ಆಕೆಯ ಒಟ್ಟು ರೂಪದಲ್ಲಿ ಏನೋ ಒಂದು ಆಕರ್ಷಕತೆ ಎದ್ದು ಕಾಣಿಸುವಂತಿದ್ದಿತು. ಆಕೆಯ ಮುಖದಲ್ಲೆಲ್ಲ ಅತ್ಯಂತ ಆಕರ್ಷಕವಾಗಿದ್ದುದು ಆಕೆಯ ತುಟಿಗಳು. ನಗೆಯ ಸ್ವಚ್ಛಂದ ನಾಟ್ಯಕ್ಕಾಗಿಯೆ ಅವುಗಳ ನಿರ್ಮಾಣವಾದಂತೆ ತೋರುತ್ತಿತ್ತು. ಪ್ರಮಾಣಬದ್ಧವಾದ ರಸವೊಸರುವ ತುಟಿಗಳು. ಆಕೆಯ ಸ್ವಭಾವದ ಸರಲತನವೂ, ಕೃತ್ರಿಮತೆಯ ಸಂಪರ್ಕವಿಲ್ಲದ ಮುಗ್ಧತೆಯೂ ಆ ತುಟಿಗಳ ಮೇಲೆ ಮಿನುಗುತ್ತಿದ್ದ ಹಾಗೆ ತೋರಿತು ಶಿವಮೂರ್ತಿಗೆ. "ಸೂಶಿ ಎಂಥವಳಿರಬಹುದೋ ಎಂದು ಯೋಚನೆಗೊಳಗಾಗಿದ್ದೆ. ಚಿಂತೆಯಿಲ್ಲ. ಈಕೆಯ ಮನೆಯಲ್ಲಿ ಏನೂ ಸಂಕೋಚಪಟ್ಟುಕೊಳ್ಳುವ ಅಗತ್ಯವಿಲ್ಲ," ಎಂದು ಆತ ತನ್ನಷ್ಟಕ್ಕೇ ಹೇಳಿಕೊಂಡ.

ಒಳಗಡೆ ಅಡುಗೆಯ ಮನೆಯಲ್ಲಿ ಸರಸು ಪಿಸುದನಿಯಲ್ಲಿ ಸೂಶಿಗೆ ವಿಷಯವೆಲ್ಲವನ್ನೂ ವಿವರಿಸತೊಡಗಿದಳು. ಒಲೆಯ ಮೇಲೆ ಚಹಕ್ಕೆ ಎಸರಿಟ್ಟು ಸೂಶಿ ಉತ್ಸುಕತೆಯಿಂದ ಕೇಳುತ್ತ ಕುಳಿತಿದ್ದಳು. ಸ್ವಲ್ಪದರಲ್ಲಿಯೆ ಸರಸು ಎಲ್ಲವನ್ನೂ ಹೇಳಿದ ಬಳಿಕ ಸೂಶಿ ಗೆಳತಿಯ ಕೆನ್ನೆಯನ್ನು ಸಲುಗೆಯಿಂದ ಚಿವುಟುತ್ತ—"ಅಂತೂ ಒಳ್ಳೇ ಕೆಲಸ ಮಾಡಿದೆಯಲ್ಲೇ! ನೀನಿಂಥ ಧೈರ್ಯ ಮಾಡಬಹುದೆಂದು ನಾನಂತೂ ಎಣಿಸಿಕೊಂಡಿರಲಿಲ್ಲ ಬಿಡು," ಎಂದಳು.

"ಹೀಗೆಲ್ಲ ಆಗಬಹುದೆಂದು ನನಗಾದರೂ ಎಲ್ಲಿ ತಿಳಿದಿತ್ತು ಸೂಶಿ! ಕನಸಿನಲ್ಲಿ ಏನೇನೊ ನಡೆಯುವ ಹಾಗೆ ನಿನ್ನೆ ರಾತ್ರಿ ಹೀಗೆಲ್ಲ ನಡೆದು ಹೋಯಿತು."

"ಆದದ್ದೆಲ್ಲ ಒಳ್ಳೆಯದೇ ಆಯಿತಲ್ಲ. ಆ ಸೆರೆಮನೆಯಿಂದ ಪಾರಾಗಿ ಬಂದೆ. ಇಲ್ಲವಾದರೆ ಅಲ್ಲಿಯೆ ಕೊಳೆತು ಸಾಯಬೇಕಾಗುತಿತ್ತೋ ಏನೊ. ನಿಮ್ಮ ತಾಯಿತಂದೆಗಳಿಗೆ ಈ ಸುದ್ದಿಯಿನ್ನೂ ಗೊತ್ತಿಲ್ಲವೆ?"

"ಇಲ್ಲ. ನನ್ನಣ್ಣನವರು ಹುಡುಕುತ್ತಿರಬಹುದು."

"ಬರುವಾಗ ಒಂದು ಚೀಟಿಯನ್ನಾದರೂ ಇಟ್ಟು ಬರಬೇಕಾಗಿತ್ತು. ಪಾಪ, ಎಷ್ಟು ಗಾಬರಿಯಾಗುವರೊ. ಪೋಲೀಸರಿಗೆ ತಿಳಿಸಿದರೂ ತಿಳಿಸ ಬಹುದು. ಈಗಲೇ ಒಂದು ತಾರು ಕೊಡುವುದುತ್ತಮ. ಅನಂತರ ನಿಧಾನ ವಾಗಿ ಪತ್ರ ಬರೆದರಾಯಿತು."

"ಹೌದಪ್ಪ. ಹಾಗೇ ಮಾಡಬೇಕು. ಇಲ್ಲವಾದರೆ ಪೋಲೀಸರು ನನ್ನನ್ನು ಹುಡುಕುತ್ತ ಬರುವರೇನೊ."

"ಹೌದು. ಅದಂತೂ ಖಂಡಿತ."

"ಒಂದು ವೇಳೆ ಅವರು ನನ್ನನ್ನು ಪತ್ತೆ ಹಚ್ಚಿದರೂ ನನ್ನನ್ನು ಮತ್ತೆ ಅಲ್ಲಿಗೆ ಕರೆದುಕೊಂಡು ಹೋಗಲಾರರಷ್ಟೆ."

"ನಿನ್ನ ಮನಸ್ಸಿಗೆ ವಿರುದ್ಧವಾಗಿ ಯಾರೂ ಏನೂ ಮಾಡಲಾರರು. ನೀನು ವಯಸ್ಕಳಾಗಿದ್ದೀಯ. ನಿನ್ನ ಮೇಲೆ ನಿನ್ನ ತಂದೆಯ ಅಧಿಕಾರ ನಡೆಯಲಾರದು."

"ಹಾಗಿದ್ದರೆ ಚಿಂತೆಯಿಲ್ಲ," ಎಂದು ಸಮಾಧಾನದಿಂದ ನುಡಿದಳು ಸರಸು.

ಸೂಶಿಗೆ ಮಾತ್ರ ಅಷ್ಟರಿಂದ ಸಮಾಧಾನವಾದಂತೆ ತೋರಲಿಲ್ಲ. ಚಹದ ನೀರಿಗೆ ಸಕ್ಕರೆ ಹಾಕುತ್ತ ಆಕೆ ಮಾತನಾಡಿದಳು :

"ನೀನು ವಯಸ್ಕಳು, ಸ್ವತಂತ್ರಳು ಎನ್ನುವದೇನೊ ನಿಜ. ಆದರೂ ಸಮಾಜವನ್ನೆದುರಿಸಿ ನಿಂತು ಸಮಾಜದಲ್ಲೇ ಬಾಳಬೇಕಾಗಿದೆಯೆನ್ನುವ ದನ್ನು ಮರೆಯಬಾರದು. ನಿಮಗಿಬ್ಬರಿಗೂ ಮದುವೆ ಮಾಡುವುದೇ ಒಳ್ಳೆಯದು."

"ಮದುವೆ ?"

"ಹೌದು. ಮದುವೆ. ನನ್ನ ಮಟ್ಟಿಗೆ ಹೇಳಬೇಕಾದರೆ ಈ ಮದುವೆ ಯೆಂಬ ವಿಷಯದಲ್ಲಿ ನನಗೆ ಸ್ವಲ್ಪವೂ ಶ್ರದ್ಧೆಯಿಲ್ಲ. ಆದರೆ....ನನ್ನ ಮಾತು ಬೇರೆ....ನಿನ್ನ ಮಾತು ಬೇರೆ. ಮೊದಲಿನಿಂದಲೂ ಸ್ವತಂತ್ರ ವಾತಾವರಣ ದಲ್ಲಿ ಬೆಳೆದವಳಾದ್ದರಿಂದ ನನಗೆ ಈ ಜೀವನ ರೂಢಿಯಾಗಿದೆ. ನಿನ್ನದು ಹಾಗಲ್ಲ. ಶ್ರೀಮಂತರ, ಸಂಪ್ರದಾಯಪ್ರಿಯರ ಮನೆಯಲ್ಲಿ ಬೆಳೆದು ಅಂಥ

ಸಮಾಜದಲ್ಲೇ ಬದುಕಿದಾಕೆ ನೀನು. ಇನ್ನು ಮುಂದೆಯೂ ಆ ಸಮಾಜ ದಲ್ಲೇ ಇರಬೇಕಾಗುವದೊ ಏನೊ. ಅಂತೆಯೆ.... ಹೌದು. ನಿಮಗಿಬ್ಬರಿಗೂ ಮದುವೆ ಮಾಡಲೇಬೇಕು. ಹೆಸರಿಗೆ ಮಾತ್ರ. ಅಂಥ ಗದ್ದಲವನ್ನೇನೂ ಮಾಡದೆ, ಹತ್ತು ಜನರನ್ನು ಕೂಡಿಸಿ ಅಕ್ಷತೆ ಹಾಕಿದರಾಯಿತು."

ನೀರು ತರಲು ಭಾವಿಗೆ ಹೋಗಿದ್ದ ಸುಬ್ಬಕ್ಕ ಮನೆಗೆ ಬಂದು ಸರಸು ವನ್ನು ಕಂಡು, ವಿಷಯವನ್ನೆಲ್ಲ ತಿಳಿದ ಬಳಿಕ ಅದೇ ಅಭಿಪ್ರಾಯವನ್ನೆ ವ್ಯಕ್ತಗೊಳಿಸಿದಳು.

"ನಿನ್ನ ಮುಂದಿನ ಬಾಳು ದುಃಖದಾಯಕವಾಗಬಾರದು ತಾಯಿ. ನಾಲ್ಕು ಜನರನ್ನು ಕೂಡಿಸಿ ಮದುವೆ ಮಾಡೇ ಬಿಡೋಣ," ಎಂದಳಾಕೆ.

ಅಂದು ಸೂಶಿ ಆಸ್ಪತ್ರೆಗೆ ಹೋಗಲಿಲ್ಲ. ರಜಕ್ಕೆ ಬರೆದು ಕಳುಹಿಸಿ ಪೇಟೆಗೆ ಹೋಗಿ ಬಂದಳು. ಸರಸುವಿಗೆ ಎರಡು ಹೊಸ ಸೀರೆ, ರವಕೆ ಕೊಂಡದ್ದಾಯಿತು. ಸಾದಾ ಮಾಂಗಲ್ಯವೊಂದನ್ನೂ, ಎರಡು ಹೂವಿನ ಹಾರ ಗಳನ್ನೂ, ತಿಂಡಿಯ ಸಾಮಗ್ರಿಗಳನ್ನೂ ಕೊಂಡುಕೊಂಡು, ಕೆಲವರು ಪರಿ ಚಿತರನ್ನು ಕಂಡು ಸಾಯಂಕಾಲ ಏಳು ಗಂಟೆಗೆ ಮನೆಗೆ ಬರಬೇಕೆಂದು ತಿಳಿಸಿ ಬಂದಳು.

ಆರು, ಆರೂವರೆ ಗಂಟೆಗಾಗಲೆ ಜನ ಬರತೊಡಗಿದರು. ಎಲ್ಲರೂ ತರುಣ ವಯಸ್ಸಿನವರೇ. ಯುವಕರೂ ಇದ್ದರು, ಯುವತಿಯರೂ ಇದ್ದರು. ಎಲ್ಲರೂ ಸುಶಿಕ್ಷಿತರು. ಸುಸಂಸ್ಕೃತರು. ಒಬ್ಬರು ಹೈಸ್ಕೂಲು ಶಿಕ್ಷಕರು, ಇನ್ನೊಬ್ಬರು ಪ್ರಾಥಮಿಕ ಶಾಲೆಯ ಶಿಕ್ಷಕಿ, ಒಬ್ಬಾಕೆ ನರ್ಸ್, ಇನ್ನೊಬ್ಬಾಕೆ ಡಾಕ್ಟರ್, ಇಬ್ಬರು ಕಾಲೇಜು ವಿದ್ಯಾರ್ಥಿಗಳು, ಸ್ಥಳೀಯ ಪತ್ರಿಕೆಯ ಉಪ ಸಂಪಾದಕರೊಬ್ಬರು. ಅವರೆಲ್ಲರ ಎದುರಿಗೆ ಶಿವಮೂರ್ತಿ ಸರಸುವಿಗೆ ಮಾಂಗಲ್ಯ ಕಟ್ಟಿದ. ಹೂಹಾರಗಳ ಅರ್ಪಣೆಯಾಯಿತು. ಅಲ್ಪೋಪಹಾರ ದೊಂದಿಗೆ ಆ ವಿವಾಹ ಕಾರ್ಯಕ್ರಮ ಕೊನೆಗೊಂಡಿತು. ಬಂದವರು ಒಬ್ಬೊಬ್ಬ ರಾಗಿ ಹೊರಟು ಹೋಗತೊಡಗಿದರು. ಉಪಸಂಪಾದಕ ಹರಿಹರನೊಬ್ಬನೇ ಮಾತನಾಡುತ್ತ ಕುಳಿತಿದ್ದ. ಇಪ್ಪತ್ತೈದು ವರ್ಷ ವಯಸ್ಸಿನ ಆ ತೇಜಸ್ವಿ ಯುವಕ, ಖಂಡಿತವಾದಿಯೆಂಬುದು ಆತನ ಮಾತಿನಿಂದ ಸ್ಪಷ್ಟವಾಗುತಿತ್ತು.

"ಈ ಮದುವೆಯ ನಾಟಕ ಹೂಡಲು ಇಷ್ಟು ಅವಸರ ಮಾಡಬೇಕಾದ ಅಗತ್ಯವಿರಲಿಲ್ಲ," ಎಂದಾತ ಹೇಳುತ್ತಿದ್ದ.

"ನಾಟಕ ?" ಎಂದು ಕೇಳಿದಳು ಸೂಶಿ.

"ಹೌದು ಮತ್ತೆ. ನಾಟಕವಲ್ಲದಿನ್ನೇನು ? ಮದುವೆ ಎಂದರೇನೇ ಒಂದು ನಾಟಕ. ಒಂದು ತಮಾಷೆ. ಗಂಡು ಹೆಣ್ಣಿನ ಸಂಬಂಧಕ್ಕೆ ಸಮಾಜ ಕೊಡುವ ಲೈಸೆನ್ಸ್ ಅದು. ಅದಕ್ಕಿಂತ ಹೆಚ್ಚಿಗೆ ಅದರ ಬೆಲೆಯೇನೂ ಇಲ್ಲ. ಇವರಿಬ್ಬರೂ ಪರಸ್ಪರ ಪ್ರೀತಿಸಿದ್ದೇ ಸಾಲದೇ ? ಈ ಮಾಂಗಲ್ಯ ಈ ಹೂ ಹಾರ ಇದೆಲ್ಲ ಏತಕ್ಕೆ ಬೇಕಿದ್ದಿತೋ ನಾನರಿಯೆ."

"ಇವರಿಬ್ಬರೂ ನಿಮ್ಮಷ್ಟು ಪ್ರಗತಿಶೀಲರಲ್ಲ ಹರಿಹರ್. ನೀವೇನೋ ಸಮಾಜವನ್ನು ಎದುರಿಸಿ ನಿಲ್ಲಬಲ್ಲಿರಿ. ನಿಮ್ಮ ಹಾಗೆ ಎಲ್ಲರಿಗೂ ಸಾಧ್ಯವೇ ಆದು ?"

"ಯಾಕೆ ಸಾಧ್ಯವಾಗಬಾರದು ?"

"ಸ್ವಲ್ಪ ವ್ಯಾವಹಾರಿಕವಾಗಿ ಯೋಚನೆ ಮಾಡಿದರೆ ನಿಮಗೇ ಅರಿವಾಗುವದು. ಸಮಾಜವನ್ನು ಬಿಟ್ಟು ಇವರು ಬದುಕುವುದು ಸಾಧ್ಯವಿದೆಯೆ ?"

"ಮನಸ್ಸಿದ್ದಲ್ಲಿ ಮಾರ್ಗವುಂಟು. ನೀವು...."

"ಕೆಲವು ಅಪವಾದಗಳನ್ನು ಬಿಟ್ಟು ಬಿಡಿರಿ ಹರಿಹರ್. ಸಾಮಾನ್ಯವಾಗಿ ಮಾತನಾಡಿರಿ."

"ಏನು ಸಾಮಾನ್ಯವೋ, ಏನು ಕತೆಯೊ. ಹಿಂದುಸ್ಥಾನದ ಪ್ರತಿಯೊಬ್ಬ ಯುವಕನೂ ಪ್ರತಿಯೊಬ್ಬ ಯುವತಿಯೂ ಅಸಾಮಾನ್ಯರಾಗಿ ಮುಂದುವರಿಯದಿದ್ದರೆ ಈ ದೇಶದ ಉದ್ಧಾರವಿಲ್ಲ. ಹಳೆಯ ಜೊಳ್ಳು ಸಂಪ್ರದಾಯಗಳನ್ನೆಲ್ಲ ಕಾಲಿನಿಂದ ತುಳಿದು ಹೊಸ ಜೀವನವನ್ನು ನಾವು ರಚಿಸಬೇಕಾಗಿದೆ. ಈ ಬಗೆಯ ಹೊಸ ಸೃಷ್ಟಿಯ ರಚನೆಯಲ್ಲಿ ನಿಮ್ಮದೂ ಪಾತ್ರವಿದೆ ಶಿವಮೂರ್ತಿ."

"ನನ್ನ ಪಾತ್ರ ?" ಎಂದು ತಬ್ಬಿಬ್ಬಾಗಿ ಪ್ರಶ್ನಿಸಿದ ಶಿವಮೂರ್ತಿ.

"ಹೌದು. ನಿಮ್ಮ ಪಾತ್ರ. ದೇಶಕ್ಕಾಗಿ ನೀವೂ ಏನನ್ನಾದರೂ ಮಾಡಲೇಬೇಕಲ್ಲವೆ ?"

ಆ ಪ್ರಶ್ನೆಗೆ ಏನು ಉತ್ತರ ಕೊಡಬೇಕೆಂಬುದು ಹೊಳೆಯಲಿಲ್ಲ ಶಿವಮೂರ್ತಿಗೆ. ದೇಶಕ್ಕಾಗಿ ತಾನೂ ಏನನ್ನಾದರೂ ಮಾಡಬೇಕೆಂಬ ಬಯಕೆ

ಯೇನೋ ತನಗಿದ್ದುದು ನಿಜ. ಆದರೆ—ಈಗ ? ಸಂಸಾರದ ಬಲೆಯಲ್ಲಿಂತೂ ತೊಡಗಿಕೊಂಡುದಾಯಿತು. ಈ ಸಂಸಾರವನ್ನು ಸಾಗಿಸುವುದಕ್ಕಾಗಿಯೆ ತನ್ನ ಶಕ್ತಿಯೆಲ್ಲ ವಿನಿಯೋಗವಾಗುವುದು. ದೇಶಕ್ಕಾಗಿ ಕಾರ್ಯ ? ಅದಕ್ಕೆ ಬಿಡುವಾದರೂ ಹೇಗೆ ದೊರೆಯಬೇಕು ?

ಆತ ಉತ್ತರವೀಯಲಾರದೆ ತೊಳಲುವುದನ್ನು ಗುರುತಿಸಿ ಸೂಶಿ ಆತನ ಸಹಾಯಕ್ಕೆ ಧಾವಿಸಿದಳು. "ನಿಮ್ಮ ಆದರ್ಶವಾದದ ತೋಫುಖಾನೆಗೆ ನಮ್ಮ ಮೂರ್ತಿಯನ್ನು ಇಷ್ಟು ಬೇಗ ಗುರಿಮಾಡಬೇಡಿ ಹರಿಹರ್. ಇದೇ ತಾನೆ ಮದುವೆ ಮಾಡಿದ್ದೇವೆ ಅವರಿಗೆ. ಎಂಟು ಹತ್ತು ದಿನವಾದರೂ ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ. ಮುಂದೆ ಇದ್ದೇ ಇದೆ—ನಿಮ್ಮೊಂದಿಗೆ ಬಡಿದಾಟ...."

ಹರಿಹರ ನಗುತ್ತಾ ಅವರನ್ನು ಬೀಳ್ಕೊಂಡ. ತಮ್ಮ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಮದುವೆಯ ಸಮಾಚಾರ ಪ್ರಕಟಿಸುವುದಾಗಿಯೂ ಹೇಳಿ ಹೋದ.

"ಯಾವ ಪತ್ರಿಕೆ ಅದು ಸೂಶಿ ?" ಎಂದು ಕೇಳಿದಳು ಸರಸು.

"ಲಿಂಗವೀರ ಅಂತ ಇದೆಯಲ್ಲ—ಆ ಗಂಗಾಧರಶಾಸ್ತ್ರಿ ಹೊರಡಿಸುತ್ತಿರೋದು."

"ಗಂಗಾಧರಶಾಸ್ತ್ರಿ ?" ಎಂದು ಬೆಚ್ಚಿಬಿದ್ದು ಕೇಳಿದಳು ಸರಸು.

"ಹೌದು. ಅದೇ ಶಾಸ್ತ್ರಿ. ಏಕೆ ಬೆಚ್ಚಿಬಿದ್ದೆ ಸರಸು? ಅವರ ಪರಿಚಯವಿದೆಯೇನು ನಿನಗೆ ?"

"ಕೀರ್ತನ ಮಾಡುತ್ತಾರಲ್ಲ—ಅವರೇ ಏನು ?"

"ಹೌದು. ಕೀರ್ತನವನ್ನೂ ಮಾಡುತ್ತಾರೆ. ಅವರು ಮಾಡದಿರುವ ಕೆಲಸವಾದರೂ ಯಾವುದಿದೆ ಸರಸು ! ಎಲ್ಲದರಲ್ಲೂ ಪಂಡಿತ ಆ ಶಾಸ್ತ್ರಿ. ನಿನಗೆಲ್ಲಿ ಪರಿಚಯವಾಯಿತು ಅವರದು ?"

"ಒಂದು ತಿಂಗಳಿನಿಂದ ನಮ್ಮೂರಿನಲ್ಲೇ ಇದ್ದಾರೆ ಅವರು. ಶ್ರಾವಣ ಮಾಸದಲ್ಲೆಲ್ಲ ಪ್ರಭುಲಿಂಗಲೀಲೆಯ ಪ್ರವಚನ ಮಾಡಿದರು. ಹೊಸದಾಗಿ ಬಂದಿರುವ ಸ್ವಾಮಿಗಳಿಗೆ ಶಾಸ್ತ್ರಿ ಎಂದರೆ ಬಹಳ ಪ್ರೀತಿಯೆಂದು ತೋರುತ್ತದೆ. ಸ್ವಾಮಿಗಳು ಜಗದ್ಗುರುಗಳು ಎಂದರೆ ನಮ್ಮ ತಂದೆಗೆ ಬಹಳ ಭಕ್ತಿ. ನಿನಗೂ

ಗೊತ್ತಿದೆಯಲ್ಲ. ಸ್ವಾಮಿಗಳ ಜತೆಗೆ ಒಂದು ಸಲ ನಮ್ಮ ಮನೆಗೂ ಊಟಕ್ಕೆ ಬಂದಿದ್ದರು ಶಾಸ್ತ್ರಿಗಳು."

"ಇನ್ನೂ ಅಲ್ಲಿಯೆ ಇರುವರೋ ಏನೊ."

"ಇರಬಹುದು. ನಿನ್ನಿನ ಗದ್ದಲದಲ್ಲಿ ಅವರಿಗೂ ಏಟು ಬಿದ್ದಿರಬಾರದು ಅಷ್ಟೆ," ಎಂದು ನುಡಿದು ಸರಸು ಪ್ರಭುಸ್ವಾಮಿಗಳ ಮೂಲಕ ತಿಳಿದು ಬಂದಿದ್ದ ಗದ್ದಲದ ವಿವರಗಳನ್ನೆಲ್ಲ ಸೂಶಿಗೆ ತಿಳಿಸಿದಳು.

"ಇಂಥ ಗದ್ದಲವಲ್ಲೆಲ್ಲ ಸಿಕ್ಕಿಕೊಳ್ಳುವ ಆಸಾಮಿಯಲ್ಲ ಅದು. ಊರಿಗೆ ಬೆಂಕಿ ಹತ್ತಿದಾಗಲೂ ಹನುಮಪ್ಪ ಹೊರಗೇ ಎನ್ನುವಂತೆ ಈ ಶಾಸ್ತ್ರಿ ದೂರವೆ ಇರುತ್ತಾರೆ. ಹೌದೇ ಸರಸೂ, ಮಠದಲ್ಲಿ ಭಯಂಕರ ಬಡಿದಾಟವಾದಂತಾಯಿತಲ್ಲ! ಇದರ ಪರಿಣಾಮವೇನಾದೀತು ?"

"ಏನೇನಾಗುವದೊ. ಅಂತೂ ಬಡಿದಾಟ ಹೊಡೆದಾಟ ಅಂದರೇನೂ ನಮ್ಮೂರಿಗೆ ಹೊಸ ವಿಷಯವಲ್ಲ. ಪಾರ್ಟಿಗಳ ಗದ್ದಲವಂತೂ ಯಾವಾಗಲೂ ಇದ್ದೇ ಇರುತ್ತವೆ."

"ಇದೂ ಪಾರ್ಟಿಗಳ ಗದ್ದಲವೇ ಎನ್ನು ಹಾಗಾದರೆ."

"ಹೌದು. ಮಲ್ಲಪ್ಪಸೆಟ್ಟರು ಮತ್ತು ಚೆನ್ನಪ್ಪಗೌಡರ ನಡುವಿನ ಅನೇಕ ಬಡಿದಾಟಗಳಲ್ಲಿ ಇದೂ ಒಂದು. ಪ್ರಭುಸ್ವಾಮಿಗಳ ಕಡೆಗೆ ಗೌಡರು, ಸಿದ್ಧವೀರಸ್ವಾಮಿಗಳ ಕಡೆಗೆ ಸೆಟ್ಟರು. ಸುರುವಾಯಿತು ಹಣಾಹಣಿ. ಈ ಸಮಾಜದ ಹಣೆಬರಹವಿಷ್ಟೇ. ಯಾರೇನು ಮಾಡಲಾಗುತ್ತದೆ ?"

"ಆದರೆ ಪಾಪ, ಆ ಪ್ರಭುಸ್ವಾಮಿಗಳಿಗೆ ಮಾತ್ರ ಇದಾವುದೂ ಬೇಕಿಲ್ಲ. ಮಠಾಧಿಕಾರ ಸಿದ್ಧವೀರಸ್ವಾಮಿಗಳಿಗೇ ಇರಲೆಂದು ಅವರು ಹೇಳುತ್ತಾರೆ. ಅಧಿಕಾರದಲ್ಲಿ ಅವರಿಗೆ ಯಾವ ಆಸಕ್ತಿಯೂ ಇಲ್ಲ. ಹಳ್ಳಿಗರ ಸೇವೆಗಾಗಿ ಆಶ್ರಮವೊಂದನ್ನು ಸ್ಥಾಪಿಸುವುದಾಗಿ ಹೇಳುತ್ತಿದ್ದರು. ಇಂಥ ಸಾತ್ವಿಕ ವ್ಯಕ್ತಿಯನ್ನೂ ಈ ಗದ್ದಲಕ್ಕೆಳೆಯುವುದಲ್ಲಾ ಈ ಜನ!" ಎಂದ ಶಿವಮೂರ್ತಿ.

"ಆಶ್ರಮ ಸ್ಥಾಪಿಸುವರೇ ? ಎಲ್ಲಿ ?"

"ಇದೇ ಜಿಲ್ಲೆಯಲ್ಲಿ ಎಲ್ಲೋ ಒಂದು ಕಡೆಗೆ. ಅಂತೂ ಹಳ್ಳಿಯ ಸೀಮೆಯಲ್ಲಿ. ಹಳ್ಳಿಗರ ಸೇವೆ ಮಾಡಲು ಬದ್ಧಕಂಕಣರಾದ ತರುಣರು ಬೇಕೆಂದು ಹೇಳುತ್ತಿದ್ದರವರು. ಒಬ್ಬ ಡಾಕ್ಟರರು ಬೇಕೆಂದೂ ಹೇಳುತ್ತಿದ್ದರು...."

"ಹೇಗೇನು ? ಅಂತೂ ಮಾದರಿಯ ಸ್ವಾಮಿಗಳಪ್ಪ ಅವರು...."

"ಅವರನ್ನು ಕಂಡೊಡನೆ ಯಾರಿಗಾದರೂ ಹಾಗೇ ಅನ್ನಿಸುತ್ತೆ ಸುಶೀಲಮ್ಮ. ಕೊಂಚವೂ ಅಹಂಕಾರವಿಲ್ಲ, ಬಿಗುವಿಲ್ಲ, ಬಿಮ್ಮಾನವಿಲ್ಲ. ಚಿಕ್ಕ ಮಗುವೊಂದು ಮಾತನಾಡಿದ ಹಾಗೆ ಮಾತನಾಡುತ್ತಾರೆ. ಅವರ ಮುಖವೂ ಮಗುವಿನ ಹಾಗೇ ಕಾಣಿಸುತ್ತದೆ. ಎಲ್ಲರ ಬಗೆಗೂ ಕನಿಕರವೆ. ಇಂಥ ಸ್ವಾಮಿಗಳನ್ನು ಈ ಮೊದಲಿಂದೂ ನಾನು ಕಂಡೇ ಇರಲಿಲ್ಲ, ನೋಡಿರಿ."

"ನೀವು ಹೇಳುವದು ನಿಜ. ಇಂಥ ಸ್ವಾಮಿಗಳು ಬಹಳ ಜನರಿರಲಿಕ್ಕಿಲ್ಲ ನಮ್ಮ ಸಮಾಜದಲ್ಲಿ. ಆದರ್ಶ ಸ್ವಾಮಿಗಳೆಂದರೆ ನಮ್ಮ ಪ್ರಭುಸ್ವಾಮಿಗಳೇ," ಎಂದು ಸರಸುವೂ ದನಿಗೂಡಿಸಿದಳು.

"ನೀವಿಬ್ಬರೂ ಅವರ ಬಗ್ಗೆ ಇಷ್ಟೊಂದು ಹೇಳುವುದನ್ನು ಕೇಳಿ ಅವರನ್ನೊಮ್ಮೆ ನೋಡಲೇಬೇಕೆಂದು ಅನ್ನಿಸುತ್ತದೆ ಸರಸು. ನಿಜ ಹೇಳಬೇಕಾದರೆ ನನಗೆ ಈ ಸ್ವಾಮಿಗಳು ಸನ್ಯಾಸಿಗಳು ಅಂದರೆ ಕೊಂಚವೂ ನಂಬಿಗೆಯಿಲ್ಲ. ಕಾವಿಯ ಕಪನಿಯ ಒಳಗೆ ಕಪಟ, ಮೋಸ ತುಂಬಿವೆ. ವಿರಕ್ತರ ವೇಷ ಹಾಕಿ ಮೂಢ ಜನರನ್ನು ಸುಲಿದು ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಿದಾರೆ. ಇಂಥವರಿಗೆ ಸ್ವಾಮಿಗಳೆಂದಾದರೂ ಹೇಗೆ ಕರೆಯುವುದೊ. ಇವೇ ಈಗ ಹೋದರಲ್ಲ ನಮ್ಮ ಹರಿಹರ್. ಅವರಿಗೂ ಈ ಸ್ವಾಮಿಗಳನ್ನು ಕಂಡರೆ ಕೆಂಡದಂಥ ಸಿಟ್ಟು....ಇವರನ್ನೆಲ್ಲ ಮಠಗಳಿಂದ ಹೊರದೂಡಿ ಹೊಲಗಳಲ್ಲಿ ಕೂಲೀ ಕೆಲಸಕ್ಕೆ ಹಚ್ಚಬೇಕೆಂದು ಹೇಳುತ್ತಿರುತ್ತಾರೆ."

"ಇಂಥ ಉಗ್ರ ವಿಚಾರದವರಾದ ಅವರು ಶಾಸ್ತ್ರಿಯಂಥವರಲ್ಲಿ ಹೇಗಾದರೂ ಕೆಲಸಕ್ಕಿರುವರೊ !"

"ಬೇರೆ ಕಡೆ ಎಲ್ಲೂ ಕೆಲಸ ಸಿಕ್ಕಲಿಲ್ಲವಾದ್ದರಿಂದ ಸದ್ಯದ ಮಟ್ಟಿಗೆ ಅಲ್ಲಿ ಇದ್ದಾರಷ್ಟೆ. ಆಗಾಗ ಶಾಸ್ತ್ರಿಗಳಿಗೂ ಇವರಿಗೂ ಘರ್ಷಣೆ ನಡೆದೇ ಇರುತ್ತದೆ. ಇನ್ನೇನು ಅವರು ಬಹಳ ದಿನ ಅಲ್ಲಿ ಇರಲಿಕ್ಕಿಲ್ಲವೆಂದೇ ತೋರುತ್ತದೆ. ಹೇಗಾದರೂ ಮಾಡಿ, ತಮ್ಮದೊಂದು ಸ್ವತಂತ್ರ ಪತ್ರಿಕೆಯನ್ನು ಹೊರಡಿಸಿಯೇ ತೀರುವುದಾಗಿ ನಿರ್ಧರಿಸಿದಂತಿದೆ."

"ಎಲ್ಲಿ? ಇದೇ ಊರಿನಲ್ಲಿಯೆ ?"

"ಹೌದು. ಇಲ್ಲೇ." ಎಂದು ಸೂಶಿ ಹೇಳುತ್ತಿದ್ದ ಹಾಗೆ ಒಳಗಿನಿಂದ ಸುಬ್ಬಕ್ಕ ಬಂದು–"ಇವೊತ್ತೇ ಎಲ್ಲಾ ಮಾತೂ ತೀರಿಸಿಬಿಡಬೇಡ, ಏಳಮ್ಮ. ನಾಳೆಗೆ ಒಂದೆರಡು ಇರಲಿ. ಒಂಭತ್ತು ಗಂಟೆಯಾಗಿ ಹೋಯಿತು. ಪಾಪ, ಇವರಿಗೆ ಹಸಿವಾಗಿರಬಹುದು," ಎಂದು ನುಡಿದು ಶಿವಮೂರ್ತಿಯ ಕಡೆಗೆ ಹೊರಳಿ–"ನಮ್ಮ ಸೂಶಿ ಅಂದರೆ ಯಾವಾಗಲೂ ಹೀಗೇ ಮೂರ್ತಿ. ಮಾತು ಒಂದು ಇದ್ದರಾಯಿತು. ಪ್ರಪಂಚವೇ ಬೇಡ ಆಕೆಗೆ!" ಎಂದಳು.

"ನನಗೊಬ್ಬಳಿಗೆ ಪ್ರಪಂಚ ಬೇಡವಾದರೆ ನನ್ನ ಸರಸಿಗಾದರೂ ಬೇಡವೇ?" ಎಂದು ಮೆಲುದನಿಯಲ್ಲಿ ನುಡಿದು, ಸರಸುವಿನ ಕೆನ್ನೆ ತೀಡುತ್ತ ಸೂಶಿ ಮೇಲಕ್ಕೆದ್ದಳು.

[೧೭]

ಅವಸರವಸರವಾಗಿ ಶಿವಮೂರ್ತಿ ಮನೆಯ ಮುಂದಿನ ಮೆಟ್ಟಲುಗಳನ್ನೇರಿ ಬಂದ.

ಸಾಯಂಕಾಲ ಏಳು ಗಂಟೆ. ಕೈಸಾಲೆಯಲ್ಲಿನ ಪುಟ್ಟ ಮೇಜಿನ ಮೇಲೆ ಕಂದೀಲು ಉರಿಯುತ್ತಿತ್ತು. ಒಳಗಡೆ ಯಾರ ಸುಳಿವೂ ಇರಲಿಲ್ಲ.

ಹೊರಗೆ ಜಿಟಜಿಟ ಮಳೆ ಸುರಿಯುತ್ತಲಿತ್ತು. ಶಿವಮೂರ್ತಿಯೂ ತೋಯಿಸಿಕೊಂಡೇ ಬಂದಿದ್ದ.

ತಲೆಗೂದಲಿನ ಮೇಲೆ ಸುರಿದಿದ್ದ ಮಳೆಯ ನೀರನ್ನು ಕೊಡಹುತ್ತ ಆತ ಕುರ್ಚಿಯೊಂದರ ಮೇಲೆ ಕುಳಿತುಕೊಂಡ. ಕೊಂಚ ಬೇಸರದ ದನಿಯಿಂದಲೇ ಕೂಗಿದ:

"ಸರಸೂ!"

ಆತನ ಕರೆಯನ್ನು ಕೇಳಿ ಅಡುಗೆಯ ಮನೆಯಲ್ಲಿದ್ದ ಸುಬ್ಬಕ್ಕ ಎದ್ದು ಕೈಸಾಲೆಗೆ ಬಂದಳು.

"ಸರಸು ಇದೇ ಈಗ ಹೊರಗೆ ಹೋದಳಪ್ಪ. ಇಷ್ಟು ಹೊತ್ತೂ ನಿಮ್ಮ ದಾರಿ ನೋಡಿದಳು."

"ಹೊರಗೆ ಹೋದಳೇ? ಇಂಥ ಮಳೆಯಲ್ಲಿ? ಎಲ್ಲಿಗೆ ಹೋದಳು?"

"ಸಿನಿಮಾಕ್ಕೆ."

"ಸಿನಿಮಾಕ್ಕೆ? ಇಂಥ ಮಳೆಯಲ್ಲಿ?"

"ಮುಂಜಾನೆಯೇ ನಿಮಗೆ ಹೇಳಿದ್ದಳಂತಲ್ಲ. ನೀವೂ ಬರುವುದಾಗಿ ಒಪ್ಪಿದ್ದಿರಂತಲ್ಲ?"

"ನಾನು ಒಪ್ಪಿದ್ದೆನೇ? ನನಗೆ ಈ ಸಿನಿಮಾ ಅಂದರೇನೇ ಆಗದು ಸುಬ್ಬಕ್ಕ."

"ಇನ್ನೂ ಹುಡುಗಿ. ಸಿನಿಮಾ ನಾಟಕ ಅಂತ ಆಸೆಯಿರೋದೂ ಸ್ವಾಭಾವಿಕ. ಹೋಗಲಿ ಬಿಡಿರಪ್ಪ."

"ಹೋಗಲಿ. ಯಾರು ಬೇಡವೆನ್ನುತ್ತಾರೆ ಸುಬ್ಬಕ್ಕ? ಆದರೆ....ಆದರೆ ....ನಮ್ಮ ಇಂದಿನ ಪರಿಸ್ಥಿತಿಯನ್ನು ಸ್ವಲ್ಪ ಲಕ್ಷ್ಯದಲ್ಲಿಟ್ಟುಕೊಂಡಿರಬೇಕಲ್ಲ.... ಇತ್ತ ನೋಡಿದರೆ ನನಗೆ ಕೆಲಸ ಸಿಕ್ಕಲೊಲ್ಲದು, ಒಂದು ತಿಂಗಳಿನಿಂದ ಒಂದೇ ಸಮನೆ ತಿರುಗುತ್ತಿದ್ದೇನೆ. ನಿಮ್ಮ ಮನೆಯ ಆಸರೆಯಿದೆಯೆಂದು ನೆಟ್ಟಗಾಯಿತು. ಇಲ್ಲದಿದ್ದರೆ ಎಂಥ ತೊಂದರೆ ಬರುತ್ತಿತ್ತು...."

"ಇರಲಿ ಬಿಡಿರಪ್ಪ. ನೀವು ಬೇರೆ ಅಂತ ನಾವಾರೂ ತಿಳಿದೇ ಇಲ್ಲವಲ್ಲ? ನನ್ನ ಸೂಶಿಯ ಹಾಗೆ ಸರಸುವೂ ಒಬ್ಬಳು ಮಗಳು ನನಗೆ. ನೀವು ಅಂಥದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಕೊರಗಬಾರದು."

"ಹೀಗೆ ಹೇಳುವದು ನಿಮ್ಮ ದೊಡ್ಡ ಮನಸ್ಸು ಸುಬ್ಬಕ್ಕ. ಆದರೆ ನಿಮ್ಮ ಈ ಔದಾರ್ಯದ ದುರುಪಯೋಗ ಮಾಡಿಕೊಳ್ಳಬಾರದಲ್ಲ ನಾವು....ನಿಮ್ಮಲ್ಲಿ ಧ್ವಜ ಊರಿ ಒಂದು ತಿಂಗಳ ಮೇಲಾಗುತ್ತ ಬಂತು. ನೀವೇನು ಇನಾಮದಾರರೇ? ಜಾಗೀರುದಾರರೇ? ನಿಮಗಾದರೂ ಎಷ್ಟು ದಿನ ತೊಂದರೆ ಕೊಡೋದು?"

"ಇರಲಿ ಬಿಡಿರಪ್ಪ. ಏನು ಮಹಾ ಉಪಕಾರ ಮಾಡಿದೆವು ಅಂತ ಇಷ್ಟುದ್ದ ಹೇಳುತ್ತೀರಿ. ನೀವಿಬ್ಬರೇನು ನಮಗೆ ಭಾರವಲ್ಲ. ಸೂಶಿ ತರುವ ನೂರು ರೂಪಾಯಿಗಳಲ್ಲಿ ನಾಲ್ಕು ಜನರು ಸುಖವಾಗಿ ಬದುಕಬಹುದು...."

"ಸುಬ್ಬಕ್ಕನವರೆ....," ಎಂದು ಹೇಳುತ್ತಿದ್ದ ಹಾಗೆ ಶಿವಮೂರ್ತಿಗೆ ಕತ್ತು ಬಿಗಿದು ಬಂದಿತು. ಆ ತಾಯಿಯ ಔದಾರ್ಯವನ್ನೂ ಪ್ರೇಮಲ ಸ್ವಭಾವವನ್ನೂ ನೆನೆನೆದು ನೆನೆದು ಆತನಿಗೆ ಕಣ್ಣೀರು ಚಿಮ್ಮಿತು. ನಾನನ್ನು

ಅಷ್ಟಕ್ಕೇ ನಿಲ್ಲಿಸಿ ಆತ ತಟ್ಟನೆ ಮೇಲಕ್ಕೆದ್ದು, ಒಳಗಿನ ಕೊಟಡಿಗೆ ತೆರಳಿ ಅಲ್ಲಿದ್ದ ಪಿಟೀಲಿನ ಪೆಟ್ಟಿಗೆಯನ್ನು ತೆಗೆದು ಕಂಕುಳಲ್ಲಿರಿಸಿಕೊಂಡು–"ಈಗ ಬರುತ್ತೇನೆ, ಸುಬ್ಬಕ್ಕ," ಎಂದಿಷ್ಟೆ ನುಡಿದು ಮನೆಯಿಂದ ಹೊರಟುಬಿಟ್ಟ.

ಸಣ್ಣಗೆ ಹನಿಯುತ್ತಿದ್ದ ಮಳೆಯಲ್ಲಿ ನೆನೆಯುತ್ತ ಆತ ಬಿರುಬಿರನೆ ಹೆಜ್ಜೆ ಹಾಕುತ್ತ ಕೋಟೆಯ ಬಳಿ ಬಂದ. ಪಟ್ಟಣದ ಪೂರ್ವದಿಕ್ಕಿನಲ್ಲಿದ್ದ ಆ ಹಳೆಯ ಕಾಲದ ಕೋಟೆ, ಅವನು ಆ ಊರಿಗೆ ಬಂದಂದಿನಿಂದ ಆತನ ಪ್ರೀತಿಯ ತಾಣವಾಗಿದ್ದಿತು. ವಿಶಾಲವೂ ಭವ್ಯವೂ ಆದ ಕೋಟೆ. ನಾಲ್ಕು ಕಡೆಗೂ ಬುರುಜುಗಳು. ಸುತ್ತುಮುತ್ತಲೂ ಆಳವಾದ ಕಂದಕ. ಕೋಟೆಯ ಉತ್ತರದಿಕ್ಕಿಗೆ ಹಳೆಯ ಕಾಲದ ಭಾರಿ ಕೆರೆಯೊಂದು ಇದ್ದಿತು. ಕೋಟೆಯ ಬುರುಜಿನ ಮೇಲೆ ಹೋಗಿ ಕುಳಿತುಕೊಂಡರೆ ಎದುರಿಗಿದ್ದ ಆ ಕೆರೆ ಚಿಕ್ಕ ಸಾಗರದ ಹಾಗೆ ಕಾಣುತ್ತಿತ್ತು. ಆ ಊರಿಗೆ ಬಂದಂದಿನಿಂದ ಶಿವಮೂರ್ತಿ ಎಷ್ಟೋ ಸಲ ಆ ಬುರುಜಿನ ಮೇಲೆ ಹೋಗಿ ಪಿಟೀಲು ಬಾರಿಸುತ್ತ ಕುಳಿತು ಕೊಳ್ಳುತ್ತಿದ್ದ. ಕೆಲಸಕ್ಕಾಗಿ ಅಲೆದು ಅಲೆದು ತುಂಬ ಬೇಸರವಾದಾಗಲೆಲ್ಲ ಅಲ್ಲಿಗೆ ಬಂದು ಕೆರೆಯ ತೆರೆಗಳನ್ನು ದಿಟ್ಟಿಸುತ್ತ ಎಲ್ಲವನ್ನೂ ಮರೆಯಲೆತ್ನಿಸುತ್ತಿದ್ದ.

ಈ ದಿನವೂ ಆತನಿಗೆ ತುಂಬ ಬೇಸರವಾಗಿದ್ದಿತು. ಬೆಳಗಿನಿಂದ ಸಾಯಂಕಾಲದ ವರೆಗೆ ಅಂಗಡಿಗಳನ್ನೂ ಕಚೇರಿಗಳನ್ನೂ ಸುತ್ತಿದ್ದಾಗಿದ್ದಿತು. ದಲ್ಲಾಲಿ ಅಂಗಡಿಗಳಲ್ಲಿ ಲೆಕ್ಕ ಬರೆಯುವ ಕೆಲಸವಾದರೂ ಸಿಕ್ಕಬಹುದೇನೊ ಎಂಬ ಆಸೆಯಿಂದ ಆ ಪೇಟೆಯಲ್ಲೂ ಅಲೆದುಬಂದಿದ್ದ. ಯಾವ ಅಂಗಡಿಯಲ್ಲೂ ಕೆಲಸವಿರಲಿಲ್ಲ. ಒಂದೆರಡು ಕಡೆಗಳಲ್ಲಿ ಹಿಂದಿನ ಅನುಭವವೇನೆಂದು ವಿಚಾರಿಸಿದ್ದರು. ಲೆಕ್ಕ ಬರೆಯುವುದರಲ್ಲಿ ಆತನಿಗೆ ಕೊಂಚವೂ ಅನುಭವವಿರಲಿಲ್ಲ. ತಾನು ಮಾಮಲೇದಾರರ ಕಚೇರಿಯಲ್ಲಿ ಕಾರಕೂನನಾಗಿ ದುಡಿದುದನ್ನು ವಿವರಿಸಿ ಲೆಕ್ಕ ಬರೆಯುವುದನ್ನೂ ಬೇಗನೆ ಕಲಿಯಬಲ್ಲೆನೆಂದು ಆತ ಉತ್ತರವಿತ್ತಾಗ ಆ ದಲ್ಲಾಲಿ ವರ್ತಕರು ನಕ್ಕು–"ಈ ಜಮಾಖರ್ಚಿನ ಕೆಲಸವೆಂದರೆ ಹುಡುಗಾಟವಲ್ಲ ತಮ್ಮ. ಹತ್ತಿಪ್ಪತ್ತು ವರ್ಷಗಳಿಂದ ಇದೇ ಕೆಲಸ ಮಾಡುತ್ತ ಬಂದವರೇ ಒಮ್ಮೊಮ್ಮೆ ಬಾಯಿ ಬಾಯಿ ಬಡಿದುಕೊಳ್ಳುತ್ತಾರೆ. ಇದೆಲ್ಲ ನಿಮ್ಮಂಥವರಿಗೆ ನೀಗುವ ಮಾತಲ್ಲ," ಎಂದು ಆತನನ್ನು ಸಾಗಹಾಕಿದ್ದರು.

ಪ್ರಾಥಮಿಕ ಸಾಲೆಯ ಶಿಕ್ಷಕನ ಕೆಲಸವಾದರೂ ದೊರೆಯಬಹುದೇನೋ ಎಂಬ ಆಸೆಯಿಂದ ಆತ ಸ್ಕೂಲ್‌ಬೋರ್ಡಿಗೂ ಅರ್ಜಿ ಹಾಕಿದ್ದನಲ್ಲದೆ ಮುಖ್ಯಾಧಿಕಾರಿಗಳ ಕಚೇರಿಗೆ ನಾಲ್ಕೈದು ಸಲ ಹೋಗಿ ಅವರನ್ನು ಕಾಣಲು ಪ್ರಯತ್ನಿಸಿ ನಿರಾಶನಾಗಿದ್ದ. ಕಚೇರಿಯ ಕಾರಕೂನನೊಬ್ಬ ಈತನನ್ನು ಕಂಡು, ಈತ ಅಲ್ಲಿಗೆ ಬಂದುದರ ಕಾರಣವನ್ನು ಕೇಳಿಕೊಂಡು ಲಂಚದ ವಿಷಯ ಸೂಚಿಸಿದ್ದೂ ಆಗಿತ್ತು. "ಕೆಲಸವೇನೋ ಇಂದೇ ಸಿಗುತ್ತದೆ. ಟೆಂಪರರಿ ಕೆಲಸ. ಆದರೆ ಅದಕ್ಕಾಗಿ ಮೂರುನೂರು ಅರ್ಜಿ ಕಾದಿವೆ. ಏನಾದರೂ ಕಾಣಿಕೆ ಕೊಡಲು ಸಾಧ್ಯವಿದ್ದರೆ ಹೇಳಿ. ನಾನು ಪ್ರಯತ್ನ ಮಾಡಿ ನೋಡುತ್ತೇನೆ," ಎಂದು ಹೇಳಿದ್ದ. ಎರಡುನೂರು ರೂಪಾಯಿ ತಂದು ಕೊಟ್ಟಲ್ಲಿ ಕೆಲಸ ಸಿಕ್ಕಬಹುದೆಂದೂ ಆಸೆ ತೋರಿಸಿದ್ದ. ಜುಗುಪ್ಸೆ, ತಿರಸ್ಕಾರ, ಬೇಸರಗಳಿಂದ ಆ ಪ್ರಯತ್ನವನ್ನು ತೊರೆದಿದ್ದ ಶಿವಮೂರ್ತಿ.

ಕೆಲಸದ ಜತೆಯಲ್ಲೇ ವಾಸದ ಮನೆಯೊಂದನ್ನೂ ಆತ ಹುಡುಕಬೇಕಾಗಿದ್ದಿತು. ಅದಕ್ಕಾಗಿ ಊರಿನ ಎಲ್ಲ ಬೀದಿಗಳನ್ನೂ ಸುತ್ತಿದ್ದಾಗಿದ್ದಿತು. ಎಲ್ಲಿಯೂ ತೆರವಾದ ಸ್ಥಳ ಸಿಕ್ಕಿರಲಿಲ್ಲ. ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ ಕೆಳತರಗತಿಯ ಜನರು ವಾಸಿಸುವ ಪ್ರದೇಶದಲ್ಲಿ ಅಟ್ಟದ ಮೇಲಿನ ಕೊಟಡಿಗಳೆರಡು ಬಾಡಿಗೆಗೆ ಸಿಕ್ಕುವಂತಿದ್ದುವು. ಅಲ್ಲಿ ನೀರಿನ ಸೌಕರ್ಯವಿರಲಿಲ್ಲ. ಚೌಕದಲ್ಲಿದ್ದ ಭಾವಿಯಿಂದ ನೀರು ತರಬೇಕಾಗುತ್ತಿದ್ದಿತು. ಮನೆಯ ಸುತ್ತುಮುತ್ತಲಿನ ವಾತಾವರಣವೂ ಚೆನ್ನಾಗಿರಲಿಲ್ಲ. ಇಕ್ಕಟ್ಟಾದ ಸ್ಥಳ. ಗಾಳಿ ಬೆಳಕುಗಳಿಗೆ ಎಡೆಯಿರಲಿಲ್ಲ. ಬೀದಿಯೆಲ್ಲವೂ ಕೆಸರು ಕೊಳೆಯಿಂದ ಕೂಡಿ ದುರ್ಗಂಧ ಬೀರುವಂತಹದು. ಇಂಥ ಸ್ಥಳದಲ್ಲಿ ವಾಸಿಸಲು ಸರಸು ಒಪ್ಪಬಹುದೇ ಎಂದು ಶಿವಮೂರ್ತಿ ಸಂದೇಹಗೊಂಡಿದ್ದ. ಅದೇ ದಿನವೆ ಆತ ಆ ಮನೆಯನ್ನು ಕಂಡು ಬಂದಿದ್ದ. ಅಂಥ ಕೊಳಕು ಪ್ರದೇಶದಲ್ಲಿನ ಆ ಎರಡು ಕೊಟಡಿಗಳಿಗೆ ಹದಿನೈದು ರೂಪಾಯಿ ಬಾಡಿಗೆ ತೀರ ಹೆಚ್ಚೇ ಆದರೂ ಬೇರೆ ಮನೆ ಸಿಕ್ಕಲು ಸಾಧ್ಯವಿರಲಿಲ್ಲವಾದುದರಿಂದ ನಿರುಪಾಯವಾಗಿ ಅದಕ್ಕೇ ಶರಣು ಹೋಗಬೇಕಾಗಿ ಬಂದಿತ್ತು. ಅಂದೇ ಸರಸುವನ್ನು ಕರೆದು ತಂದು ಆ ಸ್ಥಳವನ್ನಾಕೆಗೆ ತೋರಿಸಿ, ಮಾರನೆಯ ದಿನ ಅಲ್ಲಿಗೆ ಬಿಡಾರ ಸಾಗಿಸುವುದಾಗಿ ನಿರ್ಧರಿಸಿ ಆತ ಸೋಶಿಯ ಮನೆಗೆ ಬಂದಿದ್ದ. ಇಷ್ಟು ದಿನ ತನ್ನ

ಮೇಲಿದ್ದ ಹೊಣೆಗಾರಿಕೆಯಲ್ಲಿ ಅರ್ಧ ಇಳಿದು ಹೋದಂತೆ ಆತನಿಗೆನ್ನಿಸಿ ಕೊಂಚ ಉತ್ಸಾಹವೂ ತಲೆದೋರಿದ್ದಿತು. ಸರಸುವನ್ನು ಯಾವಾಗ ಕಾಣುವೆನೊ, ಆಕೆಗೆ ಆ ಮನೆಯನ್ನು ಯಾವಾಗ ತೋರಿಸುವೆನೊ ಎಂದು ಆತ ಕಾತರನಾಗಿದ್ದ. ಆದರೆ ಮನೆಗೆ ಬರುತ್ತಲೂ ಆಕೆ ಸಿನಿಮಾಕ್ಕೆ ಹೊರಟು ಹೋದುದನ್ನು ತಿಳಿದಾಗ ಆತನಿಗೆ ನಿರಾಸೆಯಾಗಿದ್ದಿತು. ಆತನ ಉತ್ಸಾಹವೆಲ್ಲ ಇಳಿದು ಹೋಗಿ ತೀವ್ರ ಉದಾಸೀನತೆ ಆತನ ಮನಸ್ಸನ್ನು ಕವಿದಿದ್ದಿತು.

ಜಿಟ ಜಿಟ ಜಿಟ ಜಿಟ ಸುರಿಯುತ್ತಲೇ ಇತ್ತು ಮಳೆ.

ಕೋಟೆಯ ಗೋಡೆಗಿದ್ದ ಮೆಟ್ಟಲುಗಳನ್ನೇರಿ ಮೇಲೆ ಬಂದ ಶಿವಮೂರ್ತಿ. ತನಗೆ ಅತ್ಯಂತ ಪ್ರಿಯವಾಗಿದ್ದ ಬುರುಜಿನ ಬಳಿ ಬಂದು ಕೆರೆಗೆ ಎದುರಾಗಿ ಕುಳಿತುಕೊಂಡ. ಪಿಟೀಲು ತೊಡೆಯ ಮೇಲೊರಗಿದ್ದಿತು. ಅದನ್ನೆತ್ತಿಕೊಂಡು ಬಾರಿಸುವ ಯೋಚನೆ ಬರಲಿಲ್ಲ. ಯಾವುಯಾವುವೊ ವಿಚಾರಗಳು ಆತನ ಮನಸ್ಸಿನಲ್ಲಿ ಕೋಲಾಹಲವನ್ನೆಬ್ಬಿಸಿದ್ದುವು. ಸರಸುವಿನ ಸಿನಿಮಾ ಹುಚ್ಚು! ಹೌದು, ಹುಚ್ಚು ಅಲ್ಲದಿನ್ನೇನು ಅದು? ವಾರದಲ್ಲಿ ಎರಡು ಮೂರು ಬಾರಿ ಸಿನಿಮಾ ನೋಡದಿದ್ದರೆ ಸಮಾಧಾನವೇ ಇರುತ್ತಿರಲಿಲ್ಲ ಆಕೆಗೆ. ಆ ಊರಿಗೆ ಬಂದಂದಿನಿಂದ ಥಿಯೆಟರುಗಳಿಗೆ ಭೆಟ್ಟಿಕೊಡುವುದೇ ಆಕೆಯ ಪ್ರಧಾನ ಕೆಲಸವಾಗಿದ್ದಿತು. ಆತನಿಗೋ, ಸಿನಿಮಾ ಎಂದರೆ ತಲೆನೋವು....

ತನ್ನ ಮದುವೆಯ ನಾಟಕ ನಡೆದ ಮರುದಿನ ಸೂಶಿ ಸಂತೋಷಕ್ಕಾಗಿ ಎಲ್ಲರನ್ನೂ ಸಿನಿಮಾಕ್ಕೆ ಕರೆದುಕೊಂಡು ಹೋಗಿದ್ದಳು. ಆ ಚಿತ್ರಪಟವೂ ಉತ್ತಮದರ್ಜೆಯದಾಗಿದ್ದಿತು. ಆದರೂ ತನ್ನ ಮನಸ್ಸು ಅದರಲ್ಲಿ ರಮಿಸಿರಲಿಲ್ಲ. ಸರಸು ಮಾತ್ರ ತುಂಬ ಉತ್ಸಾಹದಿಂದ ಅದನ್ನು ನೋಡುತ್ತಲಿದ್ದಳು. ಮನೆಗೆ ಬಂದ ಬಳಿಕ ತಾಸೆರಡುತಾಸುಗಳ ವರೆಗೆ ಅದರ ಮಾತೇ ನಡೆದಿದ್ದಿತು. ಒಂದು ಸಲ ನೋಡಿದರೂ ತೃಪ್ತಿಯಾಗಿರಲಿಲ್ಲ ಆಕೆಗೆ. ಮಾರನೆಯ ದಿನವೆ ಮತ್ತೊಂದು ಸಲ ನೋಡಲು ಸಿದ್ಧಳಾಗಿ ನಿಂತಳು. ಸೂಶಿಗೆ ಬಿಡುವಾಗುವಂತಿರಲಿಲ್ಲ. ಒಮ್ಮೆ ನೋಡಿದ ಚಿತ್ರವನ್ನು ಮತ್ತೊಮ್ಮೆ ನೋಡುವುದರಲ್ಲಿ ಸ್ವಾರಸ್ಯವೇನೂ ಇಲ್ಲವೆಂದೇ ಆಕೆ ಹೇಳಿದ್ದಳು. ಸುಬ್ಬಕ್ಕನೂ ಬರಲಿಲ್ಲ. ತನಗೆ ಕೊಂಚವೂ ಇಷ್ಟವಿರಲಿಲ್ಲವಾದರೂ ಸರಸುವಿನ ಬಲವಂತ

ದಿಂದಾಗಿ ಮತ್ತೆ ಅದೇ ಚಿತ್ರಪಟವನ್ನು ನೋಡಲು ಹೋಗಬೇಕಾಗಿ ಬಂದಿದ್ದಿತು. ಮೂರು ಗಂಟೆಗಳ ಕಾಲ ನರಕಯಾತನೆಯನ್ನನುಭವಿಸಿ ಹೇಗೋ ಎದ್ದುಬಂದುದಾಗಿದ್ದಿತು. ದಾರಿಯಲ್ಲಿ ಸರಸು ಉತ್ಸಾಹದಿಂದ ಚಿತ್ರ ವಿಮರ್ಶೆ ಮಾಡುತ್ತಲಿದ್ದಳು. ಅದರ ಕಡೆಗೆ ತನಗೆ ಕೊಂಚವೂ ಗಮನವಿರಲಿಲ್ಲ....

ಅನಂತರ, ಮತ್ತೆ ಏಳೆಂಟು ಸಲ ಸರಸುವಿನ ಒತ್ತಾಯಕ್ಕೊಳಗಾಗಿ ಸಿನಿಮಾಕ್ಕೆ ಹೋಗಬೇಬೇಕಾಗಿ ಬಂದಿದ್ದಿತು. ತನ್ನ ಹತ್ತಿರ ಹೆಚ್ಚು ಹಣವಿರಲಿಲ್ಲ. ಅಲ್ಲಿಗೆ ಬಂದಾಗ ಜೇಬಿನಲ್ಲಿದ್ದುದೆಂದರೆ ಕೇವಲ ಅರವತ್ತು ರೂಪಾಯಿ. ಇನ್ನೂ ಕೆಲಸ ಸಿಕ್ಕಿರಲಿಲ್ಲ. ಬೇಗ ಸಿಕ್ಕಬಹುದೆಂಬ ಭರವಸೆಯೂ ಇರಲಿಲ್ಲ. ಸೂಶಿಯ ಅತಿಥಿಗಳಾಗಿ ಅಲ್ಲಿಯೆ ಶಾಶ್ವತವಾಗಿ ತಳವೂರುವುದಂತೂ ಸಾಧ್ಯವಿರಲಿಲ್ಲ. ಬೇಗನೆ ಬೇರೊಂದು ಮನೆ ಮಾಡಿ ಅಲ್ಲಿ ಸಂಸಾರ ಹೂಡಬೇಕಾಗಿದ್ದಿತು. ಸಂಸಾರವೆಂದರೆ ಎಲ್ಲವೂ ಹೊಸ ಸಂಸಾರ. ಕೊಡ, ತಂಬಿಗೆ, ಪಾತ್ರೆಗಳಿಂದ ಮೊದಲು ಮಾಡಿಕೊಂಡು ಕಟ್ಟಿಗೆ ಕುಳ್ಳುಗಳ ವರೆಗೆ ಎಲ್ಲವನ್ನೂ ಹೊಸದಾಗಿ ಕೊಳ್ಳಬೇಕಾಗಿದ್ದಿತು. ಬಾಡಿಗೆಯ ಮನೆಗೆ ಮುಂಗಡವಾಗಿ ಹಣವನ್ನೂ ಕೊಡಬೇಕಾಗಿ ಬಂದೀತು. ಸಾಮಗ್ರಿಗಳನ್ನೆಲ್ಲ ಕೊಂಡು, ಬಾಡಿಗೆಯ ತಂಟೆ ತೀರಿಸಿ, ಕೆಲಸ ಸಿಕ್ಕುವ ವರೆಗೆ ಜೀವನ ನಡೆಸಬೇಕಾಗಿದ್ದಿತು. ಅದೆಲ್ಲವೂ ಆ ಅರವತ್ತು ರೂಪಾಯಿಗಳಲ್ಲೀ ನಡೆಯಬೇಕು, ಎಂಬ ಯೋಚನೆ ಬಂದಾಗಲೆಲ್ಲ ಸರಸುವಿನ ಆ ಸಿನಿಮಾ ಹುಚ್ಚು ಶಿವಮೂರ್ತಿಗೆ ಬೇಸರವನ್ನುಂಟುಮಾಡಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಲ್ಲದೆ ಮೊದಲಿನಿಂದಲೂ ಆತ ಬಡತನದಲ್ಲಿ ಬೆಳೆದು ಬಂದವ. ಸಿನಿಮಾ, ನಾಟಕ ಮೊದಲಾದುವುಗಳ ಚಟವೇ ಆತನಿಗೆ ಅಪರಿಚಿತವಾಗಿದ್ದಿತು. ಸರಸು ಶ್ರೀಮಂತರ ಕುವರಿ. ಆಕೆ ಅವುಗಳನ್ನೆಲ್ಲ ಬಯಸುವುದು ಅಸಹಜವಾಗಿರಲಿಲ್ಲ. ಆದರೆ—ತಮ್ಮ ಪರಿಸ್ಥಿತಿಯನ್ನು ಕಡೆಗಣಿಸಿ ಆಕೆ ಈ ರೀತಿ ವರ್ತಿಸುವುದು ಮಾತ್ರ ಅಸಹನೀಯವಾಗಿದ್ದಿತು ಶಿವಮೂರ್ತಿಗೆ. ಬೇರೆಯವರ ಮನೆಯಲ್ಲಿದ್ದುದರಿಂದ ಆತ ತನ್ನ ಎದೆಯಲ್ಲಿನ ವಿಚಾರಗಳೆಲ್ಲವನ್ನೂ ಆಕೆಗೆ ಬಿಚ್ಚಿ ಹೇಳುವುದು ಸಾಧ್ಯವಿರಲಿಲ್ಲ. ಅವರಿಬ್ಬರೂ ಮಲಗಿಕೊಳ್ಳುತ್ತಿದ್ದ ಕೊಟಡಿಗೆ ಹೊಂದಿಕೊಂಡೇ ಇದ್ದ ಕೈಸಾಲೆಯಲ್ಲಿ ಸೂಶಿಯೂ ಆಕೆಯ ತಾಯಿಯೂ ಮಲಗಿಕೊಂಡಿರುತ್ತಿದ್ದ ಕಾರಣದಿಂದ,

ತಾವು ಎಂಥ ಸಿಸುದನಿಯಲ್ಲಿ ಮಾತನಾಡಿದರೂ ಸಹ ಅವರಿಗೆ ಕೇಳಿಸುವಂತಿದ್ದಿತಾದ್ದರಿಂದ, ಅಲ್ಲಿ ಏನನ್ನೂ ಮಾತನಾಡುವ ಗೊಡವೆಗೇ ಹೋಗುತ್ತಿರಲಿಲ್ಲ ಶಿವಮೂರ್ತಿ.

ತಾನು ಬೇರೆಯವರ ಮನೆಯಲ್ಲಿರುವುದರ ಅರಿವೇ ಇದ್ದಂತಿರಲಿಲ್ಲ ಸರಸುವಿಗೆ. ಸುಬ್ಬಕ್ಕ ಒಬ್ಬಾಕೆಯೆ ಮನೆಗೆಲಸಗಳೆಲ್ಲವನ್ನೂ ನೀಗಿಸಿಕೊಂಡು ಹೋಗುತ್ತಿದ್ದಳು. ಆಕೆ ಬೆಳಗಿನಲ್ಲಿ ಬೇಗ ಎದ್ದು ದೂರದ ಭಾವಿಗೆ ಹೋಗಿ ಹತ್ತು ಹನ್ನೆರಡು ಕೊಡ ನೀರು ತಂದು, ಸ್ನಾನಕ್ಕೆ ನೀರು ಬಿಸಿ ಮಾಡಿ, ಚಹಕ್ಕೆ ಎಸರಿಡುವ ಹೊತ್ತಿಗೆ ಸೂಶಿ ಏಳುತ್ತಿದ್ದಳು. ಶಿವಮೂರ್ತಿಯೂ ಏಳುತ್ತಿದ್ದ. ಸರಸು ಮಾತ್ರ ಹಾಸುಗೆ ಬಿಟ್ಟು ಬರುತ್ತಿರಲಿಲ್ಲ. ಚಹ ಸಿದ್ಧವಾಗುವ ವರೆಗೂ ರಗ್ಗು ಹೊದೆದುಕೊಂಡು ಸುಖವಾಗಿ ಒರಗಿರುತ್ತಿದ್ದಳು. ಬೇಗನೆ ಎದ್ದು ಸುಬ್ಬಕ್ಕನ ಕೆಲಸಗಳಲ್ಲಿ ನೆರವಾಗಬೇಕೆಂಬ ವಿಚಾರವೇ ಆಕೆಗೆ ಬರುತ್ತಿರಲಿಲ್ಲ. ಮೂರ್ತಿಯೇ ಬಂದು ಆಕೆಯನ್ನೆಬ್ಬಿಸಬೇಕಾಗುತ್ತಿದ್ದಿತು. ಚಹ ಕುಡಿದು ಮುಗಿಸಿದ ಬಳಿಕ ಸೂಶಿ ಆಸ್ಪತ್ರೆಗೆ ಹೊರಟುಹೋಗುತ್ತಿದ್ದಳು. ಶಿವಮೂರ್ತಿ ಕೆಲಸ ಹುಡುಕಲು ಹೊರಡುತ್ತಿದ್ದ. ಸರಸು ಮನೆಯಲ್ಲೇ ಇದ್ದರೂ ಯಾವುದಾದರೊಂದು ಕಾದಂಬರಿಯನ್ನು ಹಿಡಿದುಕೊಂಡು ಕುಳಿತಿರುತ್ತಿದ್ದಳೇ ಹೊರತು ಸುಬ್ಬಕ್ಕನಿಗೆ ಅಡುಗೆಯಲ್ಲಿ ನೆರವಾಗುತ್ತಿರಲಿಲ್ಲ. ಕೆಲಸಕ್ಕಾಗಿ ಅಲೆದು ಅಲೆದು ಶಿವಮೂರ್ತಿ ಮಧ್ಯಾಹ್ನ ಮನೆಗೆ ಬಂದಾಗ ಕಾದಂಬರೀ ವಾಚನದಲ್ಲಿ ತೊಡಗಿಕೊಂಡ ಸರಸುವನ್ನು ಕಂಡು ಸಹಜವಾಗಿಯೆ ಆತನಿಗೆ ಬೇಸರು ಬರುತ್ತಿತ್ತು. ಊಟವಾದ ಬಳಿಕ ಸುಬ್ಬಕ್ಕ ತಟ್ಟೆಗಳನ್ನೂ ಪಾತ್ರೆಗಳನ್ನೂ ತೊಳೆದು ಹೊಲಿಗೆಯ ಯಂತ್ರವನ್ನು ಮುಂದಿರಿಸಿಕೊಂಡು ಬಟ್ಟೆ ಹೊಲಿಯುವ ಕಾಯಕದಲ್ಲಿ ತೊಡಗುತ್ತಿದ್ದಳು. ಸಂಜೆಯಾಗುವ ವರೆಗೂ ಆ ಕೆಲಸ ನಡೆಯುತ್ತಿತ್ತು. ಸುಬ್ಬಕ್ಕ ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಅಕ್ಕಪಕ್ಕದ ಜನರ ಹಾಗು ಪರಿಚಿತರ ಬಟ್ಟೆಗಳನ್ನೆಲ್ಲ ಹೊಲಿದು ಸಾಧ್ಯವಾದಷ್ಟು ಸಂಪಾದಿಸಿ ಸಂಸಾರದ ಖರ್ಚು ನೀಗಿಸುವ ಜಾಣ್ಮೆ ಆಕೆಯದು.

ಆಕೆಯ ಸತತೋದ್ಯೋಗಶೀಲತೆಯನ್ನು ನೋಡಿಯಾದರೂ ಸರಸು ಸುಧಾರಿಸಬಹುದೆಂದು ಶಿವಮೂರ್ತಿ ಆಶಿಸಿಕೊಂಡಿದ್ದುದು ವ್ಯರ್ಥವಾಯಿತು.

ಕೈಸಾಲೆಯಲ್ಲಿ ಕುಳಿತು ಸುಬ್ಬಕ್ಕ ಯಂತ್ರವನ್ನು ನಡೆಸುತ್ತಿದ್ದ ಹಾಗೆ ಕೊಟಡಿಯಲ್ಲಿ ಸರಸು ಸುಖವಾಗಿ ನಿದ್ರೆ ಹೋಗುತ್ತಿದ್ದಳು. ಸಾಯಂಕಾಲ ಐದು ಗಂಟೆಯ ವರೆಗೂ ನಿದ್ರೆ. ಅನಂತರ ಚಹ. ಅದನ್ನೂ ಸುಬ್ಬಕ್ಕನೇ ಮಾಡಿ ಕೊಡುತ್ತಿದ್ದಳು. ಚಹ ಕುಡಿದ ಮೇಲೆ ಎಣ್ಣೆ ಹಾಕಿ, ತಲೆ ಬಾಚಿಕೊಂಡು ಮತ್ತೆ ಕಾದಂಬರಿ ಹಿಡಿದು ಕೂಡ್ರುತ್ತಿದ್ದಳು ಸರಸು. ಎರಡು ಮೂರು ದಿನಗಳಿಗೊಮ್ಮೆ ಸಿನಿಮಾ. ಅದಿಲ್ಲವಾದರೆ ಕಾದಂಬರಿಯ ಸಹವಾಸ. ರಾತ್ರಿ ಊಟವಾಗುತ್ತಲೂ ಮತ್ತೆ ಹಾಸುಗೆ. ಸುಖನಿದ್ರೆ. ಅನ್ಯರ ಮನೆಯಲ್ಲಿ ಆಕೆ ಇಷ್ಟು ನಿಶ್ಚಿಂತಳಾಗಿ ಕಾಲಹರಣ ಮಾಡುವುದಾದರೂ ಹೇಗೋ ಎಂದು ಬೆರಗಾಗುತ್ತಿದ್ದ ಶಿವಮೂರ್ತಿ.

ಈ ದಿನವಂತೂ ಆತನಿಗೆ ಆಶ್ಚರ್ಯದ ಆಘಾತವೇ ಆದಂತಾಗಿದ್ದಿತು. ಆಶ್ಚರ್ಯದ ಜತೆಯಲ್ಲೇ ಸಹಿಸಲಾರದ ವ್ಯಥೆ. ಸರಸುವಿನ ಸಿನಿಮಾ ಹುಚ್ಚು ಇಷ್ಟು ಮಿತಿಮೀರಿ ಹೋಗಬಹುದೆಂದು ಇದುವರೆಗೆ ಆತನಿಗೆನ್ನಿಸಿರಲಿಲ್ಲ. ಇಷ್ಟು ದಿನಗಳ ವರೆಗೆ ತನ್ನನ್ನು ಕಾಡಿಸಿ, ಪೀಡಿಸಿ ಸಿನಿಮಾಕ್ಕೆ ಎಳೆದೊಯ್ಯುತ್ತಿದ್ದಳು. ವಾರಕ್ಕೊಂದು ಸಲ, ಭಾನುವಾರದ ದಿನ ಸೂಶಿಯೂ ಜತೆಗಿರುತ್ತಿದ್ದಳು. ಆದರೆ ಇಂದು—ಯಾರೂ ಜತೆಗಿರದಿದ್ದರೂ—ತಾನೊಬ್ಬಳೇ ಹೊರಟು ಹೋಗಿದ್ದಾಳೆ....ಕೆಲಸ ಹುಡುಕುವುದಕ್ಕಾಗಿ ತಾನು ಬೀದಿ ಬೀದಿ ಸುತ್ತಿ ತೊಳಲುತ್ತಿರುವುದರ ಯೋಚನೆಯೂ ಆಕೆಗಿರಬೇಡವೆ ? ಮುಂದೇನು ಮಾಡಬೇಕೆಂಬುದೊಂದು ಭೀಕರ ಸಮಸ್ಯೆಯಾಗಿರುವಾಗ ಅದಾವುದನ್ನೂ ಗಣನೆಗೆ ತಂದುಕೊಳ್ಳದೆ ಆಕೆ ತನ್ನ ದಾರಿಯನ್ನೂ ಕಾಯುವ ಗೊಡವೆಗೆ ಹೋಗದೆ ಒಬ್ಬಳೇ ಹೋಗಿದಾಳೆ ಸಿನಿಮಾಕ್ಕೆ....ಒಬ್ಬಳೇ !

—ಒಬ್ಬಳೇ ! ಸರಸುವಿನ ಸ್ವಭಾವದ ಇನ್ನೊಂದು ವೈಶಿಷ್ಟ್ಯ ಈ ಕೃತಿಯಲ್ಲಿ ಕಂಡುಬರುತ್ತಿತ್ತು. ತನ್ನ ಮನಸ್ಸನ್ನು ಮುದಗೊಳಿಸಲೆಂದು ಆಕೆ ಎಂಥ ಕೃತ್ಯಕ್ಕಾದರೂ ತೊಡಗಬಲ್ಲಳೆಂದೇ ತೋರುತ್ತದೆ....ನಿಜಕ್ಕೂ ಸರಸುವಿನ ಸ್ವಭಾವ ಹೀಗಿದ್ದಲ್ಲಿ ಮುಂದೆ ಇನ್ನೂ ಏನೇನಾಗುವುದೋ....ತನಗೆ ಕೆಲಸವಂತೂ ಸಿಕ್ಕಲಿಲ್ಲ. ಸಿಕ್ಕುವುದೆಂದೋ ಯಾರು ಬಲ್ಲರು ? ಆ ಮನೆಯನ್ನಂತೂ ಬಾಡಿಗೆಗೆ ಹಿಡಿಯಲೇ ಬೇಕು. ನಾಳೆಯೇ ಸರಸುವನ್ನು ಅಲ್ಲಿಗೆ

ಸಾಗಿಸಬೇಕು. ಮುಂದೆ? ಈಕೆಯೊಂದಿಗೆ ತನ್ನ ಸಂಸಾರ ಯಾವ ರೀತಿ ಯಲ್ಲಿ ನಡೆಯುವುದೊ....

ಆತನಿಗೆ ಗೊತ್ತಾಗದಂತೆಯೆ ಆತನ ಕೈ ಪಿಟೀಲನ್ನೆತ್ತಿಕೊಂಡಿತು. ಕಮಾನು ವಿದ್ಯುದ್ವೇಗದಿಂದ ಓಡತೊಡಗಿತು. ಆತನ ಹೃದಯದಲ್ಲಿ ಕೊತ್ತಳದುಳಿಯುತ್ತಿದ್ದ ವಿಷಾದ, ವ್ಯಥೆ, ನೋವು, ಜುಗುಪ್ಸೆಗಳೆಲ್ಲವೂ ರಭಸದಿಂದ ಹೊರಹೊಮ್ಮತೊಡಗಿದುವು.

ಮಳೆಗಾಲದ ಕತ್ತಲೆ ಸುತ್ತಲೂ ತನ್ನ ರಾಜ್ಯವನ್ನು ಪಸರಿಸುತ್ತಲಿದ್ದಿತು. ಮೇಲೆ ಕಪ್ಪುಮೋಡಗಳಿಂದ ಆವೃತವಾದ ಆಕಾಶ. ತಾರೆಗಳ ಸುಳಿವಿರಲಿಲ್ಲ.

ಆತ ಎಷ್ಟು ಹೊತ್ತು ಹಾಗೇ ಬಾರಿಸುತ್ತಿದ್ದನೊ ತಿಳಿಯದು. ಬುರುಜಿನ ಕೆಳಗಡೆ, ಕೋಟೆಯ ಮಹಾದ್ವಾರವನ್ನು ಕಾಯುತ್ತ ನಿಂತಿದ್ದ ಪೋಲೀಸಿನವನಿಗೆ ಆ ಪಿಟೀಲಿನ ಧ್ವನಿ ಕೇಳಿಸಿರಬೇಕು. ಆತ ಕೈ ಕಂದೀಲು ಹಿಡಿದುಕೊಂಡು ಮೇಲೆ ಬಂದ. ಸುತ್ತಲಿನ ಪ್ರಪಂಚವನ್ನೆಲ್ಲ ಮರೆತು ಪಿಟೀಲು ಬಾರಿಸುವುದರಲ್ಲಿ ತನ್ಮಯನಾಗಿದ್ದ ಈ ಯುವಕನನ್ನು ನೋಡಿ ಆತನಿಗೆ ಏನೆನ್ನಿಸಿತೋ ಏನೋ—ಶಿವಮೂರ್ತಿಯ ಭುಜವನ್ನು ತಟ್ಟಿ ಆತನನ್ನು ಎಚ್ಚರುಗೊಳಿಸಿದ.

ಭಾವಸಮಾಧಿಯಿಂದ ಪೈ ತಿಳಿದು ಬಂದವರಂತೆ ಶಿವಮೂರ್ತಿ ಕಣ್ಣು ಬಿಟ್ಟು ನೋಡಿದ.

"ಯಾರಪ್ಪಾ ನೀನು, ಇಂಥ ಕತ್ತಲಲ್ಲಿ ಒಬ್ಬನೇ ಬಾರಿಸುತ್ತ ಕೂತಿದ್ದೀ? ನಿನಗೆ ಹುಚ್ಚು ಹಿಡಿದಿಲ್ಲವಷ್ಟೆ?" ಎಂದು ಅವನು ಪ್ರಶ್ನಿಸಿದ.

"ಹುಚ್ಚು? ಪುಣ್ಯಕ್ಕೆ ಅದೇನೂ ಗಂಟುಬಿದ್ದಿಲ್ಲ ಇನ್ನೂ," ಎನ್ನುತ್ತ ಶಿವಮೂರ್ತಿ ಮೇಲಕ್ಕೆದ್ದ. ಪಿಟೀಲನ್ನೂ, ಕಮಾನನ್ನೂ ಪೆಟ್ಟಿಗೆಯಲ್ಲಿರಿಸಿ, ಅದನ್ನು ಕಂಕುಳಲ್ಲಿಟ್ಟುಕೊಂಡು ಪೋಲೀಸನ ಕಡೆಗೆ ತಿರುಗಿ ಕೇಳಿದ:

"ಗಂಟೆಯೆಷ್ಟಾಗಿರಬಹುದು ಸಾಹೇಬರೆ?"

"ಗಂಟೆ? ಆಗಲೆ ಒಂಭತ್ತು ಆಯಿತಲ್ಲ. ಇದೇನ್ರಿ, ಹೀಗೆ ಒಬ್ಬರೇ ಕುಳಿತಿದ್ದೀರಿ? ಯಾವ ಊರು ನಿಮ್ಮದು? ಸಂಬಂಧಿಕರಾರೂ ಇಲ್ಲವೋ ಏನು ನಿಮಗೆ?" ಎಂದು ಆತ ಕನಿಕರದಿಂದ ಕೇಳಿದ.

ಶಿವಮೂರ್ತಿ ವಿಚಿತ್ರವಾಗಿ ನಗುತ್ತ—"ಸಂಬಂಧಿಕರು ? ಪ್ರಪಂಚದಲ್ಲಿನ ಎಲ್ಲ ಜನರೂ ನನ್ನ ಸಂಬಂಧಿಕರೇ. ನೀವೂ ಸಹ. ಬರ್‍ರಿ. ಕೆಳಕ್ಕಿಳಿಯೋಣ. ಕಂದೀಲು ಬೇರೆ ತಂದಿರುವಿರೆಂದು ನೆಟ್ಟಗಾಯಿತು. ಇಲ್ಲವಾದರೆ ಕತ್ತಲಲ್ಲಿ ಕಲ್ಲು ಎಡವಿ ತಲೆ ಗಿಲೆ ಒಡೆದುಕೊಳ್ಳುತಿದ್ದೆನೊ ಏನೊ. ಥ್ಯಾಂಕ್ಸ್...ತುಂಬ ಥ್ಯಾಂಕ್ಸ್...." ಎಂದು ಪುಟುಪುಟಿಸುತ್ತಾ ದೀಪದ ಬೆಳಕಿನಲ್ಲಿ ಗೋಡೆಯ ಮೆಟ್ಟಲುಗಳನ್ನಿಳಿದು ಬೀದಿಗೆ ಬಂದು ಕೋಟೆಯನ್ನು ತ್ಯಜಿಸಿ ಪಟ್ಟಣದ ಕಡೆಗೆ ಸಾಗಿದ.

[೧೮]

ಆ ರಾತ್ರಿ ಶಿವಮೂರ್ತಿ ಮೌನದಿಂದಲೇ ಇದ್ದ. ಸಿನಿಮಾದ ವಿಷಯ ಪ್ರಸ್ತಾಪಿಸಲೇ ಇಲ್ಲ. ಸರಸುವೂ ಸುಮ್ಮನಿದ್ದಳು. ತಾನೊಬ್ಬಳೇ ಸಿನಿಮಾಕ್ಕೆ ಹೋದುದಕ್ಕಾಗಿ ಆತನಿಗೆ ಕೋಪ ಬಂದಿರಬಹುದೆಂದು ಆಕೆ ಊಹಿಸಿ ಕೊಂಡಿದ್ದಳು. ಬೆಳಗಾದ ಮೇಲೂ ಆ ವಿಷಯವಾಗಿ ಮಾತು ಹೊರಡಲಿಲ್ಲ.

ಸ್ನಾನ ತೀರಿಸಿಕೊಂಡು, ಚಹ ಕುಡಿದು ಶಿವಮೂರ್ತಿ ಬಟ್ಟೆ ಧರಿಸಿ ಹೊರಕ್ಕೆ ಹೊರಡಲು ಸಿದ್ಧನಾದ. ಸೂಶಿಯೂ ಆಸ್ಪತ್ರೆಗೆ ಹೊರಡಲಣಿ ಯಾಗಿದ್ದಳು. ಸರಸುವಿನ್ನೂ ತಲೆ ಬಾಚಿಕೊಂಡಿರಲಿಲ್ಲ. ಕೊಟಡಿಯಲ್ಲಿ ಹಾಗೆಯೆ ಬಿದ್ದುಕೊಂಡಿದ್ದ ಹಾಸಿಗೆಯನ್ನು ಸುತ್ತಿ ಇಡುವುದರಲ್ಲಿ ತೊಡಗಿದ್ದಳು.

"ಇವೊತ್ತು ನಾವು ಒಂದು ಮನೆ ನೋಡಿ ಬರುತ್ತೇವೆ ಸುಶೀಲಮ್ಮ" ಎಂದು ಆತ ಮಾತಿಗಾರಂಭಿಸಿದ.

"ಮನೆ ?"

"ಹೌದು ಸುಶೀಲಮ್ಮ, ನಿನ್ನೆ ತಾನೆ ನೋಡಿ ಬಂದಿದ್ದೇನೆ. ನಾವಿ ಬ್ಬರೂ ಇರಲು ಅನುಕೂಲವಾಗುವಷ್ಟಿದೆ. ಹದಿನೈದು ರೂಪಾಯಿ ಬಾಡಿಗೆ, ಅಷ್ಟೆ."

"ಈಗ ಬಾಡಿಗೆ ಮನೆಗೆ ಹೋಗಬೇಕಾದ ಅವಸರವಾದರೂ ಏನು ಮೂರ್ತಿ ?"

"ಅವಸರವೇನೂ ಇಲ್ಲಮ್ಮ. ಆದರೂ ಎಷ್ಟು ದಿನ ಅಂತ ನಿಮ್ಮಲ್ಲೇ

ತಳ ಊರಲಿಕ್ಕಾಗುತ್ತದೆ? ತುಟ್ಟಿಯ ದಿನಗಳಿವು. ನಮ್ಮದನ್ನು ನಾವು ನೋಡಿಕೊಳ್ಳಬೇಕು."

ಸೂಶಿ, ಕಳವಳ ಬೆರೆತ ಧ್ವನಿಯಲ್ಲಿ ನುಡಿದಳು: "ಯಾವುದಕ್ಕೂ ಸಂಕೋಚಪಟ್ಟುಕೊಳ್ಳಬಾರದು ಅಂತ ಎಷ್ಟು ಸಲ ಹೇಳಿದರೂ ಕೇಳುವುದಿಲ್ಲವಲ್ಲ ನೀವು. ನೀವಿಬ್ಬರೇನು ನಮಗೆ ಭಾರವಲ್ಲ. ಹೇಗೋ ನಡೆಯುತ್ತದೆ. ಸುಮ್ಮನೆ ಸುಖವಾಗಿರಬಾರದೇ ಮೂರ್ತಿ?"

ಮೂರ್ತಿ ಒಂದೆರಡು ನಿಮಿಷ ಮೌನವಾಗಿದ್ದು, ಅನಂತರ ತಲೆಯೆತ್ತಿ ಸೂಶಿಯ ಕಡೆಗೆ ತಿರುಗಿ—"ನೀನೊಬ್ಬಳು ದೇವತೆ ಸೂಶಿ!" ಎಂದ.

"ಬೇರೆ ಮನೆಯ ಯೋಚನೆಯನ್ನೇ ತಲೆಯಲ್ಲಿ ಹಾಕಿಕೊಳ್ಳಬೇಡಿರಿ. ನೀವೇನಾದರೂ ಬೇರೆ ಮನೆಗೆ ಹೋದರೆ ನಾನೆಂದೂ ನಿಮ್ಮ ಹತ್ತಿರ ಮಾತನಾಡುವದಿಲ್ಲ ನೋಡಿರಿ. ಹೀಗೆ—ಪಾಲಾ ಫೂ—ಬಿಡುತ್ತೇನೆ ಅಂ!" ಎಂದು ಹೇಳಿ ಕೆನ್ನೆಗಳನ್ನುಬ್ಬಿಸಿ, ನಸುನಕ್ಕು ಆಕೆ ಹೊರಟು ಹೋದಳು.

ಹಾಸಿಗೆಯನ್ನು ತೆಗೆದಿರಿಸಿದ ಬಳಿಕ ಸರಸು ತಲೆ ಬಾಚಿಕೊಳ್ಳುತ್ತ ಮೂರ್ತಿಯ ಬಳಿ ಬಂದು—"ಸೂಶಿ ಇಷ್ಟೊಂದು ಒತ್ತಾಯ ಮಾಡುತ್ತಿರುವಾಗ ಬೇರೆ ಮನೆಯ ಹುಚ್ಚು ಯಾಕೆ ನಿಮಗೆ? ಇಲ್ಲೇ ಇದ್ದುಬಿಡಬಾರದೇ ಆರಾಮಾಗಿ?" ಎಂದಳು.

"ನೀನೇ ಇರು ಸರಸೂ—ಆರಾಮಾಗಿ. ನಾನೊಬ್ಬನೇ ಆ ಮನೆಗೆ ಹೊರಟು ಹೋಗುತ್ತೇನೆ. ನಿನ್ನ ಮನಸ್ಸಿಗೆ ಬಂದಾಗ ಅಲ್ಲಿಗೆ ಬಾ," ಎಂದು ಗಂಭೀರವಾಗಿ ನುಡಿದ ಮೂರ್ತಿ.

ಸರಸು ಗಾಬರಿಗೊಂಡು, ಆತನ ಭುಜಗಳ ಮೇಲೆ ತನ್ನ ಕೈಗಳನ್ನೂರಿ ತನ್ನ ಬಾಚಣಿಗೆಯಿಂದ ಆತನ ಮುಂಗುರುಳನ್ನು ತೀಡುತ್ತ ಲಲ್ಲೆವಾತಿನಲ್ಲಿ ಕೇಳಿದಳು:

"ಯಾಕ್ರೀ, ಈಚೆಗೆ ಹೀಗೆ ಮಾಡುತ್ತಾ ಇದೀರಿ? ನಿಮಗಾದುದಾದರೂ ಏನು?"

"ನೀನೇ ಕೊಂಚ ಯೋಚಿಸು ಸರಸೂ. ಗೊತ್ತಾದೀತು."

"ಏನು ಯೋಚನೆಯೊ ಬಿಡಿರಿ. ನಿಮ್ಮದೆಲ್ಲಾ ವಿಚಿತ್ರವೆ. ಈಗ ಬಾಡಿಗೆಮನೆ ಯಾತಕ್ಕೆ ಬೇಕು?"

"ಮನೆಯೂ ಬೇಡ, ಕೆಲಸವೂ ಬೇಡವೆನ್ನು ಹಾಗಾದರೆ."

"ಹಾಗೆಲ್ಲಿ ಹೇಳಿವೆ ನಾನು. ಕೆಲಸವಿಲ್ಲದಿದ್ದರೆ ನಡೆಯುತ್ತದೆಯೆ? ನಾನೂ ಒಂದು ಕೆಲಸ ಹುಡುಕುತ್ತಲೇ ಇದೇನೆ."

"ನೀನೂ ?"

"ಹೌದು. ನಾನೂ. ಸೂಳಿ ಗಳಿಸಿ ತರುತ್ತಿಲ್ಲವೆ? ಎಷ್ಟೋ ಹೆಣ್ಣು ಮಕ್ಕಳು ನೌಕರಿ ಮಾಡುತ್ತಿಲ್ಲವೆ? ನಾನೂ ಯಾಕೆ ಮಾಡಬಾರದು ?"

"ಮಾಡಬಹುದು. ಸರಿಯಾದ ಕೆಲಸ ಸಿಕ್ಕಿದರೆ. ಅಂಥದು ಸಿಕ್ಕ ಬೇಕಲ್ಲ ಮೊದಲು."

"ಪ್ರಯತ್ನಪಟ್ಟರೆ ಸಿಕ್ಕಬಹುದು."

"ಅದಿರಲಿ ಸರಸೂ. ಮೊದಲು ಒಂದು ಮನೆಯನ್ನಾದರೂ ಹಿಡಿಯೋಣ, ಆಮೇಲೆ ಕೆಲಸ ಹಿಡಿಯಲೇಬೇಕಾಗುತ್ತದೆ."

"ಮನೆಯ ಬಗ್ಗೆ ಅಂಥ ಆತುರವೇಕೋ ನಿಮಗೆ, ನನಗಂತೂ ಅರ್ಥವಾಗುವದಿಲ್ಲ."

"ನಿನಗೆ ಈಗಲೇ ಅರ್ಥವಾಗದು ಸರಸೂ. ಕೆಲ ದಿನ ಹೋದರೆ ಅರ್ಥವಾಗುತ್ತದೆ. ಸಂಸಾರದ ಜವಾಬ್ದಾರಿಯೆಂದರೆ ಏನು ಅನ್ನೋದು ಗೊತ್ತಾಗಬೇಕಲ್ಲ ?"

"ಬಲೆ! ಬಲೆ! ಏನು ದೊಡ್ಡ ಸಂಸಾರವೊ ಬಿಡಿರಿ!" ಎಂದು ಹಾಸ್ಯ ಮಾಡಿದಳು ಸರಸು.

ಆತನ ಬಲವಂತಕ್ಕೊಳಗಾಗಿ ಆಕೆ ಮನೆಯನ್ನು ನೋಡಲು ಹೊರಡಲೇ ಬೇಕಾಯಿತು. ಆ ಕೊಳಕು ಬೀದಿಗೆ ಅಡಿಯಿರಿಸಿದಾಗ ಸರಸು ಸೀರೆಯ ಸೆರಗಿನಿಂದ ಮೂಗು ಮುಚ್ಚಿಕೊಂಡು—"ಇದೆಂಥ ಹೊಲಸು ಸ್ಥಳಕ್ಕೆ ಕರೆದುತಂದಿರಿ! ಶ್ಶೀ!" ಎಂದಳು.

"ಇದಕ್ಕಿಂತ ಹೊಲಸಾದ ಸ್ಥಳಗಳೂ ಸಾಕಷ್ಟಿವೆ ಈ ನಗರದಲ್ಲಿ. ನೀನು ನೋಡಿರಲಿಕ್ಕಿಲ್ಲ ಅಷ್ಟೆ."

"ಇಂಥ ಕಡೆ ಬಂದರೆ ನನಗೆ ವಾಂತಿಯಾಗುವಂತಾಗುತ್ತದೆ. ಎಂಥ ಹೊಲಸು ವಾಸನೆ....ಎಷ್ಟೊಂದು ಕೆಸರು...."

"ಈ ಬೀದಿಯಲ್ಲೇ ನಾವು ಮನೆ ಹಿಡಿಯೋದು ಸರಸೂ."

"ಈ ಬೀದಿಯಲ್ಲಿ? ನಾನಂತೂ ಇರಲಾರೆ ತಾಯಿ, ಇಂಥ ಹೊಲೆಗೇರಿಯಲ್ಲಿ!"

"ಇದೇನೂ ಹೊಲೆಗೇರಿಯಲ್ಲ ಸರಸೂ. ಇಲ್ಲೂ ನಮ್ಮಂಥವರೇ ವಾಸವಾಗಿದ್ದಾರೆ. ಲಿಂಗಾಯತರ ಮನೆಗಳೂ ಇವೆ. ಬ್ರಾಹ್ಮಣರೂ ಇದ್ದಾರೆ."

"ಬ್ರಾಹ್ಮಣರೂ ಇದ್ದಾರೆಯೆ? ಹೇಗಾದರೂ ಇರುವರೋ!" ಎಂದು ಆಕೆ ಆಶ್ಚರ್ಯದಿಂದ ನುಡಿದಳು.

"ಬೇರೆ ಗತಿಯಿಲ್ಲವಾದ್ದರಿಂದ ಇರಲೇಬೇಕಾಗುತ್ತದೆ ಸರಸು. ಬಡತನ ಅಂದರೇನೆಂಬುದು ನಿನಗೆ ತಿಳಿಯದು. ಅಂತೆಯೆ ಹೀಗೆಲ್ಲ ಮಾತನಾಡುತ್ತಿದ್ದೀಯೆ. ನಾನು ನೋಡಿರುವ ಮನೆಯೂ ಬ್ರಾಹ್ಮಣರದ್ದೇ. ಕೆಳಗೆ ಅವರು ವಾಸವಾಗಿದ್ದಾರೆ. ಅಟ್ಟದ ಮೇಲಿನ ರೂಮುಗಳನ್ನು ಬಾಡಿಗೆಗೆ ಕೊಡುತ್ತಾರೆ. ಅವರು ಪ್ರಾಥಮಿಕ ಶಾಲೆಯ ಶಿಕ್ಷಕರು. ತುಂಬ ಒಳ್ಳೆಯವರ ಹಾಗೆ ಕಂಡರು. ಮನೆ ತುಂಬಾ ಮಕ್ಕಳಿವೆ...."

ಅವರಿಬ್ಬರೂ ಆ ಮನೆಯೆದುರಿಗೆ ಬಂದಾಗ ಆ ಮಕ್ಕಳ ಬಳಗವೇ ಅವರನ್ನು ಸ್ವಾಗತಿಸಿತು. ಒಳಗಿನಿಂದ ಅವುಗಳ ತಾಯಿ, ನಲವತ್ತು ವರ್ಷ ವಯಸ್ಸಿನ ಮುತ್ತೈದೆ ಬಾಗಿಲಿಗೆ ಬಂದು ಶಿವಮೂರ್ತಿಯನ್ನು ಗುರುತಿಸಿ– "ಬರ್‍ರಿಯಪ್ಪ. ಅವರು ಸಾಲೆಗೆ ಹೋದರು ಇವೇ ಈಗ. ಬರ್‍ರಿ ತಾಯಿ, ಮನೆ ನೋಡುತ್ತೀರಾ?" ಎಂದು ಆದರದಿಂದ ಕರೆದಳು.

ತೀರ ಹಳೆಯದಾಗಿ ಬಿರುಕು ಬಿಟ್ಟದ್ದ ಮರದ ಮೆಟ್ಟಲುಗಳನ್ನೇರಿ ಅವರಿಬ್ಬರೂ ಮೇಲೆ ಹೋದರು. ಬಾಗಿಲಿನ ಹಲಗೆಗಳಿಗೂ ಮುದಿತನ ಪ್ರಾಪ್ತವಾಗಿತ್ತು. ಗೋಡೆಗಳ ಮೇಲಿನ ಮಣ್ಣು ಅನೇಕ ಕಡೆ ಉದುರಿ ಬಿದ್ದು ಕೊಟಡಿಗಳು ವಿದ್ರೂಪವಾಗಿ ತೋರುತ್ತಿದ್ದವು. ಹಲವು ವರ್ಷಗಳಿಂದ ಸುಣ್ಣ ಬಳಿದಂತಿರಲಿಲ್ಲ. ಅಡುಗೆಯ ಕೊಟಡಿಯಂತೂ ಹೊಗೆಯಿಂದಾಗಿ ತೀರ ಬಣ್ಣಗೆಟ್ಟದ್ದಿತು. ಮೂಲೆಯೊಂದರಲ್ಲಿ ಚಿಕ್ಕದೊಂದು ಬಚ್ಚಲು. ಅದರ ಪಕ್ಕದಲ್ಲಿ ಎರಡು ಒಲೆಗಳು. ಬಚ್ಚಲ ಮೇಲಿನ ಜಂತೆಯೂ ಬಿರುಕುಬಿಟ್ಟದ್ದಿತು. ಅಲ್ಲಿಂದ ಮಳೆಯ ನೀರು ಸುರಿದು ಕೊಟಡಿಯಲ್ಲೆಲ್ಲ ತೇವವನ್ನುಂಟುಮಾಡಿದ್ದಿತು. ಎರಡನೆಯ ಕೊಠಡಿಯ ಗತಿಯೂ ಹಾಗೆಯೆ ಆಗಿತ್ತು.

ಸೆರಗಿನಿಂದ ಮೂಗು ಮುಚ್ಚಿಕೊಂಡಿದ್ದ ಹಾಗೇ ಸರಸು ಎಲ್ಲವನ್ನೂ ನಿರುಕಿಸುತ್ತಲಿದ್ದಳು. ನೋಡುವುದೆಲ್ಲ ಮುಗಿದ ಬಳಿಕ ಮೂರ್ತಿಯ ಕಡೆಗೆ ಹೊರಳಿ—"ಇದೇ ಮನೆಯೇ ನೀವು ನೋಡಿರೋದು?" ಎಂದಳು.

ಕೊಂಚ ದೂರದಲ್ಲಿ ನಿಂತಿದ್ದ ಮನೆಯಾಕೆ ಹೇಳಿದಳು: "ಯಾಕೆ ತಾಯಿ, ಸರಿ ಬರಲಿಲ್ಲವೇನು ನಿಮಗೆ? ಬಡವರ ಮನೆ. ರಿಪೇರಿ ಮಾಡಿ ಸೋಣವೆಂದರೆ ಕೈಯಲ್ಲಿ ಹಣವಿಲ್ಲ. ಏನು ಮಾಡೋಣ, ಹೇಳಿ. ಎಲ್ಲಾ ಕಷ್ಟ ಕಾಲ.

ಆ ಮಾತಿನಿಂದಾಗಿ ಶಿವಮೂರ್ತಿಗೂ ಕಳವಳವಾಗದಿರಲಿಲ್ಲ. ಅತ ನೆಂದ: "ಬಡತನದ ಮಾತೇಕೆ ಬಿಡಿಯಮ್ಮ. ನಾವೇನೂ ಶ್ರೀಮಂತ ರಲ್ಲವಲ್ಲ?"

"ನೋಡಿರಪ್ಪ. ನಿಮ್ಮ ಮನಸ್ಸಿಗೆ ಬಂದರೆ ಇರಿ. ಸ್ವಲ್ಪ ಸುಣ್ಣ ಹಚ್ಚಿ ಜಂತೆಯ ಮೇಲೆ ಒಂದೆರಡು ಹೆಂಚು ಹಾಕಿದರಾಯಿತು. ಎಲ್ಲಾ ಚೆನ್ನಾಗುತ್ತದೆ," ಎಂದು ಹೇಳಿ ಆಕೆ ಕೆಳಕ್ಕಿಳಿದು ಹೋದಳು.

"ಏನೆನ್ನುವೆ ಸರಸೂ?"

"ನಾನೇನು ಅನ್ನೋದು? ಇಲ್ಲಿಗೆ ಬರಲೇಬೇಕು ಅಂತ ಮೊದಲೇ ನೀವು ನಿಶ್ಚಯಿಸಿದ ಹಾಗಿದೆಯಲ್ಲಾ?"

"ನಿಶ್ಚಯಿಸದಿದ್ದರೆ ಬೇರೆ ದಾರಿಯಿಲ್ಲ. ಈ ಕಾಲದಲ್ಲಿ ಮನೆ ಸಿಕ್ಕು ವುದು ಎಷ್ಟು ಕಷ್ಟವೆನ್ನುವುದು ನಿನಗೆ ತಿಳಿಯದು ಸರಸೂ. ಒಂದೇ ಸಮನೆ ಒಂದು ತಿಂಗಳಿನಿಂದ ಹುಡುಕುತ್ತಲಿದ್ದೇನೆ. ನಗರದ ಒಂದು ಬೀದಿಯನ್ನೂ ಬಿಡಲಿಲ್ಲ. ಒಂದು ಸಂದಿಯನ್ನೂ ಬಿಡಲಿಲ್ಲ. ಎಲ್ಲವನ್ನೂ ಸುತ್ತಿಯಾಯಿತು. ಎಲ್ಲಿಯೂ ಖಾಲಿ ಮನೆಗಳಿಲ್ಲ. ಏನೋ ನಮ್ಮ ಪುಣ್ಯಕ್ಕೆ ಇದೊಂದು ಖಾಲಿ ಇದೆ. ಬಾಡಿಗೆಯೂ ಹೆಚ್ಚಿಗಿಲ್ಲ. ಮನೆಯ ಒಡೆಯರೂ ಸಂಭಾವಿತರು, ಒಳ್ಳೆಯವರು. ಇಲ್ಲಿರುವುದಾದರೆ ಯಾವ ಕಾಟವೂ ಇಲ್ಲ ನೋಡು...."

"ಈ ಹೊಲಸಿನ ಕಾಟವೊಂದು ಇದೆಯಲ್ಲ?"

"ಅದು ಅನಿವಾರ್ಯ ಸರಸೂ. ನಮ್ಮ ಸ್ಥಿತಿಯೇನೆಂಬುದನ್ನು

ಕೊಂಚ ಯೋಚಿಸಿನೋಡು. ನಮ್ಮಂಥವರು ನೂರಾರು ರೂಪಾಯಿ ಬಾಡಿಗೆ ಕೊಟ್ಟು ಬಂಗಲೆಗಳಲ್ಲಿರುವುದು ಸಾಧ್ಯವೆ?"

ಸರಸು ಮೌನವಾಗಿದ್ದಳು. ಶಿವಮೂರ್ತಿ ಮುಂದುವರಿಸಿದ:

"ಇಂಥ, ಇದಕ್ಕಿಂತ ಹೊಲಸಾದ ಸ್ಥಳಗಳಲ್ಲಿ ಲಕ್ಷಾವಧಿ ಜನರು ಜೀವಿಸುತ್ತಿದಾರೆ ಸರಸೂ—ಇದೇ ನಗರದಲ್ಲಿ. ಅವರೂ ನಮ್ಮ ಹಾಗೆ ಮನುಷ್ಯರೇ ಅಲ್ಲವೆ? ಕೆಳಗಡೆ ಮನೆಯ ಒಡೆಯರೇ ವಾಸಿಸುತ್ತಿಲ್ಲವೆ?"

"ಇರಬಹುದು. ಆದರೆ....ನನಗೆ....ಇಸ್ಸೀ....ಇಂಥದೆಲ್ಲಾ ರೂಢಿಯಿಲ್ಲ. ಈ ಗಬ್ಬು ವಾಸನೆ....ಇಂಥಲ್ಲಿ ಹೇಗಾದರೂ ಮಲಗಿಕೊಳ್ಳೋದು ತಾಯಿಾ.! ಸೂತಿಯ ಮನೆಯಲ್ಲಿರೋದೇ ವಾಸಿ."

ಶಿವಮೂರ್ತಿ ಬೇಸರದಿಂದ ನೆಲದ ಮೇಲೆ ಕುಳಿತುಕೊಂಡು, ಹಣೆಗೆ ಕೈಯಿಟ್ಟುಕೊಂಡು—"ನಿನಗೆ ಜವಾಬ್ದಾರಿ ಅನ್ನೋದು ಸ್ವಲ್ಪವೂ ಇಲ್ಲ ಸರಸೂ. ವ್ಯವಹಾರಜ್ಞಾನವಾದರೂ ಇರಬೇಡವೇ? ಸ್ವಲ್ಪವಾದರೂ?" ಎಂದ.

"ವ್ಯವಹಾರಜ್ಞಾನ?"

"ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು—ಅಂತ ಸರ್ವಜ್ಞ ಹೇಳಿದ್ದಾನೆ. ಸೂತಿ, ಸುಬ್ಬಕ್ಕ ಇಬ್ಬರೂ ಬಂಗಾರದಂಥವರು. ಅವರ ಮನೆಯಲ್ಲಿ ನಾವೆಷ್ಟು ದಿನ ಇದ್ದರೂ ಅವರೇನು ಬೇಡ ಅನ್ನಲಾರರು. ಅಷ್ಟು ಮಾತ್ರಕ್ಕೆ ಅಲ್ಲೇ ತಳ ಊರಿಬಿಡಲಾಗುತ್ತದೆಯೇ ಸರಸೂ? ಪಾಪ, ಅವರಿಗೆಷ್ಟು ತೊಂದರೆ. ನೀನೇಕೆ ಯೋಚಿಸುವುದಿಲ್ಲ ಅದನ್ನೆಲ್ಲ? ಅಲ್ಲದೆ, ಎಷ್ಟಾದರೂ ಅವರಿಗೂ ನಮಗೂ ಇರುವ ನಂಟುತನವಾದರೂ ಏನು? ಅದೇನು, ನಿನ್ನ ತವರು ಮನೆಯೆ, ಅತ್ತೆಯ ಮನೆಯೆ? ಅಲ್ಲೂ ಸಹ ಇಷ್ಟು ಕಾಲ ಇರುವದಿಲ್ಲ ಯಾರೂ. ಹೀಗೆ ಅವರಿವರ ಹಂಗಿಗೊಳಗಾಗಬಾರದು ಸರಸೂ. ನಾನಂತೂ ಇಂದೇ ಈ ಮನೆಗೆ ಬಂದುಬಿಡುವವ," ಎಂದು ನಿರ್ಧಾರದ ಧ್ವನಿಯಲ್ಲಿ ನುಡಿದ ಶಿವಮೂರ್ತಿ.

"ಇಂಥ ಸ್ಥಳದಲ್ಲಿ ಹೇಗಾದರೂ ಇರುವುದೊ!" ಎಂದು ಸರಸು ಅಳು ಧ್ವನಿಯಲ್ಲಿ ರಾಗ ತೆಗೆದಳು.

"ಮತ್ತೆ ಅದೇ ಪಲ್ಲವಿ. ಇದುವರೆಗೆ ನಿಮ್ಮ ತಂದೆಯ ಮನೆಯಿತ್ತು.

ಸುಖವಾಗಿದ್ದೆ. ಈಗ ಅದೇನೂ ಇಲ್ಲವಲ್ಲ? ಇದ್ದುದರಲ್ಲೇ ತೃಪ್ತಿಪಟ್ಟು ಕೊಳ್ಳಲು ಕಲಿಯಬೇಕು," ಎಂದು ನಿಷ್ಠುರವಾಗಿ ನುಡಿದ ಶಿವಮೂರ್ತಿ.

ತಂದೆಯ ಮನೆಯೆಂಬ ಶಬ್ದ ಆತನ ಮುಖದಿಂದ ಹೊರಡುತ್ತಲೂ ಸರಸುವಿಗೆ ತಂದೆ, ತಾಯಿ, ಗೌರಾಂಬಿಕಾ, ಅಜ್ಜಿ ಎಲ್ಲರ ನೆನಪಾಗಿ ದುಃಖ ವುಕ್ಕಿ ಬಂದಿತು. ಹೊಸತಿಲ ಮೇಲೆ ಕುಳಿತುಕೊಂಡು ಬಿಕ್ಕಿ ಬಿಕ್ಕಿ ಅಳತೊಡ ಗಿದಳು. ಅವರೆಲ್ಲರೂ ತನ್ನಿಂದ ದೂರವಾದರು. ಇನ್ನು ಅವರಿಗೂ ತನಗೂ ಯಾವ ಸಂಬಂಧವೂ ಇಲ್ಲ. ಸೂಶಿಯ ಮನೆಯಲ್ಲಿ "ಮದುವೆ" ಯಾದ ಬಳಿಕ, ಆ ವಿಷಯವನ್ನು ತಿಳಿಸಿ ತಾನು ಬರೆದ ಕಾಗದಕ್ಕೆ ತಂದೆ ಸಿಡಿಮಿಡಿಗೊಂಡು ಉತ್ತರ ಬರೆದಿದ್ದರು. "ನಮ್ಮ ಮನೆತನಕ್ಕೆ ಅಳಿಯಲಾರದ ಕಲಂಕ ಸವರಿದ ನಿನ್ನನ್ನು ಸಾಯುವ ವರೆಗೂ ಕ್ಷಮಿಸಲಾರೆ. ಇನ್ನೊಮ್ಮೆ ನಿನ್ನ ಮುಖ ನೋಡಲಾರೆ. ಇಂದಿನಿಂದ ನಮ್ಮ ಪಾಲಿಗೆ ನೀನು ಸತ್ತೆ ಯೆಂದೇ ತಿಳಿದುಕೊಂಡಿದ್ದೇವೆ," ಎಂಬ ಆ ನಿಷ್ಠುರ ಮಾತು! ಆ ಕಾಗದ ಬಂದ ದಿನವೆಲ್ಲ ತಾನು ಕಂಬನಿಗರೆದದ್ದೇ ಆಗಿತ್ತು. ಆಹ, ಆ ಮನೆ....ಆ ಭವ್ಯವಾದ ಮಹಡಿಯ ಮನೆ....ಅಟ್ಟದ ಮೇಲಿನ ತನ್ನ ಕೋಣೆ.... ಅಲಂಕೃತವಾದ ಕೋಣೆ....ಆ ನಿಲುವುಗನ್ನಡಿ....ಆ ಮಂಚ, ಆ ಗಾದಿ, ಆ ರಗ್ಗು, ಶುಭ್ರವಾದ ಸುಂದರವಾದ ಮೇಲುಹೊದ್ದಿಕೆ, ಸೊಳ್ಳೆಯಪರದೆ.... ಆ ಮೇಜು....ಆ ಕುರ್ಚಿ....ಪ್ರತ್ಯೇಕವಾದ ಬಚ್ಚಲು ಮನೆ.... ಹಾಸಿಗೆ ಬಿಟ್ಟು ಎದ್ದೊಡನೆಯೆ ಸಿದ್ಧವಾಗಿರುವ ಬಿಸಿ ಬಿಸಿ ನೀರು....ಗೋದಿಯ ಚಪಾತಿ, ಚಹ....ಇನ್ನು ಅವೆಲ್ಲವೂ ತನ್ನ ಪಾಲಿಗೆ ಕನಸಿನ ಮಾತು.... ಕೇವಲ ಕನಸಿನ ಮಾತು....

ಸೆರಗಿನಿಂದ ಕಂಬನಿಗಳನ್ನೊರಿಸಿಕೊಂಡು ಸರಸು ಆ ಗೋಡೆಗಳ ಕಡೆಗೆ ದೃಷ್ಟಿ ಚೆಲ್ಲಿದಳು. ತಮ್ಮ ಮನೆಯ ಹಿಂದಿನ ಕಕ್ಕಸದ ಗೋಡೆಗಳೂ ಸಹ ಇವುಗಳಿಗಿಂತ ಅಂದವಾಗಿದ್ದುವು....ಈ ಗೋಡೆಗಳು....ಈ ಮಣ್ಣು....ಈ ವಾಸನೆ....

"ಅಳಲಿಕ್ಕೇನಾಯಿತು ಸರಸೂ? ಈ ಮನೆ ಬೇಡವಾದರೆ ಬಿಡು. ಬೇರೊಂದನ್ನು ನೋಡೋಣ," ಎಂದು ಕನಿಕರದಿಂದ ನುಡಿದ ಶಿವಮೂರ್ತಿ.

"ಬೇರೊಂದು ಸಿಕ್ಕರೂ ಅದೂ ಇಂಥದೇ ಇರುವದಿಲ್ಲವೆಂದು ಹೇಗೆ

ಹೇಳಬೇಕು. ಇಲ್ಲಿಗೇ ಬರೋಣ, ಬರ್ರಿ. ಇಂಥ ಮನೆಯಲ್ಲಿರಬೇಕೆಂದು ನನ್ನ ಹಣೆಯಲ್ಲೇ ಬರೆದಿರಬೇಕು," ಎಂದು ನುಡಿಯುತ್ತ ಆಕೆ ಮೇಲಕ್ಕೆದ್ದಳು.

ಅಂದು ಸಾಯಂಕಾಲದೊಳಗಾಗಿ ಶಿವಮೂರ್ತಿ ಅಲ್ಲಿಗೇ ಬಿಡಾರವನ್ನು ಬದಲಿಸಿದ. ಅವರ ಸಾಮಾನುಗಳೂ ಹೆಚ್ಚಾಗಿರಲಿಲ್ಲ. ಅದೊಂದು ಹಾಸಿಗೆಯ ಸುರುಳಿ, ಅದೊಂದು ಪಿಟೀಲು ಪೆಟ್ಟಿಗೆ. ಸೂಶಿ, ಸುಬ್ಬಕ್ಕ ಕಣ್ಣೀರು ತಂದು ಹೇಳಿದರೂ ಆತ ಅಲ್ಲಿ ನಿಲ್ಲದೆ ಹೊರಟುಬಿಟ್ಟ. ಸರಸುವೂ ಹೊರಡಲೇಬೇಕಾಯಿತು. ಮಧ್ಯಾಹ್ನ ಶಿವಮೂರ್ತಿ ತನ್ನ ಹೊಸ ಬಿಡಾರಕ್ಕೆ ಬಂದು ಅಲ್ಲಿನ ಕಸಕೊಳೆಯನ್ನೆಲ್ಲ ಗುಡಿಸಿ ಶುಚಿಗೊಳಿಸಿದ್ದ. ಒಂದು ಕೊಡ, ಮೂರು ನಾಲ್ಕು ಗಡಿಗೆ ಮಡಕೆಗಳು, ಎರಡು ತಂಬಿಗೆಗಳು, ಲೋಟಗಳು, ಕಟ್ಟಿಗೆ—ಎಲ್ಲವನ್ನೂ ಅಣಿಗೊಳಿಸಿದ್ದ. ರೇಶನ್ ಕಾರ್ಡನ್ನೂ ಪಡೆದು ಅಕ್ಕಿ ಜೋಳಗಳನ್ನು ತಂದಿದ್ದ. ಬೇಳೆ, ಖಾರ, ಉಪ್ಪು, ಎಣ್ಣೆ ಎಲ್ಲವನ್ನೂ ಸಿದ್ಧಗೊಳಿಸಿದ್ದ. ಅವರನ್ನು ಕಳುಹಿಸಲು ಅಲ್ಲಿಯ ವರೆಗೂ ಬಂದಿದ್ದ ಸೂಶಿ ಈ ಸಿದ್ಧತೆಯನ್ನು ಕಂಡು ಬೆರಳು ಕಚ್ಚಿಕೊಂಡಳು.

ಸರಸುವಿಗೆ ಮಾತ್ರ ಅದಾವುದರಲ್ಲೂ ಆಸಕ್ತಿಯುಂಟಾಗಲಿಲ್ಲ. ಬೇರೆಯವರ ಮನೆಗೆ ಬಂದು ಕುಳಿತುಕೊಳ್ಳುವವರ ಹಾಗೆ ಆಕೆ ಅಲ್ಲಿಗೆ ಬಂದು ಹಾಸಿಗೆ ಸುರುಳಿಯನ್ನುರುಳಿಸಿ, "ಉಶ್ಶಪ್ಪ," ಎನ್ನುತ್ತ ಕುಳಿತುಕೊಂಡು, ಸುತ್ತಲೂ ದೃಷ್ಟಿ ತಿರುಗಿಸಿ—"ಕನ್ನಡಿಯೊಂದು ಬೇಕಲ್ಲವೇ ಸೂಶಿ?" ಎಂದಳು.

ಸೂಶಿಗೆ ನಗು ಬರದಿರಲಿಲ್ಲ. "ಹೌದು ಸರಸೂ. ಅದಿಲ್ಲವಾದರೆ ನಡೆಯುತ್ತದೆಯೆ? ಕನ್ನಡಿ ಬೇಕು, ಹೇರ್ ಆಯಿಲ್ ಬೇಕು, ಸ್ನೋ ಬೇಕು, ಪೌಡರ್ ಬೇಕು. ಎಲ್ಲವೂ ಬೇಕು. ಬೆಳಿಗ್ಗೆ ಆಸ್ಪತ್ರೆಗೆ ಹೋಗುವಾಗ ನಾನು ತಂದು ಕೊಡುತ್ತೇನೆ."

"ನಿಮಗೇಕೆ ತೊಂದರೆ ಸುಶೀಲಮ್ಮ. ನಾವೆಲ್ಲ ನಿಧಾನವಾಗಿ ತೆಗೆದುಕೊಳ್ಳುತ್ತೇವೆ. ಅವೆಲ್ಲಾ ಏನು ಜರೂರಾದ ವಸ್ತುಗಳೇ? ಇರಲಿ ಬಿಡಿರಿ," ಎಂದ ಶಿವಮೂರ್ತಿ.

"ಗಂಡಸಿಗೇನು ಗೊತ್ತು ಗೌರೀ ದುಃಖ ಅಂತ ಗಾದೆಯೇ ಇದೆಯಲ್ಲ ಸೂಶಿ. ನಮಗೆ ಜರೂರಾದ ವಸ್ತುಗಳ ವಿಷಯ ಇವರಿಗೇನು ತಿಳಿದೀತು," ಎಂದಳು ಸರಸು.

ಬೆಳಿಗ್ಗೆ ಆ ಸಾಮಾನುಗಳನ್ನೆಲ್ಲ ತಂದುಕೊಡುವುದಾಗಿ ಹೇಳಿ ಸೂಶಿ ಹೊರಟುಹೋದಳು. ಹಾಸಿಗೆಯ ಮೇಲೆ ಕುಳಿತಿದ್ದ ಸರಸು ಅಲ್ಲಿಂದ ಏಳುವ ಲಕ್ಷಣವೇ ಕಾಣಿಸಲಿಲ್ಲ.

"ಕತ್ತಲಾಗುತ್ತ ಬಂತು. ಅಡುಗೆ ಮಾಡೋಣವೇ ಸರಸೂ ?"

"ಅಡುಗೆ? ಇದೇತಾನೆ ಹರಾ ಶಿವಾ ಅಂತ ಬಂದು ಕೂತಿದ್ದೇವೆ. ಇನ್ನು ಆ ತೊಂದರೆ ಯಾತಕ್ಕೆ ಬಿಡಿರಿ. ಇದೊಂದು ಹೊತ್ತು ಏನಾದರೂ ತಿಂದು ಮಲಗಿದರಾಯಿತು," ಎಂದು ಹೇಳುತ್ತ ಸರಸು ಹಾಸುಗೆಯ ಮೇಲೆ ಮಲಗಿಕೊಂಡೇಬಿಟ್ಟಳು.

"ಏನು ತಿನ್ನುವದು ಸರಸೂ ?"

"ಹೋಟಲಿಗೆ ಹೋಗಿ ಏನಾದರೂ ತನ್ನಿರಲ್ಲ. ಪಟ್ಟಣದಲ್ಲಿ ತಿಂಡಿ ಗೇನು ಕೊರತೆ ?"

"ತಿಂಡಿಗೇನೂ ಕೊರತೆಯಿಲ್ಲ. ಆದರೆ...."

"ಆದರೆ ಏನು ?"

"ಏನೂ ಇಲ್ಲ...." ಎಂದು ನುಡಿದು ಅಲ್ಲಿಗೇ ಮಾತು ನಿಲ್ಲಿಸಿದ ಶಿವ ಮೂರ್ತಿ. "ನನ್ನನ್ನೇನು ಲಕ್ಷಾಧೀಶ ಎಂದು ತಿಳಿದುಕೊಂಡಿದ್ದೀಯಾ ? ಹೀಗೆಲ್ಲ ಹಾಳು ಮಾಡಲು ಹಣ ಎಲ್ಲಿಂದ ಬರಬೇಕು ನನ್ನ ಹತ್ತಿರ?" ಎಂಬ ಮಾತು ಆತನ ನಾಲಗೆಯ ಮೇಲೆಯೆ ಬಂದಿದ್ದಿತು. ಆದರೆ ವಿರಸವನ್ನು ಇನ್ನೂ ಹೆಚ್ಚಿಸುವುದು ಬೇಡವೆಂದು ಬಗೆದು ಆತ ಆ ಮಾತನ್ನು ತಡೆಹಿಡಿದು ಬಿಟ್ಟ.

ತಿಂಡಿ ತಂದುದೂ ಆಯಿತು. ಹಾಸಿಗೆಯಲ್ಲಿ ಕುಳಿತಿದ್ದ ಹಾಗೇ ಸರಸು ಅದನ್ನು ತಿಂದು ಮುಗಿಸಿದಳು. ಕೈ ತೊಳೆದುಕೊಳ್ಳುವುದಕ್ಕೂ ಸಹ ಆಕೆ ಅಡುಗೆಯ ಮನೆಯಲ್ಲಿ ಅಡಿಯಿರಿಸಲಿಲ್ಲ.

ರಾತ್ರಿಯೆಲ್ಲ ಆಕೆಯ ಕಿರಿಕಿರಿ ನಡೆದೇ ಇತ್ತು. ಒಂದೇ ಒಂದು ಕಂಬಳಿಯ ಮೇಲೆ, ಇನ್ನೊಂದು ಕಂಬಳಿ ಹೊದೆದುಕೊಂಡು ಮಲಗಿ

ಕೊಳ್ಳಬೇಕಾಗಿ ಬಂದಿದ್ದಿತು. ಅಂಥ ಸಂದರ್ಭ ಆಕೆಗೆ ತೀರ ಹೊಸದು. ಮೊದಲಿನಿಂದಲೂ ಮಂಚದ ಮೇಲೆ, ದಪ್ಪನೆಯ ಗಾದಿಯಲ್ಲಿ ಮಲಗಿದವಳು. ಗಾದಿಯ ಮೇಲೆ ಶುಭ್ರವಾದ ಮೇಲುಹೊದಿಕೆಯೂ ಇರುತ್ತಿತ್ತು. ಹೊದ್ದು ಕೊಳ್ಳಲು ನುಣುಪಾದ ಬೆಚ್ಚಗಿನ ರಗ್ಗು. ಸೂಶಿಯು ಮನೆಯಲ್ಲಿರುವಷ್ಟು ದಿನವೂ ಆಕೆಯ ಗಾದಿಯ ಮೇಲೆ, ಆಕೆಯ ರಗ್ಗು ಹೊದೆದುಕೊಂಡು ಮಲ ಗುತ್ತಿದ್ದಳು. ಅವರ ಮನೆಯಲ್ಲಿದ್ದುದು ಅದೊಂದೇ ಒಂದು ಗಾದಿ. ತನ್ನ ಗಾದಿಯನ್ನೂ ರಗ್ಗನ್ನೂ ಗೆಳತಿಗೆ ಕೊಟ್ಟು ಸೂಶಿ ತಾನು ಸಾದಾ ಜಮಖಾ ನಾದ ಮೇಲೆಯೆ ಮಲಗುತ್ತಿದ್ದಳು. ಸರಸು ಮಾತ್ರ ಯಾವ ಬಗೆಯ ಸಂಕೋಚವನ್ನೂ ಮನಸ್ಸಿನಲ್ಲಿ ತಂದುಕೊಳ್ಳದೆ ರಾಜಕುಮಾರಿಯಂತೆ ಆ ಗಾದಿಯ ಮೇಲೆ ಪವಡಿಸುತ್ತಿದ್ದಳು.

ಆದರೆ ಇಲ್ಲಿನ ಈ ಒರಟು ಕಂಬಳಿ....ಹಾಸಲೂ ಅಂಥದೇ. ಹೊದೆ ಯಲೂ ಅಂಥದೇ. ಮುಳ್ಳಿನ ಹಾಸಿಗೆಯ ಮೇಲೆ ಮಲಗಿ, ಮುಳ್ಳಿನ ಹೊದ್ದಿಕೆಯನ್ನು ಹೊತ್ತುಕೊಂಡಂತೆ ಆಕೆಗೆನ್ನಿಸತೊಡಗಿತು. ಕೊಂಚ ಹೊತ್ತಿನೊಳಗಾಗಿಯೆ ತಿಗಣೆಗಳ ಹಿಂಡು ಆಕೆಯ ದೇಹದ ಮೇಲೆಲ್ಲ ಸವಾರಿ ಮಾಡತೊಡಗಿತು. ಸೊಳ್ಳೆಗಳ ಕಾಟಕ್ಕೂ ಪ್ರಾರಂಭವಾಯಿತು. ತಿಂದ ತಿಂಡಿಯೆಲ್ಲವನ್ನೂ ಹೊರಹಾಕುವಂಥ ಹೊಲಸು ವಾಸನೆ ಬೇರೆ.

ಶಿವಮೂರ್ತಿಗೆ ಮಾತ್ರ ಅದಾವುದರ ಕಡೆಗೂ ಗಮನವಿರಲಿಲ್ಲ. ಇಂಥ ವಾತಾವರಣದಲ್ಲಿ ವಾಸಿಸುವುದು ಆತನಿಗೆ ಹೊಸ ಅನುಭವವೇನೂ ಆಗಿರ ಲಿಲ್ಲ. ದೀಪವನ್ನಾರಿಸಿ ಆತ ಕಂಬಳಿಯನ್ನು ಕುತ್ತಿಗೆಯ ವರೆಗೂ ಹೊದೆದು ಕೊಂಡು, ತನ್ನ ವಿಚಾರಗಳಲ್ಲಿ ತೇಲಿ ಹೋಗುತ್ತಿದ್ದ.

ಅಂಥ ಸ್ಥಳದಲ್ಲಿ ತನಗೆ ನಿದ್ರೆ ಬರುವುದು ಸಾಧ್ಯವೇ ಇಲ್ಲ ಎಂದು ತೋರಿತು ಸರಸುವಿಗೆ. ತವರ್ಮ್ನೂರಿನಲ್ಲಿನ ತನ್ನ ಸುಸಜ್ಜಿತ ಶಯ್ಯಾಗೃಹ ಆಕೆಯ ಅಂತರ್ದೃಷ್ಟಿಯೆದುರಿಗೆ ಕಟ್ಟಿದಂತಾಗಿ ಆಕೆಗೆ ಅಳುವುಕ್ಕಿ ಬಂದಿತು. ಶಿವಮೂರ್ತಿಯ ಎದೆಯನ್ನು ಮೆಲ್ಲನೆ ತಟ್ಟಿ,

"ರೀ, ಇವರೇ!" ಎಂದಳು.

"ಏನು ಸರಸೂ, ಇನ್ನೂ ನಿದ್ರೆ ಬರಲಿಲ್ಲವೆ?"

"ನನಗಿಲ್ಲಿ ನಿದ್ರೆ ಬರುವುದು ಸಾಧ್ಯವೇ ಇಲ್ಲ. ಈ ತಿಗಣೆಗಳು, ಈ

ಸೊಳ್ಳೆಗಳು....ಈ ಹಾಸನೆ....ಈ ಕಂಬಳಿ...." ಎಂದು ಬಿಕ್ಕುತ್ತ ಬಿಕ್ಕುತ್ತ ನುಡಿದು ಆಕೆ ಅವನ ಎದೆಯಲ್ಲಿ ತಲೆ ಹುದುಗಿಸಿ ಮೂಕವಾಗಿ ರೋದಿಸ ತೊಡಗಿದಳು.

ಶಿವಮೂರ್ತಿ ಆಕೆಯನ್ನು ಸಂತವಿಸತೊಡಗಿದ. ಆಕೆಯ ಬಗೆಗೆ ಆತನ ಎದೆಯಲ್ಲಿದ್ದ ಪ್ರೀತಿಯೆಲ್ಲವೂ ಉಕ್ಕಿ ಬಂದಿತು. ಆಕೆಯ ಸೆರಗಿನಿಂದ ಕಂಬನಿಗಳನ್ನೊರೆಸುತ್ತ, ತಲೆಗೂದಲಿನ ಮೇಲೆ ಮಮತೆಯಿಂದ ಕೈಯನ್ನಾಡಿಸುತ್ತ ಆತನೆಂದ: "ಅಳಬೇಡ ನನ್ನ ಸರಸೀ, ಕಣ್ಣೀರು ಸುರಿಸಬೇಡ. ಇಂಥದನ್ನೆಲ್ಲ ಸಹಿಸಿ ನಿನಗೆ ಅಭ್ಯಾಸವಿಲ್ಲವೆಂದು ನನಗೆ ಗೊತ್ತು. ಶ್ರೀಮಂತರ ಮನೆಯಲ್ಲಿ ರಾಜಕನ್ಯೆಯಂತೆ ಬೆಳೆದವಳು ನೀನು. ನನ್ನಂಥವನ ಕೈ ಹಿಡಿದು ಇಷ್ಟೆಲ್ಲ ಕಷ್ಟ ಪಡಬೇಕಾಯಿತು. ಹುಶ್, ಹುಶ್, ಬೇಬಿ, ಅಳಬೇಡ....ಅಳಬೇಡ...."

"ಈ ತಿಗಣೆಗಳನ್ನೇನು ಮಾಡಬೇಕು. ರಕ್ತ ಹೀರುತ್ತಿವೆ...."

"ಇದೊಂದು ರಾತ್ರಿ ಹೇಗಾದರೂ ಸಹಿಸಿಕೋ. ನಾಳೆಯೆ ಗೋಡೆಗಳಿಗೆಲ್ಲ ಸುಣ್ಣ ಬಳಿಯುತ್ತೇನೆ. ತಿಗಣೆಗಳೆಲ್ಲಾ ಸತ್ತುಹೋಗುತ್ತವೆ."

"ಸೊಳ್ಳೆಗಳು ?"

"ನಾಳೆಯೆ ಒಂದು ಸೊಳ್ಳೆಪರದೆಯನ್ನು ತಂದರಾಯಿತು. ಒಂದು ಸಣ್ಣ ಗಾದಿಯನ್ನೂ ತರೋಣವಂತೆ. ಈಗ ಹೇಗಾದರೂ ಮಲಗಿಕೋ ಸರಸೂ."

ಆತನನ್ನು ಬಿಗಿಯಾಗಿ ತಬ್ಬಿಕೊಳ್ಳುತ್ತ ಆಕೆ ಹೇಳಿದಳು:

"ಇಂಥ ಜಾಗದಲ್ಲಿ ನಾನೆಂದೂ ಮಲಗಿಲ್ಲ ನೋಡಿರಿ."

"ನಿನ್ನಂಥವಳು ನನ್ನಂಥ ದರಿದ್ರನ ಬೆನ್ನ ಹಿಂದೆ ಬರಬಾರದಾಗಿತ್ತು ಎಂಥ ತಪ್ಪು ಮಾಡಿದೆ ಸರಸೂ ನೀನು....ಎಂಥ ತಪ್ಪು ಮಾಡಿದೆ...."

"ಛೆ. ಅಂಥ ಮಾತನಾಡಬೇಡಿರಿ. ನಿಮ್ಮನ್ನು ಬಿಟ್ಟು ನಾನು ಬದುಕುವದು ಸಾಧ್ಯವೇ ಇರಲಿಲ್ಲ."

"ಈಗ ನನ್ನ ಜೊತೆಗಿದ್ದರೂ ಇಂಥ ಸ್ಥಿತಿಯಲ್ಲಿ ಬದುಕುವದು ಸಾಧ್ಯವಿಲ್ಲದಾಗಿದೆಯಲ್ಲ ?"

"ಇಂಥ ಸ್ಥಳದಲ್ಲಿ, ಇಂಥ ಸ್ಥಿತಿಯಲ್ಲಿರಬೇಕಾಗಿ ಬರಬಹುವೆಂದು ನಾನಂತೂ ತಿಳಿದಿರಲಿಲ್ಲ ಬಿಡಿರಿ. ನನ್ನ ಕಲ್ಪನೆಯೇ ಬೇರೆಯಿತ್ತು."

"ಏನು ಕಲ್ಪನೆ ಅದು ?"

"ಇಪ್ಪತ್ತು ರೂಪಾಯಿ ಬಾಡಿಗೆ ಕೊಟ್ಟರೆ ಪ್ರಶಸ್ತವಾದ, ಒಳ್ಳೆ ಹವೆಯ ಮನೆ ಸಿಕ್ಕುವುದೆಂದು ನಾನು ತಿಳಿದಿದ್ದೆ. ಸಿನಿಮಾಗಳಲ್ಲಿ ತೋರಿಸುವ ರಲ್ಲ-ಅಂಥಾ ಅಂದವಾದ ಮನೆ....ನೀವೂ ನೂರಾರು ರೂಪಾಯಿ ಸಂಪಾದಿಸು ವಿರಿ, ನಾನೂ ಸಂಪಾದಿಸುವೆ, ಇಬ್ಬರೂ ಸುಖವಾಗಿ ರಾಜರಾಣಿಯರ ಹಾಗೆ ಇರಲು ಸಾಧ್ಯವಾದೀತು ಅಂತ ಯೋಚಿಸಿದ್ದೆ."

"ಎಲ್ಲಾ ಕೇವಲ ಸಿನಿಮಾ ಪ್ರಪಂಚ ನಿನ್ನದು....ಕಲ್ಪನಾ ಪ್ರಪಂಚ.... ವಾಸ್ತವ ಪ್ರಪಂಚದ ಕಠೋರ ಸತ್ಯತೆಯೊಂದಿಗೆ ಸಂಪರ್ಕವಿದ್ದರೆ ತಾನೆ ನಿನಗೆ ? ಅಂಥ ಸಂಭರ್ಭವೇ ನಿನ್ನೆದುರಿಗೆ ಬಂದಿರಲಿಲ್ಲ ಇದುವರೆಗೆ. ಈಗ ಒಮ್ಮೆಲೆ ಬಂದುಬಿಟ್ಟಿದೆಯಾದ್ದರಿಂದ ಅದನ್ನೆದುರಿಸುವದು ಕಷ್ಟಕರವಾಗು ವದು ಸಹಜ. ಪಾಪ!" ಎನ್ನುತ್ತ ಆತ ಅವಳ ಹಣೆಯನ್ನು ನೇವರಿಸ ತೊಡಗಿದ.

ಮಾತು ಕೊಟ್ಟ ಮೇರೆಗೆ ಆತ ಮೂರನೆಯ ದಿನವೆ ಸುಣ್ಣವನ್ನು ತಂದು, ತಾನೇ ಸ್ವತಃ ನಿಂತು ಗೋಡೆಗಳಿಗೆಲ್ಲ ಬಳಿದ. ಅರ್ಧ ಫರ್ಲಾಂಗ್ ದೂರ ದಲ್ಲಿದ್ದ ಸಾರ್ವಜನಿಕ ಭಾವಿಗೆ ಹೋಗಿ ಏಳೆಂಟು ಕೊಡ ನೀರನ್ನೂ ಆತನೇ ತರಬೇಕಾಯಿತು-ಸುಣ್ಣ ಬಳಿದಾದ ಬಳಿಕ ನೆಲವನ್ನು ಸಾರಿಸಬೇಕಾಗಿ ದ್ದಿತು. ಸರಸುವಿನಿಂದ ಆ ಕೆಲಸವೂ ಆಗುವಂತೆ ತೋರಲಿಲ್ಲ. ಮನೆಯಾಕೆ ಯನ್ನು ಕರೆದು ಶಿವಮೂರ್ತಿ ಅದನ್ನು ಮಾಡಿಸಬೇಕಾಗಿ ಬಂದಿತು. ಸರಸು ಗೊಣಗಿಕೊಳ್ಳುತ್ತಲೇ ಅಡುಗೆ ಮಾಡಲು ಪ್ರಯತ್ನಿಸುತ್ತಿದ್ದಳು. ಅನ್ನ ಕುದಿಸುವ ಕೆಲಸವೂ ಆಕೆಗೆ ತಿಳಿದಿದ್ದಂತೆ ತೋರುತ್ತಿರಲಿಲ್ಲ. ಪಾತ್ರೆಯನ್ನಿ ಳಿಸುವಾಗ ಬಲಗೈಯ ಬೆರಳು ಸುಟ್ಟುಕೊಂಡು ಒಂದು ಗಂಟೆಯ ಕಾಲ ಕಣ್ಣೀರು ಸುರಿಸಿದಳು. ಸುಣ್ಣ ಬಳಿಯುವ ಕಾರ್ಯವನ್ನು ಅರ್ಧಕ್ಕೇ ಬಿಟ್ಟು ಶಿವಮೂರ್ತಿ ಆಕೆಯ ಬೆರಳಿಗೆ ಪಟ್ಟಿ ಕಟ್ಟಿ ಉಪಚಾರ ಮಾಡಬೇಕಾ ಯಿತು.

"ಅಡುಗೆ ಮಾಡಲು ಕಲಿತೇ ಇಲ್ಲವೇ ಸರಸೂ?" ಎಂದು ಕನಿಕರ ದಿಂದ ಕೇಳಿದನಾತ.

"ಇಲ್ಲ. ನಾನೆಂದೂ ಒಲೆಯ ಜತೆಗೆ ಗುದ್ದಾಡಿದವಳಲ್ಲ. ರುದ್ರಪ್ಪಜ್ಜಿ, ಅಪ್ಪ ಇಬ್ಬರೂ ಅದನ್ನೆಲ್ಲ ನೋಡಿಕೊಳ್ಳುತ್ತಿದ್ದರಲ್ಲ?"

ಆತ ಹೆದರುತ್ತ ಹೆದರುತ್ತ ಕೇಳಿದ: "ನಿಮ್ಮ ಮಾವನ ಮನೆಯಲ್ಲಿ?"

"ಅಲ್ಲಿ ಆಳುಗಳಿಗೇನು ಕೊರತೆ ಹೇಳಿರಿ. ಕೈಗೊಂದು ಆಳು, ಕಾಲಿ ಗೊಂದು ಆಳು. ಒಲೆಯ ಜಳವೂ ತಾಕುತ್ತಿರಲಿಲ್ಲ ನನಗೆ."

"ಅಯ್ಯೋ ಪಾಪ....ನಿನ್ನಂಥವಳಿಗೆ ಇಂಥ ಸ್ಥಿತಿ...." ಎಂದು ಮರು ಗಿದ ಶಿವಮೂರ್ತಿ.

ಅರ್ಧಮರ್ಧ ಕುದಿದ ಅನ್ನ, ಸಪ್ಪನೆಯ ಬೇಳೆ, ಹಸಿ ಬಿಸಿ ರೊಟ್ಟಿ. ಅಂದಿನ ಊಟ ಬಲು ವಿಚಿತ್ರವಾದುದಾಗಿತ್ತು. ನೀರು ಹೊತ್ತು ತಂದು, ಸುಣ್ಣ ಬಳಿದು ತುಂಬ ಹಸಿದಿದ್ದ ಶಿವಮೂರ್ತಿ. ಅಡುಗೆ ಹೇಗಾಗಿದೆಯೆಂಬು ದನ್ನೂ ಗಮನಕ್ಕೆ ತಂದುಕೊಳ್ಳದೆ ಆತ ಗಬಗಬನೆ ತಿಂದು ಕೈ ತೊಳೆದು ಕೊಂಡು ಎದ್ದುಬಿಟ್ಟ.

"ನೀನು ಹಾಗೆ ಅಡ್ಡಾಗಿರು ಸರಸೂ. ನಾನು ಸ್ವಲ್ಪ ಹೊರಗೆ ಹೋಗಿ ಬರುತ್ತೇನೆ."

"ಎಲ್ಲಿಗೆ ಹೋಗುತ್ತೀರಿ? ಆರು ಗಂಟೆಯೊಳಗಾಗಿ ಬರುತ್ತೀರಾ? ಇವೊತ್ತು ಒಳ್ಳೇ ಸಿನಿಮಾ ಇದೆ. ಹೋಗೋಣವಂತೆ."

"ಸಿನಿಮಾ?"

"ಹೊಸ ಮನೆಯನ್ನಂತೂ ಹಿಡಿದು ಹೊಸ ಸಂಸಾರ ಹೂಡಿದಿರಲ್ಲ. ಆ ಸಂತೋಷಕ್ಕಾಗಿ ಒಂದು ಸಿನಿಮಾ ಸಹ ಬೇಡವೇನು?"

"ಇವೊತ್ತು ಬೇಡ ಸರಸೂ. ನನಗೆ ಸ್ವಲ್ಪ ಕೆಲಸವಿದೆ. ಭಾನುವಾರ ಹೋದರಾಯಿತು."

"ಇವೊತ್ತೇನು, ಭಾನುವಾರವೇನು! ಎಲ್ಲಾ ಒಂದೇ ಅಲ್ಲವೆ ನಿಮಗೆ? ಕೆಲಸವೇ ಇಲ್ಲದಿರುವಾಗ ಮತ್ತೇನು ಕೆಲಸವೋ ನಿಮ್ಮದು?" ಅಸಮಾಧಾನ ವನ್ನು ಸೂಚಿಸುವ ಧ್ವನಿಯಲ್ಲಿ ಮಾತನಾಡುತ್ತಿದ್ದಳು ಸರಸು.

"ಕೆಲಸ ಹುಡುಕುವದೇ ಒಂದು ಕೆಲಸವಾಗಿದೆಯಲ್ಲ! ಇಷ್ಟೊಂದು

ಸಿನಿಮಾ ಹುಚ್ಚು ಒಳ್ಳೆಯದಲ್ಲ ಸರಸೂ. ನಮ್ಮ ಇಂದಿನ ಸ್ಥಿತಿಯಲ್ಲಂತೂ ಇಂಥ ಷೋಕಿಯೆಂದರೆ ಅತಿಯಾಯಿತು," ಎಂದು ನುಡಿದು ಶಿವಮೂರ್ತಿ ಉತ್ತರಕ್ಕಾಗಿ ಕಾಯದೆ ಬಿರುಬಿರನೆ ಹೊರಟುಹೋದ.

ಒಂದೇ ಒಂದು ಮಾತು; ಆದರೂ ಅದರಿಂದಾಗಿ ಸರಸುವಿಗೆ ಅಳು ವುಕ್ಕಿ ಬಂದಿತು. ಊಟ ಮಾಡುವುದನ್ನೂ ಬಿಟ್ಟು ಆಕೆ ಮಲಗುವ ಕೊಟಡಿಗೆ ಬಂದು ಹಾಸಿಗೆಯನ್ನುರುಳಿಸಿ ಮಲಗಿಬಿಟ್ಟಳು. "ಅವರು ಇಂಥ ಮಾತನ್ನು, ಇಷ್ಟೊಂದು ಕಠೋರವಾಗಿ ಆಡಬಹುದೆಂದು ನಾನೆಲ್ಲಿ ತಿಳಿದಿದ್ದೆ! ಅಯ್ಯೋ, ನನ್ನ ಬದುಕೇ! ಮೊದಲು ಹಾಗಿತ್ತು. ಇವರ ಹಿಂದೆ ಬಂದರಾದರೂ ಸುಖ ಸಿಕ್ಕಬಹುದೆಂದು ಆಶಿಸಿದ್ದೆ. ಈಗ ಹೀಗಾಯಿತು. ಇರಲು ಒಳ್ಳೆಯ ಮನೆಯಿಲ್ಲ, ಉಡಲು ಸೀರೆಗಳಿಲ್ಲ, ತೊಡಲು ರವಕೆಗಳಿಲ್ಲ. ಆಗ ಇದೆಲ್ಲವೂ ಇದ್ದರೂ ಮನಸ್ಸಿಗೊಪ್ಪುವ ನಲ್ಲನಿರಲಿಲ್ಲ-ಈಗ ಇವರಿದ್ದರೂ ಸುಖವೆಂಬುದಿಲ್ಲ. ಒಂದು ಸಿನಿಮಾ ನೋಡಿದರೂ ಸಹ ಇವರಿಗೆ ಕೋಪ. ಅದೂ ಒಂದು ಷೋಕಿಯಂತೆ. ಇವರ ಸ್ವಭಾವ ಹೀಗಿರಬಹುದೆಂದು ಯಾರು ತಿಳಿದಿದ್ದರು. ಅಂತೂ ಇಂತೂ ಸುಖವೆನ್ನುವದು ನನ್ನ ಹಣೆಯಲ್ಲೇ ಬರೆದಿಲ್ಲವೆಂದು ತೋರುತ್ತದೆ," ಎಂದು ಮೊದಲಾಗಿ ಯೋಚಿಸುತ್ತ ತನ್ನ ವಿಧಿಯನ್ನು ಹಳಿದುಕೊಳ್ಳತೊಡಗಿದಳು.

ಸಂಜೆಯಾಗುವ ವರೆಗೂ ಹಾಗೆಯೆ ಬಿದ್ದುಕೊಂಡಿದ್ದಳಾಕೆ. ಅನಂತರ ಹಾಸುಗೆ ಬಿಟ್ಟೆದ್ದು, ಮುಖ ತೊಳೆದುಕೊಂಡು ಆರಿ ತಂಗಳಾಗಿದ್ದ ರೊಟ್ಟಿ ತಿಂದು ಅನ್ನವನ್ನೂ ಉಂಡಳು. ಇನ್ನೂ ಎರಡು ರೊಟ್ಟಿ, ಕೊಂಚ ಅನ್ನ ಉಳಿಯಿತು. ರಾತ್ರಿ ಅಡುಗೆ ಮಾಡುವ ತೊಂದರೆ ತಪ್ಪಿತೆಂದುಕೊಂಡು, ಅದನ್ನೆಲ್ಲ ಹಾಗೆಯೆ ಇಟ್ಟು, ಬೇರೆ ಸೀರೆಯನ್ನುಟ್ಟು ಹೊರಗೆ ಹೊರಟಳು. ಆಕೆಯ ತುಟಿಗಳ ಮೇಲೆ ಯಾವುದೋ ನಿರ್ಧಾರ ಒಡಮೂಡಿದಂತಿದ್ದಿತು.

ಮನೆಯ ಬೀಗದ ಕೈಯನ್ನು ಮನೆಯೊಡತಿ ಗೋದಾವರಿಬಾಯಿಯ ಹತ್ತಿರ ಕೊಟ್ಟು-"ನಾನು ಸ್ವಲ್ಪ ಹೊರಕ್ಕೆ ಹೋಗಿ ಬರುತ್ತೇನೆ. ಅವರು ಬಂದರೆ ಬೀಗದ ಕೈ ಕೊಡಿರಿ," ಎಂದು ಹೇಳಿ ಹೊರಟುಬಿಟ್ಟಳು.

ನಗರದ ಮುಖ್ಯ ಬೀದಿಗೆ ಬಂದು ಆಕೆ ಒಂದು ಕ್ಷಣ ತಡೆದು ನಿಂತಳು. ತಾನು ಹುಡುಕುತ್ತಲಿದ್ದ ಸ್ಥಳ ಅಲ್ಲಿಯೆ ಯಾವುದಾದರೊಂದು ಸಂದಿಯಲ್ಲಿರ

ಬಹುವೆಂಬುದು ಆಕೆಗೆ ಗೊತ್ತಿದ್ದಿತು. ಆ ಸಂದಿಯ ಹೆಸರು ಮಾತ್ರ ಆಕೆಯ ನೆನಪಿನಲ್ಲಿರಲಿಲ್ಲ.

ಸಮೀಪದಲ್ಲಿದ್ದ ಒಂದು ಬಳೆಯಂಗಡಿಗೆ ಹೋಗಿ ವಿಚಾರಿಸಿದಳು: "ಲಿಂಗವೀರ ಪತ್ರಿಕೆಯ ಕಚೇರಿ ಎಲ್ಲಿದೆ ನಿಮಗೆ ಗೊತ್ತೇನು ?"

ಬಳೆಯಂಗಡಿಯ ಮುದುಕ ಕನ್ನಡಕದೊಳಗಿನಿಂದ, ಇರಿಯುವ ಹೋರಿಯಂತೆ ಆಕೆಯನ್ನು ದಿಟ್ಟಿಸುತ್ತ ಹುಬ್ಬುಗಳನ್ನೇರಿಸಿ ಕೇಳಿದ: "ಲಿಂಗವೀರ ಪತ್ರಿಕೆ? ಅಂದರೆ ?"

"ಅಂದರೆ—ಅದೊಂದು ಪತ್ರಿಕೆ. ಪೇಪರ್."

"ಓಹೊ. ಪೇಪರಾಫೀಸ್ ಅಲ್ಲವೇನು ನೀವು ಕೇಳೋದು ? ಲಿಂಗವೀರ ಪ್ರೆಸ್ ಅಲ್ಲವೆ ?"

"ಹೌದು."

"ಅದೇ ಆ ಗಂಗಾಧರಶಾಸ್ತ್ರಿಯದು ?"

"ಹೌದು, ಹೌದು."

ಆತ ಇನ್ನೂ ವಿಲಕ್ಷಣವಾದ ನೋಟ ಬೀರುತ್ತ ಆಕೆಯನ್ನು ಅಡಿಯಿಂದ ಮುಡಿಯವರೆಗೆ ಅಳೆದು ನೋಡಿದ. ಅನಂತರ ಹುಚ್ಚು ಹುಚ್ಚಾಗಿ ನಗುತ್ತಾ—"ಅದೇ, ಅಲ್ಲಿ ಆ ಸಂದಿ ಹೊರಳುತ್ತದಲ್ಲ—ಹಾಗೇ ಹೋಗಿ ಎಡಗಡೆಗೆ ತಿರುಗಿಕೊಳ್ಳಿರಿ. ಅನಂತರ ಯಾರನ್ನೂ ಕೇಳಬೇಕಾದ ಅಗತ್ಯ ವಿಲ್ಲ. ಮೂರು ಮೈಲಿನಿಂದ ನೋಡಿದರೂ ಕಾಣಿಸುವಂಥ ದೆಪ್ಪದಂಥ ಬೋರ್ಡುಗಳಿವೆ—ಪ್ರೆಸ್ಸಿನೆದುರಿಗೆ," ಎಂದು ನುಡಿದ.

ಅಂಗಡಿಯವನಾಡಿದುದರಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲ. ಆತ ಸೂಚಿಸಿದ ಮೇರೆಗೆ ಸರಸು ನಡೆದು ಅಲ್ಲಿಗೆ ಬಂದಾಗ ಪುಟ್ಟ ಮನೆಯೊಂದರ ಎದುರಿಗೆ ಎಂಟು ಹತ್ತು ಹೆಸರಿನ ಹಲಗೆಗಳು ನೇತಾಡುವುದನ್ನು ಕಂಡು ಒಂದು ಕ್ಷಣ ಅಲ್ಲಿಯೆ ನಿಂತು ಅವುಗಳನ್ನೋದಿಕೊಂಡಳು.

"ಲಿಂಗವೀರ ಪವರ್ ಪ್ರೆಸ್, ಗುರುಶಾಂತಸ್ವಾಮಿಗಳ ಬೀದಿ, ಪ್ರೊಪ್ರಾಯಿಟರ್: ಕೀರ್ತನ ಕಂಠೀರವ, ಗಾನರತ್ನ, ಘುಡ್. ಗಂಗಾಧರ ಶಾಸ್ತ್ರಿ, ವಿದ್ವಾನ್" ಎಂಬ ಹಲಗೆಯೊಂದು; "ಲಿಂಗವೀರ, ಸಚಿತ್ರ, ಧಾರ್ಮಿಕ ಸಾಮಾಜಿಕ ವಾರಪತ್ರಿಕೆ. ಕಾರ್ಯಾಲಯ. ಸಂಪಾದಕರು ಮತ್ತು ಪ್ರಕಾಶ

ಕರು: ಕೀರ್ತನ ಕಂಠೀರವ, ಗಾನರತ್ನ, ಝಡ್. ಗಂಗಾಧರಶಾಸ್ತ್ರಿ, ವಿದ್ವಾನ್," ಎಂಬ ಹಲಗೆಯೊಂದು; "ಕರ್ನಾಟಕ ಏಕೀಕರಣ ಮಹಾಸಭಾ ಕಾರ್ಯಾಲಯ, ಗೌರವಕಾರ್ಯದರ್ಶಿ: ಕೀರ್ತನ ಕಂಠೀರವ, ಗಾನರತ್ನ ಝಡ್. ಗಂಗಾಧರಶಾಸ್ತ್ರಿ, ವಿದ್ವಾನ್," ಎಂಬ ಹಲಗೆಯಿನ್ನೊಂದು; "ಅನಾಥ ಬಾಲ-ಬಾಲಿಕಾಶ್ರಮ, ಮುಖ್ಯ ಕಚೇರಿ. ಗೌರವಕಾರ್ಯದರ್ಶಿ: ಕೀರ್ತನ ಕಂಠೀರವ ಇತ್ಯಾದಿ ಇತ್ಯಾದಿ," ಎಂಬ ಇನ್ನೊಂದು ಹಲಗೆ; ಅದರ ಪಕ್ಕದಲ್ಲಿ ಇನ್ನೊಂದು: "ವೀರಶೈವ ವಿದ್ಯಾಭಿವರ್ಧಿನಿ ಸಂಘ, ಸ್ಥಳೀಯ ಶಾಖಾ ಕಚೇರಿ. ಗೌ. ಕಾ. ಕೀರ್ತನ ಕಂಠೀರವ ಇತ್ಯಾದಿ-"; ಈ ಎಲ್ಲ ಹಲಗೆಗಳ ಮೇಲೆ, ತಟ್ಟನೆ ಎದ್ದು ಕಾಣಿಸುವಂಥ ದೊಡ್ಡ ದೊಡ್ಡ ಅಕ್ಷರ ಗಳಲ್ಲಿ ಶಾಸ್ತ್ರಿಯ ಹೆಸರು ಹಾಗು ಪದವಿಗಳನ್ನು ಮಾತ್ರ ಮೂಡಿಸಿದ ಹಲ ಗೆಯೂ ಇದ್ದಿತು. ಅಪರಿಚಿತರಾರಾದರೂ ಬಂದಾಗ ಶಾಸ್ತ್ರಿಯನ್ನು ನೋಡು ವುದಕ್ಕೆ ಮುನ್ನ ಈ ಹಲಗೆಗಳೆಲ್ಲವನ್ನೂ ನೋಡಿ ಬೆರಗುಗೊಳ್ಳಬಹುದಾಗಿ ದ್ದಿತು. "ಎಷ್ಟೊಂದು ಸಂಘ ಸಂಸ್ಥೆಗಳ ಕಾರ್ಯದರ್ಶಿ, ಎಂಥೆಂಥ ಬಿರುದುಗಳು....ಶಾಸ್ತ್ರಿಯೆಂದರೆ ಅಸಾಮಾನ್ಯ ವ್ಯಕ್ತಿಯೆ ಇರಬೇಕು ಹಾಗಾ ದರೆ!" ಎಂದು ಅವರು ಯೋಚಿಸಬಹುದಾಗಿದ್ದಿತು.

ಸರಸುವೂ ಕೊಂಚ ಬೆರಗಾಗಿಯೆ ಮನೆಯ ಹೆಬ್ಬಾಗಿಲಲ್ಲಿ ಅಡಿಯಿರಿಸಿ ದಳು. ನಡು ವಿಶಾಲವಾದ ಅಂಗಳದ ಎದುರಿಗೇ ಶಾಸ್ತ್ರಿಯ ಕಚೇರಿ. ಅದರ ಎಡಗಡೆಗೆ ಮುದ್ರಣಾಲಯ. ಬಲಗಡೆಗೆ ಸಂಸಾರದ ಮನೆ. ಅಂಗಳದಲ್ಲಿನ ಕಂಬವೊಂದಕ್ಕೆ ಕಟ್ಟಲ್ಪಟ್ಟಿದ್ದ ನಾಯಿಮರಿಯೊಂದು ಆಕೆಯನ್ನು ಕಾಣು ತ್ತಲೂ ಬವ್ ವ್ ವ್ ಎಂದು ಅರಚಿಕೊಳ್ಳುತ್ತ ನೆಗೆಯತೊಡಗಿತು.

ದಪ್ಪನೆಯ ಪುಸ್ತಕವೊಂದನ್ನು ಓದುತ್ತ ಕುಳಿತಿದ್ದ ಶಾಸ್ತ್ರಿಯ ದೃಷ್ಟಿ ಒಡನೆಯೆ ಇತ್ತ ತಿರುಗಿತು. ಬಂದಾಕೆ ಯಾರೆಂಬುದು ಗೊತ್ತಾಗುತ್ತಲೂ ಆತ ಆ ಪುಸ್ತಕವನ್ನು ದೊಪ್ಪನೆಂದು ಮೇಜಿನ ಮೇಲಿರಿಸಿ, ಲಗುಬಗೆಯಿಂದ ಎದ್ದು ಅಂಗಳಕ್ಕಿಳಿದು ಬಂದ. ಮೂವತ್ತೆರಡು ಹಲ್ಲುಗಳನ್ನೂ ಪ್ರದರ್ಶಿಸಿ, ವಿಶಾಲವಾಗಿ ನಗುತ್ತ, ಎರಡೂ ಕೈಗಳನ್ನೆತ್ತಿ ನಮಸ್ಕಾರ ಮಾಡುತ್ತ- "ಓಹೊಹೊ....ಸರಸಮ್ಮನವರು....ಸರಸಮ್ಮನವರು....ಏನಿದು, ಎಂಥ ಆಕ ಸ್ಮಿಕ ದರ್ಶನ....ಇಂದು ನಮ್ಮ ಮನೆಗೆ ಲಕ್ಷ್ಮಿ ಬಂದ ಹಾಗೆ ಬಂದಿರಿ....ಬರ್ರಿ,

ಬರ್ರಿ, ಮೇಲೆ ಬರ್ರಿ, ಹೀಗೆ ಬರ್ರಿ, ಹೀಗೆ ಬರ್ರಿ...." ಎಂದು ಹೇಳುತ್ತ ಆಕೆಯನ್ನು ಕಚೇರಿಯ ಕೊಟಡಿಗೆ ಕರೆದು ತಂದು—"ದಯಮಾಡಿಸಬೇಕು. ಹೀಗೆ—ಈ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು," ಎಂದು ನುಡಿದು, ಆಕೆ ಕುಳಿತುಕೊಂಡ ಬಳಿಕ ತಾನೂ ತನ್ನ ಕುರ್ಚಿಯಲ್ಲಿ ಕುಳಿತುಕೊಳ್ಳದೆ ಮೇಜಿನ ಹತ್ತಿರ ನಿಂತು ಕೈ ಕೈ ಹಿಸುಕಿಕೊಳ್ಳತೊಡಗಿದ. ಮುಖವಂತೂ ಒಂದೆಸಮನೆ ನಗೆಯನ್ನು ತುಳುಕಿಸುತ್ತಲೇ ಇತ್ತು.

"ಎಲ್ಲಿಂದ ಬಂದಿರಿ, ಯಾವಾಗ ಬಂದಿರಿ ? ಓಹೊಹೊ, ಮರೆತಿದ್ದೆ. ಇದೇ ಊರಲ್ಲೇ ಇದ್ದೀರೆಂದು ಕೇಳಿದ್ದೆ ವರ್ತಮಾನ. ನಿಮ್ಮ ಮದುವೆಯ ಸಮಾಚಾರವೂ ಪ್ರಕಟವಾಗಿದ್ದಿತಲ್ಲ....ನಿಜ ಹೇಳಬೇಕಾದರೆ ನನಗೆ ಅದನ್ನು ನಂಬಲಾಗಲೇ ಇಲ್ಲ. ಹೀಗೆ ನಮ್ಮನ್ನೆಲ್ಲ ಬಿಟ್ಟು ನೀವು ಇಷ್ಟು ರಹಸ್ಯವಾಗಿ ಮದುವೆಯಾಗಬಹುದೆಂದು ನಾವಾರೂ ತಿಳಿದಿರಲಿಲ್ಲ. ನನಗೆ ಹೇಳಿ ಕಳುಹಿಸಿದ್ದಲ್ಲಿ ನಾನೇ ಬಂದು ಪೌರೋಹಿತ್ಯ ವಹಿಸುತ್ತಿದ್ದೆ. ಬಡವರ ನೆನಪು ನಿಮಗಾಗಲಿಲ್ಲ...."

ಆತನ ಅತಿಯಾದ ಆದರವನ್ನು ಕಂಡು ಬಣ್ಣದ ಮಾತುಗಳನ್ನು ಕೇಳಿ ತಬ್ಬಿಬ್ಬಾಗಿ ಕುಳಿತಿದ್ದಳು ಸರಸು. ಆಕೆಯ ಕೈ ಬೆರಳುಗಳು ಸೀರೆಯ ಸೆರಗಿನೊಂದಿಗೆ ಆಟವಾಡುತ್ತಲಿದ್ದುವು.

"ಅಂತೂ ಈಗಲಾದರೂ ಬಡವರ ನೆನಪು ಬಂದಿತಲ್ಲ. ಬಹಳ ಸಂತೋಷ. ಬಹಳ ಸಂತೋಷ. ಲಲಿತಾ, ಓ ಲಲಿತಾಂಬ, ನಮ್ಮ ಸರಸ್ವತಮ್ಮನವರು ಬಂದಿದಾರೆ. ಕಾಫಿ ಮಾಡಿ, ಕಾಫಿ," ಎಂದು ಪತ್ನಿಗೆ ಕೂಗಿ ಹೇಳಿ ಶಾಸ್ತ್ರಿ ತನ್ನ ಕುರ್ಚಿಯ ಮೇಲೆ ಕುಳಿತುಕೊಂಡು ಸರಸುವಿನ ಮುಖವನ್ನೇ ಮಿಕಿ ಮಿಕಿ ನೋಡತೊಡಗಿದ.

"ಅಂದು ರಾತ್ರಿ ನೀವು ಹಾಗೆ ಮಾಯವಾಗಿಬಿಟ್ಟರಲ್ಲ. ಅಂತೂ ಮಹಾ ಸಾಹಸಿಕರಪ್ಪ ನೀವು. ನಿಮ್ಮ ತಾಯಿತಂದೆಗಳ ಗೋಳು ನೋಡುವುದಕ್ಕೇ ಆಗುತ್ತಿರಲಿಲ್ಲ. ನಾನೂ ಒಂದು ಭಾರೀ ಗಂಡಾಂತರದಲ್ಲಿ ಸಿಲುಕಿಕೊಂಡಿದ್ದೆ. ಅದರಿಂದ ಜೀವ ಉಳಿಸಿಕೊಂಡು ಪಾರಾಗಿ ಬರಬೇಕಾದರೆ ಹತ್ತು ಜನ್ಮಗಳ ಪುಣ್ಯವನ್ನೆಲ್ಲ ವೆಚ್ಚಮಾಡಬೇಕಾಯಿತು. ಅಬ್ಬ ! ಆ ದೃಶ್ಯವನ್ನು ನೆನೆದರೀಗಲೂ ಈಗಲೂ ಮೈಮೇಲೆ ಮುಳ್ಳು ಮೂಡಿದಂತಾಗುತ್ತದೆ."

"ಏನಾಯಿತು ಅಂಥಾದ್ದು ?" ಎಂದು ಕುತೂಹಲದಿಂದ ಕೇಳಿದಳು ಸರಸು.

"ಅಂಥಿಂಥ ಘಟನೆಯಲ್ಲ ಅದು ಸರಸ್ವತಮ್ಮನವರೆ. ನಮ್ಮ ವೈರಿಗೂ ಬರಬಾರದು ನೋಡಿರಿ ಅಂಥ ಭೀಕರ ಪ್ರಸಂಗ. ಆ ರಾತ್ರಿ ಚೆನ್ನಪ್ಪಗೌಡರ ಪಕ್ಷಕ್ಕೂ ಮಲ್ಲಪ್ಪ ಸೆಟ್ಟರ ಪಕ್ಷಕ್ಕೂ ನಡೆದ ಬಡಿದಾಟದ ವಿಷಯ ನಿಮಗೆ ಗೊತ್ತಿರಬೇಕಲ್ಲವೆ ? ಆ ಸಮಯದಲ್ಲಿ ನಾನು ಮಠದ ಕೈಸಾಲೆಯಲ್ಲಿ ಮಲಗಿ ಕೊಂಡಿದ್ದೆ. ಒಮ್ಮಿಂದೊಮ್ಮೆಲೆ ಗದ್ದಲಕ್ಕಾರಂಭವಾಯಿತು. ರಾವಣಾಸುರ ನಂತಿದ್ದ ಧಡಿಯನೊಬ್ಬ ದಪ್ಪಗಿನ ಭಾರಿ ದೊಣ್ಣೆಯೊಂದನ್ನು ಹಿಡಿದು ಕೊಂಡು ಬಂದು ನನ್ನ ಬೆನ್ನ ಮೇಲೆ ಧಡಾರನೆ ಬೀಸಿದ. ಗಡಬಡಿಸಿ ಮೇಲ ಕ್ಕೆದ್ದು, ಶಿವಶಿವಾ ಎಂದು ಜಪಿಸುತ್ತ ಓಟ ಬಿಟ್ಟವನು ಇಲ್ಲಿಗೆ ಬರುವ ತನಕ ನಿಲ್ಲಲಿಲ್ಲ ನೋಡಿರಿ," ಎಂದು ಹೇಳಿ ಆತ ಗಟ್ಟಿಯಾಗಿ ನಗತೊಡಗಿದ.

ಸರಸುವಿಗೂ ನಗುವನ್ನು ತಡೆಯಲಾಗಲಿಲ್ಲ. ಆಕೆಯೂ ನಗುತ್ತಾ-"ಅಂದರೆ! ಇಲ್ಲಿಯವರೆಗೂ ನಡೆದುಕೊಂಡೇ ಬಂದಿರಾ ?" ಎಂದು ಕೇಳಿದಳು.

"ಜೀವದಲ್ಲಿ ಜೀವವಿದ್ದರಷ್ಟೇ ನಡೆದುಕೊಂಡು ಬರೋದು. ಆ ಕೊಣೆ ಯನ ಒಂದು ಏಟಿಗೇ ಬೆನ್ನಿನ ಮೂಳೆಗಳೆಲ್ಲ ಪುಡಿಪುಡಿಯಾಗಿ ಹೋಗಿ ದ್ದುವು. ಅಂತೂ ಪ್ರಾಣವಾದರೂ ಉಳಿಯಿತಲ್ಲಾ ಎಂದು ನಿಮ್ಮ ಮನೆಗೆ ಧಾವಿಸಿ ಅಲ್ಲಿ ದೇಹವನ್ನೊರಗಿಸಿದೆ. ಮೂರು ದಿನಗಳ ವರೆಗೆ ಮೇಲಕ್ಕೇಳ ಲಾಗಲಿಲ್ಲ ನೋಡಿರಿ. ಅಂಥ ಹೊಡೆತ ಬಿದ್ದಿತ್ತು. ಈಗಲೂ ನೋವು ಹೋಗಿಲ್ಲ. ಇನ್ನೂ ಇದೆ," ಎನ್ನುತ್ತ ಆತ ತನ್ನ ಬೆನ್ನು ಮೂಳೆಗಳನ್ನು ಸವರಿಕೊಂಡ.

"ಆ ಗದ್ದಲದಲ್ಲಿ ಅಪ್ಪ ಸಿಕ್ಕಲಿಲ್ಲವಷ್ಟೆ ?"

"ಇಲ್ಲ ತಾಯಿ. ಅವರ ಪುಣ್ಯ. ಉಳಿದುಕೊಂಡರು. ನಿಮ್ಮ ತಾಯಿ, ಅಜ್ಜಿ, ಗೌರಾಂಬಿಕೆಯರಿಗೂ ಯಾವ ಅಪಾಯವೂ ಆಗಲಿಲ್ಲ-ಆದರೆ-ಸ್ವಾಮಿ ಗಳಿಗೆ ಮಾತ್ರ ನರಕಯಾತನೆಯಾಯಿತು ನೋಡಿರಿ."

"ಯಾವ ಸ್ವಾಮಿಗಳು ?"

"ಸಿದ್ಧವೀರಸ್ವಾಮಿಗಳೇ. ನೀವು ಅವರನ್ನು ನೋಡಿಯೇ ಇರುವಿರಲ್ಲ. ಅವೊತ್ತು ನಿಮ್ಮ ಮನೆಗೂ ಊಟಕ್ಕೆ ಬಂದಿರಲಿಲ್ಲವೆ ? ನಿಮ್ಮನ್ನು ಕಂಡರೆ

ತುಂಬ ಪ್ರೀತಿ ಅವರಿಗೆ!" ಎಂದು ನುಡಿದು ನಾಲಗೆ ಕಚ್ಚಿಕೊಂಡ ಹಾಗೆ ನಟಿಸಿ ಶಾಸ್ತ್ರಿ ಸರಸುವಿನ ಮುಖವನ್ನು ಸೂಕ್ಷ್ಮವಾಗಿ ದಿಟ್ಟಿಸಿ ನೋಡಿದ. ಸಿದ್ಧವೀರಸ್ವಾಮಿಗಳ ಮಾತು ಹೊರಡುತ್ತಲೂ ಆಕೆಯ ಮುಖಕ್ಕೆಲ್ಲ ಕೆಂಪೇರಿದ್ದಿತು. ಎರಡು ಮೂರು ಬಾರಿ ಅವರನ್ನು ತಾನು ಕಂಡಾಗಲೆಲ್ಲ ಅವರ ಕಡೆಗೆ ಆಕರ್ಷಿತಳಾದುದರ ಜ್ಞಾಪಕವಾಗಿ ಆಕೆಯ ತಲೆ ಕೆಳಕ್ಕೆ ಬಾಗಿದ್ದಿತು.

"ಪಾಪ, ಸಿದ್ಧವೀರಸ್ವಾಮಿಗಳನ್ನು ಇಪ್ಪತ್ನಾಲ್ಕು ಗಂಟೆಗಳ ವರೆಗೆ ನೆಲಮನೆಯಲ್ಲಿ ಕೊಳೆಯಿಸಿದರು ಆ ಪಾಪಿ ಜನರು. ಮಠದಲ್ಲಿ ಹಿಂದಿನ ಸ್ವಾಮಿಗಳ ಸಮಾಧಿಗೃಹವಿದೆಯಲ್ಲ, ನಿಮಗೆ ಗೊತ್ತಿದ್ದರೂ ಇರಬೇಕು. ಆ ನೆಲಮನೆಗೆ ಅವರನ್ನು ದೂಡಿ ಮುಚ್ಚಳ ಹಾಕಿ ಬೀಗ ಜಡಿದುಬಿಟ್ಟಿದ್ದರು ಆ ನರರಾಕ್ಷಸರು. ಪೋಲೀಸರು ಬಂದು ಶೋಧಮಾಡಿ ಅವರನ್ನು ಹೊರದೆಗೆದರು."

ಸರಸುವಿನ ಮೈಮೇಲೆ ಮುಳ್ಳುಗಳೆದ್ದಂತಾಯಿತು. ಆಕೆ ಕೇಳಿದಳು :

"ಅದುವರೆಗೂ ಸ್ವಾಮಿಗಳು ಬದುಕಿದ್ದರೇ ? ನೆಲಮನೆಯಲ್ಲಿ ಹವೆಯಾಡುವುದೇ ಇಲ್ಲವೆ ?"

"ಅಂಥ ಗಂಡಾಂತರವೇನೂ ಇರಲಿಲ್ಲವೆನ್ನಿರಿ. ಆ ನೆಲಮನೆ ಕಟ್ಟುವಾಗಲೇ ಹವೆಯಾಡುವ ಹಾಗೆ ವ್ಯವಸ್ಥೆ ಮಾಡಿದ್ದಾರಂತೆ. ಸ್ವಾಮಿಗಳೇನೋ ಬದುಕಿಕೊಂಡರು. ಆದರೆ ಇಪ್ಪತ್ನಾಲ್ಕು ತಾಸುಗಳ ಆ ನರಕಯಾತನೆ.... ಅಬ್ಬ ! ಅದುವರೆಗೆ ಊಟವಿಲ್ಲ, ತಿಂಡಿಯಿಲ್ಲ, ನೀರಿಲ್ಲ...."

ಅಷ್ಟು ಹೊತ್ತಿಗೆ ಶಾಸ್ತ್ರಿಗಳ ಪತ್ನಿ ಲಲಿತಮ್ಮ ಕಾಫಿ ಸಿದ್ಧವಾಯಿತೆಂದು ತಿಳಿಸಿದುದರಿಂದ ಅವರೆಲ್ಲರೂ ಒಳಗೆ ಹೋದರು.

ಲಲಿತಮ್ಮ ಇನ್ನೂ ಯುವತಿ. ಚೆಲುವೆ. ಕೊಂಚ ಸ್ಥೂಲವಾಗಿದ್ದ ಶರೀರ. ತಿಳಿನೀಲಿ ಬಣ್ಣದ ಬನಾರಸ್ ಸೀರೆಯೊಂದನ್ನುಟ್ಟು ಅದೇ ಬಣ್ಣದ ರವಕೆ ಧರಿಸಿದ್ದಳು. ಕೊರಳಲ್ಲಿ ಚಿನ್ನದ ಆಭರಣಗಳೂ, ಕೈಗಳಲ್ಲಿ ಚಿನ್ನದ ಬಳೆಗಳೂ ಕಾಣುತ್ತಿದ್ದುವು. ಮೂಗಿನಲ್ಲಿ ತುಂಬ ಬೆಲೆಬಾಳುವ ವಜ್ರದ ನತ್ತು ಥಕಪಕ ಹೊಳೆಯುತ್ತಲಿತ್ತು.

"ಈಕೆ ನನ್ನ ಅರ್ಧಾಂಗಿ ಲಲಿತಾ. ಇವರು ಸರಸ್ವತಮ್ಮನವರು. ಆಗರ್ಭ ಶ್ರೀಮಂತರು," ಎಂದು ಪರಿಚಯ ಮಾಡಿಕೊಟ್ಟ ಶಾಸ್ತ್ರಿ.

"ಆ ಶ್ರೀಮಂತಿಕೆ ಹಿಂದಿನ ಜನ್ಮದ ಕತೆಯಂತಾಯಿತು ಶಾಸ್ತ್ರಿಗಳೆ, ಈಗ ನಾನೂ ಒಬ್ಬ ಸಾಮಾನ್ಯಳೇ."

"ಅಂದರೆ? ನಿಮ್ಮ ತಂದೆಯವರಿಗೂ ನಿಮಗೂ ಸಂಬಂಧವೇ ಇಲ್ಲ ವಾಯಿತೆನ್ನುವಿರಾ ?"

"ಹೌದು. ಹಾಗೇ ಸರಿ. ನಾನು ಈ ಮದುವೆ ಮಾಡಿಕೊಂಡದ್ದು ಅವರಿಗೆ ಎಷ್ಟು ಮಾತ್ರಕ್ಕೂ ಸರಿಬರಲಿಲ್ಲ. ಇನ್ನು ನಮ್ಮ ಪಾಲಿಗೆ ನೀನು ಸತ್ತಂತೆಯೇ–ಎಂದು ನಿಷ್ಠುರವಾಗಿ ಪತ್ರ ಬರೆದಿದಾರೆ."

"ಶೂಶ್ಶೂ. ಪ್ರಮಾದವಾಯಿತು. ಪ್ರಮಾದವಾಯಿತು. ಬಸಪ್ಪ ಸೆಟ್ಟರು ಹೀಗೆಲ್ಲಾ ಬರೆಯಬಾರದಾಗಿತ್ತು. ನಮ್ಮ ಸಮಾಜದಲ್ಲಿ ಪುನರ್ವಿವಾಹಕ್ಕೆ ಯಾವ ಆತಂಕವೂ ಇರಬಾರದು."

"ಇವರದು ಪುನರ್ವಿವಾಹವೊ ?" ಎಂದು ಕುತೂಹಲದಿಂದ ಕೇಳಿದಳು ಲಲಿತಮ್ಮ.

"ಹೌದು. ಪ್ರೇಮ ವಿವಾಹ. ಕತೆ ಕಾದಂಬರಿ ನಾಟಕಗಳಲ್ಲಿ ನಡೆಯುತ್ತದಲ್ಲ–ಹಾಗೇ ನಡೆದಿದೆ ಇವರ ವಿವಾಹ. ನಿಮಗೆ ಹೇಳಲು ಮರೆತೆ ಸರಸ್ವತಮ್ಮ. ನಮ್ಮ ಲಲಿತಾಗೆ ಕತೆ, ಕಾದಂಬರಿ ಅಂದರೆ ಬಹಳ ಪ್ರೀತಿ. ತುಂಬ ಓದುತ್ತಾಳೆ. ನೀವೂ ಅಷ್ಟೇ ಅಲ್ಲವೆ ?"

"ಹೌದು. ನನಗೂ ಅಷ್ಟೆ."

"ಇವರ ಕೈಹಿಡಿದ ಆ ಭಾಗ್ಯಶಾಲಿ ಯಾರು? ಅವರೇನು ಮಾಡುತ್ತಾರೆ ?" ಎಂದು ಉತ್ಸುಕತೆಯಿಂದ ಪ್ರಶ್ನಿಸಿದಳು ಲಲಿತಾ.

"ನನಗೂ ಗೊತ್ತೇ ಇರಲಿಲ್ಲವಲ್ಲ. ಏನು ಮಾಡುತ್ತಾರೆ ಅವರು ಸರಸ್ವತಮ್ಮ ?"

"ಸದ್ಯಕ್ಕಂತೂ ಏನೂ ಇಲ್ಲ."

"ಮತ್ತೆ ?"

"ನಮ್ಮೂರಿನಲ್ಲಿದ್ದಾಗ ತಾಲೂಕು ಕಚೇರಿಯಲ್ಲಿ ಸರಕಾರೀ ನೌಕರಿಯಿತ್ತು. ನನಗಾಗಿ ಅದನ್ನು ಬಿಟ್ಟು ಬಂದರು...."

ಪ್ರೇಮಕ್ಕಾಗಿ ಸರಕಾರೀ ನೌಕರಿಯನ್ನು ತ್ಯಜಿಸಿ ಬಂದ ಆ ಯುವಕನ

ವಿಷಯವಾಗಿ ಲಲಿತಮ್ಮನಲ್ಲಿ ಆದರಾಭಿಮಾನಗಳುತ್ಪನ್ನವಾಗದಿರಲಿಲ್ಲ. ವಿಸ್ಫುರಿತ ನೇತ್ರಗಳನ್ನು ಸರಸುವಿನ ಕಡೆಗೆ ಹೊರಳಿಸಿ ಆಕೆ ಕೇಳಿದಳು :

"ನೌಕರಿ ಬಿಟ್ಟು ಬಂದರೇ ! ಈಗ ?"

"ಕೆಲಸ ಹುಡುಕುತ್ತಿದಾರೆ. ಇನ್ನೂ ಸಿಕ್ಕಿಲ್ಲ."

"ನೀವಿಬ್ಬರೂ ಈಗ ಇರುವುದಾದರೂ ಎಲ್ಲಿ ?"

"ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಹಿಡಿದಿದೇವೆ. ಇಬ್ಬರೂ ಕೆಲಸ ಹುಡುಕುತ್ತಿದೇವೆ."

ಬೆರಗುಗೊಂಡ ಧ್ವನಿಯಲ್ಲಿ ಕೇಳಿದಳು ಲಲಿತಾ :

"ಇಬ್ಬರೂ ?"

"ಹೌದು. ನಾನೂ ಕೆಲಸ ಮಾಡಲು ನಿರ್ಧರಿಸಿದ್ದೇನೆ. ಅವರಿಗೆ ಕೆಲಸ ಬೇಗ ದೊರೆಯಲಿಕ್ಕಿಲ್ಲ. ನಾನಾದರೂ ಸುಮ್ಮನೆ ಕುಳಿತು ಮಾಡುವುದೇನನ್ನು ? ಹೇಗೂ ಮುಲ್ಕೀ ಪರೀಕ್ಷೆ ಮಾಡಿದ್ದೇನೆ. ಎಲ್ಲಾದರೂ ಶಿಕ್ಷಕಿಯ ಕೆಲಸ ದೊರೆಯಬಹದು. ಇಂದು ಇಲ್ಲಿಗೆ ಬಂದದ್ದೂ ಅದೇ ಉದ್ದೇಶದಿಂದ."

"ಅಂದರೆ ?" ಎಂದು ಚಕಿತನಾಗಿ ಕೇಳಿದ ಶಾಸ್ತ್ರಿ.

"ನಿಮ್ಮ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಒಂದು ಜಾಹಿರಾತು ಬಂದಿದೆಯಲ್ಲ. ಅನಾಥ ಬಾಲಕಾಶ್ರಮಕ್ಕೆ ವ್ಯವಸ್ಥಾಪಕರೊಬ್ಬರು ಬೇಕಾಗಿದಾರೆ-ಅಂತ. ಆ ಕೆಲಸ ನನಗೆ ದೊರೆಯಬಹುದೇ ಅಂತ...."

ಆಕೆಯ ಮಾತಿನಿಂದಾಗಿ ಶಾಸ್ತ್ರಿಗೆ ಆನಂದವಾಯಿತಾದರೂ ಅದನ್ನಾತ ವ್ಯಕ್ತಗೊಳಿಸದೆ-"ಓಹೊ, ಅದಕ್ಕಾಗಿ ಬಂದಿದ್ದಿರಾ ? ಸರಿ, ಸರಿ," ಎಂದು ನುಡಿದು ಸುಮ್ಮನಾದ.

ಸರಸು ವಿಷ್ಣಲತೆಯಿಂದ ಕೇಳಿದಳು :

"ಆ ಕೆಲಸ ಕೊಡುವವರು ನೀವೇ ಅಲ್ಲವೆ ? ನಿಮ್ಮ ಕೈಯಲ್ಲೇ ಇದೆಯಲ್ಲವೆ ಅಧಿಕಾರ ?"

"ಬಾಲ-ಬಾಲಿಕಾಶ್ರಮಕ್ಕೆ ನಾನು ಗೌರವ ಕಾರ್ಯದರ್ಶಿಯೆಂಬುದೇನೊ ನಿಜ. ಕಾರ್ಯದರ್ಶಿಗೆ ಎಷ್ಟು ಅಧಿಕಾರವಿರುವದೆಂಬುದು ನಿಮಗೆ ತಿಳಿಯದೇ ?"

"ಹಾಗಾದರೆ ?"

"ಆಶ್ರಮಕ್ಕೊಂದು ಕಮಿಟಿ ಇದೆ. ಅಧ್ಯಕ್ಷ ಉಪಾಧ್ಯಕ್ಷರಿದ್ದಾರೆ. ಅವರೆಲ್ಲ ಸೇರಿ ತೀರ್ಮಾನ ಮಾಡಬೇಕಾದ ವಿಷಯ ಇದು."

ಸರಸು ಇಳಿದ ಧ್ವನಿಯಲ್ಲಿ–"ನನಗೆ ಈ ಕೆಲಸ ಸಿಕ್ಕುವದು ಸಾಧ್ಯವಿಲ್ಲವೆನ್ನಿ್ರಿ ಹಾಗಾದರೆ...." ಎಂದಳು.

"ಛೆ. ಛೆ. ಹಾಗೆ ನಿರಾಶರಾಗಬೇಡಿರಿ. ನಾನು ನನ್ನ ಶಕ್ತಿಮೀರಿ ಪ್ರಯತ್ನಪಡುತ್ತೇನೆ. ನಮ್ಮ ಅಧ್ಯಕ್ಷರು ಮನಸ್ಸು ಮಾಡಿದರೆ ನಿಮ್ಮನ್ನು ತೆಗೆದುಕೊಳ್ಳುವದೇನೂ ದೊಡ್ಡ ಮಾತಲ್ಲ."

"ಅಧ್ಯಕ್ಷರಾರು ?"

"ನಮ್ಮ ಸ್ವಾಮಿಜಿಯವರು."

"ಯಾವ ಸ್ವಾಮಿಜಿ ?"

"ಅವರೇ. ನಿಮ್ಮೂರಿಗೆ ಬಂದಿರುವರಲ್ಲ ಈಗ, ಅವರೇ. ನಿಮ್ಮ ಮಠದ ಅಧಿಕಾರಕ್ಕೆ ಬರುವ ಮೊದಲು ಅವರು ಇಲ್ಲಿ ಒಂದೆರಡು ವರ್ಷ ಇದ್ದರು. ಈ ಆಶ್ರಮವನ್ನು ಸ್ಥಾಪಿಸಿ, ಅದಕ್ಕೆ ಹಣ ಕೂಡಿಸಿ, ಅದು ಸರಿಯಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಿದವರು ಅವರೇ. ಈಗಲೂ ಆಗಾಗ ಬರುತ್ತಿರುತ್ತಾರೆ. ಅನಾಥ ಮಕ್ಕಳ ಬಗ್ಗೆ ಬಲು ಕನಿಕರ ನಮ್ಮ ಸ್ವಾಮಿಗಳಿಗೆ....."

ಸರಸು ಮೌನವಾಗಿದ್ದಳು. ಲಲಿತಮ್ಮನೇ ಮಾತನಾಡಿದಳು :

"ನೀವೊಂದು ಮಾತು ಹೇಳಿದರೆ ಸ್ವಾಮಿಗಳು ಹೂಂ ಅನ್ನಬಹುದು.... ಅದೊಂದು ದೊಡ್ಡ ವಿಷಯವೇ ? ನೀವು ನಿಶ್ಚಿಂತೆಯಿಂದಿರಿ ಸರಸಮ್ಮ. ನಮ್ಮವರು ಈ ಕೆಲಸ ಕೊಡಿಸುತ್ತಾರೆ."

"ಪ್ರಯತ್ನಮಾಡಿ ನೋಡುತ್ತೇನೆ ಲಲಿತಾ. ಹಾಗೆ ಒಮ್ಮೆಲೆ ಭರವಸೆ ಕೊಡಲಾರೆ. ಸ್ವಾಮಿಗಳಿಗೆ ಪತ್ರ ಬರೆಯುತ್ತೇನೆ. ಅವರಿಂದ ಉತ್ತರ ಬಂದ ಬಳಿಕ ನಿಮಗೆ ತಿಳಿಸುತ್ತೇನೆ."

"ಇವರ ಯಜಮಾನರನ್ನು ನಮ್ಮ ಆಫೀಸಿನಲ್ಲೇ ಕೆಲಸಕ್ಕೆ ಸೇರಿಸಿಕೊಳ್ಳಲು ಸಾಧ್ಯವೇನೊ ನೋಡಿರಿ. ಆ ಹರಿಹರ ಬೇರೆ ಬಿಟ್ಟು ಹೋದರಲ್ಲ. ಅವರ ಸ್ಥಳಕ್ಕೆ ಯಾರೂ ಬೇಡವೆ?" ಎಂದಳು ಲಲಿತಮ್ಮ.

"ಹೌದು, ಹೌದು. ಆ ವಿಷಯ ನಾನು ಮರೆತೇ ಬಿಟ್ಟಿದ್ದೆ. ನನು

ಗೊಬ್ಬರು ಕಾರಕೂನರು ಬೇಕು. ಈ ವಾರದ ಪತ್ರಿಕೆಯಲ್ಲಿ ಜಾಹಿರಾತನ್ನು ಕೊಡಬೇಕೆಂದಿದ್ದೆ. ಆ ಹರಿಹರ ಮಹಾ ತಲೆತಿರುಕ ಹುಡುಗ. ಹೇಳದೆ ಕೇಳದೆ ಹೊರಟು ಹೋಗಬೇಕೇ! ಉಪ್ಪು ನೀಡಿದವರ ಕೈ ಕಚ್ಚುವ ಕೃತಘ್ನ ಆತ...."

"ಹರಿಹರ? ನಿಮ್ಮಲ್ಲಿ ಉಪಸಂಪಾದಕರಾಗಿದ್ದವರೇನು ?"

"ಉಪಸಂಪಾದಕ! ಅದೆಂಥ ಉಪಸಂಪಾದಕ? ಒಂದು ವಿದ್ವತ್ತೆಯೆ ಒಂದು ಪಾಂಡಿತ್ಯವೆ, ಒಂದು ಪದವಿಯೆ? ನಾಲ್ಕು ಅಕ್ಷರ ಸರಿಯಾಗಿ ಬರೆಯಲು ಬರುವುದಿಲ್ಲ. ಆದರೂ ಲೇಖಕನೆಂಬ ಜಂಬ. ಎಲ್ಲಿಯೂ ಕೆಲಸ ಸಿಕ್ಕಲಿಲ್ಲವೆಂದು ನನ್ನ ಹತ್ತಿರ ಗೋಗರೆಯುತ್ತ ಬಂದಿದ್ದ. ಹೋಗಲಿ, ಪಾಪ. ನನ್ನ ಪ್ರೆಸ್ಸಿನಲ್ಲಿ ಹತ್ತು ಮಂದಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ, ಈತನೂ ಒಬ್ಬ ಬದುಕಲಿ–ಅಂತ ಕರೆದುಕೊಂಡೆ. ಕೆಲಸವೂ ವಿಶೇಷವೇನೂ ಇರಲಿಲ್ಲ. ನಾನು ಡಿಕ್ಟೇಟ್ ಮಾಡಿದ ಲೇಖನಗಳನ್ನು ಬರೆದುಕೊಳ್ಳುವುದು, ಪ್ರೂಫು ನೋಡುವುದು, ಲೆಕ್ಕಪತ್ರ ಬರೆಯುವುದು, ಪ್ರೆಸ್ಸಿಗೆ ಆರ್ಡರ್ ತೆಗೆದುಕೊಳ್ಳುವುದು, ಅಷ್ಟೆ. ಕೈತುಂಬ ಸಂಬಳ ಕೊಡುತ್ತಿದ್ದೆ. ಯಾವುದಕ್ಕೂ ಕಡಿಮೆ ಮಾಡಿರಲಿಲ್ಲ. ಆದರೂ ಆತ ಒಂದು ದಿನವೂ ಸರಿಯಾಗಿ ಕೆಲಸ ಮಾಡಲಿಲ್ಲ. ಯಾವಾಗಲೂ ಏನಾದರೂ ತಕರಾರು ಇದ್ದೇ ಇರುತ್ತಿತ್ತು. ತಿರುಗಿ ವಾದಿಸುವುದಂತೂ ಆತನ ಅನೇಕ ಕೆಟ್ಟ ಚಟಗಳಲ್ಲೊಂದು. ಪೀಡೆ ತೊಲಗಿತು. ಬಲು ಒಳ್ಳೆಯದಾಯಿತು...."

"ಅದೇನೋ ಸರಿ, ಆದರೆ ಕೆಲಸ ನೋಡಿಕೊಳ್ಳುವವರೊಬ್ಬರು ಬೇಕಲ್ಲ? ನಿಮಗೇನು, ನೂರಾಯೆಂಟು ಕೆಲಸ. ಇತ್ತ ಕೀರ್ತನ, ಅತ್ತ ಭಾಷಣ, ಏಕೀಕರಣ, ಅನಾಥಾಶ್ರಮ, ವೀರಶೈವ ಮಹಾಸಭೆ–ಒಂದೇ ಎರಡೇ! ಪ್ರೆಸ್ಸಿನಲ್ಲಿ ಕೂತು ಎಲ್ಲವನ್ನೂ ನೋಡಿಕೊಳ್ಳುವವರಾರು?" ಎಂದಳು ಲಲಿತಮ್ಮ.

"ಹೌದು, ಹೌದು. ಒಬ್ಬರು ಕ್ಲಾರ್ಕ್ ಬೇಕೇ ಬೇಕು. ತೆಗೆದುಕೊಳ್ಳೋಣ. ನಿಮ್ಮ ಯಜಮಾನರ ಶಿಕ್ಷಣವೆಷ್ಟಾಗಿದೆ ಸರಸ್ವತಮ್ಮ?"

"ಮ್ಯಾಟ್ರಿಕ್ ಆಗಿರಬೇಕು."

"ಹಾಗೋ? ಚಿಂತೆಯಿಲ್ಲ ಹಾಗಾದರೆ. ನಾಳೆ ಅವರನ್ನು ಇಲ್ಲಿಗೆ

ಕರೆದುಕೊಂಡು ಬರುತ್ತೀರಾ? ನೋಡೋಣ. ಆವರು ನಮಗೆ ಉಪಯೋಗವಾಗುವರೇನೊ."

"ಹಾಗೇ ನನ್ನ ಕೆಲಸದ ಬಗೆಗೂ ನಾಳೆ ಹೇಳುತ್ತೀರಾ?"

"ಇಷ್ಟು ಅವಸರ ಮಾಡಿದರೆ ಹೇಗಾದೀತು? ಇಂದು ಸ್ವಾಮಿಗಳಿಗೆ ಪತ್ರ ಬರೆಯುತ್ತೇನೆ. ಅವರಿಂದ ಉತ್ತರ ಬರಬೇಕಾದರೆ ಮೂರು ದಿನವಾದರೂ ಬೇಡವೆ?"

"ಸರಿ ಹಾಗಾದರೆ, ನಾಳೆ ಬರುತ್ತೇನೆ," ಎಂದು ಸರಸು ಎದ್ದು ಹೊರಡುತ್ತಿದ್ದ ಹಾಗೆ ಶಾಸ್ತ್ರಿ-"ಕೊಂಚ ತಡೆಯಿರಿ. ಹಣದ ತೊಂದರೆಯೇನಾದರೂ ಇದ್ದರೆ ಹೇಳಿ. ಸಂಕೋಚಪಟ್ಟುಕೊಳ್ಳಬೇಡಿರಿ. ಬೇಕಾದರೆ ಕೊಡುತ್ತೇನೆ," ಎಂದು ಹೇಳಿದ.

"ಏನೂ ಬೇಡ, ಏನೂ ಬೇಡ," ಎಂದು ಬಾಯಲ್ಲಿ ನುಡಿದರೂ ಸರಸುವಿನ ಅಂತರಂಗ ಅದನ್ನು ಆಸೆಯಿಂದ ಬಯಸತೊಡಗಿತು. ಕೈಯಲ್ಲಿ ಹಣವಿಲ್ಲವಾದುದರಿಂದಲೇ ತುಂಬ ಅನನುಕೂಲವಾಗಿದೆ. ಹಣವಿದ್ದರೆ, ಇದ್ದುದರಲ್ಲೇ ತಾನು ಸ್ವಲ್ಪವಾದರೂ ಸುಖಪಡಬಹುದು. ಪ್ರತಿದಿನವೂ ಸಿನಿಮಾ ನೋಡಬಹುದು. ಜೊತೆಗೆ ಮೂರ್ತಿಯನ್ನೂ ಕರೆದೊಯ್ಯಬಹುದು, ಸೂಶಿಯನ್ನೂ ಆಮಂತ್ರಿಸಬಹುದು. ಸೊಳ್ಳೆಪರದೆಯಿಲ್ಲದಿದ್ದಲ್ಲಿ ತನಗೆ ನಿದ್ರೆಯೆ ಬರುವಂತಿಲ್ಲ. ಮೆತ್ತೆಯ ಗಾದಿಯೂ ಬೇಕು. ಒಳ್ಳೆಯ ರಗ್ಗೂ ಬೇಕೇ ಬೇಕು. ನಿಲುವುಗನ್ನಡಿಯಿಲ್ಲ, ಸುಗಂಧದೆಣ್ಣೆಯಿಲ್ಲ, ಸ್ನೋ ಇಲ್ಲ, ಪೌಡರ್ ಇಲ್ಲ. ಸೀರೆಗಳಿಲ್ಲ, ರವಕೆಗಳಿಲ್ಲ. ಆಹಾ, ತನಗೀಗ ಕೊಂಚ ಹಣ ಸಿಕ್ಕಿದರೆ....ಎಲ್ಲವನ್ನೂ ಕೊಂಡುಕೊಂಡು ಒಬ್ಬ ಕೂಲಿಯ ಮೇಲೆ ಹೊರಿಸಿಕೊಂಡು ಮನೆಗೆ ಹೋಗಬಹುದು. ಮೂರ್ತಿಯನ್ನು ಆಶ್ಚರ್ಯಕ್ಕೀಡು ಮಾಡಬಹುದು. ಇದೆಲ್ಲವನ್ನೂ ಕಂಡು ಅವರಿಗೆಷ್ಟು ಹರುಷವಾದೀತು! ಅವರ ಮುಖದ ಮೇಲೆ ಹರುಷ ನರ್ತಿಸುವುದನ್ನು ಕಂಡಾಗ ತನಗೂ ಎಷ್ಟು ಹರುಷವಾದೀತು. ಎಷ್ಟೋ ದಿನಗಳಿಂದ ಅವರ ಮುಖದ ಮೇಲೆ ಬೇಸರದ ಕಳೆಯೇ ಎದ್ದು ಕಾಣುತ್ತಿದೆ. ಕೆಲಸವಿಲ್ಲ, ಕೈಯಲ್ಲಿ ಕಾಸಿಲ್ಲ. ಇನ್ನು ಆನಂದವಾದರೂ ಎಲ್ಲಿಂದ ಬರಬೇಕು? ಆಹಾ, ಇವೊತ್ತು

ತನಗೆ ಹಣ ಸಿಕ್ಕಿದರೆ....ಇಂದು, ನಾಳೆ ಎರಡು ದಿನಗಳ ಮಟ್ಟಿಗಾದರೂ ಅವರು ಆನಂದದಿಂದ ಇರಲು ಸಾಧ್ಯವಾದೀತು....

"ಈ ಐವತ್ತು ರೂಪಾಯಿ ಇರಲಿ, ಇಟ್ಟುಕೊಳ್ಳಿ," ಎಂದು ಶಾಸ್ತ್ರಿ, ಹತ್ತು ರೂಪಾಯಿಯ ಐದು ನೋಟುಗಳನ್ನು ಆಕೆಯ ಕಡೆ ನೀಡಿದ.

"ಏನೂ ಬೇಡ, ಏನೂ ಬೇಡ," ಎಂದು ಬಾಯಿ ಹೇಳುತ್ತಿದ್ದರೂ ಸರಸುವಿನ ಕೈ ಆತುರದಿಂದ ಮುಂದಾಗಿ ಆ ನೋಟುಗಳನ್ನು ತೆಗೆದುಕೊಂಡಿತು. ತನ್ನ ಆತುರತೆಯನ್ನು ಗುರುತಿಸಿದಾಗ ತನಗೇ ಆಶ್ಚರ್ಯವಾಗದಿರಲಿಲ್ಲ.

"ನಾಳೆ ಬರುತ್ತೇನೆ ಅಂ!" ಎಂದು ಆಕೆ ಹೊರಟು ನಿಂತಾಗ, ಆಕೆಯ ದೃಷ್ಟಿಯಲ್ಲಿ ಹೊಸದೊಂದು ಹೊಳಪು ಮೂಡಿದ್ದಂತೆ ತೋರಿತು ಗಂಗಾಧರ ಶಾಸ್ತ್ರಿಗೆ. ಹಣದ ಮಹಿಮೆ ಆತನಿಗೆ ಅಪರಿಚಿತ ವಿಷಯವೇನೂ ಅಲ್ಲ. ಆತ ಮನಸ್ಸಿನಲ್ಲೇ ನಕ್ಕು ಪತ್ನಿಯ ಕಡೆಗೆ ಅರ್ಥಪೂರ್ಣ ಕಟಾಕ್ಷವೊಂದನ್ನೆಸೆದ.

ಪೇಟೆಗೆ ಹೋಗಿ, ತನಗೆ ಬೇಕೆನ್ನಿಸಿದ ಸಾಮಾನುಗಳೆಲ್ಲವನ್ನೂ ಕೊಂಡುಕೊಂಡು ಸರಸು ಮನೆಗೆ ಬರುವಷ್ಟರಲ್ಲಿ ದೀಪ ಹೊತ್ತಿಸುವ ಸಮಯವಾಗಿದ್ದಿತು. ಇಬ್ಬರು ಕೂಲಿಗಳ ಮೇಲೆ ಆಕೆ ಹೊರಿಸಿಕೊಂಡು ಬಂದ ವಸ್ತುಗಳನ್ನು ಕಂಡು ಗೋದಾವರಿಬಾಯಿ ಬೆರಗಾಗಿ ನಿಂತಳು.

ಶಿವಮೂರ್ತಿ ಇನ್ನೂ ಬಂದಿರಲಿಲ್ಲ.

ಕಂಬಳಿಯ ಮೇಲೆ ಗಾದಿಯನ್ನು ಹಾಸಿ, ಅದರ ಮೇಲೆ ಸುಂದರವಾದ ಮೇಲುಹೊದ್ದಿಕೆಯನ್ನು ಹಾಕಿ, ಹೊಸ ರಗ್ಗನ್ನು ಮಡಿಚಿ ಇಟ್ಟು, ಹೊಸ ಸೊಳ್ಳೆಪರದೆಯನ್ನು ಕಟ್ಟಿ ಹಾಸಿಗೆಯನ್ನು ಮುಚ್ಚಿದಳು. ಮೇಲ್ಭಾಗದಲ್ಲಿದ್ದ ಗೂಟವೊಂದಕ್ಕೆ ಕನ್ನಡಿಯನ್ನು ನೇತುಹಾಕಿ, ಅದರ ಕೆಳಗಿದ್ದ ಚಿಕ್ಕ ಮಾಡದಲ್ಲಿ ಸ್ನೋ, ಪೌಡರ್ ಡಬ್ಬಿಗಳನ್ನೂ ಸುಗಂಧವೆಣ್ಣೆಯ ಸೀಸೆಗಳನ್ನೂ ಓರಣವಾಗಿರಿಸಿದಳು. ಅನಂತರ, ಸಬಕಾರ ಹಚ್ಚಿ ಮುಖ ತೊಳೆದುಕೊಂಡು, ಹೊಸ ಅಂಗವಸ್ತ್ರದಿಂದ ಒರೆಸಿ, ತಲೆಗೂದಲಿಗೆ ಎಣ್ಣೆ ಹಚ್ಚಿ, ಬಾಚಿ ಜಡೆ ಹಾಕಿಕೊಂಡಳು. ಪೇಟೆಯಿಂದ ತಂದಿದ್ದ ಬಿಳಿಯ ಮಲ್ಲಿಗೆಯ ಹೂ ಮುಡಿದು, ಸ್ನೋ ಹಚ್ಚಿ ಪೌಡರ್ ಸವರಿಕೊಂಡು ಹಣೆಗೆ ಚಿಕ್ಕದಾಗಿ

ಕುಂಕುಮವಿಟ್ಟುಕೊಂಡಳು. ತೇವಗೊಂಡು ದುರ್ಗಂಧ ಬೀರುತ್ತಿದ್ದ ಆ ಚಿಕ್ಕ ಮನೆ ಸುಗಂಧದೆಣ್ಣೆ, ಸ್ನೋ, ಪೌಡರ್, ಮಲ್ಲಿಗೆ ಹೂಗಳ ಪರಿಮಳದಿಂದ ಘಮಘಮಿಸತೊಡಗಿತು. ನಿಲುವುಗನ್ನಡಿಯಲ್ಲಿ ರೂಪವನ್ನು ನೋಡಿಕೊಂಡು ತನ್ನಷ್ಟಕ್ಕೆ ತಾನೇ ನಕ್ಕಳು. ಈ ಅಲಂಕಾರದಿಂದಲೂ ಆಕೆಗೆ ಪೂರ್ಣವಾಗಿ ತೃಪ್ತಿಯಾಗಿರಲಿಲ್ಲ. ತನ್ನ ಸುಂದರ ರೂಪಕ್ಕೆ ಶೋಭಿಸುವಂಥ ರೇಶಿಮೆಯ ಸೀರೆಯೊಂದು ಇದ್ದಿದ್ದರೆ....ಅದಕ್ಕೆ ಒಪ್ಪುವಂಥ ರವಕೆಯೊಂದು ಇದ್ದಿದ್ದರೆ....ಅಂದು ನೂರಾರು ರೂಪಾಯಿ ದೊರೆತಿದ್ದಲ್ಲಿ ಅವುಗಳನ್ನು ಕೊಂಡು ತರಬಹುದಿತ್ತು. ಆ ಐವತ್ತು ರೂಪಾಯಿಗಳಲ್ಲಿ ರೇಶಿಮೆ ಸೀರೆ ಕೊಳ್ಳುವುದು ಸಾಧ್ಯವಿರಲಿಲ್ಲ. ಗಾದಿ, ರಗ್ಗು, ಸೊಳ್ಳೆಪರದೆಗಳಿಗಾಗಿಯೆ ಅದೆಲ್ಲವೂ ವೆಚ್ಚವಾಗಿ ಹೋಗಿತ್ತು....

ಬಾಗಿಲನ್ನು ಮುಂದೆ ಮಾಡಿ, ಸೊಳ್ಳೆಪರದೆಯೊಳಗಡೆ ಸೇರಿ, ಹಾಸುಗೆಯ ಮೇಲೊರಗಿ, ದೀಪವನ್ನು ಎಡಗಡೆಗೆ ಇರಿಸಿ ಅದರ ಬೆಳಕಿನಲ್ಲಿ ಪುಸ್ತಕವೊಂದನ್ನು ಓದತೊಡಗಿದಳು. ಅವರು ಈಗಲೋ, ಇನ್ನೊಂದು ಗಳಿಗೆಗೋ ಬರಬಹುದು. ಬರುವ ಹೊತ್ತಾಗುತ್ತ ಬಂದಿತು....ಹೊರಗಡೆ ಅವರು ಮಾಡುವ ಕೆಲಸವಾದರೂ ಏನು....ಈಗ ಬಂದುಬಿಡಬಹುದು.... ಮೆಟ್ಟಿಲುಗಳನ್ನೇರಿ ಅವರು ಬರುತ್ತಿರುವ ಹಾಗೆಯೆ ತಾನಿಲ್ಲಿ ಕಣ್ಣುಮುಚ್ಚಿ ಮಲಗಿ ನಿದ್ರೆ ಹೋದವಳಂತೆ ಅಭಿನಯಿಸಬೇಕು. ಅವರು ಬಂದು, ಬಾಗಿಲು ನೂಕಿ ಒಳಗಡೆ ಅಡಿಯಿರಿಸುತ್ತಲೂ ಈ ವೈಭವವನ್ನೆಲ್ಲ ಕಂಡು ಬೆರಗಾಗಿ ಒಂದು ಕ್ಷಣ ಹಾಗೇ ನಿಂತುಕೊಳ್ಳುವರು. ಆಗ ತಾನು ಸೊಳ್ಳೆಪರದೆಯೊಳಗಿನಿಂದ ಅವರ ಮುಖದ ಮೇಲಿನ ಆಶ್ಚರ್ಯ ಆನಂದಗಳನ್ನು ನಿಟ್ಟಿಸುತ್ತಿರಬೇಕು. ತಾವು ಪ್ರವೇಶಿಸಿದುದು ತಮ್ಮದೇ ಮನೆಯಲ್ಲಿಯೊ, ಅಥವಾ ದಾರಿ ತಪ್ಪಿ ಬೇರಾರ ಮನೆಯಲ್ಲಾದರೂ ನುಗ್ಗಿದೆನೋ ಎಂಬ ಗೊಂದಲದಲ್ಲಿ ಸಿಲುಕಿಬೀಳುವಂತಾಗಬೇಕು ಅವರಿಗೆ. ದೀಪದ ಬೆಳಕಿನಲ್ಲಿ ಫಳಫಳ ಹೊಳೆಯುವ ಆ ಹೊಚ್ಚ ಹೊಸ ನಿಲುವುಗನ್ನಡಿಯನ್ನು ಕಂಡು ಅವರು ಕಣ್ಣು ಕಣ್ಣು ಬಿಡುತ್ತಾ ನಿಂತುಕೊಳ್ಳುವಂತಾಗಬೇಕು. ಆ ಸ್ನೋ, ಆ ಪೌಡರ್, ಆ ಸುಗಂಧದೆಣ್ಣೆ....ಕೊಟಡಿಯಲ್ಲೆಲ್ಲ ಹರಡಿದ ಆ ಮಧುರ ಪರಿಮಳ....ಯಾವುದೋ ಒಂದು ಕನಸಿನ ಲೋಕದಲ್ಲಿ ಅಡಿಯಿರಿಸಿದಂತೆ ಭಾಸ

ನಾಗಬೇಕು ಅವರಿಗೆ. ಸೊಳ್ಳೆಪರದೆಯ ಒಳಗಡೆ ಪವಡಿಸಿದ ಈ ಸುಂದರಿ ಯಾರೋ, ತಾನು ಆಕೆಯ ಹತ್ತಿರ ಸುಳಿಯುವುದೇ ಬೇಡವೇ ಎಂದೂ ಅವರಿಗೆನ್ನಿಸಬೇಕು. ವಿಸ್ಮಯ, ಹರುಷ, ಕುತೂಹಲ ತುಂಬಿದ ನಯನಗಳಿಂದ ಅವರು ಮೆಲ್ಲಮೆಲ್ಲನೆ ಹೆಜ್ಜೆಯಿಡುತ್ತ ಹಾಸಿಗೆಯ ಬಳಿ ಬಂದು ನಿಧಾನವಾಗಿ ಪರದೆಯನ್ನೆತ್ತಿ ಆಚೆಗೆ ಸರಿಸಬೇಕು. ಆಗತಾನೆ ಎಚ್ಚೆತ್ತುಕೊಂಡವಳ ಹಾಗೆ ತಾನು ಹುಸಿಮುನಿಸನ್ನು ನಟಿಸುತ್ತ ಬಳುಕುತ್ತ ಬಳುಕುತ್ತ ಕೊಂಚ ಮೇಲಕ್ಕೇಳಬೇಕು. ಅರ್ಧ ಮೇಲಕ್ಕೆದ್ದ ತನ್ನ ದೇಹಲತೆಯನ್ನು ಅವರು ತಮ್ಮ ತೋಳುಗಳಲ್ಲಿ ಬಿಗಿದುಕೊಂಡು....

–ಕೊಂಚ ಹೊತ್ತು ಕಳೆದ ಬಳಿಕ ಅವರು ಕೇಳಬಹುದು: "ಇದೇನು ಸರಸೀ, ಒಮ್ಮಿಂದೊಮ್ಮೆಲೆ ಇಂಥ ವೈಭವ ಎಲ್ಲಿಂದ ಬಂತು? ಅಲ್ಲಾವುದ್ದೀನನ ಮಾಯಾದೀಪವೇನಾದರೂ ಸಿಕ್ಕಿತೋ ಏನು ನಿನಗೆ?"

–ಅದಕ್ಕೆ ತಾನು–"ಅಂಥ ಜಾದೂ ಏನೂ ನಡೆದಿಲ್ಲ. ನಡೆದುದೇನು, ಊಹಿಸಿ ಹೇಳಿರಲ್ಲ? ನೋಡೋಣ," ಎನ್ನುವಳು.

–ಅವರು ತಲೆ ಕೆರೆದುಕೊಳ್ಳುತ್ತಾ ಗೊಂದಲದಲ್ಲಿ ಸಿಲುಕಿಬೀಳುವರು. ಆಗ ತಾನು ಅಂದು ನಡೆದುದೆಲ್ಲವನ್ನೂ ನಿಧಾನವಾಗಿ ವಿವರಿಸುವಳು. ತನಗೆ ಕೆಲಸ ದೊರೆಯಲಿದೆಯೆಂಬ ಸಂಗತಿಯನ್ನು ತಿಳಿಸಿ, ಆ ಬಗೆಗೆ ಮುಂಗಡವಾಗಿ ಹಣವೂ ದೊರೆತಿದೆಯೆಂಬುದನ್ನು ತಿಳಿಸಿದಾಗ ಅವರಿಗೆಷ್ಟು ಸಂತೋಷವಾಗುವುದೊ....ಅದರೊಂದಿಗೆ ಅವರಿಗೂ ಒಂದು ಕೆಲಸ ಕಾದಿದೆಯೆಂಬುದನ್ನು ತಿಳಿಸಿದಾಗ ಇನ್ನೂ ಆನಂದವಾಗುವುದು. "ನಮ್ಮ ದೈವ ತೆರೆದಂತಾಯಿತು ಸರಸೀ. ಒಂದೇ ದಿನ ಇಬ್ಬರಿಗೂ ಕೆಲಸ ಹುಡುಕಿಕೊಂಡು ಬಂದಿದೆ. ನನ್ನ ಭಾಗ್ಯಲಕ್ಷ್ಮೀ...." ಎಂದು ಹೇಳುತ್ತ ಅವರು ತನ್ನನ್ನು ಬಿಗಿದಪ್ಪಿಕೊಳ್ಳಬಹುದು. ಮದುವೆಯಾದಂದಿನಿಂದ ಅವರೊಂದಿಗೆ ತಾನು ಸರಸವಾಗಿ ಕಾಲ ಕಳೆಯಲು ಸಾಧ್ಯವಾಗಿಲ್ಲ. ಇಂದು ಆ ಸಮಯ ಬಂದಿದೆ....

ಪುಸ್ತಕವನ್ನು ಓದಲಾಗಲಿಲ್ಲ ಸರಸುವಿಗೆ. ಕಾತರತೆಯಿಂದ ಆಕೆ ತನ್ನವರ ಹೆಜ್ಜೆಯ ಸಪ್ಪಳ ಕೇಳಿಬರುವುದನ್ನೇ ನಿರುಕಿಸತೊಡಗಿದಳು.

ಪತಿಯ ಆಗಮನವನ್ನು ಎದುರು ನೋಡುತ್ತ ಒರಗಿದ ಹಾಗೆ ಆಕೆಗೆ, ಕೆಲದಿನಗಳಿಗೆ ಹಿಂದೆ ತವರೂರಿನಲ್ಲಿ, ಅವರು ತಮ್ಮ ಮನೆಗೆ ಬರುವುದನ್ನೇ

ತಾನು ಕಾಯ್ದು ಕುಳಿತಿರುತ್ತಿದ್ದ ಸಂಗತಿ ನೆನಪಾಯಿತು. ಗೌರಿಗೆ ಪಾಠ ಹೇಳುವುದಕ್ಕಾಗಿ ಬೆಳಗಿನ ಎಂಟು ಗಂಟೆಗೆ ಅವರು ಬರುತ್ತಿದ್ದರು. ಪಡ ಸಾಲೆಯ ಗೋಡೆಗಿದ್ದ ಗಡಿಯಾರ ಎಂಟರ ಗಂಟೆಯನ್ನು ಎಣಿಸಿ ಹೇಳ ತೊಡಗುತ್ತಲೂ ತನ್ನೆದೆಯಲ್ಲೂ ಅದರ ಪ್ರತಿಧ್ವನಿಯೆದ್ದಂತಾಗುತಿತ್ತು. ಒಂದು....ಎರಡು....ಮೂರು....ನಾಲ್ಕು....ಎಂಟು. ಗಂಟೆ ಎಂಟಾಗುತಿತ್ತು. ಅವರು ಬರುತ್ತಿದ್ದರು. ಕಾಲುಗಳಲ್ಲಿನ ಚಪ್ಪಲಿಗಳ ಸದ್ದಾಗದಂತೆ ಹೇಗೆ ನಯವಾಗಿ ನಡೆದು ಬರುತ್ತಿದ್ದರವರು....ನಸು ಬಾಗಿದ ತಲೆ, ಬಾಗಿದ ದೃಷ್ಟಿ. ಬಾಗಿಲಿನೊಳಗಡೆ ಬಂದವರು ಅತ್ತ ಇತ್ತ ದೃಷ್ಟಿ ತಿರುಗಿಸದೆ ಮೆಟ್ಟಲುಗಳ ನ್ನೇರಿ ನೇರವಾಗಿ ಮೇಲಕ್ಕೆ ಹೋಗುತ್ತಿದ್ದರು. ತನ್ನ ಕೊಟಡಿಯ ಪಕ್ಕದ ಕೊಟಡಿ ಅವರಿಗಾಗಿ ತೆರವು ಮಾಡಿಸಲ್ಪಟ್ಟದ್ದಿತು. ಮೆಟ್ಟಲು ಏರಿ ಅವರು ಅದರಲ್ಲಿ ಅಡಿಯಿರಿಸಿದಾಗ ಕೆಳಗಡೆ ಪಡಸಾಲೆಯಲ್ಲಿ ಕುಳಿತ ತನಗೆ ಅವರ ಅಡಿಗಳ ಸದ್ದು ಕೇಳಿಸುತ್ತಿತ್ತು. ಆಹ, ಎಷ್ಟು ಚಂದ ಅವರ ನಡಿಗೆ....ಬಿಂಕ ವಿಲ್ಲ, ಬಡಿವಾರವಿಲ್ಲ. ಎಷ್ಟು ನಯ, ಎಷ್ಟು ನಾಜೂಕು....ಅವರು ತಮ್ಮ ಮನೆಗೆ ಬರತೊಡಗಿದುದಕ್ಕೆ ಇನ್ನೂ ಒಂದು ವಾರವೂ ಆಗಿರಲಿಲ್ಲ. ಅಷ್ಟು ಹೊತ್ತಿಗಾಗಲೇ ಆ ಪಾದಧ್ವನಿ ತನ್ನ ಗುರುತಿನದಾಗಿದ್ದ ಹಾಗೆ ಭಾಸವಾಗು ತಿತ್ತು....ಆ ಪಾದಧ್ವನಿಯ ಬಗೆಗೂ ಸಹ ತನಗೆ ವಿಲಕ್ಷಣ ಮೋಹ ಹುಟ್ಟಿ ದ್ದಿತು. ಅದು ಕಿವಿಗೆ ಬೀಳದ ದಿನ ಹುಚ್ಚೇ ಹಿಡಿದ ಹಾಗಾಗುತಿತ್ತು. ಊಟ, ತಿಂಡಿ ಯಾವುದೂ ಬೇಡವಾಗುತಿತ್ತು....ಪ್ರೀತಿಯ ಮೊದಲ ದಿನ ಗಳ ಆ ಅದ್ಭುತ ಮೋಹ....

ಕೆಲದಿನಗಳ ಹಿಂದೆ ತಾನು ಅನುಭವಿಸಿದ ರಸನಿಮಿಷಗಳೆಲ್ಲ ಒಂದರ ಹಿಂದೊಂದರಂತೆ ಆಕೆಯ ನೆನಪಿನ ಪರದೆಯ ಮೇಲೆ ಮೂಡತೊಡಗಿದುವು. ಪಕ್ಕದ ಕೊಟಡಿಯಲ್ಲಿ ಗೌರಿಗೆ ಪಾಠ ಹೇಳುತ್ತ ಅವರು ಕುಳಿತಾಗ ತಾನು ತನ್ನ ಕೊಟಡಿಯಲ್ಲಿ ಮಂಚದ ಮೇಲೊರಗಿಕೊಂಡು ಅವರ ಮಧುರ ಸ್ವರವಲ್ಲಿ- ಮುಳುಗೇಳುತ್ತಿದ್ದುದು....ಅವರಿಗೆ ಪ್ರಣಯಪತ್ರ ಬರೆಯಲು ಹೋಗಿ ಗೌರಿಯ ಕೈಗೆ ಸಿಲುಕಿ ತಾನು ಪಟ್ಟ ಫಜೀತಿ....ಅದೊಂದು ಮಳೆಯ ರಾತ್ರಿ ಹೊಳೆಯ ದಂಡೆಯ ಮೇಲೆ ನೈಮರೆತು ಕುಳಿತಿದ್ದ ಅವರನ್ನು ಗಾಡಿಯಲ್ಲಿ ಕರೆದುತಂದುದು....ಅನಂತರದ ಜಾತ್ರೆಯ ಸನ್ನಿವೇಶ....ಅವರ ಎದೆಯ

ಮೇಲೊರಗಿಕೊಂಡು ತಾನು ಕಂಬನಿಗರೆದುದು..“ನಿನ್ನನ್ನು ಬಿಟ್ಟು ನಾಸಿರಲು ಸಾಧ್ಯವಿಲ್ಲ ಸರಸೂ,” ಎಂದು ಅವರು ಕಂಪಿಸುವ ಧ್ವನಿಯಲ್ಲಿ ನುಡಿದುದು.... ಆ ಆಲಿಂಗನ....ಆ ಪ್ರೀತಿ....ಆ ಉತ್ಕಟ ಪ್ರೀತಿ....ಮಧ್ಯರಾತ್ರಿಯಲ್ಲಿ ಆ ಊರು ತ್ಯಜಿಸಿ ಅವರೊಂದಿಗೆ ಹೊರಟು ಬಂದ ಆ ರೋಮಾಂಚಕಾರಕ ಪ್ರಸಂಗ....ಆ ಮದುವೆ....

–ಮದುವೆ....ಅಲ್ಲಿಗೆ ಆ ರಸಮಯ ಬದುಕು ಮುಕ್ತಾಯಗೊಂಡಂತಾಗಿದ್ದಿತು. ಮದುವೆಯಾದುದೆಷ್ಟೋ ಅಷ್ಟೆ. ಮುಂದೆ ಅಂಥ ಸುಖದ ಅನುಭವವಾಗಿರಲಿಲ್ಲ. ಮದುವೆಗೆ ಮೊದಲು ತಮ್ಮಿಬ್ಬರಲ್ಲಿ ಬೆಳೆದು ಬಂದಿದ್ದ ಉತ್ಕಟ ಪ್ರೀತಿಗೆ ಯಾವುದೋ ತಡೆಯೊದಗಿದ ಹಾಗಾಗಿದ್ದಿತು. ಓಡುತ್ತಿದ್ದ ಗಾಡಿಯನ್ನು ಗಕ್ಕನೆ ನಿಲ್ಲಿಸಿದ ಹಾಗೆ....ಅದೇಕೆ ಹಾಗಾಯಿತು ? ಈ ಊರಿಗೆ ಬಂದಂದಿನಿಂದ ಅವರೇಕೆ ಒಂದು ತೆರನಾಗಿದ್ದಾರೆ ? ಮೊದಲಿನ ಹಾಗೆ ಉತ್ಸಾಹವಿಲ್ಲ....ಹರುಷವಿಲ್ಲ....

ಇಂದಾದರೂ ಅವರು ತನ್ನೊಂದಿಗೆ ಸರಸವಾಗಿ ಕಾಲ ಕಳೆಯಬಹುದೇನೊ. ಮನಸ್ಸನ್ನು ಮುದಗೊಳಿಸುವ ಇಂಥ ವಾತಾವರಣದಲ್ಲಾದರೂ ಅವರಿಗೆ ಪ್ರಸನ್ನತೆ ಲಭಿಸಬಹುದೇನೊ....

ಮಾರುಕಟ್ಟೆಯ ದೊಡ್ಡ ಗಡಿಯಾರ ಎಂಟರ ಗಂಟೆಯನ್ನು ಘೋಷಿಸಿತು. ಅದರ ಢಣ ಢಣ ಎಂಬ ಕೂಗು ಕಿವಿಗೆ ಬೀಳುತ್ತಲೂ ಸರಸು ಹಾಸಿಗೆ ಬಿಟ್ಟು ಎದ್ದು ಕುಳಿತಳು. ಎಂಟು ಗಂಟೆಯಾಯಿತಾದರೂ ಅವರಿನ್ನೂ ಬರಲಿಲ್ಲವಲ್ಲ ? ಎಲ್ಲಿಗೆ ಹೋಗಿರಬಹುದು ? ಏನು ಮಾಡುತ್ತಿರಬಹುದು ? ಎಲ್ಲಾದರೂ ಹೋಗಿ ಹರಟುತ್ತ ಕೂತಿರುವ ಸ್ವಭಾವವೂ ಅವರದಲ್ಲ. ಈ ನಗರದಲ್ಲಿ ಅವರಿಗೆ ಪರಿಚಿತರೂ ವಿರಳವೇ. ಸ್ನೇಹಿತರಂತೂ ಇಲ್ಲವೇ ಇಲ್ಲ. ಸಿನಿಮಾ ? ಅದರೊಂದಿಗಂತೂ ಇವರಿಗೆ ಎಣ್ಣೆ-ಸೀಗೇಕಾಯಿ ಸಂಬಂಧ. ಹಾಗಾದರೆ ಎಲ್ಲಿಗೆ ಹೋಗಿದ್ದಾರು ? ಪಿಟೀಲು ಹಿಡಿದುಕೊಂಡು ಎಲ್ಲಾದರೂ ಮೈ ಮರೆತು ಕುಳಿತಿರಬಹುದೇ–ಎನ್ನಬೇಕಾದರೆ ಪಿಟೀಲನ್ನವರು ಜೊತೆಗೆ ಕೊಂಡೊಯ್ದುದೇ ಇಲ್ಲ....

ಎಂಟುಗಂಟೆ....ಎಂಟೂವರೆ....ಎಂಟೂಮುಕ್ಕಾಲು....ಒಂಭತ್ತು....

ಒಂಭತ್ತು....

ಘಣ ಘಣಾ ಘಣಾ....

ಮತ್ತೆ ಧ್ವನಿಯೆತ್ತಿ ಘೋಷಿಸುತ್ತಲಿದೆ ಗೋಪುರದ ಗಡಿಯಾರ.

ಇನ್ನೂ ಬರಲಿಲ್ಲ....ಅವರು ಇನ್ನೂ ಬರಲಿಲ್ಲ.

ಈಗ ಮಾತ್ರ ಸರಸುವಿಗೆ ಚಿಂತೆಗಿಟ್ಟುಕೊಂಡಿತು. ಇಷ್ಟು ಹೊತ್ತಾದರೂ ಏಕೆ ಬರಲಿಲ್ಲ ಅವರು ? ತನ್ನ ಬಗೆಗೆ ಬೇಸರಗೊಂಡು ಎಲ್ಲಿಗಾದರೂ ಹೊರಟು ಹೋಗಿರಲಿಕ್ಕಿಲ್ಲವಷ್ಟೆ, ಎಂಬ ಯೋಚನೆ ಬಂದೊಡನೆ ಅವಳ ಎದೆ ಡವಡವನೆ ಬಡಿದುಕೊಳ್ಳತೊಡಗಿತು. ತನ್ನ ಸಿನಿಮಾ ಹುಚ್ಚು ಅವರಿಗೆ ಬೇಸರವನ್ನುಂಟುಮಾಡಿದ್ದಿತು. "ಇಷ್ಟೊಂದು ಹುಚ್ಚು ಒಳ್ಳೆಯದಲ್ಲ," ಎಂದೂ ಬಿರುಸಾಗಿ ಆಡಿ ಹೋಗಿದ್ದರು. ಆ ಬೇಸರದ ಮನಃಸ್ಥಿತಿಯಲ್ಲಿಯೆ ಎಲ್ಲಿಗಾದರೂ ಹೊರಟು ಹೋದರೊ ಏನೊ. ತಮ್ಮ ಹಳ್ಳಿಗೇನಾದರೂ ಹೋಗಿರಬಹುದೇ ?

ಸೊಳ್ಳೆಪರದೆಯನ್ನು ಬದಿಗೆ ಸರಿಸಿ ಸರಸು ಎದ್ದು ಬಂದು ಬಾಗಿಲು ತೆರೆದು ಬೀದಿಯ ಕಡೆಗೆ ದೃಷ್ಟಿ ತೂರಿದಳು. ಕತ್ತಲೆಯಲ್ಲಿ ಯಾವುದೂ ಗೋಚರವಾಗುವಂತಿರಲಿಲ್ಲ. ಆ ಬೀದಿಯಲ್ಲಿ ದೀಪವೂ ಇರಲಿಲ್ಲವಾದುದರಿಂದ ಎಲ್ಲೆಲ್ಲೂ ಗಾಢಾಂಧಕಾರ ಕವಿದುಕೊಂಡಿದ್ದಿತು. ಬಾಗಿಲು ತೆರೆದೊಡನೆ ಬೀದಿಯ ಹೊಲಸುಗಾಳಿ ಬಿರುಸಾಗಿ ಬೀಸಿ ಬರತೊಡಗಿತು. ಜೊತೆಗೆ ಸೊಳ್ಳೆಗಳ ವಿಕಟ ರಾಗ....ಸರಸು ಬೇಸರದಿಂದ ಬಾಗಿಲು ಮುಚ್ಚಿದಳು.

ಮತ್ತೆ ಮಲಗಿಕೊಂಡಿರುವುದೇ ಬೇಡವೇ ಎಂದು ಆಕೆ ಯೋಚಿಸುತ್ತ ನಿಂತುಕೊಂಡಿದ್ದ ಹಾಗೆ ಮೆಟ್ಟಿಲುಗಳ ಮೇಲೆ ಚಪ್ಪಲಿಗಳ ಸದ್ದಾಗುವುದು ಕೇಳಬಂದಿತು. ಅದೇ ಆ ನಯವಾದ ಸದ್ದು....ತನ್ನ ಮೂರ್ತಿಯ ಪಾದ ಧ್ವನಿ....ಸರಸು ಹರುಷದಿಂದ ಆತನನ್ನೆದುರುಗೊಳ್ಳಲು ಮುಂದಾದಳು.

ಶಿವಮೂರ್ತಿ ಬಾಗಿಲು ತೆರೆದು ಒಳಗಡೆ ಅಡಿಯಿರಿಸಿದ. ಆತನ ಮುಖದ ಮೇಲೆ ಆನಂದದ ಕಳೆ ಕೊಂಚವೂ ಕಂಡು ಬರುತ್ತಿರಲಿಲ್ಲ. ಬೇಸರು, ಆಯಾಸ. ಕಣ್ಣಾಮೇನ ದೃಷ್ಟಿಯನ್ನು ಸುತ್ತುಮುತ್ತು ಹೊರಳಿಸಿದ. ಸ್ನೋ, ಪೌಡರು, ಸುಗಂಧದೆಣ್ಣೆಗಳ ಪರಿಮಳದಿಂದ ಘಮಘಮಿಸುತ್ತಿದ್ದ ಕೊಟಡಿ, ಗೂಟಕ್ಕೆ ನೇತಾಡುತ್ತಿದ್ದ ಸಿಲ್ಕುಗಸ್ತಾಡಿ, ಸೊಳ್ಳೆಪರದೆ....ಮಲ್ಲಿಗೆ ಹೂ ಬಾಡಿದ ಮುಗುಳ್ನಗೆ ಬೀರುತ್ತ ನಿಂತ ಸರಸು... ಅಪರಿಚಿತರ ಮನೆಗೆ ಅತಿ

ಯಿರಿಸಿದ ಎಳೆ ಮಗುವಿನಂತೆ ಆತ ತಬ್ಬಿಬ್ಬಾಗಿ ನಿಂತು, ಒಂದೆರಡು ಕ್ಷಣ ಸರಸುವನ್ನು ಎವೆಯಿಕ್ಕದೆ ದಿಟ್ಟಿಸುತ್ತಲಿದ್ದ.

"ಇಷ್ಟೇಕೆ ತಡಮಾಡಿದಿರಿ? ನಿಮ್ಮ ದಾರಿ ಕಾಯ್ದು ಕಾಯ್ದು ಸಾಕಾಯ್ತು ನನಗೆ," ಎಂದು ಹುಸಿಮುನಿಸಿನಿಂದ ಹೇಳಿದಳು ಸರಸು.

ಆ ಪ್ರಶ್ನೆಗೆ ಉತ್ತರವೀಯದೆ ಆತ ಹಾಸಿಗೆಯ ಬಳಿ ಬಂದು, ಅದರ ಹತ್ತಿರ ನೆಲದ ಮೇಲೆಯೆ ಕುಳಿತುಕೊಂಡ. ಸೊಳ್ಳೆಪರದೆಯ ಒಂದು ಮೂಲೆಯನ್ನು ಕೈಯಲ್ಲಿ ಹಿಡಿದು ಕೊಂಚ ಹೊತ್ತು ಅದನ್ನೇ ದಿಟ್ಟಿಸುತ್ತಲಿದ್ದ. ಅನಂತರ ಪರದೆಯನ್ನು ಓರೆ ಮಾಡಿ ಒಳಗಿದ್ದ ಮೆತ್ತೆಯ ಗಾದಿ, ಮೇಲು ಹೊದ್ದಿಕೆ, ಹೊಸ ರಗ್ಗು ಎಲ್ಲವನ್ನೂ ನೋಡಿದ. ಆತನ ತುಟಿಗಳ ಮೇಲೆ ವಿಚಿತ್ರವಾದ ನಗೆ ತುಳುಕಿದಂತಾಯಿತು.

"ಇದನ್ನೆಲ್ಲ ಯಾರು ತಂದುಕೊಟ್ಟರು ಸರಸೂ? ನಿಮ್ಮ ತಂದೆಯೇನಾದರೂ ಬಂದಿಲ್ಲವಷ್ಟೆ?"

"ಅವರ ಪಾಲಿಗೆ ನಾನು ಬದುಕಿದ್ದರೆ ತಾನೆ ಅವರು ಬರೋದು?"

"ಮತ್ತೆ? ಇದೆಲ್ಲ?"

ಸರಸು ಆತನ ಪಕ್ಕದಲ್ಲಿ ಕುಳಿತುಕೊಂಡು ಆತನ ಮುಂಗುರುಳನ್ನು ತೀಡುತ್ತಾ—"ಎಲ್ಲಿಂದಲೋ ಬಂತು. ಹೇಳಿರಿ ನೋಡೋಣ?" ಎಂದಳು.

"ಇನ್ನೇನು ಆಕಾಶದಿಂದ ಬೀಳುತ್ತವೆಯೆ? ನೀನೇ ಕೊಂಡು ತಂದಿರಬಹುದು. ಸೂಶಿಯ ಹತ್ತಿರ ಸಾಲಗೀಲ ತೆಗೆದುಕೊಂಡಿಲ್ಲವಷ್ಟೆ?"

"ಸಾಲ ಯಾಕೆ ಮಾಡಬೇಕು? ಸಂಪಾದಿಸುವ ಯೋಗ್ಯತೆ ಆಕೆಗೊಬ್ಬಳಿಗೇ ಇದೆಯೇನು? ಬೇರೆ ಯಾರಿಗೂ ಇಲ್ಲವೆ?"

"ನೀನೂ ಸಂಪಾದಿಸತೊಡಗಿದೆಯಾ? ಎಲ್ಲಿಯಾದರೂ ಕೆಲಸಕ್ಕೆ ಸೇರಲಿಲ್ಲವಷ್ಟೆ? ಸೇರಿದೆಯೆಂದು ತಿಳಿದರೂ ಒಮ್ಮೆಲೆ ಸಂಬಳ ಹೇಗೆ ಕೈಗೆ ಬರುತ್ತದೆ?"

"ಹೇಗೋ ಬಂದಿತು," ಎಂದು ಪ್ರಾರಂಭಿಸಿ ಆಕೆ ಅಂದು ನಡೆದುದೆಲ್ಲವನ್ನೂ ಆತನಿಗೆ ವರದಿ ಮಾಡಿದಳು.

ಆಕೆ ಹೇಳಿ ಮುಗಿಸಿದ ಬಳಿಕ ಐದಾರು ನಿಮಿಷ ಮೌನವಾಗಿ ಕುಳಿತಿದ್ದ ಶಿವಮೂರ್ತಿಯೆಂದ: "ಅದೆಲ್ಲ ಸರಿ. ನಿನಗಿನ್ನೂ ಆ ಕೆಲಸ ಸಿಕ್ಕಲೂ

ಇಲ್ಲ. ಆದರೂ ಶಾಸ್ತ್ರಿ ಐವತ್ತು ರೂಪಾಯಿ ಮುಂಗಡ ಕೊಟ್ಟದ್ದು ಮಾತ್ರ ಆಶ್ಚರ್ಯದ ವಿಷಯವೆ."

"ಅದರಲ್ಲೇನು ಆಶ್ಚರ್ಯ ಬಂತು ? ನನಗೂ ಅವರಿಗೂ ಮೊದಲಿನಿಂದ ಪರಿಚಯವಿದೆ. ನಮ್ಮ ಮನೆಗೊಮ್ಮೆ ಊಟಕ್ಕೆ ಬಂದಿದ್ದರವರು. ಈಗ ನಾನು ಕಷ್ಟದಲ್ಲಿರುವದನ್ನು ನೋಡಲಾರದೆ ಕೊಟ್ಟಿದ್ದಾರೆ."

"ಹೇಗಾದರೂ ಕೊಟ್ಟರೊ !" ಎಂದು ನುಡಿದು ಶಿವಮೂರ್ತಿ ಸುಮ್ಮನಾದ. ಹಾಗೆಲ್ಲ ಔದಾರ್ಯದಿಂದ ಹಣ ಕೊಡುವುದು ಶಾಸ್ತ್ರಿಯ ಸ್ವಭಾವಕ್ಕೇ ಹೊಸದು ಎಂಬ ವಿಷಯ ಅಂದೇ ಅವನಿಗೆ ತಿಳಿದು ಬಂದಿದ್ದಿತು. ಅಂದು ಸಾಯಂಕಾಲ ಪೇಟೆಯಲ್ಲಿ ಭೆಟ್ಟಿಯಾದಾಗ ಶಾಸ್ತ್ರಿಯ ಬಗೆಗೆ ಎಷ್ಟೋ ವಿಷಯಗಳನ್ನು ಹರಿಹರ ಆತನಿಗೆ ತಿಳಿಸಿದ್ದ. ತಾನು ಆತನ ಸಹವಾಸ ಬಿಟ್ಟು ಬಿಡಲು ಕಾರಣವೇನಾಯಿತೆಂಬುದನ್ನೂ ವಿವರಿಸಿದ್ದ.

ಹರಿಹರನಿಂದ ತನಗೆ ತಿಳಿದು ಬಂದ ವಿಷಯಗಳನ್ನು ಸರಸುವಿಗೂ ತಿಳಿಸಬಹುದಾಗಿತ್ತು. ಆದರೆ, ಏಕೋ ಏನೋ ಆ ಬಗೆಗೆ ಆತ ಮೌನ ತಳೆದ. "ಇಂದು ಸಾಯಂಕಾಲ ಹರಿಹರ ಭೆಟ್ಟಿಯಾಗಿದ್ದರು ಸರಸೂ, ಅವರೊಂದಿಗೆ ಮಾತನಾಡುತ್ತ ಹಾಗೇ ಅವರ ಪ್ರೆಸ್ಸಿಗೂ ಹೋಗಿದ್ದೆ. ಅದಕ್ಕಾಗಿಯೆ ಮನೆಗೆ ಬರಲು ತಡವಾಯಿತು," ಎಂದಿಷ್ಟೇ ಹೇಳಿದ.

"ಹರಿಹರ ಭೆಟ್ಟಿಯಾಗಿದ್ದರೇ ? ಏನೆನ್ನುತಿದ್ದರು ?"

"ಮುಂದಿನ ವಾರದಿಂದ ಅವರೂ ಒಂದು ಪತ್ರಿಕೆ ಹೊರಡಿಸುತ್ತಾರೆ."

"ಪತ್ರಿಕೆ ? ಎಂಥಾದ್ದು ?"

"ವಾರ ಪತ್ರಿಕೆ. 'ಜನಪದ' ಅಂತ ಹೆಸರು ಅದಕ್ಕೆ."

"ಹಣವನ್ನೆಲ್ಲಿಂದ ತರುತ್ತಾರೆ ?"

"ಏನೇನೋ ಮಾಡಿ ಅಲ್ಪಸ್ವಲ್ಪ ಕೂಡಿಸಿದ್ದಾರೆ. ಕೆಲವರು ಗೆಳೆಯರು ಸಹಾಯ ಮಾಡಿರುವರಂತೆ. ಸೂಶಿಯೂ ಕೊಂಚ ಕೊಟ್ಟಿದ್ದಾಳೆ. ಅಚ್ಚಿನ ಮೊಳೆಗಳನ್ನು ಕೊಂಡಿದ್ದಾರೆ. ಮೊಳೆ ಜೋಡಿಸುವುದನ್ನೂ ಕಲಿತಿದ್ದಾರೆ. ತಾವೇ ಲೇಖನ ಬರೆದು ತಾವೇ ಮೊಳೆ ಜೋಡಿಸಿ, ತಾವೇ ಅಚ್ಚು ಹಾಕುವರಂತೆ. ಬ್ಯಾಂಕಿನಲ್ಲಿ ಸಾಲ ತೆಗೆದು ಮುದ್ರಣ ಯಂತ್ರವನ್ನೂ ಕೊಂಡಿದ್ದಾರೆ.

ಅಂತೂ ಹರಿಹರ ಸಾಮಾನ್ಯ ವ್ಯಕ್ತಿಯಲ್ಲ ಸರಸೂ. ತುಂಬ ಸಾಹಸಿ. ಹಿಡಿದ ಕೆಲಸ ಸಾಧಿಸದೆ ಬಿಡುವವರಲ್ಲ."

"ಶಾಸ್ತ್ರಿಗಳಿಗೆ ಮಾತ್ರ ಅವರ ಬಗ್ಗೆ ಸ್ವಲ್ಪವೂ ಒಳ್ಳೆಯ ಅಭಿಪ್ರಾಯವಿಲ್ಲ."

"ಅದು ಸ್ವಾಭಾವಿಕ ಸರಸೂ. ಹರಿಹರ ಸ್ವತಂತ್ರವಾಗಿ ಪತ್ರಿಕೆ ಹೊರಡಿಸುವುದನ್ನು ಶಾಸ್ತ್ರಿಗಳು ಸಹಿಸಬಹುದೇ? ಇದುವರೆಗೆ ಈ ಊರಲ್ಲಿ ಇದೊಂದೇ ಕನ್ನಡ ಪತ್ರಿಕೆಯಿತ್ತು. 'ಲಿಂಗವೀರ'ಕ್ಕೆ ಪ್ರತಿಸ್ಪರ್ಧಿಯಾಗಿ ಹರಿಹರರ "ಜನಪದ" ಹೊರಡತೊಡಗಿದರೆ ಶಾಸ್ತ್ರಿಗಳಿಗೆ ಪೆಟ್ಟು ಬೀಳುವುದಲ್ಲವೆ? ಅಂತೆಯೆ, ಅವರಿಗೆ ಹರಿಹರರ ಬಗ್ಗೆ ಅಸಮಾಧಾನವಿರಬಹುದು."

"ಅವರ ಸ್ಥಳದಲ್ಲೇ ನಿಮ್ಮನ್ನು ತೆಗೆದುಕೊಳ್ಳೋದು ಶಾಸ್ತ್ರಿಗಳು."

"ಅವರ ಸ್ಥಳದಲ್ಲಿ? ಹಾಗಾದರೆ ಸ್ವಲ್ಪ ವಿಚಾರ ಮಾಡಬೇಕಾಯಿತು."

"ಏನು ವಿಚಾರ?"

"ಶಾಸ್ತ್ರಿ ಹರಿಹರರನ್ನು ಸರಿಯಾಗಿ ನಡೆಸಿಕೊಂಡಿದ್ದರೆ ಅವರು ಆ ಕೆಲಸ ಬಿಡುವ ಪ್ರಸಂಗವೇ ಬರುತ್ತಿರಲಿಲ್ಲ. ಅವರು ಬಿಟ್ಟ ಜಾಗಕ್ಕೆ ನಾನು ಹೋಗುವದೆಂದರೆ...."

"ಹಾಗೆ ಚಿಂತಿಸಲು ಕಾರಣವಿಲ್ಲ. ಶಾಸ್ತ್ರಿಗಳು ಒಳ್ಳೆಯವರೆಂಪೇ ನನಗಂತೂ ಅನ್ನಿಸುತ್ತದೆ."

ಶಿವಮೂರ್ತಿ ಕೊಂಚ ಹೊತ್ತು ಮೌನವಾಗಿದ್ದು ಅನಂತರ ಹೇಳಿದ:

"ಹರಿಹರರೂ ನನ್ನನ್ನು ಕೆಲಸಕ್ಕೆ ಕರೆದಿದ್ದಾರೆ."

"ಎಂಥ ಕೆಲಸ?"

"ಕೆಲಸ ಅಂದರೆ ನೌಕರಿ ಎಂದೇನೂ ಅಲ್ಲ. ಇಬ್ಬರೂ ಸೇರಿ ಪತ್ರಿಕೆ ಮಾಡೋಣ, ಮೊಳೆ ಜೋಡಿಸುವದು, ಲೇಖನ ಬರೆಯುವದು, ಪತ್ರವ್ಯವಹಾರ ಮಾಡುವದು, ಇನ್ನೂ ಅನೇಕ ಕೆಲಸಗಳಿರುತ್ತವೆ, ಅವುಗಳನ್ನೆಲ್ಲ ಒಬ್ಬನೇ ಮಾಡುವುದು ಸಾಧ್ಯವಾಗಲಾರದು. ನೀವೂ ಬನ್ನಿ, ಇಬ್ಬರೂ ಅಣ್ಣತಮ್ಮಂದಿರಂತೆ ಕೂಡಿ ಕೆಲಸ ಮಾಡೋಣ, ಎಂದರು."

"ಸರಿಯೆ. ಆದರೆ ಅವರೊಂದಿಗೆ ಸೇರಿದರೆ ಸಂಪಾದನೆ?"

"ನಮ್ಮಿಬ್ಬರ ಜೀವನ ನಡೆಯುವ ಮಟ್ಟಿಗೆ ಸಿಕ್ಕಬಹುದು."

"ನಾನೊಲ್ಲೆ ತಾಯಿಾ ಅಂಥ ಜೀವನವನ್ನು. ಇರುವವರೆಗೂ ಸುಖವಾಗಿ ಬದುಕಬೇಕು. ಸುಮ್ಮನೆ ತೊಂದರೆ ಪಟ್ಟುಕೊಳ್ಳುವದರಿಂದ ಉಪಯೋಗವೇನು ? ಹರಿಹರ ಮೊದಲು ತನ್ನ ಹೊಟ್ಟೆ ತುಂಬಿಸಿಕೊಳ್ಳಲಿ. ಅನಂತರ ಇನ್ನೊಬ್ಬರ ಭಾರ ಹೊರುವ ಮಾತು."

"ಹೊಟ್ಟೆ ತುಂಬಿಸಿಕೊಳ್ಳಲೆಂದು ಆತನೇನೂ ಈ ಪತ್ರಿಕೆಯ ಕೆಲಸಕ್ಕೆ ನಿಂತಿಲ್ಲ ಸರಸೂ."

"ಮತ್ತೇತಕ್ಕಾಗಿ ?"

"ಬಡ ಜನರಲ್ಲಿ ತಿಳಿವು ಹರಡುವುದಕ್ಕಾಗಿ. ಆತ ಧ್ಯೇಯವಾದಿ, ಬಡವರ ಬಗೆಗಂತೂ ಆತನಿಗೆ ತುಂಬ ಕಳಕಳಿ. ಅವರಿಗಾಗಿ ಎಂಥ ತ್ಯಾಗವನ್ನೂ ಮಾಡಬಲ್ಲ."

ಸರಸು ನಗುತ್ತ ಹೇಳಿದಳು : "ಬಡವರು....ತಿಳಿವು....ಕಳಕಳಿ....ತ್ಯಾಗ....ಇದೂ ಒಂದು ಹುಚ್ಚು ಅಷ್ಟೆ. ಪ್ರಪಂಚದಲ್ಲಿ ಇಂಥ ಹುಚ್ಚರಿಗೆ ಕೊರತೆಯೇನೂ ಇಲ್ಲ. ಆದರೂ ಬಡವರ ಬಡತನ ಹೋಗಿಯೇ ಇಲ್ಲ— ಶ್ರೀಮಂತರ ಸಿರಿತನಕ್ಕೂ ಯಾವ ಅಡ್ಡಿಯೂ ಆಗಿಲ್ಲ. ಹರಿಹರ ನಿಮ್ಮ ತಲೆಯಲ್ಲಿ ಇಂಥ ಹುಚ್ಚು ವಿಚಾರ ತುಂಬಿಲ್ಲವಷ್ಟೆ...."

"ನಿನಗೆ ಇದೆಲ್ಲ ಸರಿಯಾಗಿ ಅರ್ಥವಾಗುವದಿಲ್ಲ ಸರಸೂ. ಶ್ರೀಮಂತರಲ್ಲಿ ಹುಟ್ಟಿ ಬೆಳೆದ ನಿನಗೆ ಬಡತನವೆಂದರೇನೆಂಬುದು ಅರ್ಥವಾಗದು. ಅಂದ ಮೇಲೆ...." ಎಂದು ನೊಂದ ಧ್ವನಿಯಲ್ಲಿ ನುಡಿದ ಶಿವಮೂರ್ತಿ.

"ಅದನ್ನು ಅರ್ಥಮಾಡಿಕೊಳ್ಳುವ ಮನಸ್ಸೂ ನನಗಿಲ್ಲ. ಅದರ ಗೊಡವೆಯೇ ಬೇಡ ತಾಯಿಾ. ನೀವೂ ಅಂಥ ಹುಚ್ಚನ್ನೆಲ್ಲ ತಲೆಗೆ ಹಾಕಿಕೊಳ್ಳಬಾರದು. ಆ ಹರಿಹರನಿಂದ ಸ್ವಲ್ಪ ದೂರವಿರೋದೇ ಒಳ್ಳೇದೆಂದು ತೋರುತ್ತದೆ. ಶಾಸ್ತ್ರಿಗಳಲ್ಲಿ ಕೆಲಸ ಹಿಡಿದು ಸುಖವಾಗಿರಬಹುದು. ನನಗೂ ಕೆಲಸ, ನಿಮಗೂ ಕೆಲಸ...."

ಕೊಂಚ ಹೊತ್ತು ಸುಮ್ಮನೆ ಕುಳಿತಿದ್ದು ಕೇಳಿದ ಶಿವಮೂರ್ತಿ :

"ಅಲ್ಲಿ ನಾನು ಕೆಲಸಕ್ಕೆ ಸೇರಬೇಕೆಂದು ಗಟ್ಟಿಮಾಡಿಕೊಂಡೇ ಬಂದಿದ್ದೀಯಾ ?"

"ಗಟ್ಟಿಯಾದಂತೇ ಆಗಿದೆ. ನಾಳೆ ಬರಹೇಳಿದ್ದಾರೆ ಶಾಸ್ತ್ರಿಗಳು. ಅವರ

ಹೆಂಡತಿ ಲಲಿತಮ್ಮನವರೂ ಒತ್ತಾಯ ಮಾಡಿದ್ದಾರೆ. ಇಬ್ಬರೂ ಬಲು ಒಳ್ಳೆಯವರು...."

"ಒಳ್ಳೆಯವರು !" ಎಂದು ತನ್ನಷ್ಟಕ್ಕೆ ತಾನೇ ಅಂದುಕೊಳ್ಳುತ್ತ ಶಿವ ಮೂರ್ತಿ ಮೇಲಕ್ಕೆದ್ದ. "ಒಂದು ರೊಟ್ಟಿ ತಿಂದು ಮಲಗಿದರಾಯಿತು. ಏಳು ಸರಸೂ," ಎಂದು ಅಡುಗೆಯ ಕೊಟಡಿಗೆ ಅಡಿಯಿರಿಸಿದ.

[೧೯]

ಮಾರನೆಯ ದಿನ ಸಾಯಂಕಾಲ ನಾಲ್ಕು ಗಂಟೆಗೆ ಅವರಿಬ್ಬರೂ 'ಲಿಂಗವೀರ' ಕಾರ್ಯಾಲಯಕ್ಕೆ ಬಂದಾಗ ಲಲಿತಮ್ಮನೇ ಅವರನ್ನು ಬರ ಮಾಡಿಕೊಂಡಳು. ಆಕೆಯೊಂದಿಗೆ ಹರಟುತ್ತ ಕುಳಿತಿದ್ದ ಮುದ್ರಣಾಲಯದ ಕೆಲಸಗಾರನೊಬ್ಬ ಹೊಸಬರನ್ನು ಕಾಣುತ್ತಲೂ ಎದ್ದು ತನ್ನ ಕೆಲಸಕ್ಕೆ ಹೊರಟುಹೋದ.

"ಆರು ಗಂಟೆಯೊಳಗಾಗಿ ಒಂದು ಫಾರಂ ಪ್ರಿಂಟಾಗಬೇಕು ಕೃಷ್ಣಯ್ಯ. ಬೀಡಿ ಸೇದುತ್ತಾ ಕೂತಿರಬೇಡ. ಮಶಿನ್ ಸ್ಟಾರ್ಟ್ ಮಾಡು," ಎಂದು ಲಲಿತಮ್ಮ ಆಜ್ಞೆಯನ್ನು ಕೂಗಿ ಹೇಳಿ—"ಈ ಕೆಲಸಗಾರರ ಸಹವಾಸ ತುಂಬಾ ಕಷ್ಟ ಸರಸಮ್ಮ. ತಲೆ ಕೆಟ್ಟು ಹೋಗುತ್ತೆ," ಎಂದು ನುಡಿದು ಅವರಿಬ್ಬರನ್ನೂ ಮನೆಯೊಳಕ್ಕೆ ಕರೆದೊಯ್ದಳು. ಮಲಗುವ ಮಂಚದ ಮೇಲೆ ಅವರಿಬ್ಬರನ್ನೂ ಕೂಡ್ರಿಸಿ ತಾನೊಂದು ಕುರ್ಚಿಯನ್ನೆಳೆದು ಕುಳಿತುಕೊಂಡು—"ಇವರೇ ತಾನೆ ನಿಮ್ಮ ಯಜಮಾನರು !" ಎಂದು ನಗುನಗುತ್ತಾ ಪ್ರಶ್ನಿಸಿದಳು.

"ಶಾಸ್ತ್ರಿಗಳಿಲ್ಲಿ ಕಾಣುವದಿಲ್ಲವಲ್ಲ ಲಲಿತಮ್ಮನವರೇ ?" ಎಂದು ಕೇಳಿ ದಳು ಸರಸು.

"ಅವರಿಗೇನಮ್ಮ ನೂರಾಎಂಟು ಉಪದ್ವ್ಯಾಪ. ನಿನ್ನೆ ರಾತ್ರಿ ಒಂದು ಟೆಲಿಗ್ರಾಂ ಬಂತು—ಕೂಡಲೆ ಹೊರಟು ಬರಬೇಕೆಂದು. ಮಂತ್ರಿಗಳು ಭೆಟ್ಟಿಗೆ ಕರೆಸಿದ್ದಾರೆ."

"ಮಂತ್ರಿಗಳು !"

"ಹೌದು. ಮಂತ್ರಿಗಳು. ಅವರಿಗೂ ನಮ್ಮವರಿಗೂ ಬಹಳ ಸ್ನೇಹ. ಅವರು ಮಂತ್ರಿಗಳಾಗುವುದಕ್ಕೆ ಮೊದಲಿನಿಂದಲೂ ಸಲಿಗೆಯಿದೆ."

"ಎಂದು ಬರಬಹುದು ಹಾಗಾದರೆ?" ಎಂದು ಪ್ರಶ್ನಿಸಿದ ಶಿವಮೂರ್ತಿ.

"ಯಾವುದೂ ನಿಶ್ಚಿತವಿಲ್ಲ. ಬಂದರೆ ಇಂದೇ ಬಂದಾರು. ಇಲ್ಲವಾದರೆ ನಾಲ್ಕು ದಿನ ತಡವಾದರೂ ಆದೀತು."

"ಹಾಗಾದರೆ...."

"ನಿಮ್ಮ ಕೆಲಸಕ್ಕೆ ಸಂಬಂಧಿಸಿದ ವಿಷಯವಷ್ಟೆ? ಆ ಬಗ್ಗೆ ಏನೂ ಯೋಚಿಸಬೇಡಿರಿ. ಎಲ್ಲಾ ಹೇಳಿಹೋಗಿದ್ದಾರೆ. ಇವೊತ್ತಿನಿಂದಲೇ ನೀವು ಇಲ್ಲಿ ಕೆಲಸಕ್ಕೆ ಸೇರಬೇಕೆಂದು ತಿಳಿಸಿದ್ದಾರೆ. ಸಂಬಳ ಮೊದಲಾದುದನ್ನೆಲ್ಲಾ ಆಮೇಲೆ ನಿರ್ಧರಿಸಲು ಬಂದೀತು."

"ಅದೇನೋ ಸರಿಯೆ. ಆದರೆ ನನ್ನ ಕೆಲಸವೇನು ಅನ್ನುವದು ಗೊತ್ತಾಗಬೇಕಲ್ಲವೆ? ನಾನಂತೂ ತೀರಾ ಹೊಸಬ ಈ ಕೆಲಸಕ್ಕೆ."

"ನೀವು ಹೊಸಬರಾದರೆ ನಾನೇನೂ ಅಲ್ಲವಲ್ಲ. ನಾನೆಲ್ಲ ಹೇಳಿಕೊಡುತ್ತೇನೆ. ಶಾಸ್ತ್ರಿಗಳಿಲ್ಲದಿರುವಾಗ ನಾನೇ ಪ್ರೆಸ್ಸಿನ ವ್ಯವಹಾರವನ್ನೆಲ್ಲ ನೋಡಿಕೊಳ್ಳಬೇಕಾಗುವದು. ಹಾಗಾಗಿ ಎಲ್ಲಾ ಅನುಭವವಾಗಿದೆ."

"ನೀವಿಷ್ಟು ಸಮರ್ಥರಿರಬಹುದೆಂದು ನಾನು ತಿಳಿದಿರಲಿಲ್ಲ ಲಲಿತಮ್ಮ. ನೀವು ಕಲಿತದ್ದೆಷ್ಟು? ಮ್ಯಾಟ್ರಿಕ್ ವರೆಗೂ ಓದಿರಬಹುದೇನೊ...." ಎಂದು ವಿಸ್ಮಯದಿಂದ ಕೇಳಿದಳು ಸರಸು.

"ಅಷ್ಟೇನೂ ಕಲಿಯಲಿಲ್ಲ. ಆದರೂ ತಕ್ಕ ಮಟ್ಟಿಗೆ ಕಲಿತಿದ್ದೇನೆ. ಒಂದು ಪ್ರೆಸ್ ನೋಡಿಕೊಳ್ಳುವುದು ಅಂಥ ಮಹಾವಿಷಯವೇನೂ ಅಲ್ಲ. ನಿಜವಾಗಿ ನೋಡಿದರೆ ನಮಗೆ ಕಾರಕೂನರ ಅಗತ್ಯವೇ ಇರಲಿಲ್ಲ. ಆದರೂ ಒಬ್ಬರಿದ್ದರೆ ಒಳ್ಳೆಯದೆಂದು ಇಟ್ಟುಕೊಳ್ಳುತ್ತೇವೆ. ಅಲ್ಲದೆ, ಮನೆಯ ವ್ಯವಸ್ಥೆಯನ್ನೂ ಸಹ ನಾನೇ ನೋಡಿಕೊಳ್ಳಬೇಕಲ್ಲ? ಅಂತೆಯೆ."

"ಇನ್ನೂ ಮಕ್ಕಳಾಗಲಿಲ್ಲವೇ ಲಲಿತಮ್ಮ?"

"ಆ ಕಾಟವೊಂದು ಇಲ್ಲ ಇನ್ನೂ."

"ಮದುವೆಯಾಗಿ ಎಷ್ಟು ವರ್ಷವಾಯ್ತು?"

"ಐದಾರು ವರ್ಷವಾಗಿರಬಹುದು."

ಸರಸು ಕೊಂಚ ಸಂಕೋಚದಿಂದಲೇ—"ಎರಡನೆಯ ಸಂಬಂಧವೇನಿಲ್ಲ ಇದು ?" ಎಂದು ಕೇಳಿದಳು.

ಲಲಿತಮ್ಮ ನಿರುತ್ಸಾಹದ ಧ್ವನಿಯಲ್ಲಿ—"ಹೌದು," ಎಂದಳು.

ಕೊಂಚ ಹೊತ್ತು ಆ ಮಾತು ಈ ಮಾತು ಆಡಿದ ಬಳಿಕ ಸರಸು ಹೊರಟು ನಿಂತಳು. "ಶಾಸ್ತ್ರಿಗಳು ಬಂದ ಬಳಿಕ ನನ್ನ ಕೆಲಸದ ವಿಷಯ ತಿಳಿಸುವರಷ್ಟೆ ?"

"ಅದರ ಬಗೆಗೂ ಚಿಂತಿಸಬೇಡಿರಿ ಸರಸಮ್ಮ. ಅದೂ ಸಿಕ್ಕಿದ ಹಾಗೇ ಅಂತ ತಿಳಿದುಕೊಳ್ಳಿರಿ."

"ಸರಿ. ಹಾಗಾದರೆ. ನಾನು ಹೊರಡುತ್ತೇನೆ."

"ಹೋಗಿ ಬನ್ನಿ. ನಾನು ಇವರಿಗೆ ಕೆಲಸಗಳ ಪರಿಚಯ ಮಾಡಿಸಿ ಕೊಡುತ್ತೇನೆ," ಎಂದು ಹೇಳಿ ಲಲಿತಮ್ಮನೂ ಎದ್ದು ನಿಂತಳು. ಶಿವ ಮೂರ್ತಿಯೂ ಎದ್ದು ಹೊರಗಿನ ಕೊಟಡಿಗೆ ಹೊರಟ.

ಮುದ್ರಣಾಲಯಕ್ಕೆ ಸಂಬಂಧಪಟ್ಟ ಬಿಲ್ ಪುಸ್ತಕ, ರಸೀತಿ ಪುಸ್ತಕ, ಆರ್ಡರ್ ಪುಸ್ತಕ, ಡೆಲಿವರಿ ಪುಸ್ತಕ, ಲೆಕ್ಕದ ಪುಸ್ತಕಗಳನ್ನೆಲ್ಲ ಒಂದೊಂದಾಗಿ ತೆಗೆದು ತೋರಿಸಿ ಅವುಗಳ ವಿಧಾನವನ್ನು ವಿವರಿಸಿ ಲಲಿತಮ್ಮ— "ಇದೆಲ್ಲಾ ಅಂಥ ಕಷ್ಟದ ಕೆಲಸವೇನೂ ಅಲ್ಲ. ಒಂದೆರಡು ದಿನಗಳಲ್ಲಿಯೆ ಎಲ್ಲವೂ ಗೊತ್ತಾಗುವದು. ಪತ್ರಿಕೆಯದೇ ಸ್ವಲ್ಪ ಕಠಿಣ. ಪ್ರೂಫು ನೋಡುವುದಕ್ಕಂತೂ ಬಹಳ ಅನುಭವ ಬೇಕು. ನೀವು ಇದುವರೆಗೆ ಎಂದಾದರೂ ಪ್ರೂಫು ನೋಡಿದ್ದೀರಾ ?" ಎಂದು ಕೇಳಿದಳು.

"ಇಲ್ಲ. ಈ ಕ್ಷೇತ್ರ ನನಗೆ ತೀರ ಹೊಸದು—"

"ಸ್ವಲ್ಪ ತಡೆಯಿರಿ. ತೋರಿಸುತ್ತೇನೆ," ಎಂದು ನುಡಿದು ಲಲಿತಮ್ಮ ಕುರ್ಚಿಯ ಮೇಲೆ ಕುಳಿತುಕೊಂಡು, ಮೇಜಿನ ಮೇಲಿದ್ದ ಗಂಟೆಯನ್ನು ಬಾರಿಸಿದಳು. ಯಾರೂ ಬರಲಿಲ್ಲ. ಮತ್ತೊಮ್ಮೆ ಗಟ್ಟಿಯಾಗಿ ಬಾರಿಸಿದಳು. ಯಾರೂ ಬರಲಿಲ್ಲ. ಮತ್ತೊಮ್ಮೆ ಗಟ್ಟಿಯಾಗಿ ಬಾರಿಸಿದಳು. ಅದರೊಂದಿಗೆ—"ಕೃಷ್ಣಯ್ಯಾ, ಏ ಕೃಷ್ಣಯ್ಯಾ," ಎಂದು ಕೂಗಿದಳು.

ಒಂದೆರಡು ನಿಮಿಷ ಗತಿಸಿದರೂ ಮುದ್ರಣಾಲಯದಿಂದ ಯಾರೂ ಬರಲಿಲ್ಲ.

ಲಲಿತಮ್ಮ ರೇಗಿ ಕುರ್ಚಿಯನ್ನು ಬಿಟ್ಟೆದ್ದು, ಮುದ್ರಣಾಲಯದ ಬಾಗಿಲಿನ ವರೆಗೂ ಹೋಗಿ-"ಕೃಷ್ಣಯ್ಯಾ, ಏ ಕೃಷ್ಣಯ್ಯಾ, ಏ ರಾಮ್ಯಾ, ನೀವೆಲ್ಲಾ ಎಲ್ಲಿದ್ದೀರಿ ?" ಎಂದು ಕೂಗಿದಳು.

ಚಿಕ್ಕ ಹುಡುಗನೊಬ್ಬ ಓಡುತ್ತ ಬಂದು-"ಏನು ಕರೆದಿರಿ ಅಮ್ಮಾವರೆ?" ಎಂದು ಕೇಳಿದ.

"ಆ ಕೃಷ್ಣಯ್ಯ ಎಲ್ಲಿ ಹಾಳಾದ ?"

"ಚಹಾ ಕುಡಿಯಲು ಹೋಗಿದ್ದಾನೆ."

"ತಾಸಿಗೆ ಎರಡು ಸಲ ಚಹಾ ಬೇಕೇನು ಅವನಿಗೆ. ಅದೇ ಒಂದು ಉದ್ಯೋಗವಾಯಿತಲ್ಲ ? ಹೋಗು, ಒಂದು ಪ್ರೂಫು ತಕ್ಕೊಂಡು ಬಾ."

"ಇನ್ನೂ ತಯಾರಾಗಿಲ್ಲ ಅಮ್ಮಾವರೆ."

"ಕರೆಕ್ಷನ್ ಮಾಡಿದ್ದನ್ನೇ ತಕ್ಕೊಂಡು ಬಾ ಹೋಗು-"

ರಾಮು ಪ್ರೂಫಿನ ಹಾಳೆಯನ್ನು ತಂದುಕೊಟ್ಟ ಬಳಿಕ ಅದನ್ನು ಶಿವ ಮೂರ್ತಿಗೆ ತೋರಿಸುತ್ತ ಲಲಿತಮ್ಮ, ಆ ವಿದ್ಯೆಯ ಗುಟ್ಟುಗಳನ್ನು ಹೇಳಿ ಕೊಡತೊಡಗಿದಳು. "ಮೊಳೆ ಜೋಡಿಸುವಾಗ ಕೈತಪ್ಪಿನಿಂದ ಬೇರೆ ಮೊಳೆ ಸೇರಿಕೊಂಡಿರುತ್ತವೆ. ಪ್ರೂಫು ತೆಗೆದಾಗ ಆ ತಪ್ಪು ತಿಳಿಯುತ್ತದೆ. ಆ ಅಕ್ಷರಗಳನ್ನು ಹೊಡೆದು ಹಾಕಿ, ಸರಿಯಾದ ಅಕ್ಷರ ಹಾಕುವದಕ್ಕೇ ಪ್ರೂಫ್ ಕರೆಕ್ಷನ್ ಅನ್ನುತ್ತಾರೆ. ಇದಕ್ಕೆ ಸ್ವಲ್ಪ ಭಾಷಾಜ್ಞಾನವೂ ಇರಬೇಕಾಗು ತ್ತದೆ."

"ನನಗೇನೂ ಅಂಥ ಜ್ಞಾನವಿಲ್ಲವಲ್ಲ ?"

"ಸಾಮಾನ್ಯ ಜ್ಞಾನವೂ ಇಲ್ಲವೇನ್ರಿ ? ಕತೆ, ಕಾದಂಬರಿ ಓದುತ್ತಿದ್ದ ವರಿಗೆ ಇದೇನು ದೊಡ್ಡ ಕೆಲಸವಲ್ಲ. ನೀವು ಕಾದಂಬರಿ ಓದುತ್ತಿರಬೇಕಲ್ಲ ?"

"ಬಹಳ ಕಡಿಮೆ. ಅದಕ್ಕೆ ಬಿಡುವೇ ಸಿಕ್ಕುವದಿಲ್ಲ."

"ಇನ್ನು ಮೇಲೆ ನಿಮಗೆ ಸಾಕಷ್ಟು ಬಿಡುವಿರುತ್ತದೆ. ಕೆಲಸವಿಲ್ಲ ದಿದ್ದಾಗ ಓದುತ್ತಾ ಕುಳಿತಿರಬಹುದು. ಅಂತೂ, ಇಲ್ಲಿಯೆ ಕಾಯಂ ಆಗಿ ಇರಬೇಕು. ಆ ಹರಿಹರ್ ಮಾಡಿದ ಹಾಗೆ ಮಾಡಬಾರದು."

"ಅವರೇನು ಮಾಡಿದರು ?"

"ವಿಲಕ್ಷಣ ಮನುಷ್ಯ ಆತ. ಯಾರನ್ನೂ ನಂಬುವವನಲ್ಲ. ಯಾರನ್ನೂ

ಹೆಚ್ಚಿಕೊಳ್ಳುವವನಲ್ಲ. ಏನಾದರೂ ಪ್ರಶ್ನೆ ಮಾಡಿದರೆ ಬಾಂಬು ಸಿಡಿದ ಹಾಗೆ ಸಿಡಿಯುತ್ತಿದ್ದ. ಕೋಪ ಅಂದರೆ ಯಾವಾಗಲೂ ಅವನ ಮೂಗಿನ ಮೇಲೇ. ಅಬ್ಬಬ್ಬ, ದೂರ್ವಾಸನ ಮರಿ ಅದು. ಅಂಥ ಸಿಟ್ಟಿನವರನ್ನು ಇನ್ನೆಲ್ಲೂ ನೋಡಿಲ್ಲ ಬಿಡಿರಿ," ಎಂದು ನುಡಿದು ಆಕೆ ನಗತೊಡಗಿದಳು. ತನ್ನ ನಗೆ ಶಿವಮೂರ್ತಿಯಲ್ಲೂ ನಗೆ ಹುಟ್ಟಿಸಬಹುದೆಂದು ಆಕೆ ಆಶಿಸಿದ್ದಳು. ಆದರೆ ಆತನಿಗೆ ನಗೆ ಬರಲಿಲ್ಲ. ದೃಷ್ಟಿಯನ್ನು ನೆಲಕ್ಕೆ ಚೆಲ್ಲಿ ಆತ ನಿರ್ವಿಕಾರ ಮುದ್ರೆಯಿಂದ ಕುಳಿತಿದ್ದ.

ಹಣೆಯ ಮೇಲುರುಳಿದ್ದ ಆತನ ಮುಂಗುರುಳನ್ನು ನೆಟ್ಟ ದಿಟ್ಟಿಯಿಂದ ನಿರುಕಿಸುತ್ತ ಲಲಿತಮ್ಮ ತನ್ನ ಅಂದವಾದ ತೋಳುಗಳನ್ನು ಮೇಜಿನ ಮೇಲೆ ಚಾಚಿ, ಬಂಗಾರದ ಬಳೆಗಳೊಂದಿಗೆ ಚಿನ್ನಾಟವಾಡುತ್ತ—"ಆತ ಒರಟ ಮಾತ್ರ ವಲ್ಲ, ಮಹಾ ಅರಸಿಕನೂ ಆಗಿದ್ದ. ಅರಸಿಕತನದಲ್ಲಿ ಯಾರಾವರೂ ಒಂದು ಸ್ಪರ್ಧೆ ಇಟ್ಟಿದ್ದಲ್ಲಿ ಆತನಿಗೇ ಮೊದಲನೆಯ ನಂಬರು ಬರುತ್ತಿತ್ತು!" ಎಂದಳು.

ಶಿವಮೂರ್ತಿ ದೃಷ್ಟಿಯನ್ನೆತ್ತಿ ಆಕೆಯ ಕಡೆಗೆ ಹೊರಳಿಸಿದ. ಆಕೆಯ ಮುಖವೆಲ್ಲ ನಗುತ್ತಿತ್ತು. ದೃಷ್ಟಿಯೂ ನಗುತ್ತಿತ್ತು. ರಸಿಕತೆ! ಆ ಮಹಿಳೆಯ ಅಡಿಯಿಂದ ಮುಡಿಯವರೆಗೆ ರಸಿಕತೆ ತಾನೇ ತಾನಾಗಿ ವ್ಯಾಪಿಸಿದಂತಿದ್ದಿತು.

ಹಠಾತ್ತಾಗಿ ಯಾರೋ ಸೂಕ್ಷ್ಮವಾಗಿ ನಕ್ಕಂತಾಯಿತು. ಶಿವಮೂರ್ತಿ ಬೆಚ್ಚಿ ಬಿದ್ದು ತಲೆಯೆತ್ತಿ ನೋಡಿದ. ಚಹ ಕುಡಿಯಲು ಹೋಗಿದ್ದ ಕೃಷ್ಣಯ್ಯ ಆಗತಾನೆ ಬಂದವನು ಲಲಿತಮ್ಮನ ಭಾವಭಂಗಿಯನ್ನು ಕಂಡು ನಗುತ್ತಾ ಹೋಗುತ್ತಿದ್ದುದು ಕಾಣಿಸಿತು.

ಸೆರಗನ್ನು ಸರಿಪಡಿಸಿಕೊಂಡು ಆಕೆ ಕುರ್ಚಿಯನ್ನು ಬಿಟ್ಟು ಎದ್ದಳು. "ಇನ್ನೇನು, ಪ್ರೆಸ್ ಮುಚ್ಚುವ ಹೊತ್ತಾಯಿತು. ನೀವು ಇಲ್ಲೇ ಇರಿ. ನಾನು ಸ್ವಲ್ಪ ಒಳಗೆ ನೋಡಿಕೊಳ್ಳುತ್ತೇನೆ."

ಶಿವಮೂರ್ತಿ ಆ ಕೊಟಡಿಯ ತುಂಬ ದೃಷ್ಟಿಯನ್ನು ಓಡಿಯಾಡಿಸಿದ. ನಾಲ್ಕು ಗೋಡೆಗಳಲ್ಲಿ ಒಂದು ಅಡಿಯಷ್ಟು ಸ್ಥಳವೂ ತೆರವಾಗಿರಲಿಲ್ಲ. ಎಲ್ಲವೂ ಪಟಗಳಿಂದ ಮುಚ್ಚಿಹೋಗಿದ್ದಿತು. ಶಾಸ್ತ್ರಿಯ ಕುರ್ಚಿಯ ಮೇಲ್ಭಾಗದಲ್ಲಿ ಬಸವಣ್ಣನವರ ದೊಡ್ಡ ಭಾವಚಿತ್ರವೊಂದು. ಅದರ ಎಡಕ್ಕೆ ರಾಮಕೃಷ್ಣ

ಪರಮಹಂಸರು. ಬಲಕ್ಕೆ ಸ್ವಾಮಿ ವಿವೇಕಾನಂದರು. ಯೇಸೂ ಕ್ರಿಸ್ತ, ಗೌತಮ ಬುದ್ಧ, ಕಬೀರದಾಸ, ತುಳಸೀದಾಸ, ವಿದ್ಯಾರಣ್ಯ, ಪುರಂದರ ದಾಸ....ಇನ್ನೂ ಅನೇಕ ಮಹಾಪುರುಷರು, ಸಾಧು ಸಂತರು. ಗಾಂಧಿ, ನೆಹರೂ, ಪಟೇಲರಾದಿಯಾಗಿ ರಾಷ್ಟ್ರೀಯ ಮುಖಂಡರ ಚಿತ್ರಗಳೂ ಇದ್ದುವು. ಅವುಗಳ ಕೆಳಗೆ ವಿವಿಧ ಭಂಗಿಗಳಲ್ಲಿ ತೆಗೆಯಿಸಿದ ಶಾಸ್ತ್ರಿಯ ಭಾವಚಿತ್ರಗಳು. ಕಪಾಟುಗಳಲ್ಲಿ ದೊಡ್ಡ ದೊಡ್ಡ ಗ್ರಂಥಗಳೂ, ಮೇಜಿನ ಮೇಲೆ ಪತ್ರಿಕೆಗಳೂ ಇದ್ದುವು.

"ಲಿಂಗವೀರ" ಪತ್ರಿಕೆಯ ಹಳೆಯ ಸಂಚಿಕೆಗಳ ಕಟ್ಟನ್ನು ಕೈಗೆತ್ತಿ ಕೊಂಡು ಅದನ್ನೋದತೊಡಗಿದ ಶಿವಮೂರ್ತಿ. ಆ ಪತ್ರಿಕೆಯ ಒಂದೆರಡು ಸಂಚಿಕೆಗಳನ್ನು ಬಿಟ್ಟರೆ ಉಳಿದವುಗಳನ್ನು ಆತ ನೋಡಿರಲಿಲ್ಲ. ಅದರ ಧೋರಣೆಯೆಂತಹುದು, ಅದರಲ್ಲಿನ ಲೇಖನಗಳೆಂತಹವು, ಸಂಪಾದಕರ ವಿಚಾರ ಸರಣಿಯೆಂತಹದು—ಯಾವುದೂ ಆತನಿಗೆ ಗೊತ್ತಿರಲಿಲ್ಲ. ಈಗ—ಅದೇ ಪತ್ರಿ ಕೆಯಲ್ಲಿ ಕೆಲಸ ಮಾಡಬೇಕಾಗಿ ಬಂದಿದ್ದಿತಾದುದರಿಂದ ಆ ಬಗೆಗೆ ಸ್ವಲ್ಪ ವನ್ನಾದರೂ ತಿಳಿದುಕೊಳ್ಳುವುದು ಅಗತ್ಯವಾಗಿದ್ದಿತು. ಅಂತೆಯೆ, ಹಿಂದಿನ ಸಂಚಿಕೆಗಳ ಪುಟಗಳನ್ನು ತಿರುವತೊಡಗಿದ.

ಪ್ರತಿಯೊಂದು ಸಂಚಿಕೆಯಲ್ಲೂ ಎದ್ದು ಕಾಣಿಸುತ್ತಿದ್ದ ವಿಷಯವೆಂದರೆ ಮಠಾಧಿಕಾರಿಗಳ ಹೊಗಳಿಕೆ. ಪ್ರತಿ ವಾರವೂ ಒಬ್ಬ ಸ್ವಾಮಿಯ ಪರಿಚಯ. ಜೊತೆಗೆ ಆತನ ಭಾವಚಿತ್ರ. ಸಾಮಾನ್ಯವಾಗಿ ಎಲ್ಲ ಸ್ವಾಮಿಗಳಿಗೂ ಒಂದೇ ಬಗೆಯ ವಿಶೇಷಣಗಳನ್ನು ಅನ್ವಯಿಸಲಾಗಿದ್ದಿತು. "ಶ್ರೀ ಶ್ರೀ ಸ್ವಾಮಿಗಳ ವರು ಮಹಾ ವಿದ್ವಾಂಸರು, ಕನ್ನಡ, ಸಂಸ್ಕೃತ, ಹಿಂದೀ ಭಾಷೆಗಳಲ್ಲಿ ಪಂಡಿ ತರು. ವೀರಶೈವಸಾಹಿತ್ಯದ ಮೇಲೆ ಅಧಿಕಾರವಾಣಿಯಿಂದ ಮಾತನಾಡ ಬಲ್ಲವರು, ದಯಾಳುಗಳು, ಉದಾರಿಗಳು, ವೀರರು," ಇತ್ಯಾದಿ. "'ಲಿಂಗ ವೀರ' ಪತ್ರಿಕೆಯ ಸಮಾಜಸೇವೆಗೆ ಮೆಚ್ಚಿ ೧೧೧ ರೂ. ಉದಾರ ಸಹಾಯ ಸಲ್ಲಿಸಿ ಉಪಕಾರ ಮಾಡಿದ್ದಾರೆ," ಎಂಬ ವಿವರವೂ ಅದರೊಂದಿಗೆ ಇರುವುದು.

ಸ್ವಾಮಿಗಳ ವಿಷಯವನ್ನು ಬಿಟ್ಟರೆ ಆ ಪತ್ರಿಕೆಯಲ್ಲಿ ಎರಡನೆಯ ಸ್ಥಾನ ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು ಮೊದಲಾದವರಿಗೆ ಮೀಸಲು. ಮಂತ್ರಿಗಳ ಭಾಷಣಗಳಂತೂ ಎರಡೆರಡು ಪುಟ ತುಂಬಿದ್ದುವು. ವಾರ

ಪಾರವೂ ಒಂದೇ ಭಾವಚಿತ್ರ ಮತ್ತೆ ಮತ್ತೆ ಪ್ರಕಟವಾಗಿದ್ದಿತು. ಶ್ರೀಮಂತರು, ಜಮಿನಾನ್ದಾರರು, ಅಧಿಕಾರಿಗಳಿಗೆ ಅಲ್ಲಿ ಇಲ್ಲಿ ದೊರೆತ ಮಾನಪತ್ರಗಳೂ ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. ಆ ಮಾನಪತ್ರ ಅರ್ಪಣೆಯ ಕಾಲಕ್ಕೆ ಶಾಸ್ತ್ರಿ ರಚಿಸಿ ಹಾಡಿದ ಸ್ವಾಗತಗೀತೆಗಳೂ ದಪ್ಪಕ್ಷರಗಳಲ್ಲಿ ಮುದ್ರಿತವಾಗಿದ್ದುವು. ಆ ಸಮಾರಂಭಗಳಲ್ಲೆಲ್ಲ ಶಾಸ್ತ್ರಿ ಅಗ್ರಭಾಗ ವಹಿಸಿದ್ದುದು ಸ್ಪಷ್ಟವಾಗುವಂತಿದ್ದಿತು. ಸ್ವಾಗತಗೀತೆಯನ್ನೋದುವವನೂ ಆತನೇ, ಅತಿಥಿಗಳ ಪರಿಚಯ ಭಾಷಣ ಮಾಡುವವನೂ ಆತನೇ, ಮಾನಪತ್ರ ಕೊಟ್ಟ ಮಹನೀಯರನ್ನು ಹೊಗಳಿ ಮಾತನಾಡುವವನೂ ಆತನೇ, ಆ ಸಮಾರಂಭದ ಅಂಗವಾಗಿ ಕೀರ್ತನೆ ಮಾಡುವವನೂ ಆತನೇ! ಶಾಸ್ತ್ರಿಯ ಭಾಷಣಗಳಿಂದಲೇ ಒಂದೊಂದು ಸಂಚಿಕೆ ತುಂಬಿದ್ದುದೂ ಕಾಣುತ್ತಿತ್ತು. "ಲಿಂಗವೀರಕ್ಕೆ ಸಹಾಯ" ಎಂಬ ಶೀರ್ಷಿಕೆಯಡಿಯಲ್ಲಿ ಬರುವ ದಾನಿಗಳ ಹೆಸರುಗಳಿಗೂ ಕೊರತೆಯಿರಲಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವನ್ನು ನೋಡಿ, ಅದರ ಘೋರತೆಯನ್ನು ತಿಳಿದುಕೊಳ್ಳುವುದು ಅಸಾಧ್ಯವೇ ಆಗಿತ್ತು. ಶಾಸ್ತ್ರಿಯ ಹಾಗು ಆತನಿಗೆ ಹಲವಾರು ವಿಧದಲ್ಲಿ ಉಪಯೋಗವಾಗುವ ಹಣವಂತರ ದೊಡ್ಡಸ್ತಿಕೆಯನ್ನು ಡಂಗುರ ಹೊಡೆಯುವುದಕ್ಕಾಗಿಯೆ ಆ ಪತ್ರಿಕೆ ಪ್ರಕಟವಾಗುತ್ತಿದ್ದುದು ಸ್ಪಷ್ಟವಾಗಿದ್ದಿತು. ಹರಿಹರ ಶಿವಮೂರ್ತಿಗೆ ಹೇಳಿದುದೂ ಅದೇ ಮಾತನ್ನೆ. ಪತ್ರಿಕೆಯನ್ನು ತಿರುವಿ ಹಾಕಿದಾಗ ಆ ಮಾತಿನ ಸತ್ಯತೆ ಶಿವಮೂರ್ತಿಗೂ ಮನದಟ್ಟಾಯಿತು.

ಹರಿಹರ ಹೇಳಿದ್ದ:

"ಹಣ ಸಂಪಾದನೆಯೊಂದನ್ನು ಬಿಟ್ಟರೆ ಶಾಸ್ತ್ರಿಗೆ ಜೀವನದಲ್ಲಿ ಯಾವ ಧ್ಯೇಯವೂ ಇಲ್ಲ. ಹಣವೊಂದು ಸಿಗುತ್ತದೆಂದರೆ ಎಂಥ ಹೇಸಿ ಕೆಲಸಕ್ಕೂ ಸಿದ್ಧನಾಗುತ್ತಾನೆ ಆತ. ಪತ್ರಿಕೆ ಹೊರಡಿಸಿದ್ದೂ ಅದೇ ಉದ್ದೇಶದಿಂದ. ಸಮಾಜ ಸೇವೆ, ಸ್ವಧರ್ಮದ ಅಭಿಮಾನ ಎಲ್ಲಾ ಕೇವಲ ಸೋಗು. ಅಜ್ಞ ಜನರ ಕಣ್ಣಿಗೆ ಮಣ್ಣೆರಚುವ ಸಾಧನಗಳವು, ಅಷ್ಟೆ. ಅಶಿಕ್ಷಿತರು ಮಾತ್ರವಲ್ಲ ಶಿವಮೂರ್ತಿ, ದೊಡ್ಡ ದೊಡ್ಡ ಸ್ವಾಮಿಗಳೂ ಆತನ ಬಣ್ಣದ ಮಾತುಗಳಿಗೆ ಮರುಳಾಗುತ್ತಾರೆ. ಹೊಗಳಿ ಹೊಗಳಿ ಹೊನ್ನು ಬಿಚ್ಚಿಸುವ ಕೆಲ

ಸದಲ್ಲಿ ಶಾಸ್ತ್ರಿಯ ಕೈಹಿಡಿಯಬಲ್ಲವರಾರೂ ಇಲ್ಲ. ಆತನ ಪತ್ರಿಕೆ ಪ್ರಾರಂಭವಾದದ್ದೂ ಅದೇ ಕೆಲಸಕ್ಕಾಗಿ."

"ಮೊದಲಿನಿಂದಲೂ ಉಳ್ಳವರೇನು ಅವರು?" ಎಂದು ಪ್ರಶ್ನಿಸಿದ ಶಿವಮೂರ್ತಿ.

"ಎಲ್ಲಿಯ ಉಳ್ಳವರು ಮೂರ್ತಿ! ಆತ ಪಟ್ಟ ದರಿದ್ರ. ಕೋರಾನ್ನ ಭಿಕ್ಷೆಯಿಂದ ಹೊಟ್ಟೆ ಹೊರೆಯುವ ಬಡ ಜಂಗಮರ ಮನೆಯಲ್ಲಿ ಹುಟ್ಟಿದ. ವಾರದಮನೆಗಳಲ್ಲಿ ಊಟ ಮಾಡಿ ಮುಲ್ಕೀ ಪರೀಕ್ಷೆಯವರೆಗೆ ಓದಿದ. ಅಲ್ಲಿಗೆ ಆತನ ವ್ಯಾಸಂಗ ಮುಗಿದಂತಾಯಿತು. ಮನೆಯಲ್ಲಿ ಮುದುಕಿ ತಾಯಿಯೊಂದು. ಆಕೆಯನ್ನು ಜೋಪಾನ ಮಾಡಬೇಕಲ್ಲ? ಅವರಿವರ ಕಾಲು ಹಿಡಿದು ಹೇಗೋ ಪ್ರಾಥಮಿಕ ಶಿಕ್ಷಕನ ಕೆಲಸ ದೊರಕಿಸಿದ. ಆದರೆ, ಮನುಷ್ಯ ಬಹಳ ಆಸೆಬುರುಕ. ತಾನೂ ಹಣ ಗಳಿಸಬೇಕು, ಶ್ರೀಮಂತನಾಗಬೇಕು, ಮನೆ ಕಟ್ಟಿಸಬೇಕು, ಹೊಲ ಕೊಳ್ಳಬೇಕು ಎಂಬ ಆಸೆ. ಸರಿ. ಕೀರ್ತನಕಾರನೊಬ್ಬನ ಸೇವೆ ಮಾಡಿ ಆ ವಿದ್ಯೆಯನ್ನು ಅಷ್ಟಿಷ್ಟು ಕಲಿತುಕೊಂಡ. ಆ ಕಾಲಕ್ಕೆ ಕೀರ್ತನಗಳೆಂದರೆ ಜನರಿಗೆ ಬಹಳ ಹುಚ್ಚು. ಜನರನ್ನು ನಗಿಸುತ್ತ ಕತೆ ಹೇಳುವವರಿಗೆ ಹಣ ಸೂರೆಯಾಗುತ್ತಿತ್ತು. ನಗಿಸುವ ಕಲೆಯನ್ನು ಕೈವಶಪಡಿಸಿಕೊಂಡರೆ ಗೆದ್ದಂತಾಗುವದೆಂದು ಶಾಸ್ತ್ರಿಗೆ ತಿಳಿಯಿತು. ಸರಿ. ಕೆಲವು ನರಿಯ ಕತೆಗಳನ್ನೂ ಕತ್ತೆಯ ಕತೆಗಳನ್ನೂ ಅಲ್ಲಿಂದ ಇಲ್ಲಿಂದ ಸಂಗ್ರಹಿಸಿ ಬಾಯಿಪಾಠ ಮಾಡಿದ. ತನ್ನ ಗುರುವಿಗೆ ಜಡ್ಡಾಗಿ ಆತ ಮಲಗಿದಾಗ ಕೀರ್ತನೆ ಹೇಳುವ ಯೋಗ ಶಾಸ್ತ್ರಿಗೆ ಲಭಿಸಿತು. ಅದೂ ಯಾವುದೋ ಒಂದು ಹಳ್ಳಿಯಲ್ಲಿ. ಅಲ್ಲಿ ನೂರಾರು ಕತೆ ಹೇಳಿ ಜನರನ್ನು ನಗಿಸಿ ನಗಿಸಿ ಲೋಕಪ್ರಿಯನಾದ. 'ಗುರುಗಳಿಗಿಂತ ಶಿಷ್ಯ ಒಂದು ಕೈ ಮೇಲಪ್ಪ!' ಎಂದು ಜನರೆನ್ನುವ ಹಾಗಾಯಿತು. ಅಂದಿನಿಂದ ಶಾಸ್ತ್ರಿಗೆ ಕೀರ್ತನಕಾರನೆಂದು ಹೆಸರಾಗತೊಡಗಿತು. ಜಡ್ಡಾಗಿ ಮಲಗಿದ್ದ ಆತನ ಗುರು ತೀರಿಕೊಂಡ ಬಳಿಕ ಶಾಸ್ತ್ರಿ ಆತನ ಸ್ಥಾನ ಹಿಡಿದುಕೊಂಡು, ತನಗೆ ತಾನೇ ಒಂದು ಬಿರುದು ಅರ್ಪಿಸಿಕೊಂಡು ಕೀರ್ತನಕಂಠೀರವ ಗಂಗಾಧರ ಶಾಸ್ತ್ರಿಯಾದ. ಅದಕ್ಕೆ ಮೊದಲು ಗಂಗಾಧರಶಾಸ್ತ್ರಿಯೆಂಬ ಹೆಸರೂ ಅವನಿಗಿರಲಿಲ್ಲ. ಅವನ ಮೂಲ ಹೆಸರೇ ಬೇರೆ."

"ಹೇಗೇನು?"

"ಆತನ ತಂದೆತಾಯಿಗಳು ಆತನಿಗೆ ಕುಪ್ಪಯ್ಯ ಎಂದು ಹೆಸರಿಟ್ಟಿದ್ದರು. ಶಾಲೆಯಲ್ಲೂ ಅದೇ ಹೆಸರಿತ್ತು. ಶಿಕ್ಷಕನಾಗಿದ್ದಾಗಲೂ ಹುಡುಗರು ಆತನನ್ನು ಕುಪ್ಪಯ್ಯ ಮಾಸ್ತರು ಎಂದೇ ಕರೆಯುತ್ತಿದ್ದರು. ಕೀರ್ತನದಿಂದ ನೂರಾರು ರೂಪಾಯಿ ಗಳಿಸುವಂತಾದಾಗ ಕುಪ್ಪಯ್ಯ ಕುಪ್ಪಯ್ಯನಾಗಿ ಉಳಿದಾನೇ? ಹದಿನೈದು ರೂಪಾಯಿಯ ಆ ಕೆಲಸಕ್ಕೆ ರಾಜಿನಾಮೆ ಕೊಟ್ಟುದಲ್ಲದೆ ತನ್ನ ಹೆಸರಿಗೂ ರಾಜಿನಾಮೆ ಕೊಟ್ಟು ಗಂಗಾಧರಶಾಸ್ತ್ರಿ ಎಂಬ ನೂತನ ಹೆಸರು ಹಚ್ಚಿಕೊಂಡ. ಅದರ ಹಿಂದೆ ಬಿರುದೂ ಬಂದಿತಲ್ಲ. ಅಂದಿನಿಂದ ಆತ ಹಾಡುವುದನ್ನೂ ಕಲಿತು ಹಳ್ಳಿಯವರನ್ನು ರಂಜಿಸತೊಡಗಿದ. ಹಳ್ಳಿಗಳಿಂದ ನಗರಗಳಿಗೂ ಧುಮುಕಿದ. ಕರ್ನಾಟಕ ಏಕೀಕರಣದ ಬಗ್ಗೆ ಭಾಷಣ ಮಾಡುವದೆಂದರೆ ಒಂದು ಫ್ಯಾಶನ್ ಆಗಿದ್ದಿತಲ್ಲ ಆಗ! ಕುಪ್ಪಯ್ಯ ಅದನ್ನೂ ಕಲಿತುಕೊಂಡ. ಭುವನೇಶ್ವರಿ ವಿಜಯ, ವಿದ್ಯಾರಣ್ಯ, ಕರ್ನಾಟಕ ರಾಜ್ಯ ಎಂಬ ಕೀರ್ತನೆಗಳನ್ನು ಕೂಡಿಸಿ ದುಂದುಭಿ ಹೊಡೆಯತೊಡಗಿದ. ನಾಡಹಬ್ಬಗಳ ಕಾಲಕ್ಕೆ ಕರ್ನಾಟಕದ ಯಾವ ಭಾಗದಲ್ಲಿ ನೋಡಿದರೂ ಶಾಸ್ತ್ರಿಯೆ. ಭಾಷಣಗಳು, ಕೀರ್ತನೆಗಳು, ಅದರೊಂದಿಗೆ ಹಣ ಸಂಪಾದನೆ. ಊರೂರು ಅಲೆದುದರಿಂದಾಗಿ ಸ್ವಾಮಿಗಳನೇಕರ ಪರಿಚಯವಾಯಿತು. ಸಾಹಿತಿಗಳ, ಶ್ರೀಮಂತರ ಸ್ನೇಹವಾಯಿತು. ಯಾವುದೋ ಒಂದು ಸಂಗೀತ ಸಮ್ಮೇಳನದ ಕಾಲಕ್ಕೆ ಅದರ ಸಂಚಾಲಕರನ್ನು ಕಾಡಿಸಿ ಪೀಡಿಸಿ 'ಗಾನರತ್ನ' ಎಂಬ ಬಿರುದನ್ನೂ ತಂದುಕೊಂಡ. ಈಗ ಶಾಸ್ತ್ರಿಗೆ ಎರಡು ಬಿರುದುಗಳಾದುವು. ದಿನೇ ದಿನೇ ಆತನ ವ್ಯವಸಾಯವೂ ಬೆಳೆಯುತ್ತ ಬಂತು. ಆದರೂ ಶಾಸ್ತ್ರಿಗೆ ತೃಪ್ತಿಯಾಗಲಿಲ್ಲ. ಹಣ ಸುಲಿಯಲು ಕೀರ್ತನವೊಂದೇ ಸಾಲದೆಂದು ಕಂಡು ಬರುತ್ತಲೂ ವಾರಪತ್ರಿಕೆಯ ಲೆಕ್ಕ ಹಾಕಿದ. ಅಗ್ಗದ ಪ್ರಚಾರಕ್ಕಾಗಿ ಹಾತೊರೆಯುತ್ತಿದ್ದ ಸ್ವಾಮಿಗಳಿಂದಲೂ ಶ್ರೀಮಂತರಿಂದಲೂ ಹಣ ಬೇಡಿ ತಂದು ಬೇರೊಂದು ಪ್ರೆಸ್ಸಿನಲ್ಲಿ ಪತ್ರಿಕೆ ಮುದ್ರಿಸಿ ಪ್ರಕಟಿಸತೊಡಗಿದ. ಕೀರ್ತನ, ಭಾಷಣಗಳಿಗಾಗಿ ಬೇರೆ ಬೇರೆ ಊರುಗಳಿಗೆ ಹೋದಾಗಲೆಲ್ಲ ಪತ್ರಿಕೆಗೆ ಉದಾರಾಶ್ರಯದಾತರನ್ನೂ ಪೋಷಕರನ್ನೂ ಕಲೆಹಾಕತೊಡಗಿದ. ಒಬ್ಬ ಸ್ವಾಮಿಗಳ ಪರಿಚಯ ಪ್ರಕಟಿಸಿದರೆ ಒಂದುನೂರಾ ಒಂದು ರೂಪಾಯಿ. ಕೇವಲ

ಫೋಟೋ ಹಾಕಿದರೆ ಇಪ್ಪತ್ತು ರೂಪಾಯಿ. ಶಾಸ್ತ್ರಿಯ ಧಾರಣೆ ಅದು. ಒಂದೆರಡು ವರ್ಷಗಳಲ್ಲಿಯೆ ಹತ್ತುಸಾವಿರ ರೂಪಾಯಿ ಮಾಡಿಕೊಂಡು ಸ್ವತಃ ಪ್ರೆಸ್ ಖರೀದಿ ಮಾಡಿದ. ಅಂದಿನಿಂದ ಆತನ ಸಂಪಾದನೆ ಬೆಳೆಯುತ್ತಲೇ ಇದೆ.''

“ಒಂದು ಪತ್ರಿಕೆಯಿಂದಲೇ ಇಷ್ಟೆಲ್ಲ ಆಯಿತೇ ?”

“ಕೇವಲ ಅದೊಂದರಿಂದಲೇ ಎಂದು ಹೇಳಲು ಸಾಧ್ಯವಿಲ್ಲ. ಆದರೂ ಅದನ್ನೊಂದು ಸಾಧನವನ್ನಾಗಿ ಮಾಡಿಕೊಂಡು ಶಾಸ್ತ್ರಿ ಹಣಗಳಿಸಿದನೆಂದು ಹೇಳಲಡ್ಡಿಯಿಲ್ಲ. ಯಾವನೊಬ್ಬ ಮಂತ್ರಿಯಿಂದ ಹಣ ಬಿಚ್ಚಬೇಕಾಗಿದೆಯೆಂದಿಟ್ಟುಕೊಳ್ಳಿ. ಮೊದಲು ಆತನನ್ನು ಕಂಡು ಪತ್ರಿಕೆಯ ಸಂಚಿಕೆಯೊಂದನ್ನು ಕೊಟ್ಟು—‘ತಮ್ಮದೊಂದು ಸಂದೇಶ ಕೊಡಬೇಕು’ ಎಂದು ಕೇಳುವದು. ಸಂದೇಶ ಕೇಳುತ್ತಲೂ ಎಂಥವರಾದರೂ ಮರುಳಾಗುವರು. ಸರಿ. ಅದನ್ನು ತಂದು ಪ್ರಕಟಿಸಿದ ತರುವಾಯ ಯಾವುದೊಂದು ಸಂಘದಿಂದಲೋ, ಸೊಸೈಟಿಯಿಂದಲೋ ಆ ಮಂತ್ರಿಗೆ ಮಾನಪತ್ರ ಕೊಡಿಸುವ ಏರ್ಪಾಟು ಮಾಡುವದು. ಮಾನಪತ್ರ ಕೊಡುವದರಿಂದ ತುಂಬ ಲಾಭವಿದೆ ಎಂಬುದನ್ನು ಆ ಸಂಸ್ಥೆಯವರಿಗೆ ಮನಗಾಣಿಸಿಕೊಡುವದು. ಮಂತ್ರಿಗಳಿಂದ ಯಾವಾಗಲಾದರೂ ಏನಾದರೂ ಕೆಲಸ ಮಾಡಿಸಿಕೊಳ್ಳಬಹುದೆಂಬ ಆಸೆಯಿಂದ ಜನ ಸಿದ್ಧವಾಗುವರು. ಒಡನೆಯೆ ಶಾಸ್ತ್ರಿ ಅಲ್ಲಿ ಸ್ವಾಗತ ಸಮಿತಿಯೊಂದನ್ನು ಏರ್ಪಡಿಸಿ ದೊಡ್ಡ ಧನಿಕರೊಬ್ಬರನ್ನು ಅದರ ಅಧ್ಯಕ್ಷರನ್ನಾಗಿ ಮಾಡುವನು. ಮಂತ್ರಿಗಳು ಬಂದಾಗ ಅವರೆದುರಿಗೆ ದೊಡ್ಡ ಮನುಷ್ಯನಂತೆ ಮೆರೆಯುವ ಯೋಗ ದೊರೆಯಿತಲ್ಲಾ ಎಂದು ಹರ್ಷ ಆ ಧನಿಕನಿಗೆ. ಮಾನಪತ್ರ ಅರ್ಪಣೆಯ ಸಮಾರಂಭದ ಅಧ್ಯಕ್ಷತೆ ವಹಿಸಲು ಶಾಸ್ತ್ರಿ ಇನ್ನೊಬ್ಬ ಶ್ರೀಮಂತನನ್ನೋ, ಸ್ವಾಮಿಯನ್ನೋ ನೋಡುತ್ತಿದ್ದ. ಆ ಮಾನಪತ್ರ ಬರೆಯುವವನೂ ತಾನೇ. ಅದಕ್ಕಾಗಿ ಹತ್ತು ರೂಪಾಯಿ ಚಾರ್ಜು. ಅದನ್ನು ಅಚ್ಚು ಮಾಡುವುದು ಅರ್ಥಾತ್ ತನ್ನ ಪ್ರೆಸ್ಸಿನಲ್ಲೇ. ಒಂದಕ್ಕೆ ನಾಲ್ಕರಂತೆ ಬಿಲ್ ಮಾಡಿ ಅದನ್ನು ವಸೂಲು ಮಾಡುವುದು. ಸ್ವಾಗತಗೀತೆಯನ್ನೂ ತಾನೇ ರಚಿಸುವವ ಅದ

ಕ್ಕಾಗಿ ಇಪ್ಪತ್ತೈದು ರೂಪಾಯಿ ಚಾರ್ಜು. ಅವನ್ನು ಮುದ್ರಿಸುವುದೂ ತನ್ನಲ್ಲಿಯೆ. ಅದರ ಖರ್ಚು ಬೇರೆ. ಅದೂ ತನ್ನ ಜೇಬಿಗೇ. ಅನಂತರ ಪ್ರವಾಸದ ಖರ್ಚು. ಫಸ್ಟ್‌ಕ್ಲಾಸಿನ ಹಣ ವಸೂಲು ಮಾಡಿ ಥರ್ಡ್ ಕ್ಲಾಸಿನಲ್ಲಿ ಪ್ರವಾಸ ಮಾಡುವದು. ಅದರಲ್ಲೂ ಅಷ್ಟು ಗಿಟ್ಟಿತು. ಮುಂದೆ, ಸಮಾರಂಭ ಕೊನೆಗೊಂಡ ತರುವಾಯ ಮಂತ್ರಿಗಳನ್ನೂ, ಸಭಾಧ್ಯಕ್ಷರನ್ನೂ, ಸ್ವಾಗತಾಧ್ಯಕ್ಷರನ್ನೂ, ಇನ್ನಿತರ ಧನಿಕರನ್ನೂ 'ಲಿಂಗವೀರ'ದ ಆಶ್ರಯದಾತರನ್ನಾಗಿ ಮಾಡಿ ಅಲ್ಲಿಯೆ ಹಣ ವಸೂಲು ಮಾಡುವನು. ಯಾರೂ ಇಲ್ಲವೆನ್ನಲಾರರು. ಅಂತೂ ಒಂದು ಸಮಾರಂಭದಿಂದ ಏನಿಲ್ಲವೆಂದರೂ ಶಾಸ್ತ್ರಿಗೆ ಒಂದು ಸಾವಿರದವರೆಗೂ ಲಾಭ ಬರುತ್ತಿತ್ತು. ಮಂತ್ರಿಗಳಿಗೆ ನೂರು ರೂಪಾಯಿ ನಷ್ಟವಾದರೂ ಒಂದು ಮಾನಪತ್ರದ ಲಾಭವಾಗುತಿತ್ತು. ಸರಿ. ಅವರೂ ಸುಮ್ಮನಾಗುತಿದ್ದರು. ಸಮಾರಂಭ ಮುಗಿದ ತರುವಾಯ ಎರಡು ಮೂರು ವಾರಗಳವರೆಗೆ ಅದೇ ವಿಷಯವನ್ನೇ ತನ್ನ ಪತ್ರಿಕೆಯಲ್ಲಿ ತುಂಬಿಸಿ ಮಂತ್ರಿಗಳನ್ನೂ, ತನಗೆ ಹಣ ಕೊಟ್ಟ ಧನಿಕರನ್ನೂ ಮಹಾಪುರುಷರ ಸಾಲಿಗೆ ಸೇರಿಸಲು ಪ್ರಯತ್ನಿಸುತ್ತಿದ್ದ ಶಾಸ್ತ್ರಿ. ಈ ಬಗೆಯ ಪ್ರಚಾರ ದೊರೆತರೆ ಯಾರಾದರೂ ಬೇಡವೆನ್ನುವರೇ? ಎಲ್ಲರೂ ತೃಪ್ತರಾಗುತ್ತಿದ್ದರು. ಶಾಸ್ತ್ರಿಗೆ ಮಾತ್ರ ತೃಪ್ತಿಯಿಲ್ಲ. ಆತ ಕೂಡಲೆ ಇನ್ನೊಬ್ಬ ಮಂತ್ರಿಯನ್ನೋ ಅಧಿಕಾರಿಯನ್ನೋ ಬಲೆಗೆ ಬೀಳಿಸುವ ಹೊಂಚು ಹಾಕುತ್ತಿದ್ದ. ಹಣಸಂಪಾದನೆಯೊಂದನ್ನು ಬಿಟ್ಟರೆ ಬೇರೆ ಯಾವ ವಿಚಾರವೂ ಅವನಿಗಿರಲಿಲ್ಲ."

"ಈಗ?" ಎಂದು ಬೆರಗಾಗಿ ಕೇಳಿದ್ದ ಶಿವಮೂರ್ತಿ.

"ಈಗಲೂ ಅಷ್ಟೆ. ಸಾಯುವವರೆಗೂ ಈ ಕಾಯಕವನ್ನಾತ ಬಿಡುವಂತೆ ತೋರುವದಿಲ್ಲ. ಸದ್ಯ ಏನಿಲ್ಲವೆಂದರೂ ಆತ ಐವತ್ತು ಅರವತ್ತು ಸಾವಿರದ ಆಸ್ತಿ ಮಾಡಿಕೊಂಡಿದ್ದಾನೆ. ಬ್ಯಾಂಕಿನಲ್ಲಿಯೂ ಐವತ್ತು ಸಾವಿರಕ್ಕೆ ಮೇಲ್ಪಟ್ಟು ಹಣ ಇಟ್ಟಿದ್ದಾನೆ. ಆದರೂ ತೃಪ್ತಿಯಿಲ್ಲ. ಈ ಹಣದಾಸೆ ಅಂದರೆ ಹೀಗೇ...." ಎಂದು ಉದ್ಗಾರ ತೆಗೆದಿದ್ದ ಹರಿಹರ.

"ಲಿಂಗವೀರ" ಪತ್ರಿಕೆಯ ಪುಟಪುಟಗಳಲ್ಲೂ ಶಾಸ್ತ್ರಿಯ ಆ ಹಣದಾಸೆ ಎದ್ದು ಕಾಣುತ್ತಿತ್ತು. ಪತ್ರಿಕೆಯ ಕಟ್ಟನ್ನು ಮುಚ್ಚಿ ಶಿವಮೂರ್ತಿ

ಕತ್ತೆತ್ತಿ ನೋಡಿದ. ಮೇಜಿನ ಮೇಲಿದ್ದ ಗಡಿಯಾರದಲ್ಲಿ ಆರುಗಂಟೆಯಾಗುತ್ತ ಬಂದಿತ್ತು.

ಒಂದೆರಡು ನಿಮಿಷಗಳಲ್ಲಿಯೆ ಮುದ್ರಣಾಲಯದ ಕೆಲಸಗಾರರೆಲ್ಲ ಒಬ್ಬೊಬ್ಬರಾಗಿ ಹೊರಟು ಹೋಗತೊಡಗಿದರು. ಎಲ್ಲರೂ ಹೋದ ಬಳಿಕ ಮುದ್ರಣಾಲಯದ ಬಾಗಿಲಿಗೆ ಬೀಗ ಹಾಕಿ ಪ್ರಿಂಟರ್ ಕೃಷ್ಣಯ್ಯ ಶಿವಮೂರ್ತಿಯ ಬಳಿ ಬಂದು:—

“ಟೈಂ ಆಯಿತು. ನೀವೂ ಹೊರಡುವದಿಲ್ಲವೆ?” ಎಂದು ಕೇಳಿದ.

ಅಷ್ಟರಲ್ಲಿ ಒಳಗಿನಿಂದ ಲಲಿತಮ್ಮ—“ಅವರು ಈಗಲೇ ಹೋಗುವದಿಲ್ಲ. ಬೀಗದ ಕೈ ಇಲ್ಲಿ ಕೊಟ್ಟು ನೀನು ಹೋಗಿ ಬಿಡು ಕೃಷ್ಣಯ್ಯ,” ಎಂದು ಕೂಗಿ ಹೇಳಿದಳು.

ಬೀಗದ ಕೈ ಕೊಡಲು ಕೃಷ್ಣಯ್ಯ ಒಳಗಿನ ಮನೆಗೆ ತೆರಳಿದ. ಅಲ್ಲಿ ಆತನಿಗೂ ಲಲಿತಮ್ಮನಿಗೂ ನಡೆಯುತ್ತಿದ್ದ ಸಂಭಾಷಣೆ ಶಿವಮೂರ್ತಿಗೆ ಅಸ್ಪಷ್ಟವಾಗಿ ಕೇಳಿಸುತ್ತಲಿತ್ತು.

“ನಾನಿಂದು ರಾತ್ರಿ ಬರೋದು ಬೇಡವೇ?” ಎಂದು ಕೃಷ್ಣಯ್ಯ ಕೇಳುತ್ತಿದ್ದ.

“ಏನೂ ಬೇಡ ಕೃಷ್ಣಯ್ಯ. ರಾತ್ರಿಗಾಡಿಗೆ ಶಾಸ್ತ್ರಿಗಳು ಬರಬಹುದು.”

“ಇಷ್ಟು ಬೇಗ ಹೇಗೆ ಬರ್ತಾರೆ?”

“ಅವರ ವಿಷಯ ಗೊತ್ತಿಲ್ಲವೇ ನಿನಗೆ? ಪಟಕ್ಕನೆ ಬಂದರೂ ಬಂದರೇ.”

“ಬಂದರಾದರೂ ಏನಂತೆ. ಪ್ರೆಸ್ಸನ್ನು ಕಾಯಲು ನಾನು ಮಲಗಿಕೊಂಡಿದ್ದೆನೆಂದೇ ತಿಳಿದುಕೊಳ್ಳುವರಷ್ಟೆ. ಹೀಗೆ ನಾನೆಷ್ಟು ಸಲ ಮಲಗಿಲ್ಲ ಇಲ್ಲಿ?”

“ನನ್ನ ಮಾತು ಕೇಳು ಕೃಷ್ಣಯ್ಯ. ಇವೊತ್ತು ಬೇಡ.”

“ಹೋಳಿಗೆಯೂಟ ಸಿಕ್ಕುವಾಗ ಜೋಳದ ರೊಟ್ಟಿಗೆ ಯಾರು ಕೈ ಹಚ್ಚುತ್ತಾರೆ! ಯಾರಾದರೂ ಹೊಸಬರು ಬಂದರಾಯಿತು, ನಮ್ಮನ್ನೆಲ್ಲ ಕಸ

ದಂತೆ ಕಾಣುತ್ತೀರಿ ನೀವು. ಆ ಹರಿಹರ ಬಂದಾಗಲೂ ಹೀಗೇ ಆಗಿತ್ತು. ಈಗಲೂ ಹೀಗೇ...."

"ಗಟ್ಟಿಯಾಗಿ ಮಾತಾಡಬೇಡ ಕೃಷ್ಣಯ್ಯಾ. ಅವರಿಗೆ ಕೇಳಿಸೀತು."

"ಕೇಳಿಸಿದರೆ ಕೇಳಿಸಿತು. ನನಗೇನು!" ಎಂದು ಗೊಣಗಿಕೊಳ್ಳುತ್ತಾ ಆತ ಹೊರಟು ಹೋದ. ಚಿತ್ರದಲ್ಲಿನ ಆಕೃತಿಯಂತೆ ಶಿವಮೂರ್ತಿ ನಿಶ್ಚಲ ವಾಗಿ ಕುಳಿತಿದ್ದ. ಮುನ್ನಾದಿನ ಹರಿಹರ ಆಡಿದ ಮಾತುಗಳೆಲ್ಲವೂ ಆತನ ಕಿವಿಗಳಲ್ಲಿ ಮೊರೆಯುತ್ತಿದ್ದುವು. ಲಲಿತಮ್ಮನ ಚಾರಿತ್ರ್ಯದ ವಿಚಾರವಾಗಿ ಮಾತನಾಡುತ್ತ ಹರಿಹರ ಹೇಳಿದ್ದ:

"ಶಾಸ್ತ್ರಿಯದೊಂದು ಕತೆಯಾದರೆ ಆತನ ಶ್ರೀಮತಿಯದೊಂದು ಕತೆ. ಗಂಡನಿಗೆ ತಕ್ಕ ಹೆಂಡತಿ ಆಕೆ. ಹಣ ಸಂಪಾದನೆ ಮಾಡುವದರಲ್ಲಿ ಅವಳದೂ ಒಂದು ರೀತಿಯೆ. ಆಕೆ ಶಾಸ್ತ್ರಿಯ ಎರಡನೆ ಹೆಂಡತಿ. ಆತನಿ ಗಿಂತ ಮೂವತ್ತು ವರ್ಷಕ್ಕೆ ಚಿಕ್ಕವಳು. ತುಂಬು ಹರಯದ ಆ ಯುವತಿಗೆ ವೃದ್ಧಾಪ್ಯದಲ್ಲಿ ಅಡಿಯಿಡುತ್ತಿರುವ ಶಾಸ್ತ್ರಿಯಿಂದ ಸುಖ ದೊರೆಯು ವದೂ ಅಷ್ಟರಲ್ಲೇ ಇದೆ."

"ಇಂಥ ಚಿಕ್ಕ ವಯಸ್ಸಿನವಳು ಇವರನ್ನೇಕೆ ಮದುವೆಯಾದಳು?" ಎಂದು ಶಿವಮೂರ್ತಿ ಪ್ರಶ್ನಿಸಿದ್ದ.

"ಪಾಪ, ಅದರಲ್ಲಿ ಆಕೆಯ ತಪ್ಪೇನೂ ಇಲ್ಲ. ತೀರ ದರಿದ್ರರ ಮನೆ ಯಲ್ಲಿ ಹುಟ್ಟಿ ಬೆಳೆದವಳು. ಸ್ವಲ್ಪ ಓದು ಬರಹವನ್ನೂ ಕಲಿತಳು. ಒಳ್ಳೆಯ ವರ ಸಿಕ್ಕಲಿಲ್ಲ. ಕೋರಾನ್ನ ಭಿಕ್ಷದ ಜಂಗಮಯ್ಯಗಳು ಕೇಳಿದರು. ಅಂಥ ವರನ್ನಾಕೆ ಮದುವೆಯಾದಾಳೇ? ಕಲಿತ ವರಗಳಾದರೋ ವರದಕ್ಷಿಣೆ ಕೇಳು ತ್ತಿದ್ದರು. ಇಪ್ಪತ್ತು ವರ್ಷ ವಯಸ್ಸಾದರೂ ಮದುವೆಯಾಗಲಿಲ್ಲ. ಹುಡುಗಿ ಇಷ್ಟುದ್ದ ಬೆಳೆದು ನಿಂತಾಗ ತಂದೆತಾಯಿಗಳಿಗೆ ಗಾಬರಿಯಾಯಿತು. ಎಂಥವ ನಾದರೂ ಸರಿಯೆ, ಇವಳಿಗೊಬ್ಬ ಗಂಡ ಸಿಕ್ಕಿದರೆ ಸಾಕು ಎನ್ನುವಲ್ಲಿಗೆ ಬಂತು. ಅದೇ ಸಮಯಕ್ಕೆ ಶಾಸ್ತ್ರಿ ತನಗಾಗಿ ಚೆಂದದ ಹುಡುಗಿಯೊಂದನ್ನು ಹುಡುಕುತ್ತಿದ್ದ. ಮೊದಲನೆಯ ಹೆಂಡತಿಯಿಂದ ಆತನಿಗೆ ತೃಪ್ತಿಯಿರಲಿಲ್ಲ.."

"ಅಂದರೆ! ಮೊದಲನೆಯವಳು ಜೀವಿಸಿದ್ದರೂ ಇವಳನ್ನು ಲಗ್ನ ವಾದನೇ ಆತ?"

"ಹೌದು. ಎಷ್ಟು ಜನ ಆಗುವದಿಲ್ಲ ನಮ್ಮ ಸಮಾಜದಲ್ಲಿ ? ಅಲ್ಲದೆ, ಶಾಸ್ತ್ರಿ ಶ್ರೀಮಂತನಾಗಿದ್ದ. ಸುಖಪಡಲು ಹಾತೊರೆಯುತ್ತಿದ್ದ. ಈ ಹುಡುಗಿಯನ್ನು ಕಂಡೊಡನೆ ಮರುಳಾಗಿ ಆಕೆಯ ತಂದೆತಾಯಿಗಳಿಗೆ ಸ್ವಲ್ಪ ಹಣ ಕೊಟ್ಟು ಗಂಟುಹಾಕಿಕೊಂಡ."

"ಹುಡುಗಿ ಒಪ್ಪಿದಳೇ?"

"ಒಪ್ಪದೇನು ಮಾಡಿಯಾಳು? ಬೇರೆ ದಾರಿಯಿರಲಿಲ್ಲ. ಶಾಸ್ತ್ರಿಯ ಶ್ರೀಮಂತಿಕೆಯನ್ನು ಕಂಡು ಆಕೆಯ ಬಾಯಿಗೂ ನೀರು ಬಿಟ್ಟಿರಬೇಕು. ಆದರೆ ಆತನಿಂದ ಆಕೆಗೆ ಶಾರೀರಕ ತೃಪ್ತಿ ದೊರೆಯುವದು ಸಾಧ್ಯವಿರಲಿಲ್ಲ. ಸರಿ. ಅದಕ್ಕೆ ಆಕೆ ಬೇರೆ ದಾರಿ ಕಂಡುಕೊಂಡಳು. ತೃಪ್ತಿಯೂ ಆಯಿತು, ಅದರೊಂದಿಗೆ ಹಣಸಂಪಾದನೆಯೂ ಆಯಿತು. ತನ್ನ ಹೆಸರಿನಲ್ಲೇ ಬ್ಯಾಂಕ್ ಲೆಕ್ಕ ಪ್ರಾರಂಭಿಸಿದಳು. ಆಕೆ ಸ್ವತಃ ಏನಿಲ್ಲವೆಂದರೂ ಹತ್ತುಸಾವಿರ ರೂಪಾಯಿ ಕೂಡಿಸಿದ್ದಾಳೆ."

"ಇದೆಲ್ಲ ನಿಮಗೆ ಹೇಗೆ ಗೊತ್ತಾಯಿತು?"

"ಹಣವನ್ನು ಬ್ಯಾಂಕಿಗೆ ಕಟ್ಟಿಬರಲು ನನ್ನ ಕೈಗೇ ಕೊಡುತ್ತಿದ್ದಳಲ್ಲ. ಪಾಸ್‌ಬುಕ್ ಸಹ ನನ್ನ ಹತ್ತಿರವೇ ಇರುತ್ತಿತ್ತು."

"ನಿಮ್ಮ ಬಗೆಗೂ ವಿಶ್ವಾಸವಿತ್ತು ಅನ್ನಿರಿ."

"ಮೊದಮೊದಲು. ಆ ಮೇಲೆ ನನ್ನ ಸಂಬಳವನ್ನೂ ತನ್ನ ಲೆಕ್ಕಕ್ಕೇ ಕಟ್ಟಬೇಕೆಂದು ಆಕೆ ಹೇಳಿದಾಗ ನಾನು ಹಾಗೆ ಮಾಡಲಿಲ್ಲವಾದ್ದರಿಂದ ಎಲ್ಲವೂ ಮಾಯವಾಯಿತು."

"ನಿಮ್ಮ ಸಂಬಳ? ಆಕೆಯ ಲೆಕ್ಕಕ್ಕೇಕೆ?"

"ಎಂಥ ಸಿಂಪಲ್ಟನ್ ಇದೀರಿ ನೀವು ಶಿವಮೂರ್ತಿ! ಇಷ್ಟು ಸಹ ತಿಳಿಯುವದಿಲ್ಲವೇ ನಿಮಗೆ? ಕೆಲಸಗಾರರ ಸಂಬಳವನ್ನು ತನ್ನ ಲೆಕ್ಕಕ್ಕೆ ಆಕೆ ಸೇರಿಸಲು ಇನ್ನಾವ ಕಾರಣವಿದ್ದೀತು? ಹಣಸಂಪಾದನೆಗಾಗಿ ಶಾಸ್ತ್ರಿ ಎಂಥ ಕೆಲಸಕ್ಕೂ ಹೇಸುವದಿಲ್ಲವೆಂದು ಆಗಲೆ ನಾ ನಿಮಗೆ ಹೇಳಿದೆನಲ್ಲ. ಗಂಡನಂತೆಯೆ ಹೆಂಡತಿ. ಹಣಕ್ಕಾಗಿ ಪ್ರೆಸ್ಸಿನ ಕೆಲಸಗಾರರೊಂದಿಗೆ ಮಲಗುವದಕ್ಕೂ ಹೇಸುವವಳಲ್ಲ ಆಕೆ. ಈ ಕಡೆಗೆ ಹಣವೂ ಬಂದಿತು. ಈ ಕಡೆಗೆ...."

"ಇಶ್ಶಿಶ್ಶಿ...." ಎಂದು ಮೂಗು ಸೊಟ್ಟಗೆ ಮಾಡಿದ್ದ ಶಿವಮೂರ್ತಿ.

"ಹಾಗೆಲ್ಲ ಇಶ್ಶಿಶ್ಶಿ ಅಂದುಬಿಟ್ಟರೆ ಉಪಯೋಗವಿಲ್ಲ ಶಿವಮೂರ್ತಿ. ಇದೂ ಜೀವನ. ನಮ್ಮ ನಿಮ್ಮ ಕಣ್ಣೆದುರಿಗೇ ನಡೆಯುವ ಜೀವನ. ಅದರ ಕಠೋರ ಸತ್ಯತೆಯನ್ನು ಕಂಡು ಇಶ್ಶಿಶ್ಶಿ ಅಂದುಬಿಟ್ಟು ದೂರ ಸರಿಯು ಬಾರದು. ಅದೇಕೆ ಹೀಗಾಗಿದೆ, ಅದಕ್ಕೇನು ಕಾರಣ ಎನ್ನುವುದನ್ನು ಅರಿಯು ಬೇಕು. ಸೀತಾ, ಸಾವಿತ್ರಿ, ದಮಯಂತಿ ಮೊದಲಾದ ಪತಿವ್ರತೆಯರ ಕಾಲ ಎಂದೋ ಹಿಂದಾಗಿ ಹೋಯಿತು. ಈಗಲೂ ಅದೇ ಕಾಲದಲ್ಲಿ ನಾವು ಬದುಕಿರುವೆವೆಂಬ ಹುಚ್ಚುತನಕ್ಕೆ ಬಲಿಬೀಳಬಾರದು. ಹಣದಾಸೆಯೆಂಬುದು ಮಾನವ ಜೀವಿಯನ್ನು ಎಂಥ ಕೀಳು ಸ್ಥಿತಿಗಿಳಿಸಿದೆ ನೋಡಿರಿ. ಲಲಿತಮ್ಮ ಶಾಸ್ತ್ರಿಯ ಪತ್ನಿಯಾಗಲೂ ಹಣವೇ ಕಾರಣವಲ್ಲವೆ? ವರದಕ್ಷಿಣೆ ತೆರಬಲ್ಲ ಸ್ಥಿತಿ ಆಕೆಯ ತಂದೆ ತಾಯಿಗಳಿಗಿದ್ದಿದ್ದಲ್ಲಿ ಆಕೆಗೂ ಯುವಕನಾದ ಗಂಡ ದೊರೆಯಬಹುದಾಗಿತ್ತು. ಅನೇಕ ಯುವತಿಯರ ಹಾಗೆ ಆಕೆಯೂ ಸುಖ ವಾಗಿ ಸಂಸಾರ ಮಾಡಿಕೊಂಡಿರಬಹುದಾಗಿತ್ತು. ಆಕೆಯೂ ಮತ್ತೊಬ್ಬ ಸೀತೆಯೊ, ಸಾವಿತ್ರಿಯೊ ಆಗಬಹುದಾಗಿತ್ತು. ತನ್ನ ಶೀಲ, ತನ್ನ ಚಾರಿತ್ರ್ಯ ಗಳನ್ನು ಕಾಯ್ದುಕೊಂಡು ಸಭ್ಯರು ಮೆಚ್ಚುವ ಹಾಗೆ ಜೀವನ ನಡಸಬಹು ದಾಗಿತ್ತು. ಆದರೆ–ಈ ಹಣಪ್ರಪಂಚದಲ್ಲಿ ಅದು ಸಾಧ್ಯವಾಗಲಿಲ್ಲ. ತನ್ನ ಮನಸ್ಸಿಗೆ ವಿರುದ್ಧವಾಗಿ ಆಕೆ ಶಾಸ್ತ್ರಿಯಂಥ ಇಳಿವಯಸ್ಸಿನವನನ್ನು ಮದುವೆ ಯಾಗಬೇಕಾಯಿತು. ಪಾಪ, ತರುಣಿ. ಸುಖಪಡುವ ಆಸೆ ಸ್ವಾಭಾವಿಕ. ಹಣವಿದ್ದಲ್ಲಿ ಸುಖದ ಗ್ಯಾರಂಟಿಯೂ ಇದೆ. ಅಂತೆಯೆ, ಆಕೆ ಹಣವನ್ನೂ ಹುಡುಕುತ್ತಿದಾಳೆ, ಸುಖವನ್ನೂ ಪಡೆಯುತ್ತಿದಾಳೆ. ನನ್ನ ದೃಷ್ಟಿಯಿಂದ ಆಕೆಯ ದೋಷವೇನೂ ಇಲ್ಲ ಇದರಲ್ಲಿ. ದೋಷವೆಲ್ಲಾ ಇರುವುದು ಈ ವಿಷಮ ಪರಿಸ್ಥಿತಿಯಲ್ಲಿ. ಮನುಷ್ಯಜೀವಿಗಳನ್ನು ಇಂಥ ಕೀಳುಮಟ್ಟಕ್ಕಿಳಿ ಸುವ ಈ ಆರ್ಥಿಕ ಪದ್ಧತಿಯಲ್ಲಿ...."

"ಅಂದರೆ? ನೀವು ಈ ವ್ಯಭಿಚಾರವನ್ನು ಸಮರ್ಥಿಸುವಿರೋ ಏನು?"

"ಸಮರ್ಥಿಸುವ ಮಾತೆಲ್ಲಿ ಬಂತು? ನಮ್ಮ ಸಮರ್ಥನೆಯಿಂದ ಆಗ ಬೇಕಾದುದಾದರೂ ಏನು? ನಡೆಯುವುದೆಲ್ಲ ನಡೆದೇ ನಡೆಯುತ್ತದೆ. ಶಾಸ್ತ್ರಿಯೂ ವ್ಯಭಿಚಾರ ಮಾಡುತ್ತಾನೆ. ಆತನ ಪತ್ನಿಯೂ ಮಾಡುತ್ತಾಳೆ.

ಆತ ಮಾತ್ರ ಮಾಡಬೇಕು, ಆಕೆ ಪತಿವ್ರತೆಯಾಗಿರಬೇಕೆಂದು ನಿಮ್ಮ ಅಭಿಪ್ರಾಯವೋ ?"

"ಒಬ್ಬರು ಕೆಟ್ಟರೆ ಇನ್ನೊಬ್ಬರೂ ಕೆಡಬೇಕೆಂದು ನೀವು ಹೇಳುವದಿಲ್ಲವಷ್ಟೆ ?"

"ಮೊದಲೇ ಕೆಟ್ಟು ಹೋಗಿರುವಾಗ ಮತ್ತೆ ಕೆಡುವ ಮಾತೆಲ್ಲಿ ಬರುತ್ತದೆ ಶಿವಮೂರ್ತಿ ? ತನ್ನ ಮನಸ್ಸಿಗೆ ವಿರುದ್ಧವಾಗಿ ಲಲಿತಮ್ಮ ಶಾಸ್ತ್ರಿಯನ್ನು ಮದುವೆಯಾದಾಗಲೇ ಆಕೆ ಕೆಟ್ಟುಹೋದಳು. ಸಮಾಜದ ದೃಷ್ಟಿಯಲ್ಲಿ ಆಕೆ ಅವನ ಹೆಂಡತಿಯಾಗಿರಬಹುದು. ಆದರೆ ನಿಜವಾಗಿ ಸೂಳೆಗೂ ಆಕೆಗೂ ಯಾವ ವ್ಯತ್ಯಾಸವೂ ಉಳಿಯಲಿಲ್ಲ. ಶಾಸ್ತ್ರಿಯ ಹಣಕ್ಕಾಗಿ ತಾನೆ ಆಕೆ ಆತನನ್ನು ಮದುವೆಯಾದದ್ದು ? ಪ್ರಸ್ತದ ದಿನ ಆತನಿಗೆ ಶರೀರವನ್ನೊಪ್ಪಿಸಿದಾಗಲೇ ಆಕೆಯ ಶೀಲ ಕೆಟ್ಟು ಹೋದಂತಾಯಿತು. ಒಮ್ಮೆ ಒಡೆದ ಹಾಲು ಏನಾದರೇನು ! ಕೆಟ್ಟದ್ದು ಹಾಗೆ ಕೆಡುತ್ತಲೇ ಹೋಗುತ್ತದೆ. ಶಾಸ್ತ್ರಿಯೊಂದಿಗೆ ವ್ಯಭಿಚಾರ ಮಾಡುವಾಕೆ ಬೇರೆಯವರೊಂದಿಗೆ ಏಕೆ ಮಾಡಬಾರದು ? ಆತನಿಂದ ಹಣ ಸಿಕ್ಕಿತು, ವಸ್ತು ಒಡವೆ ಸಿಕ್ಕಿದವು. ಸರಿ. ಅವುಗಳಿಗೆ ಪ್ರತಿಯಾಗಿ ತನ್ನ ದೇಹವನ್ನರ್ಪಿಸಿದಳು. ಹಾಗೆಯೆ, ಬೇರೆಯವರಿಂದ ಹಣವೂ ವಸ್ತು ಒಡವೆಗಳೂ ಸಿಕ್ಕಿದಲ್ಲಿ ಅವರಿಗೇಕೆ ದೇಹ ನೀಡಬಾರದು ? ಶಾಸ್ತ್ರಿಯಂಥವರಿಂದ ನಿಜವಾದ ಸುಖವೂ ದೊರೆಯುವಂತಿಲ್ಲ. ನಿಜವಾದ ಸುಖ ನೀಡಬಲ್ಲ ಯುವಕರಿಗೂ, ಆರೋಗ್ಯಶಾಲಿಗಳಿಗೂ ಲಲಿತಮ್ಮ ತನ್ನ ದೇಹವನ್ನರ್ಪಿಸುವದರಲ್ಲಿ ತಪ್ಪೇನೂ ಇಲ್ಲ."

"ಆಕೆಯೊಂದಿಗೆ ಮಲಗಿದವರ ಹಾಗೇ ನೀವೂ ಮಾತಾಡುತ್ತೀರಲ್ಲ?" ಎಂದು ವಿಸ್ಮಯದಿಂದ ಕೇಳಿದ್ದ ಶಿವಮೂರ್ತಿ.

"ಮಲಗಬಹುದಾಗಿತ್ತು. ನಾನು ಅವರ ಆಫೀಸಿಗೆ ಹೋದ ದಿನವೇ ನನ್ನನ್ನಾಕೆ ಆಹ್ವಾನಿಸಿದ್ದೂ ಉಂಟು. ಆದರೆ ನನಗೇಕೋ ಮನಸ್ಸಾಗಲಿಲ್ಲ. ನಾನಾಗಲೇ ಆಕೆಯ ಇತಿಹಾಸವನ್ನೆಲ್ಲ ಅರಿತಿದ್ದೆ. ಪ್ರೆಸ್ಸಿನ ಕೆಲಸಗಾರರೊಂದಿಗೆ ಆಕೆ ಮಲಗುವುದೂ ನನಗೆ ತಿಳಿದಿತ್ತು. ಆಕೆಯಂತೂ ನಿಂತ ಕಾಲಿನ ಮೇಲೆ ಸಿದ್ಧಳಾಗಿದ್ದಳು. ನಾನು ಹಿಂಜರಿದರೂ ಆಕೆ ಪ್ರಯತ್ನ

ಮಾಡುವುದನ್ನು ಬಿಡಲಿಲ್ಲ. ಅವರ ಆಫೀಸಿನಿಂದ ನಾನು ಹೊರಡುವ ವರೆಗೂ ಆಗಾಗ ಪೀಡಿಸುತ್ತಲೇ ಇದ್ದಳು...."

"ಅಂದರೆ.... ನಿಮ್ಮನ್ನೂ ಆಕೆ ಆಕರ್ಷಿಸಿಕೊಂಡಿದ್ದಳೆನ್ನಿ."

"ಸುಂದರಿಯೂ ಯುವತಿಯೂ ಆದ ಹೆಣ್ಣು ತಾನಾಗಿಯೆ ಕರೆಯುವಾಗ ಯಾರು ಆಕರ್ಷಿತರಾಗುವದಿಲ್ಲ ಮೂರ್ತಿ! ಅದರಲ್ಲೂ ಅವಿವಾಹಿತ ತರುಣರಾಗಿದ್ದರಂತೂ ಹೇಳುವುದೇ ಬೇಡ. ಆ ಪ್ರೆಸ್ಸಿನ ಈ ಕೀರ್ತಿಯನ್ನು ಕೇಳಿಯೆ ಅನೇಕ ತರುಣ ಕೆಲಸಗಾರರು ಅಲ್ಲಿಗೆ ಕೆಲಸಕ್ಕೆ ಬರಲು ನಾ ಮುಂದೆ ನೀ ಮುಂದೆ ಎಂದು ಆತುರರಾಗಿರುತ್ತಾರೆ. ಅವರ ಸಂಬಳವೆಲ್ಲಾ ಲಲಿತಮ್ಮನ ಬ್ಯಾಂಕ್ ಲೆಕ್ಕಕ್ಕೆ ಜಮೆಯಾಗುತ್ತದೆ....ನನ್ನ ಪಾಲಿಗೂ ಅದೇ ಅವಸ್ಥೆ ಬರುತ್ತಿದ್ದಿತೇನೊ. ನಾನು ಪಾರಾದೆ...." ಎಂದು ನಕ್ಕುಬಿಟ್ಟಿದ್ದ ಹರಿಹರ.

"ಲಲಿತಮ್ಮನ ಈ ವ್ಯವಹಾರ ಶಾಸ್ತ್ರಿಗೆ ತಿಳಿಯದೇ?"

"ತಿಳಿಯದಿರುತ್ತದೆಯೆ! ತಿಳಿದಿರಲೇಬೇಕು. ಒಂದು ದಿನ, ಎರಡು ದಿನ ಗುಟ್ಟಿನಲ್ಲಿ ನಡೆದೀತು ಈ ಕೆಲಸ. ಸದಾಕಾಲವೂ ನಡೆಯಲು ಸಾಧ್ಯವೆ?ಅವರಿಬ್ಬರಿಗೂ ಮದುವೆಯಾದಂದಿನಿಂದ ಹೀಗೆಯೆ ನಡೆದಿದೆಯೊ ಏನೊ. ಮೊದ ಮೊದಲು ಶಾಸ್ತ್ರಿ ಪ್ರತಿಭಟಿಸಿರಲು ಸಾಕು. ಮುಂದೆ ಗಂಡ ಹೆಂಡಿರಲ್ಲಿ ಆ ಬಗ್ಗೆ ಒಂದು ಒಪ್ಪಂದವಾಗಿರಬಹುದು. ಶಾಸ್ತ್ರಿಯೂ ಹೊರ ಚಾಳಿಯವನೇ. ಇದೇ ಊರಲ್ಲಿ ಆತನ ಪ್ರೇಯಸಿಯೊಬ್ಬಳಿದ್ದಾಳೆ. ಬಲು ದಿನಗಳ ಗೆಳೆತನ ಅದು. ಲಲಿತಮ್ಮನಿಗೆ ಅದು ತಿಳಿದಿರಬೇಕು. 'ನೀವು ಮಾತ್ರ ಇಂಥ ಕೆಲಸ ಮಾಡಬೇಕಂತೆ. ನಾನೇಕೆ ಮಾಡಬಾರದು?' ಎಂದಾಕೆ ಗದರಿಸಿರಲೂ ಸಾಕು. ಶಾಸ್ತ್ರಿ ಶರಣು ಹೊಡೆದು, 'ನೀನು ಏನಾದರೂ ಮಾಡಿಕೋ. ನಾನೂ ಏನಾದರೂ ಮಾಡಿಕೊಳ್ಳುತ್ತೇನೆ,' ಎಂದು ಒಪ್ಪಂದ ಮಾಡಿಕೊಂಡಿರಬಹುದು. ಕಡೆಗೆ ಆಗುವದು ಹೀಗೇ. ಎಷ್ಟೋ ಸಂಸಾರಗಳು ಹೀಗೇ ನಡೆದಿರುವಾಗ ಶಾಸ್ತ್ರಿಯದಾದರೂ ಏಕೆ ನಡೆಯಬಾರದು? ಬಲು ಸೋಜಿಗದ ಬಾಳು ನಮ್ಮ ಬಾಳು!"

ಮುಂದೆ ಆ ವಿಷಯವನ್ನಾಲಿಸುವ ಇಷ್ಟವಿರಲಿಲ್ಲ ಶಿವಮೂರ್ತಿಗೆ. "ಹೋಗಲಿ ಬಿಡಿರಿ ಹರಿಹರ್. ಅವರ ವಿಚಾರ ತೆಗೆದುಕೊಂಡು ನಾನೇನು

ಮಾಡಬೇಕಾಗಿದೆ?" ಎಂದು ಮುಗಿಸಿದ್ದ. ಅವರೊಂದಿಗೆ ತನಗೆ ಇಷ್ಟು ಬೇಗ ಸಂಬಂಧ ಬರಬಹುದೆಂದು ಆತನಿಗೆಲ್ಲಿ ತಿಳಿದಿದ್ದಿತು? ಈಗ....ಸಂಬಂಧ ಮಾತ್ರವಲ್ಲ, ತೀರ ನಿಕಟ ಸಂಬಂಧವೆ ಬಂದು ಬಿಟ್ಟದ್ದಿತು. ಹರಿಹರನನ್ನು ಆಕರ್ಷಿಸಿದ ಹಾಗೆ ಈ ಲಲಿತಮ್ಮ ತನ್ನನ್ನೂ ಆಕರ್ಷಿಸಲು ಪ್ರಯತ್ನಿಸು ವಳೋ ಏನೊ. ಕೆಲಸಗಾರರೆಲ್ಲ ಆಗಲೆ ಹೊರಟು ಹೋದರು. ಪ್ರಿಂಟರ್ ಕೃಷ್ಣಯ್ಯನನ್ನು ಒತ್ತಾಯದಿಂದ ಕಳುಹಿಸಿಕೊಟ್ಟಳು. ಆತನಿಗೂ ಇವ ಳಿಗೂ ಕಾಯಂ ಸಂಬಂಧವೇ ಇದೆಯೊ ಏನೊ. ಬೇರೆಯವರಾರೂ ಇಲ್ಲದಿರು ವಾಗ ಆ ಕೃಷ್ಣಯ್ಯನೇ ಇವಳೊಂದಿಗೆ ಮಲಗಿರುವನೇನೊ. ಇವೊತ್ತು ಬೇರೆಯವರೊಬ್ಬರು....? ಅಂದರೆ ತಾನು? ಶಿವಮೂರ್ತಿಯ ಮೈಗೆ ನಡುಕ ಬಂದಂತಾಯಿತು. ತನ್ನನ್ನು ಆಕೆ ಮಲಗಲು ಕರೆಯುವಳೇ? ಕರೆದರೆ....? ತಾನು ಏನೆಂದು ಉತ್ತರವೀಯುವುದು? ಇಲ್ಲಿಂದ ಹೇಗೆ ಪಾರಾಗಿ ಹೋಗುವುದು?

ಕಳವಳಪೂರ್ಣ ದೃಷ್ಟಿಯನ್ನು ಎದುರಿನ ಪಟಗಳ ಕಡೆಗೆ ತಿರುಗಿಸಿದ ಶಿವಮೂರ್ತಿ. ಬಸವಣ್ಣ, ವಿವೇಕಾನಂದ, ರಾಮಕೃಷ್ಣ ಎಲ್ಲರೂ ತನ್ನ ಸ್ಥಿತಿ ಯನ್ನು ಗುರುತಿಸಿ ಮುಗುಳ್ನಗೆ ಬೀರಿದಂತೆ ಭಾಸವಾಯಿತು.

"ಅಪ್ಪಾವರೆ," ಎಂದು ಯಾರೋ ಕರೆದಂತಾಯಿತು.

ಆತ ಬಾಗಿಲಿನ ಕಡೆಗೆ ದೃಷ್ಟಿ ತಿರುಗಿಸಿದ. ಎಂಟು-ಹತ್ತು ವರ್ಷದ ಕಳಾಹೀನ ಮುಖದ ಹುಡುಗಿಯೊಂದು ಆತನನ್ನು ಕರೆಯುತ್ತಲಿತ್ತು. ಆ ಹುಡುಗಿ ಯಾರೆಂಬುದು ಗೊತ್ತಾಗುವಂತಿರಲಿಲ್ಲ. ಮಾಸಿದ ಹರಕು ಪರಕರ. ಎಣ್ಣೆಯಿಲ್ಲದೆ ಕೆದರಿದ ತಲೆಗೂದಲು. ಸ್ನಾನವಿಲ್ಲದೆ ಕೊಳೆ ಯಾದ ಕೈಕಾಲುಗಳು. ಒಣಗಿದ ಕಟ್ಟಿಗೆಯಂತೆ ಕೃಶವಾದ ಶರೀರ. ಗುಳಿ ಬಿದ್ದ ಕೆನ್ನೆ-ಕಣ್ಣುಗಳು. ಆಕೆಯನ್ನು ಕಂಡೊಡನೆಯೆ ಕನಿಕರ ಬರು ವಂತಿದ್ದಿತು. ಶಿವಮೂರ್ತಿಗಂತೂ ಕಣ್ಣೀರು ಬರುವ ಹಾಗಾಯಿತು. "ಅಪ್ಪಾವರೆ," ಎಂಬ ಆ ಕರೆ....ಆ ಧ್ವನಿಯೂ ಎಷ್ಟು ದುರ್ಬಲವಾಗಿತ್ತು...

"ಬರ್ರಿ ಅಪ್ಪಾವರೆ, ಅಮ್ಮಾವರು ಕರೆಯುತ್ತಾರೆ."

"ಯಾತಕ್ಕಮ್ಮ?"

"ಫಲಾರ ಮಾಡಲಿಕ್ಕೆ."

ಶಿವಮೂರ್ತಿ ಏಳಲೇಬೇಕಾಯಿತು. ಕೊಟಡಿಯ ಬಾಗಿಲನ್ನು ಮುಚ್ಚಿ ಅಡುಗೆಯ ಮನೆಗೆ ಬರುತ್ತಿದ್ದ ಹಾಗೆ ಆ ಹುಡುಗಿಯ ತಲೆಯ ಮೇಲೆ ಕನಿ ಕರದಿಂದ ಕೈಯನ್ನಾಡಿಸಿ ಕೇಳಿದ: "ನಿನ್ನ ಹೆಸರೇನಮ್ಮಾ ಮಗೂ ?"

ತನ್ನ ಕಳಾಹೀನ ನೇತ್ರಗಳನ್ನು ಆತನ ಕಡೆಗೆ ತಿರುಗಿಸಿ ಆಕೆ ಉತ್ತರ ವಿತ್ತಳು: "ಹೆಸರು ? ನಂಗೊತ್ತಿಲ್ಲ ಅಪ್ಪಾವರೆ."

"ನಿನಗೆ ಗೊತ್ತಿಲ್ಲ? ಹಾಗಾದರೆ ಶಾಸ್ತ್ರಿಗಳು ಏನೆಂದು ಕೂಗುತ್ತಾರೆ?"

"ಪರವೇಶೀ ಅನ್ನುತ್ತಾರೆ ಅಪ್ಪಾವರೆ...." ಎಂದು ನುಡಿದು ಆಕೆ ತನ್ನ ಕೆಲಸಕ್ಕೆ ಹೊರಟುಹೋದಳು.

"ಪರದೇಶಿ ! ಪರದೇಶಿ....ಪಾಪ, ಈ ಹುಡುಗಿ ಪರದೇಶಿಯೆ ಇರಬೇಕು ಹಾಗಾದರೆ....ತಂದೆ ತಾಯಿ ಯಾರೂ ಇಲ್ಲವೊ ಏನೊ....ಅದಕ್ಕೇ ಹೀಗೆ ಇಳಿದು ಹೋಗಿರಬೇಕು. ಅಯ್ಯೋ ಪಾಪ...." ಎಂದುಕೊಳ್ಳುತ್ತ ಶಿವಮೂರ್ತಿ ಅಡುಗೆಯ ಮನೆಯಲ್ಲಿ ಅಡಿಯಿರಿಸಿದ.

ಅಷ್ಟು ಹೊತ್ತಿಗಾಗಲೆ ಅಲ್ಲಿ ವಿದ್ಯುದ್ದೀಪವುರಿಯುತ್ತಿತ್ತು. ಶಿವಮೂರ್ತಿಗಾಗಿ ಬಣ್ಣದ ಮಣೆ ಹಾಕಿ, ಅದರೆದುರಿಗೆ ಬೆಳ್ಳಿಯ ತಟ್ಟೆಯನ್ನಿಟ್ಟು ದಾರಿ ಕಾಯುತ್ತಿದ್ದಳು ಲಲಿತಮ್ಮ. ಆತ ಒಳಕ್ಕೆ ಅಡಿಯಿರಿಸುತ್ತಲೂ ಒಯ್ಯಾರದಿಂದ ನಡುವನ್ನು ಬಳುಕಿಸುತ್ತ—"ಬರ್ರಿ, ಬರ್ರಿ," ಎಂದು ಸ್ವಾಗತಿಸಿದಳು. ಅಲ್ಲಿಯವರೆಗೂ ಬಂದುದಾಗಿತ್ತು. ಇನ್ನು ಕುಳಿತುಕೊಳ್ಳದೆ ಬೇರೆ ಉಪಾಯವಿರಲಿಲ್ಲ. ಸಂಕೋಚದಿಂದ ಮುದುಡಿಕೊಳ್ಳುತ್ತ ಶಿವಮೂರ್ತಿ ಮಣೆಯ ಮೇಲೆ ಕುಳಿತುಕೊಂಡ. ತಿಂಡಿಯ ಪಾತ್ರೆಗಳನ್ನು ಹತ್ತಿರ ಎಳೆದುಕೊಂಡು ಲಲಿತಮ್ಮ ತಾನೂ ಆತನಿಗೆ ತೀರ ಹತ್ತಿರದಲ್ಲೇ ಕುಳಿತುಕೊಂಡಳು. ಆಕೆ ಮುಡಿದಿದ್ದ ಸುಗಂಧರಾಜ ಕುಸುಮಗಳ ಮಾದಕ ಪರಿಮಳ ಶಿವಮೂರ್ತಿಯ ಮಿದುಳಿನಲ್ಲಿ ಕೋಲಾಹಲವನ್ನುಂಟುಮಾಡಿದಂತಾಯಿತು.

ಮೈಸೂರು ಪಾಕು, ಉಪ್ಪಿಟ್ಟು, ಒಡೆ....ಅವುಗಳೊಂದಿಗೆ ಅರ್ಧ ಬಟ್ಟಲು ತುಪ್ಪ, ಬಾದಾಮಿ ಹಾಲು. ಒಂದೊಂದೇ ವಸ್ತುವನ್ನು ತಟ್ಟೆಯಲ್ಲಿ ಹಾಕುತ್ತ ಲಲಿತಮ್ಮ ಶಿವಮೂರ್ತಿಯ ಮುಖವನ್ನೇ ದಿಟ್ಟಿಸಿ

ನೋಡುತ್ತಲಿದ್ದಳು. ಆತನ ಮುಖಭಾವದಿಂದ ಆತನ ಸ್ವಭಾವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಳೋ ಏನೊ !

"ತಗೊಳ್ಳಿರಿ. ಏನೂ ಸಂಕೋಚ ಮಾಡಿಕೊಳ್ಳಬೇಡಿರಿ. ಮೈಸೂರು ಪಾಕು ಹೇಗಿದೆ ?"

ಆತ ಒಂದು ತುಂಡನ್ನು ಬಾಯಿಗಿಟ್ಟುಕೊಂಡು ಗಳಮ್ಮನೆ ನುಂಗಿದ.

"ಹೇಗಿದೆ ? ರುಚಿಯಾಗಿದೆ ತಾನೆ ?"

"ಚೆನ್ನಾಗಿದೆ."

"ಅಂಗಡಿಯಿಂದ ತರಿಸಿದ್ದಲ್ಲರೀ ಇದು. ನಾನೇ ಸ್ವತಃ ಮಾಡಿದ್ದು. ಇದೇ ಈಗ ತಯಾರಿಸಿದೆ. ಇನ್ನೂ ಬಿಸಿಯಾಗಿಯೇ ಇದೆಯಲ್ಲವೆ ?"

"ಹೌದು."

"ಹಿಂದೆ ನಮ್ಮಲ್ಲಿ ಮೈಸೂರು ಸೀಮೆಯ ಅಡಿಗೆಯವಳೊಬ್ಬಳಿದ್ದಳು. ಆಕೆಯಿಂದ ಈ ಪದಾರ್ಥ ಮಾಡಲು ಕಲಿತೆ. ಮೊದಲು ಇದೊಂದೂ ಗೊತ್ತಿರಲಿಲ್ಲ ನನಗೆ. ಉಪ್ಪಿಟ್ಟು ಮಾಡಲೂ ಬರುತ್ತಿರಲಿಲ್ಲ."

"ಹೂಂ...." ಎನ್ನುತ್ತಿದ್ದ ಶಿವಮೂರ್ತಿ.

"ಉತ್ತರ ಕರ್ನಾಟಕದವರಾದ ನಮಗೆ ಈ ಮೈಸೂರು ಪಾಕು, ಈ ಉಪ್ಪಿಟ್ಟು, ಈ ಒಡೆ, ಈ ಜೋಂಡ ಎಲ್ಲ ಎಲ್ಲಿ ಗೊತ್ತಾಗಬೇಕು? ಮೈಸೂರಿನವರೇ ನಿಜವಾದ ರಸಿಕರು ನೋಡಿರಿ. ಚಂದ ಚಂದದ ತಿಂಡಿ ತಯಾರಿಸುತ್ತಾರೆ. ಸುಖವಾಗಿ ಊಟ ಮಾಡುತ್ತಾರೆ. ನಮ್ಮವರಾದರೋ ರೊಟ್ಟಿ.... ಬದನೇಕಾಯಿ ಪಲ್ಯ. ಹಬ್ಬಗಿಬ್ಬ ಬಂದರೆ ಹೋಳಿಗೆಯೊ, ಹುಗ್ಗಿಯೋ ಆದರಾಯಿತು. ಬೇರೆ ಏನೂ ಮಾಡಲು ಬರುವದಿಲ್ಲ."

"ಹೌದು."

"ನಮ್ಮ ಶಾಸ್ತ್ರಿಗಳಿಗೂ ಬೇರೆ ಬೇರೆ ತರದ ತಿಂಡಿ ಅಂದರೆ ಬಲುಪ್ರೀತಿ. ನಿಮಗೆ ?"

"ಹೂಂ...."

"ಏನ್ರೀ, ಹೂಂ ಅನ್ನುತ್ತೀರಲ್ಲ? ನನ್ನ ಮಾತಿನ ಕಡೆಗೆ ಲಕ್ಷ್ಯವಾದರೂ ಇದೆಯೋ ಇಲ್ಲವೋ ?"

"ಅ್ಞ ಹ ಹ ಹ...." ಎಂದು ತಬ್ಬಿಬ್ಬಾಗಿ ನುಡಿದನಾತ.

"ಅಂತೂ ನಿಮಗೆ ರುಚಿಸಿತೆನ್ನಿರಿ ಈ ತಿಂಡಿ. ಅಂತೇ ನನ್ನ ಮಾತಿನ ಕಡೆಗೂ ಲಕ್ಷ್ಯವಿಲ್ಲ ನಿಮಗೆ. ನಮ್ಮ ರಾವಬಹಾದ್ದೂರರೂ ನಿಮ್ಮ ಹಾಗೇ. ನಾನು ಬಡಿಸಿದ ತಿಂಡಿ ತಿನ್ನುವಾಗ ಪ್ರಪಂಚವನ್ನೆಲ್ಲ ಮರೆತುಬಿಟ್ಟಿರುತ್ತಾರೆ."

"ರಾವಬಹಾದ್ದೂರರು ?"

"ನೀವು ನೋಡಿಲ್ಲವೇನ್ರೀ ಅವರನ್ನ ? ವರ್ತಕರ ಸಂಘದ ಅಧ್ಯಕ್ಷರು. ಅಸೆಂಬ್ಲಿ ಮೆಂಬರರೂ ಆಗಿದ್ದಾರೆ. ಲಕ್ಷಾಧೀಶರು. ನಮ್ಮವರಿಗೂ ಅವರಿಗೂ ಬಹಳ ಸ್ನೇಹ. ಆಗಾಗ ಊಟಕ್ಕೂ ಬರುತ್ತಿರುತ್ತಾರೆ. ನನ್ನ ಕೈಯ ಅಡಿಗೆ ಅಂದರೆ ಬಲು ಪ್ರೀತಿ ಅವರಿಗೆ...."

"ಈಕೆಯ ಅಡಿಗೆ ಮಾತ್ರವಲ್ಲ—ಈಕೆಯನ್ನು ಕಂಡರೂ ಬಲು ಪ್ರೀತಿ, ಅವರಿಗೆ...." ಎಂದು ಹರಿಹರ ತನ್ನ ಕಿವಿಯಲ್ಲಿ ಹೇಳಿದಂತಾಯಿತು ಶಿವಮೂರ್ತಿಗೆ.

"ರಾವಬಹಾದ್ದೂರರು ಮಾತ್ರವಲ್ಲ, ನಮ್ಮ ಮನೆಗೆ ಊಟಕ್ಕೆ ಬಂದವರೆಲ್ಲ ಹಾಗೇ. 'ನೀವು ಮಾಡಿದ ಅಡಿಗೆಯನ್ನು ಎಷ್ಟು ಉಂಡರೂ ತೃಪ್ತಿಯೇ ಆಗುವುದಿಲ್ಲ ನೋಡಿರಿ' ಎನ್ನುತ್ತಾರೆ."

"ಅನ್ನಬೇಕಾದುದೇ !" ಎಂದು ಹರಿಹರ ಅಣಕವಾಡಿದಂತೆ ಭಾಸವಾಯಿತು ಶಿವಮೂರ್ತಿಗೆ.

"ನನ್ನ ಕೈಯ ಅಡಿಗೆಯನ್ನುಂಡಾಗ ನೀವೂ ಹಾಗೇ ಹೇಳುವದು ಖಂಡಿತ. ರಾತ್ರಿ ಊಟವಾದ ಮೇಲೆ ನೀವೇ ಹೇಳುವಿರಿ...."

"ಬೀಸಿದಳಪ್ಪ, ಬಲೆಯನ್ನ. ಇನ್ನು ಹೇಗೆ ಪಾರಾಗುವಿ ?" ಎಂದು ಹರಿಹರ ಕೂಗಿದಂತಾಯಿತು.

"ಊಟ ? ನಾನು ಮನೆಗೆ ಹೋಗಬೇಕಲ್ಲ ಲಲಿತಮ್ಮನವರೆ...."

"ಮನೆ ಎಲ್ಲಿ ಹೋಗುತ್ತದೆ ಬಿಡಿರಿ. ನಿಧಾನವಾಗಿ ಹೋಗುವಿರಂತೆ. ಮೊದಲಿನಿಂದಲೂ ನನ್ನದೊಂದು ಪದ್ಧತಿ. ನಮ್ಮಲ್ಲಿಗೆ ಹೊಸದಾಗಿ ಕೆಲಸಕ್ಕೆ ಬರುವವರಿಗೆ ಮೊದಲನೇ ದಿನವೇ ತಿಂಡಿ ಕೊಟ್ಟು ಊಟ ಮಾಡಿಸಿ ಕಳಿಸುವುದು. ನಮ್ಮ ಕೆಲಸಗಾರರನ್ನು ನಾವು ನೌಕರರೆಂದು ತಿಳಿಯುವುದೇ ಇಲ್ಲ. ನಮ್ಮವರೇ, ನಮ್ಮ ಆತ್ಮೀಯರೇ ಎಂದು ತಿಳಿಯುತ್ತೇವೆ."

ಎಂದು ನುಡಿದು ಆಕೆ ತನ್ನ ವಿಶಾಲ ನೇತ್ರಗಳ ಮೋಹಕತೆಯೆಲ್ಲವನ್ನೂ ಆತನ ಮೇಲೆ ಪ್ರಯೋಗಿಸತೊಡಗಿದಳು.

ಆಕೆ ನಿರೀಕ್ಷಿಸಿದಂತಹ ಪ್ರತಿಕ್ರಿಯೆ ಶಿವಮೂರ್ತಿಯಲ್ಲಾದುದು ಕಂಡು ಬರಲಿಲ್ಲ. ಆತನಿಗೆ ಪ್ರತಿಯಾಗಿ ಬೇರಾವ ಯುವಕರಾದರೂ ಅಲ್ಲಿದ್ದಲ್ಲಿ ಸಹಜವಾಗಿಯೆ ಆಕೆಯ ಕಡೆಗೆ ಆಕರ್ಷಿತರಾಗಬಹುದಾಗಿದ್ದಿತು. ಆದರೆ ಶಿವ ಮೂರ್ತಿ....ಆಕೆಯ ಬಗ್ಗೆ ಆತನಿಗೆ ಆಕರ್ಷಣೆಯೆನ್ನಿಸುವುದು ಸಾಧ್ಯವಿರ ಲಿಲ್ಲ. ಆತನ ಮೈ-ಮನಗಳೆರಡೂ ಬೇಸರಗೊಂಡಿದ್ದುವು. ಬೇಗ ಮನೆಗೆ ಹೋಗಿ ಬಿದ್ದುಕೊಂಡು ಬಿಡಬೇಕೆಂಬುದೇ ಆತನ ಎಣಿಕೆಯಾಗಿದ್ದಿತು. ಅಲ್ಲಿ ಸರಸು ತನ್ನ ದಾರಿ ಕಾಯುತ್ತ ಕುಳಿತಿರಬಹುದು. ಇಲ್ಲಿ ತಾನು ಇವ ಳೊಂದಿಗೆ ಸರಸವಾಡುತ್ತ ವೇಳೆಗಳೆಯುವುದೇ ! ಊಟ ತೀರಿಸಿಕೊಂಡು ಹೋಗುವುದು....ಅಷ್ಟು ಹೊತ್ತಿಗೆ ಒಂಭತ್ತು ಗಂಟೆಯಾಗಬಹುದು. ಯಾರಿಗೆ ಗೊತ್ತು. ಹತ್ತು ಗಂಟೆಯಾದರೂ ಆದೀತು. ರಾತ್ರಿಯ ಹೊತ್ತು. ಆ ಪರ ದೇಶಿ ಹುಡುಗಿಯೊಂದನ್ನು ಬಿಟ್ಟರೆ ಬೇರಾರೂ ಮನೆಯಲ್ಲಿಲ್ಲ. ತಾನು.... ಲಲಿತಮ್ಮ ಇಬ್ಬರೇ....ಬೇಕೆಂತಲೇ ಅಂಥ ಪ್ರಸಂಗದಲ್ಲಿ ತನ್ನನ್ನು ಸಿಲುಕಿಸು ತ್ತಿರುವಳೇನೋ ಈಕೆ....ಇದ್ದರೂ ಇರಬಹುದು....ಹರಿಹರ ಸುಳ್ಳೇಕೆ ಹೇಳಿ ಯಾನು ತನ್ನೆದುರಿಗೆ ? ಆತ ಸುಳ್ಳು ಹೇಳಿರಬಹುದೆಂದಿಟ್ಟುಕೊಂಡರೂ ಈಕೆಯ ಈಗಿನ ನಡತೆಯೇನೂ ಸುಳ್ಳಾಡಲಾರದಲ್ಲ. ಇದೇ ದಿನ ತಮ್ಮ ಕಚೇರಿಗೆ ಕೆಲಸಕ್ಕೆ ಬಂದ ಅಪರಿಚಿತನೊಬ್ಬನಿಗೆ ಇಷ್ಟು ಆದರ....ಕೆಲಸಗಾರರ ರೆಲ್ಲ ಹೊರಟುಹೋದ ಬಳಿಕ ಆತನಿಗೆ ಉಪಾಹಾರ....ಮೈಸೂರು ಪಾಕು, ಉಪ್ಪಿಟ್ಟು, ಒಡೆ, ಬಟ್ಟಲು ತುಂಬಾ ತುಪ್ಪ....ಕೊಂಚವೂ ಸಂಕೋಚಕ್ಕೆಡೆ ಯಿಲ್ಲದ ನಿಕಟ ಸಾನ್ನಿಧ್ಯ....ಒಯ್ಯಾರದ ವರ್ತನೆ....ಅನವಶ್ಯಕ ಮುಗು ಳ್ನಗೆ ಓರೆನೋಟ....ಮೋಹದ ಬಲೆಯನ್ನೊಡ್ಡಿ, ಓರೆನೋಟದ ಬಾಣ ಬಿಟ್ಟು ತನ್ನನ್ನು ಅಂಕೆಗೆ ತಂದುಕೊಳ್ಳಲು ಈಕೆ ಪ್ರಯತ್ನಿಸುತ್ತಿರುವುದರಲ್ಲಿ ಸಂದೇಹವೇನೂ ಇಲ್ಲ....ಸಂದೇಹವೇನೂ ಇಲ್ಲ....

“ಇನ್ನಿಷ್ಟು ಉಪ್ಪಿಟ್ಟು ಬೇಕೇ ?” ಎಂದು ಹೇಳುತ್ತಾ ಆಕೆ ಚಮಚ ವನ್ನೆತ್ತಿ ಆತನ ತಟ್ಟೆಗೆ ನೀಡಲು ಮುಂದುವರಿದಾಗ—“ಸಾಕು, ಸಾಕು,” ಎಂದು ಆತ ಎಡಗೈ ಮುಂದೆ ತಂದ. ಆತನ ಕೈಗೆ ಆಕೆಯ ಕೈ ತಾಕಿತು.

ಒಡನೆಯೆ ಕ್ರೋಧಾಂಚಿತಳಾದವಳಂತೆ ನಟಿಸುತ್ತಾ ಆಕೆ ಕೊರಳನ್ನು ಸೊಗಸಾಗಿ ಹೊರಳಿಸಿ ಮತ್ತೊಂದು ಬಾಣಪ್ರಯೋಗ ಮಾಡಿದಳು. ಅದರಿಂದ ಶಿವಮೂರ್ತಿಯು ಮೇಲಾದ ಪರಿಣಾಮವನ್ನು ನಿರುಕಿಸುತ್ತಿದ್ದ ಹಾಗೆ ಹೊರಬಾಗಿಲಿನ ಮೇಲೆ ಸಪ್ಪಾಗುವುದು ಕೇಳ ಬಂದಿತು.

"ಶಾಸ್ತ್ರಿಗಳು ಬಂದರು ಅಮ್ಮಾವರೆ," ಎಂದು ಪರದೇಶಿ ಕೂಗಿದಳು.

ಲಲಿತಮ್ಮ ಗೊಣಗಿಕೊಳ್ಳುತ್ತ ಎದ್ದು ನಿಂತಳು. ತಿಂಡಿ ತಿನ್ನುವುದು ಮುಗಿದಿದ್ದಿತಾದುದರಿಂದ, ಕೈ ತೊಳೆದುಕೊಂಡು ಶಿವಮೂರ್ತಿಯೂ ಎದ್ದು ನಿಂತ. ಅಡುಗೆಯಮನೆಯನ್ನು ಬಿಟ್ಟು ಇಬ್ಬರೂ ಹೊರಗಡೆ ಬಂದರು. ಅಷ್ಟರಲ್ಲಿ ಪರದೇಶಿ ಮುಂದಾಗಿ ಬಾಗಿಲು ತೆಗೆದಿದ್ದಳು.

ಎಡಗೈಯಲ್ಲಿ ಒಂದು ಚೀಲವನ್ನೂ, ಬಲಗೈಯಲ್ಲಿ ಕೊಡೆಯನ್ನೂ ಹಿಡಿದುಕೊಂಡು ಗಂಗಾಧರಶಾಸ್ತ್ರಿ ಒಳಸೇರಿದ. ಶಿವಮೂರ್ತಿಯನ್ನು ಕಂಡು ಮುಗುಳ್ನಗೆ ತುಳುಕಿಸುತ್ತ—"ಓ, ನೀವೋ? ಆಗಲೆ ಚಾರ್ಜ್ ತೆಗೆದುಕೊಂಡಿರಿ ತಾನೆ ? ಬಹಳ ಒಳ್ಳೆಯದಾಯಿತು. ಬಹಳ ಒಳ್ಳೆಯದಾಯಿತು...." ಎಂದು ಹೇಳುತ್ತ ತನ್ನ ಕೊಟಡಿಗೆ ನುಗ್ಗಿ, ಕುರ್ಚಿಯ ಮೇಲೆ ದೊಪ್ಪನೆ ಕುಳಿತುಕೊಂಡು, ಶಲ್ಯದಿಂದ ಗಾಳಿ ಹಾಕಿಕೊಳ್ಳುತ್ತ "ಈ ರೈಲ್ವೆ ಪ್ರವಾಸ ಅಂದರೆ ನರಕದ ಪ್ರವಾಸವಿದ್ದ ಹಾಗೆ. ಶಕ್ತಿಯನ್ನೆಲ್ಲ ಹೀರಿಕೊಂಡುಬಿಡುತ್ತದೆ. ಮೈಯೆಲ್ಲಾ ನುಗ್ಗು ನುಗ್ಗಾಗಿದೆ. ರಾತ್ರಿ ಎಣ್ಣೆನೀರು ಹಾಕಿಕೊಂಡರೆ ಬದುಕಿಯೇನು. ಉಸ್ಸಪ್ಪಾ...." ಎಂದು ಉಸಿರು ಬಿಡುತ್ತ ಧ್ವನಿಯನ್ನು ಎತ್ತರಿಸಿ—"ಪರದೇಶೀ, ಲೇ ಪರದೇಶೀ, ನೀರೊಲೆಗೆ ಉರಿ ಹಾಕು. ಅರ್ಧ ಗಂಟೆಯೊಳಗಾಗಿ ಕೆಂಡದ ಹಾಗೆ ನೀರು ಕಾಯಿಸು. ಹೂಂ....ಬೇಗ....ಬೇಗ...." ಎಂದು ಕೂಗಿ ಹೇಳಿ ಮೇಜಿನ ಮೇಲಿದ್ದ ಪುಟ್ಟ ಕನ್ನಡಿಯನ್ನು ಕೈಗೆತ್ತಿಕೊಂಡು ಮುಖ ನೋಡಿಕೊಳ್ಳುತ್ತ, ಕೆನ್ನೆಗಳ ಮೇಲಿನ ಮೊಡವೆಗಳನ್ನು ಹಿಸುಕಿ ಕೆರೆದುಕೊಳ್ಳುತ್ತ, ನಿಂತುಕೊಂಡೇ ಇದ್ದ ಶಿವಮೂರ್ತಿಯನ್ನು ಕಂಡು—"ಕೂತುಕೊಳ್ಳಿರಿ. ಕೂತುಕೊಳ್ಳಿರಿ," ಎಂದು ಹೇಳಿದ.

ಶಿವಮೂರ್ತಿ ಕುಳಿತುಕೊಂಡ ಬಳಿಕ—"ಇವೊತ್ತೇ ಸೇರಿಕೊಂಡಂತಾಯಿತು ತಾನೆ ಕೆಲಸಕ್ಕೆ ? ಬಹಳ ಒಳ್ಳೆಯದಾಯಿತು. ಕೊಂಚ ತಡವಾಗಿದ್ದರೆ ಪ್ರಮಾದವಾಗುತ್ತಿತ್ತು. ಇನ್ನೂ ಇಬ್ಬರು ಮೂವರು ಇದೇ ಜಾಗಕ್ಕೆ

ಅರ್ಜಿ ಹಾಕಿಕೊಂಡಿದ್ದರು. ನಾಳೆ ಹೇಳುವುದಾಗಿ ಅವರಿಗೆ ತಿಳಿಸಿದ್ದೆ. ನೀವಿಂದು ಬರದಿದ್ದರೆ ನಾಳೆಯೆ ಅವರಲ್ಲೊಬ್ಬರನ್ನು ಸೇರಿಸಿಕೊಳ್ಳಬೇಕಾಗುತ್ತಿತ್ತು. ಇನ್ನೂ ಒಂದು ಸಂತೋಷದ ಸುದ್ದಿ. ನಿಮ್ಮ ಶ್ರೀಮತಿಯವರಿಗೂ ಕೆಲಸ ಸಿಕ್ಕಂತಾಯಿತು. ಇಂದೇ ಅವೆಲ್ಲ ನಿರ್ಧಾರವಾಯಿತು. ನಾಳೆಯಿಂದ ಅವರಿಗೂ ಚಾರ್ಜ್ ತೆಗೆದುಕೊಳ್ಳಲು ಹೇಳಿರಿ. ನೂರು ರೂಪಾಯಿ ಸಂಬಳ ಅವರಿಗೆ....ನಿಮಗೆ...." ಎಂದು ನುಡಿದು ಶಾಸ್ತ್ರಿ ಕೊಂಚ ತಡೆದು ನಿಂತು— "ನಿಮಗೆ....ನಿಮಗೆಷ್ಟು ಸಂಬಳ ಕೊಡಬೇಕು ಹೇಳಿರಿ ?" ಎಂದ.

"ಹರಿಹರರಿಗೆಷ್ಟು ಕೊಡುತ್ತಿದ್ದಿರಿ ?"

ಹರಿಹರ ಎಂಬ ಹೆಸರು ಕಿವಿಗೆ ಬೀಳುತ್ತಲೂ ಶಾಸ್ತ್ರಿಯ ಹುಬ್ಬು ಗಂಟಿಕ್ಕಿಕೊಂಡುವು. "ಆ ಕೃತಘ್ನನ ಹೆಸರನ್ನು ಇನ್ನೊಮ್ಮೆ ನನ್ನೆದುರಿಗೆ ತೆಗೆಯಬೇಡಿರಿ. ಅವನಿಗಾಗಿ ನಾನೆಷ್ಟು ಕಷ್ಟಪಟ್ಟೆ....ಹೊಟ್ಟೆಗೆ ಗತಿಯಿಲ್ಲದೆ ಬೀದಿಯಲ್ಲಿ ಬಿದ್ದಿದ್ದವನನ್ನು ಕರೆದುತಂದು ಐವತ್ತು ರೂಪಾಯಿ ಸಂಬಳ ಗೊತ್ತುಮಾಡಿ ಕಾರಕೂನನನ್ನಾಗಿ ಇಟ್ಟುಕೊಂಡೆ. ಪಾಪಿ, ಕೊನೆಗೂ ಕೈಕೊಟ್ಟ. ಈಗ ನನಗೆ ಪ್ರತಿಸ್ಪರ್ಧಿಯಾಗಿ ನಿಂತು ಪೇಪರು ಹೊರಡಿಸುತ್ತಾನಂತೆ. ಪೇಪರು ಹೊರಡಿಸುವ ಯೋಗ್ಯತೆಯೇ ಆತನದು....ಏನು ಬರೆಯಲು ಬರುತ್ತದೆ ? ಏನು ಪಾಂಡಿತ್ಯವಿದೆ ? ಏನಿದೆ ?"

ಶಿವಮೂರ್ತಿ ಮೌನವಾಗಿ ಕುಳಿತಿದ್ದ.

"ಹೋಗಲಿ ಆ ಮಾತು. ನಿಮ್ಮ ಸಂಬಳದ ವಿಷಯ ಬಂದಿದ್ದಿತಲ್ಲ ? ಹರಿಹರನಿಗೆ ನಾವು ಕೊಡುತ್ತಿದ್ದುದೆಷ್ಟು ಎಂಬುದು ಗೊತ್ತಾಯಿತಲ್ಲ. ಸದ್ಯ ನಿಮಗೂ ಅಷ್ಟರಿಂದಲೇ ಪ್ರಾರಂಭಿಸೋಣ. ಆಮೇಲೆ ನಿಮ್ಮ ಕೆಲಸ ನೋಡಿಕೊಂಡು ಮತ್ತೆ ಹೆಚ್ಚಿಸೋಣ. ಆಗಬಹುದೇ ?"

ಶಿವಮೂರ್ತಿ ಆಗಲೂ ಮೌನವಾಗಿದ್ದ. ಶಾಸ್ತ್ರಿಗೆ ಏನು ಉತ್ತರವೀಯಬೇಕೆಂಬುದೇ ಹೊಳೆಯದಂತಾಗಿದ್ದಿತು.

"ಸರಿ, ಹಾಗಾದರೆ. ನಾನು ಹೊರಡುತ್ತೇನೆ. ನಾಳೆ ಬರುತ್ತೇನೆ," ಎಂದು ಆತ ಎದ್ದುನಿಂತ.

"ನಾಳೆ ಬರುವಾಗ ನಿಮ್ಮವರನ್ನೂ ಕರೆದುತರಲು ಮರೆಯಬೇಡಿರಿ."

"ಆಗಲಿ."

ಆತ ಮನೆಗೆ ಬಂದಾಗ ಎಂಟುಗಂಟೆಯಾಗುತ್ತ ಬಂದಿತ್ತು. ಸರಸು ಮನೆಯಲ್ಲಿರಲಿಲ್ಲ. ಆತನ ಕೈಗೆ ಬೀಗದ ಕೈ ಕೊಡುತ್ತ ಗೋದಾವರಿಬಾಯಿ ಹೇಳಿದಳು :

"ಸಿನಿಮಾಕ್ಕೆ ಹೋಗಿಬರುತ್ತೇನೆಂದು ಹೇಳಿ ಹೋದರು. ಈಗ ಬಂದಾರು."

ಅಟ್ಟದ ಹತ್ತು ಮೆಟ್ಟಲುಗಳನ್ನೇರಿ ಬರಬೇಕಾದರೆ ತುಂಬ ನಿಶ್ಯಕ್ತಿ ಯಾದಂತೆ ತೋರಿತು ಶಿವಮೂರ್ತಿಗೆ. ಬಾಗಿಲು ತೆರೆದು ಒಳಕ್ಕೆ ಬಂದು ದೀಪವನ್ನಂಟಿಸಿ ಹಾಸುಗೆಯ ಮೇಲೆ ಬಿದ್ದುಕೊಂಡ. ಆತನ ಮೈ-ಮನಗ ಳೆರಡೂ ಸೋತುಹೋಗಿದ್ದವು.

ಒಂಭತ್ತೂವರೆ ಗಂಟೆಗೆ ಸರಸು ಬಂದು ನೋಡಿದಾಗ ಆತ ಗಾಢನಿದ್ರೆ ಯಲ್ಲಿ ಮುಳುಗಿಹೋಗಿದ್ದುದು ಕಾಣಿಸಿತು.

ಬಾಗಿಲಿಗೆ ಚಿಲಕ ಹಾಕಿ ಆಕೆ ಆತನ ಹತ್ತಿರ ಬಂದು ರಗ್ಗನ್ನೆಳೆದು ಆತನ ಮೈಮೇಲೆ ಸರಿಯಾಗಿ ಹೊದೆಯಿಸಿ, ತಾನೂ ಪಕ್ಕದಲ್ಲಿ ಪವಡಿಸಿದಳು. ಆತನಿಗೆ ಕೊಂಚ ಎಚ್ಚರವಾಯಿತು. ಕಣ್ಣುಗಳನ್ನು ಅರ್ಧ ತೆರೆದು—"ಯಾರ ವರು ?" ಎಂದ.

"ನಾನು....ಸರಸೂ."

"ಓ, ನೀನೇ....ಯಾವಾಗ ಬಂದೆ ?" ಎಂದಿಷ್ಟೇ ನುಡಿದು ಆತ ಮತ್ತೆ ನುಗ್ಗುಲಾಗಿ ಮಲಗಿಕೊಂಡ. "ಪಾಪ, ಬಹಳ ದಣಿದಿರಬೇಕು. ಅವರು ಬಂದಾಗ ನಾನು ಮನೆಯಲ್ಲೂ ಇರಲಿಲ್ಲ. ಇನ್ನು ಮೇಲೆ ಅವರನ್ನು ಬಿಟ್ಟು ಸಿನಿಮಾಗೆ ಹೋಗುವುದನ್ನು ನಿಲ್ಲಿಸಬೇಕು. ಅವರೆಷ್ಟು ನೊಂದುಕೊಂಡರೋ ಏನೊ...." ಎಂದು ಹಳಹಳಿಸುತ್ತ ಸರಸುವೂ ಹೊರಳಿ ಮಲಗಿದಳು.

ಆದರೆ ಆ ರಾತ್ರಿ ಆಕೆಗೆ ಬಲು ಹೊತ್ತಿನ ವರೆಗೆ ನಿದ್ರೆ ಹತ್ತಲಿಲ್ಲ. ಅಂದು ಕಂಡ ಸಿನಿಮಾದಲ್ಲಿನ ಪ್ರಣಯ ದೃಶ್ಯಗಳು ಮತ್ತೆ ಮತ್ತೆ ಆಕೆಯ ಒಳದೃಷ್ಟಿಯೆದುರಿಗೆ ಮೂಡುತ್ತಲಿದ್ದುವು.

[೨೦]

"ಸರ್ವಧರ್ಮ ಸಮ್ಮೇಳನ. ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀ ಸಿದ್ಧವೀರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ. ಇಂದು ಸಾಯಂಕಾಲ ಆರು ಗಂಟೆಗೆ, ನಗರಸಭೆಯ ಅಟ್ಟದ ಮೇಲೆ."

ದಿನ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನೋದಿ ಮುಗಿಸಿ ಸರಸು ಗೆಳತಿಯ ಕಡೆಗೆ ಹೊರಳಿ—"ಅಂತೂ ಇಪ್ರೊತ್ತಿಲ್ಲ ಬಹಳ ವಿಜೃಂಭಣೆಯಿಂದ ಕಾಣುತ್ತದಲ್ಲ ಲೀಲಾವತೀ?" ಎಂದಳು.

"ನಮ್ಮ ಶಾಸ್ತ್ರಿಗಳ ವ್ಯವಸ್ಥೆ ಅಂದಮೇಲೆ ಕೇಳಬೇಕೇ! ಕರ್ನಾಟಕದ ಯಾವ ನಗರದಲ್ಲೂ ಎಂದೆಂದೂ ನಡೆದಿರಲಾರದಂಥ ಸಮ್ಮೇಳನ ಇಂದು ಇಲ್ಲಿ ನಡೆಯುತ್ತದೆ," ಎಂದಳು ಲೀಲಾವತಿ.

"ಸ್ವಾಮಿಗಳು ಧರ್ಮದ ಬಗೆಗೂ ಭಾಷಣ ಮಾಡುತ್ತಾರೆಯೆ?"

"ಅದೇನ್ರಿ, ಹೀಗೆ ಕೇಳುತ್ತೀರಿ? ನಮ್ಮ ಸ್ವಾಮಿಗಳೆಂದರೆ ಅಂಥಿಂಥ ಸ್ವಾಮಿಗಳಲ್ಲ. ಇವರಷ್ಟು ವಿದ್ವಾಂಸರಾದ ಸ್ವಾಮಿಗಳು ಕರ್ನಾಟಕದಲ್ಲೇ ಇನ್ನೊಬ್ಬರಿಲ್ಲ. ಧರ್ಮ, ರಾಜಕಾರಣ, ಸಾಹಿತ್ಯ,ಯಾವುದಾದರೇನು, ನೀರು ಕುಡಿದ ಹಾಗೆ ಮಾತಾಡಬಲ್ಲರು. ನೀವಿನ್ನೂ ಅವರ ಭಾಷಣ ಕೇಳಿಲ್ಲವೆ?"

"ಇಲ್ಲವಮ್ಮ. ಅವರನ್ನು ನಾನು ನೋಡಿದ್ದೂ ಕಡಿಮೆಯೆ."

"ಯಾಕೆ? ನಿಮ್ಮೂರಲ್ಲೇ ಇರುವರಲ್ಲ?"

"ನಾನು ಅಲ್ಲಿದ್ದಾಗ ಶ್ರಾವಣ ಮಾಸ. ಶಾಸ್ತ್ರಿಗಳ ಪ್ರವಚನ ನಡೆಯುತ್ತಿತ್ತು. ಸ್ವಾಮಿಗಳು ಭಾಷಣ ಮಾಡುವ ಸಂದರ್ಭವೇ ಬರಲಿಲ್ಲ. ಹೌದೇ, ಲೀಲಾವತಿ, ಅಷ್ಟು ಚೆನ್ನಾಗಿ ಮಾತನಾಡುವರೇ ಸ್ವಾಮಿಗಳು?"

"ಮಾತಿನಲ್ಲಿ ಅವರನ್ನು ಮೀರಿಸಬಲ್ಲವರು ಇಂದು ಕರ್ನಾಟಕದಲ್ಲೇ ಇನ್ನೊಬ್ಬರಿಲ್ಲ. ಅವರ ಮಾತೆಂದರೆ ಮಾತು. ಘಟಪ್ರಭೆಯ ತಡಸಲಿನ ಹಾಗೆ ನೋಡವ್ವ ಅದು. ಬೇರಾರಿಗೂ ಅದು ಸಾಧ್ಯವಿಲ್ಲ. ಒಂದೊಂದು ವಿಷಯದ ಮೇಲೆ ಎರಡೆರಡು ಮೂರು ಮೂರು ಗಂಟೆಗಳ ವರೆಗೆ ಒಂದೇ ಸಮನೆ ಮಾತಾಡುತ್ತಾರೆ. ಆದರೂ ಕೇಳುವವರಿಗೆ ಬೇಸರವೆಂಬುದಿರುವ

ವಿಲ್ಲ. ಎಷ್ಟು ಕೇಳಿದರೂ ಇನ್ನೂ ಕೇಳಬೇಕೆನ್ನಿಸುತ್ತದೆ. ಅಂಥಾ ಪೋಷಕ ವಾಣಿ ಅವರದ್ದು."

"ನೀವೆಲ್ಲಿ ಕೇಳಿದಿರಿ ಅವರ ಮಾತನ್ನು ?"

"ನಿಮ್ಮೂರಿಗೆ ಹೋಗುವದಕ್ಕೆ ಮುಂಚೆ ಇಲ್ಲೇ ಈ ಆಶ್ರಮದಲ್ಲೇ ಇದ್ದರಲ್ಲ ಸ್ವಾಮಿಗಳು. ದಿನವೂ ಸಾಯಂಕಾಲ ಮಕ್ಕಳನ್ನೆಲ್ಲ ಮುಂದೆ ಕೂರಿಸಿ ಕೊಂಡು ಅವರಿಗೆ ಅರ್ಥವಾಗುವಂಥ ಸುಲಭ ಭಾಷೆಯಲ್ಲಿ ಬೇರೆ ಬೇರೆ ವಿಷಯ ಹೇಳುತ್ತಿದ್ದರು. ನಾನೂ ಒಂದು ಕಡೆಗೆ ಕುಳಿತು ಕೇಳುತ್ತಿದ್ದೆ."

"ಊರಿನ ಜನರೂ ಬರುತ್ತಿದ್ದರೇ ?"

"ಪ್ರತಿ ಸೋಮವಾರವೂ ಹಿಂಡುಗಟ್ಟ ಜನ ಸೇರುತ್ತಿತ್ತು. ಗಂಡಸರು, ಹೆಂಗಸರು, ಹುಡುಗರು ಎಲ್ಲರೂ. ಈ ಊರವರಿಗೆ ನಮ್ಮ ಸ್ವಾಮಿಗಳೆಂದರೆ ಬಲು ಪ್ರೀತಿ. ಅವರು ಇಲ್ಲಿಂದ ಹೊರಟು ನಿಂತಾಗ ಊರೆಲ್ಲ ಮರಮರ ಮರುಗಿತು."

"ಅಂಥ ಪ್ರೀತಿಯೆ! ಹಾಗಾದರೆ ಇವೊತ್ತು ಅವರು ಬಂದೊಡನೆ ಸಂಭ್ರಮದಿಂದ ಸ್ವಾಗತಿಸುವರೆಂದಂತಾಯಿತಲ್ಲ ?"

"ನೀವೇ ನೋಡುವಿರಂತೆ. ಅವರನ್ನು ಊರಿನ ಅಗಸೆಯಿಂದ ಮೆರೆ ವಣಿಗೆಯಲ್ಲಿ ಕರೆದು ತರುವರು."

"ಮೆರೆವಣಿಗೆಯೂ ಆಗುವದೇ! ಎಷ್ಟು ಗಂಟೆಗೆ ?"

"ಸ್ವಾಮಿಗಳು ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ ಕಾರಿನಲ್ಲಿ ಬರುತ್ತಾರೆ. ಆಗಲೇ ಮೆರೆವಣಿಗೆಗಾರಂಭ—ನಗರಸಭೆಯವರೆಗೂ. ಅನಂತರ ಸಮ್ಮೇಳನ."

"ಇಲ್ಲಿಗೂ ಬರುತ್ತಾರೆಯೆ ?"

"ಬರದಿರುತ್ತಾರೆಯೆ ? ರಾತ್ರಿ ಇಲ್ಲಿಯೆ ಬಿಡಾರಕ್ಕೆ ವ್ಯವಸ್ಥೆಯಾಗಿದೆ."

"ಓ, ಹೀಗೇನು ?" ಎಂದು ನುಡಿದು ಸರಸು ಸುಮ್ಮನಾದಳು.

"ನಿಮಗೆ ಸ್ವಾಮಿಗಳ ಪರಿಚಯವಿಲ್ಲವೇ ಸರಸಮ್ಮ ?" ಎಂದು ಕೇಳಿ ದಳು ಲೀಲಾವತಿ.

"ಒಂದೆರಡು ಸಲ ನೋಡಿದ್ದೇನೆ. ಅಂಥ ವಿಶೇಷ ಪರಿಚಯವೇನೂ ಇಲ್ಲ."

"ಒಂದೆರಡು ಸಲ ನೋಡಿದರೆ ಸಾಲದೇ ? ನಮ್ಮ ಸ್ವಾಮಿಗಳದು ತುಂಬ ವಿಶಾಲ ಹೃದಯ. ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣುತ್ತಾರೆ. ಆತ್ಮೀಯರು ಪರಕೀಯರು ಎಂಬ ಭೇದಭಾವ ಅವರ ಹತ್ತಿರ ಸುಳಿಯುವದಿಲ್ಲ. ಎಲ್ಲರೂ ನಮ್ಮವರೇ ಎಂಬ ಉದಾತ್ತ ಭಾವ. ಶ್ರೀಮಂತರಿರಲಿ, ಬಡವರಿರಲಿ, ಹೆಂಗಸರಿರಲಿ, ಗಂಡಸರಿರಲಿ—ಎಲ್ಲರ ಬಗೆಗೂ ಒಂದೇ ಬಗೆಯ ಪ್ರೀತಿ. ಅನೇಕ ಸನಾತನಿ ಸ್ವಾಮಿಗಳ ಹಾಗೆ ಹೆಂಗಸರನ್ನು ಕಂಡರೆ ಬೀಳುಗಳೆಯುವ ಸಂಕುಚಿತ ವೃತ್ತಿಯೂ ಅವರದಲ್ಲ. ಇಂಥ ವಿಚಾರಗಳಲ್ಲೆಲ್ಲ ನಮ್ಮ ಸ್ವಾಮಿಗಳು ಬಹಳ ಮುಂದುವರೆದವರು. ನನ್ನನ್ನು ಮೊದಲ ಸಲ ಕಂಡಾಗಲೇ ಹೇಗೆ ಆದರ ತೋರಿಸಿದರೆನ್ನುತ್ತೀರಿ! ನನಗೆ ಈ ಕೆಲಸ ಸಿಕ್ಕಿದ್ದೂ ಅವರ ಕೃಪೆಯಿಂದಲೇ ಅನ್ನಬಹುದು. ಹಾಗೆ ಹೇಳಬೇಕಾದರೆ ನಿಮಗೂ ಇಂಥ ಒಳ್ಳೆಯ ಕೆಲಸ ಸಿಕ್ಕಿದ್ದು ಅವರ ಕೃಪೆಯಿಂದಲೇ...."

"ಅವರ ಕೃಪೆಯಿಂದ ?"

"ಹೌದು. ಸ್ವಾಮಿಗಳ ಕೃಪೆಯಿಂದ. ಶಾಸ್ತ್ರಿಗಳು ಈ ಅನಾಥ ಬಾಲಿಕಾಶ್ರಮದ ಕಾರ್ಯದರ್ಶಿಗಳೆಂಬುದೇನೊ ನಿಜ. ಆದರೆ ಅವರ ಕೈಯಲ್ಲಿ ಅಷ್ಟೊಂದು ಅಧಿಕಾರವಿಲ್ಲ. ಆಶ್ರಮಕ್ಕೆ ಕಾಯಂ ನಿಧಿ ಕೂಡಿಸಿ ಕೊಟ್ಟು ಸಂಸ್ಥೆ ಯಾವ ತೊಂದರೆಯೂ ಇಲ್ಲದೆ ನಡೆದುಕೊಂಡು ಬರುವಂತೆ ಮಾಡಿದವರು ಸ್ವಾಮಿಗಳೇ. ಅಂತೆಯೆ ಅಧಿಕಾರವೆಲ್ಲ ಅವರ ಕೈಯಲ್ಲಿರಬೇಕಾದ್ದು ಸ್ವಾಭಾವಿಕ. ನಿಮಗೆ ಗೊತ್ತಿಲ್ಲವೆ ಸರಸಮ್ಮ, ಒಂದು ವಾರದ ಕೆಳಗೆ ನೀವು ಈ ಕೆಲಸಕ್ಕೆ ಸೇರುವುದಕ್ಕೆ ಮೊದಲು ಶಾಸ್ತ್ರಿಗಳು ಊರಿಗೆ ಹೋಗಿದ್ದರಲ್ಲ—ಅವರು ಹೋದದ್ದು ಸ್ವಾಮಿಗಳನ್ನು ಕಾಣುವದಕ್ಕಾಗಿಯೆ. ಪತ್ರ ಬರೆದು ಉತ್ತರಕ್ಕಾಗಿ ಕಾಯುತ್ತ ಕುಳಿತರೆ ತಡವಾಗುವದೆಂದು ತಿಳಿದು ತಾವೇ ಸ್ವತಃ ಹೋಗಿ ಬಂದರು. ನೀವು ಕಷ್ಟದಲ್ಲಿರುವ ವಿಚಾರ ತಿಳಿಯುತ್ತಲೂ ಸ್ವಾಮಿಗಳು ಒಮ್ಮೆಲೆ ಒಪ್ಪಿಗೆ ಕೊಟ್ಟರಂತೆ."

"ಇದನ್ನೆಲ್ಲ ಶಾಸ್ತ್ರಿಗಳೇ ಹೇಳಿದರೇನು ನಿಮಗೆ ?"

"ಹೌದು. ಬೇರೆ ಯಾರು ಹೇಳಬೇಕು ? ಸ್ವಾಮಿಗಳ ಹತ್ತಿರ ಹೋಗುವದಕ್ಕೆ ಮೊದಲೂ ಶಾಸ್ತ್ರಿಗಳು ಇಲ್ಲಿಗೆ ಬಂದು ಎಲ್ಲವನ್ನೂ ಹೇಳಿದ್ದರು. ಅಲ್ಲಿಂದ ಬಂದ ಮೇಲೂ ಬಂದಿದ್ದರು."

"ದಿನವೂ ಬರುವಂತಿದೆಯಲ್ಲ ಶಾಸ್ತ್ರಿಗಳು?"

"ಕಾರ್ಯದರ್ಶಿಗಳೆಂದ ಮೇಲೆ ಬರಲೇಬೇಕಾಗುವದಲ್ಲ ಸರಸಮ್ಮ? ಪಾಪ, ಅವರಿಗೆ ಎಷ್ಟೊಂದು ಹೊಣೆಗಾರಿಕೆಗಳು....ಎಲ್ಲವನ್ನೂ ಹೇಗೆ ನಿರ್ವಹಿಸಿಕೊಂಡು ಹೋಗುವರೋ ಎಂದು ಆಶ್ಚರ್ಯ ನನಗೆ. ಒಳ್ಳೆ ಗಟ್ಟಿಗರು ನಮ್ಮ ಶಾಸ್ತ್ರಿಗಳು."

"ನಿಜ....ನಿಜ...."

"ಸ್ವಾಮಿಗಳೂ ಅಷ್ಟೆ. ಒಂದು ಕೆಲಸಕ್ಕೆ ನಿಂತರೆಂದರೆ ಅದು ಮುಗಿಯುವ ತನಕ ಬಿಡುವೇ ಇಲ್ಲದೆ ದುಡಿಯುತ್ತಾರೆ. ಈ ಸರ್ವಧರ್ಮ ಸಮ್ಮೇಳನದ ಕಲ್ಪನೆ ಹೊರಟದ್ದೂ ಅವರಿಂದಲೇ. ಇಂದಿನ ಪರಿಸ್ಥಿತಿಯಲ್ಲಿ ಇಂಥ ಸಮ್ಮೇಳನಗಳು ಊರೂರಿಗೂ ನಡೆಯಬೇಕೆಂದು ಅವರ ಅಭಿಪ್ರಾಯ. ಜಾತಿಜಾತಿಗಳಲ್ಲಿ ಬೆಳೆದಿರುವ ವೈಮನಸ್ಯ ಇದರಿಂದಾಗಿ ದೂರವಾದೀತು. ಎಲ್ಲ ಜಾತಿಗಳವರೂ ಧರ್ಮಗಳವರೂ ಅಣ್ಣ ತಮ್ಮಂದಿರಂತೆ ಕೂಡಿ ನಡೆದಾರು. ಇವೊತ್ತಿನ ಸಮ್ಮೇಳನದ ವೈಶಿಷ್ಟ್ಯವೆಂದರೆ ಇದೇ. ಎಲ್ಲ ಜಾತಿಯವರೂ ಮತದವರೂ ಇಂದು ಭಾಷಣ ಮಾಡುತ್ತಾರೆ. ಬ್ರಾಹ್ಮಣರು, ವೀರಶೈವರು, ಮುಸ್ಲಿಮರು, ಕ್ರೈಸ್ತರು, ಜೈನರು....ಅರ್ಥಾತ್ ಎಲ್ಲ ಜಾತಿಯ ಜನರೂ ಒಂದು ಕಡೆ ಸೇರಲು ಸಾಧ್ಯವಾಗುತ್ತದೆ. ಹೇಗಿದೆ ಕಲ್ಪನೆ! ಅದ್ಭುತವಾಗಿದೆಯಲ್ಲವೆ, ಸರಸಮ್ಮ?"

"ಹೌದು, ಹೌದು. ಇಂಥ ಸಮ್ಮೇಳನಗಳು ಹಿಂದೆಂದೂ ನಡೆದಿಲ್ಲವಷ್ಟೆ?"

"ಎಲ್ಲಿ ನಡೆಯುತ್ತವೆ? ನಡೆಸುವವರಾದರೂ ಯಾರು? ಈ ಸಮ್ಮೇಳನ ನಡೆದ ಬಳಿಕ ಎಲ್ಲ ಕಡೆಗೂ ಹೀಗೇ ಸುರುವಾಗುವದು ಖಂಡಿತ. ನಮ್ಮ ಸ್ವಾಮಿಗಳೇ ಈ ಹೊಸ ವಿಚಾರದ ಬೀಜ ಬಿತ್ತಿದಂತಾಗುವದು. ಅದರೊಂದಿಗೆ ಅವರ ಕೀರ್ತಿ ಕರ್ನಾಟಕದಲ್ಲೆಲ್ಲ ಪಸರಿಸುವುದು. ಇನ್ನು ಕೆಲವು ದಿನಗಳಲ್ಲೇ ಅವರು ಅಖಿಲ ಕರ್ನಾಟಕದ ಮುಖಂಡರಾಗುವರು. ಒಂದೆರಡು ವರ್ಷಗಳಲ್ಲಿ ಹಿಂದುಸ್ಥಾನದ ಧಾರ್ಮಿಕ ಮುಖಂಡರೂ ಆದಾರು."

ಧಾರ್ಮಿಕ ಮುಖಂಡರು....

ಇರಲಿಲ್ಲ. ಧಾರ್ಮಿಕ ಮುಖಂಡರು ! ಆ ಮಾತು ಹಾಸ್ಯಾಸ್ಪದವಾದುದೆಂದೇ ಆಕೆಗೆನ್ನಿಸಿತು. ಧಾರ್ಮಿಕ ಮುಖಂಡರಾಗಬೇಕಾದರೆ ಅಂತಹದೊಂದು ವ್ಯಕ್ತಿತ್ವ ಬೇಕು. ಎಲ್ಲಕ್ಕೂ ಮೊದಲು ಆ ವ್ಯಕ್ತಿ ಪೂರ್ಣ ವಿರಕ್ತನಾಗಿರಬೇಕು. ಸಿದ್ಧವೀರಸ್ವಾಮಿಗಳು ವಿರಕ್ತರೆಂಬುದನ್ನು ಆಕೆ ಒಪ್ಪಲು ಸಾಧ್ಯವಿರಲಿಲ್ಲ. ವಿರಕ್ತರ ಲಕ್ಷಣಗಳಲ್ಲಿ ಒಂದೂ ಸಹ ಆ ಸ್ವಾಮಿಯಲ್ಲಿದ್ದ ಹಾಗಿರಲಿಲ್ಲ. ಕೆಲದಿನಗಳಿಗೆ ಹಿಂದೆ ತಮ್ಮೂರಿನ ಮಠದಲ್ಲಿ 'ಪ್ರಭುಲಿಂಗಲೀಲೆ'ಯ ಪ್ರವಚನ ನಡೆದ ಕಾಲಕ್ಕೆ ಅವರು ತನ್ನ ಮೇಲೆ ಹರಿಬಿಟ್ಟಿದ್ದ ತೇಲು ನೋಟದ ನೆನಪಾಯಿತು ಸರಸೂಗೆ. ಮೋಹದಿಂದ ಮತ್ತವಾದಂತಿದ್ದ ಆ ತೇಲುನೋಟ....ಅದು ತನ್ನ ದೃಷ್ಟಿಯೊಂದಿಗೆ ಬೆರೆತಾಗ ತನ್ನ ಶರೀರದಲ್ಲೆಲ್ಲ ರೋಮಾಂಚನೆದ್ದಿದ್ದಿತು. ಎದೆ ಬಡಿದುಕೊಳ್ಳತೊಡಗಿದ್ದಿತು. ಅವರ ಬಗೆಗೆ ತನ್ನಲ್ಲಿ ಮೋಹವೂ ಹುಟ್ಟಿಕೊಂಡಿದ್ದಿತು....ಅವರ ಸ್ಥಿತಿಯೂ ತನ್ನಂತೆಯೆ ಆದ ಹಾಗೆ ತೋರುತ್ತಿತ್ತು....

"ವಿರಕ್ತಿಯ ಲಕ್ಷಣವೇ ಅದು ! ಧಾರ್ಮಿಕ ಮುಖಂಡರ ಲಕ್ಷಣವೇ?" ಎಂದು ತನ್ನಷ್ಟಕ್ಕೆ ತಾನೇ ಕೇಳಿಕೊಂಡಳು ಸರಸು.

"ನೀವೇನೇ ಹೇಳಿರಿ ಲೀಲಾವತಿ. ಅವರು ಧಾರ್ಮಿಕ ಮುಖಂಡರಾಗುವರೆಂಬ ಮಾತನ್ನು ಮಾತ್ರ ನಾ ಒಪ್ಪಲಾರೆ."

ಲೀಲಾವತಿ ಬೆಚ್ಚಿಬಿದ್ದು ಕೇಳಿದಳು : "ಅದೇನ್ರೀ, ಹೀಗನ್ನುತ್ತೀರಿ?"

ಸರಸು ಸಲುಗೆಯಿಂದ ಲೀಲಾವತಿಯ ಭುಜದ ಮೇಲೆ ಕೈಹಾಕಿ— "ಈಗ ನಾನಾಡುವ ಮಾತನ್ನು ಯಾರೆದುರಿಗೂ ಹೇಳುವದಿಲ್ಲವೆಂದು ಮಾತು ಕೊಟ್ಟರೆ ಹೇಳುತ್ತೇನೆ," ಎಂದಳು.

"ಇಲ್ಲ. ಹೇಳಿರಿ."

"ನಿಜಕ್ಕೂ ಹೇಳುವದಿಲ್ಲ, ಹೌದಲ್ಲವೆ ?"

"ಇಲ್ಲ. ಇಲ್ಲ. ಹೇಳಿರಿ."

"ನಿಮ್ಮ ಈ ಸ್ವಾಮಿಗಳು ನಿಜವಾಗಿಯೂ ವಿರಕ್ತರಾಗಿರಬಹುದೆಂದು ನನಗಂತೂ ಅನ್ನಿಸುವದಿಲ್ಲ ಬಿಡಿರಿ," ಎಂದು ಮೆಲ್ಲಗಿನ ಧ್ವನಿಯಲ್ಲಿ ನುಡಿದಳು ಸರಸು.

ಲೀಲಾವತಿ ಆಕೆಯನ್ನು ಓರೆನೋಟದಿಂದ ದಿಟ್ಟಿಸುತ್ತಾ—“ಅಂದರೆ ? ನೀವು ಹೇಳುವದು ಸರಿಯಾಗಿ ಅರ್ಥವಾಗಲಿಲ್ಲ ನನಗೆ,” ಎಂದಳು.

“ಇಷ್ಟು ಹೇಳಿದರೆ ತಿಳಿಯದೇ ! ಒಡೆದೇ ಹೇಳಬೇಕೇನೊ !”

“ನಿಜವಾಗಿಯೂ ನನಗೆ ತಿಳಿಯಲಿಲ್ಲ ಬಿಡಿರಿ,” ಎಂದು ಹುಸಿ ಅಜ್ಞಾನವನ್ನು ನಟಿಸಿದಳು ಲೀಲಾವತಿ.

“ನಿಮ್ಮ ಈ ಸ್ವಾಮಿಗಳು ನಿಜಕ್ಕೂ ಸ್ವಾಮಿಗಳ ಹಾಗಿರಲಾರರೆಂದೇ ನನಗನ್ನಿಸುತ್ತದೆ.”

“ಮತ್ತೆ ?”

“ವಿಶ್ವಾಮಿತ್ರ ಮೇನಕಾ ಕತೆ ಕೇಳಿಲ್ಲವೇ ನೀವು ?”

“ಓಹೊ, ಹೀಗಿದೆಯೇ ನಿಮ್ಮ ವಿಚಾರ !”

“ಏನೆನ್ನುತ್ತೀರಿ ? ನನಗೇನೊ ಈ ಬಗ್ಗೆ ಸಂಶಯವಿದೆಯವ್ವ. ನಮ್ಮೂರಿನಲ್ಲಿದ್ದಾಗ ಒಂದೆರಡು ಸಲ ಸ್ವಾಮಿಗಳನ್ನು ಸೂಕ್ಷ್ಮವಾಗಿ ನೋಡಿದಾಗ ಹೀಗೆ ಕಾಣಿಸಿತು....”

“ಅಂತೂ ಇಂಥ ವಿಷಯಗಳಲ್ಲಿ ಬಲು ಚದುರೆಯವ್ವ ನೀವು. ನಾನು ಏನೋ ಅಂತ ತಿಳಿದಿದ್ದೆ....”

“ಏನಂತ ? ಹಾಲು ಕುಡಿಯುವ ಹಸುಗೂಸು ಅಂತ ತಿಳಿದಿದ್ದಿರಾ ನನ್ನನ್ನು ?”

“ಹಾಗೇನೂ ಇಲ್ಲ. ನಿಮ್ಮ ಪುನರ್ವಿವಾಹದ ಕತೆಯನ್ನು ಶಾಸ್ತ್ರಿಗಳ ಬಾಯಿಂದ ಕೇಳಿದಾಗಲೇ ನೀವು ತುಂಬ ರಸಿಕರಿರಬೇಕೆಂದುಕೊಂಡಿದ್ದೆ. ಆದರೆ—ಈ ವಿಷಯದಲ್ಲಿ ಇಷ್ಟು ಪಳಗಿದವರೆಂದು ಮಾತ್ರ ತಿಳಿದಿರಲಿಲ್ಲ ಬಿಡಿರಿ ....ಸ್ವಾಮಿಗಳ ಗುಟ್ಟನ್ನು ಎಷ್ಟು ಬೇಗ ಕಂಡು ಹಿಡಿದಿದ್ದೀರಿ ! ನನಗಿಂತಲೂ ಸೂಕ್ಷ್ಮದೃಷ್ಟಿ ನೋಡಿರಿ ನಿಮ್ಮದು.”

“ಅಂದರೆ....ನಿಮಗೂ ಈ ಗುಟ್ಟು ಗೊತ್ತಿದೆಯೆನ್ನಿರಿ.”

ಸರಸುವಿನ ಕೆನ್ನೆಯ ಮೇಲೆ ಒಂದು ಮೃದುವಾದ ಏಟು ಹಾಕುತ್ತ ಲೀಲಾವತಿಯೆಂದಳು : “ ನಮ್ಮ ದೇವರ ಗುಟ್ಟು ನಮಗೆ ಗೊತ್ತಾಗುವದೇನು ತಡ ?”

“ನಿಮ್ಮ ದೇವರು ?”

"ಅಂದರೆ ನಮ್ಮ ಸ್ವಾಮಿಗಳೂ ಅಂತ. ನಿಮ್ಮೂರಿಗೆ ಬರುವ ಮೊದಲು ಅವರು ಈ ಆಶ್ರಮದಲ್ಲಿಯೆ ಇದ್ದರೆಂದು ಆಗಲೆ ಹೇಳಲಿಲ್ಲವೆ?"

"ನೀವೆಲ್ಲಿ ಇರುತ್ತಿದ್ದಿರಿ?"

"ಇನ್ನೆಲ್ಲಿರಲಿ? ಇಲ್ಲೇ--ಈಗ ಇರುವ ಕೋಣೆಯಲ್ಲೇ ಇದ್ದೆ. ಇಲ್ಲಿಗೆ ಬಂದಾಗಿನಿಂದ ಇಲ್ಲಿಯೆ ಇದ್ದೇನೆ. ನನಗೆ ಬೇರೆ ಯಾರಿದ್ದಾರೆ ಹೇಳಿರಿ. ಶಾಸ್ತ್ರಿಗಳು, ಸ್ವಾಮಿಗಳು ಇಬ್ಬರನ್ನು ಬಿಟ್ಟರೆ ನನಗಾರೂ ದಿಕ್ಕಿಲ್ಲ."

"ನಿಮ್ಮನ್ನಿಲ್ಲಿ ಶಾಸ್ತ್ರಿಗಳು ಕರೆದುತಂದರೇನು?"

"ಹೌದು. ನನ್ನ ಗಂಡ ಸತ್ತುಹೋದ ಮೇಲೆ ನಾನು ಅನಾಥೆಯಾಗಿದ್ದೆ. ತವರುಮನೆಯಲ್ಲಿ ಸ್ವಾಗತವಿರಲಿಲ್ಲ. ತಂದೆತಾಯಿ ಎಂದೋ ತೀರಿಹೋಗಿದ್ದರು. ಅಣ್ಣನ ಹೆಂಡತಿಗೆ ನನ್ನನ್ನು ಕಂಡರಾಗುತ್ತಿರಲಿಲ್ಲ. ಮಾವನ ಮನೆಯಲ್ಲಾದರೋ ನೆಗೆಣ್ಣಿ ನಾದಿನಿಯರ ಕಾಟ. ತಂಗಳು ರೊಟ್ಟಿ ತಿಂದು ಜೀವ ಹಿಡಿಯಬೇಕಾದ ಪ್ರಸಂಗ ಬಂದಿತ್ತು. ಬದುಕಿನಲ್ಲಿ ಯಾವ ಸುಖವೂ ಇರಲಿಲ್ಲ. ಇನ್ನೇನು, ಕೆರೆ ಬಾವಿ ನೋಡಿಕೊಳ್ಳಬೇಕು. ಆ ಸಮಯಕ್ಕೆ ದೇವದೂತ ಬಂದ ಹಾಗೆ ಶಾಸ್ತ್ರಿಗಳು ನಮ್ಮೂರಿಗೆ ಕೀರ್ತನಕ್ಕಾಗಿ ಬಂದರು. ಆ ದಿನ ನಮ್ಮ ಮನೆಗೇ ಊಟಕ್ಕೆ ಬಂದವರು ನನ್ನನ್ನು ನೋಡಿ ನನ್ನ ಬಗ್ಗೆ ವಿಚಾರಣೆ ಮಾಡಿದರು. ಮರುದಿನ ಹೊರಡುವಾಗ ಏಕಾಂತದಲ್ಲಿ ನನ್ನನ್ನು ಸಂಧಿಸಿ 'ನನ್ನೊಡನೆ ಬರುವಿಯಾ, ನಿನಗೊಂದು ಕೆಲಸ ಕೊಡಿಸುತ್ತೇನೆ, ಯಾರ ತೊಂದರೆಯೂ ಇಲ್ಲದಂತೆ ನೀನು ಸುಖವಾಗಿರಲು ಏರ್ಪಾಡು ಮಾಡುತ್ತೇನೆ' ಎಂದು ಹೇಳಿದರು. ಅವರ ಜೊತೆಗೆ ಹೊರಟರೆ ಮಾನ ಮರ್ಯಾದೆ ಬಿಟ್ಟು ಬಾಳಬೇಕಾಗುವದೆಂಬುದೇನೊ ಗೊತ್ತಿತ್ತು ನನಗೆ. ಆದರೆ ಮಾವನ ಮನೆಯಲ್ಲಿನ ಆ ಬದುಕಿನಲ್ಲಾದರೂ ಯಾವ ಮಾನವಿತ್ತು, ಏನು ಮರ್ಯಾದೆಯಿತ್ತು? ಅಲ್ಲಿ ನನ್ನನ್ನು ನಾಯಿಗಿಂತ ಕಡೆಯಾಗಿ ಕಾಣುತ್ತಿದ್ದರು. ಅಲ್ಲಿ ನಾಯಿಯಾಗಿರುವದಕ್ಕಿಂತ ಇಲ್ಲಿ ದಾಸಿಯಾಗಿರುವದೇ ಮೇಲೆಂದು ಹೊರಟುಬಿಟ್ಟೆ...."

"ಬೇರೆ ಮದುವೆಯಾಗಬಹುದಾಗಿದ್ದಿತಲ್ಲ?"

"ಬೇರೆ ಮದುವೆ!" ಲೀಲಾವತಿ ನಕ್ಕು ನುಡಿದಳು: "ಬೇರೆ ಮದುವೆ ಅಂತ ಅನ್ನುವದೇನೊ ಸುಲಭ ಸರಸಮ್ಮ. ನಿಮ್ಮಂಥ ರೂಪವತಿಯರಿಗೆ

ಮದುವೆಯೂ ಸುಲಭವಾಗಬಹುದು. ಆದರೆ....ಆದರೆ....ನನ್ನಂಥವಳನ್ನು ಯಾರು ಮದುವೆಯಾದಾರು ?”

“ಆಕೆ ಹೇಳುವದು ನಿಜ. ಈಕೆಯನ್ನು ಯಾರು ಮದುವೆಯಾದಾರು ? ಕಪ್ಪು ಮೈಬಣ್ಣ....ಬೊಜ್ಜು ಬೆಳೆದ ದೇಹ....ಸಿಡುಬಿನ ಕಲೆಗಳಿಂದೊಡಗೂಡಿದ ವಿಕೃತ ಮುಖ....ಮೊಂಡ ಮೂಗು....ಶಾಸ್ತ್ರಿಯಾದರೂ ಈಕೆಗೆ ಹೇಗೆ ಮರುಳಾದನೊ....ಅಂಥ ಸುಂದರಿಯಾದ ಹೆಂಡತಿಯಿದ್ದರೂ ಈಕೆಯನ್ನು ಹೇಗೆ ಕರೆದುತಂದನೊ !” ಎಂದು ಯೋಚಿಸುತ್ತಿದ್ದಳು ಸರಸು.

“ನೀವು ಯೋಚಿಸುವುದೇನನ್ನು ? ನನ್ನಂಥವಳನ್ನು ಶಾಸ್ತ್ರಿಗಳು ಹೇಗೆ ಕರೆದು ತಂದರೆಂದೇ ಅಲ್ಲವೆ ? ಆ ವಿಷಯ ಯೋಚಿಸಿದಾಗಲೆಲ್ಲ ನನಗೂ ಆಶ್ಚರ್ಯವೇ ಆಗುತ್ತದೆ. ಶಾಸ್ತ್ರಿಗಳು ನನ್ನಂಥವಳನ್ನೇಕೆ ಕಟ್ಟಿಕೊಂಡರೆಂದು ಆಶ್ಚರ್ಯವಾಗುವದು ಸಹಜವೇ. ನನ್ನ ಬಗ್ಗೆ ಕನಿಕರಗೊಂಡೇ ಅವರು ನನ್ನ ಹೊಣೆ ಹೊತ್ತುಕೊಂಡದ್ದು. ನೀರಿನ ಪಾಲಾಗುತ್ತಿರುವ ಈ ದುರ್ದೈವಿಯನ್ನುಳಿಸಿ ಒಂದು ದಾರಿಗೆಳೆಯೋಣ ಎಂಬ ವಿಚಾರದಿಂದಲೇ ಅವರೀ ಕೆಲಸಕ್ಕೆ ಕೈಹಾಕಿದ್ದು. ಇಲ್ಲಿಗೆ ಬಂದಂದಿನಿಂದ ನಾನು ಸುಖವಾಗಿಯೆ ದಿನಗಳೆಯುತ್ತಿದ್ದೇನೆ. ಶಾಸ್ತ್ರಿಗಳು ಒಂದು ಸಲವೂ ನನ್ನ ಮನಸ್ಸಿನ ವಿರುದ್ಧ ಹೋಗಿಲ್ಲ. ಸ್ವಾಮಿಗಳೂ ಅಷ್ಟೆ. ಇಬ್ಬರೂ ನನ್ನನ್ನು ಬಹಳ ಪ್ರೀತಿಯಿಂದ ಕಂಡಿದ್ದಾರೆ. ಆ ಪ್ರೀತಿ ಔದಾರ್ಯಗಳಿಗೆ ಪ್ರತಿಯಾಗಿ ನಾನು ಇಷ್ಟು ಸಲ್ಲಿಸುವದು ಏನು ದೊಡ್ಡದು ?”

“ಆದರೆ....ನಿಮ್ಮ ಶೀಲ ?”

“ಶೀಲ ಶೀಲ ಅಂದರೆ ಅದರ ಅರ್ಥವಾದರೂ ಏನು ಸರಸಮ್ಮ? ನಾಯಿಗೂ ಕೀಳಾದ ಸ್ಥಿತಿಯಲ್ಲಿ ಹೇಗೋ ಜೀವ ಹಿಡಿದುಕೊಂಡಿರುವದು ಶೀಲವೆ ? ಹೆಂಗಸಾದವಳು ಅಂಥ ಹೀನ ಸ್ಥಿತಿಯಲ್ಲೇ ಇದ್ದು ತನ್ನ ದೇಹದ ಪಾವಿತ್ರ್ಯವನ್ನುಳಿಸಿಕೊಳ್ಳಬೇಕೆಂದು ಸನಾತನಿಗಳ ಅಭಿಪ್ರಾಯವಲ್ಲವೆ ? ಪಾವಿತ್ರ್ಯ ಎಂಬ ಶಬ್ದದ ಬೆಲೆಯೂ ಇವರಿಗೆ ತಿಳಿದಿರಲಿಕ್ಕಿಲ್ಲ. ನಾಯಿಯ ಹಾಗೆ ಬದುಕಿರುವ ದೇಹಕ್ಕೆ ಎಂಥ ಪಾವಿತ್ರ್ಯವಿದ್ದೀತು ? ಅಲ್ಲಿ ಸ್ವಾತಂತ್ರ್ಯವಿಲ್ಲ. ಮನುಷ್ಯ ವ್ಯಕ್ತಿತ್ವಕ್ಕೆ ಸ್ವಲ್ಪವೂ ಮರ್ಯಾದೆಯಿಲ್ಲ. ಬದುಕಲು ಹುಟ್ಟಿ ಬಂದ ಜೀವವನ್ನು ಸಾವಿನ ದವಡೆಗೆ ನೂಕುವ ಅಂಥ ಅವಹೇಳನಕಾರಕ ಸ್ಥಿತಿಯಲ್ಲಿಯೆ ಹೇಗೋ ಬದುಕುವದೂ ಒಂದು ಶೀಲವೆ ? ಎಲ್ಲಿ

ವ್ಯಕ್ತಿತ್ವದ ಕೊಲೆ ನಡೆದಿರುವದೋ, ಅಲ್ಲಿ ಶೀಲ ಉಳಿಯುವದೆಂತು ? ತನ್ನ ವ್ಯಕ್ತಿತ್ವವನ್ನುಳಿಸಿಕೊಂಡು ಬದುಕುವದೇ ನಿಜವಾದ ಬದುಕು. ಅದೇ ನಿಜವಾದ ಶೀಲ. ದೇಹದ ಪಾವಿತ್ರ್ಯದ ಮಾತು ದೊಡ್ಡ ಬುರುಡೆ. ಹೆಂಗಸನ್ನು ಕೊನೆಯವರೆಗೂ ಗುಲಾಮಗಿರಿಯಲ್ಲಿರಿಸಲು ಡಾಂಭಿಕ ಸಮಾಜ ಹುಡುಕಿದ ಶಬ್ದ ಅದು. ಅಂಥ ಅರ್ಥಶೂನ್ಯ ಶಬ್ದಗಳಿಗೆ ಕವಡೆಯ ಬೆಲೆಯನ್ನೂ ಕೊಡುವದಿಲ್ಲ ನಾನು...."

"ನೀವೇನೂ ಕೊಡಲಿಕ್ಕಿಲ್ಲ. ಆದರೆ ಜನರು....ಸಮಾಜ ?"

"ಜನರು ಅಂದರಾದರೂ ಯಾರು ? ಸಮಾಜ ಅಂದರಾದರೂ ಏನು ? ನಮ್ಮ ನಿಮ್ಮಂಥವರು ನಾಲ್ಕು ಮಂದಿ ಕೂಡಿದರೆ ಜನ....ಅದೇ ಸಮಾಜ ಅಲ್ಲವೆ ? ನಮ್ಮನ್ನು ಬಿಟ್ಟು ಸಮಾಜವೆಲ್ಲಿಯದು ? ಇಂದಿನ ಈ ಸಮಾಜದಲ್ಲಿ ನೂರಕ್ಕೆ ನೂರರಷ್ಟು ಶೀಲವಂತರಾಗಿರುವವರು ಎಷ್ಟು ಜನ ಹೊರಡಬಹುದು, ಹೇಳಿರಿ ನೋಡೋಣ. ಗುರುಗಳೂ ಅಂಥವರೇ, ಭಕ್ತರೂ ಅಂಥವರೇ. ಕಫನಿ, ಕಾವಿಯ ಬಟ್ಟೆ, ರುದ್ರಾಕ್ಷಿ, ಪಾದುಕೆ, ಪ್ರವಚನ ಎಲ್ಲವೂ ತೋರಿಕೆಗಾಗಿ. ಗುರುಗಳು ಮಾಡುವುದೂ ತೋರಿಕೆಗಾಗಿ. ಭಕ್ತರು ಮಾಡುವುದೂ ತೋರಿಕೆಗಾಗಿ. ಎಲ್ಲಾ ಬರೀ ಮೇಲು ಮೇಲಿನ ಆಡಂಬರ. ಅದು ಆಡಂಬರವೆನ್ನುವುದು ಎಲ್ಲರಿಗೂ ಗೊತ್ತಿದೆ. ಆದರೂ ಅದನ್ನು ತ್ಯಜಿಸಲು ಯಾರೂ ಸಿದ್ಧರಿಲ್ಲ. ಡಾಂಭಿಕತನದ ದರಬಾರೇ ನಡೆದಿರುವಾಗ ನನ್ನಂಥವರು, ನಿಮ್ಮಂಥವರು ಶೀಲ ಶೀಲ ಎಂದು ರಾಗ ತೆಗೆಯುತ್ತ ಕೂಡ್ರುವದರಲ್ಲಿ ಏನು ಅರ್ಥವಿದೆ ? ಪಾಸ್ತ್ರಿಯೊಂದಿಗೆ ಬಂದರೆ ಶೀಲ ಹಾಳಾಗುವುದೆಂಬುದು ಗೊತ್ತಿದ್ದರೂ ನಾನೇಕೆ ಬರಬೇಕಾಯಿತು? ಬರದಿದ್ದರೆ ಬೇರೆ ದಾರಿಯಿರಲಿಲ್ಲ. ಬದುಕಲು ಬೇರೆ ಸಾಧನವಿರಲಿಲ್ಲ. ಇಂದಿನ ಈ ಸಮಾಜದಲ್ಲಿ ಹೆಂಗಸು ದುಡಿದು ತಿನ್ನುವ ಪರಿಸ್ಥಿತಿಯಿಲ್ಲ. ಅದಕ್ಕೆ ನೂರಾ ಎಂಟು ನಿರ್ಬಂಧಗಳು. ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ ನಮ್ಮಂಥವರಿಗಿರುವದು ಇದೊಂದೇ ದಾರಿ. ಅಲ್ಲವೆ?"

ಈ ಪ್ರಶ್ನೆಗೆ ಸರಸುವಿನ ಬಳಿಯಲ್ಲಿ ಉತ್ತರವಿರಲಿಲ್ಲ.

"ಸ್ವಾಮಿಗಳು, ಶಾಸ್ತ್ರಿಗಳು ಇಬ್ಬರೂ....ನಿಮ್ಮೊಡನೆ....?" ಎಂದು ವಿಸ್ಮಯದಿಂದ ಕೇಳಿದಳಾಕೆ.

"ಹೌದು. ಇಬ್ಬರೂ. ಅದರಲ್ಲೇನಿದೆ ಸರಸಮ್ಮ? ಸ್ವಾಮಿಗಳಂತೂ

ಒಬ್ಬೊಂಟಿಗರು. ಮದುವೆಯಿಲ್ಲ. ಹೆಣ್ಣಿನ ಸಹವಾಸಯೋಗವಿಲ್ಲ. ಕಾವಿ ಬಟ್ಟೆ ಹಾಕಿದ ಮಾತ್ರಕ್ಕೆ ಮನುಷ್ಯನ ಭಾವರಾಗಗಳಿಗೂ ಕಾವಿಬಣ್ಣ ಬರಲು ಸಾಧ್ಯವೇ ? ನಮ್ಮಂಥವರು ಗಂಡಂದಿರನ್ನು ಕಳೆದುಕೊಂಡು ಹೇಗೆ ಕಠಿಣ ಪ್ರಸಂಗಕ್ಕೆ ಸಿಕ್ಕುಬೀಳುವೆವೋ ಹಾಗೇ ಈ ಬಡ ಜಂಗಮರೂ ಮಠಾಧಿಕಾರಿ ಗಳಾಗಿ ಮನಸ್ಸಿಲ್ಲದ ಮನಸ್ಸಿನಿಂದ ಸನ್ಯಾಸ ಸ್ವೀಕರಿಸಿ ತಮ್ಮ ಭಾವರಾಗಗಳ ನ್ನೆಲ್ಲ ಹತ್ತಿಕ್ಕಿಕೊಳ್ಳುವ ಮಹಾ ಕಠಿಣ ಪ್ರಸಂಗಕ್ಕೆ ಸಿಕ್ಕುಬೀಳುತ್ತಾರೆ. ಆದರೆ- ಯಾವುದನ್ನು ಹತ್ತಿಕ್ಕಿದರೂ ಈ ಒಂದು ವಿಷಯವನ್ನು ಹತ್ತಿಕ್ಕು ವದು ಮಾತ್ರ ಎಂಥೆಂಥವರಿಗೂ ದುಸ್ಸಾಧ್ಯವಾಗುತ್ತದೆ. ವಿಶ್ವಾಮಿತ್ರ ಮೇನಕೆಯರ ಕತೆ ಕಟ್ಟುಕತೆಯಲ್ಲ ಸರಸಮ್ಮ. ಪ್ರಪಂಚದಲ್ಲಿ ನಿಜಕ್ಕೂ ನಡೆಯುವಂಥ ಕತೆ ಅದು. ಜಗತ್ತು ಹುಟ್ಟಿದಂದಿನಿಂದ ನಡೆಯುತ್ತಲೇ ಇದೆ. ಕೊನೆಯುವರೆಗೂ ನಡೆಯುತ್ತಲೇ ಇರುತ್ತದೆ. ವಿಶ್ವಾಮಿತ್ರ ಮೇನಕೆ ಯರೆಂದರೆ ಗಂಡು ಹೆಣ್ಣಿನ ಪ್ರತೀಕ ಅಷ್ಟೆ. ಗಂಡಿನ ಸಹವಾಸವಿಲ್ಲದೆ ಹೆಣ್ಣು ಬದುಕಲಾರದು. ಹೆಣ್ಣಿನ ಸಹವಾಸವಿಲ್ಲದೆ ಗಂಡು ಬದುಕಲಾರದು. ಅದು ನಿಸರ್ಗದ ನಿಯಮ. ಈ ನಿಯಮಕ್ಕೆ ವಿರುದ್ಧವಾಗಿ ತರುಣ ಜಂಗ ಮರಿಗೆ ಸನ್ಯಾಸದೀಕ್ಷೆ ಕೊಡುವದು ಮಹಾ ಮೂರ್ಖತನ. ದೀಕ್ಷೆ ಕೊಟ್ಟ ಮಾತ್ರಕ್ಕೆ, ಕಪನಿ ತೊಡಿಸಿದ ಮಾತ್ರಕ್ಕೆ ವಿರಕ್ತಿ ಬರುತ್ತದೆಯೆ ? ತಾರುಣ್ಯ ದಲ್ಲಿ ಮನುಷ್ಯರಿಗೆಲ್ಲಾ ಸ್ವಾಭಾವಿಕವಾದ ವಿಷಯಸುಖದಾಸೆ ಮಠಾಧಿ ಕಾರಿಗಳಾದವರಿಗೂ ಇರುವದು ಸಹಜವಲ್ಲವೆ? ಬಹಿರಂಗವಾಗಿ ಅವರು ಅದನ್ನು ತೀರಿಸಿಕೊಳ್ಳಲು ಅವಕಾಶವಿರುವದಿಲ್ಲ. ಅಂತೆಯೆ ಗುಟ್ಟಾಗಿ ತೀರಿಸಿ ಕೊಳ್ಳುತ್ತಾರೆ. ಪಾಪ, ಎಷ್ಟು ದಿನ ತಡೆಯಲಿಕ್ಕಾದೀತು ? ನಮಗೆ, ನಿಮಗೆ ತಡೆಯಲಾಗುತ್ತದೆಯೆ, ಹೇಳಿರಿ. ನಮ್ಮ ಹಾಗೇ ಅವರೂ ಮನುಷ್ಯ ರಲ್ಲವೆ?"

ಸರಸು ನಿರುತ್ತರಳಾದಳು. ಸ್ವಾಮಿಗಳನ್ನು ದೂಷಿಸುವುದರಲ್ಲಿ ಯಾವ ಅರ್ಥವೂ ಇಲ್ಲವೆಂಬುದು ಆಕೆಗೆ ಗೊತ್ತಿದ್ದಿತು. ಮನುಷ್ಯನ ನೈಸರ್ಗಿಕ ಭಾವರಾಗಗಳನ್ನು, ತಡೆಹಿಡಿಯುವುದು ಮಹಾ ಕಷ್ಟದ ಕೆಲಸವೆಂಬುದು ತನ್ನ ಅನುಭವದಿಂದಲೇ ಆಕೆಗೆ ಚೆನ್ನಾಗಿ ತಿಳಿದಿದ್ದಿತು. ಅಕ್ಕನ ವಚನಗಳನ್ನೋದಿ ವೈರಾಗ್ಯವನ್ನು ಕಲಿಯಲು ತಾನು ಪಟ್ಟಿದ್ದ ಪ್ರಯತ್ನವೆಲ್ಲ ವ್ಯರ್ಥವಾಗಿರ

ಲಿಲ್ಲವೆ ? ಕಲಿತರೆ ಬರುವ ವಸ್ತುವಲ್ಲ ವೈರಾಗ್ಯ. ಒತ್ತಾಯದಿಂದ ಹೇರಿದರೆ ಬರುವ ವಸ್ತುವಲ್ಲ ವೈರಾಗ್ಯ. ಅದು ಬರಬೇಕಾದುದು ಒಳಗಿನಿಂದ. ಅಂತರಾಳದಿಂದ. ಈ ಲೋಕದ ಸಮಸ್ತ ವಿಷಯಗಳ ಬಗೆಗೂ ವಿರಾಗವುಂಟಾದಾಗ ಮಾತ್ರವೆ ವೈರಾಗ್ಯ ಬಂದೀತು. ತಾರುಣ್ಯದಲ್ಲಿ, ಮಜ್ಜೆ ಮಾಂಸಗಳು ಶಕ್ತಿಪೂರ್ಣವಾಗಿ ತಕಪಕನೆ ಕುಣಿಯುತ್ತಿರುವಾಗ ಮೋಹವೆಂಬುದು ಸ್ವಾಭಾವಿಕ. ಲೀಲಾವತಿ ಮಾಡುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಆಕೆ ಸರಿಯಾದ ಮಾತನ್ನೇ ಹೇಳುತ್ತಿದ್ದಾಳೆ. ಜೀವನದ ಬಗೆಗೆ ಆಳವಾದ ಅನುಭವವಿದ್ದಂತಿದೆ ಲೀಲಾವತಿಗೆ. ಆಕೆ ಇಂಥ ಅನುಭವಿಕಳಾಗಿರಬಹುದೆಂದು ತಾನು ತಿಳಿದಿರಲಿಲ್ಲ. ಆಶ್ರಮಕ್ಕೆ ಸೇರಿದ ಒಂದು ವಾರದಲ್ಲಿ ಹಿಂದೆಂದೂ ತಾನು ಕಂಡಿರದಿದ್ದ ವ್ಯಕ್ತಿತ್ವ ಲೀಲಾವತಿಯಲ್ಲಿ ಇಂದು ಎದ್ದು ಕಾಣುತ್ತಿತ್ತು. ಅವಳ ಆ ಧೈರ್ಯ....ಆ ಸ್ಪಷ್ಟವಾದಿತ್ವ....ತಾನು ಶಾಸ್ತ್ರಿ, ಸ್ವಾಮಿ ಇಬ್ಬರಿಗೂ ಪ್ರೇಯಸಿಯಾಗಿರುವ ವಿಷಯವನ್ನು ಮುಚ್ಚು ಮರೆಯಿಲ್ಲದೆ ಬಿಚ್ಚಿ ಹೇಳುತ್ತಿದ್ದಳು. ಹೀಗೆ ಹೇಳುವದಕ್ಕೂ ಬಹಳ ಧೈರ್ಯ ಬೇಕು. ಅವರಿವರ ರಹಸ್ಯರಾಣಿಯರಾಗಿದ್ದರೂ ಸಹ ಹೊರಗೆ ಮಾತ್ರ ಮಹಾ ಶೀಲವತಿಯರಂತೆ ನಟಿಸುವ ಸ್ತ್ರೀಯರೂ ಇಲ್ಲವೆ ? ಲೀಲಾವತಿಗೆ ಮಾತ್ರ ಇಂಥ ಡಾಂಭಿಕತನ ಸ್ವಲ್ಪವೂ ಸರಿಬರುವುದಿಲ್ಲವೆಂದು ತೋರುತ್ತದೆ. ಶಾಸ್ತ್ರಿ ತನ್ನನ್ನು ಕರೆದುಕೊಂಡುಬಂದು ದೊಡ್ಡ ಉಪಕಾರ ಮಾಡಿದನೆಂದೇ ಆಕೆ ಹೇಳುತ್ತಾಳೆ. ಎಂಥ ಅದ್ಭುತ ಮಹಿಳೆ ಈ ಲೀಲಾವತಿ....

"ಗಂಡು ಹೆಣ್ಣಿನ ಈ ಸಂಬಂಧದಲ್ಲಿ ಏನೂ ದೋಷವಿಲ್ಲವೆಂದೇ ನೀವು ನಂಬಿದ ಹಾಗಾಯಿತಲ್ಲ ?" ಎಂದು ಪ್ರಶ್ನಿಸಿದಳು ಸರಸು.

"ದೋಷವೆಂಬುದು ಕೃತಿಯಲ್ಲಿಲ್ಲ. ನೋಡುವ ದೃಷ್ಟಿಯಲ್ಲಿದೆ."

"ಅಂದರೆ ?"

"ಅರ್ಥವಾಗಲಿಲ್ಲವೆ ? ಈಗ ನೋಡಿರಿ. ನನ್ನ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ನಾನು ಶಾಸ್ತ್ರಿಗಳೊಂದಿಗೆ ಸ್ವಾಮಿಗಳೊಂದಿಗೆ ಮಲಗುವದನ್ನು ತಿಳಿದು ಅನೇಕರು ಮೂಗು ಮುರಿಯಬಹುದು. ನನ್ನನ್ನು ಜಾರಿಣಿಯೆಂದು ದೂಷಿಸಬಹುದು. ಆದರೆ ನಾನು ಹಾದರ ಮಾಡಲು ಕಾರಣವೇನಾಯಿತೆಂಬುದು ಪಾಪ, ಅವರಿಗೆ ಗೊತ್ತಿರುವದಿಲ್ಲ. ಒಂದು ವೇಳೆ

ಗೊತ್ತಾದರೂ ಅನೇಕರಿಗೆ ಆ ಬಗ್ಗೆ ಏನೂ ಅನ್ನಿಸುವದಿಲ್ಲ. ಹಾಗಾಗಲು ಎಷ್ಟೋ ಕಾರಣಗಳಿರುತ್ತವೆ. ಶಿಕ್ಷಣದ ಅಭಾವ, ಜನ್ಮತಃ ಬಂದ ಸಂಸ್ಕಾರಗಳು, ಸಮಾಜದಲ್ಲಿ ಪಸರಿಸಿದ ಡಾಂಭಿಕ ವಾತಾವರಣ....ಹೀಗೇ. ನಿಮ್ಮಂಥವರು, ಸುಶಿಕ್ಷಿತರು, ತಿಳಿದವರು ಸಹಾನುಭೂತಿಯಿಂದ ಯೋಚಿಸುತ್ತೀರಿ. ಆಗ ಈ ಹಾದರದ ದೋಷ ಯಾರದು ಎನ್ನುವದು ನಿಮಗೆ ಗೊತ್ತಾಗುತ್ತದೆ."

"ಹೌದು. ನೀವನ್ನುವದು ನಿಜ. ಇದು ನಿಮ್ಮ ದೋಷವಲ್ಲ ಪರಿಸ್ಥಿತಿಯದು."

"ಹಂ....ಹಾಗೆ ಹೇಳಿರಿ. ಈಗ ನಮ್ಮ ಸ್ವಾಮಿಗಳೂ ಈ ದಾರಿ ತುಳಿಯಬೇಕಾಗಿ ಬಂದಿರುವದು ಪರಿಸ್ಥಿತಿಯ ಕಾರಣದಿಂದಾಗಿಯೆ ಅಲ್ಲವೆ? ಅವರನ್ನು ದೂಷಿಸಬಲ್ಲಿರಾ ನೀವು ?"

ಸರಸುವಿಗೆ ಏನನ್ನು ಹೇಳಲೂ ಬಾಯಿ ಬರಲಿಲ್ಲ.

"ನಮ್ಮ ಸ್ವಾಮಿಗಳಷ್ಟು ಒಳ್ಳೆಯ ವ್ಯಕ್ತಿ ಇನ್ನೊಬ್ಬರಿರಲಾರರು ಸರಸಮ್ಮ. ಅವರು ದಯಾಳುಗಳು, ಉದಾರಿಗಳು. ಬಡವರನ್ನೂ ನಿರ್ಗತಿಕರನ್ನೂ ಕಂಡರೆ ತುಂಬ ಪ್ರೀತಿ. ಸಮಾಜಕ್ಕಾಗಿ, ದೇಶಕ್ಕಾಗಿ ದುಡಿಯಬೇಕೆಂಬ ಅಪೇಕ್ಷೆಯೂ ಇದೆ. ಹಾಗೆ ದುಡಿಯುವವರಿಗೆ ಮುಕ್ತ ಹಸ್ತದಿಂದ ನೆರವಾಗುತ್ತಾರೆ. ಜಾತಿ ಜಾತಿಗಳಲ್ಲಿನ ಜಗಳವನ್ನು ಹೋಗಲಾಡಿಸಿ ಎಲ್ಲರೂ ಸೌಹಾರ್ದದಿಂದ ಇರುವಂತೆ ಮಾಡಲು ಹೆಣಗುತ್ತಾರೆ. ಇಷ್ಟೆಲ್ಲ ಮಾಡುವವರಿಗೆ ಈ ಒಂದು ಸೌಕರ್ಯವೂ ಇರಬಾರದೇ ಸರಸಮ್ಮ? ಪಾಪ, ಈ ಸ್ವಾಮಿಗಳಿಗೆ ಮಾತ್ರ ಸ್ತ್ರೀ ಸುಖ ಬೇಡವೆಂದರೆ ಹೇಗೆ ? ಅವರೂ ಅನುಭವಿಸಲಿ. ಸಮಾಜದ, ದೇಶದ ಸೇವೆ ಮಾಡಲಿ. ಏನೆನ್ನುತ್ತೀರಿ ನೀವು ?"

"ನಾನೇನೆನ್ನಲಿ ಲೀಲಾವತಿ ! ನನಗಿಂತ ಅನುಭವಿಕರು ನೀವು. ಎಲ್ಲವನ್ನೂ ಬಲ್ಲವರು. ನಾನಾದರೋ ಇನ್ನೂ ಹುಡುಗಿ. ನಿಮ್ಮಷ್ಟು ಅನುಭವವಿದೆಯೆ ? ಏನಿದೆ ?"

"ರಸಿಕತನದ ಅನುಭವಕ್ಕೇನೂ ಕೊರತೆಯಿಲ್ಲವಲ್ಲ. ನಿಜಕ್ಕೂ ನೀವೇ ಧನ್ಯರು. ಪ್ರೀತಿಸಿದವನಿಗಾಗಿ ಮನೆಮಾರು ತೊರೆದು ಇತ್ತ ಬಂದು ಬಿಟ್ಟಿರಿ...."

"ಬಂದೆನೆಂಬುದೇನೊ ನಿಜ. ಆದರೆ....ಅಂಥ ಸೊಗಸೇನೂ ಇಲ್ಲ ಬಿಡಿರಿ."

"ಯಾಕ್ರೀ, ಹೀಗೆ ಹೇಳುತ್ತೀರಿ ? ಏನು ತೊಂದರೆ ?" ಎಂದು ಸಹಾನುಭೂತಿಯಿಂದ ಕೇಳಿದಳು ಲೀಲಾವತಿ.

ಈಕೆಯೆದುರಿಗೆ ಹೇಳುವುದೇ, ಬೇಡವೇ ಎಂದು ಅರೆಕ್ಷಣ ಯೋಚಿಸುತ್ತಿದ್ದಳು ಸರಸು. ಲೀಲಾವತಿಯ ಧ್ವನಿಯಲ್ಲಿ ತುಂಬಿ ಬಂದ ಸಹಾನುಭೂತಿ ಆಕೆಯಲ್ಲಿ ಆತ್ಮೀಯತೆಯನ್ನು ಉದ್ರೇಕಿಸುತ್ತಿದ್ದಿತು. ತನ್ನ ಎದೆಯಲ್ಲಿ ಕೋಲಾಹಲವನ್ನುಂಟುಮಾಡುವ ಭಾವನೆಗಳನ್ನು ಇಂಥ ಆತ್ಮೀಯ ಗೆಳತಿಯೆದುರಿಗೆ ಹೊರಗೆಡಹಿದಲ್ಲಿ ಕೊಂಚ ಸಮಾಧಾನವಾದರೂ ಆದೀತು ಎನ್ನಿಸಿತು. ಈಚೆಗೆ ಸೂಶಿಯೂ ಭೆಟ್ಟಿಯಾಗಿರಲಿಲ್ಲ—ಆಕೆಯೆದುರಿಗೆ ಈ ವಿಚಾರಗಳನ್ನಿಡುವ ಸಂದರ್ಭವೂ ಬಂದಿರಲಿಲ್ಲ.

"ಏನಿದ್ದರೂ ಸಂಕೋಚಪಟ್ಟುಕೊಳ್ಳದೆ ಹೇಳಿರಿ. ನಾನು ನಿಮ್ಮ ಒಡಹುಟ್ಟಿದ ಅಕ್ಕನೆಂದೇ ತಿಳಿದುಕೊಳ್ಳಿರಿ...."

"ಸಂಕೋಚವೇನು ಬಿಡಿರಿ. ಅಂಥದೇನೂ ಇಲ್ಲ. ಈಚೆಗೆ ಕೆಲದಿನಗಳಿಂದ ನಮ್ಮವರು ಒಂದು ತರಹ ಆಗಿದ್ದಾರೆ."

"ಅಂದರೆ ? ಸಿಟ್ಟುಗಿಟ್ಟು ಮಾಡುವರೋ ಏನು ?"

"ಇಲ್ಲ. ಸಿಟ್ಟೇನೂ ಇಲ್ಲ. ಅವರದು ಸಿಟ್ಟಿನ ಸ್ವಭಾವವೇ ಅಲ್ಲ. ಸಿಟ್ಟಿಗಿಂತಲೂ ಕೆಟ್ಟ ಚಾಳಿಯೊಂದು ಅಂಟಿಕೊಂಡ ಹಾಗಿದೆ ಅವರಿಗೆ. ಯಾವಾಗಲೂ ಉದಾಸೀನವಾಗಿರುತ್ತಾರೆ. ಉತ್ಸಾಹವಿಲ್ಲ. ಉಲ್ಲಾಸವಿಲ್ಲ."

"ಮೊದಲಿಂದಲೂ ಹೀಗೇಯೋ, ಅಥವಾ ಈಗ ಮಾತ್ರ ಹೀಗೆ ಮಾಡುತ್ತಿರುವರೋ ?"

"ಮೊದಲಿಂದಲೂ ಸ್ವಲ್ಪ ಹಾಗೇ. ಈ ಊರಿಗೆ ಬಂದಂದಿನಿಂದ ಅದು ವಿಪರೀತಕ್ಕಿಟ್ಟುಕೊಂಡಿದೆ."

"ಈ ಊರಿಗೆ ಬಂದಂದಿನಿಂದ ಅಂದರೆ—ನಿಮಗೆ ಮದುವೆಯಾದಂದಿನಿಂದ ಅಂದಂತಾಯಿತಲ್ಲ ?"

"ಹೌದು. ಅಂದಿನಿಂದಲೂ ಹೀಗೇ. ಒಂದು ದಿನವೂ ಸೊಗಸಿಲ್ಲ ನೋಡಿರಿ."

"ಅಯ್ಯೋ ಪಾಪ....ನಿಮ್ಮಂಥ ರಸಿಕರಿಗೆ ಹೀಗಾಗಬಾರದಿತ್ತು...." ಎಂದು ಕನಿಕರವನ್ನು ಸೂಚಿಸಿದಳು ಲೀಲಾವತಿ.

"ಅವರಿಗೇನಾಗಿದೆಯೋ ತಿಳಿಯುವದಿಲ್ಲ ನೋಡಿರವ್ವ. ಯಾವಾಗಲೂ ಮುಖ ಬಾಡಿಸಿಕೊಂಡೇ ಇರುತ್ತಾರೆ. ಹೊಸದಾಗಿ ಮದುವೆಯಾದ ಗಂಡ ಹೆಂಡಿರೆಂದರೆ ಹ್ಯಾಗಿರಬೇಕು, ಎಷ್ಟು ಉಲ್ಲಾಸದಿಂದಿರಬೇಕು. ಸಿನಿಮಾಗಳಲ್ಲಿ ನೋಡಿರಬೇಕಲ್ಲ ನೀವು? ಕತೆ ಕಾದಂಬರಿಗಳಲ್ಲಿ ಓದಿರಬೇಕಲ್ಲ? ನಾವೂ ಅವರ ಹಾಗೆ ಸೊಗಸಾಗಿ ಕಾಲ ಕಳೆಯಬಾರದೇಕೆ? ಆದರೆ.... ನಮ್ಮವರಿಗೆ ಏನಾಗಿದೆಯೊ ತಿಳಿಯದವ್ವ. ಸಿನಿಮಾ ನೋಡುವುದಕ್ಕೂ ತಲೆ ನೋವು ಅವರಿಗೆ. ನನಗಾದರೋ ಸಿನಿಮಾ ಅಂದರೆ ಬಹಳ ಪ್ರೀತಿ. ಚಿಕ್ಕಂದಿನಿಂದಲೂ ಹಾಗೇ. ವಾರದಲ್ಲಿ ಎರಡು ಸಲವಾದರೂ ಸಿನಿಮಾ ನೋಡದಿದ್ದರೆ ಸಮಾಧಾನವಿರುವದಿಲ್ಲ. ಆದರೆ....ನಮ್ಮವರಿಗೆ ಅದರ ಹೆಸರು ಕೇಳಿದರೂ ಆಗದು. ನಾನೊಬ್ಬಳೇ ಹೋಗಿ ನೋಡಿಕೊಂಡು ಬರೋಣವೆಂದರೆ ಅದೂ ಸೇರಿಕೆಯಿಲ್ಲ. ಹೀಗಾಗಿ ಎಲ್ಲಾ ವಿರಸವೇ...."

"ಅಂತೂ ವಿಚಿತ್ರ ಸ್ವಭಾವವೇ ಇದ್ದಂತಿದೆಯಲ್ಲ? ರಾತ್ರಿ ಎಷ್ಟು ಗಂಟೆಗೆ ಮನೆಗೆ ಬರುತ್ತಾರೆ?"

"ಸಾಮಾನ್ಯವಾಗಿ ಒಂಭತ್ತು ಗಂಟೆಗೆ. ಒಂದೊಂದು ದಿನ ಹತ್ತು ಗಂಟೆಯಾದರೂ ಆಗುತ್ತದೆ. ಬಂದವರೇ ಸ್ವಲ್ಪ ಉಂಡ ಹಾಗೆ ಮಾಡಿ ಮಲಗಿಬಿಡುತ್ತಾರೆ. ಒಂದು ಮಾತಿಲ್ಲ....ಕತೆಯಿಲ್ಲ...."

ಲೀಲಾವತಿ ಒಂದೆರಡು ನಿಮಿಷ ಯೋಚಿಸುತ್ತಿದ್ದು ಅನಂತರ ಕೇಳಿದಳು: "ನೀವು ಹೀಗೆ ಹೇಳುತ್ತಿರುವದನ್ನು ಕೇಳಿದರೆ ನನಗೊಂದು ಸಂಶಯ ಬರುತ್ತದೆ. ನೀವು ಏನೂ ತಿಳಿದುಕೊಳ್ಳದಿದ್ದಲ್ಲಿ ಕೇಳುತ್ತೇನೆ."

"ಏನು ಕೇಳಿರಿ."

"ಏನೋ ಸುಮ್ಮನೆ ಕೇಳುತ್ತೇನವ್ವ. ನೀವು ಮತ್ತೆ ಅದನ್ನೇ ಹಚ್ಚಿಕೊಂಡು ಕೊರಗಬಾರದು. ನಾನು ಹೀಗೆ ಹೇಳಿದೆನೆಂದು ಯಾರ ಹತ್ತಿರವೂ ಹೇಳಬಾರದು. ನಿಮ್ಮವರ ಹತ್ತಿರವಂತೂ ಖಂಡಿತ ಈ ವಿಷಯ ಎತ್ತಬಾರದು."

"ಇಲ್ಲ. ಹೇಳಿರಿ."

"ರಾತ್ರಿ ಹತ್ತು ಗಂಟೆಯ ವರೆಗೂ....ನಿಮ್ಮವರು ಮನೆಗೆ ಬರುವದಿಲ್ಲ ಎನ್ನುತ್ತೀರಿ. ಅಷ್ಟು ಹೊತ್ತು ಏನು ಕೆಲಸವಿರುತ್ತದೆ ಅವರಿಗೆ ?"

"ಆಫೀಸಿನಲ್ಲಿ ಎಲ್ಲ ಕೆಲಸವೂ ಅವರ ಮೇಲೇ ಬಿದ್ದಿರುವದಂತೆ. ಮುಗಿಸಿ ಬರಬೇಕಾದರೆ ರಾತ್ರಿಯಾಗುತ್ತಿರಬಹುದು."

"ಹೀಗೆಂದು ಅವರೇ ಹೇಳಿದರೇನು ನಿಮಗೆ ?"

"ಅವರೇನೂ ಹೇಳಲಿಲ್ಲ. ನಾನೇ ಊಹಿಸಿಕೊಂಡೆ."

"ಹೆಂಗಸರು ನಾವು ತಪ್ಪು ಮಾಡುವದು ಇಂಥಲ್ಲಿಯೇ ನೋಡಿರಿ. ಒಬ್ಬರನ್ನು ನಂಬಿದರೆ ಪೂರಾ ನಂಬಿಬಿಡುತ್ತೇವೆ. ಹಾಗೆ ಮಾಡಬಾರದು. ಯಾವಾಗಲೂ ಎಚ್ಚರಿಕೆಯಿಂದಲೆ ಇರಬೇಕು."

"ಎಚ್ಚರಿಕೆ ?"

"ಹೌದು, ಎಚ್ಚರಿಕೆ. ಸಾಮಾನ್ಯವಾಗಿ ಆರು ಗಂಟೆಯ ಹೊತ್ತಿಗೆ ಆಫೀಸಿನಲ್ಲಿ ಎಲ್ಲರ ಕೆಲಸವೂ ಮುಗಿಯುತ್ತದೆ. ಎಲ್ಲರೂ ಹೊರಟುಹೋಗುತ್ತಾರೆ. ನಿಮ್ಮವರೊಬ್ಬರೇ ಹತ್ತುಗಂಟೆಯ ವರೆಗೂ ಇರಲು ಕಾರಣವೇನೆಂಬುದನ್ನು ನೀವು ಯೋಚಿಸಬೇಡವೆ? ಇನ್ನೇನಾದರೂ ಕಾರಣವಿರಬಹುದೇನು ಅದಕ್ಕೆ ?....ಏನಾದರೂ ಆಕರ್ಷಣೆ....?"

ಲೀಲಾವತಿಯ ಆ ಮಾತಿನೊಂದಿಗೆ ಸರಸುವಿನ ಮನಸ್ಸಿನಲ್ಲಿ ಹೊಸ ವಿಚಾರವೊಂದು ಸುಳಿದಂತಾಯಿತು. ಆಕರ್ಷಣೆ? ತನ್ನ ಮೂರ್ತಿಗೆ ಬೇರೆ ಹೆಣ್ಣಿನ ಬಗೆಗೆ ಆಕರ್ಷಣೆ ? ಇಂಥ ಸಂದೇಹ ಇದುವರೆಗೂ ಆಕೆಯ ಹತ್ತಿರ ಸುಳಿದಿರಲಿಲ್ಲ. ಶಿವಮೂರ್ತಿ ಅಂಥವನಿರಬಹುದೆಂದು ಕನಸು ಮನಸಿನಲ್ಲೂ ಬಂದಿರಲಿಲ್ಲ. ಆದರೆ....ಲೀಲಾವತಿಯ ಮಾತಿನೊಂದಿಗೆ ಹಠಾತ್ತಾಗಿ ಆ ಸಂದೇಹ ಭೀಕರಾಕಾರ ತಳೆದು ಎದುರಿಗೆ ಬಂದಂತಾಯಿತು. ಶಾಸ್ತ್ರಿಯ ದ್ವಿತೀಯ ಪತ್ನಿ ಲಲಿತಮ್ಮನ ಸುಂದರ ರೂಪು ಆಕೆಯ ಬಗೆಗಣ್ಣಿನೆದುರಿಗೆ ಬಂದು ನಿಂತು—"ನನ್ನನ್ನು ಕಂಡು ಯಾವ ಪುರುಷ ಮರುಳಾಗಲಿಕ್ಕಿಲ್ಲ ? ಶಿವಮೂರ್ತಿ ಇನ್ನೂ ಯುವಕ. ಆತನ ಪಾಡೇನು ?" ಎಂದು ಬಿಂಕದಿಂದ ನುಡಿದಂತಾಯಿತು.

"ತಾರುಣ್ಯದಲ್ಲಿ ಗಂಡು ಹೆಣ್ಣಿಗೆ ಬಲು ಬೇಗ ಮರುಳಾಗುತ್ತವೆ ಸರಸಮ್ಮ. ಹೆಣ್ಣೂ ಹಾಗೇ."

"ಮದುವೆಯಾದವರೂ ಸಹ ?"

"ಮದುವೆಯಾದರೇನಾಯಿತು ? ಅದರಿಂದ ತೃಪ್ತಿಯೇ ಇಲ್ಲವಾದರೆ ಮನಸ್ಸು ಬೇರೆ ಕಡೆಗೆ ಹೊರಳುವುದು ಸಹಜವಲ್ಲವೆ? ಈಗ ನೋಡಿರಿ. ನಮ್ಮ ಶಾಸ್ತ್ರಿಗಳಿಗೆ ಏನಿಲ್ಲವೆಂದರೂ ಐವತ್ತಕ್ಕೆ ಹೆಚ್ಚಾಗಿಯೆ ವಯಸ್ಸಾಗಿದೆ. ಅಂಥ ಹೃಷ್ಟಪುಷ್ಟ ದೇಹವೂ ಅಲ್ಲ. ಇಂಥವರು ಈ ಇಳಿವಯಸ್ಸಿನಲ್ಲಿ ಎರಡನೆಯ ಮದುವೆ ಮಾಡಿಕೊಳ್ಳಬಾರದಿತ್ತು. ಮಾಡಿಕೊಂಡರು. ಪಾಪ, ಆ ಲಲಿತಮ್ಮನಿಗೆ ಇಪ್ಪತ್ತೈದೋ ಇಪ್ಪತ್ತಾರೋ ಇದ್ದೀತು. ಇನ್ನೂ ತುಂಬು ಹರೆಯ. ತನಗೆ ಅನುರೂಪನಾದ ಯುವಕ ದೊರೆತಿದ್ದಲ್ಲಿ ಆಕೆ ಸುಖವಾಗಿ ಜೀವನ ನಡೆಸಬಹುದಾಗಿತ್ತು. ಆಕೆ ಸುಂದರಿ, ಆರೋಗ್ಯಶಾಲಿ. ಎಲ್ಲಾ ಇದ್ದರೂ ಅನುರೂಪನಾದ ಗಂಡನಿಲ್ಲ. ಈ ಇಳಿವಯಸ್ಸಿನ ಶಾಸ್ತ್ರಿಗಳಿಂದ ಅಂಥವಳಿಗೆ ಏನು ಸುಖ ದೊರೆಯಬೇಕು ? ಅತೃಪ್ತಳಾಗಿರುವ ಲಲಿತಮ್ಮನ ಮನಸ್ಸು ತನಗೆ ಅನುರೂಪರಾದ ತರುಣರ ಕಡೆಗೆ ತಿರುಗಿದರೆ ಅದರಲ್ಲಿ ಆಕೆಯ ತಪ್ಪೇನೂ ಇಲ್ಲವಷ್ಟೆ ?"

ಸರಸುವಿನ ಎದೆ ಡವಡವನೆ ಹಾರತೊಡಗಿತು. ಗಂಟಲು ಒಣಗಿ, ಬಾಯಿಂದ ಮಾತು ಹೊರಡುವುದು ಅಸಾಧ್ಯವಾಯಿತು. "ಅತೃಪ್ತಳಾದ ಲಲಿತಮ್ಮ....ಅನುರೂಪನಾದ ಮೂರ್ತಿ....ಆಕರ್ಷಣೆ ? ಇರಬಹುದೇ ? ಅಯ್ಯೋ....ನಿಜಕ್ಕೂ ಹಾಗೇನಾದರೂ ಇರಬಹುದೇ ? ಸಾಯಂಕಾಲ ಆರು ಗಂಟೆಗೆಲ್ಲ ಆಫೀಸು ಮುಚ್ಚುತ್ತದೆ....ರಾತ್ರಿ ಹತ್ತು ಗಂಟೆಗೆ ಇವರು ಮನೆಗೆ ಬರುತ್ತಾರೆ.... ಇಷ್ಟು ತಡವಾಗಲು ಇದೇ ಕಾರಣವಿರಬಹುದೇ? ಇರಬಹುದೇ....?"

"ನಿಮಗೆ ಗೊತ್ತಿರಲಿಕ್ಕಿಲ್ಲ ಸರಸಮ್ಮ. ನಿಮ್ಮ ಹಾಗೇ ಲಲಿತಮ್ಮನೂ ಒಳ್ಳೆ ಸರಸಿ. ರಸಿಕಳೂ ಹೌದು. ಶಾಸ್ತ್ರಿಯಂಥವರನ್ನು ಮದುವೆಯಾಗ ಬೇಕಾಗಿ ಬಂದಿದೆಯಾದರೂ ಆಕೆಯ ರಸಿಕತನಕ್ಕೇನೂ ಕುಂದಿಲ್ಲ. ತನ್ನ ಈ ವಯಸ್ಸಿನಲ್ಲಿ ನ್ಯಾಯವಾಗಿ ತನಗೆ ದಕ್ಕಬೇಕಾದುದನ್ನೆಲ್ಲ ಆಕೆ ದಕ್ಕಿಸಿ ಕೊಳ್ಳುತ್ತಲೇ ಇದಾಳೆ. ರಸಿಕರೆಂದರೆ ಹಾಗಿರಬೇಕು ನೋಡಿರಿ. ಇವೊತ್ತು ಒಬ್ಬ ಹುಡುಗ....ನಾಳೆ ಇನ್ನೊಬ್ಬ ಹುಡುಗ...."

"ಇಶ್ಶಿಶ್ಶಿ...." ಎಂದಳು ಸರಸು.

"ಇಶ್ಶಿಶ್ಶಿ ಅಂತ ಮೂಗು ಮುರಿಯಲು ಅದರಲ್ಲಿ ಅಂಥದೇನಿದೆ ಸರಸಮ್ಮ? ಪ್ರಪಂಚ ಅಂದ ಬಳಿಕ ವೈವಿಧ್ಯತೆಯಿದ್ದರೇನೇ ಸ್ವಾರಸ್ಯ ಅಲ್ಲವೆ? ಯಾವಾಗಲೂ ಮಾವಿನ ಹಣ್ಣನ್ನೇ ತಿನ್ನುತ್ತಿದ್ದರೆ ಬೇಸರು ಬರುವುದಿಲ್ಲವೆ ? ಇಂದು ಮಾವಿನ ಹಣ್ಣು, ನಾಳೆ ಕಿತ್ತಳೆ ಹಣ್ಣು. ನಾಡಿದ್ದು ಅಂಜೀರು ಹಣ್ಣು....ಹೀಗೆ ದಿನವೂ ಒಂದೊಂದು ಹಣ್ಣಿನ ರುಚಿ ನೋಡಿದರೆ ನಿಜವಾದ ಮೋಜು. ಅಲ್ಲವೆ ?"

"ಹಣ್ಣಿಗೂ ಹೆಣ್ಣಿಗೂ ಯಾವ ವ್ಯತ್ಯಾಸವೂ ಇಲ್ಲವೆನ್ನುತ್ತೀರಾ ?"

"ಸ್ವಲ್ಪ ಆಳವಾಗಿ ಯೋಚಿಸಿದರೆ ಇಲ್ಲವೆಂದೇ ನಿಮಗೂ ಅನ್ನಿಸಬಹುದು. ಬೇರೆ ಬೇರೆ ಬಗೆಯ ರುಚಿ ಅನುಭವಿಸುವ ಬಯಕೆ ಮನುಷ್ಯನಲ್ಲಿ ನೈಸರ್ಗಿಕವಾಗಿಯೆ ಇರುತ್ತದೆ. ದಿನಾಲೂ ಬದನೇಕಾಯಿ ಪಲ್ಯವನ್ನೇ ತಿಂದರೆ ಬೇಸರು ಬರುತ್ತದೆ. ಬಟಾಟೆ ತಿಂದರೂ ಬೇಸರು. ಎರಡು ಹೊತ್ತೂ ರೊಟ್ಟಿಯನ್ನೇ ತಿನ್ನಲಾಗುತ್ತದೆಯೆ ? ಅನ್ನ ಇಲ್ಲವೇ ಇಲ್ಲವಾದರೆ ಹೇಗೆ ? ಚಟ್ನಿ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಇವೆಲ್ಲ ಇರುವದು ಯಾತಕ್ಕಾಗಿ? ಊಟದಲ್ಲಿ ರುಚಿ ಬರಲೆಂದೇ ಅಲ್ಲವೆ? ಹಾಗೇ ಬಟ್ಟೆ ಬರೆಗಳ ವಿಚಾರ. ದಿನವೂ ಒಂದೇ ಬಣ್ಣದ ಸೀರೆ ಕುಪ್ಪಸ ತೊಡುವದರಲ್ಲಿ ಸ್ವಾರಸ್ಯವೆನ್ನಿಸುವದಿಲ್ಲವಲ್ಲ. ಅದಕ್ಕೆ ಕಾರಣ ಇದೇ ಅಲ್ಲವೆ? ಮನುಷ್ಯನಿಗೆ ಬಣ್ಣ ಬಣ್ಣದ ಉಡುಗೆ ತೊಡುಗೆ ಎಂದರೆ ಬಲು ಪ್ರೀತಿ. ಹೆಂಗಸರಿಗಂತೂ ಅದೊಂದು ಹುಚ್ಚು. ಬಣ್ಣಗಳ ಬಗೆಗಿರುವ ಹುಚ್ಚೇ ಬೇರ ಬೇರೆ ಗಂಡುಗಳ ಬಗೆಗೂ ಇದ್ದರೆ ಅದರಲ್ಲಿ ಅಸಹಜವಾದುದೇನೂ ಇಲ್ಲ. ಜಗತ್ತು ಹುಟ್ಟಿದಂದಿನಿಂದಲೂ ಹೀಗೇ ಇದೆ. ಅತಿ ಪೂರ್ವಕಾಲದ ಗಂಡು ಹೆಣ್ಣುಗಳ ಕತೆಯನ್ನು ನೀವು ಕೇಳಿರಬಹುದು. ಆಗ ಗಂಡ–ಹೆಂಡತಿ, ಮದುವೆ, ಸಂಸಾರ, ಶೀಲ, ಪಾತಿವ್ರತ್ಯ ಇತ್ಯಾದಿ ಯಾವ ಕಟ್ಟೂ ಇರಲಿಲ್ಲ. ತನ್ನ ಮನಸ್ಸಿಗೊಪ್ಪಿದ ಸ್ತ್ರೀಯೊಂದಿಗೆ ಪುರುಷ ರಮಿಸುತ್ತಿದ್ದ. ಹಾಗೇ, ತನ್ನನ್ನು ಆಕರ್ಷಿಸಿದ ಪುರುಷರೊಂದಿಗೆ ಸ್ತ್ರೀ ರಮಿಸುತ್ತಿದ್ದಳು. ಹಸಿವು, ನೀರಡಿಕೆ, ನಿದ್ರೆಗಳ ಹಾಗೆ ಇದೂ ಒಂದು ನೈಸರ್ಗಿಕ ಕ್ರಿಯೆಯಾಗಿತ್ತು. ಅಷ್ಟೆ. ಈಗಲೂ ಎಷ್ಟೋ ಜನಾಂಗಗಳಲ್ಲಿ ಅದೇ ಪದ್ಧತಿಯಿದೆ."

"ಆ ಅನಾಗರಿಕತೆಯೇ ಒಳ್ಳೆಯದೆನ್ನುತ್ತೀರಾ ?"

“ನಾಗರಿಕತೆ, ಅನಾಗರಿಕತೆ ಎಂಬುದಕ್ಕಾದರೂ ಏನು ಅರ್ಥ ? ಇದು ನಾಗರಿಕತೆ, ಇದು ಅನಾಗರಿಕತೆ ಎಂದು ಭೇದಭಾವ ಕಲ್ಪಿಸಿದವರಾದರೂ ಯಾರು ? ಮನುಷ್ಯರೇ ಅಲ್ಲವೆ ? ಈ ಕಟ್ಟು ಕಟ್ಟಳೆಗಳೇನು ಅನಾದಿಕಾಲದಿಂದಲೂ ಇದ್ದವೇ ? ಇಲ್ಲ. ಎಲ್ಲವನ್ನೂ ಮನುಷ್ಯನೇ ಮಾಡಿಕೊಂಡ. ತನಗೆ ತಾನೇ ಶೃಂಖಲೆಗಳನ್ನು ತೊಡಿಸಿಕೊಂಡು ನೂರಾ ಎಂಟು ನಿರ್ಬಂಧಗಳಿಂದ ತನ್ನನ್ನು ಬಿಗಿದುಕೊಂಡ. ಅಂಥ ಬಂಧಿತ ಜೀವನವನ್ನೇ ನಾಗರಿಕತೆಯೆಂದು ಕರೆದುಕೊಂಡು ತನ್ನ ಮೂರ್ಖತನವನ್ನೇ ಬುದ್ಧಿವಂತಿಕೆಯೆಂದು ತಿಳಿದು ಹಾರಾಡಿದ. ಆದರೆ....ದಿನ ಕಳೆದ ಹಾಗೆ, ವರ್ಷಗಳು ಉರುಳಿದ ಹಾಗೆ ತನ್ನ ಮೂರ್ಖತನ ಆತನಿಗೆ ತಿಳಿದು ಬರುತ್ತಿದೆ. ನಿಸರ್ಗದ ನಿಯಮಗಳಿಗೆದುರಾಗಿ ತಾನು ವಿಧಿಸಿದ ಕಟ್ಟು ಕಟ್ಟಳೆಗಳೆಲ್ಲ ಕೃತಕವೆಂಬುದರ ಅರಿವಾಗುತ್ತಿದೆ. ನಾಗರಿಕತೆಯೆಂಬುದು ಎಷ್ಟು ಬೆಳೆದರೂ ಮನುಷ್ಯನ ಮೂಲಗುಣವಾದ ವೈವಿಧ್ಯತಾಪ್ರೇಮ ಮರೆಯಾಗಲಿಲ್ಲ. ಸಾವಿರಾರು ವರ್ಷಗಳಿಗೆ ಹಿಂದೆ ಸಂಗಾತಿಯನ್ನು ಹುಡುಕುವಲ್ಲಿ ಅನುಸರಿಸುತ್ತಿದ್ದ ರೀತಿಯನ್ನೇ ಮನುಷ್ಯ ಇಂದಿಗೂ ಅನುಸರಿಸುತ್ತಿದ್ದಾನೆ. ಆಗ ಮುಚ್ಚು ಮರೆಯಿಲ್ಲದೆ ನಡೆದಿದ್ದ ಆ ಕಾರ್ಯ ಈಗ ಒಳಗೊಳಗೇ ನಡೆದಿದೆ, ಅಷ್ಟೆ. ನಾಗರಿಕತೆಯ ನೂರಾರು ಬಂಧನಗಳೂ ಮನುಷ್ಯನ ಈ ನೈಸರ್ಗಿಕ ಗುಣವನ್ನು ಹತ್ತಿಕ್ಕಲಾರವು. ಆತನ ಬುದ್ಧಿಯನ್ನು ತಿದ್ದಬಹುದು. ವಿಚಾರಗಳನ್ನು ತಿದ್ದಬಹುದು. ಆದರೆ ಈ ಮೂಲಭೂತ ಗುಣವನ್ನು ತಿದ್ದುವೆನೆನ್ನುವದು ಮಾತ್ರ ಮೂರ್ಖತನದ ಮಾತು....ಒಟ್ಟಾರೆ ನಾನು ಹೇಳುವದಿಷ್ಟೆ. ಒಬ್ಬ ಹೆಂಗಸಿನಿಂದ ಗಂಡಸಿಗೆ ಕೊನೆಯ ವರೆಗೂ ತೃಪ್ತಿಯಾಗಲಾರದು. ಹಾಗೇ ಒಬ್ಬ ಗಂಡಸಿನಿಂದಲೂ ಹೆಂಗಸಿಗೆ ತೃಪ್ತಿಯಾಗಲಾರದು. ಆ ಅತೃಪ್ತಿಯೆ ಅವರನ್ನು ಬೇರೆಯವರ ಕಡೆಗೆ ಸೆಳೆಯುತ್ತದೆ. ಮನೆಯಲ್ಲಿ ರೂಪವತಿಯಾದ ಹೆಂಡತಿಯಿದ್ದರೂ ಶಾಸ್ತ್ರಿಗಳು ನನ್ನ ಕಡೆಗೆ ಹೊರಳಲೂ ಅದೇ ಕಾರಣ, ಶಾಸ್ತ್ರಿಯಿಂದ ಪೂರಾ ತೃಪ್ತಿಯಾಗದಿದ್ದರೂ ಅಲ್ಪಸ್ವಲ್ಪವಾದರೂ ತೃಪ್ತಿಯಾಗಬಹುದು ಲಲಿತಮ್ಮನಿಗೆ. ಆದರೂ ಆಕೆ ಬೇರೆ ತರುಣರ ಕಡೆಗೆ ಹೊರಳುತ್ತಾಳೆ. ಅದಕ್ಕೆ ಕಾರಣ ಈ ಅತೃಪ್ತಿಯೇ. ವ್ಯಭಿಚಾರ, ವ್ಯಭಿಚಾರ ಎಂದು ಬೊಬ್ಬೆಯಿಡುವರಲ್ಲ....ಆ ವ್ಯಭಿಚಾರವೆಂದರೆ ಇನ್ನೇನೂ ಅಲ್ಲ.

ಕೇವಲ ಅತೃಪ್ತಿಯ ಫಲ ಅದು. ಈಗ ನಿಮಗೂ ಉಂಟಾಗಿರುವ ಈ ಅತೃಪ್ತಿ ....” ಎಂದು ಹೇಳಿ ತನ್ನ ಮಾತನ್ನು ಅಷ್ಟಕ್ಕೇ ನಿಲ್ಲಿಸಿದಳು ಲೀಲಾವತಿ.

–“ನನಗೂ ಅತೃಪ್ತಿಯುಂಟಾಗಿದೆಯೆ ? ಈ ಬಗೆಯ ಅತೃಪ್ತಿ ?” ಸರಸು ತನ್ನಷ್ಟಕ್ಕೆ ತಾನೇ ಈ ಪ್ರಶ್ನೆ ಕೇಳಿಕೊಂಡಳು. ತಾರುಣ್ಯದ ಸುಖವನ್ನುಣ್ಣಲೆಂದೇ ತಾನು ಶಿವಮೂರ್ತಿಯೊಂದಿಗೆ ಈ ಊರಿಗೆ ಓಡಿ ಬಂದುದಲ್ಲವೆ ? ಹೌದು. “ಓಡಿ” ಬಂದದ್ದು ! ತಂದೆತಾಯಿಗಳನ್ನು, ಪ್ರೀತಿಯ ತಂಗಿಯನ್ನು, ಭವ್ಯವಾದ ಮನೆಯನ್ನು, ನೆಮ್ಮದಿಯ ಜೀವನವನ್ನು ತ್ಯಜಿಸಿ ಆತನೊಂದಿಗೆ ಬಂದುದು ಇನ್ನೇತಕ್ಕಾಗಿ ? ಆ ಸುಖದ ಬಾಳಿಗಾಗಿಯೆ ಅಲ್ಲವೆ ? ಮದುವೆಯೇನೋ ಆಯಿತು. ತಾನು ಬಯಸಿಕೊಂಡಿದ್ದ ಸುಖ ಮಾತ್ರ ದೊರೆಯಲಿಲ್ಲ. ಅವರಿಗೆ ಏನೋ ಬೇಸರು. ಉದಾಸೀನತೆ. ಕೊಂಚವೂ ಉತ್ಸಾಹವಿಲ್ಲ. ರಾತ್ರಿ ಮನೆಗೆ ಬಂದೊಡನೆಯೆ ನಿದ್ರೆಗೆ ಶರಣು ಹೋಗುತ್ತಾರೆ. ತಾವಿಬ್ಬರೂ ಹೊಸದಾಗಿ ಮದುವೆಯಾದ ಗಂಡಹೆಂಡಿರೆಂಬುದರ ಅರಿವೂ ಅವರಿಗಿದ್ದಂತಿಲ್ಲ. ಅವರ ಬರವನ್ನೇ ಕಾಯುತ್ತ ಕುಳಿತಿದ್ದ ತಾನು ಅವರು ಬಂದು ನಿದ್ರೆಹೋಗುತ್ತಲೂ ಹಾಸುಗೆಯ ಮೇಲೆ ಚಡಪಡಿಸುತ್ತ ಬಿದ್ದುಕೊಂಡಿರಬೇಕಾಗುವುದು. ಕಣ್ಣಿಗೆ ಕಣ್ಣು ಹತ್ತುವುದಿಲ್ಲ. ಮಧ್ಯರಾತ್ರಿ ಕಳೆದರೂ ನಿದ್ರೆ ಬರುವುದಿಲ್ಲ. ತನಗೆ ಬೇಸರು ಬರದಿರುತ್ತದೆಯೆ ? ಅತೃಪ್ತಿ....? ಲೀಲಾವತಿ ಹೇಳುವ ಮಾತು ನಿಜವಿರಬೇಕು. ಲಲಿತಮ್ಮನಿಗಾಗುವ ಅತೃಪ್ತಿಯೆ ತನಗೂ ಆಗುತ್ತಿರಬೇಕು....ಆಕೆ ತನ್ನವರ ಮೇಲೆ ಬಲೆ ಬೀಸಿ ಅವರನ್ನು ಗೆದ್ದುಕೊಂಡಿರಬಹುದೇ ? ಅಂತೆಯೆ, ಅವರು ರಾತ್ರಿಯಾದರೂ ಅಲ್ಲಿಯೆ ಕಾಲ ಕಳೆಯುತ್ತಿರಬಹುದೇ? ಮನೆಗೆ ಬರುತ್ತಲೂ ಬಳಲಿದವರ ಹಾಗೆ ಹಾಸುಗೆಯ ಮೇಲೊರಗಿ ನಿದ್ರೆ ಹೋಗಲೂ ಅದೇ ಕಾರಣವಿರಬಹುದೇ? ರಾತ್ರಿಹೊತ್ತು ಸರಿಯಾಗಿ ಊಟ ಮಾಡುವುದೂ ಇಲ್ಲ. ಆ ಲಲಿತಾ ಸವಿಸವಿಯಾದ ತಿಂಡಿಗಳನ್ನು ಮಾಡಿ ಅವರಿಗೆ ಉಣ್ಣಿಸುತ್ತಿ ಬಹುದೇ ? ಅಂತೆಯೆ, ಮನೆಗೆ ಬಂದಾಗ ಅವರಿಗೆ ಹಸಿವೆಯಿರುತ್ತಿರಲಿಕ್ಕಿಲ್ಲ. ತನ್ನನ್ನು ಕಂಡರೆ ಒಂದು ನಗೆಯಿಲ್ಲ, ಸರಿಯಾದ ಮಾತಿಲ್ಲ. ಏನೂ ಇಲ್ಲ. ಎಲ್ಲ ಬಂಡವಲನ್ನೂ ಅವರು ಲಲಿತೆಯ ಹತ್ತಿರವೇ ತೀರಿಸಿಕೊಂಡು ಬರ

ತ್ತಿದ್ದಲ್ಲಿ ತನ್ನ ಪಾಲಿಗೆ ಏನುಳಿದೀತು ? ತನ್ನವರು ನಿಜವಾಗಿಯೂ ಆಕೆಯ ಮೋಹದಲ್ಲಿ ಸಿಲುಕಿರಬಹುದೇ....?

ಆಶ್ರಮದ ಹೆಬ್ಬಾಗಿಲಿನಿಂದ ಯಾರದೋ ಧ್ವನಿ ಕೇಳಬಂದಿತು. ತೋಟದಲ್ಲಿ ಕುಳಿತು ಮಾತನಾಡುತ್ತಿದ್ದ ಗೆಳತಿಯರಿಬ್ಬರೂ ಮೇಲಕ್ಕೆದ್ದರು.

"ಓ, ಶಾಸ್ತ್ರಿಗಳೇ ಬಂದುಬಿಟ್ಟರಲ್ಲ...." ಎಂದು ಸರಸು ಹೇಳುತ್ತಿರು ವಷ್ಟರಲ್ಲಿಯೆ ಶಾಸ್ತ್ರಿ ಅವರ ಬಳಿ ಬಂದು–"ಏನ್ರೀ, ಇಬ್ಬರೂ ಕೂಡಿ ಏನೋ ಒಳಸಂಚು ನಡೆಸಿರುವ ಹಾಗಿದೆಯಲ್ಲ ? ನನ್ನನ್ನು ಕಾರ್ಯದರ್ಶಿ ಸ್ಥಾನ ದಿಂದ ಓಡಿಸಿಬಿಟ್ಟು ನೀವೇ ಅದನ್ನು ಹಿಡಿದುಕೊಳ್ಳುವ ವಿಚಾರವೋ ಏನು?" ಎಂದು ನಗುತ್ತ ನುಡಿದ. ಆ ಮಾತು ಕೇಳಿ ಅವರಿಬ್ಬರೂ ಬಿದ್ದುಬಿದ್ದು ನಕ್ಕರು.

"ಸ್ವಾಮಿಗಳು ಬರುವ ವೇಳೆಯಾಗುತ್ತಾ ಬಂತು. ಎಲ್ಲ ಸಿದ್ಧತೆ ಮಾಡಿ ದ್ದೀರಾ ?"

"ನೇರವಾಗಿ ಇಲ್ಲಿಗೇ ಬರುವರೇನು ?"

"ರಾತ್ರಿ ಬರುತ್ತಾರೆ."

"ರಾತ್ರಿಯ ವ್ಯವಸ್ಥೆ ತಾನೆ ?" ಎಂದು ಪ್ರಶ್ನಿಸಿ ಕಣ್ಣು ಮಿಟುಕಿಸಿ ದಳು ಲೀಲಾವತಿ.

"ಹೌದು. ಎಲ್ಲವೂ ಶಿಸ್ತಾಗಿ ಆಗಬೇಕಲ್ಲ ? ಈಗೇನ್ರಿ, ಅವರು ಭಾರಿ ಶ್ರೀಮಂತ ಮಠದ ಅಧಿಕಾರಿಗಳು. ಐವತ್ತು ಅರವತ್ತು ಸಾವಿರ ರೂಪಾಯಿ ಕೈಗೆ ಬಂದಿದೆ. ಅವರ ಅಂತಸ್ತಿಗೆ ತಕ್ಕ ಹಾಗೆ ವಸತಿಯ ವ್ಯವಸ್ಥೆ ಯಾಗಲೇಬೇಕಲ್ಲವೆ? ಏನೇನು ಮಾಡಿದ್ದೀರೋ ನೋಡೋಣ ಬರ್ರಿ," ಎಂದು ಲೀಲಾವತಿಯನ್ನುದ್ದೇಶಿಸಿ ನುಡಿದು ಶಾಸ್ತ್ರಿ, ಸರಸುವಿನ ಕಡೆಗೆ ತಿರುಗಿ–"ನೀವೇನೂ ತೊಂದರೆಪಟ್ಟುಕೊಳ್ಳಬೇಕಾಗಿಲ್ಲ ಸರಸಮ್ಮ. ನಾನೂ ಇವರೂ ಸೇರಿ ಎಲ್ಲ ನೋಡಿಕೊಳ್ಳುತ್ತೇವೆ. ನೀವು ಸ್ವಲ್ಪ ವಿರಮಿಸಿಕೊಳ್ಳಿರಿ. ನಾಲ್ಕು ಗಂಟೆಗೆ ಸಭೆ ಬೇರೆ ಇದೆಯಲ್ಲ...." ಎಂದು ಹೇಳಿದ. ಸರಸು ತನ್ನ ಕೊಟಡಿಗೆ ಹೊರಟು ನಡೆದಳು.

ಹೂದೋಟವನ್ನು ತ್ಯಜಿಸಿ ಅವರಿಬ್ಬರೂ ಆಶ್ರಮದ ಅಂಗಳಕ್ಕೆ ಬಂದರು. ಎದುರಿಗೆ ಭವ್ಯವಾದ ಕಟ ಡ. ನೂರಾರು ವರ್ಷಗಳಿಗೆ ಹಿಂದೆ

ಕಟ್ಟಿಸಿದ್ದಾದರೂ ಇನ್ನೂ ಗಟ್ಟಿಮುಟ್ಟಾಗಿತ್ತು. ಮೇಲೆ ಎರಡು ಅಟ್ಟಗಳು. ಕೆಳಗಿನ ವಿಭಾಗದಲ್ಲಿ ವ್ಯವಸ್ಥಾಪಿಕೆಯ ಕಚೇರಿ ಕೊಟಡಿ, ಅದಕ್ಕೆ ಹೊಂದಿಕೊಂಡು ಅನಾಥ ಮಕ್ಕಳು ವಾಸಿಸುವ ಕೊಟಡಿಗಳು, ಅಡುಗೆಯ ಮನೆ, ಸ್ನಾನದ ಮನೆ, ಪೂಜಾಗೃಹ. ಲೀಲಾವತಿಯ ಕೊಟಡಿಯೂ ಅಲ್ಲೇ ಇತ್ತು. ಮೊದಲನೆಯ ಮೇಲಟ್ಟ ಬಾಲಕರ ಪಾಠಶಾಲೆಯಾಗಿ ಉಪಯೋಗಿಸಲ್ಪಡುತ್ತಿದ್ದಿತು. ಎರಡನೆಯದು ತುಂಬಾ ಅಂದವಾಗಿ ಅಲಂಕರಿಸಲ್ಪಟ್ಟಿದ್ದು, ಸ್ವಾಮಿಗಳ ಖಾಸಗೀ ಬಿಡಾರವಾಗಿದ್ದಿತು. ಮೊದಲಿನಿಂದಲೂ ಸ್ವಾಮಿಗಳು ಅಲ್ಲಿಯೆ ವಸತಿ ಮಾಡುತ್ತ ಬಂದಿದ್ದರು. ಈ ದಿನವೂ ಅವರಿಗಾಗಿ ಅಲ್ಲಿಯೆ ವ್ಯವಸ್ಥೆ ಮಾಡಲಾಗಿದ್ದಿತು.

ಶಾಸ್ತ್ರಿ, ಲೀಲಾವತಿ ಇಬ್ಬರೂ ಮೆಟ್ಟಲುಗಳನ್ನೇರಿ ಎರಡನೆಯ ಅಟ್ಟಕ್ಕೆ ಬಂದರು. "ಇಷ್ಟು ಹೊತ್ತಿಗಾಗಲೆ ಕಸ ಗಿಸ ಎಲ್ಲಾ ತೆಗೆಯಿಸಿ ಸ್ವಚ್ಛ ಮಾಡಿಸಿದ್ದೀರಲ್ಲ! ಹೆಸರಿಗೆ ತಕ್ಕಂತೆ ಎಲ್ಲ ಕೆಲಸಗಳನ್ನೂ ಲೀಲಾಜಾಲವಾಗಿ ಮಾಡಿಬಿಡುತ್ತೀರಿ ನೀವು!" ಎಂದು ಶಾಸ್ತ್ರಿ ನಗುತ್ತ ನುಡಿದ.

"ಈ ಹಳೆಯ ಮಂಚ ಅವರಿಗೀಗ ಸರಿಹೋಗಬಹುದೇ ?"

"ಸದ್ಯಕ್ಕೆ ಇದೇ ಇರಲಿ. ಮುಂದೆ ಬೇರೊಂದನ್ನು ತರಿಸಿ ಹಾಕಿದರಾಯಿತು," ಎಂದು ಹೇಳುತ್ತ ಶಾಸ್ತ್ರಿ ಹಳೆಯಕಾಲದ ಆ ಮರದ ಮಂಚದ ಬಳಿ ಬಂದು, ಅದರ ಮೇಲೆ ಹಾಸಿದ್ದ ಹಾಸುಗೆಯನ್ನೂ, ಮೇಲು ಹೊದ್ದಿಕೆಯನ್ನೂ ಪರೀಕ್ಷಿಸಿ ನೋಡುತ್ತ—"ಹೊಚ್ಚ ಹೊಸಾದೇ ಇದೆಯಲ್ಲ ಹೊದ್ದಿಕೆ. ಈ ಕಸೂತಿ ಕೆಲಸವೂ ನಿಮ್ಮದೇ ತಾನೆ? ಎಷ್ಟು ಸೊಗಸಾಗಿದೆ. ಮೇಲು ಹೊದ್ದಿಕೆಯ ಮೇಲೆ ಇಂಥಾ ಚಿತ್ರ ಬರೆದರೆ ಅದರ ಮೇಲೆ ಮಲಗಿಕೊಂಡವರ ಗತಿಯೇನು ? ರಾತ್ರಿಯೆಲ್ಲ ಅವರಿಗೆ ನಿದ್ರೆಯೇ ಬರಬಾರದೆಂಬ ಹೊಂಚೋ ಏನು ನಿಮ್ಮದು ?" ಎಂದು ಕೇಳಿದ.

"ನಿದ್ರೆ ಯಾಕೆ ಬರಲಾರದು ?"

"ಚಿತ್ರದಲ್ಲಿನ ಈ ಗಂಡು, ಹೆಣ್ಣನ್ನು ಹೀಗೆ ಬಿಗಿಯಾಗಿ ತಬ್ಬಿಕೊಂಡಿರುವದನ್ನು ಕಂಡು ಕಂಡೂ ನಿದ್ರೆ ಬರಲು ಸಾಧ್ಯವೇ ?"

"ಬರುವ ಹಾಗೆ ಏರ್ಪಾಟು ಮಾಡಿಕೊಳ್ಳಬೇಕು."

"ಏನಾದರೂ ಬೇರೆ ವ್ಯವಸ್ಥೆ ಮಾಡಬೇಕು ಲೀಲಾವತಿ. ಈಚೆಗೆ

ಅವರ ಸ್ವಭಾವವೇ ಬದಲಿಸಿದ ಹಾಗಿದೆ. ಆ ಮಠದ ಅಧಿಕಾರಕ್ಕೆ ಬಂದಂದಿಸಿಂದ ಹಣಕ್ಕೇನೂ ಕೊರತೆಯಿಲ್ಲ. ಮನಸ್ಸಿಗೆ ಹೊಳೆದ ಹಾಗೆ ಖರ್ಚು ಮಾಡುತ್ತಿದ್ದಾರೆ."

"ಆ ಊರಲ್ಲೂ ?"

"ಹೌದು. ಅಲ್ಲೂ ಒಬ್ಬಾಕೆ ಗಂಟು ಬಿದ್ದಿದ್ದಾಳೆ. ಗದಿಗೆವ್ವ ಅಂತ. ಅಕ್ಕನ ಬಳಗದ ಕಾರ್ಯದರ್ಶಿನಿ. ಈಗಾಗಲೆ ಸ್ವಾಮಿಗಳಿಂದ ಸಾವಿರಾರು ರೂಪಾಯಿ ಹಾರಿಸಿರಬೇಕು ಆಕೆ...."

ಲೀಲಾವತಿ ಕುತೂಹಲದಿಂದ ಕೇಳಿದಳು: "ನೋಡಲು ಬಹಳ ಚೆಲುವೆಯೋ ಏನು ?"

"ಅಂಥ ಚೆಲುವೆಯೇನೂ ಅಲ್ಲ. ಆದರೆ ಆಕರ್ಷಕವಾಗಿದ್ದಾಳೆ. ಸ್ವಾಮಿಗಳಿಗಿಂತ ದೊಡ್ಡವಳು ವಯಸ್ಸಿನಲ್ಲಿ. ಆದರೆ ಬಲು ಚದುರೆ. ಗಂಡಸರನ್ನು ವಶಪಡಿಸಿಕೊಳ್ಳುವ ಕಲೆಯೆಲ್ಲಾ ಗೊತ್ತಿದೆ ಆಕೆಗೆ...."

"ನಿಮ್ಮನ್ನೂ ಮರುಳುಗೊಳಿಸಿದ್ದಳೋ ಏನು ?"

"ಬೆಡಗಿನ ಹೆಣ್ಣು ಯಾರನ್ನು ಮರುಳುಗೊಳಿಸಲಿಕ್ಕಿಲ್ಲ ಲೀಲಾವತಿ ?"

"ನಿಮಗೇನಾದರೂ ಫಲ ?"

"ಸ್ವಾಮಿಗಳ ವಸ್ತು ಅಂತ ಹೇಳಿದೆನಲ್ಲ ? ಹಾಗೆಲ್ಲ ನಮ್ಮಂಥವರು ಕೈ ಹಾಕುವ ಹಾಗಿಲ್ಲ. ಆಕೆಯದೆಲ್ಲ ಭಾರಿ ಭಾರಿ ಕುಳಗಳು. ಆ ಊರಿನ ಮುನಿಸಿಪಾಲ್ಟಿ ಅಧ್ಯಕ್ಷರೂ ಆಕೆಯ ಗೆಳೆಯರೇ."

"ಈಗಲೂ ?"

"ಈಗ ಆ ಸಂಬಂಧವಿದೆಯೊ ಇಲ್ಲವೊ. ಬಹಳ ಮಾಡಿ ಇರಲಿಕ್ಕಿಲ್ಲ. ಸ್ವಾಮಿಗಳೊಬ್ಬರನ್ನೇ ಕೈಯಲ್ಲಿ ಹಿಡಿದುಕೊಂಡು ಅವರ ಹಣವನ್ನೆಲ್ಲ ಹೀರಲು ಸಂಕಲ್ಪಿಸಿಕೊಂಡಂತಿದೆ ಆ ಗದಿಗೆವ್ವ."

"ಆ ಅಧ್ಯಕ್ಷರೆನ್ನುವವರಿಗೆ ಇದು ಗೊತ್ತಿಲ್ಲವೆ ?"

"ಗೊತ್ತಿದ್ದರೂ ಇರಬಹುದು."

"ಅವರು ಸುಮ್ಮನಿದ್ದಾರೆಯೆ ?"

"ಇನ್ನೇನು ಮಾಡಿಯಾರು ? ಗದಿಗೆವ್ವ ಹಾಗೆಲ್ಲ ಯಾರಿಗೂ ಹೆದರುವಾಕೆಯಲ್ಲ. ಆಕೆಯ ಮನಸ್ಸಿಗೆ ವಿರುದ್ಧವಾಗಿ ಯಾರೂ ಆಕೆಗೆ ಕೈ

ಹಚ್ಚಲಾರರು. ಅಂಥ ಗಂಡುಬೀರಿ...."

"ಮದುವೆಯಾದವಳೇನ್ರೀ ಆಕೆ ?"

"ಹೆಸರಿಗೆ ಮದುವೆಯಾಗಿದೆ. ಗಂಡನೂ ಮನೆಯಲ್ಲಿದ್ದಾನೆ. ಆದರೆ ಪಾಪ, ಆತನ ಪಾಡು ನಾಯಿಪಾಡು. ಗದಿಗೆಮ್ಮ ಆತನ ಮೇಲೆ ಗಂಡನ ಹಾಗೆ ದರಬಾರು ನಡಸುತ್ತಾಳೆ. ಆತ ಪೂರಾ ಅಳುಬುರುಕ. ಆಕೆ ಹೇಳಿದ ಹಾಗೆ ಕೇಳಿಕೊಂಡು, ಮನೆಯಲ್ಲಿ ಅಡಿಗೆ ಮಾಡುತ್ತ ಬಿದ್ದಿರುತ್ತಾನೆ."

"ಇಂದಿನ ಹೆಂಗಸರೆಷ್ಟೋ ಜನ ಬಿದ್ದಿರುವ ಹಾಗೇ ಅನ್ನಿರಿ. ಅಂತೂ ಬಹಳ ಗಟ್ಟಿಗಳೇ ಇರಬೇಕು ಆ ಗದಿಗೆಮ್ಮ. ಕಲಿತವಳೇನು ?"

"ಪ್ರಾಥಮಿಕ ಸಾಲೆಯಲ್ಲಿ ಶಿಕ್ಷಕಿಯಾಗಿದ್ದಾಳೆ."

"ಮಕ್ಕಳು ?"

"ಇಂಥವಳಿಗೆ ಮಕ್ಕಳೇತಕ್ಕೆ ಬೇಕು ಲೀಲಾ ? ಅವುಗಳಿಂದ ಅನನುಕೂಲವೇ ಹೆಚ್ಚು, ಅಲ್ಲವೆ ?"

"ಇಂಥವಳು ಅಕ್ಕನ ಬಳಗದ ಕಾರ್ಯದರ್ಶಿನಿ ಹೇಗಾದಳು ? ಆ ಊರವರಿಗೆ ಇವಳ ನಡತೆ ತಿಳಿದಿಲ್ಲವೆ ?"

"ತಿಳಿದಿರಲೇಬೇಕು. ಎಷ್ಟು ದಿನಗಳ ವರೆಗೆ ಹೀಗೆ ಕದ್ದು ಮುಚ್ಚಿ ಕೆಲಸ ಮಾಡಲಾಗುತ್ತದೆ ? ಒಂದಿಲ್ಲೊಂದು ದಿನ ಗೊತ್ತಾಗಲೇಬೇಕಲ್ಲವೆ ? ಗೊತ್ತಾದರೂ ಸಹ ಯಾರೂ ಏನೂ ಮಾಡುವಂತಿಲ್ಲ. ಹಿಂದೆ ಹಿಂದೆ ಆಡಿಕೊಳ್ಳುವರು, ಅಷ್ಟೆ. ಅಕ್ಕನ ಬಳಗದ ನಾಟಕ ಹೂಡಿ ಅಲ್ಲಿ ಭಾಷಣ ಪ್ರವಚನ ಅಂತ ಮೆರೆಯಬೇಕಲ್ಲವೆ ? ಬಳಗದ ಕೆಲಸವನ್ನೆಲ್ಲ ನೋಡಿಕೊಳ್ಳಲು ಬೇರೆ ಯಾರೂ ಇಲ್ಲ. ಗದಿಗೆಮ್ಮ ಮನೆ ಮನೆಗೆ ತಿರುಗಿ ಕಷ್ಟಪಟ್ಟು ಕೆಲಸ ಮಾಡಬಲ್ಲಳು. ಸಭೆಯ ದಿನ ಬಣ್ಣ ಬಣ್ಣದ ಸೀರೆ ಉಟ್ಟುಕೊಂಡು ಬಂದು ಮೆರೆದಾಡುವುದನ್ನು ಬಿಟ್ಟರೆ ಬೇರೆ ಏನನ್ನೂ ಮಾಡುವವರಲ್ಲ ಇನ್ನುಳಿದವರು. ಸರಿ. ಗದಿಗೆಮ್ಮನ ನಡತೆ ಹೇಗಿದ್ದರೇನಂತೆ ಅವರಿಗೆ, ಕತ್ತೆ ಚಾಕರಿ ಎಲ್ಲಾ ಮಾಡುತ್ತಾಳಲ್ಲಾ ಎಂದುಕೊಂಡು ಸುಮ್ಮನಿರುತ್ತಾರೆ. ಅಲ್ಲದೆ, ಬಹಿರಂಗವಾಗಿ ಅವಳ ವರ್ತನೆಯ ಬಗ್ಗೆ ಬಾಯಿಬಿಡಲು ಯಾರಿಗೂ ಧೈರ್ಯವಿರುವದಿಲ್ಲ. ಯಾಕೆಂದರೆ ಎಲ್ಲರ ಮನೆಯಲ್ಲೂ ಒಂದಿಲ್ಲೊಂದು ಹುಳುಕು ಇದ್ದೇ ಇರುತ್ತದೆ. ಸಂಪೂರ್ಣ ಶೀಲವಂತರು ಎಷ್ಟು ಜನ ಇರು

ತ್ತಾರೆ? ಗದಿಗೆಮ್ಮ ಎಲ್ಲಾ ಕಡೆಗೂ ಓಡಾಡಿಕೊಂಡಿರುವವರಿಂದ ಆಕೆಗೆ ಎಲ್ಲರ ಹುಳುಕುಗಳೂ ಗೊತ್ತು. ತನ್ನ ವಿರುದ್ಧ ದನಿಯೆತ್ತಿದವರು ಮತ್ತೆ ಜನರಲ್ಲಿ ಮುಖ ತೋರಿಸದಂತೆ ಮಾಡಿಬಿಡುವ ಸಾಮರ್ಥ್ಯವೂ ಆಕೆಗಿದೆ. ಅಂತೇ ಎಲ್ಲರೂ ಬಾಯಿ ಮುಚ್ಚಿಕೊಂಡು ತೆಪ್ಪಗಿರುತ್ತಾರೆ. ಈಗ ನನ್ನನ್ನೇ ನೋಡುತ್ತೀರಲ್ಲ? ನಾನು ಹೇಗಿರುವೆನೆಂಬುದು ಈ ಊರವರಿಗೆಲ್ಲ ಚೆನ್ನಾಗಿ ಗೊತ್ತಿದೆ. ಆದರೂ ಏಕೆ ಸುಮ್ಮನಿದ್ದಾರೆ, ಹೇಳಿರಿ. ನಾನು ಸಂಭಾವಿತ ನಲ್ಲವೆಂಬುದನ್ನು ನಾನೇ ಒಪ್ಪುತ್ತೇನೆ. ಆದರೆ ಇಂದಿನ ಸಮಾಜದಲ್ಲಿ ನಿಜವಾದ ಸಂಭಾವಿತರು ಒಬ್ಬಿಬ್ಬರಾದರೂ ಇರಬಹುದೇ? ಎಲ್ಲರೂ ಗಾಜಿನ ಮನೆಗಳಲ್ಲೇ ವಾಸಿಸುವರು. ಇನ್ನೊಬ್ಬರ ಮೇಲೆ ಯಾರೂ ಕಲ್ಲೆಸೆಯು ವಂತಿಲ್ಲ. ಸ್ವಾಮಿಗಳ ವಿಷಯವೂ ಹಾಗೇ. ಗದಿಗೆಮ್ಮನಿಗೂ ಸ್ವಾಮಿಗಳಿಗೂ ಇರುವ ಸಂಬಂಧ ಆ ಊರಿಗೆಲ್ಲಾ ಗೊತ್ತಾಗಿರಲು ಸಾಕು. ಆದರೂ ಎಲ್ಲರೂ ಸುಮ್ಮನಿದ್ದಾರೆ. ಬೇರೆ ಮಾರ್ಗವೇ ಇಲ್ಲ. ತಾವೇ ವ್ಯಭಿಚಾರಿಗಳಾಗಿರುವಾಗ ಸ್ವಾಮಿಗಳ ವ್ಯಭಿಚಾರವನ್ನು ಆಕ್ಷೇಪಿಸಲು ಮನಸ್ಸು ಹೇಗೆ ಒಪ್ಪುತ್ತದೆ?"

"ಅಂತೂ ನಮ್ಮ ಸಮಾಜವೆಲ್ಲ ಹಾಳಾಗಿ ಹೋಗಿದೆ," ಎಂದು ವಿಷಾದ ದಿಂದ ನುಡಿದಳು ಲೀಲಾವತಿ.

"ಹಾಳಾಗಿ ನಾಶವಾಗಿ ಹೋದ ಹಳೆಯ ಸಮಾಜದ ಬೂದಿಯಲ್ಲಿ ಹೊಸ ಸಮಾಜ ಹುಟ್ಟುವದು ಲೀಲಾ. ಅಂಥ ಸಮಾಜದ ಉದಯಕ್ಕೆ ಇನ್ನು ಹೆಚ್ಚು ಸಮಯ ಕಾಯಬೇಕಾಗಿಲ್ಲ."

"ಅಂಥ ಸಮಾಜವನ್ನು ನಿರ್ಮಿಸುವವರು ನಾವೇ ಅಂತ ತೋರು ತ್ತದೆ."

"ನಿರ್ಮಿಸುವವರು ನಾವಲ್ಲವಾದರೂ ಅದಕ್ಕೆ ಕಾರಣರಾಗುವವರು ನಾವೇ. ನಾನು, ನೀನು, ಸ್ವಾಮಿಗಳು, ಗದಿಗೆಮ್ಮ, ಆಕೆಯ ಅಧ್ಯಕ್ಷ ಗೆಳೆಯರು, ಸರಸು...."

"ಸರಸುವೂ ಸಹ?"

"ಹೌದು. ಸರಸುವೂ ಸಹ. ಸ್ವಾಮಿಗಳ ಜೀವನದಲ್ಲಿ ಆಕೆಯದೂ ಒಂದು ಮುಖ್ಯ ಪಾತ್ರವಿದೆ."

"ನನ್ನ ಹಾಗೆ ಆಕೆಯನ್ನೂ ಈ ರಂಗಕ್ಕೆಳೆಯಬೇಕೆಂದು ಮಾಡಿರುವಿರೋ ಏನು?"

"ಎಳೆಯಲು ನಾನಾರು? ನಿಮ್ಮನ್ನು ನನ್ನ ಕಡೆಗೆ ಎಳೆದುತಂದ ಶಕ್ತಿಯೇ ಸರಸುವನ್ನು ಸ್ವಾಮಿಗಳ ಕಡೆಗೆ ಎಳೆಯುತ್ತಿದೆ. ಸ್ವಾಮಿಗಳನ್ನೂ ಸರಸುವಿನ ಕಡೆಗೆ ಸೆಳೆಯುತ್ತಿದೆ. ಜಗತ್ತಿನ ಎಲ್ಲ ಗಂಡು ಹೆಣ್ಣುಗಳ ಪರಸ್ಪರ ಸಂಯೋಗಕ್ಕೆ ಕಾರಣವಾಗುವ ಆ ಅದ್ಭುತ ಮಾಯಾಶಕ್ತಿ...."

"ಗದಿಗೆಮ್ಮನ ಬಗ್ಗೆ ಈಗಾಗಲೆ ಬೇಸರವಾಯಿತೇನು ಸ್ವಾಮಿಗಳಿಗೆ?"

"ಬೇಸರದ ಪ್ರಶ್ನೆಯೇ ಇಲ್ಲವಲ್ಲ ಇಲ್ಲಿ. ನಿಜ ಹೇಳಬೇಕಾದರೆ ಗದಿಗೆಮ್ಮನಿಗಿಂತ ಮೊದಲೇ ಸರಸು ಸ್ವಾಮಿಗಳ ಚಿತ್ತವನ್ನು ಸೆಳೆದಿದ್ದಳು. ಶ್ರಾವಣಮಾಸದಲ್ಲಿ ಅಲ್ಲಿ ನನ್ನ ಪ್ರವಚನ ನಡೆದಿದ್ದಿತಲ್ಲ....ಆಗ...."

"ಎಂಥಾ ಪ್ರವಚನ?"

"ಪ್ರಭುಲಿಂಗಲೀಲೆ. ಅದನ್ನೋದಿದ್ದೀರಾ ನೀವು?"

"ಇಲ್ಲ. ಕತೆ ಮಾತ್ರ ಕೇಳಿದ್ದೇನೆ. ಅದೇ ಆ ಅಲ್ಲಮ-ಮಾಯಾ ಕತೆ ಅಲ್ಲವೆ?"

"ಹೌದು, ಅದೇ. ಆ ಕಾವ್ಯದ ಅರ್ಧಭಾಗವೆಲ್ಲಾ ಪ್ರಣಯ-ಕಾಮ-ಮೋಹಗಳಿಂದ ತುಂಬಿದೆ. ಇಂಥ ಪ್ರಣಯ ಕಥೆಯ ಪ್ರವಚನ ನನ್ನಂಥವನ ಬಾಯಿಂದ ನಡೆದಿರುವಾಗ ಕೇಳುತ್ತ ಕುಳಿತ ಯುವತಿಯರ ಮನಸ್ಸು ಹೇಗೆ ಹೊಯ್ದಾಡಲಿಕ್ಕಿಲ್ಲ, ನೀವೇ ಹೇಳಿರಿ. ಪ್ರವಚನ ಕೇಳಲು ತನ್ನ ತಾಯಿಯೊಂದಿಗೆ ನಿತ್ಯವೂ ಸರಸು ಬರುತ್ತಿದ್ದಳು. ಸ್ವಾಮಿಗಳ ಪೀಠಕ್ಕೆದುರಾಗಿ ತೀರ ಸಮೀಪದಲ್ಲೇ ಕುಳಿತಿರುತ್ತಿದ್ದಳು. ಆಕೆ ಆಗ ವಿಧವೆಯಾಗಿದ್ದುದು ನಿಮಗೆ ಗೊತ್ತೇ ಇದೆ. ಉಕ್ಕಿ ಹೊರಚೆಲ್ಲುವಂಥಾ ಯೌವನ. ಎದುರಿಗೆ ಸುಂದರ ರೂಪದ ಸ್ವಾಮಿಗಳು. ಪ್ರಣಯ ಭಾವದಿಂದ ತುಂಬಿ ತುಳುಕುವ ಪ್ರವಚನ. ಪಾಪ, ಆ ಯುವತಿಯ ಗತಿ ಏನಾಗಬೇಡ? ಸ್ವಾಮಿಗಳ ಮುಖದ ಕಡೆಗೆ ಹರಿಬಿಟ್ಟ ನೋಟವನ್ನು ಹಿಂದೆಗೆದುಕೊಳ್ಳಲಾರದೆ ಆಕೆ ನರಳುತ್ತಿದ್ದುದನ್ನು ಕಂಡು ನನಗೇ ಕನಿಕರ ಬರುತ್ತಿತ್ತು. ಮಠಗಳಲ್ಲಿ, ಮಹಿಳೆಯರೆದುರಿಗೆ ಇಂಥ ಪ್ರಣಯ ಪ್ರವಚನ ನಡೆಸುವುದು ತಪ್ಪು ಎಂದು ಅನ್ನಿಸುತ್ತಿತ್ತು. ಆದರೇನು ಮಾಡುವದು? ನಾನಾಗಿಯೆ ಆ

ಪ್ರವಚನವನ್ನಾಯ್ದುಕೊಂಡಿರಲಿಲ್ಲ. ಆ ಊರ ಪೈವದವರ ಒತ್ತಾಯ ದಿಂದಾಗಿ ಅದನ್ನೇ ಹೇಳಬೇಕಾಗಿ ಬಂದಿತ್ತು. ಸ್ವಾಮಿಗಳಿಗೂ ಅದೇ ಬೇಕಿತ್ತು. ಜನರಿಗೂ ಅದೇ ಬೇಕಿತ್ತು. ನನಗೆ ಯಾವುದಾದರೇನು—ಎಲ್ಲ ಒಂದೇ. ನಾನು ಪ್ರವಚನ ಮಾಡುವದು ಹಣಕ್ಕಾಗಿ—ಅದೇ ನನ್ನ ವ್ಯವ ಸಾಯವಲ್ಲವೆ ? ಆದರೂ....ಅದರಿಂದಾಗಿ ಸರಸುವಿನಂಥ ಎಳೆ ಯುವತಿ ಯರ ಮನಸ್ಸಿನ ಮೇಲಾಗುತ್ತಿದ್ದ ಪರಿಣಾಮವನ್ನು ಕಂಡು ಕಳವಳವಾಗ ದಿರುತ್ತಿರಲಿಲ್ಲ...."

"ಪ್ರಭುಲಿಂಗಲೀಲೆ ಅಷ್ಟು ಕೆಟ್ಟ ಕಾವ್ಯವೇ ?"

"ಕೆಟ್ಟದೆಂದು ನಾ ಹೇಳುವದಿಲ್ಲ. ಎಲ್ಲ ಕಾವ್ಯಗಳ ಹಾಗೆ ಅದೂ ಒಳ್ಳೆಯ ಕಾವ್ಯವೇ. ಎಲ್ಲ ಕಾವ್ಯಗಳಲ್ಲೂ ಇರುವಂತೆ ಅದರಲ್ಲೂ ಪ್ರಣಯ ಪ್ರಸಂಗಗಳಿವೆ. ಆದರೆ....ವಿರಕ್ತರಾದ ಸ್ವಾಮಿಗಳೆದುರಿಗೆ ಈ ಪ್ರಣಯ ಕಾವ್ಯಗಳ ಪ್ರವಚನವೇತಕ್ಕೆ ಬೇಕೋ ನನಗೆ ತಿಳಿಯದು. ಇಂಥ ಪ್ರವಚನ ಗಳನ್ನಾಲಿಸುವದರಿಂದ ವಿರಕ್ತರೆ ವಿರಕ್ತಿ ಎಂದಾದರೂ ಹೆಚ್ಚುವದೇ ? ಸಂಸಾ ರಿಕರಲ್ಲಿ ವಿರಾಗ ಹುಟ್ಟುವದೇ ? ಎಂದಿಗೂ ಸಾಧ್ಯವಿಲ್ಲ. ಆದರೂ ಈ ಜನರಿಗೆ ಇಂಥ ಪ್ರವಚನಗಳೇ ಬೇಕು. ಮೊದಲಿಂದ ಕೊನೆಯವರೆಗೆ ಭಕ್ತಿ, ಮುಕ್ತಿ, ವಿರಕ್ತಿಗಳಿಂದ ಕೂಡಿದ ಪ್ರವಚನವಿದ್ದರಾಯಿತು. ಯಾರೂ ಅತ್ತ ಸುಳಿಯುವದಿಲ್ಲ. ಬಂದು ಕುಳಿತ ಒಬ್ಬಿಬ್ಬರೂ ಮೆಲ್ಲಗೆ ಎದ್ದು ಹೊರಟು ಹೋಗುತ್ತಾರೆ. ಮಠಗಳಲ್ಲೂ ಸಹ ಮನರಂಜನೆಯೇ ಬೇಕು ಈ ಜನಕ್ಕೆ. ಕೀರ್ತನ ಎಂದರೆ ನಗಿಸುವಂಥದಿರಬೇಕು. ಪ್ರವಚನ ಎಂದರೆ ಪ್ರಣಯ ಪ್ರಸಂಗಗಳಿಂದ ಕೂಡಿರಬೇಕು. ನಮ್ಮಂಥವರಿಗೆ ಹೊಟ್ಟೆಯ ಪಾಡು. ಸ್ವಾಮಿಗಳಿಗೂ ಅಷ್ಟೆ. ಈ ಸಮಾಜದ ಲಹರಿಯಂತೆಯೆ ನಾವೂ ವರ್ತಿಸ ಬೇಕಾಗುತ್ತದೆ. ನಿಜ ಹೇಳಬೇಕಾದರೆ ಇದಾವದರಲ್ಲೂ ನಮಗೆ ಮನಸ್ಸಿರು ವದಿಲ್ಲ. ಪಾಪ....ಸರಸುವಿನಂಥ ಯುವತಿಯರು...."

"ನಿಮ್ಮ ಪ್ರವಚನದಿಂದಾಗಿ ಆಕೆಯೂ ಕಾಲು ಜಾರಿದಳೇ ?"

"ಹಾಗೆ ಹೇಳಲಾಗದಿದ್ದರೂ ಆಕೆಯ ಮನಸ್ಸಿನಲ್ಲಿ ಕುದಿಯುತ್ತಿದ್ದ ಭಾವರಾಗಗಳು ಉದ್ರೇಕಗೊಳ್ಳಲು ನನ್ನ ಪ್ರವಚನ ಕಾರಣವಾಯಿತೆನ್ನ ಬಹುದು. ಎದುರಿಗೆ ಯುವಕರಾದ ಸ್ವಾಮಿಗಳು ಕುಳಿತಿದ್ದಾರೆ—ನಾನು ಏ

ಸಿದ ಧ್ವನಿಯಲ್ಲಿ—ಅಲ್ಲಮನನ್ನು ಕಂಡು ಮಾಯಾದೇವಿ ಮರುಳಾಗಿ ವೈಪರೀತ ಪ್ರಸಂಗವನ್ನು ಹೇಳುತ್ತಿದ್ದೇನೆ: 'ಕಂಟಕಿತವಾದವೆರಡುಂ ದೃಷ್ಟಿವೈದೋರೆ, ಗಂಟ್ಟೆಕ್ಕಿದುವು ನೋಟವೆಯ್ದೆ ಕಾಮಂ ನಿಾರೆ....' ಅದನ್ನು ಸರಲವಾದ ಭಾಷೆಯಲ್ಲಿ ರಸವತ್ತಾಗಿ ಅರ್ಥಮಾಡಿ ಹೇಳುತ್ತಿದ್ದೇನೆ. ಪಾಪ. ಆಗ ಸರಸುವಿನ ಸ್ಥಿತಿ ವಿಚಿತ್ರವಾಗಿತ್ತು. ಸ್ವಾಮಿಗಳೂ ಆಕೆಯನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದರು....ಆಗಲೇ ನನಗೆ ಗೊತ್ತಾಯಿತು. ಇವರಿಬ್ಬರಿಗೂ ಪರಸ್ಪರರ ಬಗ್ಗೆ ಮೋಹವುಕ್ಕೇರಿದೆಯೆಂದು...."

"ನಿಜವೇ ನೀವು ಹೇಳುವದು ?"

"ನಿಜ. ಇಂಥ ವಿಷಯಗಳಲ್ಲಿ ನನ್ನ ಅನುಭವವೆಷ್ಟು ಎಂಬುದು ಗೊತ್ತೇ ಇದೆಯಲ್ಲ ನಿಮಗೆ. ಸ್ವಾಮಿಗಳಿಗಂತೂ ಅವೊತ್ತು ಹುಚ್ಚೇ ಹಿಡಿದ ಹಾಗಾಗಿತ್ತು. ಮಹಾಶ್ವೇತೆಗೆ ಮರುಳಾಗಿ ನರಳುತ್ತ ಬಿದ್ದ ಪುಂಡರೀಕನಂತೆ ನಿಟ್ಟುಸಿರು ಹಾಕುತ್ತ ರಾತ್ರಿಯೆಲ್ಲ ಗೋಳಾಡಿದರು. 'ಅಯ್ಯೋ ಶಾಸ್ತ್ರಿ, ಎಂಥ ರೂಪು...ಏನು ಯೌವನ....ಎಂಥಾ ಸುಂದರವಾದ ಕಣ್ಣುಗಳು.....ಆಕೆಯೂ ನನ್ನನ್ನು ಕಂಡು ಮರುಳಾದಂತೆ ಕಾಣಿಸಿತು. ಅಯ್ಯೋ, ಆಕೆಯಿಲ್ಲದೆ ನಾನು ಜೀವ ಹಿಡಿದುಕೊಂಡಿರಲಾರೆ' ಎಂದು ಗೋಗರೆದರು. ಅವರನ್ನು ಸಮಾಧಾನಪಡಿಸಬೇಕಾದರೆ ಸಾಕು ಸಾಕಾಗಿ ಹೋಯಿತು. ಅಂದಿನಿಂದ ಆಕೆಯ ಗೀಳು ಹಿಡಿದಿದೆ ಅವರಿಗೆ. ನಡುವೆ ಒಂದು ಸಂದರ್ಭದಲ್ಲಿ ಆಕೆ ಅವರಿಗೆ ಸಿಕ್ಕುವ ಹಾಗಿದ್ದಿತಾದರೂ ಈ ಶಿವಮೂರ್ತಿಯಿಂದಾಗಿ ಅದು ತಪ್ಪಿಹೋಯಿತು. ಆತ ಅವಳನ್ನೆತ್ತಿ ಓಡಿಸಿಕೊಂಡು ಬಂದ. ನಿರಾಸೆಯಿಂದ ಹುಚ್ಚರಂತಾದ ಸ್ವಾಮಿಗಳು ಅದೇ ದಿನವೇ ಗದಿಗೆಮ್ಮನ ಉಡಿಗೆ ಬಿದ್ದರು. ಆದರೂ ಸರಸುವಿನ ಬಗೆಗೆ ಅವರಿಗಿರುವ ಮೋಹವೇನೂ ಮಾಯವಾಗಿಲ್ಲ. 'ಸಾವಿರ ರೂಪಾಯಿ ಹೋದರೂ ಚಿಂತೆಯಿಲ್ಲ, ಮಠದ ಆಸ್ತಿಯೆಲ್ಲ ಹೋದರೂ ಚಿಂತೆಯಿಲ್ಲ ಶಾಸ್ತ್ರಿ, ಆ ಬಳ್ಳಿಯಂಥ ಹುಡುಗಿಯನ್ನು ಹೇಗಾದರೂ ಮಾಡಿ ತಂದುಕೊಡಲೇಬೇಕು ನೀವು. ಇಂದಿಲ್ಲ ನಾಳೆಯಾದರೂ ಆಕೆಯ ಸಹವಾಸಯೋಗವೊದಗಬಹುದೆಂಬ ಆಸೆಯಿಂದಲೇ ಬದುಕಿದ್ದೇನೆ. ಏನಾದರೂ ಮಾಡಿ ಶಾಸ್ತ್ರಿ....' ಎಂದು ಎಷ್ಟೋ ಸಲ ದುಂಬಾಲ ಬಿದ್ದಿದ್ದಾರೆ."

"ಹಾಗಾದರೆ ಸರಸುವಿನ ಬಗ್ಗೆ ಭಾರಿ ಹುಚ್ಚೇ ಹಿಡಿದಿದೆಯೆಂದಂತಾಯಿತಲ್ಲ ಸ್ವಾಮಿಗಳಿಗೆ. ಅವಳಿಗೆ ಮದುವೆಯಾದದ್ದು ಅವರಿಗೆ ಗೊತ್ತಿಲ್ಲವೆ?"

"ಗೊತ್ತಿರದೆ ಏನು ? ಗೊತ್ತಿದೆ. ಆದರೂ ಅವರು ಆಸೆ ಬಿಟ್ಟಿಲ್ಲ. ಈ ಆಸೆಯೂ ಅಂಥಾದ್ದೇ. ಹೀಗೆಲ್ಲಾ ತೊಲಗುವಂಥದಲ್ಲ. ಮದುವೆಯಾದರೇನಂತೆ ? ಆ ಗಂಡ ಮನೆಯಲ್ಲಿರುತ್ತಾನೆ. ಸರಸು ಸಿಕ್ಕರೆ ಸಾಕಲ್ಲ ಇವರಿಗೆ ? ಈಗ ಗದಿಗೆವ್ವ ಇಲ್ಲವೆ ? ಹಾಗೆ....."

"ಗದಿಗೆವ್ವನ ಗಂಡನ ಹಾಗೆ ಈಕೆಯ ಗಂಡನೇನೂ ಅಳುಬುರುಕನಲ್ಲವಲ್ಲ ?"

"ಆತನಿಗಿಂತಲೂ ಹೆಚ್ಚಿನ ಅಳುಬುರುಕ ಈತ. ನಮ್ಮ ಆಫೀಸಿನಲ್ಲೇ ಕೆಲಸದಲ್ಲಿದ್ದಾನಲ್ಲ. ಮನುಷ್ಯ ಬಹಳ ಉದಾಸೀನ ಪ್ರಕೃತಿಯವ. ಯಾವಾಗಲೂ ಅಳುಮೊಗದಿಂದಲೇ ಇರುತ್ತಾನೆ. ಯಾವುದರಲ್ಲೂ ಉತ್ಸಾಹವಿಲ್ಲ. ಕತ್ತೆಯ ಹಾಗೆ ಕೆಲಸ ಮಾಡುತ್ತಾನೆ. ಅದರಲ್ಲೇನೂ ಮೈಗಳ್ಳತನ ಮಾಡುವದಿಲ್ಲ. ಆದರೆ ರಸಿಕತನದಲ್ಲಿ ಮಾತ್ರ ಕೇಳಬೇಡಿರಿ. ಅದರಲ್ಲಿ ಪೂರಾ ವಿರಕ್ತನಾಗಿದ್ದ ಹಾಗೆ ತೋರುತ್ತದೆ."

"ಹೌದು. ಹಾಗೇ ಇರಬೇಕು. ಇದೇ ಈಗ ಸರಸೂ ಸಹ ಇದೇ ಮಾತೇ ಹೇಳುತ್ತಿದ್ದಳು. ಆಕೆಗೂ ಬೇಸರವಾದಂತೆ ಕಾಣಿಸಿತು."

"ಬೇಸರವೇ ? ಬಹಳ ಒಳ್ಳೆಯದೇ ಆಯಿತು. ನಮಗೂ ಇದೇ ಬೇಕಾಗಿತ್ತು. ಸ್ವಾಮಿಗಳ ಕೆಲಸಕ್ಕೆ ಇನ್ನೂ ಅನುಕೂಲವೇ ಆಯಿತಲ್ಲ ?"

"ಅಂದರೆ ? ನಿಮ್ಮ ವಿಚಾರವಾದರೂ ಏನು ?"

"ಇಷ್ಟು ಹೊತ್ತು ಕಂಠಶೋಷಣೆ ಮಾಡಿಕೊಂಡರೂ ಇನ್ನೂ ತಿಳಿಯಲಿಲ್ಲವೇನು ನಿಮಗೆ ? ಆಸ್ತಿಯೆಲ್ಲಾ ಹೋದರೂ ಚಿಂತೆಯಿಲ್ಲ ಸ್ವಾಮಿಗಳಿಗೆ. ಸರಸು ಸಿಕ್ಕಲೇಬೇಕು. ಆಕೆಯನ್ನು ಅವರಿಗೆ ಕೂಡಿಸುವ ಹೊಣೆ ನಾನು ಹೊತ್ತಿದ್ದೇನೆ. ಒಂದು ಉತ್ಕೃಷ್ಟವಾದ ಯೋಜನೆ ತಯಾರಿಸಿ ಆ ಪ್ರಕಾರ ಕೆಲಸ ಮಾಡುತ್ತಿದ್ದೇನೆ."

"ಅಂತೂ ಅಸಾಮಾನ್ಯರು ನೀವು. ಏನದು ಅಂಥಾ ಯೋಜನೆ ?"

"ನಿಮಗೆ ಈಗಾಗಲೇ ತಿಳಿದಿರಬಹುದೆಂದುಕೊಂಡಿದ್ದೆ."

"ಸ್ವಲ್ಪ ಹೊಳೆದಂತಾಗಿದೆ. ಪೂರಾ ತಿಳಿಯಲಿಲ್ಲ."

"ಸರಸುವಿಗೆ ಇಲ್ಲಿ ವ್ಯವಸ್ಥಾಪಿಕೆಯ ಕೆಲಸ ಕೊಡಿಸಿದ್ದು, ಆಕೆಯ ಗಂಡನಿಗೆ ನಮ್ಮ ಆಫೀಸಿನಲ್ಲಿ ಕೆಲಸ ಕೊಟ್ಟದ್ದು ಎಲ್ಲವೂ ಈ ಯೋಜನೆಯ ಪ್ರಕಾರವೇ. ಆಕೆಯ ಗಂಡನಿಗೆ ನಾನು ಕೊಡುವ ಸಂಬಳವೂ ಸಹ ಸ್ವಾಮಿಗಳಿಂದಲೇ ಬರುತ್ತದೆ. ಸರಸುವನ್ನು ಒಲಿಸಿಕೊಳ್ಳಲು ನಾವು ಎಷ್ಟು ಹಣ ಖರ್ಚುಮಾಡಿದರೂ ಚಿಂತೆಯಿಲ್ಲವೆಂದು ಅವರ ಅಪ್ಪಣೆಯಾಗಿದೆ. ಈ ಕೆಲಸದಲ್ಲಿ ನಿಮ್ಮಿಂದಲೂ ನೆರವು ಪಡೆಯಬೇಕೆಂದು ಅವರು ಹೇಳಿದ್ದಾರೆ."

"ನನ್ನಿಂದ ? ನಾನೇನು ಮಾಡಬಲ್ಲೆ ?"

"ಪೂರ್ವಕಾಲದಲ್ಲಿ ದೂತೆಯರು ಯಾವ ಕೆಲಸ ಮಾಡುತ್ತಿದ್ದರೋ ಆ ಕೆಲಸವನ್ನು."

"ಪಾಪ, ಆ ಹುಡುಗಿಯನ್ನು ಹೇಗೆ ಕೆಡಿಸುವುದು ....."

"ನನಗೂ ಪಾಪ ಎನ್ನಿಸುತ್ತದೆ ಲೀಲಾ. ಆದರೆ ಯಾರಿಗೆ ಯಾರೂ ಪಾಪ ಅಂದು ಬದುಕುವಂತಿಲ್ಲ ಈ ಪ್ರಪಂಚದಲ್ಲಿ. ನಮ್ಮ ಸ್ಥಿತಿಯನ್ನು ನಾವು ಗಟ್ಟಿಗೊಳಿಸಿಕೊಳ್ಳಬೇಕಲ್ಲ ? ನಾಳೆ ಹೇಗೋ, ನಾಡದು ಹೇಗೋ ? ನಾನು ಮುದುಕನಾದ ಬಳಿಕ ಇಂದಿನಂತೆ ಕೀರ್ತನ ಮಾಡಲಾಗುತ್ತದೆಯೆ ? ಪ್ರವಚನ ಮಾಡಲಾಗುತ್ತದೆಯೆ ? ಪತ್ರಿಕೆ ಹೊರಡಿಸಲಾಗುತ್ತದೆಯೆ ? ವೃದ್ಧಾಪ್ಯದಲ್ಲಿ ಸುಖವಾಗಿ ಕಾಲ ಕಳೆಯಲು ಅವಶ್ಯವಿರುವಷ್ಟು ಹಣವನ್ನಾದರೂ ಸಂಪಾದಿಸದಿದ್ದರೆ ಹೇಗೆ ? ನಿಮ್ಮ ವಿಚಾರವೂ ಹಾಗೇ. ಇವೊತ್ತೇನೋ ಈ ನೌಕರಿಯಿದೆ. ನಾನೂ ಇದ್ದೇನೆ. ಈಗೇನೋ ಎಲ್ಲ ನೆಟ್ಟಗಿದೆ. ಆದರೆ ಇದೆಲ್ಲಾ ಎಷ್ಟು ದಿನಗಳದ್ದು ? ಈ ವಯಸ್ಸು ಶಾಶ್ವತವೆ ? ಈ ಆರೋಗ್ಯ ಶಾಶ್ವತವೆ ? ಈ ಯೌವನ ಶಾಶ್ವತವೆ ? ನಾಳೆ ಚರ್ಮ ಸುಕ್ಕುಗಟ್ಟುತ್ತದೆ. ಹಲ್ಲು ಕಳಚಿ ಬೀಳುತ್ತವೆ. ಕೂದಲು ಉದುರಿಹೋಗುತ್ತವೆ. ಶಕ್ತಿಯಿಲ್ಲದಾಗುತ್ತದೆ. ಆಗ ನೌಕರಿ ಎಲ್ಲಿನದು ? ನಾನಾದರೂ ಎಷ್ಟರವನು ? ಸ್ವಾಮಿಗಳಾದರೂ ಎಷ್ಟರವರು ? ಅಂಥ ಸಮಯದಲ್ಲಿ ಯಾರಿಗೆ ಯಾರೂ ಇಲ್ಲ ಲೀಲಾ. ನಮಗೆ ನಾವೇ. ಆಗ ಇರಲು ಮನೆಯಿಲ್ಲದೆ, ತಿನ್ನಲು ಅನ್ನವಿಲ್ಲದೆ ಬೀದಿ ಬೀದಿ ತಿರುಗುತ್ತ ಭಿಕ್ಷೆ ಬೇಡುವ ಪ್ರಸಂಗ ಬರಬಾರದಲ್ಲವೆ ? ಅಂತೆಯೆ ನಾಳಿನ ಭರವಸೆಗಾಗಿ ಇಂದು ಈ ಹಣವನ್ನು ನಾವು ಸಂಗ್ರಹಿಸಲೇಬೇಕು. ಹಣ ಸಂಗ್ರಹಿಸುವುದೊಂದೇ ನಮ್ಮ ಗುರಿಯಾಗಿರುವಾಗ ಅದನ್ನು

ಹೇಗೆ ಸಂಗ್ರಹಿಸಿದರೂ ಚಿಂತೆಯಿಲ್ಲ. ಪ್ರಪಂಚವೆಲ್ಲ ಹಾಗೇ ಸಂಗ್ರಹಿಸುತ್ತಿರುವಾಗ ನಾವೂ ಸಹ ಅದರಂತೆಯೆ ವರ್ತಿಸಬೇಕಲ್ಲವೆ ? ನ್ಯಾಯ, ನೀತಿ, ಶೀಲ, ಪಾವಿತ್ರ್ಯ ಅಂತ ಕುಳಿತುಕೊಂಡರೆ ಮುಗಿಯಿತು. ವೃದ್ಧಾಪ್ಯದಲ್ಲಿ ಆ ಶಬ್ದಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವೆ? ಅವುಗಳನ್ನು ಹಾಸಿ ಹೊದೆದು ನಿದ್ರಿಸಲು ಸಾಧ್ಯವೆ? ನಿಮ್ಮ ಕಣ್ಣೆದುರಿಗೇ ದಿನವೂ ಎಷ್ಟು ಜನ ಭಿಕಾರಿಗಳು ಹಾಯ್ದು ಹೋಗುವದಿಲ್ಲ. ಅವರಲ್ಲಿ ಮುದುಕರಿರುತ್ತಾರೆ, ಮುದುಕಿಯರಿರುತ್ತಾರೆ, ರೋಗಿಗಳಿರುತ್ತಾರೆ, ನಿಶ್ಶಕ್ತರಿರುತ್ತಾರೆ. ಅವರಲ್ಲಿ ಅನೇಕರು ನಿಜವಾಗಿಯೂ ಶೀಲವಂತರೂ, ನೀತಿವಂತರೂ ಆದವರಿರಬಹುದು. ಅವರು ಸತ್ಯಸಂಧರಾಗಿದ್ದುದರಿಂದಲೇ ಅವರಿಗೆ ಈ ಹೀನಸ್ಥಿತಿಬಂದಿರಬಹುದು. ಸತ್ಯ, ನ್ಯಾಯ, ನೀತಿ, ಶೀಲಗಳನ್ನು ಬಾಯಲ್ಲಿ ಹೊಗಳುವ ಈ ಸಮಾಜ ಈ ಅನ್ನಾನ್ನಗತಿಕರನ್ನು ಕಣ್ಣೆತ್ತಿ ನೋಡುವುದೂ ಇಲ್ಲವಲ್ಲ? ನೀತಿಯಿಂದ ನಡೆದವರನ್ನು ಭಿಕಾರಿಗಳನ್ನಾಗಿ ಮಾಡಿ ಬೀದಿಗೆಸೆಯುವ ಈ ಸಮಾಜದಲ್ಲಿಯೆ ಬದುಕಬೇಕಾದರೆ, ಸುಖವಾಗಿ ಬದುಕಬೇಕಾದರೆ ನೀತಿಗೀತಿ ಎಂಬ ಹುಚ್ಚನ್ನು ತಲೆಗೆ ಹಾಕಿಕೊಂಡು ಉಪಯೋಗವಿಲ್ಲ. ನಾಳಿನ ಬುತ್ತಿಗೆ ಆಧಾರವಾಗಿ ಇಂದೇ ಹಣ ಸಂಗ್ರಹಿಸುವದು ತಿಳಿದವರ ರೀತಿ. ಬಸವಣ್ಣನವರು ಹೇಳಿದ್ದಾರೆ. ಗೊತ್ತಿಲ್ಲನೆ ?" ಎಂದು ನುಡಿದು ಶಾಸ್ತ್ರಿ—

"ನೆರೆ ಕೆನ್ನೆಗೆ, ತೆರೆ ಗಲ್ಲಕ್ಕೆ, ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕಯ್ಯನೂರಿ, ಕೋಲು ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲ ಸಂಗಮದೇವನ," ಎಂಬ ವಚನವನ್ನು ಅಂದು

ತೋರಿಸಿದ. "ಎಷ್ಟು ಚೆನ್ನಾಗಿ ಹೇಳಿದ್ದಾರಲ್ಲ ಬಸವಣ್ಣನವರು ! ಕೂಡಲ ಸಂಗನನ್ನು ಪೂಜಿಸು ಎಂದು ಅವರೆಂದರು. ಧನದೇವನನ್ನು ಪೂಜಿಸು ಎಂದು ನಾವು ಸೇರಿಸಿಕೊಳ್ಳಬೇಕು, ಅಷ್ಟೆ."

"ಒಳ್ಳೆ ಶಾಸ್ತ್ರಿಗಳೇ ನೀವು! ಕೀರ್ತನ ಕಂಠೀರವ ಎಂಬ ಬಿರುದು ಇವಕ್ಕೇ ಸಿಕ್ಕಿತೋ ಏನೊ !"

"ಬಿರುದು ಪಡೆಯುವದೆಂದರೆ ಏನು ದೊಡ್ಡ ಕೆಲಸ ಲೀಲಾ. ಇಷ್ಟೊತ್ತೀ ಬೇಕಾದರೆ ಹತ್ತು ಬಿರುದುಗಳನ್ನು ಕೊಡಿಸುತ್ತೇನೆ ನಿನಗೆ. ಬೇಕೇನು ?"

"ಆ ಬಿರುದು ತೆಗೆದುಕೊಂಡು ನಾನೇನು ಮಾಡಲಿ? ಎಲ್ಲಾ ನಿಮಗೇ ಇರಲಿ."

"ಅದಿರಲಿ ಲೀಲಾ. ಸರಸುವಿನ ವಿಚಾರ ಹೇಗೆ ಮಾಡೋಣ ?"

"ನಿಮ್ಮ ವಿಚಾರ ಹೇಗಿದೆಯೆಂಬುದು ಗೊತ್ತಾಗಲಿ ಮೊದಲು."

"ಮೊದಲಿನಿಂದಲೂ ಆಕೆಗೆ ಸ್ವಾಮಿಗಳ ಬಗ್ಗೆ ಆಕರ್ಷಣೆಯಿದ್ದೇ ಇದೆ. ಮದುವೆಯಾಗಿದ್ದರೂ ಸಹ ಆ ಆಕರ್ಷಣೆ ತಪ್ಪಿರಲಾರದು. ಅಲ್ಲದೆ, ಗಂಡನ ಬಗ್ಗೆ ಆಕೆಗೆ ಈಗಾಗಲೆ ಬೇಸರವೂ ಬಂದಿದೆ. ಆ ಬೇಸರದಿಂದಾಗಿ ಆಕೆ ಸ್ವಾಮಿಗಳ ಕಡೆ ಹೊರಳುವದು ತೀರ ಸುಲಭವೇ ಆಗಬಹುದು. ಆಕೆಯ ಸ್ವಭಾವವನ್ನೂ ನಾನು ಸ್ವಲ್ಪ ಸ್ವಲ್ಪ ಅರ್ಥಮಾಡಿಕೊಂಡಿದ್ದೇನೆ. ಮೊದಲಿನಿಂದಲೂ ಸುಖದಲ್ಲಿ ಬೆಳೆದ ಹುಡುಗಿ, ಇನ್ನು ಮುಂದೆಯೂ ಸುಖವಾಗಿಯೆ ಇರಲು ಬಯಸುವದು ಸ್ವಾಭಾವಿಕ. ಷೋಕಿ ಮಾಡುವ ಆಸೆಯೂ ಇದ್ದಂತಿದೆ. ಅಲ್ಲವೆ ?"

"ಹೌದು. ಆಕೆಗೆ ಕೆಲಸವೆಂದರೆ ತಲೆನೋವು. ಈ ವ್ಯವಸ್ಥಾಪಿಕೆಯ ಕೆಲಸದಲ್ಲಿ ಈಗಾಗಲೆ ಆಕೆಗೆ ಬೇಸರವಾದಂತಿದೆ. ಎಲ್ಲಾ ನಾನೇ ನೋಡಿಕೊಳ್ಳಬೇಕಾಗಿದೆ."

"ನಮಗೆ ಇನ್ನೂ ಅನುಕೂಲವೇ ಆದಂತಾಯಿತಲ್ಲ? ಕೈಗೆ ಕೊಂಚ ಹಣ ಕೊಟ್ಟು, ಎಂಟು ಹತ್ತು ಸಿಲ್ಕ್ ಸೀರೆ ತೆಗೆಯಿಸಿಕೊಟ್ಟರೆ, ಒಂದೆರಡು ಚಿನ್ನದ ಒಡವೆ ಮಾಡಿಸಿಕೊಟ್ಟರೆ ಮುಗಿಯಿತು."

"ಇನ್ನೂ ಒಂದು ವಿಷಯ. ಆಕೆಗೆ ಸಿನಿಮಾ ಅಂದರೆ ವಿಪರೀತ ಹುಚ್ಚು."

"ಅದರ ಉಪಯೋಗವನ್ನೂ ಮಾಡಿಕೊಂಡರಾಯಿತು. ಸ್ವಾಮಿಗಳ ಮೋಟಾರನ್ನು ಆಕೆಗೇ ಕೊಟ್ಟ ಹಾಗೆ ಮಾಡೋಣ. ಥಿಯೆಟರಿನಿಂದ ಥಿಯೆಟರಿಗೆ ಸುಖವಾಗಿ ತಿರುಗಾಡಲಿ."

"ಆದರೂ...."

"ಆದರೂ, ತುಂಬ ಎಚ್ಚರಿಕೆಯಿಂದ ಕೆಲಸ ಮಾಡಬೇಕು ಲೀಲಾ.

ಹೆಣ್ಣಿನ ನೆಲೆ, ಕುದುರೆಯ ನೆಲೆ ತಿಳಿಯುವದು ಸಾಧ್ಯವೇ ಇಲ್ಲವಲ್ಲ. ನಾವು ಆಕೆಯನ್ನು ಬಲಿಗೆ ಬೀಳಿಸುತ್ತಿರುವೆನೆಂಬ ಕಲ್ಪನೆಯೂ ಆಕೆಗೆ ಸುಳಿಯು ದಂತೆ ಎಚ್ಚರವಾಗಿರಬೇಕು. ಇಲ್ಲವಾದರೆ ಅನರ್ಥವಾದೀತು."

"ನೀವನ್ನುವದು ನಿಜ. ಬಹಳ ಹುಷಾರಾಗಿ ಕೆಲಸ ಮಾಡಬೇಕು. ಈಗಾಗಲೆ ನಾನು ಆಕೆಯ ತಲೆಯಲ್ಲಿ ಕೆಲವು ವಿಚಾರ ತುಂಬಿದ್ದೇನೆ. ಗಂಡು ಹೆಣ್ಣಿನ ಸ್ವೈರ ಪ್ರಣಯದಲ್ಲಿ ತಪ್ಪೇನೂ ಇಲ್ಲನೆಂಬ ಭಾವನೆ ಆಕೆಯಲ್ಲಿ ಹುಟ್ಟುವ ಹಾಗೆ ಮಾಡಿದ್ದೇನೆ. ಅನುಭವವಿಲ್ಲದ ಯುವತಿಯರಿಗೆ ಇಂಥ ಹೊಸ ವಿಚಾರಗಳು ಬಲುಬೇಗ ಹಿಡಿಸುತ್ತವೆ. ಅಲ್ಲದೆ ಇಂಥ ದೃಶ್ಯಗಳಿಂದ ತುಂಬಿದ ಆಧುನಿಕ ಸಿನಿಮಾಗಳಿಂದ ಇವರ ಮನಸ್ಸಿನ ಮೇಲಾದ ಪ್ರಭಾ ವವೂ ಬೇರೆ. ಅಂತೂ ಇಂತೂ ಕೆಲಸ ಸಾಧಿಸುವ ಹಾಗಿದೆ."

"ಇಂದೇ ಸಾಧಿಸಬೇಕು ಲೀಲಾ. ಇವೊತ್ತು ಸರಸು ಇಲ್ಲಿಯೆ ಇರುವ ಹಾಗಾಗಬೇಕು. ಈ ಕೆಲಸ ಸಾಧಿಸಿದಿರೆಂದರೆ ಮುಂದೆ ರಾಣಿಯ ಹಾಗಿ ರುತ್ತೀರಿ ನೀವು. ಯಾವುದರ ಕೊರತೆಯೂ ಇಲ್ಲ," ಎಂದು ಹೇಳಿ ಶಾಸ್ತ್ರಿ ಜೇಬಿನಿಂದ ನೂರು ರೂಪಾಯಿಯ ಮೂರು ನೋಟುಗಳನ್ನು ತೆಗೆದು ಆಕೆಯ ಕೈಯಲ್ಲಿಡುತ್ತ-"ಇದನ್ನು ಹೇಗೆ ಬೇಕಾದರೂ ಉಪಯೋಗಿಸಿ ಕೊಳ್ಳಬಹುದು ನೀವು. ಸರಸುವಿಗೆ ಸೀರೆಯನ್ನಾದರೂ ಕೊಡಿಸಬಹುದು. ಏನಾದರೂ ಮಾಡಬಹುದು. ಅಂತೂ ಇಂದೇ ಹಕ್ಕಿ ಬಲೆಗೆ ಬೀಳಬೇಕು. ನಾನೀಗ ಹೋಗುತ್ತೇನೆ. ಎಲ್ಲವೂ ನಿಮ್ಮನ್ನೇ ಕೂಡಿದೆ," ಎಂದ.

"ಪ್ರಯತ್ನಪಡುತ್ತೇನೆ."

"ಯಶಸ್ವಿಯಾಗಿಯೆ ಆಗುವಿರಲ್ಲವೆ ?"

"ಆಗಲೇಬೇಕಲ್ಲ ? ಇಲ್ಲವಾದರೆ ನೀವು ಬಿಡುತ್ತೀರಾ ? ಸ್ವಾಮಿಗಳು ಬಿಡುತ್ತಾರೆಯೆ ?"

ಆ ದಿನದ ಸಂಜೆಯೆಲ್ಲವನ್ನೂ ಲೀಲಾವತಿ ಆ ಪ್ರಯತ್ನದಲ್ಲಿಯೆ ಕಳೆ ದಳು. ಕುದುರೆಗಾಡಿಯೊಂದನ್ನು ತರಿಸಿ ಸರಸುವನ್ನು ಪೇಟೆಗೆ ಕರೆದೊಯ್ದು ಆಕೆಯ ಮನಸ್ಸಿಗೊಪ್ಪಿಗೆಯಾದ ರೇಶಿಮೆಯ ಸೀರೆಯೊಂದನ್ನು ಕೊಡಿಸಿದಳು. "ಹಣವಿಲ್ಲವಲ್ಲಾ ?" ಎಂದು ಆಕೆ ಹಿಂಜರಿದಾಗ-"ಏನೂ ಚಿಂತೆ ಮಾಡ ಬೇಡಿರಿ. ನಿಧಾನವಾಗಿ ಕೊಟ್ಟರಾದೀತು. ಅಂತೂ ನೀವು ಸಂತೋಷ

ವಾಗಿದ್ದರಾಯಿತು," ಎಂದು ನುಡಿದು ಆ ವಿಷಯವನ್ನೇ ಹಾರಿಸಿದಳು. ತುಂಬ ಬೆಲೆ ಬಾಳುವ ಸುಗಂಧವೆಣ್ಣೆ, ಸ್ನೋ, ಪೌಡರ್, ತುಟಿಗೆಂಪುಗಳನ್ನು ಕೊಡಿಸಿದಳು. ಒಂದು ಬುಟ್ಟಿಯ ತುಂಬ ಹೂವು. ಅವುಗಳನ್ನೆಲ್ಲ ತೆಗೆದುಕೊಂಡು ಆಶ್ರಮಕ್ಕೆ ಹಿಂದಿರುಗುವಾಗ ಸರಸು–"ಇದೆಲ್ಲಾ ಏನು ಸಡಗರವಮ್ಮಾ ?" ಎಂದು ಕೇಳಿದರೆ–"ಸ್ವಾಮಿಗಳ ಅಪ್ಪಣೆಯ ಪ್ರಕಾರ ಎಲ್ಲಾ ನಡೆಯಬೇಕಲ್ಲ ತಾಯೀ ? ಇವೊತ್ತು ರಾತ್ರಿ ಅವರು ಆಶ್ರಮಕ್ಕೆ ಬಂದಾಗ ನಾವೆಲ್ಲರೂ ಅಲಂಕರಿಸಿಕೊಂಡು ನಗುನಗುತ್ತಾ ಇರಬೇಕೆಂದು ಅವರ ಇಷ್ಟ. ಆರೀತಿ ಮೊದಲೇ ಕಾಗದ ಬರೆದಿದ್ದಾರೆ," ಎಂದು ಉತ್ತರವಿತ್ತಳು ಲೀಲಾವತಿ. "ಈ ಹಣವನ್ನೆಲ್ಲ ಅವರೇ ಕೊಟ್ಟರೇನು?" ಎಂದು ಸರಸು ಪ್ರಶ್ನಿಸಲು "ಹಣ ಅಂದರೆ ಹಣ. ಅವರದು ಇವರದು ಎಂಬ ಭೇದಭಾವ ಎಷ್ಟು ದಿನದ್ದು ಸರಸಮ್ಮ ? ಮನುಷ್ಯ ಸುಖವಾಗಿ ಬದುಕುವುದಕ್ಕಾಗಿಯೆ ಹಣ ಇರುವದು ತಾನೆ ? ಅವರ ಮೂಲ ಉದ್ದೇಶ ಸಾಧಿಸಿದರಾಯಿತು. ಅದು ಯಾರದಾದರೇನಂತೆ. ಈ ಬಿಳಿಯ ಸಿಲ್ಕ್ ಸೀರೆ ನಿಮ್ಮ ರೂಪಕ್ಕೆ ಚೆನ್ನಾಗಿ ಒಪ್ಪುತ್ತದೆ. ಇದನ್ನುಟ್ಟುಕೊಂಡು ಬಿಳಿಯ ಮಲ್ಲಿಗೆಯ ದಂಡೆಯನ್ನು ಮುಡಿದು ನಿಂತಿರೆಂದರೆ ನೀವು ರಾಜಕುಮಾರಿಯ ಹಾಗೆ ಕಾಣುತ್ತೀರಿ. ಇಂಥ ಸುಂದರವಾದ ಸೀರೆಗಳಿರುವದಾದರೂ ಯಾತಕ್ಕಾಗಿ ? ನಿಮ್ಮಂಥ ರೂಪವತಿಯರಿಗಾಗೇ ಅಲ್ಲವೆ ? ನೀವು ಇವುಗಳನ್ನುಡದಿದ್ದರೆ ಇನ್ನೇನು, ನಮ್ಮಂಥವರು ಉಡಬೇಕೆ !" ಎಂದು ಹೇಳಿ ಸರಸುವನ್ನು ಉಬ್ಬಿಸಿದಳು. ಅನಂತರ ಸರಸು ಹಣದ ವಿಚಾರ ಎತ್ತಲೇ ಇಲ್ಲ. ಯಾವಾಗ ಆಶ್ರಮಕ್ಕೆ ಹೋಗುವೆನೋ, ಯಾವಾಗ ಆ ಸೀರೆಯನ್ನುಟ್ಟುಕೊಂಡು ಕನ್ನಡಿಯೆದುರಿಗೆ ನಿಂತು ರೂಪವನ್ನು ನೋಡಿಕೊಳ್ಳುವೆನೋ ಎಂದು ಆತುರಳಾದಳು.

ನಾಲ್ಕು ಗಂಟೆಗೆ ಸರಿಯಾಗಿ ಸ್ವಾಮಿಗಳ ಸವಾರಿ ಆಗಮಿಸಿತು. ಮೊದಲೇ ಗೊತ್ತುಪಡಿಸಿದ ಪ್ರಕಾರ ನಗರಸಭಾಮಂದಿರದ ವರೆಗೆ ಅವರನ್ನು ಮೆರೆವಣಿಗೆಯಲ್ಲಿ ಕರೆದು ತರಲಾಯಿತು. ಹಾದಿಯುದ್ದಕ್ಕೂ ಹಾರತುರಾಯಿಗಳು ಅರ್ಪಿಸಲ್ಪಟ್ಟವು. ನಗರಸಭೆಯ ಮಂದಿರದಲ್ಲಿ ಕಿಕ್ಕಿರಿದು ಸೇರಿದ ಜನಸಮೂಹ. ಹೊಸ ರೀತಿಯ ಸೀರೆಯನ್ನುಟ್ಟುಕೊಂಡು ಸರಸುವೂ ಲೀಲಾವತಿಯೊಂದಿಗೆ ಬಂದು ಕುಳಿತಿದ್ದಳು. ಸಮ್ಮೇಳನಕ್ಕಾರಂಭವಾಯಿತು. ಸ್ವಾಗತ

ಸಮಿತಿಯ ಅಧ್ಯಕ್ಷರ ಭಾಷಣ, ಅಧ್ಯಕ್ಷರ ಆಯ್ಕೆ, ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ, ಬೇರೆ ಬೇರೆ ಧರ್ಮಗಳನ್ನು ಕುರಿತು ಬೇರೆ ಬೇರೆ ವಿದ್ವಾಂಸರ ಭಾಷಣ. ಇವೆಲ್ಲ ಮುಗಿಯಬೇಕಾದರೆ ಎಂಟು ಗಂಟೆಯಾಗಿದ್ದಿತು. ಅನಂತರ ಸ್ವಾಮಿಗಳ ಮುಕ್ತಾಯ ಭಾಷಣಕ್ಕಾರಂಭವಾಯಿತು. ಒಂದು ಗಂಟೆಯ ವರೆಗೆ ಒಂದೇ ಸಮನೆ ಮಾತನಾಡಿದರು ಅವರು. ಆಗಾಗ ಜನರು ಚಪ್ಪಾಳೆ ತಟ್ಟುವದೂ, 'ಹಿಯರ್, ಹಿಯರ್' ಎಂದು ಕೂಗುವುದೂ ನಡೆದಿತ್ತು. ಧ್ವನಿವರ್ಧಕವೆದುರಿಗೆ ನೀಟಾಗಿ ನಿಂತುಕೊಂಡು, ಎದೆಯುಬ್ಬಿಸಿ ನಗುನಗುತ್ತ ಮಾತನಾಡುತ್ತಿದ್ದ ಸ್ವಾಮಿಗಳ ಆಕೃತಿ ಆಕರ್ಷಣೀಯವಾಗಿ ತೋರದಿರ ಲಿಲ್ಲ ಸರಸುವಿಗೆ. ಆಗಾಗ ಸ್ವಾಮಿಗಳ ದೃಷ್ಟಿ ಜನರ ಕಡೆಗೆ ಹರಿದು ಅಲ್ಲಿ ತನ್ನನ್ನೇ ಹುಡುಕಾಡುತ್ತಿದ್ದಂತೆಯೂ ಭಾಸವಾಗಿದ್ದಿತು.

"ಸ್ವಾಮಿಗಳು ಎಷ್ಟು ಚೆಂದ ಕಾಣುತ್ತಾರೆ ನೋಡಿರಿ ಸರಸಮ್ಮ," ಎಂದು ಲೀಲಾವತಿ ಪಿಸುದನಿಯಲ್ಲಿ ಹೇಳಿದ್ದಳು. ಆ ಮಾತಿಗೆ ಸರಸು ಯಾವ ಉತ್ತರವನ್ನೂ ಕೊಡಲಿಲ್ಲವಾದರೂ ಮನಸ್ಸಿನಲ್ಲಿಯೇ "ಹೌದು, ಹೌದು" ಎಂದು ಹೇಳಿಕೊಳ್ಳದಿರಲಿಲ್ಲ. ಕಾವಿಬಣ್ಣದ ಉಡುಗೆಯಿಂದಾಗಿ ಅವರ ರೂಪಕ್ಕೆ ಇನ್ನೂ ಶೋಭೆ ಬಂದ ಹಾಗೆ ತೋರುತ್ತಿತ್ತು. ಕಪನಿಯನ್ನುಟ್ಟು ಬಿಂಕದಿಂದ ನಿಂತ ಆ ಆಕೃತಿ ತನ್ನಲ್ಲಿ ಯಾವುದೋ ರಹಸ್ಯವೊಂದನ್ನು ಅಡ ಗಿಸಿಕೊಂಡ ಹಾಗೆ ತೋರುತ್ತಿತ್ತು.

"ಸ್ವಾಮಿಗಳೇನಾದರೂ ವಿರಕ್ತರಾಗಿರದಿದ್ದಲ್ಲಿ ಇವರ ಕೈ ಹಿಡಿಯುವಾಕೆ ನಿಜವಾಗಿಯೂ ಭಾಗ್ಯಶಾಲಿನಿಯಾಗುತ್ತಿದ್ದಳಲ್ಲವೇ ಸರಸಮ್ಮ?" ಮತ್ತೆ ಕೇಳಬಂದಿತು ಲೀಲಾವತಿಯ ಪಿಸುದನಿ.

ಸಭೆ ಮುಗಿದ ತರುವಾಯ ಶ್ರೀಮಂತರೊಬ್ಬರು ತಮ್ಮ ಮೋಟಾರಿ ನಲ್ಲಿ ಸ್ವಾಮಿಗಳನ್ನು ಮನೆಗೆ ಕರೆದೊಯ್ದರು. ಸ್ವಾಮಿಗಳ ಮೋಟಾರಿನಲ್ಲಿ ಕುಳಿತು ಶಾಸ್ತ್ರಿ, ಲೀಲಾವತಿ, ಸರಸು ಆಶ್ರಮಕ್ಕೆ ಹೊರಟರು.

"ಸ್ವಾಮಿಗಳು ಯಾವಾಗ ಬರುತ್ತಾರೆ ಶಾಸ್ತ್ರಿಗಳೆ ?" ಎಂದು ಕೇಳಿ ದಳು ಲೀಲಾವತಿ.

"ಆ ಶ್ರೀಮಂತರ ಮನೆಯಿಂದ ಅರ್ಧಗಂಟೆಯೊಳಗಾಗಿ ಬಂದು ಬಿಡಬಹುದು,"

"ಮೋಟಾರು ?"

"ನಮ್ಮನ್ನು ಆಶ್ರಮಕ್ಕೆ ಬಿಟ್ಟು ಇದೇ ಮೋಟಾರು ಅವರನ್ನು ಕರೆದು ತರಲು ಹೋಗುತ್ತದೆ. ಸರಸಮ್ಮನವರು ಸಭೆಗೆ ಬಂದುದನ್ನು ಕಂಡು ಸ್ವಾಮಿಗಳಿಗೆ ಬಹಳ ಸಂತೋಷವಾಯಿತು. ಇವೊತ್ತು ಅವರೂ ಆಶ್ರಮದಲ್ಲೇ ಊಟ ಮಾಡಲಿ, ಎಂದು ಅಪ್ಪಣೆ ಕೊಡಿಸಿ ತಮ್ಮ ಮೋಟಾರಿನಲ್ಲಿಯೆ ಅವರನ್ನು ಕರೆದೊಯ್ಯಲು ತಿಳಿಸಿದರು."

"ಬಹಳ ವಿಶಾಲ ಹೃದಯ ನಮ್ಮ ಸ್ವಾಮಿಗಳದು," ಎಂದಳು ಲೀಲಾವತಿ.

"ಸರಸಮ್ಮನವರ ಬಗೆಗಂತೂ ಬಹಳ ವಿಶ್ವಾಸ ಅವರಿಗೆ. ಮೊದಲಿನಿಂದಲೂ ಅಷ್ಟೆ. ಅವರ ಹತ್ತಿರ ಮಾತನಾಡುವ ಸುಯೋಗವೇ ಬಂದಿಲ್ಲ— ಇವೊತ್ತು ತುಂಬ ಮಾತನಾಡುವದಿದೆ, ಎಂದು ಹೇಳುತ್ತಿದ್ದರು."

"ಹಾಗೆ ನಮ್ಮ ಸ್ವಾಮಿಗಳು ಬಹಳ ಸೋಶಿಯಲ್ ಇದ್ದಾರೆ ಬಿಡಿರಿ."

ಸರಸುವಿಗೆ ಮಾತ್ರ ಎದೆ ಹೊಡೆದುಕೊಳ್ಳತೊಡಗಿತು. ಸ್ವಾಮಿಗಳ ಚಾರಿತ್ರ್ಯದ ವಿಷಯವೆಲ್ಲವೂ ಆಕೆಗೆ ಅದೇ ದಿನ ಲೀಲಾವತಿಯಿಂದ ತಿಳಿದು ಬಂದಿದ್ದುದರಿಂದ, ಅವರ ವಿಶ್ವಾಸ, ಪ್ರೀತಿ, ವಿಶಾಲಹೃದಯಗಳ ನೈಜ ಸ್ವರೂಪವೆಂಥದೆಂಬುದನ್ನು ಆಕೆ ಚೆನ್ನಾಗಿ ಬಲ್ಲವಳಾಗಿದ್ದಳು. ಸ್ವಾಮಿಗಳು ತನ್ನೊಂದಿಗೆ ತುಂಬ ಮಾತನಾಡಬಯಸುವರಂತೆ! ತನ್ನಂಥ ಯುವತಿಯೊಂದಿಗೆ ಇನ್ನೇನು ಮಾತು ಅವರಿಗೆ? ಸರ್ವಧರ್ಮ ಸಮನ್ವಯದ ಬಗೆಗೆ ಮಾತನಾಡುವದಿಲ್ಲವಷ್ಟೆ, ತನ್ನೊಡನೆ? ಅವರ ಮಾತಿನ ಮರ್ಮವನ್ನು ತಾನು ಅರಿಯಳೇ? ತನ್ನನ್ನು ಬಲಿಗೆ ಬೀಳಿಸಲೆಂದೇ ಇದೆಲ್ಲಾ ಉಪಾಯ ನಡೆದಿರಲು ಸಾಕು. ಎಂದು ಒಂದು ಮನಸ್ಸು ಹೇಳಿದರೆ, ಇನ್ನೊಂದು ಮನಸ್ಸು ಅವರ ರಹಸ್ಯಪೂರ್ಣ ಆಕರ್ಷಕ ರೂಪವನ್ನೇ ನೆನೆದುಕೊಂಡು ಅವರೆಡೆಗೇ ಧಾವಿಸುತ್ತಿತ್ತು.

ಸ್ವಾಮಿಗಳು ಆಶ್ರಮಕ್ಕೆ ಬಂದಾಗ ಅವರನ್ನು ಇದಿರುಗೊಳ್ಳಲು ಲೀಲಾವತಿಯೊಂದಿಗೆ ಸರಸುವೂ ಅಂಗಳದಲ್ಲಿ ನಿಂತಿದ್ದಳು. ಮೋಟಾರಿನಿಂದ ಇಳಿಯುತ್ತಿದ್ದ ಹಾಗೆ ಸ್ವಾಮಿಗಳು ಸರಸುವನ್ನು ನೆಟ್ಟ ದಿಟ್ಟಿಯಿಂದ ನಿರುಕಿಸುತ್ತ—"ಓಹ್ಹೋ, ಸರಸ್ವತೀದೇವಿಯವರೇನು, ಎಲ್ಲಾ ಸೌಖ್ಯವೆ ?" ಎಂದು

ಮುಗುಳ್ನಗೆಯೊಂದಿಗೆ ನುಡಿದಾಗ ಸರಸುವಿನ ಚಿತ್ತದಲ್ಲಿ ಕೋಲಾಹಲಕ್ಕಾರಂಭವಾಯಿತು. ಅವರ ಆಕರ್ಷಣೆಯಿಂದ ತಪ್ಪಿಸಿಕೊಳ್ಳಬೇಕೆಂದು ಬಯಸಿದಷ್ಟೂ ಅವಳ ಚಿತ್ತ ಅವರೆಡೆಗೇ ಓಡತೊಡಗಿತು.

ಸ್ನಾನ ಮಾಡಿ, ಪೂಜಾಗೃಹದಲ್ಲಿ ಬಣ್ಣದ ಮಣೆಯ ಮೇಲೆ ಕುಳಿತುಕೊಂಡರು ಸ್ವಾಮಿಗಳು. ಎರಡು ನಿಮಿಷಗಳಲ್ಲಿ ಪೂಜೆ ಮುಗಿಯಿತು. ಅವರ ಎಡಗಡೆಗೆ ಶಾಸ್ತ್ರಿಯೂ ಮಿಂದು ಮಡಿಯುಟ್ಟುಕೊಂಡು ಕುಳಿತಿದ್ದ. ಸರಸುವೂ ಲೀಲಾವತಿಯೂ ಊಟ ಬಡಿಸಲು ಅಣಿಯಾದರು. ಅಡುಗೆಯ ಮನೆಯಿಂದ ಪೂಜಾಗೃಹಕ್ಕೆ ಅಡಿಯಿಡುವಾಗಲೆಲ್ಲ ಸರಸುವಿನ ಕಾಲುಗಳೆರಡೂ ಕಂಪಿಸುತ್ತಲಿದ್ದುವು. ಸ್ವಾಮಿಗಳ ದೃಷ್ಟಿಗೆ ದೃಷ್ಟಿ ಸೇರಿಸಲು ಸಾಧ್ಯವಾಗುತ್ತಿರಲಿಲ್ಲ. ಆಕೆ ಒಳಕ್ಕೆ ಬಂದಾಗಲೆಲ್ಲ ಅವರ ದೃಷ್ಟಿ ಅವಳ ಮೇಲೆಯೆ ನೆಲಸಿರುತ್ತಿದ್ದಿತು. ತುಪ್ಪ ಬಡಿಸಲು ಆಕೆ ಅವರಿಗೆ ತೀರ ಹತ್ತಿರ ಬಂದಾಗ—"ಈ ಸಿಲ್ಕ್ ಸೀರೆ ನಿಮಗಾಗಿಯೆ ಹೇಳಿ ಮಾಡಿಸಿದಂತಿದೆ ನೋಡಿರಿ. ಎಷ್ಟು ಸುಂದರವಾಗಿ ಕಾಣುತ್ತೀರಿ !" ಎಂದು ಸ್ವಾಮಿಗಳು ನುಡಿದಾಗ ಶಾಸ್ತ್ರಿ ತಲೆಯೆತ್ತಿ—"ಸುಂದರವಾಗಿಯೆ ಇರುವವರು ಎಂಥ ಸೀರೆಯನ್ನುಟ್ಟರೂ ಸುಂದರವಾಗಿಯೇ ಇರುತ್ತಾರೆ," ಎಂದು ಹೇಳಿದ. ಆ ಸ್ತುತಿಯನ್ನಾಲಿಸಿದಾಗ ಸರಸುವಿನ ಶರೀರ ಹೆಮ್ಮೆಯಿಂದ ನಿಮಿರಿ ನಿಂತಂತಾಯಿತು.

"ಇದಕ್ಕೂ ಚೆಂದಾದ ಸೀರೆಗಳನ್ನು ತೆಗೆದುಕೊಳ್ಳಬೇಕು ನೀವು. ಮೈಸೂರು ಬೆಂಗಳೂರುಗಳಲ್ಲಿ ಸಿಕ್ಕುತ್ತವೆ. ನಾವು ಅಲ್ಲಿಗೆ ಹೋದಾಗ ತೆಗೆದುಕೊಂಡು ಬರೋಣವೇ ?" ಎಂದು ಕೇಳಿದರು ಸ್ವಾಮಿಗಳು.

ಸರಸುವಿಗೆ ಉತ್ತರವೀಯಲಾಗಲಿಲ್ಲ. ಲೀಲಾವತಿಯೆ ಕೇಳಿದಳು :

"ಯಾವಾಗ ಹೋಗುತ್ತೀರಿ ಬುದ್ಧೀ ?"

"ನಾಳೆಯೆ ಹೊರಡಬೇಕಾಗಿದೆ. ಅಲ್ಲಿನ ಮಂತ್ರಿಗಳೊಬ್ಬರು ನಮ್ಮನ್ನು ಆಮಂತ್ರಿಸಿದ್ದಾರೆ. ನೀವೂ ಬರುತ್ತೀರಾ ?"

"ಕರೆದುಕೊಂಡು ಹೋದರೆ ಬರದಿರುತ್ತೇವೆಯೆ ? ಬೆಂಗಳೂರು, ಮೈಸೂರು, ಕನ್ನಂಬಾಡಿ ಎಲ್ಲಾ ನೋಡಬೇಕೆಂದು ನಮಗೂ ಆಸೆಯಿದೆ."

ತನ್ನೆದೆಯಲ್ಲಿದ್ದ ಬಯಕೆಯನ್ನೇ ಲೀಲಾವತಿ ಹೊರಕ್ಕೆಳೆದು ಬಯಲಿಗಿಡುತ್ತಿರುವಳೆಂದೆನ್ನಿಸಿತು ಸರಸುವಿಗೆ. ತನಗೂ ಬಹಳ ದಿನಗಳಿಂದ ಆಸೆ—

ಬೆಂಗಳೂರು ನೋಡಬೇಕು, ಮೈಸೂರು ನೋಡಬೇಕು, ಬಣ್ಣ ಬಣ್ಣದ ಕಾರಂಜಿಗಳ ಉದ್ಯಾನವಾದ ಕನ್ನಂಬಾಡಿಯನ್ನು ನೋಡಬೇಕು, ಶ್ರೀರಂಗ ಪಟ್ಟಣ,ಹಳೇಬೀಡು, ಬೇಲೂರು, ನಂದೀಬೆಟ್ಟ-ಎಲ್ಲವನ್ನೂ ನೋಡಬೇಕು. ಸುಂದರ ಸ್ಥಳಗಳ, ಸುಂದರ ನಗರಗಳ ಸುಂದರ ಸಂಸ್ಥಾನ ಮೈಸೂರು.... ಅದನ್ನೆಲ್ಲ ನೋಡಬೇಕು. ತಂದೆಯ ಮನೆಯಲ್ಲಿರುವ ವರೆಗೆ ಅದೆಲ್ಲವೂ ಕೇವಲ ಕನಸಾಗಿದ್ದಿತು. ಅಲ್ಲಿಂದ ಹೊರಟು ಶಿವಮೂರ್ತಿಯೊಂದಿಗೆ ಇಲ್ಲಿಗೆ ಬಂದರೂ ತನ್ನ ಕನಸುಗಳೆಷ್ಟೋ ಕನಸಾಗಿಯೆ ಉಳಿದುವು. ಈ ಪರಿಸ್ಥಿತಿಯೇ ಇನ್ನು ಮುಂದೆಯೂ ಉಳಿದಲ್ಲಿ ಕೊನೆಯವರೆಗೂ ತಾನು ಕೇವಲ ಕನಸು ಕಾಣುವುದರಲ್ಲೇ ಸಮಾಧಾನ ಪಡಬೇಕಾಗುವುದೊ ಏನೊ. ಮೈಸೂರು ....ಸುಂದರ ಮೈಸೂರು....

"ಮೈಸೂರಿಗೆ ಬರುತ್ತೀರಾ ಸರಸ್ವತೀದೇವಿ ?" ಸ್ವಾಮಿಗಳು ಈ ಸಲ ನೇರವಾಗಿ ಆಕೆಗೇ ಪ್ರಶ್ನೆ ಹಾಕಿದರು.

"ಬರಬಹುದು. ಆದರೆ ನಮಗೆಲ್ಲ ಹೇಗೆ ಸಾಧ್ಯ ?"

"ಯಾಕೆ ? ನಿಮಗಿರುವ ತೊಂದರೆಯಾದರೂ ಏನು ?"

"ನಮ್ಮವರು ಶಾಸ್ತ್ರಿಗಳ ಪ್ರೆಸ್ಸಿನಲ್ಲಿ ಕೆಲಸದಲ್ಲಿದ್ದಾರೆ. ಅವರು...."

"ಓ....ಅದೂ ಒಂದು ತೊಂದರೆಯೆ ! ಅವರೂ ಬರಲಿ ನಮ್ಮೊಡನೆ. ಶಾಸ್ತ್ರಿಗಳೂ ಬರಲಿ. ಎಲ್ಲರೂ ಸೇರಿ ಸುಖವಿಹಾರ ಮಾಡಿ ಬರೋಣ. ಏನೆನ್ನುತ್ತೀರಿ ? ಒಪ್ಪಿಗೆಯೆ ?"

"ಅವರನ್ನು ಕೇಳಿನೋಡುತ್ತೇನೆ."

"ಹಾಗೇ ಮಾಡಿರಿ. ನಾವೂ ಅವರನ್ನು ನೋಡಬೇಕಾಗಿದೆ. ಮಾತ ನಾಡಬೇಕಾಗಿದೆ. ಅವರು ಇನ್ನೂ ವಿದ್ಯಾರ್ಥಿಯಾಗಿದ್ದಾಗ ಒಂದು ಸಲ ಕಂಡಿದ್ದೇವೆ. ಅವರಿಗೊಂದು ಪಾರಿತೋಷಕವನ್ನೂ ಕೊಟ್ಟಿದ್ದೇವೆ. ಬಹಳ ಹುಷಾರು ಹುಡುಗ. ಈಚೆಗೆ ಭೆಟ್ಟಿಯೇ ಇಲ್ಲ. ನಾಳೆ ಇಲ್ಲಿಗೇ ಕರೆದು ಕೊಂಡು ಬನ್ನಿ. ಇಲ್ಲಿಯೇ ಪ್ರಸಾದ ಪಡೆದುಕೊಂಡು ಹೋಗಲಿ."

ಊಟ ಮುಗಿದ ತರುವಾಯ ಸ್ವಾಮಿಗಳು ಮೇಲಟ್ಟಕ್ಕೆ ಹೊರಟು ಹೋದರು. ಲೀಲಾವತಿಯೂ ಸರಸುವೂ ಊಟ ಮುಗಿಸಬೇಕಾದರೆ ಹನ್ನೊಂದು ಗಂಟೆಯಾಗಿದ್ದಿತು.

"ಬಲು ಹೊತ್ತಾಯಿತು ಲೀಲಾ. ಅವರು ಏನೆಂದುಕೊಳ್ಳುವರೊ !" ಎಂದು ಕೊಂಚ ಕಳವಳದಿಂದ ನುಡಿದಳು ಸರಸು.

"ನಿಮ್ಮ ನೆನಪಿದ್ದರಲ್ಲವೆ ಅವರಿಗೆ! ಅದನ್ನೆಲ್ಲ ಮನಸ್ಸಿಗೆ ಹಚ್ಚಿ ಕೊಂಡು ಕೊರಗಬೇಡಿರಿ ಸರಸಮ್ಮ. ಇಷ್ಟು ದಿನಗಳವರೆಗೆ ಅವರು ತಡವಾಗಿ ಬಂದಿಲ್ಲವೇ ಮನೆಗೆ? ಇದೊಂದು ದಿನ ನೀವು ತಡವಾಗಿ ಹೋದರೇನಂತೆ?"

"ಅವರದು ವಿಲಕ್ಷಣ ಸ್ವಭಾವ ತಾಯಿ. ಸ್ವಲ್ಪ ಏನಾದರೂ ಆದರೆ ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಾರೆ. ನಾನು ಬೇಗ ಹೋಗ ಬೇಕು."

"ಅಷ್ಟೇಕೆ ಅವಸರ ಮಾಡುತ್ತೀರಿ? ಈಗ ತಾನೆ ಊಟವಾಗಿದೆ. ತಾಂಬೂಲ ಹಾಕಿಕೊಂಡು ಸ್ವಲ್ಪಹೊತ್ತು ಹರಟೆ ಹೊಡೆದು ಹೋದರಾ ಯಿತು. ಸ್ವಾಮಿಗಳು ಬೇರೆ ಕಾದು ಕುಳಿತಿರಬಹುದು. ಊಟ ಮುಗಿಸಿ ಕೊಂಡು ಅಟ್ಟಕ್ಕೆ ಬರಲು ತಿಳಿಸಿದ್ದಾರೆ. ಬರ್ರಿ ಹೋಗೋಣ."

ಅಟ್ಟಕ್ಕೆ ಹೋಗುವ ಮನಸ್ಸು ಸರಸುವಿಗಿರಲಿಲ್ಲವಾದರೂ ಯಾವುದೋ ಅದೃಶ್ಯ ಶಕ್ತಿಯೊಂದು ಆಕೆಯನ್ನು ಅಲ್ಲಿಗೆ ಎಳೆದುಕೊಂಡು ಹೋಯಿತು. ಮಂಚದ ಮೇಲೆ ದಿಂಬಿಗೊರಗಿ ಕುಳಿತುಕೊಂಡಿದ್ದರು ಸ್ವಾಮಿಗಳು.

"ಬರ್ರಿ, ಬರ್ರಿ, ಕೂತುಕೊಳ್ಳಿರಿ. ಸುಖವಾಗಿ ಊಟವಾಯಿತೇ?"

"ಆಯಿತು ಬುದ್ಧೀ."

"ತಾಂಬೂಲ ಹಾಕಿಕೊಳ್ಳಿರಿ," ಎಂದರು ಸ್ವಾಮಿ, ತಾಂಬೂಲದಿಂದ ರಂಗಿಗೇರಿದ ತುಟಿಗಳಿಂದ.

"ಇನ್ನು ಅರ್ಧತಾಸಿನವರೆಗೆ ಸಂಗೀತ ಕಚೇರಿ ನಡೆಯಬೇಕೆಂದು ನಮ್ಮ ಆಸೆ. ಏನೆನ್ನುತ್ತೀರಿ ಲೀಲಾವತಮ್ಮ?"

"ಅಪ್ಪಣೆ ಬುದ್ಧೀ. ಸರಸ್ವತಮ್ಮನವರು ಚೆನ್ನಾಗಿ ಹಾಡುವರೆಂದು ಕೇಳಿದ್ದೇನೆ. ಅವರು ಮನಸ್ಸು ಮಾಡಿದರೆ........"

"ಇಲ್ಲ. ನನಗೆ ಹಾಡಲು ಬರುವುದಿಲ್ಲ."

"ಏನೂ ಸಂಕೋಚಪಟ್ಟುಕೊಳ್ಳಬೇಡಿರಿ, ನಮ್ಮ ಎದುರಿಗೆ ಯಾವ ಸಂಕೋಚವೂ ಬೇಡ. ನಾವು ಸ್ವಾಮಿಗಳಾದರೂ ಇತರರ ಹಾಗಲ್ಲ. ಸ್ವಾಮಿಗಳು ರೂಕ್ಷ ಜೀವನ ನಡೆಸಬೇಕೆಂಬ ವಿತಂಡವಾದವನ್ನು ನಾವು

ಒಪ್ಪುವದಿಲ್ಲ. ಜೀವನವೇ ಒಂದು ಕಲೆ ಎಂದು ನಮ್ಮ ಅಭಿಪ್ರಾಯ. ಕಾವಿಬಟ್ಟೆ ಹಾಕಿದ ಮಾತ್ರಕ್ಕೆ ಕಲಾಭಿರುಚಿಗೂ ಶರಣು ಹೊಡೆಯಬೇಕೆನ್ನುವದು ಎಲ್ಲಿಯ ನ್ಯಾಯ? ನಮಗಂತೂ ಸಂಗೀತ, ಸಾಹಿತ್ಯ, ನಾಟ್ಯ ಅಂದರೆ ಬಲು ಪ್ರೀತಿ. ಸ್ವಲ್ಪ ಹಾಡು ಹೇಳುತ್ತೀರಾ? ಕೇಳೋಣ...."

"ಇಲ್ಲ ಬುದ್ಧೀ. ನನಗೆ ಹಾಡಲು ಬರುವದಿಲ್ಲ."

ಸ್ವಾಮಿಗಳು ಲೀಲಾವತಿಯ ಕಡೆಗೆ ತಿರುಗಿ ಕಣ್ಣು ಮಿಟುಕಿಸಿದರು. ಆಕೆ ಹೊರಟುಹೋದಳು. ಹೋಗುವಾಗ ಬಾಗಿಲನ್ನೂ ಹೊರಗಿನಿಂದ ಮುಚ್ಚಿಕೊಂಡು ಹೋದಳು.

"ಬೇಡ, ಬೇಡ, ಲೀಲಾವತಮ್ಮ, ಹೋಗಬೇಡಿರಿ. ನಾನೂ ಬರುತ್ತೇನೆ," ಎಂಬ ನುಡಿ ಸರಸುವಿನ ನಾಲಿಗೆಯ ಮೇಲೆ ಸಿದ್ಧವಾಗಿದ್ದಿತು. ಆದರೆ ಸ್ವಾಮಿಗಳೆದುರಿಗೆ ಅದನ್ನು ಹೊರಗೆ ಹಾಕಲು ಸಾಧ್ಯವಾಗಲಿಲ್ಲ. ಎಂಥದೋ ಒಂದು ಅದ್ಭುತವಾದ ಮಾಟಗಾರಿಕೆಯಿಂದ ಸ್ವಾಮಿಗಳು ತನ್ನ ಬಾಯಿ, ಮನಸ್ಸು, ದೇಹ ಎಲ್ಲವನ್ನೂ ಕಟ್ಟಿಹಾಕಿದ ಹಾಗೆ ತೋರಿತು ಆಕೆಗೆ. ಅವರ ಆ ದೊಡ್ಡ ದೊಡ್ಡ ಕಪ್ಪುಕಣ್ಣುಗಳು ತನ್ನ ಸಮಸ್ತ ವ್ಯಕ್ತಿತ್ವವನ್ನೂ ನುಂಗಿ ತಮ್ಮಲ್ಲಿಯೆ ಅಳವಡಿಸಿಕೊಳ್ಳುತ್ತಿದ್ದಹಾಗೆ ಭಾಸವಾಯಿತು. ಆ ವಿಚಿತ್ರ ಸೆಳೆತದಿಂದ ತಪ್ಪಿಸಿಕೊಳ್ಳಲು ಒಂದೆರಡು ಸಲ ಪ್ರಯತ್ನಪಟ್ಟಳು. ಇದು ತಪ್ಪು, ಇದು ಪಾಪ, ಇದು ವ್ಯಭಿಚಾರ. ತನ್ನಂಥವಳು ಇಂಥ ಅಧೋಗತಿಗಿಳಿಯಬಾರದು. ತನ್ನನ್ನು ನಂಬಿ, ತನಗಾಗಿ ಎಲ್ಲವನ್ನೂ ತ್ಯಜಿಸಿ ತನ್ನೊಡನೆ ಬಂದ ಶಿವಮೂರ್ತಿ.... ಆತನಿಗೆ ದ್ರೋಹ ಬಗೆಯಬಾರದು. ಶಿವಮೂರ್ತಿ.... ತನ್ನ ಪ್ರಾಣಪ್ರಿಯ ಶಿವಮೂರ್ತಿ.... ಸ್ವಾಮಿ....

ಮಂಚದಿಂದಿಳಿದು ಬಂದು ಸ್ವಾಮಿಗಳು ಆಕೆಯ ಕೈ ಹಿಡಿದರು. ರಭಸದಿಂದ ಅವರ ಕೈ ಕೊಡಹಿ ಆ ಕೊಟಡಿಯಿಂದ ಓಡಿಹೋಗಬೇಕು, ಆ ಪಾಪಪೂರ್ಣ ಮಠದಿಂದ ಓಡಿಹೋಗಬೇಕು, ಮನೆಗೆ ಹೋಗಿ ತನ್ನ ಪ್ರಾಣಪ್ರಿಯ ಪತಿಯ ಪಾದಗಳ ಮೇಲೆ ತಲೆಯನ್ನೊರಗಿಸಿ ಬಿಕ್ಕಿ ಬಿಕ್ಕಿ ಅತ್ತು ಎದೆಯಲ್ಲಿನ ಹೊಯ್ದಾಟವನ್ನೆಲ್ಲ ಕಂಬನಿಗಳ ಮೂಲಕ ಹೊರಹಾಕಬೇಕು, ಇನ್ನೆಂದೂ – ಎಂದೆಂದೂ ಮಠಗಳಿಗೆ ಕಾಲಿಡಬಾರದು, ಕಾವಿ

ಬಟ್ಟೆಯ ಆಷಾಢಭೂತಿಗಳ ಮುಖ ನೋಡಬಾರದು, ಓಡಿಹೋಗಬೇಕು.... ಇಲ್ಲಿಂದ ಓಡಿಹೋಗಬೇಕು - ಎನ್ನಿಸಿತು ಸರಸುವಿಗೆ. ಆದರೆ, ಅವರ ಕೈಯಿಂದ ತನ್ನ ಕೈ ಬಿಡಿಸಿಕೊಳ್ಳುವಷ್ಟು ಶಕ್ತಿಯೂ ತನ್ನಲ್ಲಿ ಉಳಿದಿದ್ದಂತೆ ತೋರಲಿಲ್ಲ.

"ಸರಸೂ...." ಮೋಹದಿಂದ ಮತ್ತವಾಗಿದ್ದ ಧ್ವನಿಯಲ್ಲಿ ಸ್ವಾಮಿಗಳೆಂದರು.

ಸ್ವಾಮಿಗಳ ತೋಳುಗಳು ಆಕೆಯನ್ನು ಬಳಸಿಕೊಳ್ಳತೊಡಗಿದುವು. ಅವುಗಳಿಂದ ಬಿಡಿಸಿಕೊಳ್ಳಬಯಸಿದಳು; ಸಾಧ್ಯವಾಗಲಿಲ್ಲ. ಸ್ವಾಮಿಗಳ ಮುಖ, ಆಕೆಯ ಮುಖಕ್ಕೆ ತೀರ ಹತ್ತಿರ ಬಂದಿದ್ದಿತು. ಅವರ ತಲೆಗೂದಲುಗಳಿಂದ ಮಾದಕ ಪರಿಮಳವೆದ್ದು ಆಕೆಯ ಚಿತ್ತವನ್ನು ಬಧಿರವಾಗಿಸಿತು. ಸ್ವಾಮಿಗಳ ದನಿಯನ್ನುಳಿದು ಇನ್ನಾವುದೂ ಆಕೆಗೆ ಕೇಳಿಸದಂತಾಯಿತು. ಸ್ವಾಮಿಗಳ ಮುಖವನ್ನುಳಿದು ಇನ್ನಾವುದೂ ಆಕೆಗೆ ಕಾಣಿಸದಂತಾಯಿತು.

[೨೧]

ಪೂರ್ವದಿಕ್ಕಿಗಿದ್ದ ಕಿಟಕಿಯೊಳಗಿನಿಂದ ಸೂರ್ಯಕಿರಣಗಳು ನುಗ್ಗಿ ಬಂದು ತನ್ನ ಮುಖದ ಮೇಲೆ ಹರಡಿದಾಗ ಎಚ್ಚರವಾಯಿತು ಸರಸುವಿಗೆ. ಕಣ್ಣು ತೆರೆದು ಸುತ್ತಲೂ ದೃಷ್ಟಿ ಹೊರಳಿಸಿದಳು. ಪಕ್ಕದಲ್ಲಿ ಸ್ವಾಮಿಗಳಿರಲಿಲ್ಲ. ಬೆಳಗಿನ ಜಾವದಲ್ಲಿಯೆ ಎದ್ದು ಹೊರಗಡೆಗೆ ಹೊರಟುಹೋಗಿದ್ದರೊ ಏನೊ.

ರವಕೆಯ ಗುಂಡಿಗಳನ್ನು ಹಾಕುತ್ತ ಸರಸು ಹಾಸುಗೆಯ ಮೇಲೆದ್ದು ಕುಳಿತಳು. ಕೆದರಿ ಅಸ್ತವ್ಯಸ್ತವಾಗಿದ್ದ ತಲೆಗೂದಲನ್ನು ಸರಿಪಡಿಸಿಕೊಂಡಳು. ಉರುಳಿಹೋಗಿದ್ದ ಸೆರಗನ್ನು ತಲೆಯ ಮೇಲೆ ಹೊದೆದುಕೊಳ್ಳಲು ಕೈ ಚಾಚಿದಳು. ಸೆರಗಿನ ತುದಿಗೆ ಗಂಟು ಬಿದ್ದಿದ್ದಹಾಗೆ ಕಾಣಿಸಿತು. ಬಿಚ್ಚಿ ನೋಡಿದಳು. ಒಂದು ಕಾಗದ. ಅದರೊಂದಿಗೆ ನೋಟುಗಳು....ನೂರು ರೂಪಾಯಿನ ಐದು ಹಸಿರು ನೋಟುಗಳು. ನೋಟುಗಳನ್ನು ರವಕೆಯೊಳಗಡೆ ಸೇರಿಸಿ ಕಾಗದವನ್ನು ಕಣ್ಣೆದುರಿಗೆ ಹಿಡಿದು ಓದತೊಡಗಿದಳು :

"ಪ್ರೀತಿಯ ಸರಸೂ,

ನನ್ನನ್ನು ಕ್ಷಮಿಸು ಎಂದು ಪ್ರಾರಂಭದಲ್ಲೇ ಕೇಳಿಕೊಳ್ಳುತ್ತೇನೆ. ನಿನ್ನೆಯ ರಾತ್ರಿಯ ಘಟನೆಯಿಂದಾಗಿ ನಿನ್ನ ಮನಸ್ಸಿನ ಮೇಲೆ ಎಂಥ ಪರಿಣಾಮವಾಗಿದೆಯೊ ನಾನರಿಯೆ. ನನ್ನ ಪ್ರೀತಿಯ ಕರೆಗೆ ನಿನ್ನ ಪ್ರತಿಕ್ರಿಯೆಯೇನೆಂಬುದನ್ನು ತಿಳಿದುಕೊಳ್ಳುವ ಗೊಡವೆಗೆ ಹೋಗದೆ ನಿನಗೆ ನಾನು ತೊಂದರೆ ಕೊಟ್ಟಂತಾಯಿತು. ನೀನು ನೊಂದುಕೊಂಡಿದ್ದಲ್ಲಿ–ದಯವಿಟ್ಟು ಕ್ಷಮಿಸು. ನನ್ನದು ತಪ್ಪು. ಬಲು ದೊಡ್ಡ ತಪ್ಪು. ಬಲು ದೊಡ್ಡ ಪಾಪ. ಆದರೂ....ಇದು ತಪ್ಪು, ಇದು ಪಾಪ ಎಂದು ತಿಳಿದಿದ್ದರೂ ಮನಸ್ಸು ತಡೆಯಲಾರದೆ ಆ ತಪ್ಪನ್ನೇ ಮಾಡುತ್ತಾನೆ ಮನುಷ್ಯ. ಆ ಪಾಪಕ್ಕೇ ತೊಡಗಿಕೊಳ್ಳುತ್ತಾನೆ. ಇದಕ್ಕೆ ಮೂಲಕಾರಣ ಮೋಹ.... ಹೌದು. ಕೇವಲ ಮೋಹ....ಗಂಡು ಹೆಣ್ಣಿನ ಮಧ್ಯೆ **ಈ** ಮೋಹವೆಂಬ ವಸ್ತುವನ್ನು ದೇವರು ನಿರ್ಮಿಸದಿದ್ದಲ್ಲಿ ಪ್ರಪಂಚದಲ್ಲಿ ಯಾವ ಪಾಪವೂ ಇರುತ್ತಿರಲಿಲ್ಲ. ಆದರೆ....ಮೋಹವಿಲ್ಲದಿದ್ದಲ್ಲಿ ಪ್ರಪಂಚವೂ ಇರುತ್ತಿರಲಿಲ್ಲ ....ಅಲ್ಲವೆ?

ನಿನ್ನ ಬಗೆಗೆ ನನ್ನಲ್ಲಿ ಬೆಳೆದು ಬಂದ ಅತೀವ ಮೋಹವೇ ನಿನ್ನೆಯ ಘಟನೆಗೆ ಕಾರಣವಾಯಿತು. ಸುಳ್ಳೇಕೆ ಹೇಳಲಿ? ಇಂಥ ಒಂದು ಸಂದರ್ಭಕ್ಕಾಗಿ ಅಂದಿನಿಂದ ನಾನು ಹಂಬಲಿಸಿಕೊಂಡಿದ್ದೆನೆಂದೇ ಹೇಳಬಹುದು. ಅಂದು, ನಿಮ್ಮೂರಿನ ಮಠದಲ್ಲಿ, ಪ್ರಭುಲಿಂಗಲೀಲೆಯ ಪ್ರವಚನದ ಕಾಲಕ್ಕೆ ನಿನ್ನ ಸುಂದರ ರೂಪವನ್ನು ಮೊದಲ ಸಲ ಕಂಡಾಗಲೇ ನನ್ನ ಸರ್ವಸ್ವವೂ ನಿನಗಾಗಿ ಹಾತೊರೆಯತೊಡಗಿತ್ತು. ನೀನು ನನ್ನವಳಾಗದಿದ್ದಲ್ಲಿ ನನಗೆ ಹುಚ್ಚೇ ಹಿಡಿಯುವುದೆಂದು ಅನ್ನಿಸುತ್ತಿತ್ತು. ನಿನ್ನೆಡೆಗೆ ಧಾವಿಸುತ್ತಿದ್ದ ಮನಸ್ಸನ್ನು ಬಿಗಿಹಿಡಿಯಲು ಎಷ್ಟೋ ಬಗೆಯಾಗಿ ಪ್ರಯತ್ನಿಸಿದೆ. ಯಶಸ್ಸು ದೊರೆಯಲಿಲ್ಲ. ಬೇಡ ಬೇಡ ಎಂದು ಹೇಳಿದಹಾಗೆಲ್ಲ ಅದು ನಿನ್ನ ಕಡೆಗೇ ಓಡುತ್ತಿತ್ತು. ಇಂಥ ಸ್ಥಿತಿಯಲ್ಲಿ ನಾನಾದರೂ ಏನು ಮಾಡಲಿ? ನಾನೂ ಮನುಷ್ಯನಲ್ಲವೆ? ದುರ್ಬಲ ಮನುಷ್ಯ. ದುರ್ಬಲ ಮನಸ್ಸು. ನೀನು ನೊಂದುಕೊಂಡಿಲ್ಲವಷ್ಟೆ, ಸರಸೂ? ನನ್ನ ವರ್ತನೆಯಿಂದಾಗಿ ನಿನಗೆ

ನೋವಾಗಿಲ್ಲವಷ್ಟೆ? ಆಗಿಲ್ಲವೆಂದು ನನಗೆ ತಿಳಿದಲ್ಲಿ ಎಷ್ಟು ಸಂತೋಷವಾಗುವುದು ನನಗೆ! ಹೇಳು. ನಿನಗೆ ದುಃಖವಾಗಿಲ್ಲವಷ್ಟೆ?

ನಿನ್ನ ಬಗೆಗೆ ನನ್ನಲ್ಲಿ ಗಾಢ ಅನುರಾಗ ಹುಟ್ಟಿದಂತೆ ನನ್ನ ಬಗೆಗೆ ನಿನ್ನಲ್ಲೂ ಹುಟ್ಟಿರಬೇಕೆಂದು ನಾನು ಕಲ್ಪಿಸಿಕೊಂಡಿದ್ದೆ. ನನ್ನ ಕಲ್ಪನೆಗೆ ಕೊಂಚವಾದರೂ ಆಧಾರವಿದೆಯೆ, ಇಲ್ಲವೆ? ಇದೆಯೆಂದೇ ನಾನು ನಂಬಿಕೊಂಡಿದ್ದೇನೆ. ಆ ನಂಬಿಕೆಯಿಂದಲೇ ನಿನ್ನ ಆ ರೀತಿ ನಿನ್ನನ್ನು ಇಲ್ಲಿಗೆ ಬರಮಾಡಿಕೊಂಡೆ. ನಿನ್ನ ಮೇಲೆ ಬಲಾತ್ಕಾರ ಮಾಡಬೇಕು, ನಿನ್ನನ್ನು ಬಲೆಯಲ್ಲಿ ಸಿಲುಕಿಸಬೇಕು ಎಂಬ ವಿಚಾರ ನನ್ನಲ್ಲಿ ಕೊಂಚವೂ ಇರಲಿಲ್ಲ. ನಿಜ ಹೇಳಬೇಕಾದರೆ ನಾನೇ ಬಲೆಯಲ್ಲಿ ಸಿಲುಕಿಕೊಂಡಿದ್ದೇನೆ.... ನಿನ್ನ ಮೋಹದ ಬಲೆಯಲ್ಲಿ.... ಅದರಿಂದ ಬಿಡುಗಡೆಹೊಂದಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ಇನ್ನು ಆ ಬಲೆಯಿಂದ ಬಿಡುಗಡೆಯೆ ಇಲ್ಲ ನನಗೆ. ನಾನು ಪೂರಾ ಮುಳುಗಿಹೋಗಿದ್ದೇನೆ. ನನ್ನ ಸರ್ವಸ್ವವೂ ನಿನ್ನ ಪದತಲದಲ್ಲಿ ಬಿದ್ದುಕೊಂಡಿದೆ. ನಿನ್ನ ಕರುಣೆಗಾಗಿ, ನಿನ್ನ ಪ್ರೀತಿಗಾಗಿ ಆಸೆಯಿಂದ ನಿರುಕಿಸುತ್ತಿದೆ. ಈ ಗುಲಾಮನನ್ನು ನಿರಾಶೆಗೊಳಿಸಬೇಡ ಸರಸೂ. ನಿನ್ನ ಅಪಾರ ಪ್ರೀತಿಯಲ್ಲಿ ಅಲ್ಪಾಂಶವನ್ನಾದರೂ ಈತನಿಗರ್ಪಿಸು. ಈತನ ಸೇವೆಯನ್ನು ಸ್ವೀಕರಿಸು.

ಒಪ್ಪಿಗೆಯೆ? ಇನ್ನು ನಾನು ನಿನ್ನವ. ನೀನು ನನ್ನವಳು. ಹೌದಲ್ಲವೆ? ನಿನಗಾಗಿ ಎಲ್ಲವನ್ನೂ ತ್ಯಜಿಸಲು ಸಿದ್ಧನಿದ್ದೇನೆ ನಾನು. ನನ್ನ ಸಂಪತ್ತು, ನನ್ನ ಅಧಿಕಾರ, ನನ್ನ ಕೀರ್ತಿ ಎಲ್ಲವನ್ನೂ ನಿನ್ನ ಅಡಿಗಳಲ್ಲಿ ಅರ್ಪಿಸಲು ಸಿದ್ಧನಿದ್ದೇನೆ. ನಿನ್ನನ್ನು ಬಿಟ್ಟು ನಾನು ಬಾಳಲಾರೆ, ಬದುಕಲಾರೆ. ನೀನು ನನ್ನನ್ನು ಧಿಕ್ಕರಿಸಿದಲ್ಲಿ ಈ ಪ್ರಾಣ ಉಳಿಯಲಾರದು. ಅದನ್ನು ಉಳಿಸುವುದೂ ಬಿಡುವುದೂ ನಿನ್ನನ್ನೇ ಕೂಡಿದೆ.

ಇದರೊಂದಿಗಿರುವ ಹಣ ನಿನ್ನ ಸದ್ಯದ ಖರ್ಚಿಗಾಗಿ. ನಿನಗೆ ಇಷ್ಟ ಬಂದ ಹಾಗೆ ಅದನ್ನು ಬಳಸಿಕೊಳ್ಳಬಹುದು. ಹೆಚ್ಚಿಗೆ ಬೇಕಿದ್ದರೆ ಸಂಕೋಚವಿಲ್ಲದೆ ತಿಳಿಸು. ನನ್ನ ಹಣವೆಲ್ಲ ನಿನ್ನದೇ ಎಂದು ತಿಳಿದುಕೋ. ಮಧ್ಯಾಹ್ನದ ರೈಲಿಗೆ ನಾನು ಬೆಂಗಳೂರಿಗೆ ಹೊರಡಬೇಕಾಗಿದೆ. ನೀನೂ ಬರಬೇಕೆಂದು ನನ್ನ ಆಸೆ. ಬೆಂಗಳೂರು, ಮೈಸೂರು, ಕನ್ನಂಬಾಡಿ, ಮದ

ರಾಸು, ಮಧುರೆ, ಉದಕಮಂಡಲ ಎಲ್ಲವನ್ನೂ ನೋಡಿಕೊಂಡು ಬರುವಿಯಂತೆ.

ಪ್ರೀತಿಯ ಮುತ್ತುಗಳೊಂದಿಗೆ—

ನಿನ್ನ ಚರಣ ಸೇವಕ,
ಸಿದ್ಧವೀರ ಸ್ವಾಮಿ."

ಕಾಗದವನ್ನೋದಿ ಮುಗಿಸಿ, ಅದನ್ನೂ ರವಕೆಯೊಳಗಡೆ ಮಡಿಸಿಟ್ಟು ಸರಸು ಮಂಚದಿಂದಿಳಿದಳು.

ಅಟ್ಟವನ್ನಿಳಿದು ಬಂದು ಬಚ್ಚಲುಮನೆಗೆ ಹೋಗಿ ಮುಖ ತೊಳೆದುಕೊಂಡು ತಲೆ ಬಾಚಿ, ಹಣೆಗಿಟ್ಟುಕೊಳ್ಳಲೆಂದು ಲೀಲಾವತಿಯ ಕೊಟಡಿಗೆ ಬಂದಳು.

"ಬರ್‍ರಿ, ಬರ್‍ರಿ, ಸರಸ್ವತಮ್ಮ. ನಿದ್ರೆಯಾಯಿತೇ ಚೆನ್ನಾಗಿ?" ಎಂದು ಮುಗುಳುನಗೆಯೊಂದಿಗೆ ಲೀಲಾವತಿ ಸ್ವಾಗತ ಮಾಡಿದಳು.

ಆಕೆಯೆದುರಿಗೆ ಮುಖವೆತ್ತಿ ಮಾತನಾಡುವ ಧೈರ್ಯವಾಗಲಿಲ್ಲ ಸರಸುವಿಗೆ. ಲೀಲಾವತಿಯ ಮಾತಿನಲ್ಲಿ ವ್ಯಂಗ್ಯ ಅವಿತಿದ್ದ ಹಾಗೆ ಭಾಸವಾಯಿತು. "ನಿದ್ರೆಯಾಯಿತೇ ಚೆನ್ನಾಗಿ?" ಎಂಥ ಪ್ರಶ್ನೆ! ನಿದ್ರೆ? ಇನ್ನು ಎಲ್ಲಿಯ ನಿದ್ರೆ ತನಗೆ? ಹಿಂದೆ ಹೊರಳಿ ತನ್ನ ಸ್ಥಾನವನ್ನು ಮುಟ್ಟಲಾರದಂಥ ಚಕ್ರವ್ಯೂಹದಲ್ಲಿ ತಾನು ಪ್ರವೇಶಿಸಿದಂತಿದೆ. ವಿಷವ್ಯೂಹ....ಮೋಹದ, ಮಾಯದ ಬಲೆ....ಅದಕ್ಕೆ ತಾನು ಸಿಲುಕಿಕೊಳ್ಳಲು ಈ ಲೀಲಾವತಿಯೂ ಬಹುಮಟ್ಟಿಗೆ ಕಾರಣಳಾದಳು. ಆಕೆಯೊಬ್ಬಳೇ ಪತಿತಳಾದುದು ಸಾಲಲಿಲ್ಲವೇನೊ, ತನ್ನನ್ನೂ ಪತಿತಳನ್ನಾಗಿ ಮಾಡಿದಳು. ಜಾರಿಣಿಯನ್ನಾಗಿ ಮಾಡಿದಳು....

ಜಾರಿಣಿ!

ಕನ್ನಡಿಯಲ್ಲಿ ಮೂಡಿದ್ದ ತನ್ನ ಪ್ರತಿಬಿಂಬವೂ ತುಟಿಗಳನ್ನಗಲಿಸಿ ವ್ಯಂಗ್ಯವಾಗಿ ನುಡಿದಂತಾಯಿತು: "ಜಾರಿಣಿ.... ಹೌದು....ಜಾರಿಣಿ ನೀನು. ನಿನ್ನನ್ನೊಲಿದು ಬಂದ ಸುಂದರ ಪತಿಯಿದ್ದರೂ ಆತನಿಗೆ ದ್ರೋಹ ಬಗೆದು ಈ ಸ್ವಾಮಿಗೆ ನಿನ್ನ ದೇಹವನ್ನರ್ಪಿಸಿದೆ. ನಿನ್ನ ಶೀಲ, ನಿನ್ನ ಚಾರಿತ್ರ್ಯವೆಲ್ಲವೂ ನಿನ್ನೆಯ ರಾತ್ರಿ ಹಾಳಾಗಿಹೋಯಿತು. ನಿನ್ನ ಗಂಡನಿಂದ ತೃಪ್ತಿಯಾಗಲಿಲ್ಲವೇ ನಿನಗೆ? ನಿನ್ನನ್ನು ತೃಪ್ತಗೊಳಿಸಲು ಕಾವೀಬಟ್ಟೆಯ ಈ

ಅರ್ಜುನ ಸನ್ಯಾಸಿಯೆ ಬರಬೇಕಾಯಿತೇ? ಥೂ....ಥೂ....ಸುಡಲಿ ನನ್ನ ಬಾಳುವೆ....ಮಾನಗೆಟ್ಟ ಮತಿಹೀನೆ...."

"ಯಾಕ್ರೀ, ಸರಸ್ವತಮ್ಮ? ಹೀಗಾಗಿ ಬಿಟ್ಟಿದ್ದೀರಿ? ಮಾತೇ ಆಡು ತ್ತಿಲ್ಲವಲ್ಲ?" ಮತ್ತೆ ಕೇಳಬಂದಿತು ಲೀಲಾವತಿಯ ಧ್ವನಿ.

—ಏನು ಮಾತನಾಡುವುದೋ ಇವಳ ಹತ್ತಿರ? ನಿನ್ನೆಯೆಲ್ಲ ಮಾತ ನಾಡಿದ್ದೇ ಸಾಲದೇ? ತೋಟದಲ್ಲಿ ಕುಳಿತು ಆ ಪುರಾಣ ಈ ಪುರಾಣ ಬಿಚ್ಚಿ ತನ್ನ ಮನಸ್ಸನ್ನು ಕೆಡಿಸಿ ಸ್ವಾಮಿಯ ಕಡೆಗೆ ಹೊರಳಿಸಿದಳು. ರೇಶಿಮೆ ಸೀರೆ ಕೊಡಿಸಿ ಉಬ್ಬಿಸಿದಳು. ರಾತ್ರಿ ಇಲ್ಲಿಗೇ ಕರೆದುತಂದದ್ದು, ಅಟ್ಟಕ್ಕೆ ಕರೆದೊಯ್ದು ಬಿಟ್ಟದ್ದು – ಎಲ್ಲವೂ ಈಕೆಯ ಕಾರಸ್ಥಾನವೇ.... ಮಾತು? ಇನ್ನೆಲ್ಲಿಯ ಮಾತು ಇವಳ ಹತ್ತಿರ?

ಲಗುಬಗೆಯಿಂದ ತಲೆ ಬಾಚಿಕೊಂಡು, ಕುಂಕುಮವನ್ನಿಟ್ಟುಕೊಳ್ಳಲು ಬೆರಳನ್ನೆತ್ತಿದಳು. ಹಣೆಯ ಹತ್ತಿರ ಕೈ ಚಾಚಿದಾಗ ಆಕೆಯ ಶರೀರವೆಲ್ಲ ಥರ ಥರನೆ ನಡುಗಿದಂತಾಯಿತು. ಕುಂಕುಮ? ಯಾರ ಹೆಸರಿನಲ್ಲಿ ತಾನು ಈ ಕುಂಕುಮ ಇಟ್ಟುಕೊಳ್ಳುತ್ತಿದ್ದಾಳೆ? ಶಿವಮೂರ್ತಿಯ ಹೆಸರಿನಲ್ಲಿಯೆ? ಸ್ವಾಮಿಯ ಹೆಸರಿನಲ್ಲಿಯೆ? ಇದುವರೆಗೆ ಒಬ್ಬನೇ ಗಂಡನಿದ್ದ. ನಿನ್ನೆ ರಾತ್ರಿಯಿಂದ ಇಬ್ಬರು ಗಂಡಂದಿರಾದರು. ಈ ಇಬ್ಬರು ಗಂಡಂದಿರಿಗಾಗಿ ಎರಡು ಬೊಟ್ಟು ಇಟ್ಟುಕೊಳ್ಳಬೇಕಲ್ಲವೆ? ಇಬ್ಬರು ಗಂಡಂದಿರು....ಎರಡು ಬೊಟ್ಟು ಕುಂಕುಮ....ಹಾ....ಹಾ....ಹಾ....ಹಾ....

"ಯಾಕೆ ನಗ್ತೀರಿ ಸರಸಮ್ಮ?"

"ಎರಡು ಬೊಟ್ಟು.... ಕುಂಕುಮ.... ಇಬ್ಬರು ಗಂಡಂದಿರು.... ಹಾ.... ಹಾ....ಹಾ....ಹಾ...."

ಲೀಲಾವತಿ ಕೊಂಚ ಗಾಬರಿಗೊಂಡು ಸರಸುವಿನ ಬಳಿ ಬಂದು ಆಕೆಯ ಭುಜದ ಮೇಲೆ ಸ್ನೇಹದಿಂದ ಕೈಹಾಕಿ "ಹೀಗ್ಯಾಕೆ ಮಾಡ್ತೀರಿ ಸರಸಮ್ಮ? ಏನಾಯಿತು ನಿಮಗೆ?" ಎಂದಳು.

"ಆಗಬೇಕಾದುದೆಲ್ಲಾ ಆಗಿಹೋಯಿತಲ್ಲ ಲೀಲಾ. ಇನ್ನೇನುಳಿ ಯಿತು? ಏನುಳಿಯಿತು?"

"ಅಂದರೆ?"

"ಇದುವರೆಗೆ ಒಬ್ಬನೇ ಗಂಡನಿದ್ದ ನನಗೆ. ನಿನ್ನೆ ರಾತ್ರಿಯಿಂದ ಇನ್ನೊಬ್ಬ ಗಂಡ ಬಂದ. ಹಣೆಯ ಮೇಲೆ ಕುಂಕುಮ ಇಟ್ಟುಕೊಳ್ಳುವದು ಗಂಡನ ಗುರುತಿಗಾಗಿ. ಆತನ ಮಂಗಲಕ್ಕಾಗಿ. ಈಗ ನಾನಿಟ್ಟುಕೊಳ್ಳುತ್ತಿರುವ ಕುಂಕುಮ ಯಾರ ಗುರುತಿಗಾಗಿ, ನೀವೇ ಹೇಳಿರಿ. ಯಾರ ಮಂಗಲಕ್ಕಾಗಿ? ಯಾರ ಸೌಭಾಗ್ಯವತಿಯೆಂದು ನಾನೀ ಬೊಟ್ಟು ಇಟ್ಟುಕೊಳ್ಳಲಿ? ಇಬ್ಬರು ಗಂಡಂದಿರೆಂದು ಎರಡು ಬೊಟ್ಟಿಟ್ಟುಕೊಂಡರೆ ಹೇಗೆ? ಅದೇ ಸರಿಯಾದುದಲ್ಲವೆ? ನೀವೇನೆನ್ನುತ್ತೀರಿ? ಹಾ.... ಹಾ.... ಹಾ.... ಹಾ...." ಎಂದು ನುಡಿದು ಕುಂಕುಮವನ್ನು ಕೊಟಡಿಯಲ್ಲಿ ಚಿಮುಕಿಸಿ ಅಲ್ಲಿಂದ ಹೊರಬಿದ್ದಳು. "ತಡೀರಿ, ಸರಸಮ್ಮ, ತಡೀರಿ," ಎಂದು ಲೀಲಾವತಿ ಕೂಗಿದುದು ಆಕೆಗೆ ಕೇಳಿಸಲಿಲ್ಲ. ರಭಸದಿಂದ ಮಠವನ್ನು ತ್ಯಜಿಸಿ ಮನೆಯ ಕಡೆಗೆ ಹೊರಟಳು. ಅತ್ತ ಇತ್ತ ದೃಷ್ಟಿ ಹೊರಳಿಸುವ ಧೈರ್ಯವಾಗಲಿಲ್ಲ. ಬೀದಿಯಲ್ಲಿ ಹೋಗುತ್ತಿದ್ದ, ಬರುತ್ತಿದ್ದ ಜನರೆಲ್ಲರೂ ತನ್ನನ್ನೇ ಕುತೂಹಲದಿಂದ ದಿಟ್ಟಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಮುನ್ನಾದಿನದ ರಾತ್ರಿ ತಾನು ಕಾಲುಜಾರಿ ಪತಿತೆಯಾದ ವಿಷಯ ಅಷ್ಟು ಹೊತ್ತಿಗಾಗಲೆ ನಗರಕ್ಕೆಲ್ಲ ತಿಳಿದಂತೆ, ತನ್ನನ್ನು ಕಂಡೊಡನೆ ಜನರು ತುಟಿಗಳಲ್ಲಿಯೆ ನಕ್ಕು – "ಇದೋ, ಈಕೆಯೆ ನೋಡಿರಿ ಸ್ವಾಮಿಗಳ ಪ್ರೇಯಸಿ. ನಿನ್ನೆ ರಾತ್ರಿಯೆಲ್ಲಾ ಅವರೊಂದಿಗೆ ಮಠದಲ್ಲಿಯೇ ಇದ್ದಳು. ಈಗ ಎದ್ದು ಮನೆಗೆ ಹೊರಟಿದ್ದಾಳೆ. ರಾತ್ರಿಯೆಲ್ಲಾ ಎಲ್ಲಿದ್ದೆ ಎಂದು ಗಂಡ ಕೇಳಿದಾಗ ಏನು ಹೇಳುವಳೊ.... ಎಂಥ ಸುಳ್ಳು ಹೇಳಿ ಆತನ ಕಣ್ಣಿಗೆ ಮಣ್ಣು ತೂರುವಳೊ...." ಎಂದು ಪಿಸುದನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದಂತೆ ತೋರಿತು.

ಹೋಗಿ ಬರುವವರಿಗೆ ತನ್ನ ಮುಖ ಕಾಣಿಸದ ಹಾಗೆ ಸೆರಗನ್ನೆಳೆದುಕೊಂಡು ಸರಸು ಅವಸರದಿಂದ ನಡೆಯತೊಡಗಿದಳು. ಅಪರಿಚಿತರಿಗೇ ಮುಖ ತೋರಿಸಲು ಇಷ್ಟೊಂದು ಭಯಪಡುವ ತಾನು ಮನೆಗೆ ಹೋಗಿ ಪತಿಗೆ ಹೇಗೆ ತಾನೆ ಮುಖ ತೋರಿಸುವುದು? ಅವರೆದುರಿಗೆ ತಲೆಯೆತ್ತಿ ಹೇಗೆ ಮಾತನಾಡುವುದು? ಮಾತು ಹೊರಡಬಹುದೇ ತನ್ನ ಈ ಮುಖದಿಂದ? ಎಂದಿನಂತೆ ಸರಲವಾಗಿ ಸಹಜವಾಗಿ ಮಾತು ಬರಬಹುದೇ? ಅದು ಅಸಾಧ್ಯವೆಂದೇ ತೋರುತ್ತದೆ. ಎದೆಯ ಮೇಲೆ ಅಪರಾಧದ ಬಂಡೆ

ಗಲ್ಲು ಬಿದ್ದಿರುವಾಗ, ಅಧಃಪತನದ ಚಿಹ್ನಗಳೆಲ್ಲವೂ ಮುಖದ ಮೇಲೆ ಮೂಡಿರುವಾಗ ತನ್ನ ಬಾಯಿಯಿಂದ ಸರಲವಾದ ಮಾತುಗಳಾದರೂ ಹೇಗೆ ಬರಲು ಸಾಧ್ಯ? ಅವರನ್ನು ಕಂಡೊಡನೆಯೆ ತನ್ನ ಕೈಕಾಲುಗಳೆಲ್ಲ ನಡುಗ ಬಹುದು....ಧ್ವನಿ ತಡಬಡಿಸಬಹುದು .... ಒಂದೆರಡು ನಿಮಿಷಗಳ ಹಿಂದೆ ಲೀಲಾವತಿಯೆದುರಿಗೆ ತಾನು ಹುಚ್ಚುಹುಚ್ಚಾಗಿ ಮಾತನಾಡಿ ವಿಚಿತ್ರವಾಗಿ ನಕ್ಕ ಹಾಗೆ ಅವರೆದುರಿಗೂ ಮಾತನಾಡಿ ನಕ್ಕುಬಿಡಬಹುದೋ ಏನೊ. ತನ್ನ ಅಂತರಾತ್ಮದ ಮೇಲೆ ತನಗೆ ಹತೋಟಿಯುಳಿದಿಲ್ಲ. ನಿನ್ನೆಯ ರಾತ್ರಿಯ ಘಟನೆ ಅದನ್ನು ತೊಡೆದುಹಾಕಿದೆ. ತನ್ನ ಅನುಚಿತ ವರ್ತನೆ ಯಿಂದ ಸಿಡಿದೆದ್ದ ಅಂತರಾತ್ಮ ನಿಷ್ಕರುಣೆಯಿಂದ ನಿಷ್ಠುರತೆಯಿಂದ ತನ್ನನ್ನು ಖಂಡಿಸತೊಡಗಿದೆ....ದಂಡಿಸತೊಡಗಿದೆ....ತನ್ನ ಬಾಯಿಯಿಂದ ಹೊರಡುವ ಮಾತು ತನ್ನ ಮಾತುಗಳಲ್ಲ....ಅದರ ಮಾತುಗಳು....ತನ್ನ ಅಂತರಾತ್ಮನ ಅಣಕದ ಮಾತುಗಳು....ಕುಂಕುಮ ....ಎರಡು ಬೊಟ್ಟು....ಇಬ್ಬರು ಗಂಡಂ ದಿರು.. ಹಾ.. ಹಾ.. ಹಾ.. ಹಾ.. ಹಿ.. ಹಿ.. ಹಿ.. ಹೊ..ಹೊ..ಹೊ.. ಅವರೆದುರಿಗೂ ತನ್ನ ಮುಖದಿಂದ ಈ ಮಾತುಗಳನ್ನೇ ಹೊರಡಿಸದಿರ ಲಾರದು ಈ ಅಂತರಾತ್ಮ... ಈ ಶಬ್ದಗಳನ್ನು ಕೇಳುತ್ತಲೂ ನಿಜ ಸಂಗತಿ ಯೇನೆಂಬುದು ಅವರಿಗೆ ತಿಳಿದುಹೋಗುವುದು. "ನಿನ್ನೆ ರಾತ್ರಿಯೆಲ್ಲಾ ಎಲ್ಲಿದ್ದೆ ಸರಸೂ?" ಎಂಬ ಪ್ರಶ್ನೆಯನ್ನವರು ಕೇಳಬೇಕಾದ ಅಗತ್ಯವೇ ಉಳಿಯುವುದಿಲ್ಲ. ಅವರು ಕೇಳುವುದಕ್ಕೆ ಮೊದಲೇ, ತನ್ನ ಅಂತರಾತ್ಮವೇ ಎಲ್ಲವನ್ನೂ ಬಡಬಡನೆ ಹೇಳಿಬಿಡುವುದು. ನಡೆದ ಘಟನೆಯ ಚಿತ್ರವನ್ನು ತನ್ನ ಮುಖವೇ ತೋರಿಸುವುದು. "ನೀನು ಹಾಳಾದೆ ಸರಸೂ....ನಿನಗಿನ್ನು ಉಳಿಗಾಲವಿಲ್ಲ. ನಿನ್ನೆ ರಾತ್ರಿ ಪ್ರವೇಶಿಸಿದ ಆ ವಿಷವ್ಯೂಹದಿಂದ ನಿನಗಿನ್ನು ಬಿಡುಗಡೆಯಿಲ್ಲ. ಆ ಬಲೆಯ ಕಡೆಗೆ ಸುಳಿಯಬಾರದಾಗಿತ್ತು. ಸುಳಿದೆ. ಕಾಲು ಜಾರಿತು. ಅದರಲ್ಲಿ ಬಿದ್ದುಬಿಟ್ಟೆ. ಇನ್ನು ಎದ್ದುಬರಲು ಸಾಧ್ಯ ವಿಲ್ಲ. ಆ ಬಲೆ ನಿನ್ನನ್ನು ಎಂದೆಂದೂ ಬಿಡದಂತೆ ಬಿಗಿಯಾಗಿ ಹಿಡಿದಿಟ್ಟು ಕೊಳ್ಳುವುದು. ನೀನು ಅದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅದರ ಬಿಗಿತ ಹೆಚ್ಚುವುದು. ಇನ್ನು ಅದೇ ನಿನ್ನ ನೆಲೆವೀಡು....ಅದನ್ನುಳಿದು ಬೇರೆ ಗತಿಯಿಲ್ಲ ನಿನಗೆ...."

ಸರಸು ತ್ವರೆಯಿಂದ ಹೆಜ್ಜೆ ಹಾಕತೊಡಗಿದಳು. ಮನೆ ಸಮೀಪಿಸು ತ್ತಲಿದ್ದಿತು. ಇನ್ನು ಒಂದೆರಡು ಸಂದಿಗಳಲ್ಲಿ ಹಾಯ್ದು ಹೋಗಬೇಕು, ಅಷ್ಟೆ. ಒಂಭತ್ತು ಗಂಟೆಯಾಗುತ್ತ ಬಂದಿದೆ. ಅವರೇನನ್ನು ಮಾಡುತ್ತಿರ ಬಹುದು ಈಗ? ಇನ್ನೂ ಎದ್ದಿರುವರೋ, ಇಲ್ಲವೊ? ರಾತ್ರಿಯೆಲ್ಲ ತನ್ನ ದಾರಿ ಕಾಯುತ್ತ ಜಾಗರಣೆ ಮಾಡುತ್ತಿದ್ದರೊ ಏನೊ. ಇಡೀ ರಾತ್ರಿಯೆಲ್ಲ ತಾನು ಬರಲಿಲ್ಲವಾದ್ದರಿಂದ ಏನು ತಿಳಿದುಕೊಂಡಿರಬಹುದೊ, ಎಷ್ಟು ನೊಂದುಕೊಂಡಿರಬಹುದೊ.... ಸ್ವಾಮಿಗಳು ಈ ಊರಿಗೆ ಆಗಮಿಸಿದ ವಿಷಯ ಅವರಿಗೆ ಗೊತ್ತೇ ಇದ್ದಿತು. ರಾತ್ರಿ ಸ್ವಾಮಿಗಳು ಆಶ್ರಮದಲ್ಲಿಯೆ ಬಿಡಾರ ಮಾಡುವ ವಿಷಯವೂ ತಿಳಿದಿದ್ದಿತೊ ಏನೊ – ಯಾರು ಬಲ್ಲರು? ಅದೂ ಅವರಿಗೆ ಗೊತ್ತಾಗಿರಬಹುದು. ಪ್ರೆಸ್ಸಿನಲ್ಲಿ ಯಾರಾದರೂ ಹೇಳಿರಲು ಸಾಕು. ಶಾಸ್ತ್ರಿಗಳೋ, ಲಲಿತಮ್ಮನೋ ಯಾರಾದರೊಬ್ಬರು ಹೇಳಿರ ಬಹುದು. ಆ ಸುದ್ದಿ ತಿಳಿದ ಬಳಿಕ, ತಾನು ರಾತ್ರಿಯೆಲ್ಲ ಮನೆಗೆ ಬಾರದಿದ್ದು ದನ್ನು ಕಂಡು ಅವರು ಸ್ವಾಮಿಗಳ ಬಗೆಗೆ ಸಂದೇಹಪಟ್ಟುಕೊಂಡಿರಬಹುದೇ? ತಾನೂ ಸಹ ರಾತ್ರಿಯನ್ನು ಆಶ್ರಮದಲ್ಲಿಯೆ ಕಳೆಯುತ್ತಿರಬಹುದೆಂದು ಅವ ರಿಗೆನ್ನಿಸಿರಬಹುದೇ? ತನ್ನ ಶೀಲವನ್ನು ಕುರಿತು ಸಂದೇಹವುಂಟಾಗಿರ ಬಹುದೇ? "ಬಹುದೇ" ಎಂಬ ಪ್ರಶ್ನೆಯಾದರೂ ಏಕೆ? ಇಂಥ ಸಂದರ್ಭ ದಲ್ಲಿ ಎಂಥವರಿಗಾದರೂ ಸಂದೇಹ ಬರುವುದು ಸಾಹಜಿಕ. ರಾತ್ರಿ ಕೊಂಚ ತಡಮಾಡಿ ಮನೆಗೆ ಬಂದರೂ ಸಂಶಯಪಟ್ಟುಕೊಳ್ಳುವ ಗಂಡಂದಿರಿಗೇನು ಕಡಮೆ? ಸಿನಿಮಾಕ್ಕೆ ಹೋದಾಗಲೆಲ್ಲ ತಾನು ಒಂಭತ್ತು – ಒಂಭತ್ತೂವರೆ ಯಾದ ಮೇಲೆಯೆ ಮನೆಗೆ ಬರುತ್ತಿದ್ದುದುಂಟು. ತಾನು ಸಿನಿಮಾಕ್ಕೆ ಹೋದ ಬಗೆಗೆ ಅವರಿಗೆ ಯಾವ ಸಂದೇಹವೂ ಬಂದಿರಲಿಲ್ಲ. ಆದರೆ ನಿನ್ನೆ.... ರಾತ್ರಿ ಯೆಲ್ಲ ಹೊರಗೇ.... ಅವರಿಗೆ ಸಂದೇಹ ಬರದಿರುತ್ತದೆಯೆ? ವ್ಯಸನವಾಗದಿರು ತ್ತದೆಯೆ? ಕಳವಳವುಂಟಾಗದಿರುತ್ತದೆಯೆ? ಕೋಪಿಸಿಕೊಂಡು ಸಿಕ್ಕಾ ಪಟ್ಟೆ ಮಾತನಾಡುವ ವ್ಯಕ್ತಿಯಲ್ಲ ಅವರು. ಇನ್ನು ಹೊಡೆಯುವ, ಬಡಿ ಯುವ ಮಾತಂತೂ ದೂರವೇ ಉಳಿಯಿತು. ತಾನು ದಾರಿ ತಪ್ಪಿದ ಬಗೆಗೆ ಅವರಿಗೆ ಅತೀವ ವ್ಯಥೆಯಾಗಿರಬಹುದು. ತಮ್ಮೊಳಗೆ ತಾವೇ ಕುದಿಯುತ್ತ ಕಂಬನಿ ಸುರಿಸುತ್ತಿರಬಹುದು. ತನ್ನ ಬಗೆಗೆ ಜುಗುಪ್ಸೆಯಾಗಿರಬಹುದು.

ತಿರಸ್ಕಾರವುಂಟಾಗಿರಬಹುದು. ಪ್ರೀತಿಗೆ ಪ್ರತಿಯಾಗಿ ತಿರಸ್ಕಾರ....ತಿರಸ್ಕಾರ ....ಅಯ್ಯೋ....ತನ್ನಿಂದ ಎಂಥ ಪ್ರಮಾದವಾಯಿತು.... ಎಂಥ ದುರ್ಬುದ್ಧಿ ಬಂದಿತು ತನಗೆ ನಿನ್ನೆ ರಾತ್ರಿ....ತನ್ನವರಲ್ಲಿಲ್ಲದ ಯಾವ ಗುಣವನ್ನು ಕಂಡು ತಾನು ಆ ಸ್ವಾಮಿಗೆ ಬಲಿಬಿದ್ದೆನೊ....ಎಂಥ ಮಂಕು ಕವಿದಿದ್ದಿತೊ ತನ್ನ ಚಿತ್ತಕ್ಕೆ.... ತನ್ನ ಮೂರ್ತಿ.... ತನ್ನ ಪ್ರಾಣಪ್ರಿಯ ಮೂರ್ತಿ.... ಅವರಿಗಾಗಿ ತಂದೆ ತಾಯಿ ತಂಗಿ ಮನೆ ಮಾರು ಎಲ್ಲವನ್ನೂ ತೊರೆದು ಬಂದಿದ್ದೆ. ಮಾನ ಮರ್ಯಾದೆ ಯಾವುದಕ್ಕೂ ಹೆದರದೆ ಹೊರಟು ಬಂದಿದ್ದೆ. "ಒಬ್ಬ ಯುವಕ ನನ್ನು ಕಟ್ಟಿಕೊಂಡು ಓಡಿಹೋದಳು ಆ ನಾಚಿಕೆಗೆಟ್ಟ ಹೆಣ್ಣು" ಎಂದು ಊರಿನ ಜನ ಮಾತನಾಡಿಕೊಳ್ಳುವರೆಂಬುದು ತಿಳಿದಿದ್ದರೂ, ತನ್ನಿಂದಾಗಿ ತನ್ನ ತಂದೆತಾಯಿಗಳಿಗೂ ಕೆಟ್ಟ ಹೆಸರು ಬರುವುದೆಂಬುದು ಗೊತ್ತಿದ್ದರೂ, ಯಾವುದನ್ನೂ ಲಕ್ಷಿಸದೆ ಮೂರ್ತಿಯೊಡನೆ ನಡುರಾತ್ರಿಯಲ್ಲಿ ಓಡಿಬಂದಿದ್ದೆ. ಹತ್ತೆಂಟು ಜನರ ಸಮಕ್ಷಮದಲ್ಲಿ ಕೈ ಹಿಡಿದು ಕೊರಳಲ್ಲಿ ಮಾಲೆಹಾಕಿ ಅವರ ಮಡದಿಯಾಗಿದ್ದೆ. ಇಂಥ ಸುಸ್ವರೂಪದ, ಸುಸ್ವಭಾವದ, ಸುಶಿಕ್ಷಿತ ಗಂಡ ದೊರಕುವುದೂ ಒಂದು ಭಾಗ್ಯದ ವಿಷಯವೇ. ಬಾಲವಿಧವೆಯಾಗಿ ತವರು ಮನೆಯಲ್ಲಿ ಕೊಳೆಯುತ್ತ ಬಿದ್ದಿದ್ದ ತನಗೆ ಈ ಅಪರೂಪದ ಭಾಗ್ಯ ಲಭಿಸಿತ್ತು. ಆ ಭಾಗ್ಯವನ್ನು ತಾನಾಗಿಯೆ ಕೈಯಾರ ಕಳೆದುಕೊಂಡ ಹತಭಾಗಿ ತಾನು. ಜನುಮ ಜನುಮಗಳನ್ನೆತ್ತಿ ಬಂದರೂ ಮೂರ್ತಿಯಂಥವನ ಪ್ರೀತಿ ಲಭಿಸುವುದು ಕಷ್ಟಸಾಧ್ಯ. ಅಂಥ ಪ್ರೀತಿಯನ್ನು ಕಳೆದುಕೊಂಡು ಹಾಳಾದೆ ನಲ್ಲ ತಾನು....ಇನ್ನು ಅವರಿಗೆ ಹೇಗೆ ತಾನೆ ಮುಖ ತೋರಿಸುವುದು?

ಮನೆಯ ಹತ್ತಿರ ಬಂದುದಾಗಿದ್ದಿತು. ಅಟ್ಟವನ್ನೇರಿ ಹೋಗಿ ಅವರನ್ನೆದುರಿಸುವುದು ಹೇಗೆ ಸಾಧ್ಯ? ಬಂದ ಹಾಗೆ ಹಿಂದಿರುಗಿ, ಸೂಶಿಯ ಮನೆಗೆ ಧಾವಿಸಿಹೋಗಿ ಆಕೆಯನ್ನು ಬಾಚಿ ತಬ್ಬಿಕೊಂಡು ತನ್ನ ಪಾಪದ ವೃತ್ತಾಂತವನ್ನೆಲ್ಲ ಅರುಹಿ ಎದೆಯನ್ನು ಬರಿದುಮಾಡಿಕೊಳ್ಳಲೇ ಎನ್ನಿಸಿತು ಸರಸುವಿಗೆ. ಆದರೆ – ಮನೆಯವರೆಗಂತೂ ಬಂದುದಾಗಿದೆ. ಅವರನ್ನು ಕಾಣಲೇ ಬೇಕು. ಇಂದಿಲ್ಲ ನಾಳೆಯಾದರೂ ಕಾಣಲೇಬೇಕಲ್ಲವೆ? ಸರಿ. ಇಂದೇ ಕಾಣುವುದು. ಅವರು ಏನು ತಿಳಿದುಕೊಂಡಿದ್ದರೂ ಸರಿಯೆ. ತನ್ನನ್ನು ಜರಿದು ತಿರಸ್ಕರಿಸಿ ಅವಹೇಳನಗೊಳಿಸಿದರೂ ಸರಿಯೆ. ಅವರ

ಪಾದಗಳ ಮೇಲೆ ಬಿದ್ದು ಈ ಘೋರ ತಪ್ಪಿಗಾಗಿ ಕ್ಷಮೆ ಕೇಳಬೇಕು. ಕ್ಷಮಿಸದೆ ಒದೆದು ದೂಡಿಬಿಡುವಂಥ ಕಲ್ಲೆದೆಯವರೇನೂ ಅಲ್ಲವಲ್ಲ ಅವರು.... ಅವರ ಸ್ವಭಾವ ತಿಳಿಯದೇ ತನಗೆ? ಅವರು ಕ್ಷಮಿಸುವರು....ನಿಜವಾಗಿಯೂ ತನ್ನನ್ನು ಕ್ಷಮಿಸುವರು. ಆದರೆ....ತನ್ನನ್ನು ತಾನೇ ಕ್ಷಮಿಸಿಕೊಳ್ಳಲು ಸಾಧ್ಯವಾದೀತೇ? ತನ್ನ–ಅವರ ನಿಷ್ಕಲಂಕ ಪ್ರೇಮ ತನ್ನನ್ನು ಕ್ಷಮಿಸೀತೇ? ತನ್ನ ಅಂತರಾತ್ಮ ತನ್ನನ್ನು ಕ್ಷಮಿಸೀತೇ? ತನ್ನ–ಅವರ ನಡುವಿದ್ದ ಹಾಲಿನಂಥ ಸಂಬಂಧ ನಿನ್ನೆ ರಾತ್ರಿ ಒಡೆದು ಹಾಳಾಗಿ ಹೋಯಿತು. ಒಡೆದುಹೋದ ಹಾಲನ್ನು ಮತ್ತೆ ಒಳ್ಳೆಯ ಹಾಲನ್ನಾಗಿ ಮಾಡಲು ಶಕ್ತವಾದೀತೇ ಈ ಕ್ಷಮೆ? ಒಡೆದುದು ಒಡೆದೇ ಹೋಯಿತು. ಇನ್ನೆಂದೂ ಅದು ಒಳ್ಳೆಯ ಹಾಲಾಗಲಾರದು.... ಯಾವ ಕ್ಷಮೆಯೂ ತನ್ನನ್ನುಳಿಸಲಾರದು....ಉಳಿಸಲಾರದು......

"ಏನು ಸರಸಮ್ಮ, ಬೆಳಿಗ್ಗೆ ಎದ್ದು ಎಲ್ಲಿಗೆ ಹೋಗಿದ್ದಿರಿ?" ಬಾಗಿಲಲ್ಲಿ ನಿಂತಿದ್ದ ಗೋದಾವರಿಬಾಯಿ ಪ್ರಶ್ನಿಸಿದಳು.

"ಬೆಳಿಗ್ಗೆ? ನಾನು?" ಎಂದು ನುಡಿದು ಸರಸು ಸುಮ್ಮನಾದಳು. ರಾತ್ರಿಯೆಲ್ಲ ತಾನು ಮನೆಗೆ ಬರದಿದ್ದ ವಿಷಯ ಈಕೆಗೆ ತಿಳಿದಿಲ್ಲವೆಂದೇ ತೋರುತ್ತದೆ. ಆಗಾಗ ಸಿನಿಮಾಕ್ಕೆ ಹೋಗುವ ಹಾಗೆ ನಿನ್ನೆಯೂ ತಾನು ಸಿನಿಮಾಕ್ಕೆ ಹೋಗಿ ತಡಮಾಡಿ ಬಂದಿರಬೇಕೆಂದೇ ಈಕೆ ತಿಳಿದುಕೊಂಡಿರಬೇಕು. ಬೆಳಿಗ್ಗೆ ಬೇಗ ಎದ್ದು ತಿರುಗಾಡಲು ಹೋಗಿರಬಹುದೆಂದು ಭಾವಿಸಿಕೊಂಡಿದ್ದಳೊ ಏನೊ. ನಿಜವಾದ ವಿಷಯವನ್ನು ಈಕೆಗಾದರೂ ಏಕೆ ತಿಳಿಸಬೇಕು, ಎಂದುಕೊಂಡು ಸರಸು ಮೆಟ್ಟಲುಗಳನ್ನೇರಿ ಮೇಲೆ ಬಂದಳು. ಬಾಗಿಲಿಗೆ ಹಾಕಿದ್ದ ಬೀಗ ಹಾಗೆಯೆ ಇದ್ದಿತು. ಶಿವಮೂರ್ತಿ ಮನೆಯಲ್ಲಿರಲಿಲ್ಲ.

ಎದೆ ಧಡಧಡಿಸುತ್ತಿರಲು ಸರಸು ಬೀಗ ತೆಗೆದು ಒಳಗಡೆ ಅಡಿಯಿರಿಸಿದಳು.

ಮುನ್ನಾದಿನ ಮಧ್ಯಾಹ್ನ ತಾನು ಆಶ್ರಮಕ್ಕೆ ಹೊರಟಾಗ ಇದ್ದಂತೆಯೆ ಇದ್ದಿತು ಮನೆ. ಶಿವಮೂರ್ತಿ ಅಲ್ಲಿಗೆ ಬಂದ ಚಿಹ್ನೆಗಳಾವುವೂ ಕಾಣಿಸುತ್ತಿರಲಿಲ್ಲ. ಅಡುಗೆಯ ಕೊಟಡಿಯೊಳಹೊಕ್ಕು ನೋಡಿದಳು. ಸಾಯಂಕಾಲದ ಊಟಕ್ಕೆಂದು ತಾನು ಇರಿಸಿದ್ದ ರೊಟ್ಟಿ, ಪಲ್ಯ, ಅನ್ನ ಎಲ್ಲವೂ ಹಾಗೆಯೆ

ಇತ್ತು. ತನ್ನ ಹಾಗೆ ಅವರೂ ಮನೆಗೇ ಬಂದಿಲ್ಲವೊ ಏನೊ. ತಾನು ರಾತ್ರಿಯಲ್ಲೆಲ್ಲ ಆಶ್ರಮದಲ್ಲಿದ್ದ ಹಾಗೆ ಅವರು....

ಶಾಸ್ತ್ರಿಯ ತರುಣ ಪತ್ನಿ ಲಲಿತಳ ನೆನಪಾಗಿ ಸರಸುವಿನ ಎದೆ ಕಂಪಿಸಿತು. ನಿನ್ನೆ ರಾತ್ರಿಯೆಲ್ಲಾ ಅವರು ಶಾಸ್ತ್ರಿಯ ಮನೆಯಲ್ಲಿಯೆ ಇದ್ದರೊ ಏನೊ.... ಶಾಸ್ತ್ರಿಯಂತೂ ಆಶ್ರಮದಲ್ಲೇ ಇದ್ದ. ಮುದ್ರಣಾಲಯದಲ್ಲಿ ಅವರಿಬ್ಬರೇ? ಓ, ಇರಬಹುದೇ? ಹಾಗೂ ಇರಬಹುದೇ? ತಾನು ಸ್ವಾಮಿಗಳ ಮೋಹದ ಬಲೆಯಲ್ಲಿ ಸಿಲುಕಿ ಬಿದ್ದ ಹಾಗೆ, ತನ್ನವರು ಶಾಸ್ತ್ರಿಯ ಹೆಂಡತಿಯ ಮೋಹದ ಬಲೆಗೆ ಸಿಲುಕಿ ಬಿದ್ದಿರಬಹುದೇ?

ಮುನ್ನಾದಿನ ಆಶ್ರಮದ ತೋಟದಲ್ಲಿ ಲೀಲಾವತಿ ಆಡಿದ ಮಾತುಗಳು ಸರಸುವಿನ ಕಿವಿಗಳಲ್ಲಿ ಮತ್ತೆ ಮೊರೆಯತೊಡಗಿದುವು. ಶಾಸ್ತ್ರಿಯ ಪತ್ನಿಯ ವಿಚಾರವಾಗಿ ಹೇಳುತ್ತ ಆಕೆಯೆಂದಿದ್ದಳು: "ಲಲಿತಾ ಒಳ್ಳೆ ಸರಸಿ. ತನ್ನ ಈ ವಯಸ್ಸಿನಲ್ಲಿ ನ್ಯಾಯವಾಗಿ ತನಗೆ ದಕ್ಕಬೇಕಾದುದನ್ನೆಲ್ಲ ಆಕೆ ದಕ್ಕಿಸಿಕೊಳ್ಳುತ್ತಲೇ ಇದಾಳೆ. ರಸಿಕರೆಂದರೆ ಹಾಗಿರಬೇಕು ನೋಡಿರಿ. ಇವೊತ್ತು ಒಬ್ಬ ಹುಡುಗ....ನಾಳೆ ಇನ್ನೊಬ್ಬ ಹುಡುಗ...."

ಲೀಲಾವತಿಯ ಮುಖದಿಂದ ಆ ಮಾತು ಹೊರಟಾಗ ತಾನು 'ಇಶ್ಶಿಶ್ಶಿ' ಎಂದಿದ್ದುದು ಸರಸುವಿಗೆ ನೆನಪಾಯಿತು. ಆಗ 'ಇಶ್ಶಿಶ್ಶಿ' ಅನ್ನಿಸಿದ್ದೇನೊ ನಿಜ. ಆದರೆ ಈಗ ಮಾತ್ರ ಹಾಗೆನ್ನಿಸಲಿಲ್ಲ. ತರುಣ ವಯಸ್ಸಿನ ಗಂಡು ಹೆಣ್ಣು ಅತೃಪ್ತಿಗೊಳಗಾದಲ್ಲಿ ಹಾಗಾಗುವುದು ಅಸಂಭವವಲ್ಲವೆಂದೇ ತೋರುತ್ತಿತ್ತು. ಶಾಸ್ತ್ರಿಯಂಥ ಇಳಿವಯಸ್ಸಿನವನನ್ನು ಮದುವೆಯಾದ ಲಲಿತ ತನ್ನ ನೈಸರ್ಗಿಕ ಬಯಕೆಯನ್ನು ಪೂರೈಸಿಕೊಳ್ಳಲು ತರುಣರಿಗೆ ಮರುಳಾಗುವುದೂ ಸಾಹಜಿಕವೆ. ತನ್ನವರಿಗೂ ಆಕೆ ಮರುಳಾಗಿರಲು ಸಾಕು. ಅವರನ್ನು ಕಂಡು ಎಂಥವರಾದರೂ ಮರುಳಾದಾರು. ಇನ್ನು ಅತೃಪ್ತಮನಸ್ಸಿನ ತುಂಬು ಜವ್ವನೆ ಲಲಿತಾ! ಅವರ ಮುದ್ರಣಾಲಯಕ್ಕೆ ಕೆಲಸಕ್ಕೆ ಸೇರಿದ ದಿನವೇ ಆಕೆ ಅವರಿಗೆ ಮೋಹಿತಳಾಗಿರಬಹುದು. ಅಂದಿನಿಂದಲೂ ಅವರನ್ನು ತನ್ನ ಬಲೆಯಲ್ಲಿ ಬೀಳಿಸಲು ಬಗೆಬಗೆಯಾಗಿ ಪ್ರಯತ್ನಿಸಿರಬಹುದು. ದಿನವೂ ಅವರು ತಡಮಾಡಿ ಮನೆಗೆ ಬರುವುದಕ್ಕೂ ಅದೇ ಕಾರಣವಾಗಿರಲು ಸಾಕು. ನಿನ್ನೆಯ ರಾತ್ರಿ ತಾನು ಆಶ್ರಮದಲ್ಲಿಯೇ ಇರುವಂತಾದುದು ಅವರಿಗೆ ಹೇಗೋ

ಗೊತ್ತಾಗಿರಬೇಕು. ಅಂತೆಯೆ, ಸಂಧಿ ಸಾಧಿಸಿ ಅಲ್ಲಿಯೆ ಮಲಗಿಬಿಟ್ಟಿರಬೇಕು. ಹೌದು. ಹಾಗೆಯೆ ನಡೆದಿರಬೇಕು....ಸಂದೇಹವೇ ಇಲ್ಲ....

ಈ ವಿಚಾರ ಮನಸ್ಸಿನಲ್ಲಿ ಗಟ್ಟಿಯಾಗುತ್ತಲೂ ತನ್ನೆದೆಯ ಮೇಲೆ ಇಷ್ಟು ಹೊತ್ತು ಬಿದ್ದ ಹಾಗಿದ್ದ ಪಶ್ಚಾತ್ತಾಪದ ಬಂಡೆಗಲ್ಲು ಒಡನೆಯೆ ದೂರ ಸರಿದು ಉರುಳಿ ಹೋದಂತಾಯಿತು ಸರಸುವಿಗೆ. ತಾನಿಷ್ಟು ಕೊರಗಲು ಯಾವ ಕಾರಣವೂ ಇಲ್ಲವೆನ್ನಿಸಿತು. ಕಾಲು ಜಾರಿದ್ದು ತಾನೊಬ್ಬಳೇ ಅಲ್ಲವಲ್ಲ? ತನ್ನ ಹಾಗೆಯೆ ತನ್ನವರೂ ಕಾಲು ಜಾರಿರಬೇಕು. ತಾನು ಸ್ವಾಮಿಯೊಂದಿಗೆ; ಅವರು ಲಲಿತೆಯೊಂದಿಗೆ! ಸರಿಹೋಯಿತು. ಮುಯ್ಯಿಗೆ ಮುಯ್ಯಿ ತೀರಿದಂತಾಯಿತು. ಇನ್ನು ತಾನು ಕಳವಳದಿಂದ ಕುದಿಯುವ ಅವಶ್ಯಕತೆಯೇನೂ ಇಲ್ಲ, ಎಂದುಕೊಂಡಳು!

ಬಾಗಿಲಿಗೆ ಮತ್ತೆ ಬೀಗ ಜಡಿದು ಮನೆಯಿಂದ ಹೊರಟಳು. ಎಲ್ಲಿಗೆ ಹೋಗುವುದೆಂಬುದನ್ನು ನಿರ್ಧರಿಸಿರಲಿಲ್ಲವಾದರೂ ಆಕೆಯ ಕಾಲುಗಳು ಶಾಸ್ತ್ರಿಯ ಮುದ್ರಣಾಲಯದತ್ತ ಹೊರಟುವು. ರಾತ್ರಿಯೆಲ್ಲ ಅಲ್ಲಿಯೆ ಇದ್ದುದು ಸಾಲಲಿಲ್ಲವೇನೊ – ಬೆಳಗಾದರೂ ಮನೆಗೆ ಬಂದಿಲ್ಲವಲ್ಲ ಅವರು? ಇಷ್ಟು ಹೊತ್ತು ಏನು ಮಾಡುತ್ತಿರುವರೊ? ನೋಡಿಯಾದರೂ ಬರೋಣ– ಎಂದುಕೊಂಡು ಅಲ್ಲಿಗೆ ಬಂದಳು.

ಆಕೆಯನ್ನು ಕಂಡೊಡನೆ ಶಾಸ್ತ್ರಿ ಕುರ್ಚಿಯಿಂದೆದ್ದು ಬಂದು – "ಬರ್ರಿ, ಬರ್ರಿ, ಸರಸ್ವತಮ್ಮ. ಬಹಳ ದಿನವಾಯಿತು ನೀವು ನಮ್ಮ ಆಫೀಸಿಗೆ ಪಾದ ಬೆಳಸಿ. ಬರ್ರಿ, ಬರ್ರಿ," ಎಂದು ಸ್ವಾಗತಿಸಿದ.

ಆಕೆ ಅಂಗಳದಲ್ಲಿಯೆ ನಿಂತುಕೊಂಡು — "ನಮ್ಮವರು ಎಲ್ಲಿದ್ದಾರೆ ಶಾಸ್ತ್ರಿಗಳೆ?" ಎಂದಳು.

"ನಿಮ್ಮವರು? ಓ, ಅವರೇ? ನಿಮಗೆ ಗೊತ್ತೇ ಇಲ್ಲವೆ? ನಿನ್ನೆ ರಾತ್ರಿಯ ರೈಲಿಗೇ ಊರಿಗೆ ಹೋದರಲ್ಲ?"

"ಊರಿಗೆ? ಯಾವ ಊರಿಗೆ?"

"ನಿಮಗೆ ತಿಳಿಸಿಯೇ ಇಲ್ಲವೆ? ನಮ್ಮಾಕೆಯೂ ನಿಮ್ಮವರೂ ಕೂಡಿಯೇ ಹೋದರಲ್ಲ?"

"ಯಾವ ಊರಿಗೆ?"

"ನಮ್ಮಾಕೆಯು ತವರುಮನೆಗೆ."

ಕುಗ್ಗಿದ ಧ್ವನಿಯಲ್ಲಿ ಕೇಳಿದಳು ಸರಸು : "ತವರುಮನೆಗೆ? ಯಾತಕ್ಕಾಗಿ?"

"ನಮ್ಮ ಮಾವಂದಿರಿಗೆ ನೆಟ್ಟಗಿಲ್ಲವೆಂದು ಪತ್ರ ಬಂದಿತ್ತು. ಆಕೆ ಹೋಗಲೇಬೇಕಾಯಿತು. ಜತೆಗೆ ನಾನೂ ಹೋಗಬೇಕೆಂದರೆ ನನಗೆ ಬಿಡುವಿಲ್ಲ. ನಿಮಗೆ ಗೊತ್ತೇ ಇದೆ. ಅಂತೆಯೆ, ಶಿವಮೂರ್ತಿಯವರನ್ನು ಕರೆದೊಯ್ದಿದ್ದಾಳೆ. ಏನು, ಒಂದೆರಡು ದಿನಗಳ ಮಟ್ಟಿಗೆ, ಅಷ್ಟೆ. ಚಿಂತಿಸಬೇಡಿರಿ. ಬರ್‍ರಿ ಒಳಗೆ. ಕೂತುಕೊಳ್ಳಿರಿ. ಸ್ವಲ್ಪ ಚಹ ತೆಗೆದುಕೊಂಡು ಹೋಗುವಿರಂತೆ."

"ಬೇಡ. ನಾನು ಚಹ ಕುಡಿಯುವದಿಲ್ಲ. ಹೋಗುತ್ತೇನೆ," ಎಂದಿಷ್ಟೇ ನುಡಿದು ಆಕೆ ಅಲ್ಲಿಂದ ಹೊರಟುಬಿಟ್ಟಳು.

ಎರಡು ಮೂರು ಗಂಟೆಗಳವರೆಗೆ ಆಕೆ ಹಾಗೆಯೆ ನಗರವನ್ನೆಲ್ಲ ಸುತ್ತಿದಳು. ಸುತ್ತಿ ಸುತ್ತಿ ಕಾಲು ಸೋತುಹೋಗುತ್ತಲೂ ಆಶ್ರಮಕ್ಕೆ ಬಂದು ತೋಟದಲ್ಲಿನ ಗಿಡದ ಕೆಳಗೆ ಕುಳಿಕೊಂಡಳು.

ಅಂಗಳದಲ್ಲಿ ಸ್ವಾಮಿಗಳ ಮೋಟಾರು ಕಾರು ನಿಂತುಕೊಂಡಿದ್ದಿತು. ಒಳಗಿನಿಂದ ಸಾಮಾನುಗಳನ್ನು ಹೊತ್ತುತಂದು ಡ್ರೈವರ್, ಮೋಟಾರಿಗೆ ತುಂಬುತ್ತಲಿದ್ದ.

ಎಂಟು ಹತ್ತು ನಿಮಿಷ ಕಳೆದ ತರುವಾಯ ಊರಿಗೆ ಹೊರಡಲು ಸಿದ್ಧರಾಗಿದ್ದ ಸ್ವಾಮಿ ಆಶ್ರಮದಿಂದ ಹೊರಬಂದರು. ಅವರನ್ನು ಬೀಳ್ಕೊಳ್ಳಲು ಬಂದಿದ್ದ ಲೀಲಾವತಿಯ ದೃಷ್ಟಿ ಗಿಡದಡಿಯಲ್ಲಿ ಕುಳಿತ ಸರಸುವನ್ನು ಗುರುತಿಸಿತು.

"ಸರಸು ಬಂದಿದಾಳೆ ನೋಡಿರಿ," ಎಂದಳಾಕೆ.

"ಓ, ಸರಸುವೆ!" ಎಂದು ಉದ್ಗಾರ ತೆಗೆದು ಸ್ವಾಮಿಗಳು ಲಗುಬಗೆಯಿಂದ ಗಿಡದ ಬಳಿ ಬಂದರು.

"ಬೆಳಗಿನಿಂದಲೂ ನಿಮ್ಮನ್ನು ಹುಡುಕಿ ಹುಡುಕಿ ಸಾಕಾಯಿತು. ಹೊರಟು ನಿಂತಾಗಲಾದರೂ ದರ್ಶನ ಲಭಿಸಿತಲ್ಲ. ನಮ್ಮ ಪುಣ್ಯ. ನಾವೀಗ ಬೆಂಗಳೂರಿಗೆ ಹೊರಟಿದ್ದೇವೆ. ನೀವೂ ಬರುತ್ತೀರಾ?"

ಸರಸು ಎದ್ದು ನಿಂತು ಮೋಟಾರಿನ ಕಡೆಗೆ ಹೆಜ್ಜೆ ಹಾಕುತ್ತ "ಹೂಂ, ಬರುತ್ತೇನೆ. ನಡೀರಿ," ಎಂದಳು.

ಆಕೆ ಹೊರಡಬಹುದೆಂಬ ಕಲ್ಪನೆಯೇ ಸ್ವಾಮಿಗಳಿಗಿರಲಿಲ್ಲ. ಆನಂದ ಆಶ್ಚರ್ಯಗಳಿಂದ ಅವರು ಕ್ಷಣ ಹೊತ್ತು ಹಾಗೆಯೆ ನಿಂತುಕೊಂಡಿದ್ದರು. ಅನಂತರ ಧ್ವನಿಯೆತ್ತಿ ಲೀಲಾವತಿಯ ಕಡೆಗೆ ತಿರುಗಿ– "ಇವರಿಗಿನ್ನೂ ಊಟ ವಾಗಿದೆಯೊ ಇಲ್ಲವೊ. ಮೋಟರಿನಲ್ಲಿಯೆ ಊಟಮಾಡುವರಂತೆ. ಟಿಫಿನ್ ಕ್ಯಾರಿಯರ್‌ನಲ್ಲಿ ಊಟ ಕಟ್ಟಿಕೊಂಡು ಬರ್ರಿ. ಹಾಗೇ ಒಂದೆರಡು ಸೀರೆ ಗಳನ್ನೂ ತರ್ರಿ," ಎಂದು ನುಡಿದರು.

"ಏನೂ ಬೇಡ ಲೀಲಾ. ನನಗೇನೂ ಹಸಿವೆಯಿಲ್ಲ. ಸೀರೆಗಳ ಆಗತ್ಯವೂ ಇಲ್ಲ," ಎಂದು ಹೇಳುತ್ತ ಸರಸು ಮೋಟಾರು ಗಾಡಿಯ ನ್ನೇರಿದಳು.

ಸ್ವಾಮಿಗಳೂ ಲಗುಬಗೆಯಿಂದ ಮೋಟಾರು ಹತ್ತಿ ಸರಸುವಿನ ಪಕ್ಕ ದಲ್ಲಿ ಕುಳಿತುಕೊಂಡರು. "ರೈಲಿಗೆ ಹೋಗುವುದು ಬೇಡ ಗಫೂರ್. ಮೋಟರಿನಲ್ಲೇ ಹೋದರಾಯಿತು. ಪೆಟ್ರೋಲು ಸಾಕಷ್ಟು ಇದೆಯೋ ಇಲ್ಲವೊ?"

"ಮೂರು ಗ್ಯಾಲನ್ ಇದ್ದೀತು ಬುದ್ಧೀ."

"ಧಾರವಾಡದಲ್ಲಿ ಹಾಕಿಸಿದರಾಯಿತು. ಸ್ಟಾರ್ಟ್ ಮಾಡು."

"ನಿಮ್ಮ ಯಜಮಾನರಿಗೆ ಏನಾದರೂ ತಿಳಿಸಬೇಕೇನು ಸರಸಮ್ಮ?" ಎಂದು ಲೀಲಾವತಿ ಕೇಳಿದಳು.

"ಇನ್ನೇನು ತಿಳಿಸುವಿರಿ? ಇರುವ ವಿಷಯವನ್ನೇ ಹೇಳಿದರಾಯಿ ತಲ್ಲ. ಸ್ವಾಮಿಗಳ ಜತೆಗೆ ಬೆಂಗಳೂರಿಗೆ ಹೋದಳೆಂದು ಹೇಳಿಬಿಡಿರಿ," ಎಂದು ನುಡಿದು ಸರಸು— "ನಡೆ ಗಫೂರ್," ಎಂದು ಆಜ್ಞೆಯನ್ನು ಕೂಗಿ ದಳು.

"ನಗರದೊಳಕ್ಕೆ ಹೋಗದೆ ಹೊರಗಿನಿಂದಲೇ ದಾಟಿಸಿಬಿಡಯ್ಯ," ಎಂದು ಸ್ವಾಮಿಗಳು ಗಫೂರನಿಗೆ ಹೇಳಿ, ತಲೆಗೆ ಸುತ್ತಿಕೊಂಡಿದ್ದ ಕಾವಿ ಬಣ್ಣದ ಪಾವುಡವನ್ನು ತೆಗೆದು ಕೆಳಗಿರಿಸಿ, ಕಪನಿ ಹೊರಗಡೆ ಕಾಣಿಸದಂತೆ ಅದರ ಮೇಲೆ ಬಿಳಿಯ ರೇಶಿಮೆ ಶಲ್ಲೆಯವನ್ನು ಹೊದೆದುಕೊಂಡರು. ಕಣ್ಣು

ಗಳ ಮೇಲೆ ಬಣ್ಣದ ಕನ್ನಡಕವನ್ನಿಟ್ಟುಕೊಂಡು ಸರಸುವಿನ ಕಡೆಗೆ ಹೊರಳಿ– "ಈಗ ನನ್ನನ್ನು ಗುರುತಿಸಬಲ್ಲಿರಾ ನೀವು ?" ಎಂದು ಪ್ರಶ್ನಿಸಿದರು.

ಆಕೆ ಉತ್ತರವೀಯದೆ ನಸುನಕ್ಕಳು. "ಆಗಲೆ ಗುರುತಿಸಿಯಾಗಿದೆಯಲ್ಲ?" ಎಂದು ಹೇಳುವಂತಿತ್ತು ಆ ನಗೆ.

[೨೨]

ಲಲಿತಮ್ಮನ ತವರೂರಿನಿಂದ ಹೊರಟು ಶಿವಮೂರ್ತಿ ಮರಳಿ ಆ ನಗರಕ್ಕೆ ಬಂದಾಗ ಸಾಯಂಕಾಲವಾಗುತ್ತ ಬಂದಿದ್ದಿತು.

ರೈಲುನಿಲ್ದಾಣದಿಂದ ನೇರವಾಗಿ ಮನೆಗೆ ಬಂದಾಗ ಬಾಗಿಲಿನ ಬೀಗ ಆತನನ್ನು ಸ್ವಾಗತಿಸಿತು. "ಬೆಳಿಗ್ಗೆ ಕಂಡಿದ್ದೆ. ಅನಂತರ ಮನೆಗೆ ಬಂದ ಹಾಗೆ ಕಾಣಲಿಲ್ಲ," ಎಂದರು ಗೋದಾವರಿಬಾಯಿ. "ಇನ್ನೂ ಆಶ್ರಮದಲ್ಲಿಯೆ ಇರಬಹುದೊ ಏನೊ," ಎಂದುಕೊಂಡು ಶಿವಮೂರ್ತಿ ಅಲ್ಲಿಗೆ ಬಂದ. ತೋಟದಲ್ಲಿ ಶತಪಥ ಹಾಕುತ್ತಿದ್ದ ಲೀಲಾವತಿ ಆತನನ್ನು ಕಂಡೊಡನೆ ದಿಗಿಲುಗೊಂಡು – "ನೀವೇ ? ಯಾವಾಗ ಬಂದಿರಿ ?" ಎಂದು ಕೇಳಿದಳು.

"ಈಗ ತಾನೆ ಬಂದೆ. ಸರಸು ಇದ್ದಾಳೆಯೆ ಒಳಗೆ ?"

"ಇಲ್ಲ...." ಎಂದು ತಬ್ಬಿಬ್ಬಾಗಿ ನುಡಿದಳು ಲೀಲಾವತಿ.

"ಎಲ್ಲಿಗೆ ಹೋದಳು ?"

ಆತನಿಗೆ ಏನು ಉತ್ತರವೀಯಬೇಕೆಂಬುದು ಹೊಳೆಯಲಿಲ್ಲ ಲೀಲಾವತಿಗೆ. ಸರಸು ಸ್ವಾಮಿಗಳೊಂದಿಗೆ ಹೊರಟು ನಿಂತಾಗ ಹೇಳಿದ್ದ ಮಾತು ಆಕೆಗೆ ನೆನಪಾಯಿತು. 'ಸ್ವಾಮಿಗಳ ಜತೆಗೆ ಬೆಂಗಳೂರಿಗೆ ಹೋದಳೆಂದು ಹೇಳಿರಿ,' ಎಂದಾಕೆ ಹೇಳಿದ್ದಳು. ಹಾಗೆಲ್ಲಾದರೂ ಹೇಳಲು ಸಾಧ್ಯವೆ? ಹುಚ್ಚು ಹುಡುಗಿ ! ಅಷ್ಟೊಂದು ಧೈರ್ಯದಿಂದ ಸ್ವಾಮಿಗಳೊಡನೆ ಹೊರಟು ಹೋದುದೂ ಅಲ್ಲದೆ, ತನ್ನ ಕೈಹಿಡಿದ ಗಂಡನಿಗೆ ಆ ವಿಷಯ ಸ್ಪಷ್ಟವಾಗಿ ತಿಳಿಸಲು ಹೇಳಿಹೋದಳಲ್ಲ....ಆದರೆ........ಇವರ ಮುಖದೆದುರಿಗೇ ಇಂಥ ಮಾತನ್ನು ಹೇಗಾದರೂ ಹೇಳುವುದು ತಾಯಿಾ....

"ಸಿನಿಮಾಕ್ಕೆ ಹೋದಳೇನ್ರಿ ?"

"ಸಿನಿಮಾಕ್ಕೆ ? ಇಲ್ಲ....ಇಲ್ಲ.... ಉಹೂಂ....ಅಲ್ಲ....ಹೀಗೆ....ಆಕೆ....

ಊ....ಊ....ಊರಿಗೆ ಹೋದಳು," ಎಂದು ತಡವರಿಸುತ್ತ ನುಡಿದಳು ಲೀಲಾವತಿ.

"ಯಾವ ಊರಿಗೆ?" ಎಂದು ಗಾಬರಿಯಿಂದ ಕೇಳಿದನಾತ.

"ಯಾವ ಊರಿಗೆ ಎಂಬುದನ್ನು ಹೇಳಲಿಲ್ಲ. ಬಹಳಮಟ್ಟಿ ಬೆಂಗಳೂರಿಗೆ ಹೋಗಿರಬೇಕು."

"ಬೆಂಗಳೂರಿಗೆ? ಒಬ್ಬಳೇ?"

"ಇಲ್ಲ. ಇನ್ನೂ ಒಬ್ಬರಿದ್ದರು........" ಎಂದು ನುಡಿದು ಮಾತನ್ನು ಅಷ್ಟಕ್ಕೇ ನಿಲ್ಲಿಸಿದಳು ಲೀಲಾವತಿ.

ಶಿವಮೂರ್ತಿಯ ಮುಖ ಬೆಳ್ಳಗೆ ಬಿಳಚಿಕೊಂಡಂತಾಯಿತು. ಕೇಳಿದ: "ಇನ್ನೊಬ್ಬರು? ಯಾರು ಆ ಇನ್ನೊಬ್ಬರು?"

ಲೀಲಾವತಿಗೆ ಮಾತನಾಡಲು ಧೈರ್ಯವಾಗಲಿಲ್ಲ. ಸ್ವಾಮಿಗಳೊಂದಿಗೆ ಆಕೆ ಹೊರಟು ಹೋದ ವಿಷಯವನ್ನು ಒಮ್ಮೆಲೆ ಹೇಳಿಬಿಟ್ಟರೆ ಆತ ಏನನ್ನು ಮಾಡಿಬಿಡುವನೊ....ಒಮ್ಮೆಲೆ ಅದನ್ನೆಲ್ಲ ಒಡೆಯುವೆ, ನಿಧಾನವಾಗಿ ಎಲ್ಲವೂ ಆತನಿಗೆ ತಿಳಿಯುವಂತೆ ಮಾಡಬೇಕು, ಎಂದುಕೊಂಡಳು.

"ಹೇಳಿರಿ. ಯಾರ ಜತೆ ಹೋದಳು ಸರಸು?"

"ನನಗೆ ಗೊತ್ತಿಲ್ಲ," ಎಂದು ನುಡಿದು ಲೀಲಾವತಿ ಆಶ್ರಮದ ಕಡೆಗೆ ತಿರುಗಿದಳು.

ಶಿವಮೂರ್ತಿ ಒಡನೆಯೆ ಆಕೆಗೆ ಅಡ್ಡವಾಗಿ ನಿಂತು ಭಾವಾವೇಶದಿಂದ ಕಂಪಿಸುವ ಧ್ವನಿಯಲ್ಲಿ—"ನಿಮಗೆಲ್ಲವೂ ಗೊತ್ತಿರಲೇಬೇಕು. ಹೇಳಿರಿ. ಹೇಳಿಬಿಡಿರಿ. ಏನಿದ್ದರೂ ಚಿಂತೆಯಿಲ್ಲ. ಯಾರ ಜತೆಗೆ ಹೋದಳು ಸರಸೂ?" ಎಂದ.

ಇನ್ನು ಆತನಿಗೆ ಹೇಳದೆ ಬೇರೆ ಉಪಾಯವಿರಲಿಲ್ಲ.

"ಸ್ವಾಮಿಗಳು ಬೆಂಗಳೂರಿಗೆ ಹೊರಟಿದ್ದರು. ಅವರೊಂದಿಗೆ ಸರಸುವೂ...."

"ಸ್ವಾಮಿಗಳೊಂದಿಗೆ...." ಎಂದವನೇ ಶಿವಮೂರ್ತಿ ಅಲ್ಲಿಯೆ ನೆಲದ ಮೇಲೆ ಕುಸಿದುಬಿದ್ದ. ಆತನ ಕತ್ತು ಬಿಗಿದು ಬಂದಿತು. ಕಣ್ಣುಗಳಿಂದ ಕಂಬನಿಗಳುದುರತೊಡಗಿದುವು.

ಆತನ ದಾರುಣ ವ್ಯಥೆಯನ್ನು ಕಂಡು ಲೀಲಾವತಿಗೂ ಕರುಳು ಕೊರೆಯು ದಿರಲಿಲ್ಲ. ಆತನನ್ನು ಹೇಗೆ ಸಂತವಿಸಬೇಕು ? ಏನು ಹೇಳಿದರೆ ಸಮಾಧಾನ ವಾದೀತು ಆತನಿಗೆ? ಲೀಲಾವತಿ ಗಿಡಕ್ಕೊರಗಿ ನಿಂತಳು. ಮುಖದಿಂದ ಮಾತು ಹೊರಡುವಂತಿರಲಿಲ್ಲ. ಶಿವಮೂರ್ತಿ ಮಗುವಿನಂತೆ ಬಿಕ್ಕಿಬಿಕ್ಕಿ ಅಳುತ್ತಲಿದ್ದ.

ಹತ್ತು ಹದಿನೈದು ನಿಮಿಷ ಹಾಗೆಯೆ ಕಳೆಯಿತು. ಕರವಸ್ತ್ರದಿಂದ ಕಣ್ಣುಗಳನ್ನೊರೆಸಿಕೊಳ್ಳುತ್ತ ಶಿವಮೂರ್ತಿ ಎದ್ದು ನಿಂತ. ಗಿಡಕ್ಕೊರಗಿ ನಿಂತ ಲೀಲಾವತಿಯ ಕಡೆಗೊಮ್ಮೆ ನೋಡಿ ಆಶ್ರಮವನ್ನು ತ್ಯಜಿಸಿ ಹೊರಟ.

ಊರ ಹೊರಗಿನ ಕೋಟೆಗೆ ಬಂದು ತನ್ನ ಪ್ರೀತಿಯ ಬುರುಜಿನ ಮೇಲೆ ಹೋಗಿ ಕುಳಿತ. ಎದುರಿನಲ್ಲಿ ಕೆರೆಯ ನೀರು ಸಾಯಂಕಾಲದ ಸೂರ್ಯನ ಬಣ್ಣದ ಕಿರಣಗಳೊಂದಿಗೆ ಆಟವಾಡುತ್ತಲಿತ್ತು. ಮುಗಿಲಿನಲ್ಲಿ ಬೇರೆಬೇರೆ ಬಣ್ಣಗಳಿಂದ ರಂಜಿತವಾದ ಪುಟ್ಟಪುಟ್ಟ ಮೋಡಗಳ ಬಳಗ. ಅವುಗಳನ್ನೇ ದಿಟ್ಟಿಸುತ್ತ ಹಾಗೆಯೆ ಕುಳಿತುಕೊಂಡ. ಒಂದು ನಿಮಿಷ, ಎರಡು ನಿಮಿಷ, ಐದು ನಿಮಿಷ. ಮೋಡಗಳಿಗಿದ್ದ ಗುಲಾಬಿಯ ರಂಗು ಮಾಯವಾಗಿ ಕಪ್ಪು ಬಣ್ಣ ಬರತೊಡಗಿದ್ದಿತು. ಆ ಬದಲಾವಣೆಯನ್ನು ಕಂಡು ಮೆಲ್ಲನೆ ನಕ್ಕ. "ನಮ್ಮ ಬಾಳೂ ಹೀಗೇ ಅಲ್ಲವೆ ? ನಮ್ಮ ಒಲವೂ ಹೀಗೇ ಅಲ್ಲವೆ ?" ಎಂದು ಕೊಂಡ.

ಸರಸುವನ್ನು ನೆನೆದು ತಾನು ಲಲಿತಳ ತವರೂರಿನಿಂದ ಹೇಳದೆ ಕೇಳದೆ ಧಾವಿಸಿ ಬಂದುದರ ನೆನಪಾಯಿತು. "ಹುಚ್ಚು....ಎಲ್ಲವೂ ಒಂದು ಹುಚ್ಚು. ಪ್ರೇಮ....ಅದೊಂದು ದೊಡ್ಡ ಭ್ರಮೆ.... ಪ್ರೇಮವೂ ಇಲ್ಲ, ಗೀಮವೂ ಇಲ್ಲ – ಎಲ್ಲ ಸುಳ್ಳು," ಎನ್ನಿಸಿತು. "ಐದು ನಿಮಿಷಗಳಿಗೆ ಮೊದಲು ಕಣ್ಸೆಳೆವ ಗುಲಾಬಿಬಣ್ಣ. ಈಗ ಕಪ್ಪು. ಬರಿಯ ಕಪ್ಪು. ಶೂನ್ಯ. ಮಾಯೆ. ಎಲ್ಲವೂ ಮಾಯೆ...."

ಮುನ್ನಾ ದಿನದ ರಾತ್ರಿ ಲಲಿತಳ ತವರೂರಿನಲ್ಲಿ ನಡೆದ ಘಟನೆಗಳೆಲ್ಲ ಆತನ ಒಳಗಣ್ಣಿನೆದುರು ಸುಳಿಯತೊಡಗಿದುವು. ....ಲಲಿತಳೂ ತನ್ನನ್ನು ಪ್ರೀತಿಸುವುದಾಗಿ ಹೇಳಿದ್ದಳು. ಪ್ರೀತಿ! ಅದುವೆ ಪ್ರೀತಿಯೆ? ರೈಲಿ ನಿಂದಿಳಿದು ಅವರ ಮನೆಗೆ ಹೋಗಬೇಕಾದರೆ ರಾತ್ರಿ ಹನ್ನೆರಡು ಗಂಟೆ

ಯಾಗಿದ್ದಿತು. ಆಕೆಯ ತಂದೆಗೆ ಕಾಯಿಲೆಯಾಗಿದ್ದುದರಿಂದ ತಾವು ಅಲ್ಲಿಗೆ ಹೋಗಬೇಕಾಗಿದ್ದಿತಂತೆ. ಮನೆಗೆ ಬಂದು ನೋಡಿದರೆ ಅಲ್ಲಿ ಕಾಯಿಲೆಯವ ರಾರೂ ಇದ್ದಂತೆ ಕಾಣಿಸಲಿಲ್ಲ. ಎಲ್ಲವೂ ಶಾಂತವಾಗಿತ್ತು. ಹೊರಗಿನ ಪಡಸಾಲೆಯಲ್ಲಿ ಮಲಗಿದ್ದ ಮುದುಕಿಯೊಂದು ಕೆಮ್ಮುತ್ತ ಕೆಮ್ಮುತ್ತ ಎದ್ದು ಬಾಗಿಲು ತೆರೆಯಿತು. ಒಳಗಿನ ಕೋಣೆಯಲ್ಲಿ ಯಾರೂ ಇದ್ದಂತೆ ತೋರ ಲಿಲ್ಲ. "ಯಜಮಾನರಿಗೆ ಹೇಗಿದೆ ಈಗ ಅಜ್ಜೀ ?" ಎಂದು ತಾನು ಪ್ರಶ್ನಿಸಿ ದಾಗ ಮುದುಕಿ—"ಯಜಮಾನರು ? ಯಾವ ಯಜಮಾನರು ? ಲಲಿತಕ್ಕನ ತಂದೆಯವರೇ ? ಅವರೂ ಅವರ ಹೆಂಡತಿ ಇಬ್ಬರು ಎಡೂರಿನ ಜಾತ್ರೆಗೆ ಹೋಗಿದ್ದಾರಲ್ಲ ?" ಎಂದು ಉತ್ತರವಿತ್ತಿದ್ದಳು. ತಾನು ಬೆರಗಾಗಿ "ಜಾತ್ರೆಗೆ ಹೋಗಿದ್ದಾರೆ ? ಕಾಯಿಲೆಯಾಗಿದೆಯೆಂದು ಇವರೆಂದರಲ್ಲ ? " ಎಂದು ಕೇಳಿದ್ದ. ಮುದುಕಿ ಉತ್ತರವೀಯುವುದಕ್ಕೆ ಮೊದಲೇ ಲಲಿತ ತನ್ನ ಕೈಹಿಡಿದು ನೇರವಾಗಿ ಒಳಗಿನ ಕೊಟಡಿಗೆ ಕರೆದೊಯ್ದಿದ್ದಳು. ಅಲ್ಲಿ ದೀಪ ವಿರಲಿಲ್ಲ. ಕಡ್ಡಿ ಕೊರೆದು ತಾನೇ ದೀಪ ಅಂಟಿಸಿದ್ದ.

"ಇದೇನು ಲಲಿತಾ ?"

"ಏನು ?" ಎಂದಾಕೆ ನಗುತ್ತ ಪ್ರಶ್ನಿಸಿದ್ದಳು.

"ತಂದೆಗೆ ಕಾಯಿಲೆಯೆಂದು ಕರೆದು ತಂದಿರಿ. ಇಲ್ಲಿ ಬಂದು ನೋಡಿ ದರೆ ಕಾಯಿಲೆಯೂ ಇಲ್ಲ, ತಂದೆಯೂ ಇಲ್ಲ...."

"ಕಾಯಿಲೆಯಾದದ್ದು ತಂದೆಗಲ್ಲ. ನನಗೇ."

ಆಗ ತನಗೆ ಕೊಂಚ ಕೊಂಚವಾಗಿ ಅರ್ಥವಾಗತೊಡಗಿದ್ದಿತು. ತಂದೆಯ ಕಾಯಿಲೆಯ ನೆಪ ಮುಂದೆ ಮಾಡಿ ಲಲಿತ ತನ್ನನ್ನು ಇಲ್ಲಿಗೆ ಕರೆದು ತಂದಿರ ಬೇಕು. ತನ್ನನ್ನು ಬಲೆಗೆ ಬೀಳಿಸುವುದಕ್ಕಾಗಿಯೆ ಈಕೆ ಇಂಥ ವ್ಯೂಹ ರಚಿಸಿರಬೇಕು. ಅಲ್ಲಿ, ನಗರದಲ್ಲಿ, ತಾನು ಆಕೆಯ ಮನಸ್ಸಿನಂತೆ ನಡೆಯು ವುದು ಅಸಾಧ್ಯವೆಂದು ತೋರಿದಾಗ ಇತ್ತ ಧಾವಿಸಿರಬೇಕು ಆಕೆ. ತಂದೆ ತಾಯಿಗಳು ಮನೆಯಲ್ಲಿಲ್ಲದಿರುವ ಸಮಯವನ್ನು ಸಾಧಿಸಿ ತನ್ನನ್ನಿಲ್ಲಿಗೆ ಕರೆದು ತಂದಿರಬೇಕು....ಹಿಂದೆ ಒಂದು ಸಲ ಹೀಗೆಯೆ ತನ್ನನ್ನು ಬಲೆಗೆ ಸಿಲುಕಿಸಲೆತ್ನಿಸಿದ್ದಳು. ಅಕಸ್ಮಾತ್ತಾಗಿ ಶಾಸ್ತ್ರಿ ಬಂದುಬಿಟ್ಟುದರಿಂದ ಅದು ಸಾಧಿಸಿರಲಿಲ್ಲ. ಇಂದು ಸಾಧಿಸುವುದೆಂದೇ ತೋರುತ್ತವೆ. ಪಡಸಾಲೆಯಲ್ಲಿ

ಬಿದ್ದು ಕೊಂಡಿರುವ ಮುದುಕಿಯೊಂದನ್ನುಳಿದು ಮನೆಯಲ್ಲಿ ಇನ್ನಾರೂ ಇಲ್ಲ. ಆ ಮುದುಕಿಯೂ ಮತ್ತೆ ಗೊರಕೆ ಹೊಡೆಯಲಾರಂಭಿಸಿತು. ಇನ್ನು....

ಹಾಸಿಗೆ ಹಾಸಿ, ಅದರ ಮೇಲೆ ದೇಹವನ್ನೊರಗಿಸಿ, ಲಲಿತಾ ತನ್ನ ಎಡಗೈಯನ್ನು ಹಿಡಿದು ಎಳೆಯುತ್ತ– "ಬನ್ನಿರಲ್ಲಾ?" ಎಂದಿದ್ದಳು. ತಾನು ಕುಳಿತುಕೊಳ್ಳಲೇಬೇಕಾಗಿದ್ದಿತು.

"ನಾನು ಸುಳ್ಳು ಹೇಳಿದೆ ಅಂತ ಅನ್ನಿಸುತ್ತಿದೆಯೇನೋ ನಿಮಗೆ?"

"ಸುಳ್ಳು?"

"ತಂದೆಗೆ ಜಡ್ಡಾಗಿದೆ ಅಂತ...."

"ಓ, ಅದೇ...."

"ಜಡ್ಡಾಗಿದ್ದದ್ದು ನಿಜ. ಅದನ್ನು ಗುಣಪಡಿಸಿಕೊಳ್ಳಲಿಕ್ಕಾಗಿಯೆ ಎಡೂರು ವೀರಭದ್ರದೇವರ ಜಾತ್ರೆಗೆ ಹೋಗಿರಬೇಕು ಅವರು. ಹೋಗುವಾಗ ನನಗೆ ಮತ್ತೆ ಪತ್ರ ಬರೆಯಲು ಮರೆತಿರಬಹುದು."

ತಾನು ಮಾತನಾಡಿರಲಿಲ್ಲ. ಮನಸ್ಸಿನಲ್ಲಿ ನೂರು ವಿಚಾರಗಳ ಕೋಲಾಹಲ. "ನೀರಿನ ನೆಲೆ, ಕುದುರೆಯ ನೆಲೆ, ಹೆಣ್ಣಿನ ನೆಲೆ ಯಾರಿಗೂ ತಿಳಿಯದೆ"ಂದು ಹಿರಿಯರು ಹೇಳಿದ ಮಾತು ಎಷ್ಟು ನಿಜವಾದುದು........

"ಸಿಟ್ಟೇನ್ರೀ ನನ್ನ ಮೇಲೆ?"

ಸಿಟ್ಟು? ತನಗಾಗ ಸಿಟ್ಟು ಬಂದಿದ್ದಿತೇ ಆಕೆಯ ಬಗೆಗೆ.? ಇಲ್ಲ. ಸಿಟ್ಟೇನೂ ಬಂದಿರಲಿಲ್ಲ. ಜುಗುಪ್ಸೆಯುಂಟಾಗಿದ್ದುದು ಮಾತ್ರ ನಿಜ. ಆ ಜುಗುಪ್ಸೆ ಆಕೆಯ ಬಗೆಗೂ ಬಂದುದಲ್ಲ. ಹೆಣ್ಣಿನ ಬಹುರೂಪದ ಬಗೆಗೆ. ಸುಳ್ಳು ಹೇಳಿ, ಮೋಸಮಾಡಿ, ತನ್ನನ್ನಿಲ್ಲಿಗೆ ಕರೆದು ತಂದಿದ್ದಾಳೆ. ಅದರಲ್ಲಿ ಸಂದೇಹವೇನೂ ಇಲ್ಲ. ಆದರೂ ಮತ್ತೆ ಸುಳ್ಳು ಹೇಳುತ್ತಾಳೆ. ಇಂಥ ಮುದ್ದಾದ ಬಾಯಿಂದ ಇಂಥ ಸುಳ್ಳು ಹೇಗೆ ಬರುವುದೋ, ಎನ್ನಿಸಿ ಜುಗುಪ್ಸೆಯಾಗಿತ್ತು.

"ನಿದ್ದೆ ಬಂದಿಲ್ಲವೇ ಇನ್ನೂ? ದೀಪ ಆರಿಸಲೇ?" ಎಂದು ಕೇಳಿ, ಆಕೆ ಒಡನೆಯೆ ದೀಪವನ್ನೂ ಆರಿಸಿ ಬಿಟ್ಟಿದ್ದಳು. ತಾನು ಆಕೆಯೊಂದಿಗೆ ಮಲಗುವುದು ಖಂಡಿತವೆಂದೇ ಆಕೆ ತಿಳಿದ ಹಾಗಿದ್ದಿತು. ತನಗೋ, 'ಇಶ್ಶಿ' ಎನ್ನಿಸುತ್ತಿತ್ತು. ಹೆಣ್ಣಿನ ಬಗೆಗೇ ಹೇಸಿಕೆಯಾಗುತ್ತಿತ್ತು. ರಾತ್ರಿ ರೈಲಿನ

ಪ್ರವಾಸ, ಮಧ್ಯರಾತ್ರಿಯಲ್ಲಿ ಮನೆಗೆ ಆಗಮನ, ಬರುತ್ತಲೂ ಹಾಸಿಗೆಯ ಸಹವಾಸ....ಇನ್ನು ಈ ಹೆಣ್ಣಿನೊಂದಿಗೆ ಕೂಟ....'ಇಶ್ಶೀ' ಎನ್ನಿಸಿತ್ತು ತನಗೆ ....'ಇಶ್ಶೀ' ಎನ್ನಿಸಿತ್ತು. ತನ್ನ ಸರಸುವಿನ ಜ್ಞಾಪಕ ಬಂದು ಕಣ್ಣಂಚಿನಲ್ಲಿ ನೀರು ತುಳುಕಿತ್ತು.

ಕತ್ತಲೆಯಲ್ಲಿ ದಿಙ್ಮೂಢನಂತೆ ಕುಳಿತಿದ್ದ ತನ್ನನ್ನು ಲಲಿತಾ ಬರಸೆಳೆದು ತನ್ನ ಪಕ್ಕದಲ್ಲಿ ಮಲಗಿಸಿಕೊಂಡಿದ್ದಳು. ಕಾತರತೆಯಿಂದ ಆಕೆಯ ಎದೆ ವೇಗವಾಗಿ ಹೊಡೆದುಕೊಳ್ಳುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿದ್ದಿತು. ಮೂಗಿನ ಹೊರಳೆಗಳಿಂದ ಅತ್ಯುಷ್ಣವಾದ ಉಸಿರು. ಜ್ವರವೇರಿದವರಂತೆ ಕಾಯ್ದ ಶರೀರ. ತನಗೆ ಇನ್ನೂ 'ಇಶ್ಶೀ' ಎನ್ನಿಸಿತ್ತು. ಆಕೆ ತನ್ನನ್ನು ಬಾಚಿ ಎದೆಗೊತ್ತಿಕೊಂಡಾಗ ಉಸಿರು ಕಟ್ಟಿದಂತಾಗಿದ್ದಿತು.

ತನ್ನಿಂದ ಯಾವ ಪ್ರತಿಕ್ರಿಯೆಯೂ ಇಲ್ಲವಾದಾಗ ಆಕೆಗೆ ಆಶ್ಚರ್ಯವಾಗಿರಬೇಕು. "ಇದೇನ್ರೀ, ಹೀಗಿದ್ದೀರಿ ?" ಎಂದು ಕೇಳಿದ್ದಳು.

"ಇನ್ನು ಹೇಗಿರಬೇಕು ?"

ತನ್ನ ಕಿವಿಯ ಹತ್ತಿರ ಮುಖ ತಂದು ಆಕೆ ಪಿಸುದನಿಯಲ್ಲಿ ಕೇಳಿದ್ದಳು. "ಕೇವಲ ನಿಮಗಾಗಿ ಇಷ್ಟುದೂರ ಪ್ರವಾಸ ಮಾಡಿ ಬರಬೇಕಾಯಿತು. ನನ್ನ ಬಗ್ಗೆ ಪ್ರೀತಿಯಿಲ್ಲವೇ ನಿಮಗೆ ?"

ಪ್ರೀತಿ ! ತನಗೆ ನಗೆ ಬಂದುಬಿಟ್ಟಿತ್ತು. ಪ್ರೀತಿ ! ಒಳ್ಳೆಯ ಪ್ರೀತಿಯೆ ! ಇದಕ್ಕೂ ಪ್ರೀತಿಯೆನ್ನುತ್ತಾರೆಯೆ ? ಅಲ್ಲಿ– ನಗರದಲ್ಲಿ ಗಂಡನನ್ನು ಬಿಟ್ಟು ಬಂದಿದ್ದಾಳೆ. ಇನ್ನೊಬ್ಬಳ ಗಂಡನಾದ ತನ್ನನ್ನು ಕೂಡಬಯಸುತ್ತಾಳೆ. ಈ ಕಾಮದ ಉನ್ಮಾದಕ್ಕೆ, ಈ ಮಾಂಸದ ಬಯಕೆಗೆ ಪ್ರೀತಿಯೆನ್ನುತ್ತಾರೆಯೆ ? ಪ್ರೀತಿಯೆಂಬ ಪವಿತ್ರ ಶಬ್ದವೆ, ಎಂಥೆಂಥ ಅನಾಚಾರ ನಡೆದಿದೆ ನಿನ್ನ ಹೆಸರಿನಲ್ಲಿ !

ಆಕೆ ತನ್ನನ್ನು ಬಿಗಿಯಾಗಿ ತಬ್ಬಿಕೊಳ್ಳುತ್ತ ಕೇಳಿದ್ದಳು : "ಯಾಕೆ ಮಾತನಾಡುವದಿಲ್ಲ ನೀವು ? ನನ್ನ ಮೇಲೆ ಪ್ರೀತಿಯಿಲ್ಲವೆ ?"

"ಪ್ರೀತಿಯೆಂದರೆ ಹೀಗಿರುವದಿಲ್ಲ ಲಲಿತಾ. ಮನಸ್ಸು ಬಯಸಿದವರೊಂದಿಗೆ ಮಲಗುವುದಕ್ಕೆ ಪ್ರೀತಿಯೆನ್ನುವದಿಲ್ಲ ಯಾರೂ," ಎಂದು ಹೇಳಿ ಅಲ್ಲಿಂದೆದ್ದು ಹೊರಟುಬಿಡಲೇ ಎನ್ನಿಸಿತ್ತು ತನಗೆ. ಆದರೆ ಆಕೆಯ ಬಾಹುಬಂಧನದಿಂದ ತಪ್ಪಿಸಿಕೊಂಡು ಹೋಗುವಂತಿರಲಿಲ್ಲ........

ಎರಡು ಮೂರುಗಂಟೆ ಕಳೆದಿರಬಹುದು. ಲಲಿತಾ ತೃಪ್ತಳಾಗಿ ಮಲಗಿ ಕೊಂಡಿದ್ದಳು. ತನಗೂ ತೃಪ್ತಿಯಾಗಿದ್ದಿತೇ? ಎಂಥ ತೃಪ್ತಿ, ಏನು ಕತೆ? ಯಾವುದೂ ಹೊಳೆಯುತ್ತಿರಲಿಲ್ಲ ತನಗೆ. ಆ ಹಾಸುಗೆ, ಆ ಹೆಣ್ಣು, ಅವಳ ನುಣ್ಣಗಿನ ತೋಳು - ತೊಡೆ, ಅವಳ ಕೆನ್ನೆ, ಅವಳ ಮೂಗು, ಅವಳ ತುಟಿ, ರೇಶಿಮೆಯ ಹಾಗೆ ನುಣುಪಾಗಿದ್ದ ಆಕೆಯ ತಲೆಗೂದಲು, ಅವುಗಳಿಂದ ಹೊರಹೊಮ್ಮುತ್ತಿದ್ದ ಮಾದಕ ಪರಿಮಳ ಎಲ್ಲವೂ ವಿಚಿತ್ರವಾಗಿ ತೋರು ತ್ತಿತ್ತು. ಯಾವ ಮಾಟಗಾರ ರಚಿಸಿದನೋ ಈ ಪ್ರಪಂಚವನ್ನ? ಒಂದು ಗಂಡು, ಒಂದು ಹೆಣ್ಣು....ಕಣ್ಣಿನ ಕರೆ, ಆಕರ್ಷಣೆ, ಮೋಹ, ಕಾಮ, ಆಲಿಂಗನ, ಚುಂಬನ, ಸಂಯೋಗ.......ಡವಡವನೆ ಹಾರುವ ಎದೆ, ಕಾಯ್ದು ಕಂಪಿಸುವ ದೇಹ, ಭರಭರನೆ ಸಿಡಿಯುವ ಬಿಸಿಯುಸಿರು, ಮೋಹದ ಬಡ ಬಡಿಕೆ, ಬೆವರು ಹನಿ, ಆಯಾಸ....ಯಾವ ಮಾಟಗಾರ ಈ ಆಟವನ್ನೆಲ್ಲ ಹೂಡಿದನೊ....ಪ್ರಪಂಚದೊಳಗಿನ ಗಂಡು ಹೆಣ್ಣುಗಳೆಲ್ಲ ಈ ಆಟದಲ್ಲೇ ಕೊಳೆಯುತ್ತಿವೆಯಲ್ಲ? ಇದರಿಂದ ಏನು ಸುಖವೊ, ಏನು ಸಂತೋಷವೊ? ಈ ಆಟವನ್ನಾಡಿಸುವ ಆ ಸೂತ್ರಧಾರಿಗೆ ಇದರಿಂದ ಏನು ಮೋಜೋ? ಈ ಆಟದ ಹುಚ್ಚಿಗೆ ಬಿದ್ದು ಗಂಡ ಹೆಂಡತಿಯನ್ನ ಮೋಸಗೊಳಿಸುತ್ತಾನೆ. ಹೆಂಡತಿ ಗಂಡನನ್ನು ಮೋಸಗೊಳಿಸುತ್ತಾಳೆ. ಅಬಲೆಯೆನಿಸಿಕೊಂಡ ಹೆಣ್ಣು ಇದಕ್ಕಾಗಿ ಪುರುಷನಿಗಿಂತ ಹೆಚ್ಚು ಸಾಹಸಿಯಾಗುತ್ತಾಳೆ. ಇದಕ್ಕಾಗಿ ಸಂಸಾರಗಳು ಹಾಳಾಗುತ್ತವೆ. ಮನೆತನಗಳು ಒಡೆದುಹೋಗುತ್ತವೆ. ರಾಜ್ಯಗಳು ರಸಾತಳಕ್ಕಿಳಿಯುತ್ತವೆ. ರಕ್ತಪಾತ, ಯುದ್ಧ, ಕೊಲೆ, ಹತ್ಯೆ, ಹಾಹಾಕಾರ. ಎಲ್ಲವೂ ಇದಕ್ಕಾಗಿ....ಈ ಆಟದ ಹುಚ್ಚಿಗಾಗಿ....ಆಹಾ, ಎಂಥ ವಿಚಿತ್ರ ಆಟ....ಎಂಥ ವಿಲಕ್ಷಣ ಪ್ರಪಂಚ....

ಕಿಟಕಿಯೊಳಗಿನಿಂದ ಚಂದ್ರಕಿರಣಗಳು ಒಳನುಗ್ಗಿ ಬಂದು ಅವಳ ಮುಖದ ಮೇಲೆ ಆಟವಾಡುತ್ತಿದ್ದುವು. ಬಲಗಡೆ ಮಗ್ಗುಲಾಗಿ ಮಲಗಿದ್ದ ಳಾಕೆ. ಒಂದೆರಡು ಕಿರಣಗಳು ಆಕೆಯ ತಲೆಗೂದಲಿನ ಮೇಲೂ ಸುಳಿಯುತ್ತ ಸಣ್ಣ ಪುಟ್ಟ ಮಿಂಚುಗಳನ್ನು ಹೊರಡಿಸುತ್ತಿದ್ದುವು. ಆ ರೂಪು........ಆ ಲಾವಣ್ಯ........ತನಗೆ ನಗೆ ಬಂದುಬಿಟ್ಟಿತ್ತು. ವಿಚಿತ್ರ ನಗೆ....ವಿಲಕ್ಷಣ ನಗೆ.....

ಹಾಸುಗೆ ಬಿಟ್ಟು ಎದ್ದು, ದೀಪವನ್ನಂಟಿಸಿ, ಒಂದು ಸಿಗರೇಟು ಹೊತ್ತಿಸಿದ್ದ. ಕಡ್ಡಿ ಕೊರೆದ ಸಪ್ಪಳವಾಗುತ್ತಲೂ ಲಲಿತಾ ಕಣ್ಣು ತೆರೆದಿದ್ದಳು. ಕಿಟಕಿಯಾಚೆ ಮುಗಿಲಿನಲ್ಲಿ ಬೆಳಗುತ್ತಿದ್ದ ಚಂದ್ರನನ್ನು ದಿಟ್ಟಿಸುತ್ತ ಸಿಗರೇಟನ್ನೆಳೆಯುತ್ತಿದ್ದ ತನಗೆ ಆಕೆ ಎಚ್ಚರಗೊಂಡುದು ಬೇಗ ತಿಳಿದಿರಲಿಲ್ಲ. "ನಿದ್ದೆ ಬರಲಿಲ್ಲವೇನ್ರೀ ಇನ್ನೂ ?" ಎಂದೆನ್ನುತ್ತ ಆಕೆ ತೋಳುಗಳನ್ನು ತನ್ನ ಕೊರಳಿನ ಸುತ್ತು ಸೇರಿಸಿದಾಗಲೇ ತನಗೆ ಆ ವಿಷಯ ಗೊತ್ತಾದುದು.

ಮೋಹ, ಆಲಸ್ಯ, ನಿದ್ರೆಗಳಿಂದ ಜಡವಾದ ಕಣ್ಣುಗಳನ್ನು ತನ್ನ ಕಡೆಗೆ ಹೊರಳಿಸುತ್ತ ಆಕೆ ಕೇಳಿದ್ದಳು: "ನಿದ್ದೆ ಬರಲಿಲ್ಲವೇನ್ರೀ ಇನ್ನೂ ?"

"ಇಲ್ಲ ಲಲಿತಾ. ನೀನು ಮಲಗಿಕೊಂಡು ಬಿಡು," ಎಂದು ತಾನು ಕನಿಕರದಿಂದಲೇ ಉತ್ತರವಿತ್ತಿದ್ದ. ಹೌದು. ಅವಳ ಬಗೆಗೆ ತನಗೆ ನಿಜಕ್ಕೂ ಕನಿಕರ ಬಂದಿದ್ದಿತು. ದುರ್ದೈವಿ ಹೆಣ್ಣು....ಸರಿಯಾದ, ಅನುರೂಪನಾದ ವರ ದೊರೆಯಲಿಲ್ಲವಾದುದರಿಂದ ಹೀಗಾಯಿತು ಅವಳ ಬಾಳು........ಇದರಲ್ಲಿ ಅವಳ ತಪ್ಪೇನೂ ಇಲ್ಲ. ತಪ್ಪು ಯಾರದು ಹಾಗಾದರೆ? ಸಮಾಜದ್ದೇ? ಇವಳನ್ನು ಈ ಹಾಳು ಪ್ರಪಂಚಕ್ಕೆ ನೂಕಿದ ಆ ವಿಧಾತನದೇ?

"ಮಲಗಿಕೊಳ್ಳಿರಿ ಮೂರ್ತಿ." ಎಂಥ ಅನುನಯವಿತ್ತು ಆ ಸ್ವರದಲ್ಲಿ. ಎಂಥ ಮಾರ್ದವತೆಯಿತ್ತು. ಪ್ರೀತಿಯೂ ಇದ್ದಿತೇ? ಇದ್ದಿರಬಹುದು. ಪ್ರೀತಿ....

"ನನ್ನ ಮೇಲೆ ಸಿಟ್ಟೇ?" ಎಂದು ಕಂಪಿಸುವ ಧ್ವನಿಯಲ್ಲಿ ಕೇಳಿದ್ದಳು ಲಲಿತಾ.

"ಇಲ್ಲ ಲಲಿತಾ. ಸಿಟ್ಟೇಕೆ ಬರಬೇಕು? ಮಲಗಿಕೋ ಸುಮ್ಮನೆ."

"ಮತ್ತೇಕೆ ಇಂಥ ರಾತ್ರಿಯಲ್ಲಿ ಎದ್ದು ಸಿಗರೇಟು ಸೇದುತ್ತಿದ್ದೀರಿ?"

"ಅದೊಂದು ಚಟ ನನ್ನದು, ಅಷ್ಟೆ. ಏನೂ ತಿಳಿದುಕೊಳ್ಳಬೇಡ."

"ನೀವೇನನ್ನೂ ತಿಳಿದುಕೊಂಡಿರಬಾರದಲ್ಲ? ನಾನು ಮಾಡಿದ್ದು ತಪ್ಪೇ? ಮನಸ್ಸಿಗೆ ಹಚ್ಚಿಕೊಂಡಿದ್ದೀರಾ? ನಾನು ಪತಿತೆ, ಪಾಪಿ, ವ್ಯಭಿಚಾರಿ ಎಂದು ತಿರಸ್ಕಾರವೇ?"

"ಛೆ....ಛೆ...."

"ಮೊದಲೇ ನಿಮ್ಮಂಥವರ ಕೈ ಹಿಡಿದಿದ್ದರೆ ನಾನು ಹೀಗಾಗುತ್ತಿರಲಿಲ್ಲ.

ಹೌದು....ಹೀಗಾಗುತ್ತಿರಲಿಲ್ಲ.......” ಎಂದು ಹೇಳುವಾಗ ಆಕೆಯ ಕತ್ತು ಬಿಗಿದು ಬಂದಿತ್ತು. ಕಣ್ಣುಗಳಲ್ಲಿ ಕಂಬನಿ ಚಿಮ್ಮಿಬಂದಿದ್ದುವು.

“ಹೌದು. ಹೀಗೆಲ್ಲ ಆಗುತ್ತಿರಲಿಲ್ಲ. ಖಂಡಿತವಾಗಿಯೂ ಆಗುತ್ತಿರಲಿಲ್ಲ. ನನ್ನ ಮನಸ್ಸಿನ ವಿರುದ್ಧವಾಗಿ ಶಾಸ್ತ್ರಿಗಳಂಥವರ ಹೆಂಡತಿಯಾಗಬೇಕಾಯಿತು ನಾನು. ಮದುವೆಯಾದಾಗ ಅವರು ಅರ್ಧ ಮುದುಕರಾಗಿದ್ದರು. ಒಳ್ಳೆಯವರಾದರೂ ಆಗಿದ್ದಲ್ಲಿ ನಾನೂ ಒಳ್ಳೆಯವಳಾಗಿಯೆ ಇರುತ್ತಿದ್ದೆನೇನೊ. ನನ್ನನ್ನು ಮದುವೆಯಾದರೂ ಅವರ ಹೊರಚಾಳಿ ನಿಲ್ಲಲಿಲ್ಲ. ಬಲು ದಿನಗಳಿಂದ ಲೀಲಾವತಿಯೆಂಬ ವಿಧವೆಯೊಂದಿಗೆ ಅವರಿಗೆ ಸಂಬಂಧವಿತ್ತು. ನಾನು ಬಂದರೂ ಆ ಸಂಬಂಧ ಕೊನೆಗೊಳ್ಳಲಿಲ್ಲ. ಒಂದೊಂದು ರಾತ್ರಿ ಆಕೆ ಮನೆಗೇ ಬರುತ್ತಿದ್ದಳು ಮಲಗಲಿಕ್ಕೆ. ಶಾಸ್ತ್ರಿಗಳು ಆಕೆಯೊಂದಿಗೆ ಕೋಣೆಯಲ್ಲಿ ಮಲಗಿದ್ದ ಹಾಗೆ ನಾನು ಅಡುಗೆಯ ಮನೆಯಲ್ಲಿ ಒಬ್ಬಳೇ ಬಿದ್ದುಕೊಂಡು ಹಾಸಿಗೆಯಲ್ಲಿ ಹೊರಳಾಡುತ್ತ ರಾತ್ರಿಯನ್ನೆಲ್ಲ ಕಳೆಯುತ್ತಿದ್ದೆ. ನನಗೆ ಮನಸ್ಸು, ಭಾವನೆ, ಹೃದಯ ಯಾವುದೂ ಇರಲಿಕ್ಕಿಲ್ಲವೆಂದೇ ಅವರು ತಿಳಿದುಕೊಂಡಿದ್ದರೇನೊ......”

“ಇದನ್ನೆಲ್ಲಾ ನನಗೇಕೆ ಹೇಳುತ್ತಿರುವೆ ಲಲಿತಾ?” ಎಂದು ತಾನು ಪ್ರಶ್ನಿಸಿದ್ದ.

“ಹೇಳಲೇಬೇಕು. ನೀವು ಈ ರೀತಿ ನಿದ್ರೆಯಿಲ್ಲದೆ ಕೊರಗುವದನ್ನು ಕಾಣುತ್ತಲೂ ಆ ಕಾಲದ ರಾತ್ರಿಗಳ ನೆನಪಾಗುತ್ತಿವೆ ನನಗೆ. ಆಗ ನಾನೂ ಹೀಗೇ ನಿದ್ರೆಯಿಲ್ಲದೆ ಇರುಳು ಕಳೆಯುತ್ತಿದ್ದೆ. ಮನೆ ಬಿಟ್ಟು ಹೊರಟು ಹೋಗಿ ಕೆರೆಯ ನೀರಿಗೆ ಧುಮುಕಿ ಈ ಹಾಳು ಬದುಕನ್ನು ಕೊನೆಗಾಣಿಸಬೇಕೆಂಬ ವಿಚಾರ ಬಂದುದೂ ಎಷ್ಟೋ ಸಲ. ಆದರೆ– ಆ ಧೈರ್ಯವಿರಲಿಲ್ಲ. ಧೈರ್ಯವಿರಲಿಲ್ಲ ಎನ್ನುವದಕ್ಕಿಂತ ಮನಸ್ಸಿರಲಿಲ್ಲ ಎನ್ನುವದೇ ಹೆಚ್ಚು ಸರಿಯಾದೀತು. ಸುಮ್ಮನೆ ಕೊರಗುವದರಿಂದ ಏನೂ ಉಪಯೋಗವಿಲ್ಲ, ಆತ್ಮಹತ್ಯೆಯ ವಿಚಾರವೂ ಸಲ್ಲದು, ಎಲ್ಲರಿಗೂ ಬದುಕುವ ಅಧಿಕಾರವಿರುವ ಹಾಗೆ ನನಗೂ ಇದೆ, ಸುಖದಿಂದ ಬದುಕುವ ಅಧಿಕಾರವಿದೆ. ನನ್ನ ಸುಖಕ್ಕೆ ಅಡ್ಡವಾಗಿರುವ ದುಷ್ಟ ಶಕ್ತಿಗಳನ್ನೆದುರಿಸಿನಿಂತು ಸುಖಪಡುವ ಅಧಿಕಾರವಿದೆ. ಕೈ ಹಿಡಿದ ಗಂಡನೇ ನನ್ನ ಕಣ್ಣೆದುರಿಗೇ ಇನ್ನೊಬ್ಬಾಕೆ

ಯೊಂದಿಗೆ ಮಲಗುತ್ತಿರುವಾಗ ನಾನೂ ಅವನ ಕಣ್ಣೆದುರಿನಲ್ಲೇ ಇನ್ನೊಬ್ಬ ನೊಂದಿಗೆ ಏಕೆ ಮಲಗಬಾರದು ಎನ್ನಿಸಿತು. ಸರಿ. ಆ ವಿಚಾರ ಬಲ ಗೊಳ್ಳುತ್ತಲೂ ಅದನ್ನು ಕೃತಿಗಿಳಿಸುವುದಕ್ಕೇನು ತಡ? ನನ್ನ ಒಂದು ಕಟಾಕ್ಷಕ್ಕಾಗಿಯೆ ಕಾಯ್ದು ನಿಂತಿದ್ದ ತರುಣರೆಷ್ಟೋ ಜನ ಇದ್ದರು. ಅಂದಿ ನಿಂದ ಆರಂಭವಾಯ್ತು ನೋಡಿರಿ ಈ ಆಟ. ಅದುವರೆಗೂ ನಾನು ಒಳ್ಳೆಯು ವಳಾಗಿದ್ದೆ. ನಿಜಕ್ಕೂ ಒಳ್ಳೆಯುವಳೇ ಆಗಿದ್ದೆ. ನಾನು ಕೆಡಲು ಕಾರಣ ವೇನಾಯಿತೆಂಬುದು ಗೊತ್ತಾಯಿತಲ್ಲ ನಿಮಗೆ?"

"ಗೊತ್ತಾಯಿತು ಲಲಿತಾ. ಚೆನ್ನಾಗಿ ಗೊತ್ತಾಯಿತು."

ತನ್ನ ಎದೆಯಮೇಲೆ ತಲೆಯನ್ನೊರಗಿಸಿ ಆಕೆ ಬಿಕ್ಕಿಬಿಕ್ಕಿ ಅಳತೊಡ ಗಿದ್ದಳು. "ಮೊದಲೇ ನಿಮ್ಮ ಕೈ ಹಿಡಿದಿದ್ದಲ್ಲಿ ನಾನು ಈ ರೀತಿ ಎಂದೆಂದೂ ಮಾಡುತ್ತಿರಲಿಲ್ಲ. ಆದರೆ ದುರ್ದೈವಿ ನಾನು. ಆಗ ನನ್ನ ನಿಮ್ಮ ಭೇಟಿ ಯಾಗಲಿಲ್ಲ. ಈಗ ಒದಗಿಬಂತು ಈ ಯೋಗ...."

"ಇದುವರೆಗೆ ಹೀಗೆ ಎಷ್ಟು ಜನರೊಂದಿಗೆ ಯೋಗವೊದಗಿದೆ ಲಲಿತಾ?" ಎಂದು ತಾನು ಪ್ರಶ್ನಿಸಿದ್ದ. ಆಕೆ ಬೆಚ್ಚಿಬಿದ್ದು, ಅಳುತ್ತಲೇ ಹೇಳಿದ್ದಳು:

"ಅದೆಲ್ಲಾ ಯಾಕೆ ಬಿಡಿರಿ. ಇನ್ನು ಮೇಲೆ ಮಾತ್ರ ಎಂದೆಂದೂ ಬೇರೆಯವರನ್ನು ಬಯಸುವುದಿಲ್ಲ ನಾನು. ನೀವೊಬ್ಬರೇ ನನ್ನವರು........ ನೀವೊಬ್ಬರೇ........"

"ಶಾಸ್ತ್ರಿಗಳು?"

"ಅವರು ಎಂದೋ ಅನ್ಯರಾಗಿ ಹೋಗಿದ್ದಾರೆ. ಇನ್ನು ಮೇಲೆ ನೀವೊಬ್ಬರೇ. ನೀವೊಬ್ಬರೇ...."

"ಶಾಸ್ತ್ರಿಗಳಿಗೆ ಗೊತ್ತಾದರೆ?" ಎಂದು ತಾನು ಬೇಕೆಂತಲೇ ಪ್ರಶ್ನಿಸಿದ್ದ.

"ಅವರಿಗೆ ಗೊತ್ತಿಲ್ಲದಿರುವದೇನಿದೆ? ಎಲ್ಲಾ ಗೊತ್ತಿದೆಯಲ್ಲ?"

"ಅಂದರೆ?"

"ನನಗೆ ಅವರು ಯಾವುದಕ್ಕೂ ಅಡ್ಡಿ ಮಾಡುವದಿಲ್ಲ. ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ."

"ಅವರಿಗೂ ಸ್ವಾತಂತ್ರ್ಯ ಬೇಕೆಂದಮೇಲೆ ನಿನಗೂ ಬೇಕೇಬೇಕಲ್ಲವೆ? ವ್ಯವಸ್ಥೆ ಚೆನ್ನಾಗಿದೆ."

"ಎಲ್ಲಕ್ಕೂ ಮೊದಲು ನಾನು ಇನ್ನೊಬ್ಬರೊಂದಿಗೆ ಮಲಗಿದ್ದನ್ನು ಕಂಡಾಗಲೇ ಅವರು ಈ ವ್ಯವಸ್ಥೆಗೆ ಒಪ್ಪಿಕೊಂಡರು. ಒಪ್ಪದೆ ಬೇರೆ ದಾರಿಯಿರಲಿಲ್ಲ. ಮೊದಲು ಬಹಳ ರೇಗಿದರು, ಹಾರಾಡಿದರು, ಹೊಡೆಯಲೂ ಬಂದಿದ್ದರು. ಆದರೆ ನನ್ನೆದುರಿಗೆ ಅವರ ಆಟವೇನೂ ನಡೆಯಲಿಲ್ಲ. ನನ್ನನ್ನೊಬ್ಬಳನ್ನೇ ಹೀಗೆ ಬಿಟ್ಟು ಇದೇ ಮನೆಯಲ್ಲಿಯೆ ನೀವು ಆ ಬಜಾರಿಯನ್ನು ಕಟ್ಟಿಕೊಂಡು ಮಲಗುತ್ತೀರಲ್ಲಾ, ನಾಚಿಕೆಯಾಗುವದಿಲ್ಲವೇ ನಿಮಗೆ-ಎಂದು ಗದರಿಸಿದೆ. ಅದನ್ನೆಲ್ಲ ಕೇಳಲು ನೀನಾರು, ನಾನು ಗಂಡಸು, ನನ್ನ ಮನಸ್ಸಿಗೆ ಬಂದಂತೆ ವರ್ತಿಸಲು ನನಗೆ ಅಧಿಕಾರವಿದೆ- ಎಂದು ಅವರು ದರ್ಪದಿಂದ ನುಡಿದರು. ನಿಮ್ಮ ಮನಸ್ಸಿಗೆ ಬಂದಂತೆ ನಡೆಯಲು ನಿಮಗೆ ಅಧಿಕಾರವಿರುವಂತೆ ನನ್ನ ಮನಸ್ಸಿಗೆ ಬಂದಂತೆ ನಡೆಯಲು ನನಗೂ ಅಧಿಕಾರವಿದೆ. ನೀವು ನೆಟ್ಟಗಿದ್ದರೆ ನಾನೂ ನೆಟ್ಟಗಿರುತ್ತೇನೆ, ನೀವು ಕೆಟ್ಟು ಹೋದರೆ ನಾನೂ ಕೆಟ್ಟುಹೋಗುತ್ತೇನೆ. ನನ್ನೊಬ್ಬಳಿಂದ ತೃಪ್ತಿಯಾಗದೆ ನೀವು ಇನ್ನೊಬ್ಬಳನ್ನು ತಂದು ವ್ಯಭಿಚಾರ ಮಾಡುವದನ್ನು ಕಣ್ಣಾರೆ ಕಂಡೂ ನಾನೇಕೆ ಸುಮ್ಮನೆ ಕೂತಿರಬೇಕು? ನನಗೂ ಮನಸ್ಸಿಲ್ಲವೆ? ವಯಸ್ಸಿಲ್ಲವೆ? ಸುಖ ಪಡೆಯುವ ಆಸೆಯಿಲ್ಲವೆ? ಸುಖ ಪಡೆಯುವ ದಾರಿಗಳನ್ನು ನೀವೇ ತೋರಿಸಿಕೊಡುತ್ತಿರುವಾಗ ನಾನೇಕೆ ಸುಮ್ಮನೆ ಕೂತುಕೊಳ್ಳಲಿ?—ಎಂದು ಉತ್ತರವಿತ್ತೆ. ಹೀಗೆಲ್ಲ ಸ್ವಚ್ಛಂದದಿಂದ ವರ್ತಿಸುವದಾದರೆ ನನ್ನ ಮನೆಯಲ್ಲೇ ಇರಬೇಡ, ನಡೆಯಾಚೆ- ಎಂದು ಗದರಿಸಿದರು. ನಾನು ಹೆದರಲಿಲ್ಲ. ನಾನೇಕೆ ಹೋಗಬೇಕು? ಧೈರ್ಯವಿದ್ದರೆ ನನ್ನನ್ನು ಮನೆಯಿಂದ ಹೊರಕ್ಕೆ ಹಾಕಿರಿ. ಬೀದಿಬೀದಿಗಳಲ್ಲೆಲ್ಲ ತಿರುಗಿ ನಿಮ್ಮ ಶೀಲದ ಕತೆಯನ್ನು ಕೂಗಿ ಹೇಳಿ ಡಂಗುರ ಸಾರುತ್ತೇನೆ. ನೀವೆಂಥ ಕೀರ್ತನಕಾರರು, ಎಂಥ ವಿದ್ವಾಂಸರು, ಎಂಥ ಸಮಾಜಧುರೀಣರು ಎಂಬುದನ್ನು ಕರ್ನಾಟಕದ ತುಂಬೆಲ್ಲ ಘೋಷಿಸುತ್ತೇನೆ- ಎಂದೆ. ಅವರು ಬಾಯಿ ಮುಚ್ಚಿಕೊಂಡು ತೆಪ್ಪಗಾದರು. ಅಂದೇ ನಮ್ಮಿಬ್ಬರಲ್ಲಿ ಒಂದು ಒಪ್ಪಂದವಾಯಿತು. ಅವರು ತಮಗೆ ತಿಳಿದಂತೆ ವರ್ತಿಸಬಹುದು. ನಾನು ನನಗೆ ತಿಳಿದಂತೆ. ಒಬ್ಬರ ದಾರಿಯಲ್ಲಿ ಇನ್ನೊಬ್ಬರು ಅಡ್ಡ ಬರಕೂಡದು. ಅಂದಿನಿಂದ ಹೀಗೇ ನಡೆದು ಬಂದಿದೆ. ನಾವಿತ್ತ ಹೊರಟುಬರುವಾಗ ಅವರನ್ನು ಕೇಳಿಯೆ ಬಂದಿದ್ದೆ...."

"ನಾವು ಬಂದದ್ದು ಇದಕ್ಕಾಗಿಯೆ ಎಂಬುದು ಅವರಿಗೆ ಗೊತ್ತಿತ್ತೇ ?" —ಎಂದು ತಾನು ಪ್ರಶ್ನಿಸಿದ್ದ.

"ಗೊತ್ತಿರವೇನು ? ಚೆನ್ನಾಗಿ ಗೊತ್ತಿತ್ತು. ಅವರಿಗೂ ನಾವಿತ್ತ ಬರುವದೇ ಬೇಕಾಗಿದ್ದಿತು. ಇದೊಂದು ರಾತ್ರಿಯ ಮಟ್ಟಿಗೆ ಅವರ ಆ ರಂಭೆಯ ಸಹವಾಸಯೋಗ ಲಭಿಸುತ್ತಿದ್ದಿತಲ್ಲ ಅವರಿಗೆ ....."

"ರಂಭೆ ?"

"ರಂಭೆ ಅಂದರೆ ನಿಜಕ್ಕೂ ರಂಭೆಯೇ ಅಂತ ತಿಳಿಯಬೇಡಿರಿ. ರಂಭೆಯ ಕಾಲುಬೆರಳಿನ ಯೋಗ್ಯತೆಯೂ ಇರಲಾರದು ಆ ಶೂರ್ಪಣಖಿಗೆ. ಆಕೆಯ ಮುಖವನ್ನು ನೋಡಿದೊಡನೆಯೆ ಶೂರ್ಪಣಖಿಯ ನೆನಪೇ ಬರುವಂತಿದೆ. ಅಂಥವಳು ಇವರನ್ನು ಹೇಗೆ ಒಲಿಸಿಕೊಂಡಳೋ ದೇವರೇ ಬಲ್ಲ. ನಿಮ್ಮಂಥವರಾದರೆ ಆಕೆಯನ್ನು ಮತ್ತೊಮ್ಮೆ ಹೊರಳಿ ನೋಡಲಾರಿರಿ."

"ಅಷ್ಟು ಕುರೂಪಿಯೆ ?"

"ನೀವಿನ್ನೂ ನೋಡಿಯೆ ಇಲ್ಲವೇನ್ರಿ ಆಕೆಯನ್ನು ?"

"ನೋಡಿದಂತಿಲ್ಲ. ಆಕೆ ಯಾರು ? ಎಲ್ಲಿದ್ದಾಳೆ ?"

"ಅನಾಥ ಬಾಲಿಕಾಶ್ರಮವಿದೆಯಲ್ಲ, ನಿಮ್ಮ ಸರಸೂ ಕೆಲಸದಲ್ಲಿರುವ ಸಂಸ್ಥೆ. ಅಲ್ಲಿ ಆಕೆ ಶಿಕ್ಷಕಿಯಾಗಿದ್ದಾಳೆ. ಲೀಲಾವತಿ ಅಂತ ಹೆಸರು ಆಕೆಗೆ. ನಿಜಕ್ಕೂ ಲೀಲಾವತಿಯೇ...."

ಅದೇ ಲೀಲಾವತಿಯನ್ನೆ ತಾನು ಕೆಲಹೊತ್ತಿನ ಹಿಂದೆ ಕಂಡಿದ್ದ. ಶಾಸ್ತ್ರಿಯ ಪ್ರೇಯಸಿ ಆಕೆಯೆ ? ಶೂರ್ಪಣಖಿ? ಆಕೆ ಚೆಲುವೆಯೊ, ಕುರೂಪಿಯೊ ಎಂಬುದನ್ನು ತಾನು ಕಂಡುಕೊಂಡಿರಲಿಲ್ಲ. ಅದರ ಅಗತ್ಯವೂ ತನಗಿರಲಿಲ್ಲ. ಸರಸುವನ್ನು ಕಾಣಬೇಕಾಗಿದ್ದಿತು. ಅದಕ್ಕಾಗಿ ಆಶ್ರಮಕ್ಕೆ ಹೋಗಿದ್ದ. ಆಶ್ರಮ ! ಅನಾಥ ಬಾಲಿಕಾಶ್ರಮ !

ಲಲಿತಾ ಕಟುನಗೆಯೊಂದಿಗೆ ಹೇಳಿದ್ದಳು : "ಅನಾಥ ಬಾಲಿಕಾಶ್ರಮ.. ಅದನ್ನು ಸ್ಥಾಪಿಸಿದವರು ಪುಣ್ಯ ದೊರಕಿಸುವರೆಂದು ನೀವು ತಿಳಿದಿರಬಹುದೊ ಏನೊ. ಪುಣ್ಯವೂ ಇಲ್ಲ. ಪಾಪವೂ ಇಲ್ಲ. ಇವರ ಪಾಪದ ಫಲವಾಗಿ ಜನಿಸಿದ ಶಿಶುಗಳ ಆರೈಕೆಗಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆ ಅದು."

"ಯಾರ ಪಾಪದ ಫಲ ?"

"ಇವರದೇ. ಆಶ್ರಮ ಸ್ಥಾಪಿಸಿ ಅನಾಥ ಬಾಲಬಾಲಿಕೆಯರಿಗೊಂದು ಆಸರೆಯನ್ನೊದಗಿಸಿಕೊಟ್ಟೆವೆಂದು ಜಂಬ ಕೊಚ್ಚುತ್ತ ಸಮಾಜದಲ್ಲಿ ದೊಡ್ಡ ದೊಡ್ಡ ಮನುಷ್ಯರಾಗಿ ಮೆರೆಯುವರಲ್ಲಾ – ಇವರದೇ. ನಮ್ಮ ಶಾಸ್ತ್ರಿಗಳು, ಸ್ವಾಮಿಗಳು, ಆ ರಾವಬಹದ್ದೂರರು, ಆ ಲಕ್ಷಾಧೀಶ ವರ್ತಕರು, ಆ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳು – ಇವರದೇ. ಈ ಆಷಾಢಭೂತಿಗಳೆಲ್ಲಾ ಸೇರಿ ಕೊಂಡು ಈ ಆಶ್ರಮ ಸ್ಥಾಪಿಸಿದರು. ಇವರ ವ್ಯಭಿಚಾರದಿಂದ ಅಲ್ಲಿ ಇಲ್ಲಿ ಹುಟ್ಟಿದ ಕೂಸುಗಳಿಗೆಲ್ಲ ಒಂದು ಜಾಗ ಬೇಕಲ್ಲ – ಅದಕ್ಕಾಗಿ...."

"ಸ್ವಾಮಿಗಳೂ ಅಂಥವರೇನು ಲಲಿತಾ?" ಎಂದು ತಾನು ಕೇಳಿದಾಗ ಲಲಿತಾ ಹೇಳಿದ್ದಳು:

"ಮತ್ತೆ? ಇದುವರೆಗೂ ಅವರೆಂಥವರೆಂದು ತಿಳಿದಿದ್ದಿರಿ ನೀವು? ಬಹಳ ಒಳ್ಳೆಯವರು, ವಿರಾಗಿಗಳು, ಸಂಭಾವಿತರು ಎಂದೋ? ನಿನ್ನೆ ನಮ್ಮೂರಿನಲ್ಲಿ ಸರ್ವಧರ್ಮಸಮ್ಮೇಳನದ ನಾಟಕ ಹೂಡಿದ್ದರಲ್ಲಾ, ಅದನ್ನು ಕಂಡು ಅವ ರೊಬ್ಬ ಮಹಾ ಧಾರ್ಮಿಕವ್ಯಕ್ತಿಗಳೆಂದು ಭ್ರಮಿಸಿದ್ದಿರೋ ಹೇಗೆ?"

"ಭ್ರಮೆಯೂ ಇಲ್ಲ, ಏನೂ ಇಲ್ಲ. ಅವರ ವಿಷಯವಾಗಿ ವಿಚಾರ ಮಾಡುವ ಪ್ರಸಂಗವೇ ಬಂದಿಲ್ಲ ನನಗೆ."

"ಬಂದಿರಲಿಕ್ಕಿಲ್ಲ. ಇನ್ನು ಬಂದೀತು. ಇಂದು ನಾಳೆ ಇಷ್ಟರಲ್ಲೇ ಬಂದೀತು. ನಿಮ್ಮ ಸರಸುವೂ ಆ ಆಶ್ರಮದಲ್ಲೇ ಕೆಲಸದಲ್ಲಿರುವಳಲ್ಲ?"

"ಇದ್ದರೇನಾಯಿತು?"

"ಏನಾಯಿತು? ಇನ್ನೇನುಳಿಯಿತು ಆಗಬೇಕಾದ್ದು? ಅಲ್ಲಿ ಶಿಕ್ಷಕಿ ಯಾಗಿರುವ ಲೀಲಾವತಿಯೆಂಥವಳೆನ್ನುವದು ನಿಮಗೆ ಗೊತ್ತಾಯಿತಲ್ಲ. ನಮ್ಮ ಶಾಸ್ತ್ರಿಗಳಿಗೆ ಮಾತ್ರವಲ್ಲ, ಸ್ವಾಮಿಗಳು ಈ ಊರಿಗೆ ಬಂದಾಗಲೆಲ್ಲ ಅವರಿಗೂ ರಾಣಿ ಆಕೆ. ತಾವು ಕೆಟ್ಟುದೂ ಅಲ್ಲದೆ ಇಂಥವರು ಬೇರೆಯವರನ್ನು ಕೆಡಿಸಬಯಸುತ್ತಿರುತ್ತಾರೆ. ಸರಸುವಿಗೆ ಅಷ್ಟು ಬೇಗ ಅಲ್ಲಿ ಕೆಲಸ ದೊರ ತುದರ ಕಾರಣವೂ ಇದೇ ಅಲ್ಲವೆ?"

ಲಲಿತಳ ಮುಖದಿಂದ ಆ ಮಾತು ಹೊರಬೀಳುತ್ತಲೂ ತನ್ನ ಎದೆ ಆಶಂಕೆಯಿಂದ ತುಡಿಯಲಾರಂಭಿಸಿದ್ದಿತು. ಸಿಗರೇಟನ್ನು ಕಿಟಕಿಯಿಂದಾಚೆ ಬಿಸುಟು, ತಾನು ಪ್ರಶ್ನಿಸಿದ್ದ:

"ಇದೇ ಕಾರಣವೆ? ಯಾವ ಆಧಾರದಿಂದ ಈ ಮಾತು ಹೇಳುತ್ತೀ?"

"ನಮ್ಮ ಶಾಸ್ತ್ರಿಗಳ ಮಾತೇ ದೊಡ್ಡ ಆಧಾರವಲ್ಲವೆ? ಅವರೇ ಆಶ್ರಮದ ಕಾರ್ಯದರ್ಶಿಗಳು. ಸ್ವಾಮಿಗಳು ಅಧ್ಯಕ್ಷರು. ಮೊತ್ತ ಮೊದಲನೆಯ ಬಾರಿ ಸರಸು ನಮ್ಮಲ್ಲಿಗೆ ಕೆಲಸ ಕೇಳಲು ಬಂದಾಗಲೇ ಆಕೆ ಆ ಬಲೆಯಲ್ಲಿ ಬಿದ್ದಂತಾಯಿತು. ಅದೇ ದಿನವೇ ಶಾಸ್ತ್ರಿಗಳು ಸ್ವಾಮಿಗಳನ್ನು ಕಾಣಲು ಹೊರಟುಹೋಗಿದ್ದರು. ಮಾರನೆಯ ದಿನ ನೀವು ಬಂದಾಗ ಅವರು ಊರಿನಲ್ಲಿರಲಿಲ್ಲ. ರಾತ್ರಿ ಬಂದರು. ನೆನಪಿದೆಯೋ ನಿಮಗೆ?"

ಹೌದು. ನೆನಪಿದ್ದಿತು. ಅಂದು ಲಲಿತಾ ಉಣಬಡಿಸಿದ ಮೈಸೂರು ಪಾಕು, ಬೋಂಡ.......ರಾತ್ರಿ ಊಟಕ್ಕೂ ಅಲ್ಲಿಯೆ ನಿಲ್ಲಲು ಒತ್ತಾಯಪಡಿಸಿದ್ದುದು, ಅಂದೇ ತನ್ನನ್ನು ಮೋಹದ ಬಲೆಗೆ ಸಿಲುಕಿಸಲು ಹೊಂಚು ಹೂಡಿದ್ದುದು, ಅಷ್ಟರೊಳಗಾಗಿ ಶಾಸ್ತ್ರಿಗಳು ಬಂದುಬಿಟ್ಟುದು, ಲಲಿತಾಗೆ ನಿರಾಸೆಯಾದುದು. ....ಹೌದು, ಚೆನ್ನಾಗಿಯೆ ನೆನಪಿದ್ದಿತು ತನಗೆ.

"ಅಂದು ಅವರು ಬಂದದ್ದು ಸ್ವಾಮಿಗಳ ಊರಿಂದಲೇ. ಮಂತ್ರಿಗಳ ಕಡೆಯಿಂದಲ್ಲ. ಒಡನೆಯೆ ಸರಸುವನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ, ಆಕೆ ಕೇಳಿದಷ್ಟು ಸಂಬಳ ಕೊಡಬೇಕೆಂದೂ ಸ್ವಾಮಿಗಳು ಅಪ್ಪಣೆ ಕೊಡಿಸಿದ್ದರಂತೆ. ನೀವು ಮನೆಗೆ ಹೋಗುತ್ತಲೂ ಶಾಸ್ತ್ರಿಗಳು ಈ ವಿಷಯ ಸ್ವಲ್ಪಸ್ವಲ್ಪ ಹೇಳಿದರು. ಆ ಸ್ವಲ್ಪದರಿಂದಲೇ ನಾನೆಲ್ಲವನ್ನೂ ತಿಳಿದುಕೊಂಡೆ."

"ಏನು ತಿಳಿದುಕೊಂಡೆ?"

"ನಿಮ್ಮಾಕೆಯನ್ನು ಸ್ವಾಮಿಗಳು ಅವರೂರಿನಲ್ಲಿದ್ದಾಗಲೇ ನೋಡಿ ಮರುಳಾಗಿದ್ದರಂತೆ. ಅಂದಿನಿಂದ ಆಕೆಯನ್ನು ಪಡೆಯಲು ಹಾತೊರೆಯುತ್ತಿದ್ದರಂತೆ. ಆದರೆ ನೀವು ಆಕೆಯನ್ನು ಒಲಿಸಿಕೊಂಡು ಇತ್ತ ಹೊರಟು ಬರುತ್ತಲೂ ಅವರ ವಿಚಾರಕ್ಕೆ ಕಲ್ಲು ಬಿದ್ದಿತು. ನೀವಿಲ್ಲಿಗೆ ಬಂದು ಶಾಸ್ತ್ರಿಗಳ ಮೊರೆಹೊಕ್ಕಾಗ ನೇರವಾಗಿ ಸ್ವಾಮಿಗಳ ಬಲೆಗೇ ಬಿದ್ದಂತಾಯಿತು. ಸ್ವಾಮಿಗಳಿಗೂ ಶಾಸ್ತ್ರಿಗಳಿಗೂ ಅಷ್ಟು ನಂಟು. ಸ್ವಾಮಿಗಳ ಪ್ರೈವೇಟ್ ಸೆಕ್ರೆಟರಿ ಇದ್ದ ಹಾಗೆ ನಮ್ಮ ಶಾಸ್ತ್ರಿಗಳು. ಈ ವಿಷಯ ತಿಳಿದಿರಲಿಲ್ಲವೇ ನಿಮಗೆ?"

"ಇಲ್ಲ. ನನಗೆ ಹೇಗೆ ಗೊತ್ತಾಗಬೇಕು?"

"ಈ ಊರಿಗೆಲ್ಲ ತಿಳಿದ ವಿಷಯ. ನಿಮಗೆ ತಿಳಿಯಲಿಲ್ಲವೆ?"

“ನಾನು ಹಾಗೆಲ್ಲ ಊರ ಸುದ್ದಿ ತಿಳಿದುಕೊಳ್ಳಬಯಸುವವನಲ್ಲ. ನನ್ನ ಪಾಡಿಗೆ ನಾನಿರುತ್ತೇನೆ.”

“ನೀವು ಹೀಗಿರುವದರಿಂದಲೇ ಈ ಬಲೆಯಲ್ಲಿ ಸುಲಭವಾಗಿ ಸಿಲುಕಿ ಬಿದ್ದಿರಿ. ನಿಮ್ಮ ಬದಲು ಇನ್ನಾರಾದರೂ ಆಗಿದ್ದಲ್ಲಿ ಬಹಳ ಹುಷಾರಾಗಿರುತ್ತಿದ್ದರು. ಹೆಂಡತಿಯನ್ನು ಆಶ್ರಮಕ್ಕೆ ಸೇರಿಸುವಾಗ ಹಿಂದುಮುಂದಿನ ವಿಚಾರ ಮಾಡುತ್ತಿದ್ದರು. ಆ ಆಶ್ರಮದ ವಾತಾವರಣವೆಂಥಾದ್ದು, ಅದನ್ನು ನಡಸುವವರೆಂಥವರು, ಎಲ್ಲವನ್ನೂ ತಿಳಿದುಕೊಳ್ಳದೆ ಹೆಂಡತಿಯನ್ನು ಅಲ್ಲಿಗೆ ಕೆಲಸಕ್ಕೆ ಕಳಿಸುತ್ತಿರಲಿಲ್ಲ.”

“ಏನಾದರೇನು, ನನ್ನ ಸರಸು ಹಾಗೆಲ್ಲ ಕಾಲು ಜಾರುವವಳಲ್ಲ. ನನಗೆ ಪೂರ ಭರವಸೆಯಿದೆ.”

“ಇದಕ್ಕೇ ಹೇಳುವದು ನಾನು. ನಿಮಗೇನೂ ತಿಳಿಯುವದಿಲ್ಲ ಎಂದು. ನನ್ನನ್ನೇ ನೋಡುತ್ತಿರುವಿರಲ್ಲ? ಕಾಲು ಜಾರುವ, ವ್ಯಭಿಚಾರಿಣಿಯಾಗುವ ಮನಸ್ಸು ನನಗಿರಲಿಲ್ಲವಾದರೂ ಹೇಗೋ ಏನೋ ಈ ಕೊಳಚೆಯಲ್ಲಿ ಬಿದ್ದು ಬಿಡಬೇಕಾಯಿತಲ್ಲವೆ? ಹೆಣ್ಣು ಕಾಲು ಜಾರಲು ನೂರಾಯೆಂಟು ಕಾರಣಗಳೊದಗುತ್ತವೆ. ಕಾಮುಕರ ದೃಷ್ಟಿ ಬೇರೆ ಸದಾಕಾಲವೂ ನಮ್ಮನ್ನು ಸೆಳೆಯುತ್ತಿರುತ್ತದೆ. ನೂರು ಆಸೆ, ನೂರು ವಿಲೋಭಗಳನ್ನೊಡ್ಡಿ ಅವರು ನಮ್ಮನ್ನು ಬಲೆಗೆ ಕೆಡಹುತ್ತಾರೆ. ಭಕ್ತರ ಹಣದಿಂದ ತಿಂದು ಕೊಬ್ಬಿ ಗೂಳಿಗಳಂತೆ ಅಲೆಯುವ ಈ ಕಾವಿ ಬಟ್ಟೆಯ ಸ್ವಾಮಿಗಳಿಗಂತೂ ಯಾವಾಗಲೂ ಇದೇ ಕೆಲಸ. ಕಂಡ ಹೆಣ್ಣುಗಳನ್ನೆಲ್ಲ ಕೆಡಿಸುತ್ತ ತಿರುಗುವದು. ಬೆವರಿಳಿಸಿ ದುಡಿಯುವ ಅಗತ್ಯವಿಲ್ಲ. ಕುಳಿತಲ್ಲೇ ಮೃಷ್ಟಾನ್ನ ಭೋಜನ, ಹಾಲು ಹಣ್ಣು. ಖರ್ಚುಮಾಡಲು ಸಾಕಷ್ಟು ಹಣ. ಇನ್ನು ಬೇರೆ ಕೆಲಸವೇನು ಇವರಿಗೆ? ಸರಸುವಿನಂಥ ಯುವತಿ ಸಿಕ್ಕಿದರೆ ಬಿಟ್ಟಾರೇ? ನಿಮಗೆ ಗೊತ್ತಿಲ್ಲವೆ, ಇವೊತ್ತು ರಾತ್ರಿ ಸ್ವಾಮಿಗಳ ಬಿಡಾರ ಆಶ್ರಮದಲ್ಲೇ ಇರುತ್ತದೆ. ಸರಸುವೂ..”

ಮುಂದಿನ ಮಾತು ಕೇಳಲಾರದೆ ತಾನು ಕೊಟಡಿಯಲ್ಲಿ ಶತಪಥ ಹಾಕ ತೊಡಗಿದ್ದ. ಸ್ವಾಮಿಗಳ ಬಿಡಾರ ಆಶ್ರಮದಲ್ಲಿ. ಸರಸುವೂ....? ಆಕೆ ಮನೆಗೆ ಹೋಗಿರಬಹುದೇ ಇಲ್ಲವೆ? ಆ ಲೀಲಾವತಿ ಏನಾದರೂ ಉಪಾಯ ಹೂಡಿ ಸರಸುವನ್ನು ಆಶ್ರಮದಲ್ಲಿಯೆ ನಿಲ್ಲಿಸಿಕೊಂಡಿರಬಹುದೇ? ಒಂದು ಸಿನಿಮಾ

ತೋರಿಸಿದ್ದರೂ ಇರಬಹುದು. ಸಿನಿಮಾ ಎಂದರೆ ಅದೊಂದು ಹುಚ್ಚು ಸರಸೂಗೆ. ಈ ಕೆಟ್ಟ ಜನ ಅದನ್ನು ದುರುಪಯೋಗಪಡಿಸಿಕೊಂಡಿರಲಾರರಷ್ಟೆ? ಎರಡನೆಯ ಆಟಕ್ಕೆ ಸಿನಿಮಾಕ್ಕೆ ಕರೆದೊಯ್ದು ಅಲ್ಲಿಂದ ಹಾಗೆಯೆ ಆಶ್ರಮಕ್ಕೆ........? ಇರಬಹುದೇ ? ಓ, ಹಾಗಾಗಿರಬಹುದೇ ? ಯಾಕಾಗ ಬಾರದು ? ಲಲಿತಳ ಸುಳ್ಳುಮಾತನ್ನು ನಂಬಿ ಇವಳೊಡನೆ ತಾನಿತ್ತ ಬಂದು ಇಲ್ಲಿ ಈ ಬಲೆಗೆ ಸಿಲುಕಿದಂತೆ ಅಲ್ಲಿ ಅವರ ಸುಳ್ಳುಮಾತು ನಂಬಿ ಸರಸುವೂ ಅವರ ಬಲೆಗೆ ಸಿಲುಕಿಬಿದ್ದಿರಬಹುದೇ ? ತನ್ನ ಮನಸ್ಸಿನ ವಿರುದ್ಧವಾಗಿ ಇಲ್ಲಿ ನಡೆಯಬಾರದುದೆಲ್ಲ ನಡೆದು ಹೋಗಿದ್ದಿತು. ಅಲ್ಲಿಯೂ ಹಾಗೇ ಆಗಿರ ಬಾರದೇಕೆ ? ಸರಸೂ....ತನ್ನ ಸರಸೂ....ಲಲಿತಳ ಹಾಸುಗೆಯಲ್ಲಿ ತಾನಿರುವ ಹಾಗೆ ಸ್ವಾಮಿಗಳ ಹಾಸುಗೆಯಲ್ಲಿ ತನ್ನ ಸರಸೂ ? ಅವಳಿಗೊಂದು ಮಾತೂ ತಿಳಿಸದೆ ತಾನಿತ್ತ ಹೊರಟುಬಂದುದೇ ದೊಡ್ಡ ತಪ್ಪಾಯಿತು. ಅವಳನ್ನು ಕಂಡು ಬರುವುದಕ್ಕೂ ತನ್ನನ್ನು ಬಿಡಲಿಲ್ಲ ಈ ಲಲಿತಾ. ಮುದ್ರಣಾಲಯದ ಕೆಲಸಗಾರರ ಮೂಲಕ ತಾನೇ ಹೇಳಿಕಳುಹಿಸುವುದಾಗಿ ನುಡಿದು ಬಾಯಿ ಕಟ್ಟಿದ್ದಳು. ಇವಳ ಮಾತಿಗೆ ಕಟ್ಟುಬಿದ್ದ ತಾನು ಕೆಟ್ಟಂತಾಯಿತು. ತನ್ನ ಸರಸುವೂ ಕೆಟ್ಟಂತಾಯಿತು. ಆಯಿತೇ ? ನಿಜಕ್ಕೂ ಎಲ್ಲವೂ ಕೆಟ್ಟೇ ಹೋಯಿತೇ? ಹಾಳಾಯಿತೇ ತನ್ನ ಸಂಸಾರ? ಓ, ಎಲ್ಲವೂ ಹಾಳಾಯಿತೇ?

ಯೋಚಿಸುತ್ತಿದ್ದ ಹಾಗೆ ತನ್ನ ಕಣ್ಣುಗಳಿಂದ ಬಳಬಳನೆ ನೀರು ಸುರಿಯತೊಡಗಿದ್ದುವು. ಲಲಿತಾ ತನ್ನ ಸೀರೆಯ ಸೆರಗಿನಿಂದ ಅವುಗಳನ್ನೊರೆಸಿದ್ದಳು. "ಯಾಕೆ ವ್ಯಥೆ ಮಾಡಿಕೊಳ್ಳುತ್ತೀರಿ ? ಆಗುವದೆಲ್ಲಾ ಆಗಲೇ ಬೇಕಲ್ಲ ? ನಾನಿಲ್ಲವೆ ನಿಮ್ಮ ಜೊತೆಗೆ ? ನಿಮಗಾಗಿ ಏನು ಬೇಕಾದರೂ ಮಾಡಬಲ್ಲೆ. ನೀವು ಮಾತ್ರ ಕೊನೆಯವರೆಗೂ ನನ್ನನ್ನು ಪ್ರೀತಿಸಬೇಕು..."

ತನ್ನ ಮುಖದಿಂದ ಮಾತು ಹೊರಡಲು ಸಾಧ್ಯವಿರಲಿಲ್ಲ. ಲಲಿತಾ ಹೇಳುತ್ತಿದ್ದಳು : ಕೊನೆಯವರೆಗೂ ತನ್ನನ್ನು ಪ್ರೀತಿಸಬೇಕೆಂದು. ಒಬ್ಬ ಮನುಷ್ಯ ಎಷ್ಟು ಜನರನ್ನು ಪ್ರೀತಿಸುವುದು....

ತನ್ನ ಎದೆಯಲ್ಲಿ ಬಿರುಗಾಳಿಯನ್ನು ಹುಟ್ಟಿಸಿ ಲಲಿತಾ ಮತ್ತೆ ನಿದ್ರೆ ಹೋಗಿದ್ದಳು. ಆಕೆಗೆ ಗೊತ್ತಾಗದಂತೆ ತಾನು ಆ ಮನೆಯನ್ನು ತ್ಯಜಿಸಿ ಹೊರಟು ಬಂದಿದ್ದ. ಇನ್ನೂ ಎಷ್ಟು ದಿನಗಳವರೆಗೆ ಆಕೆ ಅಲ್ಲಿಯೆ ಇರುತ್ತಿ

ದ್ದಳೋ ಏನೊ. ಅರ್ಥಾತ್, ತಾನೂ ಆಕೆಯೊಂದಿಗೆ ಇರಬೇಕಾಗುತ್ತಿತ್ತು. ಊರಿಗೆ ಹೋಗಲು ಆಕೆಯ ಒಪ್ಪಿಗೆ ಪಡೆಯುವುದು ಸಾಧ್ಯವಿರಲಿಲ್ಲ. ಅಂತೆಯೆ, ಆಕೆ ನಿದ್ರೆಹೋದ ಸಂಧಿ ಸಾಧಿಸಿ ಹೇಳದೆ ಕೇಳದೆ ಅಲ್ಲಿಂದ ಹೊರಟು ಬರಬೇಕಾಗಿದ್ದಿತು. ಯಾವಾಗ ನಗರಕ್ಕೆ ಬರುವೆನೊ, ಯಾವಾಗ ಸರಸುವನ್ನು ಕಾಣುವೆನೊ ಎಂದು ಹೊಡೆದುಕೊಳ್ಳುತಿತ್ತು ಹೃದಯ. ನಗರಕ್ಕೆ ಬಂದುದೂ ಆಗಿತ್ತು. ಸರಸು........

ತನ್ನ ಆಶಂಕೆ ಹುಸಿಹೋಗಿರಲಿಲ್ಲ. ತಾನು ಊಹಿಸಿದಂತೆಯೆ ಆಗಿದ್ದಿತೇನೊ. ಸರಸು ಹೊರಟುಹೋಗಿದ್ದಳು....ಸ್ವಾಮಿಗಳ ಬೆನ್ನುಹತ್ತಿ ಹೊರಟುಹೋಗಿದ್ದಳು.

ಮೊಳಕಾಲುಗಳಲ್ಲಿ ತಲೆ ಹುದುಗಿಸಿ ಶಿವಮೂರ್ತಿ ಬಿಕ್ಕಿ ಬಿಕ್ಕಿ ಅಳ ತೊಡಗಿದ. ಸರಸು....ತನ್ನ ಸರಸು.... ತನ್ನನ್ನು ಪ್ರೀತಿಸಿ ತನ್ನೊಡನೆ ಓಡಿಬಂದು ಮದುವೆಯಾದ ಸರಸು....ಇಷ್ಟು ಬೇಗ ತನ್ನ ಬಗೆಗಿದ್ದ ಪ್ರೀತಿ ಮಾಯವಾಯಿತೇ? ಅಂದು ತನ್ನ ಹಿಂದೆ ಓಡಿ ಬಂದಹಾಗೆ ಇಂದು ಸ್ವಾಮಿಗಳ ಹಿಂದೆ ಓಡಿಹೋದಳೇ! – ಜಗತ್ತೆಲ್ಲವೂ ಶೂನ್ಯವಾಗಿ ತೋರ ತೊಡಗಿತು ಶಿವಮೂರ್ತಿಗೆ. ಯಾರಿಗೆ ಯಾರೂ ಇಲ್ಲ ಈ ಪ್ರಪಂಚದಲ್ಲಿ.... ಯಾರಿಗೆ ಯಾರೂ ಇಲ್ಲ. ಎಲ್ಲ ಸುಳ್ಳು, ಎಲ್ಲ ಮೋಸ, ಎಲ್ಲ ಕಪಟ, ಎಲ್ಲ ಮಾಯೆ ಎನ್ನಿಸತೊಡಗಿತು.

ಹಠಾತ್ತಾಗಿ ಆತನಿಗೆ ಪ್ರಭುಸ್ವಾಮಿಗಳ ಜ್ಞಾಪಕ ಬಂದಿತು. ಅಂದು ರೈಲಿನಲ್ಲಿ ಬರುವಾಗ ಅವರು ಆಡಿದ ಮಾತುಗಳೆಲ್ಲವೂ ಮತ್ತೆ ಆತನ ಕಿವಿ ಗಳಲ್ಲಿ ಮೊರೆಯುತೊಡಗಿದುವು. ಹಳ್ಳಿಗರ ಸೇವೆಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟ ತರುಣರು ಬೇಕೆಂದು ಅವರು ಹೇಳಿದ್ದರು. ಸರ್ವಸಂಗ ಪರಿತ್ಯಾಗಮಾಡಿದ ತರುಣರು........

ನಗರಕ್ಕೆ ಕೊನೆಯದಾಗಿ ಶರಣು ಹೊಡೆದು ಪ್ರಭುಸ್ವಾಮಿಗಳನ್ನರಸಿ ಕೊಂಡು ಹೋಗಬೇಕೆಂಬ ತೀವ್ರ ಬಯಕೆ ಆತನಲ್ಲಿ ಮೂಡತೊಡಗಿತು. ಸರಸುವಂತೂ ತನ್ನನ್ನು ತ್ಯಜಿಸಿ ಹೊರಟುಹೋದಳು. ಇನ್ನು ಯಾರಿಗಾಗಿ, ಏತಕ್ಕಾಗಿ ತಾನಿಲ್ಲಿ ಇರಬೇಕು? ಶಾಸ್ತ್ರಿಗಳಲ್ಲಿ ಕೆಲಸಕ್ಕಿರುವ ಅಗತ್ಯ ವಾದರೂ ಏನು? ಹೌದು. ಹಾಗೇ ಮಾಡಬೇಕು. ಈ ರಾತ್ರಿಯೆ ನಗರ

ವನ್ನು ತ್ಯಜಿಸಿ ಪ್ರಭುಸ್ವಾಮಿಗಳನ್ನು ಹುಡುಕಿಕೊಂಡು ಹೋಗಬೇಕು, ಅವರ ಹಾಗೆ ತಾನೂ ಕಾವಿಬಟ್ಟೆ ಧರಿಸಿ ವಿರಕ್ತನಾಗಬೇಕು. ಸಂಸಾರದಲ್ಲಿ ನೊಂದ, ಬೆಂದ ಮನಸ್ಸನ್ನು ದೀನ ದಲಿತರ ಸೇವೆಯಲ್ಲಿ ಸಮಾಧಾನಗೊಳಿಸ ಬೇಕು.

ರಾತ್ರಿ ಆತ ಮನೆಗೆ ಬಂದಾಗ ಹತ್ತು ಗಂಟೆಯಾಗಿದ್ದಿತು.

ಪಿಟೀಲಿನ ಪೆಟ್ಟಿಗೆಯೊಂದನ್ನುಳಿದು ಇನ್ನೇನನ್ನೂ ಆತ ಜತೆಗೆ ತೆಗೆದುಕೊಳ್ಳಲಿಲ್ಲ. ಹಾಸಲು, ಹೊದೆಯಲು ಏನಾದರೂ ಬೇಡವೆ, ಎಂಬ ವಿಚಾರವೇನೊ ಸುಳಿಯಿತು. ಆದರೆ, ಎಲ್ಲವನ್ನೂ ತ್ಯಜಿಸಿ ಹೊರಟವನಿಗೆ ಅವುಗಳ ಆವಶ್ಯಕತೆಯಾದರೂ ಏನು ಎಂದುಕೊಂಡು ಆ ವಿಚಾರವನ್ನೂ ತ್ಯಜಿಸಿದ. ಈ ಪಿಟೀಲಿನ ಮೋಹವಾದರೂ ಏಕೆ, ಎನ್ನಿಸದಿರಲಿಲ್ಲ. ಆದರೆ ಅಷ್ಟು ಬೇಗ ಅದನ್ನು ತ್ಯಜಿಸುವುದು ಸಾಧ್ಯವಿಲ್ಲವೆಂದೇ ತೋರಿತು.

ಪ್ರಭುಸ್ವಾಮಿಗಳು ಯಾವ ಹಳ್ಳಿಯಲ್ಲಿ ಸಿಕ್ಕಬಹುದೆಂಬುದೇನೂ ಆತನಿಗೆ ತಿಳಿದಿರಲಿಲ್ಲ. ಅದೇ ಜಿಲ್ಲೆಯಲ್ಲಿ ಎಲ್ಲೋ ಒಂದು ಕಡೆಗಿರಬಹುದು, ಅಷ್ಟೆ. ಉತ್ತರದಿಕ್ಕಿಗೆ ಹೋಗುವ ಎಕ್ಸ್‌ಪ್ರೆಸ್ ಗಾಡಿಯನ್ನೇರಿ ಅಂದು ರಾತ್ರಿ ಅವರು ಇಳಿದ ನಿಲ್ದಾಣಕ್ಕಿಳಿದರಾಯಿತು, ಎಂದುಕೊಂಡ.

ಪಿಟೀಲನ್ನು ಕಂಕುಳಲ್ಲಿಟ್ಟುಕೊಂಡು ರೈಲ್ವೆ ನಿಲ್ದಾಣಕ್ಕೆ ಬಂದ. ಟಿಕೆಟ್ಟು ತೆಗೆಯಲು ಹೋದಾಗ ಉತ್ತರಕ್ಕೆ ಹೋಗುವ ಗಾಡಿ ಮೂರು ತಾಸು ತಡವಾಗಿ ಬರುವುದೆಂದು ತಿಳಿಯಿತು. ದಕ್ಷಿಣ ದಿಕ್ಕಿಗೆ, ಎಂದರೆ ಬೆಂಗಳೂರಿನ ಕಡೆಗೆ ಹೋಗುವ ಗಾಡಿ ಮಾತ್ರ ಇನ್ನೊಂದು ತಾಸಿನಲ್ಲಿ ಬರುವುದಿತ್ತು.

ಅಲ್ಲಿಯೆ ಒಂದು ಬೆಂಚಿನ ಮೇಲೆ ಕುಳಿತುಕೊಂಡ. ಮೂರನೆಯ ವರ್ಗದ ಪ್ರಯಾಣಿಕರ ವಿರಾಮ ತಾಣ. ಬೆಂಚುಗಳ ಮೇಲಲ್ಲದೆ ನೆಲದ ಮೇಲೂ ಜನ ಬಿದ್ದುಕೊಂಡಿದ್ದಿತು. ಆತನ ಎದುರಿಗಿದ್ದ ಬೆಂಚಿನ ಮೇಲೆ ತರುಣ ದಂಪತಿಗಳಿಬ್ಬರು ಪರಸ್ಪರರನ್ನು ಬಳಸಿ ಕುಳಿತುಕೊಂಡು ಪಿಸುದನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಅವರ ಮದುವೆಯಾದುದಕ್ಕೆ ಬಹಳ ದಿನ ಕಳೆದಿದ್ದಂತೆ ತೋರುತ್ತಿರಲಿಲ್ಲ. ಯುವಕ, ತನ್ನ ಜತೆಗಾತಿಯ ಭುಜದ ಮೇಲೆ ಕೈಹಾಕಿ ಆಕೆಯ ದೃಷ್ಟಿಗೆ ದೃಷ್ಟಿ ಸೇರಿಸಿ ಮಾತನಾಡು

ತ್ತಿದ್ದ. ಆಕೆಯ ತಲೆಗೂದಲು ಆತನ ತಲೆಗೂದಲನ್ನು ಸ್ಪರ್ಶಿಸುತ್ತಿತ್ತು. ಮೋಹದಿಂದ ಮತ್ತವಾದ ನೋಟವನ್ನು ಆಕೆ ಆತನ ಮುಖದ ಮೇಲೆ ಹರಿಬಿಟ್ಟಿದ್ದಳು.

ಆ ಜೊತೆಯನ್ನು ನೋಡಿದ ಹಾಗೆಲ್ಲ ಶಿವಮೂರ್ತಿಯ ಕಣ್ಣುಗಳೆದುರಿಗೆ ಸರಸುವಿನ ಮುಖ ಬಂದು ನಿಲ್ಲತೊಡಗಿತು. ಅಂದು ರಾತ್ರಿಯಲ್ಲಿ ಸುರಿಯುತ್ತಿರುವ ಮಳೆಯಲ್ಲಿ ಹೊಳೆಯ ತೀರಕ್ಕೆ ಬಂದು ತನ್ನನ್ನು ಎಬ್ಬಿಸಿ, ಕುದುರೆಗಾಡಿಯಲ್ಲಿ ಕೂಡ್ರಿಸಿ ಮನೆಗೆ ಕರೆದೊಯ್ದು ಉಪಚರಿಸಿದ ಸರಸು... ತಾನು ಕಚೇರಿಯಿಂದ ಬರುವುದನ್ನೇ ಕಾಯುತ್ತ ಕಿಟಕಿಯಲ್ಲಿ ಮುಖವಿಟ್ಟು ತನಗಾಗಿ ನಿಂತಿರುತ್ತಿದ್ದ ಸರಸು.... ಜಾತ್ರೆಯ ರಾತ್ರಿಯಲ್ಲಿ ತನ್ನ ಎದೆಯ ಮೇಲೆ ಶಿರವನ್ನೊರಗಿಸಿ ಕಂಬನಿ ಸುರಿಸಿದ ಸರಸು....'ನಿನ್ನನ್ನು ಬಿಟ್ಟು ನಾಸಿರಲು ಸಾಧ್ಯವಿಲ್ಲ' ಎಂದು ತಾನು ಹೇಳಿದಾಗ – 'ನನಗೂ ಸಾಧ್ಯವಿಲ್ಲ' ಎಂದು ಕಂಪಿಸುವ ಕಂಠದಿಂದ ನುಡಿದ ಸರಸು.... ನೌಕರಿಯನ್ನು ಬಿಟ್ಟು ಹೊರಡುವುದು ಹೇಗೆ, ಎಂದು ಯೋಚನೆಗೊಳಗಾಗಿದ್ದಾಗ 'ನೀವೇಕೆ ಹೆದರುವಿರಿ? ನಾನು ಎಲ್ಲಾದರೂ ಶಿಕ್ಷಕಿಯಾಗಿ ಕೆಲಸಮಾಡುತ್ತೇನೆ' ಎಂದು ಹುರಿದುಂಬಿಸಿದ ಸರಸು....ರಾತ್ರಿ ರೈಲಿನ ಪ್ರಯಾಣ....ಆಗ ಹೀಗೆಯೆ ತನ್ನ ಭುಜಕ್ಕೊರಗಿ ಕುಳಿತುಕೊಂಡಿದ್ದಳಾಕೆ. ಹೀಗೆಯೆ ಮೋಹದಿಂದ ತನ್ನನ್ನು ನಿರುಕಿಸುತ್ತಿದ್ದಳು.... ಸರಸು....ಸರಸು.... ತನ್ನ ಸರಸು....ತನ್ನ ಬಗೆಗೆ ಅಷ್ಟೊಂದು ಪ್ರೀತಿಯಿಟ್ಟುಕೊಂಡಿದ್ದವಳು ಹೀಗೆ ಹೊರಟುಹೋದಳೆಂದರೆ ನಂಬಲು ಅಸಾಧ್ಯವಾದ ಮಾತು. ತಾನೇ ಮನಃಪೂರ್ವಕವಾಗಿ ಹೋಗಿರಬಹುದೇ ಆಕೆ? ಅಥವಾ ಆ ಸ್ವಾಮಿಯೇನಾದರೂ ಒತ್ತಾಯದಿಂದ ಆಕೆಯನ್ನು ಓಡಿಸಿಕೊಂಡು ಹೋಗಿರಬಹುದೇ? ಹಾಗೂ ಆಗಿರಬಹುದು. ಮುನ್ನಾದಿನದ ರಾತ್ರಿ ಆಕೆಯನ್ನು ಮೋಟಾರಿಗೇರಿಸಿ ಮೋಸದಿಂದ ಬೆಂಗಳೂರಿಗೆ ಓಡಿಸಿಕೊಂಡು ಹೋಗಿರಬಾರದೇಕೆ?

ಈ ವಿಚಾರ ಸುಳಿಯುತ್ತಲೂ ಶಿವಮೂರ್ತಿಯ ಯೋಜನೆಯೆಲ್ಲ ಬದಲಾಯಿಸಿತು. ನಿಜವಾಗಿ ನಡೆದುದೇನೆಂಬುದನ್ನು ಸರಿಯಾಗಿ ಅರಿತುಕೊಳ್ಳದೆ ತಾನು ಸನ್ಯಾಸಿಯಾಗಿ ಪ್ರಭುಸ್ವಾಮಿಗಳತ್ತ ಹೊರಡುವುದು ಮೂಢತನವೆಂದೇ ತೋರಿತು. ಹಾಗೆ ಮಾಡಿದಲ್ಲಿ ಸರಸುವಿಗೆ ತುಂಬ

ಅನ್ಯಾಯ ಮಾಡಿದಂತಾಗುವುದು. ತನಗಾಗಿ ತವರುಮನೆಯನ್ನೇ ತೊರೆದು ಬಂದಿದ್ದ ಸರಸು ತನ್ನನ್ನು ತ್ಯಜಿಸಲು ಸಾಧ್ಯವಾದೀತೇ? ಎಂಥ ಹುಚ್ಚ ತಾನು! ಆಕೆಯನ್ನು ಹುಡುಕಿ, ಕರೆದುತಂದು ಮತ್ತೆ ಸಂಸಾರಕ್ಕಾರಂಭಿಸ ಬೇಕಾದುದು ತನ್ನ ಕರ್ತವ್ಯ. ಅದನ್ನು ಕಡೆಗಣಿಸಿ, ಕಾವಿಬಟ್ಟೆಯ ವಿಚಾರ ಕ್ಕಾರಂಭಿಸುವುದೇ? ಎಂಥ ಹುಚ್ಚು!

ಮನಸ್ಸಿನಲ್ಲಿ ಒಂದು ನಿರ್ಧಾರಕ್ಕೆ ಬಂದು ಶಿವಮೂರ್ತಿ ಕುಳಿತ ಸ್ಥಳ ದಿಂದ ಎದ್ದು ಬೆಂಗಳೂರಿಗೆ ಟಿಕೆಟ್ಟು ತೆಗೆದುಕೊಂಡ. ಆ ನಗರ ತನಗೆ ಅಪರಿಚಿತ, ಆದರೂ ಚಿಂತೆಯಿಲ್ಲ, ಬೀದಿ ಬೀದಿಯನ್ನು ಸುತ್ತಿ ಸರಸುವನ್ನು ಪತ್ತೆ ಮಾಡಬೇಕು. ಸೀತೆಗಾಗಿ ಶ್ರೀರಾಮಚಂದ್ರ ಅಲೆದ ಹಾಗೆ ಅಲೆಯ ಬೇಕು – ಎಂದುಕೊಂಡ.

[೨೩]

ಮಂಚದ ಮೇಲೆ ದಿಂಬುಗಳಿಗೊರಗಿ ಕುಳಿತುಕೊಂಡಿದ್ದಳು ಸರಸು.

ಪಕ್ಕದಲ್ಲಿದ್ದ ಮೇಜಿನ ಮೇಲಿನ ರೇಡಿಯೊ ಪಿಟೀಲಿನ ನಾದತರಂಗ ವನ್ನು ಹೊರಹೊಮ್ಮಿಸುತ್ತಿತ್ತು. ಕರುಣಾರಸಪೂರ್ಣ ನಾದತರಂಗ.

ಸರಸುವಿನ ಕಣ್ಣುಗಳಿಂದ ಕಂಬನಿಗಳುದುರುತ್ತಲಿದ್ದುವು.

ರಾತ್ರಿ ಹತ್ತು ಗಂಟೆ. ಸ್ವಾಮಿಗಳಿನ್ನೂ ಮನೆಗೆ ಬಂದಿರಲಿಲ್ಲ. ಬರ ಬೇಕಾದರೆ ನಡುರಾತ್ರಿಯಾಗುವುದು.

ಎಂಟು ದಿನಗಳಿಂದ ಹಾಗೆಯೆ ನಡೆದಿವೆ. ಮಧ್ಯಾಹ್ನ ಊಟಮಾಡಿ ಹೊರಗಡೆ ಹೋದ ಸ್ವಾಮಿಗಳು ರಾತ್ರಿ ಹನ್ನೆರಡರ ಹೊತ್ತಿಗೆ ಮರಳಿ ಬರುತ್ತಾರೆ.

ಬೆಂಗಳೂರಿಗೆ ಬಂದು, ಬಸವನಗುಡಿಯಲ್ಲಿ ಈ ಮನೆಯನ್ನು ಬಾಡಿಗೆಗೆ ಹಿಡಿದು ನೆಲೆಸಿದುದಾಗಿತ್ತು. ನಡುವೆ ಮೈಸೂರು, ಕನ್ನಂಬಾಡಿ, ಶ್ರೀರಂಗ ಪಟ್ಟಣ, ಹಳೇಬೀಡು, ಬೇಲೂರುಗಳನ್ನೂ ಸಂದರ್ಶಿಸಿಯಾಗಿದ್ದಿತು. ಯಾವುದರಲ್ಲೂ ಸರಸುವಿನ ಮನಸ್ಸು ರಮಿಸಿರಲಿಲ್ಲ. ಆಕೆಯ ಅತ್ಯಂತ ಮೆಚ್ಚುಗೆಯ ವಿಷಯವಾದ ಸಿನಿಮಾದಲ್ಲೂ ಯಾವ ಆಸಕ್ತಿಯೂ ಉಳಿದಿರ ಲಿಲ್ಲ. ಸ್ವಾಮಿಗಳೊಂದಿಗೆ ಬೆಂಗಳೂರಿಗೆ ಹೊರಟು ಬಂದಾಗಲೇ ಎಲ್ಲ

ಹೆರುಷವೂ ಮಾಯವಾದ ಹಾಗಿದ್ದಿತು. ಒಂದು ದಿನವೂ ಮನಸ್ಸಿಗೆ ಮುದ ವೆಂಬುದಿರಲಿಲ್ಲ. ಭೂಲೋಕವನ್ನು ಬಿಟ್ಟು ಬಂದು ಯಾವುದೋ ಒಂದು ಅಪರಿಚಿತ ವಿಲಕ್ಷಣ ಲೋಕದಲ್ಲಿ, ಅಪರಿಚಿತ ವ್ಯಕ್ತಿಗಳೊಂದಿಗೆ ತಾನು ಓಡಿಯಾಡುತ್ತಿದ್ದ ಹಾಗೆ ಆಕೆಗೆನ್ನಿಸಿದ್ದಿತು.

ಸ್ವಾಮಿಗಳು ಬಾಡಿಗೆಗೆ ತೆಗೆದುಕೊಂಡಿದ್ದ ಆ ಮನೆಯೂ ಸಾಕಷ್ಟು ದೊಡ್ಡದಾಗಿದ್ದಿತು. ಕಾಂಕ್ರೀಟಿನಿಂದ ಕಟ್ಟಿದ ಅಂದವಾದ ಮನೆ. ಕೆಳಗಡೆ ಕೈಸಾಲೆ, ಅಡುಗೆಯ ಕೊಟಡಿ, ಸ್ನಾನದ ಕೊಟಡಿ, ಉಗ್ರಾಣ. ಮಹಡಿಯ ಮೇಲೆ ಶಯ್ಯಾಗಾರ. ಸುಂದರವಾದ ಮರದಿಂದ ಮಾಡಿದ ಅಂದವಾದ ಮಂಚ. ಸುಪ್ಪತ್ತಿಗೆ. ಶುಭ್ರವಾದ ಸೊಳ್ಳೆಪರದೆ, ಸುತ್ತುಮುತ್ತು ಸೋಫಾ ಗಳು, ರೇಡಿಯೋ. ಶಿವಮೂರ್ತಿಯೊಂದಿಗೆ ಹೊಸ ಸಂಸಾರ ಹೂಡಿದಾಗ ಆಕೆ ಆಶಿಸುತ್ತಿದ್ದ ಸಾಮುಗ್ರಿಗಳೆಲ್ಲ ಇಲ್ಲಿ ಇದ್ದುವು. ಉಡಲು ಸೀರೆಗಳಿಗೆ ಕೊರತೆಯಿರಲಿಲ್ಲ. ಬೇರೆ ಬೇರೆ ಫ್ಯಾಷನ್ನಿನ ಬೆಲೆಬಾಳುವ ಸೀರೆಗಳು. ಬೆಂಗಳೂರಿಗೆ ಬಂದಂದಿನಿಂದ ಸರಸುವಿಗೆ ಸೀರೆಗಳನ್ನು ತಂದುಕೊಡುವುದೇ ಒಂದು ಕೆಲಸವಾದಂತಿದ್ದಿತು ಸ್ವಾಮಿಗಳಿಗೆ. ಆಧುನಿಕ ಮಾದರಿಯ ಚಿನ್ನ ರನ್ನದ ಒಡವೆಗಳನ್ನೂ ತಂದುಕೊಟ್ಟಿದ್ದರು. ಸುಗಂಧದೆಣ್ಣೆ, ಸ್ನೋ, ಪೌಡರು, ತುಟಿಗೆಂಪು. ದಿನವೂ, ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತೂ ಬಗೆಬಗೆಯ ಹೂವು, ಯಾವುದಕ್ಕೂ ಕೊರತೆಯಿರಲಿಲ್ಲ. ಸರಸು ಬಯಸುತ್ತಿದ್ದುದೆಲ್ಲವೂ ದೊರೆತಿದ್ದಿತು.

ಮನೆ ಮಾಡಿದೊಡನೆಯೆ ಒಬ್ಬಳು ಅಡುಗೆಯವಳನ್ನೂ ನಿಯಮಿಸಿ ಕೊಂಡಿದ್ದರು ಸ್ವಾಮಿಗಳು. ರಂಗಮ್ಮ ವಿಧವೆ. ಆಕೆಗೆ ನಲವತ್ತೈದು ವರ್ಷವಾಗಿರಬಹುದು. ವಿಧವೆಯಾದಂದಿನಿಂದ ಅಡುಗೆಯ ಕೆಲಸವನ್ನೇ ಮಾಡುತ್ತ ಜೀವನ ನಡೆಸುತ್ತಿದ್ದವಳು. ಬೆಳಗಾಗುತ್ತಲೂ ಚಹ ಸಿದ್ಧ ಗೊಳಿಸುತ್ತಿದ್ದಳು. ಹಾಸುಗೆಯ ಮೇಲೆ ಕುಳಿತುಕೊಂಡೇ ಸ್ವಾಮಿಗಳು ಚಹ ಕುಡಿದು ಅನಂತರ ಮೇಲಕ್ಕೇಳುವರು. ಬಾಯಿಯನ್ನೂ ತೊಳೆದು ಕೊಳ್ಳದೆ ಅವರು ಹಾಗೆಯೆ ಚಹ ಕುಡಿಯುವುದನ್ನು ಕಂಡು ಅಸಹ್ಯವಾಗ ದಿರುತ್ತಿರಲಿಲ್ಲ ಸರಸುವಿಗೆ. ಸ್ವಾಮಿಗಳು ನಗುತ್ತಾ—"ಬೆಳಿಗ್ಗೆ ಎದ್ದೊಡನೆ ಚಹ ಕುಡಿಯುವದು ಬಲು ಒಳ್ಳೆಯ ಚಟ ಸರಸೂ. ಯೂರೋಪಿಯನ್ನ

ರೆಲ್ಲ ಹೀಗೇ ಮಾಡುತ್ತಾರೆ. ಅವರು ಅಷ್ಟು ಆರೋಗ್ಯವಾಗಿರುವುದರ ರಹಸ್ಯವೇ ಇದು” ಎಂದು ಹೇಳುವರು. ಚಹವಾದ ಬಳಿಕ ಒಂದು ಸಿಗರೇಟು ಹೊತ್ತಿಸಿ ಸೇದುತ್ತ ಪ್ರಾತರ್ವಿಧಿಗಳನ್ನು ತೀರಿಸಲು ಹೋಗುವರು. ಸ್ವಾಮಿಗಳು ಸಿಗರೇಟು ಸೇದುವರೆಂಬುದು ಮೊದಲಬಾರಿ ಗೊತ್ತಾದಾಗ ಸರಸುವಿಗೆ ವಿಸ್ಮಯವಾಗದಿರಲಿಲ್ಲ. ಧೂಮ್ರವಲಯಗಳನ್ನು ರಚಿಸುತ್ತ ಸ್ವಾಮಿಗಳು ನುಡಿದಿದ್ದರು: “ನಾನು ಸೇದುವದನ್ನು ಕಂಡು ನಿನಗೆ ಅಸಹ್ಯವಾಗುವದೇನು ಸರಸು? ಸ್ವಾಮಿಗಳಾದವರು ಧೂಮ್ರಪಾನ ಮಾಡಬಾರದು, ಅಲ್ಲವೆ? ಈ ನಿಯಮ ನಿರ್ಬಂಧಗಳೆಲ್ಲಾ ಈಚೆಗೆ ಬಂದುವು. ಸಾವಿರಾರು ವರ್ಷಗಳಿಗೆ ಹಿಂದೆ ನಮ್ಮ ಮುನಿಗಳೂ ಋಷಿಗಳೂ ಇದ್ದರಲ್ಲಾ – ಅವರು ಭಂಗೀ ಸೇದುತ್ತಿದ್ದರು. ಹೌದು, ಭಂಗೀ. ದೇವರ ಧ್ಯಾನದಲ್ಲಿ ಮನಸ್ಸನ್ನು ತೊಡಗಿಸಲು ಅದರಿಂದ ತುಂಬ ಸಹಾಯವಾಗುತ್ತಿದ್ದಿತಂತೆ. ಇದ್ದರೂ ಇರಬಹುದು. ಧೂಮ್ರಪಾನದಿಂದಾಗಿ ಮನುಷ್ಯನಿಗೆ ಬೇರೆ ವಿಷಯಗಳು ಮರೆತು ಹೋಗುತ್ತವೆ. ನನಗಂತೂ ಚಿಕ್ಕವಯಸ್ಸಿನಿಂದಲೇ ಈ ಚಟ ಅಂಟಿಕೊಂಡಿದೆ. ಕನ್ನಡ ಸಾಲೆಯಲ್ಲಿ ಕಲಿಯುತ್ತಿದ್ದಾಗ ಮಾಸ್ತರರಿಗೆ ಗೊತ್ತಾಗದಂತೆ ನಾವು ಕದ್ದು, ಬೀಡಿ ಸೇದುತ್ತಿದ್ದೆವು. ನಾನು ಸ್ವಾಮಿಯಾದರೂ ಆ ಚಟ ಮಾಯವಾಗಲಿಲ್ಲ. ಚಟಗಳೆಂದರೆ ಹಾಗೇ. ಒಮ್ಮೆ ಅವುಗಳ ಹಿಡಿತಕ್ಕೆ ಸಿಕ್ಕ ಬಳಿಕ ಮನುಷ್ಯ ಅವುಗಳಿಂದ ಬಿಡುಗಡೆ ಹೊಂದುವದು ತೀರಾ ಕಷ್ಟ. ಸ್ವಾಮಿಗಳಾದವರು ಹೆಣ್ಣಿನ ಸಹವಾಸ ಮಾಡಬಾರದು. ನಿಜ. ಆದರೂ ತಡೆಯಲಾಗುವದಿಲ್ಲ. ಹುಡುಗನಾಗಿದ್ದಾಗಿನಿಂದಲೂ ನನಗೆ ಹೆಣ್ಣು ಅಂದರೆ ವಿಪರೀತ ಹುಚ್ಚು. ಕಾವಿಬಟ್ಟೆ ಹಾಕಿದ ಮಾತ್ರಕ್ಕೆ ಈ ಹುಚ್ಚು ಹೋಗುತ್ತದೆಯೆ?”

“ಹಾಗಾದರೆ ಕಾವಿಬಟ್ಟೆಯನ್ನಾದರೂ ಯಾಕೆ ಹಾಕಿದಿರಿ? ಎಲ್ಲರಂತೆ ಮದುವೆಯಾಗಿ ಸಂಸಾರ ಹೂಡಬಹುದಾಗಿದ್ದಿತಲ್ಲ?” ಎಂದು ಸರಸು ಪ್ರಶ್ನಿಸಿದ್ದಳು.

“ಆಗಬಹುದಿತ್ತು. ಆಗಬೇಕೆಂಬ ಮನಸ್ಸೂ ನನಗಿತ್ತು. ಆದರೆ, ತಾಯಿತಂದೆಗಳಿಗೆ ಅದು ಒಪ್ಪಿಗೆಯಾಗಲಿಲ್ಲ. ನನ್ನನ್ನು ಸ್ವಾಮಿಯನ್ನಾಗಿ

ಮಾಡಲೇಬೇಕೆಂದು ಅವರು ನಿರ್ಧರಿಸಿದರು. ನಾನು ಚಿಕ್ಕವನಾಗಿದ್ದಾಗಲೇ ಒಂದು ಮಠಕ್ಕೆ ಮರಿ ಬಿಟ್ಟರು."

"ಯಾಕೆ?"

"ನಾವು ನಾಲ್ಕು ಜನ ಅಣ್ಣತಮ್ಮಂದಿರು. ಇಬ್ಬರು ಅಕ್ಕಂದಿರೂ ಇದ್ದರು. ಮನೆಯಲ್ಲಿ ಪೂರಾ ಬಡತನ. ಹೊಲಗಳಿರಲಿಲ್ಲ. ಕೋರಾನ್ನ ಭಿಕ್ಷೆಯಿಂದ ಬದುಕು ಸಾಗಿಸುತ್ತಿದ್ದರು. ನಮಗೆಲ್ಲ ವಿದ್ಯಾಭ್ಯಾಸ ಮಾಡಿಸುವದಕ್ಕೂ ಶಕ್ತಿಯಿರಲಿಲ್ಲ. ನನ್ನ ಮೂರು ಜನ ಅಣ್ಣಂದಿರು ಸ್ವಲ್ಪ ಸ್ವಲ್ಪ ಕಲಿತು ಬೇರೆ ಬೇರೆ ಊರುಗಳಿಗೆ ಹೋಗಿ ಭೋಜನಾಲಯಗಳಲ್ಲಿ ದುಡಿದು ಜೀವಿಸುತ್ತಿದ್ದರು. ಇಬ್ಬರು ಅಕ್ಕಂದಿರ ಮದುವೆಯಾಗಬೇಕಾದರೆ ಸಾಕು ಸಾಕಾಗಿ ಹೋಯಿತು. ಈ ಬಡತನದ ಬವಣೆಯನ್ನು ಸಹಿಸಲಾರದೆ ಹೇಗಾದರೂ ಅದರಿಂದ ಬಿಡುಗಡೆ ಹೊಂದಲು ಬಯಸಿ ನನ್ನ ತಾಯಿತಂದೆಗಳು ನನ್ನನ್ನು ಮಠವೊಂದಕ್ಕೆ ಮರಿ ಬಿಟ್ಟರು."

"ಅದರಿಂದ ಅವರಿಗೇನು ಲಾಭವಾಯಿತು?"

"ಒಡನೆಯೆ ಲಾಭವಾಗಲು ಸಾಧ್ಯವಿರದಿದ್ದರೂ ಮುಂದೆ, ಆಗ ಬದುಕಿದ್ದ ಸ್ವಾಮಿಗಳು ಸತ್ತುಹೋದ ಬಳಿಕ ಮಠದ ಆಸ್ತಿಯೆಲ್ಲಾ ನನ್ನ ಕೈಗೇ ಬರುವಂತಿದ್ದಿತಲ್ಲ? ವರ್ಷಕ್ಕೆ ಏಳೆಂಟು ಸಾವಿರ ವರಮಾನದ ಮಠ. ನಾನು ಮರಿಯಾಗುತ್ತಲೂ ನನ್ನ ತಾಯಿತಂದೆಗಳೂ ಮಠಕ್ಕೇ ಬಂದು ಅಲ್ಲಿಯೆ ನೆಲಸಿದರು. ಮಠದ ಕಾಳುಕಡ್ಡಿಗಳಲ್ಲೇ ಅವರ ಬದುಕೂ ಸಾಗತೊಡಗಿತು. ಸ್ವಾಮಿಗಳು ಮುದುಕರಾಗಿದ್ದರು. ಬರುಬರುತ್ತ ನನ್ನ ತಂದೆಯೇ ಮಠದ ಕಾರಭಾರವನ್ನೆಲ್ಲ ವಹಿಸಿಕೊಂಡರು. ಹಣವೂ ಅವರ ಕೈಗೇ ಬರತೊಡಗಿತು. ಭೋಜನಾಲಯಗಳಲ್ಲಿ ಕೊಳೆಯುತ್ತಿದ್ದ ನನ್ನ ಮೂವರು ಅಣ್ಣಂದಿರೂ ನಗರಗಳಲ್ಲಿ ಅಂಗಡಿಗಳನ್ನು ತೆರೆದು ಶ್ರೀಮಂತರಾಗಲು ಸಾಧ್ಯವಾಯಿತು. ಇದೀಗ ಅವರು ದೊಡ್ಡ ದೊಡ್ಡ ಮನೆ ಕಟ್ಟಿಸಿಕೊಂಡು ಸುಖವಾಗಿದ್ದಾರೆ. ನಾನು ಸ್ವಾಮಿಯಾಗದಿದ್ದರೆ ಅದೆಲ್ಲ ಸಾಧ್ಯವಾಗುತ್ತಿರಲಿಲ್ಲವಲ್ಲ?"

"ಸ್ವಾಮಿಯಾದ ಬಳಿಕ ತಂದೆತಾಯಿ, ಅಣ್ಣತಮ್ಮಂದಿರ ಸಂಬಂಧ ಇಟ್ಟುಕೊಳ್ಳಬಾರದೆಂಬ ನಿಯಮವಿಲ್ಲವೆ?"

"ಇದೆ. ಆದರೆ ಈಗ ಅವುಗಳನ್ನೆಲ್ಲ ಯಾರು ಕೇಳುತ್ತಾರೆ? ಹೆಣ್ಣಿನ ಬಗೆಗಿರುವ ಕಠೋರ ನಿಯಮಕ್ಕೇ ಈ ಗತಿಯಾಗಿರುವಾಗ ಇನ್ನು ಇಂಥ ಚಿಲ್ಲರೆ ನಿಯಮಗಳ ಮಾತೇನು?"

"ಅಂತೂ, ಹಣದಾಸೆಗಾಗಿಯೆ ಮಠಕ್ಕೆ ಮರಿಗಳನ್ನು ಬಿಡುವರೆಂದಂತಾಯಿತಲ್ಲ?"

"ಇನ್ನೇತಕ್ಕಾಗಿ? ಬಡತನದ ಸಂಕಟದಿಂದ ಪಾರಾಗಬೇಕೆಂಬ ಆಸೆಯೆ ಇದಕ್ಕೆ ಮುಖ್ಯ ಕಾರಣ. ತಮ್ಮ ಸ್ವಾರ್ಥಕ್ಕಾಗಿ ತಾಯಿತಂದೆಗಳು ನಮ್ಮನ್ನು ಮಠಗಳಿಗೆ ಬಲಿಕೊಡುತ್ತಾರೆ. ಕಾವಿಬಟ್ಟೆ ಹಾಕಿಕೊಂಡು ಪ್ರಪಂಚದ ಸುಖವನ್ನೆಲ್ಲ ತ್ಯಜಿಸಿ ರೂಕ್ಷಜೀವನ ನಡೆಸಲು ಯಾರಿಗೆ ತಾನೆ ಇಷ್ಟವಿದ್ದೀತು? ಆದರೂ ಉಪಾಯವಿಲ್ಲದೆ ಈ ಕಾವಿಗೆ ಶರಣು ಹೋಗಬೇಕಾಗುತ್ತದೆ. ನಮ್ಮಂಥ ಜಾಣರು ಇದ್ದುದರಲ್ಲೇ ದಾರಿ ತೆಗೆದು ಸಾಧ್ಯವಾದಷ್ಟು ಸುಖವನ್ನನುಭವಿಸಿಯೇ ಬಿಡುತ್ತೇವೆ. ಇನ್ನು ಕೆಲವರು ಮೂರ್ಖರು ವಿರಕ್ತಿ, ಭಕ್ತಿ, ಮುಕ್ತಿ ಎಂಬ ಸುಳ್ಳಿನ ಜಾಲಕ್ಕೆ ತೊಡಕಿಕೊಂಡು ಬಾಳನ್ನೆಲ್ಲ ಹಾಳುಮಾಡಿಕೊಳ್ಳುತ್ತಾರೆ."

"ಸ್ವಾಮಿಗಳೆಲ್ಲಾ ಹೀಗೇ ಅನ್ನಿರಿ ಹಾಗಾದರೆ."

"ಎಲ್ಲರೂ ಅಂತ ನನ್ನ ಅಭಿಪ್ರಾಯವಲ್ಲ. ಹೆಣ್ಣನ್ನು ಕಣ್ಣೆತ್ತಿ ಸಹಾ ನೋಡದೆ ಪರಮ ವೈರಾಗ್ಯದಿಂದಿರಲು ಪ್ರಯತ್ನಿಸುವ ಅರಸಿಕರೂ ಇದ್ದಾರೆ. ಅಂಥವರು ತೀರಾ ವಿರಳ. ನಮ್ಮಂಥ ರಸಿಕರೇ ಹೆಚ್ಚು ಜನರಿದ್ದಾರೆ."

"ಈ ರಸಿಕತನದಿಂದ ಮಠಗಳಿಗೇನು ಉಪಯೋಗ? ಸಮಾಜಕ್ಕಾದರೂ ಏನು ಉಪಯೋಗ?"

"ಏನು ಉಪಯೋಗವೋ ಆ ಅಲ್ಲಮಪ್ರಭುವೇ ಬಲ್ಲ. ಹಿಂದಿನಿಂದ ನಡೆದು ಬಂದಿದೆ. ಸಮಾಜ ಆ ಹಿಂದಿನದಕ್ಕೇ ಅಂಟಿಕೊಂಡು ಅದರಲ್ಲೇ ಕೊಳೆಯುತ್ತಿದೆ. ನಿಜ ಹೇಳಬೇಕಾದರೆ ಈ ಮಠಗಳಿಂದ ಇಂದಿನ ಕಾಲದಲ್ಲಿ ಸಮಾಜಕ್ಕೆ ಯಾವ ಉಪಯೋಗವೂ ಇಲ್ಲ. ನಮ್ಮಂಥ ಸ್ವಾಮಿಗಳಿಗೆ ನಮಸ್ಕರಿಸುವುದರಿಂದ ಪುಣ್ಯ ಬರುತ್ತದೆಯೆ, ಎಲ್ಲಾದರೂ? ನಮ್ಮಂಥ ರಸಿಕಶಿರೋಮಣಿಗಳಿಂದ ಇವರಿಗೆ ವಿರಕ್ತಿ ಸಾಧಿಸುತ್ತದೆಯೆ? ಸಮಾಜವನ್ನು ಭಕ್ತಿಯ ದಾರಿಯಲ್ಲಿ ಸಾಗಿಸಿ ಕೊಂಡೊಯ್ಯುವದಕ್ಕಾಗಿ ಮಠಗಳ ಸ್ಥಾಪನೆ

ಯಾಯಿತು. ಅದು ಎಂಟು ನೂರು ವರ್ಷಗಳಿಗೆ ಹಿಂದಿನ ಮಾತು. ಕಾಲ ಬದಲಾಯಿಸಿದೆ. ಮನುಷ್ಯ ಬದಲಾಯಿಸಿದ್ದಾನೆ. ಸುತ್ತುಮುತ್ತಲಿನ ವಾತಾವರಣ ಬದಲಾಯಿಸಿದೆ. ಹೊಸ ವಿಚಾರ, ಹೊಸ ರೀತಿ ನೀತಿ, ಹೊಸ ತತ್ವ, ಹೊಸ ಸಿದ್ಧಾಂತ ತಲೆಯೆತ್ತಿವೆ. ಇಪ್ಪತ್ತನೆಯ ಶತಮಾನದಲ್ಲೂ ಹನ್ನೆರಡನೆಯ ಶತಮಾನದ ಶರಣ ಶರಣೆಯರ, ಅಲ್ಲಮಪ್ರಭುಗಳ, ಅಕ್ಕಮಹಾದೇವಿಯರ, ಅಕ್ಕನಾಗಮ್ಮಗಳ ಆದರ್ಶವನ್ನೇ ಅನುಕರಿಸುವ ಹುಚ್ಚುತನಕ್ಕೆ ಬಿದ್ದಿದೆ ಸಮಾಜ. ಅದು ಹುಚ್ಚುತನವೆನ್ನುವುದು ಅದಕ್ಕೆ ಗೊತ್ತಿಲ್ಲವೆಂದೇನೂ ಅಲ್ಲ. ಮೊದಲಿನಂಥ ವಿರಕ್ತ ಸ್ವಾಮಿಗಳು ಇಂದು ಇಲ್ಲವೆಂಬುದು ಚೆನ್ನಾಗಿ ಗೊತ್ತಿದ್ದರೂ ಹಿಂದಿನಿಂದ ಬಂದ ಮೂಢಶ್ರದ್ಧೆಯನ್ನು ಬಿಡಲಾರದೆ ಈ ಜನರು ನಮ್ಮಂಥವರನ್ನೇ ದೇವರೆಂದು ಭಾವಿಸಿ ಕಾಲಿಗೆರಗುತ್ತಾರೆ. ಹಳ್ಳಿಯ ಜನರಿಗಂತೂ ಅಜ್ಞಾನ. ಎಂಟು ನೂರು ವರ್ಷಗಳಿಂದ ಎಂಟು ಸಾವಿರ ಸ್ವಾಮಿಗಳಾಗಿ ಹೋದರೂ ಈ ಜನರ ಅಜ್ಞಾನವನ್ನು ಹೋಗಲಾಡಿಸಲು ಯಾರೂ ಪ್ರಯತ್ನಿಸಿಲ್ಲ. ಜನರ ಅಜ್ಞಾನವನ್ನು ತೊಲಗಿಸಿ ಜ್ಞಾನದ ಬೆಳಕು ಬೀರುವದೇ ಸ್ವಾಮಿಗಳಾದವರ ಕರ್ತವ್ಯವಲ್ಲವೇ? ಈ ಕರ್ತವ್ಯದ ಅರಿವೇ ಯಾರಿಗೂ ಇದ್ದಂತಿಲ್ಲ. ಸಮಾಜಸೇವೆಗಾಗಿ ತಮಗೆ ದೊರೆತ ಮಠದ ಆಸ್ತಿಯನ್ನು ಮನ ಬಂದ ಹಾಗೆ ಉಪಭೋಗಿಸುತ್ತ, ಭಕ್ತರಿಂದ ಸಾಷ್ಟಾಂಗ ನಮಸ್ಕಾರ ಹಾಕಿಸಿಕೊಂಡು ಪಲ್ಲಕ್ಕಿಗಳಲ್ಲಿ ಮೆರೆಯುವದೇ ತಮ್ಮ ಕರ್ತವ್ಯವೆಂದು ಸ್ವಾಮಿಗಳು ತಿಳಿದಿದ್ದಾರೆ. ಸ್ವಾಮಿಗಳೂ ಅಜ್ಞಾನಿಗಳೇ. ಭಕ್ತರೂ ಅಜ್ಞಾನಿಗಳೇ. ಇನ್ನು ಯಾರಿಗೆ ಯಾರು ಬುದ್ಧಿ ಹೇಳಬೇಕು? ಪೂರ್ವದಿಂದ ಬಂದ ಪದ್ಧತಿಯ ಪ್ರವಾಹದಲ್ಲಿ ತೇಲುತ್ತ ಹೊರಟಿರುವ ಪತಿತರೇ ಎಲ್ಲರೂ."

"ನಿಮ್ಮಂಥವರೂ ಹೀಗೇ ಆಗುವಿರಲ್ಲ?"

"ಮತ್ತೇನು ಮಾಡುವದು? ಬೇರೆ ದಾರಿಯಿಲ್ಲವಲ್ಲ? ಪ್ರವಾಹಕ್ಕೆದಿರಾಗಿ ನಿಂತು ಹೋರಾಡುವದಕ್ಕೂ ಶಕ್ತಿ ಬೇಕು. ಬಡತನದಿಂದಾಗಿ ಆ ಶಕ್ತಿಯೆಲ್ಲಾ ಕುಗ್ಗಿಹೋಗಿರುತ್ತದೆ. ಮದುವೆಯಾಗಿ ಹೇಗೋ ಕಷ್ಟಪಟ್ಟು ಹೊಟ್ಟೆ ಹೊರೆಯುವದಕ್ಕಿಂತ, ಸ್ವಾಮಿಯಾಗಿ ಏನೂ ಕೆಲಸಮಾಡದೆ ಸಕಲ ಸುಖಗಳನ್ನೂ ಅನುಭವಿಸುವದು ಮೇಲಲ್ಲವೆ? ನಮಗೂ ಸುಖ

ಜೀವನ. ನಮ್ಮ ತಾಯಿತಂದೆಗಳಿಗೂ ಬಂಧು ಬಳಗದವರಿಗೂ ಸುಖಜೀವನ. ಬಡತನದಲ್ಲಿ ನರಳುತ್ತಿರುವಾಗ ಯಾವ ಸಮಾಜ ನಮ್ಮನ್ನು ಕಣ್ಣೆತ್ತಿ ನೋಡುವದಿಲ್ಲವೋ ಅದೇ ಸಮಾಜವೇ ನಾವು ಸ್ವಾಮಿಗಳಾಗುತ್ತಲೂ ಕಾಣಿಕೆ ತೆತ್ತು ಸಾಷ್ಟಾಂಗ ಹಾಕುವದೆಂದ ಮೇಲೆ ನಾವಾದರೂ ಇಂಥ ಸಂಧಿಯನ್ನೇಕೆ ಕಳೆದುಕೊಳ್ಳಬೇಕು?"

ಸ್ವಾಮಿಗಳೊಂದಿಗೆ ಹೊರಟು ಬಂದಂದಿನಿಂದ ಅವರ ವ್ಯಕ್ತಿತ್ವದ ವಿವಿಧ ವೈಶಿಷ್ಟ್ಯಗಳು ಒಂದೊಂದಾಗಿ ಸರಸುವಿನ ಅನುಭವಕ್ಕೆ ಬರುತ್ತಿದ್ದುವು. ಅವರ ಸಹವಾಸದಲ್ಲಿ ಬೀಳುವುದಕ್ಕೆ ಮೊದಲು ಅವರ ಬಗೆಗಿದ್ದ ಅಲ್ಪಸ್ವಲ್ಪ ಆಕರ್ಷಣೆ ಯಾವಾಗಲೋ ಮಾಯವಾಗಿದ್ದಿತು. ಅಂದು ರಾತ್ರಿ, ಆಶ್ರಮದಲ್ಲಿ ಅವರೊಂದಿಗೆ ಸಂಬಂಧ ಬಂದ ಮರುದಿನವೆ ಅವರ ಬಗೆಗೆ ಒಂದು ಬಗೆಯ ತಿರಸ್ಕಾರವುಂಟಾಗಿದ್ದಿತು. ಅಂದು ಶಿವಮೂರ್ತಿಯನ್ನಾಕೆ ಕಂಡಿದ್ದಲ್ಲಿ, ಸ್ವಾಮಿಗಳೊಂದಿಗೆ ಬೆಂಗಳೂರಿಗೆ ಹೊರಟುಬರುವಂಥ ಪ್ರಮಾದ ಆಕೆಯಿಂದಾಗುತ್ತಿರಲಿಲ್ಲವೆಂದೇ ಹೇಳಬೇಕು. ಲಲಿತೆಯೊಂದಿಗೆ ಆತ ಆಕೆಯ ತವರಿಗೆ ಹೊರಟು ಹೋದ ಸುದ್ದಿಯಿಂದಾಗಿಯೆ ಸರಸುವಿನ ಮನಸ್ಸು ಕಹಿಯಾಗಿತ್ತು. ಮುನ್ನಾದಿನದ ರಾತ್ರಿ ತಾನು ಮಾಡಿದ ತಪ್ಪಿಗಿಂತ ಆತನ ತಪ್ಪೇ ಅತಿ ದೊಡ್ಡದೆಂದು ಆಕೆಗೆನ್ನಿಸಿತ್ತು. ಆ ಕೋಪದ ಭರದಲ್ಲಿ ಆಕೆಯ ಮನಸ್ಸಿನ ಮೇಲೆ ಮಂಜಿನ ಪರದೆಯೊಂದು ಇಳಿಬಿದ್ದ ಹಾಗಾಗಿದ್ದಿತು. ತಾನೇನನ್ನು ಮಾಡುತ್ತಿರುವೆನೆಂಬುದನ್ನು ಯೋಚಿಸದೆ ಆಕೆ ಸ್ವಾಮಿಗಳೊಂದಿಗೆ ಹೊರಟು ಬಂದಿದ್ದಳು. ಕನಸಿನಲ್ಲಿ ನಡೆಯುವ ಘಟನೆಯಂತೆ ಆ ಘಟನೆ ನಡೆದುಹೋಗಿತ್ತು.

ಆಶ್ರಮವನ್ನು ಹಿಂದೆ ಬಿಟ್ಟು ಅವರ ಮೋಟಾರು ನಗರವನ್ನು ಹಿಂದೆ ಹಾಕಿ ಧಾರವಾಡದ ರಸ್ತೆಯಲ್ಲಿ ಧಾವಿಸತೊಡಗಿದಾಗ ಸರಸು ಕಣ್ಣುಮುಚ್ಚಿಕೊಂಡು ಒರಗಿದ್ದಳು. ಪೆಟ್ರೋಲು ತುಂಬಿಸಿಕೊಳ್ಳುವುದಕ್ಕಾಗಿ ಧಾರವಾಡದಲ್ಲಿ ಮೋಟಾರು ನಿಂತುಕೊಂಡಿದ್ದಾಗ ಆಕೆಯ ಚಿತ್ತ ಹೊಯ್ದಾಡತೊಡಗಿದ್ದಿತು. ಹಠಾತ್ತಾಗಿ ಮೋಟಾರಿನಿಂದಿಳಿದು ಓಡಿಹೋಗಿ ಬಿಡಲಾ, ಎಂದುಕೊಂಡಿದ್ದಳು. ಆ ವಿಚಾರವನ್ನು ಕೃತಿಗಿಳಿಸುವುದು ಸಾಧ್ಯವಾಗಿರಲಿಲ್ಲ. ಮುಂದೆ, ದಾವಣಗೆರೆಗೆ ಮೋಟಾರು ನಿಂತಾಗ ಮತ್ತೆ ಆ ವಿಚಾರ ಅವಳೆದೆ

ಯಲ್ಲಿ ಬಿರುಗಾಳಿಯಂತೆ ನುಗ್ಗಿ ಬಂದಿದ್ದಿತು. ಅಲ್ಲಿಯಾದರೂ ಇಳಿದು, ರೈಲು ಹತ್ತಿ ಊರಿಗೆ ಹೋಗಬೇಕು, ತನ್ನ ಪ್ರೀತಿಯ ಮೂರ್ತಿ ಎಲ್ಲಿದ್ದರೂ, ಯಾರ ಜತೆಗಿದ್ದರೂ ಸರಿಯೆ, ಆತನನ್ನು ಅಲ್ಲಿಂದ ಕರೆದು ತಂದು ಆತನ ಪಾದಗಳ ಮೇಲೆ ಬಿದ್ದು ತನ್ನೆಲ್ಲ ಅಪರಾಧಗಳನ್ನು ಮನ್ನಿಸುವಂತೆ ಕೇಳಿ ಕೊಳ್ಳಬೇಕು, ಆತ ದಯಾಳು, ಉದಾರಿ, ತನ್ನನ್ನು ಕ್ಷಮಿಸಿ ಮೊದಲಿ ನಂತೆಯೆ ತನ್ನೊಡನೆ ಪ್ರೀತಿಯಿಂದ ವರ್ತಿಸಬಹುದು, ಶಾಸ್ತ್ರಿಯ ಕೆಲಸ ವನ್ನೂ ಆಶ್ರಮದ ನೌಕರಿಯನ್ನೂ ಬಿಟ್ಟು ತಾವಿಬ್ಬರೂ ಬೇರೊಂದು ಊರಿಗೆ ಹೋಗಿ ದುಡಿದು ಜೀವಿಸಬೇಕು, ಎಂದೆಲ್ಲ ಯೋಚಿಸಿಕೊಂಡಿದ್ದಳು. ಯೋಚಿಸಿದುದೆಷ್ಟೊ ಅಷ್ಟೆ. ಮೋಟಾರಿನಿಂದಿಳಿಯಲು ಧೈರ್ಯವಾಗಿರಲಿಲ್ಲ.

ಮುಂದೆ ರಾತ್ರಿಯಾಗಿತ್ತು. ಮಧ್ಯರಾತ್ರಿಯ ಹೊತ್ತಿಗೆ ಬೆಂಗಳೂರು. ಅಂದು ಮಾಡರ್ನ್ ಹಿಂದೂ ಹೋಟಲಲ್ಲಿ ವಾಸ. ಮನಸ್ಸು 'ಇಶ್ಶಿ' ಎನ್ನು ತ್ತಿದ್ದರೂ ಮತ್ತೆ ಸ್ವಾಮಿಗಳ ತೆಕ್ಕೆಯಲ್ಲಿ ಪವಡಿಸಬೇಕಾಗಿ ಬಂದಿದ್ದಿತು. ರಾತ್ರಿಯೆಲ್ಲ ಕಣ್ಣಿಗೆ ಕಣ್ಣು ಹತ್ತಿರಲಿಲ್ಲ. ಬೆಳಗಾಗುತ್ತಲೂ ಎದ್ದು, ಹೋಟಲಿ ನಿಂದ ತಪ್ಪಿಸಿಕೊಂಡು ಹೋಗಿ ರೈಲು ಹತ್ತಿ ಊರಿಗೆ ಹೊರಡಬೇಕೆಂದು ಕೊಂಡಿದ್ದಳು. ಅದೂ ಕೃತಿಗಿಳಿವಿರಲಿಲ್ಲ.

ಮೈಸೂರು, ಚಾಮುಂಡಿಬೆಟ್ಟ, ಕನ್ನಂಬಾಡಿ, ಶ್ರೀರಂಗಪಟ್ಟಣ, ಹಳೇಬೀಡು, ಬೇಲೂರು. ಒಂದು ವಾರದವರೆಗೆ ಸ್ವಾಮಿಗಳೊಂದಿಗೆ ವಿಹಾರ ಯಾತ್ರೆ. ಊರಿನಲ್ಲಿದ್ದಾಗ ಮೈಸೂರು ಸಂಸ್ಥಾನವನ್ನು ನೋಡಲು ಹಾತೊರೆಯುತ್ತಿದ್ದ ಆಕೆಯ ಮನಸ್ಸಿಗೆ ಈ ವಿಹಾರಕಾಲದಲ್ಲಿ ಮಾತ್ರ ಕೊಂಚವೂ ನೆಮ್ಮದಿಯಿರಲಿಲ್ಲ. ಆ ಭಾಗದಲ್ಲಿ ತಮ್ಮನ್ನು ಗುರುತಿಸುವವ ರಾರೂ ಇರಲಿಲ್ಲವಾದುದರಿಂದ ಸ್ವಾಮಿಗಳು ಯಾವ ಸಂಕೋಚವನ್ನೂ ಇಟ್ಟುಕೊಳ್ಳದೆ ಆಕೆಯೊಂದಿಗೆ ಮುಕ್ತವಾಗಿ ತಿರುಗುತ್ತಿದ್ದರು. ಕನ್ನಂ ಬಾಡಿಯ ಭವ್ಯ ಹೋಟಲಿನಲ್ಲಿ ಒಂದು ರಾತ್ರಿಯನ್ನು ಕಳೆದುದಾಗಿದ್ದಿತು. ಕೊಟಡಿಯಲ್ಲಿನ ಮಂಚದ ಮೇಲೊರಗಿ ದೃಷ್ಟಿ ತಿರುಗಿಸಿದರೆ ಎದುರಿಗೆ ಬಣ್ಣ ಬಣ್ಣಗಳ ಬೆಡಗಿನ ಸೃಷ್ಟಿ. ಅಲ್ಲಿ ಕಾರಂಜಿ, ಇಲ್ಲಿ ಕಾರಂಜಿ, ಎಲ್ಲೆಲ್ಲೂ ಕಾರಂಜಿಗಳ ಉತ್ಸಾಹದ ಕುಣಿತ. ಚಿನ್ನ, ರನ್ನ, ಮುತ್ತು, ಮಾಣಿಕ್ಯ, ಹವಳ, ವಜ್ರ, ವೈಢೂರ್ಯಗಳ ಹುಡಿಯನ್ನು ಹೊತ್ತುಕೊಂಡು ಉಲ್ಲಾಸ

ದಿಂದ ನೆಗೆಯುವಂತೆ ತೋರುವ ಬಣ್ಣಬಣ್ಣಗಳ ನೀರಿನ ಸೊಗಸು. ಜುಳು ಜುಳು ಹರಿಯುವ ಪುಟ್ಟ ಕಾಲುವೆಗಳಲ್ಲಿ ಪಕ್ಕನೆ ಹೊಳೆದು ಮಾಯವಾಗುವ ವಿದ್ಯುಲ್ಲತೆಯ ಬೆಡಗು. ಅದೊಂದು ಮಾಯಾಲೋಕ. ಎಂಥವರ ಮನಸ್ಸನ್ನೂ ಮುದಗೊಳಿಸುವ ಸುಂದರ ಉದ್ಯಾನ. ಅಂಥ ಅಲೌಕಿಕ ಸೊಬಗೂ ಸರಸುವಿನ ಔದಾಸೀನ್ಯವನ್ನು ಹೋಗಲಾಡಿಸಲು ಸಮರ್ಥವಾಗಿರಲಿಲ್ಲ. ಅವಳ ದೃಷ್ಟಿಯೆದುರಿಗೆ ಸದಾಕಾಲವೂ ಶಿವಮೂರ್ತಿಯ ಮುಖವೇ ಕಟ್ಟಿದಂತಿರುತ್ತಿತ್ತು. ಎದುರಿಗೆ, ಗಾಳಿಗೆ ತೊನೆಯುತ್ತಿದ್ದ ಬಳ್ಳಿಗಳನ್ನು ಕಂಡಾಗ ತನ್ನ ಪ್ರಿಯತಮನ ಮುಂಗುರುಳನ್ನೇ ಕಂಡಂತಾಗುವುದು. ಕುಣಿದು ಕುಣಿದು ಕೆಳಕ್ಕುರುಳುವ ಬಣ್ಣದ ನೀರಿನಲ್ಲಿ ಆತನ ಕಳಾಪೂರ್ಣ ಕಣ್ಣುಗಳನ್ನೇ ಕಂಡಂತಾಗುವುದು. ಪಕ್ಕದಲ್ಲಿ, ವಿರಾಮ ಕುರ್ಚಿಯ ಮೇಲೊರಗಿಕೊಂಡು ಆ ಮಾತು ಈ ಮಾತು ಆಡುವ ಸ್ವಾಮಿಗಳ ಅಸ್ತಿತ್ವದ ಅರಿವೂ ಆಕೆಗಿರುತ್ತಿರಲಿಲ್ಲ. ನಿಮಿಷಗಳ ವರೆಗೆ ಹಾಗೆಯೆ ಮೂಕವಾಗಿ ಕುಳಿತುಕೊಳ್ಳುವಳು. ಆಗಾಗ ಸ್ವಾಮಿಗಳು ಎತ್ತರಿಸಿದ ಸ್ವರದಲ್ಲಿ ಏನನ್ನಾದರೂ ಕೇಳಿದಾಗ 'ಹೂಂ', 'ಇಲ್ಲ', ಇಷ್ಟರಲ್ಲೇ ಆಕೆಯ ಮಾತು ಮುಗಿಯುವುದು. ಸ್ವಾಮಿಗಳಿಗೆ ಸಾಹಜಿಕವಾಗಿಯೆ ಬೇಸರವಾಗುವುದು. ಆಕೆಯ ಮನಸ್ಸಿನಲ್ಲಿ ಏನಿದೆಯೆಂಬುದೇ ಅವರಿಗೆ ತಿಳಿಯದಂತಾಗಿದ್ದಿತು. ತಾನಾಗಿಯೆ, ಸ್ವಸಂತೋಷದಿಂದ ತಮ್ಮೊಡನೆ ಓಡಿಬಂದ ಈಕೆ, ಯಾವುದರಲ್ಲೂ ಆಸಕ್ತಿ ತೋರಿಸದೆ, ಗೊಂಬೆಯಂತೆ ವರ್ತಿಸಲು ಕಾರಣವೇನೆಂಬುದು ಅವರಿಗೆ ಹೊಳೆಯದಂತಾಗಿದ್ದಿತು. ನಿತ್ಯಕರ್ಮಗಳನ್ನೆಲ್ಲ ಆಕೆ ಯಂತ್ರವತ್ತಾಗಿ ನೆರವೇರಿಸುತ್ತಿದ್ದಳು. ಸ್ವಾಮಿಗಳು ಹೊರಟಲ್ಲಿಗೆ ಹೋಗುತ್ತಿದ್ದಳು. ಅವರು ಕೊಡಿಸಿದ ಬಟ್ಟೆ ಬರೆ, ಒಡವೆ ವಸ್ತುಗಳನ್ನೆಲ್ಲ ಮೌನವಾಗಿ ಸ್ವೀಕರಿಸುತ್ತಿದ್ದಳು. ಆದರೆ ಯಾವುದರಲ್ಲೂ ಆಕೆಗೆ ಉತ್ಸಾಹವಿರಲಿಲ್ಲ. ಸ್ವಾಮಿಗಳಿಗೆ ಸೋಜಿಗ. ತನ್ನ ಪತಿಯನ್ನು ಜ್ಞಾಪಿಸಿಕೊಂಡು ಆಕೆ ಕೊರಗುತ್ತಿರಬಹುದೆಂಬ ಯೋಚನೆಯೂ ಅವರ ಬಳಿ ಸುಳಿಯುವಂತಿರಲಿಲ್ಲ. ಅಷ್ಟೊಂದು ಉತ್ಸಾಹದಿಂದ ತಮ್ಮೊಡನೆ ಹೊರಟುಬಂದವಳು, ಮತ್ತೆ ಆ ಗಂಡನೆಂಬುವನನ್ನು ನೆನೆದು ಕೊರಗಲು ಸಾಧ್ಯವೇ ಇಲ್ಲವೆಂದು ಅವರ ವಿಚಾರ. ಹೆಣ್ಣಿನ ಅಂತರಂಗದ ವೈಚಿತ್ರ್ಯಗಳನ್ನು ಪಾಪ, ಆ ಸ್ವಾಮಿಗಳೇನು ಬಲ್ಲರು!

"ಪ್ರಕೃತಿ ಚೆನ್ನಾಗಿಲ್ಲವೆ ಸರಸೂ? ಡಾಕ್ಟರಿಗೆ ತೋರಿಸೋಣವೇ?" ಎಂದೂ ಅವರು ಆಗಾಗ ಕೇಳುವರು.

ಸರಸು ಕಳಾಹೀನ ನಗೆ ನಕ್ಕು—"ಪ್ರಕೃತಿಗೇನಾಗಿದೆ? ಚೆನ್ನಾಗೇ ಇದೇನಲ್ಲ?" ಎಂದು ಹೇಳಿ ಆ ವಿಷಯವನ್ನೆ ಹಾರಿಸಿಬಿಡುವಳು.

ಆಕೆಯ ಜೊತೆಗೆ ಸುಖವಾಗಿ ಕಾಲ ಕಳೆಯಬಹುದೆಂದು ಆಶಿಸಿದ್ದ ಸ್ವಾಮಿಗಳಿಗೆ ದಿನೇದಿನೇ ನಿರಾಶೆಯೆ ಎದುರಾಗತೊಡಗಿದ್ದಿತು. ಆಕೆಯ ಬಗೆಗೆ ಮೊದಲು ಅವರಲ್ಲಿದ್ದ ಅತೀವ ಮೋಹವೂ ಆಕೆಯ ಔದಾಸೀನ್ಯದೆದುರಿಗೆ ನಿಧಾನವಾಗಿ ಕರಗಿಹೋಗಿದ್ದಿತು. ಬೆಂಗಳೂರಿಗೆ ಬಂದು, ಮನೆ ಹೂಡಿ ನೆಲಸಿದರೂ ಆಕೆಯ ವರ್ತನೆಯಲ್ಲಿ ಬದಲಾವಣೆ ಕಂಡುಬಂದಿರಲಿಲ್ಲ. ಲಾಲಬಾಗು, ಕಬ್ಬನ್ ಪಾರ್ಕ್, ಸಿನಿಮಾ—ಯಾವುದರಲ್ಲೂ ಆಕೆಯ ಮನಸ್ಸು ತೊಡಗದಾಗಿದ್ದಿತು. ಈಚೆಗೆ, ಕೆಲ ದಿನಗಳಿಂದ ಆಕೆ ಮನೆ ಬಿಟ್ಟು ಹೊರಕ್ಕೆ ಹೊರಡುವುದನ್ನೂ ನಿಲ್ಲಿಸಿಬಿಟ್ಟದ್ದಳು. ಸ್ವಾಮಿಗಳೊಬ್ಬರೇ ಹೋಗಬೇಕಾಗುತ್ತಿದ್ದಿತು. ಅವರಿಗೂ ಬೇಸರವಾಗಿದ್ದಿತು. ಅಂತೆಯೆ, ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿದ್ದರು.

ಎಂಟು ದಿನಗಳ ಹಿಂದಿನ ಮಾತು. ನಗರಭವನದಲ್ಲಿ ನಡೆಯುತ್ತಿದ್ದ ನೃತ್ಯ ಪ್ರದರ್ಶನವೊಂದನ್ನು ನೋಡಲು ಹೋಗಿದ್ದ ಸ್ವಾಮಿಗಳು ನರ್ತನ ಮೇಳದ ಮುಖ್ಯ ನರ್ತಕಿ ಸ್ನೇಹಲತೆಯನ್ನು ಕಂಡು ಮರುಳಾಗಿದ್ದರು. ಆಕೆ ಇಪ್ಪತ್ತು ಇಪ್ಪತ್ತೊಂದರ ಹರೆಯದ ಹೆಣ್ಣು. ನೃತ್ಯಗಾತಿಯಲ್ಲಿರಬೇಕಾದ ಎಲ್ಲ ಬೆಡಗೂ ಈಕೆಯಲ್ಲಿತ್ತು. ಗಂಡನ ಮನಸ್ಸನ್ನು ಸೂರೆಗೊಳ್ಳುವಂಥ ಮಾಟವಾದ ಶರೀರ, ಮುದ್ದಾದ ಮುಖ, ದೊಡ್ಡದೊಡ್ಡ ಸುಂದರ ಕಣ್ಣು, ಗೆರೆಗೆರೆಯಾದ ಹುಬ್ಬು, ಪ್ರಮಾಣಬದ್ಧವಾದ ಎದೆಕಟ್ಟು ಎಲ್ಲವೂ ಇತ್ತು. ಐದು ರೂಪಾಯಿಯ ಟಿಕೆಟ್ಟು ತೆಗೆದುಕೊಂಡು ಮುಂದಿನ ಸಾಲಿನಲ್ಲಿ ಕುಳಿತು ನರ್ತನವನ್ನು ನೋಡುತ್ತಲಿದ್ದ ಸ್ವಾಮಿಗಳು, ಪಕ್ಕದಲ್ಲಿದ್ದವರೊಂದಿಗೆ ಮಾತು ಬೆಳಸಿ ಆಕೆಯ ವೈಯಕ್ತಿಕ ಇತಿಹಾಸವನ್ನೆಲ್ಲ ತಿಳಿದುಕೊಂಡಿದ್ದರು. "ಸ್ನೇಹಲತಾ ಮಂಗಳೂರಿನವಳು. ಅಂಥ ಪ್ರಸಿದ್ಧ ನರ್ತಕಿಯಲ್ಲವಾದರೂ ಈಚೆಗೆ ಕೊಂಚಕೊಂಚವಾಗಿ ಹೆಸರು ಗಳಿಸುತ್ತಿದ್ದಾಳೆ," ಎಂದು ಪಕ್ಕದಲ್ಲಿದ್ದವರು ಹೇಳಿದ್ದರು. "ಕುಲೀನ ಮನೆತನದ ಸ್ತ್ರೀಯೆಂದು ತೋರುವುದಲ್ಲ?"

ಎಂದು ಸ್ವಾಮಿಗಳು ಬೇಕೆಂತಲೇ ಪ್ರಶ್ನಿಸಿದ್ದರು. ಪಕ್ಕದಲ್ಲಿದ್ದ ವ್ಯಕ್ತಿ ನಗುತ್ತಾ – "ಸ್ನೇಹಲತಾ, ಆಕೆಯ ತಾಯಿ, ತಾಯಿಯ ತಾಯಿ ಎಲ್ಲರೂ ನಿತ್ಯವಧುಗಳ ಮನೆತನದವರು. ಮೊದಲಿನಿಂದಲೂ ಅದೇ ವ್ಯವಸಾಯ ಅವರದು," ಎಂದು ಉತ್ತರವಿತ್ತಿದ್ದರು. ಸ್ವಾಮಿಗಳು ನಿರೀಕ್ಷಿಸಿದ ಉತ್ತರವೂ ಅದೇ ಆಗಿತ್ತು. ನೃತ್ಯ ಪ್ರದರ್ಶನ ಮುಗಿದೊಡನೆಯೆ ಅವರು ರಂಗಮಂಟಪದ ಹಿಂದೆ ಹೋಗಿ ಸ್ನೇಹಲತೆಯನ್ನು ಕಂಡು ಮಾತನಾಡಿಸಿ, ಆಕೆಯ ನೃತ್ಯಕಲೆಯಿಂದ ತಾವು ಮೋಹಿತರಾದುದಾಗಿ ತಿಳಿಸಿ, ಆಕೆಯೊಂದಿಗೆ ಸ್ನೇಹ ಬೆಳಸಿದ್ದರು. ಅವರ ಕೈಬೆರಳುಗಳಲ್ಲಿ ಮಿನುಗುತ್ತಿದ್ದ ವಜ್ರಗಳನ್ನೂ ರೇಶಿಮೆಯ ಬಟ್ಟೆಗಳನ್ನೂ ಕಂಡು ಸ್ನೇಹಲತೆಯೂ ಪ್ರಭಾವಿತಳಾಗಿದ್ದಳು. ಅಂದು ರಾತ್ರಿ ಸ್ವಾಮಿಗಳ ಮೋಟಾರು ಮೊದಲನೆಯ ಸಲ ಆಕೆಯ ಮನೆಗೆ ಭೆಟ್ಟಿ ಕೊಟ್ಟಿದ್ದಿತು.

ಅಂದಿನಿಂದ, ಪ್ರತಿನಿತ್ಯವೂ ಸ್ವಾಮಿಗಳು ಕಂಟೋನ್ಮೆಂಟಿನಲ್ಲಿದ್ದ ಆಕೆಯ ಮನೆಗೆ ಹೋಗಿಬರಲಾರಂಭಿಸಿದ್ದರು. ಸಾಯಂಕಾಲವಾಗುವುದರೊಳಗಾಗಿ ಆಕೆ ಸಿಂಗರಿಸಿಕೊಂಡು ಹೊರಗೆ ಹೊರಡಲು ಸಿದ್ಧಳಾಗಿರುತ್ತಿದ್ದಳು. ಸ್ವಾಮಿಗಳು ಬಂದೊಡನೆಯೆ ಕೊಂಚ ಉಪಾಹಾರ, ಕಾಫಿ. ಆಕೆಯ ಸ್ನೇಹ ಬೆಳೆದಂದಿನಿಂದ ಮದ್ಯದ ರುಚಿಯನ್ನೂ ಅನುಭವಿಸತೊಡಗಿದ್ದರು ಸ್ವಾಮಿಗಳು. ಆಕೆಯ ನೃತ್ಯಕಾರ್ಯಕ್ರಮವಿಲ್ಲದಿದ್ದ ದಿನ ಇಬ್ಬರೂ ಸೇರಿ ಇಂಗ್ಲೀಷು ಸಿನಿಮಾ ನೋಡಲು ಹೋಗುವರು. ಒಂದೊಂದು ದಿನ ಪಾರ್ಕುಗಳಲ್ಲಿ ಸುಖವಿಹಾರ. ರಾತ್ರಿಯಾಗುತ್ತಲೂ ಮತ್ತೆ ಆಕೆಯ ಮನೆ. ಅಲ್ಲಿಯೇ ಊಟವೂ ಆಗುತ್ತಿತ್ತು. ಮದ್ಯದೊಂದಿಗೆ ಮಾಂಸಾಹಾರವನ್ನೂ ರೂಢಿಸಿಕೊಳ್ಳಬೇಕಾಗಿ ಬಂದಿದ್ದಿತು. ಮೊದಲು ಮೊದಲು ಅವರಿಗೆ ಮನಸ್ಸು ಹೇಸುತ್ತಿತ್ತು. ಅಂಥ ಸಂದರ್ಭಗಳಲ್ಲೆಲ್ಲ ಸ್ನೇಹಲತಾ ಹಾಸ್ಯಮಾಡಿ – "ಜಗತ್ತಿನಲ್ಲಿ ಇರುವುದೆಲ್ಲವೂ ಮನುಷ್ಯ ಅನುಭವಿಸಿ ಸುಖಿಸುವುದಕ್ಕಾಗಿಯೆ. ಈ ಪ್ರಪಂಚದಲ್ಲಿ ನಾವು ಬದುಕುವುದು ಎಷ್ಟುದಿನ? ಇರುವವರೆಗೆ ಇರುವುದೆಲ್ಲವನ್ನೂ ಅನುಭವಿಸಿ ಸುಖಿಸಬೇಕು," ಎಂಬುದಾಗಿ ಉಮರಖಯಾಂ ತತ್ವಜ್ಞಾನ ಹೇಳಿ, ಸ್ವಾಮಿಗಳಿಗೆ ಮಾಂಸದ ತಿಂಡಿಗಳನ್ನು ಒತ್ತಾಯದಿಂದ ತಿನ್ನಿಸುವಳು. "ಮದ್ಯವನ್ನೇ ಕಲಿತುದಾಯಿತಂತೆ. ಇನ್ನು ಮಾಂಸ

ಏನು ಮಹಾ!" ಎಂದುಕೊಂಡು ಸ್ವಾಮಿಗಳು ಅವನ್ನು ರೂಢಿ ಮಾಡಿ ಕೊಳ್ಳುತ್ತಿದ್ದರು.

ರಾತ್ರಿ ಹನ್ನೊಂದರವರೆಗೆ ಆಕೆಯೊಂದಿಗಿದ್ದು, ಸ್ವಾಮಿಗಳ ಸವಾರಿ ಬಸವನಗುಡಿಗೆ ಮರಳುತ್ತಿತ್ತು. ಒಂದೊಂದು ದಿನ ಒಂದು, ಎರಡು ಗಂಟೆ ಗಳವರೆಗೂ ಅಲ್ಲಿಯೆ ಇದ್ದುಬಿಡುತ್ತಿದ್ದರು. ಅವರ ದಾರಿ ಕಾಯುತ್ತ ಡ್ರೈವರ್ ಗಫ್ಫೂರ ಕಾರಿನಲ್ಲಿಯೆ ನಿದ್ರೆ ಹೋಗಿರುತ್ತಿದ್ದ. ನಡುರಾತ್ರಿಯಲ್ಲಿ ಸ್ವಾಮಿಗಳು ಆತನನ್ನೆಬ್ಬಿಸಿ ಬಸವನಗುಡಿಗೆ ಹೊರಡುತ್ತಿದ್ದರು. ಆ ಸಂದರ್ಭಗಳಲ್ಲೆಲ್ಲ ತಾವು ಇಂದ್ರಲೋಕದಿಂದ ಭೂಲೋಕಕ್ಕೆ ಮರಳಿ ಬರು ತ್ತಿದ್ದ ಹಾಗೆನ್ನಿಸುತ್ತಿದ್ದಿತು ಅವರಿಗೆ. ಗಫ್ಫೂರನೊಂದಿಗೆ ಅವಳ ವಿಚಾರ ಮಾತನಾಡುತ್ತ — "ಆಕೆಯ ಸಹವಾಸ ಅಂದರೆ ಪುರಾಣಗಳಲ್ಲಿ ವರ್ಣಿಸ ಲ್ಪಟ್ಟ ರಂಭೆ ಊರ್ವಶಿಯರ ಸಹವಾಸವಿದ್ದಂತೆ. ಅಂಥ ಮೋಜು," ಎನ್ನು ವರು. ಆತ ಅರೆನಿದ್ರೆಯಲ್ಲಿ ಸುಮ್ಮನೆ 'ಹಾ ಹೂಂ' ಎಂದು ತಲೆ ಕೊಡಹು ವನು.

"ರಂಭೆ ಊರ್ವಶಿಯರೆಂದರೆ ಯಾರು ಗೊತ್ತೇ ಗಫ್ಫೂರ?"

"ಇಲ್ಲ ಸ್ವಾಮಿ."

"ಅವರು ಇಂದ್ರಲೋಕದ ವೇಶ್ಯೆಯರಪ್ಪ. ಅವರಿಗೆ ಸಮಾನರಾದ ಚೆಲುವೆಯರು ಮೂರು ಲೋಕಗಳಲ್ಲೇ ಬೇರೆ ಯಾರೂ ಇಲ್ಲವಂತೆ."

"ಹೂಂಂಂ."

"ನಮ್ಮ ಸ್ನೇಹಲತೆ ಮಾತ್ರ ಆ ತ್ರಿಲೋಕಸುಂದರಿಯರನ್ನು ಮೀರಿ ಸುತ್ತಾಳೆ. ಏನವಳ ಚೆಲುವು, ಏನವಳ ಯೌವನ........"

"..............."

"ಒಂದು ರಾತ್ರಿಗೆ ಒಂದು ಸಾವಿರ ರೂಪಾಯಿ ಕೊಟ್ಟರೂ ಅದೇನೂ ಹೆಚ್ಚಲ್ಲ ನೋಡು ಗಫ್ಫೂರ. ಸ್ನೇಹಲತೆ ಅಂದರೆ ಬಂಗಾರದ ಲತೆ. ಅವಳ ಸಹವಾಸದಲ್ಲಿದ್ದಾಗ ಪ್ರಪಂಚವೆಲ್ಲವನ್ನೂ ಮರೆತುಬಿಡಬಹುದು, ನೋಡು. ಅದೇ ಆ ಸರಸುವೊ! ಒಂದು ತಿಂಗಳಾಯಿತು ಇತ್ತ ಬಂದು. ಅವಳಿಂದ ಒಂದು ಕಣದಷ್ಟು ಸುಖವೂ ದೊರೆಯುಲಿಲ್ಲ. ಯಾವಾಗಲೂ ಸಪ್ಪೆಮೋರೆ. ಉತ್ಸಾಹವಿಲ್ಲ. ಉಲ್ಲಾಸವಿಲ್ಲ. ನಮ್ಮ ಸ್ನೇಹಲತೆಯಾದರೋ, ಉಲ್ಲಾಸದ

ಮೂರ್ತಿ. ಯಾವಾಗಲೂ ನಗುತ್ತಲೇ ಇರುತ್ತಾಳೆ, ಯಾವಾಗಲೂ ಕುಣಿಯುತ್ತಲೇ ಇರುತ್ತಾಳೆ. ಹೆಣ್ಣು ಅಂದರೆ ಹೀಗಿರಬೇಕು, ಅಲ್ಲವೇನೋ ಗಫೂರ ?"

"ಹಂ....ಹಂ....ಹೌದು ಸ್ವಾಮಿಾ," ಎನ್ನುವನು ಗಫೂರ.

ಸ್ವಾಮಿಗಳು ಮನೆಗೆ ಬರುವುದರೊಳಗಾಗಿ ಸರಸು ದೀಪವನ್ನಾರಿಸಿ ಮಲಗಿಕೊಂಡಿರುತ್ತಿದ್ದಳು. ಮಲಗಿಕೊಂಡಿರುವುದೆಷ್ಟೊ ಅಷ್ಟೆ, ನಿದ್ರೆಯೇನೂ ಬರುತ್ತಿರಲಿಲ್ಲ. ಸ್ವಾಮಿಗಳು ಬಾಗಿಲು ನೂಕಿ ಕೊಟಡಿಯೊಳಕ್ಕೆ ಪ್ರವೇಶಿಸುತ್ತಲೂ ಮದ್ಯದ ಉಗ್ರ ವಾಸನೆ ಹರಡುತ್ತಿತ್ತು. ದೀಪವನ್ನಂಟಿಸದೆ ಅವರು ಹಾಗೆಯೆ ಬಂದು ಮಂಚದ ಮೇಲೆ ಬಿದ್ದುಕೊಳ್ಳುತ್ತಿದ್ದರು. ಮದ್ಯದ ವಾಸನೆ ಅತ್ಯುಗ್ರವಾಗುತ್ತಿತ್ತು. ಸರಸು ಕಿಟಕಿಯ ಕಡೆಗೆ ಮುಖ ತಿರುಗಿಸಿ ಮಲಗಿಕೊಳ್ಳುವಳು. ದಣಿದು ಬಂದ ಸ್ವಾಮಿಗಳೂ ಗೊರಕೆ ಹೊಡೆಯುತ್ತ ನಿದ್ರಾಧೀನರಾಗುವರು.

"ಚಹ, ಸಿಗರೇಟು ಅಷ್ಟೇ ಸಾಲಲಿಲ್ಲವೇನೊ. ಈಗ ಮದ್ಯವನ್ನೂ ಸುರು ಮಾಡಿದಿರಾ ?" ಎಂದು ಒಂದು ಬೆಳಿಗ್ಗೆ ಆಕೆ ಕೇಳಿದ್ದಳು.

ಅವರು ವಿಲಕ್ಷಣವಾಗಿ ನಗುತ್ತ – "ಯಾವ ಕಟ್ಟುನಿಟ್ಟುಗಳಿಗೂ ಒಳಗಾಗಕೂಡದೆಂದು ನಿರ್ಧರಿಸಿದ ಮೇಲೆ ಇನ್ನು ಮದ್ಯದ ಮಾತೇನು !" ಎಂದು ನುಡಿದಿದ್ದರು. "ಸ್ವಾಮಿಗಳು ಸಾರಾಯಿ ಕುಡಿಯುವದಿಲ್ಲವೆಂದು ನೀನು ತಿಳಿದಿದ್ದೆಯಾ ? ಎಂಥ ಹುಚ್ಚು ಕಲ್ಪನೆ. ಪೂರ್ವಕಾಲದ ಋಷಿಮುನಿಗಳೂ ಸಹ ಕುಡಿಯುತ್ತಿದ್ದರು. ಹಿಂದೂಗಳ ದೇವ ದೇವತೆಗಳೆಲ್ಲಾ ಕುಡುಕರೇ. ಎಂದಮೇಲೆ ನಾವಾದರೂ ಯಾಕೆ ಬಿಡಬೇಕು ?"

"ರಾತ್ರಿಯೆಲ್ಲಾ ಎಲ್ಲಿರುತ್ತೀರಿ ?" ಎಂದೂ ಆಕೆ ಒಂದು ಸಲ ಪ್ರಶ್ನಿಸಿದ್ದಳು.

"ಎಲ್ಲಿ ನನಗೆ ಸುಖ ಸಿಕ್ಕುವದೋ, ಅಲ್ಲಿ. ನಿನ್ನಿಂದ ಸ್ವಲ್ಪವಾದರೂ ಸುಖ ದೊರೆಯುತ್ತಿದ್ದಲ್ಲಿ ನಾನು ಬೇರೆಯವರನ್ನು ಹುಡುಕುತ್ತ ಹೋಗುತ್ತಿರಲಿಲ್ಲ. ನಿನಗೆ ಈ ಔದಾಸೀನ್ಯದ ರೋಗ ಬಡಿದುಕೊಂಡಿತು........"

ಸರಸು ಮತ್ತೆ ಅಂಥ ಪ್ರಶ್ನೆ ಕೇಳಿರಲಿಲ್ಲ. ಯಂತ್ರವತ್ತಾಗಿ ಆಕೆಯ ದಿನಚರಿ ಸಾಗಿದ್ದಿತು.

ಸರಸುವಿನ ಈ ಔದಾಸೀನ್ಯವನ್ನು ಕಂಡು ಅಡುಗೆಯ ರಂಗಮ್ಮನಿಗೆ ಅಚ್ಚರಿಯಾಗದಿರುತ್ತಿರಲಿಲ್ಲ. ಈ ಹುಡುಗಿಗೇನು ವ್ಯಥೆಯೊ, ಏನು ದುಃಖವೊ, ಇಷ್ಟೆಲ್ಲ ಸಂಪತ್ತು ಇದ್ದರೂ ಈಕೆ ಯಾವುದರಲ್ಲೂ ಆಸಕ್ತಿ ವಹಿಸದೆ ವಿರಾಗಿಣಿಯಂತೆ ವರ್ತಿಸಲು ಏನು ಕಾರಣವೊ ಎಂದು ಆಕೆ ಚಿಂತಿಸುವಳು. ಸ್ವಾಮಿಗಳು – ಸರಸು ಇಬ್ಬರೂ ಗಂಡಹೆಂಡಿರೆಂದೇ ಆಕೆಯ ನಂಬುಗೆ. ಭಾರಿ ಸಿರಿವಂತರಾದ ಅವರು ಒಂದೆರಡು ತಿಂಗಳುಗಳ ಮಟ್ಟಿಗೆ ಸುಖವಾಗಿ ಕಾಲ ಕಳೆಯಲೆಂದು ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬಂದಿರುವರೆಂದೇ ಆಕೆ ತಿಳಿದುಕೊಂಡಿದ್ದಳು.

ದಿನ ಕಳೆದ ಹಾಗೆಲ್ಲ ಸರಸು ಕೃಶಳಾಗತೊಡಗಿದುದನ್ನು ಕಂಡಾಗ ರಂಗಮ್ಮ ಕಳವಳಗೊಳ್ಳುವಳು. ಸರಸು ಮನಸ್ಸುಗೊಟ್ಟು ಊಟಮಾಡುತ್ತಲೂ ಇರಲಿಲ್ಲ. ತಿಂಡಿಗಳ ವಿಚಾರವೂ ಹಾಗೆಯೆ. ದೋಸೆ, ಉಪ್ಪಿಟ್ಟು, ಕೇಸರಿಭಾತು, ಬೋಂಡ, ವಡೆ – ಯಾವುದನ್ನೂ ಮುಟ್ಟುತ್ತಿರಲಿಲ್ಲ ಆಕೆ. ಕಾಫಿಯನ್ನು ಮಾತ್ರ ಗಟಗಟನೆ ಕುಡಿದು ಎದ್ದು ಬಿಡುವಳು. "ಯಾಕೆ ತಾಯಿಾ, ಹೀಗೆ ಮಾಡುತ್ತೀರಿ? ಏನೂ ತಿನ್ನೋದೇ ಇಲ್ಲವಲ್ಲಾ?" ಎಂದು ರಂಗಮ್ಮ ವಿಚಾರಿಸಿದಾಗ ಶುಷ್ಕ ನಗೆ ನಕ್ಕು, "ಏನೋ ಅಮ್ಮ, ಹಸಿವೇ ಇಲ್ಲ," ಎಂದು ನುಡಿದು ನೇರವಾಗಿ ಮಹಡಿಗೆ ಹೊರಟು ಹೋಗುವಳು.

ಅಂದು ರಾತ್ರಿ ಹತ್ತು ಗಂಟೆಯಾದರೂ ಆಕೆ ಇನ್ನೂ ಊಟಕ್ಕೆ ಎದ್ದಿರಲಿಲ್ಲ. ರೇಡಿಯೊ ಹಚ್ಚಿಕೊಂಡು ಕುಳಿತಿದ್ದವಳು ಹಾಗೆಯೆ ಕುಳಿತುಬಿಟ್ಟಿದ್ದಳು. ನಡುವೆ ರಂಗಮ್ಮ ಎರಡು ಮೂರು ಬಾರಿ ಬಂದು ಊಟಕ್ಕೆ ಕರೆದರೂ ಸರಸುವಿಗೆ ಅತ್ತ ಲಕ್ಷ್ಯ ಹೊರಳಿರಲಿಲ್ಲ.

ಪಿಟೀಲಿನ ನಾದತರಂಗ ಹೊರಹೊಮ್ಮುತಿತ್ತು ರೇಡಿಯೋದಿಂದ.

ಸರಸುವಿನ ಕಣ್ಣುಗಳಿಂದ ಕಂಬನಿಗಳುದುರುತ್ತಲಿದ್ದುವು.

ಕಂಬನಿಗಳಿಂದಾಗಿ ಮಸುಕು ಮಸುಕಾದ ಕಣ್ಣಗೊಂಬೆಗಳೆದುರಿಗೆ ಶಿವಮೂರ್ತಿಯ ಮುಖ ಮೂಡಿದ್ದಿತು.

—ತಮ್ಮ ಕೊಟಡಿಯಲ್ಲಿ ಕುಳಿತುಕೊಂಡು ಹೀಗೆಯೆ ಪಿಟೀಲು ಬಾರಿಸುತ್ತಿದ್ದರವರು. ಇದಕ್ಕೂ ಚೆನ್ನಾಗಿ ಬಾರಿಸುತ್ತಿದ್ದರು. ತನ್ನ ಕೊಟಡಿಯಲ್ಲಿ ಮಂಚದ ಮೇಲೊರಗಿಕೊಂಡಿದ್ದ ಹಾಗೆ ತಾನು ಆ ನಾದತರಂಗದಲ್ಲಿ

ಚಿತ್ತವನ್ನು ಮುಳುಗಿಸುತ್ತಿದ್ದಳು. ತನ್ನ ಮನಸ್ಸನ್ನು ಅವರೆಡೆಗೆ ಸೆಳೆದು ಅವರೊಂದಿಗೆ ತನ್ನನ್ನು ಒಂದುಗೂಡಿಸಲು ಕಾರಣವಾದ ಆ ನಾದ ತರಂಗ....

"ಯಾಕಮ್ಮ, ಅಳುತ್ತೀರಿ?" ಮತ್ತೆ ಮಹಡಿಗೆ ಬಂದಿದ್ದ ರಂಗಮ್ಮ ಕನಿಕರದಿಂದ ಪ್ರಶ್ನಿಸುತ್ತಿದ್ದಳು.

ತಾನೇನನ್ನು ಆಡುತ್ತಿರುವೆನೆಂಬುದರ ಅರಿವಿಲ್ಲದೆ ಸರಸು ಬಿಕ್ಕುತ್ತ ಬಿಕ್ಕುತ್ತ ಹೇಳಿದಳು: "ಅವರೂ ಹೀಗೇ ಬಾರಿಸುತ್ತಿದ್ದರು ರಂಗಮ್ಮ. ಇದಕ್ಕೂ ಚೆನ್ನಾಗಿ ಬಾರಿಸುತ್ತಿದ್ದರು."

"ಯಾರು ತಾಯಿ?"

"ನಮ್ಮವರು."

"ಈಗ ಬಿಟ್ಟುಬಿಟ್ಟಿರುವರೇನಮ್ಮ ಬಾರಿಸೋದನ್ನ?"

ರಂಗಮ್ಮನ ಆ ಪ್ರಶ್ನೆ ಸರಸುವನ್ನು ಭಾವಲೋಕದಿಂದ ಈಚೆಗೆಳೆಯಿತು.

[೨೪]

ಆ ರಾತ್ರಿ ಸ್ವಾಮಿಗಳು ಮನೆಗೆ ಬರಲೇ ಇಲ್ಲ.

ಮಾರನೆಯ ದಿನ ಬೆಳಿಗ್ಗೆ ಅವರ ಮೋಟಾರು ಬಂದು ಮನೆಯೆದುರಿಗೆ ನಿಂತುಕೊಂಡಾಗ ಸರಸು ಇನ್ನೂ ಹಾಸುಗೆ ಬಿಟ್ಟು ಎದ್ದಿರಲಿಲ್ಲ.

ಮೆಟ್ಟಿಲುಗಳ ಮೇಲೆ ಅಡಿಗಳ ಸದ್ದಾಗತೊಡಗುತ್ತಲೂ ಆಕೆಗೆ ಎಚ್ಚರವಾಯಿತು. ಕಣ್ಣುಜ್ಜಿಕೊಳ್ಳುತ್ತ ಆಕೆ ಏಳುತ್ತಿದ್ದ ಹಾಗೆಯೆ ಕೊಟಡಿಯ ಬಾಗಿಲು ತೆರೆಯಿತು. ಸ್ವಾಮಿಗಳೇ ಬಂದಿರಬೇಕೆಂದು ಬಗೆದು ಆಕೆ ಕಿಟಕಿಯಿಂದಾಚೆಗೆ ದೃಷ್ಟಿ ಹೊರಳಿಸುತ್ತಲಿದ್ದಳು. ಅಷ್ಟರಲ್ಲಿ ಹಸಿರು ಬಣ್ಣದ ಸೀರೆಯ ಸೆರಗು ಆಕೆಯ ದೃಷ್ಟಿಯನ್ನೆಳೆಯಿತು.

ತಲೆದಿಂಬುಗಳ ಮೇಲೆ ಮೊಳಕೈ ಊರಿ ಸರಸು ಕೊಂಚ ಮೇಲಕ್ಕೆದ್ದು ಕುಳಿತಳು. ಬಾಗಿಲಿನಲ್ಲಿ ಬಂದಿದ್ದ ಹಸಿರು ಸೀರೆಯವಳು ಇನ್ನೂ ಯುವತಿ. ಇಪ್ಪತ್ತೈದು ಇಪ್ಪತ್ತಾರು ವರ್ಷ ವಯಸ್ಸಿನವಳಿರಬಹುದು. ಶರೀರ ಕೊಂಚ ಸ್ಥೂಲವಾಗಿದ್ದರೂ ಮುಖ ಆಕರ್ಷಕವಾಗಿದ್ದಿತು. ಕೊರಳಿನಲ್ಲಿ ಚಿನ್ನದ

ಒಡವೆಗಳೂ, ಕೈಗಳಲ್ಲಿ ಚಿನ್ನದ ಬಳೆಗಳೂ ಎದ್ದು ಕಾಣುತ್ತಿದ್ದುವು. ಸೊಂಟದಲ್ಲಿದ್ದ ಬಂಗಾರದ ಡಾಬೂ ಕಣ್ಣು ಸೆಳೆಯುವಂತಿದ್ದಿತು.

ಆಕೆಯ ಹಿಂದೆ ಹಿಂದೆ ಸ್ವಾಮಿಗಳೂ ಒಳಕ್ಕೆ ಬಂದರು. ಅವರ ಎಡಗೈಯ ಕಿರುಬೆರಳನ್ನು ಹಿಡಿದುಕೊಂಡು ನಾಲ್ಕೈದು ವರ್ಷದ ಹುಡುಗನೊಬ್ಬನೂ ಬರುತ್ತಿದ್ದುದು ಕಾಣಿಸಿತು.

"ಕೂತುಕೋ ಪಾರ್ವತಿ. ಈಕೆಯೆ ನೋಡು ಸರಸೂ," ಎಂದು ಆ ಯುವತಿಯನ್ನುದ್ದೇಶಿಸಿ ನುಡಿದು, ಸ್ವಾಮಿಗಳು ಸರಸುವಿನ ಕಡೆಗೆ ಹೊರಳಿ "ಈಕೆ ನಮ್ಮೂರಿನ ಶ್ರೀಮಂತರೊಬ್ಬರ ಮಗಳು, ಪಾರ್ವತೀದೇವಿ. ಈತ ಈಕೆಯ ಮಗ ಸಿದ್ಧಪ್ರಸಾದ. ಈಕೆಗೆ ಕಣ್ಣು ಸ್ವಲ್ಪ ಮಂದವಾಗಿದೆಯಾದ್ದರಿಂದ ಡಾಕ್ಟರಿಗೆ ತೋರಿಸಲು ಬಂದಿದ್ದಾರೆ. ನಿನ್ನೆ ಸಂಜೆ ಲಾಲಬಾಗಿನಲ್ಲಿ ಭೆಟ್ಟಿಯಾಯಿತು. ಹೋಟಲಲ್ಲಿ ಇಳಿದುಕೊಂಡಿದ್ದರು. ನಮ್ಮದೇ ಆದ ಮನೆಯಿರುವಾಗ ನಮ್ಮವರೇ ಆದ ಇವರು ಹೋಟಲಲ್ಲಿ ಇಳಿದುಕೊಂಡಿರುವುದೇ? ಅಂತೆಯೆ, ಕರೆದುಕೊಂಡು ಬಂದೆವು. ಇವರ ಮನೆಯವರಿಗೂ ನಮಗೂ ಬಹಳ ದಿನಗಳ ಪರಿಚಯ. ಪಾರ್ವತಿ ನಮ್ಮ ಬಾಲ್ಯದ ಗೆಳತಿ. ನೀವಿಬ್ಬರೂ ಗೆಳತಿಯರಾಗಿ ಇರಬೇಕು," ಎಂದು ಹೇಳಿ, ಆ ಬಾಲಕನನ್ನೆತ್ತಿ ಸರಸುವಿನ ಪಕ್ಕದಲ್ಲಿ ಕೂಡ್ರಿಸಿದರು.

ಆ ಬಾಲಕನ ಬೆನ್ನು ಸವರುತ್ತ ಸರಸು ಪ್ರಶ್ನಿಸಿದಳು:

"ಇವನ ತಂದೆ ಎಲ್ಲಿದ್ದಾರೆ?"

"ತಂದೆ? ಅವರ ತಲೆ ನೆಟ್ಟಗಿಲ್ಲ."

"ಅಂದರೆ? ಹುಚ್ಚು ಹಿಡಿದಿದೆಯೊ ಏನು? ಪಾಪ! ಎಲ್ಲಿದ್ದಾರೆ ಅವರು?"

ಸ್ವಾಮಿಗಳು ನಗುತ್ತ ಉತ್ತರವಿತ್ತರು: "ಹುಚ್ಚರು ಇನ್ನೆಲ್ಲಿ ಇರುತ್ತಾರೆ? ಹುಚ್ಚರಾಸ್ಪತ್ರೆಯಲ್ಲೇ ತಾನೆ?"

ಸೋಫಾದಲ್ಲಿ ಒರಗಿದ್ದ ಪಾರ್ವತಿಯೂ ಆ ಮಾತಿನಿಂದಾಗಿ ಮನಸೋಕ್ತವಾಗಿ ನಕ್ಕಳು. ಸರಸುವಿಗೆ ನಗು ಬರುವಂತಿರಲಿಲ್ಲ. ಆಕೆ ಮತ್ತೆ ಕೇಳಿದಳು:

"ಎಷ್ಟು ದಿನವಾಯಿತು ಆಸ್ಪತ್ರೆಗೆ ಹಾಕಿ?"

"ನಿನ್ನೆಯೆ."

"ನಿನ್ನೆಯೇ? ನೀವೂ ಹೋಗಿದ್ದಿರಾ ಆಸ್ಪತ್ರೆಗೆ?"

"ಹೌದು. ಹೋಗಲೇಬೇಕಲ್ಲ? ನಮಗೂ ಇವರಿಗೂ ಬಹಳ ವಿಶ್ವಾಸ. ಅಳಿಯನನ್ನು ಆಸ್ಪತ್ರೆಗೆ ಸೇರಿಸಲೆಂದು ಪಾರ್ವತಿಯ ತಂದೆಯೂ ಬಂದಿದ್ದರು. ಅವರೊಂದಿಗೆ ನಾವೂ ಹೋಗಿಬಂದೆವು."

"ಈಗ ಅವರು ಎಲ್ಲಿದ್ದಾರೆ?"

"ಅವರಿಗೆ ಊರಲ್ಲಿ ಕೈತುಂಬಾ ಕೆಲಸಗಳು. ನಿನ್ನೆ ರಾತ್ರಿಯ ರೈಲಿಗೇ ಹೊರಟುಹೋದರು."

"ಅಪ್ಪ ಸ್ವಾಮಿನ್ನ ಹೊಡೆಯಲು ಬಂದಿದ್ದ.... ಹೀಗೆ ಹೊಡೆಯಲು ಬಂದಿದ್ದ...." ಎಂದು ನುಡಿದು ಕೈತಟ್ಟಿ ಕೇಕೆಹಾಕಿದ, ಸಿದ್ಧಪ್ರಸಾದ.

ಸ್ವಾಮಿಗಳು ದಿಗಿಲುಗೊಂಡರು. ಆದರೂ ಅದನ್ನು ಹೊರಗೆ ತೋರಿಸದೆ, "ಮೊದಲೇ ಹುಚ್ಚ, ಹೊಡೆಯಲು ಬರದೆ ಏನು ಮಾಡಿಯಾನು? ಪ್ರಾಣ ತೆಗೆದುಕೊಂಡರೂ ತೆಗೆದುಕೊಂಡನೇ. ಕಡೆಗೊಮ್ಮೆ ಆಸ್ಪತ್ರೆಗೆ ಹಾಕಿದ್ದು ನೆಟ್ಟಗಾಯಿತು. ಏನೆನ್ನುವೆ ಪಾರ್ವತೀ?" ಎಂದರು.

ಆಕೆ ನಗುತ್ತಾ ಸ್ವಾಮಿಗಳನ್ನು ಓರೆನೋಟದಿಂದ ದಿಟ್ಟಿಸತೊಡಗಿದಳು.

ಸ್ನಾನದ ನೆವದಿಂದ ಸರಸು ಕೆಳಕ್ಕಿಳಿದು ಹೋದಳು. ಅವಳ ಬದುಕಿನ ಹೊತ್ತಿಗೆಯಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಗುವ ಚಿಹ್ನೆಗಳು ಕಾಣಿಸಿಕೊಳ್ಳುತ್ತಿದ್ದುವು. ಪಾರ್ವತಿಗೂ ಸ್ವಾಮಿಗಳಿಗೂ ಬಹುದಿನಗಳಿಂದ ರಹಸ್ಯ ಸಂಬಂಧವಿದ್ದುದು ಸ್ಪಷ್ಟವಾಗಿ ಗೊತ್ತಾಗುತ್ತಿದ್ದಿತು. ಆ ಮಂದ ಹಾಸ, ಆ ಓರೆನೋಟ! ಬಾಲಕ ಸಿದ್ಧಪ್ರಸಾದನ ಮುಖದ ಮೇಲೆ ಸ್ವಾಮಿಗಳ ಮುಖಲಕ್ಷಣಗಳೂ ಕಾಣಿಸುತ್ತಿದ್ದುವು. ಅವರ ಪ್ರಸಾದದ ಫಲವಾಗಿಯೆ ಆ ಬಾಲಕ ಜನಿಸಿರಬೇಕೆಂದೂ ಸರಸುವಿಗೆನ್ನಿಸಿತ್ತು. ಪಾರ್ವತಿಯ ಗಂಡನಿಗೆ ತಲೆ ಕೆಡುವುದಕ್ಕೂ ಈ ಘಟನೆಯೆ ಕಾರಣವಾಗಿರಬಹುದೇನೊ. ಆತ ಸ್ವಾಮಿಯನ್ನು ಹೊಡೆಯಲು ಹೋಗಿದ್ದನಂತೆ. ಅಂಥದೊಂದು ಮಹತ್ವದ ಕಾರಣವಿರದಿದ್ದಲ್ಲಿ ಹುಚ್ಚರೂ ಸಹ ಯಾರ ಮೇಲೂ ಕೈ ಮಾಡುವದಿಲ್ಲ. ಹೌದು, ಹಾಗೇ ಇರಬೇಕು. ಸ್ವಾಮಿಗಳಿಗಿರುವ ಅನೇಕ ಪ್ರೇಯಸಿಯರಲ್ಲಿ

ಈ ಪಾರ್ವತಿಯೂ ಒಬ್ಬಳಾಗಿರಬೇಕು. ಆಕೆ ಅವರ ಬಾಲ್ಯದ ಗೆಳತಿಯಾಗಿರುವುದು ಬೇರೆ. ಅಂತೂ ಆಕೆ ಅವರಿಗೆ ಅತ್ಯಂತ ಪ್ರೀತ್ಯಾಸ್ಪದಳಾಗಿರಬಹುದು. ನಿನ್ನೆ ರಾತ್ರಿ ಆಕೆಯೊಂದಿಗೆ ಹೋಟಲಿನಲ್ಲಿಯೇ ಇದ್ದರೇನೊ. ಆಕೆಯ ತಂದೆ ಬೇರೆ ಇವರಿಬ್ಬರನ್ನೂ ಬಿಟ್ಟು, ರಾತ್ರಿಯ ರೈಲಿಗೇ ಹೊರಟು ಹೋದರಂತೆ. ಹಾಗಾದರೆ, ಇವರಿಬ್ಬರೂ....ಮುಂದೆ ಏನೇನಾಗಲಿದೆಯೊ, ಇಂದು ರಾತ್ರಿ ತಾನು ಎಲ್ಲಿ ಮಲಗಿಕೊಳ್ಳಬೇಕು? ಮಹಡಿಯ ಮೇಲಿನ ಶಯ್ಯಾಗಾರವನ್ನು ಅವರಿಗಾಗಿ ಬಿಟ್ಟುಬಿಡಬೇಕಾಗುವುದೊ ಏನೊ. ಕೆಳಗಿನ ಕೊಟಡಿಯಲ್ಲಿ ಮಲಗಿಕೊಂಡಿರುವಂತೆ ಸ್ವಾಮಿಗಳು ತನಗೆ ಹೇಳುವರೊ ಏನೊ— ಎಂದೆಲ್ಲ ಯೋಚಿಸುತ್ತ ಸ್ನಾನದ ಕೊಟಡಿಯಲ್ಲಿ ಅಡಿಯಿರಿಸಿದಳು.

ಮುಂದೇನು ನಡೆಯುವುದೆಂಬುದನ್ನು ತಿಳಿದುಕೊಳ್ಳಲು ಆಕೆ ಬಹಳ ಹೊತ್ತು ಕಾಯಬೇಕಾಗಲಿಲ್ಲ. ಅದೇ ದಿನ ಮಧ್ಯಾಹ್ನದ ರೈಲಿಗೆ ಸ್ವಾಮಿಗಳು ಮದರಾಸಿಗೆ ಹೊರಟು ನಿಂತರು.

ಕೆಳಗಡೆ, ಅಡುಗೆಯ ಮನೆಯಲ್ಲಿ ಪಾರ್ವತಿಯೂ ಆಕೆಯ ಮಗನೂ ಊಟ ಮಾಡುತ್ತಿದ್ದರು. ಮಹಡಿಯ ಮೇಲೆ ಸ್ವಾಮಿಗಳು, ಸರಸು ಇಬ್ಬರೇ ಇದ್ದರು. ಬಟ್ಟೆಗಳನ್ನು ಸೂಟ್‌ಕೇಸಿಗೆ ತುಂಬುತ್ತಾ ಸ್ವಾಮಿಗಳು ಹೇಳುತ್ತಿದ್ದರು:

"ಬೆಂಗಳೂರು ಡಾಕ್ಟರಿಗಿಂತ ಮದರಾಸು ಡಾಕ್ಟರರೇ ವಾಸಿ ಅಂತ ಅಲ್ಲಿಗೆ ಹೊರಡಬೇಕಾಯಿತು ಸರಸೂ."

"ಹೌದು. ಅರ್ಥವಾಯಿತು," ಎಂದು ಸಮಾಧಾನದಿಂದಲೇ ನುಡಿದಳು ಸರಸು.

"ನಿನ್ನನ್ನೂ ಕರೆದೊಯ್ಯಬಹುದಿತ್ತು. ಆದರೆ, ನಿನಗೆ ಯಾವುದರಲ್ಲೂ ಉತ್ಸಾಹವಿಲ್ಲ. ಪ್ರವಾಸದಿಂದಾಗಿ ಮತ್ತಷ್ಟು ಬೇಸರವಾಗಬಾರದಲ್ಲ?"

"ನನಗೂ ಬೇಸರು. ನಿಮಗೂ ಬೇಸರು. ನಿಮಗೂ ಅಂದರೆ ನಿಮ್ಮಿಬ್ಬರಿಗೂ."

"ಅಹ್ಹಾಂ ಹೆಂ," ಎಂದು ಬೆಚ್ಚಿಬಿದ್ದರು ಸ್ವಾಮಿ.

"ನೀವಿಬ್ಬರೂ ಹೀಗೆ ಕೂಡಿ ಮೋಜಿನಿಂದ ತಿರುಗಾಡುವ ಪ್ರಸಂಗ ಇದುವರೆಗೂ ಬಂದಿರಲಿಲ್ಲವಷ್ಟೆ? ಈಗ ಬಂದಿವೆ. ಸುಖವಾಗಿ ಅಲೆದು ಬರ್ರಿ."

ರೇಶಿಮೆ ಅಂಗಿಯನ್ನು ಮಡಿಕೆ ಮಾಡುತ್ತ ಸ್ವಾಮಿಗಳೆಂದರು :

"ನಿನ್ನ ಬಗ್ಗೆ ನಿಜವಾಗಿಯೂ ನನಗೆ ವ್ಯಸನವಾಗುತ್ತದೆ ಸರಸೂ. ನಿನಗೆ ಸ್ವಲ್ಪವಾದರೂ ಸಂತೋಷವಾಗಲೆಂದು ನಿನ್ನನ್ನಿತ್ತ ಕರೆದುಕೊಂಡು ಬಂದೆ. ಸುಖಪಡುವುದು ನಿನ್ನ ಹಣೆಯಲ್ಲೇ ಬರೆದಿಲ್ಲವೆಂದು ತೋರುತ್ತದೆ. ನಾನಾದರೂ ಏನು ಮಾಡಲಿ ?"

"ನನಗೆ ಸುಖವಾಗಲೆಂದೇ ಇತ್ತ ಕರೆದುತಂದಿರಾ ? "

" ಮತ್ತೆ ? ಬೇರೆ ಸ್ವಾರ್ಥವೇನಿತ್ತು ನನಗೆ ? ನಿನಗೂ ಸುಖವಾಗಬೇಕು, ನಿನ್ನಿಂದಾಗಿ ನನಗೂ ಸುಖವಾಗಬೇಕು, ಅಂತಲೇ ಇಂಥ ಗೊಂದಲಕ್ಕೆ ಬಿದ್ದದ್ದು ತಾನೇ ? ಇಲ್ಲಿ ಬಂದ ಬಳಿಕ ಎಲ್ಲಾ ವಿಚಿತ್ರ. ನಿನಗೂ ಸುಖವಿಲ್ಲ, ನಿನ್ನಿಂದಾಗಿ ನನಗೂ ಸುಖವಿಲ್ಲ."

"ಈಗ ಆ ಪಾರ್ವತಿಗೂ ಸುಖ ದೊರೆಯಲೆಂದೇ ಅವಳೊಂದಿಗೆ ಹೊರಟಿರುವಿರೇನು ?"

"ಅವಳಿಗೂ ಸುಖ ದೊರೆಯಬೇಕು. ಅವಳೊಂದಿಗೆ ನನಗೂ. ಸುಳ್ಳೇಕೆ ಹೇಳಬೇಕು ? ನಿನ್ನಿಂದ ಸುಖ ದೊರೆಯದಂತಾದ ಬಳಿಕ ಇನ್ನೊಬ್ಬಳಿಂದಾದರೂ ದೊರಕಿಸಲು ಪ್ರಯತ್ನಿಸುವದರಲ್ಲಿ ತಪ್ಪೇನೂ ಇಲ್ಲವಷ್ಟೆ ?"

"ಹೀಗೆ ಅವಳೊಂದಿಗೆ ಸುಖ ಪಡೆಯತೊಡಗಿ ಬಹಳ ವರ್ಷಗಳಾಗಿರಬಹುದಲ್ಲ ?"

"ಸರಿಯಾಗಿ ಊಹಿಸಿದೆ. ಅನೇಕ ವರ್ಷಗಳಿಂದ ಆಕೆಗೂ ನನಗೂ ಸಂಬಂಧವಿದೆ."

"ಆ ಹುಡುಗ – ಆ ಸಿದ್ಧ ಪ್ರಸಾದ...."

"ಹೌದು. ಅದೂ ನನ್ನದೇ ಪ್ರಸಾದ. ಸುಮ್ಮನೆ ಯಾಕೆ ಅಲ್ಲಗಳೆಯಬೇಕು ? ಪಾರ್ವತಿಗೂ ನನಗೂ ಚಿಕ್ಕಂದಿನಿಂದ ಪರಿಚಯವಿದೆಯೆಂದು ಆಗಲೆ ಹೇಳಿದ್ದೆನಲ್ಲ. ಆಕೆಗೆ ಮದುವೆಯಾಯಿತು. ನಾನು ಸ್ವಾಮಿಯಾದೆ. ತಾರುಣ್ಯದಲ್ಲಿ ಮತ್ತೆ ನಮ್ಮಿಬ್ಬರಿಗೂ ಸಂಬಂಧ ಬಂತು. ಆಕೆಯ ದುರ್ದೈವ, ನನ್ನ ಸುದೈವ. ಹುಚ್ಚನಂತಿದ್ದ ಗಂಡನೊಬ್ಬ ಆಕೆಗೆ ಗಂಟುಬಿದ್ದ. ಅಂಥವನೊಂದಿಗೆ ನಮ್ಮ ಪಾರ್ವತಿಯಂಥ ಚೆಲುವೆ ಬಾಳುವೆ

ಮಾಡುವದಾದರೂ ಹೇಗೆ ಸಾಧ್ಯ, ನೀನೇ ಹೇಳು. ನಾನು ಆಗಾಗ ಊರಿಗೆ ಹೋಗುತ್ತಿದ್ದೆ. ಹೋದಾಗಲೆಲ್ಲಾ ಅವರ ಮನೆಯಲ್ಲೇ – ಪಾರ್ವತಿಯ ತವರುಮನೆಯಲ್ಲೇ ವಾಸ. ಆಕೆಯೂ ಅಲ್ಲಿಯೇ ಇದ್ದಳು. ಆಕೆಯ ತಂದೆತಾಯಿಗಳಿಗೂ ಗೊತ್ತಿದೆ ನಮ್ಮ ಸಂಬಂಧ. ಅವರ ಅನುಮತಿಯಿಂದಲೇ ಇದೆಲ್ಲಾ ನಡೆದಿದೆಯೆಂದೂ ಹೇಳಬಹುದು."

"ಎಂಥ ತಂದೆ ತಾಯಿಗಳೋ!"

"ನಿಜವಾದ ತಂದೆತಾಯಿ ಅಂದರೆ ಅವರೇ. ಎಲ್ಲರೂ ನಿಮ್ಮ ತಂದೆಯ ಹಾಗೇ ಇರುತ್ತಾರೆಯೆ? ತಮ್ಮ ಅಳಿಯ ಹುಚ್ಚನೆನ್ನುವುದು ಪಾರ್ವತಿಯ ತಂದೆತಾಯಿಗಳಿಗೆ ಮೊದಲೇ ಗೊತ್ತಿದ್ದಲ್ಲಿ ಅವರು ತಮ್ಮ ಮಗಳನ್ನು ಅಂಥವನಿಗೆ ಕೊಡುತ್ತಿರಲಿಲ್ಲ. ಮೋಸದಿಂದಾಗಿ ಆ ಮದುವೆಯಾಯಿತು. ಮದುವೆಯಾದ ಬಳಿಕ ಆ ಹುಚ್ಚು ಹೊರಬಿತ್ತು. ಪಾರ್ವತಿ ಗಂಡನ ಮನೆಯಲ್ಲಿ ಜೀವ ಹಿಡಿದುಕೊಂಡಿರುವುದೇ ಅಸಾಧ್ಯವಾಯಿತು. ಅಂಥ ಸಂದರ್ಭದಲ್ಲಿ ನೀನೇ ಸಿಕ್ಕಿಬಿದ್ದಿದ್ದರೆ ಏನು ಮಾಡುತ್ತಿದ್ದೆ? ಪಾರ್ವತಿ ತವರುಮನೆಗೇ ಓಡಿಬಂದಳು. ಮದುವೆಯಂತೂ ಆಗಿಹೋಗಿತ್ತು. ಆ ಬಂಧನದಿಂದ ಬಿಡುಗಡೆಯಿರಲಿಲ್ಲ. ಇನ್ನು ಆಕೆ, ತುಂಬು ಹರೆಯದ ಹುಡುಗಿ ಏನು ಮಾಡಬೇಕು?"

"ಅದಕ್ಕೇ ನಿಮ್ಮಂಥ ಗೂಳಿಯೊಂದಿಗೆ ರಮಿಸಬೇಕೇನು?"

"ಗೂಳಿ!" ಎಂದು ಹೇಳಿ ಸ್ವಾಮಿಗಳು ನಗತೊಡಗಿದರು. "ಸರಿಯಾಗಿಯೆ ಹೇಳಿದೆ ಸರಸೂ. ನಾವು, ಸ್ವಾಮಿಗಳು ಗೂಳಿಗಳೆಂಬುದೇ ನಿಜ. ದೇವರ ಹೆಸರಿನಲ್ಲಿ ಸಮಾಜ ಬಿಟ್ಟ ಹೋರಿಗಳು. ಮನಸ್ಸು ಬಂದಲ್ಲಿ ಮೇಯುವೆವು. ಮನಸ್ಸು ಬಂದಲ್ಲಿ ಮಲಗುವೆವು. ದೇವರ ಗೂಳಿಗಳಾದ್ದರಿಂದ ಯಾವ ನಿರ್ಬಂಧವೂ ನಮಗಿಲ್ಲ. ನಾವು ಏನನ್ನು ಮಾಡಿದರೂ ನಡೆಯುತ್ತದೆ. ನಿಜ ಹೇಳಿದೆ ಸರಸೂ, ನಿಜ ಹೇಳಿದೆ," ಎಂದು ನುಡಿದು ಅವರು ಮತ್ತೆ ನಕ್ಕರು. "ಸರಿ. ವೇಳೆಯಾಗುತ್ತ ಬಂತು. ನಾವು ಹೊರಡುತ್ತೇವೆ. ನೀನೊಬ್ಬಳೇ ಆದರೂ ಇಲ್ಲಿ ಸುಖವಾಗಿರು. ಮೋಟಾರು ಇಲ್ಲೇ ಇರುತ್ತದೆ. ಡ್ರೈವರೂ ಇಲ್ಲಿಯೆ ಇರುತ್ತಾನೆ. ಸುಖವಾಗಿ ಕಾಲ ಕಳೆಯಬಹುದು. ಬೇಕಾದ ಹಾಗೆ

ತಿರುಗಾಡಬಹುದು. ಇಕೋ, ಖರ್ಚಿಗೆ ಈ ಹಣವಿರಲಿ," ಎಂದು ಹೇಳಿ ನೂರು ರೂಪಾಯಿಯ ಐದು ನೋಟುಗಳನ್ನು ಕೊಡಲು ಬಂದರು.

ಸರಸು ಅವುಗಳನ್ನು ತೆಗೆದುಕೊಳ್ಳಲಿಲ್ಲ. ಕೇಳಿದಳು :

"ಈಗ ಹೋದರೆ ಯಾವಾಗ ಮರಳಿ ಬರುತ್ತೀರಿ ?"

"ಹ್ಯಾಗೆ ಹೇಳಬೇಕು ? ನಿನಗೇ ಗೊತ್ತಿದೆಯಲ್ಲ. ಬೆಂಗಳೂರಿಗೆ ಬಂದುದಕ್ಕೆ ಒಂದು ತಿಂಗಳಾಗುತ್ತಾ ಬಂತು. ಒಂದು ವಾರದೊಳಗಾಗಿ ಬರುವುದಾಗಿ ಶಾಸ್ತ್ರಿಗೆ ಹೇಳಿದ್ದೆ. ಮಠದಿಂದ ಪತ್ರ ಬರುತ್ತಿವೆ. ಇಂದು ನಾಳೆ ಎಂದು ದಿನ ತಳ್ಳುತ್ತಿದೇನೆ. ಇಲ್ಲಿ ಚೈನಿ ಹೊಡೆದ ಹಾಗೆ ಅಲ್ಲಿ ಹೊಡೆಯಲು ಸಾಧ್ಯವೆ ?"

"ಏಕೆ ಸಾಧ್ಯವಿಲ್ಲ ? ಅಲ್ಲಾದರೂ ಏನು ಕೊರತೆ ಹೆಣ್ಣುಗಳಿಗೆ ? ಗದಿಗೆಮ್ಮನಂಥವರು ಇದ್ದೇ ಇರುವರಲ್ಲ ?"

"ಓಹ್ಹೊ. ಆಕೆಯ ವಿಷಯವೂ ಗೊತ್ತಾಗಿದೆಯೆ ನಿನಗೆ ?"

ಗದಿಗೆಮ್ಮನಿಗೂ ಸ್ವಾಮಿಗಳಿಗೂ ಇದ್ದ ಸಂಬಂಧದ ವಿಷಯ ಸರಸುವಿಗೆ ಗೊತ್ತಿರಲಿಲ್ಲ. ಆದರೂ ಸಂದೇಹವಿದ್ದೇ ಇದ್ದಿತು. ಆ ಸಂದೇಹವೇ ಆಕೆಯ ಬಾಯಿಯಿಂದ ಅಂಥ ಮಾತನ್ನಾಡಿಸಿದ್ದಿತು.

"ಚಿಂತೆಯಿಲ್ಲ, ಗೊತ್ತಾದರೂ ಏನು ನಷ್ಟ ? ಈಗಾಗಲೇ ಊರಿಗೆಲ್ಲಾ ಗೊತ್ತಾಗಿರಲು ಸಾಕು. ನನ್ನಿಂದಾಗಿ ಆಕೆಯೂ ಸಹ ಇಪ್ಪತ್ನಾಲ್ಕು ತಾಸು ನೆಲಮನೆಯಲ್ಲೇ ಕೊಳೆಯಬೇಕಾಗಿತ್ತು. ಆಗಲೇ ನನಗೂ ಆಕೆಗೂ ಗಾಢ ಸ್ನೇಹ ಬೆಳೆದದ್ದು. ಆದರೆ ಅವಳ ವಿಷಯ ಅಂಥ ತಪ್ಪು ತಿಳಿವಳಿಕೆ ಮಾಡಿಕೊಳ್ಳಬೇಡ. ನನಗಿಂತ ವಯಸ್ಸಿನಲ್ಲಿ ದೊಡ್ಡವಳು ಗದಿಗೆಮ್ಮ. ಅಂಥವಳಿಂದ ಎಂಥ ಸುಖ ದೊರೆಯಬೇಕು ?"

"ಆದರೂ ಅಂಥವಳ ಮೋಹದಲ್ಲೇ........"

"ಮೋಹ ಅಂದರೆ ಮೋಹ. ಕಾಮಕ್ಕೆ ಕಣ್ಣಿಲ್ಲ. ಅದಕ್ಕೆ ಹರೆಯದ ಹುಡುಗಿಯೂ ಅಷ್ಟೆ. ಮುದಿಗೊಡ್ಡೂ ಅಷ್ಟೆ. ದೋಸೆ, ಕರಜೀಕಾಯಿ ಇಲ್ಲದಿದ್ದಾಗ ಒಣ ರೊಟ್ಟಿಯನ್ನಾದರೂ ತಿಂದು ಹಸಿವೆಯನ್ನು ಹೋಗಲಾಡಿಸಿಕೊಳ್ಳಬೇಕಾಗುವದಷ್ಟೆ. ಹೆಣ್ಣಿನ ಬಗ್ಗೆ ಗಂಡಿಗೆ ಹುಟ್ಟುವ ಹಸಿವೂ

ಇಂಥದೇ. ಎಂಥ ಹೆಣ್ಣಾದರೇನು, ಒಂದು ಹೆಣ್ಣಾದರಾಯಿತು ಆ ಹಸಿವೆಗೆ..............."

ಆ ಮಾತಿನಿಂದಾಗಿ ಸರಸುವಿಗೆ ಹೇಸಿಕೆಯಾಗದಿರಲಿಲ್ಲ. ಆಕೆ ತಿರಸ್ಕಾರ ಬೆರೆತ ಧ್ವನಿಯಲ್ಲಿ ಹೇಳಿದಳು : "ನಿಮ್ಮಂಥ ಕಾಮುಕ ಪಶುಗಳನ್ನು ಸ್ವಾಮಿಗಳನ್ನಾಗಿ ಮಾಡುವ ಸಮಾಜಕ್ಕೆ ಬೆಂಕಿ ಹಾಕಬೇಕು."

ಸ್ವಾಮಿ ಗಹಗಹಿಸಿ ನಗುತ್ತ–"ಬೆಂಕಿ ಹಾಕುತ್ತೀಯಾ? ಅಗತ್ಯವಾಗಿ ಹಾಕು. ಯಾರು ಬೇಡವೆನ್ನುತ್ತಾರೆ? ಈ ಸಮಾಜದ ಬಗ್ಗೆ ನಮಗಿರುವ ಪ್ರೀತಿಯೂ ಅಷ್ಟರಲ್ಲೇ ಇದೆ. ಅದರ ಬಲುಮೆಯಿಂದಾಗಿಯೆ ಈ ಕಾವಿ ಬಟ್ಟೆಯ ಪೀಕಲಾಟಕ್ಕೆ ಸಿಕ್ಕಿಕೊಳ್ಳಬೇಕಾಯಿತು," ಎಂದರು.

"ನಿಮ್ಮ ಕಾವಿ ಬಟ್ಟೆಗೊಂದು ಬೆಂಕಿ ಬಿತ್ತು. ಅದರ ಪಾವಿತ್ರ್ಯವನ್ನೆಲ್ಲಾ ಹಾಳುಮಾಡಿದಿರಿ."

"ಪಾವಿತ್ರ್ಯ ಉಳಿದಿದ್ದರೆ ತಾನೇ ನಾವು ಅದನ್ನು ಹಾಳು ಮಾಡುವದು. ಅದು ಎಂದೋ ಹಾಳಾಗಿ ಹೋಗಿದೆ. ನಮ್ಮಂಥ ಎಷ್ಟೋ ಜನ ಸಿದ್ಧವೀರ ಸ್ವಾಮಿಗಳು ಕರ್ನಾಟಕದ ಬೇರೆ ಬೇರೆ ಮೂಲೆಗಳಲ್ಲಿ ಅವತರಿಸಿ ಕಾವಿ ಬಟ್ಟೆಯ ಕೀರ್ತಿಯನ್ನೆಲ್ಲ ನೆಲಸಮಗೊಳಿಸಿದ್ದಾರೆ. ನೂರಕ್ಕೆ ತೊಂಭತ್ತರಷ್ಟು ಕಾವೀಧಾರಿಗಳು ಸೀರೆಯ ಸೆರಗಿನಲ್ಲೇ ಸುಖಪಡುತ್ತಿರುವಾಗ ನಾವಾದರೂ ಯಾಕೆ ಬಿಡಬೇಕು? ಈ ವಾದ ವಿವಾದ ಸಾಕು. ಮದರಾಸಿನಿಂದ ಬಂದ ಬಳಿಕ ಮತ್ತೆ ಮಾತನಾಡೋಣವಂತೆ," ಎಂದು ಹೇಳಿ ಸ್ವಾಮಿ ಕೆಳಗಡೆ ಹೊರಟು ಹೋದರು.

ಸರಸು ಕುಳಿತಹಾಗೆಯೆ ಕುಳಿತಿದ್ದಳು.

ಸ್ವಾಮಿಗಳನ್ನೂ ಅವರ ಪ್ರೇಯಸಿಯನ್ನೂ ಆಕೆಯ ಮಗನನ್ನೂ ನಿಲ್ದಾಣಕ್ಕೆ ಮುಟ್ಟಿಸಿ, ರೈಲಿಗೇರಿಸಿ ಗಪೂರ ಮನೆಗೆ ಮರಳುತ್ತಲೂ ಸರಸು ಆತನನ್ನು ಕೂಗಿ ಕರೆದು ಕೇಳಿದಳು :

"ನಾನೊಂದು ಪ್ರಶ್ನೆ ಕೇಳುತ್ತೇನೆ ಸಾಹೇಬು. ನಿನಗೆ ಗೊತ್ತಿರುವದನ್ನೆಲ್ಲಾ ಬಚ್ಚಿಟ್ಟುಕೊಳ್ಳದೆ ಹೇಳಬೇಕು."

"ಏನು ತಾಯಿ?"

"ಈಗ ಮದರಾಸಿಗೆ ಹೋದಳಲ್ಲಾ, ಆಕೆಯ ಗಂಡನನ್ನು ನೀನು ಕಂಡೆಯಾ?"

"ನೋಡಿದ್ದೇನೆ ತಾಯಿ. ನಿನ್ನೆ ಮೋಟಾರಿನಲ್ಲಿಯೆ ಆತನನ್ನು ಆಸ್ಪತ್ರೆಗೆ ಬಿಟ್ಟು ಬಂದೆವು."

"ಹುಚ್ಚರಾಸ್ಪತ್ರೆಗೆ ತಾನೆ?"

"ಹೌದು, ತಾಯಿ."

"ಆತ ನೋಡಲು ಹೇಗಿದ್ದಾನೆ? ಹುಚ್ಚರಂತೆ ಕಾಣುತ್ತಾನೇನು?"

"ಹಾಗೆ ಪೂರಾ ಹುಚ್ಚನ ಹಾಗೇನೂ ಕಾಣುವದಿಲ್ಲ. ಆದರೂ ಸ್ವಲ್ಪ ಉಗ್ರವಾಗಿದ್ದಾನೆ."

"ಸ್ವಾಮಿಗಳನ್ನಾತ ಹೊಡೆಯಲು ಬಂದಿದ್ದನಂತೆ. ನಿಜವೇನು?"

ಹೇಳಲೋ, ಬೇಡವೋ ಎಂದು ಕ್ಷಣಹೊತ್ತು ಯೋಚಿಸುತ್ತಿದ್ದು, ಅನಂತರ ಗಫೂರನೆಂದ: "ನಿಜ ತಾಯಿ. ಆಸ್ಪತ್ರೆಗೆ ಹೋಗುವಾಗ ಹಾದಿಯಲ್ಲೆಲ್ಲ ಆತನ ಗದ್ದಲವೋ ಗದ್ದಲ."

"ಇವರೆಲ್ಲ ಬೆಂಗಳೂರಿಗೆ ಬಂದದ್ದು ಯಾವಾಗ?"

"ನಿನ್ನೆ ಬೆಳಗಿನ ಗಾಡಿಗೆ?"

"ಅವರು ಬರುವ ವಿಷಯ ಸ್ವಾಮಿಗಳಿಗೆ ಗೊತ್ತಿದ್ದಿತೇ?"

"ಗೊತ್ತಿರಲೇ ಬೇಕು. ಅವರನ್ನು ಎದುರುಗೊಂಡು ಸ್ಟೇಶನ್ನಿನಿಂದ ಕರೆದು ತರಲು ನಾನೇ ಹೋಗಿದ್ದೆನಲ್ಲ?"

"ಈಕೆಯ ಗಂಡನಿಗೂ ಸ್ವಾಮಿಗಳಿಗೂ ಸಂಬಂಧ ಹೇಗೆ ಕಾಣಿಸಿತು?"

ಗಫೂರ ಪುನಃ ತಡೆದು ಕೊಂಚ ಹೊತ್ತು ಅನುಮಾನಿಸುತ್ತಿದ್ದು, ಅನಂತರ ಹೇಳಿದ. "ಸ್ವಾಮಿಗಳ ಬಗ್ಗೆ ಆತನಿಗೆ ಭಾರೀ ಸಿಟ್ಟು ಇದ್ದಂತಿತ್ತು ತಾಯಿ. ಆಗಾಗ ದನಿ ತೆಗೆದು ನೀನೇ ನನ್ನನ್ನು ಈ ಗತಿಗೀಡು ಮಾಡಿದೆ, ನನ್ನ ಸಂಸಾರವನ್ನೆಲ್ಲ ಹಾಳುಮಾಡಿ ಹತ್ತೀ ಬಿತ್ತಿದೆ, ನೀನು ನಿನ್ನ ಮಠ ಎಲ್ಲಾ ಹಾಳಾಗಿ ಹೋಗಬೇಕು – ಎಂದು ಕೂಗುತ್ತಿದ್ದ. ಆಗಾಗ ಅವರನ್ನು ಹೊಡೆಯಲೂ ಕೈ ಎತ್ತುತ್ತಿದ್ದ."

"ಇದರಿಂದಲೇ ಆತನಿಗೆ ಹುಚ್ಚು ಹಿಡಿದಿರಬಹುದೇ ಗಫೂರ?"

"ಇರಬಹುದು ತಾಯಿ. ಮನುಷ್ಯನ ತಲೆ ಕೆಡಿಸಲು ಇದೊಂದೇ

ವಿಷಯ ಸಾಕಲ್ಲ? ಆಸ್ಪತ್ರೆಗೆ ಹಾಕಿದರೂ ಏನೂ ಉಪಯೋಗವಾಗುವ ದಿಲ್ಲ. ಪೂರಾ ಹುಚ್ಚರಾಗಿರುವವರ ಸಹವಾಸದಲ್ಲಿ ಇವನೂ ಹುಚ್ಚನಾಗಿ ಹೋಗುತ್ತಾನೆ."

"ಆತ ಪೂರಾ ಹುಚ್ಚನಾಗಿ ಹೋಗಲಿ ಅಂತಲೇ ಅವನನ್ನು ಆಸ್ಪತ್ರೆಗೆ ಸೇರಿಸಿದರೋ ಏನೊ."

"ಇದ್ದರೂ ಇರಬಹುದು ತಾಯಿಾ. ಆತ ಹುಚ್ಚನಾದರೆ ಒಂದು ಪೀಡೆ ತೊಲಗಿದಂತಾಗುವದಲ್ಲವೆ? ಅನಂತರ ಮದರಾಸಿಗೂ ಹೋಗಬಹುದು, ಕೊಲಂಬೋಗೂ ಹೋಗಬಹುದು. ಮಜಾ ಮಾಡಬಹುದು. ಸ್ವಾಮಿಗಳ ಈ ನಡತೆ ನನಗೂ ಸರಿಬರುವದಿಲ್ಲ ತಾಯಿಾ. ಅವರನ್ನು ನಂಬಿಕೊಂಡು ಇಷ್ಟು ದೂರ ಬಂದ ನಿಮ್ಮನ್ನು ಹೀಗೆ ಬಿಟ್ಟು........" ಎಂದು ನುಡಿದು ಆತ ನೃತ್ಯಗಾತಿ ಸ್ನೇಹಲತೆಯ ವಿಷಯವನ್ನೆಲ್ಲ ವರದಿ ಮಾಡಿದ.

"ಹೀಗೂ ಇದ್ದಿತೇನು? ನನಗೇನೂ ಗೊತ್ತಿರಲಿಲ್ಲ. ಹೋಗಲಿ ಬಿಡು ಗಫೂರ್. ಏನಾದರೂ ಮಾಡಿಕೊಳ್ಳಲಿ."

"ಕುಡಿಯುವದನ್ನೂ ಕಲಿತಾರೆ ತಾಯಿಾ," ಎಂದು ನೊಂದಧ್ವನಿಯಲ್ಲಿ ನುಡಿದ ಗಫೂರ.

"ನರ್ತಕಿಯರ ಸಹವಾಸ ಮಾಡಿದ ಬಳಿಕ ಏನನ್ನಾದರೂ ಕಲಿಯಬಹುದಲ್ಲ? ಅದು ನನಗೆ ಎಂದೋ ಗೊತ್ತಾಗಿತ್ತು. ಹೋಗಲಿ ಬಿಡು. ಮಠದ ಹಣ ಕೈಯಲ್ಲಿದೆ. ಮಜಾ ಮಾಡಲಿ."

"ನಿಜ ಹೇಳಬೇಕಾದರೆ ನನಗೂ ಅಸಹ್ಯವಾಗಿದೆ ತಾಯಿಾ. ಇವರು ನನ್ನನ್ನು ನೌಕರಿಗೆ ಕರೆದಾಗ ಈ ವಿಷಯವೊಂದೂ ನನಗೆ ಗೊತ್ತಿರಲಿಲ್ಲ. ಏನೋ ಬಲು ಒಳ್ಳೆಯ ಸ್ವಾಮಿಗಳು ಅಂತ ಬಹಳ ಭಕ್ತಿಯಿಟ್ಟುಕೊಂಡು ಕೆಲಸಕ್ಕೆ ಸೇರಿದೆ. ನೋಡಿದರೆ ಈ ಸ್ವಾಮಿ ಬಲು ಬಲು ಒಳ್ಳೆಯ ಸ್ವಾಮಿಯೆ! ಸಂಸಾರಿಗಳೂ ಮಾಡದಂಥ ಹೇಸಿ ಕೆಲಸ ಮಾಡಬೇಕೇ? ನನಗೆ ಸಾಕಷ್ಟು ಸಂಬಳವನ್ನೇನೋ ಕೊಡುತ್ತಿದ್ದಾರೆ. ಸಂಬಳವೇನು ತಾಯಿಾ, ಎಲ್ಲಾದರೂ ಸಿಕ್ಕೀತು. ಇವರೊಂದಿಗೆ ಗಲ್ಲಿ ಗಲ್ಲಿ ತಿರುಗಿ ಇವರು ಮಾಡುವ ಕೆಲಸಗಳನ್ನೆಲ್ಲ ಈ ಕಣ್ಣುಗಳಿಂದ ಹ್ಯಾಗೆ ನೋಡೋದು?"

"ಗಲ್ಲಿ ತಿರುಗುವ ಚಟವೂ ಇದೆಯೋ ಗಫೂರ?"

"ನಿಮ್ಮೆದುರಿಗೆ ಇದನ್ನೆಲ್ಲಾ ಯಾಕೆ ಹೇಳುತ್ತಿರುವೆನೊ. ಹೇಳಬಾರದೊ ಏನೊ. ಆದರೂ ಮನಸ್ಸು ತಡೆಯಲಾರದೆ ಹೇಳುತ್ತಿದೇನೆ. ಇದುವರೆಗೂ ಯಾರ ಹತ್ತಿರವೂ ಹೇಳಿಲ್ಲ. ಏನೋ, ನಿಮ್ಮನ್ನು ಕಂಡು ತಳಮಳವಾಯಿತು. ನೀವು ನನ್ನ ತಾಯಿಯಿದ್ದ ಹಾಗೆ ಇದೀರಿ. ಯಾರೆದುರಿಗೂ ಹೇಳದ ಮಾತುಗಳನ್ನೆಲ್ಲಾ ಇಂದು ನಿಮ್ಮೆದುರು ಹೇಳುತ್ತಿದೇನೆ. ನಿಮ್ಮ ಕಾಲುಬೆರಳಿನ ಯೋಗ್ಯತೆಯೂ ಸಹ ಈ ಸ್ವಾಮಿಗಿಲ್ಲ ತಾಯಿ. ಎಂಥೆಂಥ ಕೀಳು ಹೆಂಗಸರ ಸಹವಾಸ ಮಾಡುತ್ತಿದ್ದಾರೆ.........."

ಸರಸು ಮೌನವಾಗಿ ಕುಳಿತಿದ್ದಳು. ಗಫೂರ ಮುಂದುವರಿಸಿದ.

"ಅದೊಂದು ಹುಚ್ಚೇ ಹಿಡಿದ ಹಾಗಿದೆ ಸ್ವಾಮಿಗಳಿಗೆ. ಎಷ್ಟು ಊರು ತಿರುಗಿದ್ದಾಯಿತು, ಎಂಥ ಕೀಳು ಸಹವಾಸ ಮಾಡಿದ್ದಾಯಿತು. ಮದರಾಸಿನಿಂದ ಅವರು ಬಂದೊಡನೆ ಈ ನೌಕರಿ ಬಿಟ್ಟು ಊರಿಗೆ ಹೋಗಿಬಿಡುವದೆಂದು ನಿರ್ಧರಿಸಿದ್ದೇನೆ. ಇದನ್ನೆಲ್ಲ ಕಣ್ಣಾರೆ ನೋಡಲಾರೆ."

"ನಾನೂ ಹೊರಟುಬಿಡಲು ನಿರ್ಧರಿಸಿದ್ದೇನೆ," ಎಂದು ಮನಸ್ಸಿನಲ್ಲೇ ಹೇಳಿಕೊಂಡಳು ಸರಸು. ಬಾಯಿ ಬಿಟ್ಟು ಆಡಲಿಲ್ಲ.

ಸಾಯಂಕಾಲ ಒಬ್ಬಳೇ ಹೊರಗಡೆ ಹೊರಟಳು. "ಲಾಲಬಾಗಿನ ಕಡೆಗೆ ಹೋಗಿ ಈಗ ಬರುತ್ತೇನೆ ರಂಗಮ್ಮ," ಎಂದು ಹೇಳಿದಳು.

"ಮೋಟರು ತೆಗೆದುಕೊಂಡು ಹೋಗಿರಲ್ಲಮ್ಮ."

"ಏನೂ ಬೇಡ. ಕೂತು ಕೂತು ಬೇಸರವಾಗಿದೆ. ಸ್ವಲ್ಪ ಕಾಲು ಹಗುರಾಗಲಿ. ನಡೆದುಕೊಂಡೇ ಹೋಗುತ್ತೇನೆ," ಎಂದು ಹೇಳಿ ಹೊರಟುಬಿಟ್ಟಳು.

ಕತ್ತಲಾಗುವವರೆಗೂ ಲಾಲಬಾಗಿನಲ್ಲಿ ಕುಳಿತಿದ್ದು, ಅನಂತರ ಹೊರಗೆ ಬಂದು ಬಸ್ಸು ಹತ್ತಿ ರೈಲುನಿಲ್ದಾಣಕ್ಕೆ ಹೊರಟಳು.

ಇಂಟರ್ ವರ್ಗದ ಟಿಕೆಟ್ಟು ಕೊಂಡು ಆಕೆ ಪ್ಲಾಟ್‌ಫಾರ್ಮಿಗೆ ಬಂದಾಗ ಪೂನಾ ಮೇಲುಗಾಡಿ ಸಿದ್ಧವಾಗಿ ನಿಂತಿದ್ದುದು ಕಾಣಿಸಿತು.

ಇಂಟರ್ ವರ್ಗದ ಮಹಿಳೆಯರ ಡಬ್ಬಿಯ ಹತ್ತಿರ ಆಕೆ ಬರುತ್ತಿದ್ದ ಹಾಗೆ, ಅದರೊಳಗಡೆ ಕುಳಿತಿದ್ದ ಯುವತಿಯೊಬ್ಬಳು ಆಕೆಯನ್ನು ಕಂಡು,

ಡಬ್ಬಿಯಿಂದ ಪ್ಲಾಟ್‌ಫಾರ್ಮಿಗೆ ಧುಮುಕಿ, "ಸರಸೂ, ನನ್ನ ಸರಸೂ," ಎನ್ನುತ್ತ ಅವಳನ್ನು ತಬ್ಬಿಕೊಂಡಳು.

"ಸೂಶೀ.... ಸೂಶೀ...." ಎಂದು ಉದ್ಗಾರ ತೆಗೆದುದೆಷ್ಟೋ ಅಷ್ಟೆ. ಮುಂದೆ ಸರಸುವಿನ ಮುಖದಿಂದ ಮಾತೇ ಹೊರಡದಂತಾಯಿತು. ಒಂದೆರಡು ನಿಮಿಷಗಳ ವರೆಗೆ ಆಕೆ ಹುಚ್ಚಿಯಂತೆ ಗೆಳತಿಯನ್ನು ಕದಲದ ಕಣ್ಣುಗಳಿಂದ ದಿಟ್ಟಿಸುತ್ತ ನಿಂತುಕೊಂಡಿದ್ದಳು.

[೨೫]

"ಬೆಂಗಳೂರಿನಲ್ಲೆಲ್ಲ ನಿನ್ನನ್ನು ಹುಡುಕಿ ಹುಡುಕಿ ಸಾಕಾಯಿತು. ಇನ್ನು ನಿನ್ನನ್ನು ಪತ್ತೆ ಮಾಡುವುದು ಸಾಧ್ಯವಿಲ್ಲವೆನ್ನಿಸುತ್ತಲೂ ನಿರಾಶಳಾಗಿ ಹೊರಟುಬಿಟ್ಟೆದ್ದೆ. ಅಂತೂ ಕಡೆಗೆ ಭೆಟ್ಟಿಯಾದಿಯಲ್ಲ? ನಾನು ಬಂದದ್ದು ಹೇಗೆ ಗೊತ್ತಾಯಿತು ನಿನಗೆ? ಎಲ್ಲಾದರೂ ನೋಡಿದಿಯಾ?" ಎಂದು ಕೇಳಿದಳು ಸೂಶಿ.

"ನೀನು ಬೆಂಗಳೂರಿಗೆ ಬಂದಿರಬಹುದೆಂದು ನನ್ನ ಕನಸು ಮನಸಿನಲ್ಲೂ ಬಂದಿರಲಿಲ್ಲ ಬಿಡು."

"ಮತ್ತೆ! ನಿನಗೆ ಹ್ಯಾಗೆ ಗೊತ್ತಾಯಿತು?"

"ಏನು?"

"ನಾನಿಲ್ಲಿಗೆ ಬಂದದ್ದು?"

"ಈಗ ನಿನ್ನನ್ನಿಲ್ಲಿ ಕಂಡಾಗಲೇ ಗೊತ್ತಾದದ್ದು."

"ಅಂದರೆ? ನಿನಗೆ ಗೊತ್ತೇ ಇರಲಿಲ್ಲವೆ? ನಾನು ಈ ಗಾಡಿಗೆ ಹೊರಟ ಸುದ್ದಿ ಕೇಳಿ ನೀನು ಬಂದಿರಬಹುದೆಂದುಕೊಂಡಿದ್ದೆ ನಾನು."

"ಸುದ್ದಿಯಾದರೂ ಹೇಗೆ ಗೊತ್ತಾಗಬೇಕು ಸೂಶಿ?"

"ಮಲ್ಲೇಶ್ವರದಲ್ಲಿ ನನ್ನ ಗುರುತಿನವರೊಬ್ಬರಿದ್ದಾರೆ-ವಸಂತಮ್ಮ ಅಂತ. ಸ್ಕೂಲ್ ಟೀಚರ್ ಆಗಿದ್ದಾರೆ. ಅವರೂ ನಾನು ಕೂಡಿಕೊಂಡು ನಗರವನ್ನೆಲ್ಲಾ ತಿರುವಿಹಾಕಿದೆವು-ನಿನ್ನನ್ನು ಪತ್ತೆಮಾಡಲು. ವಸಂತಮ್ಮ ಗೊತ್ತೇ ನಿನಗೆ?"

"ಇಲ್ಲ. ಹ್ಯಾಗೆ ಗೊತ್ತಾಗಬೇಕು?"

“ನಗರದಲ್ಲೆಲ್ಲ ಪ್ರಸಿದ್ಧ ಮಹಿಳೆ ಆಕೆ.”

“ಇರಬಹುದು. ಯಾವ ಪ್ರಸಿದ್ಧ ಮಹಿಳೆಯನ್ನೂ ಪರಿಚಯ ಮಾಡಿಕೊಳ್ಳುವ ಮನಸ್ಸು ನನಗಿರಲಿಲ್ಲ. ಇಲ್ಲಿಗೆ ಬಂದಾಗಿನಿಂದ ಮನೆ ಬಿಟ್ಟು ಹೊರಬಿದ್ದುದೇ ಕಡಿಮೆ.”

“ಮನೆ ಎಲ್ಲಿ ಮಾಡಿದ್ದೀರಿ ?”

“ಬಸವನಗುಡಿಯಲ್ಲಿ”

“ಬಸವನಗುಡಿಯಲ್ಲಿ? ಆ ಭಾಗದ ಬೀದಿಯೊಂದನ್ನೂ ಬಿಡದೆ ಹುಡುಕಿದೆವಲ್ಲ ನಾವು ?”

“ಇಂಥ ದೊಡ್ಡ ನಗರದಲ್ಲಿ ಪತ್ತೆ ಹಚ್ಚಲು ಶಕ್ಯವೇ ಸೂಶೀ? ಆದಿರಲಿ, ನೀನು ಬೆಂಗಳೂರಿಗೆ ಬಂದದ್ದು ಯಾವಾಗ ?”

“ಬಂದು ಆಗಲೇ ಮೂರು ದಿನವಾಯಿತು.”

“ಯಾತಕ್ಕಾಗಿ ಬಂದಿದ್ದೆ ?”

“ಇನ್ನೇತಕ್ಕಾಗಿ ? ನಿನ್ನನ್ನು ಹುಡುಕುವುದಕ್ಕಾಗಿಯೆ. ಹುಡುಕಿ ಕರೆದೊಯ್ಯುವದಕ್ಕಾಗಿ. ನಿನ್ನನ್ನು ಕರೆದುತರದೆ ಹಾಗೇ ಬರುವದಿಲ್ಲವೆಂದು ಪಣ ತೊಟ್ಟು ಬಂದಿದ್ದೆ.”

“ಅಂತೂ ನಿನ್ನ ಪಣ ಪೂರೈಸಿದಂತಾಯಿತು. ನನ್ನನ್ನು ಹುಡುಕುತ್ತ ನೀನು ಬಂದಿದ್ದೆ. ನಿನ್ನನ್ನು ಹುಡುಕುತ್ತ ನಾನು ಹೊರಟಿದ್ದೆ.”

“ನೀನೂ ಊರಿಗೆ ಹೊರಟಿದ್ದೆಯಾ ? ಹೀಗೆ ? ಸಾಮಾನು ಗೀಮಾನು ?”

“ಈ ಶರೀರ, ಈ ಸೀರೆ, ಈ ರವಕೆ. ಇವೇ ನನ್ನ ಸಾಮಾನು ಗೀಮಾನು ಎಲ್ಲಾ.” ಎಂದು ಹೇಳಿದಳು ಸರಸು.

ಮೂರನೆಯ ಗಂಟೆ ಬಾರಿಸಿತು. ಗಾರ್ಡನ ಸಿಳ್ಳಿನ ಕರ್ಕಶ ಸ್ವರ ಪ್ಲ್ಯಾಟ್‌ಫಾರ್ಮಿನ ಮೇಲೆಲ್ಲ ದುಮುದುಮಿಸತೊಡಗಿತು.

“ಟಿಕೀಟು ತೆಗೆಸಿದ್ದೀಯಾ ಸರಸೂ ?”

“ಅದನ್ನು ಮಾತ್ರ ಮರೆತಿಲ್ಲವ್ವ.”

“ನಡೆ ಹಾಗಾದರೆ. ಗಾಡಿ ಹೊರಡುವ ಹೊತ್ತಾಯಿತು.”

ಇವರಿಬ್ಬರನ್ನುಳಿದು ಬೇರಾರೂ ಆ ಡಬ್ಬಿಯಲ್ಲಿರಲಿಲ್ಲ. ಬೆಂಚುಗಳ ಮೇಲೆ ಹೊದ್ದಿಕೆಗಳನ್ನು ಹಾಸಿ ಹಾಸುಗೆಗಳನ್ನು ಅಣಿಗೊಳಿಸಿದಳು ಸೂಶಿ.

ಸಿಳ್ಳು ಹಾಕಿ, ಗಾಡಿ ಮುಂದೆ ಸಾಗಿತು.

"ಹೀಗೆ ಒಮ್ಮಿಂದೊಮ್ಮೆಲೆ ಹೊರಡಲು ಏನು ಕಾರಣವಾಯಿತು ಸರಸೂ?"

"ಒಮ್ಮಿಂದೊಮ್ಮೆಲೆ ಇತ್ತ ಬಂದು ಬಿಡಲು ಏನು ಕಾರಣವಾಯಿತೋ ಅದೇ. ನಾನಿತ್ತ ಬಂದುದೇಕೆ ಗೊತ್ತೇ ನಿನಗೆ?" ಎಂದು ಸಂಕೋಚದಿಂದ ಕೇಳಿದಳು ಸರಸು.

"ಗೊತ್ತಿದೆ. ನೀನೇನೂ ಸಂಕೋಚ ಮಾಡಿಕೊಳ್ಳಬೇಡ ನನ್ನೆದುರಿಗೆ. ಏನೇನೋ ಆಗಿಹೋಯಿತು. ಉಪಾಯವಿಲ್ಲ," ಎಂದು ಸಹಾನುಭೂತಿ ಯುಕ್ತ ಧ್ವನಿಯಲ್ಲಿ ಸೂಶಿಯೆಂದಳು.

ಬಲಗಡೆಗೆ ಝಗಝಗಿಸುತ್ತಿದ್ದ ಶ್ರೀರಾಮಪುರದ ದೀಪಗಳನ್ನು ಶೂನ್ಯದೃಷ್ಟಿಯಿಂದ ನಿರುಕಿಸುತ್ತ ಸರಸುವೆಂದಳು: "ಹೌದು. ನೀ ಹೇಳುವ ಹಾಗೆ ಏನೇನೋ ಆಗಿಹೋಯಿತು. ಏನೇನೋ.... ಈ ಒಂದು ತಿಂಗಳಿನ ಕಾಲವೆಲ್ಲ ಕನಸಿನಲ್ಲೇ ಕಳೆದಂತಾಯಿತು. ಹೌದು. ಕನಸೇ ಇರಬೇಕು ಅದು. ಕೆಟ್ಟ ಕನಸು......."

"ನೀನು ಹಾಗೆ ಯಾರಿಗೂ ಹೇಳದೆ ಕೇಳದೆ ಬಂದುದೇಕೆ ಅನ್ನುವದೇ ಅರ್ಥವಾಗಲಿಲ್ಲ ನನಗೆ. ಸರಸೂ, ನನಗಾದರೂ ಒಂದು ಮಾತು ತಿಳಿಸ ಬಾರದಾಗಿದ್ದಿತೇನೇ?"

"ನಿನ್ನನ್ನು ಭೆಟ್ಟಿಯಾಗಬೇಕೆಂದಿದ್ದೆ. ಆದರೆ.... ಆದರೆ.... ನಿನಗೆ ಈ ಹಾಳು ಮೋರೆಯನ್ನು ತೋರಿಸಲು ಧೈರ್ಯವಾಗಲಿಲ್ಲ ಸೂಶಿ. ಅದಕ್ಕೆ ಮೊದಲೇ ನಾನು ಕಾಲು ಜಾರಿದ್ದೆ."

"ನನ್ನ ಹತ್ತಿರವೂ ಇಂಥ ಸಂಕೋಚವೇ ಸರಸೂ? ತಪ್ಪು ಯಾರು ಮಾಡುವದಿಲ್ಲ? ಮನುಷ್ಯಮಾತ್ರರೆಲ್ಲಾ ತಪ್ಪು ಮಾಡುವದು ಸಹಜ. ಅದರಲ್ಲೂ ಪ್ರಪಂಚದ ಅನುಭವವಿಲ್ಲದ ಎಳೆಯ ಹುಡುಗಿ ನೀನು. ಏನೋ ತಿಳಿಯದೆ ಕಾಲು ಜಾರಿರಬಹುದು. ಅಂದ ಮಾತ್ರಕ್ಕೆ ಏನು ದೊಡ್ಡ ಅಪ ರಾಧವಾದಂತಾಯಿತು? ಒಮ್ಮೆ ಜಾರಿದಷ್ಟಕ್ಕೆ ಕೊನೆಯವರೆಗೂ ಜಾರು

ತ್ತಲೇ ಇರುವರೇ? ಹುಚ್ಚು ಹುಡುಗಿ! ಆಗಲೇ ನನ್ನ ಹತ್ತಿರ ಬರ ಬೇಕಾಗಿತ್ತು ನೀನು........"

"ಹೌದು. ಬರಬೇಕಾಗಿತ್ತು. ಕಾಲು ಜಾರುವ ಮೊದಲೇ ನಿನ್ನ ಹತ್ತಿರ ಬಂದು ಮನಸ್ಸಿನಲ್ಲಿದ್ದುದನ್ನೆಲ್ಲಾ ನಿನ್ನೆದುರಿಗೆ ತೋಡಿಕೊಂಡಿದ್ದರೆ ಮುಂದಿನ ಪ್ರಸಂಗವೇ ಬರುತ್ತಿರಲಿಲ್ಲವೇನೊ. ಆದರೆ....ಮಹಾ ಮೂರ್ಖಳು ನಾನು. ನಿನ್ನ ಹತ್ತಿರ ಬರಲೇ ಇಲ್ಲ."

ಕೊಂಚ ಹೊತ್ತು ಸುಮ್ಮನಿದ್ದು ಸರಸು ಮತ್ತೆ ಮುಂದುವರಿಸಿದಳು. ಮದುವೆಯಾದ ಬಳಿಕ ಮೂರ್ತಿ ತುಂಬ ಉದಾಸೀನವಾಗಿರುತ್ತಿದ್ದುದು, ಅದರಿಂದಾಗಿ ತನಗೆ ಅಸಮಾಧಾನವಾಗಿದ್ದುದು, ತನ್ನ ಸಿನಿಮಾ ಹುಚ್ಚು, ಅದರ ಬಗೆಗೆ ಮೂರ್ತಿಯ ಅಸಮಾಧಾನ, ಶಾಸ್ತ್ರಿಯ ಪತ್ನಿಯ ಬಗೆಗೆ ತನ್ನ ಸಂದೇಹ, ಅದಕ್ಕೆ ಪುಷ್ಟಿಯನ್ನೀಯುವಂಥ ಮೂರ್ತಿಯ ವರ್ತನೆ, ಸರ್ವ ಧರ್ಮಸಮ್ಮೇಳನದ ದಿನ ತನಗೂ ಲೀಲಾವತಿಗೂ ನಡೆದ ಮಾತುಕತೆ, ರೇಶಿಮೆ ಸೀರೆಯ ಕಾಣಿಕೆ, ತನ್ನ ಮನಸ್ಸು ವಿಲಕ್ಷಣ ಆಕರ್ಷಣೆಗೊಳಗಾಗಿ ದ್ದುದು, ರಾತ್ರಿ ಆಶ್ರಮದಲ್ಲಿ ಊಟ, ಸ್ವಾಮಿಗಳೊಂದಿಗೆ ಶಯನ, ಐದು ನೂರು ರೂಪಾಯಿ, ಮಾರನೆಯ ದಿನ ತನಗಾದ ಘೋರ ಪಶ್ಚಾತ್ತಾಪ, ಮೂರ್ತಿಯನ್ನು ಹುಡುಕಿಕೊಂಡು ಮನೆಗೆ ಹೋದುದು, ಅಲ್ಲಿ ಆತನನ್ನು ಕಾಣದೆ ಹತಾಶಳಾದುದು, ಶಾಸ್ತ್ರಿಯ ಭೆಟ್ಟಿ, ಆತ ಹೇಳಿದ ಸುದ್ದಿ ಕೇಳಿದಾಗ ತನ್ನೆದೆಗೆ ಬಲವಾದ ಆಘಾತವಾದುದು, ಆ ಆಘಾತದಿಂದ ಕವಿದ ಮಂಜಿನಲ್ಲಿ ತಾನು ಹುಚ್ಚು ಹುಚ್ಚಾಗಿ ಆಚರಿಸಿ ಸ್ವಾಮಿಗಳೊಂದಿಗೆ ಹೊರಟು ಬಂದುದು, ದಾರಿಯಲ್ಲೇ ಮನಸ್ಸು ಹೊಯ್ದಾಡತೊಡಗಿದುದು, ಬೆಂಗಳೂರಿಗೆ ಬಂದ ತರುವಾಯ ದಿನಗಳೆಲ್ಲ ವ್ಯಥೆಯಲ್ಲೇ ಕಳೆದುಹೋದುದು, ಸ್ವಾಮಿಗಳ ವರ್ತನೆ, ಪಾರ್ವತಿಯ ಆಗಮನ, ಆಕೆಯ ಗಂಡ ಹುಚ್ಚರಾಸ್ಪತ್ರೆಗೆ ಸೇರಿಸ ಲ್ಪಟ್ಟ ಕತೆ, ಸ್ವಾಮಿಗಳು ಪಾರ್ವತಿಯೊಂದಿಗೆ ಮದರಾಸಿಗೆ ಹೊರಟದ್ದು, ತಾನು ಇತ್ತ ಹೊರಟದ್ದು – ಎಲ್ಲವನ್ನೂ ವಿವರಿಸಿದಳು.

"ಅಯ್ಯೋ ನನ್ನ ಸರಸೂ. ಎಷ್ಟು ದುಃಖಪಟ್ಟೆ ನೀನು. ನಿನ್ನ ಹಾಗೆ ಅಲ್ಲಿ ಶಿವಮೂರ್ತಿಯೂ........ಅವರ ವ್ಯಥೆಯನ್ನು ಕಂಡಾಗ ಕುತ್ತಿಗೆ ಯಲ್ಲಿ ಅನ್ನ ಇಳಿಯದಂತಾಗುತಿತ್ತು."

ಸರಸುವಿನ ಕಣ್ಣುಗಳು ಕಂಬನಿಗಳಿಂದ ತುಂಬಿಕೊಂಡುವು.

"ಈಗ ಎಲ್ಲಿದ್ದಾರೆ ಅವರು ಸೂಶೀ? ನೆಟ್ಟಗಿದ್ದಾರಷ್ಟೆ?"

"ಏನು ನೆಟ್ಟಗೋ ಏನು ಕತೆಯೊ. ನೀನಿತ್ತ ಬಂದಂದಿನಿಂದ ಹುಚ್ಚೇ ಹಿಡಿದಂತಾಗಿದೆ ಅವರಿಗೆ. ಪಾಪ. ಎಂಥ ಒಳ್ಳೆಯ ಹುಡುಗ....ಏನಾಗಿ ಹೋದ....."

ಸರಸು ಗಾಬರಿಯಿಂದ ಕೇಳಿದಳು: "ಏನಾಗಿದೆ ಸೂಶೀ? ಆದದ್ದಾದರೂ ಏನು ಅವರಿಗೆ? ಹುಚ್ಚು ಗಿಚ್ಚು ಹಿಡಿದಿಲ್ಲವಷ್ಟೆ?"

"ಹಾಗೆ ಪೂರಾ ಹುಚ್ಚಲ್ಲದಿದ್ದರೂ ಅರ್ಧವರ್ಧ ಹುಚ್ಚೇ ಅಂತ ಹೇಳಬಹುದು. ಒಂದು ತಿಂಗಳ ಹಿಂದೆ ಅವರನ್ನು ಕಂಡವರು ಈಗ ಗುರುತು ಹಿಡಿಯಲಿಕ್ಕೇ ಆಗುವದಿಲ್ಲ. ಅಷ್ಟು ಬದಲಾಯಿಸಿದ್ದಾರೆ. ಒಂದು ವಾರದ ಹಿಂದೆ ನಾನು ಅವರನ್ನು ನೋಡಿದಾಗ ಮೊದಲು ನನಗೂ ಗುರುತು ಸಿಗಲಿಲ್ಲ. ಮುಖದ ತುಂಬಾ ಬೆಳೆದ ಗಡ್ಡ, ಎಣ್ಣೆ ನೀರಿಲ್ಲದೆ ಒಣಗಿದ ತಲೆಗೂದಲು, ಒಳಸೇರಿದ ಕಣ್ಣು, ಗಲ್ಲ, ಹರಿದು ಹೊಲಸಾಗಿ ಹೋದ ಬಟ್ಟೆ, ಸೊರಗಿ ಕಡ್ಡಿಯಂತಾದ ಶರೀರ. ಎಷ್ಟು ದಿನಗಳಿಂದ ಊಟವಿರಲಿಲ್ಲವೊ ಏನೊ. ಮೈಯಲ್ಲಿ ಸ್ವಲ್ಪವೂ ಶಕ್ತಿಯುಳಿದಿರಲಿಲ್ಲ."

"ಎಲ್ಲಿ ಕಂಡೆ ಅವರನ್ನು ಸೂಶೀ?"

ಸೂಶಿ ಹೇಳತೊಡಗಿದಳು.

"ಮಾರ್ಕೆಟ್ಟಿನಲ್ಲಿ. ಈರುಳ್ಳಿಯ ಸಿಪ್ಪೆಯನ್ನೆಸೆಯುವ ತಿಪ್ಪೆಯ ಹತ್ತಿರ ಪಿಟೀಲನ್ನು ಹಿಡಿದುಕೊಂಡು ಕುಳಿತಿದ್ದರು. ತಲೆ ಕೆಳಕ್ಕೆ ಬಾಗಿತ್ತು. ಆಗಾಗ ಪಿಟೀಲಿನ ಮೇಲೆ ಕಮಾನು ಹಾಯಿಸುತ್ತಿದ್ದರು. ಅದರಿಂದ ವಿಲಕ್ಷಣವಾದ ನಾದ ಹೊರಹೊಮ್ಮುತಿತ್ತು. ಆ ಪಿಟೀಲಿನ ನಾದವೇ ನನ್ನ ಲಕ್ಷ್ಯವನ್ನು ಅವರತ್ತ ಸೆಳೆದದ್ದು. ಅದೊಂದು ಅವರ ಹತ್ತಿರವಿರದಿದ್ದಲ್ಲಿ ನಾನೂ ಅವರನ್ನು ಗುರುತಿಸುತ್ತಿರಲಿಲ್ಲವೊ ಏನೊ.

"ಕಾಯಿ ಪಲ್ಯ ಕೊಳ್ಳುತ್ತಿದ್ದವಳು ಅದನ್ನು ಮರೆತು ಅವರ ಭುಜ ತಟ್ಟಿ ಕೂಗಿ ಕರೆದೆ: 'ಮೂರ್ತೀ,' ಎಂದು.

"ಅವರು ಕೂಡಲೆ ತಲೆಯನ್ನು ಮೇಲಕ್ಕೆತ್ತಲಿಲ್ಲ. ಮತ್ತೊಂದು ಸಲ ತಟ್ಟಿದೆ. ಆಗ ಮೆಲ್ಲನೆ ತಲೆಯನ್ನು ಮೇಲಕ್ಕೆತ್ತಿ ನನ್ನೆಡೆಗೆ ದೃಷ್ಟಿ ಹೊರಳಿ

ಸಿದರು. ಎಂಥಾ ದೃಷ್ಟಿ ಅದು ಸರಸೂ. ಎಂಥ ದುಃಖ, ಎಂಥ ವ್ಯಥೆ, ಎಂಥ ಕಳವಳ, ಎಂಥ ನಿರಾಸೆ ತುಂಬಿತ್ತು ಆ ದೃಷ್ಟಿಯಲ್ಲಿ! ಸಾಯುವ ವರೆಗೂ ಮರೆಯಲಾರನವ್ವ ನಾನು ಆ ದೃಷ್ಟಿಯನ್ನು.....

"'ಏಳಿರಿ ಮೂರ್ತೀ, ಇಲ್ಲೇಕೆ ಕುಳಿತಿದ್ದೀರಿ? ಹೀಗೇಕೆ ಆಗಿದ್ದೀರಿ? ಮನೆಗೆ ಹೋಗೋಣ. ಏಳಿರಿ,' ಎಂದೆ.

"ತಲೆಯನ್ನು ವಿಚಿತ್ರವಾಗಿ ಅಲುಗಾಡಿಸಿ ಅವರು ನಕ್ಕರು. ಎಂಥಾ ನಗೆ ಅಂತೀಯೆ ಸರಸೂ, ಅದು! ಹೃದಯವನ್ನೆಲ್ಲ ಕಲಮಲಗೊಳಿಸುವ ಕಟುನಗೆ ತಾಯಿ......

"ಅವರನ್ನು ಎಬ್ಬಿಸಿ, ಕುದುರೆ ಗಾಡಿಯಲ್ಲಿ ಹಾಕಿ ಮನೆಗೆ ಕರೆದು ತರಬೇಕಾದರೆ ಅದೊಂದು ರಾಮಾಯಣವೇ ಆಗಿಹೋಯಿತು. ಮೊದಲು ಮೊದಲು ನನ್ನನ್ನವರು ಗುರುತಿಸಿದಂತೇ ತೋರಲಿಲ್ಲ. ಮಾರ್ಕೆಟ್ಟಿನಿಂದ ಓಡಿಹೋಗಲು ಪ್ರಯತ್ನಿಸಿದರು. ಆವರೆ ನಾಲ್ಕು ಜನರನ್ನು ಕೂಡಿಸಿ ಬಲುಮೆಯಿಂದ ಅವರನ್ನು ಗಾಡಿಗೇರಿಸಿ ಮನೆಗೆ ಕರೆದು ತಂದದ್ದಾಯಿತು. ಮನೆಗೆ ಬರುವವರೆಗೂ ಹುಚ್ಚುಹುಚ್ಚಾಗಿ ಮಾತನಾಡುತ್ತಲೇ ಇದ್ದರು. ಆಗಾಗ ತುಂಡು ತುಂಡು ಪದ್ಯಗಳನ್ನೂ ವಿಚಿತ್ರವಾಗಿ ಹಾಡುತ್ತಿದ್ದರು. ಅದರೊಂದಿಗೆ ಪಿಟೀಲು ವಾದನ. ಅದೂ ವಿಚಿತ್ರವೇ.

"ಮನೆಗೆ ಬಂದ ಬಳಿಕ, ನನ್ನ ಕೋಣೆಯಲ್ಲಿ ಕುಳಿತುಕೊಂಡ ಬಳಿಕ ಅವರಿಗೆ ಹಿಂದಿನದೆಲ್ಲಾ ನೆನಪಾಯಿತೆಂದು ತೋರುತ್ತದೆ. 'ಓ, ಈಗ ಗೊತ್ತಾಯಿತು. ಇದು ಯಾರ ಮನೆ ಅನ್ನೋದು ಗೊತ್ತಾಯಿತು. ಸರಸು ವಿನ ಗೆಳತಿ ಸೂಶಿಯ ಮನೆ. ಹೌದು. ಅದೇ. ಸಂಶಯವೇ ಇಲ್ಲ. ಇಲ್ಲೇ ನಮ್ಮ ಮದುವೆಯಾದದ್ದು. ಹತ್ತು ಜನರ ಸಮಕ್ಷಮದಲ್ಲಿ ನನ್ನ ಕೊರಳಿಗೆ ಆಕೆ ಮಾಲೆ ಹಾಕಿದಳು. ಆಕೆಯ ಕೊರಳಿಗೆ ನಾನು ಮಾಲೆ ಹಾಕಿದೆ. ನಾವು ಗಂಡ ಹೆಂಡಿರಾದೆವು. ಇಲ್ಲೇ, ಈ ಕೋಣೆಯಲ್ಲೇ ನಮ್ಮ ಪ್ರಥಮ ರಾತ್ರಿಯನ್ನು ಕಳೆದೆವು. ಆಹಾ ಆ ರಾತ್ರಿ ... ನಮ್ಮ, ಪ್ರಥಮ ರಾತ್ರಿ ..... ಓ, ಈಗ ಗೊತ್ತಾಯಿತು. ಈ ಮನೆ ಯಾರದೆಂಬುದು ಗೊತ್ತಾಯಿತು. ಸೂಶಿಯ ಮನೆಯೇ ಇದು. ಸರಸುವಿನ ಜೀವದ ಗೆಳತಿ ಸೂಶಿಯ ಮನೆ. ಆಕೆಯ ತಾಯಿ ಸುಬ್ಬಕ್ಕ......ನಮ್ಮಿಬ್ಬರನ್ನೂ ಹೆತ್ತ ತಾಯಿಯಂತೆಯೇ ನೋಡಿಕೊಂಡ

ಸುಬ್ಬಕ್ಕ ....' ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು 'ಸುಬ್ಬಕ್ಕನವರೇ, ಸುಬ್ಬಕ್ಕನವರೇ,' ಎಂದು ನನ್ನ ತಾಯಿಯನ್ನು ಕೂಗಿದರು. ಆಕೆ ಧಾವಿಸಿ ಬಂದಳು.

"'ಮತ್ತೆ ನಿಮ್ಮ ಮನೆಗೇ ಬರುವಂತಾಯಿತಲ್ಲ ಸುಬ್ಬಕ್ಕ. ಬಹಳ ದಿನಗಳಿಂದ ನಿಮ್ಮನ್ನು ನೋಡಲೇ ಇಲ್ಲ. ನೀವೆಲ್ಲಾ ನೆಟ್ಟಗಿದ್ದೀರಾ?' ಎಂದು ಕೇಳಿದರು.

"'ನೆಟ್ಟಗಿದ್ದೇವೆ ತಮ್ಮ. ನೀನೇಕೆ ಹೀಗಾಗಿದ್ದೀಯಪ್ಪ? ಇದೆಲ್ಲಾ ಏನು ವೇಷ?' ಎಂದು ಕೇಳಿದಳು ಅವ್ವ.

"ವೇಷ-ಎಂಬ ಶಬ್ದ ಕಿವಿಗೆ ಬೀಳುತ್ತಲೂ ಅವರು ತಟ್ಟನೆ ಮೇಲಕ್ಕೆದ್ದು ಕಿಟಕಿಯಲ್ಲಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಂಡರು. ಗಡ್ಡದ ಮೇಲೆ ಬೆರಳುಗಳನ್ನಾಡಿಸುತ್ತ ಮೃದುವಾಗಿ ನಕ್ಕು-'ಹೌದು ಸುಬ್ಬಕ್ಕ. ನೀವು ಹೇಳೋದು ನಿಜ. ಒಳ್ಳೆ ವಿಚಿತ್ರ ವೇಷವನ್ನೇ ಹಾಕಿದಂತಾಗಿದೆ ನಾನು. ಇವೊತ್ತು ಇದನ್ನೆಲ್ಲಾ ತೆಗೆದುಹಾಕುತ್ತೇನೆ. ಸ್ವಲ್ಪ ನೀರು ಕೊಟ್ಟರೆ ಸ್ನಾನವನ್ನೂ ಮಾಡುತ್ತೇನೆ. ಆದರೆ....ಬೇರೆ ಬಟ್ಟೆಗಳೇ ಇಲ್ಲವಲ್ಲ? ಶೇವಿಂಗ್ ಸೆಟ್ಟೂ ಇಲ್ಲ. ಎಲ್ಲಾ ಮನೆಯಲ್ಲಿದೆ....' ಎಂದರು.

"'ನಾನು ತರಿಸಿಕೊಡುತ್ತೇನೆ,' ಎಂದು ಹೇಳಿ ನಾನೇ ಆ ಮನೆಗೆ ಹೋಗಿ, ಮನೆಯಾಕೆಗೆ ವಿಷಯವನ್ನೆಲ್ಲ ತಿಳಿಸಿ ಬಟ್ಟೆಬರೆಗಳನ್ನು ತಂದು ಕೊಟ್ಟೆ.

"ಶೇವ್ ಮಾಡಿಕೊಂಡು ಸ್ನಾನ ತೀರಿಸಿ ಊಟವನ್ನು ಮುಗಿಸಿ ಅವರು ಮಲಗಿಕೊಂಡರು. ಕೊಂಚ ಹೊತ್ತಿನಲ್ಲೇ ನಿದ್ದೆಯೂ ಹತ್ತಿತು. ಎಷ್ಟು ದಿನಗಳಿಂದ ನಿದ್ದೆ ಮಾಡಿಲ್ಲವೋ ಪಾಪ, ಸುಖವಾಗಿ ಮಲಗಿಕೊಳ್ಳಲಿ ಎಂದು ಅವರನ್ನು ಯಾವಾಗಲೂ ಕಾಯುತ್ತಿರುವಂತೆ ಅವ್ವನಿಗೆ ತಿಳಿಸಿ ನಾನು ಆಸ್ಪತ್ರೆಗೆ ಹೊರಟುಹೋದೆ. ಸಾಯಂಕಾಲ ಆರು ಗಂಟೆಗೆ ನಾನು ಹೊರಳಿ ಬಂದಾಗ ಅವರಿನ್ನೂ ಎದ್ದಿರಲಿಲ್ಲ. ರಾತ್ರಿಯಾಯಿತು. ಏಳಲಿಲ್ಲ. ಮಗುವಿನಂತೆ ಮಲಗಿ ನಿದ್ರಿಸುತ್ತಿದ್ದ ಅವರನ್ನು ಎಬ್ಬಿಸುವ ಮನಸ್ಸೂ ನಮಗಾಗಲಿಲ್ಲ. ಬೆಳಿಗ್ಗೆ ಎಂಟು ಗಂಟೆಗೆ ಹಾಸುಗೆ ಬಿಟ್ಟು ಮೇಲಕ್ಕೆದ್ದರು ನೋಡು ನರಸು. ಎದ್ದಾಗ ಮುಖದ ಮೇಲೆ ಸ್ವಲ್ಪ ಕಳೆ ಬಂದಿತ್ತು.

“ಚಹ ಕುಡಿಯುವಾಗ ನಿನ್ನನ್ನು ನೆನಪು ಮಾಡಿಕೊಂಡು ಬೆಂಗಳೂರಿಗೆ ಬಂದು ನಿನ್ನನ್ನು ಹುಡುಕಿದ ವಿಷಯವನ್ನೆಲ್ಲ ಹೇಳಿದರು.”

ಸೂಶಿಯನ್ನು ನಡುವೆಯೆ ತಡೆದು ಸರಸು ಕೇಳಿದಳು : “ಅವರೂ ಬೆಂಗಳೂರಿಗೆ ಬಂದಿದ್ದರಂತೇನು ?”

“ಹೌದು. ನೀನಿತ್ತ ಬಂದೆಯಲ್ಲ ಅದೇ ದಿನ ರಾತ್ರಿ ಗಾಡಿಗೆ ಅವರೂ ಹೊರಟರಂತೆ ಬೆಂಗಳೂರಿಗೆ. ಬೆಂಗಳೂರನ್ನು ನೋಡಿದ್ದು ಅದೇ ಮೊದಲ ಸಲ. ಎಲ್ಲಿ ಅಂತ ಹುಡುಕಬೇಕು ನಿನ್ನನ್ನು ! ಆದರೂ ನಿರಾಶರಾಗದೆ ಸಂದಿಗೊಂದಿಗಳನ್ನೂ ಹುಡುಕಿದರಂತೆ. ಎಲ್ಲಾದರೂ ನಿನ್ನ ಮುಖ ಕಣ್ಣಿಗೆ ಬಿದ್ದೀತೇ ಅಂತ. ಕಡೆಗೊಂದು ದಿನ ನೀನು ಸ್ವಾಮಿಗಳೊಂದಿಗೆ ಮೋಟಾರು ಕಾರಿನಲ್ಲಿ ಹೊರಟಾಗ ಅಕಸ್ಮಾತ್ತಾಗಿ ಕಂಡರಂತೆ. ಮೋಟಾರು ವೇಗವಾಗಿ ಹೊರಟದ್ದರಿಂದ ಅದನ್ನು ನಿಲ್ಲಿಸಲಾಗಲಿಲ್ಲ. ನಿನ್ನ ಹೆಸರು ಹಿಡಿದು ಕೂಗುತ್ತಾ ಓಡತೊಡಗಿದರಂತೆ. ತುಂಬಿದ ರಸ್ತೆಯಲ್ಲಿ ಅರಿವಿಲ್ಲದೆ ಧಾವಿಸುತ್ತಿದ್ದ ಅವರನ್ನು ಕಂಡು ಪೋಲೀಸನೊಬ್ಬ ಹಿಡಿದು ಸ್ಟೇಶನ್ನಿಗೊಯ್ದನಂತೆ. ಒಂದು ರಾತ್ರಿಯೆಲ್ಲ ಅಲ್ಲಿಯೆ ಕಳೆಯಬೇಕಾಯಿತಂತೆ. ಮರುದಿನ ಪೋಲೀಸ್ ಸ್ಟೇಶನ್ನಿನಿಂದ ಹೊರಕ್ಕೆ ಬಂದುದಷ್ಟೇ ಅವರಿಗೆ ನೆನಪು. ಅಲ್ಲಿಂದ ಮುಂದೆ ಏನಾಯಿತೆಂಬುದು ತಿಳಿಯದು. ಬೆಂಗಳೂರಿನಿಂದ ಹೊರಟು ಮತ್ತೆ ನಮ್ಮೂರಿಗೆ ಹೇಗೆ ಬಂದರು, ಮಾರ್ಕೆಟ್ಟನಲ್ಲಿ ಹಾಗೇಕೆ ಕುಳಿತಿದ್ದರು, ಯಾವುದನ್ನೂ ಅವರು ಹೇಳಲಿಲ್ಲ. ಆ ಅವಧಿಯಲ್ಲಿ ಅವರ ಮೈಮೇಲೆ ಅರಿವಿರಲಿಲ್ಲವೆಂದೇ ನಾನು ತರ್ಕಿಸಿದೆ. ಬೆಂಗಳೂರಿನಲ್ಲಿ ನಿನ್ನನ್ನು ಕಂಡರೂ ಭೆಟ್ಟಿಯಾಗಲು ಸಾಧ್ಯವಾಗಲಿಲ್ಲವಾದ್ದರಿಂದ ಅವರ ಮಿದುಳಿನ ಮೇಲೆ ಆಘಾತವಾಗಿರಲು ಸಾಕು. ಅಂಥ ಸಮಯದಲ್ಲೇ ಮನುಷ್ಯನಿಗೆ ಹುಚ್ಚು ಹಿಡಿದುಕೊಳ್ಳುವದು, ಅವರಿಗೂ ಹಾಗೆ ಆಗಿರಬೇಕು. ತಾನು ಯಾರು, ಅಲ್ಲಿಗೇತಕ್ಕೆ ಬಂದಿದ್ದೇನೆ ಎಂಬುದನ್ನೆಲ್ಲ ಮರೆತು ಅವರು ಕಾಲೆಳೆದತ್ತ ಹೋಗಿ ರೈಲು ಹತ್ತಿರಬಹುದು. ನಡುವೆ ಎಷ್ಟೋ ಊರುಗಳನ್ನು ಸುತ್ತಿ ನಮ್ಮ ಊರಿಗೂ ಬಂದಿರಬಹುದು – ಎಂದು ಊಹಿಸಿದೆ. ಏನೇನೊ ಆಯಿತು. ಕೊನೆಗೂ, ಹೊರಳಿ ಬಂದರಲ್ಲ – ಆ ಹುಚ್ಚೂ ತೊಲಗಿದಂತೆ ಕಾಣುತ್ತದೆ, ಎಂದುಕೊಂಡು ಸಮಾಧಾನ ಮಾಡಿಕೊಂಡೆ. ಆದರೆ ಆ ಸಮಾಧಾನ ಬಹುಕಾಲ ಉಳಿಯುವಂತಿರಲಿಲ್ಲ.”

"ಮತ್ತೆ ಹುಚ್ಚು ಕಾಣಿಸಿಕೊಂಡಿತೇ?"

"ಪೂರಾ ಹುಚ್ಚು ಅನ್ನಲಾಗದಿದ್ದರೂ ಅರೆಬರೆ ಹುಚ್ಚೇ ಅಂತೆ ಹೇಳಬಹುದು. 'ಸರಸು ನನ್ನನ್ನು ತ್ಯಜಿಸಿಹೋದಳು. ಆ ಸ್ವಾಮಿಯನ್ನು ಕೂಡಿಕೊಂಡಳು. ನಾನೆಷ್ಟು ಪ್ರೀತಿಸುತ್ತಿದ್ದೆ ಆಕೆಯನ್ನು. ಆಕೆಯೂ ನನ್ನನ್ನೆಷ್ಟು ಪ್ರೀತಿಸುತ್ತಿದ್ದಳು. ಪ್ರೀತಿ! ಈಗ ನನಗೆ ಗೊತ್ತಾಗುತ್ತಿದೆ, ಇದೆಲ್ಲಾ ಸುಳ್ಳು ಅಂತ. ಇದೆಲ್ಲಾ ಮಾಯೆ ಅಂತ. ಪ್ರೀತಿಯೂ ಇಲ್ಲ, ಗೀತಿಯೂ ಇಲ್ಲ. ಎಲ್ಲಾ ನಮ್ಮ ಭ್ರಮೆ. ಕೇವಲ ಭ್ರಮೆ. ಎಂಥ ವಿಚಿತ್ರ ಬಾಳು ನಮ್ಮದು ಸೂಶೀ,' ಎನ್ನುತ್ತಾ ಹುಚ್ಚು ಹುಚ್ಚಾಗಿ ನಗುತ್ತಿದ್ದರು.

"ಮತ್ತೆ ಹೇಳಿದರು: 'ನಿನಗೆ ಗೊತ್ತಿದೆಯೇ ಸೂಶೀ? ಲಲಿತೆಯ ಊರಿನಿಂದ ಇಲ್ಲಿಗೆ ಧಾವಿಸಿ ಬಂದಾಗ ಸರಸುವನ್ನು ಕಾಣದೆ ಗಾಬರಿಯಾಗಿದ್ದೆ. ಸ್ವಾಮಿಯೊಂದಿಗೆ ಆಕೆ ಬೆಂಗಳೂರಿಗೆ ಹೋದಳೆಂದು ಲೀಲಾವತಿ ಹೇಳುತ್ತಲೂ ನನ್ನ ಜೀವವೇ ಹೋದಂತಾಯಿತು ನೋಡು. ಪ್ರೇಮ ಸುಳ್ಳು, ಗೀಮ ಸುಳ್ಳು, ಈ ಪ್ರಪಂಚವೆಲ್ಲಾ ಸುಳ್ಳು, ಎಲ್ಲಾ ಮಾಯೆ ಎನ್ನಿಸಿತು. ಅಂದೇ ಎಲ್ಲವನ್ನೂ ತೊರೆದು ಸನ್ಯಾಸಿಯಾಗಿ ಪ್ರಭುಸ್ವಾಮಿಗಳನ್ನು ಹುಡುಕಿಕೊಂಡು ಅವರ ಹತ್ತಿರ ಹೋಗಬೇಕೆಂದು ನಿರ್ಧರಿಸಿದ್ದೆ. ಸ್ಟೇಶನ್ನಿಗೆ ಬಂದಾಗ ವಿಚಾರ ಬದಲಾಯಿತು. ಸರಸು ತಾನಾಗಿಯೆ ಮನಃಪೂರ್ವಕವಾಗಿ ಸ್ವಾಮಿಯೊಂದಿಗೆ ಓಡಿಹೋಗಿರಲಾರಳು. ಅವರೇ ಮೋಸದಿಂದ ಆಕೆಯನ್ನು ಓಡಿಸಿಕೊಂಡು ಹೋಗಿದ್ದರೂ ಇರಬಹುದು ಎನ್ನಿಸಿತು. ಸರಸುವಿನ ಬಗ್ಗೆ ನನ್ನಲ್ಲಿದ್ದ ಮೋಹವೆಲ್ಲಾ ಮತ್ತೆ ಉಕ್ಕಿತು. ಪ್ರಭುಸ್ವಾಮಿಗಳ ಕಡೆಗೆ ಹೊರಟು ನಿಂತಿದ್ದವನು ಅದನ್ನು ಬಿಟ್ಟು ಬೆಂಗಳೂರಿನ ಗಾಡಿ ಹತ್ತಿದೆ. ಅವಳನ್ನು ಕಂಡದ್ದೂ ಆಯಿತು. ಮೋಟಾರಿನಲ್ಲಿ ಸ್ವಾಮಿಗಳ ಹತ್ತಿರವೇ ಕೂತು ಹೊರಟಿದ್ದ ಸರಸುವನ್ನು ಕಂಡೊಡನೆ ಮತ್ತೆ ಮನಸ್ಸು ಬದಲಾಯಿಸಿತು. ಆಕೆ ಸ್ವಸಂತೋಷದಿಂದಲೇ ಅವರೊಂದಿಗೆ ಹೋಗಿರಬೇಕೆಂದು ಅನ್ನಿಸಿತು. ಮನಸ್ಸು ಕಹಿಯಾಯಿತು. ಎಲ್ಲವೂ ಬೇಸರವಾಯಿತು. ಪ್ರಪಂಚವೆಲ್ಲ ಶೂನ್ಯವಾಗಿ ತೋರಿತು. ಆದರೂ ಎಂಥ ವಿಚಿತ್ರ! ಆಕೆಯ ಬಗ್ಗೆ ಅಷ್ಟು ಬೇಸರವಾದರೂ ಸಹ ಒಮ್ಮೆ ಆಕೆ

ಯನ್ನು ಮುಖತಃ ಕಂಡು ಮಾತಾಡಿದ ಹೊರತೂ ಸಮಾಧಾನವಾಗುವಂತಿರ ಲಿಲ್ಲ. ಅಂತೆಯೆ ಮೋಟರಿನ ಹಿಂದಿನಿಂದ ಹುಚ್ಚನ ಹಾಗೆ ಓಡಿದೆ. ಕಡೆಗೂ ಆಕೆಗೂ ನನಗೂ ಭೆಟ್ಟಿಯಾಗಲಿಲ್ಲ....'

"'ನಾನು ಬೆಂಗಳೂರಿಗೆ ಹೋಗಿ ಆಕೆಯನ್ನು ಕರೆದು ತರಲಾ ಮೂರ್ತಿ?' ಎಂದು ಕೇಳಿದೆ.

"ಅವರು ನಕ್ಕು ನುಡಿದರು: 'ಸುಮ್ಮನೆ ದುಡ್ಡು ದಂಡ ಅಷ್ಟೆ. ಏನೂ ಉಪಯೋಗವಿಲ್ಲ ಸೂಶಿ. ನನ್ನ ಹಾಗೆ ನೀನೂ ಆ ದೆವ್ವದಂಥ ಊರನ್ನೆಲ್ಲ ಸುತ್ತಿ ಅವಳನ್ನು ಕಾಣದೆ ಬರಬೇಕಾದೀತು. ಕಂಡರೂ ಉಪಯೋಗವಿಲ್ಲ. ಇನ್ನು ಆಕೆ ಇತ್ತ ಬರಲಾರಳು. ನನ್ನ ಬಗ್ಗೆ ಆಕೆಗೆ ಮನಸ್ಸು ಕೆಟ್ಟು ಹೋದದ್ದು ಸ್ಪಷ್ಟವಿದೆ. ನನ್ನಿಂದ ಆಕೆಗೆ ಸ್ವಲ್ಪವೂ ಸುಖ ಸಿಕ್ಕಲಿಲ್ಲ ವೆನ್ನುವದೂ ನಿಜ. ಆಕೆ ಶ್ರೀಮಂತರ ಮಗಳು. ರಾಜಕುಮಾರಿಯಂತೆ ಬೆಳೆದವಳು. ನನ್ನಂಥವನ ಕೈ ಹಿಡಿದು ಬರಬಾರದಾಗಿತ್ತು. ಬಂದಳು. ನಾನು ಬಡವ. ಹೆಚ್ಚು ಗಳಿಸಲಾರೆ. ಆಕೆಯನ್ನು ಸುಖದಲ್ಲಿಡಲು ಸಾಧ್ಯ ವಾಗಲಿಲ್ಲ. ಆದರಿಂದಾಗಿಯೆ ಆಕೆ ಸ್ವಾಮಿಗಳ ಕಡೆಗೆ ಹೊರಳಿದಳೊ ಏನೊ. ಆದದ್ದೂ ಒಳ್ಳೆಯದೇ ಆಯಿತು. ನಾನೇನೂ ಆಕೆಯನ್ನು ದೂಷಿಸುವದಿಲ್ಲ. ಇಂಥ ಬಡತನದ ಜೀವನವೇ ಆಕೆಗೆ ಅಪರಿಚಿತವಾದದ್ದು. ಸ್ವಾಮಿಗಳೊಂದಿಗೆ ಸುಖವಾಗಿರಬಹುದು ಆಕೆ. ಅವರಿಗೆ ಹಣದ ಕೊರತೆ ಯಿಲ್ಲ. ತಿರುಗಾಡಲು ಮೋಟಾರು ಸಹಾ ಇದೆ. ನನ್ನಂಥವನ ಜತೆಗಿದ್ದರೆ ಇದೆಲ್ಲಾ ಎಲ್ಲಿಂದ ಬರಬೇಕು? ಹೋಗಲಿ ಬಿಡು ಸೂಶಿ. ಆಕೆ ಅಲ್ಲಿಯೇ ಇರಲಿ. ಎಲ್ಲಿದ್ದರೂ ಸರಿ, ಯಾರ ಜತೆಗಿದ್ದರೂ ಸರಿ, ಆಕೆ ಸುಖವಾಗಿದ್ದರೆ ಸಾಕು. ನನ್ನ ಪಾಡಿಗೆ ನಾನು ನನ್ನ ದಾರಿ ಹಿಡಿದು ಹೋಗುತ್ತೇನೆ.'

"'ಅಂದರೆ? ನೀವು ಮಾಡಬೇಕೆನ್ನುವದಾದರೂ ಏನು?' ಎಂದು ನಾನು ಕೇಳಿದೆ.

"'ಅಂದು ಬೆಂಗಳೂರಿಗೆ ಹೊರಡುವ ಮೊದಲು ಪ್ರಭುಸ್ವಾಮಿಗಳ ಹತ್ತಿರ ಹೋಗಬೇಕೆಂದು ಯೋಚಿಸಿಕೊಂಡಿದ್ದೆ. ಮತ್ತೆ ಮೋಹದ ಬಲೆಗೆ ಬಿದ್ದು ಅದನ್ನು ತ್ಯಜಿಸಿದ್ದೆ. ಈಗ ನನಗೆ ಬುದ್ಧಿ ಬಂದಿದೆ. ಚೆನ್ನಾಗಿಯೆ ಬುದ್ಧಿ ಬಂದಿದೆ. ಇದುವರೆಗೆ ನನ್ನ ಕಣ್ಣುಗಳ ಮೇಲೆ ಮುತ್ತಿಕೊಂಡಿದ್ದ

ಮೋಹದ ಪರದೆ ಹರಿದು ಹಾರಿಹೋಗಿದೆ. ಇಂದು ನಾನು ನಿಜಕ್ಕೂ ಮುಕ್ತನಾಗಿದ್ದೇನೆ, ಸೂಶೀ, ಮುಕ್ತನಾಗಿದ್ದೇನೆ. ಈ ಪ್ರಪಂಚವೆಲ್ಲ ಸುಳ್ಳು. ಮಾಯೆ. ನಾಲ್ಕು ದಿನಗಳ ಮಾಟದಾಟ. ಇದು ನಮ್ಮ ಬಾಳು. ಇಲ್ಲಿ ನಮ್ಮವರಿನ್ನವವರಾರೂ ಇಲ್ಲ. ಪ್ರೇಮ ಗೀಮ ಒಲವು ಗಿಲವು ಎಲ್ಲ ಭ್ರಮೆ. ಈ ಮಾಯಾ ಪ್ರಪಂಚದಿಂದ ಎಷ್ಟು ಬೇಗ ಬಿಡುಗಡೆ ಹೊಂದಿದಷ್ಟೂ ಉತ್ತಮವೆ,' ಎಂದು ನುಡಿದರು. ಅವರ ಕಣ್ಣುಗಳಲ್ಲಿ ನಿಜವಾಗಿಯೂ ವಿರಕ್ತಿ ಹೊಳೆಯುತ್ತಿತ್ತು ಸರಸೂ.

"ಅವರು ಹಾಗೆಲ್ಲ ಹೇಳಿದರಾದರೂ ನಾನು ಗಾಬರಿಗೊಳ್ಳಲಿಲ್ಲ. ಹೃದಯಕ್ಕಾದ ಭೀಕರ ಆಘಾತದಿಂದಾಗಿ ಹೀಗೆಲ್ಲ ಆಡುತ್ತಿರುವರೆಂದು ಬಗೆದು ಅವರಿಗೆ ತಿಳಿಸದೇನೇ ಬೆಂಗಳೂರಿಗೆ ಬಂದು ನಿನ್ನನ್ನು ಪತ್ತೆ ಮಾಡಿ ಕರೆದು ತಂದು ಭೆಟ್ಟಿ ಮಾಡಿಸಬೇಕೆಂದು ನಿರ್ಧರಿಸಿದೆ. ನಿನ್ನನ್ನೊಮ್ಮೆ ನೋಡುತ್ತಲೂ ಅವರು ಹಿಂದಿನದೆಲ್ಲವನ್ನೂ ಮರೆತು ಮತ್ತೆ ಮೊದಲಿನಂತೆಯೇ ನಿನ್ನೊಡನೆ ಪ್ರೇಮದಿಂದ ಇರಬಹುದೆಂದೂ ನನಗೆನ್ನಿಸಿತು. ಅಂತೆಯೇ, ಅವರನ್ನು ಮನೆಯಿಂದ ಹೊರಗೆ ಎಲ್ಲಿಗೂ ಬಿಡದಂತೆ ಅವ್ವನಿಗೆ ಕಟ್ಟುನಿಟ್ಟಾಗಿ ತಿಳಿಸಿ ನಾನಿತ್ತ ಗುಟ್ಟಾಗಿ ಹೊರಟು ಬಂದಿದ್ದೆ."

"ಅವರಿನ್ನೂ ಅಲ್ಲಿಯೆ ಇರಬಹುದೇ ಸೂಶೀ?"

"ಇರದೆ ಏನು? ಅವ್ವನಿಗೆ ಸ್ಪಷ್ಟವಾಗಿ ಹೇಳಿದ್ದೇನೆ ನಾನು. ಅವರ ಮನಸ್ಸು ಕಹಿಯಾಗಿರುವ ವಿಷಯ ಆಕೆಗೂ ಗೊತ್ತಿದೆ. ನಾನು ಮರಳುವವರೆಗೂ ಅವರನ್ನೆಲ್ಲೂ ಬಿಡದಂತೆ ನೋಡಿಕೊಂಡಿರುತ್ತಾಳೆ."

"ಆದರೆ....ಆದರೆ ಅವರ ವಿರಕ್ತಿ ?"

"ಅದರ ಬಗ್ಗೆ ಏನೂ ಚಿಂತೆ ಬೇಡ ಸರಸೂ. ನಿರಾಸೆಯಾದಾಗ ಮನುಷ್ಯ ವಿರಕ್ತಿಯ ಮಾತನಾಡುತ್ತಾನೆ. ಆದರೆ ಆ ವಿರಕ್ತಿ ಹೆಚ್ಚು ಹೊತ್ತು ಉಳಿಯುವುದಿಲ್ಲ. ಅದರಲ್ಲೂ ಶಿವಮೂರ್ತಿ ಇನ್ನೂ ತರುಣರು. ವೈರಾಗಿಯಾಗುವ ವಯಸ್ಸೇ ಅವರದು ?"

ಸರಸುವಿಗೆ ಸಮಾಧಾನವಾಗಲಿಲ್ಲ. ಅವರು ತರುಣರಾದರೂ ಸಹ ಇನ್ನುಳಿದ ತರುಣರ ಹಾಗಲ್ಲ. ಅವರ ಸ್ವಭಾವವೇ ಒಂದು ಬಗೆಯದು. ಕೊಂಚ ವಿಲಕ್ಷಣ ಎಂದರೂ ನಡೆದೀತು. ಅವರನ್ನು ಮೊಟ್ಟ ಮೊದಲ

ಬಾರಿ ಕಂಡಾಗಿನಿಂದ ತನಗೆ ಅದರ ಅನುಭವವಿದೆ. ರಾತ್ರಿರಾತ್ರಿಯೆಲ್ಲ ಸಿಟೀಲು ಬಾರಿಸುತ್ತ ಈ ಪ್ರಪಂಚವನ್ನೆಲ್ಲ ಮರೆಯುತ್ತಿದ್ದವರು ಅವರು. ಅದೊಂದು ರಾತ್ರಿ ಆ ಪ್ರಚಂಡ ಮಳೆಯಲ್ಲಿ ಅರಿವಿಲ್ಲದೆ ಕುಳಿತಿದ್ದವರು ಅವರು. ಆಗಲೇ ಅವರ ಕಣ್ಣುಗಳಲ್ಲಿ ವಿರಕ್ತಿಯ ಛಾಯೆ ಕಾಣಿಸಿದ್ದಿತು ತನಗೆ. ತನ್ನ ಕಡೆಗೆ ಅವರ ದೃಷ್ಟಿ ಹೊರಳಿದ್ದು ಸಹ ಎಷ್ಟೋ ದಿನಗಳಾದ ಬಳಿಕ. ತಮ್ಮ ಮನೆಯೆದುರಿಗಿನ ಕೊಟಡಿಗೆ ಬಂದು ತಿಂಗಳಾಗಿದ್ದರೂ ಅವರ ಲಕ್ಷ್ಯ ಹೊರಳಿರಲಿಲ್ಲ ತನ್ನ ಕಡೆಗೆ. ಇಂಥ ವಿಚಾರಗಳಲ್ಲಿ ಅವರಿಗೆ ಆಸಕ್ತಿಯೆ ಇದ್ದಂತಿರಲಿಲ್ಲ. ಅವರ ಕೊಟಡಿಯಲ್ಲಿ ನೇತಾಡುತ್ತಿದ್ದ ಸ್ವಾಮಿ ವಿವೇಕಾನಂದರ ಚಿತ್ರಪಟ....ವಿವೇಕಾನಂದರು ಹೋದ ದಾರಿಯಲ್ಲಿಯೆ ಅವರೂ ಹೋಗುವವರಿದ್ದರೊ ಏನೊ ....ತನ್ನ ಪರಿಚಯವಾಗದಿದ್ದಲ್ಲಿ ಅವರು ಇನ್ನೂ ಎಷ್ಟು ದಿನ ಬ್ರಹ್ಮಚಾರಿಗಳಾಗಿಯೆ ಇರುತ್ತಿದ್ದರೊ....ಬ್ರಹ್ಮಚಾರಿ....

ಹಠಾತ್ತಾಗಿ ಆಕೆಗೆ ಶಾಸ್ತ್ರಿಯ ಪತ್ನಿ ಲಲಿತಳ ಜ್ಞಾಪಕ ಬಂದಿತು. ಅಂದು ರಾತ್ರಿ ತನಗೆ ಹೇಳದೆ ಕೇಳದೆ ಅವರು ಆಕೆಯೊಂದಿಗೆ ಹೊರಟು ಹೋಗಿ ಬಿಟ್ಟರಲ್ಲ....ಅದರಿಂದಾಗಿಯೆ ತನಗೆ ಕೋಪ ಬಂದದ್ದು. ಅವರ ಬಗೆಗೆ ಮನಸ್ಸು ಕಲುಷಿತವಾದದ್ದು. ಲಲಿತೆಯ ಮೋಹಕ್ಕೆ ಅವರು ಬಲಿಬಿದ್ದುದು ನಿಜವಿರಬಹುದೇ? ಇಂಥ ವಿಷಯಗಳಲ್ಲಿ ನಿರಾಸಕ್ತರಾಗಿದ್ದ ತನ್ನವರು?—

"ಶಾಸ್ತ್ರಿಯ ಹೆಂಡತಿಯ ಬಗ್ಗೆ ನಿನ್ನೆದುರು ಏನಾದರೂ ಹೇಳಿದರೇನು ಸೂಶೀ?" ಎಂದು ಪ್ರಶ್ನಿಸಿದಳಾಕೆ.

"ಹೌದು. ಹೇಳಿದ್ದರು. ನಿನ್ನೆದುರಿಗೆ ಆ ವಿಷಯ ಹೇಳಲು ಮರೆತೇ ಬಿಟ್ಟೆನಲ್ಲ. ಅವರಿಗೆ ಕೊಂಚವೂ ಇಷ್ಟವಿರಲಿಲ್ಲವಾದರೂ ಆಕೆ ಅವರನ್ನು ತನ್ನ ತವರೂರಿಗೆ ಎಳೆದುಕೊಂಡು ಹೋಗಿದ್ದಳಂತೆ. ಮರುದಿನವೇ ಆಕೆಗೆ ಹೇಳದೆ ಕೇಳದೆ ಅವರು ಅಲ್ಲಿಂದ ಹೊರಟುಬಿಟ್ಟರಂತೆ," ಎಂದು ನುಡಿದು ಸೂಶಿ, ಆ ವಿಷಯವಾಗಿ ಶಿವಮೂರ್ತಿಯಿಂದ ತನಗೆ ತಿಳಿದುಬಂದುದೆಲ್ಲವನ್ನೂ ವಿವರವಾಗಿ ಹೇಳಿದಳು.

"ನೀನು ಮೂರ್ತಿಯನ್ನು ಸರಿಯಾಗಿ ಅರಿತುಕೊಂಡೇ ಇಲ್ಲ ಸರಸೂ. ಹಾಗೆಲ್ಲ ಕಂಡ ಕಂಡ ಹೆಣ್ಣುಗಳ ಬೆನ್ನು ಹತ್ತಿ ಅಲೆಯುವ ಜಾತಿಯವರಲ್ಲ.

ಅವರು. ಲಲಿತಾ ಆ ರೀತಿ ಅವರನ್ನು ಮೋಸಗೊಳಿಸಿ ತನ್ನ ತವರೂರಿಗೆ ಕರೆದೊಯ್ಯದಿದ್ದಲ್ಲಿ ಅವರೆಂದೂ ತಾನಾಗಿಯೆ ಆಕೆಯ ಬಲೆಗೆ ಬೀಳುತ್ತಿರಲಿಲ್ಲ. ಈ ಬಗ್ಗೆ ನನಗೆ ಪೂರಾ ನಂಬಿಕೆಯಿದೆ."

"ನನಗೂ ನಂಬಿಕೆಯಿತ್ತು ಸೂಶಿ. ಆದರೆ.........ಆದರೆ.....ಮಹಾ ಮೂರ್ಖಳು ನಾನು. ಆ ಲೀಲಾವತಿಯ ಮಾತು ಕೇಳಿಕೊಂಡು ಹುಚ್ಚು ಹುಚ್ಚಾಗಿ ಆಚರಿಸಿದೆ. ನನ್ನ ಕಾಲ ಮೇಲೆ ನಾನೇ ಕಲ್ಲು ಹಾಕಿಕೊಂಡೆ. ಏನು ಕೊಟ್ಟರೆ ನೆಟ್ಟಗಾದೀತವ್ವ, ನಾ ಮಾಡಿದ ತಪ್ಪು? ಕೆಟ್ಟುಹೋಯಿತು.. ಎಲ್ಲಾ ಹಾಳಾಗಿ ಹೋಯಿತು. ಇನ್ನು ನಾನವರಿಗೆ ಹೇಗೆ ಮುಖ ತೋರಿಸಲಿ?" ಎಂದು ಸರಸು ಅಳತೊಡಗಿದಳು.

"ಶೂ ಶೂ. ಹಾಗೆಲ್ಲಾ ಸುಮ್ಮಸುಮ್ಮನೆ ಕಣ್ಣೀರು ಹಾಕಬಾರದವ್ವ. ಮತ್ತೆ ನೀವಿಬ್ಬರೂ ಮೊದಲಿನಂತೆ ಪ್ರೀತಿಯಿಂದ ಬಾಳುವೆ ಸಾಗಿಸುವ ಹಾಗಾಗುತ್ತದೆಂಬುವಲ್ಲಿ ನನಗೇನೂ ಸಂಶಯವಿಲ್ಲ. ಮೂರ್ತಿಯ ಸ್ವಭಾವ ನನಗೆ ಗೊತ್ತು. ಅವರು ಬಹಳ ಉದಾರಿಗಳು. ಕ್ಷಮಾಶೀಲರು."

"ಎಂಥವರಾದರೇನಂತೆ ಸೂಶೀ? ಕ್ಷಮಿಸಲಾಗದಂಥಾ ಅಪರಾಧ ನನ್ನದು. ಅಯ್ಯೋ, ಎಂಥ ತಪ್ಪು ಮಾಡಿದೆ. ನಮ್ಮ ಪ್ರೀತಿಯ ಹಾಲಿಗೆ ನಾನಾಗಿಯೆ ಹುಳಿ ಹಾಕಿ ಕೆಡಿಸಿಬಿಟ್ಟೆನಲ್ಲ?"

"ಕೆಟ್ಟದ್ದು ಕೆಟ್ಟುಹೋಯಿತು ಸರಸೂ. ಹಿಂದೆ ನಡೆದುದನ್ನೆಲ್ಲ ಇಬ್ಬರೂ ಮರೆತರಾಯಿತಲ್ಲ? ಎಷ್ಟು ಜನ ಮರೆತುಬಿಟ್ಟು ಹೊಸ ಸಂಸಾರ ಸಾಗಿಸುವುದಿಲ್ಲ? ಇನ್ನು ನಿಮ್ಮದೂ ಹೊಸ ಬಾಳು ಸರಸೂ. ಮೂರ್ತಿಯಂತೂ ಮರೆಯಬಲ್ಲರೆಂದೆನ್ನಿಸುತ್ತದೆ. ನೀನೂ....."

"ಅವರೂ ಮರೆಯಲಾರರು. ನಾನೂ ಮರೆಯಲಾರೆ. ಹೇಗೆ ತಾನೆ ಮರೆತೇನವ್ವ ನನ್ನೀ ಕೆಟ್ಟ ಕೃತಿಗಳನ್ನು? ಮೊದಲಿನಂತೆ ಅವರೆದುರಿಗೆ ಹೇಗೆ ಮುಖ ಎತ್ತಿ ನಡೆದೇನು? ಅತ್ತ ತಂದೆತಾಯಿಗಳಿಗೂ ಮುಖ ತೋರಿಸುವಂತಿಲ್ಲ. ಇತ್ತ....."

ಮತ್ತೆ ಅಳು. ಮತ್ತೆ ಕಣ್ಣೀರು.

ರೈಲು ಬಂದು ಆ ನಗರದ ನಿಲ್ದಾಣದಲ್ಲಿ ನಿಲ್ಲುವವರೆಗೂ ಅವಳ ವ್ಯಥೆಯೂ ನಿಂತಿರಲಿಲ್ಲ. ಕುದುರೆಗಾಡಿಯನ್ನೇರಿ ಸೂಶಿಯ ಮನೆಗೆ

ಬರುತ್ತಿದ್ದಾಗ ಆಕೆಯ ಎದೆ ಬಡಿದುಕೊಳ್ಳತೊಡಗಿದ್ದಿತು. ಇನ್ನೇನು, ಎಂಟು ಹತ್ತು ನಿಮಿಷಗಳಲ್ಲಿಯೆ ಅವರು ಕಾಣಿಸಿಕೊಳ್ಳುವರು. ತನ್ನನ್ನು ಕಂಡೊಡನೆ ಮುಖ ತಿರುಗಿಸುವರೊ ಏನೊ. ತಾನಾದರೂ ಆಗ ಹೇಗೆ ವರ್ತಿಸಬೇಕು? ಅವರೊಂದಿಗೆ ಏನೆಂದು ಮಾತನಾಡಬೇಕು?

ಮನೆಗೆ ಬಂದ ಬಳಿಕ ಆ ಸಮಸ್ಯೆಯನ್ನೆದುರಿಸುವ ಪ್ರಸಂಗವೇ ಬರಲಿಲ್ಲ.

ಕುದುರೆಗಾಡಿ ಬಂದು ಮನೆಯೆದುರಿಗೆ ನಿಲ್ಲುತ್ತಲೂ ಒಳಗಿನಿಂದ ಧಾವಿಸಿ ಬಂದ ಸುಬ್ಬಕ್ಕ, ಸರಸುವನ್ನು ಕಂಡೊಡನೆಯೆ ಇಳಿದ ಧ್ವನಿಯಲ್ಲಿ ಹೇಳಿದಳು: "ನೀವೇನೋ ಬಂದಿರಿ. ಆದರೆ....."

"ಏನಾಯಿತೇ ಅವ್ವ?" ಎಂದು ಗಾಬರಿಯಿಂದ ಕೇಳಿದಳು ಸೂಶಿ.

"ಶಿವಮೂರ್ತಿ ಹೋಗಿಬಿಟ್ಟನವ್ವ," ಎಂದು ನುಡಿದು ಸುಬ್ಬಕ್ಕ ಅಲ್ಲಿ ನಿಲ್ಲಲಾರದೆ ಅಡುಗೆ ಮನೆಗೆ ತೆರಳಿದಳು.

[೨೬]

ಒಂದು ವಾರ ಕಳೆದು ಹೋಗಿದ್ದಿತು.

ಸರಸುವಿನ ಪಾಲಿಗೆ ಆ ಒಂದು ವಾರ ಒಂದು ವರುಷವಾಗಿ ಪರಿಣಮಿಸಿದ್ದಿತು. ವಿರಹವ್ಯಥೆಯ, ವೇದನೆಯ ವಾರ. ಆಕೆಯನ್ನು ಸಂತವಿಸಿ ಒಂದು ತುತ್ತು ಊಟ ಮಾಡಿಸಬೇಕಾದರೆ ಸಾಕು ಸಾಕಾಗಿ ಹೋಗುತಿತ್ತು ಸೂಶಿಗೆ.

ಆ ಮನೆಗೆ ಬಂದಿಳಿದೊಡನೆಯೆ ಸುಬ್ಬಕ್ಕನಾಡಿದ ಮಾತು ಕಿವಿಗೆ ಬಿದ್ದಾಗ ಆಕೆ ಬಾಗಿಲಲ್ಲಿಯೆ ಕುಸಿದು ಬಿದ್ದಿದ್ದಳು. "ಹೊರಟು ಹೋದರು..... ಹೊರಟು ಹೋದರು.....ಅಂದರೆ? ಆದುದಾದರೂ ಏನು? ಅಯ್ಯೋ ಶಿವನೆ, ಏನಾಯಿತು ಅವರಿಗೆ?"

ಸೂಶಿಯೂ ಗಾಬರಿಗೊಂಡು ತಾಯಿಯನ್ನು ಕೇಳಿದ್ದಳು: "ಏನವ್ವ, ಏನಾಯಿತು? ಎಲ್ಲಿಗೆ ಹೋದರು?"

"ಎಲ್ಲಿಗೊ ಏನೊ. ನೀನು ಬೆಂಗಳೂರಿಗೆ ಹೊರಟೆಯಲ್ಲ? ಅದೇ ದಿನ ಸಾಯಂಕಾಲ ಹರಿಹರಪ್ಪ ಬಂದಿದ್ದರು. ಹೊರಗಡೆ ಹೋಗಿ ತಿರುಗಾಡಿ

ಕೊಂಡು ಬರುತ್ತೇವೆಂದು ಹೇಳಿ ಹೋದರು. ಆ ಮೇಲೆ ಶಿವಮೂರ್ತಿ ಮನೆಗೇ ಬರಲಿಲ್ಲ."

"ಹರಿಹರ ಮತ್ತೆ ಬಂದಿದ್ದರೇ ?"

"ಇಲ್ಲ. ಅವರೂ ಬರಲಿಲ್ಲ. ಊಟ ಮಾಡಿದ ಮೇಲೆ ನೀನು ಹೋಗಿ ಅವರನ್ನು ನೋಡಿ ಬಾ. ಶಿವಮೂರ್ತಿ ಹೋದದ್ದೆಲ್ಲಿಗೆ ಎಂಬುದು ಅವರಿಗೆ ಗೊತ್ತಿದ್ದರೂ ಇರಬಹುದು."

ಸರಸುವನ್ನು ಸಂತವಿಸಿ, ಕೊಂಚ ಊಟ ಮಾಡಿಸಿ ಸೂಶಿ ಹರಿಹರ ನನ್ನು ಕಾಣಲೆಂದು ಆತನ 'ಜನಪದ' ಕಾರ್ಯಾಲಯವನ್ನು ಹುಡುಕಿ ಕೊಂಡು ಹೋಗಿದ್ದಳು.

ಮಾರುಕಟ್ಟೆಯ ಎಡಗಡೆಗೆ ಹೊಲಸು ಸಂದಿಯೊಂದರಲ್ಲಿ ಆ ಕಾರ್ಯಾ ಲಯವಿದ್ದಿತು. ಗಿರಣಿಯ ಕೂಲಿಕಾರರು ವಾಸಿಸುವ 'ಚಾಳ' ದಂಥ ಓಣಿ. ಇದಿರು ಬದಿರಾಗಿ ಎರಡು ಸಾಲುಗಳಲ್ಲಿ ಒಂದೇ ಆಕಾರದ ಚಿಕ್ಕ ಚಿಕ್ಕ ಮನೆ ಗಳು. ಅವುಗಳ ನಡುವೆ ಇಬ್ಬರು ಹಾಯ್ದಾಡುವಷ್ಟು ಸಂಕುಚಿತವಾದ ಅಂಗಳ. ಅದನ್ನು ಯಾವಾಗ ರಿಪೇರಿ ಮಾಡಿಸಲಾಗಿದ್ದಿತೇನೊ, ಅಲ್ಲಲ್ಲಿ ಚಿಕ್ಕ ಪುಟ್ಟ ತಗ್ಗುಗಳಾಗಿ ಅವುಗಳಲ್ಲಿ ಕೊಳೆ ನೀರು ನಿಂತಿತ್ತು. ಮನೆಗಳಲ್ಲಿ ವಾಸಿಸುತ್ತಿದ್ದವರು ಉಗುಳುವ ತಾಂಬೂಲದಿಂದಾಗಿ ನೆಲ ಅಲ್ಲಲ್ಲಿ ಕೆಂಪ ಗಾಗಿತ್ತು. ಮನೆಗಳ ಬದಿಯಲ್ಲೇ ಚಿಕ್ಕ ಚರಂಡಿ. ಅದರಲ್ಲಿ ಕೊಳಚೆ ನೀರು ಹೊಲಸು ವಾಸನೆ ಹರಡುತ್ತಾ ನಿಂತಿದ್ದಿತು. ನೂರಾರು ಅಡಿಗಳಷ್ಟು ಉದ್ದವಾಗಿದ್ದ ಆ ಅಂಗಳದಲ್ಲಿ ಒಂದೆರಡು ಮುದಿ ನಾಯಿಗಳು ನೊಣಗಳನ್ನು ಓಡಿಸುತ್ತ ಬಿದ್ದುಕೊಂಡಿದ್ದುವು. ಮನೆಗಳೆದುರಿಗೆ ಹೆಂಗುಸರು ಗುಂಪುಗೂಡಿ ಎಲೆ ಅಡಿಕೆ ಮೆಲ್ಲುತ್ತ, ತಾಂಬೂಲದ ರಸವನ್ನು ಅಂಗಳಕ್ಕೆ ಚಿಮುಕಿಸುತ್ತ ಕುಳಿತಿದ್ದರು. ಆ ಓಣಿಯಲ್ಲಿ ಅಡಿಯಿರಿಸುತ್ತಲೂ ಸೂಶಿಯ ದೃಷ್ಟಿ ಸಹಜ ವಾಗಿಯೆ ಆ ಹೆಂಗುಸರ ಕಡೆಗೆ ಹರಿಯಿತು. ತೀರ ಕೆಳ ತರಗತಿಯ ಸೂಳೆ ಯರ ಹಾಗೆ ಕಾಣುತ್ತಿದ್ದರವರು. "ಇದೇನು, ಇಂಥ ವಸತಿಯಲ್ಲಿ ಹರಿಹರ ಆಫೀಸು ಹೂಡಿದ್ದಾರಲ್ಲ!" ಎಂದು ಅಚ್ಚರಿ ಪಟ್ಟುಕೊಳ್ಳುತ್ತ ಆಕೆ 'ಜನಪದ ಕಾರ್ಯಾಲಯ' ಎಂಬ ಹಲಗೆಯನ್ನು ತೋರಿಸುತ್ತಿದ್ದ ಮನೆಯೆದುರಿಗೆ ಬಂದು ಬಾಗಿಲು ತಟ್ಟಿದ್ದಳು.

ಒಡನೆಯೆ ಬಾಗಿಲು ತೆರೆಯಲ್ಪಟ್ಟಿತ್ತು.

ಎರಡು ಕೊಟಡಿಗಳ ಚಿಕ್ಕ ಮನೆ ಅದು. ಹೊರಗಿನ ಕೊಟಡಿಯಲ್ಲಿ ಮುದ್ರಣಯಂತ್ರವಿತ್ತು. ಒಳಗಿನದರಲ್ಲಿ ಅಚ್ಚಿನ ಮೊಳೆಗಳ 'ಕೇಸು'ಗಳು. ಸೂಶಿ ಒಳಗಡೆ ಅಡಿಯಿರಿಸಿದಾಗ ಹರಿಹರ ಕಪ್ಪು ಬಣ್ಣದ ಚೊಣ್ಣವೊಂದನ್ನು ಧರಿಸಿ ಮುದ್ರಣ ಯಂತ್ರದ ಮೇಲೆ ಕೆಲಸಮಾಡುತ್ತಿದ್ದವನು ಬ್ರೇಕು ಹಾಕಿ ಯಂತ್ರವನ್ನು ನಿಲ್ಲಿಸಿದ್ದ. ಎರಡು ಕೈಗಳಿಗೂ ಹತ್ತಿಕೊಂಡಿದ್ದ ಮುದ್ರಣ ಶಾಯಿಯ ಕಪ್ಪನ್ನು ಬಟ್ಟೆಯಿಂದ ಒರೆಸುತ್ತ-"ಓ, ನೀವೇ? ಯಾವಾಗ ಬಂದಿರಿ ಬೆಂಗಳೂರಿಂದ? ಬರ್ರಿ," ಎನ್ನುತ್ತಾ ಒಳಗಡೆ ಕರೆದು ತಂದು ಕೂಡ್ರಿಸಿದ್ದ.

"ಇಂಥ ಸ್ಥಳದಲ್ಲಿ ನೀವು ಆಫೀಸು ಹೂಡಿರಬಹುದೆಂದು ನಾನು ತಿಳಿದಿರಲಿಲ್ಲ ಬಿಡಿರಿ," ಎಂದು ಮಾತಿಗಾರಂಭಿಸಿದ್ದಳು, ಸೂಶಿ.

"ಇಂಥ ಸ್ಥಳದಲ್ಲಿ ಅಂದರೆ?"

"ಇಲ್ಲಿ ವೇಶ್ಯೆಯರು ವಾಸವಾಗಿರುವಂತಿದೆಯಲ್ಲ?"

"ಹೌದು. ವೇಶ್ಯೆಯರ ಓಣಿಯೇ ಇದು. ಮತ್ತೆ, ಹೈಕ್ಲಾಸ್ ವೇಶ್ಯೆಯರೂ ಅಲ್ಲ ಇವರು. ಪಾಪ, ಬಹಳ ಬಡವರು. ವೇಶ್ಯಾ ವ್ಯವಸಾಯದ ಎಲ್ಲ ಮೆಟ್ಟಲುಗಳನ್ನೂ ಹತ್ತಿ ಮೇಲೆ ಹೋಗಿ, ವಯಸ್ಸಾದ ಹಾಗೆಲ್ಲ ಮತ್ತೆ ಕೆಳಕ್ಕುರುಳಿ ಇದೀಗ ಇಲ್ಲಿಗೆ ಬಂದು ಬಿದ್ದವರಿವರು. ನಮ್ಮ ದೇಶದ ಘೋರ ದಾರಿದ್ರ್ಯ, ಆರ್ಥಿಕ ವಿಷಮತೆಯ ಭೀಕರ ಪರಿಣಾಮಗಳಿಗೆ ಇವರಿಗಿಂತ ಹೆಚ್ಚಿನ ನಿದರ್ಶನ ಅಗತ್ಯವಿಲ್ಲ. ಇದೇ ನಿಜವಾದ ಜನಪದ ಸುಶೀಲಮ್ಮ. ಇಂಥ ಬಡವರಿಗೆ ಐದು 'ಅ'ಗಳು ದೊರೆಯಲೆಂದೇ ಪತ್ರಿಕೆ ಪ್ರಾರಂಭಿಸಿರುವ ನಾನು ಆ ಧ್ಯೇಯದಿಂದ ಕದಲದಂತಿರಬೇಕಾದರೆ ಯಾವಾಗಲೂ ಇಂಥವರ ನಡುವೆಯೇ ನೆಲಸಿರುವದೂ ಉತ್ತಮವೇ."

"ಐದು 'ಅ' ಗಳು?" ಎಂದು ವಿಸ್ಮಯದಿಂದ ಕೇಳಿದ್ದಳು ಸೂಶಿ.

"ನಮ್ಮ ಪತ್ರಿಕೆಯ ಮುಖಪುಟದ ಮೇಲೆ ವಾರವಾರವೂ ಕಾಣಿಸುತ್ತವಲ್ಲ ಈ ಐದು 'ಅ' ಗಳು. ಅನ್ನ, ಅರಿವೆ, ಅರಿವು, ಆಸರ, ಆರೋಗ್ಯ. ಮನುಷ್ಯ ನಿಜವಾಗಿಯೂ ಮನುಷ್ಯನಂತೆ ಬದುಕಬೇಕಾದರೆ ಈ ಐದು 'ಅ' ಗಳು ಬೇಕೇ ಬೇಕು. ಈಗ ನೋಡಿದರೆ ಯಾವುದೂ ಇಲ್ಲ. ಅನ್ನದ

ಕೊರತೆ, ಅರಿವೆಯ ಕೊರತೆ, ಅರಿವು – ಅಂದರೆ ಶಿಕ್ಷಣ ಜ್ಞಾನಗಳ ಕೊರತೆ, ಆಸರ – ಅಂದರೆ ಸರಿಯಾದ ಮನೆಗಳ ಮತ್ತು ಬದುಕಿನ ಸಾಧನಗಳ ಕೊರತೆ. ಆರೋಗ್ಯದ ವಿಚಾರವಂತೂ ಕೇಳಲೇ ಬೇಡಿರಿ. ಆರೋಗ್ಯ ಮಂತ್ರಿಗಳಿದ್ದಾರೆ, ಆರೋಗ್ಯ ಶಾಖೆಗಳಿವೆ – ಅವುಗಳಿಗಾಗಿ ಕೋಟಿಗಟ್ಟಲೆ ಹಣ ಹಾಳಾಗುತ್ತಲೂ ಇದೆ. ಆದರೂ ಹಿಂದುಸ್ಥಾನದ ಕೋಟ್ಯಾವಧಿ ಜನ ಜೀವಿಸಿರುವದು ಈ ಓಣಿಯಂಥ ನರಕಪ್ರಾಯವಾದ ಓಣಿಗಳಲ್ಲಿ. ಇದಕ್ಕಿಂತ ಹೊಲಸಾದ ಓಣಿಗಳಿಗೂ ಕೊರತೆ ಇಲ್ಲ ಈ ನಗರದಲ್ಲಿ. ಕೇವಲ ಇದೊಂದೇ ನಗರವಲ್ಲ, ಎಲ್ಲ ನಗರಗಳ ಸ್ಥಿತಿಯೂ ಹೀಗೇ. ಎಲ್ಲ ಹಳ್ಳಿಗಳ ಸ್ಥಿತಿಯೂ ಹೀಗೇ. ಈ ದುಃಸ್ಥಿತಿಯನ್ನು ಹೋಗಲಾಡಿಸಿ ಒಳ್ಳೆಯ ಬದುಕಿಗೆ ದಾರಿ ಮಾಡುವವೇ ನನ್ನಂಥವರ ಕರ್ತವ್ಯ. ನಾನು 'ಜನಪದ' ವನ್ನು ಹೊರಡಿಸುವುದೂ ಅದಕ್ಕಾಗಿಯೆ. ಬಡವನಾದ ನನಗೆ ಹೆಚ್ಚು ಬಾಡಿಗೆ ತೆತ್ತು ಒಳ್ಳೆಯ ಕಡೆಗಳಲ್ಲಿ ಮನೆ ಹಿಡಿಯಲು ಸಾಧ್ಯವಾಗಲಿಲ್ಲ. ಈ ಮನೆಗೆ ಕೇವಲ ಎಂಟು ರೂಪಾಯಿ ಬಾಡಿಗೆ. ಇದೇ ಸಾಕು ಎಂದು ಇಲ್ಲಿ ತಳವೂರಿದ್ದಾಯಿತು."

"ಸರಿ. ಪತ್ರಿಕೆ ಹೇಗೆ ನಡೆದಿದೆ?"

"ಹೊಸದಾಗಿ ಹೊರಟದ್ದು. ಹೇಗೋ ಸಾಗಿದೆ. ಹೆಚ್ಚು ಖರ್ಚು ಇಟ್ಟುಕೊಳ್ಳದೆ ರಥ ಸಾಗಿಸುತ್ತಿದ್ದೇನೆ. ನನ್ನ ಇಬ್ಬರು ಚಿಕ್ಕ ತಮ್ಮಂದಿರು ಮೊಳೆ ಜೋಡಿಸಲು ಕಲಿತಿದ್ದಾರೆ. ಪತ್ರಿಕೆಯ ವಿಷಯವನ್ನೆಲ್ಲ ಅವರೇ ಕಂಪೋಸ್ ಮಾಡುತ್ತಾರೆ. ಪ್ರಿಂಟಿಂಗ್ ಕೆಲಸವನ್ನಂತೂ ನಾನೇ ನೋಡಿ ಕೊಳ್ಳುತ್ತೇನೆ. ಎಲ್ಲಾ ಸ್ವಾವಲಂಬನದ ಬದುಕು. ಇಲ್ಲವಾದರೆ ಬಹಳ ಕಷ್ಟವಾಗುತ್ತಿತ್ತು."

"ತಮ್ಮಂದಿರು ಕಂಪೋಸ್ ಮಾಡುತ್ತಾರೆಯೆ! ಎಲ್ಲಿದ್ದಾರೆ, ಕಾಣುವ ದಿಲ್ಲವಲ್ಲ?"

"ಶಾಲೆಗೆ ಹೋಗಿದ್ದಾರೆ. ಸಾಯಂಕಾಲ ಶಾಲೆ ಬಿಟ್ಟ ಬಳಿಕ ನೇರವಾಗಿ ಇಲ್ಲಿಗೇ ಬರುತ್ತಾರೆ. ರಾತ್ರಿ ಹತ್ತು ಗಂಟೆಯವರೆಗೆ ಕೆಲಸ ಮಾಡಿದರೂ ಸಾಕಾಗುತ್ತದೆ. ಬೆಳಿಗ್ಗೆ ತಮ್ಮ ಪಾಠಗಳನ್ನು ಓದಿಕೊಳ್ಳುತ್ತಾರೆ. ಎಲ್ಲವೂ

ವಿಪರೀತ ತುಟ್ಟಿಯಾಗಿರುವ ಈ ಕಾಲದಲ್ಲಿ ಸ್ವಾವಲಂಬನವೇ ಶ್ರೇಷ್ಠವಾದ ಉಪಾಯ. ಮೈ ಬೆವರಿಳಿಸಿ ದುಡಿದರೇನೇ ಏನಾದರೂ ಕೆಲಸವಾದೀತು."

"ಚಂದಾದಾರರು ಹೆಚ್ಚುತ್ತಿದ್ದಾರೆಯೆ ?"

ಹರಿಹರ ಕೊಂಚ ನಕ್ಕು ನುಡಿದಿದ್ದ : "ಚಂದಾದಾರರು ? ಕನ್ನಡಿಗರ ವಿಷಯ ನಿಮಗೆ ಗೊತ್ತಿಲ್ಲವೆಂದು ತೋರುತ್ತದೆ. ಪುಕ್ಕಟೆ ಚಂದಾದಾರರೇನೋ ಸಾಕಷ್ಟು ಜನ ಸಿಕ್ಕುತ್ತಾರೆ. ಹಣ ಮಾತ್ರ ಕೇಳಬೇಡಿರಿ. ಪತ್ರಿಕೆಯ ಚಂದಾ ಹಣವೂ ಹೆಚ್ಚಿಗಿಲ್ಲ. ವರ್ಷಕ್ಕೆ ಬರೀ ಮೂರು ರೂಪಾಯಿ. ಈ ಮೂರು ರೂಪಾಯಿ ಕೈಗೆ ಬರಬೇಕಾದರೆ ಒಬ್ಬೊಬ್ಬರ ಮನೆಗೆ ಆರು ಸಲ ಎಡತಾಕಬೇಕಾಗುತ್ತದೆ. ನಾವು ಹೋದ ವಿಷಯ ತಿಳಿಯುತ್ತಲೂ ರೂಪಾಯಿಗಳ ಮಾತನ್ನೇ ಹಾರಿಸಿಬಿಟ್ಟು ಒಣ ಹರಟೆಗೆ ಆರಂಭಿಸುತ್ತಾರೆ. ಮರಾಠಿಗರು ಹೀಗೆ ಮಾಡಿದರು, ತೆಲುಗರು ಹಾಗೆ ಮಾಡಿದರು, ಏಕೀಕರಣದ ವಿಚಾರವಾಗಿ ಕಾಂಗ್ರೆಸ್ಸಿಗರು ಹಿಂದೆ ಕೊಟ್ಟ ವಚನಗಳನ್ನೆಲ್ಲ ಮುರಿದು ಹಾಕಿದರು – ಹಾಗೆ ಹೀಗೆ. ಕನ್ನಡಿಗರು ಒಂದು ಗೂಡಿ ಉತ್ಸಾಹದಿಂದ ದುಡಿದಲ್ಲದೆ ಕರ್ನಾಟಕಕ್ಕೆ ಭವಿತವ್ಯವಿಲ್ಲ – ಇತ್ಯಾದಿ ಇತ್ಯಾದಿ. ಹೊಸದಾಗಿ ಹೊರಡಿಸಿದ ಕನ್ನಡ ಪತ್ರಿಕೆಯೊಂದಕ್ಕೆ ಮೂರು ರೂಪಾಯಿ ಕೊಡಬೇಕಾದರೆ ಆರು ಸಲ ಅಲೆದಾಡಿಸುವ ಈ ಜನರು ಕರ್ನಾಟಕದ ಭವಿತವ್ಯದ ಬಗೆಗೆ ಹಾಳು ಹರಟೆ ಕೊಚ್ಚುವದರಲ್ಲಿ ಮಾತ್ರ ಪ್ರವೀಣರು ! ಇವರ ಹತ್ತಿರ ಹಾಳಾಗುವ ಎರಡು ಮೂರು ಗಂಟೆಗಳ ಸಮಯವನ್ನೇ ನಾನು, ಇಲ್ಲಿ ಪ್ರೆಸ್ಸಿನಲ್ಲಿ ಕೆಲಸ ಮಾಡುವದರಲ್ಲಿ ಕಳೆದರೆ ಪತ್ರಿಕೆಯ ಭವಿತವ್ಯಕ್ಕಾದರೂ ಒಂದು ಆಧಾರವಾದೀತು. ಅಲ್ಲವೆ? ಅಂತೆಯೆ, ಈಚೆಗೆ ಅವರಿವರ ಹತ್ತಿರ ಚಂದಾ ಹಣ ಕೇಳಲು ಹೋಗುವದನ್ನೇ ಬಿಟ್ಟು ಬಿಟ್ಟಿದ್ದೇನೆ. ಪತ್ರಿಕೆಯನ್ನೋದುವ ಆಸೆಯಿದ್ದವರೆಲ್ಲ ತಾವಾಗಿಯೆ ಬಂದು ಚಂದಾ ಕಟ್ಟಿ ತೆಗೆದುಕೊಂಡಾರು. ಬೇಡವಾದವರು ಬಿಟ್ಟಾರು. ಅವರು ಬಿಡುವದರಿಂದ ನನಗೆ ಹಾನಿಯೇನೂ ಇಲ್ಲ. ಲಾಭವೇ ಇದೆ. ಅವರೊಂದಿಗೆ ಕಾಡು ಹರಟೆಯಲ್ಲಿ ಹಾಳಾಗುವ ವೇಳೆಯಾದರೂ ಉಳಿಯುವದಲ್ಲ!"

"ಈಗ ನನ್ನೊಂದಿಗೂ ಕಾಡು ಹರಟೆಗಾರಂಭವಾಗಬಾರದಲ್ಲ?" ಎಂದು ನುಡಿದು ನಗತೊಡಗಿದ್ದಳು ಸೂಶಿ.

ಹರಿಹರನೂ ನಗುತ್ತಾ–"ಹೋಗಲಿ ಬಿಡಿರಿ ಆ ವಿಚಾರ. ಏನು ವಿಶೇಷ? ಬೆಂಗಳೂರಿಗೆ ಹೋಗಿದ್ದಿರಂತಲ್ಲ? ಏನಾಯಿತು? ಸರಸಮ್ಮ ಸಿಕ್ಕಿದರೇ?" ಎಂದು ಕೇಳಿದ್ದ.

"ಆಕೆಯನ್ನೇನೋ ಕರೆದುತಂದದ್ದಾಯಿತು. ಮನೆಗೆ ಬಂದು ನೋಡಿದರೆ ಶಿವಮೂರ್ತಿಯ ಪತ್ತೆಯೇ ಇಲ್ಲವಲ್ಲ? ನಿಮಗವರು ಭೆಟ್ಟಿಯಾಗಿದ್ದರಂತೆ. ನಿಮ್ಮೆದುರು ಏನಾದರೂ ಹೇಳಿದ್ದರೇ?"

"ಅಂ? ಪತ್ತೆ ಇಲ್ಲವೆ? ಎಲ್ಲಿಗೆ ಹೋದ ಹುಚ್ಚ?"

"ನಿಮಗೇನಾದರೂ ಗೊತ್ತಿರಬಹುದೆಂದೇ ನಾನಿತ್ತ ಓಡಿ ಬಂದೆ."

"ಆತ ಹೀಗೆ ಹೊರಟು ಹೋಗಬಹುದೆಂದು ನಾನು ತಿಳಿದಿರಲಿಲ್ಲ ಬಿಡಿರಿ. ಅಂದು ನಿಮ್ಮನ್ನು ನೋಡಲೆಂದು ನಾನು ನಿಮ್ಮ ಮನೆಗೆ ಹೋಗಿದ್ದೆ. ಆಗ ಆತ ಕೊಟಡಿಯಲ್ಲಿ ಮಲಗಿಕೊಂಡು ಹುಚ್ಚು ಹುಚ್ಚಾಗಿ ಪಿಟೀಲು ಬಾರಿಸುವದರಲ್ಲಿ ತೊಡಗಿದ್ದ. ನಿಮ್ಮ ತಾಯಿಯನ್ನು ವಿಚಾರಿಸಿದಾಗ ನೀವು ಬೆಂಗಳೂರಿಗೆ ಹೋದ ಸುದ್ದಿ ಗೊತ್ತಾಯಿತು. ಯಾತಕ್ಕಾಗಿ ಏನು ಎಂದು ನಾನು ಕೇಳುತ್ತಿದ್ದಾಗ ಶಿವಮೂರ್ತಿ ಕೊಟಡಿಯಿಂದೆದ್ದು ಬಂದ. ನಾವಾಡುತ್ತಿದ್ದ ಮಾತುಗಳನ್ನು ಕೇಳಿಕೊಂಡಿದ್ದನೇನೊ. 'ಸೂಶಿ ಬೆಂಗಳೂರಿಗೆ ಹೋದಳೇ ಸುಬ್ಬಕ್ಕ?' ಎಂದು ಕೇಳಿದ. ಇನ್ನು ಅವರು ಇಲ್ಲವೆಂದು ಹೇಗೆ ಹೇಳಿಯಾರು? 'ಹೌದು. ಸರಸುವನ್ನು ಕರೆದು ತರಲು ಹೋಗಿದ್ದಾಳೆ,' ಎಂದರು. ಅದಕ್ಕೆ ಆತ ವಿಚಿತ್ರವಾಗಿ ನಕ್ಕು, 'ಸರಸುವನ್ನು ಕರೆದು ತರಲು ಹೋಗಿರುವಳೇ? ಯಾತಕ್ಕಾಗಿ? ಸರಸು ಇನ್ನು ಬಂದರೂ ಉಪಯೋಗವೇನು?' ಎಂದು ನುಡಿದು ನನ್ನ ಕಡೆಗೆ ತಿರುಗಿ, 'ನಿಮಗೆ ಗೊತ್ತಿಲ್ಲವೇ ಹರಿಹರ್? ಸರಸು ನನ್ನನ್ನು ಬಿಟ್ಟು ಹೊರಟುಹೋಗಿದ್ದಾಳೆ. ಆ ಸ್ವಾಮಿಯನ್ನು ಕೂಡಿಕೊಂಡು,' ಎಂದು ಹೇಳಿ ಮತ್ತೆ ನಗತೊಡಗಿದ. ಅದುವರೆಗೆ ಇದಾವುದೂ ಗೊತ್ತಿರಲಿಲ್ಲ ನನಗೆ. ನಿಧಾನವಾಗಿ ಸುಬ್ಬಕ್ಕನಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡೆ. ಅವರು ಹೇಳಿ ಮುಗಿಸುವವರೆಗೂ ಶಿವಮೂರ್ತಿ ಮೂಕಗೊಂಬೆಯಂತೆ ಕುರ್ಚಿಯಲ್ಲಿ ಕುಳಿತಿದ್ದ. ಅವರು ಮುಗಿಸಿದ ಬಳಿಕ ಧ್ವನಿಯೆತ್ತಿ ವಿಲಕ್ಷಣವಾದ ಪದ್ಯವೊಂದನ್ನು ವಿಲಕ್ಷಣವಾಗಿಯೆ ಹಾಡಿದ."

"ಪದ್ಯ? ಎಂಥಾದ್ದು ಅದು?"

"ನನಗೂ ಸರಿಯಾಗಿ ಅರ್ಥವಾಗಲಿಲ್ಲ. ಹೆಣ್ಣಿನ ಚಂಚಲತೆಯ ಬಗ್ಗೆ ಯಾವನೋ ಒಬ್ಬ ಬೈರಾಗಿ ಕಟ್ಟಿದ ಪದ್ಯದಂತಿದ್ದಿತದು. ಒಂದೆರಡು ಸಾಲು ನೆನಪಿದೆ," ಎಂದು ನುಡಿದು ಹರಿಹರ ತಲೆ ಕೆರೆದುಕೊಳ್ಳುತ್ತ ಆ ಚರಣಗಳನ್ನು ಹೇಳಿದ್ದ:

"ಫುಲ್ಲಶರನ ರೂಪುಳ್ಳನಾಗಿ ಸ್ವಯ
ವಲ್ಲಭನಿರುತಿರಲಾ ಸತಿಯರ್
ಬಳ್ಳಿಯಂತೆ ಮತ್ತೆಲ್ಲ ಪುರುಷರನು
ನಿಲ್ಲದೆ ಮನದೊಳಗಂ ನೆನೆವರ್
ಮಾಯಗಾರ್ತಿಯರು ಹೇಯಚರಿತೆಯರು
ಮಾಯವತಿಯರ ನುಡಿಲ ನೋಡಿ...."

ಎಂದು ಹೇಳಿ ಹರಿಹರ ನಕ್ಕುಬಿಟ್ಟಿದ್ದ.

"ಏನಾದರೂ ಅರ್ಥವಾಯಿತೇ ಸುಶೀಲಮ್ಮ?"

"ಯಾರೋ ಸ್ತ್ರೀದ್ವೇಷಿ ಬರೆದ ಹಾಗಿದೆ."

"ಸ್ತ್ರೀದ್ವೇಷಿ ಮಾತ್ರವಲ್ಲ – ಪ್ರಪಂಚದ್ವೇಷಿಯೆ ಇರಬೇಕು ಆತ. ಜೀವನದ ಕಟು ಅನುಭವಗಳನ್ನುಂಡವನೂ ಆಗಿರಬೇಕು. ಬಹಳ ಮಾಡಿ ವಿರಕ್ತಯೋಗಿ ಯಾರೋ ಬರೆದಿರಬಹುದು. ಅದನ್ನು ಶಿವಮೂರ್ತಿ ಎಲ್ಲಿ ಓದಿದ್ದನೋ, ಎಲ್ಲಿ ಪಾಠ ಮಾಡಿದ್ದನೋ....ಅದನ್ನು ಹಾಡುತ್ತ ಹಾಡುತ್ತ ಪಿಟೀಲಿನ ಮೇಲೆ ಹಾಗೆ ಹೀಗೆ ಕಮಾನು ಓಡಿಯಾಡಿಸುತ್ತಿದ್ದ. ನನಗೆ ನಗೆ ಬರದಿರಲಿಲ್ಲ. ಆತನಿಗೆ ಹುಚ್ಚು ಹಿಡಿದಿದ್ದರೂ ಹಿಡಿದಿರಬಹುದು ಅನ್ನಿಸಿತು."

"ಹಾಗೆ ಹುಚ್ಚೆಂದು ಹೇಳಲಾಗದಿದ್ದರೂ ಒಂದು ರೀತಿಯ ಹುಚ್ಚೇ ಹಿಡಿದಂತಿದ್ದುದು ನಿಜ. ಶಿವಮೂರ್ತಿ ಬಹಳ ಭಾವುಕರು. ಅಂಥವರಿಗೆ ಹಾಗೂ ಆಗುತ್ತಿರುತ್ತದೆ."

"ತುಂಬ ಕೋಮಲ ಮನಸ್ಕರಿಗೆ ಭಾರಿ ಆಘಾತವಾದಾಗ ತಲೆ ಕೆಡುತ್ತದೆಂಬುದೇನೊ ನಿಜ. ತಲೆ ಕೆಡಿಸುವಂಥ ವಿಷಯವೂ ನಡೆದಿದ್ದಿತಲ್ಲ. ಸರಿ. ಆದರೆ ಈ ರೀತಿ ಹುಚ್ಚರಂತೆ ಆಚರಿಸಿದರೆ ಏನು ಪ್ರಯೋಜನ? ನಮ್ಮ ಬುದ್ಧಿಯನ್ನು ನಮ್ಮ ಕೈಯಲ್ಲಿಟ್ಟುಕೊಂಡು ಜೀವನದ ಸಮಸ್ಯೆಗಳನ್ನು ಎದುರಿಸುವುದರಲ್ಲೇ ನಿಜವಾದ ಪುರುಷಾರ್ಥವಿದೆಯಲ್ಲವೆ?"

"ಆದೆಲ್ಲಾ ತತ್ವಜ್ಞಾನವಾಯಿತು ಹರಿಹರ್. ಅಂಥ ಪ್ರಸಂಗ ಮನುಷ್ಯ ನಿಗೆ ಬಂದಾಗ ಮಾತ್ರ ಎಲ್ಲ ತತ್ವಜ್ಞಾನವೂ ಗಾಳಿಗೆ ಹಾರಿಹೋಗುತ್ತದೆ. ಎಂಥವನೂ ನಿರ್ವಿಣ್ಣನಾಗುತ್ತಾನೆ. ಶಿವಮೂರ್ತಿಗಾದದ್ದೂ ಹಾಗೆಯೆ."

"ಆಗುತ್ತದೆನ್ನುವದನ್ನು ಒಪ್ಪಿಕೊಳ್ಳೋಣ. ಆದರೆ ಅದಕ್ಕಾಗಿ ನೆಲ ಹಿಡಿದು ಕುಳಿತು ಬಾಳುವೆಯನ್ನೇ ಹಾಳು ಮಾಡಿಕೊಳ್ಳುತ್ತಾರೆಯೆ? ಕೇವಲ ಹೆಣ್ಣಿನ ಪ್ರೇಮವೊಂದೇ ಪ್ರೇಮವೇನು ಜಗತ್ತಿನಲ್ಲಿ? ಹೆಣ್ಣನ್ನು ಪ್ರೀತಿಸಿದ ಹಾಗೆ ನಾವು ಇನ್ನಾರನ್ನೂ ಪ್ರೀತಿಸಲು ಸಾಧ್ಯವಿಲ್ಲವೇ? ನಮ್ಮ ಈ ದೇಶ, ನಮ್ಮ ಈ ಜನರು, ಅನ್ನ, ಅರಿವೆ, ಆರಿವು, ಆಸರ, ಆರೋಗ್ಯ ಯಾವುದೂ ಇಲ್ಲದೆ ಪಶುಗಳ ಹಾಗೆ ಬದುಕುತ್ತಿರುವ ಈ ಜನರು – ಇವರ ಸ್ಥಿತಿಯನ್ನು ಸುಧಾರಿಸಲು ಜೀವನವನ್ನು ಮುಡಿಪಾಗಿಡುವುದು ಒಳ್ಳೆಯ ದಲ್ಲವೆ? ಪ್ರೇಮಭಂಗದಿಂದ ನಿರಾಶರಾಗಿ ನರಳಿ ಸತ್ತುಹೋಗುವದಕ್ಕಿಂತ ದೀನಜನರ ಸೇವೆಯಲ್ಲಿ ಆಯುಷ್ಯವನ್ನು ಕಳೆಯುವುದು ಉತ್ತಮವಲ್ಲವೆ? ಆ ದೇವದಾಸ್ ಟೈಪ್ ಪ್ರೇಮದಿಂದ ಯಾರಿಗೆ ಏನು ಪ್ರಯೋಜನ? ಇಂಥ ವರು ಭೂಮಿಗೆ ಭಾರ ಅಷ್ಟೆ."

"ಅಂತೆಯೆ ಅವರು ಸಾಧ್ಯವಿದ್ದಷ್ಟು ಬೇಗ ಸತ್ತುಹೋಗಲು ಪ್ರಯತ್ನಿ ಸುತ್ತಾರೆ."

"ಇದು ಕೇವಲ ಪಲಾಯನವಾದ. Escapism. ಇಂಥದನ್ನೆಲ್ಲ ನಾನು ಒಪ್ಪುವದಿಲ್ಲ. ಪಾರ್ವತಿಯೊಂದಿಗೆ ಮದುವೆಯಾಗಲು ಸಾಧ್ಯವಾಗಲಿಲ್ಲ. ದೇವದಾಸ ದೊಡ್ಡ ಜಮಿನಾನುದಾರ. ಹೇಳುವವರು ಕೇಳುವವರು ಯಾರೂ ಇರಲಿಲ್ಲ. ಕುಡಿಯಲು ಕಲಿತ. ಕುಡಿತದ ಅಮಲಿನಲ್ಲಿ ಪಾರ್ವತಿಯನ್ನು ಮರೆಯಲು ಯತ್ನಿಸಿದನಂತೆ. ಕುಡಿದು ಕುಡಿದು ರಕ್ತ ಕಾರಿ ಸತ್ತು ಹೋದನಂತೆ. ಹೀಗೂ ಆಗುವುದೆಂಬುದನ್ನು ಒಪ್ಪೋಣ. ಆದರೆ ಅದೇ ದೇವದಾಸ ಬೇರೆ ಒಳ್ಳೆಯ ಕೆಲಸಗಳಲ್ಲಿ ಮನಸ್ಸು ತೊಡಗಿಸಿ ಪಾರ್ವತಿ ಯನ್ನು ಮರೆಯಲು ಸಾಧ್ಯವಾಗುತ್ತಿರಲಿಲ್ಲವೆ? ಅವಳ ನೆನಪಿನಿಂದ ಕೊರಗು ವುದೊಂದೇ ಒಂದು ಕೆಲಸವಾಯಿತಲ್ಲ ಆತನಿಗೆ? ಹೊಟ್ಟೆ ಬಟ್ಟೆಗಳ ಯೋಚನೆಯಿರಲಿಲ್ಲ. ಆತನ ಜಮಿನಾನುಗಳಲ್ಲಿ ಯಾರೋ ಬೆವರಿಳಿಸುತ್ತಿದ್ದರು. ಹೇಗೋ ಆತನ ಕೈಗೆ ಹಣ ಬರುತ್ತಿತ್ತು. ಆ ಹಣವನ್ನೆಲ್ಲ ಮದ್ಯಕ್ಕಾಗಿ

ಹಾಳು ಮಾಡುತ್ತ ತನ್ನ ನಿರಾಸೆಯನ್ನು ಮರೆಯಲು ಪ್ರಯತ್ನಿಸಿದನಂತೆ. ಈ ಉಳ್ಳವರ ಪ್ರಣಯದ ವಿಚಾರವೂ ವಿಲಕ್ಷಣವೇ ಅನ್ನಿಸುತ್ತದೆ ನನಗೆ. ದೇವದಾಸನ ಹಾಗೆ ಶಿವಮೂರ್ತಿಯೇನೂ ಉಳ್ಳವನಲ್ಲವಲ್ಲ? ಆತನೇನು ಜಮೀನುದಾರನೇ? ಜಾಗೀರದಾರನೇ? ತಂದೆತಾಯಿಗಳು ಗಳಿಸಿಟ್ಟ ಆಸ್ತಿಯಾದರೂ ಇದೆಯೆ? ಯಾವುದೂ ಇಲ್ಲ. ಇಂಥವನು ತಲೆ ಕೆಡಿಸಿಕೊಂಡು ನರಳಿದರೆ ಏನು ಬಂತು? ಜನರು ನಗದಿರರೇ?"

"ಈ ಉಪದೇಶಾಮೃತವನ್ನೆಲ್ಲಾ ಆತನಿಗೆ ಕುಡಿಸಿರಬೇಕಲ್ಲ ನೀವು?"

"ಇಲ್ಲಿಗೇ ಕರೆದುತಂದು ಎರಡುಗಂಟೆಗಳ ವರೆಗೆ ಬೋಧಿಸಿದೆ. ಆತನ ಮನಸ್ಸಿನ ಮೇಲೂ ಅಲ್ಪಸ್ವಲ್ಪ ಪರಿಣಾಮವಾದಂತೆ ಕಾಣಿಸುತ್ತಿತ್ತು. 'ನೀವು ಹೇಳುವುದೆಲ್ಲ ಸರಿ, ಹರಿಹರ. ಆದರೆ – ನಿಮಗೆ ಇದರ ಅನುಭವವಿನ್ನೂ ಆಗಿಲ್ಲ. ಅಂತೆಯೆ ಹೀಗೆ ಮಾತನಾಡುತ್ತಿದ್ದೀರಿ. ಮರೆಯಬೇಕು, ದೇಶಕ್ಕಾಗಿ ಏನಾದರೂ ಕೆಲಸ ಮಾಡಬೇಕು, ಎಲ್ಲಾ ಸರಿಯೆ. ಪ್ರಭುಸ್ವಾಮಿಗಳ ಹತ್ತಿರ ಹೋಗಿ ಅವರೊಡನೆ ಕೂಡಿ ಕೆಲಸ ಮಾಡಬೇಕೆಂದು ನಾನು ಯೋಚಿಸಿದ್ದೆ. ಆದರೆ ಅದನ್ನು ಕೃತಿಗಿಳಿಸಲು ಸಾಧ್ಯವಾಗಲಿಲ್ಲ. ನಡುವೆಯೆ ಮನಸ್ಸು ಹೊರಳಿತು. ಬೆಂಗಳೂರಿಗೆ ಹೊರಟೆ. ಅಲ್ಲಿಂದ ಪೂರಾ ನಿರಾಶನಾಗಿ ಬಂದರೂ ಮನಸ್ಸು ಇನ್ನೂ ಹೊಯ್ದಾಡುತ್ತಲೇ ಇದೆ. ಏನು ಮಾಡಬೇಕು, ಯಾವ ದಾರಿ ಹಿಡಿಯಬೇಕು ಯಾವುದೂ ತೋಚದಾಗಿದೆ' ಎಂದು ನುಡಿದ. ಅದಕ್ಕೆ ನಾನು – 'ನಿಮ್ಮ ಸ್ವಭಾವವೇ ಹೀಗಿರಬೇಕೆಂದು ತೋರುತ್ತದೆ ಮೂರ್ತಿ. ಮೊದಲಿನಿಂದಲೂ ನಿಮ್ಮದು ತುಂಬ ದುರ್ಬಲ ಮನಸ್ಸೇ ಆಗಿರಬೇಕು. ಸ್ಥಿರತೆಯೆನ್ನುವುದು ಸ್ವಲ್ಪವೂ ಕಾಣುವುದಿಲ್ಲ. ನಿಗ್ರಹ ಶಕ್ತಿಯೂ ನಿಮ್ಮಲ್ಲಿಲ್ಲ. ಪ್ರವಾಹಪತಿತರಾಗಿ ಹೇಗೋ ಬದುಕುತ್ತಿರುವ ಲಕ್ಷಾವಧಿ ಜನರಲ್ಲಿ ನೀವೂ ಒಬ್ಬರೆಂಬುದು ಸ್ಪಷ್ಟವಿದೆ. ಪ್ರವಾಹಕ್ಕೆದುರಾಗಿ ಈಜುವ ದೃಢತೆಯಾಗಲಿ ಸ್ಥೈರ್ಯವಾಗಲಿ ನಿಮ್ಮಲ್ಲಿಲ್ಲ' ಎಂದು ಕೊಂಚ ಕಟುವಾಗಿಯೆ ಹೇಳಿದೆ.

"ಅದಕ್ಕೆ ಮೂರ್ತಿ ಕೋಪಿಸಿಕೊಳ್ಳದೆ ಶಾಂತವಾಗಿಯೆ ಉತ್ತರವಿತ್ತ. 'ನೀವು ಹೇಳುವುದೆಲ್ಲ ನಿಜವಿರಬೇಕು. ನಾನು ಪ್ರವಾಹಪತಿತನಾಗಿದ್ದರೂ ಇರಬಹುದು. ಆದರೆ ಕೆಲವು ವರ್ಷಗಳಿಗೆ ಹಿಂದೆ, ನಾನು ಹದಿನೈದು ಹದಿ

ನಾರು ವರ್ಷದ ಹುಡುಗನಾಗಿದ್ದಾಗ ಹೀಗಿರಲಿಲ್ಲ. ಆಗ ನೀವು ಹೇಳುವ ವೃಥತೆ, ಸ್ಥಿರತೆ, ಎದೆಗಾರಿಕೆ, ಮಹತ್ವಾಕಾಂಕ್ಷೆ, ದೇಶಸೇವೆಯ ಹಂಬಲ ಎಲ್ಲವೂ ಇತ್ತು. ನಮ್ಮ ಮಾಸ್ತರರೊಬ್ಬರು ವಿವೇಕಾನಂದರ ಜೀವನಚರಿತ್ರೆಯೊಂದನ್ನು ಬಹುಮಾನವಾಗಿ ಕೊಟ್ಟಿದ್ದರು. ಅದನ್ನು ಓದುತ್ತ ಹೋದ ಹಾಗೆಲ್ಲ ವಿವೇಕಾನಂದರ ಹಾಗೆ ನಾನೂ ಸನ್ಯಾಸಿಯಾಗಿ ಹಿಂದೀಯರ ಸೇವೆಯಲ್ಲಿ ಆಯುಷ್ಯ ಕಳೆಯುವುದೆಂದು ನಿರ್ಧರಿಸಿದ್ದೆ. ಅದಕ್ಕೆ ಮೊದಲು ವಿದ್ಯಾಭ್ಯಾಸವಾಗಬೇಕಿದ್ದಿತಲ್ಲ? ನಮ್ಮದು ತೀರಾ ದರಿದ್ರ ಮನೆತನ. ತಂದೆ ಎಂದೋ ಸತ್ತುಹೋಗಿದ್ದ. ರೋಗಗ್ರಸ್ತಳಾದ ತಾಯಿಯೊಬ್ಬಾಕೆ ಹಳ್ಳಿಯಲ್ಲಿದ್ದಳು. ಸ್ವಂತ ಹೊಲವಿರಲಿಲ್ಲ. ಅವರಿವರ ಹೊಲಗಳಲ್ಲಿ ಕೂಲಿ ಮಾಡಿ ತನ್ನ ಹೊಟ್ಟೆ ಹೊರೆಯುತ್ತಿದ್ದಳಲ್ಲದೆ ನನ್ನ ಬಟ್ಟೆಬರೆಗಳಿಗಾಗಿ ಒಂದೆರಡು ರೂಪಾಯಿಗಳನ್ನೂ ಕಳುಹಿಸುತ್ತಿದ್ದಳು. ನಾನೊಬ್ಬನೇ ಪಟ್ಟಣದಲ್ಲಿ ವಾರದ ಮನೆ ಊಟ ಮಾಡುತ್ತ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದೆ. ಆ ವಾರದ ಮನೆಗಳಲ್ಲಿ ಆಗುತ್ತಿದ್ದ ತೊಂದರೆ, ಅವಮಾನಗಳನ್ನು ಹೇಳಿ ತೀರದು. ಒಂದು ಹೊತ್ತು ಊಟ ಹಾಕಬೇಕಾದರೆ ಎರಡು ಹೊತ್ತು ಕೆಲಸ ಮಾಡಿಸುತ್ತಿದ್ದರು. ಅವರ ಮನೆಗೆ ಕಾಯಿಪಲ್ಯ ತಂದುಕೊಡಬೇಕು, ಹಿಟ್ಟು ಬೀಸಿ ತಂದುಕೊಡಬೇಕು, ಕಟ್ಟಿಗೆ ಒಡೆದುಕೊಡಬೇಕು, ಮಕ್ಕಳ ನ್ನೆತ್ತಿಕೊಳ್ಳಬೇಕು, ಅನಂತರ ತಂಗಳನ್ನ ತಿಂದು ಸಾಲೆಗೆ ಧಾವಿಸಬೇಕು. ವಾರದಲ್ಲಿ ಒಂದೆರಡು ದಿನ ಉಪವಾಸವೂ ಆಗುತ್ತಿತ್ತು. ಆಗ ಊರ ಹೊರಗಿನ ಬಯಲಿಗೆ ಹೋಗಿ ಕುಳಿತು ನನ್ನ ಅಸಹಾಯಕತೆಯನ್ನು ನೆನೆದು ನೆನೆದು ಕಣ್ಣೀರು ಸುರಿಸುತ್ತಿದ್ದೆ. ಈ ವಿದ್ಯಾಭ್ಯಾಸ, ಈ ಬಡತನ, ಈ ಕಷ್ಟ, ಈ ಜೀವನ ಎಲ್ಲವೂ ಬೇಸರವಾಗುತಿತ್ತು. ಕೊಟಡಿಗೆ ಬಂದು ವಿವೇಕಾನಂದರ ಚರಿತ್ರೆಯನ್ನೆತ್ತಿಕೊಂಡು ಓದಲು ಪ್ರಯತ್ನಿಸುತ್ತಿದ್ದೆ. ಆದರೆ ಅಂಥ ಸಂದರ್ಭದಲ್ಲಿ ಅದರಿಂದಲೂ ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ. ಎಲ್ಲಾ ಶುಷ್ಕ ವೇದಾಂತ ಎನ್ನಿಸುತ್ತಿತ್ತು. ನಾನು ಹದಿನೇಳು ವರ್ಷದವನಾಗುವದರೊಳಗಾಗಿಯೆ ಈ ಬಾಳಿನಲ್ಲಿ ಏನೂ ಹುರುಳಿಲ್ಲ, ಎಲ್ಲವೂ ಸುಳ್ಳು, ಎಲ್ಲವೂ ಮಾಯೆ ಎಂಬ ಭಾವ ಬಲಗೊಂಡಿತ್ತು.'

"ಶಿವಮೂರ್ತಿ ಹಾಗೆ ಹೇಳುತ್ತಲೂ ಆತನ ವೈರಾಗ್ಯಕ್ಕೆ ಆರ್ಥಿಕ

ತೊಂದರೆಯೇ ಮೂಲಕಾರಣವೆಂಬ ವಿಚಾರ ಸ್ಪಷ್ಟವಾಯಿತು. 'ಫ್ರೀ ಬೋರ್ಡಿಂಗುಗಳಲ್ಲಿ ನಿಮಗೆ ಸ್ಥಳ ಸಿಕ್ಕಲಿಲ್ಲವೆ?' ಎಂದು ಕೇಳಿದೆ. ಅದಕ್ಕೂ ಆತ ಪ್ರಯತ್ನಿಸಿದ್ದ. ಆದರೆ ಸ್ಥಳ ಸಿಕ್ಕಿರಲಿಲ್ಲ."

"ಬಡ ವಿದ್ಯಾರ್ಥಿಗಳ ಅನುಕೂಲತೆಗಾಗಿಯೆ ತಾನೆ ಈ ಫ್ರೀ ಬೋರ್ಡಿಂಗುಗಳ ಸ್ಥಾಪನೆಯಾದದ್ದು?"

"ಹೌದು. ಹೆಸರಿಗೆ ಮಾತ್ರ ಬಡವರಿಗಾಗಿ. ಬೋರ್ಡಿಂಗುಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಎಂಭತ್ತರಷ್ಟು ಹುಡುಗರು ಅನುಕೂಲಸ್ಥರೇ ಆಗಿರತ್ತಾರೆ. ಶಿವಮೂರ್ತಿಯಂಥವರಿಗೆ ಅಲ್ಲಿ ಸ್ಥಳ ದೊರೆಯಬೇಕಾದರೆ ಕುರಿ ಕೋಣ ಬೀಳುತ್ತವೆ."

"ಅದು ಹೇಗೆ? ಈ ಬೋರ್ಡಿಂಗುಗಳನ್ನು ನಡೆಸುವ ಸ್ವಾಮಿಗಳು ಹೀಗೂ ಅನ್ಯಾಯ ಮಾಡುತ್ತಾರೆಯೆ?"

"ಇದರಲ್ಲಿ ಸ್ವಾಮಿಗಳ ತಪ್ಪೇನೂ ಇಲ್ಲ ಸುಶೀಲಮ್ಮ. ಅವರೇನೋ ಒಳ್ಳೆಯ ಉದ್ದೇಶದಿಂದಲೇ ಬೋರ್ಡಿಂಗು ಸ್ಥಾಪಿಸಿರುತ್ತಾರೆ. ವಿದ್ಯಾಭ್ಯಾಸ ಮಾಡುವ ಬಡಹುಡುಗರಿಗೆ ಅನ್ನ ದೊರೆಯಲೆಂಬ ಬಯಕೆಯಿಂದಲೇ ಅವರು ಈ ಕೆಲಸಕ್ಕೆ ನಿಂತುಕೊಂಡಿರುತ್ತಾರೆ. ಸುಮ್ಮನೆ ಮಠದಲ್ಲಿ ನೊಣ ಜಾಡಿಸುತ್ತ ಕುಳಿತಿರುವದಕ್ಕಿಂತ ಹೀಗೆ ಒಂದು ಉಪಯುಕ್ತ ಕಾರ್ಯದಲ್ಲಿ ತೊಡಗುವುದೂ ಉಚಿತವೇ. ಆದರೆ, ಬೋರ್ಡಿಂಗು ಎಂದ ಮೇಲೆ ಆಹಾರ ಧಾನ್ಯ ಬೇಕು, ಹಣಕಾಸು ಬೇಕು. ಅವನ್ನು ಕೂಡಿಸಬೇಕಾದರೆ ನಾಲ್ಕು ಜನರ ಸಹಾಯ ಬೇಕು. ಈ ನಾಲ್ಕು ಜನರೆಂದರೆ ಅರ್ಥಾತ್ ಶ್ರೀಮಂತರೇ ಆಗಿರುತ್ತಾರೆ. ಬೇರೆ ಬೇರೆ ಊರುಗಳಿಂದ ಸ್ವಾಮಿಗಳು ಸಹಾಯ ಪಡೆಯ ಬೇಕಾಗುವದು. ಎಲ್ಲ ಊರುಗಳಲ್ಲೂ ನಾಲ್ಕು ಜನ ಶ್ರೀಮಂತರ ನೆರವು ದೊರೆಯುತ್ತದೆ. ದುಡ್ಡಿನ ಬಲದಿಂದಾಗಿ ಈ ಶ್ರೀಮಂತರು ಜನರ ಮೇಲೆ ಪ್ರಭಾವ ಬೀರಿರುತ್ತಾರೆ. ಅವರು ಮುಂದಾಗದಿದ್ದರೆ ಯಾವ ಕೆಲಸವೂ ಆಗದಂತಿರುತ್ತದೆ. ಈ ಶ್ರೀಮಂತರು ಸ್ವಾಮಿಗಳೊಂದಿಗೆ ಓಡಿಯಾಡಿ ರೈತ ರಿಂದ ಧಾನ್ಯವನ್ನೂ ಹಣವನ್ನೂ ಕೂಡಿಸಿ ಕೊಡುತ್ತಾರೆ. ವರ್ಷ ವರ್ಷವೂ ಈ ಕೆಲಸ ನಡೆಯಬೇಕಲ್ಲ? ಅಂತೆಯೆ, ಸ್ವಾಮಿಗಳು ಈ ಶ್ರೀಮಂತರ ದಾಕ್ಷಿಣ್ಯಕ್ಕೊಳಗಾಗಬೇಕಾಗುತ್ತದೆ. ಈ ಶ್ರೀಮಂತರು ಕಳಿಸಿದ ಹುಡುಗ

ರನ್ನೆಲ್ಲ ಬೋರ್ಡಿಂಗಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಅರ್ಥಾತ್ ಈ ಹುಡುಗರೆಲ್ಲ ಆ ಶ್ರೀಮಂತರ ಮಕ್ಕಳೋ, ಅಣ್ಣನ ಮಕ್ಕಳೋ, ತಮ್ಮನ ಮಕ್ಕಳೋ, ಅಳಿಯಂದಿರೋ ಆಗಿರುತ್ತಾರೆ."

"ಬೋರ್ಡಿಂಗಿಗೆ ಈ ಶ್ರೀಮಂತರೂ ಪ್ರತಿ ವರ್ಷ ಹಣ ಕೊಡುವರೇನು ?"

"ಮುಕ್ಕಾಲು ಪಾಲು ಶ್ರೀಮಂತರು ಸ್ವತಃ ಒಂದು ಕಾಸನ್ನೂ ಕೊಡುವುದಿಲ್ಲ. ಹೀಗೆಲ್ಲಾ ಹಣ ಕೊಟ್ಟರೆ ಅವರು ಶ್ರೀಮಂತರಾಗಿ ಉಳಿಯುವುದಾದರೂ ಹೇಗೆ ಸಾಧ್ಯ? ಸ್ವಾಮಿಗಳು ತಮ್ಮೂರಿಗೆ ಬಂದಾಗ ಅವರನ್ನು ಬಡವರ ಮನೆಗಳಿಗೆ ಕರೆದೊಯ್ದು ಅವರಿಂದ ಕೊಡಿಸುತ್ತಾರೆ."

"ಬಡವರಿಂದ ಕೊಡಿಸಿದ ಸಹಾಯದಿಂದ ನಡೆಯುವ ಬೋರ್ಡಿಂಗುಗಳಲ್ಲಿ ತಮ್ಮ ಹುಡುಗರನ್ನು ಪುಕ್ಕಟೆಯಾಗಿ ಇಡುವರೆಂದಾಯಿತಲ್ಲ ಈ ಶ್ರೀಮಂತರು ?"

"ಹೆಚ್ಚು ಜನ ಮಾಡುವುದು ಹೀಗೇ. ಅಂತೆಯೇ, ಬಡ ಹುಡುಗರಿಗೆ ಈ ಬೋರ್ಡಿಂಗುಗಳಲ್ಲಿ ಸ್ಥಳ ದೊರೆಯುವುದು ಕಷ್ಟವಾಗುತ್ತದೆ. ಶಿವಮೂರ್ತಿಯೂ ತುಂಬ ಪ್ರಯತ್ನಿಸಿ ನಿರಾಶನಾಗಿದ್ದ. ಅದಕ್ಕಾಗಿ ಶ್ರೀಮಂತರ ಮನೆಗಳಿಗೆ ಅಲೆದಾಗಿತ್ತು. ಅವರು ಬಾಯಿಗೆ ಬಂದ ಹಾಗೆ ಮಾತಾಡಿ ಅವಮಾನಗೊಳಿಸಿ ಕಳುಹಿಸುತ್ತಿದ್ದರಂತೆ."

"ಅವರ ಹತ್ತಿರ ಹೋಗಲು ಕಾರಣ ?"

"ಬೋರ್ಡಿಂಗಿಗೆ ಸೇರಬೇಕಾದರೆ ನಾಲ್ಕೈದು ದೊಡ್ಡ ಮನುಷ್ಯರ ಶಿಫಾರಸು ಬೇಕಾಗುತ್ತದೆ. ಅರ್ಥಾತ್ ದೊಡ್ಡ ಮನುಷ್ಯರೆಂದರೆ ಇವರೇ, ಈ ಶ್ರೀಮಂತರೇ. ಅಂತೆಯೆ ಬಡಹುಡುಗರು ಈ ಶ್ರೀಮಂತರ ಮರ್ಜಿ ಕಾಯಬೇಕಾಗುತ್ತದೆ. ಶಿವಮೂರ್ತಿಯೂ ಶಿಫಾರಸು ಪತ್ರ ದೊರಕಿಸಲು ತಿರುಗಿದ. ಒಬ್ಬರು ವ್ಯಾಪಾರಸ್ಥರು ಅವನನ್ನು ಕಂಡು ಅವಾಚ್ಯವಾಗಿ ಬಯ್ದರಂತೆ. 'ದರಿದ್ರ ಸೂಳೇಮಕ್ಕಳು. ಇವರಿಗೆಲ್ಲಾ ಯಾಕೆ ವಿದ್ಯಾಭ್ಯಾಸವೊ !' ಎಂದರಂತೆ. ಹಾಗೆ ಬೈಸಿಕೊಂಡಾಗ ಶಿವಮೂರ್ತಿಯಂಥವರಿಗೆ ಮನಸ್ಸು ಕಹಿಯಾಗುವುದು ಸಹಜವಷ್ಟೆ. 'ಅಂಥ ಸಂದರ್ಭಗಳಲ್ಲಿ ಮೂರು ನಾಲ್ಕು ದಿನ ಊಟವೇ ರುಚಿಸುತ್ತಿರಲಿಲ್ಲ. ನಿದ್ರೆಯೂ ಹತ್ತುತ್ತಿರ

ಲಿಲ್ಲ. ಶ್ರೀಮಂತರ ಈ ಜಗತ್ತಿನಲ್ಲಿ ಬಡವರಿಗೆ ಬದುಕಲು ಅಧಿಕಾರವಿಲ್ಲ. ಮಾನವಿಲ್ಲದ, ಮರ್ಯಾದೆಯಿಲ್ಲದ ಬದುಕೂ ಒಂದು ಬದುಕೇ? ಇಂಥ ಹಂದಿ ಬಾಳು ಬಾಳುವುದಕ್ಕಿಂತ ಸತ್ತುಹೋಗುವುದೇ ಮೇಲು ಎನ್ನಿಸುತ್ತಿತ್ತು. ಒಂದೆರಡು ಸಲ ಆತ್ಮಹತ್ಯೆಗಾಗಿಯೂ ಪ್ರಯತ್ನಿಸಿದ್ದೆ' ಎಂದು ಹೇಳಿದ ಶಿವಮೂರ್ತಿ."

"ಆತ್ಮಹತ್ಯೆ?"

"ಹೌದು. ಆತ್ಮಹತ್ಯೆಯ ಪ್ರಯತ್ನ. ರಾತ್ರಿ ನಿದ್ರೆ ಬರದಂತಾಗಲ ಎದ್ದು ಊರ ಹೊರಗಿನ ರೈಲು ದಾರಿಯ ಹತ್ತಿರ ಹೋಗುತ್ತಿದ್ದನಂತೆ. ರಾತ್ರಿಯ ಎಕ್ಸ್‌ಪ್ರೆಸ್ ಹಾಯ್ದು ಹೋಗುವ ಸಮಯ. ಆ ಗಾಡಿಯ ಕೆಳಗೆ ಬಿದ್ದು ಪ್ರಾಣ ನೀಗಿಕೊಳ್ಳಬೇಕೆಂದು ನಿರ್ಧರಿಸಿದ್ದನಂತೆ. 'ಆದರೆ ಅದಕ್ಕೂ ಒಂದು ಧೈರ್ಯ ಬೇಕಲ್ಲವೆ? ಕೊನೆಯ ಗಳಿಗೆಯಲ್ಲಿ ಆ ವಿಚಾರ ಬದಲಾಯಿಸುತ್ತಿತ್ತು. ದೂರದಿಂದ ಧಾವಿಸಿ ಬರುವ ರೈಲನ್ನು ಕಂಡು ಎದೆ ನಡುಗುತ್ತಿತ್ತು. ಬಂದ ಹಾಗೆ ಹಿಂದಿರುಗಿ ಬಂದು ಮತ್ತೆ ಹಾಸಿಗೆಯ ಮೇಲೆ ಬಿದ್ದುಕೊಂಡು ನರಳುತ್ತಿದ್ದೆ' ಎಂದು ಹೇಳಿದ. ಆ ಮಾತು ಕೇಳಿದಾಗ ನನಗೆ ಆತನ ಬಗ್ಗೆ ಕನಿಕರವೂ ಬಂದಿತ್ತು. ತಿರಸ್ಕಾರವೂ ಬಂದಿತ್ತು. ಬಡತನವೆಂಬುದು ಇಂದಿನ ಭಾರತದಲ್ಲಿ ಎಷ್ಟು ಕೋಟಿ ಜನರಿಗಿಲ್ಲ ಸುಶೀಲಮ್ಮ? ಸಾಮಾನ್ಯವಾಗಿ ಎಲ್ಲರಿಗೂ ಇದೆ. ಸಾವಿರದಲ್ಲಿ ಒಬ್ಬ ಶ್ರೀಮಂತನಿದ್ದಾನು. ಉಳಿದವರೆಲ್ಲ ಪಟ್ಟ ದರಿದ್ರರೇ. ಇಂಥ ದಾರಿದ್ರ್ಯದಲ್ಲೇ ಹೇಗೋ ಬದುಕುತ್ತ ಮುಂದಿನ ಆಸೆಯಿಂದ ದಿನಗಳೆಯುತ್ತಿದ್ದಾರೆ. ಜೀವನದ ಹೋರಾಟ ಸಾಗಿದೆ. ಈ ಹೋರಾಟದಿಂದಲೇ ಹೊಸ ಸಮಾಜ ರೂಪುಗೊಳ್ಳಬೇಕಾಗಿದೆ. ಹೋರಾಟದಲ್ಲಿ ಸೋತು ಹೋಗಿ ಆತ್ಮಹತ್ಯೆ ಮಾಡಿಕೊಳ್ಳಲೆಳಸುವುದು ಹೇಡಿತನವೇ ತಾನೆ? ಸಮಾಜದ ವಿಷಮ ರಚನೆಯಿಂದಾಗಿ ತಲೆಯೆತ್ತಿದ ಬಡತನವನ್ನು ಎದುರಿಸಿ ನಿಂತು ಸುಖದ ಬದುಕಿಗಾಗಿ ಹೊಡೆದಾಡುವುದು ಪ್ರತಿಯೊಬ್ಬ ತರುಣನ ಕರ್ತವ್ಯವಾಗಿರುವಾಗ ಅದನ್ನು ಮರೆತು, ಬಾಳಿನಲ್ಲಿ ನಿರಾಶೆಗೊಂಡು ನೆಲ ಹಿಡಿದು ಕುಳಿತರೇನು ಪ್ರಯೋಜನ? ಬದುಕಬೇಕು, ಜನ ಬದುಕುವಂತೆ ಮಾಡಬೇಕು, ಚೆನ್ನಾಗಿ ಬದುಕುವಂತೆ ಮಾಡಬೇಕು. ಅದಕ್ಕೆಲ್ಲ ಉತ್ಸಾಹ ಬೇಕು, ಎದೆಗಾರಿಕೆ ಬೇಕು, ಶಿವಮೂರ್ತಿಯಲ್ಲಿ ಅದೇ

ಇಲ್ಲ. ಆತನ ಉದಾಸೀನತೆಗೆ ಮುಖ್ಯ ಕಾರಣ ಅದೇ ಆಗಿದೆ. ಇಂಥವರೆಲ್ಲ ಕೇವಲ ಪ್ರವಾಹಪತಿತರು. ಜಗತ್ತನ್ನೆದುರಿಸಿ ನಿಂತು ತನ್ನ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುವ ಶಕ್ತಿ ಇವರಲ್ಲಿರುವುದಿಲ್ಲ. ಇಂಥವರು ಮದುವೆಯಾಗಿ ಸಂಸಾರ ಹೂಡುವುದೂ ತಪ್ಪೇ. ಜೀವನದಲ್ಲಿ ನಿರಾಶರಾದವರು ಸಂಸಾರ ನಡೆಸುವುದಾದರೂ ಹೇಗೆ ಸಾಧ್ಯ? ಇಂಥವರ ಕೈಹಿಡಿದ ಯುವತಿಯರಿಗಾದರೂ ಎಂಥ ಸುಖ ಲಭಿಸಬೇಕು? ಶಿವಮೂರ್ತಿಯ ಸಂಸಾರ ಹೀಗಾದುದರಲ್ಲಿ ಸರಸಮ್ಮನ ದೋಷವೇನೂ ಇಲ್ಲವೆಂದೇ ನನಗೆನ್ನಿಸುತ್ತದೆ. ಇವರಿಬ್ಬರ ಸ್ವಭಾವ, ಗುಣ, ಧರ್ಮಗಳಲ್ಲಿ ತುಂಬ ಅಂತರವಿದೆ. ಆಕೆಯಿನ್ನೂ ತರುಣಿ. ಯೌವನದ ಉತ್ಸಾಹದಿಂದ ಕೂಡಿದವಳು. ಈತ ವಯಸ್ಸಿನಿಂದ ತರುಣನಂತೆ ಕಾಣಿಸಿದರೂ ಮನಸ್ಸಿನಿಂದ ಮುದುಕನೇ. ಮದುವೆಯಾಗುವ ಮೊದಲು ಸರಸಮ್ಮನಿಗೆ ಆತನ ದೌರ್ಬಲ್ಯವಾವುದೂ ತಿಳಿದಿರಲಿಕ್ಕಿಲ್ಲ. ಮದುವೆಯಾದ ಬಳಿಕ ಇಬ್ಬರೂ ನಿಕಟ ಸಹವಾಸದಲ್ಲಿ ಬಂದಾಗ ಎಲ್ಲವೂ ಗೊತ್ತಾಗಿರಬೇಕು. ಅರ್ಥಾತ್ ಇಬ್ಬರಿಗೂ ಕೂಡಿ ನಡೆಯಲು ಸಾಧ್ಯವಾಗಿರಲಿಕ್ಕಿಲ್ಲ. ಮುದುಕರಿಂದ ತರುಣಿಯರಿಗೆ ಸುಖವಾದರೂ ಹೇಗೆ ಲಭಿಸಬೇಕು?"

"ಶಿವಮೂರ್ತಿ ಮುದುಕನೆನ್ನುತ್ತೀರಾ?"

"ಮುದುಕನಲ್ಲದಿನ್ನೇನು? ಜೀವನದ ಬಗ್ಗೆ ಕೊಂಚವೂ ಉತ್ಸಾಹವಿಲ್ಲದ ಆತನನ್ನು ಯುವಕನೆಂದು ಕರೆಯುವುದಾದರೂ ಹೇಗೆ? ಸರಸಮ್ಮನ ಕೈ ಹಿಡಿಯುವುದಕ್ಕೆ ಮೊದಲೇ ಆತನ ಬಾಳು ಮುಗಿದು ಹೋಗಿತ್ತು-ಒಂದು ದೃಷ್ಟಿಯಲ್ಲಿ. ಆಕೆಯ ಬಾಳು ಮಾತ್ರ ಆಗತಾನೆ ಪ್ರಾರಂಭವಾಗುತಿತ್ತು. ಉತ್ಸಾಹ ಉಪ್ರೇಕಗಳಿಗಾಗಿ ಕಾದಿದ್ದ ಸರಸಮ್ಮನಿಗೆ ದೊರೆತದ್ದೆಂದರೆ ಕೇವಲ ನಿರುತ್ಸಾಹ, ಔದಾಸೀನ್ಯ. ಅರ್ಥಾತ್ ಆಕೆಗೆ ಬೇಸರವಾದದ್ದು ಸಹಜ."

"ಹಾಗೂ ಆಗಿರಬಹುದೆಂದಿಟ್ಟುಕೊಳ್ಳೋಣ. ಆದರೆ ಆತನನ್ನು ಬಿಟ್ಟು ಹೊರಟರೂ ಆಕೆಗೆ ಕೊಂಚವೂ ಸುಖ ದೊರೆಯಲಿಲ್ಲವಲ್ಲ? ತಾನಾಗಿಯೆ ಸ್ವಸಂತೋಷದಿಂದ ಆಕೆ ಸ್ವಾಮಿಗಳೊಂದಿಗೆ ಓಡಿಹೋಗಲಿಲ್ಲ. ನೀವು ಹೇಳಿದಂತೆ ಶಿವಮೂರ್ತಿಯ ಔದಾಸೀನ್ಯದಿಂದ ಆಕೆಗೆ ಬೇಸರವಾದದ್ದು ನಿಜ. ಆ ಬೇಸರದ ಮನಃಸ್ಥಿತಿಯಲ್ಲಿ ಆಕೆಯಿದ್ದಾಗ ಸ್ವಾಮಿಗಳು ಒಂದು

ಬಗೆಯ ಬಲಾತ್ಕಾರದಿಂದಲೇ ಆಕೆಯನ್ನು ಬಲಿಗೆ ಬೀಳಿಸಿಕೊಂಡರು. ಅದಕ್ಕಾಗಿ ಎಷ್ಟೋ ಹಣ ಖರ್ಚುಮಾಡಿದರು. ಶಾಸ್ತ್ರಿಯೂ ಆಶ್ರಮದ ಶಿಕ್ಷಕಿ ಲೀಲಾವತಿಯೂ ಈ ವಿಷಯದಲ್ಲಿ ಕುಂಟಲಿಗರಾಗಿ ಕೆಲಸ ಮಾಡಿದರು. ಇಲ್ಲಿ ಸರ್ವಧರ್ಮ ಸಮ್ಮೇಳನದ ನಾಟಕ ನಡೆಯಿತಲ್ಲ – ಅದೇ ರಾತ್ರಿ ಸರಸು ಸ್ವಾಮಿಗಳ ಬಲಿಗೆ ಬಿದ್ದದ್ದು. ಆ ಕೆಲಸ ಸುಲಭವಾಗಲೆಂದು ಇನ್ನೂ ಒಂದು ತಂತ್ರ ಹೂಡಿದ್ದರು. ಶಾಸ್ತ್ರಿಗಳ ಹೆಂಡತಿ ಲಲಿತೆಯ ವಿಷಯ ನಿಮಗೆ ಗೊತ್ತಿರಬೇಕಲ್ಲ? ಆಕೆಯೊಂದಿಗೆ ಅದೇ ರಾತ್ರಿ ಶಿವಮೂರ್ತಿಯನ್ನು ಊರಿಗೆ ಸಾಗಹಾಕಿದ್ದೂ ಶಾಸ್ತ್ರಿಯ ತಂತ್ರವೇ. ಆ ದಿನ ಶಿವಮೂರ್ತಿ ಇಲ್ಲಿ ಇದ್ದರೆ ಏನಾದರೂ ಆತಂಕವೊದಗಬಹುದೆಂದು ಯೋಚಿಸಿಯೆ ಅವರು ಆತನನ್ನು ಕಳಿಸಿರಲು ಸಾಕು. ಮಾರನೆಯ ದಿನ ಸರಸುವಿಗೆ ತುಂಬ ಪಶ್ಚಾತ್ತಾಪವಾಗಿದ್ದಿತು. ಆಗಲೇ ಆಕೆ ಶಿವಮೂರ್ತಿಯನ್ನು ಕಂಡಿದ್ದಲ್ಲಿ ಮುಂದಿನ ಘಟನೆಗಳು ನಡೆಯುತ್ತಿರಲಿಲ್ಲವೆಂದೇ ಹೇಳಬೇಕು. ಶಿವಮೂರ್ತಿ ಲಲಿತೆಯೊಂದಿಗೆ ಹೋದ ವಿಷಯ ತಿಳಿದಾಗ ಸರಸುವಿನ ಮನಸ್ಸು ಇನ್ನೂ ಕೆಡುವದೆಂಬುದು ಶಾಸ್ತ್ರಿಗೆ ಗೊತ್ತೇ ಇತ್ತು. ಆದದ್ದೂ ಹಾಗೆಯೆ. ಅಂಥ ಸಂದರ್ಭಗಳಲ್ಲಿ ಮನಸ್ಸು ಕಹಿಯಾಗುವುದೂ ಸಾಹಜಿಕ. ಸರಸುವಿಗೂ ಹಾಗೇ ಆಯಿತು. ಆ ಕಹಿಯ ಭರದಲ್ಲೇ ಆಕೆ ದುಡುಕಿ ಸ್ವಾಮಿಗಳೊಂದಿಗೆ ಹೊರಟು ಹೋದದ್ದು. ಆದರೆ, ಆ ಕಹಿ ಬಹಳ ಹೊತ್ತು ಉಳಿಯಲಿಲ್ಲ. ಅವರ ಮೋಟರು ಧಾರವಾಡಕ್ಕೆ ಹೋಗುವುದರೊಳಗಾಗಿ ಆಕೆಯ ಮನಸ್ಸು ಹೊಯ್ದಾಡತೊಡಗಿತ್ತು. ಮುಂದೆ ಒಂದು ತಿಂಗಳಿನವರೆಗೂ ಶಿವಮೂರ್ತಿಯ ಧ್ಯಾನದಲ್ಲೇ ಕಾಲ ಕಳೆದಳು," ಎಂದು ಹೇಳಿ ಸೂಶಿ, ಸರಸುವಿನಿಂದ ತಿಳಿದು ಬಂದುದನ್ನೆಲ್ಲ ಹರಿಹರನಿಗೆ ವಿವರಿಸಿದ್ದಳು.

"ನೋಡಿರಿ. ಶಿವಮೂರ್ತಿಯ ಬಗ್ಗೆ ಬೇಸರವಾಗಿದ್ದರೂ ಸಹ ಸರಸುವಿಗೆ ಆತನನ್ನು ಮರೆಯಲಾಗಲಿಲ್ಲ. ಮೋಟಾರು ಕಾರು, ಚಿನ್ನರನ್ನದ ಆಭರಣಗಳು, ಬಗೆಬಗೆಯ ಸೀರೆ ರವಕೆಗಳು, ಸುಂದರ ನಗರಗಳಲ್ಲಿ ಸುಖ ವಿಹಾರ, ಯಾವುದರಲ್ಲೂ ಆಕೆಯ ಮನಸ್ಸು ತೊಡಗಲಿಲ್ಲ. ಯಾವಾಗಲೂ ಆತನ ಯೋಚನೆಯೇ. ಇದಕ್ಕೇನು ಹೇಳುತ್ತೀರಿ?"

ಹರಿಹರ ತಲೆ ಕೆರೆದುಕೊಳ್ಳುತ್ತ ಹೇಳಿದ್ದ: "ಇದೂ ಒಂದು ಬಗೆಯ ಹುಚ್ಚೇ. ಮೋಹ. ಕೇವಲ ಮೋಹ."

"ಮೋಹವಲ್ಲ ಹರಿಹರ್. ಮೋಹ ಬೇರೆ. ಅದು ಕ್ಷಣಿಕವಾದದ್ದು. ಎಲ್ಲೋ ಕೆಲವು ದಿನ ಇದ್ದು ಆಮೇಲೆ ಮಾಯವಾಗುವಂಥದು. ಶಿವ ಮೂರ್ತಿಯ ಬಗೆಗೆ ಸರಸುವಿಗಿರುವ ಈ ಹುಚ್ಚು ಮೋಹವಲ್ಲ ಹರಿಹರ್. ಇದು ಪ್ರೀತಿ. ವಿಶುದ್ಧವಾದ ಪ್ರೀತಿ. ಆತನ ದೋಷಗಳು, ಆತನ ದೌರ್ಬಲ್ಯ ಎಲ್ಲವನ್ನೂ ಅರಿತಿದ್ದರೂ ಮತ್ತೆ ಆತನನ್ನೇ ಬಯಸುವುದರ ಅರ್ಥವೇನು? ಇದು ಪ್ರೀತಿಯೇ ಅಲ್ಲವೆ?"

"ಇರಬಹುದು. ಹಾಗೂ ಇರಬಹುದು. ಆದರೆ ನನ್ನ ದೃಷ್ಟಿಯಲ್ಲಿ ಇದೆಲ್ಲಾ ಹುಚ್ಚುತನವೇ. ಪ್ರೇಮ ಪ್ರೇಮ ಎಂದು ಎದೆ ಎದೆ ಬಡಿದು ಕೊಳ್ಳುವರಲ್ಲ– ಅದೂ ಒಂದು ಬಗೆಯ ರೋಗವೇ ಎಂದು ನನಗೆನ್ನಿಸು ತ್ತದೆ. ಮನಸ್ಸಿನ ರೋಗ. ಹೃದಯದ ರೋಗ. ಈ ಕವಿಗಳಿಗೆ ಬೇರೆ ಉದ್ಯೋಗವಿಲ್ಲ. ಪ್ರೇಮದ ಬಗ್ಗೆ ಅರ್ಥವಿಲ್ಲದ ಕವಿತೆ ಹೊಸೆಯುತ್ತಾರೆ. ಅವುಗಳನ್ನೋದಿ, ಸಿನಿಮಾ ನಾಟಕ ನೋಡಿ, ಕತೆ ಕಾದಂಬರಿ ಓದಿ ತರುಣ ತರುಣಿಯರು ತಲೆ ಕೆಡಿಸಿಕೊಳ್ಳುತ್ತಾರೆ. ಶಿವಮೂರ್ತಿಗೂ ಹಾಗೇ ತಲೆ ಕೆಟ್ಟಿತ್ತು. ಈಗ ಸರಸುವಿನ ಸರದಿ ಬಂದಿದ್ದೀತು."

"ಶಿವಮೂರ್ತಿ ಮತ್ತೇನನ್ನು ಹೇಳಿದ ನಿಮ್ಮ ಹತ್ತಿರ? ಎಲ್ಲಿಗಾದರೂ ಹೋಗುವುದಾಗಿ ಹೇಳಿದನೇ?"

"ಹಾಗೆ ಸ್ಪಷ್ಟವಾಗಿ ಹೇಳಲಿಲ್ಲ. ಆದರೂ ಆತ ಪ್ರಭುಸ್ವಾಮಿಗಳ ಹತ್ತಿರವೇ ಹೋಗಿರಬಹುದೆಂದು ನನಗೆನ್ನಿಸುತ್ತದೆ. ಅವರೆಲ್ಲೋ ಹಳ್ಳಿ ಯಲ್ಲಿರುವರಂತೆ. ಅವರೊಂದಿಗೆ ಕೂಡಿಕೊಂಡು ಹಳ್ಳಿಗರ ಸೇವೆಯಲ್ಲಿ ಉಳಿದ ಆಯುಷ್ಯವನ್ನು ಕಳೆಯಬೇಕೆಂದು ಯೋಚಿಸಿರುವುದಾಗಿ ಹೇಳಿದ. ನನಗೆ ಕೊಂಚ ನಗು ಬರದಿರಲಿಲ್ಲ. 'ನೀವೂ ಸ್ವಾಮಿಗಳಾಗುವವರೇನ್ರೀ ಮತ್ತೆ? ಈ ನೆಹರೂ ಬನೀನು ಪಾಯಿಜಮಾ ಎಲ್ಲಾ ಬಿಸಾಕಿಬಿಟ್ಟು ತಲೆ ಯನ್ನೆಲ್ಲ ಕಲಾಯಿ ಮಾಡಿಸಿಕೊಂಡು ಕಪನೀ ಹಾಕುವವರೋ ಏನು?' ಎಂದು ಕೇಳಿದೆ. 'ಹೌದು. ಯಾಕೆ ಹಾಕಬಾರದು? ಕಪನಿ ಅಂದರೆ ಸಂಪೂರ್ಣ ವೈರಾಗ್ಯದ ಲಕ್ಷಣ.' ಎಂದನಾತ. 'ಅಂಥದನ್ನು ಮಾತ್ರ

ಮಾಡಬೇಡಪ್ಪ. ಆ ಸ್ವಾಮಿಗಳ ಸಹವಾಸವೂ ಬೇಡ ಇಷ್ಟು ಬೇಗ. ಹೇಗೂ ಗೃಹಸ್ಥರಾಗಿದ್ದೀರಿ ಇನ್ನೂ ಕೆಲವು ದಿನ ಸಂಸಾರ ಸಾಗಿಸಿರಿ. ಸುಶೀಲಮ್ಮ ಬೆಂಗಳೂರಿಗೆ ಹೋಗಿದ್ದಾರೆ. ನಿಮ್ಮವರನ್ನು ಕರೆದು ತಂದರೂ ತಂದಾರು. ಮತ್ತೆ ಇಬ್ಬರೂ ಕೂಡಿ ಬಾಳಬೇಕು. ಏನೋ ಹೇಗೋ ನಡೆದು ಹೋಗಿದೆ. ಸಂಸಾರದಲ್ಲಿ ಇಂಥ ಚಿಕ್ಕಪುಟ್ಟ ಘಟನೆಗಳು ನಡೆಯುತಕ್ಕವೇ. ಅಷ್ಟಕ್ಕಾಗಿ ವೈರಾಗ್ಯ ತಳೆಯುತ್ತಾರೆಯೇ ಯಾರಾದರೂ? ಹಾಗೆಲ್ಲ ದುಡುಕಬಾರದು. ಶಾಸ್ತ್ರಿಯ ಆಫೀಸಿನಲ್ಲಿ ಕೆಲಸ ಬೇಡವಾದರೆ ಬಿಡಿರಿ. ನಮ್ಮಲ್ಲೇ ಇರಿ. ನಿಮ್ಮವರಿಗೆ ಆ ಆಶ್ರಮದ ಕೆಲಸವೂ ಬೇಡ. ನಮ್ಮಲ್ಲಿ ಕಂಪೋಸ್ ಮಾಡಲೂ, ಪ್ರಿಂಟ್ ಮಾಡಲೂ ಕಲಿಯಿರಿ. ನೀವಿಬ್ಬರೂ ನೆಮ್ಮದಿಯಿಂದ ಬದುಕುವಷ್ಟು ಕೊಡಬಲ್ಲೆ' ಎಂದೆಲ್ಲಾ ಹೇಳಿದೆ. ಅದಕ್ಕಾತ ಏನೂ ಉತ್ತರವೀಯಲಿಲ್ಲ. 'ಮತ್ತೆ ಬರುತ್ತೇನೆ' ಎಂದು ಹೇಳಿ ಹೊರಟು ಹೋದ."

"ಅನಂತರ ನೀವು ಅವರನ್ನು ನೋಡಲೇ ಇಲ್ಲವೆ?"

"ಇಲ್ಲ. ಈ ಕೆಲಸದಲ್ಲಿ ಮತ್ತೆ ನಿಮ್ಮ ಮನೆಯ ಕಡೆಗೆ ಬರಲು ನನಗೆ ಬಿಡುವಾಗಲಿಲ್ಲ. ಆತ ಮಾಯವಾದ ವಿಷಯ ನನಗೆ ಗೊತ್ತಾದುದೂ ನಿಮ್ಮಿಂದಲೇ."

"ಹಾಗಾದರೆ ಅವರು ಪ್ರಭುಸ್ವಾಮಿಗಳ ಹತ್ತಿರವೇ ಹೋಗಿರಬಹುದು ಎನ್ನುತ್ತೀರಾ?"

"ಬಹಳ ಮಾಡಿ ಅಲ್ಲಿಗೇ ಹೋಗಿರಲು ಸಾಕು. ಅವರು ಎಲ್ಲಿದ್ದಾರೆ ನಿಮಗೆ ಗೊತ್ತಿದೆಯೆ?"

"ನನಗೂ ಗೊತ್ತಿಲ್ಲ. ಸರಸುವಿಗೆ ಗೊತ್ತಿರಬಹುದು."

"ಮುಂದೆ ಹೇಗೆ ಸುಶೀಲಮ್ಮ? ಆತನನ್ನು ಹುಡುಕುತ್ತ ಹೋಗುವಿರೋ ಹೇಗೆ?"

"ಹುಡುಕಲೇ ಬೇಕಲ್ಲವೆ? ಇಲ್ಲವಾದರೆ ಸರಸುವಿನ ಗತಿ?"

"ಆಕೆಯೊಂದಿಗೆ ಭೆಟ್ಟಿಯಾದರೂ ಸಹ ಶಿವಮೂರ್ತಿ ಮತ್ತೆ ಸಂಸಾರ ಹೂಡುವನೆಂದು ನನಗೇನೂ ಅನ್ನಿಸುವುದಿಲ್ಲ. ಆತ ವೈರಾಗಿಯಾಗುವ ಹಾಗೆಯೇ ಕಂಡು ಬಂದಿತ್ತು."

"ಏನಾದರೂ ಮಾಡಿ ಅವರನ್ನೂ ಸರಸುವನ್ನೂ ಮತ್ತೆ ಒಂದುಗೂಡಿ

ಸಲೇ ಬೇಕು. ಅವರ ಬಗ್ಗೆ ಸರಸುವಿಗೆ ಪ್ರೀತಿಯಿರುವ ಹಾಗೆ ಆಕೆಯ ಬಗ್ಗೆ ಅವರಿಗೂ ಇರಲೇಬೇಕು."

"ಅದು ಪ್ರೀತಿಯೆಂಬುದನ್ನೇ ನಾನು ಒಪ್ಪುವುದಿಲ್ಲ. ಮೋಹ. ಕ್ಷಣಿಕ ಮೋಹ. ಅದು ಮೋಹವೆಂಬ ಅರಿವೂ ಆತನಿಗಾದಂತಿದೆ. ಸಂಸಾರದ ಬಗೆಗೇ ಆತನಿಗೆ ಜುಗುಪ್ಸೆ ಬಂದಂತಿದೆ. ಆ ಜುಗುಪ್ಸೆಯಿಂದಾಗಿಯೆ ಆತ ಆ ಬೈರಾಗಿ ಪದ್ಯ ಹಾಡುತ್ತಿದ್ದುದು."

ಹರಿಹರನನ್ನು ಬೀಳ್ಕೊಂಡು ಬಂದ ಬಳಿಕ ಸೂಶಿ ಆತನಿಂದ ತಿಳಿದು ಬಂದುದೆಲ್ಲವನ್ನೂ ಸರಸುವಿಗೆ ಹೇಳಿರಲಿಲ್ಲ. "ಶಿವಮೂರ್ತಿ ಹರಿಹರನೊಂದಿಗೆ ಅವರ ಆಫೀಸಿಗೆ ಹೋಗಿದ್ದರಂತೆ. ಅವರೆಲ್ಲಿಗೆ ಹೋದರೆಂಬುದು ಹರಿಹರರಿಗೂ ತಿಳಿಯದು. ಪ್ರಭುಸ್ವಾಮಿಗಳ ಹತ್ತಿರ ಹೋಗಿದ್ದರೂ ಹೋಗಿರಬಹುದು ಎಂದು ಹೇಳಿದರು. ಅದರದೂ ನಿಶ್ಚಿತವಿಲ್ಲ. ಆ ಸ್ವಾಮಿಗಳು ಯಾವ ಹಳ್ಳಿಯಲ್ಲಿದ್ದಾರೆ ಗೊತ್ತೇ ಸರಸೂ ?" ಎಂದು ಕೇಳಿದ್ದಳು. ಆ ಹಳ್ಳಿಯ ಹೆಸರು ಸರಸುವಿಗೂ ಗೊತ್ತಿರಲಿಲ್ಲ.

"ಹೋಗಿಯೆ ಬಿಟ್ಟರೇ ! ಅಯ್ಯೋ, ಹೋಗಿಯೆ ಬಿಟ್ಟರೇ !" ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಳ್ಳುತ್ತ ಹಾಸುಗೆ ಹಿಡಿದಿದ್ದಳು ಸರಸು.

ಒಂದು ವಾರ ಕಳೆದು ಹೋಗಿದ್ದಿತು.

ಸರಸು ಹಾಸುಗೆ ಬಿಟ್ಟು ಎದ್ದಿರಲಿಲ್ಲ. ಸ್ನಾನ ಮಾಡಿರಲಿಲ್ಲ. ತಲೆ ಬಾಚಿಕೊಂಡಿರಲಿಲ್ಲ. ಸೀರೆಯನ್ನೂ ಬದಲಾಯಿಸಿರಲಿಲ್ಲ. ಹಾಸುಗೆಯ ಮೇಲೆ ಬಿದ್ದುಕೊಂಡ ಹಾಗೆ ಜಂತೆಯನ್ನು ಶೂನ್ಯವಾಗಿ ದಿಟ್ಟಿಸುತ್ತ ಏನೇನನೋ ಪುಟುಪುಟಿಸುವಳು. ಆಗಾಗ ಅನವಶ್ಯಕವಾಗಿ ನಗುವಳು. "ಕಾವಿ ಬಟ್ಟೆ ಕಂಡು ಮರುಳಾದ ಹುಡುಗಿ........ಸ್ವಾಮಿಯ ಕಪ್ಪು ಕಣ್ಣಿಗೆ ಮನ ಸೋತ ಹುಡುಗಿ....ಪ್ರಭುಲಿಂಗಲೀಲೆ....ಅಲ್ಲಮ....ಮಾಯಾದೇವಿ. ಕಂಟಕಿತವಾದವೆರಡುಂ ದೃಷ್ಟಿ ವೈದೋರೆ.......ಗಂಟೆಕ್ಕಿದುವು ನೋಟವೆಯ್ದೆ ಕಾಮಂ ಮಾರೆ........ಕಾಮ....ಮೋಹ....ಪ್ರೇಮ....ಥೂ...ಪ್ರೇಮವೆನ್ನುತ್ತಾರೆಯೇ ಇದಕ್ಕೆ ? ಕಾಮ.....ಕೇವಲ ಕಾಮ ಇದು....ಹೊಲಸು ಕಾಮ...... ತುಚ್ಛ ಕಾಮ....." ಎಂದೆಲ್ಲ ಬಡಬಡಿಸುವಳು.

ಸೂಶಿ ಸುಬ್ಬಕ್ಕ ಇಬ್ಬರಿಗೂ ಗಾಬರಿಯಾಗಿರದಿರಲಿಲ್ಲ. ಶಿವಮೂರ್ತಿಗೆ

ಇದೇ ರೀತಿಯ ಹುಚ್ಚು ಹಿಡಿದಿದ್ದುದನ್ನು ಅವರು ಕಂಡಿದ್ದರು. ಹಾಗೆಯೆ ಸರಸುವಿಗೂ ಹುಚ್ಚು ಹಿಡಿದುಕೊಂಡೀತು ಎಂದು ಅವರಿಗೆ ಭಯವಾಗದಿರಲಿಲ್ಲ. ಸರಸುವಿನ ವರ್ತನೆಯನ್ನೂ ಆಕೆ ಆಡುತ್ತಿದ್ದ ಮಾತುಗಳನ್ನೂ ನಿರೀಕ್ಷಿಸಿದಾಗ ಆಕೆಗೆ ಕ್ರಮೇಣವಾಗಿ ಹುಚ್ಚು ಹಿಡಿಯುತ್ತಿದೆಯೆಂದೇ ಯಾರಿಗಾದರೂ ಅನ್ನಿಸುವಂತಿದ್ದಿತು.

ಒಂದು ಸಾಯಂಕಾಲ ಸೂಶಿ ಆಸ್ಪತ್ರೆಯಿಂದ ಬರುವಾಗ ಡಾಕ್ಟರನ್ನು ಕರೆದುತಂದಿದ್ದಳು. ಸರಸುವನ್ನು ಪರೀಕ್ಷಿಸಿದಾಗ ಅವರಿಗೂ ಹುಚ್ಚಿನ ಸುಳಿಕು ಕಾಣಿಸದಿರಲಿಲ್ಲ. ನಡೆದುದೆಲ್ಲವನ್ನೂ ಸೂಶಿಯಿಂದ ಅರಿತುಕೊಂಡ ತರುವಾಯ ಅವರು ಆಕೆಯನ್ನು ಹೊರಗಡೆ ಕರೆದೊಯ್ದು – "ನಿಮ್ಮ ಗೆಳತಿ ಬಹಳ ಸೆನ್ಸಿಟಿವ್ ಇದ್ದಂತಿದೆ. ಗಂಡನನ್ನು ಕಾಣುವ ಆತುರದಿಂದ ಇಲ್ಲಿಗೆ ಬಂದ ಆಕೆಗೆ ಆತನನ್ನು ಕಾಣದಿದ್ದುದರಿಂದ ಬಹಳ ಪೆಟ್ಟು ಬಿದ್ದಿದೆ. ಆಕೆಯ ಮಿದುಳಿಗೆ ಭಾರಿ ಆಘಾತವಾದಂತಿದೆ. ಆಕೆಯನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಹೆಂಗಸರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವುದು ಇಂಥ ಮನಃಸ್ಥಿತಿಯಲ್ಲೇ," ಎಂದು ಹೇಳಿದ್ದರಲ್ಲದೆ, ಆಕೆಯ ತಂದೆ ತಾಯಿಗಳಿಗೆ ಒಡನೆಯೆ ಈ ವಿಷಯವನ್ನು ತಿಳಿಸಿ ಅವರನ್ನು ಬರಮಾಡಿಕೊಳ್ಳುವುದೂ ಉಚಿತವೆಂದು ಸೂಚಿಸಿದ್ದರು. "ಅವರಿಗೂ ಈಕೆಗೂ ಸಂಬಂಧವೇ ಕಡಿದುಹೋಗಿದೆ ಡಾಕ್ಟರ್. ಇನ್ನು ಅವರು ಈಕೆಯ ಮುಖ ನೋಡುವಂತಿಲ್ಲ," ಎಂದು ಸೂಶಿ ಹೇಳಿದಾಗ ಡಾಕ್ಟರು, "ನೀವಂತೂ ಬರೆದು ಬಿಡಿರಿ. ಅವರು ಬಂದರಂತೂ ಉತ್ತಮವೇ. ಈ ಹುಡುಗಿ ಯಾವಾಗ ಏನು ಘಾತ ಮಾಡಿಕೊಂಡಾಳೆಂಬ ಭರವಸೆಯಿಲ್ಲ. ಹಗಲೆಲ್ಲ ಈಕೆಯನ್ನು ಕಾಯುತ್ತ ನೀವೇನೂ ಮನೆಯಲ್ಲಿ ಕುಳಿತಿರಲಾಗುವುದಿಲ್ಲವಲ್ಲ? ಪಾಪ ನಿಮ್ಮ ತಾಯಿಯೊಬ್ಬರೇ ಏನು ಮಾಡಿಯಾರು? ಅಕಸ್ಮಾತ್ತಾಗಿ ಏನಾದರೂ ಆದರೆ ಹೊಣೆಗಾರರಾರು? ಆಕೆಯ ತಂದೆಗೆ ತಿಳಿಸಿಬಿಡುವುದೇ ಉತ್ತಮ," ಎಂದು ಸ್ಪಷ್ಟವಾಗಿ ತಿಳಿಸಿಹೋಗಿದ್ದರು.

ಅದೇ ದಿನವೆ ಸೂಶಿ ಬಸಪ್ಪಸೆಟ್ಟರಿಗೆ ಪತ್ರ ಬರೆದು ಹಾಕಿದ್ದಳು. ಎರಡು ಮೂರು ದಿನ ಕಳೆದರೂ ಅವರಾರೂ ಬಂದಿರಲಿಲ್ಲ. ಬಸಪ್ಪಸೆಟ್ಟರ ನಿಷ್ಠುರ ಸ್ವಭಾವದ ವಿಷಯ ಸೂಶಿಗೆ ಅಪರಿಚಿತವಾದುದೇನೂ ಆಗಿರಲಿಲ್ಲ.

ಸರಸುವಿನ ಮದುವೆಯ ತರುವಾಯ ಅವರಿಂದ ಬಂದಿದ್ದ ನಾಲ್ಕು ಸಾಲುಗಳೆ ಉತ್ತರವೇ ಅವರ ನಿಷ್ಠುರತೆಯನ್ನು ಸ್ಪಷ್ಟಗೊಳಿಸಿದ್ದಿತು. "ನಮ್ಮ ಮನೆತನಕ್ಕೆ ಕಲಂಕ ಸವರಿದ ನಿನ್ನ ಮುಖವನ್ನು ಇನ್ನೆಂದೂ ನೋಡುವುದಿಲ್ಲ. ನಮ್ಮ ಪಾಲಿಗೆ ನೀನು ಸತ್ತಂತೆಯೆ," ಎಂದು ನಿಷ್ಕರುಣೆಯಿಂದ ಬರೆದಿದ್ದವರು ಅವರು. ಮಗಳು ಸತ್ತ ಸುದ್ದಿ ತಿಳಿದಾಗಲೂ ಅಂಥ ವ್ಯಕ್ತಿ ಕಣ್ಣೀರು ಸುರಿಸಲಾರರೆನ್ನಿಸುತಿತ್ತು ಸೂಶಿಗೆ. ಸರಸುವಿಗೆ ಹುಚ್ಚು ಹಿಡಿದುಕೊಳ್ಳಬಹುದೆಂಬ ವಾರ್ತೆಯಿಂದ ಅವರ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಿರಲಾರದು. ಪತ್ರವಂತೂ ನೇರವಾಗಿ ಅವರ ಕೈಗೇ ಹೋಗುತ್ತದೆ. ಓದಿ ನೋಡಿದ ಬಳಿಕ ಸಿಟ್ಟಿನಿಂದ ಅದನ್ನು ಹರಿದೊಗೆದು ಆ ವಿಷಯವನ್ನೇ ಅಲಕ್ಷಿಸಿರಬಹುದು. ಪತ್ರದ ವಿಚಾರವನ್ನೇ ಮನೆಯಲ್ಲಿ ಎತ್ತಿರಲಾರರು. ಬಸಪ್ಪಸೆಟ್ಟರಂಥ ನಿಷ್ಠುರ ವ್ಯಕ್ತಿ ಹಾಗೆ ವರ್ತಿಸುವುದು ಅಸಹಜವೇನೂ ಅಲ್ಲ. ಹೀಗೆಲ್ಲ ಯೋಚಿಸಿದಾಗ, ತಾನು ಪತ್ರ ಬರೆದರೂ ಅವರಾರೂ ಬರಲಿಲ್ಲವೆಂದು ಸೂಶಿಗೆ ಆಶ್ಚರ್ಯವೇನೂ ಆಗಿರಲಿಲ್ಲ. ಅವರು ಬಾರದಿದ್ದುದರಿಂದ ತನ್ನ ಹೊಣೆಗಾರಿಕೆ ಇನ್ನಿಷ್ಟು ಹೆಚ್ಚಿದ ಹಾಗೆ ಆಕೆಗೆನ್ನಿಸಿದ್ದಿತು. ಹಗಲು ಹೊತ್ತು ಆಕೆಯ ದೇಹ ಆಸ್ಪತ್ರೆಯಲ್ಲಿರುತ್ತಿದ್ದಿತಾದರೂ ಚಿತ್ತವೆಲ್ಲವೂ ಸರಸುವಿನ ಸುತ್ತುಮುತ್ತು ಕಾವಲು ಕಾಯುತ್ತಿತ್ತು. ಶಿವಮೂರ್ತಿ ಮನೆ ಬಿಟ್ಟು ಹೊರಟುಹೋದ ಹಾಗೆ ಸರಸುವೂ ಎಲ್ಲಿಗಾದರೂ ಹೊರಟುಹೋಗಿ ಬಿಟ್ಟರೆ ? ಎಂಬ ವಿಚಾರ ಬಂದಾಗಲೆಲ್ಲ ಆಕೆಯ ಎದೆ ಕಂಪಿಸುತ್ತಿತ್ತು.

ಸರಸುವಿಗೆ ಅಂಥ ಯೋಚನೆ ಹೊಳೆದಿದ್ದಿತೊ ಇಲ್ಲವೊ. ಯಾವುದೊಂದು ನಿರ್ಧಾರಕ್ಕೆ ಬರಲಾರದಂಥ ಗೊಂದಲ ಮನಃಸ್ಥಿತಿಯಲ್ಲಿ ತೊಳಲುತ್ತಿದ್ದಳಾಕೆ. ಒಂದೊಂದು ಸಲ ತನ್ನ ಅಕ್ಕರೆಯ ತಂಗಿಯನ್ನೂ, ತವರನ್ನೂ ನೆನೆದು ಅಳುವಳು. ರುದ್ರವ್ವಜ್ಜಿಯನ್ನು ಜ್ಞಾಪಿಸಿಕೊಂಡು ಹಲುಬುವಳು. ಶಿವಮೂರ್ತಿಯ ಮುಖವಂತೂ ಒಂದು ಕ್ಷಣವೂ ಆಕೆಯ ದೃಷ್ಟಿಯಿಂದ ದೂರವಾಗುತ್ತಿರಲಿಲ್ಲ. ಸರಸು ಅಲ್ಲಿಗೆ ಬಂದು ಎರಡು ದಿನ ಕಳೆದ ಮೇಲೆ ಶಿವಮೂರ್ತಿಯಿಂದ ಒಂದು ಕಾರ್ಡು ಬಂದಿತ್ತು—ಸೂಶಿಯ ಹೆಸರಿಗೆ. ಯಾವುದೊಂದು ಊರಿನ ಅಂಚೆಯ ಮುದ್ರೆ ಅದರ ಮೇಲಿರಲಿಲ್ಲ. ಆ ಚಿಕ್ಕ ಪತ್ರವನ್ನಂತೂ ಸರಸು ನೂರು ಬಾರಿ ಓದಿದ್ದಳು. ಅದೆಲ್ಲವೂ ಆಕೆಗೆ ಕಂಠ

ಪಾತವಾದಂತಿದ್ದಿತು. ಆತ ಬರೆದಿದ್ದ ; "ಇನ್ನೆಂದೂ ಈ ಸಂಸಾರದ ಜಂಜಡಕ್ಕೆ ಸಿಲುಕಿಕೊಳ್ಳಬಾರದೆಂದು ನಿರ್ಧರಿಸಿ ನಾನು ಮನೆ ತ್ಯಜಿಸಿ ಹೊರಟಿದ್ದೇನೆ. ನನ್ನನ್ನು ನೀವೆಲ್ಲರೂ ಮರೆತುಬಿಡಬೇಕು ಸೂಶೀ. ನಿನಗೆ ಸರಸು ಸಿಕ್ಕಿದಲ್ಲಿ ಆಕೆಗೂ ಇದೇ ಮಾತು ಹೇಳಬೇಕು. ಅವಳ ಮತ್ತು ನನ್ನ ಸಂಸಾರವೆಂದರೆ ಸ್ವಪ್ನದ ಸಂಸಾರದಂತಾಯಿತು. ಬೆಂಗಳೂರಿನಿಂದ ಆಕೆ ಮರಳಿ ಬಂದರೆ ತನಗೆ ಉಚಿತ ತೋರಿದಂತೆ ಆಚರಿಸಲಿ. ನನಗಾಗಿ ಯಾರೂ ವ್ಯಸನ ಮಾಡಿಕೊಳ್ಳಕೂಡದು. ಅಕಸ್ಮಾತ್ತಾಗಿ ನಾನು ಸತ್ತು ಹೋದಲ್ಲಿ ನನಗಾಗಿ ಯಾರೂ ಒಂದು ಹನಿ ಕಣ್ಣೀರನ್ನೂ ಸುರಿಸಕೂಡದು "

"ಎಂಥ ಕಠೋರ ನುಡಿಗಳು ! ಮರೆಯಬೇಕಂತೆ. ವ್ಯಸನ ಮಾಡಿಕೊಳ್ಳಬಾರದಂತೆ. ಕಣ್ಣೀರು ಸುರಿಸಕೂಡದಂತೆ !" ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತ ಸರಸು ವಿಕಟವಾಗಿ ನಗುವಳು. ಆ ನಗೆ ಕಿವಿಗೆ ಬಿದ್ದಾಗ ಸೂಶಿ ದಿಗಿಲುಗೊಳ್ಳುವಳು. ತನ್ನ ಗೆಳತಿಯ ಮನಸ್ಸನ್ನು ಹಗುರಗೊಳಿಸುವುದು ಹೇಗೆಂಬುದೇ ಆಕೆಗೊಂದು ಸಮಸ್ಯೆಯಾಗಿದ್ದಿತು.

ಒಂದು ದಿನ ಸೂಶಿ ದಿನಪತ್ರಿಕೆಯನ್ನೋದುತ್ತಿದ್ದಾಗ, ಮೊದಲನೆಯ ಪುಟದಲ್ಲಿ ದಪ್ಪಕ್ಷರಗಳಲ್ಲಿ ಮುದ್ರಿತವಾದ ಸುದ್ದಿಯೊಂದು ಆಕೆಯ ಚಿತ್ತವನ್ನು ಸೆಳೆಯಿತು. ಅದನ್ನೋದುತ್ತ ಹೋದ ಹಾಗೆ ಆಕೆಯ ಮುಖದ ಮೇಲೆ ವಿಲಕ್ಷಣ ಹಾಸ್ಯ ಮೂಡತೊಡಗಿತು. ಸರಸುವಿನ ಹತ್ತಿರ ಹೋಗಿ ಪತ್ರಿಕೆಯನ್ನು ಆಕೆಯೆದುರಿಗೆ ಹಿಡಿಯುತ್ತಾ—

"ಆ ಡಾಂಭಿಕ ಸ್ವಾಮಿ ಮದರಾಸಿನಲ್ಲೂ ತನ್ನ ನಾಟಕ ಪ್ರದರ್ಶನಕ್ಕಾರಂಭಿಸಿದ್ದಾನೆ ನೋಡೇ," ಎಂದಳು.

"ನಾಟಕ ?"

"ಇಲ್ಲಿ ಸರ್ವಧರ್ಮಸಮ್ಮೇಳನದ ನಾಟಕ ಹೂಡಿದ್ದರಲ್ಲ. ಅಂಥದೇ ಒಂದು ಪ್ರಹಸನ ಅಲ್ಲಿಯೂ ನಡೆದಿದೆ. ಒಂದು ಮಾನಪತ್ರವನ್ನೂ ಗಿಟ್ಟಿಸಿಕೊಂಡಿದ್ದಾನೆ."

"ಯಾರಿಗಾದರೂ ಹಣ ಕೊಟ್ಟು ಮಾನಪತ್ರದ ವ್ಯವಸ್ಥೆ ಮಾಡಿಕೊಂಡಿದ್ದಾನು," ಎಂದು ನುಡಿದು ಸರಸು ಆ ಸುದ್ದಿಯ ಮೇಲೆ ದೃಷ್ಟಿಯನ್ನೋಡಿಸಿದಳು.

"ಕನ್ನಡ ವಿವೇಕಾನಂದರ ವೀರವಾಣಿ

ಮದರಾಸು. ದಿ....

ಕನ್ನಡ ವಿವೇಕಾನಂದರೆಂದು ಪ್ರಸಿದ್ಧರಾದ ಉತ್ತರಕರ್ನಾಟಕದ ಶ್ರೀ ಸಿದ್ಧವೀರ ಸ್ವಾಮಿಜಿಯವರಿಗೆ ಇಲ್ಲಿನ ಕನ್ನಡಿಗರ ಪ್ರಚಂಡ ಸಭೆಯಲ್ಲಿ ಮಾನಪತ್ರ ಅರ್ಪಿಸಲ್ಪಟ್ಟಿತು. ಸ್ವಾಮಿಜಿಯವರು ನೆರೆದಿದ್ದ ನಾಗರಿಕರನ್ನು ಉದ್ದೇಶಿಸಿ ಎರಡು ಗಂಟೆಗಳ ಕಾಲ ಅಮೋಘ ಭಾಷಣ ಮಾಡಿ ನವಕರ್ನಾಟಕದ ನಿರ್ಮಾಣಕಾರ್ಯದಲ್ಲಿ ಎಲ್ಲರೂ ಉತ್ಸಾಹದಿಂದ ತೊಡಗುವಂತೆ ಉಪದೇಶಿಸಿದರು. ಸ್ವಾಮಿಜಿಯವರ ಭಾಷಣದಿಂದಾಗಿ ಇಲ್ಲಿನ ಕನ್ನಡಿಗರಲ್ಲಿ ನವ ಚೈತನ್ಯವುಂಟಾಗಿದೆ."

ಸುದ್ದಿಯನ್ನೋದಿ ಮುಗಿಸಿದ ಬಳಿಕ ಸರಸು ಕಟುನಗೆಯೊಂದಿಗೆ ನುಡಿದಳು:

"ವಿವೇಕಾನಂದ! ಒಳ್ಳೆಯ ವಿವೇಕಾನಂದರೆ! ಜನ ಮರುಳೋ ಜಾತ್ರೆ ಮರುಳೋ ಅಂತೆ! ಹಣವೊಂದು ಕೈಯಲ್ಲಿದ್ದರಾಯಿತು. ವಿವೇಕಾನಂದನೂ ಆಗಬಹುದು, ರಾಮಕೃಷ್ಣ ಪರಮಹಂಸನೂ ಆಗಬಹುದು. ಜತೆಗೇ ಅವರಿವರ ಹೆಂಡಿರನ್ನು ಕೆಡಿಸುತ್ತಲೂ ತಿರುಗಬಹುದು."

ಅಂದಿನಿಂದ ಸ್ವಾಮಿಗಳ ಹೆಸರು ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳತೊಡಗಿತು. ಕುಂಭಕೋಣಂ ವೀರಶೈವರ ಸಭೆಯಲ್ಲಿ ಉಪನ್ಯಾಸ, ಅಲ್ಲಿ ಅವರ ಪ್ರಚಂಡ ಮೆರೆವಣಿಗೆ. ಮೈಸೂರಿನ ಟೌನ್ ಹಾಲಿನಲ್ಲಿ ಸಂಸ್ಕೃತಿಯ ವಿಚಾರವಾಗಿ ಒಂದೂವರೆ ಗಂಟೆಗಳ ಕಾಲ ಭಾಷಣ. ಬೆಂಗಳೂರಿನಲ್ಲಿ ಕರ್ನಾಟಕದ ಭವಿತವ್ಯದ ಬಗೆಗೆ ಉಪನ್ಯಾಸ, ಉತ್ತರಕರ್ನಾಟಕದ ಕೇಂದ್ರ ನಗರವೊಂದರಲ್ಲಿ ಸ್ವಾಮಿಗಳು ಸಂಸ್ಥೆಯೊಂದನ್ನು ಉದ್ಘಾಟನೆ ಮಾಡಲಿರುವರೆಂಬ ಸುದ್ದಿಯೂ ಪ್ರಕಟವಾಯಿತು. ಅವರ ಭಾವಚಿತ್ರಗಳೂ ಕಾಣಿಸಿಕೊಂಡವು.

ಈ ಪ್ರಸಿದ್ಧೀಕರಣವನ್ನೆಲ್ಲ ನಿರುಕಿಸುತ್ತ ಒಳಗೊಳಗೇ ತಳಮಳಿಸುತ್ತಿದ್ದ ಸರಸುವಿಗೆ, 'ಜನಪದ' ದಲ್ಲಿ ಪ್ರಕಟವಾದ ಲೇಖನವೊಂದನ್ನು ಓದಿದಾಗ ಹರುಷದಿಂದ ಮೇಲಕ್ಕೆದ್ದು ಕುಣಿಯುವಂತಾಯಿತು.

ಹರಿಹರ ಬರೆದಿದ್ದ:

"ವಿಶಿಷ್ಟ ಸಮಾಜವೊಂದರ ಧಾರ್ಮಿಕ ಗುರುಗಳಾಗಿದ್ದು, ಅದಕ್ಕಾಗಿ ಸಮಾಜದಿಂದ ಪೋಷಿಸಲ್ಪಡುವ ನಮ್ಮ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳೆಂಬ ಕಾವೀಬಟ್ಟೆಯ ಮಹನೀಯರು ಈಚೆಗೆ ಕೀರ್ತಿಯೆಂಬ ವೇಶ್ಯೆಯ ಆಕರ್ಷಣೆಗೊಳಗಾಗಿ ಧಾರ್ಮಿಕ ಗುರುಗಳು ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಿದ್ದಾರೆ. ತಮ್ಮ ಮಠಗಳನ್ನೂ ಭಕ್ತರನ್ನೂ ತ್ಯಜಿಸಿ ಸಮಾಜದ ಹಣವನ್ನು ಮನಬಂದಂತೆ ವ್ಯಯಿಸುತ್ತ ಬೆಂಗಳೂರು, ಮೈಸೂರು, ಮಧುರೆ, ಮದರಾಸು, ಕುಂಭಕೋಣಂ, ಕನ್ನಂಬಾಡಿಗಳನ್ನು ತಿರುಗುತ್ತಿದ್ದಾರೆ. ಇವರ ಈ ವಿಲಾಸಯಾತ್ರೆಯಲ್ಲಿ ಕೆಲವು ವಿಲಾಸಿನಿಯರೂ ತಿರುಗುತ್ತಿರುವರೆಂದು ನನಗೆ ವಿಶ್ವಾಸನೀಯವಾಗಿ ತಿಳಿದುಬಂದಿದೆ. ವಿರಕ್ತರೆಂದು ಹೇಳಿಕೊಳ್ಳುವವರು ಮಾಡಬಾರದ ಕೃತ್ಯಗಳನ್ನೆಲ್ಲ ಮಾಡುತ್ತ ಈ ಸ್ವಾಮಿಗಳು ಹಣದ ಬಲದಿಂದ ಅದನ್ನೆಲ್ಲ ಮರೆಮಾಡುತ್ತ ಆಧುನಿಕ ವಿವೇಕಾನಂದರ ಸೋಗು ಹಾಕಿ ಸಂಸ್ಕೃತಿ, ಧರ್ಮ, ಸರ್ವಧರ್ಮಸಮನ್ವಯ, ಕರ್ನಾಟಕ ಏಕೀಕರಣ ಇತ್ಯಾದಿ ವಿಷಯಗಳನ್ನು ಕುರಿತು ಭಾಷಣಮಾಡುತ್ತ ಜನತೆಯ ಕಣ್ಣಲ್ಲಿ ಮಣ್ಣು ತೂರಿ ಮೋಸಗೊಳಿಸಲು ಯತ್ನಿಸುತ್ತಿದ್ದಾರೆ.

ಈ ಸ್ವಾಮಿಗಳಿಗೆ ಬೇರೆ ಬೇರೆ ನಗರಗಳಲ್ಲಿ ಮಾನಪತ್ರಗಳೂ ದೊರೆಯುತ್ತಿವೆಯಂತೆ. ಮೆರೆವಣಿಗೆಗಳೂ ನಡೆಯುತ್ತಿವೆಯಂತೆ. ದಿನಪತ್ರಿಕೆಗಳಲ್ಲಿ ಇಂಥ ಸುದ್ದಿಗಳನ್ನೋದುವ ಸಾರ್ವಜನಿಕರು ಮಬ್ಬಿಗೆ 'ಬೀಳುವ ಸಂಭವವಿದೆಯಾದ್ದರಿಂದ ಈ ವಿಷಯದ ನಿಜಸ್ವರೂಪವನ್ನು ನಾನು ಹೊರಗೆಡವಬೇಕಾಗಿದೆ. ಪತ್ರಿಕೆಗಳಲ್ಲಿ ದೊರೆಯುವ ಅಗ್ಗದ ಕೀರ್ತಿಗಾಗಿ ಬಾಯಿ ಬಾಯಿ ಬಿಡುತ್ತಿರುವ ಈ ಸ್ವಾಮಿಗಳು ಆಯಾಯ ನಗರಗಳಲ್ಲಿ ಕೆಲವರು ನಿರುದ್ಯೋಗಿಗಳನ್ನು ತಮ್ಮ ಬಾಲಬಡಕರನ್ನಾಗಿ ಮಾಡಿಕೊಂಡು, ಅವರಿಗೆ ಸಾಕಷ್ಟು ಹಣ ಕೊಟ್ಟು, ಅವರ ಮೂಲಕ ಮೆರೆವಣಿಗೆಗಳನ್ನೇರ್ಪಡಿಸಿಕೊಳ್ಳುತ್ತಿರುವರಲ್ಲದೆ ಮಾನಪತ್ರದ ವ್ಯವಸ್ಥೆಯನ್ನೂ ಮಾಡಿಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕಸಂಸ್ಥೆಗಳ ಕಾರ್ಯಕರ್ತರನ್ನು ಬರಮಾಡಿಕೊಂಡು ಅವರಿಗೆ ಸಾವಿರಾರು ರೂಪಾಯಿ ಸುರಿದು ಆ ಸಂಸ್ಥೆಗಳ ಉದ್ಘಾಟನ ಸಮಾರಂಭ, ವಾರ್ಷಿಕೋತ್ಸವ ಮೊದಲಾದುವುಗಳಿಗೆ ತಮ್ಮನ್ನು ಆಮಂತ್ರಿಸುವಂತೆ ಏರ್ಪಡಿಸುತ್ತಿದ್ದಾರೆ. ನಮ್ಮ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳ ಈ ನೈಜಸ್ವರೂಪ

ವನ್ನು ಜನರು ಅರಿತುಕೊಳ್ಳಲಿ. ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಬಣ್ಣದ ವಾರ್ತೆಗಳಿಂದಾಗಿ ಮೋಸಹೋಗದಿರಲಿ."

ಎರಡು ಮೂರು ಸಲ ಆ ಲೇಖನವನ್ನೋದಿದರೂ ತೃಪ್ತಿಯಾಗಲಿಲ್ಲ ಸರಸುವಿಗೆ. ತನ್ನ ಮನಸ್ಸಿನಲ್ಲಿದ್ದುದನ್ನೇ ಬರೆದಿದ್ದಾನೆ ಹರಿಹರ, ಎಂದು ಕೊಂಡಳು. ಸಿದ್ಧವೀರಸ್ವಾಮಿಗಳ ಹೆಸರನ್ನೇನೂ ಆತ ಪ್ರಕಟಿಸಿರಲಿಲ್ಲ ವಾದರೂ ಆ ಲೇಖನವನ್ನೋದಿದವರು ಅದು ಸಿದ್ಧವೀರಸ್ವಾಮಿಗಳ ಬಗೆಗೇ ಬರೆಯಲ್ಪಟ್ಟಿರಬೇಕೆಂದು ಸಹಜವಾಗಿ ತಿಳಿದುಕೊಳ್ಳುವಂತಿದ್ದಿತು. ಅದನ್ನು ಓದಿದ ಹಾಗೆಲ್ಲ ಸರಸುವಿನಲ್ಲಿ ಹೊಸ ವಿಚಾರವೊಂದು ರೂಪುಗೊಳ್ಳತೊಡ ಗಿತು. ತನ್ನ ಬಾಳುವೆಯನ್ನೆಲ್ಲ ಹಾಳುಮಾಡಿದ ಆ ಡಾಂಭಿಕ ಸ್ವಾಮಿಯ ಹೆಸರು ಉಲ್ಲೇಖಿಸಿಯೆ ತಾನೊಂದು ಲೇಖನ ಬರೆದು ಪ್ರಕಟಿಸಬೇಕೆಂದು ಆಕೆ ಯೋಚಿಸತೊಡಗಿದಳು.

ಆ ಯೋಚನೆ ಬೆಳೆದು ದೃಢವಾದ ಹಾಗೆಲ್ಲ ತನ್ನಲ್ಲಿ ಅಪೂರ್ವ ಉತ್ಸಾಹ ತುಂಬಿ ಬರುತ್ತಿರುವಂತೆ ತೋರಿತು ಸರಸುವಿಗೆ. ಸ್ವಾಮಿಯ ಬಗೆಗೆ ತನಗೆ ಗೊತ್ತಿರುವುದನ್ನೆಲ್ಲ, ತಾನು ಅನುಭವಿಸಿದುದನ್ನೆಲ್ಲ ಜನತೆಯೆದುರಿಗಿಡಬೇಕು, ಆತನ ದುಷ್ಕೃತ್ಯಗಳಿಗೆ ತಕ್ಕ ಶಾಸನವಾಗುವಂತೆ ಮಾಡಬೇಕು, ಆಗ ತನಗೆ ಸಮಾಧಾನವಾದೀತು, ಸಮಾಜಕ್ಕೂ ಉಪಕಾರವಾದೀತು ಎಂದು ಕೊಂಡಳು.

ಅಂದು ಸಾಯಂಕಾಲ ಸೂಶಿ ಆಸ್ಪತ್ರೆಯಿಂದ ಬರುವುದರೊಳಗಾಗಿ ಸರಸು ಸ್ನಾನ ಮಾಡಿ, ತಲೆ ಬಾಚಿಕೊಂಡು, ಬೇರೆ ಸೀರೆಯೊಂದನ್ನು ಉಟ್ಟು ಕೊಂಡು ಹೊರಕ್ಕೆ ಹೊರಡಲು ಸಿದ್ಧಳಾಗಿ ನಿಂತಿದ್ದಳು. ಸರಸುವಿನಲ್ಲಾದ ಈ ಆಕಸ್ಮಿಕ ಬದಲಾವಣೆಯನ್ನು ಕಂಡು ಸೂಶಿಗೆ ಆಶ್ಚರ್ಯವಾಗದಿರಲಿಲ್ಲ.

"ಬೇಗ ಬೇಗ ಚಹ ತೆಗೆದುಕೊಂಡುಬಿಡು ಸೂಶಿ. ಇವೊತ್ತು ಹರಿಹರರ ಹತ್ತಿರ ಹೋಗಿ ಬರೋಣ."

"ಹರಿಹರರ ಹತ್ತಿರ ?"

"ಈ ವಾರದ 'ಜನಪದ' ದಲ್ಲಿ ಸ್ವಾಮಿಗಳ ಬಗ್ಗೆ ಒಂದು ಲೇಖನ ಬಂದಿದೆ. ಓದಿಲ್ಲವೇನು ?"

"ಓದಿದ್ದೇನೆ. ಭಯಂಕರ ಬರೆದುಬಿಟ್ಟಿದ್ದಾರೆ ಹರಿಹರ."

"ಅದಕ್ಕಿಂತಲೂ ಭಯಂಕರ ಬರೆಯಬೇಕು. ನಾನು ಬರೆದು ಕೊಡುತ್ತೇನೆ."

"ನೀನು !"

"ಹೌದು, ನಾನು. ಆ ಸ್ವಾಮಿಯ ಹೆಸರು ಉಲ್ಲೇಖಿಸಿಯೆ ನಾನೆಲ್ಲವನ್ನೂ ಬರೆದುಕೊಡುತ್ತೇನೆ. ಆ ಡಾಂಭಿಕನಿಗೆ ತಕ್ಕ ಶಿಕ್ಷೆಯಾದಾಗಲೇ ಸಮಾಧಾನವಾದೀತು ನನಗೆ. ಇಲ್ಲವಾದರೆ ...."

"ಅದನ್ನೆಲ್ಲಾ ಬರೆದರೆ ನಿನ್ನ ಹೆಸರೇ ಕೆಡುವುದಿಲ್ಲವೇ ಸರಸು ?"

"ಕೆಟ್ಟರೆ ಕೆಡಲೊಲ್ಲದೇಕೆ ? ಕೆಡಲು ಈಗ ಉಳಿದಿರುವುದಾದರೂ ಏನು ? ಇದ್ದುದೆಲ್ಲ ಆಗಲೇ ಕೆಟ್ಟು ಹಾಳಾಗಿ ಹೋಗಿದೆಯಲ್ಲ ? ಹೆಸರೂ ಕೆಟ್ಟದೆ, ಬದುಕೂ ಕೆಟ್ಟದೆ, ಎಲ್ಲಾ ಕೆಟ್ಟದೆ. ನನ್ನಂತೆ ಬೇರೆಯವರೂ ಕೆಡಬಾರದಲ್ಲ ? ಅದಕ್ಕಾಗಿಯೇ ಈ ಸ್ವಾಮಿಯ ಡಾಂಭಿಕತನವನ್ನೆಲ್ಲ ಹೊರಗೆಡವಬೇಕು."

ಸೂಶಿ ಅಷ್ಟಕ್ಕೇ ಸುಮ್ಮನಾದಳು. ಎದೆಯಲ್ಲಿ ಕೋಲಾಹಲವನ್ನುಂಟು ಮಾಡಿದ ಕಹಿಯನ್ನೆಲ್ಲಾ ಒಮ್ಮೆ ಹೊರಹಾಕಿದಲ್ಲಿ ಸರಸು ಮತ್ತೆ ಮೊದಲಿನಂತೆ ನೆಟ್ಟಗಾಗಬಹುದೆಂದು ಆಕೆಗೆನ್ನಿಸಿತು. ಆಕೆ ಹುಚ್ಚುಹುಚ್ಚಾಗಿ ಮಾತನಾಡುವುದು, ವಿಚಿತ್ರವಾಗಿ ನಗುವುದು, ಒಂದೇ ಸ್ಥಳದಲ್ಲಿ ಕುಳಿತುಕೊಂಡು ಅಸಂಬದ್ಧವಾಗಿ ಬಡಬಡಿಸುವುದು ನಿಂತುಹೋದರೆ ಸಾಕು ಎನ್ನಿಸಿತು ಸೂಶಿಗೆ.

'ಜನಪದ' ಕಾರ್ಯಾಲಯಕ್ಕೆ ಹೋಗಿ ಹರಿಹರನನ್ನು ಕಂಡು, ತಾವು ಬಂದುದರ ಕಾರಣ ತಿಳಿಸಿದಾಗ ಆತ ಉತ್ಸಾಹದಿಂದ ಹೇಳಿದ: "ಬಹಳ ಒಳ್ಳೆಯ ವಿಚಾರ. ಬರೆದುಕೊಡಿರಿ. ಇದೇ ವಾರ, ಮೊದಲನೆಯ ಪುಟದ ಮೇಲೆ ಪ್ರಕಟಿಸುತ್ತೇನೆ. ಆ ಸ್ವಾಮಿಯನ್ನು ಬಯಲಿಗೆಳೆಯಲೇಬೇಕು."

"ನನಗೆ ಬರೆಯಲು ಬರುವುದಿಲ್ಲವಲ್ಲ ?" ಎಂದಳು ಸರಸು.

"ಚಿಂತೆಯಿಲ್ಲ. ನೀವು ಹೇಳುತ್ತ ಹೋಗಿರಿ. ನಾನು ಬರೆದುಕೊಳ್ಳುತ್ತೇನೆ. ಎಲ್ಲವನ್ನೂ ಬರೆದಾದ ಬಳಿಕ ಒಮ್ಮೆ ನೀವು ಅದನ್ನೋದಿ ತಿದ್ದಬೇಕಾದಲ್ಲಿ ತಿದ್ದಿ, ನಿಮ್ಮ ಹಸ್ತಾಕ್ಷರಗಳಲ್ಲಿ ಮತ್ತೊಂದು ಪ್ರತಿ ತೆಗೆದು ಕೊಡಿರಿ. ಆ ಸ್ವಾಮಿಯನ್ನು ಮಟ್ಟ ಹಾಕುವಾ."

"ಇದನ್ನು ಪ್ರಕಟಿಸುವುದರಿಂದ ನಿಮಗೇನಾದರೂ ತೊಂದರೆಯಾದರೆ?" ಎಂದಳು ಸೂಶಿ.

"ನನಗೇನು ಆಗುತ್ತದೆ? ಯಾರು ಮುನಿದು ನನ್ನನ್ನೇನ ಮಾಡು ವರು? ನನ್ನ ಮಟ್ಟಿಗೆ ನಾನು ಸ್ವತಂತ್ರನಿದ್ದೇನೆ. ನನ್ನ ಶಕ್ತಿಯನ್ನು ನೆಚ್ಚಿಕೊಂಡು ಕೆಲಸ ಸಾಗಿಸಿದ್ದೇನೆ. ಈ ತೋಳುಗಳಲ್ಲಿ ಶಕ್ತಿಯಿರುವವರೆಗೆ ಯಾರಿಗೂ ಬಾಗಬೇಕಾಗಿಲ್ಲ. ಆ ಕೀರ್ತನ ಕಂಠೀರವ ಶಾಸ್ತ್ರಿಯಂತೆ ಅವ ರಿವರು ಬಿಸುಟುವ ಕಾಸಿಗಾಗಿ ನಾನೇನೂ ಆಸೆಪಡಬೇಕಾಗಿಲ್ಲವಲ್ಲ?"

ಎತ್ತರವಾದ ಸ್ಟೂಲುಗಳ ಮೇಲೆ ಕುಳಿತು ಮೊಳೆ ಜೋಡಿಸುತ್ತಲಿದ್ದ ಹುಡುಗರಿಬ್ಬರನ್ನು ದಿಟ್ಟಿಸುತ್ತ ಸೂಶಿ ಪ್ರಶ್ನಿಸಿದಳು: "ಇವರೇ ಏನು ನಿಮ್ಮ ತಮ್ಮಂದಿರು?"

"ಹೌದು. ಇವರೇ. ಇವರು ಕಂಪೋಸ್ ಮಾಡುತ್ತಾರೆ. ನಾನು ಪ್ರಿಂಟ್ ಮಾಡುತ್ತೇನೆ. ಎಲ್ಲಾ ಸ್ವಾವಲಂಬನದ ಕೆಲಸ. ದುಡಿದು ಬೆವರಿಳಿಸಿ ಮೊದಲು ಈ ಪ್ರೆಸ್ಸಿನ ಸಾಲವೊಂದನ್ನು ತೀರಿಸಬೇಕಾಗಿದೆ."

"ಸಾಲ?" ಎಂದು ಕೇಳಿದಳು ಸರಸು.

"ಈ ಪ್ರೆಸ್ಸು ಕೊಳ್ಳಲು ನಾಲ್ಕು ಸಾವಿರ ಸಾಲ ಮಾಡಬೇಕಾಯಿತಲ್ಲ? ಮೊದಲು ಅದನ್ನು ತೀರಿಸಿಬಿಡಬೇಕಾಗಿದೆ."

"ಯಾರ ಹತ್ತಿರ ಸಾಲವಾಗಿದೆ?"

"ಬ್ಯಾಂಕಿನಲ್ಲಿ."

"ಅದನ್ನು ತೀರಿಸಲು ನನ್ನಿಂದೇನಾದರೂ ಸಹಾಯವಾಗುವಂತಿದ್ದಲ್ಲಿ ಸ್ವೀಕರಿಸುವಿರಿ ತಾನೆ?"

"ನಿಮ್ಮಿಂದ?" ಎಂದು ದಿಗಿಲುಗೊಂಡು ಕೇಳಿದ ಹರಿಹರ.

"ಹೌದು. ನನ್ನಿಂದ. ಆ ಸಾಲವೊಂದು ತೀರಿಹೋದಲ್ಲಿ ನೀವು ಇನ್ನೂ ಸ್ವತಂತ್ರರಾಗುತ್ತೀರಿ. ಯಾರ ಹಂಗೂ ನಿಮಗಿರುವುದಿಲ್ಲ. ನನ್ನ ಹತ್ತಿರ ಸ್ವಲ್ಪ ಹಣವಿದೆ. ಸದ್ಯ ಅದರಿಂದ ನನಗೂ ಯಾವ ಉಪಯೋಗವೂ ಇಲ್ಲ. ಅದನ್ನು ಹಾಗೇ ಯಾಕೆ ಕೊಳೆಯಿಸಬೇಕು? ಪತ್ರಿಕೆಗಾದರೂ ಉಪಯೋಗವಾಗಲಿ."

ಹರಿಹರ ಕೊಂಚ ಹೊತ್ತು ಸುಮ್ಮನಿದ್ದು ಅನಂತರ ನುಡಿದ: "ನೀವಾ ಗಿಯೆ ಸಂತೋಷದಿಂದ ನೆರವಾಗಲು ಮುಂದೆ ಬಂದಿರುವಾಗ ನಾನು ಬೇಡ

ವೆನ್ನಲಾರೆ. ಬ್ಯಾಂಕಿಗೆ ಬರೆದುಕೊಟ್ಟಂತೆ ನಿಮಗೂ ಆಧಾರಪತ್ರ ಬರೆದು ಕೊಡುತ್ತೇನೆ. ತಿಂಗಳು ತಿಂಗಳಿಗೆ ಬಡ್ಡಿಯನ್ನೂ ಕೊಡುತ್ತೇನೆ."

ಸರಸು ಮುಲುನಗೆಯೊಂದಿಗೆ ಹೇಳಿದಳು: "ಆಧಾರಪತ್ರ? ಬಡ್ಡಿ? ನನಗೂ ಆಧಾರಪತ್ರ ಬರೆದು ಕೊಡಬೇಕಾಗಿದ್ದರೆ ನನ್ನಿಂದ ಸಹಾಯವನ್ನಾದರೂ ಯಾಕೆ ಪಡೆಯಬೇಕು? ಇಂಥದಕ್ಕೂ ಸಹಾಯವೆನ್ನುತ್ತಾರೆಯೆ? ಆಧಾರಪತ್ರದ ಅಗತ್ಯವೂ ಇಲ್ಲ. ಬಡ್ಡಿಯೂ ಅವಶ್ಯವಿಲ್ಲ. ನಾಲ್ಕು ಸಾವಿರ ರೂಪಾಯಿ ನನ್ನ ಹತ್ತಿರ ಸುಮ್ಮನೆ ಬಿದ್ದುಕೊಂಡಿವೆ. ಅದನ್ನೇ ನೀವು ಉಪಯೋಗಿಸಿಕೊಳ್ಳಿರಿ. ಬಡ್ಡಿ ತೆಗೆದುಕೊಳ್ಳಲು ನಾನೇನು ಮಾರವಾಡಿಯೆ? ಅಥವಾ ಬ್ಯಾಂಕೇ?"

"ಹಾಗೆಂದರೇನ್ರಿ? ಯಾವ ಕರಾರೂ ಇಲ್ಲದೆ ಹಣ ಕೊಡುತ್ತೀರಾ?"

"ಕರಾರುಗಳ ಅಗತ್ಯವಾದರೂ ಏನಿದೆ?"

ಲೇಖನವನ್ನು ಬರೆದುಕೊಳ್ಳುವುದಕ್ಕಾಗಿ ಮಾರನೆಯ ದಿನ ಮನೆಗೆ ಬರುವುದಾಗಿ ಹರಿಹರ ಹೇಳಿದ ಬಳಿಕ ಗೆಳತಿಯರಿಬ್ಬರೂ ಆತನನ್ನು ಬೀಳ್ಕೊಂಡು ಹೊರಟರು. ದಾರಿಯಲ್ಲಿ ಸರಸು ಸರಾಫಿ ಅಂಗಡಿಯೊಂದಕ್ಕೆ ನುಗ್ಗಿ, ಕೊರಳಲ್ಲಿದ್ದ ಆಭರಣಗಳನ್ನೂ ಕೈಗಳಲ್ಲಿದ್ದ ಚಿನ್ನದ ಬಳೆಗಳನ್ನೂ ಕಳಚಿ ತೆಗೆದು ಬೆಲೆ ಕಟ್ಟಲು ತಿಳಿಸಿದಳು. ಆಕೆ ಮಾಡುವುದನ್ನೆಲ್ಲ ವಿಸ್ಮಯದಿಂದ ನಿರುಕಿಸುತ್ತ ಸೂಶಿ ಮೌನವಾಗಿ ಕುಳಿತಿದ್ದಳು.

ಒಡವೆಗಳಿಗೆ ನಾಲ್ಕೂವರೆ ಸಾವಿರ ರೂಪಾಯಿ ಬೆಲೆಯೆಂದು ಗೊತ್ತಾಯಿತು. ಮರುಮಾತನಾಡದೆ ಸರಸು ಆ ಬೆಲೆಯನ್ನೊಪ್ಪಿಕೊಂಡು ಹಣ ಪಡೆದಳು. ಸೂಶಿಯ ಕೈಚೀಲದಲ್ಲಿ ನೋಟುಗಳ ಕಟ್ಟುಗಳನ್ನು ತುಂಬಿದುದಾಯಿತು. ಕುದುರೆಗಾಡಿಯೊಂದನ್ನು ಗೊತ್ತುಮಾಡಿಕೊಂಡು ಮನೆಗೆ ಹೊರಟರು.

"ಇದೇನು ಮಾಡಿದೆ ಸರಸೂ?"

"ಬೆಂಗಳೂರಿನಿಂದ ಹೊರಟಾಗ ಇವುಗಳನ್ನೆಲ್ಲಾ ಅಲ್ಲಿಯೆ ಬಿಸುಟ ಬರಬೇಕಾಗಿತ್ತು. ಆಗಿನ ಮನಃಸ್ಥಿತಿಯಲ್ಲಿ ನನ್ನ ಮೈಮೇಲೆ ಒಡವೆಗಳಿರುವ ವಿಚಾರವೂ ನೆನಪಿನಲ್ಲಿರಲಿಲ್ಲ. ನಿಜ ಹೇಳಬೇಕಾದರೆ ಇದುವರೆಗೂ ಅವುಗಳ ಕಡೆಗೆ ಲಕ್ಷ್ಯವೇ ಇರಲಿಲ್ಲ. ಹರಿಹರ ಸಾಲದ ವಿಷಯ ಹೇಳಿದಾಗ

ಕಳವಳವಾಯಿತು. ಅಷ್ಟೊಂದು ಕಷ್ಟಪಟ್ಟು ದುಡಿಯುತ್ತಿರುವ ಅವರಿಗೆ ಸಹಾಯ ಮಾಡಬೇಕು ಎನ್ನಿಸಿತು. ಆಗಲೇ ನನ್ನ ಮೈಮೇಲಿ ಒಡವೆ ಗಳಿದ್ದುದರ ನೆನಪಾದುದು. ಆ ಸ್ವಾಮಿಯಿಂದ ದೊರೆತ ಈ ಒಡವೆಗಳನ್ನು ನಾನಿನ್ನು ಧರಿಸುವ ಹಾಗೂ ಇರಲಿಲ್ಲ. ಹರಿಹರರಿಗಾದರೂ ಉಪಯೋಗ ವಾಗಲಿ ಎಂದುಕೊಂಡು ಈ ವಿಚಾರ ನಿರ್ಧರಿಸಿದೆ."

"ನಾಳೆ ಆ ಸ್ವಾಮಿ ಬಂದು ಒಡವೆಗಳನ್ನು ಕೊಡಬೇಕೆಂದು ಕೇಳಿದರೆ ಏನು ಮಾಡುವೆ ?"

"ಇನ್ನೊಮ್ಮೆ ನನ್ನ ಮುಖ ನೋಡುವ ಧೈರ್ಯವಾದರೂ ಬಂದೀತೇ ಆತನಿಗೆ? ಅಲ್ಲವೆ ಇವುಗಳನ್ನಾತ ಕೊಡಿಸಿದ್ದು ತಾನು ಸ್ವತಃ ಬೆವರಿಳಿಸಿ ದುಡಿದು ಗಳಿಸಿದ ಹಣದಿಂದೇನೂ ಅಲ್ಲವಲ್ಲ? ಇದೆಲ್ಲಾ ಮಠದ ಹಣ. ಸಾರ್ವಜನಿಕರ ಹಣ. ಸಾರ್ವಜನಿಕರಿಂದ ಬಂದ ಹಣ ಸಾರ್ವಜನಿಕರಿಗಾಗಿ ಹೊರಡುವ ಪತ್ರಿಕೆಗಾಗಿ ವೆಚ್ಚವಾಗಲಿ. ಅದೇ ಸರಿಯಾದ ರೀತಿ."

"ಅಂದರೆ! ಈ ನಾಲ್ಕು ಸಾವಿರ ರೂಪಾಯಿಗಳನ್ನು ನೀನು ಅವರಿಗೆ ದಾನವಾಗಿ ಕೊಟ್ಟುಬಿಡುವವಳೋ ಹೇಗೆ ?"

"ದಾನ ಕೊಡಲು ನಾನಾರು ಸೂಶಿ ? ಇದೇನು ನನ್ನ ಹಣವೇ ? ಜನರು ಮಠಕ್ಕೆ ಕೊಟ್ಟ ಹಣ ಸ್ವಾಮಿಯ ಕೈಗೆ ಬಂತು, ಅವನಿಂದ ನನ್ನ ಕೈಗೆ. ನನ್ನಿಂದ ಹರಿಹರರ ಕೈಗೆ—ಅಂದರೆ ಅವರ ಪತ್ರಿಕೆಗೆ. ಜನರ ಹಣ ಮತ್ತೆ ಜನರಿಗೇ ಹೋದಂತಾಗಲಿಲ್ಲವೆ ? ಹರಿಹರ ಸ್ವತಂತ್ರ ಮನೋವೃತ್ತಿ ಯವರು. ಶಾಸ್ತ್ರಿಯ ಹಾಗೆ ಅವರಿವರ ಎದುರಿಗೆ ಲಾಂಗೂಲಚಾಲನ ಮಾಡಿ ಹಣ ಗಳಿಸುವವರಲ್ಲ. ಬಡಜನರಿಗಾಗಿ ದುಡಿಯುವ ಹರಿಹರರಂಥ ಪ್ರಾಮಾಣಿಕರಿಗೆ ಇಂದಿನ ಈ ಡಾಂಭಿಕ ಸಮಾಜದಿಂದ ಸಹಾಯ ದೊರೆಯ ಲಾರದು. ಅಂತೆಯೆ....."

ಮಾರನೆಯ ದಿನ ಬೆಳಗಾಗುವುದರೊಳಗಾಗಿ ಹರಿಹರನ ಸವಾರಿ ಆಗಮಿಸಿತು. ಸರಸುವೂ ಆತನೂ ನಾಲ್ಕೈದು ಗಂಟೆಗಳ ಕಾಲ ಕುಳಿತು ಲೇಖನವನ್ನು ಸಿದ್ಧಗೊಳಿಸಿದರು.

"ಈ ವಾರವೇ ಪ್ರಕಟಿಸಲು ಸಾಧ್ಯವಾದೀತೇ ?"

"ಬಹಳ ದೊಡ್ಡದಾಯಿತು ಸರಸಮ್ಮ. ಈ ವಾರ ಈ ಬಗ್ಗೆ ಒಂದು

ಹೊಸ ಬಗೆಯ ಜಾಹೀರಾತು ಹಾಕುತ್ತೇನೆ. ಮುಂದಿನ ವಾರದಿಂದ ಕ್ರಮಶಃ ಪ್ರಕಟಿಸುತ್ತೇನೆ."

"ಹಾಗೇ ಮಾಡಿರಿ. ಇಂದು ಸಂಜೆಯೊಳಗಾಗಿ ನಾನು ಇದನ್ನು ಪ್ರತಿ ಮಾಡಿ ತಂದುಕೊಡುತ್ತೇನೆ," ಎಂದು ಹೇಳಿ ಸರಸು ನಾಲ್ಕು ಸಾವಿರ ರೂಪಾಯಿಗಳ ನೋಟುಗಳನ್ನು ಆತನ ಎದುರಿಗಿರಿಸಿದಳು.

ಕೆಲಹೊತ್ತು ಹರಿಹರನ ಮುಖದಿಂದ ಮಾತೇ ಹೊರಡಲಿಲ್ಲ. ಆಧಾರ ಪತ್ರ ಬರೆದುಕೊಡದೆ ತಾನು ಹಣ ಮುಟ್ಟುವುದಿಲ್ಲವಾಗಿ ಆತ ಹಟ ಹಿಡಿದ. ಸರಸು ಬಗೆಬಗೆಯಾಗಿ ಹೇಳಿ ಆತನನ್ನೊಪ್ಪಿಸಿದಳು.

ಅಂದು ಮಧ್ಯಾಹ್ನವೆಲ್ಲಾ ಕುಳಿತು ಲೇಖನವನ್ನು ಪ್ರತಿ ಮಾಡಿದಳು. ಹರಿಹರನ ಹಸ್ತಪ್ರತಿಯನ್ನು ಹರಿದು ನೀರೊಲೆಗೆ ಹಾಕಿ ನಾಶಗೊಳಿಸಿದಳು.

"ಹರಿಹರರ ಹತ್ತಿರ ಹೋಗಿ ಲೇಖನವನ್ನು ಕೊಟ್ಟು ಬರುತ್ತೇನೆ ಸುಬ್ಬಕ್ಕ," ಎಂದು ಹೇಳಿ ಮನೆಯಿಂದ ಹೊರಟಳು. ಸುಬ್ಬಕ್ಕ ಬೇಡವೆನ್ನಲಿಲ್ಲ. ಮುನ್ನಾದಿನದಿಂದ ಸರಸು ಸಹಜವಾದ ರೀತಿಯಲ್ಲಿ ವರ್ತಿಸುತ್ತಿದ್ದುದರಿಂದ ಸುಬ್ಬಕ್ಕನಿಗೆ ಸಂತೋಷವಾಗಿದ್ದಿತು. ಆಕೆಗೆ ಹಿಡಿದುಕೊಳ್ಳುತ್ತಿದ್ದ ಹುಚ್ಚು ಕ್ರಮೇಣವಾಗಿ ತೊಲಗಿಹೋಗುತ್ತಿದೆಯೆಂದು ಸುಬ್ಬಕ್ಕನಿಗೆನ್ನಿಸಿದ್ದಿತು.

ಸರಸು ನೇರವಾಗಿ 'ಜನಪದ' ಕಾರ್ಯಾಲಯಕ್ಕೆ ಬಂದಳು.

ಪ್ರೂಫು ತೆಗೆಯುವುದರಲ್ಲಿ ತೊಡಗಿದ್ದ ಹರಿಹರ ಆಕೆಯನ್ನು ಕಂಡೊಡನೆ—"ಸಮಯಕ್ಕೆ ಸರಿಯಾಗಿ ಬಂದಿರಿ. ನಿಮ್ಮ ಲೇಖನದ ಜಾಹೀರಾತು ಜೋಡಿಸಿಯಾಯಿತು. ಇದೋ, ಅದರ ಪ್ರೂಫು," ಎಂದು ನುಡಿದು ಆ ಹಾಳೆಯನ್ನು ನೀಡಿದ.

ತಾನು ಬರೆದು ತಂದಿದ್ದ ಹಸ್ತ ಪ್ರತಿಯನ್ನು ಹರಿಹರನ ಕೈಗಿತ್ತು, ಸರಸು ಆ ಪ್ರೂಫಿನ ಮೇಲೆ ದೃಷ್ಟಿಯನ್ನೋಡಿಸಿದಳು.

"ಸಿದ್ಧವೀರಸ್ವಾಮಿಗಳ ವಿಲಾಸಯಾತ್ರೆ.
ಅವರ ಬಲೆಗೆ ಬಿದ್ದು ಕಟು ಅನುಭವಕ್ಕೊಳಗಾದ
ಸರಸ್ವತೀದೇವಿ ಸೆಟ್ಟರ ಎಂಬವರು ಬರೆದ ಸತ್ಯಕಥೆ

..........ಊರಿನ ಮಠದ ಸ್ವಾಮಿಗಳೂ, ನಮ್ಮ ನಗರದ ಅನಾಥ

ಬಾಲ ಬಾಲಿಕಾಶ್ರಮದ ಅಧ್ಯಕ್ಷರೂ, ಮೊನ್ನೆ ಮೊನ್ನೆಯೆ ಇಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನದ ಹಿರಿಯತನ ವಹಿಸಿ ಮಹಾ ಧಾರ್ಮಿಕ ಮುಖಂಡ ರೆಂದು ಮೆರೆದವರೂ, ಒಂದು ತಿಂಗಳಿನಿಂದ ಬೆಂಗಳೂರು, ಮೈಸೂರು, ಮದರಾಸು, ಕುಂಭಕೋಣಂ ಇತ್ಯಾದಿ ದಕ್ಷಿಣದ ನಗರಗಳಲ್ಲಿ ತಿರುಗುತ್ತ ಅಲ್ಲಿಯೂ ಉಪನ್ಯಾಸಗಳ ಗದ್ದಲವೆಬ್ಬಿಸಿರುವವರೂ ಆದ ಸಿದ್ಧವೀರ ಸ್ವಾಮಿಗಳ ನೈಜ ಸ್ವರೂಪವೆಂಥದೆಂಬುದು ಸಾರ್ವಜನಿಕರಿಗೆ ತಿಳಿದಿರ ಲಾರದು. ಈ ಸ್ವಾಮಿಗಳ ಮೋಸದ ಬಲೆಗೆ ಬಿದ್ದು ಅವರೊಂದಿಗೆ ಬೆಂಗಳೂರಿಗೆ ಹೋಗಿ ಫಜೀತಿಯಾಗಿ ಮರಳಿಬಂದಿರುವ ಸರಸ್ವತೀದೇವಿ ಸೆಟ್ಟರ ಎಂಬ ಹತ್ತೊಂಭತ್ತು ವರ್ಷದ ವಿವಾಹಿತ ಯುವತಿ ಬರೆದಿರುವ ಲೇಖನ ಇದು. ಸಿದ್ಧವೀರಸ್ವಾಮಿಗಳ ಮಠವಿರುವ ಊರಿನ ಬಸಪ್ಪಸೆಟ್ಟರೆಂಬ ಶ್ರೀಮಂತ ವ್ಯಾಪಾರಸ್ಥರ ಮಗಳು ಈಕೆ. ಹದಿನೈದು ಪುಟಗಳಷ್ಟು ದೊಡ್ಡ ದಾಗಿರುವ ಈ ಲೇಖನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಸಂಗತಿಗಳ ವಿವರ :

(೧) ಪ್ರಭುಸ್ವಾಮಿಗಳೆಂಬ ಸಾಧುಪುರುಷರನ್ನೋಡಿಸಿ ಸಿದ್ಧವೀರ ಸ್ವಾಮಿಗಳು ಮಠಾಧಿಕಾರಿಗಳಾದ ಬಗೆ. (೨) ಗದಿಗೆಮ್ಮ ಎಂಬ ಶಾಲಾ ಶಿಕ್ಷಕಿಯೊಂದಿಗೆ ಸ್ವಾಮಿಗಳ ರಹಸ್ಯ ಪ್ರಣಯ. (೩) ಲೀಲಾವತಿಯೆಂಬ ವಿಧವೆಯನ್ನು ಅನಾಥಾಶ್ರಮದಲ್ಲಿ ಕೆಲಸಕ್ಕಿಟ್ಟುಕೊಂಡು ಸ್ವಾಮಿಗಳು ಆಕೆ ಯೊಂದಿಗೆ ರಮಿಸಿದ ಬಗೆ. (೪) ಸರಸ್ವತಿಯನ್ನು ಈ ಸ್ವಾಮಿಗಳಿಗೆ ಗಂಟು ಹಾಕಲು ಈ ಲೀಲಾವತಿಯೂ, ಆಕೆಯ ಇನ್ನೊಬ್ಬ ಪ್ರಿಯಕರನಾದ ಕೀರ್ತನ ಕಂಠೀರವ ಗಂಗಾಧರ ಶಾಸ್ತ್ರಿಯೂ ನಡೆಸಿದ ಕಾರಸ್ಥಾನ. (೫) ಸರ್ವಧರ್ಮ ಸಮ್ಮೇಳನದ ರಾತ್ರಿ ಅನಾಥಾಶ್ರಮದಲ್ಲಿ ಸರಸ್ವತಿಯನ್ನು ಸ್ವಾಮಿಗಳು ಬಲೆಗೆ ಕೆಡವಿದ್ದು. (೬) ಈ ಕೆಲಸಕ್ಕೆ ಅನುಕೂಲವಾಗಲೆಂದೇ ಆ ರಾತ್ರಿ ಸರಸ್ವತಿಯ ಗಂಡನನ್ನು ಗಂಗಾಧರಶಾಸ್ತ್ರಿ ಬೇರೆ ಊರಿಗೆ ಕಳುಹಿಸಿದ್ದು. (೭) ಬೆಂಗಳೂರಿಗೆ ಪ್ರಯಾಣ. ಮೈಸೂರು, ಕನ್ನಂಬಾಡಿ ಯಾತ್ರೆ. (೮) ಸ್ನೇಹಲತಾ ಎಂಬ ನರ್ತಕಿಯ ಮನೆಗೆ ಸ್ವಾಮಿಗಳು ಎಡತಾಕಿದ್ದು. (೯) ಸಿಗರೇಟು ಸೇದುವುದು, ಚಹ ಕುಡಿಯುವುದು, ಮಾಂಸ ತಿನ್ನುವುದು, ಮದ್ಯ ಸೇವಿಸುವುದು ಇತ್ಯಾದಿ. (೧೦)......ಊರಿನ ಶ್ರೀಮಂತರೊಬ್ಬರ ಹೆಂಡತಿಯಾದ ಪಾರ್ವತಿ ಎಂಬಾಕೆಯೊಂದಿಗೆ ಸ್ವಾಮಿಗಳ ಗುಪ್ತಸಂಬಂಧ.

ಅದರ ಫಲವಾಗಿ ಜನಿಸಿದ ಹುಡುಗ ಸಿದ್ಧಪ್ರಸಾದ. (೧೧) ಈ ವಿಷಯ ಗೊತ್ತಾದ ಬಳಿಕ ಪಾರ್ವತಿಯ ಗಂಡನಿಗೆ ಬುದ್ಧಿ ಕೆಟ್ಟದ್ದು. (೧೨) ಸ್ವಾಮಿಗಳ ಹೇಳಿಕೆಯ ಮೇರೆಗೆ ಆತನನ್ನು ಬೆಂಗಳೂರಿಗೆ ಕರೆದೊಯ್ದು ಹುಚ್ಚಾಸ್ಪತ್ರೆಗೆ ಸೇರಿಸಿದ್ದು. (೧೩) ಆತನ ಆಸ್ತಿಯನ್ನು ಎತ್ತಿಹಾಕುವ ಹೊಂಚು. (೧೪) ಪ್ರೇಯಸಿ ಪಾರ್ವತಿಯೊಂದಿಗೆ ಸ್ವಾಮಿಗಳು ಮದರಾಸಿಗೆ ಯಾತ್ರೆ ಹೊರಟದ್ದು. ಇತ್ಯಾದಿ. ಇತ್ಯಾದಿ.

ಈ ಅದ್ಭುತ, ರೋಮಾಂಚಕಾರಕ ಸತ್ಯಕತೆಯನ್ನು ವಾರ ವಾರವೂ 'ಜನಪದ' ದಲ್ಲಿ ಪ್ರಕಟಿಸಲಾಗುವುದು.

ಓದಲು ಮರೆಯಬೇಡಿರಿ!"

ಸರಸು ಪ್ರೂಫು ಓದಿ ಮುಗಿಸಿದ ಬಳಿಕ ಹರಿಹರ ಕುತೂಹಲದಿಂದ ಪ್ರಶ್ನಿಸಿದ: "ಏನೆನ್ನುತ್ತೀರಿ ಸರಸಮ್ಮ? ಹೇಗಿದೆ ಜಾಹೀರಾತು?"

"ಭಯಂಕರವಾಗಿದೆ. ಇದರಿಂದ ಏನೇನು ಪ್ರತಿಕ್ರಿಯೆಯಾಗುವುದೊ?"

"ಪ್ರತಿಕ್ರಿಯೆ? ಅದೂ ಭಯಂಕರವೇ ಆದೀತು. ಈ ಜಾಹೀರಾತು ನೋಡುತ್ತಲೂ ಇದರಲ್ಲಿ ಉಲ್ಲೇಖಗೊಂಡಿರುವ ವ್ಯಕ್ತಿಗಳೆಲ್ಲಾ ಇಲ್ಲಿಗೆ ಧಾವಿಸಿ ಬರಬಹುದು. ಈ ಲೇಖನವನ್ನು ಪ್ರಕಟಿಸಕೂಡದೆಂದು ನನಗೆ ಬೆದರಿಕೆಗಳೂ ಬರಬಹುದು. ಆದರೆ ಸಾಮಾನ್ಯ ಜನರು ಮಾತ್ರ ಜಾಗ್ರತರಾಗುವುದು ಖಂಡಿತ."

"ಸ್ವಾಮಿಗಳಿಂದ ನಿಮಗೆ ತೊಂದರೆಯಾಗಲಿಕ್ಕಿಲ್ಲವೆ?"

"ನನಗೇನು ತೊಂದರೆ? ಬರೆದುಕೊಟ್ಟವರು ನೀವು. ನಾನು ಕೇವಲ ಪ್ರಕಾಶಕ."

"ಅವರು ನಿಮ್ಮ ಮೇಲೆ ಕಟ್ಲೆ ಹಾಕಿದರೆ?"

"ಹಾಕಿದರೂ ಚಿಂತೆಯಿಲ್ಲ. ಕೋರ್ಟಿನಲ್ಲೇ ಈ ವಿಷಯದ ಸತ್ಯಾಸತ್ಯತೆ ಹೊರಬೀಳಲಿ. ಸ್ವಾಮಿಗಳು ಕೋರ್ಟಿನ ಕಟ್ಟೆ ಹತ್ತಲಿಕ್ಕಿಲ್ಲವೆಂದೇ ನನಗೆನ್ನಿಸುತ್ತದೆ."

"ಹೇಗೆ?"

"ಕೋರ್ಟಿಗೆ ಹೋದರೆಂದರೆ ಇನ್ನೂ ಹತ್ತು ಪಟ್ಟು ಬೊಬ್ಬಾಟವಾಗುವುದು. ದಿನಪತ್ರಿಕೆಗಳಲ್ಲೆಲ್ಲ ಸುದ್ದಿ ಪ್ರಕಟವಾಗುವುದು. ಕೋರ್ಟಿನಲ್ಲಿ

ಜನರೂ ಕಿಕ್ಕಿರಿದು ನೆರೆಯುವರು. ಸ್ವಾಮಿಗಳಿಗೆ ವಿಪರೀತ ಅವಹೇಳನ ವಾಗುವದು. ಅಂತೇ ಅವರು ಕೋರ್ಟಿಗೆ ಹೋಗುವಂಥ ಮೂರ್ಖತನ ಮಾಡಲಿಕ್ಕಿಲ್ಲ. ಉಳಿದವರೂ ಅಷ್ಟೆ."

"ಶಾಸ್ತ್ರಿ?"

"ಆತನಂತೂ ಕಿಮುಕ್ಕೆಂದರೆ ಹೇಳಿರಿ. ಬಾಲ ಮುದರಿಕೊಂಡು ತೆಪ್ಪಗೆ ಕೂಡ್ರುತ್ತಾನೆ."

"ಇದೆಲ್ಲಾ ಸುಳ್ಳು ಎಂದು ತನ್ನ ಪತ್ರಿಕೆಯಲ್ಲಿ ಬರೆಯಲಿಕ್ಕಿಲ್ಲವೇನು?"

"ಹಾಗೆ ಬರೆಯುವುದಕ್ಕೂ ಧೈರ್ಯ ಬೇಕು. ಆತ ಹಾಗೇನಾದರೂ ಅಧಿಕಪ್ರಸಂಗತನ ಮಾಡಿದಲ್ಲಿ ಆತನ ನೂರಾ ಎಂಟು ಸೋಗುಗಳ ವಿಷಯು ವನ್ನೆಲ್ಲಾ ಪ್ರಕಟಿಸಿ ಆತನನ್ನು ಪೂರಾ ಬಯಲಿಗೆಳೆಯುತ್ತೇನೆ. ನನ್ನನ್ನು ಕೆಣಕಿದರೆ ತಾನು ತಲೆಯೆತ್ತಿ ಬಾಳುವುದು ಅಸಾಧ್ಯವೆಂದು ಆತನಿಗೆ ಗೊತ್ತಿದೆ."

"ನೋಡಿರಿ. ನನ್ನಿಂದಾಗಿ ನಿಮ್ಮ ಮೇಲೆ ಯಾವ ಆಪತ್ತೂ ಬರ ಬಾರದು. ನಾನೇನೋ ಎಲ್ಲದಕ್ಕೂ ಸಿದ್ಧಳಾಗಿಯೆ ಈ ಕೆಲಸಕ್ಕೆ ಕೈಹಾಕಿ ದ್ದೇನೆ."

"ನಾನು ನಿಮಗಿಂತ ಒಂದು ಹೆಜ್ಜೆ ಮುಂದೆ. ಇಡೀ ಪ್ರಪಂಚವೇ ಎದುರಾಗಿ ನಿಂತರೂ ಸೊಪ್ಪು ಹಾಕುವುದಿಲ್ಲ. ದೇಹದಲ್ಲಿ ಪ್ರಾಣವಿರುವ ವರೆಗೂ ಹೋರಾಡಬಲ್ಲೆ."

"ಹಾಗಿದ್ದರೆ ಚಿಂತೆಯಿಲ್ಲ," ಎಂದು ನುಡಿದು ಸರಸು ಆತನನ್ನು ಬೀಳ್ಕೊಂಡು ಹೊರಟಳು.

ರಸ್ತೆಯಲ್ಲಿ ನಿಧಾನವಾಗಿ ಹೊರಟಿದ್ದ ಕುದುರೆ ಗಾಡಿಯೊಂದನ್ನು ನಿಲ್ಲಿಸಿ, "..........ಕಡೆಗೆ ಈಗ ಯಾವುದಾದರೂ ಗಾಡಿಯಿದೆಯೇನಪ್ಪ?" ಎಂದು ಗಾಡಿಯವನನ್ನು ಪ್ರಶ್ನಿಸಿದಳು.

"ಮೇಲುಗಾಡಿ ಐತಲ್ಲರೀ. ಬರ್ರಿ, ಬರ್ರಿ. ಕೂಡ್ರಿ."

ಕುದುರೆಗಾಡಿ ನಿಲ್ದಾಣಕ್ಕೆ ಬರುವುದರೊಳಗಾಗಿ ಮೇಲುಗಾಡಿ ಬಂದು ಪ್ಲಾಟ್‌ಫಾರ್ಮಿನ ಹತ್ತಿರ ಸಿದ್ಧವಾಗಿ ನಿಂತಿದ್ದಿತು. ಟಿಕೆಟ್ಟು ತೆಗೆಯಿಸಿ

ರೈಲು ಹತ್ತಿದ್ದೂ ಆಯಿತು. ಐದು ನಿಮಿಷಗಳ ತರುವಾಯ ರೈಲು ಹೊರ ಟಿತು.

ಕಿಟಕಿಯಲ್ಲಿ ಮುಖವಿಟ್ಟು ಕುಳಿತುಕೊಂಡು ಸರಸು, ಎಡಗಡೆಗೆ ಸಂಜೆ ಗತ್ತಲಲ್ಲಿ ಅಸ್ಫುಟವಾಗಿ ಕಾಣುತ್ತಿದ್ದ ನಗರದ ಮನೆಗಳನ್ನು ಶೂನ್ಯ ದೃಷ್ಟಿ ಯಿಂದ ನಿರುಕಿಸುತ್ತಲಿದ್ದಳು. ಅಮೊಂದು ದಿನ ತಾನು ಶಿವಮೂರ್ತಿ ಯೊಂದಿಗೆ ಹರುಷ ತುಂಬಿದ ಎದೆಯಿಂದ ಈ ನಗರಕ್ಕೆ ಬಂದುದಾಗಿತ್ತು. ತೀರ ಅಪರಿಚಿತರಾದ ತಮ್ಮಿಬ್ಬರನ್ನೂ ಸ್ವಾಗತಿಸಿತ್ತು ಈ ನಗರ. ತನ್ನ ಸೋದರಿಯಂತಿದ್ದ ಸೂಶಿ, ಬಂಗಾರದಂಥ ಮನಸ್ಸಿನ ಆಕೆಯ ತಾಯಿ ಸುಬ್ಬಕ್ಕ ತಮಗೆ ಆಸರ ನೀಡಿದ್ದರು. ಅನಂತರ ತಾವು ಕೆಲದಿನ ಕಳೆದ ಆ ಗೋದಾವರೀಬಾಯಿಯ ಮನೆ.... ಶಾಸ್ತ್ರಿ ಕೊಟ್ಟ ಹಣದಿಂದ ತಾನು ಕೊಂಡು ತಂದ ಸೊಳ್ಳೆಪರದೆ, ಗಾದಿ, ಕನ್ನಡಿ, ರಗ್ಗು....ಯಾವುದರಿಂದಲೂ ತನಗೆ ಸುಖ ಲಭಿಸಿರಲಿಲ್ಲ. ಅಂದು ಈ ನಗರಕ್ಕೆ ಬರುವಾಗ ತನ್ನವರು ಜೊತೆಗಿದ್ದರು. ಈಗ ಇದನ್ನು ಬಿಟ್ಟು ಹೊರಟಾಗ ಅವರಿಲ್ಲ. ಅಂದು ಎದೆ ಆನಂದದಿಂದ ನರ್ತಿಸುತ್ತಿತ್ತು ; ಇಂದು ವೇದನೆಯಿಂದ ಬಧಿರವಾಗಿದೆ. ಅಂದು, ತನ್ನೆದುರಿಗಿನ ಭವಿಷ್ಯವೆಲ್ಲ ಬಣ್ಣಬಣ್ಣದ ಬೆಳಕಿನಿಂದ ರಂಜಿತ ವಾದಂತಿದ್ದಿತು ; ಇಂದು ತನ್ನೆದುರಿಗಿರುವುದು ಬರಿಯ ಶೂನ್ಯ. ಕತ್ತಲು.... ದಟ್ಟವಾದ ಕತ್ತಲು....

ನಗರವನ್ನು ಹಿಂದೆ ಹಾಕಿ ರೈಲು ಮುಂದೋಡುತ್ತಿದ್ದ ಹಾಗೆ ಸರಸು ಒಂದುಸಲ ಹಿಂದಿರುಗಿ ಅದರ ಕಡೆಗೆ ದೃಷ್ಟಿ ತೂರಿದಳು. ಸೂಶಿಯನ್ನೂ ಸುಬ್ಬಕ್ಕನನ್ನೂ ನೆನೆಯುತ್ತ—"ನಿಮಗೆ ಹೇಳದೆ ಹಾಗೇ ಹೊರಡಬೇಕಾ ಯಿತು. ಹೇಳಿದ್ದರೆ ನೀವು ಬಿಡುತ್ತಿರಲಿಲ್ಲ. ಅಂತೇ ಹಾಗೇ ಹೊರಟೆ. ಕ್ಷಮಿಸಿರಿ," ಎಂದು ಮೂಕವಾಗಿ ಹೇಳಿಕೊಂಡಳು.

ಅದೇ ಸಮಯದಲ್ಲಿ – ಆಗತಾನೆ ಆಸ್ಪತ್ರೆಯಿಂದ ಹಿಂದಿರುಗಿ ಬಂದಿದ್ದ ಸೂಶಿ, ಕೊಟಡಿಯಲ್ಲಿದ್ದ ದಪ್ಪನೆಯ ಕವರೊಂದನ್ನು ಒಡೆದು ನೋಡುತ್ತ ಲಿದ್ದಳು. ಅದರಲ್ಲಿ ಎಂಟುನೂರು ರೂಪಾಯಿಗಳ ನೋಟುಗಳಿದ್ದವು. ಜೊತೆಗೊಂದು ಚಿಕ್ಕ ಕಾಗದ.

"ಅಕ್ಕ ಸೂಶೀ,

ನನ್ನನ್ನು ಕ್ಷಮಿಸು. ನನ್ನನ್ನು ಮರೆತುಬಿಡು.

ನಾನಿನ್ನು ಇಲ್ಲಿ ಇರಲಾರೆ.

ನನ್ನವರ ಮುಖವನ್ನೊಂದು ಸಲ ನೋಡುವವರೆಗೂ ಈ ಜೀವಕ್ಕೆ ಸಮಾಧಾನವಾಗದು.

ಅವರು ಪ್ರಭುಸ್ವಾಮಿಗಳ ಹತ್ತಿರವೇ ಇರಬೇಕೆಂದು ನನ್ನ ನಂಬಿಕೆ. ಸ್ವಾಮಿಗಳಿರುವ ಸ್ಥಳವನ್ನು ಹುಡುಕುವುದು ಸುಲಭವೇನೂ ಅಲ್ಲ. ಆದರೂ ನಾನು ಪ್ರಯತ್ನ ಮಾಡುವೆ. ನನ್ನವರು ಎಲ್ಲಿದ್ದರೂ ಅವರನ್ನು ಹುಡುಕಿ ಅವರ ಪಾದಗಳ ಮೇಲೆ ಬಿದ್ದು ಹೊರಳಾಡಿ ಕ್ಷಮಿಸಬೇಕೆಂದು ಕೇಳಿಕೊಳ್ಳುವೆ. ಅವರು ಕ್ಷಮಿಸುವರೆಂಬ ಆಸೆಯಿದೆ. ಒಂದು ವೇಳೆ ಅವರೇನಾದರೂ ಕ್ಷಮಿಸದಿದ್ದರೆ—ಕೊನೆಗೆ ಭಗವಂತನಾದರೂ ಕ್ಷಮಿಸುವನಲ್ಲ?

ಮತ್ತೊಮ್ಮೆ ನನ್ನ ನಿನ್ನ ಭೆಟ್ಟಿಯಾಗುವುದೊ ಇಲ್ಲವೊ. ಬೆಳಿಗ್ಗೆ ನೀನು ಆಸ್ಪತ್ರೆಗೆ ಹೊರಟು ನಿಂತಾಗ ನಿನ್ನನ್ನು ಕಣ್ಣು ತುಂಬ ನೋಡಿದೆ. ಬರುವಾಗ ತಾಯಿ ಸುಬ್ಬಕ್ಕನನ್ನು ನೋಡಿ ಮನಸ್ಸಿನಲ್ಲೇ ಕೊನೆಯ ನಮಸ್ಕಾರ ಸಲ್ಲಿಸಿ ಬಂದೆ. ತಂದೆತಾಯಿ, ಬಂಧುಬಳಗ ಎಲ್ಲರನ್ನೂ ಕಳೆದುಕೊಂಡು ಪರದೇಶಿಯಾಗಿದ್ದ ನನ್ನನ್ನು ಸ್ವಂತ ಮಗಳಿಗಿಂತಲೂ ಹೆಚ್ಚಾಗಿಯೆ ನೋಡಿಕೊಂಡಳು ಸುಬ್ಬಕ್ಕ. ಒಡಹುಟ್ಟಿದ ಸೋದರಿಗಿಂತಲೂ ಹೆಚ್ಚಿನ ಆತ್ಮೀಯತೆಯಿಂದ ನೀನು ನಡೆದುಕೊಂಡೆ. ನಿಮ್ಮಿಬ್ಬರ ಉಪಕಾರವನ್ನು ಹೇಗೆ ತಾನೇ ತೀರಿಸಲು ಸಾಧ್ಯ? ಮುಂದೆ, ಮತ್ತೆಂದಾದರೂ ನನ್ನನ್ನು ಈ ಲೋಕಕ್ಕೆ ಕಳಿಸುವ ಬುದ್ಧಿ ಪರಮಾತ್ಮನಿಗೆ ಬಂದರೆ ಸುಬ್ಬಕ್ಕನ ಮಗಳಾಗಿ, ನಿನ್ನ ತಂಗಿಯಾಗಿ ಹುಟ್ಟಿಸೆಂದು ಆತನನ್ನು ಪ್ರಾರ್ಥಿಸುತ್ತೇನೆ.

ಈ ಪತ್ರದೊಂದಿಗಿರುವ ಹಣವನ್ನು ನೀನು ಸಂಕೋಚವಿಲ್ಲದೆ ಸ್ವೀಕರಿಸಬೇಕು. ನನ್ನವರನ್ನು ಹುಡುಕಲು ಹಳ್ಳಿಪಳ್ಳಿ ತಿರುಗುವ ನಾನು ಇಷ್ಟ ಹಣವನ್ನು ಜೊತೆಗಿಟ್ಟುಕೊಳ್ಳಲು ಹೇಗೆ ಸಾಧ್ಯ? ನನಗೆ ಇದರ ಅಗತ್ಯವಿಲ್ಲವೆಂತಲೇ ಇಲ್ಲಿ ಬಿಟ್ಟು ಹೋಗಿದ್ದೇನೆ.

ನಿನ್ನ,

ಸರಸು."

[೨೭]

ಅಂದು ರಾತ್ರಿ ತಾವಿಬ್ಬರೂ ಪ್ರಭುಸ್ವಾಮಿಗಳೊಂದಿಗೆ ನಗರಕ್ಕೆ ಬರುವಾಗ ಅವರು ಇಳಿದು ಹೋಗಿದ್ದ ನಿಲ್ದಾಣದ ಹೆಸರು ನೆನಪಿನಲ್ಲಿತ್ತು ಸರಸುವಿಗೆ. ಈಗ ಆ ನಿಲ್ದಾಣಕ್ಕೆ ಆಕೆ ಇಳಿಯುವವಳಿದ್ದಳು.

ಮೋಟಾರುಗಾಡಿ ಅಲ್ಲಿ ನಿಂತಾಗ ಜಿನುಗುಮಳೆ ಸುರಿಯುತ್ತಿತ್ತು. ಪ್ಲಾಟ್ ಫಾರ್ಮಿನ ಮೇಲಿದ್ದ ಪುಟ್ಟ ದೀಪ ಕತ್ತಲೆಯೊಂದಿಗೆ ವ್ಯರ್ಥ ಹೋರಾಟ ಹೂಡಿದ್ದುದು ಕಾಣಿಸಿತು.

ಡಬ್ಬಿಯಿಂದಿಳಿದು ಬಂದು ಒಂದೆರಡು ಕ್ಷಣ ಹಾಗೆಯೆ ಪ್ಲಾಟ್‌ಫಾರ್ಮಿನ ಮೇಲೆ ನಿಂತುಕೊಂಡಳು. ರೈಲು ತನ್ನ ದಾರಿಯಲ್ಲಿ ಹೊರಟುಹೋಯಿತು.

ಆ ನಿಲ್ದಾಣದಲ್ಲಿ ಇಳಿದುದೇನೊ ಆಗಿದ್ದಿತು. ಮುಂದೇನು ಮಾಡಬೇಕೆಂಬುದನ್ನು ಕುರಿತು ಸರಸು ಯೋಚಿಸಿಕೊಂಡಿರಲಿಲ್ಲ. ಆ ನಿಲ್ದಾಣದಿಂದ ಹತ್ತು ಹನ್ನೆರಡು ಮೈಲಿ ದೂರದಲ್ಲಿದ್ದ ಹಳ್ಳಿಯೊಂದಕ್ಕೆ ತಾವು ಹೋಗುವುದಾಗಿ ಸ್ವಾಮಿಗಳು ಹೇಳಿದ್ದರು. ಆ ಹಳ್ಳಿಯ ಹೆಸರೇನು ಎಂಬುದನ್ನೂ ತಾನು ತಿಳಿದುಕೊಂಡಿರಲಿಲ್ಲ. ಅವರೂ ಹೇಳಿರಲಿಲ್ಲ. ಇನ್ನು ಇಂಥ ರಾತ್ರಿಯಲ್ಲಿ ಆ ಹೆಸರು ತಿಳಿಯದ ಹಳ್ಳಿಯನ್ನು ಹೇಗೆ ಹುಡುಕುವುದು? ಯಾರನ್ನು ವಿಚಾರಿಸುವುದು? ಈ ರಾತ್ರಿಯನ್ನೆಲ್ಲಿ ಕಳೆಯುವುದು?

ಟಿಕೆಟ್ಟು ಕೊಟ್ಟು ನಿಲ್ದಾಣದ ವಿರಾಮತಾಣಕ್ಕೆ ಬಂದಳು. ಮೇಲಿನ ತೊಲೆಯೊಂದಕ್ಕೆ ಚಿಮಣಿ ದೀಪವೊಂದು ನೇತಾಡುತಿತ್ತು. ಅದರ ಮಂದ ಪ್ರಕಾಶದಲ್ಲಿ ಅಲ್ಲಿ ಮುದುಡಿಕೊಂಡು ಕುಳಿತ ಜನರು ಭೂತಗಳಂತೆ ಕಾಣಿಸಿದರು ಸರಸುವಿಗೆ.

ತನ್ನ ಕಲ್ಪನೆಗೆ ತಾನೇ ನಗುತ್ತ ಅಲ್ಲಿಯೆ ಒಂದೆಡೆಯಲ್ಲಿ ತಾನೂ ಮುದುಡಿಕೊಂಡು ಕುಳಿತಳು. ಮಳೆಯಲ್ಲಿ ತೋಯಿಸಿಕೊಂಡ ಗಾಳಿ ಮೈ ಕೊರೆಯುವಂತೆ ಬೀಸುತ್ತಿತ್ತು. ಸರಸುವಿನ ಮೈಯೆಲ್ಲವೂ ನಡುಗತೊಡಗಿತು. ಆಕೆಯುಟ್ಟಿದ್ದ ತೆಳ್ಳಗಿನ ಸೀರೆ ಆ ಚಳಿಗಾಳಿಯ ಹೊಡೆತದಿಂದ ಆಕೆಯನ್ನು ಕಾಪಾಡಲು ಸಮರ್ಥವಾಗಿರಲಿಲ್ಲ.

ಪಕ್ಕದಲ್ಲಿದ್ದ ಹಳ್ಳಿಗನೊಬ್ಬನಿಗೆ ಆಕೆ ನಡುಗುವುದು ಗೊತ್ತಾಯಿ

ತೇನೊ, ಆತ ಕನಿಕರದಿಂದ ಕೇಳಿದ: "ಯಾರವ್ವಾ ನೀನು? ಒಬ್ಬಳೇ ಎಲ್ಲಿಂದ ಬಂದೆ? ಯಾವೂರಿಗೆ ಹೋಗುವಾಕೆ?"

ಆ ಮಾತು ಕೇಳಿಸಿದರೂ ಕೇಳಿಸದಂತೆ ನಟಿಸಿ ಸರಸು ಮೊಳಕಾಲುಗಳಲ್ಲಿ ತಲೆ ಹುದುಗಿಸಿಕೊಂಡು ಮೌನವಾಗಿ ಕುಳಿತಿದ್ದಳು. ಆ ಹಳ್ಳಿಗ ಮತ್ತೆ ಪ್ರಶ್ನಿಸಿದ:

"ಯಾಕವ್ವಾ, ಮಾತಾಡುವದಿಲ್ಲವಲ್ಲ? ಎಲ್ಲಿಗೆ ಹೋಗುವಾಕೆ?"

ಇನ್ನು ಸುಮ್ಮನಿರುವುದು ಉಚಿತವಲ್ಲವೆಂದು ಬಗೆದು ಸರಸು ಸ್ವಲ್ಪದರಲ್ಲಿಯೆ ಉತ್ತರವಿತ್ತಳು:

"ಇಲ್ಲೇ ಒಂದು ಹಳ್ಳಿಗೆ."

"ಯಾವ ಹಳ್ಳಿ?"

ಅಷ್ಟು ಹೊತ್ತಿಗೆ ಹೊರಗಡೆ ಮಳೆ ನಿಂತುಹೋಗಿದ್ದಿತು. ವಿರಾಮ ತಾಣದಲ್ಲಿ ಕುಳಿತಿದ್ದವರೆಲ್ಲ ಎದ್ದು ಒಬ್ಬೊಬ್ಬರಾಗಿ ಹೊರಡತೊಡಗಿದ್ದರು. ಸರಸುವಿನ ಪಕ್ಕದಲ್ಲಿದ್ದ ಹಳ್ಳಿಗನೂ ಕಂಬಳಿಯನ್ನು ಸಾವರಿಸಿಕೊಳ್ಳುತ್ತ ಮೇಲಕ್ಕೆದ್ದ.

"ಮಳೆ ಹೋಯ್ತು. ಏಳವ್ವ. ಹೋದೀಯಂತೆ. ಯಾವ ಹಳ್ಳಿಗೆ ಹೋಗುವಾಕೆ ನೀನು?"

"ಅದರ ಹೆಸರು ಮರೆತುಬಿಟ್ಟಿದ್ದೇನಪ್ಪ."

"ಅಂದರೆ!" ಎಂದು ಉದ್ಗಾರ ತೆಗೆದು ಆತ ಒಂದು ಕ್ಷಣ ಆಕೆಯ ಅಸ್ಪಷ್ಟ ಆಕೃತಿಯನ್ನು ಬೆರಗುಗೊಂಡ ದೃಷ್ಟಿಯಿಂದ ನಿಟ್ಟಿಸುತ್ತಲಿದ್ದು, ಆನಂತರ—"ಹೆಸರೂ ಗೊತ್ತಿಲ್ಲ? ಇವೆಂಥಾ ಮಾತವ್ವಾ? ಒಬ್ಬಳೇ ಬೇರೆ ಬಂದಿದ್ದೀ. ಇಂಥ ರಾತ್ರಿಯೊಳಗ ಹ್ಯಾಗ ಮಾಡುತ್ತೀ? ಎಲ್ಲಿಗೆ ಹೋಗುತ್ತೀ?"

ಸರಸು ಮೌನವಾಗಿದ್ದಳು.

"ನೀನು ಹೋಗುವದಾದರೂ ಯಾರ ಮನೆಗೆ?"

"ಪ್ರಭುಸ್ವಾಮಿಗಳ ಆಶ್ರಮಕ್ಕೆ."

"ಪ್ರಭುಸ್ವಾಮಿಯವರ ಹತ್ತರಲೇನು? ಹಾಗಾದರೆ ಇಲ್ಲ್ಯಾಕೆ ಇಳಿದಿಯವ್ವ? ಅವರು ಈಗ ಈ ಸೀಮೆಯೊಳಗ ಇಲ್ಲ. ಬೇರೆ ಕಡೆಗೆ ಹೋಗಿದ್ದಾರ."

"ಯಾವ ಊರಿಗಪ್ಪ ?"

"ಯಾವ ಊರಿಗೋ ಏನೊ. ನನಗೂ ನೆಟ್ಟಗ ಗೊತ್ತಿಲ್ಲ. ಅಂತೂ ದೂರ ಹೋದದ್ದು ಅಷ್ಟು ಗೊತ್ತು. ಆ ಸ್ಟೇಶನ್ನಿಗಿಳಿದು ಮುಂದೆ ಮೋಟರು ಹತ್ತಿ ಹೋಗಬೇಕು," ಎಂದು ನುಡಿದು ಆತ ಒಂದು ನಿಲ್ದಾಣದ ಹೆಸರು ಹೇಳಿದ. "ಬಹಳ ಮಾಡಿ ಅಲ್ಲೇ ಇದ್ದಾರು. ಹುಡುಕಿ ನೋಡವ್ವ. ಈಗ ರಾತ್ರಿಗಾಡಿ ಬರುತ್ತೈತಲ್ಲ, ಅದಕ್ಕ ಹತ್ತಿಹೋಗು."

ಇಷ್ಟು ಹೇಳಿ ಆತ ಹೊರಟು ಹೋದ. ಸರಸು ಕುಳಿತಲ್ಲಿಯೆ ದೇಹವನ್ನೊರಗಿಸಿ ಕಣ್ಣು ಮುಚ್ಚಿಕೊಂಡಳು.

ಎದುರಿಗಿದ್ದ ಇನ್ನೊಂದು ಮೂಲೆಯಲ್ಲಿ ಯಾರೋ ಪಿಸುದನಿಯಲ್ಲಿ ಮಾತನಾಡಿಕೊಳ್ಳುವುದು ಕೇಳಬರತೊಡಗಿತು.

"ಯಾರೋ ಒಬ್ಬಾಕೆ ಬಂದು ಅಲ್ಲಿ ಮಲಗ್ಯಾಳ. ಒಬ್ಬಳೇ ಇದ್ದಾಂಗ ಕಾಣುತಾಳೆ." ಅದು ಹೆಣ್ಣಿನ ಧ್ವನಿ.

"ಯಾರು ಪಾಪ, ಮಾತಾಡಿಸಿ ನೋಡು." ಅದು ಗಂಡಿನ ಧ್ವನಿ.

ಮೊದಲು ಮಾತನಾಡಿದ ಹೆಣ್ಣು ವ್ಯಕ್ತಿ ಸರಸರನೆ ಸರಿಯುತ್ತ ಸರಸುವಿನ ಹತ್ತಿರ ಬಂದು ಪ್ರಶ್ನಿಸಿತು :

"ನೀನ್ಯಾರವ್ವ ? ಒಬ್ಬಾಕೇ ಯಾಕ ಇದ್ದಿ ?"

"ನಾನೊಬ್ಬ ಪರದೇಶಿಯವ್ವ."

"ತಂದೆತಾಯಿ ಯಾರೂ ಇಲ್ಲೇನವ್ವ ?"

"ಯಾರೂ ಇಲ್ಲವ್ವ."

"ಗಂಡ ?"

"................"

"ಈಗ ಎಲ್ಲಿಗೆ ಹೊರಟಿದ್ದಿ ?"

"ಹೀಗೇ. ಮನಸ್ಸು ಬಂದ ಕಡೆಗೆ."

"ಹಾಂಗಾದರ ಆಕೇನೂ ನಮ್ಮ ಕೂಡ ಬರುತ್ತಾಳೇನು ಕೇಳು," ಎಂದಿತು ಗಂಡು ಧ್ವನಿ.

"ನೀವೆತ್ತ ಹೋಗುತ್ತೀರಿ ?" ಎಂದು ಕೇಳಿದಳು ಸರಸು.

"ನಮಗೇನವ್ವ. ಹೇಳಿ ಕೇಳಿ ಭಿಕ್ಷುಕರು. ನನ್ನ ಗಂಡನಿಗೆ ಕಣ್ಣಿಲ್ಲ.

ನನಗೊಂದು ಕೈಯಿಲ್ಲ. ಇಂದು ಇಲ್ಲಿ, ನಾಳೆ ಇನ್ನೊಂದು ಊರಲ್ಲಿ. ನಾಡದು ಇನ್ನೆಲ್ಲೋ," ಎಂದಳು ಭಿಕ್ಷುಕಿ.

"ನಿನಗೇನಾದರೂ ಕಣ್ಣು ಗಿಣ್ಣು ಹೋಗಿದಾವೇನವ್ವ ?" ಅದು ಭಿಕ್ಷುಕನ ಪ್ರಶ್ನೆ.

ಸರಸುವಿಗೆ ನಗು ಬರದಿರಲಿಲ್ಲ. "ಇಲ್ಲಪ್ಪ. ನೆಟ್ಟಗಿದಾವೆ. ಹೋಗಿದ್ದರೇ ನೆಟ್ಟಗಾಗುತಿತ್ತು. ನಿಮ್ಮ ಹಾಗೆ ನಾನೂ ಭಿಕ್ಷುಕಿಯಾಗಿ ತಿರುಗಬಹುದಾಗಿತ್ತು."

ರಾತ್ರಿಯ ಗಾಡಿಗೆ ಸರಸು ಹೊರಟು ನಿಂತಾಗ ಆ ಭಿಕ್ಷುಕ ದಂಪತಿಗಳೂ ಆಕೆಯನ್ನು ಹಿಂಬಾಲಿಸಿದರು. ಆಕೆ ಹತ್ತಿದ ಡಬ್ಬಿಯಲ್ಲೇ ಅವರೂ ಹತ್ತಿದರು.

ರೈಲು ಮುಂದೆ ಹೊರಟ ಬಳಿಕ ಕುರುಡ ಹಾಡತೊಡಗಿದ. ಆತನ ಹೆಂಡತಿಯೂ ಆತನೊಂದಿಗೆ ದನಿಗೂಡಿಸತೊಡಗಿದಳು.

"ರಾಮ ಸೀತಾ ಏನ ಜೋಡೀsss
ವನದಾಗ ಇದ್ದರು ಮುನಿ ಮಾಡೀsss"

ಸರಸು ಕಣ್ಣು ಮುಚ್ಚಿಕೊಂಡು ಭಾವಸಮಾಧಿಯಲ್ಲಿ ಮುಳುಗಿದಳು. ಹಾಡು ಮುಗಿಸಿ ಭಿಕ್ಷುಕರು ದುಡ್ಡು ಕಾಸುಗಳಿಗೆ ಕೈಯೊಡ್ಡತೊಡಗಿದರು. ಚಿಕ್ಕ ನಿಲ್ದಾಣವೊಂದರಲ್ಲಿ ಗಾಡಿ ನಿಂತುಕೊಂಡಿತು. ಅವರಿಬ್ಬರೂ ಅಲ್ಲಿ ಇಳಿದು ಬೇರೊಂದು ಡಬ್ಬಿಯನ್ನೇರಿದರು. ಗಾಡಿ ಮತ್ತೆ ಮುಂದೆ ಹೊರಟಿತು. ಸರಸು ಕಣ್ದೆರೆಯಲಿಲ್ಲ. ಅವಳ ಕಿವಿಗಳಲ್ಲಿ ಆ ಹಾಡಿನ ಸಲ್ಲವಿ ಇನ್ನೂ ದುಮುದುಮಿಸುತಿತ್ತು:

"ರಾಮ ಸೀತಾ ಏನ ಜೋಡೀsss
ವನದಾಗ ಇದ್ದರು ಮುನಿ ಮಾಡೀsss"

ಎಷ್ಟು ಹೊತ್ತಿನ ವರೆಗೆ ಆಕೆ ಹಾಗೆಯೆ ಕುಳಿತಿದ್ದಳೊ ಏನೊ. ನಿಲ್ದಾಣವೊಂದರಲ್ಲಿ ಗಾಡಿ ನಿಂತಾಗ ಡಬ್ಬಿಯನ್ನೇರಿ ಬಂದ ಪ್ರವಾಸಿಕರಿಬ್ಬರು ಆಕೆಯ ಕಾಲನ್ನು ತುಳಿದುದರಿಂದ ಆಕೆಗೆ ಎಚ್ಚರವಾಯಿತು. ಕಣ್ಣು ಬಿಟ್ಟು ಹೊರಗಡೆ ದೃಷ್ಟಿ ಚೆಲ್ಲಿದಳು.

"ಇದಾವ ಸ್ಟೇಶನ್‌ರೀ ?" ಆಗತಾನೆ ಬಂದು ತನ್ನ ಕಾಲು ತುಳಿದವರಲ್ಲೊಬ್ಬನನ್ನು ಕೇಳಿದಳು.

ಆತ ಆ ನಿಲ್ದಾಣದ ಹೆಸರು ಹೇಳಿದ. ಆಕೆ ಅಲ್ಲಿಯೆ ಇಳಿಯಬೇಕಾಗಿದ್ದಿತು. ಅವಸರದಿಂದ ಎದ್ದು ಗಾಡಿಯಿಂದಿಳಿದು ಬಂದಳು.

ರಾತ್ರಿಯಿನ್ನೂ ಕೊನೆಗೊಂಡಿರಲಿಲ್ಲ. ನಿಲ್ದಾಣದ ಕಚೇರಿಯಲ್ಲಿದ್ದ ಗಡಿಯಾರ ನಾಲ್ಕರ ಗಂಟೆಯನ್ನು ತೋರಿಸುತ್ತಲಿತ್ತು. ಬೆಳಗಾಗುವವರೆಗೂ ಕಾಯಬೇಕು. ಮೋಟಾರು ಯಾವಾಗ ಬರುವುದೊ, ಯಾವಾಗ ಆ ಹಳ್ಳಿಗೆ ಹೋಗಿ ಮುಟ್ಟುವುದೊ, ಎಂದು ಯೋಚಿಸುತ್ತ ನಿಂತಿದ್ದ ಹಾಗೆ ಅದೇ ಗಾಡಿಯಿಂದಿಳಿದು ಬಂದಿದ್ದ ಹಳ್ಳಿಯ ಹೆಣ್ಣುಮಗಳೊಬ್ಬಳು ಆಕೆಯನ್ನು ಕಂಡು ಮಾತನಾಡಿಸಿದಳು.

"ಯಾವೂರಿಗೆ ಹೋಗಬೇಕು ತಂಗೆವ್ವ ?"

ಸರಸು ಆ ಹಳ್ಳಿಯ ಹೆಸರು ಹೇಳಿದಳು.

"ಒಬ್ಬಳೇ ಬಂದೀಯೇನವ್ವ ?"

"ಹೌದು ತಾಯಿ."

"ಅಯ್ಯs ಪಾಪ. ಮತ್ತ ಹ್ಯಾಂಗ ಹೋಗಾಕೆ ಒಬ್ಬಳೇ ? ಮೋಟಾರು ಏನೂ ನಿಯಮದ್ದಲ್ಲ. ಬಂದರೆ ಬಂತು, ಬರದಿದ್ದರೆ ಇಲ್ಲ. ಅಲ್ಲಿಗೆ ಹೋಗುವವರೆಲ್ಲಾ ಚಕ್ಕಡಿಯೊಳಗೇ ಹೋಗುತಾರೆ."

"ಹಾಗಾದರೆ __"

"ನಾವು ಹ್ಯಾಂಗೂ ಕರವಿನಕಟ್ಟೆಯ ತನಕ ಹೋಗುತೀವಿ. ಅಲ್ಲಿಗೆ ಹೋಗುವದರೊಳಗಾಗಿ ಎರಡು ತಾಸು ಬೆಳಗಾಗಿರುತೈತಿ. ಅಲ್ಲಿಂದ ಮುಂದ ಮೂರು ಹರದಾರಿ ನಡೆದರ ಆ ಹಳ್ಳಿ ಬರುತೈತಿ. ಬೇಕಾದರ ನಮ್ಮಗೂಡ ಬಾರವ್ವ. ನಡೀಲಿಕ್ಕಾಗುತೈತ್ಯೋ ಇಲ್ಲೋ ?"

"ಎಲ್ಲಾ ಆದೀತು."

ಆ ಹೆಣ್ಣು ಮಗಳು ಧ್ವನಿಯೇರಿಸಿ, ಮುಂದೆ ಹೋಗಿದ್ದ ತನ್ನ ಗಂಡನನ್ನು ಕೂಗಿ ಕರೆದಳು. ಪಟ್ಟಣದವಳ ಹಾಗೆ ಕಾಣಿಸುತ್ತಿದ್ದ ಈ ಯುವತಿಯನ್ನು ಕಂಡಾಗ ಆತನಿಗೆ ಆಶ್ಚರ್ಯವಾಗದಿರಲಿಲ್ಲ. ತಾನು ಪ್ರಥಮಸ್ಥಾನಿ

ಗಳನ್ನು ಕಾಣಲೆಂದು ಅಲ್ಲಿಗೆ ಹೊರಟಿರುವುದಾಗಿ ಆಕೆ ತಿಳಿಸಿದಾಗ ಆತನಿಗೆ ಇನ್ನೂ ಆಶ್ಚರ್ಯವಾಯಿತು.

"ಎಷ್ಟು ದೂರ,ದೂರದಿಂದ ಈ ಸ್ವಾಮಿಗಳನ್ನ ನೋಡಾಕ ಮಂದಿ ಬರ್ತಾರ ನೋಡೇ," ಎಂದು ತನ್ನ ಹೆಂಡತಿಯನ್ನುದ್ದೇಶಿಸಿ ನುಡಿದು ಆತ ಸರಸುವಿನ ಕಡೆಗೆ ತಿರುಗಿ ಕೇಳಿದ: "ಅವರದೂ ನಿನ್ನದೂ ಎಲ್ಲಿ ಗುರುತಾ ತವ್ವ ?"

ಸರಸು ತಮ್ಮೂರಿನ ಹೆಸರು ಹೇಳಿ, ಅಲ್ಲಿನ ಮಠಕ್ಕೆ ಅವರು ಅಧಿಕಾರಿ ಗಳಾಗಿದ್ದ ಸಂಗತಿಯನ್ನು ವಿವರಿಸಿದಳು.

ಚಿಕ್ಕೆಗಳ ಬೆಳಕಿನಲ್ಲಿ ಅವರೆಲ್ಲರೂ ದಾರಿ ತುಳಿಯತೊಡಗಿದರು.

ಆ ರೈತ ಹೇಳುತ್ತಿದ್ದ: "ಅಂಥಾ ದೊಡ್ಡ ಮಠಾ ಬಿಟ್ಟು ಸ್ವಾಮಿಗಳು ಸೀಮೆಗೆ ಯಾಕ ಬಂದರೋ ತಿಳೀದವ್ವ. ಅವರಿಗೇನು ಕಡಿಮೆಯಾಗಿತ್ತು ಅಲ್ಲಿ ? ಅವರನ್ನು ಮಠದಿಂದ ಹೊರಗೆ ಹಾಕಿದರಂತ. ಹೌದೇನವ್ವ ?"

"ಯಾರಪ್ಪ ಹೀಗೆ ಹೇಳಿದರು ನಿನಗೆ ?"

"ನಮ್ಮ ಮರಿದೇವರು ಹೇಳುತಿದ್ದರವ್ವ."

"ಮರಿದೇವರು ?"

"ನಮ್ಮ ಊರಿನ ಹತ್ತಿರ ಇರುವ ಐದಾರು ಹಳ್ಳಿಗಳಿಗೆಲ್ಲಾ ಒಂದು ಮಠಾ ಐತಿ. ನಾವೆಲ್ಲಾ ಅದಕ್ಕ ನಡಕೋತೀವಿ. ವರ್ಷ ವರ್ಷಾ ಜಾತ್ರೆ ಆಗುತ್ತೈತಿ. ಅದರ ಮರಿದೇವರು ಹೇಳುತಿದ್ದರು."

"ಸುಳ್ಳು ಹೇಳಿರಬೇಕು ಅವರು. ನಮ್ಮೂರಿನ ಮಠದಿಂದ ಸ್ವಾಮಿ ಗಳನ್ನು ಯಾರೂ ಹೊರಹಾಕಲಿಲ್ಲ. ಅವರಿಗೇ ಅಲ್ಲಿ ಮನಸ್ಸು ತೊಡಗಲಿಲ್ಲ. ಹಳ್ಳಿಗಳನ್ನು ಸುತ್ತಿ ಬಡವರ ಸೇವೆ ಮಾಡಬೇಕೆಂದು ಅವರು ಮಠ ಬಿಟ್ಟು ಹೊರಟರು."

"ಏನು ಸೇವಾನೋ ಬಿಡವ್ವ. ನಾವು ಭಕ್ತರು. ಅವರು ಸ್ವಾಮಿಗಳು. ನಾವೇ ಅವರ ಸೇವಾ ಮಾಡಬೇಕು. ಅದನ್ನು ಬಿಟ್ಟು ಅವರೇ ನಮ್ಮ ಸೇವಾ ಮಾಡಲಿಕ್ಕೆ ನಿಂತರ ನಮಗೆಲ್ಲಾ ಪಾಪ ಬರಲಿಕ್ಕಿಲ್ಲೇನು ? ಹೀಂಗೆಲ್ಲಾ ಹಳ್ಳಿಹಳ್ಳಿ ತಿರುಗೂದು ಸ್ವಾಮಿಗಳ ಮಾನಕ್ಕ ಕಡಿಮೆ ಅಲ್ಲೇನು ? ಅವರು ಮಠದೊಳಗೇ ಕೂತಿರಬೇಕು. ಹೀಂಗೆಲ್ಲ ತಿರುಗಬಾರದು."

"ಇದನ್ನೂ ನಿಮ್ಮ ಆ ಮರಿದೇವರೇ ಹೇಳಿದರೇನು ?"

"ಅವರ್‍ಯಾಕೆ ಹೇಳಾಕ ಬೇಕು ? ನಮಗೇನು ಗೊತ್ತಿಲ್ಲ ? ಸ್ವಾಮಿಗಳೆಂದರೆ ದೇವರ ಸಮಾನ. ಅವರು ಹಾಂಗೆಲ್ಲಾ ಮನೀ ಮನೀ ತಿರುಗಬಾರದು. ಪ್ರಭುಸ್ವಾಮಿಗಳು ಮಾಡುವದು ನನ್ನ ಮನಸ್ಸಿಗೇನೂ ಬರಲಿಲ್ಲ ಬಿಡವ್ವ. ಎಲ್ಲಾರ ಮನೆಗಳಿಗೆ ಹೋಗೂದೇನು, ನಿನಗೆ ಜಡ್ಡಾಗೈತ್ಯೇ, ನಿನಗೆ ನೆಗಡಿಯಾಗೈತ್ಯೇ ಅಂತ ಕೇಳೂವೇನು ! ಕಸಬರಿಗೀ ಹಿಡಕೊಂಡು ಊರೆಲ್ಲಾ ಉಡುಗೂದೇನು ! ಹೋಲೇರ ಓಣಿಯೊಳಗಿನ ಹೊಲಸು ಉಡುಗಿ ತಾವೇ ಹೊತ್ತು ತಿಪ್ಪೆಗೆ ಹಾಕುತಾರೆ. ಇಂಥವರನ್ನ ನಾವು ಲಿಂಗಾಯತರು ಸ್ವಾಮಿಗಳಂತ ಕರೆಯೋದು ಹ್ಯಾಂಗ ? ಅವರಿಗೆ ಸಾಷ್ಟಾಂಗ ಹಾಕೋದು ಹ್ಯಾಂಗ ?"

ಆ ರೈತ ಮಹಿಳೆ ನಗುತ್ತಾ ಹೇಳತೊಡಗಿದಳು : "ಅವರಿಗೆ ಸಾಷ್ಟಾಂಗ ಆದರೂ ಯಾರು ಹಾಕುತಾರ ಬಿಡು. ಮೊದಲು ನಮ್ಮೂರಿಗೆ ಅವರು ಬಂದಾಗ ನಾವೆಲ್ಲ ನಮಸ್ಕಾರ ಮಾಡಿದೆವಲ್ಲ – ಹಾವು ಎದುರಿಗೆ ಬಂದಾಗ ದೂರ ಜಿಗಿಯುವ ಹಾಂಗ ದೂರ ಜಿಗಿದರು ಸ್ವಾಮಿಗಳು. ಹೀಂಗೆಲ್ಲಾ ಸಾಷ್ಟಾಂಗ ಹಾಕಬಾರದು, ತಪ್ಪು ಅಂತೆಲ್ಲ ಹೇಳಿದರು. ಅಂದಿನಿಂದ ಯಾರೂ ನಮಸ್ಕಾರ ಹಾಕುವದಿಲ್ಲ ಅವರಿಗೆ."

ಅವರ ಮಾತುಗಳನ್ನಾಲಿಸಿದಾಗ ಸರಸುವಿಗೆ ವಿಷಾದವಾಗದಿರಲಿಲ್ಲ. ಪ್ರಭುಸ್ವಾಮಿಗಳ ಬಗೆಗೆ ಅವರಲ್ಲಿ ಒಳ್ಳೆಯ ಅಭಿಪ್ರಾಯವಿರದಿದ್ದುದು ಸ್ಪಷ್ಟವಾಗಿದ್ದಿತು. ಯಾವ ಹಳ್ಳಿಗರಿಗಾಗಿ ಸ್ವಾಮಿಗಳು ಮಠವನ್ನೇ ತ್ಯಜಿಸಿ ಬಂದರೋ, ಅವರಿಗೆ ಇಂಥ ತಾತ್ಸಾರ ಭಾವ. ನಾಲ್ಕು ಊರುಗಳ ಸ್ವಾಮಿಯಾದ ಆ ಮರಿದೇವರು ಬೇರೆ ಸ್ವಾಮಿಗಳ ಬಗೆಗೆ ಜನರ ಮನಸ್ಸು ಕೆಡಿಸಲು ಪ್ರಯತ್ನಿಸುತ್ತಿರುವ ಹಾಗಿದೆ. ಪ್ರಭುಸ್ವಾಮಿಗಳ ಆಗಮನದಿಂದಾಗಿ ತನ್ನ ಸ್ವಾರ್ಥಕ್ಕೆ ಭಂಗ ಬಂದಿತೆಂದು ಆತ ಹೀಗೆ ಆಚರಿಸುತ್ತಿರುವನೊ ಏನೊ. ಪ್ರಭುಸ್ವಾಮಿಗಳಿಗೆ ಈ ವಿಷಯ ತಿಳಿದಿದೆಯೊ ಇಲ್ಲವೊ....

"ಸ್ವಾಮಿಗಳ ಬಗ್ಗೆ ನಿಮಗೆ ಒಳ್ಳೆಯ ಅಭಿಪ್ರಾಯವಿಲ್ಲವಲ್ಲಾ ? ನಿಮ್ಮೂರವರೆಲ್ಲ ಅವರ ಬಗ್ಗೆ ಹೀಗೇ ಮಾತಾಡುವರೋ ಏನು ?" ಎಂದು ಕೇಳಿದಳಾಕೆ.

"ಲಿಂಗಾಯುತರಾದ ನಾವೆಲ್ಲರೂ ಅವರನ್ನು ಮನೆಗೇ ಸೇರಿಸುವದಿಲ್ಲ. ಬೇರೆ ಜಾತಿಯವರ ಮನೆಗಳಿಗೆಲ್ಲ ಅವರು ಬಂದುಹೋಗುತ್ತಾರೆ."

"ಅಂದರೆ! ಲಿಂಗಾಯತರೆಲ್ಲ ಅವರಿಗೆ ಬಹಿಷ್ಕಾರ ಹಾಕಿದ ಹಾಗಾಯಿತಲ್ಲ?"

"ಹಾಂಗೇನೂ ಇಲ್ಲವ್ವ. ಹೊಲೇರು, ಬ್ಯಾಡರು, ಮುಸಲ್ಮಾನರ ಮನೆಯೊಳಗೆಲ್ಲಾ ಹೊಕ್ಕು ಮೈಲಿಗೆ ಮಾಡಿಕೊಂಡು ಬರುವವರನ್ನ ಹ್ಯಾಂಗ ಕರೆಯೋದು ಮನೆಯೊಳಗೆ? ನಮಗೇನಾದರೂ ಜಾತಿ ಗೀತಿ ಐತ್ಯೋ ಇಲ್ಲ್ಯೋ? ಆ ಸ್ವಾಮಿಗಳಿಗಂತೂ ಜಾತಿಯ ಲಕ್ಷ್ಯನೇ ಇಲ್ಲ. ಜಾತಿ ಗೀತಿ ಎಲ್ಲಾ ಸುಳ್ಳು. ದೇವರ ಮುಂದ ಎಲ್ಲಾರೂ ಒಂದೇ. ಹೊಲೆಯ, ಬ್ಯಾಡ, ಲಿಂಗಾಯುತ ಯಾವದೂ ಇಲ್ಲ. ಎಲ್ಲಾರೂ ಒಂದೇ ಅಂತ ಹೇಳುತಾರೆ. ಇಂಥಾ ಮಾತು ಯಾರಾದರೂ ಹೇಳ್ಯಾರೇನವ್ವ? ಇಂದು ಹೀಂಗ ಹೇಳಿದರು. ನಾಳೆ ಹೊಲೆಯರಿಗೆ ಹೆಣ್ಣು ಕೊಡಿರಿ, ಮುಸಲ್ಮಾನರಿಗೆ ಮಗಳನ್ನು ಕೊಡಿರಿ. ಬ್ಯಾಡರ ಮನೆಯೊಳಗೆ ಊಟಾ ಮಾಡಿರಿ ಅಂತ ಹೇಳಿದರೂ ಹೇಳಿದರೇ. ಲಿಂಗಾಯುತರ ಸ್ವಾಮಿಗಳೆಂದ ಮ್ಯಾಲ ಲಿಂಗಾಯುತರ ಹಾಂಗ ಇರಬೇಕೋ ಬ್ಯಾಡವೋ?"

ಸರಸು ಆತನೊಂದಿಗೆ ವಾದಿಸುವ ಗೊಡವೆಗೆ ಬೀಳಲಿಲ್ಲ. ಶಿಕ್ಷಣದ ಅಭಾವ, ಅಜ್ಞಾನ, ಪರಂಪರೆಯಲ್ಲಿನ ಅಂಧ ವಿಶ್ವಾಸ, ಅವರನ್ನು ಅಂಥ ಅಜ್ಞಾನದಲ್ಲಿಯೆ ಇರಿಸಿ ಸ್ವಾರ್ಥ ಸಾಧಿಸಿಕೊಳ್ಳುವ ಸೋಮಾರಿ ಗುರುಗಳ ಪ್ರಭಾವಗಳಿಂದಾಗಿಯೆ ಆತ ಹೀಗೆಲ್ಲ ಮಾತನಾಡುತ್ತಿದ್ದುದು ಸ್ಪಷ್ಟವಾಗಿದ್ದಿತು. ಆತನೂ ಓದು ಬರೆಯಲು ಕಲಿತಿದ್ದಲ್ಲಿ, ಕೆಲವು ಗ್ರಂಥಗಳನ್ನಾದರೂ ಓದಿಕೊಂಡಿದ್ದಲ್ಲಿ, ಮುಂದುವರಿಯುವ ಜಗತ್ತಿನ ಪ್ರಗತಿಯ ಬಗ್ಗೆ ತಿಳಿದುಕೊಂಡಿದ್ದಲ್ಲಿ ಈ ರೀತಿ ಮಾತನಾಡುತ್ತಿರಲಿಲ್ಲ. ಆತನ ಬಗೆಗೆ ಕನಿಕರ ಬಂದಿತು ಸರಸುವಿಗೆ. ಈ ಅಜ್ಞಾನವನ್ನು ತೊಲಗಿಸಲು ಪ್ರಭುಸ್ವಾಮಿಗಳಂಥವರು ಇನ್ನೂ ಎಷ್ಟು ವರುಷ ಕಷ್ಟಪಡಬೇಕಾಗುವುದೊ ಏನೊ. ಎಷ್ಟು ವಿರೋಧವನ್ನೆದುರಿಸಬೇಕಾಗುವುದೊ ಏನೊ.

ರೈತ ಮಹಿಳೆ ಕೇಳುತ್ತಿದ್ದಳು: "ಈ ಸ್ವಾಮಿಗಳು ನಿನಗೆ ಏನಾಗಬೇಕವ್ವ?"

"ಏನೂ ಇಲ್ಲ. ನನ್ನ ತಂದೆಯಿದ್ದ ಹಾಗಿದಾರೆ ಅವರು. ನಾನು ಸಣ್ಣವಳಾಗಿದ್ದಾಗಿನಿಂದ ಅವರ ಗುರುತು."

"ಒಬ್ಬಾಕೇ ಯಾಕ ಹೊರಟಿದ್ದೀ? ನಿನಗ ಯಾರೂ ಇಲ್ಲೇನು?"

"ಇಲ್ಲ."

"ಅವರ ಹತ್ತರ ಹೋಗಿ ಏನು ಮಾಡುವಾಕೆ?"

"ಸ್ವಲ್ಪ ಕೆಲಸವಿದೆ," ಎಂದು ತಬ್ಬಿಬ್ಬಾಗಿ ನುಡಿದಳು ಸರಸು.

"ಸ್ವಾಮಿಗಳ ಹತ್ತರ ಈ ಹರೇದಾಕಿಗೆ ಏನು ಕೆಲಸೋ," ಎಂದು ಮನಸ್ಸಿನಲ್ಲೇ ಹೇಳಿಕೊಂಡಳು ರೈತ ಮಹಿಳೆ.

ಕರವಿನಕಟ್ಟೆ ಹಳ್ಳಿಗೆ ಅವರು ಬಂದು ಮುಟ್ಟಿದಾಗ ಒಂಭತ್ತು ಗಂಟೆಯಾಗುತ್ತ ಬಂದಿತ್ತು. ರೈತ ದಂಪತಿಗಳಿಗೆ ಹಸಿವೆಯಾಗಿತ್ತು. ಅವರ ಬಲುಮೆಗೊಳಗಾಗಿ ಸರಸುವೂ ಅವರ ಮನೆಗೆ ಹೋಗಿ ರೊಟ್ಟಿ ತಿಂದು ನುಚ್ಚು ಮಜ್ಜಿಗೆ ಉಣ್ಣಬೇಕಾಯಿತು.

"ಒಬ್ಬಾಕೇ ಮೂರು ಹರದಾರಿ ಹ್ಯಾಂಗ ಹೋಗುವಾಕೆ? ಒಬ್ಬ ಹುಡುಗನ್ನ ಕಳಿಸ್ತೇವಿ. ಕರಕೊಂಡು ಹೋಗವ್ವ," ಎಂದು ಹೇಳಿ ಅವರು ಮುಸಲ್ಮಾನರ ಹುಡುಗನೊಬ್ಬನನ್ನು ಕೂಗಿ ಆಕೆಯೊಂದಿಗೆ ಜೊತೆ ಮಾಡಿ ಕಳುಹಿಸಿದರು.

ಹಳ್ಳಿಯನ್ನು ದಾಟ ಹೊಲಗಳಲ್ಲಿ ಹಾಯ್ದು ಕಾಲುದಾರಿಗೆ ಕೂಡುವವರೆಗೂ ಆ ಹುಡುಗ ಮೌನವಾಗಿದ್ದವನು ಅನಂತರ ಧ್ವನಿಯೆತ್ತಿ ಕೇಳಿದ:

"ಮೂರು ಹರದಾರಿ ಹ್ಯಾಂಗ ನಡೀತೀಯವ್ವ ಈ ಬಿಸಿಲಾಗ?"

"ನಡೆಯಲೇಬೇಕಲ್ಲ ತಮ್ಮ. ಸ್ವಾಮಿಗಳನ್ನಂತೂ ನೋಡಲೇ ಬೇಕು."

"ಪ್ರಭುಸ್ವಾಮಿಗಳಂದರ ದೇವರಾಂಗ ಇದ್ದಾರ ನೋಡವ್ವ. ಇವರಂಥಾ ಸ್ವಾಮಿಗಳನ್ನ ಇದುವರೆಗೂ ನಾವು ನೋಡಿರಲಿಲ್ಲ. ಯಾರಿಗಾದರೂ ಜಡ್ಡಾದದ್ದು ತಿಳಿದರ ಸಾಕು, ಮನೆಯ ತನಕ ಬಂದು ಔಷಧಾ ಕೊಡುತಾರ. ಅವರಿಂದಾಗಿ ನಮ್ಮ ಅಪ್ಪ ಬದುಕಿಕೊಂಡ. ಅವರು ಬಂದು ಔಷಧಾ ಕೊಡದಿದ್ದರ ಸತ್ತೇಹೋಗುತಿದ್ದ."

ಸರಸು ಚಕಿತಳಾಗಿ ಆ ಹುಡುಗನನ್ನು ದಿಟ್ಟಿಸಿ ನೋಡಿದಳು. ಆತನ ಮುಖದ ಮೇಲೆಲ್ಲ ಕೃತಜ್ಞತೆ ತುಂಬಿ ಬಂದಿದ್ದುದು ಸ್ಪಷ್ಟವಾಗಿತ್ತು.

ಕೊಂಚ ಹೊತ್ತಿನ ಹಿಂದೆ ಆ ರೈತ ದಂಪತಿಗಳಾಡಿದ ಮಾತು ಹಾಗೆ. ಈಗ ಈ ಮುಸಲ್ಮಾನ ಬಾಲಕನಾಡುವ ಮಾತು ಹೀಗೆ. ರೈತ ದಂಪತಿಗಳ ಮಾತು ಗಳಿಂದಾಗಿ ಸರಸುವಿನ ಎದೆಯಲ್ಲಿ ತುಂಬಿಬಂದಿದ್ದ ವಿಷಾದವೆಲ್ಲವೂ ಈ ಬಾಲಕನ ನುಡಿಗಳಿಂದಾಗಿ ಕರಗಿಹೋಗತೊಡಗಿತು.

ಆತ ಹೇಳುತ್ತಲಿದ್ದ. "ಹೊಟ್ಟೆಯೊಳಗ ಭಯಂಕರ ನೋವಾಗಿ ಅಪ್ಪ ನರಳುತ್ತಾ ಬಿದ್ದಿದ್ದನವ್ವ. ಒಂದು ತೊಟ್ಟು ಹಾಲು ಕೂಡಾ ಕುತ್ತಿಗೆ ಯೊಳಗ ಇಳೀತಿರಲಿಲ್ಲ. ಡಾಕ್ಟರನ್ನ ಕರೆತರಬೇಕಾದರ ನೂರಾರು ರೂಪಾಯಿ ಬೇಕು. ಎಲ್ಲಿಂದ ತರೂದವ್ವ ಅಷ್ಟು ರೂಪಾಯಿ ? ಇನ್ನೇನು ಅಪ್ಪನ ಆಸೆ ಬಿಟ್ಟಂಗs ಆಗಿತ್ತು. ಆ ವೇಳೆಯೊಳಗ ದೇವರೇ ಬಂದಂಗ ಸ್ವಾಮಿಗಳು ಬಂದರು. ಅಪ್ಪನ್ನ ನೋಡಿ ಔಷಧಾ ಅರೆದುಕೊಟ್ಟರು. ಒಂದು ವಾರ ದೊಳಗಾಗಿ ನೆಟ್ಟಗಾಯ್ತು. ದಿನಾಲೂ ಆ ಹಳ್ಳಿಯಿಂದ ನಮ್ಮೂರಿಗೆ ಬಿಸಿಲಿ ನಾಗ ನಡೆದು ಬಂದು ಔಷಧಾ ಕೊಟ್ಟು ಹೋಗುತ್ತಿದ್ದರು ಸ್ವಾಮಿಗಳು. ನಾವು ಮುಸಲ್ಮಾನರು ಅಂತ ಹೇಸಿಕೊಳ್ಳಲಿಲ್ಲ. ನಮ್ಮ ಮನೆಗೆ ಅವರು ಬರುವದನ್ನ ನೋಡಿ ಊರೊಳಗಿನ ಲಿಂಗಾಯತರು ಅವರ ಮ್ಯಾಲ ಸಿಟ್ಟಾ ದರು. ಆದರೂ ಸ್ವಾಮಿಗಳು ಬಿಡಲಿಲ್ಲ. ನಮ್ಮ ಅಪ್ಪನ್ನ ಉಳಿಸಿದರು...... ಇದ್ದರೆ ಇಂಥಾ ಸ್ವಾಮಿಗಳೇ ಇರಬೇಕು ನೋಡವ್ವ. ಮಠದಾಗ ಕೂತು ಕೊಂಡು ಸುಮ್ಮನೆ ತಿಂದು ಸೊಕ್ಕುವ ಸ್ವಾಮಿಗಳಿಂದ ಏನು ಉಪಯೋಗ ?"

"ಆದರೆ ಹೀಗೆಲ್ಲಾ ಮಠ ಬಿಟ್ಟು ಸ್ವಾಮಿಗಳು ತಿರುಗಬಾರದು, ರೈತರ ಸೇವೆ ಮಾಡಬಾರದು, ಬೇರೆ ಜಾತಿಯವರ ಮನೆಗೆ ಹೋಗಬಾರದು ಅಂತ ಹಳ್ಳಿಯವರೇ ಅನ್ನುವರಲ್ಲ ?"

"ಹಾಂಗ ನಿಮ್ಮ ಮುಂದೆಯೂ ಅಂದರೇನು ? ಅದೆಲ್ಲಾ ಆ ಡೊಳ್ಳು ಹೊಟ್ಟೆಯ ಮರಿದೇವರು ಕಲಿಸಿಕೊಟ್ಟದ್ದು. ನಮ್ಮ ಪ್ರಭುಸ್ವಾಮಿ ಅಂದರ ಅವರಿಗೆ ಹೊಟ್ಟೆಕಿಚ್ಚು. ನಾವೆಲ್ಲಾ ಪ್ರಭುಸ್ವಾಮಿಗಳನ್ನ ದೇವರಂತ ತಿಳಿದು ಕೊಂಡದ್ದು ನೋಡಿ ಹೆದರಿದರು ಅವರು. ತಮ್ಮ ಭಕ್ತರೆಲ್ಲಾ ಪ್ರಭುಸ್ವಾಮಿಗಳ ಭಕ್ತರಾಗಿ ಬಿಟ್ಟರೆ ಮುಂದೆ ತಮಗೆ ರೊಕ್ಕ ಸಿಗಲಿಕ್ಕಿಲ್ಲ ಅಂತ......"

"ಆ ಮರಿದೇವರ ಮಠ ಎಲ್ಲಿದೆ ತಮ್ಮ?"

"ಅಲ್ಲಿ ಎದುರಿಗೆ ಕಾಣುತ್ತದಲ್ಲಾ – ಆ ಮರಡಿಯ ಕೆಳಗೆ ಐತವ್ವ. ಅದರ ಆಚೆಕಡೇನೇ ಹಳ್ಳಿ ಇರೂದು. ಅಲ್ಲೇ ಪ್ರಭುಸ್ವಾಮಿಗಳೂ ಗುಡಿಸಲು ಕಟ್ಟಿಕೊಂಡು ಇದ್ದಾರ."

"ಗುಡಿಸಲು ?"

"ಹೌದವ್ವ. ಮಾವಿನ ತೋಪಿನ ನಡುವೆ ಹುಲ್ಲಿನ ಗುಡಿಸಲು ಕಟ್ಟ್ಯಾರ. ಹತ್ತಿರಲೇ ಹಳ್ಳ ಹರೀತೈತಿ. ನೋಡುವದಕ್ಕ ಬಹಳ ಚಂದಾಗೈತವ್ವ ಆ ಜಾಗಾ."

"ಒಳ್ಳೆ ಕವಿಯ ಹಾಗೆ ಮಾತಾಡುವನಲ್ಲ ಈ ಹುಡುಗ!" ಎಂದುಕೊಂಡು ಸರಸು ಕೇಳಿದಳು : "ನಿನ್ನ ಹೆಸರೇನು ತಮ್ಮ?"

"ಅಕಬರ."

"ಸಾಲೆಯೊಳಗೆ ಕಲಿಯುತ್ತಿದ್ದೀಯಾ ?"

"ಹೂ. ಐದನೇ ಯತ್ತೆಯೊಳಗೆ ಇದ್ದೀನಿ."

"ನಿಮ್ಮ ತಂದೆ ಏನು ಮಾಡುತಾರೆ ?"

"ಒಕ್ಕಲುತನ."

"ಸ್ವಂತ ಹೊಲ ಇದೆಯೇನಪ್ಪ ?"

"ಎಲ್ಲೀದವ್ವ ? ಸಾವುಕಾರರ ಹೊಲಾ ಪಾಳೇಕ್ಕ ಹಿಡಿದೀವಿ."

ಸರಸು ಕೊಂಚ ಹೊತ್ತು ಮೌನವಾಗಿ ಹೆಜ್ಜೆ ಹಾಕುತ್ತಿದ್ದು, ಅನಂತರ ಕೇಳಿದಳು : "ನೀನು ಕಲಿತು ಏನಾಗಬೇಕಂತ ಮಾಡಿದ್ದೀ ಅಕಬರ್ ಸಾಹೇಬು ?"

ಆತ ಉತ್ಸಾಹದ ಧ್ವನಿಯಲ್ಲಿ ಉತ್ತರವಿತ್ತ; "ನಾನು ಕಲಿತು ಡಾಕ್ಟರ್ ಆಗಬೇಕು ಅಂತ ಸ್ವಾಮಿಗಳು ಹೇಳ್ಯಾರವ್ವ. ಡಾಕ್ಟರೇ ಆಗುತೀನಿ ನಾನು....."

ಮೂರು ಗಂಟೆಗಳ ವರೆಗೆ ಹಾದಿ ತುಳಿದು ಅವರು ಹಳ್ಳಿಯ ಸಮೀಪಕ್ಕೆ ಬಂದರು. ಮರಡಿಯ ಕೆಳಗೆ ಹಳೆಯ ಕಾಲದ ಮಠವೊಂದು ಏಕಾಕಿಯಾಗಿ ನಿಂತುಕೊಂಡಿತ್ತು. ಅದರ ಎದುರಿಗೆ ಹಾಯ್ದು ಹೊರಟಿದ್ದ ಹಾಗೆ ಮಠದ ಮುಂದಿನ ಕಟ್ಟೆಯ ಮೇಲೆ ಕುಳಿತಿದ್ದ ದುಂಡಗಿನ ದೇಹದ ವ್ಯಕ್ತಿಯೊಂದು

ಅವರಿಬ್ಬರನ್ನೂ ಕೆಕ್ಕರಿಸಿ ನೋಡುತ್ತಾ ಅಕಬರನನ್ನು ಕುರಿತು ಕೇಳಿತು:
"ಇವರು ಯಾರ್ರೋ? ಎಲ್ಲಿಗೆ ಹೊರಟಿದ್ರೀ ?"

"ಇಲ್ಲೇ ಹಳ್ಳಿಗೆ ಹೊರಟೇವಿ."

ಮಠವನ್ನು ಹಿಂದೆ ಹಾಕಿ ಹಳ್ಳಿಯ ಸೀಮೆಯಲ್ಲಿ ಅಡಿಯಿರಿಸುತ್ತಿದ್ದ ಹಾಗೆ ಸರಸು–"ಆತನೇ ಏನಯ್ಯಾ ಮಠದ ಮರಿದೇವರು?" ಎಂದು ಕೇಳಿದಳು.

"ಹೌದವ್ವ. ಅವನೇ. ಮನುಷ್ಯ ಬಹಳ ಹಲ್ಕಾ ಇದ್ದಾನೆ. ನಾವೆಲ್ಲಿಗೆ ಹೊರಟೇವಿ ಅನ್ನೂದು ಅವಗ ತಿಳೀದಿದ್ದರೇ ನೆಟ್ಟಗೆ. ಇಲ್ಲಾಂದರೆ ಏನಾದರೂ ಒಣಗೊಂದಲ ಎಬ್ಬಿಸುವವ."

ಹಳ್ಳಿಯ ಉತ್ತರ ದಿಕ್ಕಿನಲ್ಲಿದ್ದ ಮಾವಿನ ತೋಪಿನ ಬಳಿ ಬರುತ್ತಲೂ ಅಕಬರ ಕೊಂಚಹೊತ್ತಿನ ಹಿಂದೆ ಹೇಳಿದ ಹಾಗೆ ಆ ಸೀಮೆ ತುಂಬ ಸುಂದರ ವಾಗಿದ್ದುದು ಕಂಡುಬಂದಿತು. ಗಿಡಗಳ ನಡುವೆ ಎರಡು ಚಿಕ್ಕ ಗುಡಿಸಲು ಗಳಿದ್ದುವು. ಅವುಗಳೆದುರಿಗಿನ ಅಂಗಳ ವಿಶಾಲವಾಗಿ ಸ್ವಚ್ಛವಾಗಿದ್ದಿತು.

ಅವರು ಗುಡಿಸಲುಗಳ ಬಳಿ ಬಂದಾಗ ಸ್ವಾಮಿಗಳು ಕಟ್ಟಿಗೆಯನ್ನೊಡೆ ಯುತ್ತಲಿದ್ದರು. ಸರಸುವನ್ನು ಕಂಡಾಗ ಅವರಿಗೆ ಕೊಂಚ ಆಶ್ಚರ್ಯ ವಾಗದಿರಲಿಲ್ಲ.

"ಸರಸ್ವತಿಯೇನು? ಬಂದೆಯಾ? ಒಳ್ಳೆಯದಾಯಿತು. ಒಳಗೆ ಕೂತುಕೋ ತಾಯಿ. ಅಕಬರನೂ ಬಂದಾನೇನು? ಏನು ತಮ್ಮಾ, ಮನೆ ಯಲ್ಲಿ ಎಲ್ಲಾ ನೆಟ್ಟಗಿದ್ದಾರೆಯೆ? ನಿಮ್ಮ ಅಪ್ಪ?"

"ನೆಟ್ಟಗಿದಾರೆ ಸಾಮಿ."

"ಕೂತುಕೊಳ್ಳಿರಿ. ಇನ್ನು ಸ್ವಲ್ಪ ಒಡೆಯುವದಿದೆ. ಅದನ್ನಷ್ಟು ಮುಗಿಸಿದವನೇ ಬಂದುಬಿಡುತ್ತೇನೆ," ಎಂದು ನುಡಿದು ಪ್ರಭುಸ್ವಾಮಿಗಳು ಮತ್ತೆ ತಮ್ಮ ಕಾಯಕದಲ್ಲಿ ತೊಡಗಿದರು.

ಕಾತರತೆಯಿಂದಾಗಿ ಸರಸುವಿನ ಎದೆ ಡವಡವನೆ ಬಡಿದುಕೊಳ್ಳುತಿತ್ತು. ಆಶ್ರಮಕ್ಕೆ ಬಂದುದಾಯಿತು, ಪ್ರಭುಸ್ವಾಮಿಗಳನ್ನೂ ಕಂಡುದಾಯಿತು. ಬೇರೆ ಯಾರ ಸುಳಿವೂ ಇಲ್ಲವಲ್ಲ? ತನ್ನವರು ಇಲ್ಲಿ ಇರುವರೋ ಇಲ್ಲವೋ

ಯಾರಿಗೆ ಗೊತ್ತು......ಹೊರಗಡೆ ಎಲ್ಲಿಗಾದರೂ ಹೋಗಿರುವರೊ ಏನೊ.........ಅಥವಾ.....ಎಂದುಕೊಳ್ಳುತ್ತ ಗುಡಿಸಲಲ್ಲಿ ಅಡಿಯಿರಿಸಿದಳು.

ಹಳ್ಳಿಗಳಲ್ಲಿ ತೀರಾ ಬಡವರು ವಾಸಿಸುವ ಗುಡಿಸಲುಗಳ ಹಾಗೆಯೆ ಅದೂ ಇತ್ತು. ಬೇರೆ ಗುಡಿಸಲುಗಳಲ್ಲಿ ಸಾಮಾನ್ಯವಾಗಿ ಕಾಣಿಸುವ ಕಸ, ಕೊಳೆ, ದುರ್ವಾಸನೆ ಮಾತ್ರ ಅಲ್ಲಿ ಇರಲಿಲ್ಲ. ಒಂದು ಮೂಲೆಯಲ್ಲಿ ನೂಲು ತೆಗೆಯುವ ರಾಟೆಯಿತ್ತು. ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ ಒಂದೇ ಒಂದು ಚಿತ್ರಪಟವಿತ್ತು. ಅದೊಂದನ್ನುಳಿದು ಅಲ್ಲಿ ಬೇರಾವ ಚಿತ್ರಪಟವೂ ಕಾಣಿಸುತ್ತಿರಲಿಲ್ಲ. ಮುಳುಗುವ ಸೂರ್ಯನ ಮಬ್ಬು ಬೆಳಕಿನಲ್ಲಿ ದೂರದಿಂದ ಆ ಪಟ ಯಾವುದೆಂಬುದು ಗೊತ್ತಾಗುವಂತಿರಲಿಲ್ಲ. ಕೊಂಚ ಹತ್ತಿರ ಹೋಗಿ ನೋಡಿದಳು ಸರಸು. ಅದು ಬೇರೆ ಯಾರದೂ ಆಗಿರಲಿಲ್ಲ; ಭಾರತದ ತಂದೆ ಗಾಂಧೀಜಿಯದಾಗಿದ್ದಿತು. ಸೇವಾಗ್ರಾಮದ ಗುಡಿಸಲಿನ ಹತ್ತಿರ ಕೋಲು ಹಿಡಿದು ನಿಂತಿದ್ದ ಗಾಂಧೀಜೀ. ಪ್ರಭುಸ್ವಾಮಿಗಳ ಬಾಳು ಯಾವ ದಾರಿ ಹಿಡಿದು ಹೊರಟಿದೆಯೆಂಬುದನ್ನು ತಿಳಿಸಲು ಅದೊಂದು ಚಿತ್ರವೇ ಸಾಕಾಗಿದ್ದಿತು.

ಎಂಟು ಹತ್ತು ನಿಮಿಷ ಕಳೆದ ತರುವಾಯ ಸ್ವಾಮಿಗಳು ಕೈಗಳನ್ನೊರೆಸಿಕೊಳ್ಳುತ್ತ ಒಳಕ್ಕೆ ಬಂದರು.

"ಅವರು....ಅವರು...." ಎಂದು ಸರಸು ತುಟಿ ಬಿಚ್ಚುವುದರೊಳಗಾಗಿ ಸ್ವಾಮಿಗಳೇ ಹೇಳಿದರು: "ನೀನು ಯಾಕೆ ಬಂದಿರುವೆಯೆಂಬುದು ಗೊತ್ತಾಯಿತು ಮಗಳೇ. ಶಿವಮೂರ್ತಿ ಇಲ್ಲಿ ಇಲ್ಲವೆಂದು ನಿರಾಶಳಾಗಬೇಡ."

"ಎಲ್ಲಿಗೆ ಹೋದರು ಬುದ್ಧೀ?"

"ಇಲ್ಲೇ ಸಮೀಪದ ಹಳ್ಳಿಯೊಂದರಲ್ಲಿ ಇದ್ದಾನೆ. ಕ್ಷೇಮವಾಗಿದ್ದಾನೆ. ಚಿಂತಿಸಬೇಡ."

"ಅಲ್ಲಿಗೇಕೆ ಹೋದರು?"

"ಇಲ್ಲಿ ನಾನೊಬ್ಬನೇ ನೋಡಿಕೊಳ್ಳಬಲ್ಲೆ. ಇಬ್ಬರ ಅವಶ್ಯಕತೆಯೇನೂ ಇಲ್ಲ. ಆ ಹಳ್ಳಿಯ ಜನರಿಗೆ ಆತನ ಅಗತ್ಯವಿತ್ತು. ನಾನೇ ಕಳಿಸಿ ಕೊಟ್ಟಿದ್ದೇನೆ."

"ಅವರನ್ನೊಮ್ಮೆ ನೋಡಲೆಂದು ಇಷ್ಟು ದೂರ ಧಾವಿಸಿ ಬಂದಿದ್ದೆ.... ಎಂಥ ದುರ್ದೈವಿ ನಾನು....ಅವರು..." ಎಂದು ರೋದಿಸತೊಡಗಿದಳು ಸರಸು.

ಕನಿಕರ ತುಂಬಿದ ಕಣ್ಣುಗಳಿಂದ ಆಕೆಯನ್ನು ದಿಟ್ಟಿಸುತ್ತ ಸ್ವಾಮಿಗಳೆಂದರು : "ಅಳಬೇಡ ಮಗಳೇ. ಹೇಳಿ ಕಳಿಸೋಣ. ಆತ ಬರುತ್ತಾನೆ. ಆದರೆ—ಆತ ಬಂದು ನಿನ್ನನ್ನು ಕಂಡರೂ ಸಹ ನಿನಗೇನೂ ಉಪಯೋಗವಾಗುವಂತಿಲ್ಲ. ಆತನ ಮನಸ್ಸು ಪೂರ್ಣವಾಗಿ ಬದಲಾಯಿಸಿದೆ. ನನಗಿಂತಲೂ ಹೆಚ್ಚು ವಿರಕ್ತನಾಗಿದ್ದಾನೆ ಆತ."

"ವಿರಕ್ತ ?"

"ಹೌದು. ವಿರಕ್ತ. ಇಂದು ಆತನ ದೃಷ್ಟಿಯಲ್ಲಿ ಎಲ್ಲ ಸ್ತ್ರೀಯರೂ ತಾಯಿಸಮಾನರು. ನೀನೂ ಸಹ. ನೀನೆಷ್ಟೇ ಪ್ರಯತ್ನಪಟ್ಟರೂ ಮತ್ತೆ ಆತನೊಂದಿಗೆ ಬಾಳುವೆ ಮಾಡುವುದು ಸಾಧ್ಯವಾಗದು. ಇಂದು ಆತ ಹಿಂದಿನ ಶಿವಮೂರ್ತಿಯಲ್ಲ. ವಿರಾಗಿ ಶಿವಾನಂದ." ಎಂದು ನುಡಿದು ಸ್ವಾಮಿಗಳು ಶಿವಮೂರ್ತಿ ತಮ್ಮ ಹತ್ತಿರ ಬಂದಮೇಲೆ ಆತನೊಂದಿಗೆ ನಡೆದ ಮಾತುಕತೆ, ಆತನಿಂದ ತಮಗೆ ತಿಳಿದು ಬಂದ ವಿಷಯಗಳನ್ನೆಲ್ಲ ವಿವರಿಸಿದರು.

"ಆತ ಏನನ್ನೂ ಮುಚ್ಚಿಕೊಳ್ಳಲಿಲ್ಲ. ಸಲುಗೆಯ ಗೆಳೆಯನೆದುರಿಗೆ ಮನಸ್ಸು ಬಿಚ್ಚಿ ಮಾತನಾಡುವ ಹಾಗೆ ನನ್ನೆದುರಿಗೆ ಮನಸ್ಸು ಬಿಚ್ಚಿದ. ಇಂದು ನೀನು ಬಂದ ಹಾಗೇ ಆತನೂ ಇದೇ ಸಮಯದಲ್ಲಿ ಬಂದಿದ್ದ. ಈಗ ನೀನು ಕುಳಿತಿರುವ ಸ್ಥಳದಲ್ಲೇ ಕುಳಿತಿದ್ದ. ಅದೊಂದು ಪಿಟೀಲನ್ನು ಬಿಟ್ಟರೆ ಇನ್ನೇನೂ ಜೊತೆಗಿರಲಿಲ್ಲ." ಎಂದು ಸ್ವಾಮಿಗಳು ಹೇಳತೊಡಗಿದರು. ಅವರು ಹೇಳುತ್ತ ಹೋದ ಹಾಗೆ ಆಗ ನಡೆದುದೆಲ್ಲವೂ ಚಿತ್ರಪಟದಲ್ಲಿನ ದೃಶ್ಯಗಳಂತೆ ಸರಸುವಿನ ಒಳಗಣ್ಣಿನೆದುರು ಮೂಡತೊಡಗಿತು.

ಆತನನ್ನು ಕಂಡೊಡನೆ ಸ್ವಾಮಿಗಳು—"ಇದೇನು ಶಿವಮೂರ್ತಿ, ಒಬ್ಬನೇ ಬಂದುಬಿಟ್ಟೆ ? ಸರಸು ಎಲ್ಲಿ ?" ಎಂದು ಪ್ರಶ್ನಿಸಿದ್ದರು. ಆತ ನಡೆದುದೆಲ್ಲವನ್ನೂ ವಿವರವಾಗಿ ತಿಳಿಸಿ, "ಆಕೆಯ ಗೆಳತಿ ಸೂಶಿ ಬೆಂಗಳೂರಿಗೆ ಹೋಗಿದ್ದಾಳೆ ಆಕೆಯನ್ನು ಕರೆದುತರಲು. ಒಂದು ವೇಳೆ ಕರೆದುತಂದರೂ ತರಬಹುದು. ನನಗಂತೂ ಮನಸ್ಸು ಹೇಸಿಕೊಂಡಿತ್ತು. ಹೆಣ್ಣಿನ ಸಹವಾಸ ಎಂದರೇನೇ ಮೈಮೇಲೆ ಮುಳ್ಳು ಬರುವ ಹಾಗಾಗಿತ್ತು. ಇನ್ನು ಆಕೆ

ಯೊಂದಿಗೆ ಬಾಳ್ವೆ ಮಾಡುವುದು ಸಾಧ್ಯವಿರಲಿಲ್ಲ. ಅಂತೇ ಒಂದು ನಿರ್ಧಾರಕ್ಕೆ ಬಂದು ಇತ್ತ ಹೊರಟು ಬಂದೆ," ಎಂದು ಹೇಳಿದ್ದ.

"ಹೇಸಿಕೆಯೆಂದೆಯಲ್ಲ? ಸರಸುವಿನ ಬಗೆಗೋ?"

"ಸರಸುವೆಂಬ ಒಂದು ಹೆಣ್ಣಿನ ಬಗೆಗೇ ಅಲ್ಲ ಬುದ್ಧೀ. ಎಲ್ಲಾ ಸ್ತ್ರೀಯರ ಬಗೆಗೂ. ಅವರ ಬಗೆಗೆ ತಿರಸ್ಕಾರವೇನೂ ಇರಲಿಲ್ಲ. ಆದರೂ ಅವರ ಸಹವಾಸ ಅಂದರೆ ಮಾತ್ರ ಹೇಸಿಕೆಯಾಗಿತ್ತು."

"ಹೀಗಾಗುವುದು ಬಹಳ ಅಪರೂಪ. ನಿನಗೆ ಹೀಗಾಗಲು ಕಾರಣವೇನು? ಸರಸುವಿನಿಂದ ದೊರೆತ ಕಟು ಅನುಭವವೂ ಒಂದು ಕಾರಣವೇ. ಆದರೂ ಅಷ್ಟಕ್ಕೇ ಯಾರಿಗೂ ವೈರಾಗ್ಯ ಬರುವುದಿಲ್ಲ. ಓಡಿಹೋಗಿದ್ದ ಹೆಂಡರನ್ನು ಮತ್ತೆ ಕರೆದುಕೊಂಡು ಬಂದು ಅವರೊಂದಿಗೇ ಬಾಳ್ವೆ ಸಾಗಿಸುವ ಗಂಡಸರೆಷ್ಟು ಜನ ಇಲ್ಲ?"

"ಇರಬಹುದು. ಆದರೆ ಅವರಿಗೂ ನನಗೂ ಇರುವ ವ್ಯತ್ಯಾಸವನ್ನು ಮಾತ್ರ ತಾವು ಮರೆಯಬಾರದು. ನಿಜ ಹೇಳಬೇಕಾದರೆ ನನಗೆ ಮದುವೆಯಾಗುವ ಮನಸ್ಸೇ ಇರಲಿಲ್ಲ. ಇನ್ನೂ ಓದಬೇಕು, ಎಂ. ಎ. ಪಾಸು ಮಾಡಬೇಕು ಎಂದೆಲ್ಲ ಆಸೆಯಿತ್ತು. ನನಗೆ ತಿಳಿಯದಂತೆಯೆ ನಾನು ಈ ಮೋಹದ ಬಲೆಯಲ್ಲಿ ಬಿದ್ದುಬಿಟ್ಟೆ. ಎಲ್ಲವೂ ಹಠಾತ್ತಾಗಿ ನಡೆದು ಹೋಯಿತು. ಎಷ್ಟು ಬೇಗ ಈ ಬಲೆಗೆ ಬಿದ್ದೆನೋ ಅಷ್ಟು ಬೇಗ ಅದರಿಂದ ತಪ್ಪಿಸಿಕೊಂಡು ಹೊರಬಂದದ್ದೂ ಆಯಿತು.

"ಚಿಕ್ಕಂದಿನಿಂದಲೂ ನನಗೆ ಹೆಣ್ಣಿನ ಸಹವಾಸ ಅಷ್ಟಕ್ಕಷ್ಟೆ ಸ್ವಾಮಿಜಿ. ನಾವು ಬಹಳ ಬಡವರು. ಹುಡುಗನಾಗಿದ್ದಾಗ ನನಗೆ ಹಾಕಿಕೊಳ್ಳಲು ಸರಿಯಾದ ಬಟ್ಟೆಗಳೂ ಇರುತ್ತಿರಲಿಲ್ಲ. ಅಂಗಿ ಹಲವಾರು ಕಡೆ ಹರಿದು ಹೋಗಿರುತ್ತಿತ್ತು. ಚೊಣ್ಣವೂ ಅಷ್ಟೆ. ಅವುಗಳಿಗೆ ತೇಪೆ ಹಾಕಿ ನನ್ನ ತಾಯಿ ಹೊಲಿದು ಕೊಡುತ್ತಿದ್ದಳು. ನಾನು ಹೈಸ್ಕೂಲಿನಲ್ಲಿದ್ದಾಗಲೂ ಅದೇ ಸ್ಥಿತಿಯಿತ್ತು. ಆಗ ನನ್ನ ಹತ್ತಿರ ಇದ್ದುದು ಒಂದು ಅಂಗಿ, ಒಂದು ಚೊಣ್ಣ. ಆದಿತ್ಯವಾರ ಅವುಗಳನ್ನು ಒಗೆದು ಒಣಗಿಸಬೇಕು. ಮುಂದಿನ ಆದಿತ್ಯವಾರದವರೆಗೂ ಮತ್ತೆ ಒಗೆಯುವಂತಿಲ್ಲ. ಆ ನನ್ನ ಹರಿದ, ಹೊಲಸಾದ ಬಟ್ಟೆಗಳನ್ನು ಕಂಡು ಕ್ಲಾಸಿನಲ್ಲಿದ್ದ ಹುಡುಗಿಯರು ಮುಖಕ್ಕೆ ಸೆರಗು ಕ

ಕೊಂಡು ನಗುತ್ತಿದ್ದರು. ಚಪ್ಪಲು ಕೊಳ್ಳುವ ತ್ರಾಣವೂ ನನಗಿರಲಿಲ್ಲ. ಬರಿಗಾಲಲ್ಲೇ ಸಾಲೆಗೆ ಹೋಗುತ್ತಿದ್ದೆ. ಅದೂ ಒಂದು ನಗೆಯ ವಿಷಯವೇ ಆ ಹುಡುಗಿಯರಿಗೆ. ಬಡತನದ ಬವಣೆ ಬೇರೆ, ಈ ಹುಡುಗಿಯರ ನಗೆ ಬೇರೆ. ಹುಣ್ಣಿಗೆ ಬರೆ ಬಿದ್ದ ಹಾಗೆ. ನೋವಾಗದಿರುತ್ತದೆಯೇ ಬುದ್ಧೀ ? ಅಂದಿನಿಂದಲೂ ಹುಡುಗಿಯರೆಂದರೆ ಮನಸ್ಸು ಹೇಸಿಕೊಳ್ಳತೊಡಗಿತು.

"ನಾನು ಮ್ಯಾಟ್ರಿಕ್ ಕ್ಲಾಸಿನಲ್ಲಿದ್ದಾಗ ಒಂದು ಘಟನೆ ನಡೆಯಿತು. ನಮ್ಮ ಕೋಣೆಯ ಪಕ್ಕದ ಮನೆಯಲ್ಲಿ ಬಡ ಸಂಸಾರವೊಂದು ವಾಸವಾಗಿತ್ತು. ಗಂಡ–ಹೆಂಡತಿ, ಒಂದು ಮಗು. ದಂಪತಿಗಳಿಬ್ಬರೂ ಇನ್ನೂ ತರುಣರು. ಮಗುವೂ ಚಿಕ್ಕದು. ಮೂರು ವರ್ಷದ್ದು. ನೋಡಲು ಬಹಳ ಮುದ್ದಾಗಿತ್ತು.

"ಆ ಮಗುವಿನ ತಂದೆ ಯಾವುದೋ ಕಾರಖಾನೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ. ಒಂದೊಂದು ವಾರ ರಾತ್ರಿ ಪಾಳಿ ಕೆಲಸಕ್ಕೆಂದು ರಾತ್ರಿಯೆಲ್ಲಾ ಹೊರಗೇ ಇರುತ್ತಿದ್ದ. ಆ ಸಮಯ ಸಾಧಿಸಿ ಆ ಹೆಣ್ಣುಮಗಳು ಇನ್ನೊಬ್ಬನನ್ನು ಮನೆಯಲ್ಲಿ ಸೇರಿಸಿಕೊಳ್ಳುತ್ತಿದ್ದಳು. ಮೊದಮೊದಲು ನನಗೂ ಅದು ಗೊತ್ತಾಗಿರಲಿಲ್ಲ. ಒಂದು ದಿನ ಬೆಳಗಿನ ಜಾವದಲ್ಲಿ ಅಭ್ಯಾಸ ಮಾಡಲೆಂದು ನಾನು ಎದ್ದು ದೀಪ ಅಂಟಿಸಿ ಜಲಬಾಧೆ ತೀರಿಸಿಕೊಳ್ಳಲು ಹೊರಗಡೆ ಹೋಗಿದ್ದೆ. ಆಗ ಆ ಮನೆಯಿಂದ ಆಕೆಯ ಗೆಳೆಯ ಹೊರಬರುವುದು ಕಾಣಿಸಿತು. ಆಕೆ ಬಾಗಿಲಲ್ಲಿ ನಿಂತಿದ್ದವಳು ನನ್ನನ್ನು ನೋಡುತ್ತಲೂ ಬಾಗಿಲು ಮುಚ್ಚಿಕೊಂಡಳು. ಆತ ಅವಸರವಸರವಾಗಿ ಹೊರಟುಹೋದ.

"ಆ ದಿನವೆಲ್ಲಾ ನನಗೆ ಅಭ್ಯಾಸದಲ್ಲಿ ಮನಸ್ಸು ತೊಡಗಲಿಲ್ಲ. ಹೆಣ್ಣಿನ ಕಪಟ, ಮೋಸಗಳ ಬಗೆಗೆ ಹೇಸಿಕೆಯಾಗಿತ್ತು. ಗಂಡ ಮನೆಯಲ್ಲಿದ್ದಾಗ ಆತನೊಂದಿಗೆ ಅತ್ಯಂತ ಪ್ರೀತಿಯಿಂದ ವರ್ತಿಸುವ ಹಾಗೆ ನಟಿಸುವುದು, ಆತ ರಾತ್ರಿ ಕೆಲಸಕ್ಕೆ ಹೋಗುತ್ತಲೂ ಇನ್ನೊಬ್ಬನೊಂದಿಗೆ ವ್ಯಭಿಚಾರ ಮಾಡುವುದು. ಥೂ ಥೂ ಅನ್ನಿಸುತಿತ್ತು ನನಗೆ. ಕೇವಲ ಆ ಹೆಣ್ಣುಮಗಳ ಬಗ್ಗೆ ಮಾತ್ರವಲ್ಲ, ಹೆಣ್ಣು ಗಂಡಿನ ಆ ಸಂಬಂಧದ ಬಗೆಗೇ ತಿರಸ್ಕಾರ ಬರುತ್ತಿತ್ತು. ನಾನೆಂದೂ ಮದುವೆಯಾಗಬಾರದು, ಇಂಥ ಹೆಣ್ಣುಗಳ ಮೋಸದ ಬಲೆಗೆ

ತೊಡಕಿಕೊಂಡು ಆಯುಷ್ಯ ಹಾಳುಮಾಡಿಕೊಳ್ಳಬಾರದು ಎಂಬ ನಿರ್ಧಾರ ಎದೆಯಲ್ಲಿ ಮೂಡುತಿತ್ತು.

"ನನ್ನ ಆ ನಿರ್ಧಾರವನ್ನು ಬಲಪಡಿಸುವಂಥ ಘಟನೆಯೊಂದು ಕೆಲ ದಿನಗಳಲ್ಲೇ ನಡೆಯಿತು. ಆ ಹೆಣ್ಣು ಮಗಳು ಒಂದು ರಾತ್ರಿ ತನ್ನ ಗೆಳೆಯು ನನ್ನು ಕಟ್ಟಿಕೊಂಡು ಓಡಿಹೋದಳು. ಹೋದವಳು ಹೋದಳು, ಆ ಮಗು ವನ್ನು ಜೊತೆಗೆ ತೆಗೆದುಕೊಂಡಾದರೂ ಹೋದಳೆನ್ನುತ್ತೀರಾ? ಅದೂ ಇಲ್ಲ. ಮೂರು ವರ್ಷಗಳ ಆ ಎಳೆಯ ಮಗುವನ್ನು ರಾತ್ರಿ ಆ ಮನೆಯಲ್ಲೇ ಬಿಟ್ಟು ಹಾಗೇ ಓಡಿಹೋಗಿದ್ದಳು ನೋಡಿರಿ ಆ ಹೃದಯಹೀನ ಹೆಣ್ಣು...."

"ಹೀಗೆಲ್ಲಾದರೂ ಆದೀತೇ ಶಿವಮೂರ್ತಿ? ಹೆತ್ತ ತಾಯಿಗೆ ತನ್ನ ಮಗುವೆಂದರೆ ಪ್ರಾಣಕ್ಕಿಂತ ಹೆಚ್ಚು. ಅದನ್ನು ಬಿಟ್ಟು ಹೋಗುವುದೂ ಉಂಟೇ?" ಎಂದು ಕೇಳಿದ್ದರು ಸ್ವಾಮಿಗಳು.

ಶಿವಮೂರ್ತಿ ಕಟುನಗೆಯೊಂದಿಗೆ ಹೇಳಿದ್ದ :

"ಎಲ್ಲಾ ಉಂಟು ಸ್ವಾಮಿ. ಈ ದುಷ್ಟ ಪ್ರಪಂಚದಲ್ಲಿ ಏನೆಲ್ಲವೂ ನಡೆಯುತ್ತದೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ಮಿಂಡನೇ ಹೆಚ್ಚು ಇಂಥ ಹೆಣ್ಣುಗಳಿಗೆ. ಮಕ್ಕಳನ್ನು ಬಿಸುಟ ಮಿಂಡನನ್ನು ಕಟ್ಟಿಕೊಂಡು ಓಡಿಹೋದ ಹೆಂಗಸರಿಗೇನೂ ಕೊರತೆಯಿಲ್ಲ ಈ ಜಗತ್ತಿನಲ್ಲಿ. ನನಗೂ ಮೊದಲು ನಿಮ್ಮಹಾಗೇ ಆಶ್ಚರ್ಯವಾಗಿತ್ತು. ಎಳೆ ಮಗುವನ್ನು ಹಾಗೆ ಬಿಟ್ಟು ತಾಯಿಯಾದವಳು ಹೋಗುವುದುಂಟೇ—ಎಂದು. ಆದರೆ ಕಣ್ಣುಗಳೆ ದುರಿಗೇ ಈ ಘಟನೆ ನಡೆದಿರುವಾಗ ನಂಬದಿರಲು ಸಾಧ್ಯವೇ? ಬೆಳಗಾಗುವು ದರೊಳಗಾಗಿ ಆ ಸುದ್ದಿ ಓಣಿಯವರಿಗೆಲ್ಲ ಗೊತ್ತಾಯಿತು. ಬೆಳಗಿನ ಜಾವ ದಲ್ಲಿ ಆ ಮಗು ಎಚ್ಚರತ್ತುಕೊಂಡು ತಾಯಿಗಾಗಿ ಅಳತೊಡಗಿದಾಗ ನೆರೆಹೊರೆ ಯವರಿಗೂ ಎಚ್ಚರವಾಯಿತು. ತಾಯಿಯನ್ನು ಕಾಣದೆ ಆ ಮಗು ಬಲವಾಗಿ ಕೂಗಿಕೊಳ್ಳುತ್ತಿತ್ತು. ನಾನೂ ಎದ್ದು ಹೋಗಿ ನೋಡಿದೆ. ನೆರೆಹೊರೆಯ ವರೂ ಸೇರಿದ್ದರು. ಪಾಪ, ಆ ಮಗುವಿನ ರೋದನವನ್ನು ನೋಡಿದರೆ ಯಾರ ಕರುಳಾದರೂ ಮರುಗುವಂತಿತ್ತು. "ಅವ್ವಾ, ಅವ್ವಾ" ಎಂದು ಹಲು ಬುತ್ತಿತ್ತು ಅದು. ಅವ್ವನೆನ್ನಿಸಿಕೊಂಡ ಆ ಮಹಾರಾಯಿತಿ ಗೆಣೆಯನನ್ನು ಕಟ್ಟಿಕೊಂಡು ಆ ಮಗುವನ್ನು ಪರದೇಶಿಯನ್ನಾಗಿಸಿ ಹೊರಟುಹೋಗಿ

ನೆರೆದವರೆಲ್ಲ ಕಣ್ಣಲ್ಲಿ ನೀರು ತಂದರು. ನನಗೂ ಕಣ್ಣೀರು ಬಂದಿತ್ತು. ಯಾರು ಎತ್ತಿಕೊಳ್ಳಹೋದರೂ ಬರುತ್ತಿರಲಿಲ್ಲ ಆ ಮಗು. ಒಂದೇ ಸಮನೆ ಅಮ್ಮ ಅಮ್ಮ ಎಂದು ಒರಲುತ್ತಿತ್ತು. ಅಷ್ಟರಲ್ಲಿ ಅದರ ತಂದೆಯೂ ಬಂದ. ನಡೆದುದೇನೆಂಬುದು ಗೊತ್ತಾಗುತ್ತಲೂ ಆತ ತನ್ನ ಮಗುವನ್ನು ತಬ್ಬಿಕೊಂಡು ಕಂಬನಿ ಸುರಿಸತೊಡಗಿದ.

"ಆ ಘಟನೆ ಜರುಗಿದಂದಿನಿಂದ ಹೆಣ್ಣೆಂದರೆ ನನ್ನ ಮನಸ್ಸು ಇಶ್ಶಿ ಎನ್ನುತ್ತಿತ್ತು. ಹೆಣ್ಣಿನ ಮೋಹಕ್ಕೆ ಸಿಲುಕದೆ ಸಾಧ್ಯವಿದ್ದಷ್ಟು ಹೆಚ್ಚಾಗಿ ಓದಿ ಯಾವುದೊಂದು ಒಳ್ಳೆಯ ಕೆಲಸದಲ್ಲಿ ತೊಡಗಿಕೊಂಡು ವಿವೇಕಾನಂದರ ಹಾಗೆ ಆಜನ್ಮ ಬ್ರಹ್ಮಚಾರಿಯಾಗಿರಬೇಕೆಂದು ನಿರ್ಧರಿಸಿದ್ದೆ. ಸರಸುವಿನ ಪರಿಚಯವಾಗದಿದ್ದಲ್ಲಿ ನನ್ನ ಆ ನಿರ್ಧಾರವೂ ಹಾಗೆಯೆ ಸ್ಥಿರವಾಗಿರುತ್ತಿದ್ದಿತು. ಆದರೆ—ಯಾವುವೋ ವಿಷಗಳಿಗೆಯಲ್ಲಿ ಆಕೆಯೊಂದಿಗೆ ಪರಿಚಯವಾಯಿತು. ದಯೆ, ಕಾರುಣ್ಯಗಳನ್ನು ವ್ಯಕ್ತಗೊಳಿಸಿ ಆಕೆ ನನ್ನನ್ನು ಆಕರ್ಷಿಸಿಕೊಂಡಳು. ನನಗರಿಯದಂತೆಯೆ ನಾನು ನನ್ನ ನಿರ್ಧಾರದಿಂದ ಸರಿಯುತ್ತಿದ್ದೆ. ಆ ಜಾತ್ರೆಯ ರಾತ್ರಿ ಅಕಸ್ಮಾತ್ತಾಗಿ ಏನೇನೋ ನಡೆದುಹೋಯಿತು. ನಾನು ಜಾರಿಬಿಟ್ಟೆ. ಬ್ರಹ್ಮಚರ್ಯದ ಪ್ರತಿಜ್ಞೆ ಮುರಿದುಹೋಯಿತು. ಸರಸುವಿನೊಂದಿಗೆ ನಗರಕ್ಕೆ ಹೋಗಬೇಕಾಯಿತು. ಸರಸು ಎಲ್ಲ ಹೆಂಗಸರ ಹಾಗಲ್ಲ, ಆಕೆ ವಿಶುದ್ಧ ಮನಸ್ಸಿನವಳು, ಕರುಣಾಮಯಿ ಎಂದೆಲ್ಲ ಭಾವಿಸಿದ್ದೆ. ಅದೆಲ್ಲವೂ ಭ್ರಮೆಯಾಯಿತು. ಎಲ್ಲರಂತೆ ಆಕೆಯೂ ಹೆಂಗಸೇ ಎಂಬುದನ್ನು ಮರೆತುಬಿಟ್ಟಿದ್ದೆ. ನಗರದಲ್ಲಿ ತುಂಬ ಕಷ್ಟ ಪಡಬೇಕಾಯಿತು. ಆಕೆಯಿಂದ ಅದು ನೀಗಲಿಲ್ಲ. ಮೊದಲಿನಿಂದ ಶ್ರೀಮಂತಿಕೆಯ ವಾತಾವರಣದಲ್ಲಿ ಬೆಳೆದವಳು. ಬಡತನದ ಬಾಳು ಅಪರಿಚಯವಾಗಿತ್ತು. ಅದನ್ನು ರೂಢಿಸಿಕೊಳ್ಳಲು ಅಗತ್ಯವಾದ ತಾಳ್ಮೆಯೂ ಇರಲಿಲ್ಲ. ಸರಿ. ನಮ್ಮ ಸಂಸಾರ ಕೇವಲ ಕನಸಿನ ಸಂಸಾರವಾಯಿತು. ನನ್ನ ಕಣ್ಣು ತೆರೆಯಿತು. ಮೋಹದ ಪರದೆ ಹರಿದುಬಿತ್ತು."

"ಆಕೆಯನ್ನು ನೀನು ಪ್ರೀತಿಸಲಿಲ್ಲವೇ ಮೂರ್ತಿ ?"

"ಪ್ರೀತಿ ? ಹೌದು. ನನ್ನಮಟ್ಟಿಗೆ ನಾನು ಆಕೆಯನ್ನು ಪ್ರೀತಿಸಿದ್ದು ನಿಜ. ಆದರೆ—ಆಕೆಯಿಂದಲೂ ಅದೇ ಬಗೆಯ ವಿಶುದ್ಧ ಪ್ರೀತಿ ಲಭಿಸಲಿಲ್ಲ.

ನನ್ನ ಪ್ರೀತಿಗೆ ಪ್ರತಿಯಾಗಿ ನನಗೆ ದೊರೆತದ್ದು ಅಂಥ ವಿಶ್ವಾಸಘಾತ. ಸರಸು ಕಾಲು ಜಾರಲು ಅನೇಕ ಕಾರಣಗಳಿದ್ದಿರಬಹುದು. ಆದರೂ–ಕಾಲು ಜಾರಿದ್ದೇನೂ ಸುಳ್ಳಲ್ಲವಲ್ಲ? ಪ್ರೀತಿಯೆಂಬ ವಸ್ತು ಇಷ್ಟು ಅಗ್ಗವಾಯಿತೇ ಸ್ವಾಮಿಜೀ? ಆ ಗಂಗಾಧರಶಾಸ್ತ್ರಿಯ ಹೆಂಡತಿ ಲಲಿತಳ ವಿಷಯ ನಿಮಗಾಗಲೆ ಹೇಳಿದೆನಲ್ಲ? ಆಕೆಯ ಪ್ರೀತಿಯೂ ವಿಲಕ್ಷಣವಾದದ್ದೇ. ನನ್ನನ್ನು ರಾತ್ರಿ ರೈಲಿಗೆ ತನ್ನ ತವರಿಗೆ ಕರೆದೊಯ್ದು ಬಲಾತ್ಕಾರದಿಂದಲೇ ನನ್ನೊಂದಿಗೆ ಸವಡಿಸಿಯಾದ ತರುವಾಯ ಆಕೆ ಹೇಳುತ್ತಾಳೆ: ನಿಮ್ಮನ್ನೆಷ್ಟು ಪ್ರೀತಿಸುತ್ತೇನೆ ನಾನು! ನೀವೂ ನನ್ನನ್ನು ಪ್ರೀತಿಸಬೇಕು, ಕೊನೆಯವರೆಗೂ ಪ್ರೀತಿಸಬೇಕು–ಎಂದು. ಆ ಮಾತು ಕೇಳಿ ನನಗೆ ವಿಪರೀತ ನಗೆ ಬಂದಿತ್ತು. ಈ ಲೈಂಗಿಕ ಸಂಬಂಧಕ್ಕೇ ಪ್ರೀತಿಯೆನ್ನುತ್ತಾರೆಯೇ ಸ್ವಾಮೀಜೀ? ಆಕೆ ಇನ್ನೊಬ್ಬರ ಹೆಂಡತಿ, ನಾನು ಇನ್ನೊಬ್ಬಳ ಗಂಡ. ನಮ್ಮಿಬ್ಬರ ಕೂಟಕ್ಕೆ ಪ್ರೀತಿಯೆಂದು ಕರೆಯಲು ಸಾಧ್ಯವೇ ಸ್ವಾಮಿಜೀ? ನಾನಿತ್ತ ಬರುವುದಕ್ಕೆ ಮೊದಲು ನಗರದಲ್ಲಿ ಆಕೆ ಭೆಟ್ಟಿಯಾಗಿದ್ದಳು. ಸರಸುವಿಗಾಗಿ ಕೊರಗದೆ, ತಮ್ಮ ಆಫೀಸಿಗೆ ಬಂದು ತಮ್ಮ ಮನೆಯಲ್ಲೇ ಊಟ ಮಾಡಿಕೊಂಡು ಅಲ್ಲಿಯೇ ಸುಖವಾಗಿ ಇರಬೇಕೆಂದೂ ಅದಕ್ಕೆ ಶಾಸ್ತ್ರಿಯ ಆಕ್ಷೇಪಣೆಯೇನೂ ಬರಲಾರದೆಂದೂ ಹೇಳಿದ್ದಳು. ಅದೆಂಥ ಸಂಸಾರ ಅವರದು ಸ್ವಾಮಿಜೀ? ಆತ, ಗಂಡನೆನ್ನಿಸಿಕೊಂಡವ ಆಶ್ರಮದಲ್ಲಿನ ವಿಧವೆಯೊಬ್ಬಳೊಂದಿಗೆ ಮಲಗುತ್ತಾನೆ. ಈಕೆ, ಆತನ ಹೆಂಡತಿಯಾದವಳು ನನ್ನಂಥ ಯುವಕನೊಂದಿಗೆ ಮಲಗುತ್ತಾಳೆ. ಇಬ್ಬರಿಗೂ ಅದರ ಬಗ್ಗೆ ಏನೂ ಅನ್ನಿಸುವುದಿಲ್ಲ. ಇದೆಂಥ ಪ್ರಪಂಚ ಸ್ವಾಮಿಜಿ......! ಥೂ ಥೂ..... ಈ ಬದುಕಿನಲ್ಲಿ ಏನೂ ಹುರುಳಿಲ್ಲ. ಎಲ್ಲವೂ ತುಚ್ಛ....ಎಲ್ಲವೂ ಹೇಯ....ಎಲ್ಲವೂ ಹೊಲಸು. ಘನಮಠ ಶಿವಯೋಗಿ ಹೇಳಿದ ಮಾತು ಎಷ್ಟು ನಿಜ!

ಮೃತ್ಯುಗನ್ನಿಕೆಯುರರ್ಥದಾಸೆಯುರು
ಮರ್ತ್ಯದೊಳಗೆ ಹಿತವೈರಿಯುರು
ಭ್ರಾತೃ ಮನುಜರೋಳ್ ಬೆರೆತು ಬಹಳ ದು-
ಷ್ಕೃತ್ಯ ವರ್ತನನಿ ನಟಿಸುವರು."

ಶಿವಮೂರ್ತಿ ಆ ಪದ್ಯ ಹೇಳುತ್ತಲೂ ಸ್ವಾಮಿಗಳು ಮುಗುಳುನಗೆಯೊಂದಿಗೆ ಕೇಳಿದ್ದರು :

"ಈ ಬೈರಾಗಿಯ ಪದ್ಯಗಳನ್ನು ಎಲ್ಲಿ ಕಲಿತೆ ಶಿವಮೂರ್ತಿ?"

"ನಾನು ಚಿಕ್ಕವನಾಗಿದ್ದಾಗ ನಮ್ಮ ಹಳ್ಳಿಯಲ್ಲೊಬ್ಬ ಮುದುಕನಿದ್ದ. ಆತ ಶಿವಯೋಗಿಗಳ ಪದ್ಯಗಳನ್ನೆಲ್ಲಾ ಹಾಡುತ್ತಿದ್ದ. ನಾನೂ ಕಲಿತುಕೊಂಡಿದ್ದೆ. ಆತನಿಗೂ ಹೆಣ್ಣು ಅಂದರೆ ಬಹಳ ತಿರಸ್ಕಾರ. ಮನುಷ್ಯನನ್ನು ಹಾಳುಮಾಡುವ ಮುಖ್ಯ ವಸ್ತುವೆಂದರೆ ಹೆಣ್ಣೇ ಸರಿ, ಅದರಿಂದ ದೂರವಿದ್ದಷ್ಟೂ ಒಳ್ಳೆಯದು—ಎಂದೆಲ್ಲ ಆತ ನನಗೆ ಉಪದೇಶಿಸುತ್ತಿದ್ದ. ಚಿಕ್ಕವನಾಗಿದ್ದಾಗ ನನಗೆ ಆ ಮಾತಿನ ಅರ್ಥ ತಿಳಿಯುತ್ತಿರಲಿಲ್ಲ. ವಯಸ್ಸು ಹೆಚ್ಚಿದ ಹಾಗೆಲ್ಲ ತಿಳಿಯತೊಡಗಿತು. ದಿನ ಕಳೆದ ಹಾಗೆ ಆತನ ಮಾತುಗಳ ಸತ್ಯತೆ ಅನುಭವಕ್ಕೆ ಬಂದಿತು. ಘನಮಠ ಶಿವಯೋಗಿ ಹಾಡಿರುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಅದೊಂದು ನಿಷ್ಠುರ ಸತ್ಯ."

"ಪೂರಾ ಸತ್ಯ ಎಂದು ಹೇಳುವುದಕ್ಕಿಂತ ಅರ್ಧ ಸತ್ಯ ಎಂದು ಹೇಳುವುದು ಸರಿಯಾದೀತು. ಭ್ರಾತೃ ವನುಜರೊಳು ಬೆರೆಯಲೂ ಹೇಸುವುದಿಲ್ಲ ವನಿತೆಯರು ಎಂದು ಶಿವಯೋಗಿ ಹೇಳುತ್ತಾರೆ. ಆದರೆ ಅವರು ಹಾಗೆ ಬೆರೆಯುವದರಲ್ಲಿ ಕೇವಲ ಅವರ ತಪ್ಪೇ ಇರುವುದಿಲ್ಲ, ಭ್ರಾತೃ ವನುಜರ ತಪ್ಪೂ ಇರುತ್ತದೆಂಬುದನ್ನು ಶಿವಯೋಗಿ ಯೋಚಿಸಿಲ್ಲ. ಹೆಣ್ಣು ಕಾಲು ಜಾರುವುದಕ್ಕೆ ಹಲವಾರು ಕಾರಣಗಳಿರುತ್ತವೆ. ಆಕೆಯನ್ನು ಸನ್ಮಾರ್ಗದಿಂದ ಈಚೆಗೆಳೆದು ಪಾಪದ ಕೂಪಕ್ಕೆ ಬೀಳಿಸಲು ಕಾಮುಕರು ಪ್ರಯತ್ನಿಸುತ್ತಿರುತ್ತಾರೆ. ಎಷ್ಟೋ ಸಲ ತನ್ನ ಮನಸ್ಸಿಗೆ ವಿರುದ್ಧವಾಗಿ ಆಕೆ ಅವರ ಬಲೆಗೆ ಬೀಳುವ ಸಂದರ್ಭ ಬರುತ್ತದೆ."

"ಅದು ಹೇಗಾದೀತು ಸ್ವಾಮಿಜಿ? ತನ್ನ ಇಚ್ಛೆಗೆ ವಿರುದ್ಧವಾಗಿ ಯಾರನ್ನೂ ಹತ್ತಿರ ಸೇರಿಸಲಾರಳು ಹೆಂಗಸು."

"ಕೆಲವೊಂದು ಸಲ ಇಚ್ಛೆಯಿಲ್ಲದಿದ್ದರೂ ಸೇರಿಸಲೇಬೇಕಾದ ಪ್ರಸಂಗ ಬರುತ್ತದೆ ತಮ್ಮ. ನಿನಗೆ ಹೆಚ್ಚು ಅನುಭವವಿಲ್ಲ. ಆದ್ದರಿಂದ ಹೀಗೆಲ್ಲ ಮಾತನಾಡುತ್ತೀಯಾ. ನಾನು ನಿನಗಿಂತ ವಯಸ್ಸಾದವ. ಈ ಪ್ರಪಂಚದ

ಅನುಭವವೂ ಸಾಕಷ್ಟಿದೆ. ಇಂಥದೊಂದು ಪ್ರಸಂಗದಲ್ಲಿ ಒಬ್ಬ ಹೆಣ್ಣು ಮಗಳು ಸಿಲುಕಿ ಬೀಳಲು ನಾನೇ ಕಾರಣನಾಗಿದ್ದೆ."

ಸ್ವಾಮಿಗಳ ಆ ಮಾತಿನಿಂದಾಗಿ ಶಿವಮೂರ್ತಿ ತಬ್ಬಿಬ್ಬಾಗಿ ನುಡಿದಿದ್ದ: "ಇದೇನು ಹೇಳುತ್ತೀರಿ ಸ್ವಾಮೀಜೀ ?, ನೀವು ? ನೀವು ಇಂಥ ಪ್ರಸಂಗದಲ್ಲಿ? ಛೆ....ಛೆ....ನೀವು ಚೇಷ್ಟೆಗೆ ಹೇಳುತ್ತಿಲ್ಲವಷ್ಟೇ ಇದನ್ನೆಲ್ಲ ?"

"ಚೇಷ್ಟೆಯಲ್ಲ ತಮ್ಮ. ನಿಜಕ್ಕೂ ನಡೆದುದನ್ನೇ ಹೇಳುತ್ತಿದೇನೆ. ನಿನ್ನೆದುರಿಗೆ ಸುಳ್ಳೇಕೆ ಆಡಬೇಕು ? ಈ ಪ್ರಪಂಚವೆಂದರೆ ಹೀಗೇ. ತೊಡಕು, ತೊಂದರೆ, ತಾಪತ್ರಯ ಇರತಕ್ಕದ್ದೇ. ಮೋಹ, ಕಾಮಗಳೂ ಹಾಗೆಯೆ. ಎಂಥವರನ್ನೂ ಬಿಟ್ಟಿಲ್ಲ ಅವು. ನನ್ನನ್ನೂ ಬಿಟ್ಟಿರಲಿಲ್ಲ....."

"ನಿಮ್ಮನ್ನೂ ?"

"ಹೌದು, ನನ್ನನ್ನೂ. ನಾನೆಂದರೆ ಏನೆಂದು ತಿಳಿದಿದ್ದೆ ನೀನು ? ಮೋಹ, ಕಾಮ, ರಾಗಗಳಿಂದ ಅಲಿಪ್ತನಾಗಿ ಪೂರ್ಣ ವಿರಾಗಿಯಾಗಿ ನೂರಕ್ಕೆ ನೂರರಷ್ಟು ಬ್ರಹ್ಮಚರ್ಯದಿಂದಿದ್ದ ಆದರ್ಶ ಸ್ವಾಮಿಯೆಂದು ತಿಳಿದಿದ್ದೆಯೊ ಏನು ? ಸಿದ್ಧವೀರಸ್ವಾಮಿಗಳು ಅಡ್ಡದಾರಿ ತುಳಿದ ಬಗ್ಗೆ ನಿನಗೆ ತಿರಸ್ಕಾರ ಬಂದಿರಬಹುದು. ಅವರ ವಯಸ್ಸಿನಲ್ಲಿ ನಾನೂ ಅವರ ಹಾಗೆಯೇ ಅಡ್ಡ ದಾರಿ ತುಳಿದಿರಲಿಕ್ಕಿಲ್ಲ ಎಂದು ಹೇಗೆ ಹೇಳುವೆ? ನಾನು ತರುಣನಾಗಿದ್ದಾಗ ನನಗೂ ಹೆಣ್ಣಿನ ಬಗ್ಗೆ ಆಸೆಯಾಗುತ್ತಿತ್ತು. ಸ್ವಾಮಿಯಾಗಿದ್ದೆನಾದುದರಿಂದ ಅಪಕೀರ್ತಿ ಬಂದೀತೆಂದು ಹೆದರಿ ಮನಸ್ಸನ್ನು ಹೇಗೋ ಬಿಗಿಹಿಡಿದು ಸುಮ್ಮನಿರುತ್ತಿದ್ದೆ. ಆದರೂ ಒಂದು ಸಲ ಕಾಲು ಜಾರಿಯೇ ಬಿಟ್ಟಿತು. ನನ್ನ ಬಗ್ಗೆ ಬಹಳ ಭಕ್ತಿ ಇಟ್ಟುಕೊಂಡಿದ್ದ ಶ್ರೀಮಂತರೊಬ್ಬರಿದ್ದರು. ಅವರ ಹೆಂಡತಿ ಇನ್ನೂ ಯುವತಿ. ಆಕೆಗೂ ನನ್ನ ಬಗ್ಗೆ ತುಂಬ ಭಕ್ತಿ. ಪಾಪ, ಆಕೆ ಸರಲ ಮನಸ್ಸಿನ ಹೆಣ್ಣು ಮಗಳು. ನನ್ನ ಬಗ್ಗೆ ಯಾವ ವಿಕೃತ ಭಾವನೆಯೂ ಆಕೆಗಿರಲಿಲ್ಲ. ನನ್ನನ್ನು ದೇವರೆಂದು ಭಾವಿಸಿ ನನ್ನ ಸೇವೆ ಮಾಡುತ್ತಿದ್ದಳು. ನಾನು ಮಾತ್ರ ಆಕೆಯ ರೂಪಲಾವಣ್ಯಗಳಿಗೆ ಮರುಳಾಗಿ ಆಕೆಯ ಸಹವಾಸಕ್ಕಾಗಿ ಹಾತೊರೆಯುತ್ತಿದ್ದೆ. ಒಂದು ದಿನ ಸಂದರ್ಭ ಬಂತು. ಅವರ ಮನೆಯಲ್ಲಿ ಏನೋ ಸಮಾರಂಭವಿತ್ತು. ನಾನು ಊಟಕ್ಕೆ ಹೋಗಿದ್ದೆ. ರಾತ್ರಿ ಊಟವಾಯಿತು. ಅಷ್ಟರಲ್ಲಿ ಸರಕ್ಕನೆ [illegible]

ತವರು ಬಂದುದರಿಂದ ಆಕೆಯು ಗಂಡ ಆಗಿಂದಾಗಲೇ ಊರಿಗೆ ಹೊರಡಬೇಕಾಯಿತು. ನಾನು ಅಲ್ಲೇ ಮಲಗಿಕೊಂಡಿದ್ದೆ. ಆಳು ಮಕ್ಕಳನ್ನು ಬಿಟ್ಟರೆ ಇನ್ನಾರೂ ಮನೆಯಲ್ಲಿರಲಿಲ್ಲ. ನಾನು ಮಲಗಿದ್ದುದು ಪಡಸಾಲೆಯಲ್ಲಿ. ಒಳಗಿನ ಕೋಣೆಯಲ್ಲಿ ಆಕೆ ಮಲಗಿದ್ದಳು. ಆಳುಗಳೆಲ್ಲ ಹೊರಗಡೆ ಇದ್ದರು. ಮಧ್ಯರಾತ್ರಿಯಲ್ಲಿ ಆಕೆಯನ್ನು ಎಚ್ಚರಿಸಿ ಕುಡಿಯಲು ನೀರು ಕೇಳಿದೆ. ಆಕೆ ಮುಗ್ಧೆ. ಯಾವ ಪಾಪ ವಾಸನೆಯೂ ಆಕೆಯ ಮನಸ್ಸಿನಲ್ಲಿರಲಿಲ್ಲ. ನೀರು ತಂದುಕೊಟ್ಟಳು. ಒಂದು ಕೈಯಲ್ಲಿ ತಂಬಿಗೆ ತೆಗೆದುಕೊಂಡು ಇನ್ನೊಂದು ಕೈಯಿಂದ ಆಕೆಯನ್ನು ಬರಸೆಳೆದುಕೊಂಡು ದೀಪ ಆರಿಸಿದೆ. ಆಕೆ ಸ್ವಲ್ಪ ಹೊತ್ತು ಒದ್ದಾಡಿದಳು. ಬಾಯಿ ಬಿಟ್ಟು ಆಕ್ರೋಶ ಮಾಡಲಿಲ್ಲ. ಕೂಗಿದಲ್ಲಿ ನನ್ನ ಮರ್ಯಾದೆ ಹಾಳಾಗುವುದಲ್ಲಾ ಎಂಬ ಭೀತಿಯಿಂದಲೇ ಆಕೆ ಸುಮ್ಮನಿದ್ದುದು ಸ್ಪಷ್ಟವಾಗಿತ್ತು. ನನ್ನ ಮಾನವನ್ನು ಕಾಪಾಡುವುದಕ್ಕಾಗಿ ತನ್ನ ಮಾನವನ್ನೊ ಬಲಿಕೊಟ್ಟಳಾಕೆ. ಆದರೆ ನಾನು ಪಾಪಿ, ಆಗ ಬೇರಾವ ವಿಚಾರವೂ ಮನಸ್ಸಿನಲ್ಲಿ ಸುಳಿಯಲು ಸಾಧ್ಯವಿರಲಿಲ್ಲ. ಆಕೆಯನ್ನು ಅನುಭೋಗಿಸಬೇಕು, ಬಲು ದಿನಗಳ ಆ ಉಗ್ರ ಬಯಕೆಯನ್ನೊಮ್ಮೆ ತೀರಿಸಿಕೊಳ್ಳಬೇಕು ಎಂಬುದೊಂದೇ ವಿಚಾರ. ತೀರಿಸಿಕೊಂಡದ್ದೂ ಆಯಿತು. ಆ ಕ್ಷಣಕ್ಕೆ ತೃಪ್ತಿಯಾದಂತಾಯಿತು ನನಗೆ. ಆಕೆ ಎದ್ದು ತನ್ನ ಕೋಣೆಗೆ ಹೊರಟುಹೋದಳು. ನಾನು ಮತ್ತೆ ಹಾಸಿಗೆಯ ಮೇಲುರುಳಿದೆ. ತಲೆದಿಂಬೆಲ್ಲವೂ ಒದ್ದೆಯಾಗಿತ್ತು ಶಿವಮೂರ್ತಿ, ಆಕೆಯ ಕಣ್ಣೀರಿನಿಂದ ಒದ್ದೆಯಾಗಿತ್ತು. ಅದು ಗೊತ್ತಾಗುತ್ತಲೂ ನನ್ನ ಕರುಳು ಹಿಂಡಿದಂತಾಯಿತು. ಸಾಧ್ವಿಯೊಬ್ಬಳನ್ನು ಆಕೆಯ ಮನಸ್ಸಿಗೆ ವಿರುದ್ಧವಾಗಿ ನಾನು ಕೆಡಿಸಿದೆ ಎಂದುಕೊಂಡು ನನ್ನನ್ನು ನಾನೇ ಶಪಿಸಿಕೊಂಡೆ. ಅಂದಿಸಿಂದ ನಾನು ಅವರ ಮನೆಗೆ ಕಾಲು ಹಾಕಲಿಲ್ಲ. ಆಕೆಯೂ ನನ್ನನ್ನು ನೋಡಲು ಬರಲಿಲ್ಲ. ಅಂದಿಸಿಂದಲೇ ಆಕೆ ಹಾಸಿಗೆ ಹಿಡಿದು ಮಲಗಿದಳು. ಮೇಲಕ್ಕೇಳಲಿಲ್ಲ. ನನ್ನ ವರ್ತನೆಯಿಂದಾಗಿ ಆಕೆಯ ಮನಸ್ಸಿನ ಮೇಲೆ ಬಲು ಘೋರವಾದ ಆಘಾತವಾಗಿದ್ದುದು ಸ್ಪಷ್ಟವಾಗಿದ್ದಿತು. ಮನೋರೋಗದಿಂದ ನರಳಿ ನರಳಿ ಒಂದು ದಿನ ಕಣ್ಣು ಮುಚ್ಚಿದಳು ಶಿವಮೂರ್ತಿ. ಆಕೆಯ ಮೃತ್ಯುವಿನೊಂದಿಗೆ ನನ್ನ ಕಾಮವೂ ಮೃತವಾದಂತಾಯಿತು. ಆಕೆಯನ್ನು ನಾನೇ ಕೊಂದೆ

ಎಂಬ ಭಾವನೆ ಬೇರೂರಿತು ಮನಸ್ಸಿನಲ್ಲಿ. ಪ್ರಪಂಚವೆಲ್ಲ ಬೇಸರವಾಯಿತು, ಮಠ ಬೇಡವಾಯಿತು. ದುಡ್ಡು ಬೇಡವಾಯಿತು. ಅಂದಿನಿಂದ ನಾನು ನಿಜವಾದ ವಿರಕ್ತನಾದೆ ಶಿವಮೂರ್ತಿ. ಇಂಥ ಕಟು ಅನುಭವ ಬರದೆ ಇದ್ದರೆ ಮನುಷ್ಯನಿಗೆ ನಿಜವಾದ ವಿರಕ್ತಿಯೂ ಬರುವುದಿಲ್ಲವೊ ಏನೊ."

"ಹಾಗೇ ಇರಬೇಕು ಬುದ್ಧಿ,"

ಕೆಲ ಹೊತ್ತು ಇಬ್ಬರ ಮುಖದಿಂದಲೂ ಮಾತು ಹೊರಟಿರಲಿಲ್ಲ.

ಮತ್ತೆ ಸ್ವಾಮಿಗಳೇ ಧ್ವನಿಯೆತ್ತಿ ಮಾತನಾಡತೊಡಗಿದ್ದರು.

"ಘನಮಠ ಶಿವಯೋಗಿಗೆ ನನ್ನಂಥ ಅನುಭವ ಬಂದಿದ್ದಲ್ಲಿ ಆತ ಈ ಬಗೆಯ ಪದ್ಯ ರಚಿಸುತ್ತಿರಲಿಲ್ಲ. ಹೆಣ್ಣನ್ನು ತಿರಸ್ಕರಿಸುವುದು ತಪ್ಪು. ಯಾರು ಯಾರನ್ನೂ ತಿರಸ್ಕರಿಸಬಾರದು. ಹೆಣ್ಣನ್ನು ಹೀಗಳೆಯುವುದೆಂದರೆ ನಿಸರ್ಗವನ್ನೇ ಹೀಗಳೆದ ಹಾಗೆ. ಇಷ್ಟವಿದ್ದರೆ ಹೆಣ್ಣಿನೊಂದಿಗೆ ಕೂಡಿ ಬಾಳ ಬೇಕು. ಇಷ್ಟವಿಲ್ಲವಾದರೆ ಜನರ ಸೇವೆಯಲ್ಲಿ ಆಯುಷ್ಯವನ್ನು ಕಳೆಯ ಬೇಕು. (ಹೆಣ್ಣು ಹೆಣ್ಣೆಂದು ಬೀಳುಗಳೆಯುವುದರಿಂದ ಏನು ಪ್ರಯೋಜನ? ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ ಎಂದು ಅಲ್ಲಮ ಹೇಳಿರುವು ದರಲ್ಲಿ ಬಲು ಅರ್ಥವಿದೆ.")

"ಏನೋ ಬಿಡಿರಿ. ನನಗೆ ಯಾವುದೂ ಸ್ಪಷ್ಟವಾಗಿ ಹೊಳೆಯಲೊಲ್ಲದು. ಯಾವುದು ಮಾಯೆಯೊ, ಯಾವುದು ಸತ್ಯವೊ. ಎಲ್ಲಾ ವಿಚಿತ್ರವೇ ಇದೆ. ನಾವು ಈ ಜಗತ್ತಿನಲ್ಲಿ ಯಾಕೆ ಹುಟ್ಟಿ ಬಂದೆವೊ, ಇಷ್ಟೆಲ್ಲ ಕಷ್ಟಗಳನ್ನು ಯಾಕೆ ಅನುಭವಿಸುವೆವೊ, ಹಠಾತ್ತಾಗಿ ಒಮ್ಮೆ ಯಾಕೆ ಸಾಯುವೆವೊ! ಸಾಯುವ ವರೆಗೂ ಇದೆಲ್ಲಾ ಚೆಲ್ಲಾಟ. ಸತ್ತಮೇಲೆ ಯಾರಿಗೆ ಯಾರು? ನಾನೆಲ್ಲಿಗೆ ಹೋಗುತ್ತೇನೆ? ನೀವೆಲ್ಲಿಗೆ ಹೋಗುತ್ತೀರಿ? ಯಾರಾದರೂ ಹೇಳಬಲ್ಲರೇ? ಇದೆಲ್ಲಾ ಮಾಯೆಯಲ್ಲದಿನ್ನೇನು? ನಮ್ಮನ್ನೆಲ್ಲ ಗೊಂಬೆಗಳನ್ನಾಗಿ ಮಾಡಿ ಈ ಭೂಮಿಯಲ್ಲಿ ಹುಟ್ಟಿಸಿ ಕೆಲದಿನ ಆಟವಾಡಿಸಿ ಅಳಿಸಿ ನಗಿಸಿ ಅನಂತರ ಮನಸ್ಸು ಬಂದಾಗ ನಮ್ಮನ್ನು ಮಣ್ಣಿಗೆ ದೂಡುತ್ತಾನೆ ಆ ವಿಧಾತ. ಗಂಡು ಒಂದು ಗೊಂಬೆ. ಹೆಣ್ಣು ಒಂದು ಗೊಂಬೆ. ಎರಡೂ ಒಂದನ್ನೊಂದು ನೋಡುತ್ತವೆ. ಹತ್ತಿರ ಬರಲೆಳಸುತ್ತವೆ. ಅದನ್ನೇ ಪ್ರೀತಿಯೆಂದು ಕರೆದು ಕವನ ಕಟ್ಟಿ ಹಾಡುತ್ತವೆ. ಆ ಪ್ರೀತಿಯೆಂಬ ಗುಳ್ಳೆ ಒಡೆದು [illegible]ಗ

ಜೋರಾಗಿ ಅಳುತ್ತವೆ. ಒಂದು ದಿನ ಮಣ್ಣಿನೊಂದಿಗೆ ಮಣ್ಣಾಗಿ ಬೆರೆತು ಹಲ್ಲು ಕಿರಿದು ಬೀಳುತ್ತವೆ. ವಿಚಿತ್ರ ಪ್ರಪಂಚ. ವಿಚಿತ್ರ ಆಟ. ಇದೆಲ್ಲಾ ಮಾಯೆಯಲ್ಲದೆ ಇನ್ನೇನು ಬುದ್ಧೀ ?"

"ವಿಜ್ಞಾನವನ್ನೋದಿಕೊಂಡ ನಿನ್ನಂಥವನೂ ಹೀಗೆ ಹುಚ್ಚು ಹುಚ್ಚಾಗಿ ಮಾತನಾಡುವುದು ಹಾಸ್ಯಾಸ್ಪದ. ದೇಹದಲ್ಲಿ ಪ್ರಾಣವಿರುವ ವರೆಗಂತೂ ಪ್ರಪಂಚ ಸತ್ಯ ತಾನೆ? ಒಂದು ವ್ಯಕ್ತಿ ಸತ್ತ ಮಾತ್ರಕ್ಕೆ ಪ್ರಪಂಚವೆಲ್ಲ ಸಾಯುತ್ತದೆಯೆ? ವ್ಯಕ್ತಿಗಳು ಹುಟ್ಟುತ್ತವೆ, ಸಾಯುತ್ತವೆ. ಪ್ರಪಂಚ ನಡೆದೇ ಇರುತ್ತದೆ. ಚಳಿಗಾಲದಲ್ಲಿ ಗಿಡದ ಎಲೆಗಳೆಲ್ಲಾ ಉದುರಿ ವಸಂತ ಕಾಲದಲ್ಲಿ ಹೊಸವು ಹುಟ್ಟುವುದಿಲ್ಲವೆ? ಹುಟ್ಟು ಸಾವು ನಿಸರ್ಗದ ನಿಯಮ. ಇದರಲ್ಲಿ ಮಾಯೆಯೇನು ಬಂತು? ಸತ್ತ ಮೇಲೆ ಮನುಷ್ಯ ಎಲ್ಲಿ ಹೋಗುತ್ತಾನೆ ಎಂಬ ಪ್ರಶ್ನೆಗೂ ಅರ್ಥವಿಲ್ಲ. ಎಲೆ ಉದುರಿಬಿದ್ದ ಮೇಲೆ ಎಲ್ಲಿ ಹೋಗುತ್ತದೆ? ಕೆಳಗೆ ಬಿದ್ದು ಮಣ್ಣಿನಲ್ಲಿ ಸೇರಿ ಗೊಬ್ಬರವಾಗಿ ಬೇರೆ ಎಲೆಗಳ ಜನನಕ್ಕೆ ಸಹಾಯ ಮಾಡುತ್ತದೆ. ಮನುಷ್ಯನೂ ಹಾಗೆಯೆ. ಮಣ್ಣಿನೊಡನೆ ಸೇರಿ ಗೊಬ್ಬರವಾಗಿ ಬೇರೆ ಜೀವಗಳ ಜನನಕ್ಕೆ ನೆರವಾಗುತ್ತಾನೆ. ಇದರಲ್ಲಿ ಮಾಯೆಯೇನು ಬಂತು? ಮಾಯೆ ಮಾಯೆ ಅಂತ ಸಾವಿರಾರು ವರ್ಷಗಳಿಂದ ಸಾವಿರಾರು ಜನರು ಸುಮ್ಮಸುಮ್ಮನೆ ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಸತ್ತ ಮೇಲೂ ಸಹ ಗೊಬ್ಬರವಾಗಿ ಜನಕ್ಕೆ ಉಪಯುಕ್ತವಾಗುತ್ತದೆ ಈ ದೇಹ. ಬದುಕಿರುವ ವರೆಗೂ ಜನಕ್ಕೆ ಉಪಯುಕ್ತವಾಗುವಂತೆ ಬದುಕಬೇಕಲ್ಲವೆ? ಬಾಳಿನ ತತ್ವಜ್ಞಾನವೆಂದರೆ ಇದೇ ಎಂದು ನನಗೆನ್ನಿಸುತ್ತದೆ. ಅಂತೆಯೆ, ಯಾವ ಭ್ರಮೆಗೂ ಒಳಗಾಗದೆ ಹಳ್ಳಿಗರ ಸೇವೆ ಮಾಡುತ್ತ ಆಯುಷ್ಯವನ್ನು ಸಾರ್ಥಕಗೊಳಿಸಲು ನಿರ್ಧರಿಸಿದ್ದೇನೆ."

"ನೀವು ಹೊರಟಿರುವ ಹಾದಿಯಲ್ಲೇ ನಾನೂ ಬರಬೇಕೆಂದು ನಿರ್ಧರಿಸಿದ್ದೇನೆ."

"ಎಲ್ಲರೂ ನನ್ನ ದಾರಿಯಲ್ಲಿ ಬರಬೇಕಾದ ಅಗತ್ಯವಿಲ್ಲ. ನೀನು ಮದುವೆಯಾದವ. ಸರಸು ಇಂದು ನಾಳೆ ನಿನ್ನನ್ನು ಹುಡುಕಿಕೊಂಡು ಬಂದಾಳು. ಮತ್ತೆ ಆಕೆಯೊಂದಿಗೆ ಸಂಸಾರ ಮಾಡಬೇಕಾದೀತು."

"ಇನ್ನೆಂದೂ ಅದು ಸಾಧ್ಯವಿಲ್ಲ ಸ್ವಾಮೀಜಿ. ಸರಸು ಬಂದು ಅತ್ತು

ಕರೆದು ಗೋಳಿಟ್ಟರೂ ನಾನು ಆಕೆಯೊಂದಿಗೆ ಹೋಗಲಾರೆ. ನನ್ನ ವೈವಾಹಿಕ ಜೀವನವಿಲ್ಲಿಗೇ ಮುಗಿದಂತಾಯಿತು. ಇನ್ನು ಸರಸು ಪೂರಾ ಸ್ವತಂತ್ರಳು. ತನಗೆ ತಿಳಿದಂತೆ ಆಕೆ ಮಾಡಬಹುದು. ಯಾವ ಉತ್ಸಾಹದಿಂದ ಆಕೆಯೊಂದಿಗೆ ಸಂಸಾರ ನಡಸುವುದು ನಾನು? ಅದಕ್ಕೆ ಅವಶ್ಯವಿರುವ ಆ ಬಗೆಯ ಉತ್ಸಾಹವೆಲ್ಲಾ ಸತ್ತುಹೋದಂತಾಯಿತು."

"ಈ ಪಿಟೀಲಿನ ಮೋಹವೊಂದು ಇನ್ನೂ ಹೋಗಿಲ್ಲವಲ್ಲಾ!" ಎಂದು ನಗುತ್ತ ನುಡಿದಿದ್ದರು ಸ್ವಾಮಿಗಳು.

"ಹೌದು. ಇನ್ನೂ ಹೋಗಿಲ್ಲ. ಅದನ್ನೂ ಬಿಡಬೇಕೆಂದು ತುಂಬ ಪ್ರಯತ್ನಿಸಿದೆ. ಆಗಲಿಲ್ಲ. ನಾನು ಹೈಸ್ಕೂಲಿನಲ್ಲಿದ್ದಾಗ ಇವರ ಹುಚ್ಚು ಹಿಡಿಯಿತು ಬುದ್ಧೀ. ನಮ್ಮ ಶಿಕ್ಷಕರೊಬ್ಬರಿಗೆ ನನ್ನ ಮೇಲೆ ಬಹಳ ಪ್ರೀತಿ. ಅವರ ಬಗೆಗೆ ನನಗೂ ಹಾಗೆಯೆ. ಈ ಪಿಟೀಲು ಅವರದು. ಬಹಳ ಸೊಗಸಾಗಿ ಬಾರಿಸುತ್ತಿದ್ದರು. ಕೇಳುತ್ತ ಕುಳಿತರೆ ಎಂಥ ವ್ಯಥೆಯೂ ಮರೆತು ಹೋಗುತ್ತಿತ್ತು. ಪಾಪ, ಅವರ ಪ್ರಕೃತಿ ನೆಟ್ಟಗಿರಲಿಲ್ಲ. ಕ್ಷಯರೋಗದ ಲಕ್ಷಣಗಳಿದ್ದುವು. ಇನ್ನೂ ಮದುವೆಯೂ ಆಗಿರಲಿಲ್ಲ. ರೋಗವನ್ನು ಗುಣಪಡಿಸಿಕೊಳ್ಳಬೇಕೆಂದರೆ ಅವರ ಹತ್ತಿರ ಹೆಚ್ಚು ಹಣವಿರಲಿಲ್ಲ. ಮಾಸ್ತರ ಕೆಲಸದಿಂದ ಸಿಕ್ಕುತ್ತಿದ್ದ ಇಪ್ಪತ್ತೈದು ರೂಪಾಯಿ ಯಾತಕ್ಕಾದೀತು? ಒಂದು ದಿನ ಅವರು ಸತ್ತುಹೋದರು. ಸಾಯುವುದಕ್ಕೆ. ಮೊದಲು ಈ ಪಿಟೀಲನ್ನು ನನಗೆ ಕೊಟ್ಟರು. ಚೆನ್ನಾಗಿ ಬಾರಿಸಲು ಕಲಿತು ಹೆಸರು ಪಡೆಯಬೇಕು ಎಂದೂ ಹೇಳಿದರು. ಕಲಿಯಬೇಕೆಂಬ ಆಸೆಯೇನೋ ಇತ್ತು. ಆದರೆ ಕಲಿಸುವವರಾರು? ಸಂಗೀತಗಾರರ ಹತ್ತಿರ ಹೇಳಿಸಿಕೊಳ್ಳಬೇಕೆಂದರೆ ಹಣವಿರಲಿಲ್ಲ. ಅಂತೂ ಆ ಆಸೆ ಕೈಗೂಡಲಿಲ್ಲ. ಮಾಸ್ತರರ ನೆನಪಾಗಿ ಪಿಟೀಲು ನನ್ನ ಹತ್ತಿರ ಉಳಿಯಿತು. ಮನಸ್ಸಿಗೆ ವ್ಯಥೆಯಾದಾಗಲೆಲ್ಲ ಬಾರಿಸುತ್ತ ಕುಳಿತುಕೊಳ್ಳುತಿದ್ದೆ. ಅದರ ವಿಲಕ್ಷಣ ನಾದದಲ್ಲಿ ಚಿತ್ತವನ್ನು ಮುಳುಗಿಸಿದ ಹಾಗೆಲ್ಲ ಸಮಾಧಾನವಾಗುತಿತ್ತು. ಬರುಬರುತ್ತ ಅದೊಂದು ಚಟವೇ ಆಯಿತು. ಪಿಟೀಲು ಬಾರಿಸುತ್ತ ಕುಳಿತರೆ ಮೈಮೇಲಿನ ಎಚ್ಚರವೂ ತಪ್ಪಿಹೋಗುವವರೆಗೂ ಈ ಹುಚ್ಚು ಹೆಚ್ಚಿತು. ಒಂದು ರಾತ್ರಿ ಪ್ರಚಂಡ ಮಳೆಯಲ್ಲಿ ತೋಯಿಸಿಕೊಳ್ಳುತ್ತಲಿದ್ದರೂ ಅದನ್ನು ಗಮನಿಸದೆ ಹಾಗೇ

ಪಿಟೀಲು ಬಾರಿಸುತ್ತ ಕುಳಿತಿದ್ದೆ. ಅದೇ ಸಂದರ್ಭದಲ್ಲಿ ಸರಸುವಿನೊಂದಿಗೆ ಮೊದಲ ಬಾರಿ ಭೆಟ್ಟಿಯಾದದ್ದು. ಅವಳನ್ನೂ ನನ್ನನ್ನೂ ಒಂದುಗೂಡಿಸಲು ಈ ಪಿಟೀಲೇ ಕಾರಣವಾಯಿತೊ ಏನೊ...."

ಸ್ವಾಮಿಗಳು ಮತ್ತೆ ನಕ್ಕುಬಿಟ್ಟಿದ್ದರು.

"ಹೌದು. ಇದೂ ಒಂದು ಹುಚ್ಚು ಅಷ್ಟೆ. ಇರಲಿ. ಅದರಿಂದ ಹಾನಿಯೇನೂ ಇಲ್ಲವಲ್ಲ?" ಎಂದು ಹೇಳಿದ್ದರು. "ಮುಂದೇನು ಮಾಡಬೇಕೆಂದಿರುವೆ ಶಿವಮೂರ್ತಿ?"

"ನಾನಾಗಲೆ ಹೇಳಿದೆನಲ್ಲ ಬುದ್ಧೀ? ಇಲ್ಲಿಯೆ ನಿಮ್ಮೊಂದಿಗೆ ಇರುತ್ತೇನೆ. ನೀವು ಮಾಡುತ್ತಿರುವ ಕೆಲಸವನ್ನೇ ನಾನೂ ಮಾಡುತ್ತೇನೆ."

"ಇಲ್ಲಿ ಅಷ್ಟೊಂದು ಕೆಲಸವಿಲ್ಲ. ಈ ಐದಾರು ಹಳ್ಳಿಗಳಿಗೆ ನಾನೊಬ್ಬನೇ ಸಾಕು. ಬೇರೆ ಹಳ್ಳಿಗಳಲ್ಲೂ ಸಾಕಷ್ಟು ಕೆಲಸವುಂಟು. ಅಲ್ಲಿ ಯಾರೂ ಇಲ್ಲ. ನೀನು ಹೋಗುತ್ತೀಯಾ?"

"ನೀವು ಹೇಗೆ ಹೇಳುತ್ತೀರೋ ಹಾಗೆ."

"ನಿನಗೆ ಹೇಳಲು ನಾನಾರು ಮೂರ್ತೀ? ಕೆಲಸವೇನೋ ಸಾಕಷ್ಟಿದೆ. ಮಾಡಲು ಜನರಿಲ್ಲ. ಮೊನ್ನೆ ಕಣಿಕೊಪ್ಪದಿಂದ ಎಂಟು ಹತ್ತು ಜನ ಬಡ ರೈತರು ಇಲ್ಲಿಗೆ ಬಂದಿದ್ದರು. ಅವರದು ಇನಾಮುದಾರರ ಹಳ್ಳಿ. ಅಲ್ಲಿನ ಹೊಲಗಳೆಲ್ಲಾ ಇನಾಮುದಾರರವು. ರೈತರೆಲ್ಲ ಲಾವಣಿಗೆ ಮಾಡುವವರು. ಎಷ್ಟೋ ವರ್ಷಗಳಿಂದ ಇನಾಮುದಾರರು ರೈತರನ್ನು ಮನಸ್ವಿಯಾಗಿ ಸುಲಿಯುತ್ತಿರುವರಂತೆ. ಸಾಮಾನ್ಯವಾಗಿ ಆ ಹಳ್ಳಿಯ ಎಲ್ಲಾ ರೈತರ ಮೇಲೂ ಖಟ್ಲೆ ಹಾಕಿರುವರಂತೆ. ಅನೇಕರ ದನಕರುಗಳನ್ನೂ ಜಪ್ತಿ ಮಾಡಿರುವರಂತೆ. ಈ ಸಂದರ್ಭದಲ್ಲಿ ಏನು ಮಾಡಬೇಕೆಂಬುದು ತೋಚದೆ ಅವರೆಲ್ಲಾ ಇಲ್ಲಿಗೆ ಬಂದಿದ್ದರು."

"ನನಗೂ ಒಬ್ಬರು ಭೆಟ್ಟಿಯಾಗಿದ್ದರು ರೈಲಿನಲ್ಲಿ. ಕಣಿಕೊಪ್ಪದವರೇ. ಹಿಂದೆ ನಾನು ತಾಲೂಕು ಕಚೇರಿಯಲ್ಲಿ ಕಾರಕೂನನಾಗಿದ್ದಾಗ ಬಸವಾಣೆಪ್ಪ ಎಂಬ ರೈತನೊಂದಿಗೆ ಪರಿಚಯವಾಗಿತ್ತು. ಆತ ತಮ್ಮೂರಿನ ಕತೆಯನ್ನೆಲ್ಲಾ ಹೇಳಿ ನಾನು ಅಲ್ಲಿಗೆ ಬಂದು ರೈತ ಸಂಘಟನೆ ಮಾಡಬೇಕೆಂದು ಕೇಳಿದ.

ಸ್ವಾಮಿಜಿಯವರನ್ನು ಕಂಡ ಬಳಿಕ ಯಾವುದನ್ನೂ ತಿಳಿಸುತ್ತೇನೆಂದು ಹೇಳಿ ಬಂದೆ."

"ಕಂಡದ್ದಾಯಿತಲ್ಲ? ಮುಂದೆ ಏನು ನಿರ್ಧಾರ?"

"ತಾವು ಹೋಗು ಎಂದರೆ ಹೋಗುತ್ತೇನೆ ಬುದ್ಧಿ."

"ನೀನು ಅಲ್ಲಿಗೆ ಹೋಗುವಂತಾದರೆ ಬಹಳ ಒಳ್ಳೆಯದು. ಆ ಜನರಿಗೆ ದಾರಿ ತೋರಿಸುವವರಾರೂ ಇಲ್ಲ. ಎಲ್ಲರೂ ಅಶಿಕ್ಷಿತರು. ನಿರಕ್ಷರಿಗಳು. ಕಲಿತವರೆಲ್ಲಾ ಪಟ್ಟಣ ಹಿಡಿದು ಕೂತಿದ್ದಾರೆ. ಇತ್ತ ಇವರು ನೂರಾರು ತೊಂದರೆಗಳಲ್ಲಿ ಸಿಲುಕಿ ನರಳುತ್ತಿದ್ದಾರೆ. ಮೊದಲು ಈ ರೈತರನ್ನು ಸಾಹುಕಾರರ ದವಡೆಯಿಂದ ಉಳಿಸಿಕೊಳ್ಳಬೇಕು. ಅದಕ್ಕಾಗಿ ಸಂಘಟಕರು ಬೇಕು. ಪ್ರಪಂಚದಲ್ಲಿ ಬೇರಾವ ಆಸೆಗೂ ಒಳಗಾಗದ ವಿರಾಗಿಗಳ ತಂಡದಿಂದಲೇ ಈ ಕೆಲಸವಾಗಲು ಸಾಧ್ಯ."

"ಹಾಗಾದರೆ ನಾನು ಅಲ್ಲಿಗೇ ಹೋಗುತ್ತೇನೆ ಸ್ವಾಮೀಜಿ."

"ಹಾಗೆಯೇ ಮಾಡು. ಸಂಘಟನೆ ಶಾಂತರೀತಿಯಿಂದ ನಡೆಯಲಿ. ಉದ್ರೇಕ, ಕೋಪ, ಮನಸ್ತಾಪ, ಹೊಡೆದಾಟ, ಬಡಿದಾಟಗಳಿಗೆ ಕೊಂಚವೂ ಆಸ್ಪದ ದೊರೆಯಕೂಡದು. ಅಹಿಂಸೆಯ ಆಳವಿನಲ್ಲೇ ಎಲ್ಲವೂ ನಡೆಯಬೇಕು. ಈ ವಿಷಯ ಬಹಳ ಮಹತ್ವದ್ದು ಶಿವಮೂರ್ತಿ. ಅಗತ್ಯ ಬಿದ್ದಾಗ ನಾನು ಬರುತ್ತೇನೆ."

"ರಾಜಕಾರಣದಲ್ಲಿ ನೀವು ....."

"ರಾಜಕಾರಣವೆಂದರಾದರೂ ಏನು ಬೇರೆ ಇದೆಯೇ ಶಿವಮೂರ್ತಿ? ಮನುಷ್ಯ ತನ್ನನ್ನು ತಾನು ಆಳಿಕೊಳ್ಳುವುದೇ ರಾಜಕಾರಣ. ತನ್ನ ಕಲ್ಯಾಣಕ್ಕಾಗಿಯೇ ತಾನೇ ಮನುಷ್ಯ ಸರಕಾರವನ್ನು ನಿಯಮಿಸುವುದು? ಸಾಮಾನ್ಯ ಜನತೆಯನ್ನು ಸುಲಿದು ಸುಖವಸ್ತುಗಳಾಗಿ ಮೆರೆಯುವ ಜಮೀನುದಾರರಿಗೆ ಎದುರಾಗಿ ಹೋರಾಟ ಹೂಡುವುದು ಅನ್ಯಾಯವೇನೂ ಅಲ್ಲ. ಜನತೆಯ ಬದುಕು ಸಾವಿನ ಪ್ರಶ್ನೆ ಇದು. ರಾಜಕಾರಣವೆಂದು ದೂರ ಸರಿದು ನಿಂತರೆ ನಮ್ಮ ಕರ್ತವ್ಯದ ದಾರಿಯಿಂದ ನಾವು ತೊಲಗಿದಂತಾದೀತು. ಕೇವಲ ಜಡ್ಡಾದವರಿಗೆ ಔಷಧ ಕೊಡುತ್ತ, ಹಳ್ಳಿಗಳಲ್ಲಿನ ಕಸ ಗುಡಿಸುತ್ತ ತಿರುಗಿದರೆ ನಮ್ಮ ಕೆಲಸ ಮುಗಿದಂತಾಗಲಿಲ್ಲ. ಸಮಾಜದ ಶಕ್ತಿಯನ್ನೆಲ್ಲ ಹೀರುತ್ತಿರು

ವಿಷಮತೆಯ ರೋಗಕ್ಕೂ ನಾವು ಔಷಧ ಕೊಡಬೇಕಾಗಿದೆ. ಸಮಾಜದಲ್ಲಿ ದುರ್ಗಂಧ ಹರಡಿರುವ ಭೇದಭಾವಗಳನ್ನೂ ಗುಡಿಸಿ ಶುಚಿಗೊಳಿಸಬೇಕಾಗಿದೆ. ಇದು ನನ್ನ ಕೆಲಸವೂ ಹೌದು, ನಿನ್ನ ಕೆಲಸವೂ ಹೌದು.”

ಆ ರಾತ್ರಿಯನ್ನು ಆಶ್ರಮದಲ್ಲಿ ಕಳೆದು ಮಾರನೆಯ ದಿನವೆ ಶಿವಮೂರ್ತಿ ಕಣಿಕೊಪ್ಪಕ್ಕೆ ಹೊರಟುಹೋಗಿದ್ದ.

ಈ ವಿಷಯವನ್ನೆಲ್ಲ ಸಾದ್ಯಂತವಾಗಿ ವಿವರಿಸಿದ ತರುವಾಯ ಸ್ವಾಮಿಗಳು ಸರಸುವನ್ನು ಕುರಿತು ಕೇಳಿದರು :

“ಅರ್ಥವಾಯಿತೇ ಸರಸೂ, ನಾನೆಂಥ ವಿರಕ್ತನೆಂಬುದು ? ನನ್ನ ಬಗ್ಗೆ ನಿನಗಾಗಲೇ ತಿರಸ್ಕಾರ ಬಂದಿರಬಹುದಲ್ಲ ?”

ಸರಸು ಮಾತನಾಡಲಿಲ್ಲ. ಪ್ರಭುಸ್ವಾಮಿಗಳ ಮೋಹದ ವಿಷಯ ಕಿವಿಗೆ ಬಿದ್ದ ಬಳಿಕ ಆಕೆಯ ವಿಚಾರಗಳಲ್ಲಿ ನಿಧಾನವಾಗಿ ಬದಲಾವಣೆಯಾಗತೊಡಗಿದ್ದಿತು. ಪ್ರಭುಸ್ವಾಮಿಗಳಂಥವರೇ ತಾರುಣ್ಯದಲ್ಲಿ ಜಾರಿಬಿದ್ದರೆಂದ ಬಳಿಕ ಸಿದ್ಧವೀರಸ್ವಾಮಿಗಳಂಥವರ ಪಾಡೇನು, ಅವರ ಬಗೆಗೆ ಜುಗುಪ್ಸೆಗೊಂಡು ತಾನು ಹರಿಹರನಿಗೆ ಆ ರೀತಿಯ ಲೇಖನ ಬರೆದುಕೊಟ್ಟುದು ತಪ್ಪಾಯಿತೇನೋ ಎಂದುಕೊಂಡಳು. ತಾನು ದುಡುಕಿದೆನೊ ಏನೊ....ದುಡುಕುವುದು ತನ್ನ ಸ್ವಭಾವದಲ್ಲೇ ಬಂದಿರಬೇಕು. ಅಂದು–ಜಾತ್ರೆಯ ರಾತ್ರಿ ಶಿವಮೂರ್ತಿಯೊಂದಿಗೆ ಓಡಿಹೋದದ್ದು, ಅನಂತರ ಆತನ ಮೇಲೆ ಮುನಿದುಕೊಂಡು ಸ್ವಾಮಿಯೊಂದಿಗೆ ಬೆಂಗಳೂರಿಗೆ ಹೊರಟದ್ದು ದುಡುಕಿನ ಪರಿಣಾಮವೇ ಎಂದು ತೋರುತ್ತದೆ. ಸ್ವಾಮಿಯ ಬಗೆಗೆ ಬರೆದುಕೊಟ್ಟುದೂ ಹೀಗೆಯೆ ಆಯಿತೇನೊ. ಆ ಜಾಹೀರಾತು ಪ್ರಕಟವಾದ ಬಳಿಕ ಏನು ಪ್ರತಿಕ್ರಿಯೆಯಾಗುವುದೊ. ಹರಿಹರನೆಂದ ಹಾಗೆ ಎಲ್ಲರೂ ಆತನಲ್ಲಿಗೆ ಧಾವಿಸಬಹುದು. ಲೇಖನವನ್ನು ಪ್ರಕಟಿಸಬಾರದೆಂದು ಆತನಿಗೆ ಬೆದರಿಕೆಗಳೂ ಬರಬಹುದು. ತನ್ನ ತಂದೆತಾಯಿಗಳೂ ತುಂಬ ಗದ್ದಲ ಮಾಡಬಹುದು. ಗದಿಗೆಮ್ಮನೂ ಓಡಿಹೋಗಬಹುದು. ಹರಿಹರನಿಗೂ ಒಂದು ಮಾತು ತಿಳಿಸದೆ ತಾನು ಇತ್ತ ಬಂದುದಾಯಿತು. ಆತ ಕಠಿಣ ಪ್ರಸಂಗದಲ್ಲಿ ಸಿಲುಕಿ ಬಿದ್ದರೆ? ತನ್ನಿಂದಾಗಿ ಆತನ ಮೇಲೆ ವಿಪರೀತ ಸಂಕಟ ಬರಬಾರದಲ್ಲ?

ಒಂದೆರಡು ದಿನ ಆಕೆ ಸ್ವಾಮಿಗಳಿಗೆ ಆ ಲೇಖನದ ವಿಷಯವಾಗ

ಏನನ್ನೂ ಹೇಳಲಿಲ್ಲ. ಹೇಳುವುದೇ ಬೇಡವೇ ಎಂದು ತಾನೇ ಯೋಚಿಸುತ್ತಿದ್ದಳು. ಹೇಳಿಬಿಟ್ಟು ಅವರ ಸಲಹೆಯಂತೆ ಆಚರಿಸುವುದೇ ಉಚಿತವೆನ್ನಿಸಿದುದರಿಂದ ಹೇಳಿಯೂ ಬಿಟ್ಟಳು.

ಯಾವಾಗಲೂ ಪ್ರಸನ್ನವಾಗಿರುತ್ತಿದ್ದ ಸ್ವಾಮಿಗಳ ಮುಖದ ಮೇಲೆ ಚಿಂತೆಯ ನೆರಳು ಕವಿದುಕೊಂಡಂತಾಯಿತು.

"ಇದೇನು ಮಾಡಿದೆ ಸರಸೂ ?"

"ಉದ್ವೇಗದಲ್ಲಿ ಮಾಡಿಬಿಟ್ಟೆ. ಎದೆಯಲ್ಲಿ ಕುದಿಯುತ್ತಿದ್ದುದನ್ನೆಲ್ಲ ಲೇಖನ ರೂಪದಲ್ಲಿ ಹೊರಹಾಕಿದಾಗ ಎಷ್ಟೋ ಸಮಾಧಾನವಾದಂತಾಯಿತು. ಇಲ್ಲವಾದರೆ ನನಗೆ ಹುಚ್ಚೇ ಹಿಡಿಯುತ್ತಿದ್ದಿತೇನೊ."

"ಛೆ. ಇದೇನೂ ಒಳ್ಳೆಯದಾಗಲಿಲ್ಲ....ಒಳ್ಳೆಯದಾಗಲಿಲ್ಲ...." ಎಂದು ಹೇಳುತ್ತ ಸ್ವಾಮಿಗಳು ಗುಡಿಸಲಲ್ಲಿ ಶತಪಥ ಹಾಕತೊಡಗಿದರು.

[೨೮]

ಹರಿಹರನೂ ಸರಸುವೂ ಊಹಿಸಿಕೊಂಡಿದ್ದಂತೆಯೆ ಆಯಿತು.

'ಜನಪದ'ದಲ್ಲಿ ಪ್ರಕಟವಾದ ಜಾಹೀರಾತಿನಿಂದಾಗಿ ಜಿಲ್ಲೆಯಲ್ಲೆಲ್ಲ ಪ್ರಚಂಡ ಕೋಲಾಹಲವಾಯಿತು.

"ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರೆಂದರೆ ಹೀಗಿರುತ್ತಾರೆ ನೋಡಿರಿ. ಇವರು ಡಾಂಭಿಕರೆಂಬುದು ನಮಗೆಲ್ಲಾ ಗೊತ್ತೇ ಇತ್ತು. ಅನಾಥ ಬಾಲಕಾಶ್ರಮದಲ್ಲಿ ಇವರು ಮಾಡುತ್ತಿದ್ದ ವ್ಯಭಿಚಾರದ ವಿಷಯ ನಮಗೇನು ತಿಳಿದಿರಲಿಲ್ಲವೆ? ಧೈರ್ಯದಿಂದ ಮುಂದೆ ಬಂದು ಇವರನ್ನು ಬಯಲಿಗೆಳೆಯುವವರಿರಲಿಲ್ಲ ಇದುವರೆಗೆ. ಈ ಹರಿಹರ ಮಹಾ ಧೈರ್ಯಶಾಲಿ. ಒಳ್ಳೆಯ ಕೆಲಸ ಮಾಡಿದ," ಎಂದು ಸಾಮಾನ್ಯ ಜನರು ಮಾತಾಡಿಕೊಂಡರು. "ಆ ಲೇಖನವೆಲ್ಲ ಪ್ರಕಟವಾದಾಗ ಇನ್ನೂ ಎಷ್ಟು ಜನರ ಹೂರಣ ಹೊರಬೀಳುವುದೋ ನೋಡಬೇಕು. ಸಮಾಜದಲ್ಲಿ ಕೊಳೆಯನ್ನುಂಟುಮಾಡುತ್ತಿರುವ ಹುಳುಗಳೆಲ್ಲಾ ಹೊರಬಿದ್ದಂತಾಗುವುದು," ಎಂದು ಸುಶಿಕ್ಷಿತರು ಹೇಳಿಕೊಂಡರು.

ಆ ಸಂಚಿಕೆ ಪ್ರಕಟವಾದ ದಿನ ನಗರದಲ್ಲಿ ಹಿದು ..ಲ್ಲವರ ಬಾಯಲ್ಲೆಲ್ಲ

ಅದೇ ಮಾತೇ ಆಗಿದ್ದಿತು. ವಾಚನಾಲಯಗಳಲ್ಲಿ, ಕ್ಲಬ್ಬುಗಳಲ್ಲಿ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಚಹದಂಗಡಿಗಳಲ್ಲಿ, ಭೋಜನಾಲಯಗಳಲ್ಲಿ—ಎಲ್ಲೆಲ್ಲೂ ಸಿದ್ಧವೀರಸ್ವಾಮಿಗಳ ವಿಲಾಸಯಾತ್ರೆಯ ಚರ್ಚೆಯೇ ನಡೆದಿದ್ದಿತು. "ಭಪ್ಪರೆ ಹರಿಹರ! ಭೇಷ್ ಕೆಲಸ ಮಾಡಿದ," ಎಂದು ಉದ್ಗಾರ ತೆಗೆಯುವವರೇ ಎಲ್ಲರೂ.

ಆ ಜಾಹೀರಾತಿನಲ್ಲಿ ಕಾಣಿಸಿಕೊಂಡ ಕೆಲವು ವ್ಯಕ್ತಿಗಳ ಸ್ಥಿತಿ ಮಾತ್ರ ಅವರ್ಣನೀಯವಾಗಿದ್ದಿತು. ಅದನ್ನು ನೋಡಿದೊಡನೆಯೆ ಗಂಗಾಧರಶಾಸ್ತ್ರಿ ಕೆಲ ಹೊತ್ತು ಗರ ಹೊಡೆದವರಂತೆ ಕುಳಿತುಕೊಂಡಿದ್ದ. ನಂತರ ಆಶ್ರಮಕ್ಕೆ ಧಾವಿಸಿ ಹೋಗಿ ಲೀಲಾವತಿಯನ್ನು ಕಂಡು ಜಾಹೀರಾತನ್ನು ಆಕೆಗೆ ತೋರಿಸಿ, "ಮುಂದೇನು ಗತಿ ಲೀಲಾ? ನಾವ್ಯಾರೂ ಜನರಲ್ಲಿ ಮುಖ ಎತ್ತಿಕೊಂಡು ತಿರುಗದಂತಾಯಿತಲ್ಲ?" ಎಂದು ಗೋಗರೆದಿದ್ದ.

ಲೀಲಾವತಿ ನಿಧಾನವಾಗಿ ಅದನ್ನೆಲ್ಲ ಓದಿ, ಅನಂತರ ಶಾಂತಸ್ವರದಲ್ಲಿಯೆ ಹೇಳಿದ್ದಳು:

"ಇಷ್ಟೇಕೆ ಗಾಬರಿಯಾಗಿದ್ದೀರಿ ಶಾಸ್ತ್ರಿಗಳೆ? ಸರಸು ಬರೆದುದರಲ್ಲಿ ಸುಳ್ಳೇನೂ ಇಲ್ಲವಲ್ಲ? ನಡೆದುದನ್ನೇ ಬರೆದಿದ್ದಾಳೆ."

ಶಾಸ್ತ್ರಿ ಹಣೆ ಗಿಟ್ಟಿಸಿಕೊಳ್ಳುತ್ತಾ ಹೇಳಿದ: "ಸುಳ್ಳೇನೂ ಇಲ್ಲ. ಎಲ್ಲಾ ಸತ್ಯವೇ. ಎಲ್ಲಾ ಹರಿಶ್ಚಂದ್ರನ ಮೊಮ್ಮಕ್ಕಳು ನೀವು. ಆದರೆ ಈ ಸತ್ಯಕತೆಯಿಂದ ಎಂಥ ಭಯಂಕರ ಪರಿಣಾಮವಾಗುವುದೆಂಬುದನ್ನು ಯೋಚಿಸಿದ್ದೀಯಾ?"

"ಏನಾಗುವುದು? ಏನು ಮೈಮೇಲೆ ಆಕಾಶ ಕಳಚಿ ಬೀಳುವುದೇ?"

"ಆಕಾಶವಷ್ಟೇ ಅಲ್ಲ. ಪ್ರಪಂಚವೇ ಕಡಿದುಕೊಂಡು ಬೀಳುವುದು. ನಾನು ನೀನು, ಸ್ವಾಮಿಗಳು ಯಾರೂ ಜನರಲ್ಲಿ ಮೋರೆ ತೋರಿಸದಂತಾಗುವುದು. 'ಸರಸ್ವತಿಯನ್ನು ಸ್ವಾಮಿಗಳಿಗೆ ಗಂಟುಹಾಕಲು ಲೀಲಾವತಿಯೂ ಆಕೆಯ ಇನ್ನೊಬ್ಬ ಪ್ರಿಯಕರನಾದ ಶಾಸ್ತ್ರಿಯೂ ನಡೆಸಿದ ಕಾರಸ್ಥಾನ' ಎಂದು ಬರೆದಿದ್ದಾರೆ. ಎಲ್ಲದಕ್ಕೂ ನಾವೇ ಕಾರಣರಾದಂತಾಗುವುದು. ಇಷ್ಟೂ ತಿಳಿಯುವುದಿಲ್ಲವೇ ನಿನಗೆ?"

"ತಿಳಿಯುದೇನು? ತಿಳಿದೇ ತಿಳಿಯುತ್ತದೆ. ಸರಸುವನ್ನು ಸ್ವಾಮಿ

ಗಳಿಗೆ ಗಂಟುಹಾಕಲು ನೀವು ಪ್ರಯತ್ನಿಸಿದ್ದು ನಿಜವೋ ಸುಳ್ಳೋ ? ಆಶ್ರಮ ದಲ್ಲಿ ಆಕೆಯನ್ನು ಕೆಲಸಕ್ಕೆ ಸೇರಿಸಿಕೊಂಡದ್ದು, ಆಕೆಯ ಗಂಡನಿಗೆ ನಿಮ್ಮ ಆಫೀಸಿನಲ್ಲಿ ಕೆಲಸ ಕೊಟ್ಟದ್ದು, ಸಮ್ಮೇಳನದ ರಾತ್ರಿ ಸರಸು ಸ್ವಾಮಿಗಳ ಬಲಿಗೆ ಬೀಳುವಂತೆ ಮಾಡಲೆಂದು ನನ್ನ ಹತ್ತಿರ ಮೂರುನೂರು ರೂಪಾಯಿ ಕೊಟ್ಟದ್ದು, ದೂತೆಯ ಕೆಲಸ ಮಾಡಿಯಾದರೂ ಆಕೆಯನ್ನು ಒಲಿಸಿಕೊಳ್ಳ ಬೇಕೆಂದು ಹೇಳಿದ್ದು, ಎಲ್ಲಾ ನಿಜವೇ ತಾನೆ ? "

ಶಾಸ್ತ್ರಿಯ ಮುಖದಿಂದ ಮಾತೇ ಹೊರಡದಂತಾಯಿತು. ಲೀಲಾವತಿ ಇಂಥ ಮಾತುಗಳನ್ನಾಡಬಹುದೆಂಬ ಕಲ್ಪನೆಯೂ ಆತನಿಗಿರಲಿಲ್ಲ. ಸರಸು ತಮಗೆ ತಿರುಗಿಬಿದ್ದ ಹಾಗೆ ಲೀಲಾವತಿಯೂ ತಿರುಗಿಬೀಳಬಹುದೇನೋ ಎಂದೂ ಆತನಿಗೆನ್ನಿಸಿತು. ಹೆಣ್ಣಿನ ನೆಲೆ ಯಾರಿಗೂ ತಿಳಿಯುವಂತಿಲ್ಲ. ಈ ಸಂದರ್ಭದಲ್ಲಿ ಲೀಲಾವತಿಯೂ ಸರಸುವಿನ ಪಕ್ಷ ವಹಿಸಿದರೆ ದೇವರೇ ಗತಿ ! ಎಂದುಕೊಂಡ ಶಾಸ್ತ್ರಿ.

" ಆ ಸರಸುವಿನ ಬಗ್ಗೆ ನಿಜವಾಗಿಯೂ ನನಗೆ ಕಳವಳವಾಗುತ್ತದೆ. ಪಾಪ, ಹಾಗೆಲ್ಲ ಕಾಲು ಜಾರುವ ಹುಡುಗಿಯಲ್ಲ ಆಕೆ. ರೇಶಿಮೆ ಸೀರೆ, ಮೋಟರು ಕಾರು ಮೊದಲಾದ ಆಸೆ ತೋರಿಸಿ ನಾನೇ ಆಕೆಯನ್ನು ಪಾಪ ಕೂಪಕ್ಕೆ ತಳ್ಳಿದಂತಾಯಿತು. ಆಕೆ ಸ್ವಾಮಿಗಳೊಂದಿಗೆ ಹೊರಟುಹೋದ ಬಳಿಕ ಆಕೆಯ ಗಂಡ ಅವಳನ್ನು ಹುಡುಕುತ್ತ ಇಲ್ಲಿಗೆ ಬಂದಿದ್ದ. ಅವರನ್ನು ನೋಡಿದರೇನೇ ಯಾರಿಗಾದರೂ ಪ್ರೀತಿ ಹುಟ್ಟುವ ಹಾಗಿದಾರೆ. ಅಷ್ಟು ಸಂಭಾವಿತ. ಸರಸು ಸ್ವಾಮಿಗಳೊಂದಿಗೆ ಹೊರಟುಹೋದಳೆಂದು ನಾನು ಹೇಳುತ್ತಲೂ ಆತ ಒಮ್ಮೆಲೇ ನೆಲಕ್ಕೆ ಕುಸಿದುಬಿದ್ದು ಚಿಕ್ಕಮಕ್ಕಳಂತೆ ಮೂಕನಾಗಿ ಕಣ್ಣೀರು ಸುರಿಸಿದ್ದ. ಆತ ಕಣ್ಣೀರು ಕರೆಯುವುದನ್ನು ನೋಡುತ್ತ ನಿಂತಿದ್ದ ಹಾಗೆ ನನ್ನ ಕರುಳೆಲ್ಲಾ ಮರಮರ ಮರುಗಿತ್ತು. ಆತನ ಸಂಸಾರವನ್ನು ನಾನೇ ಹಾಳುಮಾಡಿದೆನಲ್ಲಾ ಎಂದುಕೊಂಡಾಗ ನನ್ನ ಕೆನ್ನೆಗೆ ನಾನೇ ಹೊಡೆದುಕೊಳ್ಳುವಂತಾಗಿತ್ತು. ನನ್ನ ಕಣ್ಣಲ್ಲೂ ನೀರು ಬಂದಿತ್ತು. ಆತನ ಕಾಲುಗಳನ್ನು ಹಿಡಿದುಕೊಂಡು ನನ್ನ ತಪ್ಪುಗಳನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುವವಳಿದ್ದೆ. ಅಷ್ಟರಲ್ಲಿ ಆತ ಹೊರಟುಹೋಗಿದ್ದ. ಆಗಿನ ಆತನ

ಆ ದುಃಖಸೂಚಕ ಮುಖ ಇನ್ನೂ ನನ್ನೆದುರು ಕಟ್ಟಿದಂತಿದೆ. ಸಾಯುವ ವರೆಗೂ ಆ ದೃಶ್ಯವನ್ನು ಮರೆಯಲಾಗಲಿಕ್ಕಿಲ್ಲ...."

"ಏನೋ ಹುಚ್ಚು ಹುಚ್ಚು ಬಡಬಡಿಸುತ್ತಿರುವೆ ಅಷ್ಟೆ. ಈಗ ಭಾವನಾವಶರಾಗುವುದರಿಂದ ಏನು ಉಪಯೋಗ? ಈ ಜಾಹೀರಾತಿನಿಂದಾಗಿ ನಾವೆಲ್ಲರೂ ಭಯಂಕರ ಪರಿಸ್ಥಿತಿಯಲ್ಲಿ ಸಿಲುಕಿಬಿದ್ದಿದ್ದೇವೆ. ಅದನ್ನು ಮರೆತು ಏನೇನೋ ಮಾತು ತೆಗೆದಳು," ಎಂದು ಅಣಕವಾಡಿದ ಶಾಸ್ತ್ರಿ.

"ಹೆಂಗಸರ ಹೃದಯ ನಿಮಗೆ–ಗಂಡಸರಿಗೆ ಅರ್ಥವಾಗುವಂತಿಲ್ಲ. ಈ ವಿಷಯದಲ್ಲಿ ನನ್ನನ್ನೇನೂ ಕೇಳಬೇಡಿರಿ. ಈ ಜಾಹೀರಾತಿನ ವಿರುದ್ಧವಾಗಿ ಒಂದು ಮಾತೂ ಆಡುವವಳಲ್ಲ ನಾನು. ಸರಸು ಬರೆದದ್ದೆಲ್ಲ ನಿಜವೇ ಇದೆ."

"ನಿಜವಿದೆಯೆಂಬುದನ್ನು ಒಪ್ಪೋಣ ಲೀಲಾ. ಆದರೆ ಇಂಥ ನಿಜವೆಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತ ಬಂದರೆ ನಾಳೆ ನಿನ್ನ ನನ್ನ ಗತಿಯೇನು? ಆಶ್ರಮಕ್ಕೆ ಕೆಟ್ಟ ಹೆಸರು ಬಂದಲ್ಲಿ ಈ ಆಶ್ರಮವೂ ಉಳಿಯುವುದಿಲ್ಲ—ಅನಂತರ ನಿನಗಿಲ್ಲಿ ಕೆಲಸವಿಲ್ಲ. ಎಲ್ಲಿಗೆ ಹೋಗುವೆ? ಏನು ಮಾಡುವೆ?"

"ಸ್ವಾಮಿಗಳೊಂದಿಗೆ ಸೂಳೆಗಾರಿಕೆ ಮಾಡಿದ್ದರಿಂದಾಗಿ ಇದುವರೆಗೆ ಅಲ್ಪಸ್ವಲ್ಪ ಹಣ ದೊರೆತಿದೆ. ಈ ಬಂಡವಲಿನಲ್ಲಿ ಚಿಕ್ಕ ಅಂಗಡಿಯೊಂದನ್ನು ತೆಗೆಯಬಹುದು. ನನ್ನ ಹೊಟ್ಟೆ ಬಟ್ಟೆಗಾದರೆ ಸಾಕು."

"ನಿನ್ನದೇನೋ ನಡೆದೀತು ಎನ್ನೋಣ. ನನ್ನ ಗತಿಯೇನು? ನನ್ನ 'ಲಿಂಗವೀರ'ದ ಗತಿಯೇನು? ನನ್ನ ಕೀರ್ತನ ವ್ಯವಸಾಯ, ಭಾಷಣ ವ್ಯವಸಾಯ, ಮುದ್ರಣ ವ್ಯವಸಾಯ ಎಲ್ಲದಕ್ಕೂ ಹೊಡೆತ ಬೀಳುವುದು. ಸಮಾಜದಲ್ಲಿ ಮೊದಲಿನಂತೆ ನಾನು ತಲೆಯೆತ್ತಿ ತಿರುಗದಂತಾಗುವುದು, ನನ್ನ ಆಯುಷ್ಯವೇ ಹಾಳಾಗುವುದು," ಎಂದು ಅಳುವ ಧ್ವನಿಯಲ್ಲಿ ನುಡಿದ ಶಾಸ್ತ್ರಿ.

"ಬರೀ ನಿಮ್ಮ ಆಯುಷ್ಯದ ವಿಚಾರವೇ ನಿಮಗೆ. ಬೇರೆಯವರದು ಹಾಳಾಗಿ ಹುಡಿಗೂಡಿ ಹೋದರೂ ಚಿಂತೆಯಿಲ್ಲ. ನಿಮ್ಮದೊಂದು ಚೆನ್ನಾಗಿ ನಡೆದರಾಯಿತು, ಅಲ್ಲವೆ? ನಿಮ್ಮ ಆಯುಷ್ಯ ಸುಖಪ್ರದವಾಗಿ ನಡೆಯಲಿಕ್ಕಾಗಿ ಸರಸುವಿನಂಥ ಶೀಲವತಿಯರ ಶೀಲ ಹಾಳಾಗಬೇಕು, ಬಾಳು

ಹಾಳಾಗಬೇಕು, ಶಿವಮೂರ್ತಿಯಂಥ ಸಂಭಾವಿತ ತರುಣರ ಬಾಳು ಮಣ್ಣು ಕಾಣಬೇಕು ಅಲ್ಲವೆ ? ”

“ ಏನು ಹೇಳಿದರೆ ತಿಳಿದೀತೋ ನಿನಗೆ. ಇಂದೇನೋ ದೆವ್ವ ಹೊಕ್ಕಂತಾಗಿದೆ ನಿನ್ನ ತಲೆಯಲ್ಲಿ. ಎಲ್ಲ ಹಾಳಾಗಿ ಬೀದಿಯ ಭಿಕಾರಿಯಾದಾಗಲೇ ಬುದ್ಧಿ ಬರುವುದು ನಿಮ್ಮಂಥವರಿಗೆ ! ” ಎಂದು ಆಕ್ರೋಶಮಾಡುತ್ತ ಶಾಸ್ತ್ರಿ ಅಲ್ಲಿಂದೆದ್ದು ಹೊರಟುಹೋದ.

ತನ್ನ ಪತ್ನಿ ಲಲಿತಳಿಂದಲೂ ಅದೇ ಬಗೆಯ ಮಾತುಗಳನ್ನೇ ಕೇಳಬೇಕಾದ ಸಂದರ್ಭ ಬಂದಿತು ಶಾಸ್ತ್ರಿಗೆ.

ಆ ಜಾಹೀರಾತನ್ನು ನೋಡುತ್ತಲೂ ಆಕೆ ತುಂಟತನದಿಂದ ನಗುತ್ತ ನುಡಿದಿದ್ದಳು : “ ವಿಲಾಸಯಾತ್ರೆ ! ಹ ಹ ಹ ಹ....ವಿಲಾಸಯಾತ್ರೆ ! ಈ ಕಥೆಯ ಮೇಲೆ ಒಂದು ಸಿನಿಮಾ ತಯಾರಿಸಬೇಕು ನೋಡಿರಿ. ರೊಕ್ಕ ಸೂರೆಯಾದಾವು ”

ಶಾಸ್ತ್ರಿ ರೇಗಿದ ಧ್ವನಿಯಲ್ಲಿ ಹೇಳಿದ : “ ನಮಗೆಲ್ಲಾ ಪ್ರಾಣಸಂಕಟ ನಡೆದಿರುವಾಗ ನಿನಗೆ ನಗೆಯಾಟವಾಯಿತು. ಬುದ್ಧಿಯನ್ನೆಲ್ಲ ಎಲ್ಲಿಟ್ಟಿದ್ದೀಯ ? ”

ಲಲಿತಾ ಆ ಮಾತುಗಳಿಗೆ ಲಕ್ಷ್ಯ ಕೊಡದೆ ಮತ್ತೆ ನಗತೊಡಗಿದಳು. “ ಲೀಲಾವತಿಯ ಇನ್ನೊಬ್ಬ ಪ್ರಿಯಕರ ಶಾಸ್ತ್ರಿ—ಆತನ ಕಾರಸ್ಥಾನ.... ಸರ್ವಧರ್ಮಸಮ್ಮೇಳನ....ಗದಿಗೆಮ್ಮ....ಪಾರ್ವತಿ....ಸರಸು....ಹ ಹ ಹ ಹಾ....”

ಸ್ವಲ್ಪಹೊತ್ತು ಸುಮ್ಮನಿದ್ದು ಲಲಿತಾ ಹೇಳಿದಳು : “ ಆ ಸರಸು ಒಳ್ಳೆಯ ಕೆಲಸವನ್ನೇ ಮಾಡಿದ್ದಾಳೆ. ನಿಮ್ಮಂಥ ಆಷಾಢಭೂತಿಗಳಿಗೆಲ್ಲ ಒಮ್ಮೆಲೆ ಬುದ್ಧಿ ಬರಬೇಕು. ಆ ಸ್ವಾಮಿಗಳಿಗೂ ಚೆನ್ನಾಗಿ ಫಜೀತಿಯಾಗಬೇಕು. ನಿಮ್ಮಂಥವರಿಂದಾಗಿ ನಾವು ಹೆಂಗಸರು ನರಳಬೇಕಾಗುತ್ತದೆ. ನಿಮಗೆಲ್ಲ ತಕ್ಕ ಶಿಕ್ಷೆಯಾಗಬೇಕು. ಅಂದರೇನೇ ಹಾದಿಗೆ ಬರುವವರು ನೀವು ! ”

“ ನೀನೂ ಆಕೆಯ ಕಡೆಗೇ ಸೇರಿಕೊಳ್ಳುವವಳೋ ಏನು ? ” ಎಂದು ದಿಗಿಲುಗೊಂಡು ಕೇಳಿದ ಶಾಸ್ತ್ರಿ.

“ ನಾನು ಸೇರಿಕೊಳ್ಳುವ ಅಗತ್ಯವಾದರೂ ಏನು ? ನಿಮ್ಮನ್ನೆಲ್ಲ ಫಜೀತಿ ಮಾಡಲು ಆಕೆಯೊಬ್ಬಾಕೆಯೆ ಸಮರ್ಥಳಿರುವಳೆಂದು ತೋರುತ್ತದೆ.

ಆಕೆಯೊಂದಿಗೆ ಆ ಹರಿಹರನೂ ಇದ್ದಾನೆ. ಆತನಂತೂ ಮಹಾ ಒರಟ. ನನಗೆ ನಿಮಗೆ ಇಬ್ಬರಿಗೂ ಗೊತ್ತೇ ಇದೆಯಲ್ಲ! ವಿಲಾಸಯಾತ್ರೆ....ಹ ಹ ಹ ಹ....ವಿಲಾಸಯಾತ್ರೆ !"

ಶಾಸ್ತ್ರಿ ಮನೆ ಬಿಟ್ಟು ಹೊರಟುಬಂದ. ಸ್ವಾಮಿಗಳಿಗೆ ಒಡನೆಯೆ ಸುದ್ದಿ ತಿಳಿಸಬೇಕಾಗಿದ್ದಿತು. "ಅವರೀಗ ಇರುವುದು ಬೆಂಗಳೂರಿನಲ್ಲಿ. ಈ ಪತ್ರಿಕೆ ಅವರಿಗೆಲ್ಲಿ ಸಿಕ್ಕಬೇಕು? ಸ್ವಾಮಿಗಳಿಗೆ ಈ ವಿಷಯವೇ ತಿಳಿದಿರಲಿಕ್ಕಿಲ್ಲ ಇನ್ನೂ. ಅವರನ್ನು ಕೂಡಲೇ ಕರೆಯಿಸಬೇಕು. ಅವರು ಬಂದ ತರುವಾಯ ಮುಂದೇನುಮಾಡುವುದೆಂಬುದನ್ನು ನಿರ್ಧರಿಸಲು ಸಾಧ್ಯವಾದೀತು" ಎಂದು ಕೊಂಡು ಅವರಿಗೊಂದು ತಂತಿ ಬಿಟ್ಟ.

ತಂತೀ ಕಚೇರಿಯಿಂದ ನೇರವಾಗಿ ಆತ ರಾವ್‌ಬಹದ್ದೂರ್ ಗುರು ಶಾಂತಪ್ಪನವರ ಮನೆಗೆ ಬಂದ. ಅವರು ನಗರದ ಗಣ್ಯವ್ಯಕ್ತಿಗಳಲ್ಲೊಬ್ಬರು. ಭಾರಿ ಶ್ರೀಮಂತರು. ಅನಾಥ ಬಾಲಕಾಶ್ರಮದ, 'ಲಿಂಗವೀರ' ಪತ್ರಿಕೆಯ ಹಾಗು ಗಂಗಾಧರಶಾಸ್ತ್ರಿಯ ಮುಖ್ಯ ಆಶ್ರಯದಾತರು. ಈ ಕಠಿಣ ಪ್ರಸಂಗ ದಿಂದ ಬಿಡುಗಡೆಹೊಂದಲು ಅವರಾದರೂ ಒಂದು ದಾರಿ ತೋರಿಸಿಯಾರು ಎಂದುಕೊಂಡು ಶಾಸ್ತ್ರಿ ಅವರ ಹತ್ತಿರ ಧಾವಿಸಿದ್ದ.

ಆತ ಅವರ ಮನೆಗೆ ಅಡಿಯಿರಿಸಿದಾಗ ರಾವ್‌ಬಹದ್ದೂರರು ತಮ್ಮ ಕೊಟಡಿಯಲ್ಲಿ ನಾಲ್ಕೈದು ಜನ ನಿರುದ್ಯೋಗಿ ಗೆಳೆಯರೊಂದಿಗೆ ಇಸ್ಪೀಟು ಆಟದಲ್ಲಿ ತೊಡಗಿದ್ದರು. ಶಾಸ್ತ್ರಿ ಅಲ್ಲಿಗೇ ನುಗ್ಗಿ "ಶರಣು ಶರಣು ಸಾಹು ಕಾರರೇ" ಎಂದು ಹೇಳಿ ಒಂದೆಡೆಗೆ ಕುಳಿತುಕೊಂಡ. ಆತನ ನಮಸ್ಕಾರ ವನ್ನು ಸ್ವೀಕರಿಸಿದ ಹಾಗೆ ಮಾಡಿ ರಾವ್‌ಬಹದ್ದೂರರು ಮತ್ತೆ ಆಟದಲ್ಲಿ ತಲ್ಲೀನರಾದರು.

ಅರ್ಧಗಂಟೆಯವರೆಗೆ ಶಾಸ್ತ್ರಿ ಹಾಗೆಯೆ ಚಡಪಡಿಸುತ್ತ ಕುಳಿತಿದ್ದ. ಅವರ ಆಟ ಮುಗಿಯುವ ಲಕ್ಷಣ ಕಾಣಿಸುತ್ತಿರಲಿಲ್ಲ. ಕುಳಿತು ಕುಳಿತು ಶಾಸ್ತ್ರಿಗೆ ಬಲು ಬೇಸರವಾಗಿತ್ತು. ರಾವ್‌ಬಹದ್ದೂರರು ಮಾತ್ರ ಆತನ ಕಡೆಗೆ ದೃಷ್ಟಿಯನ್ನೂ ಹೊರಳಿಸದೆ ಆಟದಲ್ಲಿ ಮನಸ್ಸನ್ನು ಮುಳುಗಿಸಿದ್ದರು. ಅವರ ಆಟವನ್ನು ಮುರಿದು ಮಾತಿಗಾರಂಭಿಸುವ ಧೈರ್ಯ ಶಾಸ್ತ್ರಿಗಿರಲಿಲ್ಲ. ಆತ ಆಕಳಿಸಿದ, ಕೆಮ್ಮಿದ ಹಾಗೆ ಮಾಡಿದ, ರಾವ್‌ಬಹದ್ದೂರರಿಗೆ ತೋರಿಸ

ಲೆಂದು ತಂದಿದ್ದ 'ಜನಪದ'ವನ್ನು ಹಾಗೆ ಹೀಗೆ ತಿರುಗಿಸುತ್ತ ಅವರ ದೃಷ್ಟಿಯನ್ನು ಸೆಳೆಯಲು ಪ್ರಯತ್ನಿಸಿದ. ಯಾವುದರಿಂದಲೂ ಏನೂ ಫಲ ದೊರೆಯಲಿಲ್ಲ. ಹೆಂಡದಂಗಡಿಯಲ್ಲಿ ಕುಳಿತು ಹೆಂಡ ಕುಡಿಯುವವರು ಬಾಹ್ಯಪ್ರಪಂಚವೆಲ್ಲವನ್ನೂ ಮರೆಯುವಂತೆ ಆ ಸಿರಿವಂತರು ಇಸ್ಪೀಟು ಆಟದ ಅಮಲಿನಲ್ಲಿ ಮೈಮರೆತಿದ್ದರು.

ಇನ್ನು ಅಲ್ಲಿ ಕುಳಿತಿರಲಾರದೆ ಶಾಸ್ತ್ರಿ ಎದ್ದುನಿಂತ. ಆಟ ಮುಗಿದ ಬಳಿಕ ರಾವ್‌ಬಹದ್ದೂರರಿಗೆ ಬಿಡುವಾದ ತರುವಾಯ ಬಂದು ಮಾತನಾಡಿದರಾಯಿತು, ಎಂದುಕೊಂಡು ಹೊರಟುನಿಂತ.

"ನಾನು ಹೊರಡುತ್ತೇನೆ ಸಾಹುಕಾರರೇ. ಶರಣು."

ಆಗ ಗುರುಶಾಂತಪ್ಪನವರು ತಲೆಯೆತ್ತಿ ಆತನ ಕಡೆಗೆ ದೃಷ್ಟಿ ತಿರುಗಿಸಿ "ಓ, ನೀವೇನು? ನಾನು ಮರೆತೇಬಿಟ್ಟಿದ್ದೆನಲ್ಲ. ಏನು ಶಾಸ್ತ್ರಿಗಳೇ, ಏನು ಬಂದಿದ್ದಿರಿ? ಏನು ವಿಶೇಷ? ಮತ್ತಾವ ಸಮ್ಮೇಳನ ಹೂಡಿದ್ದೀರಿ? ಏನು ಸಮಾರಂಭ? ಅಧ್ಯಕ್ಷತೆ ವಹಿಸಬೇಕೆಂದು ಕೇಳಲು ಬಂದಿರುವಿರಷ್ಟೆ? ಹಣವೂ ಬೇಕಾಗಿರಬಹುದು. ಸರಿ. ಸರಿ. ನಿಮಗೆ ತಿಳಿದಂತೆ ಮಾಡಿರಿ. ಇಂಥ ಸಣ್ಣ ವಿಷಯಗಳಲ್ಲೆಲ್ಲ ನನ್ನನ್ನು ಕೇಳಬೇಕಾದ ಅಗತ್ಯವೇನು? ಆಗಲಿ. ಪ್ರಕಟನೆ ಹೊರಡಿಸಿಬಿಡಿರಿ. ಕಾರಕೂನನ ಹತ್ತಿರ ಹಣ ತೆಗೆದುಕೊಂಡು ಹೋಗಿರಿ...." ಎಂದು ಬಡಬಡನೆ ನುಡಿದು ಮತ್ತೆ ಎಲೆಗಳ ಕಡೆಗೆ ದೃಷ್ಟಿ ತಿರುಗಿಸಿದರು.

ಶಾಸ್ತ್ರಿ ಕೈ ಕೈ ಹಿಸುಕಿಕೊಳ್ಳುತ್ತ—"ಅದಲ್ಲ ಸಾಹುಕಾರರೆ....ಹಣ ಏನು ಅಗತ್ಯವಿರಲಿಲ್ಲ. ಸಭೆ ಸಮಾರಂಭವೂ ಇಲ್ಲ. ಇದೊಂದು ಬೇರೆ ವಿಷಯ. ಅಂದರೆ....ಹೀಗೆ....ಈ 'ಜನಪದ' ಎಂಬ ಪತ್ರಿಕೆಯಲ್ಲಿ...." ಎಂದು ಹೇಳುತ್ತಲಿದ್ದ ಹಾಗೆ ಗುರುಶಾಂತಪ್ಪನವರು ಹುಬ್ಬು ಮೇಲಕ್ಕೇರಿಸಿ—"ಏನಾದರೂ ಟೀಕೆ ಬಂದಿದೆಯೇನು? ಏನದು, ಓದಿಬಿಡಿರಿ," ಎಂದರು.

ಎದ್ದುನಿಂತಿದ್ದ ಶಾಸ್ತ್ರಿ ಮತ್ತೆ ಕುಳಿತುಕೊಂಡು ಆ ಜಾಹೀರಾತನ್ನು ಓದಿಹೇಳಿದ. ಆತ ಒಂದೆರಡು ಸಾಲುಗಳನ್ನು ಓದುವುದರೊಳಗಾಗಿಯೇ ಅಲ್ಲಿ ಕುಳಿತಿದ್ದವರೆಲ್ಲ ಬಿದ್ದು ಬಿದ್ದು ನಗತೊಡಗಿದರು. ಶಾಸ್ತ್ರಿ ಓದಿ ಮುಗಿಸಿದರೂ ಆ ನಗು ನಿಲ್ಲಲಿಲ್ಲ. "ವಿಲಾಸಯಾತ್ರೆ....ವಿಲಾಸಯಾತ್ರೆ....

ಗದಿಗೆಮ್ಮ....ಲೀಲಾವತಿ....ಸರಸು....ಮೈಸೂರು, ಕನ್ನಂಬಾಡಿ, ಡ್ಯಾನ್ಸರ್ ಸ್ನೇಹಲತಾ....ಪಾರ್ವತಿ....ಸಿದ್ಧಪ್ರಸಾದ....ಸಿಗರೇಟು, ಚಹಾ, ಮದ್ಯ, ಮಾಂಸ, ಮದರಾಸು, ಬೆಂಗಳೂರು ಹುಚ್ಚರಾಸ್ಪತ್ರೆ!" ಎಂದು ಹೇಳುತ್ತಾ ಬಿದ್ದು ಬಿದ್ದು ನಕ್ಕರು ಗುರುಶಾಂತಪ್ಪ. ಅವರ ಗೆಳೆಯರು—"ಇದ್ದರೆ ಇಂಥ ಸ್ವಾಮಿಗಳೇ ಇರಬೇಕು. ವಹವ್ವಾ, ಅಸಾಧಾರಣ ವ್ಯಕ್ತಿಯಪ್ಪ! ನಮ್ಮಂಥ ರಸಿಕರನ್ನು ಮೀರಿಸುವಂಥ ರಸಿಕ ಚಕ್ರವರ್ತಿಗಳಿವರು. ಒಂದೇ, ಎರಡೇ ಎಷ್ಟೊಂದು ಹೆಣ್ಣುಗಳ ಸಹವಾಸ....ನರ್ತಕಿಯರು....ಶಿಕ್ಷಕಿಯರು ....ಹಹಹಹಹ್ಹಾ!" ಎಂದು ನುಡಿದು ಕೇಕೆ ಹಾಕತೊಡಗಿದರು.

ಆ ನಗೆಯ ಸದ್ದು ಅಡಗುವವರೆಗೂ ಶಾಸ್ತ್ರಿ ತಲೆ ತಗ್ಗಿಸಿಕೊಂಡು ಸುಮ್ಮನೆ ಕುಳಿತಿದ್ದವನು ಅನಂತರ ಧ್ವನಿಯೆತ್ತಿ ನುಡಿದ: "ಆದರೆ.... ಆದರೆ, ಇವೆಲ್ಲಾ ಸುಳ್ಳಿದೆ ಸಾಹುಕಾರರೇ. ಪೂರಾ ಸುಳ್ಳಿದೆ. ಒಂದು ಮಾತೂ ನಿಜವಿಲ್ಲ. ನಮಗಾಗದವರು ಯಾರೋ ಬೇಕೆಂತಲೇ ಇದನ್ನು ಹುಟ್ಟಿಸಿದ್ದಾರೆ. ಆ ಹರಿಹರ ಒಬ್ಬ ಧರ್ಮಲಂಡ. ತಾನು ಲಿಂಗಾಯತ ನಾದರೂ ಲಿಂಗಾಯತರ ಮೇಲೇ ತಿರುಗಿ ಬೀಳುವವ. ನಮ್ಮ ಸಮಾಜವನ್ನು ನಮ್ಮ ಸ್ವಾಮಿಗಳನ್ನು ಕಂಡು ಹೊಟ್ಟೆಯುರಿದುಕೊಳ್ಳುತ್ತಿರುವ ಬ್ರಾಹ್ಮಣ ರಾರೋ ಇದನ್ನೆಲ್ಲ ಮಾಡಿಸಿದ್ದಾರೆ.

"ಅಂದರೆ? ಇದೆಲ್ಲಾ ಸುಳ್ಳೇ?" ಎಂದು ಬೆರಗುಗೊಂಡ ಸ್ವರದಲ್ಲಿ ಕೇಳಿದರು ಗುರುಶಾಂತಪ್ಪ.

"ಸುಳ್ಳು. ಪೂರಾ ಸುಳ್ಳು. ನಮ್ಮ ಸ್ವಾಮಿಗಳೆಂದೂ ಇಂಥ ಕೆಲಸ ಮಾಡುವವರಲ್ಲ. ಅವರ ಹೆಸರು ಕೆಡಿಸಲೆಂದೇ ಈ ಬಗೆಯ ಅಪಪ್ರಚಾರ ನಡೆದಿದೆ."

"ಹೀಗೇನು? ಹಾಗಾದರೆ ಈ ಪತ್ರಿಕೆಯವನಿಗೆ ತಕ್ಕ ಪ್ರತೀಕಾರ ಮಾಡೋಣ. ನಮ್ಮ ಸ್ವಾಮಿಗಳ ಬಗ್ಗೆ ಹೀಗೆಲ್ಲಾ ಬರೆಯಲು ಎಷ್ಟು ಧೈರ್ಯ ಅವನಿಗೆ. ಲಿಂಗಾಯತರನ್ನು ಕೆಣಕುವುದೆಂದರೆ ಏನೆಂದು ತಿಳಿದಿದ್ದಾನೆ ಆತ! ಇಲ್ಲಿಗೆ ಬಂದು ಹೋಗಬೇಕೆಂದು ನಾನು ಹೇಳಿದೆ ಅಂತ ಹೇಳಿರಿ ಅವನಿಗೆ. ಹೂಂ ಹೋಗಿರಿ. ಈಗಿಂದೀಗ ಬರಹೇಳಿರಿ," ಎಂದು ಬಿರುಸಾಗಿ ನುಡಿದು ಗುರುಶಾಂತಪ್ಪ ಮತ್ತೆ ಇಸ್ಪೀಟು ಕೈಗೆತ್ತಿಕೊಂಡರು.

"ಆದರೆ....ಆದರೆ, ಆತ ಹಾಗೆಲ್ಲಾ ಬರುವ ವ್ಯಕ್ತಿಯಲ್ಲ ಸಾಹುಕಾರರೆ."

"ಏನು! ನಾವು ಕರೆಕಳಿಸಿದರೂ ಬರುವುದಿಲ್ಲವೆ? ಅಷ್ಟು ಅಹಂಕಾರವೇ?"

"ಆತ ಬಹಾ ಒರಟು ಮನುಷ್ಯ ಸಾಹುಕಾರರೆ. ಯಾರಿಗೂ ಮರ್ಯಾದೆ ಕೊಡುವವನಲ್ಲ. ನೀವೇ ಅವನ ಆಫೀಸಿಗೆ ಹೋಗಬೇಕಾಗುವುದು."

"ನಾನು ಅವನಂಥ ದರಿದ್ರನನ್ನು ಹುಡುಕಿಕೊಂಡು ಹೋಗಬೇಕೇ! ಎಂಥ ಮಾತು ಆಡುತ್ತೀರಿ ಶಾಸ್ತ್ರಿಗಳೆ? ನೀವು ಹೋಗಿರಿ. ನಾವು ಆತನನ್ನು ಇಲ್ಲಿಗೆ ಕರೆಯಿಸಿ ಚೆನ್ನಾಗಿ ಕಿವಿ ಹಿಂಡಿ ಕಳಿಸುತ್ತೇವೆ."

ಮರುಮಾತಾಡದೆ ಶಾಸ್ತ್ರಿ ಹೊರಡಬೇಕಾಯಿತು. ಹರಿಹರ ಸಾಹುಕಾರರ ಮನೆಗೆ ಬರುವುದಿಲ್ಲವೆಂಬುದು ಆತನಿಗೆ ಚೆನ್ನಾಗಿ ಗೊತ್ತಿದ್ದಿತು. ಆದರೆ ಆಗ ಏನನ್ನೂ ಮಾಡುವಂತಿರಲಿಲ್ಲ.

ಆತ ತಿಳಿದಿದ್ದ ಹಾಗೆಯೆ ಆಯಿತು. ಹರಿಹರನನ್ನು ಕರೆದುತರಲು ಹೋಗಿದ್ದ ಕಾರಕೂನ "ರಾವ್‌ಬಹದ್ದೂರರು ಕರೆಯುತ್ತಿದ್ದಾರೆ," ಎಂದು ಹೇಳಿದಾಗ ಹರಿಹರ, "ಯಾವ ರಾವಬಹದ್ದೂರರಪ್ಪಾ ಅವರು? ಸ್ವಾತಂತ್ರ್ಯದ ಈ ಕಾಲದಲ್ಲೂ ಇದಾವ ಬಹದ್ದೂರರು ಬಂದರು?" ಎಂದು ಕೇಳಿದ.

"ಗುರುಶಾಂತಪ್ಪನವರು."

"ಯಾವ ಶಾಂತಪ್ಪನವರೋ ತಿಳಿಯದಲ್ಲ? ಏನು ಉದ್ಯೋಗ ಮಾಡುತ್ತಾರೆ ಅವರು?"

"ಸಾಹುಕಾರರು."

"ಓಹ್ಹೋ. ಸಾಹುಕಾರರೇನು? ನನ್ನನ್ನು ಯಾತಕ್ಕೆ ಕರೆಯಿಸಿದ್ದಾರೆ? ಹೆಣ್ಣು ಗಿಣ್ಣು ಕೊಡುವ ವಿಚಾರವೋ ಏನು? ನನಗೀಗಲೇ ಮದುವೆಯಾಗುವ ಮನಸ್ಸಿಲ್ಲವೆಂದು ಹೇಳಿರಿ ನಿಮ್ಮ ಸಾಹುಕಾರರಿಗೆ."

ಕಾರಕೂನ ಕಿಡಿಕಿಡಿಯಾಗಿ ಉತ್ತರವಿತ್ತ.

"ಚೇಷ್ಟೆ ಮಾಡಬೇಡಿರಿ ಮಿಸ್ಟರ್, ಅಂಥ ಕೆಲಸವೇನೂ ಇಲ್ಲ.

ಬೇರೆ ಏನಿದೆಯೋ ನನಗೆ ಗೊತ್ತಿಲ್ಲ. ಆದರೆ ಕೂಡಲೆ ಕರೆದುಕೊಂಡು ಬರಲು ಹೇಳಿದ್ದಾರೆ."

ಹರಿಹರ ಮುಗುಳ್ನಗೆ ನಗುತ್ತ–"ನಿಮಗೂ ಸಿಟ್ಟು ಬಂದಿತೇನು? ಸಾಹುಕಾರರ ಕಾರಕೂನರಿಗೂ ಸಾಹುಕಾರರಂಥ ಸಿಟ್ಟೇ ಇರುವುದು ಸ್ವಾಭಾವಿಕ. ಅವರು ನನ್ನನ್ನು ಏನೆಂದು ತಿಳಿದಿದ್ದಾರೆ? ನಿಮ್ಮ ಹಾಗೆಯೇ ನಾನೂ ಅವರ ಸಂಬಳ ತಿನ್ನುವ ಕಾರಕೂನ ಎಂದು ತಿಳಿದಿರುವರೋ ಏನು? ಯಾವ ಅಧಿಕಾರದಿಂದ ನನ್ನನ್ನವರು ಕೂಡಲೆ ಬರಹೇಳಿದ್ದಾರೆ? ಎಂಥ ಉದ್ಧಟತನ! ಶ್ರೀಮಂತರಿದ್ದ ಮಾತ್ರಕ್ಕೆ ನಗರಕ್ಕೆಲ್ಲ ತಾನೇ ರಾಜರೆಂದು ತಿಳಿದುಕೊಂಡಿಲ್ಲವಷ್ಟೆ ನಿಮ್ಮ ಬಹದ್ದೂರರು? ಅವರಿಗೆ ಹೇಳಿರಿ. ನಿಮ್ಮಂಥವರು ಕರೆಯಿಸಿದಾಗೆಲ್ಲ ಓಡಿ ಬರಲು ಹರಿಹರನೇನೂ ಇನ್ನೊಬ್ಬ ಗಂಗಾಧರಶಾಸ್ತ್ರಿಯಲ್ಲ. ಶ್ರೀಮಂತರೆದುರಿಗೆ ಬಾಲ ಅಲುಗಾಡಿಸುತ್ತ ಅವರು ಎಸೆಯುವ ಕಾಸಿನಾಸೆಗಾಗಿ ಅವರ ಭಟ್ಟಂಗಿತನ ಮಾಡುವ ವ್ಯಕ್ತಿಯಲ್ಲ ಹರಿಹರ. ನನಗಿಲ್ಲಿ ಕೈತುಂಬ ಕೆಲಸವಿದೆ. ಒಂದು ನಿಮಿಷವೂ ಪುರುಸತ್ತಿಲ್ಲ. ನನ್ನ ಹತ್ತಿರ ಕೆಲಸವಿದ್ದರೆ ಅವರೇ ಇಲ್ಲಿಗೆ ಬಂದು ಹೋಗಲಿ. ನನಗೆ ಬಿಡುವಾದಾಗ ಮಾತನಾಡುತ್ತೇನೆ," ಎಂದು ಹೇಳಿದ.

ಮತ್ತೊಂದು ಮಾತನಾಡದೆ ಕಾರಕೂನ ಹೊರಟುಹೋದ.

ಹೆದರುತ್ತ ಹೆದರುತ್ತ ಆತ ಗುರುಶಾಂತಪ್ಪನವರೆದುರಿಗೆ ಎಲ್ಲವನ್ನೂ ವರದಿ ಮಾಡಿ ಮುಗಿಸುತ್ತಲೂ ಅವರು ಕ್ರೋಧದಿಂದ ಉರಿಯುತ್ತ ಎದ್ದು ನಿಂತರು. "ಮೋಟರು ಸಿದ್ಧಗೊಳಿಸೆಂದು ಡ್ರೈವರಿಗೆ ಹೇಳು. ಅವನ ಆಫೀಸಿಗೆ ಹೋಗಿ ಒಂದು ಕೈ ತೋರಿಸಿ ಬರುತ್ತೇನೆ."

ಅವರ ರುದ್ರಾವತಾರವನ್ನು ಕಂಡು ಇಸ್ಪೀಟಿನ ಗೆಳೆಯರೆಲ್ಲ ದಿಗಿಲುಗೊಂಡಿದ್ದರು. ಈ ಸ್ಥಿತಿಯಲ್ಲಿ ಅವರನ್ನು ಹೊರಗೆ ಬಿಡುವುದು ಉಚಿತವಲ್ಲವೆಂದು ಯೋಚಿಸಿ ಅವರೆಲ್ಲರೂ–"ಬೇಡ, ಬೇಡ ರಾವಬಹದ್ದೂರರೆ. ನೀವು ಅಲ್ಲಿಗೆ ಹೋಗಬಾರದು. ಅಂಥ ಜನರ ಸಂಗಡ ಏನು ತಂಟೆ! ಬೇಡ. ಸುಮ್ಮನೆ ಮರ್ಯಾದೆ ಕಳೆದುಕೊಂಡಂತಾದೀತು," ಎಂದರು. ಅವರಲ್ಲೊಬ್ಬ ಹರಿಹರನನ್ನು ಚೆನ್ನಾಗಿ ಬಲ್ಲವನಾಗಿದ್ದ. ಆತ ಹೇಳಿದ: "ಹಾಗೆ ಹರಿಹರ ದುಷ್ಟನೇನೂ ಅಲ್ಲ. ಒಳ್ಳೆಯವನೇ. ಆದರೆ ಆತ ಪೂರಾ ನಿಷ್ಠುರ ವ್ಯಕ್ತಿ.

ಯಾರಿಗೂ ಸೊಪ್ಪು ಹಾಕುವಾತನಲ್ಲ. ಈ ಲೇಖನವೂ ಆತ ಬರೆದದ್ದಲ್ಲ. ನಿಮಗೆ ತಿಳಿಯಲಿಲ್ಲವೆ? ಅದನ್ನು ಬರೆದದ್ದು ಆ ಹುಡುಗಿ. ಈತ ಪ್ರಕಟಿಸುವವ ಅಷ್ಟೆ."

"ಹೀಗೇನು? ನನಗೆ ಗೊತ್ತೇ ಆಗಲಿಲ್ಲವಲ್ಲ? ಆ ದರಿದ್ರ ಶಾಸ್ತ್ರಿ ಯಾವುದನ್ನೂ ಸರಿಯಾಗಿ ಹೇಳಲಿಲ್ಲ. ಯಾವಾಗಲೂ ಹಾಗೇ ಆತ. ಗಡಿಬಿಡಿ ಗಡಿಬಿಡಿ ಮಾಡಿ ಏನೇನೋ ಒದರಿಕೊಂಡು ಆ ಫಂಡು, ಈ ಫಂಡು, ಆ ಕಾಣಿಕೆ, ಈ ಸಹಾಯ ಅಂತ ಹಣ ಕಿತ್ತುಕೊಂಡು ಹೋಗುತ್ತಾನೆ. ಇದೂ ಒಂದು ಹಣ ಕೇಳುವ ಕೆಲಸವೋ ಏನೋ ಯಾರಿಗೆ ಗೊತ್ತು?" ಎನ್ನುತ್ತಾ ಗುರುಶಾಂತಪ್ಪ ಶಾಂತರಾಗಿ ಕುಳಿತುಕೊಂಡರು.

"ಏನಿದೆಯೊ ಯಾರು ಬಲ್ಲರು ಸಾಹುಕಾರರೆ ಆ ಹುಡುಗಿ ಬರೆದದ್ದೆಲ್ಲ ನಿಜವಿದ್ದರೂ ಇದ್ದೀತು. ಈ ಶಾಸ್ತ್ರಿ ಎಂಥ ಸಂಭಾವಿತ ಎಂಬುದೇನು ನಮಗೆ ಗೊತ್ತಿಲ್ಲವೆ? ಹಣವೊಂದು ಸಿಕ್ಕುವುದೆಂದು ತಿಳಿದರೆ ಎಂಥ ಹೇಸಿ ಕೆಲಸ ಮಾಡಲೂ ಹಿಂಜರಿಯುವವನಲ್ಲ ಈತ. ತಲೆ ಹಿಡಿಯುವ ಕೆಲಸದಲ್ಲೂ ಪ್ರವೀಣನೇ ಆಗಿದ್ದಾನೆ. ಆ ಸ್ವಾಮಿಗಳೂ ಸಡಿಲುಗಚ್ಚೆಯವರಾಗಿರಬಹುದು. ಅವರ ಆಡಂಬರವನ್ನು ಕಂಡರೆ ತಿಳಿಯುವುದಿಲ್ಲವೆ? ಆ ಜರತಾರಿ ರುಮಾಲು, ರೇಶಿಮೆಯ ಕಾವಿ, ಜರತಾರಿ ಶಲ್ಯ, ಚಿನ್ನದ ಉಂಗುರ ನೋಡಿಲ್ಲವೇ ನೀವು? ವಿರಕ್ತರಾದ ಸ್ವಾಮಿಗಳಿಗೆ ಈ ಬೆಡಗಿನ ಅಗತ್ಯವೇನು? ಥಳಕು ಪಳಕು ಮಾಡುತ್ತ ಹೆಂಗಸರ ಕಣ್ಣು ಸೆಳೆಯುವದಕ್ಕೇ ಇದೆಲ್ಲ ಆಡಂಬರವಿರಬೇಕು. ಸ್ವಾಮಿಗಳು ಈ ನಗರದಲ್ಲಿದ್ದರಲ್ಲ–ಆಗಲೇ ನನಗೆ ಅವರ ಬಗ್ಗೆ ಸಂಶಯ ಬಂದಿತ್ತು. ಆಶ್ರಮದಲ್ಲಿ ವಿಧವೆಯಾದ ಶಿಕ್ಷಕಿಯೊಬ್ಬಾಕೆ ಇದ್ದಳಲ್ಲ–ಸ್ವಾಮಿಗಳ ಬಿಡಾರವೂ ಅಲ್ಲಿಯೇ ಇತ್ತು. ಹೆಂಗಸರಿರುವ ಕಡೆಗಳಲ್ಲಿ ಸ್ವಾಮಿಗಳಾದವರು ಇರಬಾರದು. ಆದರೂ ... ಈ ಸ್ವಾಮಿಗಳು ..... ಆಗಲೇ ನನಗನ್ನಿಸಿತ್ತು. ಈತ ರಾವಣಸನ್ಯಾಸಿಯಾಗಿದ್ದರೂ ಇದ್ದಾನು ಎಂದು."

ಒಬ್ಬರು ಈ ಪ್ರಕಾರ ಮಾತನಾಡಿದೊಡನೆಯೆ ಇನ್ನೊಬ್ಬರೂ ಅದೇ ಧಾಟಿಯಲ್ಲಿ ಹೇಳತೊಡಗಿದರು: "ಹೌದು. ನೀವು ಹೇಳುವುದು ನಿಜವಿರಲೇಬೇಕು. ನನಗೂ ಬಲವಾದ ಸಂಶಯವಿತ್ತು ..... ಆದರೆ ನಮಗೆ ಅದೆಲ್ಲಾ

ಯಾಕೆ ಅಂತ ಸುಮ್ಮನಿದ್ದುಬಿಟ್ಟಿದ್ದೆ. ಈಗಿನ ಸ್ವಾಮಿಗಳಲ್ಲಿ ನೂರಕ್ಕೆ ತೊಂಭತ್ತು ಜನ ಅಡ್ಡದಾರಿ ತುಳಿಯುತ್ತಿರುವರೆಂಬಲ್ಲಿ ನನಗಾವ ಸಂದೇಹವೂ ಇಲ್ಲ. ಇಂದಿನ ಕಾಲದಲ್ಲಿ ಪೂರ್ಣ ವಿರಕ್ತರಾಗಿ ಉಳಿಯುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಪಾಪ, ಈ ಸ್ವಾಮಿಗಳನ್ನೂ ನಾನು ದೂಷಿಸುವುದಿಲ್ಲ. ಅವರೇನೂ ನಪುಂಸಕರಾಗಿರುವುದಿಲ್ಲವಲ್ಲ? ಅವರೂ ನಮ್ಮಂತೆಯೇ ಗಂಡಸರಾಗಿರುತ್ತಾರೆ. ತರುಣರಾಗಿರುವುದು ಬೇರೆ. ಸ್ವಾಮಿಗಳಾದ್ದರಿಂದ ಹಾಲು, ಹಣ್ಣು, ತುಪ್ಪ ಧಾರಾಳವಾಗಿ ಸಿಗುತ್ತಿರುತ್ತದೆ. ಮಾಡಲು ಕೆಲಸವೂ ಇರುವುದಿಲ್ಲ. ಸುಖವಾಗಿ ಉಂಡು ತಿಂದು ಆರೋಗ್ಯವಾಗಿರುತ್ತಾರೆ. ಇಂಥವರಿಗೆ ವಿರಕ್ತಿ ಬರಬೇಕೆಂದು ಹೇಳಿದರೆ ಹೇಗೆ ತಾನೆ ಬರಬೇಕು ಅದು ? ನಿಸರ್ಗದ ನಿಯಮಕ್ಕೇ ವಿರುದ್ಧವಾದ ಮಾತು. ಇಂಥವರಿಗೆ ಎಲ್ಲರಂತೆ ಮದುವೆ ಮಾಡುವುದೇ ಒಳ್ಳೆಯದು. ಹಾಗೆ ಮಾಡಿದಲ್ಲಿ ಬೇರೆ ಹೆಂಗಸರು ಕೆಡುವುದೂ ತಪ್ಪುತ್ತದೆ. ಪತ್ರಿಕೆಗಳಲ್ಲಿ ಇಂಥ ಬೊಬ್ಬಾಟವೇಳುವ ಪ್ರಸಂಗಗಳೂ ಬರುವುದಿಲ್ಲ."

"ಎಲ್ಲರಂತೆ ಇವರಿಗೂ ಮದುವೆ ಮಾಡಿದರೆ ಅವರನ್ನು ಸ್ವಾಮಿಗಳೆಂದು ಕರೆಯುವುದಾದರೂ ಯಾತಕ್ಕಾಗಿ ? ಅವರಿಗೂ ನಮಗೂ ವ್ಯತ್ಯಾಸವಾದರೂ ಏನುಳಿಯಿತು ?" ಎಂದು ಗುರುಶಾಂತಪ್ಪ ಕೇಳಿದರು.

"ಈಗಲಾದರೂ ಏನು ವ್ಯತ್ಯಾಸವಿದೆ? ಈ ಕಾವಿ ಬಟ್ಟೆಯುವರಲ್ಲಿ ಎಷ್ಟು ಜನ ನಿಜಕ್ಕೂ ಬ್ರಹ್ಮಚಾರಿಗಳಾಗಿದ್ದಾರೆಂಬುದನ್ನು ಅವರೇ ತಮ್ಮ ಆತ್ಮಸಾಕ್ಷಿಯಾಗಿ ಹೇಳಲಿ. ಕಾಲ ಬದಲಾಗಿದೆ. ರೀತಿ ನೀತಿಗಳು ಬದಲಾಗಿದೆ. ವಾತಾವರಣ ಬದಲಾಗಿದೆ. ಬದಲಾದ ಕಾಲಕ್ಕೆ ತಕ್ಕ ಹಾಗೆ ನಮ್ಮ ಸಂಪ್ರದಾಯಗಳೂ ಬದಲಾಗಬೇಕಾದ್ದು ಅಗತ್ಯ. ಇಂದಿನ ಕಾಲಮಾನದಲ್ಲಿ ಈ ಸ್ವಾಮಿಗಳಿಂದ, ಈ ಮಠಗಳಿಂದ ಸಮಾಜಕ್ಕಾಗುವ ಉಪಯೋಗವಾದರೂ ಏನು ಸಾಹುಕಾರರೇ? ನಡೆದುಬಂದ ಸಂಪ್ರದಾಯ ಎಂದು ಹೇಳುತ್ತ ಅದಕ್ಕೇ ಜೋತುಕೊಂಡಿರಬಾರದು. ಯಾವುದರ ಅಗತ್ಯವಿಲ್ಲವೋ ಅದನ್ನು ತ್ಯಜಿಸಬೇಕು."

"ನೀವು ಹೇಳುವುದೂ ಒಂದು ದೃಷ್ಟಿಯಿಂದ ಸರಿಯೆಂದೇ ತೋರುತ್ತದೆ. ಆದರೂ ಈ ವಿಷಯದಲ್ಲಿ ಮುಂದಾಗಿ ಕೆಲಸವಾ[illegible] ?"

"ಹರಿಹರನಂಥ ತರುಣರಿರುವರಲ್ಲ? ಅವರು ಮಾಡಲಿ. ನಾವು ಅವರಿಗೆ ನೆರವಾಗದಿದ್ದರೂ ಚಿಂತೆಯಿಲ್ಲ. ವಿರೋಧವನ್ನಾದರೂ ಮಾಡದಿದ್ದರೆ ಸಾಕು-ಶಾಸ್ತ್ರಿಯಂಥ ಸ್ವಾರ್ಥಿಗಳ ಮಾತು ಕೇಳಿಕೊಂಡು."

"ಹರಿಹರ ಬ್ರಾಹ್ಮಣರ ಮಾತು ಕೇಳಿಕೊಂಡು ಹೀಗೆಲ್ಲ ನಮ್ಮ ಸಮಾಜದ ವಿರುದ್ಧ ಅಪಪ್ರಚಾರ ನಡೆಸಿದರೆ ಹೇಗೆ?"

"ಪಾಪ, ಆ ಬ್ರಾಹ್ಮಣರನ್ನೇಕೆ ಇದರಲ್ಲಿ ಎಳೆಯಬೇಕು. ಅವರ ಸಮಸ್ಯೆಗಳೇ ಅವರಿಗೆ ಸಾಕಷ್ಟಿವೆ. ಅದೆಲ್ಲಾ ಸುಳ್ಳು. ನಿಮ್ಮನ್ನು ರೊಚ್ಚಿಗೆಬ್ಬಿಸಲು ಶಾಸ್ತ್ರಿಯಂಥವರು ಎಬ್ಬಿಸುವ ಹುಯಿಲು ಅದು. ಅದರಲ್ಲೇನೂ ಅರ್ಥವಿಲ್ಲ. ಜಗತ್ತೆಲ್ಲ ಒಂದೇ ಎಂಬ ವಿಚಾರ ಹಿರಿದಾಗುತ್ತಿರುವ ಈ ಕಾಲದಲ್ಲಿ ನಾವು ಬ್ರಾಹ್ಮಣ ಲಿಂಗಾಯತ ಎಂದು ಭೇದಭಾವ ಮಾಡುತ್ತ ಕೂಡ್ರುವುದು ಮೂರ್ಖತನವೇ ಸರಿ. ಶಾಸ್ತ್ರಿಯಂಥ ಸ್ವಾರ್ಥಿಗಳೇ ತಮ್ಮ ಲಾಭಕ್ಕಾಗಿ ಈ ಭೇದಭಾವಕ್ಕೆ ಪುಟ ಕೊಡುತ್ತಾರೆ. ಅದಕ್ಕೆ ನಿಮ್ಮಂಥವರೂ ಬಲಿ ಬೀಳಬಾರದು."

ಗುರುಶಾಂತಪ್ಪ ಮತ್ತೆ ಇಸ್ಪೀಟು ಎಲೆಗಳನ್ನು ಕೈಗೆತ್ತಿಕೊಂಡರು. "ಹೋಗಲಿ ಬಿಡಿರಿ. ಈ ರಾಜಕಾರಣದಿಂದ ನಮಗಾಗಬೇಕಾದ್ದೇನು?" ಎಂದು ಹೇಳುತ್ತ ಎಲೆಗಳನ್ನು ಹಂಚತೊಡಗಿದರು.

ಸರಸುವಿನ ತವರೂರಿನಲ್ಲಿಯಂತೂ ಪ್ರಚಂಡ ಕೋಲಾಹಲವನ್ನುಂಟು ಮಾಡಿದ್ದಿತು ಆ ಜಾಹೀರಾತು.

ತಮ್ಮೂರಿನ ಮಠದ ಸ್ವಾಮಿಗಳ ವಿಷಯವಾಗಿ ಭಯಂಕರ ವಾರ್ತೆಯೊಂದು ಪ್ರಕಟವಾಗಿದೆಯೆಂಬ ಸುದ್ದಿ ಹರಡುತ್ತಲೂ ಓದು ಬಲ್ಲ ಜನರೆಲ್ಲರೂ 'ಜನಪದ'ದ ಮಾರಾಟಗಾರನ ಅಂಗಡಿಗೆ ಧಾವಿಸತೊಡಗಿದರು. ಆತ ತರಿಸಿದ್ದ ಪ್ರತಿಗಳೆಲ್ಲವೂ ಅರ್ಧತಾಸಿನೊಳಗಾಗಿ ಮಾರಾಟವಾಗಿ ಹೋಗಿದ್ದುವು. "ಪ್ರತಿಗಳೆಲ್ಲಾ ತೀರಿಹೋಗಿವೆ," ಎಂದು ಆತ ಹೇಳಿದರೂ ಜನ ಹಿಂದಿರುಗಲಿಲ್ಲ. "ಒಂದು ರೂಪಾಯಿಗಾದರೂ ಒಂದು ಪ್ರತಿ ಕೊಡು ಮಹಾರಾಯ!" ಎಂದು ಆತನನ್ನು ಪೀಡಿಸತೊಡಗಿದರು.

ಪ್ರತಿಗಳಿಗೆ ಬೇಡಿಕೆ ವಿಪರೀತವಾಗಿದೆಯೆಂಬ ವಿಷಯ ಚೆನ್ನಪ್ಪಗೌಡರಿಗೆ ಗೊತ್ತಾಗುತ್ತಲೂ ಅವರು ಸ್ಥಳೀಯ ಮುದ್ರಣಾಲಯವೊಂದರಲ್ಲಿ ಆ

ಜಾಹೀರಾತಿನ ಬಿಡಿಪ್ರತಿಗಳನ್ನು ಮುದ್ರಿಸಿ ಹಂಚಿಸಿದರು. ಸಾಯಂಕಾಲ ವಾಗುವುದರೊಳಗಾಗಿ ಊರಿನಲ್ಲಿ ಎಲ್ಲರ ಬಾಯಲ್ಲೂ ಸ್ವಾಮಿಗಳ ವಿಲಾಸ ಯಾತ್ರೆಯ ವಿಷಯವೇ. ಗದಿಗೆಮ್ಮ, ನಾಗಮ್ಮ, ಬಸಪ್ಪಸೆಟ್ಟರು ಮೊದ ಲಾದವರು ಮನೆ ಬಿಟ್ಟು ಹೊರಬೀಳಲು ಸಾಧ್ಯವಾಗಲಿಲ್ಲ. ಅನೇಕರು ಗದಿ ಗೆಮ್ಮನ ಮನೆಯೆದುರಿಗೆ ಬೇಕೆಂತಲೇ ಹಾಯ್ದು ಆಕೆಗೆ ಕೇಳಿಸುವ ಹಾಗೆ ಗಟ್ಟಿಯಾಗಿ ನಗುತ್ತ ಹೊರಟಿದ್ದರು.

ಚೆನ್ನಪ್ಪಗೌಡರ ಹಿಂಬಾಲಕರ ಪ್ರಯತ್ನದ ಫಲವಾಗಿ ಸಾಯಂಕಾಲ ಮಾರುಕಟ್ಟೆಯೆದುರಿನ ಬಯಲಿನಲ್ಲಿ ಸಾರ್ವಜನಿಕ ಸಭೆಯೊಂದು ಜರುಗಿತು. ಅರ್ಥಾತ್ ಗೌಡರೇ ಅಧ್ಯಕ್ಷರಾಗಿದ್ದರು. "ಬರೀ ಹೆಂಗಸರನ್ನು ಕೆಡಿಸುತ್ತ ಆ ಊರು ಈ ಊರು ಸುತ್ತಿ ಮಠದ ಹಣವನ್ನು ಹಾಳುಮಾಡುವ ಈ ಸ್ವಾಮಿಗಳನ್ನು ಕೂಡಲೇ ತೆಗೆದುಹಾಗಿ ಬಿಡಬೇಕು. ಪ್ರಭುಸ್ವಾಮಿಗಳನ್ನೇ ಮತ್ತೆ ಕರೆದುತಂದು ಅಧಿಕಾರಕ್ಕೇರಿಸಬೇಕು," ಎಂದು ಮೊದಲಾಗಿ ನಾಲ್ಕೈದು ಜನರು ಭಾಷಣಮಾಡಿದರು. ಜಾಹೀರಾತನ್ನು ಓದಿ ಉದ್ರೇಕಗೊಂಡಿದ್ದ ಹೈಸ್ಕೂಲು ವಿದ್ಯಾರ್ಥಿಯೊಬ್ಬ—"ಇಂಥ ಹೇಸಿ ಕೆಲಸಮಾಡುವ ಆ ಸ್ವಾಮಿ ಯನ್ನು ಮಠಕ್ಕೆ ಮಾತ್ರವಲ್ಲ–ಈ ಊರಿನಲ್ಲೇ ಸೇರಿಸಕೂಡದು. ಸಾರ್ವ ಜನಿಕ ರೀತಿಯಿಂದ ಅವರ ಕೃತ್ಯಗಳ ವಿಚಾರಣೆ ನಡೆಯಬೇಕು," ಎಂದು ಹೇಳಿದ. ಸಭೆಗೆ ಏಳೆಂಟುಸಾವಿರ ಜನ ಸೇರಿದ್ದರು. ಎಲ್ಲರೂ ಉದ್ರೇಕಿತ ರಾಗಿದ್ದುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅಂತೆಯೆ, ದೂರದ ಅಂಗಡಿ ಯೊಂದರಲ್ಲಿ ಕುಳಿತುಕೊಂಡು ಕಾರ್ಯಕಲಾಪಗಳನ್ನೆಲ್ಲ ನಿರೀಕ್ಷಿಸುತ್ತಿದ್ದ ಮಲ್ಲಪ್ಪಸೆಟ್ಟರಿಗೆ ವಿರೋಧದ ಧ್ವನಿಯೆತ್ತುವ ಧೈರ್ಯವಾಗಲಿಲ್ಲ. ಇದು ವರೆಗೆ ಅವರ ಪಕ್ಷದಲ್ಲಿದ್ದ ಜನರೇ ಆ ಜಾಹೀರಾತನ್ನು ಕಂಡ ಬಳಿಕ ಒಡೆದು ಹೋಗಿದ್ದರು. ಇಂಥ ಸಂದರ್ಭದಲ್ಲಿ ವಿರೋಧಮಾಡುವುದರಿಂದ ಒಳ್ಳೆಯ ಪರಿಣಾಮವಾಗದೆಂಬುದನ್ನು ಕಂಡುಕೊಂಡು, ಉಪಾಯವಾಗಿಯೆ ಈ ಪ್ರಸಂಗವನ್ನೆದುರಿಸಬೇಕೆಂದು ಅವರು ನಿರ್ಧರಿಸಿದ ಹಾಗಿದ್ದಿತು.

ಆದೇ ದಿನ ರಾತ್ರಿ ಮಲ್ಲಪ್ಪಸೆಟ್ಟರ ಮೋಟಾರು ಊರಿನವರಿಗೆ ಗೊತ್ತಾಗ ದಂತೆ ನಗರಕ್ಕೆ ಹೊರಟಿತು. ಬಸಪ್ಪಸೆಟ್ಟರು, ನಾಗಮ್ಮ, ಗದಿಗೆಮ್ಮ, ಮೂವರೂ ಅವರ ಜೊತೆಗೆ ಹೊರಟರು. ತಂದೆತಾಯಿಗಳು ಬೇಡವೆಂದು

ಹೇಳಿದರೂ ಕೇಳದೆ ಗೌರಿಯೂ ಹಟ ಹಿಡಿದು ತಾನೂ ಅವರೊಂದಿಗೆ ಹೊರಟಿ
ದ್ದಳು. ತನ್ನ ಪ್ರೀತಿಯ ಅಕ್ಕನನ್ನು ಯಾವಾಗ ನೋಡುವೆನೊ ಎಂದ
ಆ ಪುಟ್ಟ ಜೀವ ಪರಿತಪಿಸುತ್ತಿತ್ತು.

"ನಿಮ್ಮ ಮಗಳು ಹೀಗೆಲ್ಲಾ ಬರೆದುಕೊಡಬಹುದೆಂದು ಯಾರು ತಿ
ಳಿದ್ದರು ಬಸಪ್ಪಣ್ಣ. ಬಹಳ ತಪ್ಪುಮಾಡಿದಳು," ಎಂದರು ಮಲ್ಲಪ್ಪಸೆಟ್ಟರು

"ಏನುಮಾಡುವುದು ಸೆಟ್ಟರೆ. ಈಗಿನ ಕಾಲದ ಹುಡುಗರು. ಆ ಪಿಟ
ಲಿನ ಶಿವಮೂರ್ತಿಯೊಂದಿಗೆ ಆಕೆ ಓಡಿಹೋದಾಗಲೇ ನಮಗೆಲ್ಲಾ ಕಲಂಕ
ಹಚ್ಚಿದ್ದಳು. ಅಷ್ಟಕ್ಕೇ ಸಮಾಧಾನವಾಗಲಿಲ್ಲವೇನೊ. ಈಗ ಇಂಥ
ಭಯಂಕರ ಕೆಲಸ ಮಾಡಿದ್ದಾಳೆ," ಎಂದರು ಬಸಪ್ಪಸೆಟ್ಟರು.

ಅದುವರೆಗೂ ಸುಮ್ಮನೆ ಕುಳಿತಿದ್ದ ನಾಗಮ್ಮ ಧ್ವನಿಯೆತ್ತಿ ನುಡಿದಳು:
"ಅವಳನ್ನು ದೂಷಿಸಿದರೆ ಏನು ಉಪಯೋಗ? ನಿಮ್ಮಿಂದಲೇ ಇಂಥ ರಗಳೆ
ಬಂದದ್ದು. ಕ್ಷಯರೋಗಿಯಂತಿದ್ದವನಿಗೆ ನಮ್ಮ ಮಗಳನ್ನು ಕೊಡುವುದ
ಬೇಡವೆಂದು ನಾನೆಷ್ಟು ಹೇಳಿದರೂ ನೀವು ಕೇಳಲಿಲ್ಲ. ಅವರ ಆಸ್ತಿಗೆ ಮರು
ಳಾಗಿ ಮದುವೆ ಮಾಡಿದಿರಿ. ಆತ ಮಣ್ಣುಮುಕ್ಕಿದ. ಯಾವ ಸುಖವನ್ನೂ
ಕಾಣದೆ ನನ್ನ ಮಗಳು ವಿಧವೆಯಾದಳು. ಆಮೇಲೆಯಾದರೂ ಇನ್ನೊಂದ
ಮದುವೆ ಮಾಡಿದ್ದರೆ ನೆಟ್ಟಗಾಗುತ್ತಿತ್ತು. ಮನೆತನದ ಮರ್ಯಾದೆ
ದೊಡ್ಡಸ್ತನ ಹಾಗೆ ಹೀಗೆ ಅಂತ ಹೇಳಿಕೊಂಡು ಸರಸುವನ್ನು ಕೊಳೆಯಿಸಿ
ದಿರಿ. ಈಗಿನ ಕಾಲದಲ್ಲಿ ವಯಸ್ಸಿಗೆ ಬಂದ ಹುಡುಗಿಯರು ಗಂಡನಿಲ್ಲದೆ ಇರಲು
ಸಾಧ್ಯವಾದೀತೇ? ನಿಮಗೆ ಅದಾವುದೂ ತಿಳಿಯಲಿಲ್ಲ. ನಾನೇನಾದರೂ
ಹೇಳಲು ಬಂದರೆ ಗದರಿಸಿಬಿಡುತ್ತಿದ್ದಿರಿ. ತವರುಮನೆಯಲ್ಲಿದ್ದಲ್ಲಿ ಕೊನೆಯ
ವರೆಗೂ ಹೀಗೇ ಸೆರೆಮನೆಯಲ್ಲಿ ಕೊಳೆಯಬೇಕಾದೀತೆಂದು ಹೆದರಿ ಸರಸೂ ಶಿವ
ಮೂರ್ತಿಯೊಂದಿಗೆ ಹೊರಟುಹೋದಳು. ಅವರಿಬ್ಬರನ್ನೂ ಕರೆಯಿಸಿ ಮನೆ
ಯಲ್ಲಿಟ್ಟುಕೊಳ್ಳೋಣ ಎಂದು ನಾನೆಷ್ಟು ಹೇಳಿದರೂ ಕೇಳಲಿಲ್ಲ. ಅವ
ರಿಬ್ಬರು ಗಂಡಹೆಂಡಿರು ನಮ್ಮಲ್ಲೇ ಸುಖವಾಗಿ ಇದ್ದಲ್ಲಿ ಇದಾವುದೂ
ನಡೆಯುತ್ತಿರಲಿಲ್ಲವೇನೊ."

"ನಾಗಮ್ಮನವರು ಹೇಳುವುದು ನಿಜ. ಶಿವಮೂರ್ತಿಯನ್ನೂ ಸರಸ

ವನ್ನೂ ಮನೆಯಲ್ಲಿ ಸೇರಿಸಿಕೊಳ್ಳಬೇಕಾಗಿತ್ತು," ಎಂದು ಗದಿಗೆಮ್ಮನೂ ಧ್ವನಿ ಸೇರಿಸಿದಳು.

ಬಸಪ್ಪಸೆಟ್ಟರು ರೇಗಿ ನುಡಿದರು: "ನಮ್ಮ ಮನೆತನದಲ್ಲೇ ಇದು ವರೆಗೆ ಯಾರದೂ ಪುನರ್ವಿವಾಹವಾಗಿಲ್ಲ. ಇನ್ನು ನನ್ನ ಮಗಳು...."

ನಾಗಮ್ಮನಿಗೂ ಸಿಟ್ಟುಬಂದಂತಾಯಿತು. ಆಕೆ ಅಣಕದ ಸ್ವರದಲ್ಲಿ ನುಡಿದಳು. "ಮನೆತನದಲ್ಲಿ ಯಾರೂ ಮತ್ತೊಂದು ಮದುವೆಯಾಗಿಲ್ಲವೆ? ಎಂಥ ದೊಡ್ಡ ಸುಳ್ಳು ಹೇಳುತ್ತೀರಿ. ಸ್ವತಃ ನೀವೇ ಎರಡನೆಯ ಮದುವೆ ಮಾಡಿಕೊಂಡಿದ್ದೀರಲ್ಲ—ನನ್ನನ್ನೇ. ಈ ವಿಷಯ ಮರೆತೇ ಹೋಗಿದೆಯೇ ನಿಮಗೆ?"

ಬಸಪ್ಪಸೆಟ್ಟರು ತಬ್ಬಿಬ್ಬಾಗಿ ಹೇಳಿದರು: "ನಾನು....ನನ್ನ ಮಾತು ಬೇರೆ. ನಾವು ಗಂಡಸರು. ಹೆಣ್ಣುಮಕ್ಕಳ ಮಾತು ಹಾಗಲ್ಲ...."

"ಹೆಣ್ಣುಮಕ್ಕಳು ಎರಡನೆಯ ಮದುವೆಯಾದ ಮಾತ್ರಕ್ಕೆ ಮರ್ಯಾದೆ ಹೋಗುತ್ತದೆ, ಗಂಡಸರು ಆದರೆ ಹೋಗುವುದಿಲ್ಲ ಅಲ್ಲವೆ! ಎಂಥ ನ್ಯಾಯ ನಿಮ್ಮದು ಬಸಪ್ಪಣ್ಣ. ನೀವಿನ್ನೂ ಹದಿನೆಂಟನೇ ಶತಮಾನದಲ್ಲಿದ್ದಂತೆ ಕಾಣು ತ್ತದೆ. ಈ ಅರ್ಥವಿಲ್ಲದ ಗೊಡ್ಡು ರೂಢಿಗಳನ್ನೆಲ್ಲ ಯಾವಾಗ ಬಿಡುವಿರಿ?" ಎಂದು ಗದಿಗೆಮ್ಮ ಕೇಳಿದಳು.

ಆದರೂ ಬಸಪ್ಪಸೆಟ್ಟರಿಗೆ ಆ ಮಾತು ಹಿಡಿಸಲಿಲ್ಲ. ಈ ಗದಿಗೆಮ್ಮ ತನ್ನ ಈ ಪತ್ನಿ ಇಂಥವರೆಲ್ಲ ಸೇರಿಯೆ ತಮ್ಮ ಮಗಳ ಮನಸ್ಸನ್ನು ಕೆಡಿಸಿರ ಬೇಕೆಂದು ಅವರಿಗೆನ್ನಿಸಿತು.

"ಅದೆಲ್ಲ ಇರಲಿ ಬಿಡಿರಿ," ಎಂದು ಮಲ್ಲಪ್ಪಸೆಟ್ಟರು ನಡುವೆ ಬಂದರು. "ಆದದ್ದು ಆಗಿಹೋಯಿತು. ಹಾಗಾಯಿತು ಹೀಗಾಯಿತು ಅಂತ ನಾವು ನಾವೇ ಬಡಿದಾಡುವುದರಲ್ಲಿ ಅರ್ಥವಿಲ್ಲ. ನಾವೆಲ್ಲರೂ ಸೇರಿ ಏನಾದರೂ ಮಾಡಿ ಆ ಚೆನ್ನಪ್ಪಗೌಡನಿಗೆ ಬುದ್ಧಿ ಕಲಿಸಬೇಕಾಗಿದೆ. ಈ ಜಾಹೀರಾತು ಪ್ರಕಟವಾಗಿ ಆತನ ಕೈಗೆ ದೊಡ್ಡದೊಂದು ಬಾಂಬು ಸಿಕ್ಕಂತಾಗಿದೆ. ಅದರ ಬಿಡಿ ಪ್ರತಿ ಹೊರಡಿಸಿ ಊರಲ್ಲೆಲ್ಲ ಹಂಚಿಸಿದ. ಸಭೆ ಕೂಡಿಸಿ ಜನರನ್ನು ಉದ್ರೇಕಗೊಳಿಸಿದ. ಈ ಪ್ರಸಂಗವನ್ನು ತನ್ನ ಸ್ವಾರ್ಥಕ್ಕಾಗಿ ದುರುಪ ಯೋಗಪಡಿಸಿಕೊಂಡು ಮತ್ತೆ ಆ ಮುದಿಸ್ವಾಮಿಯನ್ನು ಕರೆದುತಂದು ಚಿತ

ಕ್ಕೇರಿಸಿ ನಮಗೆಲ್ಲ ಅವಮಾನ ಮಾಡಬೇಕೆಂಬ ಹೊಂಚು ಹಾಕಿರಬೇಕು.
ಏನಾದರೂ ಮಾಡಿ ಈ ಹೊಂಚನ್ನು ಕೂಡಲೆ ಮುರಿಯಬೇಕು. ಇಲ್ಲವಾದರೆ
ನಾವಿಲ್ಲಿ ತಲೆಯೆತ್ತಿ ಬಾಳುವಂತಿಲ್ಲ. ಊರಿಗೆಲ್ಲಾ ಗೌಡನೇ ಯಜಮಾ
ನಾಗುವನು. ಆಮೇಲೆ ನಮ್ಮನ್ನಾರು ಕೇಳಬೇಕು? ಏನೆನ್ನುತ್ತೀ
ಬಸಪ್ಪಣ್ಣ?"

ಬಸಪ್ಪಸೆಟ್ಟರು ಮೌನವಾಗಿದ್ದರು. ತಮ್ಮ ವೈಯಕ್ತಿಕ ಮರ್ಯಾ
ದೆಯೊಂದು ಉಳಿದರೆ ಸಾಕಾಗಿದ್ದಿತು ಅವರಿಗೆ. ಊರಿಗೆ ಯಾರು ಮುಖಂ
ಡರಾಗಿದ್ದರೂ ಅಷ್ಟೆ. ಮಲ್ಲಪ್ಪಸೆಟ್ಟರ ಪಕ್ಷ, ಚೆನ್ನಪ್ಪಗೌಡರ ಪಕ್ಷ, ಬಣಜಿ
—ಪಂಚಮಸಾಲಿ ಜಗಳ, ಮಠದ ಪೀಠದ ಬಗೆಗೆ ನಡೆದ ಕಲಹ—
ಯಾವುದರಲ್ಲೂ ಅವರಿಗೆ ಆಸಕ್ತಿಯಿರಲಿಲ್ಲ. ತಮ್ಮ ವ್ಯಾಪಾರವಾಯಿತು,
ತಮ್ಮ ಮನೆಯಿತಾಯಿತು, ಲಿಂಗಪೂಜೆಯಾಯಿತು, ಶಿವಲೀಲಾಮೃ
ಪಾರಾಯಣವಾಯಿತು. ಬೇರೆ ಯಾವುದರಲ್ಲೂ ಅವರಿಗೆ ಮನಸ್ಸು ತೊಡಗ
ತ್ತಿರಲಿಲ್ಲ. ಪೀಠದ ಮೇಲೆ ಯಾವ ಸ್ವಾಮಿಗಳಿದ್ದರೂ ಸರಿ, ಅವರು ಶಿ
ಸ್ವರೂಪಿಗಳೆಂದು ಅವರ ನಂಬುಗೆ. ಅಂತೆಯೆ, ಜೀರಾನ ವಿಚಾರಗ
ಗೊಡವೆಗೆ ಬೀಳದೆ ಅವರಲ್ಲಿ ಭಕ್ತಿಯಿರಿಸಿ ಸೇವೆ ಸಲ್ಲಿಸುತ್ತಿದ್ದರು. ಸಿದ್ಧವೀ
ಸ್ವಾಮಿಗಳೂ ಪೂರ್ಣ ವಿರಕ್ತರೆಂದೇ ಅವರು ತಿಳಿದಿದ್ದರು. ಅವರ ಶೀಲ
ವಿಷಯವಾಗಿ ಒಮ್ಮೆಯೂ ಸಂದೇಹ ಬಂದಿರಲಿಲ್ಲ. ಆದರೆ ತಮ್ಮ ಸ್ವಾ
ಮಿಗಳೇ ಬರೆದ ಲೇಖನದ ವಿಷಯ ಓದಿದಾಗ ಅವರು ಗೊಂದಲದಲ್ಲಿ ಸಿಲು
ಬಿದ್ದಿದ್ದರು. ಸಿದ್ಧವೀರಸ್ವಾಮಿಗಳು ಅಂಥ ಕೃತ್ಯಗಳನ್ನೆಸಗಿರಬಹುದೆಂ
ದನ್ನು ನಂಬಲು ಸಾಧ್ಯವಾಗಿರಲಿಲ್ಲ. ಸರಸುವಿಗೆ ತಲೆ ಕೆಟ್ಟದೆಯೊ ಏನೆ
ಅಂತೆಯೆ ಆಕೆ ಹೀಗೆಲ್ಲ ಬರೆದಿರಬಹುದು, ಅಥವಾ ಸಿದ್ಧವೀರಸ್ವಾಮಿಗ
ದ್ವೇಷಿಗಳಲ್ಲಿ ಯಾರಾದರೂ ಬೇಕೆಂತಲೇ ಅದನ್ನು ಬರೆಯಿಸಿರಬಹು
ಎಂದೂ ಅವರಿಗೆನ್ನಿಸುತ್ತಿತ್ತು.

"ಇದೆಲ್ಲಾ ಆ ಚೆನ್ನಗೌಡನ ಕಾರಸ್ಥಾನವೇ ಇರಲಿಕ್ಕಿಲ್ಲವೆ
ದ್ಯಾಗೆ ಹೇಳಬೇಕು? ಆತನೇ ಈ ಜಾಹೀರಾತು ಹೊರಡುವಂತೆ ಮ
ಡಿರಬಾರದೇಕೆ?" ಎಂದರು ಮಲ್ಲಪ್ಪಸೆಟ್ಟರು.

ಅದಕ್ಕೆ ಗಡಿಗೆಪ್ಪ—"ಎಲ್ಲಿಂದ ಎಲ್ಲಿಗೆ ವಿಚಾರ ಓಡಿಸುತ್ತೀರಿ ಸೆಟ್ಟ

ಗೌಡರಿಗೆ ಇಷ್ಟೊಂದು ಬುದ್ಧಿಯಾದರೂ ಎಲ್ಲಿಂದ ಬಂದೀತು. ಯಾರ ಕಾರಸ್ಥಾನವೂ ಇಲ್ಲ ಇದರಲ್ಲಿ. ಇದೆಲ್ಲಾ ನಿಜಕ್ಕೂ ನಡೆದಿರಬೇಕು. ಅಂತೆಯೆ, ಉದ್ರೇಕಗೊಂಡ ಸರಸು ಎಲ್ಲವನ್ನೂ ಬರೆದುಕೊಟ್ಟಿರಬೇಕು," ಎಂದಳು.

ಎಲ್ಲರೂ ದಂಗುಬಡೆದವರಂತೆ ಗದಿಗೆಮ್ಮನ ಮುಖವನ್ನೇ ಮಿಕಿ ಮಿಕಿ ನೋಡತೊಡಗಿದರು.

"ನಿಜವಿರಬಹುದೇ ಗದಿಗೆಮ್ಮ? ಇದೆಲ್ಲಾ....ಎಲ್ಲಾ ನಿಜವಿರಬಹುದೇ?" ಎಂದು ಕೇಳಿದಳು ನಾಗಮ್ಮ.

"ನಿಜವೇ ಎಂದು ನನಗಂತೂ ಅನ್ನಿಸುತ್ತದೆ. ಸ್ವಾಮಿಗಳು ಇಂಥವರೆಂಬ ಅನುಭವ ನನಗೂ ಇದೆ," ಎಂದು ಸ್ಪಷ್ಟವಾಗಿ ನುಡಿದಳು ಗದಿಗೆಮ್ಮ.

"ನಿಮಗೂ? ಅಂದರೆ....ಅಂದರೆ....ಆ ಜಾಹೀರಾತಿನಲ್ಲಿ ನಿಮ್ಮ ಬಗ್ಗೆ ಬರೆದದ್ದು ನಿಜವೇ ಅನ್ನಿರಿ...."

ಗದಿಗೆಮ್ಮ ಶಾಂತಸ್ವರದಲ್ಲಿ ಹೇಳಿದಳು: "ಹೌದು. ಅದೆಲ್ಲಾ ನಿಜ. ಆಗಲೇ ಈ ಸ್ವಾಮಿಯ ಬಗ್ಗೆ ನಾನು ನಿಮ್ಮನ್ನು ಎಚ್ಚರಿಸಬೇಕಾಗಿತ್ತು. ಎಚ್ಚರಿಸಲಿಲ್ಲ. ತಪ್ಪು ಮಾಡಿದೆ. ಸರಸು ಇಲ್ಲಿ ಇರುವಾಗಲೇ ಅವರು ಆಕೆಯ ಮೇಲೆ ಕಣ್ಣಿರಿಸಿದ್ದರು. ಜಾತ್ರೆಯ ರಾತ್ರಿ ನೀವು ಆಟ ನೋಡಲು ಬಂದಿದ್ದಿರಲ್ಲ–ಆಗ ಆಕೆಯನ್ನು ದೊರಕಿಸಿಕೊಡಬೇಕೆಂದು ಶಾಸ್ತ್ರಿ ನನಗೆ ಒತ್ತಾಯ ಮಾಡುತ್ತಿದ್ದ."

"ಯಾರು ಆ ಗಂಗಾಧರಶಾಸ್ತ್ರಿಯೆ? ಎಲಾ ಹೊಲೆಯ!"

"ಆತನನ್ನು ದೂಷಿಸಿ ಏನು ಉಪಯೋಗ? ಸ್ವಾಮಿಗಳಿಂದ ಸಿಕ್ಕುವ ಹಣದಾಸೆಗಾಗಿ ಆತ ಇಂಥ ಕೆಲಸ ಮಾಡುತ್ತಾನೆ."

ಎರಡೂ ಕೈಗಳಲ್ಲಿ ಮುಖ ಮುಚ್ಚಿಕೊಂಡು ಬಸಪ್ಪಸೆಟ್ಟರು ತಣ್ಣಗೆ ಕುಳಿತಿದ್ದರು. ಅವರ ಮನಸ್ಸಿನ ಮೇಲೆ ಬಲವಾದ ಆಘಾತವಾದಂತಿದ್ದಿತು. "ಸ್ವಾಮಿಗಳು ವ್ಯಭಿಚಾರ ಮಾಡಿದ್ದು ನಿಜ ಹಾಗಾದರೆ! ನಿಜ! ಗದಿಗೆಮ್ಮನೇ ಬಾಯಿಬಿಟ್ಟು ಹೇಳುತ್ತಾಳೆ. ನಿಜವಿರಲೇಬೇಕು. ನಾನು ದೇವರೆಂದು ತಿಳಿದಿದ್ದ ಸ್ವಾಮಿಗಳು ಹೀಗೆಲ್ಲ ಮಾಡಿದರೇ! ನನ್ನ ಮಗಳು....ನನ್ನ ಸ್ವಂತ ಮಗಳು....ಅಯ್ಯೋ...."

"ಅದೆಲ್ಲ ನಿಜವೇ ಇದ್ದರೂ ನಿಜವಲ್ಲವೆಂದೇ ನಾವು ಸಾಧಿಸಬೇಕು, ಗದಿಗೆವ್ವ. ಇಲ್ಲವಾದರೆ ನಿಮ್ಮ ಮರ್ಯಾದೆ, ಸರಸುವಿನ ಮರ್ಯಾದೆ ಬಸಪ್ಪಸೆಟ್ಟರ ಮರ್ಯಾದೆ, ನಮ್ಮೆಲ್ಲರ ಮರ್ಯಾದೆ ಹೋಗುವುದು. ಆ ಚೆನ್ನ ಗೌಡನಂತೂ ಇಂಥ ಸಂದರ್ಭಕ್ಕಾಗಿಯೇ ಕಾದುಕುಳಿತಿದ್ದಾನೆ. ನೀವೇನಾದರೂ ಈಗ ಇದೆಲ್ಲ ನಿಜ ಅಂತ ಹೇಳುತ್ತ ಹೊರಟಲ್ಲಿ ಆತ ಸಂತೋಷದಿಂದ ಕುಣಿದಾಡಬಹುದು." ಎಂದು ಮಲ್ಲಪ್ಪಸೆಟ್ಟರು ಹೇಳಿದರು.

"ಯಾವ ವಿಷಯ ಹೊರಟರೂ ಆ ಚೆನ್ನಪ್ಪಗೌಡರನ್ನ ನಡುವೆ ತಂದೇ ತರುತ್ತೀರಿ ನೀವು. ಇಂಥ ದ್ವೇಷ ನನಗೆ ಸೇರುವುದಿಲ್ಲ. ಸ್ವಾಮಿಗಳು ಅಡ್ಡ ದಾರಿ ತುಳಿದಿದ್ದಾರೆ. ಇನ್ನೂ ತುಳಿಯುತ್ತಿದ್ದಾರೆ. ಇದು ನಿಜವಿರುವಾಗ ಚೆನ್ನಪ್ಪಗೌಡರನ್ನೇಕೆ ಶಪಿಸಬೇಕೋ, ಸುಮ್ಮನೆ!" ಎಂದಳು ಗದಿಗೆವ್ವ. ಮಲ್ಲಪ್ಪಸೆಟ್ಟರು, ಸಿದ್ಧವೀರಸ್ವಾಮಿ, ಗಂಗಾಧರಶಾಸ್ತ್ರಿ ಈ ಮೂವರ ಬಗೆಗೂ ಆಕೆಗೆ ಜುಗುಪ್ಸೆಯಾಗಿತ್ತು. ಶಿಕ್ಷಕಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ತನ್ನ ಹಳ್ಳಿಗೆ ಹೊರಟುಹೋಗಬೇಕೆಂದು ಆಕೆ ನಿರ್ಧರಿಸಿದ್ದಳು. ನಗರಕ್ಕೆ ಹೊರಡಲು ಆಕೆಗೆ ಇಷ್ಟವಿರಲಿಲ್ಲವಾದರೂ ಮಲ್ಲಪ್ಪಸೆಟ್ಟರ ಒತ್ತಾಯಕ್ಕೊಳಗಾಗಿ ಅವರೊಂದಿಗೆ ಬರಬೇಕಾಗಿ ಬಂದಿದ್ದಿತು.

"ನಗರಕ್ಕೆ ಹೋದೊಡನೆ ಸರಸುವನ್ನ ಕಂಡು ಆ ಲೇಖನವನ್ನ ಪ್ರಕಟನೆಗೆ ಕೊಡದಂತೆ ಮಾಡಬೇಕು ನಾಗಮ್ಮನವರೆ," ಎಂದರು ಮಲ್ಲಪ್ಪಸೆಟ್ಟರು.

"ಈಗಾಗಲೆ ಆಕೆ ಕೊಟ್ಟುಬಿಟ್ಟಿದ್ದರೆ?"

"ಕೊಟ್ಟಿದ್ದರೆ ವಾಪಸು ಪಡೆಯಲು ಹಚ್ಚಬೇಕು. ಆಕೆ ಬೇಡವೆಂದಲ್ಲಿ ಅದನ್ನ ಪ್ರಕಟಿಸಲು ಯಾವ ಅಧಿಕಾರವೂ ಉಳಿಯುವುದಿಲ್ಲ ಪತ್ರಿಕೆಯವರಿಗೆ."

"ಆಗಬೇಕಾದ ಅನರ್ಥವೆಲ್ಲ ಈ ಜಾಹೀರಾತಿನಿಂದಲೇ ಆಗಿಹೋಗಿದೆಯಲ್ಲ?" ಎಂದಳು ಗದಿಗೆವ್ವ. "ಇನ್ನು ಆ ಲೇಖನ ಪ್ರಕಟವಾದರೂ ಅಷ್ಟೆ, ಆಗದಿದ್ದರೂ ಅಷ್ಟೆ."

"ಈ ಜಾಹೀರಾತಿನಿಂದಾದ ಅಪಪ್ರಚಾರವನ್ನೆಲ್ಲ ಸರಿಗೊಳಿಸುವುದಕ್ಕಾಗಿ ಅದೇ ಪತ್ರಿಕೆಯಲ್ಲಿ ಇನ್ನೊಂದು ಜಾಹೀರಾತು ಹಾಕಿಸಿದರಾಯಿತು.

ಸರಸುವಿನ ಸಹಿಯಿಂದಲೇ ಅದು ಪ್ರಕಟವಾಗಬೇಕು. ಈಚಿಗೆ ಕೆಲದಿನ ಗಳಿಂದ ತನಗೆ ಮಿದುಳಿನ ವಿಕಾರವಾಗಿದೆಯೆಂದೂ, ಆ ವಿಕಾರದ ಭರದಲ್ಲಿ ಆ ಬಗೆಯ ಲೇಖನವನ್ನು ಬರೆದುದಾಗಿಯೂ ತಿಳಿಸಿ ಅದರಲ್ಲಿ ಉಲ್ಲೇಖಿಸ ಲ್ಪಟ್ಟ ವಿಷಯಗಳಲ್ಲಿ ಸ್ವಲ್ಪವೂ ಸತ್ಯತೆಯಿಲ್ಲವಾದ್ದರಿಂದ ಜನರು ಸ್ವಾಮಿಗಳ ಬಗೆಗೂ ಇನ್ನಿತರರ ಬಗೆಗೂ ತಪ್ಪುಕಲ್ಪನೆ ಮಾಡಿಕೊಳ್ಳಬಾರದು—ಎಂದು ಆಕೆಯಿಂದ ಬರೆಯಿಸಬೇಕು."

"ಆಕೆ ಹಾಗೆಲ್ಲ ಬರೆದುಕೊಡಲು ಒಪ್ಪಬಹುದೆಂಬ ಭರವಸೆಯೇನು?"

"ಒಪ್ಪಿಸಬೇಕು. ಬಸಪ್ಪಣ್ಣಾ, ನಾಗಮ್ಮನವರು, ನೀವು, ನಾನು ಎಲ್ಲರೂ ಕೂಡಿ ಆಕೆಯ ಮನಸ್ಸು ಒಲಿಸಿ ಉಪಾಯದಿಂದ ಈ ಕೆಲಸ ಸಾಧಿಸ ಬೇಕು. ಯಾಕೆ ಬಸಪ್ಪಣ್ಣಾ, ಏನೆನ್ನುತ್ತೀರಿ?"

ಬಸಪ್ಪಸೆಟ್ಟರು ತಲೆ ಮೇಲಕ್ಕೆತ್ತದೆ ಅಳುಧ್ವನಿಯಲ್ಲಿ ನುಡಿದರು: "ಏನೋ....ನನಗಾವುದೂ ಹೊಳೆಯಲೊಲ್ಲದು. ನೀವೆಲ್ಲಾ ಕೂಡಿ ಏನ ನ್ನಾದರೂ ಮಾಡಿಕೊಳ್ಳಿರಿ. ಈ ತುಚ್ಛ ಪ್ರಪಂಚದ ಬಗೆಗೇ ಮನಸ್ಸು ಹೇಸಿಕೊಂಡಿದೆ ನನಗೆ. ಸ್ವಾಮಿಗಳು, ಸರಸು ಯಾರ ಮುಖವನ್ನೂ ನೋಡಲು ಇಚ್ಛೆಯಿಲ್ಲ."

ನಗರಕ್ಕೆ ಬಂದು ಮುಟ್ಟಿದ ಮೇಲೆ ಅವರೆಲ್ಲರೂ ನೇರವಾಗಿ 'ಜನಪದ' ಕಾರ್ಯಾಲಯಕ್ಕೆ ಹೋದರು.

ಮಲ್ಲಪ್ಪಸೆಟ್ಟರು ತಾವು ಬಂದ ವಿಷಯವನ್ನು ತಿಳಿಸಿ "ಈ ಲೇಖನ ವನ್ನು ಸರಸುವೇ ಬರೆದುಕೊಟ್ಟಳೇ?" ಎಂದು ಕೇಳಿದರು.

"ಅವರು ಬರೆದುಕೊಡದಿದ್ದಲ್ಲಿ ನಾನೇಕೆ ಈ ಉಪದ್ವ್ಯಾಪ ಮಾಡಬೇ ಕಾಗುತ್ತಿತ್ತು?" ಎಂದ ಹರಿಹರ.

"ಎಲ್ಲಿದೆ ಆ ಲೇಖ? ನೋಡೋಣ, ತೆಗೆಯಿರಿ," ಎಂದಳು ನಾಗಮ್ಮ.

"ಪತ್ರಿಕೆಯಲ್ಲಿ ಪ್ರಕಟವಾದ ಬಳಿಕ ನೋಡಬಹುದು. ಈಗ ಅದನ್ನು ಯಾರಿಗೂ ತೋರಿಸಲು ಸಾಧ್ಯವಿಲ್ಲ,"ಎಂದು ಗಂಭೀರವಾಗಿ ಹೇಳಿದ ಹರಿಹರ.

ಉಕ್ಕಿಬರುತ್ತಿದ್ದ ಕೋಪವನ್ನು ತಡೆಹಿಡಿದುಕೊಂಡು ಮಲ್ಲಪ್ಪಸೆಟ್ಟರು ಹೇಳಿದರು: "ಇಲ್ಲಿ ನೋಡಿರಿ ಹರಿಹರಪ್ಪ. ನನ್ನ ಮಾತು ಕೇಳಿರಿ. ಆದದ್ದು ಆಗಿಹೋಯಿತು. ಈ ಲೇಖನವನ್ನು ಮಾತ್ರ ಪ್ರಕಟಿಸಬೇಡಿ. ನಿಮ್ಮ

ಸ್ವತಃ ಲಿಂಗಾಯತರಾಗಿ ಲಿಂಗಾಯತ ಸಮಾಜದ ಹುಳುಕು ಹೊರಹಾಕ ಬಾರದು."

"ಮನೆಯೊಳಗಣ ಕಿಚ್ಚು ಮನೆಯ ಸುಡಬಹುದಲ್ಲದೆ ನೆರೆ ಮನೆಯ ಸುಡದು ಸೆಟ್ಟರೆ. ಅಣ್ಣ ಬಸವಣ್ಣ ಹೇಳಿದ ಆ ಮುತ್ತಿನಂಥ ಮಾತನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮ ಕೊಳಚೆಯನ್ನು ನಾವೇ ತೆಗೆದು ದೂರ ಬಿಸುಟಬೇಕಲ್ಲವೆ? ನಮ್ಮ ಕೊಳಚೆ ಎಂಬ ಕಾರಣ ದಿಂದ ಅದನ್ನು ಮನೆಯಲ್ಲೇ ಇಟ್ಟುಕೊಳ್ಳುವುದುಂಟೇ ?"

"ಆ ತತ್ವಜ್ಞಾನವಿರಲಿ ಹರಿಹರಪ್ಪ. ಕಡೆಯದಾಗಿ ಒಂದು ಮಾತು ಹೇಳುತ್ತೇನೆ. ದಯಮಾಡಿ ಅದನ್ನು ಪ್ರಕಟಿಸಬೇಡಿರಿ. ನೀವು ಕೇಳಿದಷ್ಟು ಹಣ ಕೊಡಿಸುತ್ತೇನೆ."

ಹಣದ ಮಾತು ಹೊರಡುತ್ತಲೂ ಹರಿಹರನಿಗೆ ತಾಳ್ಮೆ ತಪ್ಪಿದಂತಾ ಯಿತು. ಆತನೆಂದ: "ಹಾಗೆಲ್ಲ ಹಣಕ್ಕಾಗಿ ನನ್ನನ್ನು ಮಾರಿಕೊಳ್ಳುವ ವ್ಯಕ್ತಿ ನಾನಲ್ಲ ಸೆಟ್ಟರೆ. ಹಣ ಅಂದೊಡನೆ ಬಾಯಿ ಬಾಯಿ ಬಿಡುವ ಗಂಗಾ ಧರಶಾಸ್ತ್ರಿಯಂಥ ಪತ್ರಿಕೆಗಾರರೂ ಇರಬಹುದು. ಆದರೆ ಈ ಹರಿಹರ ಮಾತ್ರ ಅಂಥವರ ಸಾಲಿಗೆ ಸೇರಿದವನಲ್ಲ. ಸ್ವತಃ ದುಡಿದು ಜೀವರಿಳಿಸಿ ಬದುಕಬಲ್ಲ ಸಾಮರ್ಥ್ಯ ನನ್ನಲ್ಲಿದೆ. ಈ ಲೇಖನ ಬರೆದುಕೊಟ್ಟವರು ಸರಸಮ್ಮನವರು. ನಾನು ಕೇವಲ ಪ್ರಕಟಿಸುವಾತ. ಈಗ ಅವರೇ ಬಂದು ಇದನ್ನು ಪ್ರಕಟಿಸ ಬಾರದೆಂದು ಹೇಳಿದರೆ ಮಾತ್ರ ನಾನು ಬಿಡಬಹುದು. ಬೇರೆ ಯಾರು ಹೇಳಿ ದರೂ ಕೇಳುವಾತನಲ್ಲ."

ಮಲ್ಲಪ್ಪಸೆಟ್ಟರು ಎದ್ದು ನಿಂತರು. "ಸರಿ, ಆಕೆಯನ್ನೇ ಕರೆತಂದು ಹೇಳಿ ಸುತ್ತೇವೆ. ಎಲ್ಲಿದಾಳೆ ಆಕೆ?"

"ಸುಶೀಲಮ್ಮ ಅಂತ ನರ್ಸ್ ಇದಾರೆ. ಅವರಲ್ಲಿ."

ಮೋಟಾರು ಸೂಶಿಯ ಮನೆಗೆ ಹೊರಟಿತು. ಸೂಶಿ ಇನ್ನೂ ಆಸ್ಪತ್ರೆಗೆ ಹೋಗಿರಲಿಲ್ಲ. ಮನೆಯಲ್ಲಿಯೆ ಇದ್ದಳು.

ಸರಸು ಅಲ್ಲಿಯೂ ಇಲ್ಲವೆಂಬುದು ತಿಳಿದುಬಂದೊಡನೆ ನಾಗಮ್ಮ ಮುಖಕ್ಕೆ ಸೆರಗುಹಾಕಿಕೊಂಡು ಅಳತೊಡಗಿದಳು. ನಡೆದ ಘಟನೆಗಳನ್ನೆಲ್ಲ ಸೂಶಿಯ ಮುಖದಿಂದ ತಿಳಿದುಕೊಂಡ ಬಳಿಕ ಆಕೆಯ ಅಳುವಿನ...

“ಅಯ್ಯೋ, ನನ್ನ ಮಗಳು ಎಲ್ಲಾದರೂ ಕೆರೆ ಭಾವಿ ಬಿದ್ದಳೋ ಏನೋ. ಅಯ್ಯೋ....” ಅವಳೊಂದಿಗೆ ಗೌರಿಯೂ ಧ್ವನಿ ತೆಗೆದು ಅಕ್ಕನನ್ನು ನೆನೆದುಕೊಂಡು ಬಿಕ್ಕತೊಡಗಿದಳು.

“ಅಳಲು ಕಾರಣವೇನೂ ಇಲ್ಲ ನಾಗಮ್ಮನವರೆ. ಇಷ್ಟೇಕೆ ಭಯಪಡುತ್ತೀರಿ. ಸರಸು ಹಾಗೆಲ್ಲ ಪ್ರಾಣ ಕಳೆದುಕೊಳ್ಳುವಾಕೆಯಲ್ಲ. ಆಕೆಯ ಜೀವಕ್ಕೇನೂ ಅಪಾಯವಾಗಿಲ್ಲವೆಂದೇ ನನ್ನ ನಂಬಿಕೆ,” ಎಂದಳು ಸೂಶಿ.

“ಎಲ್ಲಿಗೆ ಹೋದಳು ಹಾಗಾದರೆ? ನಿನ್ನೆದುರು ಏನೂ ಹೇಳಲಿಲ್ಲವೆ?”

“ಶಿವಮೂರ್ತಿ ಪ್ರಭುಸ್ವಾಮಿಗಳ ಹತ್ತಿರ ಇರಬಹುದೆಂದು ಆಕೆಗೆನ್ನಿಸಿತ್ತು. ಅಂತೆಯೆ ಪ್ರಭುಸ್ವಾಮಿಗಳಿದ್ದಲ್ಲಿಗೆ ತಾನೂ ಹೋಗುವುದಾಗಿ ಪತ್ರದಲ್ಲಿ ಬರೆದಿಟ್ಟು ಹೋಗಿದ್ದಾಳೆ,” ಎಂದು ಹೇಳಿ ಸೂಶಿ ಆ ಪತ್ರವನ್ನೂ, ಅದರೊಂದಿಗೆ ಸರಸು ಇರಿಸಿದ್ದ ಹಣವನ್ನೂ ತಂದು ನಾಗಮ್ಮನವರ ಕೈಗಿತ್ತಳು.

“ಇಷ್ಟೊಂದು ಹಣ ಎಲ್ಲಿಂದ ಬಂತು ಆಕೆಯ ಹತ್ತಿರ?” ಮಲ್ಲಪ್ಪಸೆಟ್ಟರು ಕೇಳಿದರು.

“ಅಷ್ಟೂ ಗೊತ್ತಾಗುವುದಿಲ್ಲವೆ? ಸ್ವಾಮಿಗಳೇ ಕೊಟ್ಟಿರಬೇಕು. ಇನ್ನಾರು ಕೊಡುತ್ತಾರೆ?” ಎಂದಳು ಗದಿಗೆಮ್ಮ.

ಮಲ್ಲಪ್ಪಸೆಟ್ಟರು ಎದ್ದುನಿಂತರು. “ಇನ್ನು ಪ್ರಭುಸ್ವಾಮಿಗಳ ಹತ್ತಿರ ಹೋಗಬೇಕಾಯಿತು. ಆ ಮುದುಕ ಎಲ್ಲಿದ್ದಾನೆಯೊ ಯಾರು ಬಲ್ಲರು. ಗಂಗಾಧರಶಾಸ್ತ್ರಿಗೆ ಗೊತ್ತಿದ್ದರೂ ಗೊತ್ತಿರಬಹುದು. ಆತನನ್ನು ವಿಚಾರಿಸೋಣ.”

“ನೀವು ಏನಾದರೂ ಮಾಡಿಕೊಳ್ಳಿರಿ ಮಲ್ಲಪ್ಪಣ್ಣ. ನನಗೆ ಮಾತ್ರ ಯಾರನ್ನೂ ಕಾಣುವ ಮನಸ್ಸಿಲ್ಲ. ನಾನು ಊರಿಗೆ ಹೋಗಿಬಿಡುತ್ತೇನೆ,” ಎಂದು ಬಸಪ್ಪಸೆಟ್ಟರು ಹೊರಟುನಿಂತರು.

“ನಾನೂ ಊರಿಗೆ ಹೋಗಬೇಕು,” ಎಂದು ಗದಿಗೆಮ್ಮನೂ ಹೇಳಿದಳು.

ಗಂಡನನ್ನು ಬಿಟ್ಟು ನಾಗಮ್ಮನೊಬ್ಬಳೇ ಮಲ್ಲಪ್ಪಸೆಟ್ಟರೊಂದಿಗೆ ಹೊರಡುವುದು ಸಾಧ್ಯವಿರಲಿಲ್ಲ. “ಹೋಗಿ ಬಂದರಾಯಿತು ಬನ್ನಿರಲ್ಲ. ನನ್ನ ಮಗಳನ್ನು ಯಾವಾಗ ಕಂಡೇನೋ ಅನ್ನಿಸುತ್ತಿದೆ ನನಗೆ. ನಿಮಗೆ ಕರುಳು ಅನ್ನುವುದೇ ಇಲ್ಲವೇ?” ಎಂದಳಾಕೆ.

"ಈ ಹೊಲಸು ವಿಷಯ ಕೇಳಿದಾಗಿನಿಂದ ನನಗೆ ಎಲ್ಲವೂ ಹೇಸಿಕೆ
ಯಾಗಿದೆ. ನೀನೊಬ್ಬಳೇ ಬೇಕಾದರೆ ಹೋಗಿ ಬಾ."

"ಹೋಗೋಣ ನಡೆ ಅಪ್ಪ. ನಾನು ಅಕ್ಕನ್ನ ನೋಡಬೇಕು,"
ಎಂದು ಗೌರಿ ಅಳತೊಡಗಿದಳು.

ಬಸಪ್ಪಸೆಟ್ಟರು ತಮ್ಮ ನಿರ್ಧಾರದಿಂದ ಕದಲಲಿಲ್ಲ. ಮಧ್ಯಾಹ್ನದ
ರೈಲಿಗೆ ಹೊರಟುನಿಂತರು. ಬೇರೆ ಉಪಾಯವಿಲ್ಲದೆ ನಾಗಮ್ಮನೂ ಅವರೊಂ
ದಿಗೆ ಹೊರಡಬೇಕಾಯಿತು. ಅತ್ತು ಅತ್ತು ಗೌರಿಯ ಕಣ್ಣುಗಳೆರಡೂ ಊದಿ
ಕೊಂಡಿದ್ದುವು.

"ಸರಸು ಅಲ್ಲಿ ಸಿಕ್ಕುತ್ತಲೂ ಊರಿಗೇ ಕರೆದುತನ್ನಿರಿ ಮಲ್ಲಪ್ಪಣ್ಣ
ಶಿವಮೂರ್ತಿಯೂ ಅಲ್ಲಿಯೇ ಇದ್ದರೆ ಅವರನ್ನೂ ಜತೆಗೇ ಕರೆದುಕೊಂಡು
ಬನ್ನಿರಿ," ಎಂದು ಹೇಳಿ ನಾಗಮ್ಮ ಗಂಡನೊಂದಿಗೆ ರೈಲು ನಿಲ್ದಾಣಕ್ಕೆ
ಹೊರಟಳು.

ಮಲ್ಲಪ್ಪಸೆಟ್ಟರು 'ಲಿಂಗವೀರ' ಕಚೇರಿಗೆ ಬಂದಾಗ ಗಂಗಾಧರಶಾಸ್ತ್ರಿ
ಕಾವಿ ಬಟ್ಟೆಯ ವ್ಯಕ್ತಿಯೊಂದರ ಜೊತೆಗೆ ಮಾತನಾಡುತ್ತ ಕುಳಿತಿದ್ದ.

"ಓ ನೀವೇ, ಬರ್ರಿ ಮಲ್ಲಪ್ಪಣ್ಣ. ನಿಮಗೆ ನೂರು ವರುಷ ಆಯುಷ್ಯ
ಇದೇ ಈಗ ನಿಮ್ಮ ನೆನಪು ತೆಗೆದಿದ್ದೆವು. ನಿಮಗೊಂದು ಟೆಲಿಗ್ರಾಂ ಕೊಟ್ಟು
ಕರೆಯಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದಾಗ. ನೀವೇ ಬಂದುಬಿಟ್ಟರಿ,"
ಎಂದು ಸ್ವಾಗತಿಸಿ ಶಾಸ್ತ್ರಿ—"ಇವರು ಗೊತ್ತಿಲ್ಲವೇ ನಿಮಗೆ?........ಮಠ
ಮರಿದೇವರಿವರು. ಬಹಳ ವಿದ್ವಾಂಸರು," ಎಂದು ಪರಿಚಯ ಮಾಡಿಕೊಟ್ಟ.
"ಸಿದ್ಧವೀರಸ್ವಾಮಿಯವರಿಗೂ ಇವರಿಗೂ ಬಹಳ ಸ್ನೇಹ. ಚಿಕ್ಕವಯಸ್ಸಿನ
ಇಬ್ಬರೂ ಕೂಡಿಯೆ ಇರುತ್ತಿದ್ದರಂತೆ. ಕನ್ನಡಸಾಲೆಯಲ್ಲೂ ಕೂಡಿಯೆ
ಕಲಿತವರು. ಅವರ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾದ ಆ ಸುಳ್ಳು ಸುದ್ದಿ
ಕಂಡು ಸಂತಾಪಗೊಂಡು ಬಂದಿದ್ದಾರೆ. ಮುಂದೆ ಏನುಮಾಡಬೇಕೆಂದು
ಯೋಚಿಸುತ್ತಿದ್ದೇವೆ."

"ಸ್ವಾಮಿಗಳು ಎಲ್ಲಿದ್ದಾರೆ ಶಾಸ್ತ್ರಿಗಳೇ?"

"ಬೆಂಗಳೂರಿನಲ್ಲಿದ್ದರು. ಟೆಲಿಗ್ರಾಂ ಕೊಟ್ಟಿದ್ದೆ. ಇಂದೇ ಬೆಳಿ
ಬಂದುಬಿಟ್ಟರು."

"ಬಂದರೇ! ಎಲ್ಲಿದ್ದಾರೆ?"

"ಇದೇ ಗದ್ದಲದಲ್ಲಿ ತೊಡಗಿಕೊಂಡಿದ್ದಾರೆ."

"ಅಂದರೆ?"

"ಈ ಜಾಹೀರಾತನ್ನು ರದ್ದುಗೊಳಿಸಿ ಲೇಖನವನ್ನು ಪ್ರಕಟಿಸದಂತೆ ತಿಳಿಸಲು ಆ ಪತ್ರಿಕೆಯ ಕಚೇರಿಗೆ ಹೋಗಿದ್ದಾರೆ."

"ನಾವೂ ಇದೇ ಈಗ ಹೋಗಿಬಂದೆವು. ಆ ಹುಡುಗಿಯೇ ಬಂದು ಹೇಳಿದ ಹೊರತು ಆತ ಯಾವುದಕ್ಕೂ ಒಪ್ಪುವಂತಿಲ್ಲ ಶಾಸ್ತ್ರಿಗಳೇ. ಈಗ ಆ ಹುಡುಗಿಯನ್ನು ಪತ್ತೆ ಮಾಡುವುದು ಮೊದಲ ಕೆಲಸ. ಪ್ರಭುಸ್ವಾಮಿಗಳೆಲ್ಲಿದ್ದಾರೆ ಎಂಬುದು ಗೊತ್ತೇ ನಿಮಗೆ?"

"ಈ ಮರಿದೇವರ ಮಠವಿರುವ ಊರಿನಲ್ಲೇ ಇದ್ದಾರಂತೆ. ಅವರ ವಿಷಯವನ್ನು ಪತ್ರಿಕೆಗಳಿಗೆ ಕೊಡಲೆಂದೇ ಇವರು ಇಲ್ಲಿಗೆ ಬಂದದ್ದು."

"ಪತ್ರಿಕೆಗಳಿಗೆ ಕೊಡುವಂಥ ವಿಷಯವಾದರೂ ಏನು ಅವರದು?"

"ನಮ್ಮ ಸ್ವಾಮಿಗಳ ಬಗೆಗೆ ಈ ಹುಡುಗಿ ಆರೋಪ ಮಾಡಿರುವಳಲ್ಲಾ—ಅದೇ."

ಮರಿದೇವರು ಹೇಳತೊಡಗಿದರು: "ಪತ್ರಿಕೆಯಲ್ಲಿ ಈ ಜಾಹೀರಾತು ಬಂದಾಗ ನಮಗೆ ಸಿಡಿಲು ಬಡಿದಂತಾಯಿತು. ಇವೆಲ್ಲಾ ಆ ಪ್ರಭುಸ್ವಾಮಿಗಳು ಮಾಡಿಸಿದ ಕೆಲಸವೇ ಎಂದು ನಮಗಂತೂ ಖಾತ್ರಿಯಾಗಿದೆ. ತಾವು ಮಾಡುವ ಪಾಪವನ್ನು ಮುಚ್ಚಿಕೊಳ್ಳಲಿಕ್ಕಾಗಿ ಇವರು ಬೇರೆಯವರ ಮೇಲೆ ಆರೋಪ ಹೊರಿಸುತ್ತಿದ್ದಾರೆ."

"ಅಂದರೆ?"

"ನಿಮಗೆ ಗೊತ್ತಿರಲಿಕ್ಕಿಲ್ಲ. ಈ ಸರಸ್ವತಿಯೆಂಬ ಹುಡುಗಿ ಪ್ರಭುಸ್ವಾಮಿಯವರ ಜೊತೆಗೇ ವಾಸವಾಗಿದ್ದಾಳೆ. ಊರ ಹೊರಗೆ ಮಾವಿನ ತೋಪಿನಲ್ಲಿ ಒಂದು ಗುಡಿಸಲು ಇದೆ. ಅಲ್ಲಿ ಅವರಿಬ್ಬರೇ ಇದ್ದಾರೆ."

"ಬೇರೆ ಯಾರೂ ಇಲ್ಲವೆ?"

"ಇಲ್ಲ. ಅವರಿಬ್ಬರೇ. ತಾನು ದೊಡ್ಡ ಸನ್ಯಾಸಿಯ ಹಾಗೆ ನಟಿಸುತ್ತ ಆತ ಇಂಥ ಕೆಲಸ ಮಾಡುತ್ತಿದ್ದಾನೆ. ಆತ ಬಂದಂದಿನಿಂದ ನಮ್ಮ ಭಾಗದಲ್ಲಿ ಶಾಂತಿಯೇ ಇಲ್ಲದಂತಾಗಿದೆ. ನಮ್ಮ ಭಕ್ತರಲ್ಲೆಲ್ಲ ನಮ್ಮ ವಿರುದ್ಧ

ಪ್ರಚಾರ ಮಾಡುತ್ತ ತಿರುಗುತ್ತಿದಾನೆ. ಬೇಡರು, ಹೊಲೆಯರು, ಮುಸ
ಲ್ಮಾನರು ಮೊದಲಾದವರ ಮನೆಗಳಿಗೆ ಹೋಗುತ್ತಾನೆ. ವೇಷ ನೋಡಿದರೆ
ಈತನೊಬ್ಬ ವಿವೇಕಾನಂದನೋ, ಗಾಂಧಿಯೊ ಎಂದು ಭ್ರಮೆಯಾಗಬೇಕು
ಹಳ್ಳಿಯವರಿಗೆ. ಆದರೆ ಅಂಥ ಮೂರ್ಖರೇನೂ ಅಲ್ಲ ಅವರು. ಈ ಸ್ವಾಮಿಯ
ನಿಜಸ್ವರೂಪವೇನೆಂಬುದು ಅವರಿಗೂ ಗೊತ್ತಾಗಿದೆ. ಈ ಹರೆಯದ ಹುಡುಗಿ
ಯೊಂದಿಗೆ ಆತ ವ್ಯಭಿಚಾರದಲ್ಲಿ ತೊಡಗುತ್ತಲೂ ಜನರೆಲ್ಲ ಭಯಂಕರ
ಸಿಟ್ಟಾಗಿ ಅವರಿಬ್ಬರನ್ನೂ ಹೊಡೆಯಲು ಹೋಗಿದ್ದರು. ಅವರ ಗುಡಿಸಲಿಗೆ
ಬೆಂಕಿ ಹಚ್ಚುವವರೆಗೂ ರೇಗಿದ್ದರು ಜನರು. ನಾವು ಧಾವಿಸಿ ಹೋದದ್ದ
ರಿಂದ ಅವರ ಪ್ರಾಣವುಳಿಯಿತು."

"ಈಗ ಎಲ್ಲಿದ್ದಾರೆ ಅವರಿಬ್ಬರೂ ?"

"ಅಲ್ಲೇ ಇದ್ದಾರೆ. ಇಂಥ ಫಜೀತಿಯಾದರೂ ಅವರಿಗೆ ಬುದ್ಧಿ ಬರಲಿಲ್ಲ.
ನಾಚಿಕೆ, ಮಾನ, ಮರ್ಯಾದೆ ಎಲ್ಲವನ್ನೂ ಬಿಟ್ಟವರಿಗೆಲ್ಲಿಯ ಬುದ್ಧಿ ?"

ಮರಿದೇವರಿಂದ ತಿಳಿದುಬಂದ ಸಂಗತಿಯನ್ನೆಲ್ಲ ನಂಬಲಾಗಲಿಲ್ಲ ಸೆಟ್ಟ
ರಿಗೆ. ಇಂಥ ಇಳಿವಯಸ್ಸಿನಲ್ಲಿ ಪ್ರಭುಸ್ವಾಮಿಗಳು ಇಂಥ ಕೆಲಸಮಾಡಬ
ಹುದೇ? ಎಂದು ತಮ್ಮಷ್ಟಕ್ಕೆ ತಾವೇ ಕೇಳಿಕೊಂಡರು. 'ಛೆ. ಅಸಾಧ್ಯ' ಎಂದೇ
ಎನ್ನಿಸಿತು. ಪ್ರಭುಸ್ವಾಮಿಗಳ ವಿಷಯವಾಗಿ ಸದಭಿಪ್ರಾಯವಿರಲಿಲ್ಲವೆಂಬು
ದೇನೋ ನಿಜವಾದರೂ ಅವರ ಶೀಲದ ಬಗೆಗೆ ಸಂದೇಹವೂ ಇರಲಿಲ್ಲ.
ಹೆಣ್ಣುಮಕ್ಕಳನ್ನು ಸ್ವಾಮಿಗಳು ಕಣ್ಣೆತ್ತಿ ನೋಡುತ್ತಿರಲಿಲ್ಲವೆಂಬ ವಿಷಯವೂ
ಅವರಿಗೆ ಗೊತ್ತಿದ್ದಿತು. ಅಕ್ಕನ ಬಳಗದವರು ಕಾಡಿಸಿ ಪೀಡಿಸಿ ಕರೆದರೂ
ಅವರು ಸಭೆಗಳಿಗೆ ಹೋಗುತ್ತಿರಲಿಲ್ಲವೆಂಬ ಸಂಗತಿಯನ್ನೂ ಸೆಟ್ಟರು ಮರೆ
ತಿರಲಿಲ್ಲ. ಇಷ್ಟು ವರ್ಷಗಳವರೆಗೆ ಚಾರಿತ್ರ್ಯವನ್ನು ಕಾಪಾಡಿಕೊಂಡು
ಬಂದಿದ್ದ ಸ್ವಾಮಿಗಳು ಬಳಿಕ ಅಧಃಪತನ ಹೊಂದಿದರೆಂಬುದನ್ನು ನಂಬು
ವುದು ಕಷ್ಟವಾಗಿದ್ದಿತು. ಪ್ರಭುಸ್ವಾಮಿಗಳು ಆ ಹಳ್ಳಿಗೆ ಹೋದುದರಿಂದ
ಈ ಮರಿದೇವರ ಸ್ವಾರ್ಥಕ್ಕೆ ಭಂಗಬಂದಿರಬಹುದೊ ಏನೊ, ಅಂತೆಯೆ ಇವರು
ಅವರ ಬಗ್ಗೆ ದ್ವೇಷ ಸಾಧಿಸುತ್ತಿರಬಹುದೊ ಏನೊ—ಹಾಗೂ ಆಗಲು ಸಾಧ್ಯ
ವಿದೆ. ತಮಗೂ ಚೆನ್ನಪ್ಪಗೌಡರಿಗೂ ಸ್ಪರ್ಧೆ ನಡೆದ ಹಾಗೆ ಇವರಿಬ್ಬರಲ್ಲಿ
ನಡೆದಿರಬಹುದು—ಎಂದುಕೊಂಡರು.

"ನೀವು ಏನು ಮಾಡಬೇಕೆಂದು ಯೋಚಿಸಿದ್ದೀರಿ ?" ಎಂದು ಕೇಳಿದರು ಮಲ್ಲಪ್ಪಸೆಟ್ಟರು.

"ಪ್ರಭುಸ್ವಾಮಿಗಳ ಅಷಾಢಭೂತಿತನದ ಬಗ್ಗೆ ನಾವೂ ಒಂದು ಲೇಖನ ಬರೆದು 'ಲಿಂಗವೀರ' ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ವಿಚಾರವಿದೆ. ನೀವೆಲ್ಲಾ ಬೆಂಬಲ ಕೊಟ್ಟರೆ ಧೈರ್ಯದಿಂದ ಈ ಕೆಲಸಕ್ಕೆ ನಿಲ್ಲುತ್ತೇವೆ."

"ಸಿದ್ಧವೀರಸ್ವಾಮಿಗಳು ಬರಲಿ. ಅವರು ಹೇಳಿದ ಹಾಗೆ ಮಾಡೋಣ," ಎಂದು ಮಾತು ಮುಗಿಸಿದರು ಸೆಟ್ಟರು.

[೨೯]

ಅಲ್ಲಿ, 'ಲಿಂಗವೀರ' ಕಾರ್ಯಾಲಯದಲ್ಲಿ ಅವರೆಲ್ಲರೂ ಸಿದ್ಧವೀರಸ್ವಾಮಿಗಳ ಬರವನ್ನು ಎದುರುನೋಡುತ್ತ ಕುಳಿತಿದ್ದ ಸಮಯದಲ್ಲಿ, ಇಲ್ಲಿ, 'ಜನಪದ' ಕಾರ್ಯಾಲಯದಲ್ಲಿ ಸ್ವತಃ ಸಿದ್ಧವೀರಸ್ವಾಮಿಗಳು ಹರಿಹರನ ಬರವನ್ನು ಎದುರುನೋಡುತ್ತ ಕುಳಿತಿದ್ದರು.

ಅವರು ಅಲ್ಲಿಗೆ ಬಂದುದಕ್ಕೆ ಆಗಲೆ ಎರಡು ತಾಸು ಕಳೆದುಹೋಗಿದ್ದಿತು. ಕುಳಿತು ಕುಳಿತು ಬೇಸರಕ್ಕಿಟ್ಟುಕೊಂಡಿದ್ದಿತು ಸ್ವಾಮಿಗಳಿಗೆ. ಎದ್ದು ಹೊರಟುಹೋಗುವಂತೆಯೂ ಇರಲಿಲ್ಲ. ಹರಿಹರನನ್ನು ಭೆಟ್ಟಿಯಾಗಿ ಮಾತನಾಡಿಯೆ ಹೋಗಬೇಕಾಗಿದ್ದಿತು.

ಸ್ಟೂಲಿನ ಮೇಲೆ ಕುಳಿತುಕೊಂಡು ಮೊಳೆ ಜೋಡಿಸುತ್ತಿದ್ದ ಹುಡುಗನನ್ನು ಕೇಳಿದರು : "ಏನಯ್ಯಾ, ಇನ್ನೂ ಯಾವಾಗ ಬರುತ್ತಾನೆ ನಿಮ್ಮಣ್ಣ? ಕುಳಿತು ಕುಳಿತು ಸಾಕಾಯಿತು ನಮಗೆ."

"ಸಾಕಾದರೆ ಎದ್ದು ತಿರುಗಾಡಿ ಬರ್ರಿ," ಎಂದು ಅಣಕದ ಧ್ವನಿಯಲ್ಲಿ ನುಡಿದು ಆ ಹುಡುಗ ತನ್ನ ಕಾಯಕದಲ್ಲಿ ನಿರತನಾದ.

ಸ್ವಾಮಿಗಳು ಮನಸ್ಸಿನಲ್ಲೇ ಚಡಪಡಿಸುತ್ತ ಕುಳಿತುಕೊಂಡರು. "ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿಯಬೇಕಂತೆ. ಅಂಥ ಕೆಟ್ಟ ಹೊತ್ತು ತಂದಿಟ್ಟಿದ್ದಾಳೆ ಆ ಕೆಟ್ಟ ಹುಡುಗಿ. ಯಾವ ಕುಮುಹೂರ್ತದಲ್ಲಿ ಆಕೆಯ ಸ್ನೇಹ ಬೆಳೆಸುವ ದುರ್ಬುದ್ಧಿ ಬಂದಿತೋ ನನಗೆ. ಬೆಂಗಳೂರಿಗೆ ಆಕೆಯನ್ನು ಕರೆನೊಯ್ದುದೂ ದೊಡ್ಡ ಪ್ರಮಾದವಾಯಿತು. ನನ್ನ ಗುಟ್ಟು

ಗಳನ್ನೆಲ್ಲಾ ತಿಳಿದುಕೊಂಡು ರಟ್ಟು ಮಾಡಿಬಿಟ್ಟಳು. ಇನ್ನು ಈ ಪ್ರಸಂಗ ದಿಂದ ಹೇಗೆ ಪಾರಾಗುವುದು? ಇನ್ನು ಬಸಪ್ಪಸೆಟ್ಟರಿಗೆ ಮುಖ ತೋರಿಸು ವಂತಿಲ್ಲ. ಆ ಊರಲ್ಲೇ ಕಾಲಿಡುವಂತಿಲ್ಲ. ಮುಂದೇನು ಗತಿ?"

ಇಂಥ ಪ್ರಸಂಗದಲ್ಲಿ ಸಿಲುಕಿಬೀಳಬಹುದೆಂಬ ಕಲ್ಪನೆ ತಮಗಿದ್ದಿದ್ದರೆ! ಮೊದಲೇ ಎಚ್ಚರಿಕೆಯಿಂದ ವರ್ತಿಸಲು ಬರುತ್ತಿತ್ತು. ತಾವು ಮಾಡುವ ಕೆಲಸ ಯಾರಿಗೂ ತಿಳಿಯುವುದಿಲ್ಲ, ತಿಳಿದರೂ ಅದರ ಬಗೆಗೆ ಯಾರೂ ಆಕ್ಷೇ ಪಿಸುವುದಿಲ್ಲವೆಂಬ ನಂಬಿಕೆಯ ಆಧಾರದ ಮೇಲೆಯೆ ಇವೆಲ್ಲವೂ ನಡೆದಿದ್ದಿತು. ಹೇಗೂ ದೊಡ್ಡ ಮಠವೊಂದಕ್ಕೆ ಅಧಿಕಾರಿಯಾದುದಾಗಿದ್ದಿತು. ಆ ಅಧಿ ಕಾರವನ್ನೂ, ಮಠದ ಹಣವನ್ನೂ ಉಪಯೋಗಿಸಿಕೊಂಡು ಕರ್ನಾಟಕ ದಲ್ಲೆಲ್ಲ ದೊಡ್ಡ ಸ್ವಾಮಿಯೆಂದೂ, ಸಮಾಜದ ಮುಖಂಡನೆಂದೂ, ಶ್ರೇಷ್ಠ ಮಾತುಗಾರನೆಂದೂ ಹೆಸರು ಪಡೆಯಲು ಸಾಧ್ಯವಾಗುವಂತಿದ್ದಿತು. ಈಗಾ ಗಲೆ ಪತ್ರಿಕೆಗಳಲ್ಲಿ ಆಗಾಗ ತಮ್ಮ ಹೆಸರೂ ಕಾಣಿಸಿಕೊಳ್ಳುತ್ತಿತ್ತು. ತಮ್ಮ ಭಾವಚಿತ್ರವೂ ಪ್ರಕಟವಾಗತೊಡಗಿತ್ತು. ಜನರನ್ನು ಮರುಳುಗೊಳಿಸುವ ಹಾಗೆ ಭಾಷಣ ಮಾಡುವ ಕಲೆಯೂ ಸುಲಭವಾಗಿ ಸಾಧಿಸಿದೆ ತಮಗೆ. ಸರ್ವಧರ್ಮ ಸಮನ್ವಯ, ಕರ್ನಾಟಕ ಸಂಸ್ಕೃತಿ, ಏಕೀಕರಣಗಳ ವಿಷಯ ವಾಗಿ ತಾವು ನೀರು ಕುಡಿದಷ್ಟು ಸುಲಭವಾಗಿ ಮಾತನಾಡಬಲ್ಲರು. ಏಕೀ ಕರಣ ಅಂದರೆ ಅದೊಂದು ಹುಚ್ಚು ಕನ್ನಡಿಗರಿಗೆ. ಅದಕ್ಕಾಗಿ ಕಷ್ಟಪಟ್ಟು ಕೆಲಸ ಮಾಡಲು ಯಾರೂ ಸಿದ್ಧರಿಲ್ಲವಾದರೂ ಆ ವಿಷಯ ಮಾತನಾಡುವು ದಕ್ಕೂ, ಮಾತು ಕೇಳುವುದಕ್ಕೂ ಎಲ್ಲರಿಗೂ ಹುರುಪು. ಸರಿ. ಇವರ ಈ ಹುಚ್ಚನ್ನು ಕೆರಳಿಸುವ ಹಾಗೆ ತಾವು ಭಾಷಣ ಮಾಡಬಲ್ಲರು. ಇನ್ನು ಕೆಲವೇ ದಿನಗಳಲ್ಲಿ ತಾವು ಏಕೀಕರಣದ ಮುಂದಾಳುಗಳೂ ಆಗಲು ಸಾಧ್ಯ ವಿದೆ. ಆದರೆ-ಈ ಜಾಹೀರಾತು....ತಮ್ಮ ಭವಿತವ್ಯದ ಮೇಲೆಲ್ಲ ಕಪ್ಪು ನೆರಳು ಬೀರಿದೆ ಈ ಜಾಹೀರಾತು....

ಮುಚ್ಚಿದ್ದ ಬಾಗಿಲು ಓರೆಯಾಯಿತು. ಹರಿಹರ ಕೊಟಡಿಯೊಳಕ್ಕೆ ಅಡಿಯಿರಿಸಿದ.

"ಏನು ಸ್ವಾಮಿಗಳೆ, ಯಾವಾಗ ಬಂದಿರಿ?"

"ಬದುಕಿಕೊಂಡೆ ಮಾರಾಯ. ಬಂದು ಬಹು ಯುಗವಾಗುತ್ತ

ಬಂತು. ಕೂತು ಕೂತು ಕಾಲುಗಳೆರಡೂ ಜುಂವರ್ ಹಿಡಿದಿದ್ದುವು. ಎಲ್ಲಿಗೆ ಪಾದ ಬೆಳೆಸಿದ್ದೆ ಇಷ್ಟು ಹೊತ್ತು ?"

"ಕಲೆಕ್ಟರ ಕಚೇರಿಯಲ್ಲಿ ಕೆಲಸವಿತ್ತು. ಹೋಗಿದ್ದೆ. ಏನು ವಿಶೇಷ ಸ್ವಾಮಿಗಳೆ ? ಬೆಂಗಳೂರು ಮೈಸೂರು ಪ್ರವಾಸ ಸೊಗಸಾಗಿ ಆಯಿತೇ ?"

"ಏನೋ ಆಯಿತು ಬಿಡು ಮಹಾರಾಯ. ಇಲ್ಲಿ ನಮ್ಮ ಮೇಲೆ ಸೊಗಸಾಗಿಯೆ ಗದೆ ಬೀಸಿದ್ದೀಯಲ್ಲ ! ನಾವೇನು ಕೇಡು ಬಗೆದಿದ್ದೆವು ನಿನಗೆ ?"

"ಯಾವ ವಿಚಾರ ನೀವು ಹೇಳುತ್ತಿರುವುದು ?"

"ಇನ್ನಾವ ವಿಚಾರ ? ಅದೇ—ಆ ಜಾಹೀರಾತಿನ ವಿಚಾರ. ಇಷ್ಟು ವರ್ಷಗಳ ವರೆಗಿನ ನಮ್ಮ ತಪಸ್ಸಿನ ಫಲವನ್ನೆಲ್ಲ ಒಂದೇಟಿಗೇ ಹಾಳುಮಾಡಿ ಬಿಟ್ಟಿಯಲ್ಲ ?"

"ತಪಸ್ಸು ?"

"ಹೌದು ಮತ್ತೆ ! ಸಮಾಜಕ್ಕಾಗಿ, ನಾಡಿಗಾಗಿ, ದೇಶಕ್ಕಾಗಿ ಆಯುಷ್ಯವನ್ನೇ ಮೀಸಲಾಗಿಟ್ಟು ಒಂದು ನಿಮಿಷವೂ ಬಿಡುವಿಲ್ಲದೆ ದುಡಿಯುತ್ತಿರುವ ನಮ್ಮ ಮೇಲೆ ಇದೆಂಥ ಅಪವಾದ. ಕನಸುಮನಸಿನಲ್ಲೂ ನಾವು ಕಾಣಲಾರದ ಸಂಗತಿಗಳನ್ನೆಲ್ಲ ನಮಗೆ ಆರೋಪಿಸಲಾಗಿದೆ."

"ಹಾಗಾದರೆ ಅದೆಲ್ಲವೂ ಸುಳ್ಳೇನು ಸ್ವಾಮಿಗಳೇ ?"

"ಸುಳ್ಳು. ಪೂರಾ ಸುಳ್ಳು. ಯಾರೋ ನಮಗಾಗದವರು ಆ ಹುಡುಗಿಗೆ ಹೇಳಿ ಇದನ್ನೆಲ್ಲಾ ಮಾಡಿಸಿರಬೇಕು. ನಾವು ಆ ಮಠದ ಅಧಿಕಾರಕ್ಕೆ ಬಂದದ್ದು ಅನೇಕರಿಗೆ ಸರಿಬಂದಿರಲಿಲ್ಲ. ಆ ಬಗ್ಗೆ ಸ್ವಲ್ಪ ಜಗಳವೂ ಇತ್ತು. ನಮಗಿಂತ ಮೊದಲು ಪ್ರಭುಸ್ವಾಮಿಗಳೆಂಬವರು ಅಲ್ಲಿ ಇದ್ದರು. ಅವರ ಪಕ್ಷದ ಜನರೂ ಕೆಲವರು ಅಲ್ಲಿದ್ದಾರೆ. ಈ ವರ್ಷ ಶ್ರಾವಣದ ಜಾತ್ರೆಯ ಕಾಲಕ್ಕೆ ಸ್ವಲ್ಪ ಗದ್ದಲವೂ ಆಗಿತ್ತು. ಆದರೆ ಆಗ ಅವರ ಆಟವೇನೂ ನಡೆಯಲಿಲ್ಲ. ಅಂತೆಯೆ ಈಗ ನಮ್ಮ ಮೇಲೆ ಅಲ್ಲದ ಸಲ್ಲದ ಆರೋಪ ಹೊರಿಸಿ ನಮ್ಮ ಬಗ್ಗೆ ಜನರಲ್ಲಿ ಅಪಪ್ರಚಾರವಾಗುವಂತೆ ಮಾಡಿ ನಮ್ಮನ್ನು ಪೀಠದಿಂದ ಓಡಿಸುವ ಹೊಂಚು ಹಾಕಿರಬೇಕು."

"ಸರಿ. ಅದೆಲ್ಲ ನನಗೇನೂ ಸಂಬಂಧವಿಲ್ಲ. ಸರಸ್ವತೀದೇವಿಯವರು

ಲೇಖನ ಬರೆದು ಕೊಟ್ಟಿದ್ದಾರೆ. ಪ್ರಕಟಿಸಬೇಕಾದುದು ನನ್ನ ಕರ್ತವ್ಯ. ಮಿಕ್ಕುದೆಲ್ಲ ನನಗೆ ಅನವಶ್ಯಕ."

"ಅಂದರೆ ! ಆ ಲೇಖನವನ್ನು ಪ್ರಕಟಿಸಿಯೇ ಬಿಡುವವನೇನು ನೀನು?"

"ಪ್ರಕಟಿಸುವುದಕ್ಕಾಗಿಯೆ ಪತ್ರಿಕೆ ಹೊರಡಿಸಿದ್ದೇನೆ. ಅಂದಮೇಲೆ......"

"ಇಂಥ ಅಸತ್ಯ ವಿಷಯಗಳನ್ನೆಲ್ಲ ಪ್ರಕಟಿಸುತ್ತಾರೆಯೆ ?"

"ಅದು ಸತ್ಯವೋ ಅಸತ್ಯವೋ ಎಂಬುದನ್ನು ಜನರೇ ಕಂಡುಕೊಳ್ಳಲಿ. ಇದೆಲ್ಲವೂ ಅಸತ್ಯವಿದ್ದಲ್ಲಿ ಹಾಗೆ ನೀವೂ ಬರೆಯಬಹುದಲ್ಲ ? ಯಾರು ಬೇಡ ವೆನ್ನುತ್ತಾರೆ ?"

"ಇಂಥ ಗೊಂದಲದಲ್ಲಿ ನಮ್ಮನ್ನೇಕೆ ಎಳೆಯ ಬಯಸುವೆ ಪುಣ್ಯಾತ್ಮ? ನಮ್ಮಪಾಡಿಗೆ ನಮ್ಮನ್ನು ಬಿಟ್ಟುಬಿಡು. ಈ ವಾದ ವಿವಾದ, ಉತ್ತರ ಪ್ರತ್ಯುತ್ತರ ಇದೆಲ್ಲಾ ಸನ್ಯಾಸಿಗಳಾದ ನಮ್ಮಂಥವರಿಗೆ ಶೋಭಿಸುವುದೇ ?"

"ಸನ್ಯಾಸಿಗಳು!" ಎಂದು ನಗುತ್ತ ನುಡಿದ ಹರಿಹರ : "ಒಳ್ಳೆಯ ಸನ್ಯಾಸಿಗಳೇ! ಇದ್ದರೆ ನಿಮ್ಮಂಥ ಸನ್ಯಾಸಿಗಳೇ ಇರಬೇಕು ನೋಡಿರಿ. ಹಿಂದುಸ್ಥಾನದ ಉದ್ಧಾರವಾಗುವುದು ನಿಮ್ಮಂಥವರಿಂದಲೇ. ನೀವು, ಆ ಕೀರ್ತನಕಂಠೀರವ ಶಾಸ್ತ್ರಿ, ನಿಮ್ಮ ಆ ರಾವಬಹದ್ದೂರರು, ನಿಮ್ಮ ಬಾಲ ಬಡಿಯುವ ಸ್ವಾರ್ಥಿಗಳ ಬಳಗ–ನೀವೇ ನೋಡಿರಿ ನಮ್ಮ ದೇಶದ ತಾರಕರು. ವಿವೇಕಾನಂದ, ರಾಮಕೃಷ್ಣ, ಬಸವಣ್ಣ, ಅಲ್ಲಮಪ್ರಭು, ಗಾಂಧಿ ಮೊದಲಾದವರ ಸಾಲಿಗೆ ಸೇರತಕ್ಕವರೆಂದರೆ ನೀವೇ. ಅಲ್ಲವೆ ! ನಿಮ್ಮ ಸನ್ಯಾಸ, ನಿಮ್ಮ ವಿರಕ್ತಿ ಎಂಥದೆಂಬುದು ನಮಗೆ ತಿಳಿಯದೇ ? ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಾ ಮತ್ತೆ ಸನ್ಯಾಸದ ಸೋಗು ಹಾಕುವುದು. ವೀರಶೈವ ಸಮಾಜದ ಹಿರಿಯರು ಮಠಗಳನ್ನು ನಿರ್ಮಿಸಿದ್ದು ನಿಮ್ಮಂಥವರ ಲೀಲೆಗಾಗಿಯೆ ಇರಬೇಕು. ಸ್ವಾಮಿಯಾಗಿಬಿಟ್ಟರಾಯಿತು, ಹೊಟ್ಟೆಗಾಗಿ ದುಡಿಯುವ ಅಗತ್ಯವಿಲ್ಲ. ಎಲ್ಲರಂತೆ ಬೆವರಿಳಿಸುವ ಅಗತ್ಯವಿಲ್ಲ. ಮಠದ ಆಸ್ತಿಯನ್ನನುಭೋಗಿಸುತ್ತ ಮುಚ್ಚುಮರೆಯಲ್ಲಿ ಎಲ್ಲ ಸುಖಗಳನ್ನೂ ಅನುಭವಿಸಬಹುದು. ಯಾರಾದರೊಬ್ಬರ ಹೆಂಡತಿಯನ್ನು ಓಡಿಸಿಕೊಂಡು ಬೆಂಗಳೂರು ಮದರಾಸು ಮುಂಬಯಿಗಳಿಗೆ ಹೋಗಬಹುದು. ಮಠದ ಹಣವನ್ನು ಸೂರೆ ಮಾಡುತ್ತ ಮೋಜು ಮಾಡಬಹುದು...."

ಆತನನ್ನು ನಡುವೆಯೇ ತಡೆದು ಸ್ವಾಮಿಗಳೆಂದರು : "ಅಂದರೆ, ಆ ಹುಡುಗಿ ಬರೆದುದೆಲ್ಲಾ ನಿಜವೇ ಅಂತ ನಿನ್ನ ಕಲ್ಪನೆಯೋ ಹರಿಹರ ?"

"ಕಲ್ಪನೆಯಲ್ಲ, ನಂಬಿಕೆ. ದೃಢವಾದ ನಂಬಿಕೆ."

ಸ್ವಾಮಿಗಳು ಹಣೆ ತಟ್ಟಿಕೊಳ್ಳುತ್ತ ಹೇಳಿದರು : "ಏನು ಹೇಳಿದರೆ ನಿನಗೆ ನಮ್ಮ ಮಾತು ಮನವರಿಕೆಯಾಗಬಹುದೋ !"

"ಏನು ಹೇಳಿದರೂ ಆಗುವಂತಿಲ್ಲ. ಆಗಬೇಕಾದುದೆಲ್ಲ ಆಗಲೇ ಮನವರಿಕೆಯಾಗಿದೆ."

"ಸುಳ್ಳು ಹರಿಹರ....ಎಲ್ಲವೂ ಸುಳ್ಳು. ಈ ಲಿಂಗದೇವರ ಸಾಕ್ಷಿಯಾಗಿ ನಾವು ಮದ್ಯ ಮಾಂಸಗಳನ್ನೆಂದೂ ಮುಟ್ಟಿಲ್ಲವೆಂದು ಆಣೆ ಮಾಡಿ ಹೇಳುತ್ತೇನೆ. ಚಹದ ರುಚಿ ಹೇಗಿರುವುದೆಂಬುದೇ ಗೊತ್ತಿಲ್ಲ ನಮಗೆ. ಇನ್ನು ಮದ್ಯ....ಅಯ್ಯೋ....ಎಲ್ಲವೂ ಸುಳ್ಳು ಕಣಪ್ಪ. ನರ್ತಕಿಯಂತೆ, ಶಿಕ್ಷಕಿಯಂತೆ. ಎಲ್ಲಾ ಕೇವಲ ಕಟ್ಟುಕತೆ. ಪಾರ್ವತಿ ಎಂಬ ಹೆಣ್ಣುಮಗಳ ವಿಷಯವೂ ಹಾಗೇ. ಅದಕ್ಕೆ ತಳವಿಲ್ಲ, ಬುಡವಿಲ್ಲ."

"ಸರಸ್ವತಿ ಬರೆದುದರಲ್ಲಿ ಸತ್ಯವೇನೂ ಇಲ್ಲವಾದರೆ ನೀವೇಕೆ ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಕು ? ನೀವು ಸತ್ಯವಂತರಾಗಿದ್ದರೆ ಯಾರು ಏನು ಬರೆದರೇನಂತೆ !"

"ಅಯ್ಯೋ.....ನಮ್ಮ ಸಾರ್ವಜನಿಕ ಜೀವನ.....ನಮ್ಮ ಭವಿತವ್ಯ......" ಎಂದು ಗೋಗರೆದರು ಸ್ವಾಮಿಗಳು.

"ಸಾರ್ವಜನಿಕ ಜೀವನದ ಭವಿತವ್ಯದ ಬಗೆಗೆ ಚಿಂತೆಯಿದ್ದಲ್ಲಿ ಕೋರ್ಟಿನ ಮೂಲಕ ನೀವು ಸತ್ಯವಂತರೆಂದು ಸಿದ್ಧಗೊಳಿಸಿಕೊಳ್ಳಬಹುದಲ್ಲ ? ನಿಮಗೇನ್ರೀ, ಸಾಕಷ್ಟು ಜನ ಸಾಕ್ಷಿಗಳೂ ಸಿಕ್ಕಬಹುದು ... ನಮಗೆ ಮಾತ್ರ ಹೆಚ್ಚು ಸಾಕ್ಷಿಗಳಿಲ್ಲ. ಒಬ್ಬಿಬ್ಬರಿದ್ದಾರೆ, ಅಷ್ಟೆ."

ಸ್ವಾಮಿಗಳ ಎದೆ ವೇಗವಾಗಿ ಹಾರತೊಡಗಿತು. "ಸಾಕ್ಷಿಗಳು !"

"ಡ್ರೈವರ್ ಗಫೂರ ನಿಮಗೆ ಗೊತ್ತಿರಬಹುದಲ್ಲ? ನಿಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಂದಿರುವನಂತೆ. ಆತ ನಿನ್ನೆ ರಾತ್ರಿ ನನ್ನನ್ನು ಕಾಣಲು ಬಂದಿದ್ದ. ಈ ಜಾಹೀರಾತಿನಲ್ಲಿ ಪ್ರಕಟವಾದುದೆಲ್ಲ ನಿಜವೆಂದು

ಹೇಳಿದ್ದಲ್ಲದೆ ಪ್ರಸಂಗ ಬಂದರೆ ಆ ರೀತಿ ಸಾಕ್ಷಿಯನ್ನು ಹೇಳುವುದಾಗಿ ತಿಳಿಸಿ ಹೋದ."

"ಗಫೂರ....ಅಯ್ಯೋ....ಆತನೂ ತಿರುಗಿಬಿದ್ದನೇ ನನ್ನಮೇಲೆ. ಎಲಾ ಕೃತಘ್ನ!"

"ಅನಂತರ ನಿಮ್ಮ ಆಶ್ರಮದಲ್ಲಿನ ಶಿಕ್ಷಕಿ ಲೀಲಾವತೀದೇವಿ. ಆಕೆಯೂ ನನ್ನನ್ನು ಕಂಡಿದ್ದಳು. ಎಲ್ಲವೂ ಹದಿನಾರಾಣೆ ನಿಜ ಎಂದೇ ಹೇಳಿದಳು...."

"ಅಯ್ಯಯ್ಯೋ ಶಿವನೆ! ಅವಳೂ ತಿರುಗಿಬಿದ್ದಳೇ? ಹೊಟ್ಟೆಗಿಲ್ಲದೆ ಸಾಯುತ್ತಿದ್ದ ಆಕೆಯನ್ನು ಸುಖದ ಬಾಳಿಗೆ ಹಚ್ಚಿದ್ದರ ಪ್ರತಿಫಲವೇ ಇದು?"

"ಆಮೇಲೆ ನಿಮ್ಮ ಪ್ರೇಯಸಿ ಗದಿಗೆಮ್ಮ. ಆಕೆಯೂ ನೀವೂ ಇಪ್ಪತ್ನಾಲ್ಕು ತಾಸು ಮಠದ ನೆಲಮನೆಯಲ್ಲಿದ್ದಿರಂತಲ್ಲ. ಇದಾದರೂ ನಿಜವೋ, ಅಥವಾ ಇದೂ ಸುಳ್ಳೋ?"

"ಅಯ್ಯೋ. ಈ ವಿಷಯವೂ ಗೊತ್ತಾಗಿಬಿಟ್ಟಿತೇ! ಆ ಗದಿಗಿಯೇ ಹೇಳಿದಳೇ ನಿಮಗೆ. ಚಾಂಡಾಲಿ! ಆಕೆಗಾಗಿ ಎಷ್ಟು ಹಣ ಸುರಿದಿದ್ದೆವು...."

"ಓಹೊಹ್ಹೊ. ಹೀಗೆ ಸತ್ಯ ಹೇಳಿರಿ ಸ್ವಾಮಿಜಿ. ಗದಿಗೆಮ್ಮನಿಗಾಗಿಯೂ ಹಣ ಸುರಿದಿದ್ದೀರಿ. ಸರಸುವಿಗೂ ಸುರಿದಿದ್ದೀರಿ. ಲೀಲಾವತಿ, ಪಾರ್ವತಿ, ಸ್ನೇಹಲತಾ ಆ ಲತಾ ಈ ಲತಾ ಮೊದಲಾದವರಿಗೂ ಸುರಿದಿದ್ದೀರಿ. ಚಹವನ್ನೂ ಕುಡಿದಿದ್ದೀರಿ. ಸಿಗರೇಟೂ ಸೇದಿದ್ದೀರಿ. ಮದ್ಯವನ್ನೂ ಸೇವಿಸಿದ್ದೀರಿ. ಮಾಂಸವನ್ನೂ ತಿಂದಿದ್ದೀರಿ. ಹೌದೋ, ಅಲ್ಲವೋ?"

ಸ್ವಾಮಿಗಳ ಮುಖದಿಂದ ಮಾತು ಹೊರಡಲು ಸಾಧ್ಯವಿರಲಿಲ್ಲ. ಸರಸು, ಲೀಲಾವತಿ, ಗದಿಗೆಮ್ಮ, ಗಫೂರ ಎಲ್ಲರೂ ತಮಗೆದುರಾಗಿ ನಿಂತ ಬಳಿಕ ಇನ್ನೇನುಳಿಯಿತು? ಅಗತ್ಯವಿದ್ದಲ್ಲಿ ಇವರು ಸ್ನೇಹಲತೆಯನ್ನೂ ಸಾಕ್ಷಿಗಾಗಿ ಕರೆಯಬಹುದು. ಆಕೆಯೂ ತಮ್ಮ ವಿರುದ್ಧ ಸಾಕ್ಷಿ ನುಡಿಯಲಿಕ್ಕಿಲ್ಲವೆಂಬ ಬಗೆಗೆ ಏನು ಭರವಸೆ? ಪಾರ್ವತಿಯ ಗಂಡನನ್ನು ಇವರು ನ್ಯಾಯಸ್ಥಾನಕ್ಕೆ ಕರೆಯಿಸಬಹುದು. ಆತನಿಂದಲೂ ಸಾಕ್ಷಿ ಹೇಳಿಸಬಹುದು. ....ತಮಗಿನ್ನು ಉಳಿಗಾಲವಿಲ್ಲ. ಉಳಿಸಿದರೆ ಹರಿಹರನೇ ಉಳಿಸಬೇಕು, ಆತ ಮನಸ್ಸುಮಾಡಿದಲ್ಲಿ ಎಲ್ಲವೂ ಸರಿಹೋಗಬಹುದೋ ಏನೋ—ಎಂದುಕೊಂಡು,

“ಹೇಗಾದರೂ ಮಾಡಿ ಈ ಪ್ರಸಂಗದಿಂದ ನಮ್ಮನ್ನು ಪಾರುಮಾಡು ಮಾರಾಯ. ಈ ಪ್ರೆಸ್ಸಿಗಾಗಿ ನೀನು ಹಾಕಿದ ಹಣವನ್ನೆಲ್ಲ ನಾವೇ ಕೊಡುತ್ತೇವೆ. ಆ ಲೇಖನ ಪ್ರಕಟಿಸುವುದನ್ನು ದಯಮಾಡಿ ಬಿಟ್ಟುಬಿಡು,” ಎಂದರು.

“ಲಂಚ ಕೊಟ್ಟು ಪಾರಾಗಬೇಕೆಂಬ ಯುಕ್ತಿ ಹೂಡಿದಿರಾ ಸ್ವಾಮಿಗಳೆ! ಲಂಚ ಗಿಂಚಕ್ಕೆ ಕೈಯೊಡ್ಡಲು ನಾನೇನು ಗಂಗಾಧರಶಾಸ್ತ್ರಿಯಲ್ಲ.”

“ಆತನ ಹೆಸರನ್ನೇಕೆ ತೆಗೆಯುತ್ತೀಯಪ್ಪ. ಅಂಥವರೇ ನಮ್ಮನ್ನು ಹಾಳುಮಾಡಿದ್ದು. ನಮ್ಮಿಂದ ಸಿಗುವ ಹಣದಾಸೆಯಿಂದ ಹೆಣ್ಣುಗಳನ್ನು ನಮ್ಮೆದುರಿಗೆ ಸುಳಿಸಿ ರುಚಿ ಹತ್ತಿಸಿದವರು ಅಂಥವರೇ....ಇನ್ನೊಮ್ಮೆ ಆ ಶಾಸ್ತ್ರಿಯ ಮೋರೆ ನೋಡುವ ಇಚ್ಛೆಯಿಲ್ಲ ನಮಗೆ. ಇನ್ನು ಮೇಲೆ ನೀನು ಹೇಳಿದ ಹಾಗೆ ಕೇಳುತ್ತೇವೆ. ನೀವೂ ಸಮಾಜ ಸೇವಕರು. ನಿಮ್ಮ ಸಹಾಯದಿಂದ ನಾವೂ ಸಾಧ್ಯವಾದಷ್ಟು ಸಮಾಜಸೇವೆ ಮಾಡುತ್ತೇವೆ. ಅಂತೂ ಇನ್ನೊಂದು ಸಲ ನಮ್ಮ ಮರ್ಯಾದೆ ಉಳಿಸಿ ಪುಣ್ಯ ಕಟ್ಟಿಕೋ ಮಹಾರಾಯ. ಇನ್ನೊಮ್ಮೆ ಎಂದೆಂದೂ ಇಂಥ ಕೆಲಸ ಮಾಡುವುದಿಲ್ಲ.”

“ನೀವು ಮಾಡುವುದಿಲ್ಲವೆಂದು ಹೇಗೆ ನಂಬಲು ಸಾಧ್ಯ?”

“ನಿನ್ನ ಕೈ ಮೇಲೆ ಕೈ ಹಾಕಿ ಪ್ರತಿಜ್ಞೆ ಮಾಡುತ್ತೇವೆ. ಆಮೇಲಾದರೂ ನಂಬಬಹುದಲ್ಲ?”

ಹರಿಹರ ನಗುತ್ತಾ—“ಇದೇ ಈಗ ಲಿಂಗದೇವರನ್ನು ಮುಟ್ಟಿಕೊಂಡು ಆಣೆ ಮಾಡಿದ ಹಾಗೇ ಅಲ್ಲವೇ ಈ ಪ್ರತಿಜ್ಞೆಯೂ!” ಎಂದ.

ಏನು ಹೇಳಿದರೂ ಹರಿಹರ ಕೇಳುವುದಿಲ್ಲವೆಂಬುದು ಮನವರಿಕೆಯಾಗುತ್ತಲೂ ಸ್ವಾಮಿಗಳಿಗೆ ಮುಂದಿನ ದಾರಿ ತೋರದಂತಾಯಿತು. ಜಗತ್ತೆಲ್ಲವೂ ತಮ್ಮ ವಿರುದ್ಧ ಎದ್ದು ನಿಂತು ತಮ್ಮನ್ನು ಅಜ್ಞಾತದ ಕತ್ತಲೆಗೆ ದೂಡುತ್ತಿದೆಯೆನ್ನಿಸಿತು. ಪತ್ರಿಕೆಯಲ್ಲಿ ಬೊಬ್ಬಾಟ....ಅವಹೇಳನ....ಮುಂದೆ ತಾವು ಎಲ್ಲಿಯೂ ನೆಲೆಯೂರುವಂತಿಲ್ಲ. ತಮ್ಮ ಬಾಳೆಲ್ಲವೂ ಹಾಳು....ಸ್ವಾಮಿಗಳ ಕಣ್ಣುಗಳಲ್ಲಿ ನೀರು ತುಂಬಿ ಬಂದಿತು.

“ನಿನಗೆ ಶರಣು ಬಂದಿದ್ದೇವೆ. ಏನಾದರೂ ಮಾಡಿ ನಮ್ಮನ್ನುಳಿಸು

ಮಹಾರಾಯ," ಎಂದು ಬೇಡುತ್ತ ಅವರು ಹರಿಹರನ ಕಾಲುಗಳನ್ನು ಹಿಡಿದು
ಕೊಂಡರು.

ತನ್ನ ಕಾಲುಗಳನ್ನು ಬಿಡಿಸಿಕೊಂಡು ಹರಿಹರ ಕೋಪದಿಂದ ಎದ್ದು
ನಿಂತ. "ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾಗಿ ನನ್ನಂಥವನ ಕಾಲು
ಹಿಡಿಯಲು ನಾಚಿಕೆ ಬರುವುದಿಲ್ಲವೇ ನಿಮಗೆ? ನೀವೇನು ಹೇಳಿದರೂ ಕೇಳು
ವವನಲ್ಲ ನಾನು. ನಿಮ್ಮಂಥ ಆಷಾಢಭೂತಿಗಳನ್ನೆಲ್ಲ ಒಬ್ಬೊಬ್ಬರನ್ನಾಗಿ
ಬಯಲಿಗೆಳೆದಾಗಲೇ ಸಮಾಜ ಸುಧಾರಿಸೀತು. ಹೊತ್ತು ಬಂದಿದೆಯೆಂದು
ಈಗ ನನ್ನ ಕಾಲು ಹಿಡಿದುಕೊಂಡಾದರೂ ಈ ಪ್ರಸಂಗದಿಂದ ಉಳಿಯ
ಬೇಕೆಂದು ಹೊಂಚುಹಾಕಿದ್ದೀರಿ ತಾನೆ? ಈಗ ನಿಮ್ಮನ್ನು ಉಳಿಸಿದರೆ
ಮಠಾಧಿಕಾರವೂ ನಿಮಗೇ ಉಳಿಯುತ್ತದೆ. ಕೆಲವು ದಿನ ಕಳೆದ ಬಳಿಕ
ಮತ್ತೆ ನೀವು ಮೊದಲಿನಂತೆಯೆ ಚೆಲ್ಲಾಟಕ್ಕಾರಂಭಿಸುವುದು ಖಂಡಿತ. ಅಷ್ಟ
ರಲ್ಲಿ ನಿಮ್ಮದೊಂದು ಗುಂಪು ಕಟ್ಟಿಕೊಂಡು ನನ್ನನ್ನೂ, ಈಗ ನಿಮಗೆದು
ರಾಗಿ ನಿಂತಿರುವ ಇತರರನ್ನೂ ನೀವು ಪೀಡಿಸಲು ಪ್ರಯತ್ನಿಸುವುದೂ ನಿಶ್ಚಿತ.
ನಿಮ್ಮನ್ನೀಗ ಉಳಿಸುವುದೆಂದರೆ ಒಂದು ತೋಳವನ್ನು ಉಳಿಸಿದ ಹಾಗೆ
ಅಂಥ ಅವಿವೇಕದ ಕೆಲಸವನ್ನು ನಾನೆಂದಿಗೂ ಮಾಡಲಾರೆ. ನೀವು ದಯ
ವಿಟ್ಟು ಇಲ್ಲಿಂದ ಪಾದ ಬೆಳಸಿರಿ. ನನಗೆ ಕೆಲಸಗಳಿವೆ. ನಿಮ್ಮೊಂದಿಗೆ ವ್ಯರ್ಥ
ಚರ್ಚೆಗೆ ಪುರಸತ್ತಿಲ್ಲ."

"ಅಯ್ಯೊ, ನನಗೆ ಮುಂದೇನು ಮಾಡೆನ್ನುತ್ತೀ ಹರಿಹರ?"

"ಯಾವುದಾದರೊಂದು ಹಳ್ಳಿಗೆ ಹೋಗಿ ಹೊಲದಲ್ಲಿ ಕೂಲಿ ಮಾಡಿ
ಹೊಟ್ಟೆ ತುಂಬಿಸಿಕೊಳ್ಳಿರಿ. ಒಂದು ಹೆಣ್ಣನ್ನೂ ಮದುವೆಯಾಗಿ ಸುಖವಾಗಿ
ಕಾಲ ಕಳೆಯಿರಿ. ಸ್ವಾಮಿಯಾಗಿ ಇಂಥ ಹೇಸಿ ಬಾಳು ಬಾಳುವುದಕ್ಕಿಂತ
ಸಂಸಾರಿಯಾಗಿ ದುಡಿದು ತಿನ್ನುವುದು ಮೇಲು."

"ಇನ್ನು ಜನರಿಗೆ ಮುಖ ಹೇಗೆ ತೋರಿಸುವುದು? ಈ ಜಿಲ್ಲೆಯಲ್ಲಿ
ನಾನು ಇರುವಂತಿಲ್ಲ. ಉತ್ತರಕರ್ನಾಟಕದಲ್ಲೇ ಕಾಲು ಹಾಕುವಂತಿಲ್ಲ—
ಎಲ್ಲಿಗೆ ಹೋಗಬೇಕು? ಏನು ಮಾಡಬೇಕು?" ಎಂದು ಚಿಂತಿಸುತ್ತ ಸ್ವಾಮಿ
ಗಳು ಹೊರಗಡೆ ಬಂದರು.

ತಮಗಾಗಿ ಕಾದು ನಿಂತಿದ್ದ ಮೋಟಾರು ಗಾಡಿ ಕಣ್ಣಿಗೆ ಬಿದ್ದೊ

ನೆಯೆ ಅವರ ತಲೆಯಲ್ಲಿ ಹೊಸ ವಿಚಾರವೊಂದು ಸುಳಿಯಿತು. ಬಾಗಿಲು ತೆರೆದು ಮೋಟಾರಿನಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೆ ಮನಸ್ಸಿನಲ್ಲಿಯೆ ಹೇಳಿಕೊಂಡರು : "ಹೌದು. ಅದನ್ನು ಬಿಟ್ಟರೆ ಬೇರೆ ದಾರಿಯಿಲ್ಲ. ಈ ಘಟನೆಗಳನ್ನು ಜನ ಮರೆಯುವವರೆಗಂತೂ ನಾವು ಇಲ್ಲಿರಕೂಡದು. ಹೇಗೂ ಜೇಬಿನಲ್ಲಿ ಎರಡು ಮೂರು ಸಾವಿರ ರೂಪಾಯಿ ಉಳಿದಿವೆ. ನೇರವಾಗಿ ಮುಂಬಯಿಗೆ ಹೋಗಿ ಈ ಮೋಟರನ್ನೂ ಮಾರಿಬಿಡಬೇಕು. ಎಂಟು ಸಾವಿರವಾದರೂ ಬರಬಹುದು. ಮುಂದೆ ಕಲಕತ್ತೆಯೊ, ದಿಲ್ಲಿಯೊ, ಕಾಶ್ಮೀರವೊ— ಎಲ್ಲಿಗಾದರೂ ಹೋದರಾದೀತು. ಬೇರೆ ಬೇರೆ ಸೀಮೆಗಳ ಸುಂದರಿಯರನ್ನಾದರೂ ನೋಡಲಾದೀತು. ಹೇಗೂ ಕೈಯಲ್ಲಿ ಹಣವಿರುತ್ತದೆ. ಒಂದು ವರ್ಷ ದೇವೇಂದ್ರನ ಹಾಗೆ ಸುಖವಾಗಿ ಕಳೆದರಾಯಿತು. ಈ ಏಕೀಕರಣ, ಈ ಸಂಸ್ಕೃತಿ, ಈ ಸರ್ವಧರ್ಮ ಸಮನ್ವಯ ಇದೆಲ್ಲ ಯಾರಿಗೆ ಬೇಕಾಗಿದೆ?"

ಮೋಟಾರು ಗಾಡಿ ಮುಖ್ಯಬೀದಿಗೆ ಬರುತ್ತಲೂ ಸ್ವಾಮಿಗಳು ಡ್ರೈವರನಿಗೆ ಕೂಗಿ ಹೇಳಿದರು:

"ಶಾಸ್ತ್ರಿಯ ಮನೆಗೆ ಹೊಡೆಯಬೇಡ ಜೋಸೆಫ್. ನೆಟ್ಟಗೆ ಪೂನಾ ರೋಡಿಗೆ ತೆಗೆದುಕೋ."

"ಅಂದರೆ! ಎಲ್ಲಿಗೆ ಹೋಗುವುದು ಬುದ್ಧೀ ?"

"ಅದೆಲ್ಲಾ ನಿನಗ್ಯಾತಕ್ಕೆ ! ಹೇಳಿದಷ್ಟು ಮಾಡಬಾರದೇ ?"

"ಸಾಮಾನೆಲ್ಲ ಶಾಸ್ತ್ರಿಯ ಮನೆಯಲ್ಲಿ ಬಿಟ್ಟಿದ್ದೇನಲ್ಲ ಬುದ್ಧಿ...."

"ಅಂಥ ನೂರು ಸಾಮಾನು ಕೊಡಿಸುತ್ತೇನೆ ನಿನಗೆ, ನಡೆ. ಹಾದಿಯಲ್ಲಿ ಯಾರು ಕೈ ಮಾಡಿದರೂ ನಿಲ್ಲಿಸದೆ ವೇಗವಾಗಿ ಹೊಡೆಯಬೇಕು."

ಜೋಸೆಫ್ ಹೊಸದಾಗಿ ಕೆಲಸಕ್ಕೆ ಸೇರಿದ್ದನಾದುದರಿಂದ ಸ್ವಾಮಿಗಳ ವಿಷಯವಾಗಿ ಆತನಿಗೆ ವಿಶೇಷವೇನೂ ತಿಳಿದುಬಂದಿರಲಿಲ್ಲ. "ಅಂತೂ ಯಜಮಾನರು ಬಹಳ ಲಹರಿಯ ಮನುಷ್ಯರೆಂದು ಕಾಣುತ್ತದೆ. ಏಕಾಏಕಿ ಹೊರಟುಬಿಡುತ್ತಾರೆ. ನಿನ್ನೆ ರಾತ್ರಿಯೆಲ್ಲ ಪ್ರವಾಸಮಾಡಿ ಇಲ್ಲಿಗೆ ಬಂದದ್ದಾಗಿತ್ತು. ಇಂದೂ ಸಹ ರಾತ್ರಿಯೆಲ್ಲ ರಸ್ತೆಯ ಮೇಲೇ ಕಳೆಯುವುದೇನೊ. ಬೆಂಗಳೂರಿನಿಂದ ಇಲ್ಲಿಗೆ, ಇಲ್ಲಿಂದ ಮುಂಬಯಿಗೋ—ಪುಣೆಗೋ. ಈ

ಸ್ವಾಮಿಗಳ ಸಹವಾಸ ಇಷ್ಟು ಕಷ್ಟವೆಂದು ಮೊದಲೇ ತಿಳಿದಿದ್ದರೆ...." ಎಂದ
ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತ ಮೋಟಾರು ಓಡಿಸತೊಡಗಿದ.

ಇತ್ತ 'ಲಿಂಗವೀರ' ಕಾರ್ಯಾಲಯದಲ್ಲಿ ಮಲ್ಲಪ್ಪಸೆಟ್ಟರು, ಮರಿದೇವರು
ಶಾಸ್ತ್ರಿಗಳು ಸ್ವಾಮಿಗಳ ಬರವನ್ನೆದುರು ನೋಡುತ್ತ ಹಾಗೇ ಕುಳಿತಿದ್ದರು
ಸಾಯಂಕಾಲವಾಗುತ್ತ ಬಂದರೂ ಸ್ವಾಮಿಗಳ ಸವಾರಿ ಆಗಮಿಸಲಿಲ್ಲವಾದ್ದ
ರಿಂದ ಶಾಸ್ತ್ರಿಗೆ ಸಂದೇಹ ಬರತೊಡಗಿತು.

"ಇಷ್ಟುಹೊತ್ತಿನ ತನಕ ಅಲ್ಲೇನು ಮಾಡುತ್ತಿದ್ದಾರು ಸ್ವಾಮಿಗಳು ?"
ಎಂದು ಮರಿದೇವರು ಕೇಳಿದರು.

"ಯಾರನ್ನಾದರೂ ಕಳಿಸಿ ನೋಡೋಣವೇನು ?" ಎಂದ ಶಾಸ್ತ್ರಿ.

"ಹಾಗೇ ಮಾಡಿರಿ. ಏನಾಗಿದೆಯೊ ಏನೊ. ನಮಗೆ ಕೊಟ್ಟ ಉತ್ತರ
ವನ್ನೇ ಅವರಿಗೂ ಕೊಟ್ಟಿರಲು ಸಾಕು ಆ ಹರಿಹರ. ಆ ಹುಡುಗಿ ಹೇಳಿದರೆ
ಮಾತ್ರ ಆತ ಲೇಖನ ಪ್ರಕಟಿಸುವುದನ್ನು ಬಿಟ್ಟಾನು. ಬೇರೆ ಯಾರು ಹೇಳಿ
ದರೂ ಕೇಳುವಂತಿಲ್ಲವೆಂಬುದು ಸ್ಪಷ್ಟವಿದೆ. ಅಂತೆಯೇ ಸ್ವಾಮಿಗಳೂ ಆಕೆ
ಯನ್ನು ಹುಡುಕುತ್ತಾ ಹೊರಟರೇನೊ," ಎಂದರು ಮಲ್ಲಪ್ಪಸೆಟ್ಟರು.

"ಹಾಗೂ ಆಗಿರಬಹುದು. ಅಲ್ಲದೆ, ನೀವಾಗಲಿ ಈ ಮರಿದೇವರಾಗಲಿ
ಇಲ್ಲಿಗೆ ಬಂದದ್ದು ಅವರಿಗೆ ಗೊತ್ತಾಗಲಿಲ್ಲ. ಅವರು ಅತ್ತ ಹೋದ ಬಳಿಕ
ನೀವು ಇತ್ತ ಬಂದಿರಿ. ಸ್ವಲ್ಪ ಮೊದಲೇ ಬಂದಿದ್ದಲ್ಲಿ ಚೆನ್ನಾಗುತಿತ್ತು
ಸ್ವಾಮಿಗಳಿಗೆ ಸ್ವಲ್ಪವಾದರೂ ಧೈರ್ಯ ಬರುತ್ತಿತ್ತು. ಬೆಳಿಗ್ಗೆ ಬರುತ್ತಲೂ
ಈ ಜಾಹೀರಾತು ನೋಡಿದಾಗ ಅವರ ಎದೆಯೊಡೆದು ನೀರಾದ ಹಾಗೆ
ತೋರುತ್ತಿತ್ತು."

"ಪಾಪ! ಆ ಹರಿಹರನಿಂದ ಒರಟು ಮಾತು ಕೇಳಿಸಿಕೊಂಡ ಬಳಿಕ
ಅವರು ಇನ್ನೂ ಕುಗ್ಗಿ ಹೋಗಿರಲು ಸಾಕು. ಆತ ಭಯಂಕರ ಮನುಷ್ಯ.
ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ಚಟ್‌ಪಟ್ ಅಂತ ಗುಂಡು ಹೊಡೆದ ಹಾಗೆ
ಮಾತಾಡಿಬಿಡುತ್ತಾನೆ."

ಮುದ್ರಣಾಲಯದ ಕೆಲಸಗಾರನೊಬ್ಬನನ್ನು 'ಜನಪದ' ಕಾರ್ಯಾ
ಲಯಕ್ಕೆ ಕಳುಹಿಸಿ ಸುದ್ದಿ ತಿಳಿದುಕೊಂಡದ್ದೂ ಆಯಿತು. "ಸ್ವಾಮಿಗಳ

ಯಾವಾಗಲೋ ಹೊರಟುಹೋದರಂತೆ ಮಲ್ಲಪ್ಪಣ್ಣನವರೆ. ಎಲ್ಲಿಗೆ ಹೋಗಿರಬಹುದು?" ಎಂದು ಅಳುವ ಧ್ವನಿಯಲ್ಲಿ ಕೇಳಿದ ಶಾಸ್ತ್ರಿ.

"ಬಹಳ ಮಾಡಿ ಪ್ರಭುಸ್ವಾಮಿಗಳ ಹತ್ತರವೇ ಹೋಗಿರಬೇಕು. ನಾನೂ ಅಲ್ಲಿಗೇ ಹೊರಡುತ್ತೇನೆ. ನೀವೂ ನಡೆಯಿರಿ ಮರಿದೇವರೆ. ಮೋಟಾರು ತಂದಿದ್ದೇನೆ. ಅದರಲ್ಲಿಯೇ ಹೋಗಿ ಬರೋಣ."

ಮೋಟಾರು ಎನ್ನುತ್ತಲೂ ಮರಿದೇವರ ಮುಖ ಪ್ರಸನ್ನತೆಯಿಂದ ಅರಳಿದಂತಾಯಿತು. ಮೋಟಾರು ಕಾರಿನಲ್ಲಿ ಉಚಿತ ಪ್ರವಾಸ ಮಾಡುವ ಸಂದರ್ಭ ಇದುವರೆಗೂ ಅವರಿಗೆ ಬಂದಿರಲಿಲ್ಲ. ಅವರು ನಗುನಗುತ್ತಾ ಕಾರನ್ನೇರಿ ಹಿಂದಿನ ಒರಗು ದಿಂಬಿಗೆ ತಲೆಯನ್ನಿರಿಸಿ ತುಂಬಾ ಬಿಂಕದಿಂದ ಕುಳಿತುಕೊಂಡರು. ತಮ್ಮನ್ನು ಬೀಳ್ಕೊಳ್ಳಲು ಹೊರಗಡೆ ಬಂದಿದ್ದ ಶಾಸ್ತ್ರಿಯನ್ನುದ್ದೇಶಿಸಿ–"ನಾವು ಬರೆಯಲಿರುವ ಲೇಖನದ ವಿಷಯ ಮರೆಯಬೇಡಿರಿ ಶಾಸ್ತ್ರಿಗಳೆ. ಅಂತೂ ಆ ಪ್ರಭುಸ್ವಾಮಿಯನ್ನು ನಮ್ಮ ಸೀಮೆಯಿಂದ ಓಡಿಸಿ ಬಿಡಲೇಬೇಕು," ಎಂದರು.

"ಮೊದಲು ಈ ಸರಸೂ ಪ್ರಕರಣ ಸುರಕ್ಷಿತವಾಗಿ ಕೊನೆಗಾಣಲಿ. ಆನಂತರ ಅದಕ್ಕೆ ಕೈ ಹಚ್ಚೋಣ. ನಮ್ಮ 'ಲಿಂಗವೀರ' ಇರುವಾಗ ನಿಮಗೇಕೆ ಆ ಚಿಂತೆ? ನಾನೆಲ್ಲವನ್ನೂ ನೋಡಿಕೊಳ್ಳುತ್ತೇನೆ," ಎಂದು ನುಡಿದು ಶಾಸ್ತ್ರಿ ಮಲ್ಲಪ್ಪಸೆಟ್ಟರ ಕಡೆಗೆ ತಿರುಗಿ–"ಅಂತೂ ಕೆಲಸ ಮಾಡಿಕೊಂಡೇ ಬರಬೇಕು ಮಲ್ಲಪ್ಪಣ್ಣ. ಸಾಧ್ಯವಾದರೆ ಆ ಹುಡುಗಿಯನ್ನು ಕರೆದುಕೊಂಡೇ ಬರಬೇಕು,"ಎಂದು ಹೇಳಿದ.

"ಸ್ವಾಮಿಗಳು ಅಲ್ಲಿ ಸಿಕ್ಕದಿದ್ದರೆ?"

"ಸಿಕ್ಕದಿದ್ದರೂ ಚಿಂತೆಯಿಲ್ಲ. ನಾವು ಮಾಡುವ ಕೆಲಸ ಮಾಡಿಬಿಡೋಣ. ಈಗ ಕೇವಲ ಸ್ವಾಮಿಗಳೊಬ್ಬರೇ ಅಲ್ಲ–ನಾನು, ನೀವು ಎಲ್ಲರೂ ಉಳಿದುಕೊಳ್ಳಬೇಕಾಗಿದೆ. ಈ ಲೇಖನ ಪ್ರಕಟವಾಗಿಬಿಟ್ಟರೆ ಮುಗಿದೇ ಹೋಯಿತು. ಮತ್ತೆ ಆ ಚೆನ್ನಪ್ಪಗೌಡನ ಕೈಯೇ ಮೇಲಾಗುವುದು."

"ಹೌದು. ಹೌದು. ನಿಮ್ಮ ಮಾತು ನಿಜ. ನಾನು ಎಲ್ಲವನ್ನೂ ಸರಿಪಡಿಸಿಕೊಂಡೇ ಬರುತ್ತೇನೆ. ಚಿಂತಿಸಬೇಡಿರಿ."

ಮೋಟಾರು ಮುಂದೆ ಸಾಗಿತು.

ನಗರದ ಬೀದಿಗಳನ್ನು ಸುತ್ತಿ ಊರನ್ನು ಹಿಂಸೆ ಹಾಕಿ ಮೋಟಾರು ರಾಜರಸ್ತೆಗೆ ಬಂದ ಬಳಿಕ ಸೆಟ್ಟರು ಕೇಳಿದರು :

"ಆ ಸ್ವಾಮಿ, ಆ ಹುಡುಗಿ ಇಬ್ಬರೂ ಅಲ್ಲೇ ಇರಬಹುದಲ್ಲವೆ, ಮರಿ ದೇವರೆ?"

"ಇನ್ನೆಲ್ಲಿಗೆ ಹೋಗುತ್ತಾರೆ? ಆ ಹುಡುಗಿಗೂ ಬೇರೆ ಯಾರೂ ದಿಕ್ಕಿಲ್ಲ. ಸ್ವಾಮಿಗೂ ಇಲ್ಲ."

"ಹುಡುಗಿಗೆ ಎಲ್ಲರೂ ಇದ್ದಾರೆ. ಆದರೂ ಇಲ್ಲದ ಹಾಗೇ. ಪಾಪ, ಆಕೆಯ ಬಾಳು ಹೀಗಾಗಬಾರದಿತ್ತು."

"ಏನು ಸೆಟ್ಟರೆ, ವ್ಯಸನವಾಗುತ್ತದೆಯೆ?"

"ಆಗದಿರುತ್ತದೆಯೇ ಮರಿದೇವರೆ! ನನ್ನ ಕಣ್ಣೆದುರಿಗೇ ಬೆಳೆದು ದೊಡ್ಡವಳಾದ ಹುಡುಗಿ. ಆಕೆಯ ತಂದೆಯ ಮೂರ್ಖ ಹಟದಿಂದಾಗಿ ಆಕೆಗೆ ಈ ಗತಿಯಾಯಿತು. ಪಾಪ, ಸ್ವಂತ ತಾಯಿಯೂ ಇರಲಿಲ್ಲ. ಈಕೆ ಹುಟ್ಟಿದಾಗಲೇ ಕಣ್ಣು ಮುಚ್ಚಿದ್ದಳು. ತಂದೆಯಂತೂ ಇದ್ದರೂ ಇಲ್ಲದ ಹಾಗಿದ್ದ. ಪರದೇಶಿ ಹುಡುಗಿ....."

"ಪರದೇಶಿಯಾದ ಮಾತ್ರಕ್ಕೆ ಪುಂಡು ಸ್ವಾಮಿಯೊಂದಿಗೆ ರಮಿಸ ಬೇಕೇನು ಸೆಟ್ಟರೆ!"

"ಅವರಿಬ್ಬರಲ್ಲಿ ಅಂಥ ಸಂಬಂಧವಿದ್ದಿತೆಂದು ನನಗೆನ್ನಿಸುವುದಿಲ್ಲ. ಪ್ರಭುಸ್ವಾಮಿಗಳು ಅಂಥವರಲ್ಲ. ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರ ಸ್ವಭಾವ ಸ್ವಲ್ಪ ವಿಲಕ್ಷಣವೆಂಬುದೇನೋ ನಿಜ. ಆದರೆ ಇಂಥ ಕೆಲಸ ಮಾತ್ರ ಅವರೆಂದೂ ಮಾಡಿರಲಿಲ್ಲ."

"ಆಗ ಮಠದಲ್ಲಿದ್ದುದರಿಂದ ಮಾಡುವುದು ಸಾಧ್ಯವಾಗಿರಲಿಕ್ಕಿಲ್ಲ. ಅಲ್ಲಿ ಹಳ್ಳಿಗಾಡಿನಲ್ಲಿ ಯಾರು ಕೇಳಬೇಕು?"

"ನೀವು ಇದ್ದಿರಲ್ಲ? ನಿಮ್ಮ ಜನರಿದ್ದರಲ್ಲ? ಅವರ ಗುಡಿಸಲಿಗೆ ಬೆಂಕಿ ಹಚ್ಚಲು ಹೋಗಿದ್ದರೆಂದು ಶಾಸ್ತ್ರಿಯ ಮನೆಯಲ್ಲಿ ನೀವೇ ಹೇಳಲಿಲ್ಲವೆ? ಕಳ್ಳತನ ಮಾಡುವವರಿಗೆ ಸಿಕ್ಕಿಬಿದ್ದೇನೆಂಬ ಭೀತಿ ಯಾವಾಗಲೂ ಇದ್ದೇ ಇರುತ್ತದೆ. ನೀವೇನೇ ಹೇಳಿರಿ. ಪ್ರಭುಸ್ವಾಮಿಗಳು ಅಂಥವರೆಂಬುದನ್ನು ನಾನು ನಂಬಲಾರೆ."

“ಸರಿ. ನಿಮಗೆ ಇಷ್ಟೊಂದು ನಂಬಿಕೆಯಿದ್ದಲ್ಲಿ ನಾವೇನನ್ನು ಹೇಳಿದರೂ ಉಪಯೋಗವಿಲ್ಲ. ಅಲ್ಲಿಗೆ ಹೋದ ಬಳಿಕ ಅವರೆದುರಿಗೇ ಈ ವಿಚಾರ ನಿಷ್ಕರ್ಷೆ ಮಾಡೋಣ.”

ಆದರೆ ಆ ರೀತಿಯಾಗಿ ನಿಷ್ಕರ್ಷೆ ಮಾಡುವ ಪ್ರಸಂಗವೇ ಬರಲಿಲ್ಲ.

ಮೋಟಾರು ಹಳ್ಳಿಗೆ ಬಂದು ಮುಟ್ಟಿದಾಗ ಮಧ್ಯರಾತ್ರಿ ಮೀರಿ ಹೋಗಿದ್ದಿತು.

ಮಠದ ಎದುರಿಗೆ ಮೋಟಾರು ನಿಲ್ಲಿಸಿ ಅವರಿಬ್ಬರೂ ಮಾವಿನ ತೋಪಿನ ಕಡೆಗೆ ನಡೆದರು.

ಗುಡಿಸಲಿನ ಪಕ್ಕದಲ್ಲಿದ್ದ ಮಾವಿನಗಿಡದ ಕೆಳಗೆ ನಾಲ್ಕೈದು ಜನರು ತಲೆ ಕೆಳಕ್ಕೆ ಬಾಗಿಸಿ ಕುಳಿತಿದ್ದುದು ಬ್ಯಾಟ್ರಿದೀಪದ ಬೆಳಕಿನಲ್ಲಿ ಕಾಣಿಸಿತು.

ಬ್ಯಾಟ್ರಿ ಬೆಳಕು ಬಂದೊಡನೆ ಕುಳಿತಿದ್ದವರಲ್ಲಿ ಒಬ್ಬರನ್ನುಳಿದು ಇನ್ನಿತರರೆಲ್ಲ ಎದ್ದು ನಿಂತರು.

“ಸಿಕ್ಕಳೋ ಏನೋ ಶಿವಮೂರ್ತಿ. ಬಸವಾಣೆಪ್ಪ ಬಂದನೇನೊ,” ಎಂದು ಒಬ್ಬರು ಹೇಳುವುದು ಕೇಳಬಂದಿತು.

“ಶಿವಮೂರ್ತಿಯೂ ಬಂದಿದ್ದಾನೆ ಹಾಗಾದರೆ,” ಎಂದುಕೊಳ್ಳುತ್ತ ಮಲ್ಲಪ್ಪಸೆಟ್ಟರು ವೇಗವಾಗಿ ಹೆಜ್ಜೆ ಹಾಕುತ್ತ ಗಿಡದ ಹತ್ತಿರ ಬಂದರು.

“ಯಾರು ಬಸವಾಣೆಪ್ಪನೇನು ?” ಎಂದು ಒಬ್ಬರು ಆತುರವಾಗಿ ಪ್ರಶ್ನಿಸಿದರು.

“ಅಲ್ಲ. ಮಲ್ಲಪ್ಪಸೆಟ್ಟರು. ಪ್ರಭುಸ್ವಾಮಿಗಳನ್ನು ಕಾಣಲು ಬಂದಿದ್ದಾರೆ. ಎಲ್ಲಿದ್ದಾರೆ ಸ್ವಾಮಿ ?” ಎಂದರು ಮರಿದೇವರು.

ಅವರ ಧ್ವನಿಯ ಗುರುತು ತಿಳಿದೊಡನೆ ಒಬ್ಬ ಹಠಾತ್ತಾಗಿ ಮುನ್ನುಗ್ಗಿ ಬಂದು ಮರಿದೇವರ ಅಂಗಿಯನ್ನು ಹಿಡಿದೆಳೆದು ನಾಲ್ಕು ಏಟು ಹಾಕಿದ. “ಈ ಸೂಳೀಮಗನೇ ಎಲ್ಲಾ ಅನರ್ಥ ಮಾಡಿದ. ದೇವರಂಥ ನಮ್ಮ ಆ ಸ್ವಾಮಿಗಳನ್ನು ಇಲ್ಲಿ ಇರಗೊಡಲಿಲ್ಲ. ಸುಮ್ಮಸುಮ್ಮನೆ ಅವರ ಮೇಲೆ ಸುಳ್ಳು ಅಪವಾದ ಹೊರಿಸಿ ಪುಂಡರನ್ನು ನುಗ್ಗಿಸಿ ಅಪಮಾನಗೊಳಿಸಿದ. ಸ್ವಾಮಿಗಳು ಹೋಗಿಬಿಟ್ಟರು. ಆ ಹುಡುಗಿಯೂ ಹೋಗಿಬಿಟ್ಟಳು. ಪಾಪ, ಆಕೆ ಜೀವಕ್ಕೇನು ಮಾಡಿಕೊಂಡಳೋ ಏನೊ. ತಿಂದು ತಿಂದು ಸೊಕ್ಕಿ

ಹೊಟ್ಟೆ ಉಬ್ಬಿಸಿಕೊಂಡ ಈ ಭಂಡ...." ಎಂದೆನ್ನುತ್ತಾ ಮತ್ತೆ ಏಟು ಹಾಕ ತೊಡಗಿದ.

ಮಲ್ಲಪ್ಪಸೆಟ್ಟರು ಮರಿದೇವರನ್ನು ಬಿಡಿಸಿಕೊಳ್ಳಲು ಮುಂದಾಗಲಿಲ್ಲ. "ಪ್ರಭುಸ್ವಾಮಿಗಳು ಹೋದರೇ! ಎಲ್ಲಿಗೆ ಹೋದರು?" ಎಂದು ಅವರು ಕೇಳಿದರು.

"ಎಲ್ಲಿಗೆ ಹೋದರೋ ದೇವರಿಗೇ ಗೊತ್ತು. ಅಂತೂ ನಮ್ಮನ್ನೆಲ್ಲ ಬಿಟ್ಟು ಹೊರಟುಹೋದರು."

ಗಿಡದ ಬುಡಕ್ಕೆ ಅತುಕೊಂಡು ಕುಳಿತಿದ್ದ ಶಿವಮೂರ್ತಿ ಕೊಂಚ ಮೇಲಕ್ಕೆದ್ದ. ತನ್ನ ಜೇಬಿನಿಂದ ಎರಡು ಕಾಗದಗಳನ್ನು ಹೊರತೆಗೆದು ಸೆಟ್ಟರ ಕಡೆಗೆ ನೀಡಿ—"ಇವೆರಡನ್ನೂ ಓದಿಕೊಳ್ಳಿರಿ ಸೆಟ್ಟರೆ. ಎಲ್ಲವೂ ಗೊತ್ತಾಗುತ್ತದೆ," ಎಂದು ಶಾಂತಸ್ವರದಲ್ಲಿ ಹೇಳಿದ.

[೩೦]

ಗುಡಿಸಲಿನಲ್ಲಿ ಚಿಮಣಿ ದೀಪವಿದ್ದುದು ಕಾಣುತ್ತಿತ್ತು. ಮಲ್ಲಪ್ಪ ಸೆಟ್ಟರು ಒಳಗಡೆ ಹೋಗಿ ದೀಪದ ಬೆಳಕಿನಲ್ಲಿ ಕಾಗದಗಳನ್ನೋದತೊಡಗಿ ದರು.

ಒಂದು ಕಾಗದ ಈ ರೀತಿ ಇತ್ತು :

"ಪ್ರಿಯ ಶಿವಮೂರ್ತಿ,

ಈ ಕಾಗದ ನಿನ್ನ ಕೈ ಸೇರುವ ಹೊತ್ತಿಗೆ ನಾನಿಲ್ಲಿ ಇರುವುದಿಲ್ಲ. ದೂರ, ಬಲುದೂರ, ನನ್ನನ್ನು ಗುರುತಿಸುವ ಜನರಿಲ್ಲದ ಭಾಗದಲ್ಲಿರುತ್ತೇನೆ.

ನನ್ನ ಅತ್ಯಂತ ಪ್ರೀತಿಯವರಾದ ರೈತರನ್ನು ಬಿಟ್ಟುಹೋಗಲು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೂ ಹೋಗಲೇಬೇಕಾಗಿ ಬಂದಿದೆ. ಇವರಲ್ಲಿ ಕೆಲವರಿಗಾದರೂ ನಾನು ಇಲ್ಲಿರುವುದು ಬೇಡವಾಗಿದೆ. ನಾನಿಲ್ಲಿಗೆ ಬಂದು ಹಳ್ಳಿಗರ ಸೇವೆಯಲ್ಲಿ ತೊಡಗಿದಂದಿನಿಂದ ಪಾಪ, ಆ ಮರಿದೇವರಿಗೂ ತುಂಬ ಹಾನಿಯಾಗಿದೆ. ನನ್ನಿಂದಾಗಿ ಅವರಿಗೆ ವೃಥಾ ತೊಂದರೆಯಾಗುವುದು ಬೇಡ.

ನಿನ್ನನ್ನು ಆಗಲೇ ಕರೆಯಿಸಬೇಕಾಗಿದ್ದಿತು. ಸರಸು ಇಲ್ಲಿಗೆ ಬಂದೊಡ ನೆಯೇ ನಿನಗೆ ಹೇಳಿ ಕಳುಹಿಸಬೇಕಾಗಿದ್ದಿತು. ಆದರೆ ಮೂರು ನಾಲ್ಕು ದಿನ

ವಾದರೂ ಆಕೆ ಶಾಂತವಾಗಿ ಕಾಲ ಕಳೆದು ಉದ್ರೇಕವನ್ನು ಕಳೆದುಕೊಳ್ಳ ಲೆಂದು ಸುಮ್ಮನಿದ್ದೆ.

ನಿನ್ನೆ ಅಕಸ್ಮಾತ್ತಾಗಿ ನಡೆಯಬಾರದಂಥ ಘಟನೆಯೊಂದು ನಡೆಯಿತು. ಸರಸು ಬಂದು ಇಲ್ಲಿ ವಾಸವಾಗಿದ್ದುದನ್ನು ಮಠದ ಮರಿದೇವರು ತಪ್ಪು ತಿಳಿದುಕೊಂಡರೆಂದು ತೋರುತ್ತದೆ. ಆಕೆ ನನ್ನ ಪ್ರೇಯಸಿಯೆಂದು ಹಳ್ಳಿ ಯಲ್ಲಿ ಸುದ್ದಿ ಹರಡಿತು. ಹಳ್ಳಿಯ ಜನರಿಗೆ ಸಿಟ್ಟು ಬರುವುದು ಬಲು ಬೇಗ. ಹತ್ತಿಪ್ಪತ್ತು ಜನರು ಗುಡಿಸಲಿಗೆ ನುಗ್ಗಿ ಸರಸುವನ್ನೂ ನನ್ನನ್ನೂ ದೂಷಿಸಿ ದರು. ಗುಡಿಸಲಿಗೆ ಬೆಂಕಿ ಹತ್ತಿಸಿ ನಮ್ಮನ್ನು ಹೊರಹಾಕುವ ಪ್ರಯತ್ನವೂ ನಡೆಯಿತು. ಆದರೆ, ಅಷ್ಟರಲ್ಲೇ ಇನ್ನು ಕೆಲವು ರೈತರು ಬಂದು ನಮ್ಮನ್ನು ರಕ್ಷಿಸಲು ನಿಂತದ್ದರಿಂದ ಅನಾಹುತ ತಪ್ಪಿತು.

ನಾನು ಎಷ್ಟು ಬಗೆಯಾಗಿ ತಿಳಿಸಿಹೇಳಿದರೂ ಸಿಟ್ಟಿನಿಂದ ಅಂಧರಾಗಿದ್ದ ಜನರಿಗೆ ಅರ್ಥವಾಗಲಿಲ್ಲ. 'ಈಕೆ ನನ್ನ ಮಗಳಿದ್ದ ಹಾಗೆ. ನಿಜಕ್ಕೂ ನನ್ನ ಮಗಳೇ.' ಎಂದು ಹೃದಯ ಬಿಚ್ಚಿ ಹೇಳಿದೆ. 'ಮಗಳು! ಒಳ್ಳೆ ಮಗಳೇ! ಅಪ್ಪನೊಂದಿಗೆ ಮಲಗುವ ಮಗಳು!' ಎಂದೆಲ್ಲಾ ಅಣಕವಾಡಿದರು.

ನಾನು ನಿಜವನ್ನೇ ಹೇಳುತ್ತಿದ್ದೆ ಶಿವಮೂರ್ತಿ. ಶಿವನಾಣೆಗೂ ನಿಜ ವನ್ನೇ ಹೇಳುತ್ತಿದ್ದೆ. ಸರಸು ನಿಜಕ್ಕೂ ನನ್ನ ಮಗಳೇ ಆಗಿದ್ದಳು. ಅಂದು ನೀನಿಲ್ಲಿಗೆ ಬಂದಿದ್ದಾಗ ನಾನೊಮ್ಮೆ ಕಾಲು ಜಾರಿದ ವಿಷಯ ಹೇಳಿದ್ದೆ, ನೆನಪಿನಲ್ಲಿದೆಯಷ್ಟೆ. ನನ್ನ ಕೃತ್ಯದಿಂದಾಗಿ ನೊಂದುಕೊಂಡು ನರಳಿ ಕಣ್ಣು ಮುಚ್ಚಿದಾಕೆಯೇ ಸರಸುವಿನ ತಾಯಿ. ಈಕೆಯನ್ನು ಹೆತ್ತ ಒಡನೆಯೆ ಕೊನೆಯುಸಿರು ಬಿಟ್ಟಳಾಕೆ.

ಈ ಜನರೆದುರಿಗೆ ಈ ವಿಷಯವನ್ನೆಲ್ಲ ನಾನು ಸವಿಸ್ತಾರವಾಗಿ ಹೇಳು ವಂತಿರಲಿಲ್ಲ. ಕೇಳಿಕೊಳ್ಳುವಷ್ಟು ತಾಳ್ಮೆಯೂ ಆಗ ಅವರಲ್ಲಿರಲಿಲ್ಲ. ನಾನು ಹೇಳಿದ್ದರೂ ಅವರಿಗೆ ಯಾವುದೂ ಅರ್ಥವಾಗುವಂತಿರಲಿಲ್ಲ. ಅಂತೆಯೆ ಅವ ನ್ನೆಲ್ಲಾ ಬಿಡಿಸಿ ಹೇಳುವ ಗೊಡವೆಗೆ ಹೋಗಲಿಲ್ಲ.

ಗದ್ದಲವೆಲ್ಲ ಮುಗಿದುಹೋದ ಬಳಿಕ ಸರಸುವನ್ನು ಸಂತವಿಸುತ್ತ 'ಈ ಘಟನೆಯಿಂದಾಗಿ ನೀನೇನೂ ನೊಂದುಕೊಳ್ಳಬೇಡ ಸರಸೂ,' ಎಂದು ಹೇಳಿದೆ.

ಆಕೆ ಅಳುತ್ತಳುತ್ತ—'ಆದರೆ ನನ್ನಿಂದಾಗಿ ನಿಮ್ಮ ಮೇಲೆ ಇಂಥ ಅಪವಾದ ಬಂದಿತಲ್ಲ. ನಾನಿನ್ನು ಇಲ್ಲಿ ಇರಲಾರೆ. ಹೊರಟುಹೋಗುತ್ತೇನೆ,' ಎಂದಳು.

ಎಲ್ಲಿಗೆ ಹೋಗಬೇಕು ಆಕೆ! ತವರುಮನೆಯಲ್ಲಿ ಸ್ವಾಗತವಿರಲಿಲ್ಲ. ಕೈ ಹಿಡಿದ ನೀನೂ ದೂರವಾಗಿದ್ದೆ. ಆಕೆ ನಿನ್ನ ಹತ್ತಿರ ಬಂದು ಕಣ್ಣೀರು ಸುರಿಸಿದರೂ ಮತ್ತೆ ನೀನು ಆಕೆಯೊಂದಿಗೆ ಕೂಡಿ ಸಂಸಾರ ಸಾಗಿಸಬಹುದೆಂಬ ಭರವಸೆಯಿರಲಿಲ್ಲ.

'ಎಲ್ಲಿಗೆ ಹೋಗುವಾಕೆ ಸರಸೂ ?' ಎಂದು ಕೇಳಿದೆ.

'ಎಲ್ಲಿಗೋ. ಹಾದಿ ಸಿಕ್ಕತ್ತ ಹೋಗುತ್ತೇನೆ.' ಎಂದಳು.

ಆಕೆಯ ತಲೆಗೂದಲಿನ ಮೇಲೆ ಕೈ ಆಡಿಸುತ್ತ—'ನೀನು ನನ್ನ ಮಗಳು ಸರಸೂ. ನಿಜಕ್ಕೂ ನನ್ನ ಮಗಳು. ನನ್ನ ಹತ್ತಿರ ಇರಲು ಯಾವ ಸಂಕೋಚವೂ ಬೇಡ ನಿನಗೆ. ಸ್ವಂತ ಮಗಳಿಂದ ತಂದೆಯಾದವನಿಗೆ ಅಪವಾದ ಬರುವುದುಂಟೇ ? ತಿಳಿಯದ ಜನ ಆಡಿಕೊಂಡಾರು. ಅದಕ್ಕಾಗಿ ನಾವು ಕೊರಗಬೇಕಾಗಿಲ್ಲ,' ಎಂದು ಆರಂಭಿಸಿ ಆಕೆಯ ಜನನದ ವೃತ್ತಾಂತವನ್ನೆಲ್ಲ ಹೇಳಿದೆ.

ನಾನು ಹೇಳಿ ಮುಗಿಸುವ ಹೊತ್ತಿಗೆ ಸರಸು ತಲೆ ಕೆಳಕ್ಕೆ ಬಾಗಿಸಿ ಮೂಕವಾಗಿ ರೋದಿಸುತ್ತಿದ್ದಳು. 'ನನ್ನ ಬಗ್ಗೆ ತಿರಸ್ಕಾರ ಬಂದಿತೇ ಸರಸೂ ? ಹೇಸಿಕೆಯಾಯಿತೇ ?' ಎಂದು ಕೇಳಿದೆ.

ಆಕೆ ತಲೆಯನ್ನು ಮೇಲಕ್ಕೆತ್ತಲಿಲ್ಲ. ಅಳುವನ್ನೂ ನಿಲ್ಲಿಸಲಿಲ್ಲ. ನನ್ನ ಪ್ರಶ್ನೆಗೆ ಅವಳಿಂದ ಉತ್ತರವೂ ದೊರೆಯಲಿಲ್ಲ.

'ನಿನ್ನ ತಾಯಿಗೆಸಗಿದ ಆ ಮಹಾಪರಾಧಕ್ಕಾಗಿ ಒಮ್ಮೆ ಆಕೆಯ ಕ್ಷಮೆ ಕೇಳೋಣವೆಂದಿದ್ದೆ. ಆಗಲಿಲ್ಲ. ಈಗ ನಿನ್ನ ಕ್ಷಮೆ ಯಾಚಿಸುತ್ತೇನೆ ಸರಸೂ. ನಿನ್ನ ತಾಯಿ ಮತ್ತು ನೀನು ಇಬ್ಬರ ಪರವಾಗಿಯೂ ಒಮ್ಮೆ ಕ್ಷಮಿಸಿಬಿಡು,' ಎಂದು ಹೇಳಿದೆ.

ಆಗಲೂ ಆಕೆ ತಲೆಯೆತ್ತಲಿಲ್ಲ. ಅಳುವುದನ್ನೂ ನಿಲ್ಲಿಸಲಿಲ್ಲ.

ಅಳುವುದರಿಂದ ಹೃದಯ ಹಗುರಾಗುವುದು, ಅನಂತರ ತಾನೇ ಶಾಂತಳಾಗುವಳು ಎಂದು ಯೋಚಿಸಿ ನಾನು ಕೊಂಚ ಹೊತ್ತು ತಿರುಗಾಡಿಕೊಂಡು

ಬರೋಣವೆಂದು ಹೊರಟುಹೋದೆ. ನನ್ನ ಮನಸ್ಸೂ ಸ್ಥಿಮಿತದಲ್ಲಿರಲಿಲ್ಲ-ಮೊದಲು ಅದನ್ನು ಸ್ಥಿರಗೊಳಿಸಬೇಕಾಗಿದ್ದಿತು.

ಒಂದು ತಾಸಿನ ವರೆಗೆ ಅಲ್ಲಿ ಇಲ್ಲಿ ಸುತ್ತಿದ ತರುವಾಯ ಗುಡಿಸಲಿಗೆ ಬಂದು ನೋಡಿದರೆ ಸರಸು ಅಲ್ಲಿರಲಿಲ್ಲ. ಒಂದು ಚಿಕ್ಕ ಕಾಗದ ಮಾತ್ರ ನನಗಾಗಿ ಕಾದಿತ್ತು.

ಅದನ್ನೂ ಈ ಕಾಗದದೊಂದಿಗೆ ಕಳುಹಿಸಿದ್ದೇನೆ.

ಆಕೆ ಎಲ್ಲಿಗೆ ಹೋದಳೋ, ಜೀವಕ್ಕೆ ಏನು ಮಾಡಿಕೊಂಡಳೋ.

ಅವಳನ್ನು ಹುಡುಕಿಸುವ ಕೆಲಸವನ್ನು ನಿನಗೊಪ್ಪಿಸಿ ನಾನು ಇಲ್ಲಿಂದ ಹೊರಟಿದ್ದೇನೆ. ಆಕೆ ಬದುಕಿರುವಳೆಂದೇ ನನ್ನ ಸಂಬಿಕೆ. ಒಂದು ವೇಳೆ ಆತ್ಮಹತ್ಯೆಗೆಳಸಿದ್ದರೆ....

ಅರಳಿದ ಗುಲಾಬಿಯಂತಿದ್ದ ಆ ಮುದ್ದು ಮುಖ ಮೃತ್ಯುವಿನ ಹಿಡಿತಕ್ಕೊಳಗಾಗಿ ಬಾಡಿ ವಿಕೃತವಾದ ಆ ದೃಶ್ಯವನ್ನು ನಾನು ನೋಡಲಾರೆ. ಅಂಥ ಭೀಕರ ದೃಶ್ಯವನ್ನೆದುರಿಸುವುದಕ್ಕಿಂತ ಈಗಲೇ ಹೊರಟುಬಿಡುವುದು ಒಳ್ಳೆಯದೆಂದು ನಿರ್ಧರಿಸಿ ಹೊರಟಿದ್ದೇನೆ.

ಸರಸುವಿನ ತಾಯಿಯ ಮೃತ್ಯುವಿಗೂ ನಾನೇ ಕಾರಣನಾಗಿದ್ದೆ. ಸರಸುವಿನ ಮೃತ್ಯುವಿಗೂ ನಾನೇ ಆಗಬಾರದು. ಒಂದು ವೇಳೆ ಹಾಗಾದರೆ....

ನನ್ನಂಥ ಪಾಪಿ ನಾನೇ. ನನ್ನಂಥ ದುರ್ದೈವಿ ನಾನೇ.

ನನ್ನನ್ನು ಕ್ಷಮಿಸು ಶಿವಮೂರ್ತಿ. ನನ್ನೆಲ್ಲ ಅಪರಾಧಗಳನ್ನು ಮನ್ನಿಸು.

ಈ ಅನಾಹುತಗಳಿಂದಾಗಿ ನಿನ್ನ ಕರ್ತವ್ಯದ ದಾರಿಯಿಂದ ನೀನು ವಿಮುಖನಾಗಕೂಡದು. ಹೃದಯವನ್ನು ಕಲ್ಲಿನಂತೆ ಗಟ್ಟಿಯಾಗಿಸಿ ಮುನ್ನುಗ್ಗು."

ಸ್ವಾಮಿಗಳ ಪತ್ರವನ್ನೋದಿ ಮುಗಿಸಿ ಸೆಟ್ಟರು ಎರಡನೆಯ ಕಾಗದದ ಮೇಲೆ ದೃಷ್ಟಿಯನ್ನೋಡಿಸಿದರು.

"ಸ್ವಾಮೀಜಿ, ತಂದೆ,

ನನ್ನನ್ನು ಕ್ಷಮಿಸಿರಿ. ನನ್ನನ್ನು ಮರೆತುಬಿಡಿರಿ.

ಶಿವಮೂರ್ತಿಗೂ ನನ್ನನ್ನು ಮರೆಯಲು ಹೇಳಿರಿ. ಅವರು ನನ್ನನ್ನು ಮರೆತಿರಬಹುದೆಂದು ನಾನು ತಿಳಿದಿಲ್ಲ. ನಾನೆಂಥ ಅಪರಾಧ ಮಾಡಿದ್ದರೂ ನನ್ನನ್ನವರು ತಿರಸ್ಕರಿಸಲಾರರು, ಮರೆಯಲಾರರು ಎಂಬ ನಂಬಿಕೆ ನನಗಿದೆ.

ಆದರೂ ಇನ್ನುಮುಂದೆ ಅವರೂ ನನ್ನನ್ನು ಮರೆಯಬೇಕು.

ನನ್ನ ತಂಗಿ ಗೌರಿಯು ನೆನಪಾಗಿ ಕತ್ತು ಉಬ್ಬಿಬರುತ್ತಿದೆ. ಅಕ್ಕ ಸೂಶಿಯು ನೆನಪಾಗಿ ಅಳುವುಕ್ಕಿ ಬರುತ್ತಿದೆ. ಮಲತಾಯಿಯಾದರೂ ಸಹ ನನ್ನನ್ನು ಸ್ವಂತ ಮಗಳಂತೆಯೆ ನೋಡಿಕೊಂಡ ನನ್ನ ಎರಡನೆಯ ತಾಯಿ, ಪರದೇಶಿಯಾದ ನನ್ನನ್ನು ಅಕ್ಕರೆಯಿಂದ ಸಾಕಿದ ಪ್ರೀತಿಯ ರುದ್ರವ್ವಜ್ಜಿ— ಇವರಾರನ್ನೂ ನಾನಿನ್ನು ನೋಡಲು ಸಾಧ್ಯವಿಲ್ಲ. ತವರುಮನೆಯೆಂಬ ಆ ಮನೆಯಲ್ಲಿ ನನಗೆ ಸ್ವಾಗತ ದೊರೆಯದು. ಗಂಡನ ಮನೆಯನ್ನು ನಾನಾಗಿಯೆ ಕಳೆದುಕೊಂಡೆ. ಕೊನೆಗೆ ನಿಮ್ಮ ಆಶ್ರಯದಲ್ಲಾದರೂ ಇರುವೆನೆಂದರೆ ಇಲ್ಲಿಯೂ ವಿಧಿ ಅಡ್ಡ ಬಂತು.

ನೀವು....ನೀವು ನನ್ನ ತಂದೆ!

ಇದುವರೆಗೆ ಯಾರನ್ನು ನನ್ನ ತಂದೆಯೆಂದು ತಿಳಿದಿದ್ದೆನೊ ಆತ ನನ್ನ ತಂದೆಯಲ್ಲ. ನನ್ನನ್ನೀ ಭುವಿಗೆ ಬರಮಾಡಿದವರು ನೀವು! ಪ್ರಭುಸ್ವಾಮಿಗಳು!

ಹಾಯ್, ನನ್ನ ತಾಯಿ! ನನ್ನ ದುರ್ದೈವಿ ತಾಯಿ! ತನ್ನ ತಪ್ಪೇನೂ ಇಲ್ಲವಾದರೂ ಆಕೆ ಈ ಪಾಪದ ಕೂಸನ್ನು ಹೆತ್ತು ಕಣ್ಣು ಮುಚ್ಚಬೇಕಾಯಿತು.

ಪಾಪದ ಕೂಸು! ಹೌದು....ಪಾಪದ ಕೂಸು.

ನಾನಿನ್ನು ಮುಖವೆತ್ತಿ ನಿಮ್ಮನ್ನು ಹೇಗೆ ನೋಡಲಿ? ಈ ಹಾಳು ಮೋರೆಯನ್ನು ಜಗತ್ತಿಗೆ ಹೇಗೆ ತೋರಿಸಲಿ?

ಪಾಪ, ಪುಣ್ಯ, ಪ್ರೇಮ, ಮೋಹ, ನಾಚಿಕೆ, ತಿರಸ್ಕಾರ, ಕಂಬನಿ, ಅಳು—ಯಾವುದೂ ಇಲ್ಲದ ಜಗತ್ತಿಗೆ ನಾನು ಹೊರಟಿದ್ದೇನೆ.

ನನ್ನನ್ನು ಹೆತ್ತ ತಾಯಿಯಿರುವಲ್ಲಿಗೆ ಹೊರಟಿದ್ದೇನೆ.

ನನ್ನನ್ನು ಹುಡುಕಿಸಬೇಡಿರಿ. ನನಗಾಗಿ ಕಣ್ಣೀರು ಸುರಿಸಬೇಡಿರಿ. ನನಗಾಗಿ ವ್ಯಥೆಪಡಕೂಡದೆಂದು ನನ್ನ ಮೂರ್ತಿಗೂ ಹೇಳಿರಿ.

ಇನ್ನೊಂದು ವಿಷಯ : 'ಜನಪದ'ದಲ್ಲಿ ಪ್ರಕಟನೆಗಾಗಿ ನಾನೊಂದು ಲೇಖನ ಬರೆದುಕೊಟ್ಟಿದ್ದೆ. ಅದನ್ನು ಪ್ರಕಟಿಸಬಾರದೆಂದು ನಾನು ತಿಳಿಸಿರುವುದಾಗಿ ಹರಿಹರರಿಗೆ ಕೂಡಲೆ ಸುದ್ದಿ ಕಳಿಸಿರಿ."

ಮಲ್ಲಪ್ಪಸೆಟ್ಟರು ಓದಿ ಮುಗಿಸುತ್ತಿದ್ದ ಹಾಗೆ ಹೊರಗಡೆ ಇದ್ದ ಜನರು ಧ್ವನಿಯೆತ್ತಿ ಕೂಗುವುದು ಕೇಳಬಂದಿತು.

ಕಾಗದಗಳನ್ನು ಜೇಬಿಗೆ ಸೇರಿಸಿ ಸೆಟ್ಟರು ಹೊರಗಡೆ ಬಂದರು.

ಮಾವಿನತೋಪಿನ ಆಚೆಯಿಂದ ಕೈದೀಪಗಳ ಬೆಳಕು ಕಾಣುತ್ತಿತ್ತು. ಎಂಟು ಹತ್ತು ಜನರು ಗುಂಪುಗೂಡಿ ನಡೆದು ಬರುತ್ತಿದ್ದರು.

ಐದಾರು ನಿಮಿಷಗಳಲ್ಲಿ ಅವರು ಗುಡಿಸಲಿನ ಬಳಿ ಬಂದಾಗ ಅವರು ಹೊತ್ತು ತರುತ್ತಿದ್ದ ಹೊರಸಿನ ಮೇಲೆ ಮಲಗಿಸಿದ್ದ ಸ್ತ್ರೀದೇಹ ಕೈದೀಪಗಳ ಬೆಳಕಿನಲ್ಲಿ ಅಸ್ಪಷ್ಟವಾಗಿ ಗೋಚರವಾಯಿತು.

ಗುಡಿಸಲಿನ ಎದುರಿಗಿನ ಅಂಗಳದಲ್ಲಿ ಹೊರಸನ್ನು ಇಳಿಸಲಾಯಿತು. ಮಲ್ಲಪ್ಪಸೆಟ್ಟರು ಹತ್ತಿರ ಹೋಗಿ ನೋಡಿದರು. ತೊಟ್ಟಿಲಲ್ಲಿ ಮಲಗಿ ನಿದ್ರಿಸುವ ಮಗುವಿನ ಹಾಗೆ ಸರಸುವಿನ ಮುಖ ಕಾಣಿಸುತ್ತಿದ್ದಿತು.

"ಎಲ್ಲಿ ಸಿಕ್ಕಿತು ?"

"ಕಣಿಕೊಪ್ಪದ ಹಾದಿಯೊಳಗಿನ ಯಾತದ ಬಾವಿಯೊಳಗ. ಶಿವಮೂರ್ತಿಸ್ವಾಮಿಗಳನ್ನ ನೋಡಬೇಕಂತಲೇ ಹೊರಟಿದ್ದಳೇನೊ. ಹಾದಿಯೊಳಗೇ ಮನಸ್ಸು ಬದಲು ಮಾಡಿ ಹಾರಿಕೊಂಡಿರಬೇಕು," ಎಂದು ನಡುಗುವ ಧ್ವನಿಯಿಂದ ನುಡಿದು ಆ ರೈತ ಚಿಕ್ಕಮಗುವಿನಂತೆ ಅಳತೊಡಗಿದ.

ಅದುವರೆಗೆ ಗಿಡದ ಬುಡದಲ್ಲಿ ಮೌನವಾಗಿ ಕುಳಿತಿದ್ದ ಶಿವಮೂರ್ತಿ ಎದ್ದು ಹೊರಸಿನ ಬಳಿ ಬಂದ, ಒಂದು ಸಲ ತನ್ನ ಪ್ರೇಯಸಿಯ ಮೃತದೇಹವನ್ನು ದಿಟ್ಟಿಸಿ ನೋಡಿದ, ಅನಂತರ ಅಳುತ್ತಿದ್ದವನ ಕಡೆಗೆ ಹೊರಳಿ ಗಂಭೀರ ಸ್ವರದಲ್ಲಿ ಹೇಳಿದ :

“ಅಳಬೇಡ ಬಸವಾಣೆಪ್ಪ. ಹೋದವಳು ಹೋದಳು. ಸಾವೂ ಒಂದು ದಿನ ಆಕೆಯನ್ನು ಹಿಂಬಾಲಿಸಿಕೊಂಡು ಹೋಗಬೇಕಾಗುವುದು. ಆ ಮುಖದ ಮೇಲೆ ಬಟ್ಟೆ ಹೊದಿಸಿಬಿಡು ಬಸವಾಣೆಪ್ಪ.”

ಎಡಗೈಯಿಂದ ಕಂಬನಿಗಳನ್ನೊರೆಸಿಕೊಳ್ಳುತ್ತ ಬಸವಾಣೆಪ್ಪ ಬಲಗೈಯಿಂದ ಶವದ ಮುಖದ ಮೇಲೆ ಬಟ್ಟೆಯನ್ನೆಳೆದ.

★

ತೆರೆಬಿದ್ದ ತರುವಾಯ

ಮತ್ತೆ ತನ್ನ ತವರೂರಿಗೆ ಬಂದಿದ್ದಾಳೆ ಸರಸು.

ಸರಸುವೆ? ಅಲ್ಲ; ಸರಸುವಿನ ಶವ.

ಹೊಳೆಯ ದಂಡೆಯ ಮೇಲಿನ ಶ್ಮಶಾನ. ರಾತ್ರಿ ಹನ್ನೊಂದು-ಹನ್ನೆರಡು ಗಂಟೆ. ಸುತ್ತಲಿನ ಸೃಷ್ಟಿಯೆಲ್ಲ ಶಾಂತವಾಗಿದೆ. ಕೊಂಚವೂ ಸದ್ದು ಕೇಳಿಸದು. ಗಾಳಿಯೂ ಸಹ ಚಲನವಲನ ಮಾಡದೆ ಎಲ್ಲೋ ಒಂದು ಕಡೆಗೆ ಹುದುಗಿಕೊಂಡು ನಿಂತಂತಿದೆ. ಮೇಲೆ ಗಗನದಲ್ಲಿ ತಾರೆಗಳು ಪಿಳಿ ಪಿಳಿ ಕಣ್ಣುಬಿಡುತ್ತ ನಿಂತಿವೆ. ಬಲಗಡೆಗೆ ಹರಿಯುತ್ತಿರುವ ಹೊಳೆಯೂ ಸದ್ದು ಮಾಡದೆ ಹೊರಟಹಾಗಿದೆ. ಎಡಗಡೆಗೆ ಸಾವಿರ ಅಡಿಗಳವರೆಗೆ ತಲೆಯೆತ್ತಿ ನಿಂತ ಗುಡ್ಡ ನಟ್ಟಿರುಳಿನ ವಿಲಕ್ಷಣ ಮೌನದಲ್ಲಿ ತುಂಬ ಗಂಭೀರವಾಗಿ ತೋರುತ್ತಿದೆ.

ಸರಸುವಿನ ಅವಶೇಷಗಳನ್ನು ತನ್ನ ಉದರದಲ್ಲಿ ಅಡಗಿಸಿಕೊಳ್ಳಲು ಬಾಯ್ತೆರೆದು ನಿಂತಿದೆ ಗೋರಿ. ಅದರ ಸುತ್ತುಮುತ್ತಲು ತಲೆ ಕೆಳಕ್ಕೆ ಬಾಗಿಸಿಕೊಂಡು ಕುಳಿತಿರುವ ಬಂಧುಬಾಂಧವರು, ನಾಗಮ್ಮ, ಬಸಪ್ಪಸೆಟ್ಟರು, ರುದ್ರಪ್ಪಜ್ಜಿ, ಗದಿಗೆಮ್ಮ, ಮಲ್ಲಪ್ಪಸೆಟ್ಟರು, ಚೆನ್ನಪ್ಪಗೌಡರು ಎಲ್ಲರೂ ಅಲ್ಲಿದ್ದಾರೆ. ಶವದ ಹತ್ತಿರ ಕುಳಿತು ಬಿಕ್ಕಿ ಬಿಕ್ಕಿ ಅಳುತ್ತಲಿದ್ದಾಳೆ ಗೌರಿ.

ಕೊಂಚ ದೂರದಲ್ಲಿರುವ ಕಲ್ಲುಬಂಡೆಯೊಂದರ ಮೇಲೆ ಶಿವಮೂರ್ತಿ ಒಬ್ಬನೇ ಕುಳಿತು, ಎಡಗಡೆಗೆ ಭವ್ಯವಾಗಿ ತಲೆಯೆತ್ತಿ ನಿಂತಿರುವ ಗುಡ್ಡವನ್ನು ದಿಟ್ಟಿಸುತ್ತಲಿದ್ದಾನೆ.

ಕೊನೆಯ ವಿಧಿ ಮುಗಿದಿದೆ. ಕೊನೆಯ ಮಂತ್ರ ಹೇಳಿಯಾಗಿದೆ. ಸರಸುವಿನ ಶರೀರವನ್ನು ಗೋರಿಯೊಳಗಡೆ ಇಳಿಸುತ್ತಲಿದ್ದಾರೆ.

"ಅಕ್ಕಾ....ನನ್ನ ಸರಸಕ್ಕಾ........ನನ್ನ ಬಿಟ್ಟೇ ಹೋಗಿಬಿಟ್ಟೆಯಾ? ನಾನೂ ಬರ್ತೇನೆ ನಿನ್ನ ಕೂಡ...." ಎಂದು ಆಕ್ರೋಶ ಮಾಡುತ್ತಿದ್ದಾಳೆ ಗೌರಿ. ಆಕೆಯನ್ನು ಬಿಗಿಯಾಗಿ ಹಿಡಿದುಕೊಂಡು ನಾಗಮ್ಮನವರೂ ಕಂಬನಿ ಸುರಿಸುತ್ತಿದ್ದಾರೆ.

ಮೇಲಿನಿಂದ ಮಣ್ಣು ಬೀಳತೊಡಗಿದೆ ಗೋರಿಯಲ್ಲಿ. ಒಂದು ಮುಷ್ಟಿ, ಎರಡು ಮುಷ್ಟಿ. ಪದ್ಧತಿಯ ಪ್ರಕಾರ ಆಪ್ತರೆಲ್ಲರೂ ಒಂದೊಂದು ಮುಷ್ಟಿ ಹಾಕಬೇಕು. "ಬರ್ರಿ, ಶಿವಮೂರ್ತಿಸ್ವಾಮೀ." ಅದು ಅಯ್ಯನವರ ಕೂಗು. ಆತ ನಿಧಾನವಾಗಿ ನಡೆದು ಬಂದು ಬಲಗೈಯಲ್ಲಿ ಮಣ್ಣು ಎತ್ತಿಕೊಳ್ಳುತ್ತಾನೆ. ಒಂದು ಕ್ಷಣ—ಆತನ ಕೈ ಕಂಪಿಸಿದ ಹಾಗಾಗುತ್ತದೆ. ಮರುಕ್ಷಣವೆ ತನ್ನ ಅಸ್ಥಿರತೆಗೆ ತಾನೇ ನಗುತ್ತ ಮುಷ್ಟಿಯನ್ನು ಸಡಿಲಿಸಿ ಮಣ್ಣು ಹಾಕುತ್ತಾನೆ—ನಲ್ಲೆಯ ಮುಡಿಯಲ್ಲಿ ಹೂವು ಮುಡಿಸುವಷ್ಟು ನಯವಾದ ರೀತಿಯಲ್ಲಿ.

* * *

ಇಲ್ಲಿಗೆ ಈ ಕತೆಯ ಮೇಲೆ ತೆರೆಯುರುಳುತ್ತದೆ.

ಸರಸುವಿನ ಕತೆಯೇನೋ ಮುಗಿಯಿತು. ಆದರೆ ಆಕೆಯ ಬಾಳಿನೊಂದಿಗೆ ಹೆಣೆದುಕೊಂಡಿದ್ದ ಹಲವು ಸೂತ್ರ ಹಾಗೆಯೆ ಇವೆ. ಶಿವಮೂರ್ತಿಯಿದ್ದಾನೆ, ಸಿದ್ಧವೀರಸ್ವಾಮಿಗಳಿದ್ದಾರೆ, ಸೂಶಿಯಿದ್ದಾಳೆ, ಹರಿಹರನಿದ್ದಾನೆ, ಪ್ರಭುಸ್ವಾಮಿಗಳೂ ಇರಬಹುದು ಎಲ್ಲೋ ಒಂದು ಕಡೆಗೆ. ಗದಿಗೆವ್ವ, ಲೀಲಾವತಿ, ಗಂಗಾಧರಶಾಸ್ತ್ರಿ ಎಲ್ಲರೂ ಇದ್ದೇ ಇರುವರಲ್ಲ?

ಒಂದು ವ್ಯಕ್ತಿ ಜೀವನರಂಗದಿಂದ ಮರೆಯಾದ ಮಾತ್ರಕ್ಕೆ ಇನ್ನಿತರರ ಬಾಳೇನೂ ತಡೆದು ನಿಲ್ಲುವುದಿಲ್ಲ. ಜಗತ್ತಿನ ಆದಿಕಾಲದಿಂದ ಇದುವರೆಗೆ ಸತ್ತು ಮಣ್ಣುಗೂಡಿದ ವ್ಯಕ್ತಿಗಳು ಕೋಟ್ಯಾವಧಿ. ಆದರೂ ಜೀವನದ ಮಹಾಪ್ರವಾಹವೇನೂ ತಡೆದು ನಿಂತಿಲ್ಲ.

ಅಂತೆಯೆ, ಶಿವಮೂರ್ತಿ ಸೂಶಿ ಮೊದಲಾದವರ ಬಾಳೂ ಮುಂದುವರಿಯುತ್ತಿದೆ.

ಈ ಕಾದಂಬರಿಯಲ್ಲಿ ನಾನು ಮುಖ್ಯವಾಗಿ ಹೇಳಬೇಕಾಗಿದ್ದುದು ಸರಸುವಿನ ಸುಖದುಃಖಗಳ ಕತೆ. ಆಕೆಯ ಸಾವಿನೊಂದಿಗೆ ಅದು ಮುಗಿದಂತಾಯಿತು. "ಮುಂದೆ ಶಿವಮೂರ್ತಿ ಏನು ಮಾಡಿದ? ಅವರೇನು ಮಾಡಿದರು? ಇವರೇನು ಮಾಡಿದರು?" ಎಂದು ನೀವು ಕೇಳಬಹುದು. ಈ ಪ್ರಶ್ನೆಗಳಿಗೆ ನನ್ನ ಹತ್ತಿರ ಉತ್ತರಗಳಿಲ್ಲವೆಂದೇನೂ ಇಲ್ಲ. ಆದರೆ ಈ ಕಾದಂಬರಿಯಲ್ಲೇ ಆ ಉತ್ತರಗಳೆಲ್ಲ ಬರಬೇಕು ಎಂದೇನೂ ಇಲ್ಲ.

ನಿಜ ಹೇಳಬೇಕಾದರೆ ಈ ಪ್ರಶ್ನೆಗಳಿಗೆ ಕೊನೆಯೆಂಬುದೇ ಇಲ್ಲ. ಒಂದು ಪ್ರಶ್ನೆಯನ್ನು ಉತ್ತರಿಸುವುದರೊಳಗಾಗಿ ಇನ್ನೊಂದು ತಲೆಯೆತ್ತಿರುತ್ತದೆ. ಬಾಳಿನ ಸಮಸ್ಯೆಗಳೆಂದರೆ ಹೀಗೇ. ಅವುಗಳನ್ನೆಲ್ಲ ಪೂರ್ಣವಾಗಿ ಚಿತ್ರಿಸಬಲ್ಲೆನೆಂದು ಯಾವ ಕವಿಯೂ ಹೇಳಲಾರ, ಯಾವ ಕಾದಂಬರಿಕಾರನೂ ಹೇಳಲಾರ.

ಅಂತೆಯೆ, ಈ ಕಾದಂಬರಿ 'ಅಪೂರ್ಣವಾಗಿದೆ' ಎಂದುಕೊಂಡು ವಾಚಕರು ಅತೃಪ್ತರಾಗಬಾರದು.

ನಾನು ಸರಸುವಿನ ಕತೆ ಹೇಳಬೇಕಾಗಿದ್ದಿತು. ಹೇಳಿ ಮುಗಿಸಿದೆ. ಇಲ್ಲಿಗೆ ಈ ಕಾದಂಬರಿ ಮುಗಿದ ಹಾಗೇ ಆಯಿತು.

ಮುಂದೆ ಶಿವಮೂರ್ತಿ ಏನು ಮಾಡಿದ? ಸೂಶಿ ಏನು ಮಾಡಿದಳು? ಆತನಿಗೂ ಆಕೆಗೂ ಸಂಬಂಧ ಬಂದಿತೇ ಹೇಗೆ? ಸರಸುವಿನ ಸಾವು ಆತನನ್ನು ಧೃತಿಗೆಡಿಸಿತೇ? ಇಲ್ಲವೆ ದೃಢಗೊಳಿಸಿತೇ? ಆತ ಕಣಿಕೊಪ್ಪಕ್ಕೆ ಹೋಗಿ ರೈತರ ಹೋರಾಟದಲ್ಲಿ ಭಾಗವಹಿಸಿದನೇ, ಅಥವಾ ತನ್ನ ಪಿಟೀಲು ಹಿಡಿದುಕೊಂಡು ಸರಸುವನ್ನು ನೆನೆಯುತ್ತ ಹುಚ್ಚನಂತೆ ಊರೂರು ಸುತ್ತತೊಡಗಿದನೇ?

ಸದ್ಯದ ಮಟ್ಟಿಗೆ ಈ ಪ್ರಶ್ನೆಗಳಿಗೆಲ್ಲ ನೀವೇ ಉತ್ತರ ಕೊಟ್ಟುಕೊಳ್ಳಬೇಕು. ಈ ಕಾದಂಬರಿಯನ್ನು ಮೊದಲಿನಿಂದ ಕೊನೆಯವರೆಗೆ ಸಾವಧಾನವಾಗಿ, ಸಮಾಧಾನದಿಂದ ನೀವು ಓದಿದ್ದಲ್ಲಿ, ಶಿವಮೂರ್ತಿಯ ಹಾಗೂ ಇನ್ನಿತರ ವ್ಯಕ್ತಿಗಳ ಮುಂದಿನ ಬಾಳಿನ ಬಗೆ ನಿಮಗೆ ಸಹಜವಾಗಿ ತಿಳಿದುಬರಬಹುದು.

ಅಲ್ಲಿಗೂ ನಿಮಗೆ ಸಮಾಧಾನವಾಗದಿದ್ದಲ್ಲಿ—ಒಂದೆರಡು ವರ್ಷ ತಡೆಯಿರಿ. ಈ ಕಾದಂಬರಿಗಾಗಿ ನಾನು ಸೃಷ್ಟಿಸಿದ ಪಾತ್ರಪ್ರಪಂಚ ನನ್ನ ಒಳಗಣ್ಣಿನೆದುರಿಗೆ ಇನ್ನೂ ಸ್ಥಿರವಾಗಿದೆ. ಈ ವ್ಯಕ್ತಿಗಳು ಬಾಳಿದ ಬಗೆಯನ್ನು ಇನ್ನೊಂದು ಕಾದಂಬರಿಯಲ್ಲಿ ಚಿತ್ರಿಸುತ್ತೇನೆ. ಆಯಿತೇ?

ಸರಿ. ನಮಸ್ಕಾರ.

ಮುಲಾಪುರದಿ —ಬಸವರಾಜ ಕಟ್ಟೀಮನಿ
ಫೆಬ್ರವರಿ–ಅಕ್ಟೋಬರ್ ೧೯೫೧

ಶಾರದಾ ಸಾಹಿತ್ಯಮಾಲೆಯ ಪ್ರಕಟನೆಗಳು

೧	ಕಾರವಾನ್ (ದ್ವಿತೀಯ ಮುದ್ರಣ)	೧ ರೂ
೨–೩	ಸ್ವಾತಂತ್ರ್ಯವೇದಿಗೆ (ದ್ವಿತೀಯ ಮುದ್ರಣ)	೨ ರೂ
೪	ಜೀವನ ಕಲೆ *	೧ ರೂ
೫	ಮುಗುಳುನಗೆ	೧ ರೂ
೬	ಸ್ವಪ್ನಸುಂದರಿ **	೧ ರೂ
೭–೮	ಆಲದ ಹೂ	೧ ರೂ
೯	ಹುಡುಗಾಟ	೧ ರೂ
೧೦	ಶವದ ಮನೆ	೧ ರೂ
೧೧	ಎಡಿಟೇಟು	೧ ರೂ
೧೨–೧೩	ಸರ್ವಮಂಗಳ	೪ ರೂ
೧೪	ಕೇಡಿಗನ ಕಿಡಿಗಳು	೧ ರೂ
೧೫	ದೇವತೆಗಳು ನಕ್ಕಾಗ	೧ ರೂ
೧೬–೧೭	ಜ್ವಾಲಾಮುಖಿಯ ಮೇಲೆ	೪ ರೂ
೧೮	ನನ್ನ ರಸಿಕ ಮತ್ತು ಬಂಗಾರದ ಗಿಣಿ	೧ ರೂ
೧೯	ಹಾಳು-ಮೂಳು	೧ ರೂ
೨೦–೨೧–೨೨	ಮೋಹದ ಬಲೆಯಲ್ಲಿ	೫ ರೂ

ಇತರ ಪ್ರಕಟನೆಗಳು

೧	ನಾಡಿಗೇರರ ನಗೆಬರಹಗಳು ೧	೧ ರೂ

---

* ಪ್ರತಿಗಳು ತೀರಿವೆ.

** ದ್ವಿತೀಯ ಮುದ್ರಣ ಅಚ್ಚಿನಲ್ಲಿದೆ